ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ-20

ಕರ್ಣಪರ್ವ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೦

ಕರ್ಣಪರ್ವ

(ಸಂಪುಟ ೧)

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದ¨ರು :

ವಿದ್ವಾನ್ ಕೆ.ಹಯವದನ ಪುರಾಣಿಕ

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಕರ್ಣಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಮಹಾಭಾರತ ಭಾಗ –

ಕರ್ಣಪರ್ವ - ಸಂಪುಟ ೧

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-81-939819-8-6

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	*XXX III+ 587= 620*
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	**ವಿದ್ವಾನ್ ಕೆ.ಹಯವದನ ಪುರಾಣಿಕ**
ಪ್ರಕಾಶಕರು	-	ತತ್ವಸಂಶೋಧನಸಂಸತ್, (ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ) ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	**ಆರ್.ಎಸ್.ಪ್ರೇಮಕುಮಾರ್** **ಬೆಂಗಳೂರು, 996433428**
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ಮುದ್ರಣ : ಪವನ್ ಪ್ರಿಂಟರ್ಸ್, ಬೆಂಗಳೂರು

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯ ಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮುನೀನ್ನುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ಮಹಾಭಾರತದ ಯುದ್ಧದಲ್ಲಿ ಕರ್ಣಪರ್ವ ಒಂದು ಅಪೂರ್ವವಾದ ಘಟ್ಟ. ಶ್ರೀಮದ್ಭಾಗವತದಲ್ಲಿ ಹನ್ನೆರಡು ಪೂಜಾಸ್ಥಾನಗಳನ್ನು ಉಲ್ಲೇಖ ಮಾಡಿದ್ದಾರೆ.

ಸೂರ್ಯೋऽಗ್ನಿರ್ಬ್ರಾಹ್ಮಣೋ ಗಾವೋ ವೈಷ್ಣವಃ ಖಂ ಮರುಜ್ಜಲಂ।
ಭೂರಾತ್ಮಾ ಸರ್ವಭೂತಾನಿ ಭದ್ರ ಪೂಜಾಪದಾನಿ ಮೇ ॥

ಅದರಲ್ಲಿ ಮೊದಲನೆಯ ಸ್ಥಾನದಲ್ಲಿರುವುದು ಸೂರ್ಯ. ಸೂರ್ಯ ಪ್ರತೀಕದಲ್ಲಿ ಭಗವಂತನನ್ನು ಆರಾಧಿಸುವುದಾಗಿ ಹೇಳುತ್ತಾರೆ. ಅದೇ ಸೂರ್ಯ ರಾಮಾವತಾರದಲ್ಲಿ ಸುಗ್ರೀವನಾಗಿ ಅವತರಿಸಿದರೆ, ಕೃಷ್ಣಾವತಾರದಲ್ಲಿ ಕರ್ಣನಾಗಿ ಅವತರಿಸಿದ್ದಾನೆ. ಪೂಜ್ಯನಾಗಬೇಕಾಗಿದ್ದ ಕರ್ಣ ಇಲ್ಲಿ ವಂಚಕನಾಗುತ್ತಾನೆ. ಇಲ್ಲಿ ಪೂಜೆ ಇಲ್ಲ ದುಷ್ಟರ ಕೂಟದಲ್ಲಿ ಮೆರೆಯುವಂತಾಗುತ್ತಾನೆ. ಇದು ಕರ್ಣನ ಕರುಣಾಮಯ ಸ್ಥಿತಿಗೆ ಉದಾಹರಣೆ. ಸೂರ್ಯ ಸಮಗ್ರ ವಿಶ್ವಕ್ಕೆ ಕಣ್ಣು. ಬ್ರಹ್ಮಾಂಡವನ್ನೂ ಬೆಳಗಿಸುತ್ತಾನೆ, ಪಿಂಡಾಂಡದಲ್ಲಿ ಒಳ್ಳೆಯ ಜ್ಞಾನವನ್ನೂ ಕೊಡುತ್ತಾನೆ. ಆದರೆ ಈ ಕರ್ಣನಾಗಿ ಭೂಮಿಗೆ ಬಂದಾಗ ಯಾವ ಪ್ರಭಾವವೂ ಇಲ್ಲದೆ **'ಸುದರ್ಶನೀಯ ಕರ್ಣತಃ'** ಎಂಬ ಆಚಾರ್ಯರ ವಚನದಂತೆ ಕೇವಲ ಒಳ್ಳೆಯ ಕಿವಿಯನ್ನು ಹೊಂದಿದವನಾಗುತ್ತಾನೆ. ಒಳ್ಳೆಯ ಕಿವಿ ಎಂದರೆ ಹೊರಗಿನಿಂದ ಸುಂದರವಾಗಿದೆ ಹೊರತು ಶ್ರುತಿಯನ್ನು ಕೇಳಬೇಕಾದ ಕಿವಿ ಶ್ರುತಿಯನ್ನು ಬಿಟ್ಟು ಬೇರೆ ಯಾವುದನ್ನೋ ಕೇಳುವಂತಾಗಿದ್ದಾನೆ. ಹಾಗಾಗಿಯೇ ಜ್ಞಾನಮಾರ್ಗಕ್ಕೆ ಕೊಡುಗೆಯನ್ನು ಕೊಡಲು ಸಮರ್ಥನಾಗಲಿಲ್ಲ.

ಶ್ರೀಕೃಷ್ಣ ಭಗವದ್ಗೀತೆಯಲ್ಲಿ-

'ಯದಾದಿತ್ಯಗತಂ ತೇಜೋ ಜಗದ್ಭಾಸಯತೇऽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥'

ಎಂದು. ಇದಕ್ಕೆ ಒಳ್ಳೆಯ ನಿದರ್ಶನ ರಾಮಾಯಣ-ಮಹಾಭಾರತಗಳು. ಸೂರ್ಯ ಸುಗ್ರೀವನಾಗಿ ಬಂದಾಗ ಭಗವಂತ ಒಳ್ಳೆಯ ಪ್ರಚೋದನೆಯನ್ನು ಕೊಟ್ಟು, ಸುಗ್ರೀವನಿಗೆ ಜಯ ತಂದುಕೊಟ್ಟು, ಅವನಿಗೆ ಪಟ್ಟಾಭಿಷೇಕವನ್ನೂ ಮಾಡಿ ಅವನ ಮೂಲಕ ಸಮಗ್ರ ಯುದ್ಧದ ಕೀರ್ತಿ, ಪುಣ್ಯ ಎಲ್ಲವನ್ನೂ ಕೊಡುತ್ತಾನೆ. ಭಗವಂತನ ಕಾರುಣ್ಯದಿಂದ ಸುಗ್ರೀವನಾಗಿ ಸೂರ್ಯ ಮೆರೆದ. ಅದೇ ಸುಗ್ರೀವ ಕರ್ಣನಾಗಿ ಮತ್ತೆ ಕೃಷ್ಣಾವತಾರದಲ್ಲಿ ಹುಟ್ಟಿದಾಗ ಭಗವಂತನು ಅವನ ಮೇಲೆ ಕಾರುಣ್ಯ ತೋರಿಸುವುದಿಲ್ಲ. ಅವನ ಜ್ಞಾನಕ್ಕೆ ಪ್ರಕಾಶವೇ ಇಲ್ಲವಾಗುತ್ತದೆ. ಭಗವಂತನ ಅನುಗ್ರಹವಿಲ್ಲದಿರುವುದರಿಂದ ಬೆಳಕೂ ಇಲ್ಲ, ಜ್ಞಾನವೂ ಇಲ್ಲ. ಸೂರ್ಯನ ಒಳಗಿದ್ದ ತೇಜಸ್ಸು ಭಗವಂತನದ್ದು ಎಂದು ಹೇಳಿರುವಂತೆ ಅದಕ್ಕೆ ಉದಾಹರಣೆ ಸುಗ್ರೀವ-ಕರ್ಣ. ಇಡೀ ಬ್ರಹ್ಮಾಂಡವನ್ನೇ ಬೆಳಗಿಸುವ ಸೂರ್ಯ ಭಗವಂತನ ಅನುಗ್ರಹವಿಲ್ಲದಿದ್ದಾಗ ಕರ್ಣನಾಗಿ ಅವನೇ ಕತ್ತಲಲ್ಲಿರುವಂತಾಯಿತು.

ಕರ್ಣನ ದುರಂತವೇನೆಂದರೆ ಕುಂತಿಯಲ್ಲಿ ಕ್ಷತ್ರಿಯನಾಗಿ ಜನಿಸಿದರೂ ಅವನಿಗೆ ಕ್ಷತ್ರಿಯ ಸಂಸ್ಕಾರವನ್ನು ಪಡೆಯುವ ಯೋಗವಿಲ್ಲದೆ ವಂಚಿತನಾಗಿ ಸೂತನಾಗಿ, ಕೌಂತೇಯನಾಗಬೇಕಾದವನು ರಾಧೇಯನಾದ. ಇಡೀ ಸಮಾಜ ಅವನನ್ನು ಸೂತ, ಸೂತಪುತ್ರ ಎಂದು ಗುರುತಿಸಿತು. ನಿಜವಾಗಿ ಸೂರ್ಯನೇ ಬಂದು ಸ್ಪರ್ಶ ಮಾತ್ರದಿಂದ ಕುಂತಿಯಲ್ಲಿ ತಾನೇ ಒಂದು ರೂಪದಿಂದ ಅವತರಿಸಿದ. ಆದರೆ ಆ ಸೂರ್ಯನಿಗೆ ಗ್ರಹಣ. ಸಹಸ್ರವರ್ಮ ಎಂಬ ದುಷ್ಟನಿಂದ ಪ್ರಭಾವಿತನಾಗಿ ದಾರಿತಪ್ಪಿದ. ಕುಂತಿಯು ಕರ್ಣ ಹುಟ್ಟಿದಾಗ ಬಹಳ ಸಂತೋಷಪಟ್ಟಿದ್ದಳು. ಸಹಜವಾದ ಕವಚ-ಕುಂಡಲಗಳನ್ನು ಧರಿಸಿ ಹುಟ್ಟಿದ್ದ ಆ ಮಗುವನ್ನು ಬಿಡಲೂ ಮನಸ್ಸೂ ಇಲ್ಲದೆ, ಇಟ್ಟುಕೊಳ್ಳಲೂ ಆಗದೆ ಒದ್ದಾಡಿದಳು. ರಾಜಾಧಿರಾಜನಾಗ ಬೇಕಾಗಿದ್ದ ಕರ್ಣ ಪೆಟ್ಟಿಗೆಯಲ್ಲಿ ತೇಲಿಬಿಟ್ಟು ಸೂತನ ಬಳಿ ಬೆಳೆದು ಸೂತಪುತ್ರ ನೆಂದೇ ವಿಖ್ಯಾತನಾದ.

ವಿದ್ಯೆಯಲ್ಲೂ ಅಷ್ಟೇ ಕರ್ಣ ವಂಚಿತನಾದ. ಒಂದುವೇಳೆ ಕೌಂತೇಯನೇ ಆಗಿದ್ದರೆ ಪಾಂಡವರ ಜೊತೆಗೇ ವಿದ್ಯಾಭ್ಯಾಸವಾಗಿ ತಾನೂ ಮೆರೆಯುತ್ತಿದ್ದ. ಆಸೆಯಿಂದ ದ್ರೋಣರ ಗುರುಕುಲಕ್ಕೆ ಸೇರಲು ಬಂದಾಗ ಅವನ ಆಸೆ ಈಡೇರಲಿಲ್ಲ. ಆಗ ಪರಶುರಾಮರ ಬಳಿ ಹೋಗಿ ಅವರಲ್ಲಿ ಬ್ರಾಹ್ಮಣ ಎಂದು ಹೇಳಿ ಅರ್ಜುನನಿಗಿಂತ ಕಡಿಮೆಯಿಲ್ಲವೆಂದು ತೋರಿಸುವಷ್ಟು ವಿದ್ಯೆಯನ್ನು ಸಂಪಾದನೆ

ಮಾಡುತ್ತಾನೆ. ಆದರೆ ಪರಶುರಾಮರು ಕರ್ಣನ ತೊಡೆಯ ಮೇಲೆ ಮಲಗಿದ್ದಾಗ ಒಂದು ಕೀಟ ಅವನ ತೊಡೆಯನ್ನು ಸೀಳಿ ರಕ್ತವನ್ನು ಸುರಿಸಿದರೂ ಅವನು ಅದನ್ನು ತಡೆದುಕೊಂಡು ಕುಳಿತಿದ್ದ. ರಕ್ತ ಪರಶುರಾಮರ ಮೇಲೆ ಬಿದ್ದಾಗ ಅವರು ನೀನು ಕ್ಷತ್ರಿಯನೇ ಹೊರತು ಬ್ರಾಹ್ಮಣನಲ್ಲ ಎಂದು ಕೋಪಗೊಂಡು ಅವರಿಂದ ಕರ್ಣನು ತಿರಸ್ಕೃತನಾಗುತ್ತಾನೆ. ಬ್ರಾಹ್ಮಣನಾಗಿದ್ದರೆ ರಕ್ತವನ್ನು ನೋಡಿಯೂ ಇಷ್ಟು ಸಹನಶಕ್ತಿ ಇರುತ್ತಿರಲಿಲ್ಲ. ಆಗಲೇ ಪರಶುರಾಮರು ಶಾಪಕೊಡುತ್ತಾರೆ. ನೀನು ಸ್ಪರ್ಧೆ ಮಾಡಿದಾಗ ನಿನಗೆ ಜಯದೊರಕುವುದಿಲ್ಲ ಎಂದು. ಇದು ಕರ್ಣನ ದುರಂತಕ್ಕೆ ಒಂದು ಜ್ವಲಂತ ಉದಾಹರಣೆ.

ಪಾಂಡವರ ವಿದ್ಯಾಪರೀಕ್ಷೆಯ ದೊಡ್ಡ ಉತ್ಸವದಲ್ಲಿ ಅರ್ಜುನನ ಶಸ್ತ್ರವಿದ್ಯೆಯನ್ನು ನೋಡಿ ಎಲ್ಲರೂ ಸಂತೋಷಪಡುತ್ತಿದ್ದಾಗ ತಾನೂ ಕಡಿಮೆಯಿಲ್ಲ ಎಂದು ಕರ್ಣನು ತೋರಿಸುತ್ತಾನೆ. ಆದರೆ ಅಕ್ಷತ್ರಿಯ ಎಂಬ ಕಾರಣದಿಂದ ಯುದ್ಧಕ್ಕೆ ಅವಕಾಶ ಸಿಗುವುದಿಲ್ಲ. ಆಗಲೇ ದುರ್ಯೋಧನನು ಅಂದರೆ ಸಾಕ್ಷಾತ್ ಕಲಿಯು ಕರ್ಣನನ್ನು ಆಲಂಗಿಸುತ್ತಾನೆ. ಮೊದಲೇ ಮೇಲಿನಿಂದ ಕೆಳಕ್ಕೆ ಬೀಳುತ್ತಿದ್ದ ಕರ್ಣನ ಅವನತಿಗೆ ಇನ್ನೊಂದು ಮೆಟ್ಟಿಲು ಸಿಕ್ಕಿ ಇನ್ನೂ ಕೆಳಗಿಳಿದ. ಭೀಮಸೇನನು ಸಂಪಾದನೆ ಮಾಡಿದ ಅಂಗರಾಜ್ಯವನ್ನು ದುರ್ಯೋಧನ ತನ್ನದೆಂದು ಹೇಳಿ ಕರ್ಣನಿಗೆ ಅಂಗರಾಜ್ಯದ ಪಟ್ಟಾಭಿಷೇಕ ಮಾಡಿ ಕ್ಷತ್ರಿಯ ಎಂದು ಘೋಷಣೆ ಮಾಡುತ್ತಾನೆ. ಕಲಿಯ ಪ್ರಭಾವ ಹೀಗೆಯೇ. ಯಾರನ್ನಾದರೂ ಕ್ಷತ್ರಿಯನನ್ನಾಗಿ ಮಾಡಬಲ್ಲ, ಯಾರನ್ನಾದರೂ ಕೆಳಗಿಳಿಸಬಲ್ಲ. ಇದು ಕಲಿಯುಗ. ಯಾರು ಬೇಕಾದರೂ ಬ್ರಾಹ್ಮಣರಾಗಬಹುದು, ಯಾರು ಏನು ಬೇಕಾದರೂ ಆಗಬಹುದು. ಕಲಿ ಕ್ಷತ್ರಿಯ ಸಂಸ್ಕಾರರಹಿತನಾದ ಕರ್ಣನನ್ನು ಹೇಗೆ ಕ್ಷತ್ರಿಯ-ಚಕ್ರವರ್ತಿ ಎಂದು ಅನ್ಯದೇಶದಲ್ಲಿ ಪಟ್ಟಾಭಿಷೇಕ ಮಾಡಿ ಘೋಷಣೆ ಮಾಡಿದನೋ ಅದನ್ನು ಒಂದು ದೊಡ್ಡ ಸ್ಥಾನಮಾನ ಎಂದು ತಿಳಿದುಕೊಳ್ಳಲು ಆಗುವುದಿಲ್ಲ. ಅಖಂಡ ದೇಶದ ರಾಜನಾಗಬೇಕಾಗಿದ್ದ ಕರ್ಣ ಯಾವುದೋ ಒಂದು ತುಂಡು ಅಂಗದೇಶದ ರಾಜನಾದ. ಕರ್ಣ ವಂಚಿತನಾದ. ದುರ್ಯೋಧನನ ಕಣ್ಣೀರಿಗೆ ಕರ್ಣ ಉಪಕರಣನಾದ. ಮಹಾಭಾರತದಲ್ಲಿ ಕರ್ಣ ದಿನದಿಂದ ದಿನಕ್ಕೆ ಕೆಳಗೆ ಬೀಳುವುದನ್ನು ತೋರಿಸುತ್ತದೆ. ಗೆಲ್ಲುವ ಪಕ್ಷದಲ್ಲಿ ಮೆರೆಯಬೇಕಾಗಿದ್ದ ಕರ್ಣ ಸೋಲುವ ಪಕ್ಷಕ್ಕೆ ನಾಯಕನಾಗಿ ಮೆರೆಯುತ್ತಾನೆ.

ದ್ರೌಪದಿಯ ಸ್ವಯಂವರದಲ್ಲೂ ದುರ್ಯೋಧನನಿಗೋಸ್ಕರ ಎಂದು ಘೋಷಣೆ ಮಾಡಿ ಸ್ಪರ್ಧೆಗೆ ಇಳಿದು ಸೋತ. ಹೀಗೆ ಕರ್ಣ ಗೋಗ್ರಹಣ, ಉತ್ತರಗೋಗ್ರಹಣ, ಎಲ್ಲದರಲ್ಲಿಯೂ ಸೋಲನ್ನು ಅನುಭವಿಸುತ್ತಾನೆ. ಕೊನೆಗೆ ಮಹಾಭಾರತ ಯುದ್ಧದಲ್ಲೂ ಪ್ರಾರಂಭದಲ್ಲೇ ಭೀಷ್ಮರು ಅರ್ಧರಥ ಎಂದು ಹೇಳಿ ಅವಮಾನ ಮಾಡಿದಕ್ಕಾಗಿ ಭೀಷ್ಮರು ಇರುವಷ್ಟು ದಿನ ಯುದ್ಧ ಮಾಡುವುದಿಲ್ಲ ಎಂದು ಕೆಟ್ಟ ಪ್ರತಿಜ್ಞೆ ಮಾಡಿ ಹಿಂದಕ್ಕೆ ಸರಿದ. ಭೀಷ್ಮರು ಶರತಲ್ಪಕ್ಕೆ ಏರಿದ ಮೇಲೆ ಕರ್ಣನು ಮಹಾಭಾರತ ಯುದ್ಧದಲ್ಲಿ ಭಾಗವಹಿಸುತ್ತಾನೆ. ಕಡೆಗೆ ದ್ರೋಣರ ನಿಧನದ ನಂತರ ದುರ್ಯೋಧನನಿಂದ ಕರ್ಣನೇ ಸೇನಾಪತ್ಯವನ್ನು ವಹಿಸಿಕೊಳ್ಳುತ್ತಾನೆ. ಯುದ್ಧಕ್ಕಾಗಿ ಶಲ್ಯನನ್ನು ಸಾರಥಿಯನ್ನಾಗಿ ಬಯಸಿದಾಗ ದುರ್ಯೋಧನ ತನ್ನ ಎಲ್ಲ ಪ್ರಭಾವವನ್ನು ಬೀರಿ ಶಲ್ಯನನ್ನು ಸಾರಥಿಯನ್ನಾಗಿ ಮಾಡುತ್ತಾನೆ. ಶಲ್ಯಭೂಪತಿ ಸಾರಥಿಯ ಕೆಲಸವನ್ನು ಒಪ್ಪದಿದ್ದಾಗ ದುರ್ಯೋಧನನು ತನ್ನ ಕುತಂತ್ರ ಉಪಯೋಗಿಸಿ 'ಅರ್ಜುನನಿಗೆ ಹೇಗೆ ಕೃಷ್ಣನು ಸಾರಥಿಯೋ ಹಾಗೆ ಕರ್ಣನಿಗೆ ನೀನು ಸಾರಥಿ' ಎಂದು ಹೇಳಿ ಶಲ್ಯನನ್ನು ಒಪ್ಪಿಸುತ್ತಾನೆ. ಅದು ಕರ್ಣನ ಪಾಲಿನ ಅವನತಿಗೇ ಕಾರಣವಾಗುತ್ತದೆ. ಏಕೆಂದರೆ ಶಲ್ಯನು ಯಾವಾಗಲೂ ಅರ್ಜುನನನ್ನು ಪ್ರಶಂಸೆ ಮಾಡಿದನೇ ಹೊರತು ಕರ್ಣನ ಬಗ್ಗೆ ಎಲ್ಲಿಯೂ ಹೊಗಳಲಿಲ್ಲ. ಹಾಗಾಗಿ ಕರ್ಣನಿಗೆ ಶಲ್ಯನ ಸಾರಥ್ಯ ಶಾಪವೇ ಆಯಿತು.

ಕರ್ಣ ನಾಗಾಸ್ತ್ರವನ್ನು ಬಿಟ್ಟಾಗ ಶಲ್ಯ ಆಗಲೂ ಬಾಣವನ್ನು ಕಂಠಕ್ಕೆ ಗುರಿ ಇಟ್ಟಿರುವಿ, ಇದು ಸರಿಯಲ್ಲ. ಏಕೆಂದರೆ ಸ್ವಲ್ಪ ಅರ್ಜುನ ತಲೆ ತಗ್ಗಿಸಿದರೆ ಅದು ಕಿರೀಟಕ್ಕೆ ಬೀಳುತ್ತದೆ. ಕರ್ಣ ತನ್ನ ಗುರಿಯನ್ನು ಬದಲಾಯಿಸದೆ ದುರಹಂಕಾರದಿಂದ ನಾಗಾಸ್ತ್ರವನ್ನು ಪ್ರಯೋಗಿಸಿದಾಗ ಕೃಷ್ಣನು ರಥವನ್ನು ಭೂಮಿಯಲ್ಲಿ ನಾಲ್ಕು ಅಂಗುಲ ಮುಳುಗಿಸಿದ್ದರಿಂದ ನಿಷ್ಪಯೋಜನವಾಯಿತು. ಪುನಃ ಆ ಅಸ್ತ್ರವನ್ನು ವಾಪಸ್ಸು ಬಂದು ನನ್ನನ್ನು ಮತ್ತೊಮ್ಮೆ ಪ್ರಯೋಗ ಮಾಡು ಎಂದಾಗ ಒಮ್ಮೆ ಹೂಡಿದ ಅಸ್ತ್ರವನ್ನು ನಾನು ಮತ್ತೊಮ್ಮೆ ಹೂಡುವುದಿಲ್ಲ ಎಂದು ಮತ್ತೊಂದು ಕೆಟ್ಟ ಪ್ರತಿಜ್ಞೆಯನ್ನು ಕರ್ಣನು ಮಾಡುತ್ತಾನೆ. ಕಡೆಗೆ ಕರ್ಣನ ರಥದ ಚಕ್ರ ಕೆಸರಿನಲ್ಲಿ ಹೂತು ಅರ್ಜುನನಿಂದ ಹತನಾಗುತ್ತಾನೆ. ಕರ್ಣನ ಕಥೆ ಒಂದು ದಾರುಣ ಕಣ್ಣೀರು ಸುರಿಸುವಂತಹದ್ದು.

ಸೂರ್ಯನು ಇಡೀ ಜಗತ್ತಿಗೆ ಬೆಳಕು ಚೆಲ್ಲಿ ಸರಿಯಾದ ಮಾರ್ಗದರ್ಶನ

ಮಾಡುತ್ತಾನೆ. ಆದರೆ ಕರ್ಣನ ಜೀವನ ರಾತ್ರಿಯೇ ಆಗಿ ಕಳೆಯಿತು. ಯಾವುದು ಸರಿ, ಯಾವುದು ತಪ್ಪು ಎಂದು ತಿಳಿದುಕೊಳ್ಳಲು ಕರ್ಣನ ಪಾಲಿಗೆ ಆಯಿತು. ಕೃಷ್ಣನು ಸಂಧಿಗಾಗಿ ಹೋದಾಗ ಕರ್ಣನನ್ನು ಕರೆದುಕೊಂಡು ತನ್ನ ರಥದಲ್ಲಿ ಕೂರಿಸಿ ಕೊಂಡು ಕರ್ಣನ ಜನ್ಮರಹಸ್ಯವನ್ನು ಹೇಳುತ್ತಾನೆ. ಪಾಂಡವರ ಪಕ್ಷಕ್ಕೆ ಬಂದರೆ ನಿನಗೇ ಪಟ್ಟಾಭಿಷೇಕ ಎಂದೂ ಸಹ ಹೇಳುತ್ತಾನೆ. ಕೃಷ್ಣನು ಹೇಳಿದ ಮಾತನ್ನು ಕರ್ಣ ಪ್ರೀತಿಯಿಂದ ಒಪ್ಪಿ ಭಕ್ತಿಯಿಂದ ಅನುಷ್ಠಾನಕ್ಕೆ ತಂದಿದ್ದರೆ ಈ ದಾರುಣ ಪರಿಸ್ಥಿತಿ ಕರ್ಣನ ಪಾಲಿಗೆ ಬರುತ್ತಿರಲಿಲ್ಲ. ಆದರೆ ದುರ್ಯೋಧನನ ಆಕರ್ಷಣೆ, ಅವನು ಅಂಗಸ್ಪರ್ಶ ಮಾಡಿದ್ದರ ದುಷ್ಪರಿಣಾಮ ಸಾಕ್ಷಾತ್ ಭಗವಂತ ಕರ್ಣನ ಪರಿಚಯ ಹೇಳಿದರೂ ಅದನ್ನು ಸ್ವೀಕರಿಸದೆ ದುರಂತ ಸ್ಥಿತಿಗೆ ತಲುಪಿದ್ದಕ್ಕೆ ಒಂದು ಜ್ವಲಂತ ಉದಾಹರಣೆ.

ಕರ್ಣನ ಸ್ಥಿತಿ ಏಕೆ ಹೀಗಾಯಿತು ಎಂದು ಆಲೋಚಿಸುವುದಾದರೆ ರಾಮಾಯಣದಲ್ಲಿ ಸುಗ್ರೀವನಾಗಿ ಮಾಡಬಾರದ ಕೆಲಸವನ್ನು ಮಾಡಿದ್ದ. ಅಣ್ಣನ ಮರಣಕ್ಕೆ ಕಾರಣನಾದ, ಅವನ ಆಸ್ತಿಯನ್ನು ಲಪಟಾಯಿಸಿದ, ಅಣ್ಣನ ಹೆಂಡತಿ ಯಾದ ತಾರೆಯನ್ನು ಬಲಾತ್ಕರಿಸಿದ. ಇದೆಲ್ಲಾ ಸುಗ್ರೀವ ಮಾಡಿದ ದೋಷ. ಇದೆಲ್ಲಕ್ಕಿಂತ ದೊಡ್ಡ ದೋಷವೆಂದರೆ ವಾಲಿಯನ್ನು ಕೊಂದ ದೋಷ. ವಾಲಿ ಯೋಗ್ಯತೆಯಲ್ಲೂ ಸೂರ್ಯನಿಗಿಂತ ದೊಡ್ಡವನಾದ ಇಂದ್ರ. ವಾಲಿಯನ್ನು ಕೊಲ್ಲಿಸಿದ ದೊಡ್ಡ ದೋಷದಿಂದಾಗಿ ಒಬ್ಬ ದೈತ್ಯನ ಆವೇಷಕ್ಕೆ ಒಳಗಾಗಿ ಇಷ್ಟೆಲ್ಲಾ ದುರ್ಯೋಧನನ ಕಪಿಮುಷ್ಟಿಯಲ್ಲಿ ಸೇರಿಕೊಂಡು ಪಾಂಡವರನ್ನೂ, ವಿದ್ಯಾ ದೇವತೆಯಾಗಿರುವ ದ್ರೌಪದಿಯನ್ನೂ, ಅದಕ್ಕಿಂತಲೂ ಮಿಗಿಲಾಗಿ ಜೀವೋತ್ತಮ ರಾದ ವಾಯುದೇವರ ಅವತಾರವಾದ ಭೀಮಸೇನನನ್ನೂ, ಅದಕ್ಕಿಂತಲೂ ಮಿಗಿಲಾಗಿ ಸರ್ವೋತ್ತಮನಾದ ಕೃಷ್ಣನಿಂದ ದೂರಕ್ಕಿರಬೇಕಾದ ಪ್ರಸಂಗ ಅವನ ಪಾಲಿಗೆ ಬಂತು.

ಅಂತೂ ಕರ್ಣ ಒಂದು ರೀತಿಯಲ್ಲಿ ಶಾಪಗ್ರಸ್ಥನೇ. ಸೂರ್ಯ ಹೇಗಿರಬಾರದು ಎಂಬುದಕ್ಕೆ ಕತ್ತಲೆಯಲ್ಲೇ ಇದ್ದ ಕರ್ಣ ಒಂದು ಉದಾಹರಣೆ. ಕೆಟ್ಟವರ ಸಂಗ ಮಾಡಬಾರದು, ಸುಳ್ಳು ಹೇಳಬಾರದು ಇದಕ್ಕೆಲ್ಲಾ ಉದಾಹರಣೆ ಕರ್ಣ.

ಕರ್ಣಪರ್ವವನ್ನು ನಮ್ಮ ವಿದ್ವಾನ್ ಹಯವದನ ಪುರಾಣಿಕರು ಕನ್ನಡಕ್ಕೆ

ಭಾಷಾಂತರ ಮಾಡಿದ್ದಾರೆ. ಅವರ ಸಂಶೋಧನಾತ್ಮಕವಾದಂತಹ ಅನುವಾದ ಇಲ್ಲಿ ಮೂಡಿಬಂದಿದೆ. ಬೇರೆ ಬೇರೆ ಪಾಠಾಂತರಗಳನ್ನು ಉಲ್ಲೇಖ ಮಾಡಿ ಅಷ್ಟು ಪಾಠಗಳಿಗೂ ಅರ್ಥವನ್ನು ಇಲ್ಲಿ ಬರೆದಿದ್ದಾರೆ. ಇಂತಹ ಇಳಿವಯಸ್ಸಿನಲ್ಲಿ, ಬಿಡುವಿಲ್ಲದ ಸಮಯದಲ್ಲೂ ಕರ್ಣಪರ್ವದ ಎರಡು ಭಾಗಗಳನ್ನು ಸುಂದರವಾಗಿ ಅನುವಾದ ಮಾಡಿಕೊಟ್ಟ ಹಯವದನ ಪುರಾಣಿಕರಿಗೆ ತುಂಬು ಹೃದಯದಿಂದ ಅಭಿನಂದಿಸುತ್ತೇವೆ. ಇದರ ಅಧ್ಯಯನವನ್ನು ಮಾಡಿದರೆ ಲೇಖಕರ ಶ್ರಮ ಸಾರ್ಥಕ. ಇಂತಹ ಒಳ್ಳೆಯ ಕಾರ್ಯ ನಿರಂತರ ಅವರಿಂದ ನಡೆಸಲಿ. ಇದೆಲ್ಲದರ ಬೆನ್ನೆಲುಬಾದಂತಹ ಡಾ॥ ಬೆ.ನಾ.ವಿಜಯೀಂದ್ರಾಚಾರ್ಯರವರನ್ನು ಬೆನ್ನುತಟ್ಟಿ ನಾವು ಹುರಿದುಂಬಿಸುತ್ತಾ ವಿಶೇಷವಾಗಿ ಅವರ ಸೇವೆ ಹರಿಗುರುಗಳಿಗೆ ಮುಟ್ಟಿದೆ, ಅವರನ್ನು ಹರಿಸಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ಮಹಾಭಾರತದಲ್ಲಿ ದುರ್ಯೋಧನನ ಅಂತರ್ಮುಖವನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಮಾದ್ಯಮನಾದವನು ಕರ್ಣ. ಸೂರ್ಯದೇವನಿಂದ ಕುಂತಿಯ ಮೂಲಕ ಬಾಲ್ಯದಲ್ಲಿಯೇ ಸಂಜಾತನಾದ ಕರ್ಣನಲ್ಲಿ ವಯಸ್ಸಿಗೆ ಅನುಗುಣವಾದ ವರ್ತನೆಗಳು ಅನೇಕಬಾರಿ ಕಂಡುಬಂದಿಲ್ಲ. ಇವನ ಅವಸರದ ಜನ್ಮವೇ ಇವನ ಕೆಲವೊಂದು ಅವಸರದ ಪ್ರವೃತ್ತಿಗೆ ಕಾರಣವಾಗಿರಬಹುದು. ಅಥವಾ ಕ್ಷತ್ರಿಯೋಚಿತ ಸಂಸ್ಕಾರಗಳ ಅಲಾಭವು ಕರ್ಣನನ್ನು ಉದಾತ್ತಗುಣಗಳಿಂದ ವಂಚಿತರನ್ನಾಗಿಸಿರ ಬಹುದು. ಮಾರ್ತಾಂಡ ಸಂಜಾತನಾದ ಕರ್ಣನು ಸೂರ್ಯನಂತೆ ಬೆಳಗುವ ತನ್ನ ವ್ಯಕ್ತಿತ್ವವನ್ನು ರಾಹುವಿನಂತೆ ಇರುವ ದುರ್ಯೋಧನನನ್ನು ಆಶ್ರಯಿಸಿಕೊಂಡು ಮರೆಮಾಚಿಕೊಂಡ. ಮೂಲಭೂತವಾಗಿ ಕರ್ಣನದ್ದು ತ್ಯಾಗ, ಔದಾರ್ಯ, ನಿಷ್ಠೆ, ಪ್ರೇಮ, ಗೌರವ ಇತ್ಯಾದಿ ಅನೇಕ ಗುಣಗಳ ವ್ಯಕ್ತಿತ್ವ. ಆದರೆ ಇದರ ವಿನಿಯೋಗವು ಯೋಗ್ಯವಾದ ಸ್ಥಳದಲ್ಲಿ ನಡೆಯಲಿಲ್ಲ ಎಂಬುದೇ ವಿಪರ್ಯಾಸ.

ಸೂರ್ಯೋಪಾಸಕನಾದ ಕರ್ಣ ಸೂತನಾದ ಅಧಿರಥನ ಸುತನಾಗಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡ. ಉತ್ತಮರಾದ ಭೀಷ್ಮ–ದ್ರೋಣಾದಿಗಳಿಗೆ ಮರಿಮೊಮ್ಮಗ–ಶಿಷ್ಯನಂತೆ ಬದುಕಬೇಕಿದ್ದ ಕರ್ಣ ಸೂತರ ಸಂಸ್ಕಾರಗಳು. ನೀಚಜನರ ಆಶ್ರಯ ಇವುಗಳಿಂದ ಅಶಿಕ್ಷಿತ, ಅಮಾನವೀಯ ಜನರಂತೆ ಬಹುತೇಕ ತನ್ನ ಬದುಕಿನಲ್ಲಿ ವರ್ತಿಸಿದ್ದಾನೆ. ಹೀಗೆಂದ ಮಾತ್ರಕ್ಕೆ ಕರ್ಣನು ದುರ್ಯೋಧನ, ದುಶ್ಶಾಸನ, ಶಕುನಿಯರಂತೆ ಪೂರ್ಣದುಷ್ಟನಲ್ಲ. ಅಂತರ್ಮುಖದ ತನ್ನ ವ್ಯಕ್ತಿತ್ವವನ್ನೇ ಕಾಣದಿರುವ ಮಂದಭಾಗ್ಯ ಕರ್ಣ ಎನ್ನಬಹುದು. ವಂಚನೆಯಿಲ್ಲದೆ ಅರ್ಜುನನನ್ನಂತಹ ಗಾಂಡೀವಿಯನ್ನು ಎದುರಿಸುವ ಪೌರುಷವು, ಪರುಶರಾಮ ನಲ್ಲಿ ಕಲಿತ ವಿದ್ಯೆಯಿಂದ ಕರ್ಣನಲ್ಲಿ ಒದಗಿಬಂದಿತ್ತು. ಹೀಗಿದ್ದರೂ ಬ್ರಹ್ಮಶಾಪದ ಹಿನ್ನೆಲೆಯಲ್ಲಿ ಕೈತುತ್ತು ಬಾಯಿಗಿಲ್ಲವಾಯಿತು ಎಂಬಂತೆ ಅರ್ಜುನನ ಮುಂದೆ ಕರ್ಣನ ಯುಕ್ತಿ, ಶಸ್ತ್ರ ಅಸ್ತ್ರಗಳೆಲ್ಲವೂ ವಿಫಲವಾದವು. ಸ್ವಾಮಿನಿಷ್ಠೆಯಿಂದ ಕರ್ಣನು ಅಲ್ಲಲ್ಲಿ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿದ್ದಾನೆ. ಯುದ್ಧಭೂಮಿಯಲ್ಲಿ ಅರ್ಜುನನ ಪಾಲಿಗೆ ಇಟ್ಟುಕೊಂಡಿರುವ ಬಾಣವನ್ನು ಸ್ವಾಮಿನಿಷ್ಠೆಯಿಂದಲೇ ಘಟೋತ್ಕಚನ ಮೇಲೆ ಎಸೆಯುತ್ತಾನೆ. ದುರ್ಯೋಧನನ ಪ್ರೀತಿಗಾಗಿ ದ್ರೌಪದೀ ಮತ್ತು ಪಾಂಡವರನ್ನು ಕೀಳುಮಟ್ಟದ ಭಾವನೆಗಳಿಂದ ಆಧುನಿಕ ಪಡ್ಡೆ ಹುಡುಗರು

ಹುಡುಗಿಯರನ್ನು ಚುಡಾಯಿಸುವಂತೆ ಕರ್ಣನು ವರ್ತಿಸಿದ್ದಾನೆ. ಇದಕ್ಕೆಲ್ಲಾ ಇವನ್ನಲ್ಲಿ ತುಂಬಿದ ದುಷ್ಪಶಕ್ತಿಯು ಒಂದಾದರೆ, ಅತಿಯಾದ ದುಷ್ಟರ ಸಂಪರ್ಕವು ಮುಖ್ಯ ಕಾರಣವಾಗಿದೆ.

ಹೀಗಿದ್ದರೂ ಕರ್ಣನು ಸೂರ್ಯೋಪಾಸನೆಯಿಂದ ಅಂತಃಸತ್ತ್ವವನ್ನು ಬೆಳಗಿಸಿ ಕೊಂಡ. ಸಭೆಯ ಮಧ್ಯದಲ್ಲಿ ಸಹಸ್ರಜನರ ಮುಂದೆ ಅಧಿರಥನನ್ನು ನಮಿಸುವ ಪಿತೃಭಕ್ತಿಯನ್ನು ತೋರಿಸಿಕೊಂಡ. ಕುಂತಿಯ ಮಾತೃತ್ವಕ್ಕೆ ಬೆಲೆಕೊಟ್ಟು ಅವಳಿಗೂ ವರವನ್ನು ನೀಡಿದ. ತನ್ನ ಅಭೇದ್ಯವಾದ ಕವಚವನ್ನೇ ಇಂದ್ರನಿಗೆ ಸಮರ್ಪಿಸಿದ. ಭೀಷ್ಮರ ಪತನವಾದಾಗ ತನ್ನ ಪಾಲಿನ ಕಡುವೈರಿ ಎನಿಸಿದ ಭೀಷ್ಮರ ಅಡಿಗಳಿಗೆ ಹೋಗಿ ಎರಗಿದ. ದುರ್ಯೋಧನನಿಗೆ ಆಪತ್ತು ಒದಗಿದಾಗಲು ಅವನಿಗೆ ಪ್ರಾಣತೆತ್ತು ಹೋರಾಡಿದ.

ಹೀಗೆ ಜಗತ್ತನ್ನೇ ಮೆಚ್ಚಿಸುವ ಅಂತಃಸತ್ತ್ವ ವಿದ್ಯೆ, ಭಕ್ತಿ, ಔದಾರ್ಯ, ಜ್ಞಾನ ಈ ಎಲ್ಲ ಗುಣಗಳು ಮೂರ್ತಿಮತ್ತಾಗಿ ಇವನಲ್ಲಿ ನಿಂತಿದ್ದರೂ ಪ್ರಾಯೋಗಿಕವಾಗಿ ಇವನ ಈ ಗುಣಗಳು ಜಗತ್ತನ್ನು ಮುಟ್ಟಲಿಲ್ಲ. ಕರ್ಣನ ನೈಜವಾದ ಗುಣಗಳು ಜಗತ್ತಿಗೆ ಕಾಣಿಸದೇ ಆ ಸಹಜವಾದ ದುಷ್ಟರ ಸಹವಾಸದಿಂದ ಅಭಿವ್ಯಕ್ತವಾದ ದುರ್ಗುಣ ಗಳೇ ಜನರೆಲ್ಲ ಕಾಣುವಂತಾಯಿತು.

ಕರ್ಣನ ವ್ಯಕ್ತಿತ್ವದ ಬಗ್ಗೆ ಹತ್ತಾರು ಲೇಖನಗಳು ಬಂದಿವೆ. ಕರ್ಣನ ನೈಜವ್ಯಕ್ತಿತ್ವವನ್ನು ವ್ಯಾಸರ ಮಾತಿನ ಮೂಲಕವೇ ಅರ್ಥೈಸಿಕೊಳ್ಳಲು ವಿದ್ವಾನ್ ಕೆ.ಹಯವದನ ಪುರಾಣಿಕರ ಅನುವಾದ ಅತ್ಯಂತ ಸಹಕಾರಿಯಾಗಿಗದೆ. ನಾಡಿನ ಹಿರಿಯ ವಿಮರ್ಶಕ ವಿದ್ವಾಂಸರಾದ ಶ್ರೀಯುತ ಹಯವದನ ಪುರಾಣಿಕರು ಕರ್ಣಪರ್ವವನ್ನು ಬಹಳ ಸುಂದರವಾಗಿ ಅನುವಾದಿಸಿಕೊಟ್ಟು, ಬಹಳ ಉಪಕಾರ ಮಾಡಿರುತ್ತಾರೆ. ಇವರಿಗೆ ತತ್ವಸಂಶೋಧನ ಸಂಸತ್ತಿನ ವತಿಯಿಂದ ನಮಸ್ಕಾರ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಅದೇ ರೀತಿಯಲ್ಲಿ ಗ್ರಂಥದ ಪ್ರಕಟಣೆ ಮಾಡುವ ವಿಷಯದಲ್ಲಿ ಆರ್ಥಿಕವಾಗಿ ನಮಗೆ ಸಹಕಾರ ನೀಡಿದ, ನೀಡುತ್ತಿರುವ ಕರ್ನಾಟಕ ಸರ್ಕಾರಕ್ಕೆ ಎಲ್ಲ ಪದಾಧಿಕಾರಿ ಗಳಿಗೆ ನಮ್ಮ ಸಂಸತ್ತಿನಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತಿದ್ದೇವೆ.

ಇಂತಹ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶತೀರ್ಥಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಕರ್ಣಪರ್ವದ ಭಾಗವನ್ನು ಅರ್ಥಸಹಿತ ಎರಡು ಸಂಪುಟಗಳಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. . ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಕರ್ಣಪರ್ವದ ಮುದ್ರಣಕ್ಕೆ ಬೇಕಾದ ಧನವನ್ನು ನಮ್ಮವರೇ ಆದ ಶ್ರೀಯುತ ಕೆ.ಜಿ.ರಾಘವೇಂದ್ರರಾವ್ ಶ್ರೀಮತಿ ನಂದಿತಾರಾವ್ ದಂಪತಿಗಳು ನೀಡಿರುತ್ತಾರೆ. ಅಮೆರಿಕಾದ ಫ್ಲೋರಿಡಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಸೇವೆಸಲ್ಲಿಸುತ್ತಿರುವ ಇವರು ಮೂಲತಃ ದಕ್ಷಿಣಕನ್ನಡದವರಾಗಿದ್ದು, ನಮ್ಮ ಧರ್ಮ ಸಂಸ್ಕೃತಿಗಳ ಬಗ್ಗೆ ಅಪಾರ ಪ್ರೀತಿಉಳ್ಳವರಾಗಿದ್ದಾರೆ. ನಮ್ಮ ಪ್ರಕಾಶನಕ್ಕೆ ಉದಾರಸೇವೆಯನ್ನು ಸಲ್ಲಿಸಿದ ಇವರ ಕುಟುಂಬಕ್ಕೆ ಶ್ರೀಕೃಷ್ಣ–ಮುಖ್ಯಪ್ರಾಣರು ಸನ್ಮಂಗಲವನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

ಈ ಮಹಾಭಾರತದ ಯೋಜನೆಯಲ್ಲಿ ತೊಡಗಿರುವ ಎಲ್ಲ ವಿದ್ವಾಂಸರು, ಮುಖ್ಯವಾಗಿ ಯೋಜಕರಾಗಿರುವ, ಎಲ್ಲ ವಿದ್ವಾಂಸರನ್ನು ಸೇರಿಸಿ ಯೋಜನೆಯನ್ನು ರೂಪಿಸಿ ಅದ್ಭುತವಾದ ಕಾರ್ಯವನ್ನು ಮಾಡುತ್ತಿರುವ ನಮ್ಮ ನಾಡಿನ ಶ್ರೇಷ್ಠ ಪ್ರವಚನಕಾರರೂ, ವಿದ್ವಾಂಸರೂ ಆಗಿರುವಂತಹ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಹೃತ್ಪೂರ್ವಕ ನಮನಗಳನ್ನು ಸಮರ್ಪಿಸುತ್ತೇವೆ.

ಅದೇ ರೀತಿ ಅಕ್ಷರ ಜೋಡಣೆಯನ್ನು ಮಾಡಿರುವ ನಮ್ಮವರೇ ಆದ ಶ್ರೀ ಪ್ರೇಮಕುಮಾರ್‌ರವರಿಗೆ, ಈ ಗ್ರಂಥವನ್ನು ಅಂದವಾಗಿ ಹಾಗೂ ಸಮಯಕ್ಕೆ

ಸರಿಯಾಗಿ ಮುದ್ರಣ ಮಾಡಿಕೊಟ್ಟಂತಹ ಪವನ್ ಪ್ರಿಂಟರ್ಸ್‌ನ ಶ್ರೀ ಮಂಜುನಾಥ್ ರವರಿಗೂ ನಮ್ಮ ಸಂಸತ್ತಿನ ಪರವಾಗಿ ಧನ್ಯವಾದಗಳು.

ಹಾಗೆಯೇ ಈ ಕಾರ್ಯಕ್ಕೆ ಸಹಕಾರ ಮಾಡಿದ, ಮಾಡುತ್ತಿರುವ, ಇನ್ನು ಮುಂದೆ ಮಾಡುವಂತಹ ತತ್ವಸಂಶೋಧನ ಸಂಸತ್ತಿನ ಎಲ್ಲ ಪದಾಧಿಕಾರಿಗಳಿಗೂ ಹಾಗೂ ಶ್ರೀ ಪಲಿಮಾರು ಮಠದ ಎಲ್ಲ ಪದಾಧಿಕಾರಿಗಳಿಗೆ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ವಂದನೆಗಳು.

ಎಲ್ಲ ಆಸ್ತಿಕರು ಈ ಗ್ರಂಥದ ಅಧ್ಯಯನ ಮಾಡಿದರೆ, ಇಷ್ಟು ವಿದ್ವಾಂಸರ ಶ್ರಮ, ಶ್ರೀಗಳವರ ಸಂಕಲ್ಪ ಸಾರ್ಥಕ. ಭಾರತದಲ್ಲಿ ಹುಟ್ಟಿದ್ದಕ್ಕೆ ಮಹಾಭಾರತದ ಚಿಂತನೆಯನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಉದ್ಧ್ಯತರಾಗೋಣ ಎಂದು ಆಶಿಸುತ್ತೇನೆ.

ಡಾ|| ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು, ತತ್ವಸಂಶೋಧನಸಂಸತ್
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ

ಕರ್ಣಪರ್ವವನ್ನು ಓದುವ ಮುನ್ನ...

ಕಬ್ಬಿನ ಕೋಲಿನಂತೆ ಭಾರತ 'ಪ್ರತಿ ಪರ್ವ ರಸಾಯನ' ಪ್ರತಿಯೊಂದು ಪರ್ವದಲ್ಲಿ ರಸ ಜಿನುಗುತ್ತದೆ. ಕರ್ಣಪರ್ವವೂ ಹಾಗೇ ಅದ್ಭುತರಸಮಯ.

ಕರ್ಣನ ವ್ಯಕ್ತಿತ್ವವೇ ಅದ್ಭುತ! 'ಸೂತಪುತ್ರ'ನಾಗಿಯೂ ಅಂಗದೇಶದ ಪಟ್ಟಾಭಿಷಿಕ್ತ ದೊರೆ ಎನಿಸಿದ್ದು ಅದ್ಭುತ. ಸೂತಪುತ್ರನಾಗಿದ್ದೂ ಜಗದೊಡೆಯ ಸರ್ವಜ್ಞ ನಾರಾಯಣಾವತಾರ ಪರಶುರಾಮರಲ್ಲಿ ಸಕಲ ವೇದವಿದ್ಯೆಗಳನ್ನು ಗಳಿಸಿ, ಅರ್ಜುನನಿಗಿಂತಲೂ ಹೆಚ್ಚಿನ ಅಸ್ತ್ರಕೌಶಲವನ್ನು ಪ್ರದರ್ಶಿಸಿದ್ದು ಅತ್ಯದ್ಭುತ. ಶ್ರದ್ಧೆಯಿಂದ ಸಂಧ್ಯಾವಂದನೆ ಸೂರ್ಯೋಪಾಸನೆ ದಾನಧರ್ಮಗಳನ್ನು ಆಚರಿಸುವ ಪರಮಧಾರ್ಮಿಕನಾಗಿದ್ದೂ ಪರಮಧಾರ್ಮಿಕರಾದ ಪಾಂಡವರಲ್ಲಿ ಪರಮನೀಚನಾದ ದುರ್ಯೋಧನ ನಿಂದಲೂ ಮಾಡಲಾಗದಷ್ಟು ಕೆಟ್ಟ ದ್ವೇಷ ಸಾಧನೆಯನ್ನು ಕರ್ಣಮಾಡಿದ್ದೂ ಪರಮಾದ್ಭುತ.

'ತ್ವತ್ಸಮಂ ತ್ವದ್ವಿಶಿಷ್ಟಂ ವಾ ಕರ್ಣಂ ಮನ್ಯೇ ಮಹಾರಥಂ'
'ಅವಶ್ಯಂ ತು ಮಯಾ ವಾಚ್ಯಂ ಯತ್ ಪಥ್ಯಂ ತವ ಪಾಂಡವ
ಮಾವಮಂಸ್ಥಾ ಮಹಾಬಾಹೋ ಕರ್ಣಮಾಹವಶೋಭಿನಂ'

ಎಂದು ಶ್ರೀಕೃಷ್ಣ ಅರ್ಜುನನಿಗೆ ಕಿವಿಮಾತು ಹೇಳಿದ್ದುಂಟು (ಕರ್ಣಪರ್ವ ೬೯.೨೭,೨೫) 'ಮಹಾರಥನಾದ ಕರ್ಣ ನಿನಗೆ ಸರಿ ಅಥವಾ ಮಿಗಿಲೇ ಎನ್ನಬಹುದು. ಅವನನ್ನು ಅರ್ಜುನ, ನೀನು ಅವಮಾನಿಸಬೇಡ ಇದು ನಿನಗೆ ನಾನು ಅವಶ್ಯ ಹೇಳಬೇಕಾದ ಹಿತವಚನ' ಎನ್ನುತ್ತಾನೆ ಶ್ರೀಕೃಷ್ಣ. ಸೂತಪುತ್ರನಾಗಿ ಕರ್ಣ ಇಷ್ಟು ದೊಡ್ಡ ಸಾಧನೆ ಮಾಡಿದ್ದು ಅದ್ಭುತವಲ್ಲದೆ ಇನ್ನೇನು?

ಕರ್ಣನಿಗೆ ಬ್ರಾಹ್ಮಣರೆಂದರೆ ಪರಮಭಕ್ತಿ. ಬ್ರಾಹ್ಮಣ ವೇಷದಿಂದ ಇಂದ್ರ ಬಂದು, ಕರ್ಣನಿಗೆ ಹುಟ್ಟಿನಲ್ಲೇ ಅಂಟಿಕೊಂಡು ಬಂದಿದ್ದ ಕವಚವನ್ನು ಕತ್ತರಿಸಿ ಕೊಡೆಂದು ಕೇಳಿದಾಗ, ಹಿಂದಿನ ರಾತ್ರಿ ಸ್ವಪ್ನದಲ್ಲಿ ಬಂದು ಪಿತನಾದ ಸೂರ್ಯನು ಇಂದ್ರನ ಬಗ್ಗೆ ಎಚ್ಚರಿಸಿದ್ದರೂ ಕೂಡ, ತನ್ನ ಪ್ರಾಣವೇ ಹೋಗುವ ಪರಿಸ್ಥಿತಿ, ಪ್ರಾಣಪ್ರಿಯನಾದ ದುರ್ಯೋಧನನಿಗೆ ಧೈರ್ಯವೇ ಉಡುಗಿ ಹೋಗುವ ಪರಿಸ್ಥಿತಿಗಳಿದ್ದರೂ ಕೂಡ, ಕತ್ತಿಯನ್ನೆತ್ತಿಕೊಂಡು ಕರ್ಣ ಜೀವಂತನಾಗಿ ನಿಂತು

ಮೈಯಿಂದ ಆ ಕವಚವನ್ನು ಕರಕರನೆ ಕತ್ತರಿಸಿ ಕೊಟ್ಟುಬಿಟ್ಟ, ದಾನಶೂರನಾದ ಶಿಬಿ ಚಕ್ರವರ್ತಿಯಂತೆ! ಈ ಸಾಹಸವನ್ನು ಬ್ರಾಹ್ಮಣಭಕ್ತಿಯನ್ನು ದಾನನಿಷ್ಠೆಯನ್ನು ತ್ಯಾಗಬುದ್ಧಿಯನ್ನು ಕಂಡು ದೇವತೆಗಳು ಪುಷ್ಪವೃಷ್ಟಿಗರೆದರು! ಅದ್ಭುತ !

ಎಲ್ಲ ಬಣ್ಣ ಮಸಿ ನುಂಗಿತೆಂಬಂತೆ, ಕರ್ಣ ವಿನಾಕಾರಣ ಸಜ್ಜನರಾದ ಧಾರ್ಮಿಕರಾದ ಪಾಂಡವರಲ್ಲಿ ದ್ವೇಷ ಮಾಡಿದ. ಕೊನೆಯುಸಿರಿನ ತನಕವೂ ಅದನ್ನು ಸಾಧಿಸಿದ. ಅದರಿಂದ ಧರ್ಮಶ್ರದ್ಧೆ ಅವನಿಗಿರಲಿಲ್ಲ. ಕೇವಲ ಸ್ವಾರ್ಥಪೂರಿತವಾದ ಕಪಟವರ್ತನೆ ಇದು. ಇಲ್ಲದಿದ್ದರೆ 'ತುಂಬಿದ ಸಭೆಯಲ್ಲಿ ಪತಿವ್ರತಾಶಿರೋಮಣಿದೇವಿ ದ್ರೌಪದಿ ಬೆತ್ತಲೆ ನಿಂತು ಪತಿಗಳೆದುರೇ ಒದ್ದಾಡಲಿ, ಈ ಸಂಕಟವನ್ನು ಕಂಡು ನಾವು ನಲಿಯೋಣ' ಎನ್ನುವ ಕೀಳುಮನೋವೃತ್ತಿಯನ್ನು ಕರ್ಣನಲ್ಲಿ ನಿರೀಕ್ಷಿಸಲು ಸಾಧ್ಯವೆ?

ಮೇಲುನೋಟಕ್ಕೆ ಇಂಥ ಪ್ರಶ್ನೆ ಬರುವುದು ಸಹಜ. ಆದರೆ ವಾಸ್ತವ ಸಂಗತಿ ಬೇರೇ ಇದೆ. ಕರ್ಣನ ಧರ್ಮಾಚರಣೆಯೂ ತೋರಿಕೆಯದಲ್ಲ. ಅವನು ಮಾಡಿದ ಪಾಂಡವ ದ್ವೇಷವೂ ನಟನೆಯಲ್ಲ. ಎರಡೂ ನಿಜವೇ. ಕೇವಲ ಅಸುರಾವೇಶ ಪ್ರಭಾವದಿಂದ ಇದು ಸಾಧ್ಯವಾಯಿತು. ಆದ್ದರಿಂದ ಇದು ಅದ್ಭುತ!

ಯದಬ್ರುವಮಹಂ ಕೃಷ್ಣ ಕಟುಕಾನಿ ಸ್ಮ ಪಾಂಡವಾನ್ ।
ಪ್ರಿಯಾರ್ಥಂ ಧಾರ್ತರಾಷ್ಟ್ರಸ್ಯ ತೇನ ತಪ್ಯೇ ಹ್ಯಕರ್ಮಣಾ ॥

ದುರ್ಯೋಧನನ ಪ್ರೀತಿಗಾಗಿ ದ್ರೌಪದಿಗೆ ತಾನು ಕೆಟ್ಟಮಾತನ್ನಾಡಿದ್ದನ್ನು ತಪ್ಪೆಂದು ಒಪ್ಪಿಕೊಳ್ಳುತ್ತಾನೆ. ಅದಕ್ಕೆ ಪಶ್ಚಾತ್ತಾಪ ಪಡುತ್ತಿದ್ದೇನೆ ಎಂದು ಕೃಷ್ಣನ ಮುಂದೆ ಏಕಾಂತದಲ್ಲಿ ಹೇಳಿಕೊಳ್ಳುತ್ತಾನೆ, ಕರ್ಣ.

'ನೀನು ಪಾಂಡವ ಪಕ್ಷಕ್ಕೆ ಬರುವುದಾದರೆ ರಾಜಸಿಂಹಾಸನ ನಿನ್ನದಾಗುತ್ತದೆ' ಎಂದು ಕೃಷ್ಣ ಹೇಳಿದಾಗ ಕರ್ಣನಲ್ಲಿ ಸ್ವಾರ್ಥಬುದ್ಧಿ ಇರುತ್ತಿದ್ದರೆ ಒಡನೆ ಸ್ವೀಕರಿಸುತ್ತಿದ್ದ. ಅದಕ್ಕೆ ದುರ್ಯೋಧನನೂ ಸಂತೋಷಪಡುತ್ತಿದ್ದ. ಮೋಸದ ಜೂಜಿನಿಂದ ರಾಜ್ಯ ಕಸಿದುಕೊಂಡವನು ಆತ. ಕರ್ಣನೂ ಒಂದುವೇಳೆ ಪಾಂಡವನಲ್ಲದಿದ್ದರೂ ಪಾಂಡವನೆಂದು ಹೇಳಿಕೊಂಡು ಸಿಂಹಾಸನವನ್ನು ಕಸಿದುಕೊಂಡಿದ್ದರೆ ಅದನ್ನು ತಪ್ಪೆನ್ನುತ್ತಿರಲಿಲ್ಲ. ಭೇಷ್ ಎನ್ನುತ್ತಿದ್ದ. ಹಾಗೆ ಕರ್ಣ ಕಸಿದುಕೊಂಡು ದುರ್ಯೋಧನನಿಗೇ ಕೊಟ್ಟಿದ್ದರೆ, ಇನ್ನೂ ಹೆಚ್ಚು ಭೇಷ್ ಎನ್ನುತ್ತಿದ್ದ. ಆದರೆ ಕರ್ಣ

ಅನಾಯಾಸ ಸಿಗುತ್ತಿದ್ದ ರಾಜ್ಯ ತ್ಯಾಗ ಮಾಡಿದ. ಏಕೆಂದರೆ 'ದುರ್ಯೋಧನ ದುಃಶಾಸನರು ಪೂರ್ಣ ನಾಶವಾಗಬೇಕು, ಧರ್ಮರಾಜನೇ ರಾಜ್ಯವಾಳಬೇಕು' ಎಂದು ಸದಾ ಕನಸು ಕಾಣುತ್ತಿದ್ದವನು ಕರ್ಣ. ಹಾಗೇ ಕೃಷ್ಣನ ಮುಂದೆ ತನ್ನ ಅಂತರಂಗವನ್ನು ತೋಡಿಕೊಳ್ಳುತ್ತಾನೆ. ಕೃಷ್ಣನಿಗೆ, ತಾನು ಪಾಂಡವರಿಗೆ ಹಿರಿಯಣ್ಣನೆನ್ನುವ ಸತ್ಯವನ್ನು ಅವರಿಗೆ ಹೇಳಬೇಡ, ಹೇಳಿದರೆ ಧರ್ಮರಾಜ ರಾಜನಾಗಲು ಒಪ್ಪಲಾರ ಎನ್ನುತ್ತಾನೆ!

ಕುರುಕ್ಷೇತ್ರದ ಶಸ್ತ್ರಯಜ್ಞದಲ್ಲಿ ದುರ್ಯೋಧನ ಮತ್ತು ಅವನ ಸೈನ್ಯಪೂರ್ತಿ ಆಹುತಿಯಾಗಬೇಕು. ಭೀಮನು ದುಃಶಾಸನನ ಎದೆಬಗಿದು ರಕ್ತಪಾನ ಮಾಡಬೇಕು. ಆಮೂಲಕ ರಣರಂಗದಲ್ಲಿ ಸಾಮಗಾನಪೂರ್ವಕ ಸೋಮಯಾಗವನ್ನು ನೆರವೇರಿಸಬೇಕು. ಮುಂದೆ ದುರ್ಯೋಧನನ ವಧದಿಂದ ಸವನೀಯ ಪಶುಯಾಗವನ್ನೂ ಅವನೇ ಮಾಡಬೇಕು, ಎನ್ನುತ್ತ ತಾನು ಈ ಯಜ್ಞದಲ್ಲಿ ಪಶುವಾಗಿ ಆತ್ಮಾಹುತಿ ಮಾಡಿಕೊಂಡು ಸ್ವರ್ಗ ಪಡೆಯಬೇಕು ಎಂದೂ ಉದ್ಯೋಗ ಪರ್ವದಲ್ಲಿ ಕರ್ಣ ತನ್ನ ಹಾರ್ದವನ್ನು ಕೃಷ್ಣನ ಮುಂದೆ ಹೇಳಿಕೊಂಡಿದ್ದಾನೆ ಕರ್ಣ. ಐದೂ ಜನ ಪಾಂಡವರು ಉಳಿಯಬೇಕು. ಈ ಯಜ್ಞದಲ್ಲಿ ಋತ್ವಿಜರಾಗಿ ರಾಜ್ಯಭೋಗ ಮಾಡಬೇಕೆಂದೂ ಹೇಳಿದ್ದಾನೆ.

ಈ ಯುದ್ಧಯಜ್ಞ ಸಂಭವಿಸಬೇಕೆನ್ನುವ ಉದ್ದೇಶದಿಂದಲೆ ಪಾಂಡವದ್ವೇಷದ ಕಿಚ್ಚನ್ನು ಚೆನ್ನಾಗಿ ದುರ್ಯೋಧನನ ಹೊಟ್ಟೆಯಲ್ಲಿ ಉರಿಸಿದ್ದಾನೆ ಕರ್ಣ.

ಕ್ಷತ್ರಂ ಸ್ವರ್ಗಂ ಕಥಂ ಗಚ್ಛೇತ್ ಶಸ್ತ್ರಪೂತಮಿತಿ ಪ್ರಭೋ ।
ಸಂಘರ್ಷ ಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ ॥

ಪಾಂಡವರ ಕೌರವರೊಳಗೆ ಸಂಘರ್ಷ ಉಂಟಾಗುವಂತೆ ಮಾಡಿ ಯುದ್ಧ ಯಜ್ಞದಲ್ಲಿ ಕರ್ಣ ತಾನು ಶಸ್ತ್ರದಿಂದ ಪವಿತ್ರನಾಗಿ ಸ್ವರ್ಗಭಾಗಿಯಾಗಲೆಂದೇ ವಿಧಿ ಅವನನ್ನು ಕನ್ಯೆಯಾಗಿದ್ದ ಕುಂತಿದೇವಿಯ ಗರ್ಭದಲ್ಲಿ ಅವತರಿಸುವಂತೆ ಮಾಡಿತ್ತೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ.

ಪಾಂಡವ ದ್ವೇಷ ಸಾಧನೆಯ ಕಾರ್ಯದಲ್ಲಿ ಕರ್ಣ ದುರ್ಯೋಧನನಿಗೆ ಹೆಗಲೆಣೆ ಯಾಗಿರಲಿ ಎಂಬ ಉದ್ದೇಶದಿಂದಲೇ ಪರಶುರಾಮರು ಕರ್ಣನಿಗೆ ಅಸ್ತ್ರವಿದ್ಯೆಯನ್ನು ಉಪದೇಶಿಸಿದ್ದರು. ಇಲ್ಲದಿದ್ದರೆ ತಾನು ಬ್ರಾಹ್ಮಣನೆಂದು ಕರ್ಣ

ಸುಳ್ಳು ಹೇಳಿದರೆ ಸರ್ವಜ್ಞರಾದ ಪರಶುರಾಮರಿಗೆ ಅದು ತಿಳಿಯದಿದ್ದೀತೆ? ಹೀಗಾಗಿ ಕರ್ಣ ದುರ್ಯೋಧನನಿಗೆ ಪ್ರಾಣಸ್ನೇಹಿತನಾಗಿ ಜೊತೆಗಿದ್ದು ಅವನಿಗೆ ಎಲ್ಲ ಪಾಪಕೃತ್ಯಗಳಲ್ಲಿ ಹುರಿದುಂಬಿಸುತ್ತ ಮಾರ್ಗದರ್ಶಕನಾಗಿ ವರ್ತಿಸಿದ. ಅವನು ಹೀಗೆ ಮಾಡದಿರುತ್ತಿದ್ದರೆ ಭಾರತ ಯುದ್ಧವೇ ನಡೆದಿರುತ್ತಿರಲಿಲ್ಲ!

ದುರ್ಯೋಧನನಿಗೆ ಒಂದಿಷ್ಟೂ ಅನುಮಾನ ಬಾರದಂತೆ ಅದ್ಭುತ ರೀತಿಯಲ್ಲಿ ವರ್ತಿಸಿ ಕರ್ಣ ತನ್ನ ಜನ್ಮಸಾಫಲ್ಯವನ್ನು ತಾನೇ ಸಾಧಿಸಿಕೊಂಡ. ಇದು ಅತ್ಯದ್ಭುತ. ಅದಕ್ಕೇ ಕರ್ಣನ ಶಿರ ಧರೆಗೆ ಉರುಳಿದಾಗ ಅಂತರಿಕ್ಷದಲ್ಲಿ ದೇವತೆಗಳು ಹಾಹಾಕಾರ ಮಾಡಿದರು (ಕರ್ಣ.೯೩.೫೧). ಧನ್ಯವಾಯಿತು ಕರ್ಣನ ಅವತಾರ ಎನ್ನಲು ಬೇರೇನು ಸಾಕ್ಷಿಬೇಕು? ಇದು ಅತ್ಯಂತ ಅದ್ಭುತ! 'ಅತಃ ಪರಂ ಕರ್ಣಪರ್ವ ಪ್ರೋಚ್ಯತೇ ಪರಮಾದ್ಭುತಂ!' ಎಂದು ಪರ್ವಸಂಗ್ರಹಪರ್ವದಲ್ಲಿ ಕರ್ಣಪರ್ವ ವನ್ನು 'ಪರಮಾದ್ಭುತ' ಎಂದೇ ಪ್ರಶಂಸೆ ಮಾಡಲಾಗಿದೆ.

ಗ್ರಂಥಸಂಪಾದನೆಯ ಬಗ್ಗೆ ಎರಡು ಮಾತು

ಭಾರತ ಪ್ರಚಲಿತ ಪಾಠದಲ್ಲಿ ಅಡಿಗಡಿಗೆ ಬಿಡಿಸಲಾಗದ ಸಮಸ್ಯೆಗಳು ಇದಿರಾಗುತ್ತವೆ. ಪೂರ್ವೋತ್ತರ ವಿರೋಧಗಳೂ ಕಂಡುಬರುತ್ತವೆ. ಮೂಲಪಾಠ ವನ್ನು ಸಂಶೋಧನೆಯಿಂದ ಕಂಡುಕೊಳ್ಳೋಣವೆಂದರೆ ಅದು ಆಗದ ಮಾತು. ಗಣೇಶ ಬರೆದಿದ್ದ ಮೂಲಪ್ರತಿ ನಮಗೆ ಸಿಗುವುದೂ ಅಸಂಭವ. ಅದಕ್ಕೆ ಮೂಲಪಾಠಕ್ಕೆ ಸಾಕಷ್ಟು ಹತ್ತಿರವಾಗಬಲ್ಲ ಪಾಠವನ್ನು ಸಂಪಾದಿಸಬೇಕಾಗುತ್ತದೆ. ಲಕ್ಷಾಲಂಕಾರವನ್ನು ಬರೆದ ಶ್ರೀವಾದಿರಾಜ ಗುರುಸಾರ್ವಭೌಮರು ಕೂಡ ಮೂಲಪಾಠವೆಂದು ಒಂದು ಪಾಠವನ್ನು ಎಲ್ಲಿಯೂ ತೋರಿಸಿಲ್ಲ. 'ಇತಿ ಪಾಠೇ'. 'ಇತಿ ಪಾಠೇ' ಈ ಪಾಠದಲ್ಲಿ ಹೀಗೆ ಅರ್ಥ. ಈ ಪಾಠದಲ್ಲಿ ಹೀಗೆ ಅರ್ಥ ಎನ್ನುತ್ತ ಅನೇಕ ಪಾಠಗಳನ್ನೇ ಸ್ವೀಕರಿಸಲು ಅನುಮತಿ ನೀಡಿದ್ದಾರೆ.

ಉದಾ: ಕರ್ಣನ ಧ್ವಜ 'ಹಸ್ತಿಕಕ್ಷ್ಯಾ' ಎಂದೇ ಎಲ್ಲ ಹಸ್ತಪ್ರತಿಗಳಲ್ಲಿ ಕಾಣುತ್ತದೆ. ಒಂದುಕಡೆ ಮಾತ್ರ 'ಹಸ್ತಕಾಕ್ಯಾ' ಎಂದು ಪಾಠ—

ಕರ್ಣಸ್ಯಾಶೀವಿಷನಿಭಾ ರತ್ನಸಾರವತೀ ದೃಢಾ ।
ಪುರಂದರ ಧನುಃಪ್ರಖ್ಯಾ ಹಸ್ತಕಾಕ್ಯಾ ವ್ಯರಾಜತ ॥
ಕಪಿಶ್ರೇಷ್ಠಸ್ತು ಪಾರ್ಥಸ್ಯ ವ್ಯಾದಿತಾಸ್ಯೋ ಭಯಂಕರಃ ।

ಉತ್ಪತ್ಯತು ಮಹಾವೇಗಃ ಕಾಕಮಭ್ಯಾಹನತ್ ಕಪಿಃ ।
ನಖೈಶ್ಚ ದಶನೈಶ್ಚೈವ ಗರುಡಃ ಪನ್ನಗಂ ಯಥಾ
ಸಾ ಕಿಂಕಿಣೀ ಕಾಞ್ಚರಣಾ ಕಾಲಪಾಶೋಪಮಾऽऽಯಸೀ
ಅಭ್ಯದ್ರವತ್ ಸುಸಂಕ್ರುದ್ಧಾ ಹಸ್ತಕಾಕ್ಯಾಥ ತಂ ಕಪಿಂ ॥ (ಕರ್ಣ.೮೩.೭೯-೮೩)

ಈ ಪಾಠ ಪುಣೆಯ ಭಂಡಾರ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರಿಗೆ ಸಿಕ್ಕಿಲ್ಲ. ಒಂದುವೇಳೆ ಸಿಕ್ಕಿದ್ದರೂ 'ಒಂದೇ ಹಸ್ತಪ್ರತಿ, ನಂಬಲರ್ಹವಲ್ಲ' ಎಂದು ಕೈಬಿಡುತ್ತಿದ್ದರು. ಆಧುನಿಕ ಪಾಠ ಸಂಶೋಧನೆಯ ವೈಖರಿಯೆ ಹೀಗೆ. ಅವರಿಗೆ ೩೨ ಹಸ್ತಪ್ರತಿಗಳು ಸಿಕ್ಕಿದ್ದರೂ ೨೭ ಪ್ರತಿಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದೇವೆ ಎಂದಿದ್ದಾರೆ. ಅದರಿಂದ ಇಲ್ಲಿ ನಾವು ಈ ಸಂಪುಟದಲ್ಲಿ ಲಕ್ಷಾಲಂಕಾರಕ್ಕೆ ಸಮ್ಮತವಾದ ಪಾಠವನ್ನೇ ಸಂಯೋಜನೆ ಮಾಡಿದ್ದೇವೆ.

ಉದಾ: ಕರ್ಣನ ಧ್ವಜ ಯಾವುದು ಎಂದರೆ 'ಹಸ್ತಿಕಕ್ಷ್ಯಾ' ಆನೆಯ ನಡುಕಟ್ಟು, ನಡುವಿಗೆ ಬಿಗಿಯುವ ತೊಗಲಿನ ಹಗ್ಗ ಎಂದು ಪ್ರಸಿದ್ಧ. ವಸ್ತುತಃ ಹಸ್ತಪ್ರಮಾಣದ ಕಬ್ಬಿಣದ ಕಾಗೆಯ ಪ್ರತಿಮೆ 'ಹಸ್ತಕಾಕ್ಯಾ' ಕರ್ಣನ ಧ್ವಜವೆಂದು ಮೇಲಿನ ಪಾಠದಿಂದ ವ್ಯಕ್ತವಾಗುತ್ತದೆ. 'ಹಸ್ತಿಕಕ್ಷ್ಯಾ' ಎಂಬ ಹೆಸರೂ ಅದಕ್ಕೇ ಸಲ್ಲುತ್ತದೆ ಎನ್ನುತ್ತಾರೆ ವಾದಿರಾಜರು. ಏಕೆಂದರೆ ಕಕ್ಷ ಎಂದರೆ ಕಾಡು. ಕಾಡುಕಾಗೆ 'ಕಕ್ಷ್ಯಾ' ಎನಿಸುತ್ತದೆ. ಅದರ ಪ್ರತಿಮೆ, 'ಕಕ್ಷ್ಯಾ'. ಹಸ್ತಪ್ರಮಾಣದ್ದಾದ್ದರಿಂದ ಅದು 'ಹಸ್ತಿಕಕ್ಷ್ಯಾ' ಎನಿಸಿದೆ. 'ಕಕ್ಷ್ಯಾ' ಎಂದು ಕಾಗೆಗೆ ಹೆಸರು ಕೋಶಗಳಲ್ಲಿ ಕಾಣದಿದ್ದರೂ ಗುಹ್ಯಭಾಷಾಪ್ರಿಯರಾದ ವ್ಯಾಸರು ಕ್ಲಿಷ್ಟವಾದ ಕೂಟ ಶ್ಲೋಕಗಳಂತೆ ಈರೀತಿಯ ಕ್ಲಿಷ್ಟಪದಗಳನ್ನು ಬಳಸಿರುವ ಸಂಭವವನ್ನೂ ಕ್ಲಿಷ್ಟ ಎನ್ನುವ ಕಾರಣಕ್ಕೇ ತಳ್ಳಿಹಾಕುವಂತಿಲ್ಲ ಎನ್ನುತ್ತಾರೆ ವಾದಿರಾಜರು.

ಕಾಕಧ್ವಜವು ಕಾಗೆಯ ಪ್ರತಿಮೆಯೇ ಆಗಿರಬೇಕೆ? 'ಧ್ವಜ' ಎಂದರೆ ಪತಾಕೆ, ಬಾವುಟ, ಬಟ್ಟೆಯ ತುಂಡು. ಗಾಳಿಗೆ ಫರಫರನೆ ಹಾರಾಡುತ್ತಿರುತ್ತದೆ ಎಂದು ಎಲ್ಲ ಕೋಶಕಾರರೂ ಅಭಿಪ್ರಾಯಪಡುತ್ತಾರೆ. ಆದರೆ ವಸ್ತುತಃ ಧ್ವಜವು ಪತಾಕೆಯಲ್ಲ, ಪತಾಕೆ ಧ್ವಜವಲ್ಲ. ಧ್ವಜವು ಪ್ರತಿಮೆಯಾಗಿರುತ್ತದೆ. ಪತಾಕೆ ಮಾತ್ರ ಬಟ್ಟೆಯ ತುಂಡು.

ಹೇಮರೂಪ್ಯ ಪ್ರಮೃಷ್ಟಾನಾಂ ವಾಸಸಾಂ ಶಿಲ್ಪಿನಿರ್ಮಿತಾಃ ।
ಸಹೇಮ ಚಂದ್ರ ತಾರಾರ್ಕಾಃ ಪತಾಕಾಃ ಕಿಂಕಿಣೀಯುತಾಃ ॥ (೪೪.೫೫)

ಇಲ್ಲಿ 'ಶಿಲ್ಪಿ'ಗಳೆಂದರೆ 'ಬಟ್ಟೆಗೆ ಬಣ್ಣ ಹಾಕುವವರು' ಎಂದು ನೀಲಕಂಠೀ ವ್ಯಾಖ್ಯಾನ ಹೇಳುತ್ತದೆ. ಆದರೆ 'ಕೇತು' 'ಧ್ವಜ'ಗಳೆಂದರೆ ಬಟ್ಟೆ ತುಂಡಲ್ಲ.

ಸೌವರ್ಣಾ ರಾಜತಾಶ್ಚೈವ ತೈಜಸಾಶ್ಚ ಪೃಥಗ್ವಿಧಾಃ ।
ಕೇತವೋ ವಿನಿಪಾತ್ಯಂತೇ । (೫೭.೬೪)

'ಚಿನ್ನ ಬೆಳ್ಳಿ ಮುಂತಾದ ಲೋಹಗಳಿಂದಾದ ನಾನಾ ಬಗೆಯ ಧ್ವಜ'ಗಳ ವರ್ಣನೆ ಕಾಣುತ್ತದೆ.

'ತತೋ ಧ್ವಜಂ ಸ್ಫಾಟಿಕ ಚಿತ್ರಕಂಬುಂ' (೮೧.೨೧)

ವೃಷಸೇನನ ಧ್ವಜವು ಸ್ಫಟಿಕಮಯವಾದ ಶಂಖಪ್ರತಿಮೆ ಎನ್ನಲಾಗಿದೆ.

ಸಾ ಕಿಂಕಿಣೀಕಾಭರಣಾ ಕಾಲಪಾಶೋಪಮಾಯಸೀ ।
ಅಭ್ಯದ್ರವತ್ ಸುಸಂಕ್ರುದ್ಧಾ ಹಸ್ತಕಾರ್ಯಾಥ ತಂ ಕಪಿಂ ॥(೮೩.೮೩)

ಇಲ್ಲಿ ಯಮಪಾಶದಂತೆ ಕಪ್ಪಾದ ಭೀಕರವಾದ ಕಬ್ಬಿಣದ ಕಾಕಧ್ವಜದ ಉಲ್ಲೇಖವಿದೆ. ಯಮಪಾಶ ದೃಷ್ಟಾಂತ ಮಾತ್ರದಿಂದ ಅದನ್ನು ಹಗ್ಗ ಎನ್ನಲಾಗದು.

ತತಃ ಶ್ವೇತ ಪತಾಕೇನ ಬಲಾಕಾವರ್ಣವಾಜಿನಾ ।
ಹೇಮಪೃಷ್ಠೇನ ಧನುಷಾ ಹಸ್ತಿಕಕ್ಷ್ಯೇಣ ಕೇತುನಾ ॥ (೧೧.೮)

ಕೇತು ಪತಾಕೆಗಳು ಒಂದೇ ಎನ್ನುವುದಾದರೆ ಇಲ್ಲಿ ಕರ್ಣನ ರಥದಲ್ಲಿ ಬಿಳಿ ಪತಾಕೆ ಮತ್ತು ಹಸ್ತಿಕಕ್ಷ್ಯ ಕೇತುಗಳನ್ನು ಬೇರೆಬೇರೆಯಾಗಿ ಜೊತೆಗೇ ಹೇಳುವುದು ಕೂಡಲಾರದು.

ಪತಾಕೆ ಬಟ್ಟೆಯ ತುಂಡಾಗಿರುವುದರಿಂದಲೇ ರಥಿಕನಿಗೆ ಇದಿರಾಗಿ ಗಾಳಿ ಬೀಸುವಾಗ ಪತಾಕೆ ಅವನಿಗೆ ಅಭಿಮುಖವಾಗಿ ಹಾರಾಡಿ ಅಶುಭ ಸೂಚಕ ವಾಗುತ್ತದೆ.

ರಥೇನಾಭಿಪತಾಕೇನ ಸೂತಪುತ್ರೋ ವ್ಯದೃಶ್ಯತ ॥ (೧೧.೧೦)

'ಕರ್ಣನಿಗೆ ಎದುರಾಗಿ ಅವನ ಪತಾಕೆ ಹಾರಾಡುತ್ತಿತ್ತು' ಇದು ಪರಾಜಯ ಸೂಚಕವೆಂದು ನೀಲಕಂಠೀವ್ಯಾಖ್ಯಾನದಲ್ಲಿ ಹೇಳಿದೆ.

ಯುದ್ಧ ಪ್ರಾರಂಭದಲ್ಲಿ ಮೊದಲಿಗೆ ಧ್ವಜಗಳು ಅಂದರೆ ಅವುಗಳ

ಅಭಿಮಾನಿಗಳು ಪರಸ್ಪರ ಹೋರಾಡುವುದರ ವರ್ಣನೆ ಬರುತ್ತದೆ. ಕರ್ಣಾರ್ಜುನ ರಥಗಳು ಎದುರಿಗೆ ಬಂದು ನಿಂತಾಗ ಕಪಿ ಕಾಕಗಳ ಹೋರಾಟ ನಡೆಯಿತು. ಬಳಿಕ ಅಶ್ವಗಳು ಕೆನೆಯುತ್ತ ಸ್ಪರ್ಧಿಸಿದುವು. ಸಾರಥಿಗಳು ಹಾಗೂ ರಥಿಕರು ದೃಷ್ಟಿಯುದ್ಧ ಮಾಡಿದರೆಂದಿದೆ. ಪತಾಕೆಗಳು ಈ ರೀತಿ ಸ್ಪರ್ಧಿಸುವುದು ಎಲ್ಲಿಯೂ ಕಂಡಿಲ್ಲ. ಅದರಿಂದ ಧ್ವಜ ಬೇರೆ ಪತಾಕೆ ಬೇರೆ.

ಇಲ್ಲಿ ಹೀಗೆ ಒಂದು ಹಸ್ತಪ್ರತಿಯಲ್ಲಿ ಮಾತ್ರ, ಅದರಲ್ಲಿಯೂ ಒಂದೇಕಡೆ ಸಿಕ್ಕಿದ 'ಹಸ್ತಕಾಕ್ಯಾ' ಎಂಬ ಪಾಠವನ್ನು ಯುಕ್ತವಾಗಿದೆ ಎಂಬ ಕಾರಣಕ್ಕೆ ವಾದಿರಾಜರು ಸ್ವೀಕರಿಸಿದ್ದು ಕಂಡಿದೆ.

❖

ಯುಕ್ತವಾದ ಪಾಠಾಂತರವನ್ನು ಸ್ವೀಕರಿಸುವ ಸ್ವಾತಂತ್ರ್ಯ ಪಾಠಸಂಶೋಧಕನಿಗೆ ಇದ್ದರೆ ಮಾತ್ರ ಗ್ರಂಥ ಉಳಿಯುತ್ತದೆ. ಇಲ್ಲದಿದ್ದರೆ ಗ್ರಂಥ ಅಧ್ಯಯನ ಪರಂಪರೆಯಲ್ಲಿ ಬಾರದೆ ಲುಪ್ತವಾಗಿ ಹೋದೀತು.

ಕರ್ಣಪರ್ವದಲ್ಲಿ ಸರ್ಪಾಸ್ತ್ರ ಗುರಿತಪ್ಪುವ ಪ್ರಸಂಗದ ಒಂದು ಕೂಟ ಶ್ಲೋಕ (೮೭.೩೮) ಬಲು ಕ್ಲಿಷ್ಟವಾಗಿತ್ತು. ವ್ಯಾಖ್ಯಾನಕಾರರು ಅದಕ್ಕೆ ನೀಡಿದ ವಿವರಣೆ ಹೃದ್ಯವಾಗಿರಲಿಲ್ಲ. ಪಾಠಾಂತರಗಳ ಸಂಯೋಜನೆಯಿಂದ ಸರಳ ಸುಂದರ ವಿವರಣೆ ಇದೀಗ ಸಾಧ್ಯವಾಗಿದೆ.

❖

ಹೀಗೆ ಪಾಠಾಂತರಗಳ ಸಹಾಯದಿಂದಲೇ ಹೆಚ್ಚಿನ ಶ್ಲೋಕಗಳು ಸರಳವಾಗಿ ಬೋಧಕವಾಗುತ್ತಿರುವುದರಿಂದ ಪ್ರಾಯಃ ಲಕ್ಷಾಲಂಕಾರದಲ್ಲಿ ಕೇವಲ ಕೆಲವೇ ಕಡೆಗಳಲ್ಲಿ ಅಮೋಘವಾಗಿ ವ್ಯಾಖ್ಯಾನ ಮಾಡಿದ್ದಾರೆ.

ಉದಾ: (೧೬.೩೧,೩೨,೩೩) ಶ್ರೀಕೃಷ್ಣ ಅಶ್ವತ್ಥಾಮನಿಗೆ ಹೇಳುವ ಮಾತು— 'ಯಜಮಾನನಾದ ದುರ್ಯೋಧನನ ಉಪ್ಪಿನ ಋಣ ತೀರಿಸಲು ನಿನಗಿದೋ ಸರಿಯಾದ ಸಮಯ. ಅರ್ಜುನನೊಡನೆ ಯುದ್ಧಮಾಡಿ ಆ ಋಣವನ್ನು ತೀರಿಸು. ಬ್ರಾಹ್ಮಣರು ಬರಿ ಕ್ಷುಲ್ಲಕ ಕಾರಣಕ್ಕಾಗಿ ಜಗಳಾಡುತ್ತಾರೆ, ಕ್ಷತ್ರಿಯರು ಹಾಗಲ್ಲ. ಅವರು ಪರಸ್ಪರ ಜಯಕ್ಕಾಗಿ ಹೋರಾಡುತ್ತಾರೆ, ಬ್ರಾಹ್ಮಣನಾದ ನಿನಗೆ ಈ

ಹೋರಾಟ ಶಕ್ಯವಾಗಲಾರದು. ಮೋಹದಿಂದ ಅದನ್ನು ಬಯಸುವಿಯಾದರೆ ಸ್ಥಿರವಾಗಿ ನಿಂತು ಹೋರಾಡು' ಎಂದು ಹೇಳಿದಂತೆ ಕಾಣುತ್ತದೆ.

'ದ್ರೋಣ ಹಸ್ತಿನಾಪುರಿಗೆ ಹೊಟ್ಟೆ ಹೊರೆಯಲು ತಿರುಪೆಬೇಡಿ ಬಂದವನು. ಇಲ್ಲಿ ರಾಜಾಶ್ರಯ ಸುಲಭವಾಗಿ ಸಿಕ್ಕಿತು. ತಂದೆ ಮಕ್ಕಳು ಸುಖವಾಗಿ ತಿಂದು ಕೊಬ್ಬಿದರು. ಅದರಿಂದ ಅವರಿಗೆ ದುರ್ಯೋಧನನ ಋಣ ಬಹಳ ಇತ್ತು. ಅವನು ಆಶ್ರಯ ಕೊಡದಿರುತ್ತಿದ್ದರೆ ಅವರು ಕಂಗಾಲಾಗುತ್ತಿದ್ದರು. ಬಿಲ್ಲು ಹಿಡಿದ ಬ್ರಾಹ್ಮಣನೆಂದು ಅಪಖ್ಯಾತಿಯಿಂದ ಬ್ರಾಹ್ಮಣರು ಮೊದಲೇ ಕೈಬಿಟ್ಟಿದ್ದರು. ಕ್ಷತ್ರಿಯಾಂತಕನಾದ ಪರಶುರಾಮನ ಶಿಷ್ಯನೆಂದು ರಾಜರೂ ಅಂಜಿ ಯಾರೂ ಆಶ್ರಯಕೊಡಲಿಲ್ಲ. ಬ್ರಾಹ್ಮಣನಾಗಿದ್ದು ಬಿಲ್ಲು ಹಿಡಿದುದರ ಫಲವಿದು. ಬಿಲ್ಲುವಿದ್ಯೆ ಇವನಿಗೆ ಏಕೆ ಬೇಕಿತ್ತು? ಕೇವಲ ಕಲಿಸುವ ವೃತ್ತಿಗಾದರೂ ತೃಪ್ತಿಪಟ್ಟುಕೊಳ್ಳಬಹುದಿತ್ತು. ಹಾಗೆ ಮಾಡಲಿಲ್ಲ. ಭೀಷ್ಮ ಪತನಾನಂತರ ಸೇನಾಪತಿ ಪಟ್ಟವನ್ನು ಒಪ್ಪಿ ಯುದ್ಧಕ್ಕೆ ಇಳಿದುದು ಅಕ್ಷಮ್ಯವಾಯಿತು! ಅಶ್ವತ್ಥಾಮನನ್ನೂ ಅದರಲ್ಲಿ ತೊಡಗಿಸಿ, ಅಧ್ಯಯನ ಅಧ್ಯಾಪನಕ್ಕೆಲ್ಲ ತರ್ಪಣ ಕೊಟ್ಟು, ಕುಲಕ್ರಮ ವಾಗಿ ಮುಂದುವರೆಯುವ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ..' ವಿಮರ್ಶಕರು ಹೀಗೇ ದ್ರೋಣ ಅಶ್ವತ್ಥಾಮರ ಪಾತ್ರ ವಧೆ ಮಾಡುವುದನ್ನು ಕಾಣುತ್ತೇವೆ.

ವಸ್ತುತಃ ಮಹಾಭಾರತದಲ್ಲಿ ದ್ರೋಣ ಅಶ್ವತಾಮರು ಬ್ರಾಹ್ಮಣ ಧರ್ಮಕ್ಕೇ ಬಹಳ ನಿಷ್ಠರಾಗಿದ್ದವರು. ಕೇವಲ ಪರಮವೈರಾಗ್ಯದಿಂದ, ಬ್ರಾಹ್ಮಣನಿಗೆ ಧರ್ಮ ಸಮ್ಮತವಾಗಿದ್ದ ಕಲಿಸುವ ವೃತ್ತಿಯನ್ನೂ ಕೂಡ ಬಿಟ್ಟು, ಪೌರೋಹಿತ್ಯವೃತ್ತಿಯನ್ನೂ ಕೂಡ ಬಿಟ್ಟು, ಕೇವಲ ಕಠಿನವಾದ ಶಿಲೋಂಛವೃತ್ತಿಯಲ್ಲಿದ್ದು ಕಠಿನವಾದ ಅಪರಿಗ್ರಹ ನಿಯಮದಿಂದ ತಪಸ್ಸು ಮಾಡುತ್ತಿದ್ದವರು. ಊರವರು ಅದನ್ನು ಕಂಡು ಸಹಿಸಲಾರದೆ ಕನಿಕರದಿಂದ 'ಭಿಕ್ಷಾವೃತ್ತಿಯನ್ನಾದರೂ ಮಾಡಬಾರದೆ' ಎಂದು ಆಕ್ಷೇಪಿಸುತ್ತಿದ್ದರು. ಅಂಥವರ ವಿಷಯದಲ್ಲಿ 'ತಿರುಪೆ ಬೇಡಲು ಹಸ್ತಿನಾಪುರಕ್ಕೆ ಬಂದವರೆಂ'ದು ಆರೋಪ ಮಾಡುವುದು, ಸರ್ವಥಾ ಅನುಚಿತ.

ಶಿಷ್ಯನಾದ ಧರ್ಮರಾಜನೆ ಅವರನ್ನು ಅರಮನೆಗೆ ಕರೆಸಿಕೊಂಡ. ದುರ್ಯೋಧನನಲ್ಲ. ಮತ್ತು ದುರ್ಯೋಧನ ಭೀಮನ ಭಯದಿಂದ ಅವರಲ್ಲಿ ಶರಣಾಗಿದ್ದ. ಆತ ಶಿಷ್ಯನಾಗಿದ್ದಾನೆ ಶರಣಾಗಿದ್ದಾನೆ ಎಂಬ ಕಾರಣಕ್ಕೆ ದ್ರೋಣರು ಅವನೊಂದಿಗೆ ಅವನ ಅರಮನೆಯಲ್ಲಿ ವಾಸ ಮಾಡಿದರು. ಮಗನ ಅನ್ನವನ್ನು

ಉಂಡರೆ ತಂದೆ ಋಣ ತೀರಿಸಬೇಕಾಗಿಲ್ಲ, ಹಾಗೇ ಶಿಷ್ಯನ ಅನ್ನ ಉಂಡರೆ ಗುರುವೂ ಋಣ ತೀರಿಸಬೇಕಾಗಿಲ್ಲ.

ಪಾಂಡವರ ಪಕ್ಷಕ್ಕೆ ಸೇರಿದ್ದರೆ ಶರಣಾಗತರಕ್ಷಣೆಯ ಕರ್ತವ್ಯಕ್ಕೆ ಲೋಪ ಬರುತ್ತಿತ್ತೆಂದು ದುರ್ಯೋಧನನ ಪಕ್ಷದಲ್ಲೇ ಉಳಿದು, ಅವನ ರಕ್ಷಣೆಗಾಗಿ ಸೇನಾಪತಿಪಟ್ಟವನ್ನೂ ವಹಿಸಿದರು.

ಶ್ರೀಕೃಷ್ಣ ಬ್ರಾಹ್ಮಣಪ್ರಿಯ, ಬ್ರಾಹ್ಮಣಧರ್ಮವನ್ನು ಚೆನ್ನಾಗಿ ಬಲ್ಲವ, ಇಂಥ ದ್ರೋಣ ಅಶ್ವತ್ಥಾಮರನ್ನು ದುರ್ಯೋಧನನ ಉಪ್ಪುಂಡವರೆಂದು ಹಳಿಯುವನೆ? ಬ್ರಾಹ್ಮಣರು ಕ್ಷುಲ್ಲಕ ಕಾರಣಕ್ಕಾಗಿ ಜಗಳಾಡುವರೆಂದು ಹಾಸ್ಯಮಾಡುವನೆ? ಅದರಿಂದ ಈ ಮಾತಿಗೆ ಲಕ್ಷಾಲಂಕಾರದಲ್ಲಿ ಸರಿಯಾದ ವ್ಯಾಖ್ಯಾನ ಮಾಡಿದ್ದಾರೆ–

'ಯುದ್ಧಾತಿಥ್ಯಂ ಪ್ರಯಚ್ಛ ಮೇ'

'ಅತಿಥಿಯಾಗಿ ಬಂದಿದ್ದೇನೆ. ಯುದ್ಧಾತಿಥ್ಯ ಸತ್ಕಾರ ನೀಡು' ಎಂದು ಅಶ್ವತ್ಥಾಮ ಹೇಳಿದಾಗ ಕೃಷ್ಣ ಅವನಿಗೆ ಹೇಳಿದ ಮಾತು ಇದು— 'ಭರ್ತ'ನೆಂದರೆ ಮನೆಯ ಯಜಮಾನ. ಯಜಮಾನನಾಗಿ ಅರ್ಜುನನು, ಈಗ ಅತಿಥಿಯಾಗಿ ಬಂದ ನಿನಗೆ 'ಪಿಂಡ'ವನ್ನು, ಯುದ್ಧರೂಪವಾದ ಅನ್ನವನ್ನು ಕೊಡುತ್ತಿದ್ದಾನೆ, ಅದನ್ನು 'ನಿರ್ವೇಷ್ಟುಂ' ಅಂದರೆ ಉಣಲು, ಅದನ್ನು ಉಪಜೀವಿಸುವ ಅತಿಥಿಯಾದ ನಿನಗಿದು ಕಾಲ' ಎಂದು.

'ಆತಿಥ್ಯ ಕರ್ಮಾಭ್ಯರ್ಥಾಯ ದೀಯತಾಂ'

'ಈಗ ಆತಿಥ್ಯಕರ್ಮವಾಗಿರುವ ಯುದ್ಧವನ್ನು 'ಅಭ್ಯರ್ಥಾಯ' ಬೇಡಿಬಂದ ಈ ಅತಿಥಿಗೆ ನೀಡು' ಇದು ಶ್ರೀಕೃಷ್ಣ ಅರ್ಜುನನಿಗೆ ಹೇಳಿದ ಮಾತು.

'ಸೂಕ್ಷ್ಮೈ ವಿವಾದೌ ವಿಪ್ರಾಣಾಂ'

ಎಂದರೆ 'ಕ್ಷುಲ್ಲಕ ಕಾರಣಕ್ಕೆ ಬ್ರಾಹ್ಮಣರು ಜಗಳಾಡುತ್ತಾರೆ' ಎಂದರ್ಥವಲ್ಲ. ಬೌದ್ಧಿಕ ಸೂಕ್ಷ್ಮ ವೇದಾರ್ಥವಿಚಾರದಲ್ಲಿ ಪೂರ್ವಪಕ್ಷ–ಸಿದ್ಧಾಂತರೂಪದಿಂದ ವಾದವಿವಾದ ಗಳನ್ನು ಬ್ರಾಹ್ಮಣರು ನಡೆಸುತ್ತಾರೆ. ಸ್ಥೂಲವಾದ ಕಾಯಿಕ ಜಯಕ್ಕಾಗಿ ಕ್ಷತ್ರಿಯರು ಹೋರಾಡುತ್ತಾರೆ. ಅಶ್ವತ್ಥಾಮ, ನೀನು ಬ್ರಾಹ್ಮಣ ವೇದಾರ್ಥವಿಚಾರವನ್ನೆ ನಡೆಸು, ಯುದ್ಧ ನಿನಗೆ ಬೇಡ ಬೇಕೆನಿಸಿದರೆ ಯುದ್ಧಕ್ಕೆ ನಿಲ್ಲು ಎಂದು ಶ್ರೀಕೃಷ್ಣ ಅಶ್ವತ್ಥಾಮನಿಗೆ ಹೇಳುತ್ತಾನೆ.

ಸ ಕಂಪಿತಶ್ಚೈತ್ಯ ಇವಾತಿಮಾತ್ರಂ ಸುಪುಷ್ಪಿತೋ ಭೂಮಿತಲೇ ನಿಮಗ್ನಃ ।
ತತಶ್ಚಕ್ರಮಪತತ್ ತಸ್ಯ ಭೂಮೌ ಸ ವಿಹ್ವಲಃ ಸಮರೇ ಸೂತಪುತ್ರಃ ॥

(೮೭.೮೧)

ಕರ್ಣನ ರಥವು ಬ್ರಾಹ್ಮಣಶಾಪದಿಂದ ಅಲುಗಾಡಲು ತೊಡಗಿತು. ರಥಚಕ್ರವು ನೆಲದಲ್ಲಿ ಬಿದ್ದಿತು. ರಥವು ಭೂಕಂಪದಲ್ಲಿ ಹೂಬಿಟ್ಟ ಚೈತ್ಯವೃಕ್ಷ ಕಂಪಿಸುತ್ತ ನೆಲದಲ್ಲಿ ನಿಂತಂತೆ ಕಾಣಿಸಿತು. ಕರ್ಣ ಭಯದಿಂದ ವಿಹ್ವಲನಾದ.

ಬಲೇನಾಥ ಸ ಸಂಸ್ತಭ್ಯ ಬ್ರಹ್ಮಾಸ್ತ್ರಂ ಸಮುದೈರಯತ್ ।
ಐಂದ್ರಾಸ್ತ್ರಮರ್ಜನಶ್ಚಾಪಿ ತದ್ ದೃಷ್ಟ್ವಾಭಿನ್ಯಮಂತ್ರಯತ್ ॥ (೮೭.೮೯)

ಅಸ್ತ್ರೈರಸ್ತ್ರಾಣಿ ರಾಧೇಯಃ ಪ್ರತ್ಯಹನ್ ಸವ್ಯಸಾಚಿನಃ ।
ಚಕ್ರೇ ಚಾಭ್ಯಧಿಕಂ ಪಾರ್ಥಾತ್ ಸ್ವವೀರ್ಯಂ ಪ್ರತಿ ದರ್ಶಯನ್ ॥

(೮೭-೧೦೦)

ಕರ್ಣನು ಧೈರ್ಯದಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ, ಅರ್ಜುನ ಅದಕ್ಕೆ ಪ್ರತಿಯಾಗಿ ಐಂದ್ರಾಸ್ತ್ರವನ್ನು ಪ್ರಯೋಗಿಸಿದ.

ಇಲ್ಲಿ 'ಚಕ್ರಮಪತತ್' ಎಂದು ಚಕ್ರವು ಭೂಮಿಯಲ್ಲಿ ಹೂತುಹೋಯಿತೆಂದು ಹೇಳಿ ಒಡನೆ ಕರ್ಣ ಅರ್ಜುನನನ್ನು ಮೀರಿಸುವಂತೆ ಅಸ್ತ್ರಯುದ್ಧವನ್ನು ನಡೆಸಿದನೆಂದೂ ಹೇಳಿದೆ. ಬಳಿಕ, ಮುಂದೆ,

ರೌದ್ರಮಸ್ತ್ರಂ ಸಮಾಧಾಯ ಕ್ಷೇಪ್ತುಕಾಮಃ ಕಿರೀಟವಾನ್ ।
ತತೋಽಗ್ರಸನ್ಮಹೀ ಚಕ್ರಂ ರಾಧೇಯಸ್ಯ ಮಹಾಮೃಧೇ ॥ (೮೭-೧೦೩)

'ಅರ್ಜುನ ರೌದ್ರಾಸ್ತ್ರವನ್ನು ಎಸೆಯಲು ಉದ್ಯುಕ್ತನಾದಾಗ ಕರ್ಣನ ರಥಚಕ್ರವನ್ನು ಭೂಮಿ ನುಂಗಿತು' ಎಂದಿದೆ.

ಮುಂದೆ ಕರ್ಣ ರಥದಿಂದಿಳಿದು ಚಕ್ರವನ್ನು ಎತ್ತಲು ಪ್ರಯತ್ನಿಸುತ್ತಾನೆ. ಚಕ್ರದೊಂದಿಗೆ ನೆಲವೇ ನಾಲ್ಕು ಅಂಗುಲ ಮೇಲೆ ಬಂದಿತು ಹೊರತು ಚಕ್ರ ನೆಲವನ್ನು ಬಿಟ್ಟು ಮೇಲೆ ಬರಲಿಲ್ಲ. ಕರ್ಣ ಯುದ್ಧ ಮಾಡುವುದಿಲ್ಲ, ಚಕ್ರ ಎತ್ತಲು ಮುಹೂರ್ತ ಕಾಲ ಅವಕಾಶ ಕೊಡೆಂದು ಅರ್ಜುನನನ್ನು ಕೇಳಿಕೊಳ್ಳುತ್ತಾನೆ. ಕೃಷ್ಣ ಅದಕ್ಕೆ ಒಪ್ಪುವುದಿಲ್ಲ. ಅರ್ಜುನ ಕರ್ಣನ ಶಿರಶ್ಛೇದ ಮಾಡುತ್ತಾನೆ.

ಇಲ್ಲಿ ಪ್ರಶ್ನೆಗಳು ಬರುತ್ತವೆ. ಬ್ರಾಹ್ಮಣ ಶಾಪದಿಂದ ಭೂಮಿ ಕರ್ಣನ ರಥಚಕ್ರವನ್ನು ನುಂಗಿದರೂ ಎರಡು ಬಾರಿ ನುಂಗುವುದಿಲ್ಲ. ಆದರೆ 'ಚಕ್ರಮಪತತ್' ಎಂದು ಒಮ್ಮೆ 'ಅಗ್ರಸನ್ಮಹೀ ಚಕ್ರಂ' ಎಂದು ಇನ್ನೊಮ್ಮೆ ನೆಲ ಚಕ್ರವನ್ನು ನುಂಗಿದಂತೆ ಕಾಣುತ್ತದೆ—

ಬ್ರಾಹ್ಮಣ ಶಾಪದಂತೆ ಒಮ್ಮೆಯಾದರೂ ಚಕ್ರವನ್ನು ನೆಲ ನುಂಗಿದರೆ ಆಗಲೆ ಕರ್ಣನಿಗೆ ಅಸ್ತ್ರಗಳೆಲ್ಲವೂ ಮರೆಯಾಗಬೇಕು. ಆದರೆ ಇಲ್ಲಿ 'ಚಕ್ರಮಪತತ್' ಎಂದು ಹೇಳಿದಂತೆ ನೆಲವು ಚಕ್ರವನ್ನು ನುಂಗಿದರೂ ಕರ್ಣ ಅಸ್ತ್ರಯುದ್ಧವನ್ನು ಮಾಡುತ್ತಲೇ ಇರುತ್ತಾನೆ. ಅರ್ಜುನನನ್ನೂ ಮೀರಿಸುವಂತೆ ಅಸ್ತ್ರಗಳನ್ನೆಸೆಯುತ್ತಾನೆ!

ರಥಚಕ್ರ ನೆಲದಲ್ಲಿ ಬಿದ್ದಾಗ 'ಸ ವಿಹ್ವಲಃ ಸಮರೇ ಸೂತಪುತ್ರಃ' ಕರ್ಣ ಭಯವಿಹ್ವಲನಾದನೆಂದು ಹೇಳಿ,

ಛಿನ್ನೇ ಶರೇ ಸರ್ಪಮುಖೇ ಚ ಘೋರೇ ಪಾರ್ಥೇನ ತಸ್ಮಿನ್ ವಿಷಸಾದ ಕರ್ಣಃ ॥

'ಸರ್ಪಮುಖದ ಘೋರ ಅಸ್ತ್ರವೂ ಕೂಡ ಅರ್ಜುನ ಬಾಣದಿಂದ ಚೂರಾದ್ದರಿಂದ ಕರ್ಣನಿಗೆ ವಿಷಾದ ಉಂಟಾಯಿತು' ಎಂದು ಕರ್ಣನು ವಿಷಾದ ಹೊಂದಿದುದರ ಉಲ್ಲೇಖ ಇಲ್ಲಿ ನಡುವೆ ಬರುತ್ತದೆ. ವಸ್ತುತಃ ಸರ್ಪಾಸ್ತ್ರ ಪುನಃ ತಾನೇ ಕರ್ಣನ ಬಳಿ ಬಂದು ತನ್ನನ್ನು ಪುನಃ ಎಸೆಯಲು ಒತ್ತಾಯಿಸಿದರೂ ಕರ್ಣ ಎರಡನೇ ಬಾರಿಗೆ ಎಸೆಯುವುದಿಲ್ಲ. ಮತ್ತು ಅದು ಚೂರಾದ ಬಳಿಕವೂ ಧೈರ್ಯ ದಿಂದ ಯುದ್ಧ ಮಾಡುತ್ತಾನೆ. ಆದರಿಂದ ಚಕ್ರ ನೆಲದಲ್ಲಿ ಹೂತುಹೋದಾಕ್ಷಣವೂ ಕರ್ಣ ಭಯ ವಿಹ್ವಲನಾಗುವನೆಂಬುದಕ್ಕೆ ಅರ್ಥವಿಲ್ಲ.

ತಾನು ದಾನಾದಿ ಧರ್ಮವನ್ನು ಬಹಳ ಮಾಡಿದ್ದೇನೆ. ಆದರೂ ಧರ್ಮ ನನ್ನನ್ನು ಕಾಪಾಡುತ್ತಿಲ್ಲ. ಧರ್ಮ ಕಾಪಾಡುತ್ತದೆ ಎಂದು ಎಲ್ಲರೂ ಹೇಳುವುದು ಬರಿ ಸುಳ್ಳೆಂದು ಧರ್ಮವನ್ನು ಈ ಸಂದರ್ಭದಲ್ಲಿ ಕರ್ಣ ಹಳಿಯುತ್ತಾನೆ. ಇದೂ ಅರ್ಥವಿಲ್ಲದ್ದು. ಕರ್ಣ ಬಹಳ ಧಾರ್ಮಿಕ. ಎಂದೂ ಧರ್ಮವನ್ನು ಹಳಿದವನಲ್ಲ. ಬ್ರಾಹ್ಮಣಶಾಪದಿಂದ ಚಕ್ರವನ್ನು ನೆಲ ನುಂಗಿರುವಾಗ ಧರ್ಮವನ್ನು ಹಳಿಯಲು ಕಾರಣವೂ ಇಲ್ಲ. ಆದರಿಂದ ಕರ್ಣ ಧರ್ಮವನ್ನು ಹಳಿಯಲೇ ಇಲ್ಲ.

ಅಸ್ತ್ರಯುದ್ಧವನ್ನು ಕರ್ಣ ಮಾಡುತ್ತಿದ್ದುದರಿಂದ, ಬ್ರಾಹ್ಮಣಶಾಪದಿಂದ ಅಸ್ತ್ರಗಳ ವಿಸ್ಮರಣೆ ಎನ್ನುವುದೂ ನಿಜವಲ್ಲ. ಮೊದಲನೆಸಲ ಚಕ್ರವನ್ನು ನೆಲ ನುಂಗಿದಾಗ

ಕರ್ಣ ಧರ್ಮವನ್ನು ಹಳಿಯಲಿಲ್ಲ. ಅಸ್ತ್ರಗಳೂ ಮರೆಯಾಗಲಿಲ್ಲ. ಎರಡನೆಬಾರಿ ಎರಡೂ ಸಂಭವಿಸಿದೆ ಎಂದರೆ ಈ ಅಧ್ಯಾಯ ಪೂರ್ತಿಪ್ರಕ್ಷಿಪ್ತ ಎನ್ನಬೇಕಾಗುತ್ತದೆ.

ಮೊದಲನೆಬಾರಿ ರಥಚಕ್ರವನ್ನು ನೆಲ ನುಂಗಿದರೂ ಕರ್ಣ ಯುದ್ಧಮಾಡುವ ಸಾಧ್ಯತೆ ಇದ್ದುದಾದರೆ ಎರಡನೆಬಾರಿ ಕರ್ಣನೇಕೆ ಚಕ್ರವನ್ನು ಎತ್ತಲು ಕಾಲಾವಕಾಶವನ್ನು ಬೇಡುತ್ತಾನೆ?

ಪರಶುರಾಮನ ಶಾಪದಿಂದ ಅವಸಾನ ಕಾಲದಲ್ಲಿ ಕರ್ಣನಿಗೆ ಬ್ರಹ್ಮಾಸ್ತ್ರವು ಸ್ಮರಣೆಗೆ ಬರುವುದಿಲ್ಲ ಎಂದು ಹಿಂದೆ ಬಂದಿದೆ. ಆದರೆ ಈಗ ಅವಸಾನ ಕಾಲದಲ್ಲಿಯೂ ಕರ್ಣ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ ಉಲ್ಲೇಖವಿದೆ. ಹೀಗಾಗಿ ವಸ್ತುತಃ ಕರ್ಣನಿಗೆ ಪರಶುರಾಮನ ಶಾಪವಾಗಲಿ ಬ್ರಾಹ್ಮಣಶಾಪವಾಗಲಿ ಯಾವ ತೊಂದರೆಯನ್ನೂ ಉಂಟುಮಾಡಲಿಲ್ಲ ಎಂದು ಈ ಪ್ರಕರಣದಿಂದ ಭಾಸವಾಗುತ್ತದೆ.

ಈ ಅಧ್ಯಾಯವು ಸಮನ್ವಯ ಮಾಡಲಾಗದಂಥ ಪ್ರಕರಣಗಳಿಂದ ತುಂಬಿ ಹೋಗಿದೆ. ಯಥಾಮತಿ ವಿಶ್ಲೇಷಿಸಿದ್ದೇವೆ. ವಿದ್ವಾಂಸರೇನಾದರೂ ವಿಷಯಗಳ ಮೇಲೆ ಬೆಳಕು ಚೆಲ್ಲಿ ತಿಳಿಸುವುದಾದರೆ ಕೃತಜ್ಞತೆಯಿಂದ ಪ್ರಕಟಿಸುತ್ತೇವೆ. ನಾವು ಅನುವಾದಿಸುತ್ತಿರುವ ಪುಸ್ತಕದಲ್ಲಿ ಈ ಅಧ್ಯಾಯದಲ್ಲಿ ೧೧೬ ಶ್ಲೋಕಗಳಿವೆ. ಭಂ.ರಿ.ಇನ್‌ಸ್ಟಿಟ್ಯೂಟ್‌ನವರ ಪುಸ್ತಕದಲ್ಲಿ ಕೇವಲ ೬೫ ಶ್ಲೋಕಗಳಿವೆ' –ಭಾರತ ದರ್ಶನ ಪ್ರಕಾಶನ

ಈ ಎಲ್ಲ ಸಮಸ್ಯೆಗಳಿಗೂ ಲಕ್ಷಾಲಂಕಾರದಲ್ಲಿ ಅತಿ ಸುಲಭವಾದ ಪರಿಹಾರವನ್ನು ಹೇಳಿದ್ದಾರೆ—

'ಅಪತತ್' ಇತ್ಯುಕ್ತ್ವಾ ಭೂಮಾವೀಷತ್ ಪಾತ ಏವ ।
ತತೋಽಗ್ರಸನ್ಮಹೀ ಚಕ್ರಮಿತ್ಯತ್ರ ತು 'ಅಗ್ರಸತ್'
ಇತ್ಯುಕ್ತ್ವಾ ಸಮ್ಯಗ್ ಭೂಮೌ ಪ್ರವೇಶನಮಿತಿ ವಿವೇಕಃ ।
ಅತೋ ನ ಪೌನರುಕ್ತ್ಯಂ ।

'ಚಕ್ರಂ ಭೂಮೌ ಅಪತತ್' ಚಕ್ರವು ಹಳ್ಳದಲ್ಲಿ ಬಿದ್ದಿತು.
'ಅಗ್ರಸನ್‌ಮಹೀ ಚಕ್ರಂ' ಚಕ್ರವನ್ನು ನೆಲ ನುಂಗಿತು.

—ಇವೆರಡೂ ಒಂದೇ ಅಲ್ಲ. ಬಹಳ ವ್ಯತ್ಯಾಸವಿದೆ. ಚಕ್ರ ಕೇವಲ ನೆಲದಲ್ಲಿ

ಬಿದ್ದಿತೆಂದರೆ ಹೂತು ಹೋಗಿರುವುದಿಲ್ಲ. ಎತ್ತಬಹುದು. ನೆಲ ನುಂಗಿತೆಂದರೆ ಹೂತು ಹೋಗಿರುತ್ತದೆ. ಎತ್ತಲಾಗುವುದಿಲ್ಲ.

ಬ್ರಾಹ್ಮಣ ಶಾಪದಿಂದ ನೆಲ ನುಂಗಿದ್ದು ಒಂದೇಬಾರಿ. ಎರಡು ಬಾರಿ ನುಂಗಿಲ್ಲ. ಮೊದಲಿಗೆ ಚಕ್ರ 'ಅಪತತ್' ಹಳ್ಳದಲ್ಲಿ ಬಿದ್ದಿದ್ದು, ಬ್ರಾಹ್ಮಣಶಾಪದಿಂದ ಹೂತುಹೋಗುವುದರ ಸೂಚನೆ ಮಾತ್ರ. ಅದರಿಂದ ಬ್ರಾಹ್ಮಣಶಾಪದಿಂದಾಗಲೀ ಪರಶುರಾಮಶಾಪದಿಂದಾಗಲಿ ಈಗ ಅಸ್ತ್ರಗಳು ಮರೆಯಾಗಲಿಲ್ಲ. ಕರ್ಣ ಅಸ್ತ್ರಯುದ್ಧವನ್ನು ಮಾಡಿದ. ಸೂಚನೆಯಿಂದ ಭಯ ವಿಹ್ವಲನಾದರೂ ಸಾವರಿಸಿಕೊಂಡು ಅರ್ಜುನನನ್ನೂ ಮೀರಿಸುವಂತೆ ಬ್ರಹ್ಮಾಸ್ತ್ರ ಮುಂತಾದ ಅಸ್ತ್ರಗಳಿಂದ ಯುದ್ಧಮಾಡಿದ. ಎರಡನೆ ಬಾರಿಗೆ ನಿಜವಾಗಿ ಬ್ರಾಹ್ಮಣಶಾಪದಿಂದ 'ಅಗ್ರಸತ್' ಚಕ್ರ ನೆಲದಲ್ಲಿ ಹೂತುಹೋಯಿತು. ಎತ್ತಲಾಗಲಿಲ್ಲ. ಎತ್ತಲು ಕಾಲಾವಕಾಶವನ್ನು ಕೇಳುತ್ತಾನೆ. ಅರ್ಜುನ ಕೊಡುವುದಿಲ್ಲ.

ಮೊದಲನೆ ಬಾರಿಗೆ ಚಕ್ರ ಹಳ್ಳದಲ್ಲಿ ಬಿದ್ದಾಗ ಕರ್ಣ ಧರ್ಮವನ್ನು ಹಳಿಯುತ್ತಾನೆ. ಶಾಪದಿಂದ ಮುಂದೆ ಚಕ್ರವನ್ನು ನೆಲ ನುಂಗಿದರೆ ಧರ್ಮದ ಅಪರಾಧವೇನು ಎಂದರೆ ತಾನು ತನ್ನ ಮೈಯಿಂದ ಕವಚವನ್ನು ಕತ್ತಿಯಿಂದ ಕತ್ತರಿಸಿ ಇಂದ್ರನಿಗೆ ದಾನ ಮಾಡಿದವನು. ಅಂಥ ಧರ್ಮವನ್ನು ನಾನು ಮಾಡಿದವನಾದರೂ ಆ ಧರ್ಮ ನನಗೆ ಬ್ರಾಹ್ಮಣಶಾಪದೋಷವನ್ನು ಪರಿಹರಿಸಲಾರದೆ ಹೋಯಿತೆಂದು ಹತಾಶೆಯಿಂದ ದುಃಖದಿಂದ 'ಧರ್ಮ ಕಾಪಾಡುವುದಿಲ್ಲ, ಕಾಪಾಡುತ್ತದೆ ಎನ್ನುವುದು ಸುಳ್ಳು' ಎನ್ನುತ್ತಿದ್ದಾನೆ. ನಹಿನಿಂದಾನ್ಯಾಯದಿಂದ ಬ್ರಾಹ್ಮಣ ಶಾಪ ಎಷ್ಟು ಅಮೋಘ ಎಂದು ಹೊಗಳುತ್ತಿದ್ದಾನೆ ಕರ್ಣ. ತಾನು ಬ್ರಾಹ್ಮಣನಿಂದ ಶಾಪ ತಂದುಕೊಂಡೆನೆಂದು ಪಶ್ಚಾತ್ತಾಪ ಪಡುತ್ತಿದ್ದಾನೆ, ಬ್ರಾಹ್ಮಣಭಕ್ತನಾದ ಕರ್ಣ.

ಹೀಗೆ ಮಹಾಭಾರತದಲ್ಲಿ ಹೆಜ್ಜೆಹೆಜ್ಜೆಗೆ ವಿಲಕ್ಷಣವಾದ ಪಾಠಗಳು ಮೇಲುನೋಟಕ್ಕೆ ಬಹಳ ಕಿರಿಕಿರಿ ಉಂಟುಮಾಡುವಂತೆ ಕಂಡರೂ ತಾಳ್ಮೆಯಿಂದ ನಿರ್ಣಯ ಹಾಗೂ ಲಕ್ಷಾಲಂಕಾರಗಳ ಬೆಳಕಿನಲ್ಲಿ ವಿಚಾರಮಾಡಿ, ಸರಿಯೆನಿಸಿದರೆ ಒಪ್ಪಬೇಕು. ಪ್ರಕ್ಷಿಪ್ತ, ಅಪಪಾಠ, ಎಂದು ಅವಸರದ ತೀರ್ಮಾನ ಮಾಡುವುದು ಸರಿಯಾಗದು. ಮತ್ತು ಒಂದೇ ಹಸ್ತಪ್ರತಿಯಲ್ಲಿ ಕಂಡುಬಂದಮಾತ್ರಕ್ಕೆ ನಂಬಲರ್ಹವಲ್ಲವೆಂದು ಕೈಬಿಡುವುದೂ ಸರಿಯಾಗದು.

ಭಂ.ರಿ.ಇನ್‌ಸ್ಟಿಟ್ಯೂಟ್‌ನವರು ಹೆಜ್ಜೆಹೆಜ್ಜೆಗೂ ಒಂದು ಶಬ್ದಕ್ಕೆ ಹತ್ತಾರು

ಪಠಾಂತರಗಳನ್ನು ಶ್ರಮಪಟ್ಟು ಕಲೆಹಾಕಿ ಒಂದೇಕಡೆ ಒದಗಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಕನಿಷ್ಠ ಒಂದಾದರೂ ಶ್ಲೋಕದಲ್ಲಿ ಹೊಂದಿಕೆಯಾಗುವಂಥದ್ದು ಇರುತ್ತದೆ. ಆಗಲೆ ಶ್ಲೋಕವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಹೀಗೆ ಕರ್ಣಪರ್ವದಲ್ಲಿ ಶ್ಲೋಕಗಳನ್ನು ಅನೇಕ ಕಡೆ ನಾವು ಪಾಠಾಂತರ ಸಂಯೋಜನೆಗಳಿಂದ ಪುನರ್ನವೀಕರಣ ಮಾಡಿದ್ದುಂಟು. ಹೊರತು ನಾವೇ ಪಾಠಾಂತರ ಸೃಷ್ಟಿಮಾಡಿ ಹಾಕುವ ಸಾಹಸ ಮಾಡಿಲ್ಲ.

ಉದಾ :

ಭಾನುಷೇಣಾಶ್ವದಶಭಿಃ ಸಾಶ್ವಸೂತ ಧ್ವಜಾಯುಧಂ ।
ಪಶ್ಯತಾಂ ಸುಹೃದಾಂ ಮಧ್ಯೇ ಕರ್ಣಪುತ್ರಮಪಾತಯತ್ ॥ (೪೫.೫೧)

ಇಲ್ಲಿ ಭಂ.ರಿ.ಇನ್‌ಸ್ಟಿಟ್ಯೂಟ್ ಪ್ರತಿಯಲ್ಲಿ ತೋರಿಸಿದ ಪಾಠಾಂತರಗಳು–

ವೃಷಸೇನಂ ಚ ದಶಭಿಃ, ಸುಸೇನಂ ಚೈವ ದಶಭಿಃ, ಸುಖೇಣ ಚೈವ ದಶಭಿಃ, ಭಾನುಷೇಣಂ ಚ ದಶಭಿಃ, ಭಾನುಸೇನಂ ಚ ದಶಭಿಃ, ಭಾನುಮಂತಂ ಚ ದಶಭಿಃ, ಭಾನುದೇವಂ ಚ ದಶಭಿಃ, ಸುಸುಖೇಣಂ ಚ ದಶಭಿಃ, ಸತ್ಯಸೇನಂ ಚ ದಶಭಿಃ–ಎಂದು ಒಂಬತ್ತು ಪಾಠಾಂತರಗಳು. ಇವುಗಳಲ್ಲಿ ನಾವು ಆರಿಸಿಕೊಂಡ ಪಾಠ '**ಸತ್ಯಸೇನಂ ಚ ದಶಭಿಃ**' ಎಂದು. ಇದು ನಿರ್ಣಯಕ್ಕೆ ಅನುಸಾರಿಯಾಗಿದೆ. ಅದರಿಂದ ಮೇಲಿನ ಶ್ಲೋಕದಲ್ಲಿ ಅದನ್ನೇ ಅಳವಡಿಸಿದ್ದೇವೆ ಹೊರತು 'ಸತ್ಯ ಸೇನಂ ಚ' ಎಂದು ಪಾಠ ಸೃಷ್ಟಿ ಮಾಡಿಲ್ಲ.

ಕೆ.ಹಯವದನ ಪುರಾಣಿಕ

ವಿಷಯಾನುಕ್ರಮಣಿಕೆ

ಕರ್ಣಪರ್ವ (ಸಂಪುಟ 1)

ಒಂದನೆಯ ಅಧ್ಯಾಯ 1

ಕರ್ಣವಧೆಯ ಸಂಕ್ಷಿಪ್ತ ವೃತ್ತಾಂತ

ಎರಡನೆಯ ಅಧ್ಯಾಯ 6

ದ್ರೋಣವಧೆಗೆ ಕುರುಸೈನ್ಯ ಶೋಕಿಸಿತು.

ಮೂರನೆಯ ಅಧ್ಯಾಯ 12

ಕರ್ಣವಧೆಯ ಸಂಕ್ಷೇಪ

ನಾಲ್ಕನೆಯ ಅಧ್ಯಾಯ 16

ಕರ್ಣವಧೆಗೆ ಧೃತರಾಷ್ಟ್ರನ ಶೋಕ

ಐದನೆಯ ಅಧ್ಯಾಯ 19

ಕುರುಸೈನ್ಯದಲ್ಲಿ ಮಡಿದವರು

ಆರನೆಯ ಅಧ್ಯಾಯ 32

ಪಾಂಡವರ ಸೈನ್ಯದಲ್ಲಿ ಮಡಿದವರು.

ಏಳನೆಯ ಅಧ್ಯಾಯ 40

ಕುರುಸೈನ್ಯದಲ್ಲಿ ಉಳಿದವರು.

ಎಂಟನೆಯ ಅಧ್ಯಾಯ 49

ಕರ್ಣ ಮಡಿದನೆಂದರೆ ನಂಬಲಾಗದು.

ಒಂಬತ್ತನೆಯ ಅಧ್ಯಾಯ 56

ಕರ್ಣಮರಣದ ದುಃಖ ಅಸಹನೀಯ

ಹತ್ತನೆಯ ಅಧ್ಯಾಯ 75

ಅಶ್ವತ್ಥಾಮನ ಸಲಹೆಯಂತೆ ಕರ್ಣನಿಗೆ ಸೇನಾಧಿಪತ್ಯ

ಹನ್ನೊಂದನೆಯ ಅಧ್ಯಾಯ 89

ಕುರುಸೈನ್ಯದ ಮಕರವ್ಯೂಹ. ಪಾಂಡವರ ಅರ್ಧಚಂದ್ರವ್ಯೂಹ.

ಹನ್ನೆರಡನೆಯ ಅಧ್ಯಾಯ 100

ಭೀಮನಿಂದ ಕ್ಷೇಮಧೂರ್ತಿ ವಧ

ಹದಿಮೂರನೆಯ ಅಧ್ಯಾಯ 111

ಸಾತ್ಯಕಿಯಿಂದ ಕೇಕಯರ ವಿಂದಾನುವಿಂದರ ವಧ

ಹದಿನಾಲ್ಕನೆಯ ಅಧ್ಯಾಯ 120

ಶ್ರುತಕರ್ಮನಿಂದ ಚಿತ್ರಸೇನವಧ. ಪ್ರತಿವಿಂಧ್ಯನಿಂದ ಚಿತ್ರನ ವಧ. ಭೀಮಾಶ್ವತ್ಥಾಮ ಯುದ್ಧ ಘೋರ, ಅದ್ಭುತ.

ಹದಿನೈದನೆಯ ಅಧ್ಯಾಯ..... 128

ಭೀಮನಿಂದ ಅಶ್ವತ್ಥಾಮನ ಪರಾಜಯ.

ಹದಿನಾರನೆಯ ಅಧ್ಯಾಯ 137

ಅರ್ಜುನ-ಸಂಶಪ್ತಕರ ಯುದ್ಧ

ಹದಿನೇಳನೆಯ ಅಧ್ಯಾಯ 153

ಅರ್ಜುನನಿಂದ ಅಶ್ವತ್ಥಾಮನ ಪರಾಜಯ.

ಹದಿನೆಂಟನೆಯ ಅಧ್ಯಾಯ..... 161

ಅರ್ಜುನನಿಂದ ದಂಡಧಾರ ಮತ್ತು ದಂಡರ ವಧ.

ಹತ್ತೊಂಬತ್ತನೆಯ ಅಧ್ಯಾಯ..... 169

ಅರ್ಜುನ ಸಂಶಪ್ತಕರ ಯುದ್ಧ

ಇಪ್ಪತ್ತನೆಯ ಅಧ್ಯಾಯ 185

ಅಶ್ವತ್ಥಾಮನಿಂದ ಪಾಂಡ್ಯಮಲಯಧ್ವಜನ ವಧ ಮತ್ತು ಕರ್ಣ-ಧೃಷ್ಟದ್ಯುಮ್ನರ ಯುದ್ಧ

ಇಪ್ಪತ್ತೊಂದನೆಯ ಅಧ್ಯಾಯ 207

ಧೃಷ್ಟದ್ಯುಮ್ನ ಅಶ್ವತ್ಥಾಮರ ಯುದ್ಧ, ಅರ್ಜುನನಿಂದ ಧೃಷ್ಟದ್ಯುಮ್ನನ ರಕ್ಷಣೆ

ಇಪ್ಪತ್ತೆರಡನೆಯ ಅಧ್ಯಾಯ 214

ನಕುಲ ಸಹದೇವರಿಂದ ಅಂಗರಾಜವಧ, ಗಜಸೈನ್ಯ ನಾಶ.

ಇಪ್ಪತ್ತಮೂರನೆಯ ಅಧ್ಯಾಯ 227

ಸಹದೇವನಿಂದ ದುಃಶಾಸನ ಪರಾಜಯ.

ಇಪ್ಪತ್ತನಾಲ್ಕನೆಯ ಅಧ್ಯಾಯ..... 232

ಕರ್ಣನಿಂದ ನಕುಲ ಪರಾಭವ. ಪಾಂಡವ ಸೈನ್ಯ ಪರಾಭವ.

ಇಪ್ಪತ್ತೈದನೆಯ ಅಧ್ಯಾಯ 248

ಉಲೂಕ–ಯುಯುತ್ಸು, ಶತಾನೀಕ–ಶ್ರುತಕರ್ಮ, ಸುತಸೋಮ–ಶಕುನಿ ಯುದ್ಧಗಳು ಸಮವಾದುವು.

ಇಪ್ಪತ್ತಾರನೆಯ ಅಧ್ಯಾಯ 257

ಧೃಷ್ಟದ್ಯುಮ್ನ–ಕೃಪ ಯುದ್ಧ. ಕೃತವರ್ಮನಿಂದ ಶಿಖಂಡಿ ಪರಾಜಯ

ಇಪ್ಪತ್ತೇಳನೆಯ ಅಧ್ಯಾಯ 266

ಅರ್ಜುನನಿಂದ ಸಂಶಪ್ತಕರ ವಧ.

ಇಪ್ಪತ್ತೆಂಟನೆಯ ಅಧ್ಯಾಯ 274

ಯುಧಿಷ್ಠಿರನಿಂದ ದುರ್ಯೋಧನ ಪರಾಭವ, ಎರಡು ಸೈನ್ಯಗಳ ದೊಂಬಿಕಾಳಗ

ಇಪ್ಪತ್ತೊಂಬತ್ತನೆಯ ಅಧ್ಯಾಯ 284

ಯುಧಿಷ್ಠಿರನಿಂದ ದುರ್ಯೋಧನ ಪರಾಜಯ ಮುಂದುವರಿಯುತ್ತದೆ.

ಮುವ್ವತ್ತನೆಯ ಅಧ್ಯಾಯ 292

ಅರ್ಜುನನಿಂದ ದುರ್ಯೋಧನ ಪರಾಭವ, ಕರ್ಣನ ಆಕ್ರಮಣಕ್ಕೆ ತಡೆ.

ಮೂವತ್ತೊಂದನೆಯ ಅಧ್ಯಾಯ 302

ಶಲ್ಯ ಸಾರಥ್ಯಕ್ಕೆ ಕರ್ಣನ ಒತ್ತಾಯ.

ಮೂವತ್ತೆರಡನೆಯ ಅಧ್ಯಾಯ 318

ಕರ್ಣನಿಗೆ ಸಾರಥ್ಯ ಮಾಡಲು ಶಲ್ಯನ ಒಪ್ಪಿಗೆ.

ಮೂವತ್ತಮೂರನೆಯ ಅಧ್ಯಾಯ 334

ತ್ರಿಪುರ ಸಂಹಾರಕ್ಕೆ ದೇವತೆಗಳ ಪ್ರಾರ್ಥನೆ.

ಮೂವತ್ತನಾಲ್ಕನೆಯ ಅಧ್ಯಾಯ..... 351

ರುದ್ರನು 'ಪಶುಪತಿ' ಎನಿಸಿದ, 'ಮಹಾದೇವ'ನೆನಿಸಿದ ಬಗೆ.

ಮೂವತ್ತೈದನೆಯ ಅಧ್ಯಾಯ 360

ಸರ್ವದೇವತಾಮಯವಾದ ರಥದ ನಿರ್ಮಾಣ. ಶಿವನಿಗೆ ಬ್ರಹ್ಮ ಸಾರಥಿ. ರಥವನ್ನು ಎತ್ತಿಹಿಡಿಯಲು ಹರಿಯ ವೃಷಭಾವತಾರ. ತ್ರಿಪುರ ದಹನ. ಕರ್ಣನಿಗೆ ಪರಶುರಾಮನಿಂದ ಶಿವಪ್ರೋಕ್ತ ದಿವ್ಯ ಅಸ್ತ್ರಗಳ ಉಪದೇಶ

ಮೂವತ್ತಾರನೆಯ ಅಧ್ಯಾಯ 392

'ಕರ್ಣನಿಗಿಂತ ಶಲ್ಯ ನೀನು ಹೆಚ್ಚು' ಎಂದಾಗ ಶಲ್ಯ ಕರ್ಣನಿಗೆ ಸಾರಥಿಯಾಗಲು ಒಪ್ಪಿದ.

ಮೂವತ್ತೇಳನೆಯ ಅಧ್ಯಾಯ 403

'ಪಾಂಡವರನ್ನು ಅವಮಾನಿಸಬೇಡ' ಎಂದು ಕರ್ಣನಿಗೆ ಶಲ್ಯನ ಬುದ್ಧಿವಾದ.

ಮೂವತ್ತೆಂಟನೆಯ ಅಧ್ಯಾಯ 410

ಕರ್ಣ ಯುದ್ಧಕ್ಕೆ ಹೊರಟಾಗ ಅಪಶಕುನಗಳು. ಅರ್ಜುನನಿಗೆ ತಾನು ಭಯಪಡಲಾರೆ ಎನ್ನುತ್ತಾನೆ ಕರ್ಣ. ಶಲ್ಯ ಅರ್ಜುನನನ್ನೇ ಹೊಗಳುತ್ತಾನೆ.

ಮೂವತ್ತೊಂಬತ್ತನೆಯ ಅಧ್ಯಾಯ 424

ಕೃಷ್ಣಾರ್ಜುನರ ರಥವನ್ನು ತೋರಿಸಿದರೆ, ಅವರನ್ನು ವಧಿಸಿ, ಅವರ ಸಂಪತ್ತೆಲ್ಲವನ್ನು ಬಹುಮಾನವಾಗಿ ನೀಡುವೆನು ಎಂದು ಘೋಷಿಸಿದ ಕರ್ಣನಿಗೆ, 'ಅರ್ಜುನ ಸಿಂಹ, ನೀನು ಗುಳ್ಳೆನರಿ' ಎಂದು ಶಲ್ಯನ ಉತ್ತರ.

ನಲವತ್ತನೆಯ ಅಧ್ಯಾಯ 438

ನನ್ನಲ್ಲಿ ಘೋರವಾದ ಸರ್ಪಾಸ್ತ್ರವಿದೆ. ಅದರಿಂದ ಮೇರು ಪರ್ವತವನ್ನು ಭೇದಿಸಬಲ್ಲೆ. ಅರ್ಜುನನನ್ನು ಹೊಗಳಿ ನನ್ನನ್ನು ಭಯಪಡಿಸಲು ಯತ್ನಿಸುವವನು ನೀನು ಮಿತ್ರನಲ್ಲ, ಶತ್ರು. ನಿನ್ನ ದೇಶದವರು ಯಾರೂ ನಂಬಲರ್ಹರಲ್ಲ. ನಿನ್ನದು ಅನಾಚಾರಿಗಳ ದೇಶ ಎನ್ನುತ್ತಾನೆ ಕರ್ಣ.

ನಲವತ್ತೊಂದನೆಯ ಅಧ್ಯಾಯ..... 452

'ಹೀನ ಕುಲದವನು ನೀನು. ದುರಹಂಕಾರಿ, ಹಂಸದೊಡನೆ ಸ್ಪರ್ಧಿಸಿ ಸೋತ ಕಾಗೆಯಂತೆ, ಅರ್ಜುನನೊಡನೆ ಹೋರಾಡಿದರೆ, ಕರ್ಣ, ನೀನು ಬದುಕಿ ಉಳಿಯಲಾರೆ' ಎನ್ನುತ್ತಾನೆ ಶಲ್ಯ.

ನಲವತ್ತೆರಡನೆ ಅಧ್ಯಾಯ..... 471

'ಮೃತ್ಯುಕಾಲದಲ್ಲಿ ಹೊರತು ಬೇರೆಕಾಲದಲ್ಲಿ ಅಸ್ತ್ರಗಳು ನಿನಗೆ ಹೊಳೆಯುವುದಿಲ್ಲ' ಎಂದು ಗುರುಶಾಪ, 'ಮೃತ್ಯುಕಾಲದಲ್ಲಿ ಅವು ಮರೆತುಹೋಗುವುವೆಂ'ದು ಬ್ರಾಹ್ಮಣಶಾಪ. ಅರ್ಜುನನೂ ಎಣೆಯಿಲ್ಲದ ಬಿಲ್ಲಾಳು. ಆದರೂ ನನಗೆ ಭಯವಿಲ್ಲ–ಎನ್ನುತ್ತಾನೆ ಕರ್ಣ.

ನಲವತ್ತಮೂರನೆಯ ಅಧ್ಯಾಯ 492

ಕರ್ಣನು ಪುನಃ ಬಾಹ್ಲೀಕ ಮದ್ರದೇಶಗಳನ್ನು ನಿಂದಿಸಿದ. ನಿನ್ನ ಅಂಗದೇಶದಲ್ಲಿಯೂ ಅನಾಚಾರಗಳಿವೆ. ಎಲ್ಲ ದೇಶಗಳಲ್ಲಿಯೂ ಅನಾಚಾರಿಗಳಿದ್ದಾರೆ. ಸದಾಚಾರಿಗಳೂ ಇರುತ್ತಾರೆ ಎಂದು ಶಲ್ಯ ಉತ್ತರಿಸಿದ.

ನಲವತ್ತನಾಲ್ಕನೆ ಅಧ್ಯಾಯ 515

ಎರಡು ಸೈನ್ಯಗಳ ವ್ಯೂಹರಚನೆ ಆಗ ತಲೆದೋರಿದ ಉತ್ಪಾತಗಳನ್ನು ಶಲ್ಯ ಕರ್ಣನಿಗೆ ತೋರಿಸುತ್ತಾನೆ. ಅರ್ಜುನನ ರಥ, ಶಲ್ಯ ಕರ್ಣರು ನೋಡುತ್ತಿದ್ದಂತೆಯೆ, ಸಂಶಪ್ತಕರ ಸೈನ್ಯದೊಳಗೆ ನುಗ್ಗಿತು.

ನಲವತ್ತೈದನೆಯ ಅಧ್ಯಾಯ 533

ಕರ್ಣನು ಪಾಂಚಾಲ ಸೈನ್ಯವನ್ನು ಆಕ್ರಮಿಸಿದ. ಭೀಮು ಕರ್ಣಪುತ್ರ ಸತ್ಯಸೇನನನ್ನು ವಧಿಸಿದ. ಕರ್ಣ ತನಗೆ ಇದಿರಾದವರನ್ನೆಲ್ಲ ನಿಗ್ರಹಿಸಿ ಯುಧಿಷ್ಠಿರನ ಕಡೆಗೆ ನುಗ್ಗಿದ.

ನಲವತ್ತಾರನೆಯ ಅಧ್ಯಾಯ 553

ಯುಧಿಷ್ಠಿರನ ಒಂದು ಬಾಣದಿಂದ ಕರ್ಣ ಮೂರ್ಛಿತನಾಗಿ ಶವದಂತೆ ಬಿದ್ದ. ಬಳಿಕ ಎಚ್ಚೆತ್ತು ಯುಧಿಷ್ಠಿರನ ಕವಚರಥ ಮುಂತಾದುವನ್ನೆಲ್ಲ ಪುಡಿ ಮಾಡಿದ. ಹೆಗಲಮೇಲೆ ಕೈಹಾಕಿ ಕ್ಷಾತ್ರಧರ್ಮಕ್ಕೆ ನೀನು ಯೋಗ್ಯನಲ್ಲವೆಂದು ಅಪಹಾಸ ಮಾಡಿದ. 553

ನಲವತ್ತೇಳನೆಯ ಅಧ್ಯಾಯ 575

ಭೀಮನ ಬಾಣದಿಂದಲೂ ಕರ್ಣ ಪ್ರಜ್ಞೆ ತಪ್ಪಿ ಬೀಳುತ್ತಾನೆ. ಯುಧಿಷ್ಠಿರನಿಗೆ ಅಪಹಾಸಗೈದ ಕರ್ಣನ ನಾಲಿಗೆಯನ್ನು ಕೊಯ್ಯಲು ಭೀಮ ಹೊರಟಾಗ ಶಲ್ಯ ತಡೆದು ಬುದ್ಧಿವಾದ ಹೇಳಿ ಕರ್ಣನನ್ನು ದೂರಕ್ಕೊಯ್ಯುತ್ತಾನೆ.

ಶ್ರೀ ಗುರುಭ್ಯೋ ನಮಃ।।
ಓಂ ನಮೋ ಭಗವತೇ ವಾಸುದೇವಾಯ।।
ಓಂ ನಮೋ ವೇದವ್ಯಾಸಾಯ ।।

ಮಹಾಭಾರತ

ಓಂ ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ।

ಕರ್ಣಪರ್ವ

ಒಂದನೆಯ ಅಧ್ಯಾಯ

ಕರ್ಣವಧೆಯ ಸಂಕ್ಷಿಪ್ತ ವೃತ್ತಾಂತ

ವೈಶಂಪಾಯನಃ

ತತೋ ದ್ರೋಣೇ ಹತೇ ರಾಜನ್ ದುರ್ಯೋಧನಮುಖಾ ನೃಪಾಃ ।
ಭೃಶಮುದ್ವಿಗ್ನಮನಸೋ ದ್ರೋಣಪುತ್ರಮುಪಾಗಮನ್ ॥೧॥

ವೈಶಂಪಾಯನರು ಜನಮೇಜಯ ರಾಜನಿಗೆ ಹೇಳುತ್ತಾರೆ— ರಾಜನೇ, ದ್ರೋಣಾಚಾರ್ಯರು ಹತರಾದಾಗ ದುರ್ಯೋಧನ ಮುಂತಾದ ರಾಜರೆಲ್ಲರು ಬಲು ಉದ್ವಿಗ್ನಚಿತ್ತರಾಗಿ ಅಶ್ವತ್ಥಾಮನ ಬಳಿಗೆ ಬಂದರು.

ತೇ ದ್ರೋಣಮನುಶೋಚಂತಃ ಕಶ್ಮಲಾಭಿಹತೌಜಸಃ ।
ಪರ್ಯುಪಾಸಂತ ಶೋಕಾರ್ತಾಸ್ತತಃ ಶಾರದ್ವತೀಸುತಮ್ ॥೨॥

ಅವರು ದ್ರೋಣನ ಬಗ್ಗೆ ಶೋಕಿಸುತ್ತ ಶೋಕದಿಂದ ಶಕ್ತಿಗುಂದಿ ಶೋಕಾರ್ತರಾಗಿ ಅಶ್ವತ್ಥಾಮನ ಬಳಿಯಲ್ಲಿ ಕುಳಿತರು.

ತೇ ಮುಹೂರ್ತಂ ಸಮಾಶ್ವಾಸ್ಯ ಹೇತುಭಿಃ ಶಾಸ್ತ್ರಸಮ್ಮಿತೈಃ ।
ರಾತ್ರ್ಯಾಗಮೇ ಮಹೀಪಾಲಾಃ ಸ್ವಾನಿ ವೇಶ್ಮಾನಿ ಭೇಜಿರೇ ॥೩॥

ಅವರು ಮುಹೂರ್ತಕಾಲ ಶಾಸ್ತ್ರಸಮ್ಮತವಾದ ಮಾತುಗಳಿಂದ ಅವನನ್ನು ಸಂತೈಸಿ, ಕತ್ತಲಾದಾಗ ತಮ್ಮ ಬಿಡಾರಗಳಿಗೆ ನಡೆದರು.

ತೇ ವೇಶ್ಮಸ್ವಪಿ ಕೌರವ್ಯ ಪೃಥ್ವೀಶಾ ನಾಪ್ನುವನ್ ಸುಖಮ್ ।
ಚಿಂತಯಂತಃ ಕ್ಷಯಂ ತೀವ್ರಂ ದುಃಖಶೋಕಸಮನ್ವಿತಾಃ ॥೪॥

ಜನಮೇಜಯ ರಾಜನೆ, ಅವರಿಗೆ ಬಿಡಾರಗಳಲ್ಲಿಯೂ ನೆಮ್ಮದಿ ಸಿಗಲಿಲ್ಲ. ತೀವ್ರವಾದ ದುಃಖ, ಶೋಕಗಳಿಂದ ಯುಕ್ತರಾಗಿ ತಮಗಾದ ನಷ್ಟವನ್ನೇ ಚಿಂತಿಸಿದರು.

ವಿಶೇಷತಃ ಸೂತಪುತ್ರೋ ರಾಜಾ ಚೈವ ಸುಯೋಧನಃ ।
ದುಃಶಾಸನಶ್ಚ ಶಕುನಿಃ ಸೌಬಲಶ್ಚ ಮಹಾಬಲಃ ॥೫॥

ಉಷಿತಾಸ್ತೇ ನಿಶಾಂ ತಾಂ ತು ದುರ್ಯೋಧನನಿವೇಶನೇ ।
ಚಿಂತಯಂತಃ ಪರಿಕ್ಲೇಶಾನ್ ಪಾಂಡವಾನಾಂ ಮಹಾತ್ಮನಾಮ್ ॥೬॥

ಅವರಲ್ಲಿಯೂ ವಿಶೇಷವಾಗಿ ರಾಜಾ ಸುಯೋಧನ, ಕರ್ಣ, ದುಃಶಾಸನ, ಶಕುನಿ ಇವರು ನಾಲ್ವರು ದುರ್ಯೋಧನನ ಬಿಡಾರದಲ್ಲಿದ್ದು ರಾತ್ರಿ ಇಡೀ ಮಹಾತ್ಮರಾದ ಪಾಂಡವರಿಗೆ ತಾವು ಕೊಟ್ಟಿದ್ದ ಕಷ್ಟ-ನಷ್ಟಗಳನ್ನೇ ಚಿಂತಿಸಿದರು.

ಯತ್ತದ್ ದ್ಯೂತೇ ಪರಿಕ್ಲಿಷ್ಟಾ ಕೃಷ್ಣಾ ಚಾನಾಯಿತಾ ಸಭಾಮ್ ।
ತತ್ ಸ್ಮರಂತೋಽನುಶೋಚಂತೋ ಭೃಶಮುದ್ವಿಗ್ನಚೇತಸಃ ॥೭॥

ದ್ಯೂತಸಭೆಯಲ್ಲಿ ದ್ರೌಪದಿಯನ್ನು ಸೆಳೆದು ತಂದು ಅವಳಿಗೆ ನಾನಾ ಬಗೆಯ ಕ್ಲೇಶ ಉಂಟುಮಾಡಿದ್ದನ್ನು ನೆನೆದು ಪರಿತಪಿಸುತ್ತ ಬಹಳ ಉದ್ವಿಗ್ನಚಿತ್ತರಾದರು.

ತಥಾ ತು ಸಂಚಿಂತಯತಾಂ ತಾನ್ ಕ್ಲೇಶಾನ್ ದ್ಯೂತಕಾರಿತಾನ್ ।
ಕೃಚ್ಛ್ರೇಣ ಕ್ಷಣದಾ ರಾಜನ್ ಜಗಾಮಾಬ್ದಶತೋಪಮಾ ॥೮॥

ಹಾಗೇ ದ್ಯೂತದ ಮೂಲಕ ತಾವು ಅವರಿಗೆ ನೀಡಿದ ಕ್ಲೇಶಗಳನ್ನೇ ಚಿಂತಿಸುತ್ತ ಕಷ್ಟದಿಂದ ಆ ಒಂದು ರಾತ್ರಿಯನ್ನು ನೂರು ವರ್ಷಗಳಂತೆ ಕಳೆದರು.

ತತಃ ಪ್ರಭಾತೇ ವಿಮಲೇ ಸ್ಥಿತಾ ದಿಷ್ಟಸ್ಯ ಶಾಸನೇ ।
ಚಕ್ರುರಾವಶ್ಯಕಂ ಸರ್ವೇ ವಿಧಿದೃಷ್ಟೇನ ಕರ್ಮಣಾ ॥೯॥

ಬಳಿಕ ದೈವಸಂಕಲ್ಪವಿದ್ದಂತಾಗಲಿ ಎಂದುಕೊಂಡು, ಬೆಳಗಾದಾಗ ಎಲ್ಲರೂ ವಿಧ್ಯುಕ್ತರೀತಿಯಿಂದ ಆವಶ್ಯಕ ಕರ್ಮಗಳನ್ನು ಮಾಡಿ ಮುಗಿಸಿದರು.

ತೇ ಕೃತ್ವಾऽವಶ್ಯಕಾರ್ಯಾಣಿ ಸಮಾಶ್ವಸ್ಯ ಚ ಭಾರತ ।
ಯೋಗಮಾಜ್ಞಾಪಯಾಮಾಸುರ್ಯುದ್ಧಾಯ ಚ ವಿನಿರ್ಯಯುಃ॥೧೦॥

ರಾಜನೇ, ಆವಶ್ಯಕ ಕರ್ಮಗಳನ್ನು ತೀರಿಸಿದ ಬಳಿಕ ಅವರು ತಮಗೆ ತಾವೇ ಸಮಾಧಾನ ತಂದುಕೊಂಡು ಯುದ್ಧಸನ್ನಾಹಕ್ಕೆ ಸೇನೆಗೆ ಆದೇಶ ನೀಡಿದರು. ಯುದ್ಧಕ್ಕೆ ಹೊರಟರು.

ಕರ್ಣಂ ಸೇನಾಪತಿಂ ಕೃತ್ವಾ ಕೃತಕೌತುಕಮಂಗಲಾಃ ।
ಪೂಜಯಿತ್ವಾ ದ್ವಿಜಶ್ರೇಷ್ಠಾನ್ ದಧಿಪಾತ್ರಫೃತಾಕ್ಷತೈಃ ॥೧೧॥

ಗೋಭಿರಶ್ವೈಶ್ಚ ನಿಷ್ಕೈಶ್ಚ ವಾಸೋಭಿಶ್ಚ ಮಹಾಧನೈಃ ।
ವಂದ್ಯಮಾನಾ ಜಯಾಶೀರ್ಭಿಃ ಸೂತಮಾಗಧವಂದಿಭಿಃ ॥೧೨॥

ತಥೈವ ಪಾಂಡವಾ ರಾಜನ್ ಕೃತಪೂರ್ವಾಹ್ಣಿಕಕ್ರಿಯಾಃ ।
ಶಿಬಿರಾನ್ನಿರ್ಯಯುಸ್ತೂರ್ಣಂ ಯುದ್ಧಾಯ ಕೃತನಿಶ್ಚಯಾಃ ॥೧೩॥

ಕರ್ಣನಿಗೆ ಸೇನಾಧಿಪತ್ಯ ನೀಡಿ ವಿಧ್ಯುಕ್ತವಾಗಿ ಮಂಗಳಕಾರ್ಯಗಳನ್ನು ನಡೆಸಿದರು. ಬ್ರಾಹ್ಮಣರಿಗೆ ದಧಿಪಾತ್ರೆ, ತುಪ್ಪ ಅಕ್ಷತೆ, ಗೋ, ಅಶ್ವ, ಕಂಠಾಭರಣ, ಅಮೂಲ್ಯ ವಸ್ತ್ರಗಳನ್ನು ನೀಡಿ ಅವರಿಂದ ಜಯದ ಆಶೀರ್ವಾದ ಪಡೆದು ಸೂತ ಮಾಗಧ ವಂದಿಗಳಿಂದ ಸ್ತುತಿಸಲ್ಪಡುತ್ತ ಶಿಬಿರದಿಂದ ಹೊರಗೆ ನಡೆದರು. ರಾಜನೇ, ಪಾಂಡವರೂ ಕೂಡ ಹಾಗೆಯೇ ಪ್ರಾತರಾಹ್ನಿಕಗಳನ್ನು ತೀರಿಸಿ ಯುದ್ಧಕ್ಕೆ ನಿಶ್ಚಯಮಾಡಿಕೊಂಡು ಶಿಬಿರದಿಂದ ಹೊರಗೆ ನಡೆದರು.

ಅವರು ದ್ರೋಣನ ಬಗ್ಗೆ ಶೋಕಿಸುತ್ತ ಶೋಕದಿಂದ ಶಕ್ತಿಗುಂದಿ ಶೋಕಾರ್ತರಾಗಿ ಅಶ್ವತ್ಥಾಮನ ಬಳಿಯಲ್ಲಿ ಕುಳಿತರು.

ತೇ ಮುಹೂರ್ತಂ ಸಮಾಶ್ವಾಸ್ಯ ಹೇತುಭಿಃ ಶಾಸ್ತ್ರಸಮ್ಮಿತೈಃ ।
ರಾತ್ರ್ಯಾಗಮೇ ಮಹೀಪಾಲಾಃ ಸ್ವಾನಿ ವೇಶ್ಮಾನಿ ಭೇಜಿರೇ ॥೩॥

ಅವರು ಮುಹೂರ್ತಕಾಲ ಶಾಸ್ತ್ರಸಮ್ಮತವಾದ ಮಾತುಗಳಿಂದ ಅವನನ್ನು ಸಂತೈಸಿ, ಕತ್ತಲಾದಾಗ ತಮ್ಮ ಬಿಡಾರಗಳಿಗೆ ನಡೆದರು.

ತೇ ವೇಶ್ಮಸ್ವಪಿ ಕೌರವ್ಯ ಪೃಥ್ವೀಶಾ ನಾಪ್ನುವನ್ ಸುಖಮ್ ।
ಚಿಂತಯಂತಃ ಕ್ಷಯಂ ತೀವ್ರಂ ದುಃಖಶೋಕಸಮನ್ವಿತಾಃ ॥೪॥

ಜನಮೇಜಯ ರಾಜನೆ, ಅವರಿಗೆ ಬಿಡಾರಗಳಲ್ಲಿಯೂ ನೆಮ್ಮದಿ ಸಿಗಲಿಲ್ಲ. ತೀವ್ರವಾದ ದುಃಖ, ಶೋಕಗಳಿಂದ ಯುಕ್ತರಾಗಿ ತಮಗಾದ ನಷ್ಟವನ್ನೇ ಚಿಂತಿಸಿದರು.

ವಿಶೇಷತಃ ಸೂತಪುತ್ರೋ ರಾಜಾ ಚೈವ ಸುಯೋಧನಃ ।
ದುಃಶಾಸನಶ್ಚ ಶಕುನಿಃ ಸೌಬಲಶ್ಚ ಮಹಾಬಲಃ ॥೫॥

ಉಷಿತಾಸ್ತೇ ನಿಶಾಂ ತಾಂ ತು ದುರ್ಯೋಧನನಿವೇಶನೇ ।
ಚಿಂತಯಂತಃ ಪರಿಕ್ಲೇಶಾನ್ ಪಾಂಡವಾನಾಂ ಮಹಾತ್ಮನಾಮ್ ॥೬॥

ಅವರಲ್ಲಿಯೂ ವಿಶೇಷವಾಗಿ ರಾಜಾ ಸುಯೋಧನ, ಕರ್ಣ, ದುಃಶಾಸನ, ಶಕುನಿ ಇವರು ನಾಲ್ವರು ದುರ್ಯೋಧನನ ಬಿಡಾರದಲ್ಲಿದ್ದು ರಾತ್ರಿ ಇಡೀ ಮಹಾತ್ಮರಾದ ಪಾಂಡವರಿಗೆ ತಾವು ಕೊಟ್ಟಿದ್ದ ಕಷ್ಟ-ನಷ್ಟಗಳನ್ನೇ ಚಿಂತಿಸಿದರು.

ಯತ್ತದ್ ದ್ಯೂತೇ ಪರಿಕ್ಲಿಷ್ಟಾ ಕೃಷ್ಣಾ ಚಾನಾಯಿತಾ ಸಭಾಮ್ ।
ತತ್ ಸ್ಮರಂತೋऽನುಶೋಚಂತೋ ಭೃಶಮುದ್ವಿಗ್ನಚೇತಸಃ ॥೭॥

ದ್ಯೂತಸಭೆಯಲ್ಲಿ ದ್ರೌಪದಿಯನ್ನು ಸೆಳೆದು ತಂದು ಅವಳಿಗೆ ನಾನಾ ಬಗೆಯ ಕ್ಲೇಶ ಉಂಟುಮಾಡಿದ್ದನ್ನು ನೆನೆದು ಪರಿತಪಿಸುತ್ತ ಬಹಳ ಉದ್ವಿಗ್ನಚಿತ್ತರಾದರು.

ತಥಾ ತು ಸಂಚಿಂತಯತಾಂ ತಾನ್ ಕ್ಲೇಶಾನ್ ದ್ಯೂತಕಾರಿತಾನ್ ।
ಕೃಚ್ಛ್ರೇಣ ಕ್ಷಣದಾ ರಾಜನ್ ಜಗಾಮಾಬ್ದಶತೋಪಮಾ ॥೮॥

ಹಾಗೇ ದ್ಯೂತದ ಮೂಲಕ ತಾವು ಅವರಿಗೆ ನೀಡಿದ ಕ್ಲೇಶಗಳನ್ನೇ ಚಿಂತಿಸುತ್ತ ಕಷ್ಟದಿಂದ ಆ ಒಂದು ರಾತ್ರಿಯನ್ನು ನೂರು ವರ್ಷಗಳಂತೆ ಕಳೆದರು.

ತತಃ ಪ್ರಭಾತೇ ವಿಮಲೇ ಸ್ಥಿತಾ ದಿಷ್ಟ್ಯ ಶಾಸನೇ ।
ಚಕ್ರುರಾವಶ್ಯಕಂ ಸರ್ವೇ ವಿಧಿದೃಷ್ಟೇನ ಕರ್ಮಣಾ ॥೯॥

ಬಳಿಕ ದೈವಸಂಕಲ್ಪವಿದ್ದಂತಾಗಲಿ ಎಂದುಕೊಂಡು, ಬೆಳಗಾದಾಗ ಎಲ್ಲರೂ ವಿಧ್ಯುಕ್ತರೀತಿಯಿಂದ ಆವಶ್ಯಕ ಕರ್ಮಗಳನ್ನು ಮಾಡಿ ಮುಗಿಸಿದರು.

ತೇ ಕೃತ್ವಾಽವಶ್ಯಕಾರ್ಯಾಣಿ ಸಮಾಶ್ವಸ್ಯ ಚ ಭಾರತ ।
ಯೋಗಮಾಜ್ಞಾಪಯಾಮಾಸುರ್ಯುದ್ಧಾಯ ಚ ವಿನಿರ್ಯಯುಃ॥೧೦॥

ರಾಜನೇ, ಆವಶ್ಯಕ ಕರ್ಮಗಳನ್ನು ತೀರಿಸಿದ ಬಳಿಕ ಅವರು ತಮಗೆ ತಾವೇ ಸಮಾಧಾನ ತಂದುಕೊಂಡು ಯುದ್ಧಸನ್ನಾಹಕ್ಕೆ ಸೇನೆಗೆ ಆದೇಶ ನೀಡಿದರು. ಯುದ್ಧಕ್ಕೆ ಹೊರಟರು.

ಕರ್ಣಂ ಸೇನಾಪತಿಂ ಕೃತ್ವಾ ಕೃತಕೌತುಕಮಂಗಲಾಃ ।
ಪೂಜಯಿತ್ವಾ ದ್ವಿಜಶ್ರೇಷ್ಠಾನ್ ದಧಿಪಾತ್ರಫೃತಾಕ್ಷತೈಃ ॥೧೧॥

ಗೋಭಿರಶ್ವೈಶ್ಚ ನಿಷ್ಕೈಶ್ಚ ವಾಸೋಭಿಶ್ಚ ಮಹಾಧನೈಃ ।
ವಂದ್ಯಮಾನಾ ಜಯಾಶೀರ್ಭಿಃ ಸೂತಮಾಗಧವಂದಿಭಿಃ ॥೧೨॥

ತಥೈವ ಪಾಂಡವಾ ರಾಜನ್ ಕೃತಪೂರ್ವಾಹ್ಣಿಕಕ್ರಿಯಾಃ ।
ಶಿಬಿರಾನ್ನಿರ್ಯಯುಸ್ತೂರ್ಣಂ ಯುದ್ಧಾಯ ಕೃತನಿಶ್ಚಯಾಃ ॥೧೩॥

ಕರ್ಣನಿಗೆ ಸೇನಾಧಿಪತ್ಯ ನೀಡಿ ವಿಧ್ಯುಕ್ತವಾಗಿ ಮಂಗಳಕಾರ್ಯಗಳನ್ನು ನಡೆಸಿದರು. ಬ್ರಾಹ್ಮಣರಿಗೆ ದಧಿಪಾತ್ರೆ, ತುಪ್ಪ ಅಕ್ಷತೆ, ಗೋ, ಅಶ್ವ, ಕಂಠಾಭರಣ, ಅಮೂಲ್ಯ ವಸ್ತ್ರಗಳನ್ನು ನೀಡಿ ಅವರಿಂದ ಜಯದ ಆಶೀರ್ವಾದ ಪಡೆದು ಸೂತ ಮಾಗಧ ವಂದಿಗಳಿಂದ ಸ್ತುತಿಸಲ್ಪಡುತ್ತ ಶಿಬಿರದಿಂದ ಹೊರಗೆ ನಡೆದರು. ರಾಜನೇ, ಪಾಂಡವರೂ ಕೂಡ ಹಾಗೆಯೇ ಪ್ರಾತರಾಹ್ನಿಕಗಳನ್ನು ತೀರಿಸಿ ಯುದ್ಧಕ್ಕೆ ನಿಶ್ಚಯಮಾಡಿಕೊಂಡು ಶಿಬಿರದಿಂದ ಹೊರಗೆ ನಡೆದರು.

ತತಃ ಪ್ರವವೃತೇ ಯುದ್ಧಂ ತುಮುಲಂ ರೋಮಹರ್ಷಣಮ್ ।
ಕುರೂಣಾಂ ಪಾಂಡವಾನಾಂ ಚ ಪರಸ್ಪರಜಯೈಷಿಣಾಮ್ ॥೧೪॥

ಬಳಿಕ ಪರಸ್ಪರ ಜಯಾಕಾಂಕ್ಷೆಯಿಂದ ಹೊರಟ ಕುರು–ಪಾಂಡವರಲ್ಲಿ ರೋಮಾಂಚಕರವಾದ ತುಮುಲ ಯುದ್ಧ ನಡೆಯಿತು.

ತಯೋರ್ದ್ವಿದಿವಸಂ ಯುದ್ಧಂ ಕುರುಪಾಂಡವಸೇನಯೋಃ ।
ಕರ್ಣೇ ಸೇನಾಪತೌ ರಾಜನ್ ಬಭೂವಾದ್ಭುತದರ್ಶನಮ್ ॥೧೫॥

ಕುರು–ಪಾಂಡವಸೈನ್ಯಗಳಲ್ಲಿ ಕರ್ಣನ ಸೇನಾಧಿಪತ್ಯದಲ್ಲಿ ನಡೆದ ಎರಡು ದಿನಗಳ ಯುದ್ಧ ನೋಡಲು ಅದ್ಭುತವಾಗಿತ್ತು.

ತತಃ ಶತ್ರುಕ್ಷಯಂ ಕೃತ್ವಾ ಸುಮಹಾಂತಂ ರಣೇ ವೃಷಃ ।
ಪಶ್ಯತಾಂ ಧಾರ್ತರಾಷ್ಟ್ರಾಣಾಂ ಫಲ್ಗುನೇನ ನಿಪಾತಿತಃ ॥೧೬॥

ಬಳಿಕ ಕರ್ಣನು ಶತ್ರುಪಕ್ಷದಲ್ಲಿ ಅಪಾರ ನಷ್ಟ ಉಂಟುಮಾಡಿ ಕೌರವರು ನೋಡುತ್ತಿದ್ದಂತೇ ಅರ್ಜುನನಿಂದ ಹತನಾದ.

ತತಸ್ತು ಸಂಜಯಃ ಸರ್ವಂ ಗತ್ವಾ ನಾಗಪುರಂ ದ್ರುತಮ್ ।
ಆಚಷ್ಟ ಧೃತರಾಷ್ಟ್ರಾಯ ಯದ್ ವೃತ್ತಂ ಕುರುಜಾಂಗಲೇ ॥೧೭॥

ಆಗ ಸಂಜಯನು ಬೇಗನೆ ಹಸ್ತಿನಾಪುರಕ್ಕೆ ಹೋಗಿ, ಧೃತರಾಷ್ಟ್ರನಿಗೆ ಕುರುಕ್ಷೇತ್ರದಲ್ಲಿ ನಡೆದ ಎಲ್ಲ ವೃತ್ತಾಂತವನ್ನೂ ಹೇಳಿದ

ಜನಮೇಜಯಃ

ಆಪಗೇಯಂ ಹತಂ ಶ್ರುತ್ವಾ ದ್ರೋಣಂ ಚಾಪಿ ಮಹಾರಥಮ್ ।
ಆಜಗಾಮ ಪರಾಮಾರ್ತಿಂ ವೃದ್ಧೋ ರಾಜಾಽಂಬಿಕಾಸುತಃ ॥೧೮॥

ಸ ಶ್ರುತ್ವಾ ನಿಹತಂ ಕರ್ಣಂ ದುರ್ಯೋಧನಹಿತೈಷಿಣಮ್ ।
ಕಥಂ ದ್ವಿಜವರ ಪ್ರಾಣಾನಧಾರಯತ ದುಃಖಿತಃ ॥೧೯॥

ಜನಮೇಜಯರಾಜನು ವೈಶಂಪಾಯನರನ್ನು ಕೇಳುತ್ತಾನೆ— ಮಹಾರಥರಾದ

ಭೀಷ್ಮ ಹಾಗೂ ದ್ರೋಣರಿಬ್ಬರೂ ಹತರಾದುದನ್ನು ಕೇಳಿದಾಗಲೆ ರಾಜಾ ಧೃತರಾಷ್ಟ್ರನು ಅತ್ಯಂತ ದುಃಖಾರ್ತನಾಗಿದ್ದ. ಇದೀಗ ದುರ್ಯೋಧನನಿಗೆ ಹಿತೈಷಿಯಾದ ಕರ್ಣನೂ ಹತನಾದುದನ್ನು ಕೇಳಿ ದುಃಖಿತನಾದ ರಾಜ ಬದುಕಿರಲು ಹೇಗೆ ಶಕ್ತನಾದ?

ಯಸ್ಮಿನ್ ಜಯಾಶಾಂ ಪುತ್ರಾಣಾಂ ಸಮಮನ್ಯತ ಪಾರ್ಥಿವಃ ।
ತಸ್ಮಿನ್ ಹತೇ ಸ ಕೌರವ್ಯಃ ಕಥಂ ಪ್ರಾಣಾನಧಾರಯತ್ ॥೨೦॥

ತನ್ನ ಮಕ್ಕಳಿಗೆ ಜಯದಾಸೆ ಕರ್ಣನನ್ನೇ ಅವಲಂಬಿಸಿದ್ದಾಗ ಅವನು ಹತನಾದುದನ್ನು ಕೇಳಿ ಅವನು ಹೇಗೆ ತಾನೇ ಪ್ರಾಣಗಳನ್ನು ಹಿಡಿದುಕೊಂಡಿದ್ದ?

ದುರ್ಮರತ್ವಮಹಂ ಮನ್ಯೇ ನೃಣಾಂ ಕೃಚ್ಛ್ರೇಽಪಿ ವರ್ತತಾಮ್ ।
ಯತ್ರ ಕರ್ಣಂ ಹತಂ ಶ್ರುತ್ವಾ ನಾತ್ಯಜಜ್ಜೀವಿತಂ ನೃಪಃ ॥೨೧॥

ಮನುಷ್ಯರಿಗೆ ಎಷ್ಟೇ ಕಷ್ಟಬಂದರೂ ಪ್ರಾಣತ್ಯಾಗ ಮಾಡುವುದು ಶಕ್ಯವಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಕರ್ಣ ಹತನಾದುದನ್ನು ಕೇಳಿಯೂ ರಾಜ ಪ್ರಾಣಗಳನ್ನು ಬಿಡಲಿಲ್ಲ!

ತಥಾ ಶಾಂತನವಂ ವೃದ್ಧಂ ಬ್ರಹ್ಮನ್ ಬಾಹ್ಲೀಕಮೇವ ಚ ।
ದ್ರೋಣಂ ಚ ಸೋಮದತ್ತಂ ಚ ಭೂರಿಶ್ರವಸಮೇವ ಚ ॥೨೨॥

ತಥೈವ ಚಾನ್ಯಾನ್ ಸುಹೃದಃ ಪುತ್ರಾನ್ ಪೌತ್ರಾಂಶ್ಚ ಪಾತಿತಾನ್ ।
ಶ್ರುತ್ವಾ ಯನ್ನಾಜಹಾತ್ ಪ್ರಾಣಾಂಸ್ತನ್ಮನ್ಯೇ ದುಷ್ಕರಂ ದ್ವಿಜ ॥೨೩॥

ಮುನಿಯೇ, ವೃದ್ಧನಾದ ಭೀಷ್ಮ ಬಾಹ್ಲೀಕ ದ್ರೋಣ ಸೋಮದತ್ತ ಭೂರಿಶ್ರವ, ಇವರನ್ನೂ ಹಾಗೇ ಬೇರೆ ಮಿತ್ರ ರಾಜರನ್ನೂ ಪುತ್ರ ಪೌತ್ರರನ್ನೂ ತಾನು ಅಗಲಿದುದನ್ನು ಕೇಳಿಯೂ ರಾಜ ಪ್ರಾಣಗಳನ್ನು ಬಿಡಲಿಲ್ಲ ಎಂದಮೇಲೆ ಅದು ದುಷ್ಕರವೆಂದೇ ನಾನು ಭಾವಿಸುತ್ತೇನೆ.

ಏತನ್ಮೇ ಸರ್ವಮಾಚಕ್ಷ್ವ ವಿಸ್ತರೇಣ ಮಹಾಮುನೇ ।
ನ ಹಿ ತೃಪ್ಯಾಮಿ ಪೂರ್ವೇಷಾಂ ಶೃಣ್ವಾನಶ್ಚರಿತಂ ಮಹತ್ ॥೨೪॥

ಮಹಾಮುನಿಯೇ, ಇದನ್ನೆಲ್ಲ ವಿಸ್ತಾರವಾಗಿ ನನಗೆ ಹೇಳು, ಪೂರ್ವಿಕರ ದೊಡ್ಡ ಇತಿಹಾಸವನ್ನು ಕೇಳಿದಷ್ಟೂ ನನಗೆ ತೃಪ್ತಿಯಾಗುವುದಿಲ್ಲ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಪ್ರಥಮೋऽಧ್ಯಾಯಃ ॥೧॥

❖

ಎರಡನೆಯ ಅಧ್ಯಾಯ

ದ್ರೋಣವಧೆಗೆ ಕುರುಸೈನ್ಯ ಶೋಕಿಸಿತು.

ವೈಶಂಪಾಯನಃ

ಹತೇ ಕರ್ಣೇ ಮಹಾರಾಜ ನಿಶಿ ಗಾವಲ್ಗಣಸ್ತದಾ ।
ದೀನೋ ಯಯೌ ನಾಗಪುರಮಶ್ವೈರ್ವಾತಸಮೈರ್ಜವೇ ॥೧॥

ವೈಶಂಪಾಯನರು ಜನಮೇಜಯ ರಾಜನಿಗೆ ಹೇಳುತ್ತಾರೆ—

ಮಹಾರಾಜ, ಕರ್ಣನು ಹತನಾದಾಗ ಅದೇರಾತ್ರಿ ಸಂಜಯನು ದುಃಖಿತನಾಗಿ ವಾಯುವೇಗದ ಕುದುರೆಗಳನ್ನು ಕಟ್ಟಿದ ರಥದಿಂದ ಹಸ್ತಿನಾವತಿಗೆ ಹೋದನು.

ಸ ಹಾಸ್ತಿನಪುರಂ ಗತ್ವಾ ಭೃಶಮುದ್ವಿಗ್ನಚೇತನಃ ।
ಜಗಾಮ ಧೃತರಾಷ್ಟ್ರಸ್ಯ ಕ್ಷಯಂ ಪ್ರಕ್ಷೀಣಬಾಂಧವಮ್ ॥೨॥

ಬಲು ಉದ್ವಿಗ್ನಚಿತ್ತನಾದ ಅವನು ಹಸ್ತಿನಾವತಿಗೆ ಹೋಗಿ ಬಂಧುಜನರಿಂದ ಶೂನ್ಯವಾಗಿದ್ದ ಧೃತರಾಷ್ಟ್ರನ ಅರಮನೆಯನ್ನು ಪ್ರವೇಶಿಸಿದ.

ಸ ತಮುದ್ವೀಕ್ಷ್ಯ ರಾಜಾನಂ ಕಶ್ಮಲಾಭಿಹತೌಜಸಮ್ ।
ವವಂದೇ ಪ್ರಾಂಜಲಿರ್ಭೂತ್ವಾ ಮೂರ್ಧ್ನಾ ಪಾದೌ ನೃಪಸ್ಯ ಹ ॥೩॥

ದುಃಖದಿಂದ ಬಲಗುಂದಿದ್ದ ರಾಜನನ್ನು ಕಂಡು ಕೈಮುಗಿದು ತಲೆಯಿಂದ ರಾಜನ ಕಾಲುಗಳನ್ನು ವಂದಿಸಿದ.

ಸಂಪೂಜ್ಯ ಚ ಯಥಾನ್ಯಾಯಂ ಧೃತರಾಷ್ಟ್ರಂ ಮಹೀಪತಿಮ್ ।
ಹಾ ಕಷ್ಟಮಿತಿ ಚೋಕ್ತ್ವಾ ಸ ತತೋ ವಚನಮಾದದೇ ॥೪॥

ರಾಜಾ ಧೃತರಾಷ್ಟ್ರನನ್ನು ವಿಧ್ಯುಕ್ತವಾಗಿ ಉಪಚರಿಸಿ 'ಅಯ್ಯೋ ಕಷ್ಟವೆ!' ಎನ್ನುತ್ತ ಮಾತನಾಡಲು ಪ್ರಾರಂಭಿಸಿದ.

ಸಂಜಯೋಽಹಂ ಕ್ಷಿತಿಪತೇ ಕಚ್ಚಿದಾಸ್ತೇ ಸುಖಂ ಭವಾನ್ ।
ಸ್ವದೋಷೈರಾಪದಂ ಪ್ರಾಪ್ಯ ಕಚ್ಚಿನ್ನಾದ್ಯ ವಿಮುಹ್ಯತಿ ॥೫॥

ರಾಜನೇ, ನಾನು ಸಂಜಯ, ನೀನು ಸುಖವಾಗಿರುವೆ ತಾನೆ? ನಿನ್ನ ತಪ್ಪು ಗಳಿಂದಲೇ ನೀನು ಕಷ್ಟಕ್ಕೆ ಈಡಾಗಿ ಇಂದಿಗೂ ಮೈಮರೆಯದೇ ಇರುವೆ ತಾನೆ?

ಹಿತಾನ್ಯುಕ್ತಾನಿ ವಿದುರದ್ರೋಣಗಾಂಗೇಯಕೇಶವೈಃ ।
ಅಗೃಹೀತಾನ್ಯನುಸ್ಮೃತ್ಯ ಕಚ್ಚಿನ್ನ ಕುರುಷೇ ವ್ಯಥಾಮ್ ॥೬॥

ವಿದುರ ದ್ರೋಣ ಭೀಷ್ಮ ಕೃಷ್ಣ ಎಲ್ಲರೂ ನಿನಗೆ ಹಿತವನ್ನು ಬೋಧಿಸಿದರು. ಅದನ್ನು ನೀನು ಕೇಳಲಿಲ್ಲ. ಅದಕ್ಕೆ ವ್ಯಥೆಪಡುತ್ತಿಲ್ಲ ತಾನೆ?

ಸುಹೃದಸ್ತ್ವದ್ಧಿತೇ ಯುಕ್ತಾನ್ ಭೀಷ್ಮದ್ರೋಣಮುಖಾನ್ ಪರೈಃ ।
ನಿಹತಾನ್ ಯುಧಿ ಸಂಸ್ಮೃತ್ಯ ಕಚ್ಚಿನ್ನ ಕುರುಷೇ ವ್ಯಥಾಮ್ ॥೭॥

ನಿನ್ನ ಹಿತವನ್ನೇ ಬಯಸಿದ ಬಂಧುಗಳಾದ ಭೀಷ್ಮ-ದ್ರೋಣಾದಿಗಳು ಯುದ್ಧದಲ್ಲಿ ಮಡಿದುದನ್ನು ನೆನೆದು ವ್ಯಥೆಪಡುತ್ತಿಲ್ಲ ತಾನೆ?

ರಾಮನಾರದಕಣ್ವಾದ್ಯೈರ್ಹಿತಮುಕ್ತಂ ಸಭಾತಳೇ ।
ನ ಗೃಹೀತಮನುಸ್ಮೃತ್ಯ ಕಚ್ಚಿನ್ನ ಕುರುಷೇ ವ್ಯಥಾಮ್ ॥೮॥

ಸಭೆಯ ಅಂಗಣದಲ್ಲಿ ಪರಶುರಾಮ ನಾರದ ಕಣ್ವ ಮುಂತಾದವರು ಹಿತೋಪದೇಶ ಮಾಡಿದರೂ ಅದನ್ನು ಕೇಳದಿದ್ದುದನ್ನು ನೆನೆದು ವ್ಯಥೆಪಡುತ್ತಿಲ್ಲ ತಾನೆ?

ತಮೇವಂವಾದಿನಂ ರಾಜಾ ಸೂತಪುತ್ರಂ ಕೃತಾಂಜಲಿಮ್ ।
ಸುದೀರ್ಘಮಥ ನಿಃಶ್ವಸ್ಯ ದುಃಖಾರ್ತ ಇದಮಬ್ರವೀತ್ ॥೯॥

ಸಂಜಯನು ಕೈಮುಗಿದು ಹೀಗೆ ಹೇಳಿದಾಗ ರಾಜನು ದುಃಖಾರ್ತನಾಗಿ ನಿಟ್ಟುಸಿರಿಟ್ಟು ಹೇಳಿದ—

ಧೃತರಾಷ್ಟ್ರಃ

ಆಪಗೇಯೇ ಹತೇ ಶೂರೇ ದಿವ್ಯಾಸ್ತ್ರವತಿ ಸಂಜಯ ।
ದ್ರೋಣೇ ಚ ಪರಮೇಷ್ವಾಸೇ ಭೃಶಂ ಮೇ ವ್ಯಥಿತಂ ಮನಃ ॥೧೦॥

ಸಂಜಯ, ದಿವ್ಯಾಸ್ತ್ರಗಳನ್ನು ಹೊಂದಿದ್ದ ಶೂರನಾದ ಭೀಷ್ಮನೂ ಮಹಾ ಬಿಲ್ಲುಗಾರನಾದ ದ್ರೋಣನೂ ಹತನಾದಾಗ ನನ್ನ ಮನಸ್ಸು ಬಹಳ ವ್ಯಥೆಗೆ ಈಡಾಯಿತು.

ಯೋ ರಥಾನಾಂ ಸಹಸ್ರಾಣಿ ದಂಸಿತಾನಾಂ ದಶೈವ ತು ।
ಅಹನ್ಯಹನಿ ತೇಜಸ್ವೀ ನಿಜಘ್ನೇ ವಸುಸಂಭವಃ ॥೧೧॥

ತಂ ಹತಂ ಯಜ್ಞಸೇನಸ್ಯ ಪುತ್ರೇಣೇಹ ಶಿಖಂಡಿನಾ ।
ಪಾಂಡವೇಯಾಭಿಗುಪ್ತೇನ ಶ್ರುತ್ವಾ ಮೇ ವ್ಯಥಿತಂ ಮನಃ ॥೧೨॥

ಭೀಷ್ಮನು ಕವಚಧಾರಿಗಳಾದ ಹತ್ತುಸಾವಿರ ರಥಿಕರನ್ನು ಪ್ರತಿದಿನ ಸಂಹರಿಸುತ್ತಿದ್ದ. ವಸುಗಳ ಅವತಾರನಾದ ಆತ ತೇಜಸ್ವಿಯಾಗಿದ್ದ. ಅವನನ್ನು ಅರ್ಜುನನಿಂದ ರಕ್ಷಿತನಾದ ಶಿಖಂಡಿ ಕೊಂದುದನ್ನು ಕೇಳಿ ನನ್ನ ಮನಸ್ಸು ವ್ಯಥೆಗೊಂಡಿತು.

ಭಾರ್ಗವಃ ಪ್ರದದೌ ಯಸ್ಮೈ ಪರಮಾಸ್ತ್ರಂ ಮಹಾಹವೇ ।
ಸಾಕ್ಷಾದ್ ರಾಮೇಣ ಯೋ ಬಾಲ್ಯೇ ಧನುರ್ವೇದ ಉಪಾಕೃತಃ ॥೧೩॥

ಸಾಕ್ಷಾತ್ ಪರಶುರಾಮನು ದ್ರೋಣರನ್ನು ಬಾಲ್ಯದಲ್ಲಿಯೇ ಧನುರ್ವೇದದಲ್ಲಿ ತರಬೇತುಗೊಳಿಸಿದ್ದ. ಮಹಾಯುದ್ಧಕ್ಕೆ ಯೋಗ್ಯವಾದ ಮಹಾಸ್ತ್ರವನ್ನು ಅವನಿಗೆ ಉಪದೇಶಿಸಿದ್ದ.

ಯಸ್ಯ ಪ್ರಸಾದಾತ್ ಕೌಂತೇಯಾ ರಾಜಪುತ್ರಾ ಮಹಾರಥಾಃ ।
ಮಹಾರಥತ್ವಂ ಸಂಪ್ರಾಪ್ತಾಸ್ತಥಾಽನ್ಯೇ ವಸುಧಾಧಿಪಾಃ ॥೧೪॥

ಆ ದ್ರೋಣರ ಅನುಗ್ರಹದಿಂದ ಪಾಂಡವರೂ ಬೇರೆ ರಾಜರೂ

ರಾಜಕುಮಾರರೂ ಮಹಾರಥರಾಗುವುದಕ್ಕೆ ಶಿಕ್ಷಣ ಪಡೆದು ಮಹಾರಥರು ಎನಿಸಿದರು.

ತಂ ದ್ರೋಣಂ ನಿಹತಂ ಶ್ರುತ್ವಾ ಧೃಷ್ಟದ್ಯುಮ್ನೇನ ಸಂಯುಗೇ ।
ಸತ್ಯಸಂಧಂ ಮಹೇಷ್ವಾಸಂ ಭೃಶಂ ಮೇ ವ್ಯಥಿತಂ ಮನಃ ॥೧೫॥

ಸತ್ಯಸಂಧನಾದ ಮಹಾ ಬಿಲ್ಲೋಜನಾದ ಆ ದ್ರೋಣನೂ ಕೂಡ ಯುದ್ಧದಲ್ಲಿ ಧೃಷ್ಟದ್ಯುಮ್ನನಿಂದ ಹತನಾದುದನ್ನು ಕೇಳಿ ನನ್ನ ಮನಸ್ಸು ಬಹಳ ವ್ಯಥೆಗೊಂಡಿತು.

ಯಯೋರ್ಲೋಕೇ ಪುಮಾನನ್ಯೋ ನ ಸಮೋऽಸ್ತಿ ಚತುರ್ವಿಧೇ ।
ತೌ ದ್ರೋಣಭೀಷ್ಮೌ ಶ್ರುತ್ವಾ ತು ಹತೌ ಮೇ ವ್ಯಥಿತಂ ಮನಃ ॥೧೬॥

ಚತುರ್ವಿಧವಾದ ಅಸ್ತ್ರವಿದ್ಯೆಯಲ್ಲಿ ದ್ರೋಣರಿಗೆ ಸಮನಾದ ಪುರುಷ ಲೋಕದಲ್ಲಿಲ್ಲ. ಅವರೂ ಹತರಾದುದನ್ನು ಕೇಳಿ ನನ್ನ ಮನಸ್ಸು ವ್ಯಥೆಗೊಂಡಿತು.

ಆದಾನ–ಅಭಿಮಂತ್ರಣ–ಸಂಧಾನ–ಪ್ರಯೋಗಗಳೆಂದು ಅಸ್ತ್ರವಿದ್ಯೆ ನಾಲ್ಕು ಬಗೆ. ಮಂತ್ರ–ಬಾಣ–ಪ್ರಯೋಗ–ಉಪಸಂಹಾರಗಳೆಂದೂ ನಾಲ್ಕು ಬಗೆ. ಚತುರ್ವಿಧ ಅಸ್ತ್ರಗಳು: ಎಂದರೆ ಮುಕ್ತಾಮುಕ್ತ, ಅಮುಕ್ತ, ಕರಮುಕ್ತ, ಯಂತ್ರಮುಕ್ತ ಎಂದು ನಾಲ್ಕು ಬಗೆಯ ಆಯುಧಗಳು. ಈಟಿ ಮುಂತಾದವು ಕೈಯಿಂದ ಪ್ರಯೋಗಿಸುವವು ಕರಮುಕ್ತ ಅಸ್ತ್ರಗಳು, ಬಾಣ ಪಾಷಾಣಗಳು ಯಂತ್ರಮುಕ್ತಗಳು, ಕೋಲು ಬಡಿಗೆಗಳು ಮುಕ್ತಾಮುಕ್ತಗಳು, ಸಣ್ಣ ಕತ್ತಿ ಚೂರಿಗಳು ಅಮುಕ್ತ ಅಸ್ತ್ರಗಳು.

ತ್ರೈಲೋಕ್ಯೇ ಯಸ್ಯ ಚಾಸ್ತ್ರೇಷು ನ ಪುಮಾನ್ ವಿದ್ಯತೇ ಸಮಃ ।
ತಂ ದ್ರೋಣಂ ನಿಹತಂ ಶ್ರುತ್ವಾ ಕಿಮಕುರ್ವತ ಮಾಮಕಾಃ ॥೧೭॥

ಮೂರ್ಲೋಕದಲ್ಲಿ ಅಸ್ತ್ರವಿದ್ಯೆಗಳಲ್ಲಿ ದ್ರೋಣರಿಗೆ ಸಮನಾದ ಪುರುಷನಿಲ್ಲ. ಅಂಥ ದ್ರೋಣರೂ ಹತನಾದುದನ್ನು ಕೇಳಿ ನನ್ನವರು ಏನು ಮಾಡಿದರು?

ಸಂಶಪ್ತಕಾನಾಂ ಚ ಬಲೇ ಪಾಂಡವೇನ ಮಹಾತ್ಮನಾ ।
ಧನಂಜಯೇನ ವಿಕ್ರಮ್ಯ ಗಮಿತೇ ಯಮಸಾದನಮ್ ॥೧೮॥

ನಾರಾಯಣಾಸ್ತ್ರೇ ಚ ಹತೇ ದ್ರೋಣಪುತ್ರಸ್ಯ ಧೀಮತಃ ।
ವಿಪ್ರದ್ರುತೇಷ್ವನೀಕೇಷು ಕಿಮಕುರ್ವತ ಮಾಮಕಾಃ ॥೧೯॥

ಸಂಶಪ್ತಕರ ಸೈನ್ಯವನ್ನು ಮಹಾತ್ಮ ಅರ್ಜುನ ಪರಾಕ್ರಮದಿಂದ ಯಮಲೋಕಕ್ಕೆ ಕಳಿಸಿದಾಗ, ಧೀಮಂತ ಅಶ್ವತ್ಥಾಮನ ನಾರಾಯಣಾಸ್ತ್ರವೂ ಆಗ್ನೇಯಾಸ್ತ್ರವೂ ಕೂಡ ಶಾಂತವಾದಾಗ, ನಮ್ಮ ಸೈನ್ಯವೆಲ್ಲವೂ ಪಲಾಯನ ಮಾಡಿದಾಗ, ನಮ್ಮವರೇನು ಮಾಡಿದರು?

ಆಗ್ನೇಯಾಸ್ತ್ರಕ್ಕೆ ವಾರುಣಾಸ್ತ್ರವು ಪ್ರತ್ಯಸ್ತ್ರವಾಗಬಲ್ಲುದು. ಆದರೆ ನಾರಾಯಣಾಸ್ತ್ರಕ್ಕೆ ಪ್ರತ್ಯಸ್ತ್ರವಿಲ್ಲ. ಅದರಿಂದ ಕೇವಲ ನಾರಾಯಣಾಸ್ತ್ರದ ಉಲ್ಲೇಖವಿದೆ.

ವಿಪ್ರದ್ರುತಾನಹಂ ಮನ್ಯೇ ನಿಮಗ್ನಾನ್ ಶೋಕಸಾಗರೇ ।
ಪ್ಲವಮಾನಾನ್ ಹತೇ ದ್ರೋಣೇ ಸನ್ನನೌಕಾನಿವಾರ್ಣವೇ ॥೨೦॥

ನೌಕೆ ಸಮುದ್ರದಲ್ಲಿ ಒಡೆದಾಗ ಪ್ರಯಾಣಿಕರು ಈಜುವಂತೆ ದ್ರೋಣರು ಹತರಾದಾಗ ನಮ್ಮವರು ಶೋಕಸಾಗರದಲ್ಲಿ ಮುಳುಗಿ ಈಜಿ ಪಲಾಯನ ಮಾಡಿದರೆಂದೇ ಭಾವಿಸುತ್ತೇನೆ.

ದುರ್ಯೋಧನಸ್ಯ ಕರ್ಣಸ್ಯ ಭೋಜಸ್ಯ ಕೃತವರ್ಮಣಃ ।
ಮದ್ರರಾಜಸ್ಯ ಶಲ್ಯಸ್ಯ ದ್ರೌಣೇಶ್ಚೈವ ಕೃಪಸ್ಯ ಚ ॥೨೧॥

ಮತ್ಪುತ್ರಸ್ಯ ಚ ಶೇಷಸ್ಯ ತಥಾಽನ್ಯೇಷಾಂ ಚ ಸಂಜಯ ।
ವಿಪ್ರದ್ರುತೇಷ್ವನೀಕೇಷು ಮುಖವರ್ಣೋಽಭವತ್ ಕಥಮ್ ॥೨೨॥

ದುರ್ಯೋಧನ, ಕರ್ಣ, ಯದುವಂಶದ ಕೃತವರ್ಮ, ಮದ್ರರಾಜ ಶಲ್ಯ, ಅಶ್ವತ್ಥಾಮ, ಕೃಪ, ನನ್ನ ಉಳಿದ ಮಕ್ಕಳು, ಬೇರೆ ರಾಜರು, ಇವರೆಲ್ಲರ ಸೈನ್ಯಗಳು ಪಲಾಯನ ಮಾಡಿದಾಗ, ಅವರ ಮುಖವರ್ಣ ಹೇಗಿತ್ತು ಸಂಜಯ?

ಏತತ್ಸರ್ವಂ ಯಥಾವೃತ್ತಂ ಮಯಾ ಗಾವಲ್ಗಣೇ ಮಮ ।
ಆಚಕ್ಷ್ವ ಪಾಂಡವೇಯಾನಾಂ ಮಾಮಕಾನಾಂ ಚ ವಿಕ್ರಮಮ್ ॥೨೩॥

ಸಂಜಯ, ಇದೆಲ್ಲವನ್ನೂ ಯಥಾವತ್ತಾಗಿ ನನಗೆ ಹೇಳು, ಪಾಂಡವರು ಮತ್ತು ನನ್ನವರು ತೋರಿದ ಯುದ್ಧ ಪರಾಕ್ರಮವನ್ನು ಹೇಳು.

ಸಂಜಯಃ

ತವಾಪರಾಧಾದ್ಯದ್ ವೃತ್ತಂ ಕೌರವೇಯೇಷು ಮಾರಿಷ ।
ತಚ್ಛ್ರುತ್ವಾ ಮಾ ವ್ಯಥಾಂ ಕಾರ್ಷೀರ್ದಿಷ್ಟೇ ನ ವ್ಯಥತೇ ಬುಧಃ ॥೨೪॥

ಸಂಜಯನು ಹೇಳುತ್ತಾನೆ– ರಾಜನೆ, ನಿನ್ನ ತಪ್ಪಿಂದಾಗಿ ಕೌರವ ಸೈನಿಕರಲ್ಲಿ ಉಂಟಾದ ಅನಾಹುತ, ಕ್ಲೇಶಗಳನ್ನು ಕೇಳಿ ನೀನು ವ್ಯಥೆ ಪಡಬೇಡ. ದೈವಸಂಕಲ್ಪಕ್ಕೆ ತಿಳಿದವನು ವ್ಯಥೆ ಪಡುವುದಿಲ್ಲ.

ಯಸ್ಮಾದಭಾವೀ ಭಾವೀ ವಾ ಭವೇದಥೋರ್ ನರಂ ಪ್ರತಿ ।
ಅಪ್ರಾಪ್ತೌ ತಸ್ಯ ವಾ ಪ್ರಾಪ್ತೌ ನ ಕಶ್ಚಿದ್ ವ್ಯಥತೇ ಬುಧಃ ॥೨೫॥

ದೈವಸಂಕಲ್ಪಾನುಸಾರ ಅಭೀಷ್ಟವು ಮಾನವನಿಗೆ ಲಭಿಸಬಹುದು, ಲಭಿಸದಿರ ಬಹುದು. ಅದು ಲಭಿಸದಿದ್ದರೂ ಲಭಿಸಿದರೂ ತಿಳಿದವನು ಯಾವನೂ ಅದಕ್ಕೆ ಸ್ಪಂದಿಸುವುದಿಲ್ಲ.

ಧೃತರಾಷ್ಟ್ರಃ

ನ ವ್ಯಥಾऽಭ್ಯಧಿಕಾ ಕಾಚಿದ್ ವಿದ್ಯತೇ ಮಮ ಸಂಜಯ ।
ದಿಷ್ಟಮೇತತ್ ಪುರಾ ಮನ್ಯೇ ಕಥಯಸ್ವ ಯಥೇಚ್ಛಕಮ್ ॥೨೬॥

ಧೃತರಾಷ್ಟ್ರ ಹೇಳುತ್ತಾನೆ— ಹೆಚ್ಚಿನ ವ್ಯಥೆ ಏನೂ ನನಗೆ ಇಲ್ಲ ಸಂಜಯ! ಇದು ದೈವಸಂಕಲ್ಪವೆಂದು ನಾನು ತಿಳಿದೇ ಇದ್ದೇನೆ. ನಡೆದ ವೃತ್ತಾಂತವನ್ನು ಯಥೇಚ್ಛ ಹೇಳು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ದ್ವಿತೀಯೋऽಧ್ಯಾಯಃ ॥೨॥

❖ ❖ ❖

ಮೂರನೆಯ ಅಧ್ಯಾಯ

ಕರ್ಣವಧೆಯ ಸಂಕ್ಷೇಪ

ಸಂಜಯಃ

ಹತೇ ದ್ರೋಣೇ ಮಹೇಷ್ವಾಸೇ ತವ ಪುತ್ರಾ ಮಹಾರಥಾಃ ।
ಬಭೂವುರಸ್ವಸ್ಥಮುಖಾ ವಿಷಣ್ಣಾ ಗತಚೇತಸಃ ॥೧॥

ಅವಾಙ್ಮುಖಾಃ ಶಸ್ತ್ರಭೃತಃ ಸರ್ವ ಏವ ವಿಶಾಂಪತೇ ।
ಅವೇಕ್ಷಮಾಣಾಃ ಶೋಕಾರ್ತಾ ನಾಭ್ಯಭಾಷನ್ ಪರಸ್ಪರಮ್ ॥೨॥

ಸಂಜಯ ಹೇಳುತ್ತಾನೆ— ಮಹಾ ಬಿಲ್ಲಾರನಾದ ದ್ರೋಣ ಹತನಾದಾಗ ಮಹಾರಥರಾದ ನಿನ್ನ ಮಕ್ಕಳು ಮುಖ ಬಾಡಿಸಿಕೊಂಡು ವಿಷಾದದಿಂದ ದಿಕ್ಕು ತೋಚದವರಾಗಿ ಮುಖ ತಗ್ಗಿಸಿಕೊಂಡು ಕುಳಿತರು. ಪರಸ್ಪರ ಮುಖಾವಲೋಕನ ಗೈದರೂ ಶೋಕಾರ್ತರಾಗಿದ್ದು ಏನೂ ಮಾತಾಡಲಿಲ್ಲ.

ತಾನ್ ದೃಷ್ಟ್ವಾ ವ್ಯಥಿತಾಕಾರಾನ್ ಸೈನ್ಯಾನಿ ತವ ಭಾರತ ।
ಊರ್ಧ್ವಮೇವ ನಿರೈಕ್ಷಂತ ದುಃಖಿತಪ್ತಾನ್ಯನೇಕಶಃ ॥೩॥

ಈ ಸ್ಥಿತಿಯಲ್ಲಿ ಅವರ ವ್ಯಥೆಯನ್ನು ವ್ಯಕ್ತಗೊಳಿಸುವ ಮುಖಚರ್ಯೆಯನ್ನು ಮತ್ತೆಮತ್ತೆ ಕಂಡ ನಿನ್ನ ಸೈನಿಕರು ದುಃಖಿತಪ್ತರಾಗಿ ಮೇಲೆ ಆಗಸದ ಕಡೆಗೇ ನೋಡಿದರು.

ಶಸ್ತ್ರಾಣ್ಯೇಷಾಂ ತು ರಾಜೇಂದ್ರ ಶೋಣಿತಾಕ್ತಾನಿ ಸರ್ವಶಃ ।
ಪ್ರಾಭ್ರಶ್ಯಂತ ಕರಾಗ್ರೇಭ್ಯೋ ದೃಷ್ಟ್ವಾ ದ್ರೋಣಂ ಹತಂ ಯುಧಿ ॥೪॥

ಮಹಾರಾಜ, ಪೂರ್ತಿ ನೆತ್ತರಿಂದ ತೊಯ್ದ ಅವರ ಆಯುಧಗಳು, ಯುದ್ಧದಲ್ಲಿ ದ್ರೋಣ ಹತನಾದುದನ್ನು ಕಂಡೊಡನೆ, ಕೈತುದಿಗಳಿಂದ ಕೆಳಗೆ ಜಾರಿದುವು. ಇದು ಅನಿಷ್ಟ ಸೂಚಕ.

ತಾನಿ ಬದ್ಧಾನ್ಯರಿಷ್ಟಾನಿ ಲಂಬಮಾನಾನಿ ಭಾರತ ।
ಅದೃಶ್ಯಂತ ಮಹಾರಾಜ ನಕ್ಷತ್ರಾಣಿ ಯಥಾ ದಿವಿ ॥೫॥

ಮಹಾರಾಜ, ಆಕಾಶದಿಂದ ಕೆಳಗೆ ಜಾರುವ ನಕ್ಷತ್ರಗಳಂತೆ, ಸೊಂಟಕ್ಕೆ ಕಟ್ಟಿದ್ದ ಅವರ ಆಯುಧಗಳೂ ಕೂಡ ಕೆಳಮುಖವಾಗಿ ನೇತಾಡುತ್ತ ಅರಿಷ್ಟಸೂಚಕ ವಾದುವು.

ತಥಾ ತು ಸ್ತಿಮಿತಂ ದೃಷ್ಟ್ವಾ ಗತಸತ್ವಮವಸ್ಥಿತಮ್ ।
ಬಲಂ ತವ ಮಹಾರಾಜ ರಾಜಾ ದುರ್ಯೋಧನೋಽಬ್ರವೀತ್ ॥೬॥

ಹಾಗೆ ಶಕ್ತಿಗುಂದಿ ಸ್ತಬ್ಧವಾಗಿ ನಿಂತ ನಿನ್ನ ಸೈನ್ಯವನ್ನು ಕಂಡು ರಾಜಾ ದುರ್ಯೋಧನ ನುಡಿದ.

ಭವತಾಂ ಬಾಹುವೀರ್ಯಂ ಹಿ ಸಮಾಶ್ರಿತ್ಯ ಮಯಾ ಯುಧಿ ।
ಪಾಂಡವೇಯಾಃ ಸಮಾಹೂತಾ ಯುದ್ಧಂ ಚೇದಂ ಪ್ರವರ್ತಿತಮ್ ॥೭॥

ನಿಮ್ಮ ಬಾಹುಬಲವನ್ನು ನೆಚ್ಚಿ ನಾನು ಯುದ್ಧಕ್ಕೆ ಪಾಂಡವಸೈನಿಕರನ್ನು ಆಹ್ವಾನಿಸಿದ್ದೇನೆ. ಅದರಂತೆ ಯುದ್ಧ ನಡೆಯುತ್ತಿದೆ.

ತದಿದಂ ನಿಹತೇ ದ್ರೋಣೇ ವಿಷಣ್ಣಮಿವ ಲಕ್ಷ್ಯತೇ ।
ಯುಧ್ಯಮಾನಾಶ್ಚ ಸಮರೇ ಯೋಧಾ ವಧ್ಯಂತಿ ಸರ್ವಶಃ ॥೮॥

ಜಯೋ ವಾಽಪಿ ವಧೋ ವಾಽಪಿ ಯುಧ್ಯಮಾನಸ್ಯ ಸಂಯುಗೇ ।
ಭವೇತ್ ಕಿಮತ್ರ ಚಿತ್ರಂ ವೈ ಯುಧ್ಯಧ್ವಂ ಸರ್ವತೋಮುಖಾಃ ॥೯॥

ಆದರೆ, ದ್ರೋಣ ಹತನಾದೊಡನೆ ಆ ನಿಮ್ಮ ಬಾಹುಬಲ ಕುಗ್ಗಿದಂತೆ ಕಾಣುತ್ತಿದೆ. ರಣರಂಗದಲ್ಲಿ ಹೋರಾಡುವ ಯೋಧರು ಸಾಮಾನ್ಯವಾಗಿ ಶತ್ರುಗಳಿಂದ ಹತರಾಗುತ್ತಲೆ ಇರುತ್ತಾರೆ. ಅವರು ಹೋರಾಡುವಾಗ ಯುದ್ಧದಲ್ಲಿ ಕೆಲವೊಮ್ಮೆ ಜಯವೋ ವಧೆಯೋ ಸಂಭವಿಸಬಹುದು. ಅದರಲ್ಲಿ ಆಶ್ಚರ್ಯ ವೇನಿದೆ? ನೀವಂತೂ ಸರ್ವತೋಮುಖವಾಗಿ ಹೋರಾಡುತ್ತಿರಿ.

ಪಶ್ಯಧ್ವಂ ಚ ಮಹಾತ್ಮಾನಂ ಕರ್ಣಂ ವೈಕರ್ತನಂ ಯುಧಿ ।
ಪ್ರಚರಂತಂ ಮಹೇಷ್ವಾಸಂ ದಿವ್ಯೈರಸ್ತ್ರೈರ್ಮಹಾಬಲಮ್ ॥೧೦॥

ಮತ್ತು ಮಹಾತ್ಮಾ ವೈಕರ್ತನ ಕರ್ಣನು ದಿವ್ಯಾಸ್ತ್ರಗಳಿಂದ ಬಲಿಷ್ಠನಾಗಿ ಮಹಾಧನುರ್ಧಾರಿಯಾಗಿ ರಣರಂಗದಲ್ಲಿ ಸಂಚರಿಸುವುದನ್ನು ಗಮನಿಸಿರಿ.

ಯಸ್ಯ ವೈ ಯುಧಿ ಸಂತ್ರಾಸಾತ್ ಕುಂತೀಪುತ್ರೋ ಧನಂಜಯಃ ।
ನಿವರ್ತತೇ ಸದಾ ಮಂದಃ ಸಿಂಹಾತ್ ಕ್ಷುದ್ರಮೃಗೋ ಯಥಾ ॥೧೧॥

ಕರ್ಣನಿಗೆ ಹೆದರಿ ಅಲ್ಪಶಕ್ತನಾದ ಕುಂತೀಪುತ್ರ ಅರ್ಜುನ ಸಿಂಹಕ್ಕೆ ಹೆದರುವ ಅಲ್ಪಮೃಗದಂತೆ ರಣರಂಗದಿಂದ ಸದಾ ಹಿಂದೆ ಸರಿಯುತ್ತಾನೆ.

ಯೇನ ನಾಗಾಯುತಪ್ರಾಣೋ ಭೀಮಸೇನೋ ಮಹಾಬಲಃ ।
ಮಾನುಷೇಣೈವ ಯುದ್ಧೇನ ತಾಮವಸ್ಥಾಂ ಪ್ರವೇಶಿತಃ ॥೧೨॥

ಹತ್ತು ಸಾವಿರ ಆನೆಗಳ ಬಲವಿರುವ ಮಹಾಬಲಿ ಭೀಮಸೇನನನ್ನು ಕೂಡ ಕರ್ಣನು ದಿವ್ಯಾಸ್ತ್ರಪ್ರಯೋಗವಿಲ್ಲದೆ ಕೇವಲ ಮಾನುಷ ಯುದ್ಧದಿಂದಲೇ, ಹಿಂದೆ ನೀವೇ ಕಂಡಿರುವಂತೆ ದುರವಸ್ಥೆಗೆ ಈಡುಮಾಡಿದ್ದಾನೆ.

ಯೇನ ದಿವ್ಯಾಸ್ತ್ರವಿಚ್ಛೂರೋ ಮಾಯಾವೀ ಸ ಘಟೋತ್ಕಚಃ ।
ಅಮೋಘಯಾ ರಣೇ ಶಕ್ತ್ಯಾ ನಿಹತೋ ಭೈರವಂ ನದನ್ ॥೧೩॥

ದಿವ್ಯಾಸ್ತ್ರವನ್ನು ತಿಳಿದಿರುವ ಶೂರನೂ ಮಾಯಾವಿಯೂ ಆದ ಆ ಘಟೋತ್ಕಚನನ್ನು ಕೂಡ ಕರ್ಣನು ರಣರಂಗದಲ್ಲಿ ಭಯಂಕರ ಗರ್ಜನೆ ಮಾಡುತ್ತ ಅಮೋಘವಾದ ಶಕ್ತ್ಯಾಯುಧದಿಂದ ಸಂಹರಿಸಿದ್ದಾನೆ.

ತಸ್ಯ ದುರ್ವಾರವೀರ್ಯಸ್ಯ ಸತ್ಯಸಂಧಸ್ಯ ಧೀಮತಃ ।
ಬಾಹ್ವೋರ್ದ್ರವಿಣಮಕ್ಷಯ್ಯಮದ್ಯ ದ್ರಕ್ಷ್ಯಥ ಸಂಯುಗೇ ॥೧೪॥

ಸತ್ಯಸಂಧನಾದ ಧೀಮಂತನಾದ ಆ ಕರ್ಣನ ಪರಾಕ್ರಮವನ್ನು ಯಾರಿಗೂ ತಡೆಯಲಾಗದು. ಅಕ್ಷಯವಾದ ಅವನ ಬಾಹುಬಲದ ಸಂಪತ್ತನ್ನು ಇಂದು ಯುದ್ಧದಲ್ಲಿ ಪ್ರತ್ಯಕ್ಷ ಕಾಣಲಿರುವಿರಿ.

ದ್ರೋಣಪುತ್ರಸ್ಯ ವಿಕ್ರಾಂತಂ ರಾಧೇಯಸ್ಯೈವ ಚೋಭಯೋಃ ।
ಪಶ್ಯಂತು ಪಾಂಡುಪುತ್ರಾಸ್ತೇ ವಿಷ್ಣುವಾಸವಯೋರಿವ ॥೧೫॥

ವಿಷ್ಣು–ಇಂದ್ರರ ಪರಾಕ್ರಮದಂತೆಯೇ ಅಶ್ವತ್ಥಾಮ–ಕರ್ಣರಿಬ್ಬರ ಪರಾಕ್ರಮ ಇರುವುದನ್ನು ಆ ಪಾಂಡವರು ಕಣ್ಣಾರೆ ಕಾಣಲಿ

ಸರ್ವ ಏವ ಭವಂತಶ್ಚ ಶಕ್ತಾಃ ಪ್ರತ್ಯೇಕಶೋಽಪಿ ವಾ ।
ಪಾಂಡುಪುತ್ರಾನ್ ರಣೇ ಹಂತುಂ ಸಸೈನ್ಯಾನ್ ಕಿಮು ಸಂಹತಾಃ ॥೧೬॥
ವೀರ್ಯವಂತಃ ಕೃತಾಸ್ತ್ರಾಶ್ಚ ದ್ರಕ್ಷ್ಯಥಾದ್ಯ ಪರಸ್ಪರಮ್ ॥೧೭॥

ಪಾಂಡವರನ್ನು ಅವರ ಸೈನ್ಯಸಮೇತ ಸಂಹರಿಸಲು ನೀವೆಲ್ಲರೂ ಕೂಡ ಪ್ರತ್ಯೇಕವಾಗಿಯೇ ಸಮರ್ಥರಿದ್ದೀರಿ. ಇನ್ನು ಎಲ್ಲರೂ ಸೇರಿದರೆ ಏನು ಹೇಳಬೇಕು? ನೀವು ಪರಾಕ್ರಮಶಾಲಿಗಳೂ ಅಸ್ತ್ರವೇತ್ತರೂ ಆಗಿರುವುದನ್ನು ಪರಸ್ಪರವಾಗಿ ನೀವೇ ನೋಡುವಿರಿ.

ಸಂಜಯಃ

ಏವಮುಕ್ತ್ವಾ ತತಃ ಕರ್ಣಂ ಚಕ್ರೇ ಸೇನಾಪತಿಂ ತದಾ ।
ತವ ಪುತ್ರೋ ಮಹಾವೀರ್ಯೋ ಭ್ರಾತೃಭಿಃ ಸಹಿತೋಽನಘ ॥೧೮॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ಹೀಗೆ ಹೇಳಿ ಮಹಾವೀರ್ಯ ಶಾಲಿಯಾದ ನಿನ್ನ ಮಗ ಸೋದರರೊಂದಿಗೆ ಕರ್ಣನನ್ನು ಸೇನಾಧಿಪತಿಯನ್ನಾಗಿ ಮಾಡಿದ.

ಸೈನಾಪತ್ಯಮಥಾವಾಪ್ಯ ಕರ್ಣೋ ರಾಜನ್ ಮಹಾರಥಃ ।
ಸಿಂಹನಾದಂ ವಿನದ್ಯೋಚ್ಚೈಃ ಪ್ರಾಯುಧ್ಯತ ರಣೋತ್ಕಟಃ ॥೧೯॥

ರಾಜನೇ, ಮಹಾರಥನಾದ ಕರ್ಣನು ಸೇನಾಧಿಪತ್ಯವನ್ನು ಹೊಂದಿ ರಣೋನ್ಮತ್ತನಾಗಿ ಗಟ್ಟಿಯಾಗಿ ಸಿಂಹನಾದ ಮಾಡುತ್ತ ಯುದ್ಧ ಮಾಡತೊಡಗಿದ

ಸಸೃಂಜಯಾನಾಂ ಸರ್ವೇಷಾಂ ಪಾಂಚಾಲಾನಾಂ ಚ ಪಶ್ಯತಾಮ್ ।
ಕೇಕಯಾನಾಂ ವಿದೇಹಾನಾಂ ಚಕಾರ ಕದನಂ ಮಹತ್ ॥೨೦॥

ಸೃಂಜಯರೊಂದಿಗೆ ಎಲ್ಲ ಪಾಂಚಾಲರೂ ಕೇಕಯರೂ ವಿದೇಹರೂ ನೋಡುತ್ತಿದ್ದಂತೇ ಮಹಾಯುದ್ಧವನ್ನು ನಡೆಸಿದ

ತಸ್ಯೇಷುಧಾರಾಃ ಶತಶಃ ಪ್ರಾದುರಾಸನ್ಧರಾಸನಾತ್ ।
ಅಗ್ರೇ ಪುಂಖೇಷು ಸಂಸಕ್ತಾ ಯಥಾ ಭ್ರಮರಪಂಕ್ತಯಃ ॥೨೧॥

ಒಂದು ಬಾಣದ ತುದಿ ಮತ್ತೊಂದರ ಬುಡಕ್ಕೆ ತಗುಲಿಕೊಂಡಂತೆ ನೂರಾರು ಬಾಣಗಳ ಪ್ರವಾಹಗಳು ಕರ್ಣನ ಬಿಲ್ಲಿನಿಂದ ಪ್ರಾದುರ್ಭವಿಸಿ ದುಂಬಿಗಳ ಸಾಲಿನಂತೆ ಕಂಡುಬಂದುವು.

ಸ ಪೀಡಯಿತ್ವಾ ಪಾಂಚಾಲಾನ್ ಪಾಂಡವಾಂಶ್ಚ ತರಸ್ವಿನಃ ।
ಹತ್ವಾ ಸಹಸ್ರಶೋ ಯೋಧಾನರ್ಜುನೇನ ನಿಪಾತಿತಃ ॥೨೨॥

ವೇಗಶಾಲಿಗಳಾದ ಪಾಂಚಾಲರನ್ನೂ ಪಾಂಡವರನ್ನೂ ಪೀಡಿಸುತ್ತ ಸಾವಿರಾರು ಯೋಧರನ್ನು ಸಂಹರಿಸುತ್ತ ಕೊನೆಯಲ್ಲಿ ಕರ್ಣನು ಅರ್ಜುನನಿಂದ ಹತನಾದ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ತೃತೀಯೋಽಧ್ಯಾಯಃ ॥೩॥

❖

ನಾಲ್ಕನೆಯ ಅಧ್ಯಾಯ

ಕರ್ಣವಧೆಗೆ ಧೃತರಾಷ್ಟ್ರನ ಶೋಕ

ವೈಶಂಪಾಯನಃ

ಏತಚ್ಛ್ರುತ್ವಾ ಮಹಾರಾಜ ಧೃತರಾಷ್ಟ್ರೋಽಂಬಿಕಾಸುತಃ ।
ಶೋಕಸ್ಯಾಂತಮಪಶ್ಯನ್ ವೈ ಹತಂ ಮತ್ವಾ ಸುಯೋಧನಮ್ ॥೧॥
ವಿಹ್ವಲಃ ಪತಿತೋ ಭೂಮೌ ನಷ್ಟಚೇತಾ ಇವ ದ್ವಿಪಃ ॥೨॥

ವೈಶಂಪಾಯನರು ಜನಮೇಜಯನಿಗೆ ನುಡಿದರು— ಮಹಾರಾಜ, ಕರ್ಣ ಹತನಾದುದನ್ನು ಕೇಳಿದೊಡನೆ ಧೃತರಾಷ್ಟ್ರ ತನ್ನ ಶೋಕಕ್ಕೆ ಪಾರವನ್ನೇ ಕಾಣದಾದ. ದುರ್ಯೋಧನ ಇನ್ನು ಸತ್ತನೆಂದೇ ಭಾವಿಸಿ ಆತ ವಿಹ್ವಲನಾಗಿ ಮೂರ್ಛೆಗೊಂಡು ಸ್ಮೃತಿ ತಪ್ಪಿದ ಆನೆಯಂತೆ ನೆಲಕ್ಕೆ ಬಿದ್ದ.

ತಸ್ಮಿನ್ ನಿಪತಿತೇ ಭೂಮೌ ವಿಹ್ವಲೇ ರಾಜಸತ್ತಮೇ ।
ಆರ್ತನಾದೋ ಮಹಾನಾಸೀತ್ ಸ್ತ್ರೀಣಾಂ ಭರತಸತ್ತಮ ॥೩॥
ಸ ಶಬ್ದಃ ಪೃಥಿವೀಂ ಸರ್ವಾಂ ಪೂರಯಾಮಾಸ ಸರ್ವತಃ ॥೪॥

ಮಹಾರಾಜ ಧೃತರಾಷ್ಟ್ರನು ವಿಹ್ವಲನಾಗಿ ನೆಲದಲ್ಲಿ ಬಿದ್ದಾಗ ಅಂತಃಪುರದಲ್ಲಿ ಸ್ತ್ರೀಯರ ದೊಡ್ಡ ಆರ್ತನಾದ ಉಂಟಾಯಿತು. ಆ ಶಬ್ದವು ಇಡಿ ಭೂಮಿಯನ್ನು ಪೂರ್ತಿಯಾಗಿ ತುಂಬಿಕೊಂಡಿತು.

ಶೋಕಾರ್ಣವೇ ಮಹಾಘೋರೇ ತದಾ ಪುಪ್ಲುವಿರೇ ಸ್ತ್ರಿಯಃ ।
ನೇತ್ರಾಣಿ ವಾರಿಣಾऽऽಪೂರ್ಯ ಸರಿತಃ ಸಾಗರಂ ಯಥಾ ॥೫॥

ನದಿಗಳು ಸಾಗರವನ್ನು ನೀರಿನಿಂದ ತುಂಬುವಂತೆ ಸ್ತ್ರೀಯರು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಮಹಾಘೋರವಾದ ಶೋಕಸಾಗರದಲ್ಲಿ ಮುಳುಗಿದರು.

ರಾಜಾನಂ ಚ ಸಮಾಸಾದ್ಯ ಗಾಂಧಾರೀ ಭರತರ್ಷಭ ।
ನಿಃಸಂಜ್ಞಾ ನ್ಯಪತದ್ ಭೂಮೌ ಸರ್ವಾಣ್ಯಂತಃಪುರಾಣಿ ಚ ॥೬॥

ಜನಮೇಜಯನೆ, ಗಾಂಧಾರಿ ಹಾಗೂ ಸಮಸ್ತ ಅಂತಃಪುರಸ್ತ್ರೀಯರು ರಾಜನ ಬಳಿಗೆ ಬಂದು ಸ್ಮೃತಿ ತಪ್ಪಿ ನೆಲದಲ್ಲಿ ಒರಗಿದರು.

ತತಸ್ತಾಃ ಸಂಜಯೋ ರಾಜನ್ನಾಶ್ವಾಸಯತ ಯೋಷಿತಃ ।
ಮುಹ್ಯಮಾನಾಃ ಸುಬಹುಶೋ ಮುಂಚಂತೀರ್ವಾರಿ ನೇತ್ರಜಮ್ ॥೭॥

ರಾಜನೆ, ಆಗ ಸಂಜಯನು ಆ ಸ್ತ್ರೀಯರನ್ನು ಸಂತೈಸಿದ. ಅವರು ಮತ್ತೆಮತ್ತೆ ಮೂರ್ಛೆಹೋಗುತ್ತ ಬಹುವಾಗಿ ಕಣ್ಣೀರು ಸುರಿಸಿದರು.

ಆಶ್ವಾಸಿತಾಃ ಸ್ತ್ರಿಯಸ್ತಾಸ್ತು ವೇಪಮಾನಾಃ ಮುಹುರ್ಮುಹುಃ(ಪ್ರದೃಶ್ಯತ)
ಕದಲ್ಯ ಇವ ವಾತೇನ ಧೂಯಮಾನಾಃ ಸಮಂತತಃ ॥೮॥

ಎಷ್ಟು ಸಂತೈಸಿದರೂ ಆ ಸ್ತ್ರೀಯರು ಬಿರುಗಾಳಿಗೆ ಸಿಲುಕಿದ ಬಾಳೆಗಿಡಗಳಂತೆ ಥರಥರನೆ ನಡುಗಿದರು.

ರಾಜಾನಂ ವಿದುರಶ್ಚಾಪಿ ಪ್ರಜ್ಞಾಚಕ್ಷುರ್ನರಾಧಿಪಮ್ ।
ಆಶ್ವಾಸಯತ್ ಸುಶೀತೇನ ಸಿಂಚಂಸ್ತೋಯೇನ ಕೌರವಮ್ ॥೯॥

ವಿದುರನೂ ಕೂಡ ಅಂಧನಾದ ರಾಜಾ ಧೃತರಾಷ್ಟ್ರನಿಗೆ ಒಳ್ಳೆಯ ಶೀತಲ ಜಲ ಸೇಚನ ಮಾಡಿ ಸಂತೈಸಿದ.

ಸ ಲಬ್ಧ್ವಾ ಶನಕೈಃ ಸಂಜ್ಞಾಂ ತಾಶ್ಚ ದೃಷ್ಟ್ವಾ ಸ್ತ್ರಿಯೋ ನೃಪ ।
ಉನ್ಮತ್ತ ಇವ ರಾಜಾ ವೈ ತೂಷ್ಣೀಮಾಸೀದ್ ವಿಶಾಂಪತೇ ॥೧೦॥

ಧೃತರಾಷ್ಟ್ರನು ನಿಧಾನವಾಗಿ ಎಚ್ಚರಗೊಂಡು, ಸ್ತ್ರೀಯರು ದುಃಖಿತರಾಗಿರುವುದನ್ನು ಪ್ರಜ್ಞಾಚಕ್ಷುವಾದ್ದರಿಂದ ಮನಸ್ಸಿನಲ್ಲಿಯೇ ಕಂಡು, ಉನ್ಮತ್ತನಂತೆ ಸುಮ್ಮನೆ ಕುಳಿತ.

ಸಂಪ್ರಧ್ಯಾಯ ಚಿರಂ ರಾಜಾ ವಿನಿಶ್ವಸ್ಯ ಪುನಃ ಪುನಃ ।
ದೈವಂ ಚ ಗರ್ಹಯಾಮಾಸ ಬಹು ಮೇನೇ ಚ ಪಾಂಡವಾನ್ ॥೧೧॥

ರಾಜನು ಬಲು ಹೊತ್ತು ಆಲೋಚಿಸಿ ಪುನಃಪುನಃ ನಿಟ್ಟುಸಿರಿಟ್ಟು ದೈವವನ್ನು ನಿಂದಿಸಿದ, ಪಾಂಡವರನ್ನು ಪ್ರಶಂಸಿಸಿದ.

ನಿನಿಂದ ಚಾತ್ಮನೋ ಬುದ್ಧಿಂ ಶಕುನೇಃ ಸೌಬಲಸ್ಯ ಚ ।
ಧ್ಯಾತ್ವಾ ಚ ಸುಚಿರಂ ಕಾಲಂ ವೇಪಮಾನೋ ಮುಹುರ್ಮುಹುಃ ॥೧೨॥

ತನ್ನ ಬುದ್ಧಿಯನ್ನು ನಿಂದಿಸಿದ, ಪುನಃ ಪುನಃ ನಡುಗುತ್ತ ಬಹುಹೊತ್ತು ಆಲೋಚಿಸಿ ಶಕುನಿಯ ಬುದ್ಧಿಯನ್ನು ನಿಂದಿಸಿದ.

ಸಂಸ್ತಭ್ಯ ಚ ಮನೋ ಭೂಯೋ ರಾಜಾ ಧೈರ್ಯಸಮನ್ವಿತಃ ।
ಪುನರ್ಗಾವಲ್ಗಣಿಂ ಸೂತಂ ಪರ್ಯಪೃಚ್ಛತ್ ಸ ಸಂಜಯಮ್ ॥೧೩॥

ಮನಸ್ಸನ್ನು ಸ್ತಿಮಿತಗೊಳಿಸಿ ಧೈರ್ಯತಂದುಕೊಂಡು ತಿರುಗಿ ಸಂಜಯನನ್ನು ಕೇಳಿದ

ನ ತ್ವಯಾ ಕಥಿತಂ ವಾಕ್ಯಂ ಶ್ರುತಂ ಸಂಜಯ ತತ್ತ್ವತಃ ॥೧೪॥
ಕಚ್ಚಿದ್ ದುರ್ಯೋಧನಃ ಸೂತ ನ ಗತೋ ವೈ ಯಮಕ್ಷಯಮ್ ।
ಬ್ರೂಯಾ ನಿರಾಶಾಂ ಸತತಂ ಪುತ್ರಾಣಾಂ ಶಿವತಾಮುತ ॥೧೫॥
ಬ್ರೂಹಿ ಸಂಜಯ ತತ್ತ್ವೇನ ಪುನರುಕ್ತಾಂ ಕಥಾಮಿಮಾಮ್ ॥೧೬॥

ಧೃತರಾಷ್ಟ್ರನು ಸಂಜಯನಿಗೆ ಹೇಳುತ್ತಾನೆ— ಸಂಜಯ, ನೀನು ಹೇಳಿದ ಮಾತನ್ನು ನಾನು ಸರಿಯಾಗಿ ಗಮನಿಸಲಿಲ್ಲ. ದುರ್ಯೋಧನನು ಯಮಸದನಕ್ಕೆ

ಹೋಗಲಿಲ್ಲ ತಾನೆ? ಹೇಳು, ನನ್ನ ಮಕ್ಕಳಿಗೆ ಸತತ ಕೇವಲ ನಿರಾಸೆಯೆ? ಅಥವಾ ಶುಭವೂ ಏನಾದರೂ ಉಂಟೆ? ಹೇಳು ಸಂಜಯ, ನೀನು ಹೇಳಿದ ವೃತ್ತಾಂತವನ್ನೆ ತಿರುಗಿ ಸರಿಯಾಗಿ ಹೇಳು

ವೈಶಂಪಾಯನಃ

ಏವಮುಕ್ತೋಽಬ್ರವೀತ್ ಸೂತೋ ರಾಜಾನಂ ಜನಮೇಜಯ ॥೧೭॥

ಹತೋ ವೈಕರ್ತನೋ ರಾಜನ್ ಸಹ ಪುತ್ರೈರ್ಮಹಾರಥಃ ।
ಸೋದರ್ಯೈಶ್ಚ ಮಹೇಷ್ವಾಸೈಃ ಸೂತಪುತ್ರೈಸ್ತನುತ್ಯಜೈಃ ॥೧೮॥

ವೈಶಂಪಾಯನರು ಹೇಳಿದರು— ಜನಮೇಜಯ, ಧೃತರಾಷ್ಟ್ರನು ಹೀಗೆ ಹೇಳಿದಾಗ ಸಂಜಯನು ಹೇಳತೊಡಗಿದನು: 'ರಾಜನೆ, ಮಹಾರಥನಾದ ಕರ್ಣನು ತನ್ನ ಮಕ್ಕಳೊಡನೆ ಮತ್ತು ಮಹಾಧನುರ್ಧಾರಿಗಳಾದ ಸೋದರರೊಡನೆ ಹತನಾಗಿದ್ದಾನೆ.

ದುಃಶಾಸನಶ್ಚ ನಿಹತಃ ಪಾಂಡವೇನ ಮಹಾತ್ಮನಾ ।
ಪೀತಂ ಚ ರುಧಿರಂ ಕೋಪಾದ್ ಭೀಮಸೇನೇನ ಸಂಯುಗೇ ॥೧೯॥

ಮಹಾತ್ಮನಾದ ಭೀಮಸೇನನಿಂದ ದುಃಶಾಸನನೂ ಯುದ್ಧದಲ್ಲಿ ಹತನಾಗಿದ್ದಾನೆ, ಅವನ ರಕ್ತವನ್ನು ಕೋಪದಿಂದ ಭೀಮಸೇನ ಕುಡಿದಿದ್ದಾನೆ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಚತುರ್ಥೋಽಧ್ಯಾಯಃ ॥೪॥

❖

ಐದನೆಯ ಅಧ್ಯಾಯ

ಕುರುಸೈನ್ಯದಲ್ಲಿ ಮಡಿದವರು

ವೈಶಂಪಾಯನಃ

ಏತಚ್ಛ್ರುತ್ವಾ ಮಹಾರಾಜ ಧೃತರಾಷ್ಟ್ರೋಽಂಬಿಕಾಸುತಃ ।
ಅಬ್ರವೀತ್ ಸಂಜಯಂ ಸೂತಂ ಶೋಕೇನಾಕುಲಚೇತನಃ ॥೧॥

ವೈಶಂಪಾಯನರು ಹೇಳಿದರು— ಮಹಾರಾಜ ಜನಮೇಜಯ, ಸಂಜಯನಾಡಿದ ಮಾತನ್ನು ಕೇಳಿ ಧೃತರಾಷ್ಟ್ರನು ಶೋಕದಿಂದ ಆಕುಲಚಿತ್ತನಾಗಿ ಹೇಳಿದ.

ದುಷ್ಪ್ರಣೀತೇನ ಮೇ ತಾತ ಸುತಸ್ಯಾದೀರ್ಘದರ್ಶಿನಃ ।
ಹತಂ ವೈಕರ್ತನಂ ಶ್ರುತ್ವಾ ಶೋಕೋ ಮರ್ಮಾಣಿ ಕೃಂತತಿ ॥೨॥

ಸಂಜಯ, ದೂರದೃಷ್ಟಿರಹಿತನಾದ ನನ್ನ ಮಗನ ತಪ್ಪಾದ ರಾಜನೀತಿಯ ಫಲವಾಗಿ ಕರ್ಣನು ಹತನಾದುದನ್ನು ಕೇಳಿ ಶೋಕಿಸುತ್ತಿದ್ದೇನೆ. ಈ ಶೋಕ ನನಗೆ ಮರ್ಮಭೇದಕವಾಗಿದೆ.

ತಸ್ಯ ಮೇ ಸಂಶಯಂ ಛಿಂಧಿ ಶೋಕಪಾರಂ ತಿತೀರ್ಷತಃ ।
ಕುರೂಣಾಂ ಸೃಂಜಯಾನಾಂ ಚ ಕೇ ನು ಜೀವಂತಿ ಕೇ ಹತಾಃ ॥೩॥

ಕುರುಗಳಲ್ಲಿ ಮತ್ತು ಸೃಂಜಯರಲ್ಲಿ ಯಾರು ಬದುಕಿ ಉಳಿದಿದ್ದಾರೆ, ಯಾರು ಸತ್ತಿದ್ದಾರೆ, ನನ್ನ ಈ ಸಂಶಯವನ್ನು ಹೋಗಲಾಡಿಸು. ನಾನು ಶೋಕದ ಪಾರವನ್ನು ಕಾಣಬಯಸಿದ್ದೇನೆ.

ಸಂಜಯಃ

ಹತಃ ಶಾಂತನವೋ ರಾಜನ್ ದುರಾಧರ್ಷಃ ಪ್ರತಾಪವಾನ್ ।
ಹತ್ವಾ ಪಾಂಡವಯೋಧಾನಾಮರ್ಬುದಂ ದಶಭಿರ್ದಿನೈಃ ॥೪॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ರಾಜನೆ, ಪ್ರತಾಪಶಾಲಿ, ದುರ್ಜಯನಾದ ಭೀಷ್ಮನು ಪಾಂಡವರ ಕಡೆಯಲ್ಲಿ ಹತ್ತುಕೋಟಿ ಯೋಧರನ್ನು ಹತ್ತುದಿನಗಳಲ್ಲಿ ಸಂಹರಿಸಿ ಹತನಾದ.

ತಥಾ ದ್ರೋಣೋ ಮಹೇಷ್ವಾಸಃ ಪಾಂಚಾಲಾನಾಂ ಮಹಾರಥಾನ್ ।
ನಿಹತ್ಯ ಯುಧಿ ದುರ್ಧರ್ಷಃ ಪಶ್ಚಾದ್ ರುಗ್ಣರಥೋ ಹತಃ ॥೫॥

ಹಾಗೇ ದ್ರೋಣನೂ ಬಿಲ್ಲಾರ, ಚಿನ್ನದ ರಥವೇರಿ ದುರ್ಜಯನಾಗಿ, ಪಾಂಚಾಲರ ಮಹಾರಥರನ್ನು ಯುದ್ಧದಲ್ಲಿ ಸಂಹರಿಸಿಯೇ ಬಳಿಕ ಹತನಾದ.

ಹತಶಿಷ್ಟಸ್ಯ ಭೀಷ್ಮೇಣ ದ್ರೋಣೇನ ಚ ಮಹಾತ್ಮನಾ ।
ಅರ್ಧಂ ನಿಹತ್ಯ ಸೈನ್ಯಸ್ಯ ಕರ್ಣೋ ವೈಕರ್ತನೋ ಹತಃ ॥೬॥

ಮಹಾತ್ಮ ಭೀಷ್ಮ ಮಹಾತ್ಮ ದ್ರೋಣರಿಂದ ಹತರಾಗದೆ ಉಳಿದ ಸೈನ್ಯದಲ್ಲಿ ಅರ್ಧಾಂಶವನ್ನು ಸಂಹರಿಸಿ ವೈಕರ್ತನ ಕರ್ಣನೂ ಹತನಾದ.

ವಿವಿಂಶತಿರ್ಮಹಾರಾಜ ರಾಜಪುತ್ರೋ ಮಹಾರಥಃ ।
ಆನರ್ತಯೋಧಾನ್ ಶತಶೋ ನಿಹತ್ಯ ನಿಹತೋ ಯುಧಿ ॥೭॥

ಮಹಾರಾಜ, ಮಹಾರಥನಾದ ರಾಜಕುಮಾರ ವಿವಿಂಶತಿಯು ರಣದಲ್ಲಿ ನೂರಾರು ಆನರ್ತದೇಶದ ಯೋಧರನ್ನು ಕೊಂದು ಹತನಾದ.

ದುರ್ಯೋಧನನ ತಮ್ಮನಾದ ಈತನನ್ನು (ವಿವಿಂಶತಿ) ಭೀಮ ಕೊಂದ.

ತಥಾ ಪುತ್ರೋ ವಿಕರ್ಣಸ್ತೇ ಕ್ಷತ್ರಧರ್ಮಮನುಸ್ಮರನ್ ।
ಕ್ಷೀಣಬಾಣೋ ಹತಃ ಶೂರಃ ಸ್ಥಿತೋ ಹ್ಯಭಿಮುಖಃ ಪರೈಃ ॥೮॥

ಹಾಗೆ ನಿನ್ನ ಇನ್ನೊಬ್ಬ ಪುತ್ರ ವಿಕರ್ಣನೂ ಭೀಮನಿಂದ ಹತನಾದ. ಆತ ಶೂರ, ಕ್ಷಾತ್ರಧರ್ಮವನ್ನು ನೆನೆದು, ತನ್ನ ಬಾಣಗಳೆಲ್ಲ ಬರಿದಾದರೂ, ಶತ್ರುಗಳ ಮುಂದೆ ನಿಂತ.

ಘೋರರೂಪಾನತಿಕ್ಲೇಶಾನ್ ದುರ್ಯೋಧನಕೃತಾನ್ ಬಹೂನ್ ।
ಪ್ರತಿಜ್ಞಾಂ ಸ್ಮರತಾ ತೇನ ಭೀಮಸೇನೇನ ಪಾತಿತಃ ॥೯॥

ದುರ್ಯೋಧನನು ಉಂಟುಮಾಡಿದ್ದ ಬಹಳ ಘೋರವಾದ ಮಹಾಕ್ಲೇಶಗಳನ್ನೂ ಅದಕ್ಕೆ ತಾನು ಗೈದಿದ್ದ ಪ್ರತಿಜ್ಞೆಯನ್ನೂ ನೆನೆದು ಭೀಮಸೇನ ಆ ವಿಕರ್ಣನನ್ನು ಸಂಹರಿಸಿದ.

ವಿಂದಾನುವಿಂದಾವಾವಂತ್ಯೌ ರಾಜಪುತ್ರೌ ಮಹಾಬಲೌ ।
ಕೃತ್ವಾ ಸುದುಷ್ಕರಂ ಕರ್ಮ ಗತೌ ವೈವಸ್ವತಕ್ಷಯಮ್ ॥೧೦॥

ಮಹಾಬಲಿಷ್ಠರಾದ ಅವಂತೀದೇಶದ ರಾಜಕುಮಾರರು ವಿಂದ-ಅನುವಿಂದರು ಬಲು ದುಷ್ಕರವಾದ ಸಾಹಸಕರ್ಮ ಮಾಡಿಯೂ ಅರ್ಜುನನಿಂದ ಹತರಾಗಿ ಯಮಲೋಕವನ್ನು ಸೇರಿದರು.

ಸಿಂಧುರಾಷ್ಟ್ರಮುಖಾನೀಹ ದಶ ರಾಷ್ಟ್ರಾಣಿ ಯಸ್ಯ ವೈ ।
ವಶೇ ತಿಷ್ಠಂತಿ ವೀರಸ್ಯ ಸ್ಥಿತಸ್ಯ ತವ ಶಾಸನೇ ॥೧೧॥

ಮಹಾವೀರನಾದ ಜಯದ್ರಥ ಸಿಂಧು ಸೌವೀರಾದಿ ಹತ್ತು ರಾಷ್ಟ್ರಗಳನ್ನು ಆಳುತ್ತಿದ್ದವನು. ನಿನ್ನ ಆಜ್ಞೆಯನ್ನು ಪಾಲಿಸುತ್ತಿದ್ದವನು.

ಅಕ್ಷೌಹಿಣೀರ್ದಶೈಕಾಂ ಚ ವಿನಿರ್ಜಿತ್ಯ ಶಿತೈಃ ಶರೈಃ ।
ಸೋಽರ್ಜುನೇನ ಹತೋ ರಾಜನ್ ಮಹಾವೀರ್ಯೋ ಜಯದ್ರಥಃ ॥

ಹನ್ನೊಂದು ಅಕ್ಷೌಹಿಣಿ ಸೈನ್ಯವನ್ನು ಹರಿತವಾದ ಬಾಣಗಳಿಂದ ಪರಾಜಯಗೊಳಿಸುತ್ತ ಅರ್ಜುನ ಆ ಜಯದ್ರಥನನ್ನು ಸಂಹರಿಸಿದ.

ತಥಾ ದುರ್ಯೋಧನಸುತಃ ತರಸ್ವೀ ಯುದ್ಧದುರ್ಮದಃ ।
ವರ್ತಮಾನಃ ಪಿತುಃ ಶಾಸ್ತ್ರೇ ಸೌಭದ್ರೇಣ ನಿಪಾತಿತಃ ॥೧೩॥

ದುರ್ಯೋಧನನ ಪುತ್ರ ಲಕ್ಷಣನು ವೇಗಶಾಲಿ, ಯುದ್ಧದಲ್ಲಿ ಮದವೇರುವವನು, ತಂದೆಯ ಆಜ್ಞೆಯನ್ನು ಪಾಲಿಸುವವನು. ಅಭಿಮನ್ಯುವಿನಿಂದ ಹತನಾದ.

ತಥಾ ದೌಃಶಾಸನಿರ್ವೀರೋ ಬಾಹುಶಾಲೀ ರಣೋತ್ಕಟಃ ।
ದ್ರೌಪದೇಯೇನ ವಿಕ್ರಮ್ಯ ಗಮಿತೋ ಯಮಸಾದನಮ್ ॥೧೪॥

ಹಾಗೇ ವೀರ, ಬಾಹುಶಾಲಿ, ರಣಶೂರನಾದ ದುಃಶಾಸನನ ಪುತ್ರನೂ ದ್ರೌಪದೀಪುತ್ರನೊಂದಿಗೆ ಹೋರಾಡಿ ಹತನಾದ.

ಕಿರಾತಾನಾಮಧಿಪತಿಃ ಸಾಗರಾನೂಪವಾಸಿನಾಮ್ ।
ದೇವರಾಜಸ್ಯ ಧರ್ಮಾತ್ಮಾ ಪ್ರಿಯೋ ಬಹುಮತಃ ಸಖಾ ॥೧೫॥

ಭಗದತ್ತೋ ಮಹೀಪಾಲಃ ಕ್ಷಾತ್ರಧರ್ಮರತಃ ಸದಾ ।
ಧನಂಜಯೇನ ವಿಕ್ರಮ್ಯ ಗಮಿತೋ ಯಮಸಾದನಮ್ ॥೧೬॥

ಸಮುದ್ರತೀರವಾಸಿ ಕಿರಾತರ ಅಧಿಪತಿ ಭಗದತ್ತನು ಧರ್ಮಾತ್ಮ, ದೇವರಾಜ ಇಂದ್ರನಿಂದಲೂ ಸಮ್ಮಾನಿತನಾಗಿದ್ದು ಅವನಿಗೆ ಅತಿಪ್ರಿಯನಾಗಿದ್ದ, ಕ್ಷಾತ್ರಧರ್ಮ ನಿರತನಾಗಿದ್ದ, ಅವನೂ ಅರ್ಜುನನೊಂದಿಗೆ ಹೋರಾಡಿ ಮಡಿದ.

ತಥಾ ಕೌರವದಾಯಾದಃ ಸೌಮದತ್ತಿರ್ಮಹಾಯಶಾಃ ।
ಹತೋ ಭೂರಿಶ್ರವಾ ರಾಜನ್ ಶೂರಃ ಸಾತ್ಯಕಿನಾ ಯುಧಿ ॥೧೭॥

ಹಾಗೇ ಕೌರವರ ಜ್ಞಾತಿ, ಸೋಮದತ್ತನ ಪುತ್ರ ಭೂರಿಶ್ರವನು ಮಹಾಕೀರ್ತಿ ಶಾಲಿ, ಶೂರ. ರಾಜನೆ, ಅವನೂ ಯುದ್ಧದಲ್ಲಿ ಸಾತ್ಯಕಿಯಿಂದ ಹತನಾದ.

ಶ್ರುತಾಯುರಪಿ ಚಾಂಬಷ್ಠಃ ಕ್ಷತ್ರಿಯಾಣಾಂ ಧುರಂಧರಃ ।
ಚರನ್ನಭೀತವತ್ ಸಂಖೇ ನಿಹತಃ ಸವ್ಯಸಾಚಿನಾ ॥೧೮॥

ಅಂಬಷ್ಠದೇಶದ ರಾಜ ಶ್ರುತಾಯುವು ಕ್ಷತ್ರಿಯಧರ್ಮದಲ್ಲಿ ಧುರಂಧರ, ರಣರಂಗದಲ್ಲಿ ನಿರ್ಭಯವಾಗಿ ಹೋರಾಡಿ ಅರ್ಜುನನಿಂದ ಹತನಾದ.

ತವ ಪುತ್ರಃ ಸದಾऽಮರ್ಷೀ ಕೃತಾಸ್ತ್ರೋ ಯುದ್ಧದುರ್ಮದಃ ।
ದುಃಶಾಸನೋ ಮಹಾರಾಜ ಭೀಮಸೇನೇನ ಪಾತಿತಃ ॥೧೯॥

ನಿನ್ನ ಪುತ್ರ ದುಃಶಾಸನ, ಸದಾ ಕೋಪಿಷ್ಠ, ಅಸ್ತ್ರವಿದ್ಯಾನಿಪುಣ, ಯುದ್ಧದಲ್ಲಿ ಮದವೇರಿ ಹೋರಾಡುವವನು. ಮಹಾರಾಜನೆ, ಅವನೂ ಭೀಮನಿಂದ ಹತನಾದ.

ಯಸ್ಯ ರಾಜನ್ ಗಜಾನೀಕಂ ಬಹುಸಾಹಸ್ರಮುತ್ತಮಮ್ ।
ಸುದಕ್ಷಿಣಃ ಸ ಸಂಗ್ರಾಮೇ ನಿಹತಃ ಸವ್ಯಸಾಚಿನಾ ॥೨೦॥

ರಾಜನೆ, ಅನೇಕ ಸಾವಿರ ಗಜಸೇನೆಗೆ ಅಧಿಪತಿಯಾಗಿದ್ದ ಸುದಕ್ಷಿಣನೂ ಯುದ್ಧದಲ್ಲಿ ಅರ್ಜುನನಿಂದ ಹತನಾದ.

ಕೋಸಲಾನಾಮಧಿಪತಿರ್ಹತ್ವಾ ಬಹುಶತಾನ್ ಪರಾನ್ ।
ಸೌಭದ್ರೇಣೇಹ ವಿಕ್ರಮ್ಯ ಗಮಿತೋ ಯಮಸಾದನಮ್ ॥೨೧॥

ಕೋಸಲಾಧಿಪತಿ ಬೃಹದ್ಬಲ ಶಕುನಿಯ ಸೋದರ. ನೂರಾರು ಶತ್ರು ಯೋಧರನ್ನು ಕೊಂದು ಅಭಿಮನ್ಯುವಿನಿಂದ ಹತನಾದ.

ಬಹುಶೋ ಯೋಧಯಿತ್ವಾ ತು ಭೀಮಸೇನಂ ಮಹಾರಥಃ ।
ಚಿತ್ರಸೇನಸ್ತವ ಸುತೋ ಭೀಮಸೇನೇನ ಪಾತಿತಃ ॥೨೨॥

ನಿನ್ನ ಮಗ ಚಿತ್ರಸೇನ ಮಹಾರಥ, ಭೀಮಸೇನನೊಂದಿಗೆ ಬಹಳ ಹೋರಾಡಿ ಅವನಿಂದಲೆ ಹತನಾದ.

ಮದ್ರರಾಜಾತ್ಮಜಃ ಶೂರಃ ಪರೇಷಾಂ ಭಯವರ್ಧನಃ ।
ಅಸಿಚರ್ಮಧರಃ ಶ್ರೀಮಾನ್ ಸೌಭದ್ರೇಣ ನಿಪಾತಿತಃ ॥೨೩॥

ಮದ್ರರಾಜಶಲ್ಯನ ಪುತ್ರ, ಶತ್ರುಗಳಿಗೆ ಭಯವನ್ನು ಹೆಚ್ಚಿಸುವವನು, ಖಡ್ಗಚರ್ಮ ಧರಿಸುವವನು ಶ್ರೀಮಂತ, ಅವನೂ ಅಭಿಮನ್ಯುವಿನಿಂದ ಹತನಾದ.

ಸಮಃ ಕರ್ಣೇನ ಸಮರೇ ಸ ಕರ್ಣಸ್ಯೈವ ಪಶ್ಯತಃ ।
ವೃಷಸೇನೋ ಮಹಾತೇಜಾಃ ಶೀಘ್ರಾಸ್ತ್ರೋ ದೃಢವಿಕ್ರಮಃ ॥೨೪॥

ಅಭಿಮನ್ಯೋರ್ವಧಂ ಸ್ಮೃತ್ವಾ ಪ್ರತಿಜ್ಞಾಮಪಿ ಚಾತ್ಮನಃ ।
ಧನಂಜಯೇನ ವಿಕ್ರಮ್ಯ ಗಮಿತೋ ಯಮಸಾದನಮ್ ॥೨೫॥

ಯುದ್ಧದಲ್ಲಿ ಕರ್ಣನಿಗೇ ಸಮಾನ ಕರ್ಣಪುತ್ರ, ವೃಷಸೇನ. ಮಹಾ ಪರಾಕ್ರಮಿ. ಶೀಘ್ರವಾಗಿ ಅಸ್ತ್ರವನ್ನೆಸೆಯುವವನು. ದೃಢ ಪರಾಕ್ರಮಿ. ಅರ್ಜುನನೊಂದಿಗೆ ಹೋರಾಡಿದ. ಕರ್ಣನು ಮಾಡಿದ ಅಭಿಮನ್ಯು ವಧೆಯನ್ನೂ ತಾನು ಮಾಡಿದ ಪ್ರತಿಜ್ಞೆಯನ್ನೂ ನೆನೆದು ಅರ್ಜುನನು ಕರ್ಣ ನೋಡುತ್ತಿದ್ದಂತೆಯೇ ಆ ವೃಷಸೇನನನ್ನು ವಧಿಸಿದ.

ನಿತ್ಯಪ್ರಯುಕ್ತವೈರೋ ಯಃ ಪಾಂಡವೈಃ ಪೃಥಿವೀಪತಿಃ ।
ವಿಶ್ರಾವ್ಯ ವೈರಂ ಪಾರ್ಥೇನ ಶ್ರುತಾಯುಃ ಸ ನಿಪಾತಿತಃ ॥೨೬॥

ಪಾಂಡವರೊಂದಿಗೆ ಸದಾ ವೈರಮಾಡುತ್ತಿದ್ದ ಶ್ರುತಾಯುರಾಜ ವೈರವನ್ನು ಹೇಳಿಕೊಳ್ಳುತ್ತ ಪಾರ್ಥನಿಂದ ಹತನಾದ.

ಶಲ್ಯಪುತ್ರಸ್ತು ವಿಕ್ರಾಂತಃ ಸಹದೇವೇನ ಮಾರಿಷ ।
ಹತೋ ರುಗ್ಮರಥೋ ರಾಜನ್ ಸ್ಯಾಲೋ ಮಾತುಲಜೋ ಯುಧಿ ॥೨೭॥

ಶಲ್ಯಪುತ್ರ ರುಕ್ಮರಥನು ಸಹದೇವನಿಗೆ ಸೋದರಮಾವನ ಮಗನಾಗಿದ್ದು ಮೈದುನನೂ ಹೌದು. ಪೂಜ್ಯನಾದ ರಾಜನೆ, ಅವನು ಸಹದೇವನಿಂದ ಯುದ್ಧದಲ್ಲಿ ಹತನಾಗಿದ್ದಾನೆ.

ರಾಜಾ ಭಾಗೀರಥೋ ವೃದ್ಧೋ ಬೃಹತ್ಕ್ಷತ್ರಶ್ಚ ಕೇಕಯಃ ।
ಪರಾಕ್ರಾಂತೌ ಸುವಿಕ್ರಾಂತೌ ನಿಹತೌ ವೀರ್ಯವತ್ತರೌ ॥೨೮॥

ಭಗೀರಥವಂಶದ ಬೃಹತ್ಕ್ಷತ್ರರಾಜ ಮತ್ತು ಕೇಕಯ ಬೃಹತ್ಕ್ಷತ್ರರಾಜರು ಇಬ್ಬರೂ ಯುದ್ಧದಲ್ಲಿ ಮಹಾವಿಕ್ರಮ ವೀರ್ಯವಂತರು. ಪರಾಕ್ರಮಶಾಲಿಗಳು, ವೃದ್ಧರು, ಧೃಷ್ಟದ್ಯುಮ್ನನಿಂದ ಹತರಾದರು.

ಭಗದತ್ತಸುತೋ ರಾಜನ್ ಕೃತಪ್ರಜ್ಞೋ ಮಹಾಬಲಃ ।
ಶ್ಯೇನವಚ್ಚರತಾ ಸಂಖೇ ನಕುಲೇನ ನಿಪಾತಿತಃ ॥೨೯॥

ರಾಜನೆ, ಪ್ರಜ್ಞಾವಂತನೂ, ಮಹಾಬಲಿಯೂ ಆದ ಭಗದತ್ತನ ಪುತ್ರನು ರಣರಂಗದಲ್ಲಿ ಹದ್ದಿನಂತೆ ವೇಗವಾಗಿ ಸಂಚರಿಸುತ್ತಿರುವ ನಕುಲನಿಂದ ಹತನಾದ.

ಪಿತಾಮಹಸ್ತವ ತಥಾ ಬಾಹ್ಲೀಕಃ ಸಹ ಬಾಹ್ಲಿಕೈಃ ।
ನಿಹತೋ ಭೀಮಸೇನೇನ ಮಹಾಬಲಪರಾಕ್ರಮಃ ॥೩೦॥

ಹಾಗೇ ನಿನ್ನ ತಾತನಾದ ಮಹಾಬಲಪರಾಕ್ರಮಿ ಬಾಹ್ಲೀಕರಾಜನೂ ಬಾಹ್ಲಿಕ ಯೋಧರೊಂದಿಗೆ ಭೀಮಸೇನನಿಂದ ಹತನಾಗಿದ್ದಾನೆ.

ಜಯತ್ಸೇನಸ್ತಥಾ ರಾಜನ್ ಜಾರಾಸಂಧಿರ್ಮಹಾಬಲಃ ।
ಮಾಗಧೋ ನಿಹತಃ ಸಂಖೇ ಸೌಭದ್ರೇಣ ಮಹಾತ್ಮನಾ ॥೩೧॥

ರಾಜನೆ, ಜರಾಸಂಧನ ಪುತ್ರ, ಮಹಾಬಲಿಯಾದ ಮಗಧರಾಜ, ಜಯತ್ಸೇನನು ಯುದ್ಧದಲ್ಲಿ ಮಹಾತ್ಮನಾದ ಅಭಿಮನ್ಯುವಿನಿಂದ ಹತನಾದ.

ನಿರ್ಣಯ(26.286)ದ ಪ್ರಕಾರ ಭೀಮನಿಂದ ಜಯತ್ಸೇನ ಹತನಾದ.

ಅದರಿಂದ ಇದನ್ನು ಪುರುಷವ್ಯತ್ಯಾಸವೆಂಬ ಒಂದು ಪುರಾಣಶೈಲಿ ಎಂದು ನಾವು ಗ್ರಹಿಸಬೇಕು.

ಅಸಿಚರ್ಮಧರಃ ಶೂರಃ ಪರೇಷಾಂ ಭಯವರ್ಧನಃ ।
ಅಗ್ನಿಚಕ್ರವದಾಘೂರ್ಣನ್ ಸೌಮದತ್ತಿರ್ನಿಪಾತಿತಃ ॥೩೨॥

ಸೋಮದತ್ತನ ಪುತ್ರ ಭೂರಿಶ್ರವನು ಶೂರ, ಶತ್ರುಗಳಿಗೆ ಭಯವನ್ನು ಹೆಚ್ಚಿಸುವವನು, ಅಗ್ನಿಚಕ್ರದಂತೆ ರಣರಂಗದಲ್ಲಿ ಸಂಚರಿಸುವವನು. ಅವನನ್ನು ಸಾತ್ಯಕಿ ಸಂಹರಿಸಿದ.

ಪುತ್ರಸ್ತೇ ದುರ್ಮುಖೋ ರಾಜನ್ ದುಃಸಹಶ್ಚ ಮಹಾರಥಃ ।
ಗದಯಾ ಭೀಮಸೇನೇನ ನಿಹತೌ ಶೂರಮಾನಿನೌ ॥೩೩॥

ರಾಜನೆ, ನಿನ್ನ ಪುತ್ರನಾದ ಮಹಾರಥನಾದ ದುರ್ಮುಖನೂ ದುಃಸಹನೂ ತಾವು ಶೂರರೆಂದು ಅಭಿಮಾನಪಡುತ್ತಿದ್ದವರು, ಭೀಮಸೇನನ ಗದೆಯಿಂದ ಹತರಾದರು.

ದುರ್ಮರ್ಷಣೋ ದುರ್ವಿಷಹೋ ದುರ್ಜಯಶ್ಚ ಮಹಾರಥಃ ।
ಕೃತ್ವಾ ಸುದುಷ್ಕರಂ ಕರ್ಮ ಗತಾ ವೈವಸ್ವತಕ್ಷಯಮ್ ॥೩೪॥

ದುರ್ಮರ್ಷಣ ದುರ್ವಿಷಹ ದುರ್ಜಯರು ನಿನ್ನ ಪುತ್ರರು ಮಹಾರಥರು, ರಣರಂಗದಲ್ಲಿ ಮಹಾಸಾಹಸ ಕರ್ಮಮಾಡಿ ಭೀಮನಿಂದ ಹತರಾದರು.

ಉಭೌ ಕಲಿಂಗವೃಷಭೌ ಭ್ರಾತರೌ ಯುದ್ಧದುರ್ಮದೌ ।
ಕೃತ್ವಾ ಸುದುಷ್ಕರಂ ಕರ್ಮ ಗತೌ ವೈವಸ್ವತಕ್ಷಯಮ್ ॥೩೫॥

ಕಲಿಂಗ–ವೃಷಭರು ಇಬ್ಬರು ಸೋದರರು, ಯುದ್ಧದ ಮದ ಉಳ್ಳವರು, ಯುದ್ಧದಲ್ಲಿ ಸಾಹಸ ಕರ್ಮಮಾಡಿ ಹತರಾದರು.

ಸಚಿವೋ ವೃಷಪರ್ವಾ ತೇ ತಥಾ ಪರಮವೀರ್ಯವಾನ್ ।
ಭೀಮಸೇನೇನ ವಿಕ್ರಮ್ಯ ಗಮಿತೋ ಯಮಸಾದನಮ್ ॥೩೬॥

ನಿನ್ನ ಮಂತ್ರಿಯಾದ ವೃಷಪರ್ವನೂ ಮಹಾವೀರ, ಭೀಮನೊಂದಿಗೆ ಹೋರಾಡಿ ಯಮಲೋಕಕ್ಕೆ ಹೋದ.

ತಥೈವ ಪೌರವೋ ರಾಜಾ ನಾಗಾಯುತಬಲೋ ಮಹಾನ್ ।
ಸಗಣಃ ಪಾಂಡುಪುತ್ರೇಣ ನಿಹತಃ ಸವ್ಯಸಾಚಿನಾ ॥೩೭॥

ಹತ್ತುಸಾವಿರ ಆನೆಯ ಬಲ ಉಳ್ಳ ಪೌರವ ಮಹಾರಾಜನೂ ಪರಿವಾರ ಸಮೇತನಾಗಿ ಪಾಂಡುಪುತ್ರ ಸವ್ಯಸಾಚಿಯಿಂದ ಹತನಾದ.

ವಸಾತಯೋ ಮಹಾರಾಜ ದ್ವಿಸಾಹಸ್ರಾಃ ಪ್ರಹಾರಿಣಃ ।
ಶೂರಸೇನಾಶ್ಚ ವಿಕ್ರಾಂತಾಃ ಸರ್ವೇ ಯುಧಿ ನಿಪಾತಿತಾಃ ॥೩೮॥

ಮಹಾರಾಜ, ಪರಾಕ್ರಮಿಯೋಧರಾದ ಎರಡುಸಾವಿರ ಮಂದಿ ವಸಾತಿಗಳೂ ಶೂರಸೇನರೂ ಎಲ್ಲರೂ ಯುದ್ಧದಲ್ಲಿ ಅರ್ಜುನನಿಂದ ಹತರಾದರು.

ಆಭೀರಕಾಃ ಕವಚಿನಃ ಪ್ರಹರಂತೋ ರಣೋತ್ಕಟಾಃ ।
ಶಿಬಯಶ್ಚ ರಥೋದಾರಾಃ ಕಲಿಂಗಸಹಿತಾ ಹತಾಃ ॥೩೯॥

ಆಭೀರಕರು, ಶಿಬಿಗಳು, ಕಲಿಂಗರು ಎಲ್ಲರೂ ರಣಧೀರರು, ರಥಿಕರು, ಕವಚಗಳನ್ನು ಧರಿಸಿ ಹೋರಾಡುವವರು. ಎಲ್ಲರೂ ಅರ್ಜುನನಿಂದ ಹತರಾದರು.

ಗೋಕುಲೇ ನಿತ್ಯಸಂವೃದ್ಧಾ ಯುದ್ಧೇ ಪರಮಕೋವಿದಾಃ ।
ಗೋಪಾಲಾಃ ಕೃತವೀರ್ಯಾಶ್ಚ ನಿಹತಾಃ ಸವ್ಯಸಾಚಿನಾ ॥೪೦॥

ಗೋಕುಲದಲ್ಲಿಯೇ ಸದಾ ಬೆಳೆದವರು, ಯುದ್ಧದಲ್ಲಿ ಒಳ್ಳೆಯ ನಿಪುಣರು, ಮಹಾ ಪರಾಕ್ರಮಿಗಳು, ಇಂಥ ಗೋಪಾಲಯೋಧರು ಅರ್ಜುನನಿಂದ ಹತರಾದರು.

ಶ್ರೇಣಯೋ ಬಹುಸಾಹಸ್ರಾಃ ಸಂಶಪ್ತಕಗಣಾಶ್ಚ ಯೇ ।
ತೇ ಸರ್ವೇ ಪಾರ್ಥಮಾಸಾದ್ಯ ಗತಾ ವೈವಸ್ವತಕ್ಷಯಮ್ ॥೪೧॥

ಸಂಶಪ್ತಕಗಣದವರು ಬಹುಸಹಸ್ರ ಸಂಖ್ಯೆಯಲ್ಲಿದ್ದು ರಾಜನಿಗೆ 'ಶ್ರೇಣಿ' ಗಳಾಗಿದ್ದರು, ಅಂದರೆ ರಾಜನಿಗೆ ಸಮಾನವಯಸ್ಕರಾದ ಅಂಗರಕ್ಷಕರಾಗಿದ್ದರು. ಅವರೆಲ್ಲರೂ ಅರ್ಜುನನ ರಥಕ್ಕೆ ಮುತ್ತಿಗೆ ಹಾಕಿ ಅವನಿಂದ ಹತರಾದರು.

ಶ್ಯಾಲೌ ತವ ಮಹಾರಾಜ ರಾಜಾನೌ ವೃಷಕಾಚಲೌ ।
ತ್ವದರ್ಥಂ ತೌ ಪರಾಕ್ರಾಂತೌ ನಿಹತೌ ಸವ್ಯಸಾಚಿನಾ ॥೪೨॥

ಮಹಾರಾಜ, ಶಕುನಿಯ ಸೋದರರಾದ ವೃಷಕ ಮತ್ತು ಅಚಲರಾಜರು ನಿನಗೆ ಮೈದುನರು, ನಿನಗಾಗಿ ಯುದ್ಧದಲ್ಲಿ ಅತಿಯಾದ ಪರಾಕ್ರಮವನ್ನು ತೋರಿ ಅರ್ಜುನನಿಂದ ಹತರಾದರು.

ಉಗ್ರಕರ್ಮಾ ಮಹೇಷ್ವಾಸೋ ನಾಮತಃ ಕರ್ಮತಸ್ತಥಾ ।
ಸಾಲ್ವರಾಜೋ ಮಹಾರಾಜ ಭೀಮಸೇನೇನ ಪಾತಿತಃ ॥೪೩॥

ಮಹಾಬಿಲ್ಲುಗಾರನಾದ ಸಾಲ್ವರಾಜ ಉಗ್ರಕರ್ಮನು, ಅವನ ಹೆಸರೇ ಹೇಳುವಂತೆ ಉಗ್ರಕರ್ಮಗಳನ್ನೇ ಮಾಡುವವನು. ಮಹಾರಾಜ, ಅವನೂ ಭೀಮನಿಂದ ಹತನಾದ.

ಓಷವಾಂಶ್ಚ ಮಹಾರಾಜ ಬೃಹಂತಸಹಿತೋ ರಣೇ ।
ಪರಾಕ್ರಮೀ ಚ ಮಿತ್ರಾರ್ಥೇ ಗತೋ ವೈವಸ್ವತಕ್ಷಯಮ್ ॥೪೪॥

ಓಷವಂತ ಮತ್ತು ಬೃಹಂತರು ಯುದ್ಧದಲ್ಲಿ ಪರಾಕ್ರಮಿಗಳು. ಮಹಾರಾಜ, ಅವರೂ ಮಿತ್ರನಾದ ನಿನಗಾಗಿ ಅಸುನೀಗಿದರು.

ತಥೈವ ರಥಿನಾಂ ಶ್ರೇಷ್ಠಃ ಕ್ಷೇಮಧೂರ್ತಿರ್ವಿಶಾಂಪತೇ ।
ನಿಹತೋ ಗದಯಾ ರಾಜನ್ ಭೀಮಸೇನೇನ ಸಂಯುಗೇ ॥೪೫॥

ಹಾಗೆಯೇ, ರಾಜನೆ, ರಥಿಕರಲ್ಲಿ ಶ್ರೇಷ್ಠನಾದ ಕ್ಷೇಮಧೂರ್ತಿಯೂ ಯುದ್ಧದಲ್ಲಿ ಭೀಮಸೇನನ ಗದೆಯಿಂದ ಹತನಾದ.

ತಥಾ ರಾಜನ್ ಮಹೇಷ್ವಾಸೋ ಜಲಸಂಧೋ ಮಹಾಬಲಃ ।
ಸುಮಹತ್ ಕದನಂ ಕೃತ್ವಾ ಹತಃ ಸಾತ್ಯಕಿನಾ ಯುಧಿ ॥೪೬॥

ಹಾಗೆಯೇ ಮಹಾಬಲಿ ಬಿಲ್ಲಾಳುವಾದ ಮಗಧರಾಜ ಜಲಸಂಧ ಬಲು ದೊಡ್ಡ ಕಾಳಗ ಮಾಡಿ ಸಾತ್ಯಕಿಯಿಂದ ಹತನಾದ.

ಅಲಾಯುಧೋ ರಾಕ್ಷಸೇಂದ್ರೋ ಬಕಬಂಧುಶ್ಚ ಯಾನವಾನ್ ।
ಘಟೋತ್ಕಚೇನ ವಿಕ್ರಮ್ಯ ಗಮಿತೋ ಯಮಸಾದನಮ್ ॥೪೭॥

ಅಲಾಯುಧನು ಬಕಾಸುರನ ಸೋದರನಾದ ಮಹಾರಾಕ್ಷಸ. ದೊಡ್ಡ ರಥ ಏರಿ ಬಂದು, ಬಲು ಪರಾಕ್ರಮ ತೋರಿ ಘಟೋತ್ಕಚನಿಂದ ಶಿರಶ್ಛೇದ ಹೊಂದಿದ.

ವಿಕ್ರಾಂತಾ ಬಲವಂತಶ್ಚ ಭ್ರಾತರಃ ಸಹ ಭಾರತ ।
ಕೇಕಯಾಃ ಸರ್ವತಶ್ಚಾಪಿ ನಿಹತಾಃ ಸವ್ಯಸಾಚಿನಾ ॥೪೮॥

ರಾಜನೇ, ಪರಾಕ್ರಮಿಗಳು ಹಾಗೂ ಬಲಿಷ್ಠರೂ ಆದ ಕೇಕಯದೇಶದ ಸೋದರರೆಲ್ಲರೂ ಅರ್ಜುನನಿಂದ ಹತರಾದರು.

ರಾಧೇಯಾಃ ಸೂತಪುತ್ರಾಶ್ಚ ಕರ್ಣಸ್ಯ ಭ್ರಾತರಸ್ತಥಾ ।
ರಿಪೂಣಾಂ ಕದನಂ ಕೃತ್ವಾ ಗತಾ ವೈವಸ್ವತಕ್ಷಯಮ್ ॥೪೯॥

ಕರ್ಣನ ಸೋದರರು ಅಧಿರಥ–ರಾಧೆಯರ ಮಕ್ಕಳು. ಶತ್ರುಗಳೊಂದಿಗೆ ಹೋರಾಡಿ ಮಡಿದರು.

ಮದ್ರಕಾ ಮಾಲವಾಶ್ಚೈವ ದ್ರವಿಡಾಶ್ಚೋಗ್ರವಿಕ್ರಮಾಃ ।
ಯೌಧೇಯಾಶ್ಚ ಲಿಲಿಂಧ್ರಾಶ್ಚ ಕ್ಷುದ್ರಕಾಶ್ಚಾಪ್ಯುಶೀನರಾಃ ॥೫೦॥

ಮಚ್ಚಿಲ್ಲಕಾಸ್ತುಂಡಿಕೇರಾಃ ಸಾವಿತ್ರೀಪುತ್ರಕಾಸ್ತಥಾ ।
ಪ್ರಾಗುದೀಚ್ಯಾಃ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಭಾರತ ॥೫೧॥

ಪತ್ತೀನಾಂ ನಿಹತಾಃ ಸಂಘಾ ಹಯಾನಾಮರ್ಬುದಾನಿ ಚ ।
ರಥವ್ರಾತಾಶ್ಚ ನಿಹತಾಃ ಹತಾಶ್ಚ ವರವಾರಣಾಃ ॥೫೨॥

ಸಧ್ವಜಾಃ ಸಾಯುಧಾಃ ಶೂರಾಃ ಸವರ್ಮಾಂಬರಭೂಷಣಾಃ ।
ಕಾಲೇನ ಮಹತಾ ಯತ್ತಾಃ ಕುಶಲೈರ್ಯೋऽಭಿವರ್ಧಿತಾಃ ॥೫೩॥
ತೇ ಹತಾಃ ಸಮರೇ ರಾಜನ್ ಪಾರ್ಥೇನಾಕ್ಲಿಷ್ಟಕರ್ಮಣಾ ॥೫೪॥

ಮದ್ರಕರು ಮಾಲವರು ದ್ರವಿಡರು ಯೌಧೇಯರು ಲಿಲಿಂಧ್ರರು ಕ್ಷುದ್ರಕರು ಉಶೀನರರು ಮಚ್ಚಿಲ್ಲಕರು ತುಂಡಿಕೇರರು ಸಾವಿತ್ರೀಪುತ್ರಕರು ಮುಂತಾದ ಪೂರ್ವ

ಉತ್ತರ ಪಶ್ಚಿಮ ದಕ್ಷಿಣ ದೇಶಗಳ ಯೋಧರು, ಕಾಲಾಳು ಪಡೆಗಳು, ಹತ್ತುಲಕ್ಷ ಅಶ್ವಸೈನ್ಯ ರಥಸೈನ್ಯ ಗಜಸೈನ್ಯಗಳು ಧ್ವಜ ಆಯುಧಗಳಿಂದ ಕೂಡಿದವರು, ಕವಚ ವಸ್ತ್ರಾಭರಣಭೂಷಿತರು, ಎಲ್ಲರೂ ಭಯಂಕರ ಪರಾಕ್ರಮ ತೋರುತ್ತಿದ್ದ ವೀರರು. ದೀರ್ಘಕಾಲ ಪ್ರಯತ್ನದಿಂದ ಯುದ್ಧಕುಶಲರ ತರಬೇತಿಯಲ್ಲಿ ಪ್ರವರ್ಧಮಾನರು ಆದವರು, ಇವರು ಎಲ್ಲರೂ ಯುದ್ಧದಲ್ಲಿ ಅರ್ಜುನನಿಂದ ಅನಾಯಾಸವಾಗಿ ಹತರಾದರು.

ಅನ್ಯೇ ತಥಾऽಮಿತಬಲಾಃ ಪರಸ್ಪರವಧೈಷಿಣಃ ।
ನಿಹತಾಃ ಸಮರೇ ಶೂರಾಃ ಪರಸ್ಪರಸಮಾಗಮೇ ॥೫೫॥

ಅಮಿತ ಬಲಶಾಲಿಗಳು, ಪರಸ್ಪರ ವಧಾಪೇಕ್ಷೆ ಉಳ್ಳವರು, ಶೂರರು ರಣರಂಗದಲ್ಲಿ ಪರಸ್ಪರ ಇದಿರಿಸಿ ಹತರಾದರು.

ಏತೇ ಚಾನ್ಯೇ ಚ ಬಹವೋ ರಾಜಾನಃ ಸಗಣಾ ರಣೇ ।
ಹತಾಃ ಸಹಸ್ರಶೋ ರಾಜನ್ ಯನ್ಮಾಂ ತ್ವಂ ಪರಿಪೃಚ್ಛಸಿ ॥೫೬॥

ಇವರೂ ಅಲ್ಲದೆ ಬೇರೆಯೂ ಕೂಡ ಬಹುಮಂದಿ ರಾಜರು ಪರಿವಾರ ಸಮೇತರಾಗಿ ಸಹಸ್ರಾರು ಸಂಖ್ಯೆಯಲ್ಲಿ ಹತರಾದರು. ರಾಜನೆ, ಇನ್ನೇನು ನನ್ನಲ್ಲಿ ಕೇಳಬಯಸುವೆ?

ಏವಮೇಷ ಕ್ಷಯೋ ವೃತ್ತಃ ಕರ್ಣಾರ್ಜುನಸಮಾಗಮೇ ।
ಮಹೇಂದ್ರೇಣ ಯಥಾ ವೃತ್ರೋ ಯಥಾ ರಾಮೇಣ ರಾವಣಃ ॥೫೭॥

ಹೀಗೇ ಕರ್ಣ–ಅರ್ಜುನರು ಸೇರಿದಾಗಲೂ, ಇಂದ್ರನೊಡನೆ ವೃತ್ರ ಸೇರಿದಾಗ ಮತ್ತು ರಾಮನೊಡನೆ ರಾವಣ ಸೇರಿದಾಗ ಹೇಗೋ ಹಾಗೇ, ದೊಡ್ಡ ವಿನಾಶವೇ ಸಂಭವಿಸಿತು.

ಯಥಾ ಕೃಷ್ಣೇನ ನರಕೋ ಮುರಶ್ಚ ನಿಹತೋ ರಣೇ ।
ಕಾರ್ತವೀರ್ಯಶ್ಚ ರಾಮೇಣ ಭಾರ್ಗವೇಣ ಯಥಾ ಹತಃ ॥೫೮॥

ಸಜ್ಞಾತಿಬಾಂಧವಃ ಶೂರಃ ಸಮರೇ ಯುದ್ಧದುರ್ಮದಃ ।
ರಣೇ ಕೃತ್ವಾ ಮಹದ್‌ಯುದ್ಧಂ ಘೋರಂ ತ್ರೈಲೋಕ್ಯಮೋಹನಮ್ ॥೫೯

ಯಥಾ ಸ್ಕಂದೇನ ಮಹಿಷೋ ಯಥಾ ರುದ್ರೇಣ ಚಾಂಧಕಃ ।
ತಥಾऽರ್ಜುನೇನ ನಿಹತೋ ದ್ವೈರಥೇ ಯುದ್ಧದುರ್ಮದಃ ॥೬೦॥
ಸಾಮಾತ್ಯಬಾಂಧವಃ ಶೂರಃ ಕರ್ಣಃ ಪ್ರಹರತಾಂ ವರಃ ॥೬೧॥
ಜಯಾಶಾ ಧಾರ್ತರಾಷ್ಟ್ರಾಣಾಂ ವೈರಸ್ಯ ಚ ಮುಖಂ ನೃಪ ॥೬೨॥

ಕೃಷ್ಣನಿಂದ ನರಕಾಸುರ ಮತ್ತು ಮುರಾಸುರರು ಯುದ್ಧದಲ್ಲಿ ಹತರಾದಂತೆ, ಭೃಗುರಾಮನಿಂದ ಕಾರ್ತವೀರ್ಯನು ಹತನಾದಂತೆ, ಸ್ಕಂದನಿಂದ ಮಹಿಷ, ರುದ್ರನಿಂದ ಅಂಧಕರು ಹತರಾದಂತೆ, ಯುದ್ಧದಲ್ಲಿ ಮದಭರಿತನಾಗುವ ಶೂರ ಕರ್ಣನು ಮೂರ್ಲೋಕವನ್ನು ಮೈಮರೆಸುವಂಥ ಮಹಾಘೋರ ಯುದ್ಧಮಾಡಿ ದ್ವಿರಥಯುದ್ಧದಲ್ಲಿ ಅರ್ಜುನನಿಂದ ಬಂಧು–ಬಾಂಧವರ ಸಮೇತವಾಗಿ ಹತನಾದ. ನಿನ್ನ ಮಕ್ಕಳಿಗೆ ಪಾಂಡವರಲ್ಲಿ ವೈರ ಸಾಧಿಸುವ, ಜಯಗಳಿಸುವ ಆಸೆಗೆ ಏಕಮಾತ್ರ ಆಸರೆಯಾಗಿದ್ದ ಶೂರಕರ್ಣ, ಯೋಧರಲ್ಲಿಯೇ ಉತ್ತಮನೆನಿಸಿದ್ದ ಕರ್ಣ ಅಮಾತ್ಯ, ಬಾಂಧವರೊಂದಿಗೆ ರಣರಂಗದಲ್ಲಿ ಒರಗಿದ.

ತೀರ್ಣಂ ತತ್ ಪಾಂಡವೈ ರಾಜನ್ ಯತ್ಪುರಾ ನಾವಬುಧ್ಯಸೇ ।
ಪ್ರೋಚ್ಯಮಾನಂ ಮಹಾರಾಜ ಬಂಧುಭಿರ್ಹಿತಕಾಂಕ್ಷಿಭಿಃ ॥೬೩॥

ಪಾಂಡವರು ಈ ಸ್ಪರ್ಧೆಯಲ್ಲಿ ವಿಜೇತರಾದರು. ರಾಜನೆ, ಹಿತೈಷಿಗಳಾದ ಬಂಧುಗಳು ನಿನಗೆ ಎಷ್ಟು ಬೋಧಿಸಿದರೂ ನೀನು ಅದನ್ನು ಅರಿತುಕೊಳ್ಳಲಿಲ್ಲ.

ನ ಕೃತಂ ಚ ತ್ವಯಾ ಪೂರ್ವಂ ದೈವೇನ ವಿಧಿನಾ ಬಲಾತ್ ।
ತದಿದಂ ಸಮನುಪ್ರಾಪ್ತಂ ವ್ಯಸನಂ ತ್ವಾಂ ಮಹಾತ್ಯಯಮ್ ॥೬೪॥

ದುರ್ದೈವದ ಬಲದಿಂದ, ವಿಧಿವಶಾತ್ ನೀನು ಬಂಧುಗಳ ಹಿತೋಕ್ತಿಯನ್ನು ಅಂದು ನಡೆಸಿಕೊಡಲಿಲ್ಲ. ಇದೀಗ ನಿನಗೆ ಮಹಾ ವಿನಾಶಕರವಾದ ಅನಿಷ್ಟವೇ ಸಂಭವಿಸಿದೆ.

ಪುತ್ರಾಣಾಂ ರಾಜ್ಯಕಾಮಾನಾಂ ತ್ವಯಾ ರಾಜನ್ ಹಿತೈಷಿಣಾ ।
ಅಹಿತಾನ್ಯೇವ ಚೀರ್ಣಾನಿ ತೇಷಾಂ ತೇ ಫಲಮಾಗತಮ್ ॥೬೫॥

ರಾಜನೆ, ರಾಜ್ಯಲೋಲುಪರಾದ ಮಕ್ಕಳ ಹಿತವನ್ನು ಬಯಸಿದ ನೀನು ಅಹಿತಗಳನ್ನೇ ಗಳಿಸಿರುವೆ. ಅವುಗಳ ದುಷ್ಪರಿಣಾಮ ನಿನಗೆ ಈಗ ಪ್ರಾಪ್ತವಾಗಿದೆ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಪಂಚಮೋऽಧ್ಯಾಯಃ ॥೫॥

❖

ಆರನೆಯ ಅಧ್ಯಾಯ

ಪಾಂಡವರ ಸೈನ್ಯದಲ್ಲಿ ಮಡಿದವರು.

ಧೃತರಾಷ್ಟ್ರಃ

ಆಖ್ಯಾತಾ ಮಾಮಕಾಸ್ತಾತ ನಿಹತಾ ಯುಧಿ ಪಾಂಡವೈಃ ।
ಮಾಮಕೈರ್ನಿಹತಾನ್ ಬ್ರೂಹಿ ಪಾಂಡವೇಯಾಂಸ್ತು ಸಂಜಯ ॥೧॥

ಧೃತರಾಷ್ಟ್ರನು ಸಂಜಯನಿಗೆ ಹೇಳುತ್ತಾನೆ— ಸಂಜಯ, ನಮ್ಮ ಕಡೆಯಲ್ಲಿ ಯಾರು ಯಾರು ಪಾಂಡವರಿಂದ ಹತರಾದರೆಂಬುದನ್ನು ನೀನು ಹೇಳಿರುವೆ. ಮುಂದೆ ಪಾಂಡವರ ಕಡೆಯಲ್ಲಿ ನಮ್ಮಿಂದ ಹತರಾದವರನ್ನು ಹೇಳು.

ಸಂಜಯಃ

ಕೃತಿನೋ ಯುಧಿ ವಿಕ್ರಾಂತಾ ಮಹಾಸತ್ತ್ವಾ ಮಹಾಬಲಾಃ ।
ಸಾನುಬಂಧಾಃ ಸಹಾಮಾತ್ಯಾ ಭೀಷ್ಮೇಣ ಯುಧಿ ಪಾತಿತಾಃ ॥೨॥

ಸಂಜಯನು ಹೇಳಿದನು— ಯುದ್ಧವಿಶಾರದರು ಪರಾಕ್ರಮಿಗಳು ಮಹಾ ಸತ್ವಶಾಲಿಗಳು ಮಹಾಬಲಿಗಳು ಪಾಂಡವರ ಕಡೆಯಲ್ಲಿ ಬಂಧುಮಿತ್ರಸಮೇತರಾಗಿ ಭೀಷ್ಮನಿಂದ ಹತರಾಗಿದ್ದಾರೆ.

ನಾರಾಯಣಾ ವಲ್ಲವಾಶ್ಚ ಶೂರಾಶ್ಚ ಶತಶೋऽಪರೇ ।
ಅನುರಕ್ತಾಶ್ಚ ವೀರೇಣ ಭೀಷ್ಮೇಣ ನಿಹತಾ ರಣೇ ॥೩॥

ನಾರಾಯಣರು ಗೊಲ್ಲರು ಮತ್ತು ಪಾಂಡವರಲ್ಲಿ ಅನುಕ್ತರಾಗಿರುವ ಬೇರೆ ನೂರಾರು ಶೂರ ಯೋಧರು ಭೀಷ್ಮನಿಂದ ಯುದ್ಧದಲ್ಲಿ ಹತರಾಗಿದ್ದಾರೆ.

ಸಮಃ ಕಿರೀಟಿನಾ ಸಂಖೇ ವೀರ್ಯೇಣ ಚ ಬಲೇನ ಚ ।
ಸತ್ಯಜಿತ್ ಸತ್ಯಸಂಧೇನ ದ್ರೋಣೇನ ನಿಹತೋ ಯುಧಿ ॥೪॥

ವೀರ್ಯದಲ್ಲಿ ಬಲದಲ್ಲಿ ಅರ್ಜುನನಿಗೆ ಸರಿಸಾಟಿಯಾದ ಸತ್ಯಜಿತ್‌ರಾಜ ದ್ರುಪದನ ಸೋದರ, ಸತ್ಯಸಂಧನಾದ ದ್ರೋಣನಿಂದ ಯುದ್ಧದಲ್ಲಿ ಹತನಾದ.

ಪಾಂಚಾಲಾಶ್ಚ ಮಹೇಷ್ವಾಸಾಃ ಪ್ರಾಯೋ ರಾಜನ್ನಮರ್ಷಿಣಃ ।
ದ್ರೋಣೇನ ಸಹ ಸಂಗಮ್ಯ ಗತಾ ವೈವಸ್ವತಕ್ಷಯಮ್ ॥೫॥

ಮಹಾ ಬಿಲ್ಲಾಳುಗಳಾದ ಪಾಂಚಾಲರು ಪ್ರಾಯಃ ಎಲ್ಲರೂ ಕುಪಿತರಾಗಿ ದ್ರೋಣನೊಡನೆ ಹೋರಾಡಿ ಅಸುನೀಗಿದರು.

ತಥಾ ವಿರಾಟದ್ರುಪದೌ ವೃದ್ಧೌ ಸಹಸುತೌ ನೃಪ ।
ಪರಾಕ್ರಾಂತೌ ಚ ಮಿತ್ರಾರ್ಥೇ ದ್ರೋಣೇನ ನಿಹತೌ ಯುಧಿ ॥೬॥

ರಾಜನೆ, ಪರಾಕ್ರಮಿಗಳಾದ ವೃದ್ಧರಾದ ವಿರಾಟ ದ್ರುಪದರೂ ಮಿತ್ರರಾದ ಪಾಂಡವರಿಗಾಗಿ ದ್ರೋಣನಿಂದ ಯುದ್ಧದಲ್ಲಿ ಹತರಾದರು.

ಯೋ ಬಾಲ ಏವ ಸಮರೇ ಸಮ್ಮಿತಃ ಸವ್ಯಸಾಚಿನಾ ।
ಕೇಶವೇನ ಚ ದುರ್ಧರ್ಷೋ ಬಲದೇವೇನ ಚಾಭಿಭೂಃ ॥೭॥

ಪರೇಷಾಂ ಕದನಂ ಕೃತ್ವಾ ಮಹದ್ ರಣವಿಶಾರದಃ ।
ಪರಿವಾರ್ಯ ಮಹಾಮಾತ್ರೈಃ ಷಡ್ಭಿಃ ಪರಮಕೈಃ ರಥೈಃ ॥೮॥

ಅಶಕ್ನುವದ್ಭಿರ್ಬಿಭೃತ್ಸುಮಭಿಮನ್ಯುರಭಿದ್ರುತಃ ॥೯॥

ಅಭಿಮನ್ಯು, ಇನ್ನೂ ಬಾಲಕನಾಗಿದ್ದಾಗಲೇ ಯುದ್ಧದಲ್ಲಿ ಅರ್ಜುನನಿಗೂ ಕೃಷ್ಣನಿಗೂ ಬಲರಾಮನಿಗೂ ಸಮನಾಗಿದ್ದವನು, ಸೋಲನ್ನು ಕಾಣದವನು, ಪರರನ್ನು ಸೋಲಿಸುವವನು, ಯುದ್ಧವಿಶಾರದ, ಶತ್ರುಗಳೊಡನೆ ದೊಡ್ಡ ಯುದ್ಧವನ್ನು ಮಾಡಿದ. ಅರ್ಜುನನನ್ನು ಇದಿರಿಸಲು ಅಶಕ್ತರಾದ ದ್ರೋಣ ದ್ರೌಣಿ ಶಲ್ಯ ಕರ್ಣ ಕೃಪ ಕೃತವರ್ಮರೆಂಬ ಆರುಮಂದಿ ಪ್ರಧಾನ ಮಹಾರಥರು ಅಭಿಮನ್ಯುವನ್ನು ಸುತ್ತುವರಿದರು.

ತಂ ಕೃತಂ ವಿರಥಂ ವೀರಂ ಕ್ಷತ್ರಧರ್ಮೇ ವ್ಯವಸ್ಥಿತಮ್ ।
ದೌಃಶಾಸನಿರ್ಮಹಾರಾಜ ಸೌಭದ್ರಂ ಹತವಾನ್ ರಣೇ ॥೧೦॥

ವೀರ ಅಭಿಮನ್ಯುವನ್ನು ಷಡ್‌ರಥಿಕರು ವಿರಥನನ್ನಾಗಿ ಮಾಡಿದರೂ ಅವನು ಕ್ಷಾತ್ರಧರ್ಮವಾದ ಯುದ್ಧದಲ್ಲಿ ಸ್ಥಿರನಾಗಿ ನಿಂತಾಗ ದುಃಶಾಸನ ಪುತ್ರನು ಅವನನ್ನು ವಧಿಸಿ ತಾನೂ ಹತನಾದ.

ಪಾಟಚ್ಚರಾನ್ ನಿಹಂತಾ ತು ಮಹತ್ಯಾ ಸೇನಯಾ ವೃತಃ ।
ಅಂಬಷ್ಠಸ್ಯ ಸುತಃ ಶ್ರೀಮಾನ್ ಮಿತ್ರಹೇತೋಃ ಪರಾಕ್ರಮನ್ ॥೧೧॥

ಆಸಾದ್ಯ ಲಕ್ಷಣಂ ವೀರಂ ದುರ್ಯೋಧನಸುತಂ ರಣೇ ।
ಸುಮಹತ್ ಕದನಂ ಕೃತ್ವಾ ಗತೋ ವೈವಸ್ವತಕ್ಷಯಮ್ ॥೧೨॥

ದಸ್ಯುಗಳನ್ನು ನಾಶಮಾಡುವ ಶ್ರೀಮಾನ್ ಎಂಬ ಅಂಬಷ್ಠಪುತ್ರನು ದೊಡ್ಡ ಸೈನ್ಯದಿಂದ ಯುಕ್ತನಾಗಿ ಮಿತ್ರರಾದ ಪಾಂಡವರಿಗಾಗಿ ಪರಾಕ್ರಮ ತೋರುತ್ತ ದುರ್ಯೋಧನಸುತನಾದ ವೀರ ಲಕ್ಷಣನೊಡನೆ ಹೋರಾಡಿ ಅಸುನೀಗಿದ.

ಬೃಹಂತಸ್ತು ಮಹಾರಾಜ ಕೃತಾಸ್ತ್ರೋ ಯುದ್ಧದುರ್ಮದಃ ।
ದುಃಶಾಸನೇನ ವಿಕ್ರಮ್ಯ ಗಮಿತೋ ಯಮಸಾದನಮ್ ॥೧೩॥

ಮಹಾರಾಜ, ಬೃಹಂತನೂ ಅಸ್ತ್ರಜ್ಞನಾಗಿದ್ದು ಯುದ್ಧದಲ್ಲಿ ಮದಿಸುವವನು, ದುಃಶಾಸನನೊಡನೆ ಹೋರಾಡಿ ಮಡಿದ.

ಮಣಿಮಾನ್ ದಂಡಧಾರಶ್ಚ ರಾಜಾನೌ ಯುದ್ಧದುರ್ಮದೌ ।
ಪರಾಕ್ರಾಂತೌ ತು ಮಿತ್ರಾರ್ಥೇ ದ್ರೋಣೇನ ಯುಧಿ ಪಾತಿತೌ ॥೧೪॥

ಮಣಿಮಾನ್ ಮತ್ತು ದಂಡಧಾರರಿಬ್ಬರೂ ಯುದ್ಧದಲ್ಲಿ ಮದಿಸುವರಾಜರು ಮಿತ್ರರಾದ ಪಾಂಡವರಿಗಾಗಿ ಯುದ್ಧದಲ್ಲಿ ಪರಾಕ್ರಮವನ್ನು ಮೆರೆದು ದ್ರೋಣ ನಿಂದ ಹತರಾದರು.

ಅಂಶುಮಾನ್ ಭೋಜರಾಜಶ್ಚ ಸಹಸೈನ್ಯೌ ಮಹಾರಥೌ ।
ಭಾರದ್ವಾಜೇನ ವಿಕ್ರಮ್ಯ ಗಮಿತೌ ಯಮಸಾದನಮ್ ॥೧೫॥

ಅಂಶುಮಾನ್ ಮತ್ತು ಭೋಜರಾಜರು ಇಬ್ಬರೂ ಮಹಾರಥರು, ಸೈನ್ಯ ಸಮೇತರಾಗಿ ಬಂದು ದ್ರೋಣರೊಂದಿಗೆ ಹೋರಾಡಿ ಹತರಾದರು.

ಸಾಮುದ್ರಶ್ಚಿತ್ರಸೇನಶ್ಚ ಸಹ ಪುತ್ರೇಣ ಭಾರತ ।
ಸಮುದ್ರಸೇನೇನ ಬಲಾದ್ ಗಮಿತೋ ಯಮಸಾದನಮ್ ॥೧೬॥

ಸಮುದ್ರತೀರವಾಸಿ ಚಿತ್ರಸೇನನೂ ಪುತ್ರಸಮೇತನಾಗಿ ಸಮುದ್ರಸೇನನೊಡನೆ ಹೋರಾಡಿ ಬಲಾತ್ಕಾರದಿಂದ ಹತನಾದ.

ಅನೂಪವಾಸೀ ನೀಲಶ್ಚ ವ್ಯಾಘ್ರದತ್ತಶ್ಚ ವೀರ್ಯವಾನ್ ।
ಅಶ್ವತ್ಥಾಮ್ನಾ ವಿಕರ್ಣೇನ ಗಮಿತೌ ಯಮಸಾದನಮ್ ॥೧೭॥

ವೀರನಾದ ಅನೂಪವಾಸಿ ನೀಲನೂ ವ್ಯಾಘ್ರದತ್ತನೂ ಅಶ್ವತ್ಥಾಮ–ವಿಕರ್ಣರಿಂದ ಹತರಾದರು.

ಚಿತ್ರಾಯುಧಶ್ಚಿತ್ರವರ್ಮಾ ಕೃತ್ವಾऽऽಜೌ ಕದನಂ ಮಹತ್ ।
ಚಿತ್ರಮಾರ್ಗೇಣ ವಿಕ್ರಮ್ಯ ವಿಕರ್ಣೇನ ಹತೌ ಯುಧಿ ॥೧೮॥

ಚಿತ್ರಾಯುಧ ಚಿತ್ರವರ್ಮರೂ ದೊಡ್ಡ ಯುದ್ಧವನ್ನು ಮಾಡಿ ವಿಚಿತ್ರ ಮಾರ್ಗದಿಂದ ಪರಾಕ್ರಮವನ್ನು ತೋರಿ ವಿಕರ್ಣನಿಂದ ಹತರಾದರು.

ಆತಪಗ್ರಾಸೀ ವೀರಶ್ಚ ವ್ಯಾಘ್ರದಂತಃ ಸುವೀರ್ಯವಾನ್ ।
ಅಶ್ವತ್ಥಾಮ್ನಾ ಮಹಾರಾಜ ಗಮಿತೋ ಯಮಸಾದನಮ್ ॥೧೯॥

ಮಹಾರಾಜ, ವೀರ ಆತಪಗ್ರಾಸಿಯೂ ವೀರ ವ್ಯಾಘ್ರದಂತನೂ ಅಶ್ವತ್ಥಾಮನಿಂದ ಹತರಾದರು.

ವೃಕೋದರಸಮೋ ಯುದ್ಧೇ ವೃಕಃ ಕೇಕಯಜೋ ಯುಧಿ ।
ಕೇಕಯೇನ ಚ ವಿಕ್ರಮ್ಯ ಭ್ರಾತಾ ಭ್ರಾತ್ರಾ ನಿಪಾತಿತಃ ॥೨೦॥

ಕೇಕಯರಾಜಪುತ್ರ ವೃಕನು ಯುದ್ಧದಲ್ಲಿ ಭೀಮನಂತಿದ್ದು ಯುದ್ಧದಲ್ಲಿ ಸೋದರನಾದ ಕೇಕಯನೊಂದಿಗೇ ಹೋರಾಡಿ ಮಡಿದ.

ಜನಮೇಜಯೋ ಹಿ ವಿಕ್ರಾಂತಃ ಪಾರ್ವತೀಯಃ ಪ್ರತಾಪವಾನ್ ।
ದುರ್ಮುಖೇನ ಮಹಾರಾಜ ತವ ಪುತ್ರೇಣ ಪಾತಿತಃ ॥೨೧॥

ಪರ್ವತವಾಸಿ ಪ್ರತಾಪಶಾಲಿ ಜನಮೇಜಯನು ಪರಾಕ್ರಮ ತೋರುತ್ತ ನಿನ್ನ ಪುತ್ರನಾದ ದುರ್ಮುಖನಿಂದ ಹತನಾದ.

ರೋಚಮಾನೌ ನೃಪಶ್ರೇಷ್ಠೌ ರೋಚಮಾನೌ ಗ್ರಹಾವಿವ ।
ದ್ರೋಣೇನ ಯುಗಪದ್ ರಾಜನ್ ದಿವಂ ಸಂಪ್ರಾಪಿತೌ ಶರೈಃ ॥೨೨॥

ರಾಜನೆ, ಎರಡು ಗ್ರಹಗಳಂತೆ ಪ್ರಕಾಶಿಸುತ್ತಿದ್ದ ರೋಚಮಾನರೆಂಬ ಒಂದೇ ಹೆಸರಿನ ಇಬ್ಬರು ಮಹಾರಾಜರು ಒಮ್ಮೆಲೆ ಇಬ್ಬರೂ ದ್ರೋಣನ ಬಾಣಗಳಿಗೆ ತುತ್ತಾಗಿ ಸ್ವರ್ಗಸ್ಥರಾದರು.

ನೃಪಾಶ್ಚಾನ್ಯೇ ಪ್ರಯುಧ್ಯಂತಃ ಪರಾಕ್ರಾಂತಾ ಮಹೀಪತೇ ।
ಕೃತ್ವಾ ಹ್ಯಸುಕರಂ ಕರ್ಮ ಗತಾ ವೈವಸ್ವತಕ್ಷಯಮ್ ॥೨೩॥

ರಾಜನೆ, ಬೇರೆ ರಾಜರೂ ಯುದ್ಧದಲ್ಲಿ ಪರಾಕ್ರಮವನ್ನು ತೋರುತ್ತ ಕಷ್ಟಸಾಧ್ಯವಾದ ಹೋರಾಟವನ್ನು ನಡೆಸಿ ಯಮಲೋಕವನ್ನು ಸೇರಿದರು.

ಪುರುಜಿತ್ ಕುಂತಿಭೋಜಶ್ಚ ಮಾತುಲೌ ಸವ್ಯಸಾಚಿನಃ ।
ಸಂಗ್ರಾಮೇ ನಿರ್ಜಿತಾನ್ ಲೋಕಾನ್ ಗಮಿತೌ ದ್ರೋಣಸಾಯಕೈಃ॥೨೪॥

ಪುರುಜಿತ್ ಮತ್ತು ಕುಂತಿಭೋಜರು ಅರ್ಜುನನ ಸೋದರಮಾವಂದಿರು, ಯುದ್ಧದಲ್ಲಿ ದ್ರೋಣರ ಬಾಣಗಳಿಂದ ವೀರಸ್ವರ್ಗವನ್ನು ಪಡೆದರು.

ಅಭಿಭೂಃ ಕಾಶಿರಾಜಶ್ಚ ಕಾಶಿಕೈರ್ಬಹುಭಿರ್ವೃತಃ ।
ವಸುದಾನಸ್ಯ ಪುತ್ರೇಣ ತ್ಯಾಜಿತೋ ದೇಹಮಾಹವೇ ॥೨೫॥

ಅಭಿಭೂ ಎಂಬ ಕಾಶಿರಾಜನು ಬಹು ಕಾಶಿಯೋಧರಿಂದ ಕೂಡಿ ಯುದ್ಧದಲ್ಲಿ ವಸುದಾನನ ಪುತ್ರನಿಂದ ಮಡಿದ.

ಅಮಿತೌಜಾ ಜಯತ್ಸೇನೋ ಜಯಾನೀಕಶ್ಚ ವೀರ್ಯವಾನ್ ।
ಲಕ್ಷ್ಮಣೇನ ಹತೌ ರಾಜನ್ ತವ ಪೌತ್ರೇಣ ಮಾರಿಷ ॥೨೬॥

ರಾಜನೆ, ಅಮಿತಪರಾಕ್ರಮಿಯಾದ ಜಯತ್ಸೇನ ಮತ್ತು ಪರಾಕ್ರಮಿ ಜಯಾನೀಕರು ನಿನ್ನ ಮೊಮ್ಮಗನಾದ ಲಕ್ಷಣನಿಂದ ಹತರಾದರು.

ವೃದ್ಧಕ್ಷತ್ರೋ ಮಹೇಷ್ವಾಸಃ ಕ್ಷತ್ರದೇವಶ್ಚ ವೀರ್ಯವಾನ್ ।
ನಿಹತ್ಯ ಶಾತ್ರವಾನ್ ಶೂರಾನ್ ಪರೈರ್ವಿನಿಹತೌ ಯುಧಿ ॥೨೭॥

ಮಹಾಧನುರ್ಧಾರಿ ವೃದ್ಧಕ್ಷತ್ರ ಮತ್ತು ವೀರ್ಯಶಾಲಿ ಕ್ಷತ್ರದೇವರು ಶೂರರಾದ ಶತ್ರುಯೋಧರನ್ನು ವಧಿಸಿ ಅಶ್ವತ್ಥಾಮನಿಂದ ಹತರಾದರು.

ಕ್ಷತ್ರಧರ್ಮಶ್ಚ ಪಾಂಚಾಲ್ಯಃ ಮಿತ್ರಧರ್ಮಶ್ಚ ಭಾರತ ।
ದ್ರೋಣೇನ ಪರಮೇಷ್ವಾಸೌ ಗಮಿತೌ ಯಮಸಾದನಮ್ ॥೨೮॥

ಪಾಂಚಾಲದೇಶದ ಕ್ಷತ್ರಧರ್ಮ ಮತ್ತು ಮಿತ್ರಧರ್ಮರು ಮಹಾ ಧನುರ್ಧರರು, ದ್ರೋಣನಿಂದ ಹತರಾದರು.

ಶಿಖಂಡಿತನಯೋ ಯುದ್ಧೇ ಕ್ಷತ್ರದೇವೋ ಯುಧಾಂಪತಿಃ ।
ಲಕ್ಷಣೇನ ಹತೋ ರಾಜನ್ ತವ ಪೌತ್ರೇಣ ಮಾರಿಷ ॥೨೯॥

ಶಿಖಂಡಿಪುತ್ರನಾದ ಶ್ರೇಷ್ಠಯೋಧನಾದ ಕ್ಷತ್ರದೇವನು ನಿನ್ನ ಮೊಮ್ಮಗನಾದ ಲಕ್ಷಣನಿಂದ ಹತನಾದ.

ಸುಚಿತ್ರಶ್ಚಿತ್ರವರ್ಮಾ ಚ ಪಿತಾಪುತ್ರೌ ಮಹಾರಥೌ ।
ಪ್ರಹರಂತೌ ರಣೇ ವೀರೌ ದ್ರೋಣೇನ ನಿಹತೌ ನೃಪ ॥೩೦॥

ಸುಚಿತ್ರ ಮತ್ತು ಚಿತ್ರವರ್ಮರು ಮಹಾರಥರಾದ ಪಿತಾ–ಪುತ್ರರು ವೀರರು. ಯುದ್ಧದಲ್ಲಿ ಹೋರಾಡಿ ದ್ರೋಣನಿಂದ ಹತರಾದರು.

ವಾರ್ಧಕ್ಷೇಮಿರ್ಮಹಾರಾಜ ಸಮುದ್ರ ಇವ ಪರ್ವಣಿ ।
ಆಯುಧಕ್ಷಯಮಾಸಾದ್ಯ ಪ್ರಶಾಂತಿಂ ಪರಮಾಂ ಗತಃ ॥೩೧॥

ಮಹಾರಾಜ, ಸಮುದ್ರವು ಪರ್ವಕಾಲದಲ್ಲಿ ವೃದ್ಧಿಸುವಂತೆ ವಾರ್ಧಕ್ಷೇಮಿಯ ಪರಾಕ್ರಮ ವೃದ್ಧಿಸುವಂಥದ್ದೇ. ಆದರೆ ಆಯುಧಕ್ಷಯವಾದ್ದರಿಂದ ಹತನಾಗಿ ಚಿರಶಾಂತಿಯನ್ನು ಪಡೆಯಬೇಕಾಯಿತು.

ಸೇನಾಬಿಂದುರ್ನೃಪಶ್ರೇಷ್ಠಃ ಶಾತ್ರವಾನ್ ಪ್ರತಪನ್ ಯುಧಿ ।
ಬಾಹ್ಲೀಕೇನ ಮಹಾರಾಜ ಕೌರವೇಂದ್ರೇಣ ಪಾತಿತಃ ॥೩೨॥

ಮಹಾರಾಜ, ಸೇನಾಬಿಂದು ಮಹಾರಾಜನೂ ಶತ್ರುಗಳನ್ನು ಯುದ್ಧದಲ್ಲಿ ಸಂತಾಪ ಪಡಿಸುತ್ತಲೆ ಕುರುಶ್ರೇಷ್ಠನಾದ ಬಾಹ್ಲೀಕನಿಂದ ಹತನಾದ.

ಧೃಷ್ಟಕೇತುರ್ಮಹಾರಾಜ ಚೇದೀನಾಂ ಪ್ರವರೋ ರಣೇ ।
ಕೃತ್ವಾ ನಸುಕರಂ ಕರ್ಮ ಗತೋ ವೈವಸ್ವತಕ್ಷಯಮ್ ॥೩೩॥

ಮಹಾರಾಜ, ಧೃಷ್ಟಕೇತುವು ಚೇದಿಗಳಲ್ಲಿ ಶ್ರೇಷ್ಠ ಅವನೂ ಕಷ್ಟಸಾಧ್ಯವಾದ ಹೋರಾಟವನ್ನು ನಡೆಸಿ ಹತನಾದ.

ತಥಾ ಸತ್ಯಧೃತಿರ್ವೀರಃ ಕೃತ್ವಾ ಕದನಮಾಹವೇ ।
ಪಾಂಡವಾರ್ಥೇ ಪರಾಕ್ರಾಂತೋ ಗಮಿತೋ ಯಮಸಾದನಮ್ ॥೩೪॥

ಹಾಗೇ ವೀರನಾದ ಸತ್ಯಧೃತಿಯೂ ಯುದ್ಧದಲ್ಲಿ ಪಾಂಡವರಿಗಾಗಿ ಹೋರಾಡಿ ಮಡಿದ.

ಪುತ್ರಶ್ಚ ಶಿಶುಪಾಲಸ್ಯ ಸುಕೇತುಃ ಪೃಥಿವೀಪತಿಃ ।
ನಿಹತ್ಯ ಶಾತ್ರವಾನ್ ಸಂಖೇ ದ್ರೋಣೇನ ನಿಹತೋ ರಣೇ ॥೩೫॥

ಶಿಶುಪಾಲಪುತ್ರ ಸುಕೇತುರಾಜನೂ ಯುದ್ಧದಲ್ಲಿ ಶತ್ರುಗಳನ್ನು ತರಿದು ದ್ರೋಣನಿಂದ ಹತನಾದ.

ವಿರಾಟಪುತ್ರಃ ಶಂಖಸ್ತು ಉತ್ತರಶ್ಚ ಮಹಾರಥಃ ।
ಕುರ್ವಂತೌ ಸುಮಹತ್ ಕರ್ಮ ಗತೌ ವೈವಸ್ವತಕ್ಷಯಮ್ ॥೩೬॥

ವಿರಾಟಪುತ್ರನಾದ ಮಹಾರಥನಾದ ಶಂಖನೂ ಉತ್ತರನೂ ದೊಡ್ಡ ಹೋರಾಟ ನಡೆಸಿ ಮಡಿದರು.

ತಥಾ ಸತ್ಯಧೃತಿರ್ಮಾತ್ಸ್ಯೋ ಮದಿರಾಶ್ವಶ್ಚ ವೀರ್ಯವಾನ್ ।
ಸೂರ್ಯದತ್ತಶ್ಚ ವಿಕ್ರಾಂತೋ ನಿಹತೋ ದ್ರೋಣಸಾಯಕೈಃ ॥೩೭॥

ಹಾಗೇ ವಿರಾಟರಾಜನ ಸೋದರರಾದ ಸತ್ಯಧೃತಿ ಮದಿರಾಶ್ವ ಮತ್ತು

ವೀರನಾದ ಸೂರ್ಯದತ್ತರು ಪರಾಕ್ರಮಿಗಳು ದ್ರೋಣಬಾಣಗಳಿಂದ ಹತರಾದರು.

ಮಾತ್ಸ್ಯೋದವರಜಃ ಶ್ರೀಮಾನ್ ಶತಾನೀಕೋ ನಿಪಾತಿತಃ ।
ಶ್ರೇಣಿಮಾಂಸ್ತು ಮಹಾರಾಜ ಯುಧ್ಯಮಾನಃ ಪರಾಕ್ರಮೀ ।
ಕೃತ್ವಾ ನಸುಕರಂ ಕರ್ಮ ಗತೋ ವೈವಸ್ವತಕ್ಷಯಮ್ ॥೩೮॥

ವಿರಾಟರಾಜನ ತಮ್ಮ ಶ್ರೀಮಾನ್ ಶತಾನೀಕ ಮತ್ತು ಶ್ರೇಣಿಮಂತರೂ ಕೂಡ ಕಷ್ಟಸಾಧ್ಯವಾದ ಯುದ್ಧಮಾಡಿ ಅಸುನೀಗಿದರು.

ತಥೈವ ಯುಧಿ ವಿಕ್ರಾಂತೋ ಬಲವಾನತಿವೀರ್ಯವಾನ್ ।
ಮಾಗಧಃ ಪರಮಾಸ್ತ್ರಜ್ಞೋ ಗಮಿತೋ ಯಮಸಾದನಮ್ ॥೩೯॥

ಭೀಷ್ಮೇಣ ನಿಹತೋ ರಾಜನ್ ಶೇತೇಽದ್ಯ ಪರವೀರಹಾ ॥೪೦॥

ಹಾಗೇ ಯುದ್ಧದಲ್ಲಿ ಪರಾಕ್ರಮತೋರುತ್ತಿದ್ದ ಬಲಪರಾಕ್ರಮಶಾಲಿಯಾದ ಮಹಾಅಸ್ತ್ರಜ್ಞಾನಿಯಾದ ಮಾಗಧನೂ ಭೀಷ್ಮನಿಂದ ಹತನಾದ.

ದ್ರೋಣೇನ ನಿಹತೋ ರಾಜನ್ ಸಹದೇವಃ ಪ್ರತಾಪವಾನ್ ।

ಪ್ರತಾಪಶಾಲಿಯಾದ ಜರಾಸಂಧಪುತ್ರ ಸಹದೇವನೂ ದ್ರೋಣನಿಂದ ಹತನಾದ.

ವಸುದಾನಶ್ಚ ಕದನಂ ಕುರ್ವಾಣೋ ದಿವಸಂ ರಣೇ ।
ಭಾರದ್ವಾಜೇನ ವಿಕ್ರಮ್ಯ ಗಮಿತೋ ವೈ ಯಮಕ್ಷಯಮ್ ॥೪೧॥

ಪಾಂಶುರಾಜ ವಸುದಾನನೂ ಪಾಂಚಾಲರಾಜಕುಮಾರ ವಸುದಾನನೂ ಹಗಲಿಡೀ ಯುದ್ಧಮಾಡಿ ದ್ರೋಣನಿಂದ ಹತರಾದರು.

ಪಾಂಡ್ಯರಾಜಶ್ಚ ವಿಕ್ರಾಂತೋ ಬಲವಾನ್ ಬಾಹುಶಾಲಿನಾ ।
ಅಶ್ವತ್ಥಾಮ್ನಾ ಹತಸ್ತತ್ರ ಗಮಿತೋ ವೈ ಯಮಕ್ಷಯಮ್ ॥೪೨॥

ಬಲಿಷ್ಠ ಬಾಹುಶಾಲಿ ಪರಾಕ್ರಮಿಯಾದ ಪಾಂಡ್ಯರಾಜನೂ ಅಶ್ವತ್ಥಾಮನಿಂದ ಹತನಾದ.

ಏತೇ ಚಾನ್ಯೇ ಚ ಬಹವಃ ಪಾಂಡವಾನಾಂ ಮಹಾರಥಾಃ ।
ಹತಾ ದ್ರೋಣೇನ ಭೂಯಿಷ್ಠಂ ಯನ್ಮಾಂ ತ್ವಂ ಪರಿಪೃಚ್ಛಸಿ ॥೪೩॥

ಇವರಲ್ಲದೆ ಬೇರೆ ಪಾಂಡವಪಕ್ಷದಲ್ಲಿದ್ದ ಮಹಾರಥರೂ ಕೂಡ ದ್ರೋಣನಿಂದ ಹತರಾದರು. ಇನ್ನು ಹೆಚ್ಚಿನದನ್ನು ಏನು ಕೇಳಲು ಬಯಸುವೆ, ಮಹಾರಾಜ?

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಷಷ್ಠೋಽಧ್ಯಾಯಃ ॥೬॥

❖

ಏಳನೆಯ ಅಧ್ಯಾಯ

ಕುರುಸೈನ್ಯದಲ್ಲಿ ಉಳಿದವರು.

ಧೃತರಾಷ್ಟ್ರಃ

ಮಾಮಕಸ್ಯಾಸ್ಯ ಸೈನ್ಯಸ್ಯ ಹೃತೋತ್ಸೇಧಸ್ಯ ಸಂಜಯ ।
ಅವಶೇಷಂ ನ ಪಶ್ಯಾಮಿ ಕಕುದೇ ಮೃದಿತೇ ಸತಿ ॥೧॥

ಧೃತರಾಷ್ಟ್ರನು ಸಂಜಯನಿಗೆ ಹೇಳಿದನು— ಸಂಜಯ, ನನ್ನ ಈ ಸೈನ್ಯದ ಹಿರಿಮೆ ಅಪಹೃತವಾಯಿತು. ಅದರಲ್ಲಿ 'ಕಕುದ'ನಾದ ಅಂದರೆ ಮುಖ್ಯನಾದ ಕರ್ಣ ಹತನಾದ ಮೇಲಂತೂ ಸೈನ್ಯಕ್ಕೆ ಉಳಿವೇ ಇಲ್ಲವೆಂದು ಭಾವಿಸುತ್ತೇನೆ.

'ಕಕು' ಎಂದರೆ ಎತ್ತಿಗೆ ಹೆಗಲಿನ ಮೇಲಿರುವ ಭುಜ. ಅದನ್ನು ಎತ್ತು ಭಾರವನ್ನು ಹೊರುವುದಕ್ಕೆ ಸ್ಥಾನವಾಗಿ ನೀಡುತ್ತದೆ. ಅದರಿಂದ 'ಕಕುದ' ಅಂದರೆ ಎತ್ತು, ವೃಷಭ. 'ವೃಷಭ'ವನ್ನು ಹೇಳುವ ಶಬ್ದವು 'ಶ್ರೇಷ್ಠ' ಎಂಬ ಅರ್ಥದಲ್ಲಿ ಇರುತ್ತದೆ. ಪ್ರಕೃತ ಸೈನ್ಯದಲ್ಲಿ ಶ್ರೇಷ್ಠ, ಪ್ರಧಾನ ವ್ಯಕ್ತಿ ಕರ್ಣ. ಅವನು ಹತನಾದನೆಂದರೆ ಸೈನ್ಯಕ್ಕೆ ಇನ್ನು ಉಳಿವೇ ಇಲ್ಲ ಎನ್ನುತ್ತಾನೆ ಧೃತರಾಷ್ಟ್ರ. –ಲಕ್ಷಾಲಂಕಾರ.

ದುಃಶಾಸನ ವಧೆಯನ್ನು ಕೇಳಿಯೂ ಸುಮ್ಮನಿದ್ದ ಧೃತರಾಷ್ಟ್ರ 'ಕಕುದ'ನಾದ ಕರ್ಣನ ವಧೆಯನ್ನು ಕೇಳಿದಾಗ ಬಹಳ ಉದ್ವಿಗ್ನನಾದ.

ತೌ ಹಿ ವೀರೌ ಮಹೇಷ್ವಾಸೌ ಮದರ್ಥೇ ಕುರುಸತ್ತಮೌ ।
ಭೀಷ್ಮದ್ರೋಣೌ ಹತೌ ಶ್ರುತ್ವಾ ಕೋ ನ್ವರ್ಥೋ ಜೀವಿತೇನ ಮೇ ॥೨॥

ಕುರುಸೈನ್ಯಶ್ರೇಷ್ಠರಾದ ಮಹಾಧನುರ್ಧರರಾದ ಆ ವೀರ ಭೀಷ್ಮ-ದ್ರೋಣರು ನನಗಾಗಿ ಹೋರಾಡಿ ಹತರಾದುದನ್ನು ಕೇಳಿದಾಗಲೇ ನನಗೆ ನಾನಿನ್ನು ಬದುಕಿದ್ದು ಏನು ಪ್ರಯೋಜನ ಎನಿಸಿತ್ತು.

ನ ಚ ಮೃಷ್ಯಾಮಿ ರಾಧೇಯಂ ಹತಮಾಹವಶೋಭಿನಮ್ ।
ಯಸ್ಯ ಬಾಹ್ವೋರ್ಬಲಂ ತುಲ್ಯಂ ಕುಂಜರಾಣಾಂ ಶತೈಃ ಶತೈಃ ॥೩॥

ಇದೀಗ ರಣರಂಗದಲ್ಲಿ ಶೋಭಿಸುತ್ತಿದ್ದ ಕರ್ಣನೂ ಹತನಾಗಿದ್ದಾನೆ. ಇದನ್ನು ನಾನು ತಡೆದುಕೊಳ್ಳಲಾರೆ. ಅವನ ಬಾಹುಗಳ ಬಲ ನೂರಾರು ಆನೆಗಳಿಗೆ ಸಮವಾಗಿತ್ತು.

ಹತಪ್ರವೀರಂ ಸೈನ್ಯಂ ಮೇ ಯಥಾ ಶಂಸಸಿ ಸಂಜಯ ।
ಅಹತಾನಪಿ ಮೇ ಶಂಸ ಯೇಽತ್ರ ಜೀವಂತಿ ಕೇಚನ ॥೪॥

ಸಂಜಯ, ನನ್ನ ಸೈನ್ಯದಲ್ಲಿ ಪ್ರಧಾನವೀರರು ಯಾರಾರು ಹತರಾದರೆಂಬುದನ್ನು ಹೇಳಿದಂತೆ, ಇನ್ನೂ ಹತರಾಗದೆ ಉಳಿದಿರುವವರು ಕೆಲವರು ಯಾರೆಂದೂ ಹೇಳು.

ಏತೇಷು ಚ ಹತೇಷ್ವದ್ಯ ಯೇ ತ್ವಯಾ ಪರಿಕೀರ್ತಿತಾಃ ।
ಯೇಽಪಿ ಜೀವಂತಿ ತೇ ಸರ್ವೇ ಹತಾ ಇತಿ ಮತಿರ್ಮಮ ॥೫॥

ಈಗ ನೀನು ಹತರಾದರೆಂದು ಯಾರನ್ನು ಹೇಳಿರುವೆಯೋ ಅವರು ಮಾತ್ರವಲ್ಲದೆ, ಇನ್ನೂ ಬದುಕಿ ಉಳಿದವರೂ ಕೂಡ, ಎಲ್ಲರೂ ಸತ್ತಹಾಗೇ ಎಂದು ನನಗೆ ಅನಿಸುತ್ತಿದೆ. ಆದರೂ ಅವರು ಯಾರೆಂದು ಹೇಳು.

ಸಂಜಯಃ

ಯಸ್ಮಿನ್ ಮಹಾಸ್ತ್ರಾಣಿ ಸಮರ್ಪಿತಾನಿ
ಚಿತ್ರಾಣಿ ಶುಭ್ರಾಣಿ ಸಸಂಗ್ರಹಾಣಿ ।
ದಿವ್ಯಾನಿ ರಾಜಂತಿ ಹಿತಾನಿ ಚೈವ
ದ್ರೋಣೇನ ವೀರೇ ದ್ವಿಜಸತ್ತಮೇನ ॥೬॥

ಸಂಜಯ ಹೇಳುತ್ತಾನೆ— ನಮ್ಮ ಸೈನ್ಯದಲ್ಲಿ ಈಗ ಅಶ್ವತ್ಥಾಮ ಇದ್ದಾನೆ.

ದ್ರೋಣರು ಅವನಿಗೆ ಮಹಾ ಅಸ್ತ್ರಗಳನ್ನು ಉಪದೇಶಿಸಿದ್ದಾರೆ. ಆ ಅಸ್ತ್ರಗಳು ಪ್ರತಿಯೊಂದೂ ಅತ್ಯದ್ಭುತ, ಜಾಜ್ವಲ್ಯಮಾನವಾಗಿ ಪ್ರಕಾಶಮಾನ ಮತ್ತು ಸುಲಭ ವಾಗಿ ಪ್ರಯೋಗಿಸಲು ಶಕ್ಯವಾದವು, ದಿವ್ಯ ಹಾಗೂ ಹಿತಕರವಾದವು.

ಮಹಾರಥಃ ಕೃತಿಮಾನ್ ಕ್ಷಿಪ್ರಹಸ್ತೋ
ದೃಢಾಯುಧೋ ದೃಢಮುಷ್ಟಿರ್ದೃಢೇಷುಃ ।
ಆಚಾರ್ಯವದ್ ದ್ರೋಣಸುತಸ್ತರಸ್ವೀ
ವ್ಯವಸ್ಥಿತೋ ಯೋದ್ಧುಕಾಮಸ್ತ ವದರ್ಥೇ ॥೭॥

ಅಶ್ವತ್ಥಾಮನು ಸ್ವಯಂ ಮಹಾರಥ, ಸಫಲ ಪ್ರಯತ್ನಶೀಲ, ಶೀಘ್ರಹಸ್ತ, ದೃಢ ಆಯುಧ, ದೃಢಮುಷ್ಟಿ ದೃಢವಾದ ಬಾಣಗಳು ಉಳ್ಳವನು, ದ್ರೋಣರಂತೆಯೇ ದ್ರೋಣಪುತ್ರ. ಬಲುವೇಗ ಉಳ್ಳವನು, ನಿನಗಾಗಿ ನಿನ್ನ ಕಡೆ ಯುದ್ಧಮಾಡಲು ನಿಂತಿದ್ದಾನೆ.

ಆನರ್ತವಾಸೀ ಹೃದಿಕಾತ್ಮಜೋಽಸೌ
ಮಹಾರಥಃ ಸಾತ್ವತಾನಾಂ ವರಿಷ್ಠಃ ।
ಸ್ವಯಂ ಭೋಜಃ ಕೃತವರ್ಮಾ ಕೃತಾಸ್ತ್ರೋ
ವ್ಯವಸ್ಥಿತೋ ಯೋದ್ಧುಕಾಮಸ್ತದರ್ಥೇ ॥೮॥

ಆನರ್ತದೇಶವಾಸಿ, ಯಾದವಕುಲಶ್ರೇಷ್ಠ ಮಹಾರಥ ಭೋಜವಂಶದವನು ಸ್ವತಃ ಅಸ್ತ್ರವಿದ್ಯಾಪಾರಂಗತನು ಕೃತವರ್ಮ. ಅವನೂ ನಿನಗಾಗಿ ಯುದ್ಧಮಾಡಲು ಬಯಸಿ ನಿನ್ನಕಡೆ ನಿಂತಿದ್ದಾನೆ.

ಆರ್ತಾಯನಿಃ ಸಮರೇ ದುಷ್ಪ್ರಕಂಪ್ಯಃ
ಸೇನಾಗ್ರಣೀಃ ಪ್ರಥಮಸ್ತಾವಕಾನಾಮ್ ।
ಸ್ವಾನ್ ಸ್ವಸ್ರೀಯಾನ್ ಪಾಂಡವೇಯಾನ್ ವಿಸೃಜ್ಯ
ಸತ್ಯಾಂ ವಾಚಂ ಸ್ವಾಂ ಚಿಕೀರ್ಷನ್ ತರಸ್ವೀ ॥೯॥

ಋತಾಯನರಾಜನ ಪುತ್ರ ಶಲ್ಯ ಯುದ್ಧಕ್ಕೆ ನಿಂತರೆ ವಿಚಲಿತನಾಗದವನು. ಸೈನ್ಯದಲ್ಲಿ ಅಗ್ರಗಣ್ಯ, ನಿನ್ನ ಕಡೆಯವರಲ್ಲಿ ಮೊದಲನೆಯವನು, ವೇಗಶಾಲಿ, ತಾನು

ಕೊಟ್ಟಮಾತಿಗೆ ತಪ್ಪದಿರುವುದಕ್ಕಾಗಿ ಸ್ವಂತ ತಂಗಿಯ ಮಕ್ಕಳಾದ ಪಾಂಡವರನ್ನೂ ಬಿಟ್ಟು ನಿನ್ನ ಪಕ್ಷಕ್ಕೆ ಬಂದವನು.

ತೇಜೋವಧಂ ಸೂತಪುತ್ರಸ್ಯ ಸಂಖೇ
ಪ್ರತಿಶ್ರುತ್ಯಾಜಾತಶತ್ರೋಃ ಪುರಸ್ತಾತ್ ।
ದುರಾಧರ್ಷಃ ಶಕ್ರಸಮಾನವೀರ್ಯಃ
ಶಲ್ಯಃ ಸ್ಥಿತೋ ಯೋದ್ಧುಕಾಮಸ್ತವದರ್ಥೇ ॥೧೦॥

ಯುದ್ಧದಲ್ಲಿ ಕರ್ಣನ ತೇಜೋವಧೆ ಮಾಡುವೆನೆಂದು ಯುಧಿಷ್ಠಿರನ ಮುಂದೆ ಪ್ರತಿಜ್ಞೆ ಮಾಡಿ ನಿನಗಾಗಿ ಯುದ್ಧ ಮಾಡಲು ಬಯಸಿ ನಿಂತಿದ್ದಾನೆ. ಶತ್ರುಗಳಿಗೆ ವಶನಾಗದ ಇಂದ್ರಸಮಾನ ವೀರ್ಯವುಳ್ಳ ಶಲ್ಯಮಹಾರಾಜ.

ಆಜಾನೇಯೈಃ ಸೈಂಧವೈಃ ಪಾರ್ವತೀಯೈಃ
ನದೀಜ ಕಾಂಭೋಜ ವನಾಯುಬಾಹ್ಲಿಕೈಃ ।
ಗಾಂಧಾರರಾಜಃ ಸ್ವಬಲೇನ ಯುಕ್ತೋ
ವ್ಯವಸ್ಥಿತೋ ಯೋದ್ಧುಕಾಮಸ್ತವದರ್ಥೇ ॥೧೧॥

ಆಜಾನೇಯ, ಸೈಂಧವ, ಪರ್ವತೀಯ, ನದೀಜ, ಕಾಂಬೋಜ, ವನಾಯುಜ ಮುಂತಾದ ನಾನಾ ಜಾತಿಯ ಶ್ರೇಷ್ಠ ಕುದುರೆಗಳ ಒಡೆಯನಾದ ಗಾಂಧಾರರಾಜ ಶಕುನಿ ತನ್ನ ಸೈನ್ಯದೊಂದಿಗೆ ನಿನ್ನ ಕಡೆ ನಿಂತು ಯುದ್ಧಮಾಡಲು ಬಯಸಿದ್ದಾನೆ.

ಶಾರದ್ವತೋ ಗೌತಮಶ್ಚಾಪಿ ರಾಜನ್
ಮಹಾಬಲೋ ಬಹುಚಿತ್ರಾಸ್ತ್ರಯೋಧೀ ।
ಧನುಶ್ಚಿತ್ರಂ ಸಂವಹನ್ ಭಾರಸಾಹಂ
ವ್ಯವಸ್ಥಿತೋ ಯೋದ್ಧುಕಾಮಸ್ತವದರ್ಥೇ ॥೧೨॥

ರಾಜನೆ, ಮಹಾಬಾಹು, ಬಹು ಅದ್ಭುತ ಅಸ್ತ್ರಯುದ್ಧಗಳನ್ನು ಮಾಡುವವನು ಶರದ್ವಂತನ ಪುತ್ರ ಗೌತಮವಂಶದವನು ಕೃಪಾಚಾರ್ಯ ಅದ್ಭುತವಾದ, ಬಹುಭಾರವನ್ನು ಸಹಿಸುವ ಧನುಸ್ಸನ್ನು ಹಿಡಿದು ನಿನಗಾಗಿ ಯುದ್ಧಮಾಡಲು ಬಯಸಿ ನಿಂತಿದ್ದಾನೆ.

ಮಹಾರಥಃ ಕೇಕಯರಾಜಪುತ್ರಃ
ಸದಶ್ವಯುಕ್ತಂ ಚ ಪತಾಕಿನಂ ಚ ।
ರಥಾಗ್ರ್ಯಮಾರುಹ್ಯ ಕುರುಪ್ರವೀರ
ವ್ಯವಸ್ಥಿತೋ ಯೋದ್ಧುಕಾಮಸ್ತ್ವದರ್ಥೇ ॥೧೩॥

ಮಹಾರಥನಾದ ಒಬ್ಬ ಕೇಕಯರಾಜಕುಮಾರನು ಒಳ್ಳೆಯ ಕುದುರೆಗಳಿಂದ ಯುಕ್ತವಾದ ಪತಾಕೆಯಿಂದಲೂ ಕೂಡಿದ ರಥದಲ್ಲಿ ನಿನ್ನ ಸಲುವಾಗಿ ಯುದ್ಧಮಾಡಲು ಬಯಸಿ ನಮ್ಮ ಕಡೆ ನಿಂತಿದ್ದಾನೆ.

ತಥಾ ಸುತಸ್ತೇ ಜ್ವಲನಾರ್ಕವರ್ಣಂ
ರಥಂ ಸಮಾಸ್ಥಾಯ ಕುರುಪ್ರವೀರಃ ।
ವ್ಯವಸ್ಥಿತಃ ಕುರುರಾಜೋ ನರೇಂದ್ರ
ವ್ಯಭ್ರೇ ಸೂರ್ಯೋ ಭ್ರಾಜಮಾನೋ ಯಥಾ ಖೇ ॥೧೪॥

ರಾಜನೆ, ನಿನ್ನ ಪುತ್ರನಾದ ಕುರುವಂಶದ ವೀರನಾದ ಪುರುಮಿತ್ರನು ಅಗ್ನಿ-ಸೂರ್ಯರಂತೆ ಬೆಳಗುವ ರಥದಲ್ಲಿ ಮೋಡವಿಲ್ಲದ ಆಕಾಶದಲ್ಲಿ ಬೆಳಗುವ ಸೂರ್ಯನಂತೆ, ಕುಳಿತಿರುತ್ತಾನೆ.

ದುರ್ಯೋಧನೋ ನಾಗಕುಲಸ್ಯ ಮಧ್ಯೇ
ವ್ಯವಸ್ಥಿತಃ ಸಿಂಹ ಇವಾಬಭಾಸೇ ।
ರಥೇನ ಜಾಂಬೂನದಭೂಷಣೇನ
ವ್ಯವಸ್ಥಿತಃ ಸಮರೇ ಯೋತ್ಸ್ಯಮಾನಃ ॥೧೫॥

ದುರ್ಯೋಧನನೂ ಕೂಡ ಆನೆಗಳ ನಡುವೆ ಸಿಂಹದಂತೆ ಬೆಳಗುತ್ತಾನೆ. ಚಿನ್ನದಿಂದ ಅಲಂಕೃತವಾದ ರಥವೇರಿ ರಣರಂಗದಲ್ಲಿ ಯುದ್ಧಮಾಡಲು ನಿಂತಿರುತ್ತಾನೆ.

ಸ ರಾಜಮಧ್ಯೇ ಪುರುಷಪ್ರವೀರೋ
ವ್ಯವಸ್ಥಿತೋ ಯೋತ್ಸ್ಯಮಾನಸ್ತ್ವದರ್ಥೇ ।
ಪದ್ಮಾಂತರಾಭೋಽಗ್ನಿರಿವಾಲ್ಪಧೂಮೋ
ಮೇಘಾಂತರೇ ಸೂರ್ಯ ಇವ ಪ್ರಕಾಶಃ ॥೧೬॥

ಪುರುಷಶ್ರೇಷ್ಠನಾದ ದುರ್ಯೋಧನ ಚಿನ್ನದ ಸುಂದರ ಕವಚ ತೊಟ್ಟುರಾಜರ ಮಧ್ಯದಲ್ಲಿ ಶೋಭಿಸುತ್ತಾನೆ. ಕಮಲದ ಕಾಂತಿಯಿಂದ ಅಲ್ಪಧೂಮಯುಕ್ತವಾದ ಅಗ್ನಿಯಂತೆ ಮೋಡಗಳ ನಡುವಿನ ಸೂರ್ಯನಂತೆ ಪ್ರಕಾಶಿಸುತ್ತಾನೆ.

ತಥಾ ಸುಷೇಣೋಽಪ್ಯಸಿಚರ್ಮಪಾಣಿಃ
ತವಾತ್ಮಜಃ ಸತ್ಯಸೇನಶ್ಚ ವೀರಃ ।
ವ್ಯವಸ್ಥಿತಶ್ಚಿತ್ರಸೇನೇನ ಸಾರ್ಧಂ
ಹೃಷ್ಟಾತ್ಮಾನೌ ಸಮರೇ ಯೋದ್ಧುಕಾಮೌ ॥೧೭॥

ಹಾಗೇ ಖಡ್ಗ–ಚರ್ಮಧಾರಿಯಾದ ಕರ್ಣಪುತ್ರ ಸುಷೇಣನೂ ನಿನ್ನ ಪುತ್ರರಾದ ವೀರ ಸತ್ಯಸೇನ ಚಿತ್ರಸೇನರೂ ಹೃಷ್ಟಚಿತ್ತರಾಗಿ ಯುದ್ಧದಲ್ಲಿ ಹೋರಾಡಲು ಬಯಸಿ ನಿಂತಿದ್ದಾರೆ.

ಹ್ರೀನಿಷೇವೋ ಭಾರತ ರಾಜಪುತ್ರ-
ಶ್ಚಿತ್ರಾಯುಧಃ ಶ್ರುತವರ್ಮಾ ಜಯಶ್ಚ ।
ಶಲಶ್ಚ ಸತ್ಯವ್ರತದುಃಶಲೌ ಚ
ವ್ಯವಸ್ಥಿತಾ ಬಲಿನೋ ಯೋದ್ಧುಕಾಮಾಃ ॥೧೮॥

ರಾಜನೆ, ಲಜ್ಜಾ–ವಿನಯಧರ್ಮವನ್ನಾಚರಿಸುವ ರಾಜಕುಮಾರರಾದ ಚಿತ್ರಾಯುಧ ಶ್ರುತವರ್ಮ ಜಯ ಶಲ ಸತ್ಯವ್ರತ ದುಶ್ಶಲ ಈ ಎಲ್ಲ ನರಶ್ರೇಷ್ಠರೂ ಸೈನ್ಯಸಮೇತರಾಗಿ ನಮ್ಮ ಕಡೆ ನಿಂತಿದ್ದಾರೆ.

ಕೈತವ್ಯಾನಾಮಧಿಪಃ ಶೂರಘಾತೀ
ರಣೇ ರಣೇ ಶತ್ರುಹಾ ರಾಜಪುತ್ರಃ ।
ಪತ್ತೀ ರಥೀ ನಾಗಹಯಪ್ರಯಾಯೀ
ವ್ಯವಸ್ಥಿತೋ ಯೋದ್ಧುಕಾಮಸ್ತವಾರ್ಥೇ ॥೧೯॥

ಗಾಂಧಾರರಾಜಪುತ್ರ ಶಕುನಿ, ಜೂಜುಗಾರರಲ್ಲಿ ಅಗ್ರಗಣ್ಯ, ತಾನೇ ಶೂರನೆಂದು ಹೆಮ್ಮೆ ಪಡುವವನು. ಪ್ರತಿಯೊಂದು ಯುದ್ಧದಲ್ಲಿ ಕಾಲಾಳುವಾಗಿ ರಥಿಕನಾಗಿ ಗಜಾರೋಹಿಯಾಗಿ ಅಶ್ವಾರೋಹಿಯಾಗಿ ರಣರಂಗದಲ್ಲಿ ಸಂಚರಿಸಿ

ಶತ್ರುನಾಶ ಮಾಡಬಲ್ಲವನು. ಅವನೂ ನಿನಗಾಗಿ ಯುದ್ಧಮಾಡಲು ಬಯಸಿ ಸಜ್ಜಾಗಿ ನಿಂತಿದ್ದಾನೆ.

ಗಾಂಧಾರರಾಜಃ ಸಸುತಶ್ಚ ರಾಜನ್
ದುರ್ಯೋತವೇದೀ ಕಲಹಪ್ರಿಯಶ್ಚ।
ಗಾಂಧಾರಮುಖ್ಯೈರ್ಯವನೈಶ್ಚ ರಾಜನ್
ವ್ಯವಸ್ಥಿತೋ ಯೋದ್ಧುಕಾಮಸ್ತ ವದರ್ಥೇ ॥೨೦॥

ಶಕುನಿ ತನ್ನ ಪುತ್ರನೊಂದಿಗೂ ಗಾಂಧಾರ ಯೋಧರಿಂದ ಹಾಗೂ ಯವನರಿಂದಲೂ ಯುಕ್ತನಾಗಿದ್ದು ಕಲಹಪ್ರಿಯನಾದ್ದರಿಂದ ಅನ್ಯಾಯದ ಜೂಜಾಡುತ್ತಲೇ, ನಿನ್ನ ಸಲುವಾಗಿ ಈಗ ಯುದ್ಧಮಾಡಲು ಬಯಸಿ ಸಜ್ಜಾಗಿದ್ದಾನೆ.

ವೀರಃ ಶ್ರುತಾಯುಶ್ಚ ಶ್ರುತಾಯುಧಶ್ಚ
ಚಿತ್ರಾಂಗದಶ್ಚಿತ್ರವರ್ಮಾ ಚ ಯೋಧೀ।
ವ್ಯವಸ್ಥಿತಾ ಯತ್ತಸೈನ್ಯಾ ನರಾಗ್ರ್ಯಾಃ
ಪ್ರಹಾರಿಣೋ ಮಾನಿನಃ ಸತ್ಯಸಂಧಾಃ ॥೨೧॥

ವೀರ ಶ್ರುತಾಯು, ಶ್ರುತಾಯುಧ, ಚಿತ್ರಾಂಗದ, ಚಿತ್ರವರ್ಮ ಇವರೆಲ್ಲರೂ ಯುದ್ಧದಲ್ಲಿ ಶತ್ರುಗಳನ್ನು ಪ್ರಹರಿಸುವ ಸ್ವಾಭಿಮಾನಿ ಸತ್ಯಸಂಧರಾದ ಶ್ರೇಷ್ಠಯೋಧರು ಯುದ್ಧದ ಬಯಕೆಯಿಂದ ಅದಕ್ಕೆ ಸಜ್ಜಾಗಿ ನಿಂತಿದ್ದಾರೆ.

ಕರ್ಣಾತ್ಮಜಃ ಸತ್ಯಸೇನೋ ಮಹಾತ್ಮಾ
ವ್ಯವಸ್ಥಿತಃ ಸಮರೇ ಯೋದ್ಧುಕಾಮಃ ॥೨೨॥

ರಾಜನೆ, ಮಹಾತ್ಮ ಕರ್ಣಪುತ್ರ ಸತ್ಯಸೇನನೂ ಯುದ್ಧದಲ್ಲಿ ಹೋರಾಡಲು ಬಯಸಿ ನಿಂತಿದ್ದಾನೆ.

ಅಥಾಪರೌ ಕರ್ಣಸುತೌ ವರಾಸ್ತ್ರೌ
ಮಹಾಬಲೌ ಲಘುಹಸ್ತೌ ನರೇಂದ್ರ।
ಬಲೇ ಮಹತ್ಯುಲ್ಬಣಸತ್ತ ವೀರ್ಯೌ
ವ್ಯವಸ್ಥಿತೌ ಯೋದ್ಧುಕಾಮೌ ತ್ವದರ್ಥೇ ॥೨೩॥

ರಾಜನೆ, ಇನ್ನಿಬ್ಬರು ಕರ್ಣಪುತ್ರರೂ ಶ್ರೇಷ್ಠ ಅಸ್ತ್ರಧಾರಿಗಳು ಮಹಾಬಲಶಾಲಿಗಳು, ಶೀಘ್ರಹಸ್ತರು, ಉತ್ತಮವಾದ ಸತ್ವವೀರ್ಯಗಳಿಂದ ಸಂಪನ್ನರು. ನಿನ್ನ ಸಲುವಾಗಿ ಯುದ್ಧಮಾಡಲು ಅವರು ದೊಡ್ಡ ಸೈನ್ಯ ತಂದು ನಿಂತಿದ್ದಾರೆ.

ಏತೈಶ್ಚ ಮುಖ್ಯೈರಪರೈಶ್ಚ ರಾಜನ್
ಯೋಧಪ್ರವೀರೈರಮಿತಪ್ರಭಾವೈಃ ।
ವೃತೋ ರಣಪ್ರೇಪ್ಸುರಮಿತ್ರಸಂಘೈಃ
ವ್ಯವಸ್ಥಿತಃ ಕುರುರಾಜೋ ಜಯಾಯ ॥೨೪॥

ಈ ಎಲ್ಲ ಮುಖ್ಯ ವೀರಯೋಧ ಶ್ರೇಷ್ಠರೊಂದಿಗೆ, ಅಮಿತಶಕ್ತಿಉಳ್ಳ ಬೇರೆ ಯೋಧರಿಂದಲೂ ಕೂಡಿಕೊಂಡು ಜಯಸಂಪಾದನೆಯ ಉದ್ದೇಶದಿಂದ ಶತ್ರುಸಮೂಹಗಳೊಡನೆ ಯುದ್ಧ ಮಾಡಲು ಬಯಸಿ ನಿಂತಿದ್ದಾನೆ ದುರ್ಯೋಧನ.

ಧೃತರಾಷ್ಟ್ರಃ

ಆಖ್ಯಾತಾ ಜೀವಮಾನಾ ಯೇ ಪರೇಭ್ಯೋಽನ್ಯೇ ಯಥಾತಥಮ್ ।
ಇತೀದಮಧಿಗಚ್ಛಾಮಿ ತ್ಯಕ್ತಮರ್ಥಾಭಿಪತ್ತಿತಃ ॥೨೫॥

ಧೃತರಾಷ್ಟ್ರ ಹೇಳುತ್ತಾನೆ— 'ಸಂಜಯ, ನೀನೀಗ ಪಾಂಡವಪಕ್ಷದವರಿಗಿಂತ ಬೇರೆಯಾಗಿ ನಮ್ಮ ಪಕ್ಷದಲ್ಲಿ ಬದುಕಿ ಉಳಿದಿರುವವರ ಬಗ್ಗೆ ಯಥಾವತ್ತಾಗಿ ಹೇಳಿರುವೆ. ಅದರಿಂದ ನೀನು ಹೇಳಿದಂತೆ ನೋಡಿದರೆ ನಮ್ಮ ಸೈನ್ಯ ಯಶಸ್ಸನ್ನು ಕಾಣುವುದರಲ್ಲಿ ವಿಫಲವೇ ಆಗುವುದೆಂದು ನನಗೆ ಮನವರಿಕೆಯಾಗುತ್ತಿದೆ.

'ವ್ಯಕ್ತಮರ್ಥಾಭಿಪತ್ತಿತಃ' ಎಂದು ಪ್ರಚಲಿತಪಾಠ ಸರಿಯಲ್ಲ. 'ತ್ಯಕ್ತಮರ್ಥಾಭಿಪತ್ತಿತಃ' ಎಂದಿರಬೇಕೆಂದು ಲಕ್ಷಾಲಂಕಾರ ಹೇಳುತ್ತಿದೆ. 'ಅರ್ಥಾಭಿಪತ್ತಿ' ಉದ್ದಿಷ್ಟವಾದ ಯಶಸ್ಸಿನ ಪ್ರಾಪ್ತಿಯು 'ತ್ಯಕ್ತ' ಸೈನ್ಯವನ್ನು ಬಿಟ್ಟು ದೂರ ಹೋಗಿದೆ ಎಂದರ್ಥ. ಸೈನ್ಯ ಅದರಾಸೆಯನ್ನು ಬಿಡಬೇಕು ಎಂದು ಹೇಳಿದಂತಾಗುವುದು.

ವೈಶಂಪಾಯನಃ

ಏವಂ ಬ್ರುವನ್ನೇವ ತದಾ ಧೃತರಾಷ್ಟ್ರೋಽಂಬಿಕಾಸುತಃ ।
ಹತಪ್ರವೀರಭೂಯಿಷ್ಠಂ ಕಿಂಚಿಚ್ಛೇಷಂ ಸ್ವಕಂ ಬಲಮ್ ।
ಶ್ರುತ್ವಾ ವ್ಯಾಮೋಹಮಾಗಚ್ಛತ್ ಶೋಕವ್ಯಾಕುಲಚೇತನಃ ॥೨೬॥

ವೈಶಂಪಾಯನರು ಜನಮೇಜಯರಾಜನಿಗೆ ಹೇಳುತ್ತಾರೆ— ಹೀಗೆ ಹೇಳುತ್ತಲೇ ಧೃತರಾಷ್ಟ್ರ ತನ್ನ ಕಡೆಯಲ್ಲಿ ಹೆಚ್ಚಿನವರು ಮಡಿದು ಕೆಲವೇ ಮಂದಿ ಉಳಿದಿರುವುದನ್ನು ಕೇಳಿ ಶೋಕಾಕುಲಚಿತ್ತನಾಗಿ ಮೂರ್ಛೆಗೊಂಡ.

ಮುಹ್ಯಮಾನೋಽಬ್ರವೀಚ್ಚೈನಂ ಮುಹೂರ್ತಂ ತಿಷ್ಠ ಸಂಜಯ ।
ವ್ಯಾಕುಲಂ ಮೇ ಮನಃ ಸೂತ ಶ್ರುತ್ವೈತನ್ಮಹದಪ್ರಿಯಮ್ ॥೨೭॥

ಮೂರ್ಛೆ ಹೋಗುತ್ತಿರುವಾಗ ಆತ ಹೇಳಿದ, 'ಸ್ವಲ್ಪ ಹೊತ್ತು ನಿಲ್ಲು ಸಂಜಯ, ನೀನು ಹೇಳಿದ ಮಹಾ ಅನಿಷ್ಟ ವೃತ್ತಾಂತವನ್ನು ಕೇಳಿ ನನ್ನ ಮನಸ್ಸು ವ್ಯಾಕುಲ ಗೊಂಡಿದೆ.

ಮನೋ ಮುಹ್ಯತಿ ಚಾಂಗಾನಿ ನ ಚ ಶಕ್ನೋಮಿ ಧಾರಿತುಮ್ ।
ಇತ್ಯೇವಮುಕ್ತ್ವಾ ವಚನಂ ಧೃತರಾಷ್ಟ್ರೋಽಂಬಿಕಾಸುತಃ ।
ನಷ್ಟಚಿತ್ತಸ್ತತಃ ಸೋಽಥ ಬಭೂವ ಜಗತೀಪತಿಃ ॥೨೮॥

ನನ್ನ ಮನಸ್ಸು ನಿಶ್ಚೇಷ್ಟವಾಗುತ್ತಿದೆ. ಕಣ್ಣು ಕೈಕಾಲು ಮುಂತಾದ ಅವಯವ ಗಳನ್ನು ವಶದಲ್ಲಿಟ್ಟುಕೊಳ್ಳಲು ನಾನು ಅಶಕ್ತನಾಗುತ್ತಿದ್ದೇನೆ' ಹೀಗೆ ಹೇಳುತ್ತ ಧೃತರಾಷ್ಟ್ರ ಎಚ್ಚರ ತಪ್ಪಿದ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಸಪ್ತಮೋಽಧ್ಯಾಯಃ ॥೭॥

ಎಂಟನೆಯ ಅಧ್ಯಾಯ

ಕರ್ಣ ಮಡಿದನೆಂದರೆ ನಂಬಲಾಗದು.

ಜನಮೇಜಯಃ

ಶ್ರುತ್ವಾ ಕರ್ಣಂ ಹತಂ ಯುದ್ಧೇ ಪುತ್ರಾಂಶ್ಚೈವ ನಿಪಾತಿತಾನ್ ।
ನರೇಂದ್ರಃ ಕಿಂಚಿದಾಶ್ವಸ್ತೋ ದ್ವಿಜಶ್ರೇಷ್ಠ ಕಿಮಬ್ರವೀತ್ ॥೧॥

ಜನಮೇಜಯರಾಜ ವೈಶಂಪಾಯನರಲ್ಲಿ ಕೇಳುತ್ತಾನೆ— 'ಮುನಿಗಳೆ, ಕರ್ಣನು ಯುದ್ಧದಲ್ಲಿ ಹತನಾದುದನ್ನು ತನ್ನ ಪುತ್ರರೂ ಕೂಡ ಅನೇಕರು ಅಸುನೀಗಿದ್ದನ್ನು ಕೇಳಿ ಮೂರ್ಛೆಗೊಂಡ ಧೃತರಾಷ್ಟ್ರ ಸ್ವಲ್ಪ ಚೇತರಿಸಿಕೊಂಡಾಗ ಏನು ಹೇಳಿದ?

ಪಾಪ್ತವಾನ್ ಪರಮಂ ದುಃಖಂ ಪುತ್ರವ್ಯಸನಜಂ ಮಹತ್ ।
ತಸ್ಮಿನ್ ಯದುಕ್ತವಾನ್ ಕಾಲೇ ತನ್ಮಮಾಚಕ್ಷ್ವ ಪೃಚ್ಛತಃ ॥೨॥

ಪುತ್ರಶೋಕದಿಂದಾಗಿರುವ ಅಸಹನೀಯವಾದ ಮಹಾದುಃಖವನ್ನು ಹೊಂದಿದ ಧೃತರಾಷ್ಟ್ರನೇನು ನುಡಿದನೆಂಬುದನ್ನು ಹೇಳಿರಿ, ನಾನು ಕೇಳಲು ಬಯಸಿದ್ದೇನೆ.

ವೈಶಂಪಾಯನಃ

ಶ್ರುತ್ವಾ ಕರ್ಣಸ್ಯ ನಿಧನಮಶ್ರದ್ಧೇಯಮಿವಾದ್ಭುತಮ್ ।
ಭೂತಸಮ್ಮೋಹನಂ ಭೀಮಂ ಮೇರೋಃ ಪರ್ಯಸನಂ ಯಥಾ ॥೩॥

ವೈಶಂಪಾಯನರು ನುಡಿದರು— ಕರ್ಣನ ಸಾವೆಂದರೆ ಅದು ನಂಬಲು ಸಾಧ್ಯವಾಗದಂತಿತ್ತು. ಅದ್ಭುತವಾಗಿತ್ತು. ಭೀಕರವಾದ ಪಂಚಭೂತವಿನಾಶದಂತೆ, ಮೇರುವಿನ ಪತನದಂತೆ.

ಚಿತ್ತಮೋಹಮಿವಾಯುಕ್ತಂ ಭಾರ್ಗವಸ್ಯ ಮಹಾತ್ಮನಃ ।
ಪರಾಜಯಮಿವೇಂದ್ರಸ್ಯ ದ್ವಿಷದ್ಭ್ಯೋ ಭೀಮಕರ್ಮಣಃ ॥೪॥

ಭೃಗುವಂಶದ ಪರಶುರಾಮನ, ಅಥವಾ ಶುಕ್ರಾಚಾರ್ಯನ ಬುದ್ಧಿಗೆ

ಮೋಹಕವಿದಂತೆ. ಭಯಂಕರ ಕರ್ಮ ಮಾಡುವ ದೇವೇಂದ್ರನಿಗೆ ಶತ್ರುಗಳಿಂದ ಪರಾಜಯ ಬಂದಂತೇ ಇದು ಅಯುಕ್ತ.

ದಿವಃ ಪ್ರಪತನಂ ಭಾನೋರುರ್ವ್ಯಾಮಿವ ಮಹಾದ್ಯುತೇಃ ।
ಸಂಶೋಷಣಮಿವಾಚಿಂತ್ಯಂ ಸಮುದ್ರಸ್ಯಾಕ್ಷಯಾಂಭಸಃ ॥೫॥

ಆಕಾಶ ನೆಲಕ್ಕೆ ಬಿದ್ದಿತೆಂದರೆ, ಮಹಾತೇಜವಾದ ಸೂರ್ಯ ನೆಲಕ್ಕೆ ಉರುಳಿತೆಂದರೆ, ಅಕ್ಷಯ ಜಲಪೂರ್ಣವಾದ ಸಾಗರವೆ ಒಣಗಿ ಹೋಯಿತೆಂದರೆ ಹೇಗೋ ಹಾಗೆ ಕರ್ಣ ಅಸುನೀಗಿದನೆಂದರೆ ಅದನ್ನು ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಳ್ಳುವುದೂ ಅಸಾಧ್ಯ.

ಮಹೀವಿಯದ್‌ದಿಗಂಬೂನಾಂ ಸರ್ವನಾಶಮಿವಾದ್ಭುತಮ್ ।
ಕರ್ಮಣೋರಿವ ವೈಫಲ್ಯಮುಭಯೋಃ ಪುಣ್ಯಪಾಪಯೋಃ ॥೬॥

ಭೂಮಿ ಆಕಾಶ ದಿಕ್ಕುಗಳು ಸಮುದ್ರ ಎಲ್ಲವೂ ನಾಶವಾಗುವುದೆಂದರೆ, ಪುಣ್ಯ–ಪಾಪಕರ್ಮಗಳಿಗೆ ಫಲವಿಲ್ಲವೆಂದಾಗುವುದೆಂದರೆ ಅದೆಷ್ಟು ಆಚ್ಚರಿಯೋ ಅಷ್ಟೇ ಆಚ್ಚರಿ ಕರ್ಣನ ಸಾವು.

ಸಂಚಿಂತ್ಯ ನಿಪುಣಂ ಬುದ್ಧ್ಯಾ ಧೃತರಾಷ್ಟ್ರೋ ಜನೇಶ್ವರಃ ।
ನೇದಮಸ್ತೀತಿ ಸಂಚಿಂತ್ಯ ಕರ್ಣಸ್ಯ ಸಮರೇ ವಧಮ್ ॥೭॥

ಹೀಗೆ ಮನಸಿನಲ್ಲಿ ಯುಕ್ತಿಯುಕ್ತವಾಗಿ ಆಲೋಚಿಸಿ ಧೃತರಾಷ್ಟ್ರನು ಕರ್ಣ ಯುದ್ಧದಲ್ಲಿ ಮಡಿದುದನ್ನು 'ಇದು ಹೀಗಾಗುವುದು ಶಕ್ಯವೆ ಇಲ್ಲ' ಎಂದು ಆಲೋಚಿಸಿದ.

ಪ್ರಾಣಿನಾಮೇವಮಾತ್ಮತ್ವಾತ್ ಸ್ಯಾದಪೀತಿ ವಿಚಾರ್ಯ ಚ ।
ಶೋಕಾಗ್ನಿನಾ ದಹ್ಯಮಾನೋ ದಹ್ಯಮಾನ ಇವಾಶಯೇ ॥೮॥

ಆದರೂ ಇನ್ನೂ ವಿಚಾರಮಾಡಿ, ಉಸಿರಾಡುವ ಪ್ರಾಣಿ ಒಂದುದಿನ ಕೊನೆಯುಸಿರೆಳೆಯುವುದು ಸ್ವಾಭಾವಿಕವಾದ್ದರಿಂದ ಕರ್ಣನ ಸಾವು ಸಂಭವಿಸಿರಲೂ ಬಹುದೆಂದುಕೊಂಡು ಶೋಕದ ಬೆಂಕಿಯಲ್ಲಿ ಮನಸಿನೊಳಗೇ ಕಾದ ಬಾಣಲಿಯಲ್ಲಿ ಬೇಯುವಂತೆ ಬೆಂದುಹೋದ.

ವಿಸ್ರಸ್ತಾಂಗಃ ಶ್ವಸನ್ ದೀನೋ ಹಾ ಹೇತ್ಯುಕ್ತ್ವಾ ಸುದುಃಖಿತಃ ।
ವಿಲಲಾಪ ಮಹಾರಾಜ ಧೃತರಾಷ್ಟ್ರೋಽಂಬಿಕಾಸುತಃ ॥೯॥

ಧೃತರಾಷ್ಟ್ರನಿಗೆ ಮೈಯಲ್ಲಿ ಅವಯವಗಳೆಲ್ಲವೂ ಶಿಥಿಲಗೊಂಡುವು. ಬಹಳ ದುಃಖದಿಂದ ನಿಟ್ಟುಸಿರಿಡುತ್ತ ದೈನ್ಯದಿಂದ 'ಹಾ! ಹಾ!' ಎನ್ನುತ್ತ ಆತ ಗೋಳಾಡಿದ.

ಧೃತರಾಷ್ಟ್ರಃ

ಸಂಜಯಾಧಿರಥಿರ್ವೀರಃ ಸಿಂಹದ್ವಿರದವಿಕ್ರಮಃ ।
ವೃಷಭಪ್ರತಿಮಸ್ಕಂಧೋ ವೃಷಭಾಕ್ಷಗತಿಸ್ವರಃ ॥೧೦॥

ಧೃತರಾಷ್ಟ್ರ ನುಡಿದ— ಸಿಂಹದಂತೆ ಆನೆಯಂತೆ ಪರಾಕ್ರಮ ತೋರುವ ಕರ್ಣನು ಗೂಳಿಯಂತೆ ಹೆಗಲುಳ್ಳವನು ಗೂಳಿಯಂಥ ದೃಷ್ಟಿ ಗತಿ, ಸ್ವರಗಳುಳ್ಳವನು.

ವೃಷಭೋ ವೃಷಭಸ್ಯೇವ ಯೋ ಯುದ್ಧೇ ನ ನಿವರ್ತತೇ ।
ಶತ್ರೋರಪಿ ಮಹೇಂದ್ರಸ್ಯ ಸಿಂಹಸಂಹನನೋ ಯುವಾ ॥೧೧॥

ಗೂಳಿ ಗೂಳಿಯ ಕಾಳಗದಿಂದ ಹಿಂಜರಿಯದಿರುವಂತೆ ಕರ್ಣನು ಕೂಡ ಹಾಗೆ ದೇವೇಂದ್ರನೇ ಶತ್ರುವಾಗಿ ಯುದ್ಧಕ್ಕೆ ಬಂದರೂ, ಅವನೊಡನೆ ಹೋರಾಡುವಾಗ ಸಿಂಹದಂಥ ಮೈಯವನು ವೃದ್ಧನಾದ ಕರ್ಣ ಯುವಕನಂತೆ ಹೋರಾಡುತ್ತಾನೆ, ಹಿಂಜರಿಯುವುದಿಲ್ಲ.

ಯಸ್ಯ ಜ್ಯಾತಲಶಬ್ದೇನ ಶರವೃಷ್ಟಿರಯೇಣ ಚ ।
ರಥಾಶ್ವನರಮಾತಂಗಾ ನ ಚ ತಿಷ್ಠಂತಿ ಸಂಯುಗೇ ॥೧೨॥

ಕರ್ಣನ ಧನುಷ್ಟಂಕಾರಕ್ಕೆ, ಕರ್ಣನ ಬಾಣದ ಮಳೆಗಳ ವೇಗಕ್ಕೆ ರಣದಲ್ಲಿ ರಥ ಅಶ್ವ ಪದಾತಿ ಗಜ ಸೈನ್ಯ ಯಾವುದೂ ಇದಿರಾಗಿ ನಿಲ್ಲುತ್ತಿರಲಿಲ್ಲ.

ಯಮಾಶ್ರಿತ್ಯ ಮಹಾಬಾಹುಂ ದ್ವಿಷತ್‌ಸಂಘಘ್ನಮಚ್ಯುತಮ್ ।
ದುರ್ಯೋಧನೋಽಕರೋದ್ ವೈರಂ ಪಾಂಡುಪುತ್ರೈರ್ಮಹಾರಥೈಃ ।೧೩।

ಮಹಾಬಾಹುವಾದ ಕರ್ಣನೇ ಸಹಸ್ರ ಸಂಖ್ಯೆಯ ಶತ್ರುಗಳನ್ನೂ ತಪ್ಪದೆ ಧ್ವಂಸ

ಮಾಡುವವನೆಂದು ಅವನನ್ನೇ ಆಶ್ರಯಿಸಿ ದುರ್ಯೋಧನ ಮಹಾರಥರಾದ ಪಾಂಡವರೊಡನೆ ವೈರ ಮಾಡಿದ್ದ.

ಸ ಕಥಂ ರಥಿನಾಂ ಶ್ರೇಷ್ಠಃ ಕರ್ಣಃ ಪಾರ್ಥೇನ ಸಂಯುಗೇ ।
ನಿಹತಃ ಪುರುಷವ್ಯಾಘ್ರಃ ಪ್ರಸಹ್ಯಾಮಿತವಿಕ್ರಮಃ ॥೧೪॥

ಅಂಥ ಶ್ರೇಷ್ಠ ರಥಿಕ, ಅಮಿತ ಪರಾಕ್ರಮಿ, ಪುರುಷಶ್ರೇಷ್ಠನಾದ ಕರ್ಣ ಅರ್ಜುನನಿಂದ ಹೇಗೆ ಹತನಾದ?

ಯೋ ನಾಮನ್ಯತ ವೈ ನಿತ್ಯಮಚ್ಯುತಂ ಸಧನಂಜಯಮ್ ।
ನ ವೃಷ್ಣೀನ್ ನಾಹಿತಾನನ್ಯಾನ್ ಸ್ವಬಾಹುಬಲಮಾಶ್ರಿತಃ ॥೧೫॥

ತನ್ನ ಬಾಹುಬಲವನ್ನೇ ನೆಚ್ಚಿ ಕರ್ಣ ಕೃಷ್ಣಾರ್ಜುನರನ್ನೇ ಗಣನೆಗೆ ತಾರದಿದ್ದವನು, ಯಾದವರನ್ನಾಗಲಿ ಬೇರೆ ಯಾವ ಶತ್ರುಗಳನ್ನೇ ಆಗಲಿ ಆತ ಲೆಕ್ಕಿಸಲಿಲ್ಲ.

ಶಾರ್ಙ್ಗಗಾಂಡೀವಧನ್ವಾನೌ ಸಹಿತಾವಪರಾಜಿತೌ ।
ಅಹಂ ದಿವ್ಯಾದ್ ರಥಾದೇಕಃ ಪಾತಯಿಷ್ಯಾಮಿ ಸಂಯುಗೇ ॥೧೬॥

'ಶಾರ್ಙ್ಗಪಾಣಿ ಕೃಷ್ಣ ಮತ್ತು ಗಾಂಡೀವಧಾರಿ ಅರ್ಜುನರಿಬ್ಬರು ಕೂಡಿದರೆ ಎಂದೂ ಸೋಲರಿಯದವರಾದ ಅವರಿಬ್ಬರನ್ನೂ ನಾನು ಒಬ್ಬನೇ ಯುದ್ಧದಲ್ಲಿ ದಿವ್ಯರಥದಿಂದ ನೆಲಕ್ಕೆ ಉರುಳಿಸಬಲ್ಲೆ.'

ಇತಿ ಯಃ ಸತತಂ ಮಂದಮವೋಚಲ್ಲೋಭಮೋಹಿತಮ್ ।
ದುರ್ಯೋಧನಮವಾಚೀನಂ ರಾಜ್ಯಕಾಮುಕಮಾತುರಮ್ ॥೧೭॥

ಹೀಗೆ, ಲೋಭ ಮೋಹಪರವಶನಾಗಿ ರಾಜ್ಯದಾಸೆಯಿಂದ ಬುದ್ಧಿಗೆಟ್ಟು ಸತತ ಮುಖ ಕೆಳಗೆ ಮಾಡಿ ಕುಳಿತಿದ್ದ ಮೂರ್ಖ ದುರ್ಯೋಧನನಿಗೆ ಕರ್ಣ ಸಂತೈಸುತ್ತಿದ್ದ.

ಯೋಽಜಯತ್ ಸರ್ವಕಾಂಭೋಜಾನ್ ಅಂಬಷ್ಠಾನ್ ಕೇಕಯೈಃ ಸಹ ।
ಗಾಂಧಾರಾನ್ ಮದ್ರಕಾನ್ ಮಾತ್ಸ್ಯಾಂಸ್ತ್ರಿಗರ್ತಾನ್
ತಂಕಣಾನ್ ಶಕಾನ್ ॥೧೮॥

ಪಾಂಚಾಲಾಂಶ್ಚ ವಿದೇಹಾಂಶ್ಚ ಕುಣಿಂದಾನ್ ಕಾಶಿಕೋಸಲಾನ್ ।
ಸುಹ್ಮಾನಂಗಾಂಶ್ಚ ವಂಗಾಂಶ್ಚ ನಿಷಾದಾನ್ ಪುಂಡ್ರಕೀಕಟಾನ್ ॥೧೯॥
ವತ್ಸಾನ್ ಕಲಿಂಗಾನ್ ದರದಾನ್ ಅಶ್ಮಕಾನ್ ಋಷಿಕಾನಪಿ ॥೨೦॥

ಯೋ ಜಿತ್ವಾ ಸಮರೇ ಶೂರಾನ್ ಚಕ್ರೇ ಬಲಿಭೃತಃ ಪುರಾ ।
ಶರವ್ರಾತೈಃ ಸುನಿಶಿತೈಃ ಸುತೀಕ್ಷ್ಣೈಃ ಕಂಕಪತ್ರಿಭಿಃ ॥೨೧॥

ಎಲ್ಲ ಕಂಬೋಜ ಅಂಬಷ್ಠ ಕೇಕಯ ಗಾಂಧಾರ ಮದ್ರಕ ಮಾತ್ಸ್ಯ ತ್ರಿಗರ್ತ ತಂಕಣ ಶಕ ಪಾಂಚಾಲ ವಿದೇಹ ಕುಣಿಂದ ಕಾಶಿ ಕೋಸಲ ಸುಹ್ಮ ಅಂಗ ವಂಗ ನಿಷಾದ ಪುಂಡ್ರ ಕೀಕಟ ವತ್ಸ ಕಲಿಂಗ ದರದ ಅಶ್ಮಕ ಋಷಿಕ ಮುಂತಾದ ದೇಶಗಳ ಶೂರ ರಾಜರನ್ನೂ ಹಿಂದೆ ಕರ್ಣ ಯುದ್ಧದಲ್ಲಿ ಹದ್ದಿನ ಗರಿಯ ಪುಕ್ಕದ ಹರಿತವಾದ ತೀಕ್ಷ್ಣವಾದ ಬಾಣಗಳಿಂದ ಗೆದ್ದು ಅವರೆಲ್ಲರೂ ದುರ್ಯೋಧನನಿಗೆ ಕಪ್ಪಕೊಡುವಂತೆ ಮಾಡಿದ್ದ.

ದುರ್ಯೋಧನಸ್ಯ ವೃದ್ಧ್ಯರ್ಥಂ ವರ್ತತೇ ಯೋ ಜಯಾಯ ಚ ।
ಸೇನಾಗೋಪಶ್ಚ ಸ ಕಥಂ ಶತ್ರುಭಿಃ ಪರಮಾಸ್ತ್ರವಿತ್ ॥೨೨॥

ಘಾತಿತಃ ಪಾಂಡವೈಃ ಶೂರೈಃ ಸಮರ್ಥೈರ್ವೀರ್ಯಶಾಲಿಭಿಃ ॥ ೨೩॥

ದುರ್ಯೋಧನನಿಗೆ ದಿಗ್ವಿಜಯಕ್ಕಾಗಿ ಮತ್ತು ಐಶ್ವರ್ಯ ವೃದ್ಧಿಗಾಗಿ ಕರ್ಣನು ಸೈನ್ಯರಕ್ಷಕನಾಗಿದ್ದ. ಮಹಾ ಅಸ್ತ್ರವೇತ್ತನಾದ ಅಂಥ ಕರ್ಣನು ಶೂರವೀರಸಮರ್ಥರಾದ ಪಾಂಡವರಿಂದ ಹೇಗೆ ಹತನಾದ?

ವೃಷೋ ಮಹೇಂದ್ರೋ ದೇವೇಷು ವೃಷಃ ಕರ್ಣೋ ನರೇಷ್ವಪಿ ।
ತೃತೀಯಮನ್ಯಂ ಲೋಕೇಸ್ಮಿನ್ ವೃಷಂ ನೈವಾನುಶುಶ್ರುಮ ॥೨೪॥

ದೇವತೆಗಳಲ್ಲಿ ಮಹೇಂದ್ರನು ವೃಷ. ನೀರಿನ ಮಳೆಸುರಿಸುವುದರಿಂದ ಅವನಿಗೆ ಆ ಬಿರುದು. ಮನುಷ್ಯರಲ್ಲಿ ಕರ್ಣನು ವೃಷ. ಬೇಡಿದವರಿಗೆ ಇಷ್ಟಾರ್ಥಗಳ ಮಳೆ ಸುರಿಸುತ್ತಾನೆ ಆತ. ಹೀಗೆ ಲೋಕದಲ್ಲಿ ವೃಷರು ಇಬ್ಬರೆ ಹೊರತು ಮೂರನೆಯ ಇನ್ನೊಬ್ಬ ವೃಷನನ್ನು ನಾವು ಕೇಳಿಯೇ ಇಲ್ಲ

ಶಬರಾನ್ ಪರಹೂಣಾಂಶ್ಚ ಪ್ರಹೂಣಾನ್ ಸರಲಾನಪಿ ॥೨೫॥

ಮ್ಲೇಚ್ಛರಾಷ್ಟ್ರಾಧಿಪಾಂಶ್ಚೈವ ದುರ್ಗಾನಾಟವಿಕಾಂಸ್ತಥಾ ॥೨೬॥
ಜಿತ್ವೈತಾನ್ ಸಮರೇ ವೀರಃ ಸುತೀಕ್ಷ್ಣೈಃ ಕಂಕಪತ್ರಿಭಿಃ ।
ಕರಮಾಹಾರಯಾಮಾಸ ಜಿತ್ವಾ ಸರ್ವಾನರೀಂಸ್ತಥಾ ॥೨೭॥

ಶಬರ ಪರಹೂಣ ಪ್ರಹೂಣ ಸರಲ ಮ್ಲೇಚ್ಛ ದುರ್ಗ ಆಟವಿಕ ಈ ಎಲ್ಲ ದೇಶದ ಶತ್ರುರಾಜರನ್ನೂ ವೀರಕರ್ಣನು ಹದ್ದಿನ ರೆಕ್ಕೆಗಳ ಪುಕ್ಕಉಳ್ಳ ಬಲು ತೀಕ್ಷ್ಣವಾದ ಬಾಣಗಳಿಂದ ಗೆದ್ದು ಅವರೆಲ್ಲರೂ ದುರ್ಯೋಧನನಿಗೆ ಕರ ನೀಡುವಂತೆ ಮಾಡಿದ್ದಾನೆ.

ಉಚ್ಚೈಃಶ್ರವಾ ವರೋಽಶ್ವಾನಾಂ ರಾಜ್ಞಾಂ ವೈಶ್ರವಣೋ ವರಃ ।
ವರೋ ಮಹೇಂದ್ರೋ ದೇವಾನಾಂ ಕರ್ಣಃ ಪ್ರಹರತಾಂ ವರಃ ॥೨೮॥

ಕುದುರೆಗಳಲ್ಲಿ ಉಚ್ಚೈಃಶ್ರವವು ಶ್ರೇಷ್ಠ ರಾಜರಲ್ಲಿ ಕುಬೇರ ಶ್ರೇಷ್ಠ ದೇವತೆಗಳಲ್ಲಿ ಮಹೇಂದ್ರ ಶ್ರೇಷ್ಠ ಯೋಧರಲ್ಲಿ ಕರ್ಣನು ಶ್ರೇಷ್ಠ

ಯೋಽಜಿತಃ ಪಾರ್ಥಿವೈಃ ಶೂರೈಃ ಸಮರ್ಥೈರ್ವೀರ್ಯಶಾಲಿಭಿಃ ।
ದುರ್ಯೋಧನಸ್ಯ ವೃದ್ಧ್ಯರ್ಥಂ ಕೃತ್ಸ್ನಾಮುರ್ವೀಮಥಾಜಯತ್ ॥೨೯॥

ಕರ್ಣನು ಶೂರ ಸಮರ್ಥ ವೀರ್ಯಶಾಲಿ ರಾಜರಿಂದ ಸೋಲನ್ನು ಕಂಡವನಲ್ಲ. ಅದರಿಂದ ಅವನು ದುರ್ಯೋಧನನ ಸಂಪತ್‌ಸಮೃದ್ಧಿಗಾಗಿ ಇಡಿ ಭೂಮಿಯನ್ನು ಗೆದ್ದ.

ಯಂ ಲಬ್ಧ್ವಾ ಮಾಗಧೋ ರಾಜಾ ಸಾಂತ್ವಮಾನೋಽಥ ಸೌಹೃದೈಃ ।
ಅರೌತ್ಸೀತ್ ಕ್ಷತ್ರಮತುಲಮೃತೇ ಕೌರವಯಾದವಾನ್ ॥೩೦॥

ಕರ್ಣನನ್ನು ಸಹಾಯಕನನ್ನಾಗಿ ಪಡೆದು ಅವನನ್ನು ಸೌಹಾರ್ದವರ್ತನೆಗಳಿಂದ ಒಲಿಸಿಕೊಂಡು ಮಗಧರಾಜ ಜರಾಸಂಧನು ಕೌರವ, ಯಾದವರ ಹೊರತಾಗಿ ಎಲ್ಲ ರಾಜರನ್ನೂ ಕಾರಾಗೃಹದಲ್ಲಿ ಬಂಧಿಸಿದ್ದ.

ತಂ ಶ್ರುತ್ವಾ ನಿಹತಂ ಕರ್ಣಂ ದ್ವೈರಥೇ ಸವ್ಯಸಾಚಿನಾ ।
ಶೋಕಾರ್ಣವೇ ನಿಮಗ್ನೋಽಹಮಪ್ಲವಃ ಸಾಗರೇ ಯಥಾ ॥೩೧॥

ಅಂಥ ಕರ್ಣ ದ್ವಂದ್ವರಥಯುದ್ಧದಲ್ಲಿ ಅರ್ಜುನನಿಂದ ಹತನಾದುದನ್ನು ಕೇಳಿ ನಾನು, ನೌಕೆ ಇಲ್ಲದವನು ಸಾಗರದಲ್ಲಿ ಮುಳುಗುವಂತೆ ಶೋಕಸಾಗರದಲ್ಲಿ ಮುಳುಗಿದ್ದೇನೆ.

ಈದೃಶೈರ್ಯದಹಂ ದುಃಖೈರ್ನ ವಿನಶ್ಯಾಮಿ ಸಂಜಯ ।
ವಜ್ರಾದ್ ದೃಢತರಂ ಮನ್ಯೇ ಹೃದಯಂ ಮಮ ದುರ್ಭಿದಮ್ ॥೩೨॥

ಸಂಜಯ, ಇಂಥ ದುಃಖಗಳಿಂದಲೂ ನಾನು ನಶಿಸದಿರುವೆನೆಂದರೆ, ನನ್ನ ಎದೆ ವಜ್ರಕ್ಕಿಂತ ಹೆಚ್ಚು ಕಠಿನ, ಒಡೆಯಲಾಗದುದು ಎಂದು ಭಾವಿಸುತ್ತೇನೆ.

ಜ್ಞಾತಿಸಂಬಂಧಿಮಿತ್ರಾಣಾಮಿಮಂ ಶ್ರುತ್ವಾ ಪರಾಭವಮ್ ।
ಕೋ ಮದನ್ಯಃ ಪುಮಾನ್ ಲೋಕೇ ನ ಜಹ್ಯಾತ್ ಸೂತ
ಜೀವಿತಮ್ ॥೩೩॥

ಸಂಜಯ, ಜ್ಞಾತಿ ಸಂಬಂಧಿಗಳ ಮಿತ್ರರ ಪರಾಭವವನ್ನು ಕೇಳಿಯೂ ನನ್ನ ಹೊರತು ಇನ್ನಾವ ಪುರುಷನು ಲೋಕದಲ್ಲಿ ಪ್ರಾಣತ್ಯಾಗ ಮಾಡದಿರುತ್ತಾನೆ?

ವಿಷಮಗ್ನಿಂ ಪ್ರಪಾತಂ ವಾ ಪರ್ವತಾಗ್ರಾದಹಂ ವೃಣೇ ।
ಮಹಾಪ್ರಸ್ಥಾನಗಮನಂ ಜಲಂ ಪ್ರಾಯೋಪವೇಶನಮ್ ॥೩೪॥
ನ ಹಿ ಶಕ್ಷ್ಯಾಮಿ ದುಃಖಾನಿ ಸೋಢುಂ ಕಷ್ಟಾನಿ ಸಂಜಯ ॥೩೫॥

ವಿಷಪ್ರಾಶನ, ಅಗ್ನಿಪ್ರವೇಶ, ಪರ್ವತಾಗ್ರದಿಂದ ಪ್ರಪಾತಕ್ಕೆ ಬೀಳುವುದು, ಮಹಾಪ್ರಸ್ಥಾನ, ನೀರಲ್ಲಿ ಮುಳುಗುವುದು, ಪ್ರಾಯೋಪವೇಶ— ಇವುಗಳಿಂದಲ್ಲದೆ ಬೇರಾವ ಬಗೆಯಿಂದಲೂ ನಾನು ಕಷ್ಟದಾಯಕವಾದ ಈ ದುಃಖಗಳನ್ನು ಸಹಿಸಿಕೊಳ್ಳಲಾರೆ, ಸಂಜಯ!'

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಅಷ್ಟಮೋऽಧ್ಯಾಯಃ ॥೮॥

❖

ಒಂಬತ್ತನೆಯ ಅಧ್ಯಾಯ

ಕರ್ಣಮರಣದ ದುಃಖ ಅಸಹನೀಯ

ಸಂಜಯಃ

ಶ್ರಿಯಾ ಕುಲೇನ ಯಶಸಾ ತಪಸಾ ಚ ಶ್ರುತೇನ ಚ ।
ತ್ವಾಮದ್ಯ ಸಂತೋ ಮನ್ಯಂತೇ ಯಯಾತಿಮಿವ ನಾಹುಷಮ್ ॥೧॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ಸಂಪತ್ತು ಸತ್ಕುಲ ಕೀರ್ತಿ ತಪಸ್ಸು ಶಾಸ್ತ್ರಜ್ಞಾನ ಇವುಗಳಲ್ಲಿ ನಿನ್ನನ್ನು ಈಗ ನಹುಷಪುತ್ರನಾದ ಯಯಾತಿಗೆ ಸಮನೆಂದು ಸಜ್ಜನರು ಪರಿಗಣಿಸುತ್ತಾರೆ.

ಶ್ರುತೇ ಮಹರ್ಷಿಪ್ರತಿಮಃ ಕೃತಕೃತ್ಯೋಽಸಿ ಪಾರ್ಥಿವ ।
ಪರ್ಯವಸ್ಥಾಪಯಾತ್ಮಾನಂ ಮಾ ವಿಷಾದೇ ಮನಃ ಕೃಥಾಃ ॥೨॥

ಶಾಸ್ತ್ರಜ್ಞಾನದಲ್ಲಿ ನೀನು ಋಷಿತುಲ್ಯನಾಗಿರುವೆ. ಕೃತಕೃತ್ಯನಾಗಿರುವೆ. ರಾಜನೆ, ನಿನ್ನನ್ನು ಸಾವರಿಸಿಕೊಳ್ಳು, ಮನಸಿನಿಂದ ವಿಷಾದವನ್ನು ದೂರಮಾಡಿಕೊಳ್ಳು.

ಧೃತರಾಷ್ಟ್ರಃ

ದೈವಮೇವ ಪರಂ ಮನ್ಯೇ ಪೌರುಷಂ ತು ನಿರರ್ಥಕಮ್ ।
ಯತ್ರ ಸಾಲಪ್ರತೀಕಾಶಃ ಕರ್ಣೋಽವಧ್ಯತ ಸಂಯುಗೇ ॥೩॥

ಧೃತರಾಷ್ಟ್ರನು ಹೇಳುತ್ತಾನೆ— ದೈವವೆ ಮೇಲು ಎಂದು ನನಗೆ ಅನಿಸುತ್ತಿದೆ, ಪೌರುಷ ವ್ಯರ್ಥ. ಏಕೆಂದರೆ ಸಾಲವೃಕ್ಷದಂತೆ ಉನ್ನತಗಾತ್ರದವನಾದ ಕರ್ಣ ಯುದ್ಧದಲ್ಲಿ ಹತನಾದ.

ಹತ್ವಾ ಯೌಧಿಷ್ಠಿರಂ ಸೈನ್ಯಂ ಪಾಂಚಾಲಾಂಶ್ಚ ಮಹಾರಥಾನ್ ।
ಪ್ರತಾಪ್ಯ ಶರವರ್ಷೇಣ ದಿಶಃ ಸರ್ವಾ ಮಹಾರಥಃ ॥೪॥

ಮೋಹಯಿತ್ವಾ ರಣೇ ಪಾರ್ಥಾನ್ ವಜ್ರಹಸ್ತ ಇವಾಸುರಾನ್ ।
ಕಥಂ ಸ ನಿಹತಃ ಶೇತೇ ವಾತನುನ್ನ ಇವ ದ್ರುಮಃ ॥೫॥

ಯುಧಿಷ್ಠಿರನ ಸೈನ್ಯವನ್ನು ನಾಶಪಡಿಸಿ, ಮಹಾರಥರಾದ ಪಾಂಚಾಲರನ್ನು ವಧಿಸಿ ಬಾಣಗಳ ಮಳೆಯಿಂದ ಎಲ್ಲ ದಿಕ್ಕುಗಳನ್ನೂ ಬೆಂದುಹೋಗುವಂತೆ ಮಾಡಿ, ಇಂದ್ರನು ಅಸುರರನ್ನು ಹೇಗೋ ಹಾಗೆ ಪಾಂಡವರನ್ನು ಕಂಗೆಡಿಸಿದ ಮಹಾರಥನಾದ ಕರ್ಣ ಬಿರುಗಾಳಿಗೆ ಸಿಲುಕಿದ ಮರದಂತೆ ಹೇಗೆ ರಣರಂಗದಲ್ಲಿ ಹತನಾಗಿ ಒರಗಿದ್ದಾನೆ?

ಶೋಕಸ್ಯಾಂತಂ ನ ಪಶ್ಯಾಮಿ ಪಾರಂ ಜಲನಿಧೇರಿವ ।
ಚಿಂತಾ ಮೇ ವರ್ಧತೇ ತೀವ್ರಾ ಮುಮೂರ್ಷಾ ಚೋಪಜಾಯತೇ ॥೬॥

ಸಮುದ್ರದ ಆಚೆ ದಡದಂತೆ ನನಗೆ ಶೋಕದ ಕೊನೆಯೆ ಕಾಣುತ್ತಿಲ್ಲ. ಚಿಂತೆ ಹೆಚ್ಚುತ್ತಲೇ ಇದೆ. ಸಾಯಬೇಕೆನಿಸುತ್ತಿದೆ.

ಕರ್ಣಸ್ಯ ನಿಧನಂ ಶ್ರುತ್ವಾ ವಿಜಯಂ ಫಲ್ಗುನಸ್ಯ ಚ ।
ಅಶ್ರದ್ಧೇಯಮಿದಂ ಮನ್ಯೇ ವಧಂ ಕರ್ಣಸ್ಯ ಸಂಜಯ ॥೭॥

ಕರ್ಣನ ಮರಣವನ್ನು, ಅರ್ಜುನನ ವಿಜಯವನ್ನು ನಾನು ಕೇಳಿದೆ. ಆದರೆ ಸಂಜಯ, ಕರ್ಣನ ವಧೆಯಾಯಿತೆಂಬುದನ್ನು ನನಗೆ ನಂಬಲು ಆಗುತ್ತಿಲ್ಲ.

ವಜ್ರಸಾರಮಯಂ ನೂನಂ ಹೃದಯಂ ಮಮ ದುರ್ಭಿದಮ್ ।
ಯಚ್ಛ್ರುತ್ವಾ ಪುರುಷವ್ಯಾಘ್ರಂ ಹತಂ ಕರ್ಣಂ ನ ದೀರ್ಯತೇ ॥೮॥

ನನ್ನ ಎದೆ ನಿಶ್ಚಯವಾಗಿ ವಜ್ರದ ಸಾರದಿಂದಾದುದು. ಅಭೇದ್ಯವಾದುದು, ಪುರುಷಶ್ರೇಷ್ಠನಾದ ಕರ್ಣ ಹತನಾದುದನ್ನು ಕೇಳಿಯೂ ಅದು ಸೀಳಿ ಹೋಗುತ್ತಿಲ್ಲ!

ಆಯುರ್ನೂನಂ ಸುದೀರ್ಘಂ ಮೇ ವಿಹಿತಂ ದೈವತೈಃ ಪುರಾ ।
ಯತ್ರ ಕರ್ಣಂ ಹತಂ ಶ್ರುತ್ವಾ ಜೀವಾಮೀಹ ಸುದುಃಖಿತಃ ॥೯॥

ನನ್ನ ಆಯುಸ್ಸು ಬಲು ದೀರ್ಘವಾಗಿರಬೇಕೆಂದು ದೇವತೆಗಳು ಪ್ರಾಯಃ ವಿಧಿಸಿರಬೇಕು. ಏಕೆಂದರೆ ಕರ್ಣ ಹತನಾಗಿದ್ದಾನೆ ಎಂದು ಕೇಳಿಯೂ ನಾನು ಬಲು ದುಃಖಿತನಾಗಿ ಬದುಕಿಯೇ ಇದ್ದೇನೆ.

ಧಿಗ್ ಜೀವಿತಮಿದಂ ಚೈವ ಸುಹೃದ್ದೀನಸ್ಯ ಸಂಜಯ ।
ಅದ್ಯ ಚಾಹಂ ದಶಾಮೇತಾಂ ಗತಃ ಸಂಜಯ ಕುತ್ಸಿತಾಮ್ ॥೧೦॥

ಸಂಜಯ, ಸಂಜಯ, ಆಪ್ತರಿಲ್ಲದ ನನ್ನ ಈ ಬಾಳನ್ನು ಸುಡಬೇಕು. ಅದರ ಸಲುವಾಗಿ ನಾನು ಈ ಹೀನಸ್ಥಿತಿಯಲ್ಲಿರುವಂತಾಯಿತು.

ಕೃಪಣಂ ವರ್ತಯಿಷ್ಯಾಮಿ ಶೋಚ್ಯಃ ಸರ್ವಸ್ಯ ಮಂದಧೀಃ ॥೧೧॥

ಮುಂದೆ ನಾನು ತುಚ್ಛವಾದ ಬಾಳನ್ನು ಬಾಳುತ್ತೇನೆ. ಮಂದಬುದ್ಧಿಯವನಾದ ನನ್ನಲ್ಲಿ ಎಲ್ಲರೂ ಕನಿಕರಪಡುವಂತಾಗುತ್ತದೆ.

ಅಹಮೇವ ಪುರಾ ಭೂತ್ವಾ ಸರ್ವಲೋಕಸ್ಯ ಸತ್ಕೃತಃ ।
ಪರಿಭೂತಃ ಪುನಃ ಸೂತ ಕಥಂ ಶಕ್ಷ್ಯಾಮಿ ಜೀವಿತುಮ್ ॥೧೨॥

ನಾನು ಹಿಂದೆ ಎಲ್ಲರಿಗೂ ಆದರಣೀಯನಾಗಿದ್ದು ಈಗ ಅವಮಾನಿತನಾಗಿ ಹೇಗೆ ಬದುಕಿರಬಲ್ಲೆ?

ದುಃಖಾದ್ ದುಃಖತರಂ ಮನ್ಯೇ ಪ್ರಾಪ್ತವಾನಸ್ಮಿ ಸಂಜಯ ।
ಭೀಷ್ಮದ್ರೋಣವಧೇನೈವ ಕರ್ಣಸ್ಯ ಚ ಮಹಾತ್ಮನಃ ॥೧೩॥

ದುಃಖದ ಮೇಲೆ ಹೆಚ್ಚಿನ ದುಃಖವನ್ನು ಹೊಂದಿದ್ದೇನೆ, ಸಂಜಯ, ಭೀಷ್ಮ ದ್ರೋಣರ ವಧೆಯಾಯಿತು, ಇದೀಗ ಮಹಾತ್ಮ ಕರ್ಣನ ವಧೆಯಾಗಿದೆ!

ನಾತ್ರ ಶೇಷಂ ಪ್ರಪಶ್ಯಾಮಿ ಸೂತಪುತ್ರೇ ಹತೇ ಯುಧಿ ।
ಸ ಹಿ ಪಾರೋ ಮಹಾನಾಸೀತ್ ಪುತ್ರಾಣಾಂ ಮಮ ಸಂಜಯ ॥೧೪॥

ಕರ್ಣ ಯುದ್ಧದಲ್ಲಿ ಹತನಾದ ಬಳಿಕ ನನಗೆ ಇನ್ನೇನೂ ಉಳಿದಂತೆ ಕಾಣುತ್ತಿಲ್ಲ. ಅವನೇ ನನ್ನ ಮಕ್ಕಳಿಗೆ ದೊಡ್ಡ ಆಸರೆಯಾಗಿದ್ದ.

ಯುದ್ಧೇ ವಿನಿಹತಃ ಶೂರೋ ವಿಸೃಜನ್ ಸಾಯಕಾನ್ ಬಹೂನ್ ।
ಕೋ ನು ಮೇ ಜೀವಿತೇನಾರ್ಥಸ್ತಮೃತೇ ಪುರುಷರ್ಷಭಮ್ ॥೧೫॥

ಶೂರನಾದ ಕರ್ಣ ಯುದ್ಧದಲ್ಲಿ ಬಹಳ ಬಾಣಗಳನ್ನು ಎಸೆದು ಹತನಾಗಿದ್ದಾನೆ. ಪುರುಷ ಶ್ರೇಷ್ಠನಾದ ಅವನಿಲ್ಲವೆಂದ ಮೇಲೆ ನಾನು ಬದುಕಿದ್ದು ಏನು ಫಲ?

ರಥಾದಾಧಿರಥಿರ್ನೂನಮಪತತ್ ಸಾಯಕಾರ್ದಿತಃ ।
ಪರ್ವತಸ್ಯೇವ ಶಿಖರಂ ವಜ್ರಪಾತಾದ್ ವಿದಾರಿತಮ್ ॥೧೬॥

ವಜ್ರಾಯುಧದ ಪ್ರಹಾರದಿಂದ ಒಡೆದು ಪರ್ವತದ ಶಿಖರ ಬೀಳುವಂತೆ ಪ್ರಾಯಃ ಬಾಣದ ಏಟಿನಿಂದ ಕರ್ಣನು ರಥದಿಂದ ಉರುಳಿಬಿದ್ದ.

ಸ ಶೇತೇ ಪೃಥಿವೀಂ ನೂನಂ ಶೋಭಯನ್ ರುಧಿರೋಕ್ಷಿತಃ ।
ಮಾತಂಗ ಇವ ಮತ್ತೇನ ಮಾತಂಗೇನ ನಿಪಾತಿತಃ ॥೧೭॥

ಒಂದು ಮದ್ದಾನೆಯಿಂದ ಕೆಡವಲ್ಪಟ್ಟು ಇನ್ನೊಂದುಆನೆ ಬೀಳುವಂತೆ ಪ್ರಾಯಃ ಕರ್ಣನೂ ನೆತ್ತರಿಂದ ತೊಯ್ದು ನೆಲದಲ್ಲಿ ಒರಗಿ ನೆಲಕ್ಕೆ ಶೋಭೆ ಉಂಟುಮಾಡಿದ್ದಾನೆ!

ಯೋ ಬಲಂ ಧಾರ್ತರಾಷ್ಟ್ರಾಣಾಂ ಪಾಂಡವಾನಾಂ ಯತೋ ಭಯಮ್
ಸೋಽರ್ಜುನೇನ ಹತಃ ಕರ್ಣಃ ಪ್ರತಿಮಾನಂ ಧನುಷ್ಮತಾಮ್ ॥೧೮॥

ಕರ್ಣನೆಂದರೆ ಕೌರವರಿಗೆ ಬಲಸ್ವರೂಪ, ಪಾಂಡವರಿಗೆ ಅವನಿಂದ ಭಯ ಇದ್ದಿತು. ಅರ್ಜುನನಿಂದ ಹತನಾದರೂ ಬಿಲ್ಲಾಳುಗಳಿಗೆ ಅವನು ಎಂದೆಂದೂ ಆದರ್ಶಪ್ರಾಯ.

ಸ ಹಿ ವೀರೋ ಮಹೇಷ್ವಾಸಃ ಪುತ್ರಾಣಾಮಭಯಂಕರಃ ।
ಶೇತೇ ವಿನಿಹತಃ ಶೂರಃ ಶಕ್ರೇಣೇವ ಪುರಾ ಬಲಃ ॥೧೯॥

ವೀರ ಕರ್ಣನು ದೊಡ್ಡ ಬಿಲ್ಲುಗಾರ. ನನ್ನ ಮಕ್ಕಳಿಗೆ ಅಭಯಪ್ರದನಾಗಿದ್ದ. ಈಗ ಅವನು, ಹಿಂದೆ ಇಂದ್ರನಿಂದ ಬಲಾಸುರ ಹತನಾದಂತೆ, ಅರ್ಜುನನಿಂದ ಹತನಾಗಿ ನೆಲದಲ್ಲಿ ಒರಗಿದ್ದಾನೆ.

ಪಂಗೋರಿವಾಧ್ವಗಮನಂ ದರಿದ್ರಸ್ಯೇವ ಕಾಮಿತಾ ।
ದುರ್ಯೋಧನಸ್ಯ ಲೋಭಶ್ಚ ಸಮಾನ್ಯೇತಾನಿ ಸಂಜಯ ॥೨೦॥

ಇನ್ನು ಕಾಲಿಲ್ಲದವನು ಹಾದಿ ನಡೆಯುವುದು, ದರಿದ್ರನು ಭೋಗಕ್ಕೆ ಆಸೆ ಪಡುವುದು, ದುರ್ಯೋಧನನು ಜಿಪುಣತನ ತೋರುವುದು ಇವು ಮೂರೂ ಸಮಾನ. ಯಾವುದೂ ಕೈಗೂಡುವುದಿಲ್ಲ.

ಧಿಗ್ ಜೀವಿತಮಿದಂ ಚೈವ ಸುಹೃದ್ದೀನಸ್ಯ ಸಂಜಯ ।
ಅದ್ಯ ಚಾಹಂ ದಶಾಮೇತಾಂ ಗತಃ ಸಂಜಯ ಕುತ್ಸಿತಾಮ್ ॥೧೦॥

ಸಂಜಯ, ಸಂಜಯ, ಆಪ್ತರಿಲ್ಲದ ನನ್ನ ಈ ಬಾಳನ್ನು ಸುಡಬೇಕು. ಅದರ ಸಲುವಾಗಿ ನಾನು ಈ ಹೀನಸ್ಥಿತಿಯಲ್ಲಿರುವಂತಾಯಿತು.

ಕೃಪಣಂ ವರ್ತಯಿಷ್ಯಾಮಿ ಶೋಚ್ಯಃ ಸರ್ವಸ್ಯ ಮಂದಧೀಃ ॥೧೧॥

ಮುಂದೆ ನಾನು ತುಚ್ಛವಾದ ಬಾಳನ್ನು ಬಾಳುತ್ತೇನೆ. ಮಂದಬುದ್ಧಿಯವನಾದ ನನ್ನಲ್ಲಿ ಎಲ್ಲರೂ ಕನಿಕರಪಡುವಂತಾಗುತ್ತದೆ.

ಅಹಮೇವ ಪುರಾ ಭೂತ್ವಾ ಸರ್ವಲೋಕಸ್ಯ ಸತ್ಕೃತಃ ।
ಪರಿಭೂತಃ ಪುನಃ ಸೂತ ಕಥಂ ಶಕ್ಷ್ಯಾಮಿ ಜೀವಿತುಮ್ ॥೧೨॥

ನಾನು ಹಿಂದೆ ಎಲ್ಲರಿಗೂ ಆದರಣೀಯನಾಗಿದ್ದು ಈಗ ಅವಮಾನಿತನಾಗಿ ಹೇಗೆ ಬದುಕಿರಬಲ್ಲೆ?

ದುಃಖಾದ್ ದುಃಖತರಂ ಮನ್ಯೇ ಪ್ರಾಪ್ತವಾನಸ್ಮಿ ಸಂಜಯ ।
ಭೀಷ್ಮದ್ರೋಣವಧೇನೈವ ಕರ್ಣಸ್ಯ ಚ ಮಹಾತ್ಮನಃ ॥೧೩॥

ದುಃಖದ ಮೇಲೆ ಹೆಚ್ಚಿನ ದುಃಖವನ್ನು ಹೊಂದಿದ್ದೇನೆ, ಸಂಜಯ, ಭೀಷ್ಮ ದ್ರೋಣರ ವಧೆಯಾಯಿತು, ಇದೀಗ ಮಹಾತ್ಮ ಕರ್ಣನ ವಧೆಯಾಗಿದೆ!

ನಾತ್ರ ಶೇಷಂ ಪ್ರಪಶ್ಯಾಮಿ ಸೂತಪುತ್ರೇ ಹತೇ ಯುಧಿ ।
ಸ ಹಿ ಪಾರೋ ಮಹಾನಾಸೀತ್ ಪುತ್ರಾಣಾಂ ಮಮ ಸಂಜಯ ॥೧೪॥

ಕರ್ಣ ಯುದ್ಧದಲ್ಲಿ ಹತನಾದ ಬಳಿಕ ನನಗೆ ಇನ್ನೇನೂ ಉಳಿದಂತೆ ಕಾಣುತ್ತಿಲ್ಲ. ಅವನೇ ನನ್ನ ಮಕ್ಕಳಿಗೆ ದೊಡ್ಡ ಆಸರೆಯಾಗಿದ್ದ.

ಯುದ್ಧೇ ವಿನಿಹತಃ ಶೂರೋ ವಿಸೃಜನ್ ಸಾಯಕಾನ್ ಬಹೂನ್ ।
ಕೋ ನು ಮೇ ಜೀವಿತೇನಾರ್ಥಸ್ತಮೃತೇ ಪುರುಷರ್ಷಭಮ್ ॥೧೫॥

ಶೂರನಾದ ಕರ್ಣ ಯುದ್ಧದಲ್ಲಿ ಬಹಳ ಬಾಣಗಳನ್ನು ಎಸೆದು ಹತನಾಗಿದ್ದಾನೆ. ಪುರುಷ ಶ್ರೇಷ್ಠನಾದ ಅವನಿಲ್ಲವೆಂದ ಮೇಲೆ ನಾನು ಬದುಕಿದ್ದು ಏನು ಫಲ?

ರಥಾದಾಧಿರಥಿರ್ನೂನಮಪತತ್ ಸಾಯಕಾರ್ದಿತಃ ।
ಪರ್ವತಸ್ಯೇವ ಶಿಖರಂ ವಜ್ರಪಾತಾದ್ ವಿದಾರಿತಮ್ ॥೧೬॥

ವಜ್ರಾಯುಧದ ಪ್ರಹಾರದಿಂದ ಒಡೆದು ಪರ್ವತದ ಶಿಖರ ಬೀಳುವಂತೆ ಪ್ರಾಯಃ ಬಾಣದ ಏಟಿನಿಂದ ಕರ್ಣನು ರಥದಿಂದ ಉರುಳಿಬಿದ್ದ.

ಸ ಶೇತೇ ಪೃಥಿವೀಂ ನೂನಂ ಶೋಭಯನ್ ರುಧಿರೋಕ್ಷಿತಃ ।
ಮಾತಂಗ ಇವ ಮತ್ತೇನ ಮಾತಂಗೇನ ನಿಪಾತಿತಃ ॥೧೭॥

ಒಂದು ಮದ್ದಾನೆಯಿಂದ ಕೆಡವಲ್ಪಟ್ಟು ಇನ್ನೊಂದುಆನೆ ಬೀಳುವಂತೆ ಪ್ರಾಯಃ ಕರ್ಣನೂ ನೆತ್ತರಿಂದ ತೊಯ್ದು ನೆಲದಲ್ಲಿ ಒರಗಿ ನೆಲಕ್ಕೆ ಶೋಭೆ ಉಂಟುಮಾಡಿದ್ದಾನೆ!

ಯೋ ಬಲಂ ಧಾರ್ತರಾಷ್ಟ್ರಾಣಾಂ ಪಾಂಡವಾನಾಂ ಯತೋ ಭಯಮ್
ಸೋಽರ್ಜುನೇನ ಹತಃ ಕರ್ಣಃ ಪ್ರತಿಮಾನಂ ಧನುಷ್ಮತಾಮ್ ॥೧೮॥

ಕರ್ಣನೆಂದರೆ ಕೌರವರಿಗೆ ಬಲಸ್ವರೂಪ, ಪಾಂಡವರಿಗೆ ಅವನಿಂದ ಭಯ ಇದ್ದಿತು. ಅರ್ಜುನನಿಂದ ಹತನಾದರೂ ಬಿಲ್ಲಾಳುಗಳಿಗೆ ಅವನು ಎಂದೆಂದೂ ಆದರ್ಶಪ್ರಾಯ.

ಸ ಹಿ ವೀರೋ ಮಹೇಷ್ವಾಸಃ ಪುತ್ರಾಣಾಮಭಯಂಕರಃ ।
ಶೇತೇ ವಿನಿಹತಃ ಶೂರಃ ಶಕ್ರೇಣೇವ ಪುರಾ ಬಲಃ ॥೧೯॥

ವೀರ ಕರ್ಣನು ದೊಡ್ಡ ಬಿಲ್ಲುಗಾರ. ನನ್ನ ಮಕ್ಕಳಿಗೆ ಅಭಯಪ್ರದನಾಗಿದ್ದ. ಈಗ ಅವನು, ಹಿಂದೆ ಇಂದ್ರನಿಂದ ಬಲಾಸುರ ಹತನಾದಂತೆ, ಅರ್ಜುನನಿಂದ ಹತನಾಗಿ ನೆಲದಲ್ಲಿ ಒರಗಿದ್ದಾನೆ.

ಪಂಗೋರಿವಾಧ್ವಗಮನಂ ದರಿದ್ರಸ್ಯೇವ ಕಾಮಿತಾ ।
ದುರ್ಯೋಧನಸ್ಯ ಲೋಭಶ್ಚ ಸಮಾನ್ಯೇತಾನಿ ಸಂಜಯ ॥೨೦॥

ಇನ್ನು, ಕಾಲಿಲ್ಲದವನು ಹಾದಿ ನಡೆಯುವುದು, ದರಿದ್ರನು ಭೋಗಕ್ಕೆ ಆಸೆ ಪಡುವುದು, ದುರ್ಯೋಧನನು ಜಿಪುಣತನ ತೋರುವುದು ಇವು ಮೂರೂ ಸಮಾನ. ಯಾವುದೂ ಕೈಗೂಡುವುದಿಲ್ಲ.

ಅನ್ಯಥಾ ಚಿಂತಿತಂ ಕಾರ್ಯಮನ್ಯಥಾ ತಚ್ಚ ಜಾಯತೇ ।
ಅಹೋ ನು ಬಲವದ್ ದೈವಂ ಕಾಲಶ್ಚ ದುರತಿಕ್ರಮಃ ॥೨೧॥

ಒಂದು ರೀತಿಯಿಂದ ಬಗೆವ ಕೆಲಸ ಇನ್ನೊಂದು ರೀತಿಯಿಂದ ನಡೆದು ಹೊಗುವುದು! ಆಶ್ಚರ್ಯವೆಂದರೆ ಇದೇ. ದೈವ ಬಲವತ್ತರ, ಕಾಲ ಅನುಲ್ಲಂಘ್ಯ, ಸಂಜಯ!

ಪಲಾಯಮಾನಃ ಕೃಪಣೋ ದೀನಾತ್ಮಾ ದೀನಪೌರುಷಃ ।
ಕಚ್ಚಿನ್ನ ನಿಹತಃ ಸೂತ ಪುತ್ರೋ ದುಃಶಾಸನೋ ಮಮ ॥೨೨॥

ದೀನನಾಗಿ, ಪಲಾಯನ ಮಾಡುವ ದೀನಸ್ವಭಾವದವನಾಗಿ, ದೀನ ಪೌರುಷ ಉಳ್ಳವನಾಗಿ ನನ್ನ ಮಗ ದುಃಶಾಸನ ಹತನಾಗಿಲ್ಲ ತಾನೆ?

ಕಚ್ಚಿನ್ನ ನೀಚಾಚರಿತಂ ಕೃತವಾಂಸ್ತಾತ ಸಂಯುಗೇ ।
ಪುತ್ರೋ ದುರ್ಯೋಧನಃ ಸಂಖೇ ನ ಹತೋ ಮಮ ಸಂಜಯ ॥೨೩॥

ಸಂಜಯ, ಯುದ್ಧದಲ್ಲಿ ಎಂದೂ ನೀಚಕಾರ್ಯ ಮಾಡದಿದ್ದವನು ನನ್ನ ಪುತ್ರ ದುರ್ಯೋಧನ, ಅವನು ಯುದ್ಧದಲ್ಲಿ ಹತನಾಗಿಲ್ಲ ತಾನೆ?

ಕಚ್ಚಿತ್ ತೇ ನಿಹತಾಃ ಶೂರಾ ಯಥಾ ತೇ ಕ್ಷತ್ರಿಯಾ ಸ್ತಥಾ ॥೨೪॥

ಕ್ಷತ್ರಿಯರಂತೇ ನಮ್ಮ ಶೂರರು ಹತರಾದರು ತಾನೆ?

ಯುಧಿಷ್ಠಿರಸ್ಯ ವಚನಂ ಮಾ ಯುದ್ಧಮಿತಿ ಸರ್ವದಾ ।
ದುರ್ಯೋಧನೋ ನಾಭ್ಯಗೃಹ್ಣಾನ್ಮೂಢಃ ಪಥ್ಯಮಿವೌಷಧಮ್ ॥೨೫॥

ಯುಧಿಷ್ಠಿರ ಹೇಳುತ್ತಿದ್ದುದು ಸದಾ ಒಂದೇ ಮಾತು 'ಬೇಡ ಯುದ್ಧ'ವೆಂದು. ಮೂಢನಾದ ದುರ್ಯೋಧನ ಔಷಧದಂತೆ ಪಥ್ಯವಾಗಿದ್ದ ಆ ಮಾತನ್ನು ಸ್ವೀಕರಿಸಲಿಲ್ಲ.'

ಶರತಲ್ಪೇ ಶಯಾನೇನ ಭೀಷ್ಮೇಣ ಸುಮಹಾತ್ಮನಾ ।
ಪಾನೀಯಂ ಯಾಚಿತಃ ಪಾರ್ಥಃ ಸೋಽವಿಧ್ಯನ್ಮೇದಿನೀತಳಮ್ ॥೨೬॥

ಶರತಲ್ಪದಲ್ಲಿ ಮಲಗಿದ್ದ ಮಹಾ ಮಹಾತ್ಮ ಭೀಷ್ಮ ನೀರನ್ನು ಬೇಡಿದರೆ ಅರ್ಜುನ ಬಾಣದಿಂದ ನೆಲವನ್ನು ಭೇದಿಸಿ ನೀರನ್ನು ಕೊಟ್ಟ.

ಜಲಸ್ಯ ಧಾರಾಂ ಜನಿತಾಂ ದೃಷ್ಟ್ವಾ ತಾಂ ಪಾಂಡವೇನ ಚ ।
ಅಬ್ರವೀತ್ ಸುಮಹಾಬುದ್ಧಿಸ್ತಾತ ಸಂಶಾಮ್ಯ ಪಾಂಡವೈಃ ॥೨೭॥

ಅರ್ಜುನ ನೆಲದಿಂದ ನೀರಿನ ಧಾರೆ ಚಿಮ್ಮುವಂತೆ ಮಾಡಿದ್ದನ್ನು ಕಂಡು ಮಹಾಜ್ಞಾನಿಯಾದ ಭೀಷ್ಮ ದುರ್ಯೋಧನನಿಗೆ ಬೋಧಿಸಿದ, 'ಮಗು ಪಾಂಡವರೊಂದಿಗೆ ಶಾಂತಿ ಸಂಧಾನ ಮಾಡಿಕೊಳ್ಳು' ಎಂದು.

ಪ್ರಶಮಾದ್ಧಿ ಭವೇಚ್ಛ್ರೇಯೋ ಮದಂತಂ ಯುದ್ಧಮೇವ ಚ ।
ಭ್ರಾತೃಭಾವೇನ ಪೃಥಿವೀಂ ಭುಂಕ್ಷ್ವ ಪಾಂಡುಸುತೈಃ ಸಹ ॥೨೮॥

'ಶಾಂತಿಸಂಧಾನದಿಂದ ನಿನಗೆ ಶ್ರೇಯಸ್ಸಾದೀತು. ಯುದ್ಧವು ನನ್ನ ಅವಸಾನದಲ್ಲಿಯೆ ಕೊನೆಗೊಂಡೀತು. ಪಾಂಡವರೊಂದಿಗೆ ಸೋದರಭಾವದಿಂದ ಇದ್ದು ಭೂಮಿಯ ಭೋಗವನ್ನು ಅನುಭವಿಸು' ಎಂದು.

ಅಕುರ್ವನ್ ವಚನಂ ತಸ್ಯ ನೂನಂ ಶೋಚತಿ ಪುತ್ರಕಃ ।
ತದಿದಂ ಸಮನುಪ್ರಾಪ್ತಂ ವಚನಂ ದೀರ್ಘದರ್ಶಿನಃ ॥೨೯॥

ಭೀಷ್ಮನ ಮಾತಿನಂತೆ ನಡೆಯದಿದ್ದುದರಿಂದಲೇ ದುಷ್ಟಪುತ್ರನು ಈಗ ನಿಶ್ಚಯವಾಗಿ ಶೋಕಿಸುತ್ತಾನೆ. ದೀರ್ಘದೃಷ್ಟಿಯವನಾದ ಭೀಷ್ಮನ ಮಾತು ಇದೀಗ ನಿಜವಾಗುತ್ತಿದೆ.

ಅಹಂ ತು ನಿಹತಾಮಾತ್ಯೋ ಹತಪುತ್ರಶ್ಚ ಸಂಜಯ ।
ದ್ಯೂತೇನ ಕೃಚ್ಛ್ರಮಾಪನ್ನೋ ಲೂನಪಕ್ಷ ಇವ ದ್ವಿಜಃ ॥೩೦॥

ಸಂಜಯ, ನನ್ನ ಮಂತ್ರಿಗಳು ಹತರಾದರು. ಪುತ್ರರು ಹತರಾದರು. ಜೂಜಿನ ಪರಿಣಾಮವಾಗಿ ನಾನು ಈ ಕಷ್ಟದಲ್ಲಿ ಸಿಲುಕಿ ರೆಕ್ಕೆ ಕಳೆದುಕೊಂಡ ಹಕ್ಕಿಯಂತೆ ಆಗಿದ್ದೇನೆ.

ಯಥಾ ಗೃಹೀತ್ವಾ ಶಕುನಿಂ ಪಕ್ಷ್ಣೌ ಲುಪ್ತ್ವಾಽಥ ಸಂಜಯ ।
ವಿಸರ್ಜಯಂತೇ ಸಂಹೃಷ್ಟಾಃ ಕ್ರೀಡಮಾನಾಃ ಕುಮಾರಕಾಃ ॥೩೧॥

ಆಟವಾಡುವ ಮಕ್ಕಳು ಹಕ್ಕಿಯನ್ನು ಹಿಡಿದು ರೆಕ್ಕೆಗಳನ್ನು ಕತ್ತರಿಸಿ ಬಿಟ್ಟುಬಿಡುತ್ತಾರೆ, ಸಂತೋಷಪಡುತ್ತಾರೆ.

ಲೂನಪಕ್ಷತಯಾ ತಸ್ಯ ಗಮನಂ ನೋಪಪದ್ಯತೇ ।
ತಥಾऽಹಮಪಿ ಸಂಪ್ರಾಪ್ತೋ ಲೂನಪಕ್ಷ ಇವ ದ್ವಿಜಃ ॥೩೨॥

ಆಗ ರೆಕ್ಕೆಗಳು ಕಡಿದುಹೋಗಿರುವುದರಿಂದ ಹಕ್ಕಿ ಹಾರಲು ಶಕ್ತವಾಗುವುದಿಲ್ಲ. ಹಾಗೇ ನಾನೂ ಕೂಡ ರೆಕ್ಕೆ ಕಳೆದುಕೊಂಡ ಹಕ್ಕಿಯಂತಾಗಿದ್ದೇನೆ.

ಕ್ಷೀಣಃ ಸರ್ವಾರ್ಥಹೀನಶ್ಚ ನಿರ್ಬಂಧುರ್ಜ್ಞಾತಿಸಂಕ್ಷಯೇ ।
ಕಾಂ ದಿಶಂ ಪ್ರತಿಪತ್ಸ್ಯಾಮಿ ದೀನಃ ಶೋಕವಶಂ ಗತಃ ॥೩೩॥

ದುರ್ಬಲನಾಗಿದ್ದೇನೆ, ಎಲ್ಲ ಸಂಪತ್ತನ್ನೂ ಕಳೆದುಕೊಂಡಿದ್ದೇನೆ. ಜ್ಞಾತಿ ಬಾಂಧವರು ನಶಿಸಿರುವುದರಿಂದ ಬಂಧುಹೀನನಾಗಿದ್ದೇನೆ, ದೀನನಾಗಿ, ಶೋಕಕ್ಕೆ ವಶನಾಗಿ, ನಾನು ಈಗ ಯಾವ ದಿಕ್ಕಿಗೆ ಹೋಗಲಿ?

ವೈಶಂಪಾಯನಃ

ಇತ್ಯೇವಂ ಧೃತರಾಷ್ಟ್ರೋऽಥ ವಿಲಪ್ಯ ಬಹು ದುಃಖಿತಃ ।
ಪ್ರೋವಾಚ ಸಂಜಯಂ ಭೂಯಃ ಶೋಕವ್ಯಾಕುಲಲೋಚನಃ ॥೩೪॥

ವೈಶಂಪಾಯನರು ನುಡಿದರು— ಧೃತರಾಷ್ಟ್ರ ಹೀಗೆ ಬಹು ದುಃಖಿತನಾಗಿ ಗೋಳಿಟ್ಟು ಶೋಕದಿಂದ ಕಂಗೆಟ್ಟು ಪುನಃ ಸಂಜಯನಿಗೆ ಹೇಳಿದ.

ಧೃತರಾಷ್ಟ್ರಃ

ಯೋऽಜಯತ್ ಸರ್ವಕಾಂಭೋಜಾನಂಬಷ್ಠಾನ್ ಕೇಕಯೈಃ ಸಹ ।
ಗಾಂಧಾರಾಂಶ್ಚ ವಿದೇಹಾಂಶ್ಚ ಜಿತ್ವಾ ಕಾರ್ಯಾರ್ಥಮಾಹವೇ ॥೩೫॥

ಧೃಷ್ಟರಾಷ್ಟ್ರ ನುಡಿದ— ಕರ್ಣನು ಎಲ್ಲ ಕಾಂಬೋಜ ಅಂಬಷ್ಠ ಕೇಕಯ ಗಾಂಧಾರ ವಿದೇಹ ರಾಜರನ್ನೂ ನನ್ನ ಕಾರ್ಯಾರ್ಥವಾಗಿ ಯುದ್ಧದಲ್ಲಿ ಗೆದ್ದನು.

ದುರ್ಯೋಧನಸ್ಯ ವೃದ್ಧ್ಯರ್ಥಂ ಪೃಥಿವೀಂ ಯೋऽಜಯತ್ ಪ್ರಭುಃ ।
ಸ ಜಿತಃ ಪಾಂಡವೈಃ ಶೂರೈಃ ಸಮರ್ಥೈರ್ವೀರ್ಯಶಾಲಿಭಿಃ ॥೩೬॥

ಕರ್ಣನು ದುರ್ಯೋಧನನ ಸಂಪತ್‌ಸಮೃದ್ಧಿಗಾಗಿ ಇಡಿ ಭೂಮಂಡಲವನ್ನೆ ಗೆದ್ದುಕೊಟ್ಟ. ಆದರೆ ಸಮರ್ಥನಾದ ಆತ ಸಮರ್ಥರಾದ ವೀರ್ಯಶಾಲಿಗಳಾದ ಶೂರರಾದ ಪಾಂಡವರಿಂದ ಜಿತನಾದ.

ತಸ್ಮಿನ್ ಹತೇ ಮಹೇಷ್ವಾಸೇ ಕರ್ಣೇ ಯುಧಿ ಕಿರೀಟಿನಾ ।
ಕೇ ವೀರಾಃ ಪರ್ಯತಿಷ್ಠಂತ ತನ್ಮಾಚಕ್ಷ್ವ ಸಂಜಯ ॥೩೭॥

ಮಹಾಬಿಲ್ಲಾರನಾದ ಕರ್ಣ ಯುದ್ಧದಲ್ಲಿ ಅರ್ಜುನನಿಂದ ಹತನಾದಾಗ ಯಾವ ವೀರರು ಅವನನ್ನು ಸುತ್ತುವರಿದಿದ್ದರು? ಸಂಜಯ, ಅದನ್ನು ನನಗೆ ಈಗ ಹೇಳು.

ಕಚ್ಚಿನ್ನೈಕಃ ಪರಿತ್ಯಕ್ತಃ ಪಾಂಡವೈರ್ನಿಹತೋ ರಣೇ ।
ಉಕ್ತಂ ತ್ವಯಾ ಪುರಾ ಸೂತ ಯಥಾ ಶೂರೌ ನಿಪಾತಿತೌ ॥೩೮॥

ಕರ್ಣನೊಬ್ಬನನ್ನೇ ಮುಂದೆಬಿಟ್ಟು ಎಲ್ಲರೂ ಹಿಂದೆ ಸರಿದಾಗ ಆತ ಯುದ್ಧದಲ್ಲಿ ಪಾಂಡವರಿಂದ ನಿಹತನಾಗಲಿಲ್ಲ ತಾನೆ? ಏಕೆಂದರೆ ನೀನು ಹಿಂದೆ ಶೂರರಾದ ಭೀಷ್ಮ-ದ್ರೋಣರು ಹೇಗೆ ಹತರಾದರೆಂಬುದನ್ನು ಹೇಳಿರುವೆ.

ಭೀಷ್ಮಮಪ್ರತಿಯುಧ್ಯಂತಂ ಶಿಖಂಡೀ ಸಾಯಕೋತ್ತಮೈಃ ।
ಪಾತಯಾಮಾಸ ಸಮರೇ ಸರ್ವಶಸ್ತ್ರಭೃತಾಂ ವರಮ್ ॥೩೯॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಭೀಷ್ಮ ಯುದ್ಧದಲ್ಲಿ ಪ್ರತಿಯಾಗಿ ಹೋರಾಡುವುದನ್ನು ನಿಲ್ಲಿಸಿದ್ದಾಗ ಅವನನ್ನು ಶಿಖಂಡಿಯು ಉತ್ತಮವಾದ ಬಾಣಗಳಿಂದ ಕೆಳಗೆ ಬೀಳಿಸಿದ್ದ.

ತಥಾ ದ್ರೌಪದಿನಾ ದ್ರೋಣೋ ನ್ಯಸ್ತಸರ್ವಾಯುಧೋ ಯುಧಿ ।
ಧರ್ಮರಾಜವಚಃ ಶ್ರುತ್ವಾ ಅಶ್ವತ್ಥಾಮಾ ಹತಸ್ತ್ವಿತಿ ॥೪೦॥

ಹಾಗೇ ದ್ರೋಣನೂ ರಣರಂಗದಲ್ಲಿ ಸರ್ವಶಸ್ತ್ರ ಸನ್ಯಾಸ ಮಾಡಿದ್ದಾಗ ಧೃಷ್ಟದ್ಯುಮ್ನ ಅವನನ್ನು ಬೀಳಿಸಿದ್ದ. 'ಅಶ್ವತ್ಥಾಮಾ ಹತಃ' ಎಂದು ಧರ್ಮರಾಜ ಹೇಳಿದ ಮಾತನ್ನು ಕೇಳಿ ದ್ರೋಣ ಶಸ್ತ್ರ ಸನ್ಯಾಸ ಮಾಡಿದ್ದ.

ಯುಕ್ತಯೋಗೋ ಮಹೇಷ್ವಾಸಃ ಶರೈರ್ಬಹುಭಿರಾಚಿತಃ ।
ನಿಹತಃ ಖಡ್ಗಮುದ್ಧೃತ್ಯ ಧೃಷ್ಟದ್ಯುಮ್ನೇನ ಸಂಜಯ ॥೪೧॥

ದ್ರೋಣನು ಮಹಾಬಿಲ್ಲಾರ. ಬಹುಬಾಣಗಳಿಂದ ಪೀಡಿತನಾಗಿದ್ದ. ಅವನು ಯೋಗ ಸಮಾಧಿಯಿಂದ ಯುಕ್ತನಾದಾಗ ಧೃಷ್ಟದ್ಯುಮ್ನನು ಖಡ್ಗವನ್ನೆತ್ತಿ ಅವನನ್ನು ವಧಿಸಿದ.

ಅಂತರೇಣ ಹತಾವೇತೌ ಚ್ಛಲೇನ ಚ ವಿಶೇಷತಃ ।
ಅಶ್ರೌಷಮಹಮೇತದ್ ವೈ ಭೀಷ್ಮದ್ರೋಣೌ ನಿಪಾತಿತೌ ॥೪೨॥

ಈ ಭೀಷ್ಮ–ದ್ರೋಣರಿಬ್ಬರೂ ಹೀಗೆ ಸಮಯ ಕಾದು ವಿಶೇಷವಾಗಿ ಮೋಸದಿಂದಲೇ ಬೀಳಿಸಲ್ಪಟ್ಟರು. ಇದನ್ನು ನಿನ್ನಿಂದ ನಾನು ಕೇಳಿದ್ದಾಯಿತು.

ಭೀಷ್ಮದ್ರೌಣೌ ಹಿ ಸಮರೇ ನ ಹನ್ಯಾದ್ ವಜ್ರಭೃತ್ ಸ್ವಯಮ್ ।
ನ್ಯಾಯೇನ ಯುಧ್ಯನ್ ಸಮರೇ ತದ್ವೈ ಸತ್ಯಂ ಬ್ರವೀಮಿ ತೇ ॥೪೩॥

ಭೀಷ್ಮ–ದ್ರೋಣರನ್ನು ಯುದ್ಧದಲ್ಲಿ ಸ್ವತಃ ದೇವೇಂದ್ರನೂ ಕೂಡ ನ್ಯಾಯದಿಂದ ಹೋರಾಡಿ ಕೊಲ್ಲಲು ಶಕ್ತನಾಗುತ್ತಿರಲಿಲ್ಲ ನಾನು ಹೇಳುತ್ತಿದ್ದೇನೆ, ಇದು ಸತ್ಯ

ಧೃತರಾಷ್ಟ್ರ ತಪ್ಪು ತಿಳಿದಿದ್ದ.

ವಸ್ತುತಃ, ಯತ್ರಯೋಗೇಶ್ವರಃ ಕೃಷ್ಣಃ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥

ಎಂದು ಮುಂದೆ ಸಂಜಯ ಹೇಳುವಂತೆ ಕೃಷ್ಣಾರ್ಜುನರಿಗೆ ಅಶಕ್ಯವೇನೂ ಇರಲಿಲ್ಲ. ಭೀಷ್ಮದ್ರೋಣರನ್ನು ಅವರು ಮೋಸದಿಂದ ಕೊಂದಿದ್ದು 'ನೇರ ಯುದ್ಧದಲ್ಲಿ ಕೊಲ್ಲಲಾಗದಂಥ ವೀರರೆ'ಂದು ಅವರಿಗೆ ಕೀರ್ತಿ ಬರಲಿ ಎಂಬ ಸದುದ್ದೇಶದಿಂದಲೆ. ಅವರೂ ಇದನ್ನೇ ಬಯಸಿದ್ದರು. ಅವರ ಬಯಕೆಯಂತೆಯೇ ಅವರನ್ನು ಮೋಸದಿಂದ ಕೃಷ್ಣಾರ್ಜುನರು ವಧಿಸಿದ್ದರು– ನಿರ್ಣಯ.

ಕರ್ಣಂ ತ್ವಸ್ಯಂತಮಸ್ತ್ರಾಣಿ ದಿವ್ಯಾನಿ ಚ ಲಘೂನಿ ಚ ।
ಕಥಮಿಂದ್ರೋಪಮಂ ಸಂಖ್ಯೇ ಮೃತ್ಯುರ್ವೀರಂ ಸಮಸ್ಪೃಶತ್ ॥೪೪॥

ಭೀಷ್ಮ–ದ್ರೋಣರು ಶಸ್ತ್ರಸನ್ಯಾಸ ಮಾಡಿದರೂ ಕರ್ಣ ಹಾಗೆ ಮಾಡಲಿಲ್ಲ. ದಿವ್ಯವಾದ ವೇಗಉಳ್ಳ ಅಸ್ತ್ರಗಳನ್ನು ಎಸೆಯುತ್ತಲೇ ಇದ್ದ. ಇಂದ್ರನಂತೆ

ಪರಾಕ್ರಮಿಯಾಗಿದ್ದ ವೀರಕರ್ಣನನ್ನು ಅವನು ಯುದ್ಧದಲ್ಲಿ ಅಸ್ತ್ರಪ್ರಯೋಗ ಮಾಡುತ್ತಿದ್ದ ಕಾಲದಲ್ಲಿಯೇ ಮೃತ್ಯು ಅವನನ್ನು ಹೇಗೆ ಸೆಳೆದೊಯ್ದಿತು?

ಯಸ್ಯ ವಿದ್ಯುತ್ಪ್ರಭಾಂ ಶಕ್ತಿಂ ದಿವ್ಯಾಂ ಕನಕಭೂಷಣಾಮ್ ।
ಪ್ರಾಯಚ್ಛದ್ ದ್ವಿಷತಾಂ ಹಂತ್ರೀಂ ಕುಂಡಲಾಭ್ಯಾಂ ಪುರಂದರಃ ॥೪೫॥

ಕರ್ಣನಿಗೆ ದೇವೇಂದ್ರ ಅವನ ಕುಂಡಲಗಳಿಗೆ ಬದಲಾಗಿ ಚಿನ್ನದಿಂದ ಅಲಂಕೃತವಾದ ಮಿಂಚಿನಂತೆ ಹೊಳೆವ ಶತ್ರುನಾಶಕವಾದ ದಿವ್ಯವಾದ ಶಕ್ತ್ಯಾಯುಧವನ್ನು ನೀಡಿದ್ದ.

ಯಸ್ಯ ಸರ್ಪಮುಖೋ ದಿವ್ಯಃ ಶರಃ ಕಾಂಚನಭೂಷಣಃ ।
ಸ ಶೇತೇ ನಿಹತಃ ಸಂಖೇ ಕರ್ಣಶ್ಚಾರಿನಿಷೂದನಃ ॥೪೬॥

ಕರ್ಣನ ಬಳಿ ಚಿನ್ನದಿಂದ ಅಲಂಕೃತವಾದ ಸರ್ಪಮುಖವಾದ ದಿವ್ಯ ಬಾಣವಿದ್ದಿತು. ಶತ್ರುನಾಶಕನಾದ ಆ ಕರ್ಣನು ರಣರಂಗದಲ್ಲಿ ಹತನಾಗಿ ಬಿದ್ದನೆ?

ಭೀಷ್ಮದ್ರೋಣಮುಖಾನ್ ವೀರಾನ್ ಯೋಽವಮತ್ಯ ಮಹಾರಥಾನ್ ।
ಜಾಮದಗ್ನ್ಯನ್ಮಹಾಘೋರಂ ಬ್ರಾಹ್ಮಮಸ್ತ್ರಮಶಿಕ್ಷಯತ್ ॥೪೭॥

ಕರ್ಣನು ಪರಶುರಾಮನಿಂದ ಮಹಾಭಯಂಕರವಾದ ಬ್ರಹ್ಮಾಸ್ತ್ರಮಂತ್ರೋಪದೇಶವನ್ನು ಪಡೆದಿದ್ದ. ಅದರಿಂದ ಭೀಷ್ಮ–ದ್ರೋಣ ಮುಂತಾದ ವೀರ ಮಹಾರಥರನ್ನೂ ಆತ ಕಡೆಗಣಿಸಿದ್ದ.

ಯಶ್ಚ ದ್ರೋಣಮುಖಾನ್ ದೃಷ್ಟ್ವಾ ವಿಮುಖಾನರ್ದಿತಾನ್ ಶರೈಃ ।
ಸೌಭದ್ರಸ್ಯ ಮಹಾಬಾಹುರ್ಧನುರ್ಮತ್ ಕಾರ್ಮುಕಂ ಶರೈಃ ॥೪೮॥

ಅಭಿಮನ್ಯುವಿನ ಬಾಣಗಳಿಂದ ಪೀಡಿತರಾಗಿ ದ್ರೋಣ ಮುಂತಾದವರು ಯುದ್ಧದಿಂದ ಹಿಂಜರಿಯುತ್ತಿದ್ದುದನ್ನು ಕಂಡು ಮಹಾಬಾಹುಶಾಲಿಯಾದ ಕರ್ಣ ಅವನ ಧನುಸ್ಸನ್ನು ಬಾಣಗಳಿಂದ ತುಂಡರಿಸಿದ.

ಯಶ್ಚ ನಾಗಾಯುತಪ್ರಾಣಂ ವಾತರಂಹಸಮಚ್ಯುತಮ್ ।
ವಿರಥಂ ಸಹಸಾ ಕೃತ್ವಾ ಭೀಮಸೇನಮಪಾಹಸತ್ ॥೪೯॥

ಹತ್ತುಸಾವಿರ ಆನೆಗಳ ಬಲಯುಕ್ತನಾಗಿದ್ದ. ವಾಯುವೇಗದಿಂದ ರಣರಂಗದಲ್ಲಿ

ಸಂಚರಿಸುತ್ತಿದ್ದ ಸೋಲನ್ನರಿಯದಿದ್ದ ಭೀಮಸೇನನನ್ನು ಕರ್ಣನು ಕೂಡಲೆ ವಿರಥನನ್ನಾಗಿ ಮಾಡಿ ಅಪಹಾಸ ಮಾಡಿದ.

ಸಹದೇವಂ ಚ ನಿರ್ಜಿತ್ಯ ಶರೈಃ ಸನ್ನತಪರ್ವಭಿಃ ।
ಕೃಪಯಾ ವಿರಥಂ ಕೃತ್ವಾ ನಾವಧೀದ್ ಧರ್ಮವಿತ್ತಮಃ ॥೫೦॥

ಸಹದೇವನನ್ನು ಬಗ್ಗಿದ ಗಿಣ್ಣುಗಳಿಂದ ಬಾಣಗಳಿಂದ ಸೋಲಿಸಿ ವಿರಥನನ್ನಾಗಿ ಮಾಡಿಯೂ ಧರ್ಮಜ್ಞರಲ್ಲಿ ಮೊದಲಿಗನಾದ ಕರ್ಣ ಕೃಪೆಯಿಂದ ಅವನನ್ನು ಕೊಲ್ಲದೆ ಬಿಟ್ಟ.

ಯಶ್ಚ ಮಾಯಾಸಹಸ್ರಾಣಿ ಧ್ವಂಸಯಿತ್ವಾ ಘಟೋತ್ಕಚಮ್ ।
ರಣೋತ್ಕಟಂ ರಾಕ್ಷಸೇಂದ್ರಂ ಶಕ್ರಶಕ್ತ್ಯಾ ನಿಜಘ್ನವಾನ್ ॥೫೧॥

ಯುದ್ಧದಲ್ಲಿ ಪ್ರಬಲನಾದ ಘಟೋತ್ಕಚನೆಂಬ ದೊಡ್ಡ ರಾಕ್ಷಸನನ್ನು ಅವನ ಸಾವಿರ ಸಾವಿರ ಮಾಯೆಗಳನ್ನು ನಾಶಪಡಿಸಿ ಕರ್ಣನು ಇಂದ್ರನ ಶಕ್ತ್ಯಾಯುಧದಿಂದ ವಧಿಸಿದ.

ಏತಾಂಶ್ಚ ದಿವಸಾನ್ ಯಸ್ಯ ಯುದ್ಧೇ ಭೀತೋ ಧನಂಜಯಃ ।
ನಾಗಮದ್ ದ್ವೈರಥಂ ವೀರಃ ಸ ಕಥಂ ನಿಹತೋ ರಣೇ ॥೫೨॥

ಈ ದಿವಸಗಳಲ್ಲಿ ವೀರನಾದ ಅರ್ಜುನ ಕರ್ಣನೊಡನೆ ಯುದ್ಧಕ್ಕೆ ಹೆದರಿ ದ್ವಂದ್ವರಥ ಯುದ್ಧಕ್ಕೆ ಬರಲಿಲ್ಲ. ಅಂಥ ಕರ್ಣ ಯುದ್ಧದಲ್ಲಿ ಹೇಗೆ ಹತನಾದ?

ರಥಭಂಗೋ ನ ಚೇತ್ ತಸ್ಯ ಧನುರ್ಜ್ಯಾ ನ ವ್ಯಶೀರ್ಯತ ।
ನ ಚೇದಸ್ತ್ರಾಣಿ ನಷ್ಟಾನಿ ಕಥಂ ಸ ನಿಹತಃ ಪರೈಃ ॥೫೩॥

ಕರ್ಣನ ರಥ ಮುರಿಯದಿರುತ್ತಿದ್ದರೆ, ಧನುಸ್ಸಿನ ಹೆದೆ ಕಡಿಯದಿರುತ್ತಿದ್ದರೆ, ಅಸ್ತ್ರಮಂತ್ರಗಳು ಮರೆತು ಹೋಗದಿರುತ್ತಿದ್ದರೆ ಕರ್ಣ ಯುದ್ಧದಲ್ಲಿ ಹೇಗೆ ಹತನಾಗುತ್ತಿದ್ದ?

ಕೋ ಹಿ ಶಕ್ತೋ ರಣೇ ಕರ್ಣಂ ವಿಧುನ್ವಾನಂ ಮಹದ್ಧನುಃ ।
ವಿಮುಂಚಂತಂ ಶರಾನ್ ಘೋರಾನ್ ದಿವ್ಯಾನ್ಯಸ್ತ್ರಾಣಿ ಚಾಹವೇ ॥೫೪॥

ಜೇತುಂ ಪುರುಷಶಾರ್ದೂಲಂ ಶಾರ್ದೂಲಮಿವ ವೇಗಿತಮ್ ॥೫೫॥

ಮಹಾಧನುಸ್ಸನ್ನು ಓಲಾಡಿಸುತ್ತ ಭಯಂಕರಬಾಣಗಳನ್ನು ದಿವ್ಯ ಅಸ್ತ್ರಗಳನ್ನೂ ಎಸೆಯುತ್ತಿದ್ದವನು, ಹುಲಿಯಂತೆ ವೇಗದಿಂದ ಸಂಚರಿಸುತ್ತಿದ್ದವನು, ಕರ್ಣ. ಪುರುಷಶ್ರೇಷ್ಠನಾದ ಆತನನ್ನು ಯುದ್ಧದಲ್ಲಿ ಗೆಲ್ಲಲು ಯಾವನು ತಾನೆ ಶಕ್ತನಾದಾನು?

ಧ್ರುವಮಸ್ಯ ಧನುಶ್ಛಿನ್ನಂ ರಥೋ ವಾऽಭಿಗತೋ ಮಹೀಮ್ ।
ಅಸ್ತ್ರಾಣಿ ವಾ ಪ್ರಣಷ್ಟಾನಿ ಯಥಾ ಶಂಸಸಿ ಮೇ ಹತಮ್ ॥೫೬॥
ನ ಹ್ಯನ್ಯದನುಪಶ್ಯಾಮಿ ಕಾರಣಂ ತಸ್ಯ ಪಾತನೇ ॥೫೭॥

ನಿಶ್ಚಯವಾಗಿ ಅವನ ಬಿಲ್ಲು ಕಡಿದಿರಬೇಕು, ರಥ ನೆಲದಲ್ಲಿ ಹೂತು ಹೋಗಿರಬೇಕು. ಅಸ್ತ್ರಮಂತ್ರಗಳಾದರೂ ಮರೆತುಹೋಗಿರಬೇಕು. ಏಕೆಂದರೆ ಅವನು ಹತನಾದನೆಂದು ನೀನು ಹೇಳುತ್ತಿರುವೆ. ಅವನು ಬೀಳಬೇಕೆಂದರೆ ಬೇರೆ ಕಾರಣವೇನೂ ನನಗೆ ಕಾಣುತ್ತಿಲ್ಲ.

ನ ಹನ್ಯಾಮರ್ಜುನಂ ಯಾವತ್ ತಾವತ್ ಪಾದೌ ನ ಧಾವಯೇ ।
ಇತಿ ಯಸ್ಯ ಮಹಾಘೋರಂ ವ್ರತಮಾಸೀತ್ ಮಹಾತ್ಮನಃ ॥೫೮॥

'ಅರ್ಜುನನನ್ನು ಸಂಹರಿಸುವರೆಗೆ ನಾನು ಬೇರೆಯವರಿಂದ ಕಾಲುಗಳನ್ನು ತೊಳೆಸಿಕೊಳ್ಳುವುದಿಲ್ಲ' ಎಂದು ಮಹಾತ್ಮಕರ್ಣನ ಮಹಾಭಯಂಕರ ಪ್ರತಿಜ್ಞೆ ಇತ್ತು.

ಯಸ್ಮಾದ್ ಭೀತೋ ವನೇ ನಿತ್ಯಂ ಧರ್ಮರಾಜೋ ಯುಧಿಷ್ಠಿರಃ ।
ತ್ರಯೋದಶ ಸಮಾ ನಿದ್ರಾಂ ನ ಲೇಭೇ ಪುರುಷರ್ಷಭಃ ॥೫೯॥

ಪುರುಷಶ್ರೇಷ್ಠನಾದ, ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಧರ್ಮರಾಜನು ಕೂಡ ಕರ್ಣನ ಭಯದಿಂದ ಹದಿಮೂರು ವರ್ಷಕಾಲ ವನವಾಸದಲ್ಲಿ ರಾತ್ರಿ ನಿತ್ಯ ಜಾಗರಣ ಮಾಡುತ್ತಿದ್ದ ಅವನಿಗೆ ನಿದ್ರೆಯೆ ಬರುತ್ತಿರಲಿಲ್ಲ.

ಯಸ್ಯ ವೀರ್ಯವತೋ ವೀರ್ಯಂ ಸಮಾಶ್ರಿತ್ಯ ಮಹಾತ್ಮನಃ ।
ಮಮ ಪುತ್ರಃ ಸಭಾಂ ಭಾರ್ಯಾಂ ಪಾಂಡೂನಾಂ ನೀತವಾನ್
ಬಲಾತ್ ॥೬೦॥

ಮಹಾತ್ಮ ಪರಾಕ್ರಮಿಯಾದ ಕರ್ಣನ ಪರಾಕ್ರಮವನ್ನೇ ಅವಲಂಬಿಸಿ ನನ್ನ ಮಗ ದುರ್ಯೋಧನ ಪಾಂಡವರ ಪತ್ನಿಯನ್ನು ಬಲಾತ್ಕಾರವಾಗಿ ಜೂಜಿನ ಸಭೆಗೆ ತರಿಸಿದ.

ತತ್ರಾಪಿ ಚ ಸಭಾಮಧ್ಯೇ ಪಾಂಡವಾನಾಂ ಸ್ಮ ಪಶ್ಯತಾಮ್ ।
ದಾಸಭಾರ್ಯೇತಿ ಪಾಂಚಾಲೀಮಬ್ರವೀತ್ ಕುರುಸನ್ನಿಧೌ ॥೬೧॥

ಕರ್ಣನ ಪರಾಕ್ರಮವನ್ನು ಅವಲಂಬಿಸಿಯೇ ಆ ಸಭಾ ಮಧ್ಯದಲ್ಲಿ ಪಾಂಡವರು ನೋಡುತ್ತಿದ್ದಂತೆಯೇ ಕೌರವರ ಸನ್ನಿಧಿಯಲ್ಲಿ ದುರ್ಯೋಧನ ದ್ರೌಪದಿಯನ್ನು ದಾಸಭಾರ್ಯೆ ಎಂದು ಕರೆದ.

ಯಶ್ಚ ಗಾಂಡೀವಮುಕ್ತಾನಾಂ ಸ್ಪರ್ಶಮುಗ್ರಮಚಿಂತಯನ್ ।
ಅಪತಿರ್ಹ್ಯಸಿ ಕೃಷ್ಣೇತಿ ಬ್ರುವನ್ ಪಾರ್ಥಾನವೈಕ್ಷತ ॥೬೨॥

ಕರ್ಣನು ತಾನೂ ಗಾಂಡೀವಧನುಸ್ಸಿನಿಂದ ಬರುವ ಬಾಣಗಳ ಉಗ್ರಸ್ಪರ್ಶವನ್ನೂ ಲೆಕ್ಕಿಸದೆ 'ದ್ರೌಪದಿ, ನಿನಗೆ ಪತಿಗಳು ಇನ್ನಿಲ್ಲ' ಎನ್ನುತ್ತ ಪಾಂಡವರ ಕಡೆಗೆ ನೋಡಿದ.

ಯಸ್ಯ ನಾಸೀದ್ ಭಯಂ ಪಾರ್ಥಾತ್ ಸಪುತ್ರಾತ್ ಸಜನಾರ್ದನಾತ್ ।
ಸ್ವಬಾಹುಬಲಮಾಶ್ರಿತ್ಯ ಮುಹೂರ್ತಮಪಿ ಸಂಜಯ ॥೬೩॥

ಸಂಜಯ, ಕರ್ಣ ತನ್ನ ಬಾಹುಬಲವನ್ನೇ ನಂಬಿದವನು, ಒಂದು ಮುಹೂರ್ತ ಕಾಲವೂ ಅವನಿಗೆ ಅರ್ಜುನನ ಭಯವಿರಲಿಲ್ಲ. ಅವನ ಪುತ್ರರ ಭಯ ಶ್ರೀಕೃಷ್ಣನ ಭಯಗಳೂ ಇರಲಿಲ್ಲ.

ತಸ್ಯ ನಾಹಂ ವಧಂ ಮನ್ಯೇ ದೇವೈರಪಿ ಸವಾಸವೈಃ ।
ಪ್ರತೀಪಮಭಿಧಾವದ್ಭಿಃ ಕಿಂ ಪುನಸ್ತಾತ ಪಾಂಡವೈಃ ॥೬೪॥

ಇಂದ್ರಾದಿ ದೇವತೆಗಳೇ ಅವನಿಗೆ ಇದಿರಾಗಿ ಮುನ್ನುಗ್ಗಿ ಬಂದರೂ, ಅವರಿಂದ ಅವನಿಗೆ ಸಾವು ಬಂದೀತೆಂದು ನಾನು ಭಾವಿಸಲಾರೆ. ಇನ್ನು ಪಾಂಡವರಿಂದ ಅವನಿಗೆ ಸಾವು ಬಂದೀತೆ?

ನ ಹಿ ಜ್ಯಾಂ ಸಂಸ್ಪೃಶಾನಸ್ಯ ತಳತ್ರೇ ಚಾಪಿ ಗೃಹ್ಣತಃ ।
ಪುಮಾನಾಧಿರಥೇಃ ಸ್ಥಾತುಂ ಕಶ್ಚಿತ್ ಪ್ರಮುಖತೋಽರ್ಹತಿ ॥೬೫॥

ಕರ್ಣನು ಬಿಲ್ಲಿಗೆ ಹೆದೆ ಏರಿಸಿ ಕೈಚೀಲವನ್ನು ಕೈಹಾಕಿಕೊಂಡನೆಂದರೆ, ಅಧಿರಥನ ಮಗನಾದ ಆ ಕರ್ಣನ ಮುಂದೆ ನಿಲ್ಲಲು ಯಾವನೂ ಶಕ್ತನಾಗುವುದಿಲ್ಲ.

ಅಪಿ ಸ್ಯಾನ್ಮೇದಿನೀ ಹೀನಾ ಸೂರ್ಯಸೋಮಪ್ರಭಾಂಶುಭಿಃ ।
ನ ವಧಃ ಪುರುಷೇಂದ್ರಸ್ಯ ಸಮರೇಷ್ವಪಲಾಯಿನಃ ॥೬೬॥

ಭೂಮಿಯು ಒಂದುವೇಳೆ ಸೂರ್ಯ ಚಂದ್ರ ಮತ್ತು ಅಗ್ನಿ ಈ ಮೂವರ ಕಿರಣಗಳಿಂದಲೂ 'ಹೀನಾ ಸ್ಯಾತ್' ಶೂನ್ಯವಾಗಬೇಕು. 'ನ ಚೇತ್' ಇಲ್ಲದಿದ್ದರೆ ಯುದ್ಧಗಳಲ್ಲಿ ಸೋತು ಪಲಾಯನ ಮಾಡದಿರುವ ಶ್ರೇಷ್ಠ ಪುರುಷನಾದ ಕರ್ಣನ 'ವಧೋ ನ ಸ್ಯಾತ್' ವಧೆಯಾಗಲಾರದು. ಅದು ಅಸಂಭವ.

ಯೇನ ಮಂದಃ ಸಹಾಯೇನ ಭ್ರಾತ್ರಾ ದುಃಶಾಸನೇನ ಚ ।
ಬ್ರುವತೋ ವಾಸುದೇವಸ್ಯ ಪ್ರತ್ಯಾಖ್ಯಾನಮರೋಚಯತ್ ॥೬೭॥

ಈ ಕರ್ಣನ ಮತ್ತು ತಮ್ಮನಾದ ದುಃಶಾಸನನ ಸಹಾಯ ಇದ್ದುದರಿಂದಲೇ ಮೂರ್ಖನಾದ ದುರ್ಯೋಧನನಿಗೆ ಶ್ರೀಕೃಷ್ಣನ ಸಂಧಾನದ ಮಾತುಗಳನ್ನು ತಿರಸ್ಕರಿಸುವ ಬುದ್ಧಿ ಬಂದಿತು.

ಸ ನೂನಂ ವೃಷಭಸ್ಕಂಧಂ ದೃಷ್ಟ್ವಾ ಕರ್ಣಂ ನಿಪಾತಿತಮ್ ।
ದುಃಶಾಸನಂ ಚ ನಿಹತಂ ಮನ್ಯೇ ಶೋಚತಿ ಪುತ್ರಕಃ ॥೬೮॥

ಗೂಳಿಯಂಥ ಹೆಗಲಿನ ಕರ್ಣ ಹತನಾದುದನ್ನೂ ದುಃಶಾಸನ ಹತನಾದುದನ್ನೂ ಕಂಡ ಬಳಿಕ ಈಗ ಮೂರ್ಖನಾದ ನನ್ನ ಮಗ ನಿಶ್ಚಯವಾಗಿ ಶೋಕಿಸುತ್ತಾನೆ.

ಹತಂ ವೈಕರ್ತನಂ ದೃಷ್ಟ್ವಾ ದ್ವೈರಥೇ ಸವ್ಯಸಾಚಿನಾ ।
ಜಯತಃ ಪಾಂಡವಾಂಶ್ಚಾಪಿ ಕಿಂಸ್ವಿದ್ ದುರ್ಯೋಧನೋಽಬ್ರವೀತ್ ॥೬೯॥

ಅರ್ಜುನನೊಡನೆ ದ್ವಂದ್ವರಥಯುದ್ಧದಲ್ಲಿ ಕರ್ಣ ಹತನಾದುದನ್ನೂ ಪಾಂಡವರು ಜಯಗಳಿಸಿದ್ದನ್ನೂ ಕಂಡಬಳಿಕ ದುರ್ಯೋಧನ ಏನು ನುಡಿದ?

ದುರ್ಮರ್ಷಣಂ ಚ ನಿಹತಂ ಜಯತ್ಸೇನಂ ಚ ಸಂಯುಗೇ ।
ಪ್ರಭಗ್ನಂ ಚ ಬಲಂ ದೃಷ್ಟ್ವಾ ವಧ್ಯಮಾನಂ ಮಹಾರಥೈಃ ॥೭೦॥

ಪರಾಙ್ಮುಖಾಂಶ್ಚ ನೃಪತೀನ್ ಪಲಾಯನಪರಾಯಣಾನ್ ।
ವಿದ್ರುತಾನ್ ರಥಿನೋ ದೃಷ್ಟ್ವಾ ಮನ್ಯೇ ಶೋಚತಿ ಪುತ್ರಕಃ ॥೭೧॥

ಯುದ್ಧದಲ್ಲಿ ದುರ್ಮರ್ಷಣ ಜಯತ್ಸೇನರು ಮಡಿದುದನ್ನೂ, ಮಹಾರಥರಿಂದ ಹತವಾಗಿ ನಮ್ಮ ಸೈನ್ಯನಾಶವಾದುದನ್ನೂ ನಮ್ಮ ಕಡೆಯ ರಾಜರು ಹಿಂಜರಿದು ಪಲಾಯನಕ್ಕೆ ತೊಡಗಿದ್ದನ್ನೂ ರಥಿಕರು ಧಾವಿಸುವುದನ್ನೂ ಕಂಡು ಮೂರ್ಖನಾದ ನನ್ನ ಮಗ ಶೋಕಿಸುತ್ತಿರಬಹುದು.

ಅನಯಶ್ಚಾತಿಮಾನೀ ಚ ಬಾಲಬುದ್ಧಿರಮರ್ಷಣಃ ।
ಹತೋತ್ಸಾಹಂ ಬಲಂ ದೃಷ್ಟ್ವಾ ಕಿಂಸ್ವಿದ್ ದುರ್ಯೋಧನೋಽಬ್ರವೀತ್॥

ನೀತಿ ಇಲ್ಲದವನು ಅತಿ ಸ್ವಾಭಿಮಾನಿ ಹುಡುಗುಬುದ್ಧಿಯವನು ಸಹನೆ ಇಲ್ಲದವನು ಇಂಥ ದುರ್ಯೋಧನನು ತನ್ನ ಸೈನ್ಯ ಉತ್ಸಾಹವನ್ನು ಕಳೆದುಕೊಂಡಿದ್ದನ್ನು ನೋಡಿ ಏನು ಹೇಳಿರಬಹುದು?

ಸ್ವಯಂ ವೈರಂ ಮಹತ್ ಕೃತ್ವಾ ವಾರ್ಯಮಾಣಃ ಸುಹೃದ್ಗಣೈಃ ।
ಪ್ರಧನೇ ಹತಭೂಯಿಷ್ಠೇ ಬಲೇ ಕಿಂ ವಾಽಬ್ರವೀದಸೌ ॥೭೩॥

ಬಂಧುಗಳೆಲ್ಲರೂ ತಡೆಯುತ್ತಿದ್ದಂತೆಯೇ ತಾನು ಮಹತ್ತಾದ ವೈರವನ್ನು ಮಾಡಿದ ಬಳಿಕ ಇದೀಗ ಯುದ್ಧದಲ್ಲಿ ಸೈನ್ಯ ಬಹುಪಾಲು ಹತವಾದಾಗ ಅವನು ಏನು ತಾನೆ ಹೇಳಿರಬಹುದು?

ಭ್ರಾತರಂ ನಿಹತಂ ದೃಷ್ಟ್ವಾ ಭೀಮಸೇನೇನ ಸಂಯುಗೇ ।
ರುಧಿರೇ ಪೀಯಮಾನೇ ಚ ಕಿಂಸ್ವಿದ್ ದುರ್ಯೋಧನೋಽಬ್ರವೀತ್
॥೭೪॥

ತಮ್ಮನಾದ ದುಃಶಾಸನ ಯುದ್ಧದಲ್ಲಿ ಭೀಮಸೇನನಿಂದ ಹತನಾದುದನ್ನು ಕಂಡಾಗ, ಭೀಮಸೇನ ಅವನ ನೆತ್ತರನ್ನು ಕುಡಿಯುತ್ತಿದ್ದಾಗ ದುರ್ಯೋಧನ ಏನು ತಾನೆ ನುಡಿದಿರಬಹುದು?

ಸಹ ಗಾಂಧಾರರಾಜೇನ ಸಭಾಯಾಂ ಯದಭಾಷತ ।
ಕರ್ಣೋಽರ್ಜುನಂ ರಣೇ ಹಂತಾ ಹತೇ ತಸ್ಮಿನ್ ಕಿಮಬ್ರವೀತ್ ॥೭೫॥

ಜೂಜಿನ ಸಭೆಯಲ್ಲಿ ದುರ್ಯೋಧನ ಶಕುನಿಯೊಂದಿಗೆ ಸೇರಿಕೊಂಡು 'ಕರ್ಣನು ಅರ್ಜುನನನ್ನು ವಧಿಸುತ್ತಾನೆ' ಎಂದು ಹೇಳಿದ್ದ. ಇದೀಗ ಅದೇ ಕರ್ಣ ಹತನಾದಾಗ ಅವನೇನು ತಾನೆ ಹೇಳಿಯಾನು?

ದ್ಯೂತಂ ಕೃತ್ವಾ ಪುರಾ ಹೃಷ್ಟೋ ವಂಚಯಿತ್ವಾ ಚ ಪಾಂಡವಾನ್ ।
ಶಕುನಿಃ ಸೌಬಲಸ್ತಾತ ಹತೇ ಕರ್ಣೇ ಕಿಮಬ್ರವೀತ್ ॥೭೬॥

ಸಂಜಯ, ಅಂದು ಸುಬಲಪುತ್ರ ಶಕುನಿ ಸಂತೋಷದಿಂದ ಜೂಜಾಡಿ ಪಾಂಡವರನ್ನು ವಂಚಿಸಿ ಈಗ ಕರ್ಣ ಹತನಾದಾಗ ಏನು ತಾನೆ ಹೇಳಿರಬಹುದು?

ಕೃತವರ್ಮಾ ಮಹೇಷ್ವಾಸಃ ಸಾತ್ವತಾನಾಂ ಮಹಾರಥಃ ।
ಹತಂ ವೈಕರ್ತನಂ ದೃಷ್ಟ್ವಾ ಹಾರ್ದಿಕ್ಯಃ ಕಿಮಭಾಷತ ॥೭೭॥

ಯಾದವರಲ್ಲಿ ಮಹಾ ಬಿಲ್ಲುಗಾರ ಮಹಾರಥನಾದ ಹೃದಿಕಪುತ್ರ ಕೃತವರ್ಮ ಕರ್ಣ ಹತನಾದುದನ್ನು ಕಂಡು ಏನು ಹೇಳಿದ?

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಯಸ್ಯ ಶಿಕ್ಷಾಮುಪಾಸತೇ ।
ಧನುರ್ವೇದಂ ಚಿಕೀರ್ಷಂತೋ ದ್ರೋಣಪುತ್ರಸ್ಯ ಧೀಮತಃ ॥೭೮॥

ದಿವ್ಯರೂಪೇಣ ಸಂಪನ್ನೋ ದರ್ಶನೀಯೋ ಮಹಾಯಶಾಃ ।
ಅಶ್ವತ್ಥಾಮಾ ಹತೇ ಕರ್ಣೇ ಕಿಮಭಾಷತ ಸಂಜಯ ॥೭೯॥

ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಧನುರ್ವೇದದ ಅಭ್ಯಾಸ ಮಾಡಲು ಬಯಸಿ ದ್ರೋಣಪುತ್ರನಾದ ಧೀಮಂತ ಅಶ್ವತ್ಥಾಮನ ಬಳಿಗೇ ಬರುತ್ತಾರೆ. ಅವನು ದಿವ್ಯರೂಪಸಂಪನ್ನ ಸ್ಫುರದ್ರೂಪಿ ಮಹಾಕೀರ್ತಿಶಾಲಿ, ಸಂಜಯ, ಕರ್ಣ ಹತನಾದಾಗ ಈ ಅಶ್ವತ್ಥಾಮನೇನು ನುಡಿದ?

ಆಚಾರ್ಯೋ ಯೋ ಧನುರ್ವೇದೇ ಗೌತಮೋ ರಥಸತ್ತಮಃ ।
ಸ ಕೃಪಸ್ತಾತ ತೇಜಸ್ವೀ ಹತೇ ಕರ್ಣೇ ಕಿಮಬ್ರವೀತ್ ॥೮೦॥

ಧನುರ್ವೇದಾಚಾರ್ಯ, ಮಹಾರಥ, ತೇಜಸ್ವಿಯಾದ ಗೌತಮವಂಶೋತ್ಪನ್ನನಾದ ಕೃಪನು ಕರ್ಣ ಹತನಾದಾಗ ಏನು ನುಡಿದ?

ಮದ್ರರಾಜೋ ಮಹೇಷ್ವಾಸಃ ಶಲ್ಯಸ್ತತ್ರ ಕಿಮಬ್ರವೀತ್ ।
ದೃಷ್ಟ್ವಾ ವಿನಿಹತಂ ಕರ್ಣಂ ಸಾರಥ್ಯೇ ರಥಿನಾಂ ವರಃ ॥೮೧॥

ಮದ್ರರಾಜ ಶಲ್ಯ ಮಹಾ ಬಿಲ್ಲುಗಾರ ಮಹಾರಥ. ತನ್ನ ಸಾರಥ್ಯದಲ್ಲಿ ಕರ್ಣ ಹತನಾದಾಗ ಅದರ ಬಗ್ಗೆ ಏನು ನುಡಿದ?

ಕಿಮಭಾಷತ ಸೌವೀರೋ ಮದ್ರಾಣಾಮಧಿಪೋ ಬಲೀ ॥೮೨॥
ದೃಷ್ಟಂ ತೇನ ಹಿ ತತ್ ಸರ್ವಂ ಯಥಾ ಕರ್ಣೋ ನಿಪಾತಿತಃ ॥೮೩॥

ಬಲಿಷ್ಠನಾದ ಸೌವೀರ ಮದ್ರದೇಶಗಳ ಅಧಿಪತಿ ಶಲ್ಯನೇನು ನುಡಿದ? ಕರ್ಣ ಹೇಗೆ ಹತನಾದನೆಂಬುದನ್ನು ಎಲ್ಲವನ್ನೂ ಅವನು ನೋಡಿರುತ್ತಾನೆ ತಾನೆ?

ಯೇ ಚ ಕೇಚನ ರಾಜಾನಃ ಪೃಥಿವ್ಯಾಂ ಯೋದ್ಧುಮಾಗತಾಃ ।
ವೈಕರ್ತನಂ ಹತಂ ದೃಷ್ಟ್ವಾ ಕಾನ್ಯಭಾಷಂತ ಸಂಜಯ ॥೮೪॥

ಸಂಜಯ, ಯುದ್ಧ ಮಾಡಲು ಬಂದಿರುವ ಭೂಮಿಯಲ್ಲಿರುವ ಎಲ್ಲ ರಾಜರೂ ಕರ್ಣ ಹತನಾದುದನ್ನು ಕಂಡು ಯಾವ ಮಾತುಗಳನ್ನು ಆಡಿದರು?

ಕರ್ಣೇ ವಿನಿಹತೇ ವೀರೇ ರಥವ್ಯಾಘ್ರೇ ನರರ್ಷಭೇ ।
ಕೋ ವಾ ಮುಖಮನೀಕಾನಾಮಾಸೀತ್ ಸಂಜಯ ಭಾಗಶಃ ॥೮೫॥

ರಥಿಕರಲ್ಲಿ ಶ್ರೇಷ್ಠನಾದ ವೀರಕರ್ಣ ಹತನಾಗುವಾಗ ಸೈನ್ಯಗಳಿಗೆ ಬೇರೆ ಬೇರೆ ಭಾಗಗಳಲ್ಲಿ ಯಾರ್ಯಾರು ಮುಖ್ಯರಾಗಿದ್ದರು?

ಮದ್ರರಾಜಃ ಕಥಂ ಶಲ್ಯೋ ನಿಯುಕ್ತೋ ರಥಿನಾಂ ವರಃ ।
ವೈಕರ್ತನಸ್ಯ ಸಾರಥ್ಯೇ ತನ್ಮಮಾಚಕ್ಷ್ವ ಸಂಜಯ ॥೮೬॥

ರಥಿಕರಲ್ಲಿ ಶ್ರೇಷ್ಠನಾದ ಮದ್ರರಾಜ ಶಲ್ಯ ಕರ್ಣನ ಸಾರಥ್ಯದಲ್ಲಿ ಹೇಗೆ ನಿಯುಕ್ತನಾದ? ಸಂಜಯ, ಅದನ್ನು ಹೇಳು.

ಕೇಽರಕ್ಷನ್ ದಕ್ಷಿಣಂ ಚಕ್ರಂ ಸೂತ್ರಪುತ್ರಸ್ಯ ಸಂಯುಗೇ ।
ವಾಮಂ ಚಕ್ರಂ ರರಕ್ಷುರ್ವಾ ಕೇ ವಾಸನ್ನಸ್ಯ ಪೃಷ್ಠತಃ ॥೮೭॥

ಕರ್ಣನಿಗೆ ಯುದ್ಧದಲ್ಲಿ ಅವನು ಹತನಾಗುತ್ತಿದ್ದಾಗ ಬಲಗಡೆ ಚಕ್ರರಕ್ಷಣೆ

ಯನ್ನು ಯಾರು ಮಾಡುತ್ತಿದ್ದರು? ಎಡಗಡೆ ಚಕ್ರರಕ್ಷಣೆಯನ್ನು ಯಾರು ಮಾಡುತ್ತಿದ್ದರು? ಹಿಂಬದಿ ಚಕ್ರರಕ್ಷಣೆಯನ್ನು ಯಾರು ಮಾಡುತ್ತಿದ್ದರು?

ಕೇ ಕರ್ಣಂ ನ ಜಹುಃ ಶೂರಾಃ ಕೇ ಕ್ಷುದ್ರಾಃ ಪ್ರಾದ್ರವನ್ ಭಯಾತ್ ।
ಕಥಂ ಚ ವಃ ಸಮೇತಾನಾಂ ಹತಃ ಕರ್ಣೋ ಮಹಾರಥಃ ॥೮೮॥

ಯಾರು ಶೂರರಾಗಿ ಕರ್ಣನನ್ನು ಬಿಡದೇ ನಿಂತಿದ್ದರು? ಯಾರು ಕ್ಷುದ್ರರಾಗಿ ಭಯದಿಂದ ಓಡಿದರು? ನೀವೆಲ್ಲರೂ ಜೊತೆಗೇ ಕೂಡಿರುವಾಗ ಮಹಾರಥನಾದ ಕರ್ಣ ಹೇಗೆ ಹತನಾದ?

ಪಾಂಡವಾಶ್ಚ ಕಥಂ ಶೂರಾಃ ಪ್ರತ್ಯುದೀಯುರ್ಮಹಾರಥಾಃ ।
ಸೃಜಂತಃ ಶರವರ್ಷಾಣಿ ವಾರಿಧಾರಾ ಇವಾಂಬುದಾಃ ॥೮೯॥

ಮಹಾರಥರಾದ ಶೂರರಾದ ಪಾಂಡವರು ಮೋಡಗಳು ಧಾರಾಕಾರವಾಗಿ ಮಳೆ ಸುರಿಸುವಂತೆ ಬಾಣಗಳ ಮಳೆಗರೆಯುತ್ತ ಮುನ್ನುಗ್ಗಿ ಹೇಗೆ ಬಂದರು?

ಸ ಚ ಸರ್ಪಮುಖೋ ದಿವ್ಯೋ ಮಹೇಷುಪ್ರವರಸ್ತದಾ ।
ವ್ಯರ್ಥಃ ಕಥಂ ಸಮಭವತ್ ತನ್ಮಮಾಚಕ್ಷ್ವ ಸಂಜಯ ॥೯೦॥

ಬಾಣಗಳಲ್ಲಿ ಶ್ರೇಷ್ಠವಾದ ಸರ್ಪಮುಖದ ದಿವ್ಯವಾದ ಆ ದೊಡ್ಡ ಬಾಣ ಆಗ ಹೇಗೆ ವ್ಯರ್ಥವಾಯಿತು? ಸಂಜಯ, ಅದನ್ನು ನನಗೆ ಹೇಳು

ಮಾಮಕಸ್ಯಾಸ್ಯ ಸೈನ್ಯಸ್ಯ ಹತೋತ್ಸಾಹಸ್ಯ ಸಂಜಯ ।
ಅವಶೇಷಂ ನ ಪಶ್ಯಾಮಿ ಅರ್ಜುನೇ ಮುದಿತೇ ಸತಿ ॥೯೧॥

ಅರ್ಜುನ ವಿಜಯದಿಂದ ಬೀಗಿರುವಾಗ ಉತ್ಸಾಹವನ್ನು ಕಳೆದುಕೊಂಡ ನನ್ನ ಸೈನ್ಯಕ್ಕೆ ಇನ್ನು ಉಳಿವನ್ನು ನಾ ಕಾಣೆ.

ತೌ ಹಿ ವೀರೌ ಮಹೇಷ್ವಾಸೌ ಮದರ್ಥೇ ತ್ಯಕ್ತಜೀವಿತೌ ।
ಭೀಷ್ಮದ್ರೋಣೌ ಹತೌ ಶ್ರುತ್ವಾ ಕೋ ನ್ವರ್ಥೋ ಜೀವಿತೇನ ಮೇ ॥೯೨॥

ಮಹಾ ಬಿಲ್ಲಾಳುಗಳಾದ ಆ ವೀರ ಭೀಷ್ಮ-ದ್ರೋಣರು ನನ್ನ ಸಲುವಾಗಿ ಪ್ರಾಣವನ್ನು ಒತ್ತೆಇಟ್ಟವರು. ಅವರು ಹತರಾದುದನ್ನು ಕೇಳಿದ ಮೇಲೆ ನಾನು ಬದುಕಿದ್ದೇನು ಫಲ?

ಪುನಃ ಪುನರ್ನ ಮೃಷ್ಯಾಮಿ ಹತಂ ಕರ್ಣಂ ಚ ಪಾಂಡವೈಃ ।
ಯಸ್ಯ ಬಾಹ್ವೋರ್ಬಲಂ ತುಲ್ಯಂ ಕುಂಜರಾಣಾಂ ಶತೈಃ ಶತೈಃ ॥೯೩॥

ಪುನಃ ಪುನಃ ಹೇಳುತ್ತೇನೆ, ಸಾವಿರ ಸಾವಿರ ಆನೆಗಳಂತೆ ಬಾಹುಬಲಯುಕ್ತನಾಗಿದ್ದ ಕರ್ಣನೂ ಪಾಂಡವರಿಂದ ಹತನಾದುದನ್ನು ನಾನು ಸೈರಿಸಲಾರೆ.

ದ್ರೋಣೇ ಹತೇ ಚ ಯದ್ವೃತ್ತಂ ಕೌರವಾಣಾಂ ಪರೈಃ ಸಹ ।
ಸಂಗ್ರಾಮೇ ನರವೀರಾಣಾಂ ತನ್ಮಮಾಚಕ್ಷ್ವ ಸಂಜಯ ॥೯೪॥

ದ್ರೋಣನು ಹತನಾದಾಗ ಕೌರವಪಕ್ಷದ ನರಶ್ರೇಷ್ಠರಿಗೆ ಪರರೊಡನೆ ನಡೆದ ಯುದ್ಧದಲ್ಲಿ ಏನಾಯಿತೆಂಬುದನ್ನು ನನಗೆ ಹೇಳು, ಸಂಜಯ!

ಯಥಾ ಕರ್ಣಶ್ಚ ಕೌಂತೇಯೈಃ ಸಹ ಯುದ್ಧಮಯೋಜಯತ್ ।
ಯಥಾ ವಾ ದ್ವಿಷತಾಂ ಹಂತಾ ಹತೋ ಯುದ್ಧೇ ತದುಚ್ಯತಾಮ್॥೯೫॥

ಕರ್ಣನು ಪಾಂಡವರೊಡನೆ ಯುದ್ಧವನ್ನು ಹೇಗೆ ಆಯೋಜಿಸಿದ ಮತ್ತು ಶತ್ರುನಾಶಕನಾದ ಆತ ಹೇಗೆ ಹತನಾದ, ಅದನ್ನು ಹೇಳು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ನವಮೋಽಧ್ಯಾಯಃ ॥೯॥

❖

ಮಹಾಭಾರತತಾತ್ಪರ್ಯನಿರ್ಣಯ

ಅಥಾನುಜ್ಞಾಮುಪಾದಾಯ
ದ್ರೌಣೇರ್ದುರ್ಯೋಧನೋ ನೃಪಃ ।
ಕರ್ಣಂ ಸೇನಾಪತಿಂ ಚಕ್ರೇ
ಸೋಽಗಾದ್ ಯುದ್ಧಾಯ ದಂಶಿತಃ ॥೧॥

ಬಳಿಕ ರಾಜ ದುರ್ಯೋಧನ ಅಶ್ವತ್ಥಾಮನ ಅನುಜ್ಞೆ ಪಡೆದು ಕರ್ಣನನ್ನು ಸೇನಾಧಿಪತಿಯನ್ನಾಗಿ ಮಾಡಿದ. ಕರ್ಣ ಕವಚವನ್ನು ತೊಟ್ಟು ಯುದ್ಧಕ್ಕೆ ಹೊರಟ.

❖ ❖ ❖

ಹತ್ತನೆಯ ಅಧ್ಯಾಯ

ಅಶ್ವತ್ಥಾಮನ ಸಲಹೆಯಂತೆ ಕರ್ಣನಿಗೆ ಸೇನಾಧಿಪತ್ಯ

ಸಂಜಯಃ

ಹತೇ ದ್ರೋಣೇ ಮಹೇಷ್ವಾಸೇ ತಸ್ಮಿನ್ನಹನಿ ಭಾರತ ।
ಕೃತೇ ಚ ಮೋಘಸಂಕಲ್ಪೇ ದ್ರೋಣಪುತ್ರೇ ಮಹಾರಥೇ ॥೧॥

ತ್ರಾಸಯಿತ್ವಾ ಮಹಾರಾಜ ಕೌರವಾಣಾಮನೀಕಿನೀಮ್ ।
ವ್ಯೂಹ್ಯ ಪಾರ್ಥಃ ಸ್ವಕಂ ಸೈನ್ಯಮತಿಷ್ಠದ್ ಭ್ರಾತೃಭಿಃ ಸಹ ॥೨॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ಮಹಾ ಬಿಲ್ಲಾರನಾದ ದ್ರೋಣ ಹತನಾದಾಗ ಆ ಹಗಲಿನಲ್ಲಿ ಮಹಾರಥನಾದ ಅಶ್ವತ್ಥಾಮನ ಆಗ್ನೇಯಾಸ್ತ್ರವೂ ನಿರೀಕ್ಷಿತ ಪರಿಣಾಮ ಮಾಡಲಿಲ್ಲ. ಅವನ ಸಂಕಲ್ಪ ವ್ಯರ್ಥವಾಯಿತು. ಅತ್ತ ಅರ್ಜುನ ಕೌರವಸೈನ್ಯವನ್ನು ಭಯಪಡಿಸಿ ತನ್ನ ಸೈನ್ಯವನ್ನು ಸೋದರರೊಂದಿಗೆ ತಾನು ವ್ಯೂಹ ಮಾಡಿ ಯುದ್ಧಕ್ಕೆ ನಿಂತ.

ತಮವಸ್ಥಿತಮಾಜ್ಞಾಯ ಪುತ್ರಸ್ತೇ ಭರತರ್ಷಭ ।
ದ್ರವಮಾಣಂ ಬಲಂ ದೃಷ್ಟ್ವಾ ಪೌರುಷೇಣ ನ್ಯವಾರಯತ್ ॥೩॥

ರಾಜನೆ, ಅರ್ಜುನ ರಣರಂಗದಲ್ಲಿ ನಿಂತುದನ್ನು ನಿನ್ನ ಪುತ್ರ ತಿಳಿದು, ಓಡಿಹೋಗುತ್ತಿದ್ದ ತನ್ನ ಸೈನ್ಯವನ್ನು ಪೌರುಷದ ಮಾತುಗಳಿಂದ ತಡೆದ.

ಸ್ವಮನೀಕಮವಸ್ಥಾಪ್ಯ ಬಾಹುವೀರ್ಯಮುಪಾಶ್ರಿತಃ ।
ಸಂಯುದ್ಧ್ಯ ಸುಚಿರಂ ಕಾಲಂ ಪಾಂಡವೈಃ ಸಹ ಭಾರತ ॥೪॥

ಲಬ್ಧಲಕ್ಷೈಃ ಪರೈರ್ಹೃಷ್ಟೈಃ ವ್ಯಾಯಚ್ಛದ್ಭಿಶ್ಚಿರಂ ತದಾ ।
ಸಂಧ್ಯಾಕಾಲಂ ಸಮಾಸಾದ್ಯ ಪ್ರತ್ಯಾಹಾರಮಕಾರಯತ್ ॥೫॥

ಜಯಗಳಿಸಿ ಸಂತುಷ್ಟರಾದ ಪಾಂಡವರು ದೀರ್ಘಕಾಲ ಯುದ್ಧ ಮಾಡುತ್ತಿದ್ದುದರಿಂದ ದುರ್ಯೋಧನ ತಾನೂ ತನ್ನ ಸೈನ್ಯವನ್ನು ಸ್ಥಿರವಾಗಿ ನಿಲ್ಲಿಸಿ

ಬಹಳ ಹೊತ್ತು ಬಾಹುಬಲವನ್ನು ಉಪಯೋಗಿಸಿ ಯುದ್ಧಮಾಡಿದ. ಬಳಿಕ ಸಂಧ್ಯಾಕಾಲ ಬಂದಾಗ ಸೈನ್ಯವನ್ನು ಹಿಂತಿರುಗಿಸಿದ.

ನಿವೇಶ್ಯ ಬಲವದ್ಘೋರಕ್ಷುತ್ಪಿಪಾಸಾಭಯೈರ್ಯುತಮ್ ।
ಶ್ರಮೇಣ ಮಹತಾ ಯುಕ್ತಂ ತಥಾ ದ್ರೋಣವಧೇನ ಚ ॥೬॥

ದ್ರೋಣವಧದಿಂದ ಕೌರವಸೈನ್ಯ ಮಹಾ ಶ್ರಮದಿಂದ ಯುಕ್ತವಾಗಿತ್ತು. ಬಲವತ್ತಾಗಿ ಘೋರವಾಗಿ ಹಸಿವು ಬಾಯಾರಿಕೆ ಭಯಗಳಿಂದ ಯುಕ್ತವಾಗಿತ್ತು. ಅದನ್ನು ದುರ್ಯೋಧನ ಶಿಬಿರಕ್ಕೆ ಕಳಿಸಿದ.

ದೀನರೂಪಾ ರಣೇ ಕರ್ಮ ಕೃತ್ವಾ ಘೋರಾಂ ಚ ಶರ್ವರೀಮ್ ।
ನಿವೇಶಂ ಪ್ರಾಪ್ಯ ಸಾ ಸೇನಾ ವಿಶ್ರಮ್ಯ ಮುದಿತಾऽಭವತ್ ॥೭॥

ಯುದ್ಧದಲ್ಲಿ ಹೋರಾಟಮಾಡಿ ದುರ್ಬಲವಾಗಿದ್ದ ಆ ಸೇನೆ ಘೋರವಾದ ಆ ರಾತ್ರಿ ಪೂರ್ತಿ ಶಿಬಿರದಲ್ಲಿದ್ದು ವಿಶ್ರಮಿಸಿ ಪ್ರಸನ್ನವಾಯಿತು.

ಕೃತ್ವಾऽವಹಾರಂ ಸೈನ್ಯಾನಾಂ ಪ್ರವಿಶ್ಯ ಶಿಬಿರಂ ಸ್ವಕಮ್ ।
ಕುರವಃ ಸಹಿತಾ ಮಂತ್ರಂ ಮಂತ್ರಯಾಂಚಕ್ರಿರೇ ಮಿಥಃ ॥೮॥

ದುರ್ಯೋಧನ ಮುಂತಾದವರು ರಣರಂಗದಿಂದ ಸೈನ್ಯವನ್ನು ಹಿಂತೆಗೆದು ಕೊಂಡ ಬಳಿಕ ತಮ್ಮ ಶಿಬಿರವನ್ನು ಪ್ರವೇಶಿಸಿ ಒಂದೆಡೆ ಸೇರಿ ಪರಸ್ಪರವಾಗಿ ಮಂತ್ರಾಲೋಚನೆ ಮಾಡಿದರು.

ಪರ್ಯಂಕೇಷು ಪರಾರ್ಧ್ಯೇಷು ವರಾಸ್ತರಣವತ್ಸು ಚ ।
ಉಪವಿಷ್ಟೇಷು ತೇಷ್ವೇವಂ ರಾಜಪುತ್ರೇಷು ಭಾರತ ॥೯॥

ರಾಜನೆ, ಶಿಬಿರದಲ್ಲಿ ರಾಜಕುಮಾರರು ಬೆಲೆಬಾಳುವ ಒಳ್ಳೆಯ ಹಾಸುಗಳಿರುವ ಮಂಚಗಳಲ್ಲಿ ಕುಳಿತುಕೊಂಡರು.

ತತ್ರ ದುರ್ಯೋಧನೋ ರಾಜಾ ಸಾಮ್ನಾ ಪರಮವಲ್ಗುನಾ ।
ತಾನಾಭಾಷ್ಯ ಮಹೇಷ್ವಾಸಾನ್ ಪ್ರಾಪ್ತಕಾಲಮಭಾಷತ ॥೧೦॥

ಆಗ ಆ ಬಿಲ್ಲಾರರಿಗೆ ರಾಜಾ ದುರ್ಯೋಧನನು ಬಲು ಮಧುರವಾಗಿ ಸಂತೈಸುವ ಮಾತುಗಳಿಂದ ಕಾಲೋಚಿತವಾಗಿ ಹೀಗೆ ನುಡಿದ—

ದುರ್ಯೋಧನಃ

ಮತಂ ಮತಿಮತಾಂ ಶ್ರೇಷ್ಠಾಃ ಸರ್ವೇ ಪ್ರಬ್ರೂತ ಮಾ ಚಿರಮ್ ।
ಏವಂಗತೇನ ಯತ್ಕಾರ್ಯಂ ಭವೇತ್ ಕಾರ್ಯತರಂ ನೃಪಾಃ ॥೧೧॥

ದುರ್ಯೋಧನ ನುಡಿದ— ರಾಜರೆ, ಬುದ್ಧಿವಂತರಲ್ಲಿ ಶ್ರೇಷ್ಠರಾದ ನೀವೆಲ್ಲರೂ ಈ ಪರಿಸ್ಥಿತಿಯಲ್ಲಿ ನಾವು ಅತಿ ಮುಖ್ಯವಾಗಿ ಮಾಡಬೇಕಾಗಿರುವ ಕಾರ್ಯವೇನೆಂದು ಬೇಗನೆ ಹೇಳಿರಿ.

ಸಂಜಯಃ

ಏವಮುಕ್ತಾ ತ್ವ ನರೇಂದ್ರೇಣ ನರಸಿಂಹಾ ಯುಯುತ್ಸವಃ ।
ಚಕ್ರುರ್ನಾನಾವಿಧಾಶ್ಚೇಷ್ಟಾಃ ಸಿಂಹಾಸನಗತಾಸ್ತದಾ ॥೧೨॥

ಸಂಜಯನು ನುಡಿದ— ದುರ್ಯೋಧನ ಹೀಗೆ ಹೇಳಿದಾಗ ಸಿಂಹಾಸನಾಧೀಶರಾಗಿದ್ದ ರಾಜರು ಯುದ್ಧೇಚ್ಛುಗಳಾಗಿ ನಾನಾವಿಧವಾಗಿ ಸನ್ನೆ ಮಾಡಿದರು.

ಇಂಗಿತಾನಿ ನಿಶಾಮ್ಯೈಷಾಂ ಪ್ರಾಣಾನ್ ಯುದ್ಧೇ ಜುಹೂಷತಾಮ್ ।
ಸಮುದ್ವೀಕ್ಷ್ಯ ಮುಖಂ ರಾಜ್ಞೋ ಬಾಲಾರ್ಕಸಮವರ್ಚಸಮ್ ॥೧೩॥
ಆಚಾರ್ಯಪುತ್ರೋ ಮೇಧಾವೀ ವಾಕ್ಯಮರ್ಥವದಾದದೇ ॥೧೪॥

ಯುದ್ಧದಲ್ಲಿ ಆತ್ಮಾಹುತಿ ಮಾಡಿಕೊಳ್ಳಲು ಬಯಸಿದ್ದ ಆ ರಾಜರ ಇಂಗಿತಗಳನ್ನು ಕಂಡು ಮೇಧಾವಿಯಾದ ದ್ರೋಣಪುತ್ರ ಅಶ್ವತ್ಥಾಮನು ಉದಿಸುವ ಸೂರ್ಯನಂತೆ ವರ್ಚಸ್ಸುಳ್ಳ ದುರ್ಯೋಧನನ ಮುಖವನ್ನು ನೋಡಿ ಅರ್ಥವತ್ತಾದ ಮಾತನ್ನಾಡಿದ.

ಅಶ್ವತ್ಥಾಮಾ

ರಾಗೋ ಯೋಗಸ್ತಥಾ ದಾಕ್ಷ್ಯಂ ನಯಶ್ಚೇತ್ಯರ್ಥಸಾಧಕಾಃ ।
ಉಪಾಯಾಃ ಪಂಡಿತೈಃ ಪ್ರೋಕ್ತಾಸ್ತೇ ತು ದೈವಂ ಸಮಾಶ್ರಿತಾಃ ॥೧೫॥

ಅಶ್ವತ್ಥಾಮನು ನುಡಿದ— ಯೋಧರಿಗೆ ಸ್ವಾಮಿಭಕ್ತಿ ದೇಶಕಾಲಾದಿ ಸಾಧನ ಸಂಪತ್ತು ದಕ್ಷತೆ ಚತುರತೆಗಳು ಇವು ನಾಲ್ಕು ಉದ್ದೇಶ ಸಾಧನೆಗಿರುವ ಮುಖ್ಯ ಉಪಾಯಗಳೆಂದು ರಾಜಕೀಯತಜ್ಞರು ಹೇಳುತ್ತಾರೆ. ಆದರೆ ಇವು ನಾಲ್ಕೂ ದೈವೇಚ್ಛೆಯನ್ನು ಅವಲಂಬಿಸುತ್ತವೆ.

ಲೋಕಪ್ರವೀರಾ ಯೇऽಸ್ಮಾಕಂ ದೇವಕಲ್ಪಾ ಮಹಾರಥಾಃ ।
ನೀತಿಮಂತಸ್ತಥಾ ಯುಕ್ತಾ ರಕ್ತಾ ದಕ್ಷಾಶ್ಚ ತೇ ಹತಾಃ ॥೧೬॥

ನಮ್ಮ ಪಕ್ಷದಲ್ಲಿದ್ದ ಲೋಕಪ್ರಸಿದ್ಧವೀರರಾದ, ಮಹಾರಥರಾದ ದೇವತಾ ಸಮಾನರಾದ ನೀತಿವೇತ್ತರೂ ಕಾರ್ಯಾಸಕ್ತರೂ ಅನುರಕ್ತರೂ ದಕ್ಷರೂ ಆಗಿದ್ದ ರಾಜರು ಹತರಾಗಿದ್ದಾರೆ.

ನ ತ್ವೇವ ಕಾರ್ಯಂ ನೈರಾಶ್ಯಮಸ್ಮಾಭಿರ್ವಿಜಯಂ ಪ್ರತಿ ।
ಸುನೀತೈರಿಹ ಸರ್ವಾರ್ಥೈರ್ದೈವಮಪ್ಯನುಲೋಮ್ಯತೇ ॥೧೭॥

ಹೀಗೆಂದ ಮಾತ್ರಕ್ಕೆ ನಾವು ಜಯಸಂಪಾದನೆಯ ವಿಷಯದಲ್ಲಿ ನಿರಾಶರಾಗ ಬೇಕಿಲ್ಲ. ಸರ್ವಾರ್ಥಸಾಧಕರು ಒಳ್ಳೆಯ ರಾಜನೀತಿಯನ್ನು ಕೈಗೊಳ್ಳಬೇಕು. ಆಗ ಅವರಿಗೆ ದೈವವೂ ಅನುಕೂಲವಾಗುತ್ತದೆ.

ತೇ ವಯಂ ಪ್ರವರಂ ನ್ಯಾಣಾಂ ಸರ್ವೈರ್ಯೋಧಗುಣೈರ್ಯುತಮ್ ।
ಕರ್ಣಮೇವಾಭಿಷೇಕ್ಷ್ಯಾಮಃ ಸೈನಾಪತ್ಯೇನ ಭಾರತ ।
ಕರ್ಣಂ ಸೇನಾಪತಿಂ ಕೃತ್ವಾ ಪ್ರಮಥಿಷ್ಯಾಮಹೇ ರಿಪೂನ್ ॥೧೮॥

ದುರ್ಯೋಧನ, ಯೋಧರಿಗಿರಬೇಕಾದ ಎಲ್ಲ ಗುಣಗಳಿಂದ ಯುಕ್ತನಾಗಿರುವ ಪುರುಷ ಶ್ರೇಷ್ಠನಾದ ಕರ್ಣನನ್ನೇ ಸೇನಾಧಿಪತ್ಯದಲ್ಲಿ ಅಭಿಷೇಕ ಮಾಡೋಣ. ಕರ್ಣನನ್ನು ಸೇನಾಧಿಪತಿಯಾಗಿ ಮಾಡಿಕೊಂಡು ಶತ್ರುಗಳನ್ನು ನಾಶಮಾಡೋಣ.

ಏಷ ಹ್ಯತಿಬಲಃ ಶೂರಃ ಕೃತಾಸ್ತ್ರೋ ಯುದ್ಧದುರ್ಮದಃ ।
ವೈವಸ್ವತ ಇವಾಸಹ್ಯಃ ಶಕ್ತೋ ಜೇತುಂ ರಣೇ ರಿಪೂನ್ ॥೧೯॥

ಕರ್ಣ ಅತಿಬಲಿಷ್ಠ ಶೂರ, ಅಸ್ತ್ರಜ್ಞಾನಿ, ಯುದ್ಧದಲ್ಲಿ ಮದಿಸುವವನು, ಶತ್ರುಗಳಿಗೆ ಯಮನಂತೆ ಅಸಹನೀಯ, ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲಲು ಸಮರ್ಥನಾಗಿದ್ದಾನೆ.

ಸಂಜಯಃ

ಏತದಾಚಾರ್ಯತನಯಾಚ್ಛ್ರುತ್ವಾ ರಾಜಂಸ್ತವಾತ್ಮಜಃ ।
ದುರ್ಯೋಧನೋ ಮಹಾರಾಜ ಭೃಶಂ ಪ್ರೀತಮನಾಸ್ತದಾ ॥೨೦॥

ಸಂಜಯನು ನುಡಿದ— ಮಹಾರಾಜ, ಈ ಮಾತನ್ನು ಅಶ್ವತ್ಥಾಮನ ಮುಖದಿಂದ ಕೇಳಿದ ನಿನ್ನ ಮಗ ದುರ್ಯೋಧನ ಮನಸಿನಲ್ಲಿ ಬಲು ಸಂತೋಷಪಟ್ಟ.

ಆಶಾಂ ಬಲವತೀಂ ಚಕ್ರೇ ಕರ್ಣಂ ಪ್ರತಿ ಮಹಾರಥಮ್ ।
ಹತೇ ಭೀಷ್ಮೇ ಮೃತೇ ದ್ರೋಣೇ ಕರ್ಣೋ ಜೇಷ್ಯತಿ
ಪಾಂಡವಾನ್ ॥೨೧॥

ಭೀಷ್ಮ ಹತನಾದರೂ ದ್ರೋಣ ಹತನಾದರೂ ಕರ್ಣನೆ ಪಾಂಡವರನ್ನು ಗೆದ್ದು ಕೊಡುತ್ತಾನೆ ಎಂದು ದುರ್ಯೋಧನ ಮಹಾರಥನಾದ ಕರ್ಣನ ಬಗ್ಗೆ ಬಲವಾದ ಆಸೆ ಇಟ್ಟುಕೊಂಡಿದ್ದ.

ತಾಮಾಶಾಂ ಹೃದಯೇ ಕೃತ್ವಾ ಸಮಾಶ್ವಸ್ಯ ಚ ಭಾರತ ॥೨೨॥

ತತೋ ದುರ್ಯೋಧನಃ ಪ್ರೀತಃ ಪ್ರಿಯಂ ಶ್ರುತ್ವಾಽಸ್ಯ ತದ್ವಚಃ ।
ಪ್ರೀತಿಸತ್ಕಾರಸಂಯುಕ್ತಂ ತಥ್ಯಮಾತ್ಮಹಿತಂ ಶುಭಮ್ ॥೨೩॥

ಆ ಆಸೆಯನ್ನೇ ಮನಸಿನಲ್ಲಿಟ್ಟುಕೊಂಡು ಭರವಸೆ ಇಟ್ಟು ದುರ್ಯೋಧನ ಅಶ್ವತ್ಥಾಮನ ಬಾಯಿಂದ ಬಂದ ಪ್ರಿಯಕರವಾದ ಆ ಮಾತನ್ನು ಕೇಳಿ ಸಂತುಷ್ಟನಾದ. ಆ ಮಾತು ಅವನಿಗೆ ಪ್ರೀತಿ ಸತ್ಕಾರ ಯುಕ್ತವಾಗಿದ್ದು ತನಗೆ ಹಿತಕರ, ಸತ್ಯ, ಶುಭಕರವಾದ ಮಾತಾಗಿತ್ತು

ಸ್ವಮನಶ್ಚ ವ್ಯವಸ್ಥಾಪ್ಯ ಬಾಹುವೀರ್ಯಮುಪಾಶ್ರಿತಃ ॥೨೪॥

ಪ್ರೀತಿಸತ್ಕಾರಸಂಯುಕ್ತಂ ತಥ್ಯಮಾತ್ಮಹಿತೇ ರತಮ್ ।
ದುರ್ಯೋಧನೋ ಯುಧಾಂಶ್ರೇಷ್ಠೋ ರಾಧೇಯಮಿದಮಬ್ರವೀತ್ ॥

ಬಾಹುಬಲವನ್ನೇ ನಂಬಿದ್ದ ಶ್ರೇಷ್ಠಯೋಧನಾದ ದುರ್ಯೋಧನ ತನ್ನ ಮನಸ್ಸನ್ನು ಸ್ಥಿರವಾಗಿ ಮಾಡಿಕೊಂಡು ಕರ್ಣನಿಗೆ ಪ್ರಿಯ ಸತ್ಕಾರಯುಕ್ತವಾದ ತಥ್ಯವಾದ ಆತ್ಮಹಿತಕರವಾದ ಮಾತನ್ನು ನುಡಿದ.

ದುರ್ಯೋಧನಃ

ಕರ್ಣ ಜಾನಾಮಿ ತೇ ವೀರ್ಯಂ ಸೌಹೃದಂ ಚ ಪರಂ ಮಯಿ ।
ತಥಾऽಪಿ ತ್ವಾಂ ಮಹಾಬಾಹೋ ಪ್ರವಕ್ಷ್ಯಾಮಿ ಹಿತಂ ವಚಃ ॥೨೬॥

ದುರ್ಯೋಧನನು ನುಡಿದ— ಕರ್ಣ, ನನಗೆ ನಿನ್ನ ಸಾಮರ್ಥ್ಯಗೊತ್ತು. ನಿನಗೆ ನನ್ನಲ್ಲಿ ಬಹಳ ಪ್ರೀತಿ ಇರುವುದೂ ಗೊತ್ತು. ಆದರೂ ಮಹಾಬಾಹುವೆ, ನಿನಗೊಂದು ಹಿತಕರವಾದ ಮಾತನ್ನು ಹೇಳುತ್ತೇನೆ.

ಶ್ರುತ್ವಾ ಯಥೇಷ್ಟಂ ಕುರು ವೈ ವೀರ ಯತ್ ತವ ರೋಚತೇ ।
ಭವಾನ್ ಪ್ರಾಜ್ಞತಮೋ ನಿತ್ಯಂ ಮಮ ಚೈವ ಪರಾ ಗತಿಃ ॥೨೭॥

ವೀರನೆ, ನಾನು ನುಡಿಯುವುದನ್ನು ಕೇಳಿದ ಬಳಿಕ ನಿನಗೆ ಇಷ್ಟವಾದುದನ್ನು ಯಥೇಚ್ಛ ಮಾಡು. ನೀನು ಬಹಳ ತಿಳಿದವನು. ನನಗೆ ಸದಾ ದೊಡ್ಡ ಆಸರೆ ಆಗಿರುವವನು.

ಭೀಷ್ಮದ್ರೋಣೌ ತ್ವತಿರಥೌ ಹತೌ ಸೇನಾಪತೀ ಮಮ ।
ಸೇನಾಪತಿರ್ಭವಾನಸ್ತು ತಾಭ್ಯಾಂ ದ್ರವಿಣವತ್ತರಃ ॥೨೮॥

ಭೀಷ್ಮ–ದ್ರೋಣರು ಅತಿರಥರು ನನಗೆ ಸೇನಾಧಿಪತಿಗಳಾಗಿದ್ದವರು. ಅವರು ಹತರಾಗಿದ್ದಾರೆ. ಈಗ ನೀನೇ ಸೇನಾಧಿಪತಿಯಾಗು. ಅವರಿಗಿಂತ ಹೆಚ್ಚು ಸಾಮರ್ಥ್ಯ ಉಳ್ಳವನು ನೀನು.

ವೃದ್ಧೌ ಚ ತೌ ಮಹೇಷ್ವಾಸೌ ಸಾಪೇಕ್ಷೌ ಚ ಧನಂಜಯೇ ।
ಮಾನಿತೌ ಚ ಮಯಾ ವೀರೌ ರಾಧೇಯ ವಚನಾತ್ ತವ ॥೨೯॥

ಆ ಭೀಷ್ಮ ದ್ರೋಣರು ಮಹಾಬಿಲ್ಲುಗಾರರಾಗಿದ್ದರೂ ವೃದ್ಧರಾಗಿದ್ದರು ಮತ್ತು ಅರ್ಜುನನ ವಿಷಯದಲ್ಲಿ ಪಕ್ಷಪಾತಿಗಳಾಗಿದ್ದರು. ಕರ್ಣ, ನಾನು ನಿನ್ನ ಮಾತಿನಿಂದ ವೀರರಾದ ಅವರನ್ನು ದಂಡನಾಯಕನನ್ನಾಗಿ ಮಾಡಿ ಗೌರವಿಸಿದ್ದೆ.

ಪಿತಾಮಹತ್ವಂ ಸಂಪ್ರೇಕ್ಷ್ಯ ಪಾಂಡುಪುತ್ರಾ ಮಹಾರಣೇ ।
ರಕ್ಷಿತಾಸ್ತಾತ ಭೀಷ್ಮೇಣ ದಿವಸಾನಿ ದಶೈವ ತು ॥೩೦॥

ಪಾಂಡವರಿಗೆ ತಾನು ತಾತನೆಂದುಕೊಂಡು ಭೀಷ್ಮ ಮಹಾಯುದ್ಧದಲ್ಲಿ ಹತ್ತು ದಿವಸಗಳ ಕಾಲ ಪಾಂಡವರನ್ನು ಕೊಲ್ಲದೆ ರಕ್ಷಿಸಿಟ್ಟುಕೊಂಡ.

ನ್ಯಸ್ತಶಸ್ತ್ರೇ ತು ಭವತಿ ಹತೋ ಭೀಷ್ಮಃ ಪಿತಾಮಹಃ ।
ಶಿಖಂಡಿನಂ ಪುರಸ್ಕೃತ್ಯ ಫಲ್ಗುನೇನ ಮಹಾರಣೇ ॥೩೧॥

ಹತ್ತುದಿನಗಳ ಕಾಲ ನೀನು ಶಸ್ತ್ರತ್ಯಾಗ ಮಾಡಿದ್ದರಿಂದ ಅರ್ಜುನನು ಮಹಾಯುದ್ಧದಲ್ಲಿ ಶಿಖಂಡಿಯನ್ನು ಮುಂದೆ ಮಾಡಿ ಭೀಷ್ಮನನ್ನು ಬೀಳಿಸಿದ.

ಹತೇ ತಸ್ಮಿನ್ ಮಹೇಷ್ವಾಸೇ ಶರತಲ್ಪಗತೇ ಪುನಃ ।
ತ್ವಯೋಕ್ತಃ ಪುರುಷವ್ಯಾಘ್ರೋ ದ್ರೋಣೋ ಹ್ಯಾಸೀತ್ ಪುರಸ್ಸರಃ॥೩೨॥

ಮಹಾಬಿಲ್ಲಾರ ಭೀಷ್ಮ ಪತನ ಹೊಂದಿ ಶರತಲ್ಪದಲ್ಲಿ ಮಲಗಿದಾಗ ನಿನ್ನ ಮಾತಿನಂತೆ ಪುರುಷಶ್ರೇಷ್ಠನಾದ ದ್ರೋಣ ಮುಂದಾಳೆನಿಸಿದ.

ತೇನಾಪಿ ರಕ್ಷಿತಾಃ ಪಾರ್ಥಾಃ ಶಿಷ್ಯತ್ವಾದಿಹ ಸಂಯುಗೇ ।
ಸ ಚಾಪಿ ನಿಹತೋ ವೃದ್ಧೋ ಧೃಷ್ಟದ್ಯುಮ್ನೇನ ಸತ್ವರಮ್ ॥೩೩॥

ದ್ರೋಣನೂ ಕೂಡ ಪಾಂಡವರನ್ನು ಅವರು ಶಿಷ್ಯರಾದ್ದರಿಂದ, ಯುದ್ಧದಲ್ಲಿ ರಕ್ಷಿಸಿಕೊಂಡ. ವೃದ್ಧನಾದ ಆತನನ್ನು ಕೂಡ ಬೇಗನೆ ಧೃಷ್ಟದ್ಯುಮ್ನ ವಧಿಸಿದ.

ನಿಹತಾಭ್ಯಾಂ ಪ್ರಧಾನಾಭ್ಯಾಂ ತಾಭ್ಯಾಮತುಲವಿಕ್ರಮ ।
ತ್ವತ್ಸಮಂ ಸಮರೇ ಯೋಧಂ ನಾನ್ಯಂ ಪಶ್ಯಾಮಿ ಚಿಂತಯನ್ ॥೩೪॥

ಅನುಪಮ ಪರಾಕ್ರಮಿಯಾದ ಕರ್ಣನೆ, ಸೈನ್ಯದಲ್ಲಿ ಪ್ರಧಾನರಾಗಿದ್ದ

ಭೀಷ್ಮ–ದ್ರೋಣರು ಹತರಾದ ಬಳಿಕ ಯುದ್ಧದಲ್ಲಿ ಎಷ್ಟು ಯೋಚಿಸಿದರೂ ನಿನಗೆ ಸಮಾನನಾದ ಯೋಧನನ್ನು ಇನ್ನೊಬ್ಬನನ್ನು ನಾ ಕಾಣೆ.

ಭವಾನೇವ ಚ ನಃ ಶಕ್ತೋ ವಿಜಯಾಯ ನ ಸಂಶಯಃ ।
ಪೂರ್ವಂ ಮಧ್ಯೇ ತು ಪಶ್ಚಾಚ್ಚ ವಿಹಿತಂ ಚ ಸ್ವಕಂ ಹಿತಮ್ ॥೩೫॥

ನಮಗೆ ನಮ್ಮ ಹಿತಸಾಧನೆ ಹಿಂದೆ ನಿನ್ನಿಂದಲೇ ಆಗಿತ್ತು, ಮಧ್ಯಕಾಲದಲ್ಲಿಯೂ ನಿನ್ನಿಂದಲೇ ಆಯಿತು, ಮುಂದೆಯೂ ಈಗ ನಿನ್ನಿಂದಲೇ ಆಗಬೇಕು. ನಮಗೆ ಜಯ ತಂದುಕೊಡಲು ನೀನೇ ಶಕ್ತ ಇದರಲ್ಲಿ ಸಂಶಯವಿಲ್ಲ.

ಸ ಭವಾನ್ ಧುರ್ಯವತ್ ಸಂಖೇ ಧುರಮುದ್ವೋಢುಮರ್ಹತಿ ।
ಅಭಿಷೇಚಯ ಸೈನಾನ್ಯೇ ಸ್ವಯಮಾತ್ಮಾನಮಾತ್ಮನಾ ॥೩೬॥

ಭೀಷ್ಮ–ದ್ರೋಣರು ಇಷ್ಟರವರೆಗೆ ಮುಂದಾಳುಗಳಾಗಿದ್ದಂತೆ ಇನ್ನು ಮುಂದೆ ನೀನು ಯುದ್ಧದಲ್ಲಿ ಮುಂದಾಳುತ್ವವನ್ನು ವಹಿಸಿಕೊಳ್ಳಬೇಕು. ನಿನಗೆ ನೀನೇ ಸೇನಾಧಿಪತ್ಯದಲ್ಲಿ ಅಭಿಷೇಕ ಮಾಡಿಕೊಳ್ಳಬೇಕು.

ದೇವತಾನಾಂ ಯಥಾ ಸ್ಕಂದಃ ಸೇನಾನೀಃ ಪ್ರಭುರವ್ಯಯಃ ।
ತಥಾ ಭವಾನಿಮಾಂ ಸೇನಾಂ ಧಾರ್ತರಾಷ್ಟ್ರೀಂ ಬಿಭರ್ತು ವೈ ॥೩೭॥
ಜಹಿ ಶತ್ರುಗಣಾನ್ ಸರ್ವಾನ್ ಮಹೇಂದ್ರೋ ದಾನವಾನಿವ ॥೩೮॥

ದೇವತೆಗಳಿಗೆ ಸ್ಕಂದನು ಅವಿನಾಶಿಯಾದ ಸಮರ್ಥನಾದ ದಂಡನಾಯಕನಾದಂತೆ ನಮಗೆ ನೀನೇ ನಾಯಕನಾಗಿ ಈ ಕೌರವಸೇನೆಯನ್ನು ರಕ್ಷಿಸಬೇಕು. ಮಹೇಂದ್ರನು ದಾನವರನ್ನು ಕೊಂದಂತೆ ನಮ್ಮ ಎಲ್ಲ ಶತ್ರುಗಳನ್ನೂ ನೀನು ಕೊಲ್ಲು.

ಅವಸ್ಥಿತಂ ರಣೇ ಜ್ಞಾತ್ವಾ ಪಾಂಡವಾಸ್ತ್ವಾಂ ಮಹಾರಥಾಃ ।
ದ್ರವಿಷ್ಯಂತಿ ಸಪಾಂಚಾಲಾ ವಿಷ್ಣುಂ ದೃಷ್ಟ್ವೇವ ದಾನವಾಃ ॥೩೯॥
ತಸ್ಮಾತ್ ತ್ವಂ ಪುರುಷವ್ಯಾಘ್ರ ಪ್ರಕರ್ಷೇಥಾ ಮಹಾಚಮೂಮ್ ॥೪೦॥

ನೀನು ಯುದ್ಧದಲ್ಲಿ ನಾಯಕನಾಗಿ ನಿಂತರೆ ವಿಷ್ಣುವನ್ನು ಕಂಡು ದಾನವರು ಪಲಾಯನ ಮಾಡುವಂತೆ ನಿನ್ನನ್ನು ಕಂಡು ಮಹಾರಥರಾದ ಪಾಂಡವರು

ಪಲಾಯನ ಮಾಡುವರು. ಆದರಿಂದ, ನೀನೇ ನಮ್ಮ ಮಹಾಸೈನ್ಯವನ್ನು ಮುನ್ನಡೆಸಬೇಕು.

ಭವತ್ಯವಸ್ಥಿತೇ ಯತ್ತೇ ಪಾಂಡವಾ ಮಂದಚೇತಸಃ ।
ದ್ರವಿಷ್ಯಂತಿ ಸಹಾಮಾತ್ಯಾಃ ಪಾಂಚಾಲಾಶ್ಚ ಸಕೇಕಯಾಃ ॥೪೧॥

ನೀನು ನಿಂತು ಪ್ರಯತ್ನ ಮಾಡಿದೆ ಎಂದರೆ ಪಾಂಡವರು ಮಂದಬುದ್ಧಿಗಳಾದ್ದರಿಂದ ಮಿತ್ರರಾಜರೊಂದಿಗೆ ಪಲಾಯನವನ್ನೇ ಮಾಡುತ್ತಾರೆ. ಹಾಗೇ ಪಾಂಚಾಲರೂ ಸೃಂಜಯರೂ ಕೂಡ ಪಲಾಯನ ಮಾಡುತ್ತಾರೆ.

ಯಥಾ ಹ್ಯಭ್ಯುದಿತಃ ಸೂರ್ಯಃ ಪ್ರತಪನ್ ಸ್ವೇನ ತೇಜಸಾ ।
ವ್ಯಪೋಹತಿ ತಮಸ್ತೀವ್ರಂ ತಥಾ ಶತ್ರೂನ್ ವ್ಯಪೋಹಯ ॥೪೨॥

ಉದಿಸಿದ ಸೂರ್ಯನು ತನ್ನ ತೇಜಸ್ಸಿನಿಂದ ಎಲ್ಲವನ್ನೂ ಸುಡುತ್ತ ಗಾಢವಾದ ಕತ್ತಲನ್ನು ನಾಶಮಾಡುತ್ತಾನೆ. ಹಾಗೇ ನೀನೂ ಶತ್ರುಗಳನ್ನು ನಾಶಮಾಡು.

ಸಂಜಯಃ

ಏವಮುಕ್ತಸ್ತು ರಾಧೇಯೋ ರಾಜ್ಞಾ ದುರ್ಯೋಧನೇನ ಹ ।
ರಾಜ್ಞಾಂ ಮಧ್ಯೇ ಮಹಾಬಾಹುಃ ಪ್ರೀತಾತ್ಮಾ ಸ ಮಹಾಬಲಃ ॥೪೩॥
ಹರ್ಷಯನ್ನಬ್ರವೀತ್ ಕರ್ಣೋ ದುರ್ಯೋಧನಮಿದಂ ವಚಃ ॥೪೪॥

ಸಂಜಯನು ನುಡಿದ— ರಾಜಾ ದುರ್ಯೋಧನ ಹೀಗೆ ನುಡಿದಾಗ ಸಂತುಷ್ಟನಾದ ಮಹಾಬಾಹು ಮಹಾಬಲಿಯಾದ ಕರ್ಣ ರಾಜರೆಲ್ಲರ ನಡುವೆ ದುರ್ಯೋಧನನಿಗೆ ಸಂತೋಷವಾಗುವಂತೆ ಈ ಮಾತನ್ನು ಹೇಳಿದ.

ಕರ್ಣಃ

ಉಕ್ತಮೇತನ್ಮಯಾ ಪೂರ್ವಂ ಗಾಂಧಾರೇ ತವ ಸನ್ನಿಧೌ ।
ಜೇಷ್ಯಾಮಿ ಪಾಂಡವಾನ್ ರಾಜನ್ ಸಪುತ್ರಾನ್
ಸಜನಾರ್ದನಾನ್ ॥೪೫॥

ಕರ್ಣ ನುಡಿದ— ದುರ್ಯೋಧನ, ನಾನು ಹಿಂದೆಯೆ ನಿನ್ನ ಬಳಿ ಹೇಳಿದ್ದೆ

'ರಾಜನೆ, ಪಾಂಡವರನ್ನು ಅವರ ಮಕ್ಕಳೊಂದಿಗೆ ಕೃಷ್ಣನೊಂದಿಗೆ ನಾನು ಗೆಲ್ಲುತ್ತೇನೆ' ಎಂದು.

ಸೇನಾಪತಿರ್ಭವಿಷ್ಯಾಮಿ ತವಾಹಂ ನಾತ್ರ ಸಂಶಯಃ ।
ಸ್ಥಿರೋ ಭವ ಮಹಾರಾಜ ಜಿತಾನ್ ವಿದ್ಧಿ ಚ ಪಾಂಡವಾನ್ ॥೪೬॥

'ಮಹಾರಾಜ, ನಾನು ನಿನಗೆ ಸೇನಾಧಿಪತಿಯಾಗುತ್ತೇನೆ. ಇದರಲ್ಲಿ ಸಂಶಯವಿಲ್ಲ. ನೀನು ನಿಶ್ಚಿಂತನಾಗಿರು, ಪಾಂಡವರು ನನಗೆ ಸೋತರೆಂದೇ ತಿಳಿ.'

ಸಂಜಯಃ

ಏವಮುಕ್ತೋ ಮಹಾತೇಜಾಸ್ತದಾ ದುರ್ಯೋಧನೋ ನೃಪ ।
ಉತ್ತಸ್ಥೇ ರಾಜಭಿಃ ಸಾರ್ಧಂ ದೇವೈರಿವ ಶತಕ್ರತುಃ ॥೪೭॥

ಸಂಜಯನು ನುಡಿದ— ರಾಜನೆ, ಕರ್ಣ ಹೀಗೆ ನುಡಿದಾಗ ಮಹಾತೇಜಸ್ವಿಯಾದ ದುರ್ಯೋಧನ, ದೇವತೆಗಳೊಂದಿಗೆ ದೇವೇಂದ್ರ ಎದ್ದು ನಿಲ್ಲುವಂತೆ, ರಾಜರೊಂದಿಗೆ ತಾನು ಎದ್ದು ನಿಂತ.

ಸೈನಾಪತ್ಯೇನ ಸತ್ಕರ್ತುಂ ಕರ್ಣಂ ಸ್ಕಂದಮಿವಾಮರಾಃ ।
ತತೋಽಭಿಷಿಷಿಚುಃ ಕರ್ಣಂ ವಿಧಿದೃಷ್ಟೇನ ಕರ್ಮಣಾ ॥೪೮॥

ಸೇನಾಧಿಪತ್ಯವನ್ನಿತ್ತು ಸತ್ಕರಿಸಲು, ದೇವತೆಗಳು ಸ್ಕಂದನಿಗೆ ಹೇಗೋ ಹಾಗೇ ರಾಜರು ಕರ್ಣನಿಗೆ ವಿಧ್ಯುಕ್ತರೀತಿಯಿಂದ ಅಭಿಷೇಕ ಮಾಡಿದರು.

ದುರ್ಯೋಧನಮುಖಾ ರಾಜನ್ ರಾಜಾನೋ ವಿಜಯೈಷಿಣಃ ।
ಶಾತಕುಂಭಮಯೈಃ ಕುಂಭೈಃ ಬ್ರಾಹ್ಮಣೈಶ್ಚಾಭಿಮಂತ್ರಿತೈಃ ॥೪೯॥

ರಾಜನೆ, ವಿಜಯೇಚ್ಛುಗಳಾದ ರಾಜರು ಬ್ರಾಹ್ಮಣರಿಂದ ಅಭಿಮಂತ್ರಿತವಾದ ಬಂಗಾರದ ಕಲಶಗಳಿಂದ ಕರ್ಣನಿಗೆ ಅಭಿಷೇಕ ಮಾಡಿದರು.

ತೋಯಪೂರ್ಣೈರ್ವಿಷಾಣೈಶ್ಚ ದ್ವಿಪಖಡ್ಗಮಹರ್ಷಭೈಃ ।
ಮಣಿಮುಕ್ತಾಮಯೈರ್ಭಾಂಡೈಃ ಪುಣ್ಯೈರ್ಗಂಧೈಸ್ತಥೌಷಧೈಃ ॥೫೦॥

ಆನೆ ಘೇಂಡಾಮೃಗ ಮತ್ತು ಎತ್ತುಗಳ ಕೊಂಬುಗಳಿಂದ ಮಾಡಿದ ರತ್ನ ಖಚಿತವಾದ ಪಾತ್ರೆಗಳಲ್ಲಿ ಮಣಿ ಮುತ್ತು ಧಾನ್ಯ ಸುಗಂಧದ್ರವ್ಯ ಗಿಡಮೂಲಿಕೆಗಳನ್ನಿರಿಸಿ ಕರ್ಣನಿಗೆ ಅಭಿಷೇಕಗೈದರು.

ಔದುಂಬರೇ ಸಮಾಸೀನಮಾಸನೇ ಕ್ಷೌಮಸಂವೃತೇ ।
ಶಾಸ್ತ್ರದೃಷ್ಟೇನ ವಿಧಿನಾ ಸಂಭಾರೈಶ್ಚ ಸುಸಂಭೃತೈಃ ॥೫೧॥

ಅತ್ತಿಮರದ ಕಟ್ಟಿಗೆಯ ಆಸನಕ್ಕೆ ರೇಶ್ಮೆವಸ್ತ್ರ ಹೊದ್ದಿಸಿ ಅದರಮೇಲೆ ಕರ್ಣನನ್ನು ಕುಳ್ಳಿರಿಸಿ ಶಾಸ್ತ್ರೋಕ್ತವಿಧಿಯಿಂದ ಸಜ್ಜುಗೊಳಿಸಿದ ಅಭಿಷೇಕದ್ರವ್ಯಗಳಿಂದ ಅಭಿಷೇಕ ಮಾಡಿದರು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತಥಾ ಶೂದ್ರಾಶ್ಚ ಸಮ್ಮತಾಃ ।
ತುಷ್ಟುವುಸ್ತಂ ಮಹಾತ್ಮಾನಮಭಿಷಿಕ್ತಂ ವರಾಸನೇ ॥೫೨॥

ಆಗ ಆಪ್ತರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಲ್ಲರೂ ಉತ್ತಮವಾದ ಆಸನದಲ್ಲಿ ಅಭಿಷಿಕ್ತನಾದ ಮಹಾತ್ಮಾ ಕರ್ಣನನ್ನು ಸ್ತುತಿಸಿದರು.

ತತೋಽಭಿಷಿಕ್ತೋ ರಾಜೇಂದ್ರ ಗೋಭಿರ್ನಿಷ್ಕೈರ್ಧನೇನ ಚ ।
ವಾಚಯಾಮಾಸ ವಿಪ್ರಾಗ್ರ್ಯಾನ್ ರಾಧೇಯಃ ಪರವೀರಹಾ ॥೫೩॥

ಮಹಾರಾಜ, ಹೀಗೆ ಅಭಿಷಿಕ್ತನಾದ ಪರವೀರ ಹಂತಕನಾದ ಕರ್ಣನು ಗೋವು ಬಂಗಾರ ಧನಗಳನ್ನು ಶ್ರೇಷ್ಠ ಬ್ರಾಹ್ಮಣರಿಗೆ ಇತ್ತು ಅವರಿಂದ ಆಶೀರ್ವಾದ ಪಡೆದ.

ಸ ವ್ಯರೋಚತ ರಾಧೇಯಃ ಸೂತಮಾಗಧವಂದಿಭಿಃ ।
ಸ್ತೂಯಮಾನೋ ಯಥಾ ಭಾನುರುದಯೇ ಬ್ರಹ್ಮವಾದಿಭಿಃ ॥೫೪॥

ಉದಯಕಾಲದಲ್ಲಿ ಬ್ರಹ್ಮವಾದಿಗಳು ಸೂರ್ಯನನ್ನು ಸ್ತುತಿಸುವಂತೆ ಆಗ ಸೂತ–ಮಾಗಧ–ವಂದಿಗಳು ಕರ್ಣನನ್ನು ಹೊಗಳಿದರು. ಕರ್ಣ ಉದಿಸುವ ಸೂರ್ಯನಂತೆ ಬೆಳಗಿದ.

ತತಃ ಪುಣ್ಯಾಹಘೋಷೇಣ ವಾದಿತ್ರನಿನದೇನ ಚ ।
ಜಯಶಬ್ದೇನ ಶೂರಾಣಾಂ ತುಮುಲಃ ಸರ್ವತೋಽಭವತ್ ॥೫೫॥

ಆಗ ಪುಣ್ಯಾಹವಾಚನಶಬ್ದ ವಾದ್ಯಘೋಷ ಜಯಕಾರಗಳಿಂದ ಎಲ್ಲೆಡೆ ಶೂರಯೋಧರಲ್ಲಿ ದೊಂಬಿ ಉಂಟಾಯಿತು.

ಜಯೇತ್ಯೂಚುರ್ನೃಪಾಃ ಸರ್ವೇ ರಾಧೇಯಂ ತತ್ರ ಸಂಗತಾಃ ।
ಜಯ ಪಾರ್ಥಾನ್ ಸಗೋವಿಂದಾನ್ ಸಾನುಬಂಧಾನ್
ಮಹಾಹವೇ ॥೫೬॥

ಇತಿ ತಂ ವಂದಿನಃ ಪ್ರಾಹುರ್ದ್ವಿಜಾಶ್ಚ ಭರತರ್ಷಭ ॥೫೭॥

ರಾಜರು ಎಲ್ಲರೂ ಸೇರಿ ಕರ್ಣನಿಗೆ ಜಯಕಾರ ಮಾಡಿದರು, 'ಮಹಾಯುದ್ಧದಲ್ಲಿ ಪಾಂಡವರನ್ನು ಅವರ ಬಂಧು–ಮಿತ್ರರನ್ನು ಕೃಷ್ಣನನ್ನು ಗೆಲ್ಲು' ಎಂದು ವಂದಿಗಳೂ ಬ್ರಾಹ್ಮಣರೂ ಹಾರೈಸಿದರು.

ವಂದಿನಃ

ಜಯ ಪಾರ್ಥಾನ್ ಸಪಾಂಚಾಲಾನ್ ರಾಧೇಯ ವಿಜಯಾಯ ನಃ ।
ಉದ್ಯನ್ನಿವ ಯಥಾಽಽದಿತ್ಯಃ ತಮಾಂಸ್ಯುಗ್ರೈರ್ಗಭಸ್ತಿಭಿಃ ॥೫೮॥

ವಂದಿಗಳು ನುಡಿದರು— ಕರ್ಣ, ಉದಿಸುವ ಸೂರ್ಯನು ಉಗ್ರವಾದ ಕಿರಣಗಳಿಂದ ಕತ್ತಲನ್ನು ಓಡಿಸುವಂತೆ ನಮ್ಮ ವಿಜಯಕ್ಕಾಗಿ ನೀನು ಪಾಂಡವರನ್ನೂ ಪಾಂಚಾಲರನ್ನೂ ಗೆಲ್ಲು.

ನ ಹ್ಯಲಂ ತ್ವದ್ವಿಸೃಷ್ಟಾನಾಂ ಶರಾಣಾಂ ತೇ ಸಕೇಶವಾಃ ।
ಉಲೂಕಾಃ ಸೂರ್ಯರಶ್ಮೀನಾಂ ಜ್ವಲತಾಮಿವ ದರ್ಶನೇ ॥೫೯॥

ಜ್ವಲಿಸುವ ಸೂರ್ಯಕಿರಣಗಳನ್ನು ನೋಡಲು ಗೂಬೆಗಳು ಶಕ್ತವಾಗದಿರುವಂತೆ ನೀನು ಪ್ರಯೋಗಿಸಿದ ಬಾಣಗಳನ್ನು ಇದಿರಿಸಲು ಪಾಂಡವರೂ ಕೃಷ್ಣನೂ ಶಕ್ತರಾಗಲಾರರು.

ನ ಚ ಪಾರ್ಥಾಃ ಸಪಾಂಚಾಲಾಃ ಶಕ್ತಾಃ ಸ್ಥಾತುಂ ತವಾಗ್ರತಃ ।
ಆತ್ತವಜ್ರಸ್ಯ ಸಮರೇ ಮಹೇಂದ್ರಸ್ಯೇವ ದಾನವಾಃ ॥೬೦॥

ಯುದ್ಧದಲ್ಲಿ ಶಸ್ತ್ರವನ್ನೆತ್ತಿಕೊಂಡ ಮಹೇಂದ್ರನ ಇದಿರಿನಲ್ಲಿ ದಾನವರು ನಿಲ್ಲಲು

ಶಕ್ತರಲ್ಲ. ಹಾಗೇ ನೀನು ಶಸ್ತ್ರವೆತ್ತಿಕೊಂಡರೆ ಪಾಂಡವರೂ ಪಾಂಚಾಲರೂ ಇದಿರಿಸಲು ಶಕ್ತರಲ್ಲ.

ಸಂಜಯಃ

ಸ ಸತ್ಕೃತಃ ಸ್ತೂಯಮಾನಃ ಸುಹೃದ್ಗಣವೃತೋ ವೃಷಾ ।
ಕರ್ಣೋ ದುರ್ಯೋಧನಂ ವಾಕ್ಯಮಬ್ರವೀತ್ ಪ್ರಹಸನ್
ಪ್ರಿಯಮ್ ॥೬೧॥

ಸಂಜಯನು ನುಡಿದ— ಹೀಗೆ ಸತ್ಕಾರಮಾಡಿ ಹೊಗಳಿದಾಗ ಬಂಧು–ಮಿತ್ರ ಪರಿವೃತನಾದ ಕರ್ಣನು ನಗುತ್ತ ದುರ್ಯೋಧನನಿಗೆ ಪ್ರಿಯವಾಗುವಂಥ ಮಾತನ್ನು ನುಡಿದ.

ಕರ್ಣಃ

ದುರ್ಯೋಧನಾದ್ಯ ಸಗಣಂ ಪಾಂಡೂನಾಂ ಪ್ರವರೈಃ ಸಹ ।
ಫಲ್ಗುನಂ ಸೂದಯಿಷ್ಯಾಮಿ ತ್ವತ್ಪ್ರಿಯಾರ್ಥಂ ಸಬಾಂಧವಮ್ ॥೬೨॥

ಕರ್ಣ ನುಡಿದ— ದುರ್ಯೋಧನ, ನಾನು ಅರ್ಜುನನನ್ನು ಅವನ ಬಂಧುಗಳೊಂದಿಗೆ ಸೈನ್ಯದೊಂದಿಗೆ ಮತ್ತು ಪ್ರಧಾನಪಾಂಡವರೊಂದಿಗೆ ನಿನ್ನ ಸಂತೋಷಕ್ಕಾಗಿ ಇಂದೇ ವಧಿಸುತ್ತೇನೆ.

ಸಪರ್ವತಾರ್ಣವದ್ವೀಪಾಂ ಶಾಧಿ ಗಾಂ ಗತಪಾಂಡವಾಮ್ ।
ಪುತ್ರಪೌತ್ರಪ್ರಪೌತ್ರೇಷು ಪ್ರತಿಷ್ಠಾಂ ಗಮಯಿಷ್ಯಸಿ ॥೬೩॥

ಇನ್ನುಮೇಲೆ ಭೂಮಿಯ ಮೇಲೆ ಪಾಂಡವರಿಲ್ಲ. ಪರ್ವತ ಸಮುದ್ರಗಳಿಂದ ಕೂಡಿದ ಇಡೀ ಭೂಮಿಯಲ್ಲಿ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳೊಂದಿಗೆ ನೀನೊಬ್ಬನೇ ಇದ್ದು ಆಳುವೆ.

ನಾಸಾಧ್ಯಂ ವಿದ್ಯತೇ ಮಹ್ಯಂ ತ್ವತ್ಪ್ರಿಯಾರ್ಥಮರಿಂದಮ ।
ಸತ್ಯಧರ್ಮಾನುರಕ್ತಸ್ಯ ಸಿದ್ಧಿರಾತ್ಮವತೋ ಯಥಾ ॥೬೪॥

ಸತ್ಯಧರ್ಮದಲ್ಲಿ ಆಸಕ್ತನಾದ ಧೈರ್ಯಶಾಲಿಗೆ ಅಸಾಧ್ಯವೇನೂ ಇರುವುದಿಲ್ಲ.

ಹಾಗೇ ಶತ್ರುದಮನಕಾರಿಯಾದ ದುರ್ಯೋಧನನೆ, ನಿನ್ನ ಸಂತೋಷಕ್ಕಾಗಿ ನಾನೇನನ್ನೂ ಮಾಡಬಲ್ಲೆ ನನಗೆ ಅಸಾಧ್ಯವಾದುದು ಏನೂ ಇಲ್ಲ.

ಸಂಜಯಃ

ಅಭಿಷಿಕ್ತಸ್ತು ರಾಧೇಯಃ ಪ್ರಭಯಾ ಸೋಽಮಿತಪ್ರಭಃ ।
ವ್ಯತ್ಯರಿಚ್ಯತ ರೂಪೇಣ ದಿವಾಕರ ಇವಾಪರಃ । ।೬೫।।

ಸಂಜಯ ನುಡಿದ— ಅಮಿತಪ್ರಭೆಯಿಂದ ಯುಕ್ತನಾದ ಕರ್ಣ ಅಭಿಷಿಕ್ತನಾದೊಡನೆ ಪ್ರಭೆಯಿಂದಲೂ ರೂಪದಿಂದಲೂ ಅವನು ಇನ್ನೊಬ್ಬ ಸೂರ್ಯನಂತೆಯೇ ಹೆಚ್ಚು ಪ್ರಕಾಶಿಸಿದ.

ಸೈನಾಪತ್ಯೇ ತು ರಾಧೇಯಮಭಿಷಿಚ್ಯ ಸುತಸ್ತವ ।
ಅಮನ್ಯತ ತದಾತ್ಮಾನಂ ಕೃತಾರ್ಥಂ ಕಾಲಚೋದಿತಃ ।।೬೬।।

ಸರ್ವನಾಶಕರವಾದ ಕಾಲದ ಪ್ರೇರಣೆಯಿಂದ ನಿನ್ನ ಮಗನು ಕರ್ಣನಿಗೆ ಸೇನಾಪತಿಯ ಪಟ್ಟ ಕಟ್ಟಿ ತಾನು ಕೃತಕೃತ್ಯನಾದನೆಂದುಕೊಂಡ!

ಈ ಕಾಲ ಬೇರಾರೂ ಅಲ್ಲ, ಶ್ರೀಕೃಷ್ಣನೆ. 'ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' ಎಂದು ಅರ್ಜುನನಿಗೆ ಮೊದಲೇ ಇದನ್ನು ಕೃಷ್ಣ ಬೋಧಿಸಿದ್ದ.

ಕರ್ಣೋಽಪಿ ರಾಜ್ಞಃ ಸಂಪ್ರಾಪ್ಯ ಸೈನಾಪತ್ಯಮರಿಂದಮಃ ।
ಯೋಗಮಾಜ್ಞಾಪಯಾಮಾಸ ಸೂರ್ಯಸ್ಯೋದಯನಾದಧಿ ।।೬೭।।

ಶತ್ರುದಮನಕಾರಿಯಾದ ಕರ್ಣ ದುರ್ಯೋಧನನಿಂದ ಸೇನಾಧಿಪತ್ಯವನ್ನು ಸ್ವೀಕರಿಸಿ ಸೂರ್ಯೋದಯವಾದೊಡನೆ ಯುದ್ಧವೆಂದು ಸೈನ್ಯಕ್ಕೆ ಆಜ್ಞೆ ಹೊರಡಿಸಿದ.

ತವ ಪುತ್ರೈರ್ವೃತಃ ಕರ್ಣಃ ಶುಶುಭೇ ತತ್ರ ಭಾರತ ।
ದೇವೈರಿವ ಯಥಾ ಸ್ಕಂದಃ ಸಂಗ್ರಾಮೇ ತಾರಕಾಮಯೇ ।।೬೮।।

ರಾಜನೆ, 'ತಾರಕಾಮಯ' ಅಂದರೆ 'ತಾರಕ' ಕಣ್ಣಾಲಿಗೆ 'ಆಮಯ' ನೋವನ್ನು ಉಂಟುಮಾಡುವಂಥ, ಕಣ್ಣುಕೋರೈಸುವಂತೆ ಆಯುಧಗಳನ್ನು ಝಳಪಿಸುವ

ದೇವಾಸುರ ಸಂಗ್ರಾಮದಲ್ಲಿ ಸ್ಕಂದನು ಶೋಭಿಸಿದಂತೆ, ಕೌರವಸೈನ್ಯದಲ್ಲಿ ಕರ್ಣನೂ ಪುತ್ರರೊಂದಿಗೆ ಶೋಭಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ದಶಮೋಽಧ್ಯಾಯಃ ॥೧೦॥

❖

ಹನ್ನೊಂದನೆಯ ಅಧ್ಯಾಯ

ಕುರುಸೈನ್ಯದ ಮಕರವ್ಯೂಹ. ಪಾಂಡವರ ಅರ್ಧಚಂದ್ರವ್ಯೂಹ.

ಧೃತರಾಷ್ಟ್ರಃ

ಸೈನಾಪತ್ಯಂ ತು ಸಂಪ್ರಾಪ್ಯ ಕರ್ಣೋ ವೈಕರ್ತನಸ್ತದಾ ।
ತಥೋಕ್ತಶ್ಚ ಸ್ವಯಂ ರಾಜ್ಞಾ ಸ್ನಿಗ್ಧಂ ಭ್ರಾತೃಸಮಂ ವಚಃ ॥೧॥
ಯೋಗಮಾಜ್ಞಾಪಯಾಮಾಸ ಆದಿತ್ಯಾಭ್ಯುದಯಂ ಪ್ರತಿ ॥೨॥

ಧೃತರಾಷ್ಟ್ರ ನುಡಿದ— ಸೇನಾಧಿಪತ್ಯವನ್ನು ಹೊಂದಿದ ಬಳಿಕ, ದುರ್ಯೋಧನ ಸ್ವತಃ ಸೋದರನಂತೆ ಸ್ನೇಹದಿಂದ ನುಡಿದ ಮಾತನ್ನು ಕೇಳಿ ಕರ್ಣ ಸೂರ್ಯೋದಯವಾಗುತ್ತಿದ್ದಂತೆ ಯುದ್ಧವೆಂದು ಸೈನ್ಯಕ್ಕೆ ಆಜ್ಞೆ ಹೊರಡಿಸಿದನೆಂದು ನೀನು ಹೇಳಿರುವೆ.

ಹಿತಶ್ಚ ಪ್ರಿಯಕಾಮಶ್ಚ ಮಮ ಪುತ್ರಸ್ಯ ನಿತ್ಯಶಃ ।
ಕಿಮಕಾರ್ಷೀನ್ಮಹಾಪ್ರಾಜ್ಞಸ್ತನ್ಮಮಾಚಕ್ಷ್ವ ಸಂಜಯ ॥೩॥

ನನ್ನ ಮಗನಿಗೆ ಸದಾ ಹಿತಕರನೂ ಪ್ರಿಯವನ್ನೇ ಬಯಸುವವನೂ ಆದ ಮಹಾಪ್ರಾಜ್ಞ ಕರ್ಣ ಮುಂದೆ ಏನು ಮಾಡಿದನೆಂಬುದನ್ನು ಹೇಳು, ಸಂಜಯ!

ಸಂಜಯಃ

ಕರ್ಣಸ್ಯ ಮತಮಾಜ್ಞಾಯ ಪುತ್ರಸ್ತೇ ಭರತರ್ಷಭ ।
ಯೋಗಮಾಜ್ಞಾಪಯಾಮಾಸ ನಾಂದೀತೂರ್ಯಪುರಸ್ಸರಮ್ ॥೪॥

ಸಂಜಯ ನುಡಿದ— ಕರ್ಣನ ಅಭಿಪ್ರಾಯವನ್ನು ತಿಳಿದು, ರಾಜನೆ, ನಿನ್ನ ಪುತ್ರ ಮಂಗಳವಾದ್ಯ ಘೋಷದೊಂದಿಗೆ ಯುದ್ಧಸನ್ನಾಹದ ಆಜ್ಞೆಯನ್ನು ಹೊರಡಿಸಿದ.

ಮಹತ್ಯಪರರಾತ್ರೇ ಚ ತವ ಸೈನ್ಯಸ್ಯ ಮಾರಿಷ ।
ಯೋಗೋ ಯೋಗ ಇತಿ ಹ್ಯಾಶು ಪ್ರಾದುರಾಸೀನ್ಮಹಾಸ್ವನಃ ॥೫॥

ಕಲ್ಪ್ಯತಾಂ ನಾಗಮುಖ್ಯಾನಾಂ ರಥಾನಾಂ ಚ ವರೂಥಿನಾಮ್ ।
ಸನ್ನಹ್ಯತಾಂ ಪದಾತೀನಾಂ ವಾಜಿನಾಂ ಚ ವಿಶಾಂಪತೇ ॥೬॥

ರಾಜನೆ, ಮಹಾ ಅಪರರಾತ್ರಿಯಲ್ಲಿಯೇ ನಿನ್ನ ಸೈನ್ಯದಲ್ಲಿ ಯುದ್ಧಸನ್ನಾಹಕ್ಕೆ ತೊಡಗಿರುವ ಗಜಸೈನ್ಯ, ರಥಸೈನ್ಯ, ಪದಾತಿಸೈನ್ಯ ಹಾಗೂ ಅಶ್ವಸೈನ್ಯಗಳಲ್ಲಿ 'ಬೇಗ ಬೇಗನೆ ಯುದ್ಧಸಿದ್ಧತೆ! ಯುದ್ಧಸಿದ್ಧತೆಯಾಗಲಿ!' ಎಂಬ ಮಹಾಶಬ್ದ ಕೇಳಿಬಂದಿತ್ತು.

ಕ್ರೋಶತಾಂ ಚಾಪಿ ಯೋಧಾನಾಂ ತ್ವರಿತಾನಾಂ ಪರಸ್ಪರಮ್ ।
ಬಭೂವ ತುಮುಲಃ ಶಬ್ದೋ ದಿವಸ್ಪೃಕ್ ಸುಮಹಾಂಸ್ತತಃ ॥೭॥

ಅವಸರವಸರವಾಗಿ ಯುದ್ಧಸನ್ನಾಹದಲ್ಲಿದ್ದ ಯೋಧರು ಪರಸ್ಪರ ಕೂಗಿಕೊಳ್ಳುವ ಮಹತ್ತಾದ ದೊಂಬಿಯ ಶಬ್ದ ಮುಗಿಲು ಮುಟ್ಟುತ್ತಿತ್ತು.

ತತಃ ಶ್ವೇತಪತಾಕೇನ ಬಲಾಕಾವರ್ಣವಾಜಿನಾ ।
ಹೇಮಪೃಷ್ಠೇನ ಧನುಷಾ ಹಸ್ತಿಕಕ್ಷ್ಯೇಣ ಕೇತುನಾ ॥೮॥

ತೂಣೀರಶತಪೂರ್ಣೇನ ಸಗದೇನ ವರೂಥಿನಾ ।
ಶತಘ್ನೀಕಿಂಕಿಣೀಶಕ್ತಿಶೂಲತೋಮರಧಾರಿಣಾ ॥೯॥

ಕಾರ್ಮುಕೈರುಪಪನ್ನೇನ ವಿಮಲಾದಿತ್ಯವರ್ಚಸಾ ।
ರಥೇನಾಭಿಪತಾಕೇನ ಸೂತಪುತ್ರೋ ವ್ಯದೃಶ್ಯತ ॥೧೦॥

ಬಳಿಕ ಸೂರ್ಯೋದಯವಾಗುತ್ತಿದ್ದಂತೆ, ನಿರ್ಮಲ ಸೂರ್ಯನಂತೆ ಬೆಳಗುವ ರಥದಲ್ಲಿ ನಿಂತು ಕರ್ಣ ಕಾಣಿಸಿಕೊಂಡ. ಆ ರಥಕ್ಕೆ ಬಿಳಿಯಾದ ಪತಾಕೆಗಳು, ಬೆಳ್ಳಕ್ಕಿಯಂಥ ಶುಭ್ರವರ್ಣದ ಕುದುರೆಗಳು, ಸುವರ್ಣ ಪೃಷ್ಠಉಳ್ಳ ಧನುಸ್ಸುಗಳು, ಕಾಗೆಯ ಪ್ರತಿಮೆಯಿಂದ ಯುಕ್ತವಾದ ಧ್ವಜದಂಡಗಳಿದ್ದವು. ನೂರಾರು ಬತ್ತಳಿಕೆಗಳು, ಗದೆಗಳು, ರಥಾವರಣ, ಶತಘ್ನಿಕಿಂಕಿಣಿ ಶಕ್ತಿ ಶೂಲ ತೋಮರ ಮುಂತಾದ ಆಯುಧಗಳು ತುಂಬಿದ್ದುವು. ಸೂರ್ಯನಂತೇ ಹೊಳೆಯುತ್ತದೆ ರಥ, ಆದರೆ ಪತಾಕೆ ಕರ್ಣನಿಗೆ ಅಭಿಮುಖವಾಗಿದೆ.

'ಹಸ್ತಿಕಕ್ಷ್ಯೇಣ ಕೇತುನಾ' ಅಂದರೆ ಆನೆಯ ನಡುಕಟ್ಟಿನ ಹಗ್ಗದ ಚಿಹ್ನೆಯಿದ್ದ ಬಾವುಟ ಕರ್ಣನ ರಥದ ಮೇಲೆ ಹಾರಾಡುತ್ತಿತ್ತೆಂದು ಹೇಳಿದಂತೆ ಮೇಲುನೋಟಕ್ಕೆ ಕಾಣುತ್ತದೆ. ವಸ್ತುತಃ 'ಕೇತು', 'ಧ್ವಜ' ಅಂದರೆ ಹಾರಾಡುವ ಬಾವುಟವಲ್ಲ. ಬಾವುಟವನ್ನು ಇಲ್ಲಿಯೆ 'ಶ್ವೇತಪತಾಕೇನ' ಎಂದು ಹೇಳಿಯಾಗಿದೆ. ಮತ್ತು ಬಾವುಟವನ್ನೇರಿಸುವ ಕಂಬವೇ ಬೇರೆ, ಧ್ವಜಚಿಹ್ನೆಯನ್ನು ಹೊರುವ ಕಂಬವೇ ಬೇರೆ ಇದೆ. ಧ್ವಜಚಿಹ್ನೆಯು ಬಾವುಟದಲ್ಲಿ ಚಿತ್ರಿತವಾಗಿರುವುದಿಲ್ಲ. ಆ ಆಕಾರದ ಪ್ರತಿಮೆಗಳೇ ಕಂಬದ ತುದಿಯಲ್ಲಿ ಪ್ರತಿಷ್ಠೆಗೊಂಡು ಸ್ಥಿರವಾಗಿ ಸೇರಿಕೊಂಡಿರುತ್ತವೆ.

ಪ್ರತಿಮೆಗಳಲ್ಲಿ ಆಯಾ ಹೆಸರಿನ ದೇವತೆಗಳು ಮತ್ತು ಅಸುರರು ಸನ್ನಿಹಿತರಾಗಿರುತ್ತಾರೆ. ರಥಿಕರ ಯುದ್ಧಕ್ಕೆ ಪೂರ್ವಭಾವಿಯಾಗಿ ಅವರ ಈ ಧ್ವಜದೇವತೆಗಳಿಗೆ ಮತ್ತು ಅಸುರರಿಗೇ ಪರಸ್ಪರ ಯುದ್ಧ ನಡೆಯುತ್ತದೆ. ಬಳಿಕ ವಾಹನಗಳ ಆನೆ ಕುದುರೆಗಳ ಪರಸ್ಪರ ಯುದ್ಧ. ಬಳಿಕ ಸಾರಥಿಗಳ ಪರಸ್ಪರ ದೃಷ್ಟಿಯುದ್ಧ. ಬಳಿಕ ರಥಿಕರು ದೃಷ್ಟಿಯುದ್ಧಕ್ಕೆ ತೊಡಗುತ್ತಾರೆ.

ಇದು ಮುಂದೆ ಕರ್ಣಾರ್ಜುನರ ಯುದ್ಧದಲ್ಲಿ 83ನೇ ಅಧ್ಯಾಯದಲ್ಲಿ 81-86ನೇ ಶ್ಲೋಕದವರೆಗೆ ವರ್ಣಿತವಾಗುತ್ತದೆ. ಅಲ್ಲಿ ಅರ್ಜುನನು ಕಪಿಧ್ವಜ, ಕರ್ಣ ಕಾಕಧ್ವಜ ಎಂದು ಸ್ಪಷ್ಟ ಹೇಳಿದೆ—

'ಉತ್ಪತ್ಯ ತು ಮಹಾವೇಗಃ ಕಾಕಮಭ್ಯಾಹನತ್ ಕಪಿಃ'

'ಅಭ್ಯದ್ರವತ್ ಸುಸಂಕ್ರುದ್ಧಾ ಹಸ್ತಕಾಕ್ಯಾऽಥ ತಂ ಕಪಿಮ್'

'ಕಪಿಯು ಕಾಗೆಯ ಮೇಲೆ ಮತ್ತು ಕಾಗೆ ಕಪಿಯ ಮೇಲೆ ಹಾರಿ ಆಕ್ರಮಣ ಮಾಡಿದುವು' ಎಂದು ಅಲ್ಲಿ ಹೇಳಿದೆ.

ಪ್ರಚಲಿತ ಪಾಠದಲ್ಲಿ 'ಕಕ್ಷ್ಯಾಮಭ್ಯಾಹನತ್' 'ಹಸ್ತಿಕಕ್ಷ್ಯಾಥ ತಂ ಕಪಿಂ' ಎಂದೇ ಕಾಣುತ್ತದೆ. 'ಕಕ್ಷ್ಯಾ' ಎಂದರೆ ಆನೆಗೆ ನಡುವಿನಲ್ಲಿ ಬಿಗಿಯುವ ತೊಗಲ ಹಗ್ಗ. ಅದು ಕರ್ಣನ ಧ್ವಜವೆಂದಾಗುತ್ತದೆ. ಲಕ್ಷಲಂಕಾರದ ಪಾಠದಲ್ಲಿ ಕಾಗೆ ಕರ್ಣನ ಧ್ವಜವಾದ್ದರಿಂದ ಪ್ರಚಲಿತ ಪಾಠದಲ್ಲಿರುವ 'ಕಕ್ಷ್ಯಾ' ಶಬ್ದವೂ ಕಾಗೆಯನ್ನು ಹೇಳುತ್ತದೆ. ಕಕ್ಷವೆಂದರೆ ಕಾಡು. ಕಾಡುಕಾಗೆಯ ಕಬ್ಬಿಣದ ಪ್ರತಿಮೆ 'ಕಕ್ಷ್ಯಾ'. ಅದು ಹಸ್ತಪ್ರಮಾಣದಾದ್ದರಿಂದ 'ಹಸ್ತಿಕಕ್ಷ್ಯಾ' ಅಥವಾ 'ಹಸ್ತ ಕಾಕ್ಯಾ' ಎನಿಸುತ್ತದೆ. ಮೇಲೆ ಹೇಳಿದ ಎರಡು ಕಡೆ ಹೊರತು ಬೇರೆ ಎಲ್ಲ ಕಡೆ 'ಹಸ್ತಿಕಕ್ಷ್ಯಾ' ಎಂದೇ ಪಾಠ. ಅದೂ ತಪ್ಪಲ್ಲ. ಅದಕ್ಕೆ ಒಂದು ಮೊಳ ದೀರ್ಘವಾದ ಕಬ್ಬಿಣದ ಕಾಗೆಯ ಪ್ರತಿಮೆಯೇ ಅರ್ಥ ಎಂದೂ ಲಕ್ಷಲಂಕಾರ ಹೇಳಿದೆ.

'ಕಕ್ಷ್ಯ' ಶಬ್ದಕ್ಕೆ ಪ್ರಸಿದ್ಧವಾದ 'ಆನೆಯ ತೊಗಲ ಹಗ್ಗ' ಎಂದು ಅರ್ಥವನ್ನು ಬಿಟ್ಟು 'ಕಾಗೆ' ಎಂದು ಅರ್ಥವೆನ್ನುವುದಕ್ಕೆ ಮೇಲೆ ಹೇಳಿದ ಎರಡು ಕಡೆ 'ಕಾಕ' ಶಬ್ದವಿರುವುದೇ ಸಾಕ್ಷಿ. ಈ ಅರ್ಥಕಲ್ಪನೆ ಕ್ಲಿಷ್ಟವೆನಿಸಿದರೂ ಅದು ವ್ಯಾಸರಿಗೆ ಇಷ್ಟವೇ. ಏಕೆಂದರೆ ಅವರು ಗುಹ್ಯಭಾಷಾಪ್ರಿಯರು ಎನ್ನುತ್ತಾರೆ, ವಾದಿರಾಜರು.

ಕರ್ಣನ ರಥದ ಪತಾಕೆ ಕರ್ಣನಿಗೇ ಅಭಿಮುಖವಾಗಿ ಹಾರಾಡುತ್ತಿದೆ. ಇದು ಅವನಿಗೆ ಅಪಜಯ ಸೂಚಕ. ಏಕೆಂದರೆ ಪತಾಕೆ ಬಟ್ಟೆಯ ತುಂಡು. ಆಗ ಗಾಳಿ ಅನುಕೂಲವಾಗಿರಲಿಲ್ಲ, ಪ್ರತಿಕೂಲವಾಗಿ, ಕರ್ಣನಿಗೆ ಅಭಿಮುಖವಾಗಿ ಅದು ಬೀಸುತ್ತಿದ್ದುದನ್ನು ಅಭಿಮುಖವಾದ ಪತಾಕೆ ತೋರಿಸುತ್ತಿತ್ತು. ಪ್ರತಿಕೂಲವಾಗಿ ಗಾಳಿ ಬೀಸುವುದು ಅನಿಷ್ಟಕರ.

ಧ್ಮಾಪಯಿತ್ವಾ ರಣೇ ಶಂಖಂ ಹೇಮಜಾಲವಿಭೂಷಿತಮ್ ।
ವಿಧುನ್ವಾನಂ ಮಹಚ್ಚಾಪಂ ಹೇಮಪೃಷ್ಠಂ ದೃಢಂ ನೃಪ ॥೧೧॥

ರಾಜನೆ, ಬಂಗಾರದ ಬಲೆಯಿಂದ ಅಲಂಕೃತವಾದ ಶಂಖವನ್ನು ಊದಿ ರಣರಂಗದಲ್ಲಿ ಬಂಗಾರದ ಪೃಷ್ಠಉಳ್ಳ ದೃಢವಾದ ಮಹತ್ತಾದ ಧನುಸ್ಸನ್ನು ತೂಗುತ್ತಾನೆ ಕರ್ಣ.

ದೃಷ್ಟ್ವಾ ಕರ್ಣಂ ಮಹೇಷ್ವಾಸಂ ರಥಸ್ಥಂ ರಥಿನಾಂ ವರಮ್ ।
ಭಾನುಮಂತಮಿವೋದ್ಯಂತಂ ತಮೋ ಘ್ನಂತಂ ದುರಾಸದಮ್ ॥೧೨॥

ರಥಿಕರಲ್ಲಿ ಉತ್ತಮನೂ ಮಹಾ ಬಿಲ್ಲಾರನೂ ಶತ್ರುಗಳಿಗೆ ಮಣಿಯದವನೂ ಆದ ಆ ಕರ್ಣ ಕತ್ತಲನ್ನು ನಾಶಪಡಿಸುತ್ತ ಉದಿಸುವ ಸೂರ್ಯನಂತೆ ಕಾಣುತ್ತಿದ್ದ.

ನ ಭೀಷ್ಮವ್ಯಸನಂ ಕೇಚಿನ್ನಾಪಿ ದ್ರೋಣಸ್ಯ ಮಾರಿಷ ।
ನಾನ್ಯೇಷಾಂ ಪುರುಷವ್ಯಾಘ್ರ ಮೇನಿರೇ ತತ್ರ ಕೌರವಾಃ ॥೧೩॥

ಅಂಥ ಕರ್ಣನನ್ನು ನೋಡಿದ ಬಳಿಕ, ರಾಜನೆ, ಕೌರವರು ಯಾರೂ ಭೀಷ್ಮನ ವಿಯೋಗವನ್ನಾಗಲಿ ದ್ರೋಣನ ವಿಯೋಗವನ್ನಾಗಲಿ ಬೇರೆ ಸೇನಾಪ್ರಮುಖರ ವಿಯೋಗವನ್ನಾಗಲಿ ಮನಸಿಗೆ ತಂದುಕೊಳ್ಳಲಿಲ್ಲ, ಮರೆತೇಬಿಟ್ಟರು

ತತಸ್ತು ತ್ವರಯನ್ ಯೋಧಾನ್ ಶಂಖಶಬ್ದೇನ ಮಾರಿಷ ।
ಕರ್ಣೋ ನಿಷ್ಕ್ರಮಯಾಮಾಸ ಕೌರವಾಣಾಂ ಮಹದ್ಬಲಮ್ ॥೧೪॥

ರಾಜನೆ, ಕರ್ಣನು ಶಂಖಘೋಷದಿಂದ ಯೋಧರನ್ನು ಆತುರಪಡಿಸುತ್ತ ಕೌರವರ ದೊಡ್ಡ ಸೈನ್ಯವನ್ನು ಹೊರಡಿಸಿದ.

ವ್ಯೂಹಂ ವ್ಯೂಹ್ಯ ಮಹೇಷ್ವಾಸೋ ಮಕರಂ ಶತ್ರುತಾಪನಃ ।
ಪ್ರತ್ಯುದ್ಯಯೌ ತದಾ ಕರ್ಣಃ ಪಾಂಡವಾನ್ ವಿಜಿಗೀಷಯಾ ॥೧೫॥

ಮಕರವ್ಯೂಹಮಾಸ್ಥಾಯ ದಂಸಿತೋ ರವಿನಂದನಃ ।
ಮಕರಸ್ಯಾಥ ತುಂಡೇ ತು ಕರ್ಣೋ ರಾಜನ್ ವ್ಯವಸ್ಥಿತಃ ॥೧೬॥

ಶತ್ರುಗಳಿಗೆ ತಾಪಉಂಟುಮಾಡುವ ಮಹಾಬಿಲ್ಲಾರ ಕರ್ಣನು ಪಾಂಡವರನ್ನು ಗೆಲ್ಲುವ ಇಚ್ಛೆಯಿಂದ ತನ್ನ ಸೈನ್ಯವನ್ನು 'ಮಕರ' ಮೊಸಳೆಯ ವ್ಯೂಹಾಕಾರವಾಗಿ ನಿಲ್ಲಿಸಿ ತಾನು ಅವರ ಮುಂದೆ 'ಮೊಸಳೆ'ಯ ಮುಖದಲ್ಲಿ ಯುದ್ಧಸನ್ನದ್ಧನಾಗಿ ನಿಂತ.

ನೇತ್ರಯೋಃ ಶಕುನಿಃ ಶೂರ ಉಲೂಕಶ್ಚ ಮಹಾರಥಃ ।
ದ್ರೋಣಪುತ್ರಸ್ತು ಶಿರಸಿ ಗ್ರೀವಾಯಾಂ ಸರ್ವಸೋದರಾಃ ॥೧೭॥
ಮಧ್ಯೇ ದುರ್ಯೋಧನೋ ರಾಜಾ ಬಲೇನ ಮಹತಾ ವೃತಃ ॥೧೮॥

ಮೊಸಳೆಯ ಕಣ್ಣುಗಳಲ್ಲಿ ಶೂರ ಮಹಾರಥನಾದ ಶಕುನಿ ಮತ್ತು ಉಲೂಕರು ನಿಂತರು. ಅಶ್ವತ್ಥಾಮನು ತಲೆಯಲ್ಲಿ ಮತ್ತು ಕುತ್ತಿಗೆಯಲ್ಲಿ ಎಲ್ಲ ಸೋದರರು, ಮಧ್ಯದಲ್ಲಿ ರಾಜಾ ದುರ್ಯೋಧನ ದೊಡ್ಡ ಸೈನ್ಯದೊಂದಿಗೆ ನಿಂತ.

ವಾಮಪಾದೇ ತು ರಾಜೇಂದ್ರ ಕೃತವರ್ಮಾ ವ್ಯವಸ್ಥಿತಃ ।
ನಾರಾಯಣಬಲೈರ್ಗುಪ್ತೋ ಗೋಪಾಲೈರ್ಯುದ್ಧದುರ್ಮದೈಃ ॥೧೯॥

ಮೊಸಳೆಯ ಎಡಗಾಲಿನಲ್ಲಿ ಕೃತವರ್ಮನು ನಾರಾಯಣ ಸೈನ್ಯ ಗೋಪಾಲ ಸೈನ್ಯಗಳೊಂದಿಗೆ ನಿಂತ.

ಪಾದೇ ತು ದಕ್ಷಿಣೇ ರಾಜನ್ ಗೌತಮಃ ಸತ್ಯವಿಕ್ರಮಃ ।
ತ್ರಿಗರ್ತೈಶ್ಚ ಮಹೇಷ್ವಾಸೈರ್ದಾಕ್ಷಿಣಾತ್ಯೈಶ್ಚ ಸಂವೃತಃ ॥೨೦॥

ಮೊಸಳೆಯ ಬಲಗಾಲಿನಲ್ಲಿ ಅಮೋಘ ಪರಾಕ್ರಮಿ ಕೃಪನು ಮಹಾ ಬಿಲ್ಲಾರರಾದ ತ್ರಿಗರ್ತರಿಂದಲೂ ದಾಕ್ಷಿಣಾತ್ಯರಿಂದಲೂ ಯುಕ್ತನಾಗಿ ನಿಂತ.

ಅನುಪಾದಸ್ತು ಯೋ ವಾಮಸ್ತತ್ರ ಶಲ್ಯೋ ವ್ಯವಸ್ಥಿತಃ ।
ಮಹತ್ಯಾ ಸೇನಯಾ ಸಾರ್ಧಂ ಮದ್ರದೇಶಸಮುತ್ಥಯಾ ॥೨೧॥

ಮೊಸಳೆಯ ಎಡಹಿಮ್ಮಡಿಯಲ್ಲಿ ಮದ್ರದೇಶದಿಂದ ಬಂದ ಮಹಾಸೈನ್ಯ ದೊಂದಿಗೆ ಶಲ್ಯ ನಿಂತ.

ದಕ್ಷಿಣೇ ತು ಮಹಾರಾಜ ಸುಷೇಣಃ ಸತ್ಯಸಂಗರಃ ।
ವೃತೋ ರಥಸಹಸ್ರೈಶ್ಚ ದಂತಿನಾಂ ಚ ಶತೈಸ್ತಥಾ ॥೨೨॥

ಅಮೋಘ ಯುದ್ಧಮಾಡುವ ಸುಷೇಣ ಸಾವಿರ ರಥಸೈನ್ಯ ಮತ್ತು ನೂರು ಗಜಸೈನ್ಯಗಳೊಂದಿಗೆ ಮೊಸಳೆಯ ಬಲಹಿಮ್ಮಡಿಯಲ್ಲಿ ನಿಂತ.

ಪುಚ್ಛೇ ಹ್ಯಾಸ್ತಾಂ ಮಹಾವೀರ್ಯೌ ಭ್ರಾತರೌ ಪಾರ್ಥಿವಾತ್ಮಜೌ ।
ವಿಚಿತ್ರಶ್ಚಿತ್ರಸೇನಶ್ಚ ಮಹತ್ಯಾ ಸೇನಯಾ ವೃತೌ ॥೨೩॥

ಮೊಸಳೆಯ ಬಾಲದಲ್ಲಿ ಮಹಾಪರಾಕ್ರಮಿ ಸೋದರರು ವಿಚಿತ್ರ ಚಿತ್ರಸೇನರು ದೊಡ್ಡಸೈನ್ಯದೊಂದಿಗೆ ನಿಂತರು.

ತತಃ ಪ್ರಯಾತೇ ರಾಜೇಂದ್ರ ಕರ್ಣೇ ರಥವರೋತ್ತಮೇ ।
ಧನಂಜಯಮಭಿಪ್ರೇಕ್ಷ್ಯ ಧರ್ಮರಾಜೋऽಬ್ರವೀದಿದಮ್ ॥೨೪॥

ರಥಿಕರಲ್ಲಿ ಉತ್ತಮನಾದ ಕರ್ಣ ಈರೀತಿ ರಣರಂಗಕ್ಕೆ ಪ್ರಯಾಣ ಮಾಡಿದಾಗ ಧರ್ಮರಾಜ ಅರ್ಜುನನನ್ನು ನೋಡಿ ಹೇಳಿದ.

ಪಶ್ಯ ಪಾರ್ಥ ಮಹಾಸೇನಾಂ ಧಾರ್ತರಾಷ್ಟ್ರೀಂ ತು ಸಂಯುಗೇ ।
ಕರ್ಣೇನ ನಿರ್ಮಿತಾಂ ವೀರ ಗುಪ್ತಾಂ ವೀರೈರ್ಮಹಾರಥೈಃ ॥೨೫॥

ಧರ್ಮರಾಜ ನುಡಿದ— ನೋಡು, ಅರ್ಜುನ, ಕರ್ಣನು ರಣರಂಗದಲ್ಲಿ ವೀರ ಮಹಾರಥರ ರಕ್ಷಣೆಯಲ್ಲಿ ವ್ಯೂಹ ರಚನೆ ಮಾಡಿ ನಿಲ್ಲಿಸಿದ ಕೌರವರ ಮಹಾಸೈನ್ಯವನ್ನು.

ಹತವೀರತಮಾ ಹ್ಯೇಷಾ ಧಾರ್ತರಾಷ್ಟ್ರೀ ಮಹಾಚಮೂಃ ।
ಫಲ್ಗುಶೇಷಾ ಮಹಾಬಾಹೋ ತೃಣೈಸ್ತುಲ್ಯತಮಾ ಮತಾ ॥೨೬॥

ಈ ಕೌರವಸೈನ್ಯ ಅತ್ಯಂತ ಅಧಿಕ ಸಂಖ್ಯೆಯಲ್ಲಿ ವೀರರನ್ನು ಕಳೆದುಕೊಂಡಿದೆ. ಉಳಿದಿರುವವರ ಸಂಖ್ಯೆ ಅತ್ಯಲ್ಪ ಅತ್ಯಂತ ತೃಣಪ್ರಾಯವೆನಿಸಿದೆ.

ಏಕೋ ಹ್ಯತ್ರ ಮಹೇಷ್ವಾಸಃ ಸೂತಪುತ್ರೋ ವ್ಯರೋಚತ ॥೨೭॥

ಒಬ್ಬನೇ ಒಬ್ಬ ಮಹಾ ಬಿಲ್ಲಾರ ಕರ್ಣ ಮೆರೆಯುತ್ತಿದ್ದಾನೆ.

ಸದೇವಾಸುರಗಂಧರ್ವೈಃ ಸಕಿನ್ನರಮಹೋರಗೈಃ ।
ಚರಾಚರೈಸ್ತ್ರಿಭಿರ್ಲೋಕೈರಜೇಯೋ ಯೋ ಮಹಾರಥಃ ॥೨೮॥

ಅವನು ದೇವ ಅಸುರ ಗಂಧರ್ವ ಕಿನ್ನರ ಮಹಾನಾಗರಿಂದ ಚರಾಚರ ಮೂರ್ಲೋಕಗಳಿಂದ ಅಜೇಯನಾದ ಮಹಾರಥನಾಗಿದ್ದಾನೆ.

ತಂ ಹತ್ವಾऽದ್ಯ ಮಹಾಬಾಹೋ ವಿಜಯಸ್ತವ ಫಲ್ಗುನ ।
ಉದ್ಧೃತಶ್ಚ ಭವೇಚ್ಛಲ್ಯೋ ಮಮ ದ್ವಾದಶವಾರ್ಷಿಕಃ ॥೨೯॥

ಅವನನ್ನು ನೀನು ಕೊಂದರೆ, ಮಹಾಬಾಹು ಅರ್ಜುನ, ನೀನು ಗೆದ್ದೆ ಮತ್ತು ಹನ್ನೆರಡು ವರ್ಷಗಳಿಂದಲೂ ನನ್ನೆದೆಯಲ್ಲಿ ನಾಟಿರುವ ಮುಳ್ಳನ್ನು ನೀನು ಹೊರತೆಗೆದಂತಾಗುತ್ತದೆ.

ಏತಜ್ಜ್ಞಾತ್ವಾ ಮಹಾಬಾಹೋ ವ್ಯೂಹಂ ವ್ಯೂಹ ಯಥೇಚ್ಛಸಿ ॥೩೦॥

ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಿನಗೆ ಇಚ್ಛೆ ತೋರಿದಂತೆ ವ್ಯೂಹರಚನೆ ಮಾಡು.

ಸಂಜಯಃ

ಶ್ರುತ್ವಾ ತದ್ವಚನಂ ಭ್ರಾತುಃ ಕೌಂತೇಯಃ ಶ್ವೇತವಾಹನಃ ।
ಅರ್ಧಚಂದ್ರೇಣ ವ್ಯೂಹೇನ ಪ್ರತ್ಯವ್ಯೂಹತ ತಾಂ ಚಮೂಮ್ ॥೩೧॥

ಸಂಜಯ ನುಡಿದ— ಸೋದರನು ಹೇಳಿದ ಮಾತನ್ನು ಕೇಳಿ ಅರ್ಜುನ ಮಕರವ್ಯೂಹಕ್ಕೆ ಪ್ರತಿಯಾಗಿ ಅರ್ಧಚಂದ್ರ ವ್ಯೂಹವನ್ನು ರಚಿಸಿದ.

ವಾಮಶೃಂಗೇ ತು ರಾಜೇಂದ್ರ ಭೀಮಸೇನೋ ವ್ಯವಸ್ಥಿತಃ ।
ದಕ್ಷಿಣೇ ತು ಮಹಾಬಾಹುರ್ಧೃಷ್ಟದ್ಯುಮ್ನೋ ವ್ಯವಸ್ಥಿತಃ ॥೩೨॥

ರಾಜನೆ, ಎಡತುದಿಯಲ್ಲಿ ಭೀಮಸೇನ ನಿಂತ. ಬಲತುದಿಯಲ್ಲಿ ಮಹಾಬಾಹು ಧೃಷ್ಟದ್ಯುಮ್ನ ನಿಂತ.

ಮಧ್ಯೇ ವ್ಯೂಹಸ್ಯ ರಾಜೇಂದ್ರ ಪಾಂಡವಶ್ಚ ಧನಂಜಯಃ ।
ನಕುಲಃ ಸಹದೇವಶ್ಚ ಧರ್ಮರಾಜಸ್ಯ ಪೃಷ್ಠತಃ ॥೩೩॥

ವ್ಯೂಹದ ಮಧ್ಯದಲ್ಲಿ ಧರ್ಮರಾಜ ಮತ್ತು ಅರ್ಜುನನು ನಿಂತರು. ಧರ್ಮರಾಜನ ಹಿಂಭಾಗದಲ್ಲಿ ನಕುಲ–ಸಹದೇವರು ನಿಂತರು.

ಚಕ್ರರಕ್ಷೌ ತು ಪಾಂಚಾಲ್ಯೌ ಯುಧಾಮನ್ಯೂತ್ತಮೌಜಸೌ ।
ಪಾರ್ಥಂ ನ ಜಹತುರ್ಯುದ್ಧೇ ಪಾಲ್ಯಮಾನೌ ಕಿರೀಟಿನಾ ॥೩೪॥

ಪಾಂಚಾಲದೇಶದ ಯುಧಾಮನ್ಯು ಮತ್ತು ಉತ್ತಮೌಜರು ಯುದ್ಧದಲ್ಲಿ ಅರ್ಜುನನ ರಕ್ಷಣೆಯಲ್ಲಿದ್ದು ಅರ್ಜುನನಿಗೆ ಚಕ್ರರಕ್ಷಕರಾದರು. ಅವನನ್ನು ಅವರು ಬಿಟ್ಟುಹೋಗುತ್ತಿರಲಿಲ್ಲ.

ಶೇಷಾ ನೃಪತಯೋ ವೀರಾಃ ಸ್ಥಿತಾ ವ್ಯೂಹಸ್ಯ ದಂಸಿತಾಃ ।
ಯಥಾಭಾಗಂ ಯಥೋತ್ಸಾಹಂ ಯಥಾಯತ್ನಂ ಚ ಭಾರತ ॥೩೫॥

ಬೇರೆ ರಾಜರು, ವೀರರು, ವ್ಯೂಹದಲ್ಲಿ ಆಯಾ ಭಾಗಗಳಲ್ಲಿ ಉತ್ಸಾಹ, ಯತ್ನ ಗಳಿಗನುಸಾರವಾಗಿ ಯುದ್ಧಸನ್ನದ್ಧರಾಗಿ ನಿಂತರು.

ಏವಮೇತನ್ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ ।
ತಾವಕಾಶ್ಚ ಮಹೇಷ್ವಾಸಾ ಯುದ್ಧಾಯೈವಾವತಸ್ಥಿರೇ ॥೩೬॥

ರಾಜನೆ, ಪಾಂಡವರೂ ನಿನ್ನವರೂ ಹೀಗೆ ಮಹಾವ್ಯೂಹಗಳನ್ನು ರಚಿಸಿ ಕೊಂಡು ಮಹಾಧನುರ್ಧಾರಿಗಳಾಗಿ ಯುದ್ಧಕ್ಕೇ ಸನ್ನದ್ಧರಾಗಿ ನಿಂತರು. ಶಾಂತಿಸಂಧಾನ ಅವರಿಗೆ ಬೇಕಾಗಿರಲಿಲ್ಲ.

ದೃಷ್ಟ್ವಾ ವ್ಯೂಹಂ ತವ ಚಮೂಂ ಸೂತಪುತ್ರೇಣ ಸಂಯುಗೇ ।
ನಿಹತಾನ್ ಪಾಂಡವಾನ್ ಮೇನೇ ಸಕೃಷ್ಣಾನ್ ವೈ ಜನಾಧಿಪಃ ॥೩೭॥

ಕರ್ಣನು ರಣರಂಗದಲ್ಲಿ ನಿನ್ನ ಸೈನ್ಯವನ್ನು ವ್ಯೂಹಮಾಡಿ ನಿಲ್ಲಿಸಿದ್ದನ್ನು ಕಂಡು

ದುರ್ಯೋಧನ 'ಪಾಂಡವರೂ ಕೃಷ್ಣನೂ ಇನ್ನು ಹತರಾದಂತೆಯೆ' ಎಂದು ಭಾವಿಸಿದ.

ತಥೈವ ಪಾಂಡವೀಂ ಸೇನಾಂ ದೃಷ್ಟ್ವಾ ವ್ಯೂಢಾಂ ಯುಧಿಷ್ಠಿರಃ ।
ಧಾರ್ತರಾಷ್ಟ್ರಾನ್ ಹತಾನ್ ಮೇನೇ ಸಕರ್ಣಾನ್
ಸಸುಯೋಧನಾನ್ ॥೩೮॥

ಹಾಗೆಯೇ ಪಾಂಡವ ಸೇನೆಯೂ ವ್ಯೂಹಾಕಾರವಾಗಿ ನಿಂತಿರುವುದನ್ನು ಕಂಡು ಯುಧಿಷ್ಠಿರನೂ ಕೂಡ 'ಇನ್ನು ಕೌರವರು ಕರ್ಣ ದುರ್ಯೋಧನಸಹಿತರಾಗಿ ಎಲ್ಲರೂ ಹತರಾದಂತೆಯೇ' ಎಂದು ಭಾವಿಸಿದ.

ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ ।
ಪಟಹಾಶ್ಚಾಭ್ಯಹನ್ಯಂತ ಝುರ್ಝುರ್ಯಶ್ಚ ಸಮಂತತಃ ॥೩೯॥

ಅನಂತರ ರಣರಂಗದಲ್ಲಿ ಎಲ್ಲೆಡೆ ಶಂಖ ನಗಾರಿ ಪಣವ ಡೋಲು ತಮಟೆ ಕಹಳೆ ಝುರ್ಝುರಿಗಳ ಧ್ವನಿ ಎಲ್ಲೆಡೆ ತುಂಬಿತು.

ಸೇನಯೋರುಭಯೋ ರಾಜನ್ ಡಿಂಡಿಮಾಶ್ಚ ಮಹಾಸ್ವನಾಃ ।
ಸಿಂಹನಾದಶ್ಚ ಸಂಜಜ್ಞೇ ಶೂರಾಣಾಂ ಜಯಗೃದ್ಧಿನಾಮ್ ॥೪೦॥

ರಾಜನೆ, ಎರಡೂ ಸೈನ್ಯಗಳಲ್ಲಿ ದೊಡ್ಡ ಶಬ್ದ ಮಾಡುವ ಡಿಂಡಿಮಗಳ ಜೊತೆಗೆ ಜಯೇಚ್ಛುಗಳಾದ ಶೂರ ಯೋಧರ ಸಿಂಹನಾದವೂ ಕೇಳಿಬಂದಿತು.

ಹಯಹೇಷಿತಶಬ್ದಾಶ್ಚ ವಾರಣಾನಾಂ ಚ ಬೃಂಹಿತಾಃ ।
ರಥನೇಮಿಸ್ವನಾಶ್ಚೋಗ್ರಾಃ ಸಂಬಭೂವುರ್ಜನಾಧಿಪ ॥೪೧॥

ರಾಜನೆ, ಕುದುರೆಗಳು ಕೆನೆಯುವ ಶಬ್ದ ಆನೆಗಳು ಘೀಳಿಡುವ ಶಬ್ದ ರಥಚಕ್ರಗಳ ಗಡುಸಾದ ಶಬ್ದಗಳೂ ಉಂಟಾದವು.

ನ ದ್ರೋಣವ್ಯಸನಂ ಕೇಚಿದ್ ವಿದುಸ್ತತ್ರ ಭಾರತ ।
ದೃಷ್ಟ್ವಾ ಕರ್ಣಂ ಮಹೇಷ್ವಾಸಂ ಮುಖೇ ವ್ಯೂಹಸ್ಯ ದಂಶಿತಮ್ ॥೪೨॥

ರಾಜನೆ, ಮಹಾಬಿಲ್ಲಿಗ ಕರ್ಣನು ಕವಚ ಧರಿಸಿ ವ್ಯೂಹದ ಮುಂಭಾಗದಲ್ಲಿ

ನಿಂತಿದ್ದನ್ನು ನೋಡಿದ ಬಳಿಕ ಯಾರೂ ದ್ರೋಣನ ಅಗಲಿಕೆಯ ಬೇಸರವನ್ನು ಮನಸಿಗೆ ತಂದುಕೊಳ್ಳಲಿಲ್ಲ.

ಉಭೇ ಸೇನೇ ಮಹಾರಾಜ ಪ್ರಹೃಷ್ಟನರಕುಂಜರೇ ।
ಯೋದ್ಧುಕಾಮೇ ಸ್ಥಿತೇ ಯತ್ತೇ ಹಂತುಮನ್ಯೋನ್ಯಮಂಜಸಾ ॥೪೩॥

ಮಹಾರಾಜ, ಎರಡೂ ಸೈನ್ಯಗಳು ಪ್ರಹೃಷ್ಟರಾದ ಪುರುಷಶ್ರೇಷ್ಠರಿಂದ ಯುಕ್ತವಾಗಿದ್ದು ಯುದ್ಧದ ಬಯಕೆಯಿಂದ ಪರಸ್ಪರ ಹೊಡೆದುಕೊಳ್ಳಲು ಸಿದ್ಧವಾಗಿ ನಿಂತುವು.

ವಿಜಯೇ ಜಾತಸಂರಂಭೇ ದೃಷ್ಟ್ವಾऽನ್ಯೋನ್ಯಮವಸ್ಥಿತೇ ।
ಅನೀಕಮಧ್ಯೇ ರಾಜೇಂದ್ರ ರೇಜತುಃ ಕರ್ಣಪಾಂಡವೌ ॥೪೪॥

ಎರಡೂ ಸೈನ್ಯಗಳು ಪರಸ್ಪರ ಗೆಲ್ಲುವ ಉದ್ದೇಶದಿಂದ ಕೋಪಗೊಂಡು ದಿಟ್ಟಿಸಿ ನೋಡುತ್ತ ನಿಂತುವು. ರಾಜನೆ, ಸೈನ್ಯದ ಮಧ್ಯದಲ್ಲಿ ಕರ್ಣಾರ್ಜುನರು ಶೋಭಿಸಿದರು.

ನೃತ್ಯಂತಾವಿವ ತೇ ಸೇನೇ ಪ್ರಜಗ್ಮತುರಭೀತವತ್ ।
ತಯೋಃ ಪಕ್ಷಪ್ರಪಕ್ಷೇಭ್ಯೋ ನಿರ್ಯಯುಶ್ಚ ಯುಯುತ್ಸವಃ ॥೪೫॥

ಆ ಎರಡೂ ಸೈನ್ಯಗಳು ನೃತ್ಯಮಾಡುವಂತೆ ಹೆಜ್ಜೆ ಇಡುತ್ತ ಪರಸ್ಪರ ಸೇರಿದುವು. ಆ ಪಕ್ಷಪ್ರಪಕ್ಷಗಳಿಂದ ಯೋಧರು ಯುದ್ಧದ ತವಕದಿಂದ ಹೊರಗೆ ಬರತೊಡಗಿದರು.

ತತಃ ಪ್ರವವೃತೇ ಯುದ್ಧಂ ನರವಾರಣವಾಜಿನಾಮ್ ।
ರಥಿನಾಂ ಚ ಮಹಾರಾಜ ತ್ವನ್ಯೋನ್ಯಂ ನಿಘ್ನತಾಂ ಭೃಶಮ್ ॥೪೬॥

ಒಡನೆ, ಮಹಾರಾಜ, ಎರಡೂ ಕಡೆಯ ಕಾಲಾಳು ಗಜಸೈನ್ಯ ಅಶ್ವಸೈನ್ಯ ರಥಸೈನ್ಯಗಳು ಪರಸ್ಪರ ಚೆನ್ನಾಗಿ ಹೊಡೆದುಕೊಳ್ಳುತ್ತಿದ್ದಂತೆ ಯುದ್ಧ ನಡೆಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಏಕಾದಶೋऽಧ್ಯಾಯಃ ॥೧೧॥

❖

ಮಹಾಭಾರತತಾತ್ಪರ್ಯನಿರ್ಣಯ

ತತ್ರಾಭವದ್ ಯುದ್ಧಮತೀವ ದಾರುಣಂ
ಪಾಂಡೋಃ ಸುತಾನಾಂ ಧೃತರಾಷ್ಟ್ರಜೈರ್ಗಜೇ ।
ತತ್ರೋದಯಾದ್ರಿಪ್ರತಿಮೇ ಪ್ರದೃಶ್ಯತೇ
ಭೀಮೋ ಯಥೋದ್ಯನ್ ಸವಿತಾತಿನಿರ್ಮಲಃ ॥೨॥

ಕರ್ಣನ ಸೇನಾಧಿಪತ್ಯದಲ್ಲಿ ಪಾಂಡವರಿಗೆ ಕೌರವರೊಡನೆ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ರಣರಂಗದಲ್ಲಿ ಉದಯಾಚಲದಂಥ ಆನೆಯ ಮೇಲೆ ಅತಿನಿರ್ಮಲನಾದ ಉದಿಸುವ ಸೂರ್ಯನಂತೆ ಕಾಣಿಸಿಕೊಂಡ, ಭೀಮ.

ತಂ ಕಾಲಯಂತಂ ನೃಪತೀನ್ ಕ್ಷೇಮಧೂರ್ತಿ
ರಭ್ಯಾಗಮತ್ ತಸ್ಯ ಗಜಂ ಜಘಾನ ಚ ।
ತಂ ವೀರ್ಯಮತ್ತಂ ಪ್ರತಿಲಭ್ಯ ಭೀಮೋ
ನಿನಾಯ ಮೃತ್ಯೋಃ ಸದನಾಯ ಶೀಘ್ರಮ್ ॥ ೩॥

ರಾಜರನ್ನೆಲ್ಲ ಪುಡಿಮಾಡುತ್ತಿದ್ದ ಭೀಮನನ್ನು ಕ್ಷೇಮಧೂರ್ತಿ ಇದಿರಿಸಿದ. ಭೀಮನ ಆನೆಯನ್ನು ಕ್ಷೇಮಧೂರ್ತಿ ಕೊಂದ. ಕ್ಷೇಮಧೂರ್ತಿಯ ಆನೆಯನ್ನು ಭೀಮ ಕೊಂದ. ಬಳಿಕ ಬಲದಿಂದ ದರ್ಪಿತನಾದ ಆ ಕ್ಷೇಮಧೂರ್ತಿಯನ್ನು ಆಕ್ರಮಿಸಿ ಭೀಮ ಬೇಗನೆ ಯಮಲೋಕಕ್ಕೆ ಅಟ್ಟಿದ.

ನಿಹತ್ಯ ತಂ ಮಾರುತಿರಭ್ಯಕೃಂತ-
ಚ್ಛಿರಾಂಸಿ ಯೂನಾಂ ಪರಪಕ್ಷಪಾತಿನಾಮ್
ವಿಕ್ಷೋಭಯಾಮಾಸ ಚ ಶತ್ರುಸೈನ್ಯಂ
ಸಿಂಹೋ ಯಥೈವ ಶ್ವಸೃಗಾಲಯೂಥಮ್ ॥ ೪ ॥

ಕ್ಷೇಮಧೂರ್ತಿಯನ್ನು ಕೊಂದ ಬಳಿಕ ಭೀಮ ಶತ್ರುಪಕ್ಷದಲ್ಲಿ ಹೋರಾಡುತ್ತಿದ್ದ ಯುವಕರ ಶಿರಗಳನ್ನು ತರಿದ. ಮತ್ತು ನಾಯಿನರಿಗಳ ಹಿಂಡನ್ನು ಸಿಂಹ ಹೇಗೋ ಹಾಗೆ ಶತ್ರುಸೈನ್ಯವನ್ನು ಕ್ಷೋಭೆಗೊಳಿಸಿದ.

ಹನ್ನೆರಡನೆಯ ಅಧ್ಯಾಯ

ಭೀಮನಿಂದ ಕ್ಷೇಮಧೂರ್ತಿಯ ವಧ

ಸಂಜಯಃ

ತೇ ಸೇನೇಽನ್ಯೋನ್ಯಮಾಸಾದ್ಯ ಪ್ರಹೃಷ್ಟಾಶ್ವನರದ್ವಿಪೇ ।
ಬೃಹತ್ಯೌ ಸಂಪ್ರಜಹ್ರಾತೇ ದೇವಾಸುರಚಮೂಸಮೇ ॥೧॥

ಹರ್ಷಗೊಂಡ ಅಶ್ವ–ನರ–ಗಜಗಳಿಂದ ತುಂಬಿದ ದೇವಾಸುರ ಸೈನ್ಯಗಳಿಗೆ ಸಮವಾದ ಆ ಎರಡು ಮಹಾಸೈನ್ಯಗಳು ಪರಸ್ಪರ ಸೇರಿ ಹೊಡೆದುಕೊಂಡುವು.

ತತೋ ವರರಥಾಶ್ವೇಭಾಃ ಪತ್ತಯಶ್ಚ ಮಹಾಹವೇ ।
ಸಂಪ್ರಹಾರಂ ಮಹಚ್ಚಕ್ರುರ್ದೇಹಪಾಪ್ಮವಿನಾಶನಮ್ ॥೨॥

ಆ ಮಹಾಯುದ್ಧದಲ್ಲಿ ಶ್ರೇಷ್ಠವಾದ ರಥ ಅಶ್ವ ಗಜ ಪದಾತಿಗಳು ಶರೀರನಾಶ ಪಾಪನಾಶಗಳನ್ನು ಮಾಡುವ ದೊಡ್ಡ ಹೋರಾಟವನ್ನು ನಡೆಸಿದರು.

'ಮಹಾ ಆಹವ' ಮಹಾಯುದ್ಧವು 'ಮಹಾ ಹವ' 'ದೊಡ್ಡ ಯಜ್ಞ' ರೂಪವಾಗಿರುವುದರಿಂದ ಯುದ್ಧದಲ್ಲಿ ಶರೀರನಾತವಾಯಿತೆಂದರೆ ಅದು ಪುಣ್ಯಕರವಾದ ಬಲಿದಾನ. ಶರೀರ ಉಳಿದು ಕೇವಲ ರಕ್ತಪಾತವಾದರೂ ಪಾಪವೇ ರಕ್ತರೂಪದಿಂದ ಹೊರಗೆ ಹರಿಯುತ್ತದೆ, ಅದೂ ಪುಣ್ಯಕರ. ಹೀಗಾಗಿ ಯುದ್ಧವು ಪುಣ್ಯಕರವಾಗಿದ್ದು ರಾಜ್ಯಭೋಗಕ್ಕಾಗಲಿ ಸ್ವರ್ಗಸುಖಕ್ಕಾಗಲಿ ಸಾಧನವಾಗುತ್ತದೆ. ಅದರಿಂದ ಭೀಕರವಾದ ಯುದ್ಧವು ವೀರಯೋಧರಿಗೆ ಬಹಳ ಹರ್ಷದಾಯಕವೇ ಹೊರತು ದುಃಖದಾಯಕವಾದ ಕ್ರೂರ ಹಿಂಸೆ ಎನ್ನುವ ಭಾವನೆ ವೀರಕ್ಷತ್ರಿಯರಿಗೆ ಇರುವುದಿಲ್ಲ. ಹೆಣಗಳ ರಾಶಿಯಿಂದ ರಣಭೂಮಿ ಭೀಕರ ಭೀಭತ್ಸವೆನಿಸುವುದಿಲ್ಲ.

ಪೂರ್ಣಚಂದ್ರಾರ್ಕಪದ್ಮಾನಾಂ ಕಾಂತಿತ್ವಿಡ್‌ಗಂಧತಃ ಸಮೈಃ ।
ಉತ್ತಮಾಂಗೈರ್ನರಸಿಂಹಾನಾಮ್ ಆವೃತಾ ಪತಿತೈರ್ಮಹೀ ॥೩॥

ಪೂರ್ಣಚಂದ್ರನಂಥ ಮಿದುವಾದ ಹೊಳಪು, ಸೂರ್ಯನಂಥ ಪ್ರಖರದೀಪ್ತಿ ಮತ್ತು ಕಮಲದ ಹೂಗಳಂಥ ಸುಗಂಧಯುಕ್ತವಾದ ವೀರಯೋಧರ ರುಂಡಗಳು ಉರುಳಿದುವು. ರಣಭೂಮಿ ಅವುಗಳಿಂದ ಆವೃತವಾಯಿತು.

ಅರ್ಧಚಂದ್ರೈಸ್ತಥಾ ಭಲ್ಲೈಃ ಕ್ಷುರಪ್ರೈರಸಿಪಟ್ಟಸೈಃ ।
ಪರಶ್ವಧೈಸ್ತ್ವಾಕೃಂತನ್ನುತ್ತಮಾಂಗಾನಿ ಯುಧ್ಯತಾಮ್ ॥೪॥

ಅರ್ಧಚಂದ್ರ ಭಲ್ಲೆ ಕ್ಷುರಪ್ರ ಖಡ್ಗ ಪಟ್ಟಿಶ ಮತ್ತು ಗಂಡುಗೊಡಲಿ ಮುಂತಾದ ಆಯುಧಗಳಿಂದ ಯೋಧರು ಯೋಧರ ಶಿರಗಳನ್ನು ತರಿದರು.

ವ್ಯಾಯತಾಯತಬಾಹೂನಾಂ ವ್ಯಾಯತಾಯತಬಾಹುಭಿಃ ॥೫॥
ಬಾಹವಃ ಪತಿತಾ ರೇಜುಃ ಸಾಂಗದಾ ರುಧಿರೋಕ್ಷಿತಾಃ ॥೬॥

ದಪ್ಪ ಹಾಗೂ ನಿಡಿದಾದ ತೋಳುಗಳುಳ್ಳ ಯೋಧರಿಂದ ಕಡಿದು ಬಿದ್ದ ದಪ್ಪನಾದ ನಿಡಿದಾದ ತೋಳುಗಳು ತೊಳ್ಬಲೆಗಳಿಂದ ಕೂಡಿದ್ದು ರಕ್ತದಿಂದ ತೋಯ್ದು ಶೋಭಿಸಿದುವು.

ತೈಃ ಸ್ಫುರದ್ಭಿರ್ಮಹೀ ಭಾತಿ ರಕ್ತಾಂಗುಲಿತಲೈಸ್ತಥಾ ।
ಗರುಡಪ್ರಹಾರತೋ ರುಗ್ಣೈಃ ಪಂಚಾಸ್ಯೈರಿವ ಪನ್ನಗೈಃ ॥೭॥

ಕೆಂಪಾದ ಐದು ಬೆರಳು ಹಾಗೂ ಅಂಗೈಗಳಿಂದ ಕೂಡಿದ ಆ ಬಾಹುಗಳು ರಣಭೂಮಿಯ ಮೇಲೆ ಹೊಳೆಯುತ್ತ ಗರುಡನ ಪ್ರಹಾರದಿಂದ ಬಿದ್ದ ಐದು ಹೆಡೆಗಳ ಹಾವುಗಳಂತೆ ಕಂಡುವು.

ದ್ವಿರದಸ್ಯಂದನಾಶ್ವೇಭ್ಯಃ ಪೇತುರ್ವೀರಾ ದ್ವಿಷದ್ಧತಾಃ ।
ವಿಮಾನೇಭ್ಯೋ ಯಥಾ ಪುಣ್ಯೇ ಕ್ಷೀಣೇ ಸ್ವರ್ಗಸದಸ್ತಥಾ ॥೮॥

ಪುಣ್ಯಕ್ಷಯವಾದಾಗ ಸ್ವರ್ಗವಾಸಿಗಳು ವಿಮಾನಗಳಿಂದ ಕೆಳಗೆ ಬೀಳುವಂತೆ ಶತ್ರುಗಳಿಂದ ಹತರಾದ ವೀರರು ಆನೆ ರಥ ಕುದುರೆಗಳಿಂದ ಕೆಳಗೆ ಬಿದ್ದರು.

ಗದಾಭಿರನ್ಯೇ ಗುರ್ವೀಭಿರ್ಯಷ್ಟಿಭಿರ್ಮುಸಲೈರಪಿ ॥೯॥
ಪೋಥಿತಾಃ ಶತಧಾ ಪೇತುರ್ವೀರಾ ವರಶಿತೈಃ ಶರೈಃ ।
ರಥಾ ರಥೈರ್ವಿನಿಹತಾಃ ಪಾತಿತಾಶ್ಚ ದ್ವಿಪೈರ್ದ್ವಿಪಾಃ ॥೧೦॥
ಸಾದಿಭಿಃ ಸಾದಿನಶ್ಚೈವ ತಸ್ಮಿನ್ ಪರಮಸಂಕುಲೇ ॥೧೧॥

ಕೆಲವರು ವೀರರು ಭಾರವಾದ ಗದೆ ಪರಿಘ ಮುಸಲಾದಿ ಆಯುಧಗಳಿಂದ

ನೂರಾಗಿ ಪುಡಿಯಾಗುತ್ತ ಬಿದ್ದರು. ಹರಿತವಾದ ಬಾಣಗಳಿಂದ ರಥಿಕರು ರಥಿಕರನ್ನು ಗಜಾರೋಹಿಗಳು ಗಜಾರೋಹಿಗಳನ್ನು ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ಕೆಡವಿದರು. ಹೀಗೆ ಯುದ್ಧವು ಮಹಾಭಯಂಕರವಾಯಿತು.

ರಥೈರ್ನರಾ ರಥಾ ನಾಗೈರಶ್ವಾರೋಹಾಶ್ಚ ಪತ್ತಿಭಿಃ ।
ಅಶ್ವಾರೋಹೈಃ ಪದಾತಾಶ್ಚ ನಿಹತಾ ಯುಧಿ ಶೇರತೇ ॥೧೨॥

ರಥಿಕರಿಂದ ಪದಾತಿಗಳು, ಗಜಾರೋಹಿಗಳಿಂದ ರಥಿಕರು, ಪದಾತಿಗಳಿಂದ ಅಶ್ವಾರೋಹಿಗಳು, ಅಶ್ವಾರೋಹಿಗಳಿಂದ ಪದಾತಿಗಳು ಹೀಗೂ ಹತರಾಗಿ ರಣರಂಗದಲ್ಲಿ ಬಿದ್ದರು.

ರಥಾಶ್ವಪತ್ತಯೋ ನಾಗೈರಶ್ವೈರ್ನಾಗೈಶ್ಚ ಪತ್ತಯಃ ।
ರಥಪತ್ತಿದ್ವಿಪಾಶ್ಚಾಶ್ವೈರ್ನರೈಶ್ಚಾಶ್ವರಥದ್ವಿಪಾಃ ॥೧೩॥

ಗಜಾರೋಹಿಗಳಿಂದ ರಥಿಕರು ಅಶ್ವಾರೋಹಿಗಳು ಪದಾತಿಗಳು, ಅಶ್ವಾರೋಹಿ ಗಜಾರೋಹಿಗಳಿಂದ ಪದಾತಿಗಳು, ಅಶ್ವಾರೋಹಿಗಳಿಂದ ರಥಿಕರು ಪದಾತಿಗಳು ಗಜಾರೋಹಿಗಳು, ಪದಾತಿಗಳಿಂದ ಅಶ್ವಾರೋಹಿ ರಥಾರೋಹಿ ಗಜಾರೋಹಿಗಳು ಹೀಗೂ ಹತರಾಗಿ ವೀರರು ಬಿದ್ದರು.

ರಥಾಶ್ವೇಭನರಾಣಾಂ ತು ರಥಾಶ್ವೇಭನರೈಃ ಕೃತಮ್ ।
ಪಾಣಿಪಾದೈಶ್ಚ ಶಸ್ತ್ರೈಶ್ಚ ರಥೈಶ್ಚ ಕದನಂ ಮಹತ್ ॥೧೪॥

ರಥ ಅಶ್ವ ಗಜ ಪದಾತಿಗಳೊಡನೆ ರಥ ಅಶ್ವ ಗಜ ಪದಾತಿಗಳು ಯುದ್ಧ ಮಾಡಿದರು. ಕೈ–ಕಾಲುಗಳಿಂದಲೂ ಶಸ್ತ್ರಗಳಿಂದಲೂ ರಥಗಳಿಂದಲೂ ಯುದ್ಧ ಮಾಡಿದರು.

ತಥಾ ತಸ್ಮಿನ್ ಬಲೇ ಶೂರೈರ್ವಧ್ಯಮಾನೇ ಹತೇऽಪಿ ಚ ।
ಅಸ್ಮಾನಭ್ಯಾಯಯುಃ ಪಾರ್ಥಾ ವೃಕೋದರಪುರೋಗಮಾಃ ॥೧೫॥

ಹೀಗೆ ಸೈನ್ಯವು ಪರಸ್ಪರ ಯೋಧರಿಂದ ಹೊಡೆಸಿಕೊಂಡು ಹತವಾಗುತ್ತಿರುವಾಗ ಭೀಮಸೇನನನ್ನು ಮುಂದೆ ಮಾಡಿಕೊಂಡು ಪಾಂಡವರು ನಮ್ಮ ಮೇಲೆ ಏರಿಬಂದರು.

ಧೃಷ್ಟದ್ಯುಮ್ನಃ ಶಿಖಂಡೀ ಚ ದ್ರೌಪದೇಯಾಃ ಪ್ರಭದ್ರಕಾಃ ।
ಸಾತ್ಯಕಿಶ್ಚೇಕಿತಾನಶ್ಚ ದ್ರಮಿಳೈಃ ಸೈನಿಕೈಃ ಸಹ ॥೧೬॥

ಭೃತಾ ವ್ಯೂಹೇನ ಮಹತಾ ಪಾಂಡ್ಯಾಶ್ಚೋಲಾಃ ಸಕೇರಲಾಃ ।
ವ್ಯೂಢೋರಸ್ಕಾ ದೀರ್ಘಭುಜಾಃ ಪ್ರಾಂಶವಃ ಪೃಥುಲೋಚನಾಃ ॥೧೭॥

ಧೃಷ್ಟದ್ಯುಮ್ನ ಶಿಖಂಡಿ ದ್ರೌಪದೀಪುತ್ರರು ಪ್ರಭದ್ರಕರು ಸಾತ್ಯಕಿ ಚೇಕಿತಾನ ಇವರೆಲ್ಲರೂ ದ್ರಾವಿಡಸೈನಿಕರೊಂದಿಗೆ ಬಂದರು. ಪಾಂಡ್ಯರು ಚೋಳರು ಕೇರಳರು ಕೂಡ ಬಂದರು. ದೊಡ್ಡ ವ್ಯೂಹದಿಂದ ರಕ್ಷಿತರಾಗಿದ್ದರು. ಅಗಲವಾದ ಎದೆ ನಿಡಿದಾದ ತೋಳುಗಳುಳ್ಳವರು ಎತ್ತರವಾಗಿರುವವರು ವಿಶಾಲನೇತ್ರರು.

ಆಪೀಡಿನೋ ರಕ್ತದಂತಾ ಮತ್ತಮಾತಂಗವಿಕ್ರಮಾಃ ।
ನಾನಾವಿರಾಗವಸನಾ ಗಂಧಚೂರ್ಣಾವಚರ್ಚಿತಾಃ ॥೧೮॥

ಆಭರಣಗಳಿಂದ ಅಲಂಕೃತರು ಕೆಂಪುಹಲ್ಲಿನವರು ಮದಿಸಿದ ಆನೆಯಂತೆ ಪರಾಕ್ರಮಿಗಳು. ನಾನಾ ವರ್ಣದ ವಸ್ತ್ರ ಉಟ್ಟುಕೊಂಡಿದ್ದರು. ಸುಗಂಧದ್ರವ್ಯ ಚೂರ್ಣ ಲೇಪಿಸಿಕೊಂಡವರು.

ಬದ್ಧಾಸಯಃ ಪಾಶಹಸ್ತಾಃ ವಾರಣಪ್ರತಿವಾರಣಾಃ ।
ಸಮಾನಮೃತ್ಯವೋ ರಾಜನ್ ಪ್ರಸಕ್ತಾಶ್ಚ ಪರಸ್ಪರಮ್ ॥೧೯॥

ಖಡ್ಗವನ್ನು ಸೊಂಟಕ್ಕೆ ಕಟ್ಟಿಕೊಂಡವರು ಕೈಯಲ್ಲಿ ಪಾಶವನ್ನು ಹಿಡಿದವರು ಆನೆಗಳನ್ನು ಕೂಡ ತಡೆಯಬಲ್ಲವರು. ಪರಸ್ಪರ ಹೋರಾಡಿ ಏಕಕಾಲದಲ್ಲಿ ಅಸು ನೀಗಬಲ್ಲವರು.

ಕಲಾಪಿನಶ್ಚಾಪಹಸ್ತಾ ದೀರ್ಘಕೇಶಾಃ ಪ್ರಿಯಂವದಾಃ ।
ಪತ್ತಯಃ ಸಾಯಕೈರ್ವಿದ್ಧಾ ಘೋರರೂಪಾ ಭಯಾವಹಾಃ ॥೨೦॥

ಶಿರೋಭೂಷಣ ಧರಿಸಿದವರು ಧನುಸ್ಸನ್ನು ಹಿಡಿದಿರುವವರು ನೀಳವಾದ ತಲೆಗೂದಲುಳ್ಳವರು ಪ್ರಿಯಭಾಷಿಗಳು, ಬಾಣಗಳಿಂದ ತಾಡಿತರಾಗಿ ಘೋರ ರೂಪಗಳಿಂದ ಭಯ ಉಂಟುಮಾಡುವವರು. ಇಂಥ ಪದಾತಿಗಳು ಪಾಂಡವರ ದಳದಲ್ಲಿದ್ದರು.

ಅಥಾಪರೇ ಪುನಃ ಶೂರಾಶ್ಚೇದಿಪಾಂಚಾಲಕೇಕಯಾಃ ।
ಕಾರೂಶಾಃ ಕೋಸಲಾ ವಂಗಾ ಮಾಗಧಾಶ್ಚಾಪಿ ದುದ್ರುವುಃ ॥೨೧॥

ಇವರು ಮಾತ್ರವಲ್ಲದೆ ಮತ್ತೆ ಬೇರೆ ವೀರರು ಚೇದಿ ಪಾಂಚಾಲ ಕೇಕಯ ಕರೂಶ ಕೋಸಲ ವಂಗ ಮಗಧ ದೇಶಗಳವರು ಕೂಡ ನಮ್ಮ ಸೈನ್ಯದ ಮೇಲೆ ಏರಿಬಂದರು.

ತೇಷಾಂ ರಥಾಶ್ಚ ನಾಗಾಶ್ಚ ಪ್ರವರಾಶ್ಚಾಪಿ ಪತ್ತಯಃ ।
ನಾನಾವಾದ್ಯಧರೈರ್ಹೃಷ್ಟಾ ನೃತ್ಯಂತಿ ಚ ಹಸಂತಿ ಚ ॥೨೨॥

ಅವರ ಶ್ರೇಷ್ಠ ರಥಿಕರು ಗಜಾರೋಹಿಗಳು ಪದಾತಿಗಳು ಕೂಡ ಬಂದರು. ನಾನಾ ವಾದ್ಯಧಾರಿಗಳೊಂದಿಗೆ ಹರ್ಷದಿಂದ ಕುಣಿಯುತ್ತ ನಗುತ್ತ ಬಂದರು.

ತಸ್ಯ ಸೈನ್ಯಸ್ಯ ಮಹತೋ ಮಹಾಮಾತ್ರಶತೈರ್ವೃತಃ ।
ಮಧ್ಯೇ ವೃಕೋದರೋಽಭ್ಯಾಯಾನ್ನಾಗಪ್ರವರ ಧೂರ್ಗತಃ ॥೨೩॥

ಆ ಮಹಾಸೈನ್ಯದ ಮಧ್ಯದಲ್ಲಿ ನೂರಾರು ಮಾವಟಿಗರಿಂದ ಪರಿವೃತನಾಗಿ ದೊಡ್ಡ ಆನೆಯ ಹೆಗಲ ಮೇಲೆ ಕುಳಿತು ಭೀಮಸೇನನು ಬಂದ.

ಸ ನಾಗಪ್ರವರೋ ಹ್ಯುಗ್ರೋ ವಿಧಿವತ್ ಕಲ್ಪಿತೋ ಬಭೌ ।
ಉದಯಾಗ್ರಾದ್ರಿಭವನಂ ಯಥಾऽಭ್ಯುದಿತಭಾಸ್ಕರಮ್ ॥೨೪॥

ಶತ್ರುಗಳಿಗೆ ಉಗ್ರವಾದ ಶ್ರೇಷ್ಠವಾದ ಆ ಆನೆ ವಿಧ್ಯುಕ್ತವಾಗಿ ಯುದ್ಧಕ್ಕೆ ಅಣಿಯಾಗಿ ಶೋಭಿಸುತ್ತಿತ್ತು. ಭೀಮಸೇನ ಅದರ ಮೇಲೆ ಕುಳಿತಿದ್ದರಿಂದ ಉದಿಸುವ ಸೂರ್ಯನಿಂದ ಅಲಂಕೃತವಾದ ಶ್ರೇಷ್ಠವಾದ ಉದಯಾಚಲವೆಂಬ ಉಚ್ಚಭವನದಂತೆ ಶೋಭಿಸಿತು.

ತಸ್ಯಾಯಸಂ ವರ್ಮವರಂ ವರರತ್ನವಿಭೂಷಿತಮ್ ।
ತಾರೋದ್ಭಾಸಸ್ಯ ನಭಸಃ ಶಾರದಸ್ಯ ಸಮಂ ತ್ವಿಷಾ ॥೨೫॥

ಆ ಆನೆಯ ಲೋಹಮಯವಾದ ಕವಚವು ಶ್ರೇಷ್ಠ ರತ್ನಗಳಿಂದ ಅಲಂಕೃತವಾಗಿದ್ದು ಅದು ಶರತ್ಕಾಲದ ರಾತ್ರಿಯ ಆಕಾಶವು ನಕ್ಷತ್ರಗಳಿಂದ ಶೋಭಿಸುವಂತೆ ಶೋಭಿಸಿತ್ತು.

ಸ ತೋಮರಪ್ರಾಸಕರಃ ಚಾರುಮೌಳಿಃ ಸ್ವಲಂಕೃತಃ ।
ಶರನ್ಮಧ್ಯಂದಿನಾರ್ಕಾಭಸ್ತೇಜಸಾ ಪ್ರಾದಹದ್ ರಿಪೂನ್ ॥೨೬॥

ಭೀಮಸೇನ ಸುಂದರವಾದ ಕಿರೀಟ ಧರಿಸಿ ಆಭರಣಗಳಿಂದ ಅಲಂಕೃತನಾಗಿ ಕೈಯಲ್ಲಿ ಈಟಿ ಮತ್ತು ಕೊಂತಗಳನ್ನು ಹಿಡಿದು ಶರತ್ಕಾಲದ ಮಧ್ಯಾಹ್ನ ಸೂರ್ಯನಂತೆ ಬೆಳಗಿ ಶತ್ರುಗಳನ್ನು ದಹಿಸತೊಡಗಿದ.

ತಂ ದೃಷ್ಟ್ವಾ ದ್ವಿರದಂ ದೂರಾತ್ ಕ್ಷೇಮಧೂರ್ತಿಃ ಸ್ಥಿತೋ ದ್ವಿಪೇ ।
ಆಹ್ವಯಾನೋಽಭಿದುದ್ರಾವ ಪ್ರಹಸನ್ ಪೃತನಾಮುಖೇ ॥೨೭॥

ಆ ಆನೆಯನ್ನು ಕ್ಷೇಮಧೂರ್ತಿ ದೂರದಿಂದ ಕಂಡ. ಅವನೂ ಆನೆಯ ಮೇಲೇರಿ ಕುಳಿತಿದ್ದ. ಅವನು ಸೈನ್ಯದ ಮುಂಭಾಗಕ್ಕೆ ಧಾವಿಸಿ ಬಂದು ಅಟ್ಟಹಾಸದಿಂದ ಭೀಮನನ್ನು ಆಹ್ವಾನಿಸಿದ.

ತಯೋಃ ಸಮಭವದ್ ಯುದ್ಧಂ ದ್ವಿಪಯೋರುಗ್ರರೂಪಯೋಃ ।
ಯದೃಚ್ಛಯಾ ದ್ರುಮವತೋರ್ಮಹಾಪರ್ವತಯೋರಿವ ॥೨೮॥

ಅವರಿಬ್ಬರ ಆ ಉಗ್ರ ಆನೆಗಳಿಗೆ ಹೋರಾಟ ನಡೆಯಿತು, ವೃಕ್ಷಯುಕ್ತವಾದ ಎರಡು ಬೆಟ್ಟಗಳಿಗೇ ದೈವಾತ್ ಹೋರಾಟ ನಡೆದಂತೇ ಅದು ಅದ್ಭುತವಾಗಿತ್ತು.

ಸಂಸಕ್ತನಾಗೌ ತೌ ವೀರೌ ತೋಮರೈರಿತರೇತರಮ್ ।
ಬಲವತ್ ಸೂರ್ಯರಶ್ಮ್ಯಭೈರ್ಭಿತ್ತ್ವಾ ಭಿತ್ತ್ವಾ ವಿನೇದತುಃ ॥೨೯॥

ಅವರ ಆನೆಗಳು ಪರಸ್ಪರ ಹೋರಾಡುತ್ತಿದ್ದಂತೆಯೇ ಆ ವೀರರೂ ಕೂಡ ಪರಸ್ಪರವಾಗಿ ಬೆಳಗುವ ಈಟಿಗಳಿಂದ ಬಲವಾಗಿ ತಿವಿದು ತಿವಿದು ಗರ್ಜನೆ ಮಾಡಿದರು.

ವ್ಯತಿಸೃತ್ಯ ಚ ನಾಗಾಭ್ಯಾಂ ಮಂಡಲಾನಿ ವಿಚೇರತುಃ ।
ಪ್ರಗೃಹ್ಯ ಚೋಭೌ ಧನುಷೀ ಜಘ್ನತುರ್ವೈ ಪರಸ್ಪರಮ್ ॥೩೦॥

ಬಳಿಕ ಇಬ್ಬರೂ ಆನೆಗಳನ್ನು ಹಿಂದೆ ಸರಿಯುವಂತೆ ಮಾಡಿ ಮಂಡಲಾಕಾರವಾಗಿ ತಿರುಗಿದರು. ಇಬ್ಬರೂ ಬಿಲ್ಲುಗಳನ್ನೆತ್ತಿಕೊಂಡು ಪರಸ್ಪರ ಪ್ರಹಾರ ಮಾಡಿದರು.

ಕ್ಷ್ವೇಲಿತಾಸ್ಫೋಟಿತರವೈಃ ಬಾಣಶಬ್ದೈಶ್ಚ ಸರ್ವಶಃ ।
ತೌ ಜನಾನ್ ಹರ್ಷಯಂತೌ ಚ ಸಿಂಹನಾದಂ ಪ್ರಚಕ್ರತುಃ ॥೩೧॥

ಗರ್ಜನೆ, ಭುಜ ತಟ್ಟಿಕೊಳ್ಳುವುದು, ಬಾಣಪ್ರಯೋಗ ಇವುಗಳ ಧ್ವನಿಯಿಂದ ಸಮಸ್ತ ಯೋಧರಿಗೂ ಹರ್ಷ–ಉತ್ಸಾಹಗಳನ್ನುಂಟು ಮಾಡುತ್ತ ಸಿಂಹನಾದ ಗೈದರು.

ಸಮುದ್ಯತಕರಾಭ್ಯಾಂ ತೌ ದ್ವಿಪಾಭ್ಯಾಂ ಕೃತಿನಾವುಭೌ ।
ವಾತೋದ್ಧೂತಪತಾಕಾಭ್ಯಾಂ ಯುಯುಧಾತೇ ಮಹಾಬಲೌ ॥೩೨॥

ಗಾಳಿಯಿಂದ ಪರಪರನೆ ಶಬ್ದಮಾಡಿ ಹಾರಾಡುತ್ತಿದ್ದ ಪತಾಕೆಗಳಿಂದ ಕೂಡಿದ ಆ ಆನೆಗಳು ಸೊಂಡಿಲುಗಳನ್ನು ಮೇಲೆತ್ತಿಕೊಂಡಿದ್ದುವು. ಆ ಆನೆಗಳ ಮೂಲಕ ಮಹಾಬಲಿಷ್ಠರಾದ ಇಬ್ಬರೂ ವೀರರು ಯುದ್ಧ ಮಾಡಿದರು.

ತಾವನ್ಯೋನ್ಯಸ್ಯ ಧನುಷೀ ಪುನಶ್ಚಿತ್ವಾ ವಿನೇದತುಃ ।
ಶಕ್ತಿತೋಮರವರ್ಷೇಣ ಪ್ರಾವೃಣ್ಮೇಘಾವಿವಾಂಬುಧಿಃ ॥೩೩॥

ಮಳೆಗಾಲದ ಮೋಡಗಳು ನೀರಿನ ಮಳೆಗರೆಯುವಂತೆ ಇಬ್ಬರು ವೀರರು ಪರಸ್ಪರ ಧನುಸ್ಸುಗಳನ್ನು ಪುನಃಪುನಃ ಕಡಿದು ಶಕ್ತ್ಯಾಯುಧ ಈಟಿಗಳ ಮಳೆಗರೆದು ಗುಡುಗಿದರು.

ಕ್ಷೇಮಧೂರ್ತಿಸ್ತದಾ ಭೀಮಂ ತೋಮರೇಣ ಸ್ತನಾಂತರೇ ।
ನಿರ್ಬಿಭೇದಾಶು ವೇಗೇನ ಷಡ್ಭಿಶ್ಚಾಪ್ಯಪರೈರ್ನದನ್ ॥೩೪॥

ಕ್ಷೇಮಧೂರ್ತಿ ಆಗ ಭೀಮನ ಎದೆಗೆ ಈಟಿಯಿಂದ ಹೊಡೆದು ಬೇರೆ ಆರು ಈಟಿಗಳಿಂದಲೂ ವೇಗವಾಗಿ ಹೊಡೆಯುತ್ತ ಗರ್ಜಿಸಿದ.

ಸ ಭೀಮಸೇನಃ ಶುಶುಭೇ ತೋಮರೈರಂಗಸಂಶ್ರಿತೈಃ ।
ಕ್ರೋಧದೀಪ್ತವಪುರ್ಮೇಘೈಃ ಸಪ್ತಸಪ್ತಿರಿವಾಂಶುಮಾನ್ ॥೩೫॥

ಭೀಮಸೇನನ ಮೈಗೆ ಆ ಎಲ್ಲ ಈಟಿಗಳು ಚುಚ್ಚಿದರೂ ಕ್ರೋಧದಿಂದ ಉರಿವ ಅವನು ಮೇಘಾವೃತನಾದ ಏಳು ಅಶ್ವಗಳಿಂದ ಹೊಳೆವ ಸೂರ್ಯನಂತೆ ಶೋಭಿಸಿದ.

ತತೋ ಭಾಸ್ಕರರಶ್ಮ್ಯಭಮಂಜೋಗತಿಮಯಸ್ಮಯಮ್ ।
ಸಸರ್ಜ ತೋಮರಂ ಭೀಮಃ ಪ್ರತ್ಯಮಿತ್ರಾಯ ಯತ್ನವಾನ್ ॥೩೬॥

ಆಗ ಭೀಮಸೇನನು ಲೋಹಮಯವಾದ ಸೂರ್ಯಕಿರಣದಂತೆ ಹೊಳೆವ ವೇಗವಾದ ಗತಿಯುಳ್ಳ ಈಟಿಯನ್ನು ಶತ್ರುವಿಗೆ ಬಲವಾಗಿ ಎಸೆದ.

ತತಃ ಕುಲೂತಾಧಿಪತಿಶ್ಚಾಪಮಾಯಮ್ಯ ಸಾಯಕೈಃ ।
ದಶಭಿಸ್ತೋಮರಂ ಭಿತ್ತ್ವಾ ಷಷ್ಟ್ಯಾ ವಿವ್ಯಾಧ ಪಾಂಡವಮ್ ॥೩೭॥

ಅದಕ್ಕೆ ಕುಲೂತಾಧಿಪತಿಯಾದ ಕ್ಷೇಮಧೂರ್ತಿ ಬಿಲ್ಲಿನ ಹಗ್ಗವನ್ನೆಳೆದು ಹತ್ತು ಬಾಣಗಳಿಂದ ಈಟಿಯನ್ನು ತುಂಡರಿಸಿ ಅರವತ್ತು ಬಾಣಗಳಿಂದ ಭೀಮನನ್ನು ಪ್ರಹರಿಸಿದ.

ಅಥ ಕಾರ್ಮುಕಮಾದಾಯ ಮಹಾಜಲದನಿಃಸ್ವನಮ್ ।
ರಿಪೋರಭ್ಯರ್ದಯನ್ನಾಗಮುನ್ನದನ್ ಪಾಂಡವಃ ಶರೈಃ ॥೩೮॥

ಭೀಮ ದೊಡ್ಡ ಗುಡುಗಿನ ಧ್ವನಿ ಮಾಡುವ ಬಿಲ್ಲನ್ನೆತ್ತಿಕೊಂಡು ಗರ್ಜಿಸುತ್ತ ಶತ್ರುವಿನ ಆನೆಯನ್ನು ಬಾಣಗಳಿಂದ ಪ್ರಹರಿಸಿದ.

ಸ ಶರಾಭ್ಯರ್ದಿತೋ ನಾಗೋ ಭೀಮಸೇನೇನ ಸಂಯುಗೇ ।
ನಿಗೃಹ್ಯಮಾಣೋ ನಾತಿಷ್ಠದ್ ವಾತಧ್ವಸ್ತ ಇವಾಂಬುದಃ ॥೩೯॥

ಭೀಮಸೇನನಿಂದ ರಣರಂಗದಲ್ಲಿ ಬಾಣದ ಹೊಡೆತಕ್ಕೆ ಸಿಲುಕಿದ ಆನೆ ಎಷ್ಟು ತಡೆದರೂ ನಿಲ್ಲದೆ ಬಿರುಗಾಳಿಗೆ ಸಿಲುಕಿದ ಮೋಡದಂತೆ ಓಡಿತು.

ತಮಭ್ಯಧಾವದ್ ದ್ವಿರದಂ ಭೀಮಸೇನಸ್ಯ ನಾಗರಾಟ್ ।
ಮಹಾವಾತೇರಿತಂ ಮೇಘಂ ವಾತೋದ್ಧೂತ ಇವಾಂಬುದಃ ॥೪೦॥

ಆ ಆನೆಯನ್ನು ಭೀಮಸೇನನ ಆನೆ ಬಿರುಗಾಳಿಗೆ ಸಿಲುಕಿದ ಮೋಡವನ್ನು ಬಿರುಗಾಳಿಯಿಂದ ಹಾರುವ ಇನ್ನೊಂದು ಮೋಡದಂತೆ ಬೆನ್ನಟ್ಟಿತು.

ಸ ನಿವರ್ತ್ಯಾತ್ಮನೋ ನಾಗಂ ಕ್ಷೇಮಧೂರ್ತಿಃ ಪ್ರಯತ್ನತಃ ।
ವಿವ್ಯಾಧಾಭಿದ್ರುತಂ ಬಾಣೈರ್ಭೀಮಸೇನಂ ಸಕುಂಜರಮ್ ॥೪೧॥

ಆ ಆನೆಯನ್ನು ಕ್ಷೇಮಧೂರ್ತಿ ಹೇಗೋ ಪ್ರಯತ್ನದಿಂದ ಹಿಂತಿರುಗಿಸಿ, ತನ್ನನ್ನು ಬೆನ್ನಟ್ಟಿ ಬರುತ್ತಿದ್ದ ಭೀಮಸೇನನನ್ನೂ ಅವನ ಆನೆಯನ್ನೂ ಬಾಣಗಳಿಂದ ಹೊಡೆದ.

ತತಃ ಸಾಧುವಿಸೃಷ್ಟೇನ ಕ್ಷುರೇಣಾನತಪರ್ವಣಾ ।
ಛಿತ್ತ್ವಾ ಶರಾಸನಂ ಶತ್ರೋರ್ನಾಗಂ ಚಾಪಿ ಪ್ರಮರ್ದಯತ್ ॥೪೨॥

ಆಗ ಭೀಮಸೇನ ಡೊಂಕುಗಿಣ್ಣಿನ ಬಾಣವನ್ನು ಸರಿಯಾಗಿ ಎಸೆದು ಶತ್ರುವಿನ ಬಿಲ್ಲನ್ನು ಕಡಿದು ಆನೆಯನ್ನೂ ಹೊಡೆದ.

ತತಃ ಕ್ರುದ್ಧೋ ರಣೇ ಭೀಮಂ ಕ್ಷೇಮಧೂರ್ತಿಃ ಪರಾಭಿನತ್ ।
ಜಘಾನ ತಸ್ಯ ದ್ವಿರದಂ ನಾರಾಚೈಃ ಸರ್ವಮರ್ಮಸು ॥೪೩॥

ಆಗ ಕ್ರುದ್ಧನಾದ ಕ್ಷೇಮಧೂರ್ತಿ ಬಾಣಗಳಿಂದ ಭೀಮನನ್ನು ಹೊಡೆದ. ಅವನ ಆನೆಯನ್ನು ಎಲ್ಲ ಮರ್ಮಸ್ಥಾನಗಳಲ್ಲಿಯೂ ಹೊಡೆದ.

ತತಃ ಪಪಾತ ನಾಗೇಂದ್ರೋ ಭೀಮಸೇನಸ್ಯ ಮಾರಿಷ ।
ಪುರಾ ನಾಗಸ್ಯ ಪತನಾತ್ ಸೋಽವಪ್ಲುತ್ಯ ಸ್ಥಿತೋ ಮಹೀಮ್ ॥೪೪॥

ರಾಜನೆ, ಆಗ ಭೀಮಸೇನನ ಮದ್ದಾನೆ ನೆಲಕ್ಕೆ ಉರುಳಿತು. ಆನೆ ಬೀಳುವುದರೊಳಗಾಗಿ ಭೀಮ ಕೆಳಗೆ ನೆಲಕ್ಕೆ ಹಾರಿ ನಿಂತ.

ಭೀಮಸೇನೋಽಪಿ ತನ್ನಾಗಂ ಗದಯಾ ಸಮಪೋಥಯತ್ ।
ತಸ್ಮಾತ್ ಪ್ರಮಥಿತಾನ್ನಾಗಾತ್ ಕ್ಷೇಮಧೂರ್ತಿರವಪ್ಲುತಃ ॥೪೫॥

ಭೀಮನೂ ಕ್ಷೇಮಧೂರ್ತಿಯ ಆನೆಯನ್ನು ಗದೆಯಿಂದ ಚೆನ್ನಾಗಿ ಹೊಡೆದ. ಆ ಕ್ಷೇಮಧೂರ್ತಿಯೂ ಆನೆಯಿಂದ ಕೆಳಗೆ ಹಾರಿದ.

ಉದ್ಧೃತ್ಯ ಖಡ್ಗಂ ನಿಶಿತಮಭ್ಯಧಾವತ್ ಸ ಪಾಂಡವಮ್ ।
ಉದ್ಯತಾಸಿಮುಪಾಯಾಂತಂ ಗದಯಾಽಹನ್ ವೃಕೋದರಃ ॥೪೬॥

ಕ್ಷೇಮಧೂರ್ತಿ ಹರಿತವಾದ ಖಡ್ಗವನ್ನು ಎತ್ತಿ ಭೀಮನ ಮುಂದೆ ನುಗ್ಗಿದ. ಖಡ್ಗಹಿರಿದು ಆತ ಸಮೀಪಿಸುತ್ತಿದ್ದಂತೆ ಭೀಮ ಅವನನ್ನು ಗದೆಯಿಂದ ಹೊಡೆದ.

ಸ ಪಪಾತ ಹತಃ ಸಾಸಿರ್ವ್ಯಸುಸ್ತಮಭಿತೋ ದ್ವಿಪಮ್ ।
ವಜ್ರಪ್ರರುಗ್ಣಮಚಲಂ ಸಿಂಹೋ ವಜ್ರಹತೋ ಯಥಾ ॥೪೭॥

ಆ ಹೊಡೆತಕ್ಕೆ ಕ್ಷೇಮಧೂರ್ತಿ ಕೈಯಲ್ಲಿ ಖಡ್ಗವಿದ್ದಂತೆಯೇ ಆನೆಯ ಇದಿರಿನಲ್ಲಿ ವಜ್ರಾಯುಧದಿಂದ ಪೀಡಿತವಾದ ಪರ್ವತದ ಮುಂದೆ ವಜ್ರಾಘಾತ ದಿಂದ ಸತ್ತ ಸಿಂಹದಂತೆ ಸತ್ತುಬಿದ್ದ.

ತಂ ಹತಂ ನೃಪತಿಂ ದೃಷ್ಟ್ವಾ ಕರೂಶಾನಾಂ ಯಶಸ್ಕರಮ್ ।
ಪ್ರಾದ್ರವದ್ ವ್ಯಥಿತಾ ಸೇನಾ ತ್ವದೀಯಾ ಭರತರ್ಷಭ ॥೪೮॥

ರಾಜನೆ, ಕರೂಶ ದೇಶಕ್ಕೆ ಕೀರ್ತಿ ತಂದಿದ್ದ ಕ್ಷೇಮಧೂರ್ತಿ ಸತ್ತುಬಿದ್ದುದನ್ನು ಕಂಡು ವ್ಯಥೆಗೊಂಡ ನಿನ್ನ ಸೈನ್ಯ ಪಲಾಯನ ಮಾಡಿತು.

ಹಿಂದೆ (ದ್ರೋಣ107.6) ಬೃಹತ್ಕ್ಷತ್ರನಿಂದ, ಮುಂದೆ (ಶಲ್ಯ21.8) ಸಾತ್ಯಕಿಯಿಂದ ಹತರಾಗುವ ಇನ್ನಿಬ್ಬರು ಕ್ಷೇಮಧೂರ್ತಿಗಳ ಉಲ್ಲೇಖಗಳಿವೆ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ದ್ವಾದಶೋಽಧ್ಯಾಯಃ ॥೧೨॥

❖

ಮಹಾಭಾರತತಾತ್ಪರ್ಯನಿರ್ಣಯ

ವಿಂದಾನುವಿಂದಾವಥ ಕೈಕಯೌ ರಣೇ
ಸಮಾಸದತ್ ಸಾತ್ಯಕಿರುಗ್ರವಿಕ್ರಮಃ ।
ತಯೋರಮುಷ್ಯಾಭವದುಗ್ರವೈಶಸಂ
ಪ್ರವರ್ಷತೋರುತ್ತಮಸಾಯಕಾನ್ ಬಹೂನ್ ॥೧೭॥

ಕೇಕಯ ದೇಶದ ವಿಂದ ಅನುವಿಂದರನ್ನು ಯುದ್ಧದಲ್ಲಿ ಉಗ್ರ ಪರಾಕ್ರಮಿ ಸಾತ್ಯಕಿ ಇದಿರಿಸಿದ. ಅವರಿಗೂ ಸಾತ್ಯಕಿಗೂ ಭಯಂಕರ ಯುದ್ಧ ನಡೆಯಿತು. ಅವರು ಒಳ್ಳೆಯ ಬಹಳ ಬಾಣಗಳನ್ನು ಮಳೆಗರೆದರು.

ತಾಭ್ಯಾಂ ನಿರುದ್ಧಃ ಸಹಸಾ ಜಹಾರ
ತತ್ರಾನುವಿಂದಸ್ಯ ಶಿರೋಽಥ ವಿಂದಃ ।

ಆ ಆನೆಯನ್ನು ಕ್ಷೇಮಧೂರ್ತಿ ಹೇಗೋ ಪ್ರಯತ್ನದಿಂದ ಹಿಂತಿರುಗಿಸಿ, ತನ್ನನ್ನು ಬೆನ್ನಟ್ಟಿ ಬರುತ್ತಿದ್ದ ಭೀಮಸೇನನನ್ನೂ ಅವನ ಆನೆಯನ್ನೂ ಬಾಣಗಳಿಂದ ಹೊಡೆದ.

ತತಃ ಸಾಧುವಿಸೃಷ್ಟೇನ ಕ್ಷುರೇಣಾನತಪರ್ವಣಾ ।
ಛಿತ್ತ್ವಾ ಶರಾಸನಂ ಶತ್ರೋರ್ನಾಗಂ ಚಾಪಿ ಪ್ರಮರ್ದಯತ್ ॥೪೨॥

ಆಗ ಭೀಮಸೇನ ಡೊಂಕುಗಿಣ್ಣಿನ ಬಾಣವನ್ನು ಸರಿಯಾಗಿ ಎಸೆದು ಶತ್ರುವಿನ ಬಿಲ್ಲನ್ನು ಕಡಿದು ಆನೆಯನ್ನೂ ಹೊಡೆದ.

ತತಃ ಕ್ರುದ್ಧೋ ರಣೇ ಭೀಮಂ ಕ್ಷೇಮಧೂರ್ತಿಃ ಪರಾಭಿನತ್ ।
ಜಘಾನ ತಸ್ಯ ದ್ವಿರದಂ ನಾರಾಚೈಃ ಸರ್ವಮರ್ಮಸು ॥೪೩॥

ಆಗ ಕ್ರುದ್ಧನಾದ ಕ್ಷೇಮಧೂರ್ತಿ ಬಾಣಗಳಿಂದ ಭೀಮನನ್ನು ಹೊಡೆದ. ಅವನ ಆನೆಯನ್ನು ಎಲ್ಲ ಮರ್ಮಸ್ಥಾನಗಳಲ್ಲಿಯೂ ಹೊಡೆದ.

ತತಃ ಪಪಾತ ನಾಗೇಂದ್ರೋ ಭೀಮಸೇನಸ್ಯ ಮಾರಿಷ ।
ಪುರಾ ನಾಗಸ್ಯ ಪತನಾತ್ ಸೋಽವಪ್ಲುತ್ಯ ಸ್ಥಿತೋ ಮಹೀಮ್ ॥೪೪॥

ರಾಜನೆ, ಆಗ ಭೀಮಸೇನನ ಮದ್ದಾನೆ ನೆಲಕ್ಕೆ ಉರುಳಿತು. ಆನೆ ಬೀಳುವುದರೊಳಗಾಗಿ ಭೀಮ ಕೆಳಗೆ ನೆಲಕ್ಕೆ ಹಾರಿ ನಿಂತ.

ಭೀಮಸೇನೋಽಪಿ ತನ್ನಾಗಂ ಗದಯಾ ಸಮಪೋಥಯತ್ ।
ತಸ್ಮಾತ್ ಪ್ರಮಥಿತಾನ್ನಾಗಾತ್ ಕ್ಷೇಮಧೂರ್ತಿರವಪ್ಲುತಃ ॥೪೫॥

ಭೀಮನೂ ಕ್ಷೇಮಧೂರ್ತಿಯ ಆನೆಯನ್ನು ಗದೆಯಿಂದ ಚೆನ್ನಾಗಿ ಹೊಡೆದ. ಆ ಕ್ಷೇಮಧೂರ್ತಿಯೂ ಆನೆಯಿಂದ ಕೆಳಗೆ ಹಾರಿದ.

ಉದ್ಧೃತ್ಯ ಖಡ್ಗಂ ನಿಶಿತಮಭ್ಯಧಾವತ್ ಸ ಪಾಂಡವಮ್ ।
ಉದ್ಯತಾಸಿಮುಪಾಯಾಂತಂ ಗದಯಾಽಹನ್ ವೃಕೋದರಃ ॥೪೬॥

ಕ್ಷೇಮಧೂರ್ತಿ ಹರಿತವಾದ ಖಡ್ಗವನ್ನು ಎತ್ತಿ ಭೀಮನ ಮುಂದೆ ನುಗ್ಗಿದ. ಖಡ್ಗಹಿರಿದು ಆತ ಸಮೀಪಿಸುತ್ತಿದ್ದಂತೆ ಭೀಮ ಅವನನ್ನು ಗದೆಯಿಂದ ಹೊಡೆದ.

ಸ ಪಪಾತ ಹತಃ ಸಾಸಿವ್ಯಸುಸ್ತಮಭಿತೋ ದ್ವಿಪಮ್ ।
ವಜ್ರಪ್ರರುಗ್ಣಮಚಲಂ ಸಿಂಹೋ ವಜ್ರಹತೋ ಯಥಾ ॥೪೭॥

ಆ ಹೊಡೆತಕ್ಕೆ ಕ್ಷೇಮಧೂರ್ತಿ ಕೈಯಲ್ಲಿ ಖಡ್ಗವಿದ್ದಂತೆಯೇ ಆನೆಯ ಇದಿರಿನಲ್ಲಿ ವಜ್ರಾಯುಧದಿಂದ ಪೀಡಿತವಾದ ಪರ್ವತದ ಮುಂದೆ ವಜ್ರಾಘಾತ ದಿಂದ ಸತ್ತ ಸಿಂಹದಂತೆ ಸತ್ತುಬಿದ್ದ.

ತಂ ಹತಂ ನೃಪತಿಂ ದೃಷ್ಟ್ವಾ ಕರೂಶಾನಾಂ ಯಶಸ್ಕರಮ್ ।
ಪ್ರಾದ್ರವದ್ ವ್ಯಥಿತಾ ಸೇನಾ ತ್ವದೀಯಾ ಭರತರ್ಷಭ ॥೪೮॥

ರಾಜನೆ, ಕರೂಶ ದೇಶಕ್ಕೆ ಕೀರ್ತಿ ತಂದಿದ್ದ ಕ್ಷೇಮಧೂರ್ತಿ ಸತ್ತುಬಿದ್ದುದನ್ನು ಕಂಡು ವ್ಯಥೆಗೊಂಡ ನಿನ್ನ ಸೈನ್ಯ ಪಲಾಯನ ಮಾಡಿತು.

ಹಿಂದೆ (ದ್ರೋಣ107.6) ಬೃಹತ್ಕ್ಷತ್ರನಿಂದ, ಮುಂದೆ (ಶಲ್ಯ21.8) ಸಾತ್ಯಕಿಯಿಂದ ಹತರಾಗುವ ಇನ್ನಿಬ್ಬರು ಕ್ಷೇಮಧೂರ್ತಿಗಳ ಉಲ್ಲೇಖಗಳಿವೆ.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ದ್ವಾದಶೋಽಧ್ಯಾಯಃ ॥೧೨॥

❖

ಮಹಾಭಾರತತಾತ್ಪರ್ಯನಿರ್ಣಯ

ವಿಂದಾನುವಿಂದಾವಥ ಕೈಕಯೌ ರಣೇ
ಸಮಾಸದತ್ ಸಾತ್ಯಕಿರುಗ್ರವಿಕ್ರಮಃ ।
ತಯೋರಮುಷ್ಯಾಭವದುಗ್ರವೈಶಸಂ
ಪ್ರವರ್ಷತೋರುತ್ತಮಸಾಯಕಾನ್ ಬಹೂನ್ ॥೧೭॥

ಕೇಕಯ ದೇಶದ ವಿಂದ ಅನುವಿಂದರನ್ನು ಯುದ್ಧದಲ್ಲಿ ಉಗ್ರ ಪರಾಕ್ರಮಿ ಸಾತ್ಯಕಿ ಇದಿರಿಸಿದ. ಅವರಿಗೂ ಸಾತ್ಯಕಿಗೂ ಭಯಂಕರ ಯುದ್ಧ ನಡೆಯಿತು. ಅವರು ಒಳ್ಳೆಯ ಬಹಳ ಬಾಣಗಳನ್ನು ಮಳೆಗರೆದರು.

ತಾಭ್ಯಾಂ ನಿರುದ್ಧಃ ಸಹಸಾ ಜಹಾರ
ತತ್ರಾನುವಿಂದಸ್ಯ ಶಿರೋಽಥ ವಿಂದಃ ।

ಯುಯೋಧ ಶೈನೇಯಮಥಾರಥಾವುಭೌ
ಪರಸ್ಪರಂ ಚಕ್ರತುರುತ್ತಮಾಹವೇ ॥೧೮॥

ವಿಂದ ಅನುವಿಂದರಿಂದ ತಡೆಯಲ್ಪಟ್ಟ ಸಾತ್ಯಕಿ ತಕ್ಷಣವೆ ಅನುವಿಂದನ ತಲೆಯನ್ನು ಕತ್ತರಿಸಿದ. ಬಳಿಕ ವಿಂದ ಸಾತ್ಯಕಿಯೊಡನೆ ಹೋರಾಡಿದ. ಉತ್ತಮವಾದ ಯುದ್ಧದಲ್ಲಿ ಅವರು ಒಬ್ಬರನ್ನೊಬ್ಬರು ವಿರಥರನ್ನಾಗಿ ಮಾಡಿದರು.

ತತಶ್ಚ ಚರ್ಮಾಸಿಧರೌ ಪ್ರಚೇರತುಃ
ಶ್ಯೇನೌ ಯಥಾಕಾಶತಲೇ ಕೃತಶ್ರಮೌ ।
ನಿಕೃತ್ಯ ಚಾನ್ಯೋನ್ಯಮುಭೌ ಚ ಚರ್ಮಣೀ
ವರಾಸಿಪಾಣೀ ಯುಗಪತ್ ಸಮೀಯತುಃ ॥೧೯॥

ಒಳ್ಳೆಯ ಶಸ್ತ್ರಾಭ್ಯಾಸ ಮಾಡಿದ್ದ ವಿಂದ ಸಾತ್ಯಕಿಗಳು ಕತ್ತಿ ಗುರಾಣಿ ಹಿಡಿದು ಆಕಾಶದಲ್ಲಿ ಗಿಡುಗಗಳು ಹೇಗೋ ಹಾಗೆ ಸಂಚರಿಸಿದರು. ಇಬ್ಬರೂ ಪರಸ್ಪರ ಗುರಾಣಿಗಳನ್ನು ತುಂಡರಿಸಿಕೊಂಡು ಉತ್ತಮ ಖಡ್ಗವನ್ನು ಕೈಯಲ್ಲಿ ಹಿಡಿದು ಒಮ್ಮೆಲೆ ಮುಂದೆ ಬಂದರು.

ತತ್ರಾಪಹಸ್ತೇನ ಶಿರಃ ಸಕುಂಡಲಂ
ಜಹಾರ ವಿಂದಸ್ಯ ಮೃಧೇ ಸ ಸಾತ್ಯಕಿಃ ।
ನಿಹತ್ಯ ತೌ ಬಂಧುಜನೈಃ ಸುಪೂಜಿತೋ
ಜಗಾಮ ಶತ್ರೂನಪರಾನ್ ಪ್ರಕಂಪಯನ್ ॥೨೦॥

ಸಾತ್ಯಕಿ ಯುದ್ಧದಲ್ಲಿ ವಿಂದನ ಕುಂಡಲಯುಕ್ತವಾದ ತಲೆಯನ್ನು ಅಂಗೈಯ ಪಾರ್ಶ್ವದಿಂದಲೆ ಹಾರಿಸಿದ. ಹೀಗೆ ವಿಂದ ಅನುವಿಂದ ಇಬ್ಬರನ್ನೂ ಕೊಂದು ಸಾತ್ಯಕಿ ಬಂಧುಜನರಿಂದ ಹೊಗಳಿಸಿಕೊಂಡು ಇತರ ಶತ್ರುಗಳನ್ನು ನಡುಗಿಸುತ್ತ ಮುಂದೆ ನಡೆದ.

❖❖❖

ಹದಿಮೂರನೆಯ ಅಧ್ಯಾಯ

ಸಾತ್ಯಕಿಯಿಂದ ಕೇಕಯರ ವಿಂದಾನುವಿಂದರ ವಧ

ಸಂಜಯಃ

ತತಃ ಕರ್ಣೋ ಮಹೇಷ್ವಾಸಃ ಪಾಂಡವಾನಾಮನೀಕಿನೀಮ್ ।
ಜಘಾನ ಸಮರೇ ಶೂರಃ ಶರೈಃ ಸನ್ನತಪರ್ವಭಿಃ ॥೧॥

ಸಂಜಯನು ನುಡಿದ— ಬಳಿಕ ಮಹಾಬಿಲ್ಲಾರ ಶೂರಕರ್ಣ ಯುದ್ಧದಲ್ಲಿ ಪಾಂಡವಸೈನ್ಯವನ್ನು ಡೊಂಕುಗಿಣ್ಣಿನ ಬಾಣಗಳಿಂದ ಪ್ರಹರಿಸಿದ.

ತಥೈವ ಪಾಂಡವಾ ರಾಜನ್ ತವ ಪುತ್ರಸ್ಯ ವಾಹಿನೀಮ್ ।
ಕರ್ಣಸ್ಯ ಪಶ್ಯತೋ ರಾಜನ್ ನಿಜಘ್ನುಸ್ತೇ ಮಹಾರಥಾಃ ॥೨॥

ಹಾಗೆಯೆ, ರಾಜನೆ, ಮಹಾರಥರಾದ ಪಾಂಡವರೂ ಕೂಡ ನಿನ್ನ ಸೈನ್ಯವನ್ನು ಕರ್ಣನು ನೋಡುತ್ತಿದ್ದಂತೆಯೇ ಸಂಹರಿಸಿದರು.

ಕರ್ಣೋಽಪಿ ಸುಮಹಾಬಾಹುರವಿಧ್ಯತ್ ಪಾಂಡವೀಂ ಚಮೂಮ್ ।
ನಾರಾಚೈರರ್ಕರಶ್ಮ್ಯಾಭೈಃ ಕರ್ಮಾರಪರಿಮಾರ್ಜಿತೈಃ ॥೩॥

ಕರ್ಣನೂ ಕೂಡ ಮಹಾಬಾಹು. ಕಮ್ಮಾರರು ಚೆನ್ನಾಗಿ ಸಾಣೆಹಿಡಿದಿರುವ, ಸೂರ್ಯಕಿರಣಗಳಂತೆ ಹೊಳೆಯುವ ಬಾಣಗಳಿಂದ ಪಾಂಡವಸೈನ್ಯವನ್ನು ಹೊಡೆದ.

ತತ್ರ ಭಾರತ ಕರ್ಣೇನ ನಾರಾಚೈಸ್ತಾಡಿತಾ ಗಜಾಃ ।
ನೇದುಃ ಸೇದುಶ್ಚ ಮಮ್ಲುಶ್ಚ ಬಭ್ರಮುಶ್ಚ ದಿಶೋ ದಶ ॥೪॥

ರಾಜನೆ, ಕರ್ಣನ ಬಾಣಗಳ ಹೊಡೆತಕ್ಕೆ ಪೀಡಿತವಾದ ಆನೆಗಳು ಕೂಗಿ ಕೊಂಡುವು. ಎದೆಗುಂದಿದವು, ಆಯಾಸಗೊಂಡು ಹತ್ತು ದಿಕ್ಕುಗಳಿಗೆ ಪಲಾಯನ ಮಾಡಿದುವು.

ವಧ್ಯಮಾನೇ ಬಲೇ ತಸ್ಮಿನ್ ಸೂತಪುತ್ರೇಣ ಮಾರಿಷ ।
ನಕುಲೋಽಭ್ಯದ್ರವತ್ ತೂರ್ಣಂ ಸೂತಪುತ್ರಂ ಮಹಾರಥಮ್ ॥೫॥

ಹೀಗೆ, ರಾಜನೆ, ಕರ್ಣನು ಪಾಂಡವಸೈನ್ಯವನ್ನು ವಧಿಸುವಾಗ ಮಹಾರಥ ನಾದ ಕರ್ಣನ ಕಡೆಗೆ ನಕುಲನು ವೇಗವಾಗಿ ನುಗ್ಗಿಬಂದ.

ಭೀಮಸೇನಸ್ತಥಾ ದ್ರೌಣಿಂ ಕುರ್ವಾಣಂ ಕರ್ಮ ದುಷ್ಕರಮ್ ।
ವಿಂದಾನುವಿಂದೌ ಕೈಕೇಯೌ ಸಾತ್ಯಕಿಃ ಸಮವಾರಯತ್ ॥೬॥

ಭೀಮಸೇನನು ಅಶ್ವತ್ಥಾಮನ ಕಡೆಗೆ ನುಗ್ಗಿಬಂದ. ಅಶ್ವತ್ಥಾಮ ಮಾಡುವ ಯುದ್ಧ ಇನ್ನೊಬ್ಬರಿಗೆ ದುಃಸಾಧ್ಯ. ಸಾತ್ಯಕಿಯು ಕೇಕಯದೇಶಾಧಿಪತಿಗಳಾದ ವಿಂದ ಮತ್ತು ಅನುವಿಂದರನ್ನು ಇದಿರಿಸಿದ.

ಹಿಂದೆ ದ್ರೋಣಪರ್ವದಲ್ಲಿ ಅರ್ಜುನನಿಂದ ಹತರಾದವರು ಅವಂತಿ ದೇಶಾಧಿಪತಿಗಳಾದ ವಿಂದ ಮತ್ತು ಅನುವಿಂದರು, ಬೇರೆ. ಮತ್ತು ದುರ್ಯೋಧನನ ತಮ್ಮಂದಿರು ಇವೇ ಹೆಸರಿನವರೂ ಬೇರೆ.

ಶ್ರುತಕರ್ಮಾಣಮಾಯಾಂತಂ ಚಿತ್ರಸೇನೋ ಮಹೀಪತಿಃ ।
ಪ್ರತಿವಿಂಧ್ಯಸ್ತಥಾ ಚಿತ್ರಂ ಚಿತ್ರಕೇತನಕಾರ್ಮುಕಮ್ ॥೭॥

ಅಭಿಸಾರ ದೇಶಾಧಿಪತಿಯಾದ ಚಿತ್ರಸೇನನು ಸಹದೇವಪುತ್ರನಾದ ಶ್ರುತ ಕರ್ಮನನ್ನು ಇದಿರಿಸಿದ. ಯುಧಿಷ್ಠಿರಪುತ್ರನಾದ ಪ್ರತಿವಿಂಧ್ಯ ಸುಂದರವಾದ ಧ್ವಜ ಧನುಸ್ಸುಳ್ಳ ಚಿತ್ರರಾಜನನ್ನು ಇದಿರಿಸಿದ.

ದುರ್ಯೋಧನಸ್ತು ರಾಜಾನಂ ಧರ್ಮಪುತ್ರಂ ಯುಧಿಷ್ಠಿರಮ್ ।
ಸಂಶಪ್ತಕಗಣಾ ಹೃಷ್ಟಾ ಹ್ಯಭ್ಯಧಾವನ್ ಧನಂಜಯಮ್ ॥೮॥

ದುರ್ಯೋಧನನು ಧರ್ಮಪುತ್ರ ರಾಜಾ ಯುಧಿಷ್ಠಿರನನ್ನು ಇದಿರಿಸಿದ. ಸಂಶಪ್ತಕಗಣದವರು ಉತ್ಸಾಹಗೊಂಡು ಅರ್ಜುನನ ಮುಂದೆ ನುಗ್ಗಿ ಬಂದರು.

ಧೃಷ್ಟದ್ಯುಮ್ನಃ ಕೃಪಂ ಪ್ರಾಯಾತ್ ತಸ್ಮಿನ್ ವೀರವರಕ್ಷಯೇ ।
ಶಿಖಂಡೀ ಕೃತವರ್ಮಾಣಮಾಸಸಾದ ಮಹಾಬಲಃ ॥೯॥

ಧೃಷ್ಟದ್ಯುಮ್ನನು ವೀರಶ್ರೇಷ್ಠರ ನಾಶಕ್ಕೆ ಕಾರಣವಾದ ಆ ಸಮರದಲ್ಲಿ ಕೃಪನನ್ನು ಇದಿರಿಸಿದ. ಮಹಾಬಲಿ ಶಿಖಂಡಿ ಕೃತವರ್ಮನನ್ನು ಇದಿರಿಸಿದ.

ಶ್ರುತಕೀರ್ತಿಸ್ತಥಾ ಶಲ್ಯಂ ಮಾದ್ರೀಪುತ್ರಃ ಸುತಂ ತವ ।
ದುಃಶಾಸನಂ ಮಹಾರಾಜ ಸಹದೇವಃ ಪ್ರತಾಪವಾನ್ ॥೧೦॥

ಅರ್ಜುನಪುತ್ರ ಶ್ರುತಕೀರ್ತಿಯು ಶಲ್ಯನನ್ನು ಇದಿರಿಸಿದ. ಮಹಾರಾಜ, ನಿನ್ನ ಮಗನಾದ ದುಃಶಾಸನನನ್ನು ಮಾದ್ರೀಪುತ್ರನಾದ ಪ್ರತಾಪಶಾಲಿ ಸಹದೇವ ಇದಿರಿಸಿದ.

ಕೈಕೇಯೌ ಸಾತ್ಯಕಿಂ ಯುದ್ಧೇ ಶರವರ್ಷೇಣ ಭಾಸ್ವತಾ ।
ಸಾತ್ಯಕಿಃ ಕೇಕಯೌ ಚೈವ ಛಾದಯಾಮಾಸ ಸಾಯಕೈಃ ॥೧೧॥

ಕೇಕಯರಾಜರಾದ ವಿಂದಾನುವಿಂದರು ಯುದ್ಧದಲ್ಲಿ ಸಾತ್ಯಕಿಯನ್ನು ಹೊಳೆಯುವ ಬಾಣಗಳ ಮಳೆಯಿಂದ ಮುಚ್ಚಿದರು. ಸಾತ್ಯಕಿಯು ಬಾಣಗಳಿಂದ ಕೇಕಯರನ್ನು ಮುಚ್ಚಿದ.

ತಾವೇನಂ ಭ್ರಾತರೌ ವೀರೌ ಯುಧಿ ವಿವ್ಯಧತುರ್ಭೃಶಮ್ ।
ವಿಷಾಣಾಭ್ಯಾಂ ಯಥಾ ನಾಗೌ ಪ್ರತಿನಾಗಂ ಮಹಾವನೇ ॥೧೨॥

ಮಹಾರಣ್ಯದಲ್ಲಿ ಎರಡು ಆನೆಗಳು ಎದುರಾಗಿ ಬಂದ ಒಂದು ಆನೆಯನ್ನು ದಂತಗಳಿಂದ ತಿವಿಯುವಂತೆ ವೀರರಾದ ವಿಂದಾನುವಿಂದಸೋದರರು ಯುದ್ಧದಲ್ಲಿ ಸಾತ್ಯಕಿಯನ್ನು ಬಹಳವಾಗಿ ಪ್ರಹರಿಸಿದರು.

ಶರಸಂಛಿನ್ನವರ್ಮಾಣೌ ತಾವುಭೌ ಭ್ರಾತರೌ ರಣೇ ।
ಸಾತ್ಯಕಿಂ ಸತ್ಯಕರ್ಮಾಣಂ ರಣೇ ವಿವ್ಯಧತುರ್ಭೃಶಮ್ ॥೧೩॥

ಯುದ್ಧದಲ್ಲಿ ಆ ವಿಂದಾನುವಿಂದ ಸೋದರರ ಕವಚಗಳು ಪುಡಿಯಾದುವು. ಅವರೂ ಕೂಡ ಅಮೋಘ ಕರ್ಮಶೀಲನಾದ ಸಾತ್ಯಕಿಯನ್ನು ಬಹಳವಾಗಿ ಗಾಯಗೊಳಿಸಿದರು.

ತೌ ಸಾತ್ಯಕಿರ್ಮಹಾರಾಜ ಪ್ರಹಸನ್ ಯುದ್ಧದುರ್ಮದಃ ।
ಛಾದಯನ್ ಶರವರ್ಷೇಣ ವಾರಯಾಮಾಸ ಸರ್ವತಃ ॥೧೪॥

ಮಹಾರಾಜ, ಯುದ್ಧದ ಗೀಳಿನವನಾದ ಸಾತ್ಯಕಿ ಅಟ್ಟಹಾಸಗೈದು ಆ ಸೋದರರನ್ನು ಎಲ್ಲೆಡೆ ಬಾಣಗಳ ಮಳೆಯಿಂದ ಮುಚ್ಚಿ ತಡೆದ.

ವಾರ್ಯಮಾಣೌ ತತಸ್ತೌ ತು ಶೈನೇಯಶರವೃಷ್ಟಿಭಿಃ ।
ಶೈನೇಯಸ್ಯ ರಥಂ ತೂರ್ಣಂ ಛಾದಯಾಮಾಸತುಃ ಶರೈಃ ॥೧೫॥

ಸಾತ್ಯಕಿಯ ಬಾಣದ ಮಳೆಗಳು ತಡೆಯುತ್ತಿದ್ದರೂ ಅವರು ಸಾತ್ಯಕಿಯ ರಥವನ್ನು ಬೇಗನೆ ಬಾಣಗಳಿಂದ ಮುಚ್ಚಿದರು.

ತಯೋಸ್ತು ಧನುಷೀ ಚಿತ್ರೇ ಛಿತ್ತ್ವಾ ಶೌರಿರ್ಮಹಾಹವೇ ।
ಅಥ ತೌ ಸಾಯಕೈಸ್ತೀಕ್ಷ್ಣೈಶ್ಛಾದಯಾಮಾಸ ಸಾತ್ವತಃ ॥೧೬॥

ಯಾದವನಾದ ಸಾತ್ಯಕಿ ಮಹಾಯುದ್ಧದಲ್ಲಿ ವಿಂದಾನುವಿಂದರ ಸುಂದರವಾದ ಬಿಲ್ಲುಗಳನ್ನು ತುಂಡರಿಸಿ ತೀಕ್ಷ್ಣವಾದ ಬಾಣಗಳಿಂದ ಅವರನ್ನು ಮುಚ್ಚಿದ.

ಅಥಾನ್ಯೇ ಧನುಷೀ ಚಿತ್ರೇ ಪ್ರಗೃಹ್ಯಾಶು ಮಹಾಶರಾನ್ ।
ಸಾತ್ಯಕಿಂ ಛಾದಯಂತೌ ತೌ ಚೇರತುರ್ಲಘು ಸುಷ್ಠು ಚ ॥೧೭॥

ಆ ಸೋದರರು ಬಳಿಕ ಬೇಗನೆ ಸುಂದರವಾದ ಬೇರೆ ಬಿಲ್ಲುಗಳನ್ನೂ ದೊಡ್ಡ ಬಾಣಗಳನ್ನೂ ಎತ್ತಿಕೊಂಡು ಸಾತ್ಯಕಿಯನ್ನು ಮುಚ್ಚುತ್ತ ರಣರಂಗದಲ್ಲಿ ವೇಗವಾಗಿ ಚೆನ್ನಾಗಿ ಸಂಚರಿಸಿದರು.

ತಾಭ್ಯಾಂ ಮುಕ್ತಾ ಮಹಾಬಾಣಾಃ ಕಂಕಬರ್ಹಿಣವಾಸಸಃ ।
ದ್ಯೋತಯಂತೋ ದಿಶಃ ಸರ್ವಾಃ ಸಂಪೇತುರ್ಹೇಮಭೂಷಣಾಃ ॥೧೮॥

ಸೋದರರು ಬಿಟ್ಟ ಆ ದೊಡ್ಡ ಬಾಣಗಳು ರಣಹದ್ದಿನ ನವಿಲಿನ ಪುಕ್ಕಗಳಿಂದ ಕೂಡಿ ಬಂಗಾರದಿಂದ ಅಲಂಕೃತವಾಗಿದ್ದುವು. ಅವು ಎಲ್ಲ ದಿಕ್ಕುಗಳನ್ನೂ ಬೆಳಗುತ್ತ ಸಾತ್ಯಕಿಯ ಮೇಲೆ ಬಿದ್ದುವು.

ಬಾಣಾಂಧಕಾರಮಭವತ್ ತತೋ ರಾಜನ್ ಮಹಾಹವೇ ।
ಅನ್ಯೋನ್ಯಸ್ಯ ತು ಚಾಪಾನಿ ಚಿಚ್ಛಿದುಸ್ತೇ ಮಹಾರಥಾಃ ॥೧೯॥

ರಾಜನೆ, ಆ ಮಹಾಯುದ್ಧದಲ್ಲಿ ಬಾಣಗಳ ಮಳೆಯಿಂದ ಅಂಧಕಾರ ಕವಿದಾಗ ಮಹಾರಥರಾದ ಅವರು ಪರಸ್ಪರ ಬಿಲ್ಲುಗಳನ್ನು ಕಡಿದರು.

ತತಃ ಕ್ರುದ್ಧೋ ಮಹಾರಾಜ ಸಾತ್ಯಕಿರ್ಯುದ್ಧದುರ್ಮದಃ ।
ಧನುರನ್ಯತ್ ಸಮಾದಾಯ ಸಜ್ಯಂ ಕೃತ್ವಾ ಮಹಾಬಲಃ ॥೨೦॥

ಅನುಮೃಜ್ಯ ಚ ರಾಜೇಂದ್ರ ತದ್ಧನುರ್ಭಾರಸಾಧನಮ್ ।
ಕ್ಷುರಪ್ರೇಣ ಸುತೀಕ್ಷ್ಣೇನ ಹ್ಯನುವಿಂದಶಿರೋಽಹರತ್ ॥೨೧॥

ಮಹಾರಾಜ, ಯುದ್ಧದ ಹವ್ಯಾಸದವನಾದ ಮಹಾಬಲಿ ಸಾತ್ಯಕಿಯು ಕ್ರುದ್ಧನಾಗಿ ಬೇರೇ ಒಂದು ಬಿಲ್ಲನ್ನೆತ್ತಿಕೊಂಡ. ಬಲು ಕಾರ್ಯಸಮರ್ಥವಾದ ಆ ಬಿಲ್ಲನ್ನು ಕೈಯಿಂದ ಚೆನ್ನಾಗಿ ಸವರಿ, ಹೆದೆ ಏರಿಸಿ, ತೀಕ್ಷ್ಣವಾದ ಒಂದು ಬಾಣದಿಂದ ಅನುವಿಂದನ ಶಿರಶ್ಛೇದಗೈದ.

ತಚ್ಛಿರೋ ಹ್ಯಪತದ್ ಭೂಮೌ ಕುಂಡಲೋಪಚಿತಂ ಶುಭಮ್ ।
ಶಂಬರಸ್ಯ ಶಿರೋ ಯದ್ವತ್ ನಿಹತಸ್ಯ ಮಹಾಮೃಧೇ ॥೨೨॥

ಶೋಚಯತ್ ಕೇಕಯಾನ್ ಸರ್ವಾನ್ ಜಗಾಮಾಥ
ವಸುಂಧರಾಮ್ ॥೨೩॥

ಕುಂಡಲಗಳಿಂದ ಅಲಂಕೃತವಾಗಿದ್ದ ಆ ಶಿರಸ್ಸು ಕೇಕಯ ದೇಶದವರೆಲ್ಲರನ್ನೂ ಶೋಕಪಡಿಸುತ್ತ ಮಹಾಯುದ್ಧದಲ್ಲಿ ಪ್ರದ್ಯುಮ್ನನಿಂದ ಹತನಾದ ಶಂಬರಾಸುರನ ಶಿರಸ್ಸಿನಂತೆ ನೆಲದ ಮೇಲೆ ಬಿದ್ದಿತು.

ತಂ ದೃಷ್ಟ್ವಾ ನಿಹತಂ ಶೂರಂ ಭ್ರಾತಾ ತಸ್ಯ ಮಹಾರಥಃ ।
ಸಜ್ಯಮನ್ಯದ್ ಧನುಃ ಕೃತ್ವಾ ಶೈನೇಯಂ ಪ್ರತ್ಯವಾರಯತ್ ॥೨೪॥

ಶೂರ ಅನುವಿಂದ ಹತನಾದುದನ್ನು ಕಂಡು ಮಹಾರಥನಾದ ಸೋದರ ವಿಂದನು ಇನ್ನೊಂದು ಬಿಲ್ಲಿಗೆ ಹೆದೆಯೇರಿಸಿ ಸಾತ್ಯಕಿಯನ್ನು ತಡೆದ.

ಸಹಸಾ ಸಾತ್ಯಕಿರ್ವಿದ್ಧಃ ಸ್ವರ್ಣಪುಂಖೈಃ ಶಿಲಾಶಿತೈಃ ।
ನನಾದ ಬಲವನ್ನಾದಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೨೫॥

ಮಸೆಗಲ್ಲಿಗೆ ತಿಕ್ಕಿ ಹರಿತಗೊಳಿಸಿದ ಮತ್ತು ಚಿನ್ನದ ಪುಕ್ಕಗಳಿಂದ ಕೂಡಿದ ಬಾಣಗಳಿಂದ ಸಾತ್ಯಕಿ ಬಲವಾಗಿ ಹೊಡೆಸಿಕೊಂಡು, ದೊಡ್ಡ ಧ್ವನಿಯಿಂದ 'ನಿಲ್ಲು ನಿಲ್ಲೆಂ'ದು ಗರ್ಜಿಸಿದ.

ಸಾತ್ಯಕಿಂ ಚ ಪುನಸ್ತೂರ್ಣಂ ಕೇಕಯಾನಾಂ ಮಹಾರಥಃ ।
ಶರೈರಗ್ನಿಶಿಖಾಕಾರೈಃ ಬಾಹ್ವೋರುರಸಿ ಚಾರ್ಪಯತ್ ॥೨೬॥

ಆದರೂ ಮಹಾರಥನಾದ ವಿಂದನು ಪುನಃ ವೇಗವಾಗಿ ಬೆಂಕಿಯ ಜ್ವಾಲೆಯಂತಿರುವ ಬಾಣಗಳಿಂದ ಸಾತ್ಯಕಿಯನ್ನು ಎರಡು ತೋಳುಗಳಲ್ಲಿ ಮತ್ತು ಎದೆಯಲ್ಲಿ ಪ್ರಹಾರಮಾಡಿದ.

ಸ ಶರಾಹತಸರ್ವಾಂಗಃ ಸಾತ್ಯಕಿಃ ಸತ್ಯವಿಕ್ರಮಃ ।
ರರಾಜ ಸಮರೇ ರಾಜನ್ ಸಪುಷ್ಪ ಇವ ಕಿಂಶುಕಃ ॥೨೭॥

ಅಮೋಘ ಪರಾಕ್ರಮವುಳ್ಳ ಸಾತ್ಯಕಿಯು ಯುದ್ಧದಲ್ಲಿ ಬಾಣಗಳಿಂದ ಸರ್ವಾಂಗಗಳಲ್ಲಿ ಹೊಡೆಸಿಕೊಂಡು, ರಾಜನೆ, ಹೂಬಿಟ್ಟ ಮುತ್ತುಗದ ಮರದಂತೆ ಶೋಭಿಸಿದ.

ಸಾತ್ಯಕಿಃ ಸಮರೇ ವಿದ್ಧಃ ಕೈಕಯೇನ ಮಹಾತ್ಮನಾ ।
ಕೈಕೇಯಂ ಪಂಚವಿಂಶತ್ಯಾ ವಿವ್ಯಾಧ ಪ್ರಹಸನ್ನಿವ ॥೨೮॥

ಹೀಗೆ ಮಹಾತ್ಮಾ ವಿಂದನಿಂದ ಯುದ್ಧದಲ್ಲಿ ಹೊಡೆಸಿಕೊಂಡ ಸಾತ್ಯಕಿ ನಗುತ್ತ ಇಪ್ಪತ್ತೈದು ಬಾಣಗಳಿಂದ ಪ್ರಹರಿಸಿದ.

ತಾವನ್ಯೋನ್ಯಸ್ಯ ಧನುಷೀ ಸಂಛಿದ್ಯ ಸಮರೇ ಶುಭೇ ।
ಹತ್ವಾ ಚ ಸಾರಥೀ ತೂರ್ಣಂ ಹಯಾಂಶ್ಚ ರಥಿನಾಂ ವರೌ ॥೨೯॥

ವಿರಥಾವಸಿಯುದ್ಧಾಯ ಸಮಾಜಗ್ಮತುರಾಹವೇ ।
ಶತಚಂದ್ರಚಿತೇ ಗೃಹ್ಯ ಚರ್ಮಣೀ ಸುಭುಜೌ ತು ತೌ ॥೩೦॥

ವಿರೋಚೇತಾಂ ಮಹಾರಂಗೇ ನಿಸ್ತ್ರಿಂಶವರಧಾರಿಣೌ ।
ಯಥಾ ದೈವಾಸುರೇ ಯುದ್ಧೇ ಬಲಶಕ್ರೌ ಮಹಾಬಲೌ ॥೩೧॥

ಶ್ರೇಷ್ಠರಥಿಕರಾದ ಅವರಿಬ್ಬರೂ ಶುಭಕರವಾದ ಸಮರದಲ್ಲಿ ಪರಸ್ಪರ ಬಿಲ್ಲುಗಳನ್ನು ಕಡಿದು, ಸಾರಥಿಗಳನ್ನೂ ಕುದುರೆಗಳನ್ನೂ ಕೊಂದು, ರಥವಿಲ್ಲದವರಾಗಿ ರಣರಂಗದಲ್ಲಿ ಖಡ್ಗಯುದ್ಧಕ್ಕೆ ಜತೆಗೂಡಿದರು. ನೂರು ಚಂದ್ರ ಚಿಹ್ನೆಗಳಿಂದ ಕೂಡಿದ ಗುರಾಣಿ ಮತ್ತು ಶ್ರೇಷ್ಠವಾದ ಖಡ್ಗಗಳನ್ನು ಹಿಡಿದು ದೇವಾಸುರರ ಸಂಗ್ರಾಮದಲ್ಲಿ ಖಡ್ಗಯುದ್ಧಕ್ಕೆ ನಿಂತ ದೇವೇಂದ್ರ ಮತ್ತು ಬಲಾಸುರರಂತೆ ಕಂಗೊಳಿಸಿದರು.

ಮಂಡಲಾನಿ ತತಸ್ತೌ ತು ವಿಚರಂತೌ ಮಹಾರಣೇ ।
ಅನ್ಯೋನ್ಯಮಸಿಭಿಸ್ತೂರ್ಣಂ ಸಮಾಜಘ್ನತುರಾಹವೇ ॥೩೨॥

ರಣರಂಗದಲ್ಲಿ ಮಂಡಲಾಕಾರವಾಗಿ ಸಂಚರಿಸುತ್ತ ಮಹಾಯುದ್ಧದಲ್ಲಿ ಪರಸ್ಪರ ವೇಗವಾಗಿ ಖಡ್ಗಗಳಿಂದ ಹೊಡೆದರು.

ಅನ್ಯೋನ್ಯಸ್ಯ ವಧೇ ಚೈವ ಚಕ್ರತುರ್ಯತ್ನಮುತ್ತಮಮ್ ।
ಕೈಕೇಯಸ್ಯ ತತಶ್ಚರ್ಮ ದ್ವಿಧಾ ಚಿಚ್ಛೇದ ಸಾತ್ಯಕಿಃ ॥೩೩॥
ಸಾತ್ಯಕೇಶ್ಚ ತಥೈವಾಸೌ ಚರ್ಮ ಚಿಚ್ಛೇದ ಪಾರ್ಥಿವಃ ॥೩೪॥

ಪರಸ್ಪರ ವಧಕ್ಕೆ ಒಳ್ಳೆಯ ಪ್ರಯತ್ನ ಮಾಡಿದರು. ಸಾತ್ಯಕಿ ಕೈಕೇಯನ ಗುರಾಣಿಯನ್ನು ಎರಡಾಗಿ ಕತ್ತರಿಸಿದ. ಕೈಕೇಯನೂ ಸಾತ್ಯಕಿಯ ಗುರಾಣಿಯನ್ನು ಹಾಗೇ ಎರಡಾಗಿ ಕತ್ತರಿಸಿದ.

ಶೈನೇಯಶ್ಚರ್ಮ ಛಿತ್ವಾ ತು ತಾರಾಗಣಶತೈಶ್ಚಿತಮ್ ।
ಚಚಾರ ಮಂಡಲಾನ್ಯೇವ ಗತಪ್ರತ್ಯಾಗತಾನಿ ಚ ॥೩೫॥

ನೂರಾರು ನಕ್ಷತ್ರ ಪುಂಜಗಳ ಚಿಹ್ನೆಯಿಂದ ಕೂಡಿದ ಗುರಾಣಿಯನ್ನು ಕತ್ತರಿಸಿ ಸಾತ್ಯಕಿಯು ಗತ ಪ್ರತ್ಯಾಗತ ಮಂಡಲವಾಗಿ ಸಂಚರಿಸಿದ.

ಚರಂತಂ ತಂ ಮಹಾರಂಗೇ ನಿಸ್ತ್ರಿಂಶವರಧಾರಿಣಮ್ ।
ಅಪಹಸ್ತೇನ ಚಿಚ್ಛೇದ ಸಾತ್ಯಕಿಸ್ತ್ವರಯಾಽನ್ವಿತಃ ॥೩೬॥

ದೊಡ್ಡ ಖಡ್ಗವನ್ನು ಹಿಡಿದು ಸಂಚರಿಸುತ್ತಿದ್ದ ವಿಂದನನ್ನು ಮಹಾರಣಭೂಮಿಯಲ್ಲಿ ಸಾತ್ಯಕಿಯು ವೇಗವಾಗಿ ತನ್ನ ಮುಂಗೈಯಿಂದಲೇ ಖಡ್ಗದಿಂದ ಸೀಳಿದ.

ಸವರ್ಮಾ ಕೇಕಯೋ ರಾಜನ್ ದ್ವಿಧಾ ಚ್ಛಿನ್ನೋ ಮಹಾಹವೇ ।
ನಿಪಪಾತ ಮಹೇಷ್ವಾಸೋ ವಜ್ರಸನ್ನ ಇವಾಚಲಃ ॥೩೭॥

ಮಹಾಯುದ್ಧದಲ್ಲಿ ರಾಜನೆ, ಸಾತ್ಯಕಿಯಿಂದ ಮಹಾಬಿಲ್ಲಾರನಾದ ವಿಂದನು ಕವಚಯುಕ್ತನಾಗೇ ವಜ್ರಾಯುಧದ ಏಟಿಗೆ ತುತ್ತಾದ ಪರ್ವತದಂತೆ ಎರಡಾಗಿ ಸೀಳಿ ನೆಲದ ಮೇಲೆ ಬಿದ್ದ

ತಂ ನಿಹತ್ಯ ರಣೇ ಶೂರಃ ಶೈನೇಯೋ ರಥಸತ್ತಮಃ ।
ಯುಧಾಮನ್ಯೋ ರಥಂ ತೂರ್ಣಮಾರುರೋಹ ಪರಂತಪಃ ॥೩೮॥

ಮಹಾರಥಿಕನಾದ ಶತ್ರುನಾಶಕನಾದ ಶೂರ ಸಾತ್ಯಕಿ ಯುದ್ಧದಲ್ಲಿ ವಿಂದನನ್ನೂ ಕೊಂದು ಬೇಗನೆ ಯುಧಾಮನ್ಯುವಿನ ರಥವನ್ನು ಏರಿದ.

ತತೋಽನ್ಯಂ ರಥಮಾರುಹ್ಯ ವಿಧಿವತ್ ಕಲ್ಪಿತಂ ಪುನಃ ।
ಕೈಕಯಾನಾಂ ಮಹತ್ ಸೈನ್ಯಂ ವ್ಯಧಮತ್ ಸಾತ್ಯಕಿಃ ಶರೈಃ ॥೩೯॥

ಬಳಿಕ ಪುನಃ ವಿಧ್ಯುಕ್ತವಾಗಿ ಸಜ್ಜಾದ ಬೇರೆ ರಥವನ್ನು ಏರಿ ಸಾತ್ಯಕಿಯು ಬಾಣಗಳಿಂದ ಕೇಕಯರ ಮಹಾಸೈನ್ಯವನ್ನು ಸಂಹರಿಸಿದ.

ಸಾ ವಧ್ಯಮಾನಾ ಸಮರೇ ಕೇಕಯಾನಾಂ ಮಹಾಚಮೂಃ ।
ಸಮುತ್ಸೃಜ್ಯ ರಣೇ ಶಸ್ತ್ರಂ ಪ್ರದುದ್ರಾವ ದಿಶೋ ದಶ ॥೪೦॥

ಕೇಕಯರ ಆ ಮಹಾಸೈನ್ಯ ಯುದ್ಧದಲ್ಲಿ ಸಾತ್ಯಕಿಯ ದಾಳಿಗೆ ತುತ್ತಾಗಿ ಆಯುಧವನ್ನು ಚೆಲ್ಲಿ ಹತ್ತುದಿಕ್ಕುಗಳಿಗೆ ಪಲಾಯನ ಮಾಡಿತು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ತ್ರಯೋದಶೋಽಧ್ಯಾಯಃ ॥೧೩॥

❖

ಮಹಾಭಾರತತಾತ್ಪರ್ಯನಿರ್ಣಯ

ಸಂಕ್ಷೋಭ್ಯಮಾಣಂ ತದನೀಕಮೀಕ್ಷ್ಯ
ದ್ರೌಣೇ ರಥೇನ ಪ್ರತಿಜಗ್ಮಿವಾಂಸ್ತಮ್ ।
ತದ್ ಯುದ್ಧಮಾಸೀದತಿಘೋರಮದ್ಭುತಂ
ಪುರಾ ಯಥಾ ನಾಸ ಚ ಕಸ್ಯಚಿತ್ ಕ್ವಚಿತ್ ॥ ೫ ॥

ಭೀಮನಿಂದ ತನ್ನ ಸೇನೆ ಕ್ಷೋಭೆಗೊಳ್ಳುವುದನ್ನು ಕಂಡು ಅಶ್ವತ್ಥಾಮ ರಥದಿಂದ ಭೀಮನನ್ನು ಇದಿರಿಸಿದ. ಅವರ ಯುದ್ಧ ಬಲು ಘೋರ, ಅದ್ಭುತವಾಗಿತ್ತು. ಹಿಂದೆ ಯಾರಿಗೂ ಎಲ್ಲಿಯೂ ನಡೆದಿರಲಾದಂಥದ್ದಾಗಿತ್ತು.

ದೃಷ್ಟ್ವೈವ ತದ್ ದೇವಗಂಧರ್ವವಿಪ್ರಾ
ಊಚುರ್ನೇದೃಗ್ ದೃಷ್ಟಪೂರ್ವಂ ಸುಯುದ್ಧಮ್ ।
ನ ಚೋತ್ತರಂ ವಾಪಿ ಭವಿಷ್ಯತೀದೃಕ್
ಕಲಾಂ ಚ ಸರ್ವಾಣಿ ನ ಷೋಡಶೀಮಿಯುಃ ॥ ೬ ॥

ದೇವತೆಗಳೂ ಗಂಧರ್ವರೂ ಮುನಿಗಳೂ ನೋಡಿದೊಡನೆ ಹೇಳಿದರು. 'ಇಂಥ ಒಳ್ಳೆಯ ಯುದ್ಧವನ್ನು ಹಿಂದೆ ಎಂದೂ ನಾವು ಕಂಡಿರಲಿಲ್ಲ. ಮುಂದೆ ಇಂಥ ಯುದ್ಧ ನಡೆಯಲಾರದು. ಹಿಂದು ಮುಂದಿನ ಎಲ್ಲ ಯುದ್ಧಗಳೂ ಈ ಯುದ್ಧದ ಹದಿನಾರನೆ ಒಂದಂಶಕ್ಕೆ ಸಮವಾಗಲಾರವು' ಎಂದು.

ನೈತಾದೃಶೀ ಜ್ಞಾನಸಂಪದ್ ಬಲಂ ವಾ
ದ್ವಯಂ ಕುತೋ ವಾಯುಮೃತೇ ಶಿವಂ ತಥಾ ।
ದ್ವಯೋಃ ಸಮಾಹಾರ ಇಹ ದ್ವಯೋರಪಿ
ಜ್ಞಾನಸ್ಯ ಬಾಹ್ವೋಶ್ಚ ಬಲಸ್ಯ ಸೂರ್ಜಿತಃ ॥ ೭ ॥

'ಇಂಥ ಜ್ಞಾನಸಂಪತ್ತಾಗಲಿ ಇಂಥ ಬಲವಾಗಲಿ ವಾಯುವಿನಲ್ಲಿ ಮತ್ತು ಶಿವನಲ್ಲಿ ಹೊರತು ಇನ್ನೆಲ್ಲಿಯೂ ಇಲ್ಲ. ಈ ಎರಡೂ ಸೇರಿರುವುದು ಇನ್ನೆಲ್ಲಿ? ಇವರಿಬ್ಬರ ಜ್ಞಾನಬಲ ಮತ್ತು ಬಾಹುಗಳ ಬಲ ಈ ಎರಡರ ಉತ್ತಮವಾದ ಮೇಲನ ಇವರಿಬ್ಬರಲ್ಲಿ ಮಾತ್ರವಿದೆ.'

ಇತೀರ್ಯಮಾಣೇ ವಿಬುಧೈರ್ನರೋತ್ತಮೌ
ದಿಶಃ ಸಮಸ್ತಾ ಗಗನಂ ಚ ಪತ್ರಿಭಿಃ ।
ನಿರಂತರಂ ಚಕ್ರತುರುತ್ತಮೌಜಸೌ
ದೃಷ್ಟ್ವೈವ ತತ್ಪ್ರೀತಿಮಗುರ್ಮಹಾರಥಾಃ ॥ ೮ ॥

ಹೀಗೆ ದೇವತೆಗಳು ಮಾತನಾಡಿಕೊಳ್ಳುತ್ತಿದ್ದಾಗ ಮಹಾಬಲಶಾಲಿಗಳಾದ ಪುರುಷಶ್ರೇಷ್ಠರಾದ ಆ ಭೀಮ, ಅಶ್ವತ್ಥಾಮರು ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ಆಕಾಶವನ್ನೂ ಪೂರ್ತಿ ತುಂಬಿಸಿದರು. ಅದನ್ನು ನೋಡಿದ ಮಾತ್ರಕ್ಕೆ ಮಹಾರಥಿಕರು ಆನಂದಪಟ್ಟರು.

❖

ಹದಿನಾಲ್ಕನೆಯ ಅಧ್ಯಾಯ

ಶ್ರುತಕರ್ಮನಿಂದ ಚಿತ್ರಸೇನವಧ. ಪ್ರತಿವಿಂದ್ಯನಿಂದ ಚಿತ್ರನ ವಧ.
ಭೀಮಾಶ್ವತ್ಥಾಮರ ಯುದ್ಧ ಘೋರ, ಅದ್ಭುತ.

ಸಂಜಯಃ

ಶ್ರುತಕರ್ಮಾ ಮಹಾರಾಜ ಚಿತ್ರಸೇನಂ ಮಹೀಪತಿಮ್ ।
ಆಜಘಾನ ರಣೇ ಕ್ರುದ್ಧಃ ಪಂಚಾಶದ್ಭಿಃ ಶಿಲೀಮುಖೈಃ ॥೧॥

ಸಂಜಯ ನುಡಿದ— ಮಹಾರಾಜ, ಸಹದೇವ ಪುತ್ರನಾದ ಶ್ರುತಕರ್ಮನು ಯುದ್ಧದಲ್ಲಿ ಕ್ರುದ್ಧನಾಗಿ ರಾಜಾಚಿತ್ರಸೇನನನ್ನು ಐವತ್ತು ಬಾಣಗಳಿಂದ ಹೊಡೆದ.

ಅಭಿಸಾರಸ್ತು ತಂ ರಾಜನ್ ನವಭಿರ್ನಿಶಿತೈಃ ಶರೈಃ ।
ಶ್ರುತಕರ್ಮಾಣಮಾಹತ್ಯ ಸೂತಂ ವಿವ್ಯಾಧ ಪಂಚಭಿಃ ॥೨॥

ಅಭಿಸಾರ ದೇಶಾಧಿಪತಿಯಾದ ಚಿತ್ರಸೇನನು, ರಾಜನೆ, ಆ ಶ್ರುತಕರ್ಮನನ್ನು ಹರಿತವಾದ ಒಂಬತ್ತು ಬಾಣಗಳಿಂದ ಹೊಡೆದು ಐದು ಬಾಣಗಳಿಂದ ಅವನ ಸಾರಥಿಯನ್ನೂ ಹೊಡೆದ.

ಶ್ರುತಕರ್ಮಾ ತತಃ ಕ್ರುದ್ಧಶ್ಚಿತ್ರಸೇನಂ ಚಮೂಮುಖೇ ।
ನಾರಾಚೇನ ಸುತೀಕ್ಷ್ಣೇನ ಮರ್ಮದೇಶೇ ಸಮಾರ್ಪಯತ್ ॥೩॥

ಆಗ ಶ್ರುತಕರ್ಮ ಕುಪಿತನಾಗಿ ಸೈನ್ಯದ ಮುಂಭಾಗದಲ್ಲಿ ತೀಕ್ಷ್ಣವಾದ ಬಾಣದಿಂದ ಚಿತ್ರಸೇನನನ್ನು ಮರ್ಮಸ್ಥಳದಲ್ಲಿ ಹೊಡೆದ.

ಸೋಽತಿವಿದ್ಧೋ ಮಹಾರಾಜ ತದಾ ತೇನ ಮಹಾತ್ಮನಾ ।
ಮೂರ್ಚ್ಛಾಮಪಿ ಜಗಾಮಾಶು ಕಶ್ಮಲಂ ಚ ಸಮಾವಿಶತ್ ॥೪॥

ಮಹಾರಾಜ, ಚಿತ್ರಸೇನನು ಮಹಾತ್ಮ ಶ್ರುತಕರ್ಮನಿಂದ ಬಹಳ ಗಾಯ ಗೊಂಡು ಮೈಮರೆತ. ಮೂರ್ಛೆಯನ್ನೂ ಹೊಂದಿದ.

ಏತಸ್ಮಿನ್ನಂತರೇ ಚೈವ ಶ್ರುತಕರ್ಮಾ ಮಹಾಯಶಾಃ ।
ನವತ್ಯಾ ಜಗತೀಪಾಲಂ ಛಾದಯಾಮಾಸ ಪತ್ರಿಭಿಃ ॥೫॥

ಇದೇ ಸಮಯದಲ್ಲಿ ಮಹಾಕೀರ್ತಿಶಾಲಿಯಾದ ಶ್ರುತಕರ್ಮನು ರಾಜನನ್ನು ತೊಂಬತ್ತು ಬಾಣಗಳಿಂದ ಮುಚ್ಚಿದ.

ಪ್ರತಿಲಭ್ಯ ತತಃ ಸಂಜ್ಞಾಂ ಚಿತ್ರಸೇನೋ ಮಹಾಬಲಃ ।
ಧನುಶ್ಚಿಚ್ಛೇದ ಭಲ್ಲೇನ ತಂ ಚ ವಿವ್ಯಾಧ ಸಪ್ತಭಿಃ ॥೬॥

ಅಷ್ಟರಲ್ಲಿ ಮಹಾಬಲಿ ಚಿತ್ರಸೇನ ಎಚ್ಚರಗೊಂಡು ಭಲ್ಲೆಯಿಂದ ಶ್ರುತಕರ್ಮನ ಬಿಲ್ಲನ್ನು ಕತ್ತರಿಸಿ ಅವನನ್ನು ಏಳು ಬಾಣಗಳಿಂದ ಪ್ರಹರಿಸಿದ.

ಸೋಽನ್ಯತ್ ಕಾರ್ಮುಕಮಾದಾಯ ವೇಗಘ್ನಂ ರುಗ್ಮಭೂಷಿತಮ್ ।
ಚಿತ್ರಸೇನಂ ಶರೈಶ್ಚಿತ್ರೈಶ್ಚಿತ್ರರೂಪಮಥಾಕರೋತ್ ॥೭॥

ಶ್ರುತಕರ್ಮನು ಶತ್ರುಗಳ ವೇಗವನ್ನು ತಡೆಯಬಲ್ಲ ಬಂಗಾರದಿಂದ ಅಲಂಕೃತವಾದ ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಚಿತ್ರಸೇನನನ್ನು ವಿಚಿತ್ರ ಬಾಣಗಳಿಂದ ಹೊಡೆದು ವಿಚಿತ್ರರೂಪನನ್ನಾಗಿ ಮಾಡಿದ.

ಸ ಶರೈಶ್ಚಿತ್ರಿತೋ ರಾಜಾ ಚಿತ್ರಮಾಲ್ಯಧರೋ ಯುವಾ ।
ಅಶೋಭತ ಮಹಾರಂಗೇ ಶ್ವಾವಿಚ್ಛಲಲತೋ ಯಥಾ ॥೮॥

ಸುಂದರ ಮಾಲೆಗಳನ್ನು ಧರಿಸಿದ್ದ ರಾಜಾ ಚಿತ್ರಸೇನ ಮಹಾರಣಭೂಮಿಯಲ್ಲಿ ಮೈಯೆಲ್ಲ ಬಾಣಗಳಿಂದ ಅಲಂಕೃತನಾದಾಗ ಮುಳ್ಳುಗಳಿಂದ ಕೂಡಿದ ಮುಳ್ಳು ಹಂದಿಯಂತೆ ಕಂಗೊಳಿಸಿದ.

ರಾಜಾ ತು ಶ್ರುತಕರ್ಮಾಣಂ ನಾರಾಚೇನ ಸ್ತನಾಂತರೇ ।
ಬಿಭೇದ ಸಮರೇ ಕ್ರೂರಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥೯॥

ಸಮರದಲ್ಲಿ ಕ್ರೂರನಾದ ರಾಜನು ಶ್ರುತಕರ್ಮನನ್ನು ಎದೆಯಲ್ಲಿ ಬಾಣದಿಂದ ಹೊಡೆದ ಮತ್ತು ನಿಲ್ಲುನಿಲ್ಲೆಂದು ಗರ್ಜಿಸಿದ.

ಶ್ರುತಕರ್ಮಾ ತು ಸಮರೇ ನಾರಾಚೇನ ಸಮರ್ಪಿತಃ ।
ಸುಸ್ರಾವ ರುಧಿರಂ ತತ್ರ ಗೈರಿಕಾಂಬು ಯಥಾಽಚಲಃ ॥೧೦॥

ಶ್ರುತಕರ್ಮನು ಯುದ್ಧದಲ್ಲಿ ಬಾಣದಿಂದ ಗಾಯಗೊಂಡು ನೆತ್ತರು, ಗೈರಿಕಧಾತುವಿನಿಂದ ಕೂಡಿದ ಕೆನ್ನೀರನ್ನು ಬೆಟ್ಟವು ಸುರಿಸುವಂತೆ ಸುರಿಸಿದ.

ತತಃ ಸ ರುಧಿರಾಕ್ತಾಂಗೋ ರುಧಿರಾದ್ರ್ಯೇಕತಚ್ಛವಿಃ ।
ರರಾಜ ಸಮರೇ ರಾಜನ್ ಸಪುಷ್ಪ ಇವ ಕಿಂಶುಕಃ ॥೧೧॥

ಮೈಯೆಲ್ಲ ರಕ್ತದಿಂದ ತೊಯ್ದು ರಕ್ತದಿಂದ ಮಿದುವಾದ ಕಾಂತಿ ಸೂಸುತ್ತ ಶ್ರುತಕರ್ಮನು ಯುದ್ಧದಲ್ಲಿ ರಾಜನೆ, ಹೂಬಿಟ್ಟ ಮುತ್ತುಗದ ಮರದಂತೆ ಶೋಭಿಸಿದ.

ಶ್ರುತಕರ್ಮಾ ಮಹಾರಾಜ ಶತ್ರುಣಾ ಸಮಭಿದ್ರುತಃ ।
ಶತ್ರುಸಂವರಣಂ ಕ್ರುದ್ಧೋ ದ್ವಿಧಾ ಚಿಚ್ಛೇದ ಕಾರ್ಮುಕಮ್ ॥೧೨॥

ಶತ್ರುವಿನಿಂದ ಹೀಗೆ ಆಕ್ರಮಿಸಲ್ಪಟ್ಟ ಶ್ರುತಕರ್ಮನು ಕ್ರುದ್ಧನಾಗಿ ಶತ್ರುವನ್ನು ತಡೆಯಬಲ್ಲ ಶತ್ರುವಿನ ಬಿಲ್ಲನ್ನು ಎರಡಾಗಿ ತುಂಡರಿಸಿದ.

ಅಥೈನಂ ಛಿನ್ನಧನ್ವಾನಂ ನಾರಾಚಾನಾಂ ಶತೈಸ್ತ್ರಿಭಿಃ ।
ವಿವ್ಯಾಧ ಭರತಶ್ರೇಷ್ಠ ಶ್ರುತಕರ್ಮಾ ಮಹಾಯಶಾಃ ॥೧೩॥

ನವತ್ಯಾ ಜಗತೀಪಾಲಂ ಛಾದಯನ್ ನತಪರ್ವಭಿಃ ॥೧೪॥

ಬಳಿಕ, ರಾಜನೆ, ಮಹಾಕೀರ್ತಿಶಾಲಿಯಾದ ಶ್ರುತಕರ್ಮನು ಬಿಲ್ಲನ್ನು ಕಡಿದುಕೊಂಡಿದ್ದ ರಾಜನನ್ನು ಮುನ್ನೂರು ಬಾಣಗಳಿಂದ ಹೊಡೆದ. ಡೊಂಕು ಗಿಣ್ಣಿನ ತೊಂಬತ್ತು ಬಾಣಗಳಿಂದ ಅವನನ್ನು ಮುಚ್ಚಿದ.

ತತೋಽಪರೇಣ ಭಲ್ಲೇನ ಭೃಶಂ ತೀಕ್ಷ್ಣೇನ ಸತ್ವರಃ ।
ಜಹಾರ ಸಶಿರಸ್ತ್ರಾಣಂ ಶಿರಸ್ತಸ್ಯ ಮಹಾತ್ಮನಃ ॥೧೫॥

ಬಳಿಕ ತ್ವರೆಯಿಂದ ಅತಿ ತೀಕ್ಷ್ಣವಾದ ಇನ್ನೊಂದು ಭಲ್ಲೆಯಿಂದ ಮಹಾತ್ಮನಾದ ರಾಜನ ಶಿರಸ್ತ್ರಾಣಯುಕ್ತವಾದ ಶಿರಸ್ಸನ್ನೇ ಕತ್ತರಿಸಿದ.

ತಚ್ಛಿರೋ ನ್ಯಪತದ್ ಭೂಮೌ ಚಿತ್ರಸೇನಸ್ಯ ದೀಪ್ತಿಮತ್ ।
ಯದೃಚ್ಛಯಾ ಯಥಾ ಚಂದ್ರಶ್ಚ್ಯುತಃ ಸ್ವರ್ಗಾನ್ಮಹೀತಳೇ ॥೧೬॥

ಅಕಸ್ಮಾತ್ ಸ್ವರ್ಗದಿಂದ ಕಳಚಿ ಭೂಮಿಯಲ್ಲಿ ಚಂದ್ರ ಬಿದ್ದರೆ ಹೇಗೋ ಹಾಗೆ ಚಿತ್ರಸೇನನ ಪ್ರಕಾಶಮಾನವಾದ ಶಿರವು ಭೂಮಿಯಲ್ಲಿ ಬಿದ್ದಿತು.

ರಾಜಾನಂ ನಿಹತಂ ದೃಷ್ಟ್ವಾ ಅಭಿಸಾರಾಸ್ತು ಮಾರಿಷ ।
ಅಭ್ಯದ್ರವಂತ ವೇಗೇನ ಶ್ರುತಕರ್ಮಾಣಮಾಹವೇ ॥೧೭॥

ರಾಜನೆ, ಅಭಿಸಾರದೇಶದ ಸೈನಿಕರು ತಮ್ಮ ರಾಜನು ರಣರಂಗದಲ್ಲಿ ಹತನಾದುದನ್ನು ಕಂಡು ವೇಗದಿಂದ ಶ್ರುತಕರ್ಮನ ಮೇಲೇರಿ ಬಂದರು.

ತತಃ ಕ್ರುದ್ಧೋ ಮಹೇಷ್ವಾಸಃ ತತ್ಸೈನ್ಯಂ ಸಮಭಿದ್ರವತ್ ।
ಅಂತಕಾಲೇ ಯಥಾ ಕ್ರುದ್ಧಃ ಸರ್ವಭೂತಾನಿ ಚಾಂತಕಃ ॥೧೮॥

ಆಗ ಅಂತ್ಯಕಾಲದಲ್ಲಿ ಯಮ ಎಲ್ಲ ಜಂತುಗಳ ಮೇಲೆ ಕ್ರುದ್ಧನಾಗುವಂತೆ ಮಹಾಬಿಲ್ಲಾರ ಶ್ರುತಕರ್ಮ ಕ್ರುದ್ಧನಾಗಿ ಆ ಸೈನ್ಯವನ್ನು ಓಡಿಸಿದ.

ತೇ ವಧ್ಯಮಾನಾಃ ಸಮರೇ ತವ ಪೌತ್ರೇಣ ಧನ್ವಿನಾ ।
ವ್ಯದ್ರವಂತ ದಿಶಸ್ತೂರ್ಣಂ ಮೃಗಾ ವ್ಯಾಘ್ರಾರ್ದಿತಾ ಇವ ॥೧೯॥

ರಾಜನೆ, ಬಿಲ್ಲಾರನಾದ ನಿನ್ನ ಮೊಮ್ಮಗ ಶ್ರುತಕರ್ಮನಿಂದ ಹೊಡೆಸಿಕೊಂಡು, ಹುಲಿಯಿಂದ ಪೀಡಿತವಾದ ಮೃಗಗಳಂತೆ, ಆ ಸೈನಿಕರು ಬೇಗನೆ ಎಲ್ಲ ದಿಕ್ಕುಗಳಿಗೆ ಓಡಿದರು.

ತಾಂಸ್ತು ವಿದ್ರವತೋ ದೃಷ್ಟ್ವಾ ನಿರುತ್ಸಾಹಾನ್ ದ್ವಿಷಜ್ಜಯೇ ।
ದ್ರಾವಯನ್ನಿಷುಭಿಸ್ತೂರ್ಣಂ ಶ್ರುತಕರ್ಮಾ ವ್ಯರೋಚತ ॥೨೦॥

ಶತ್ರುಗಳನ್ನು ಪರಾಭವಗೊಳಿಸುವಲ್ಲಿ ನಿರುತ್ಸಾಹಿಗಳಾಗಿ ಆ ಸೈನಿಕರು ಓಡಲು ತೊಡಗಿದುದನ್ನು ಕಂಡು ಶ್ರುತಕರ್ಮನು ಅವರನ್ನು ವೇಗವಾಗಿ ಬಾಣಗಳಿಂದ ಹೊಡೆದೋಡಿಸಿದ.

ಪ್ರತಿವಿಂಧ್ಯಸ್ತತಶ್ಚಿತ್ರಂ ವಿದ್ಧ್ವಾ ಪಂಚಭಿರಾಯಸೈಃ ।
ಸಾರಥಿಂ ತ್ರಿಭಿರಾನರ್ಚ್ಛದ್ ಧ್ವಜಮೇಕೇನ ಪತ್ರಿಣಾ ॥೨೧॥

ಯುಧಿಷ್ಠಿರನ ಪುತ್ರ ಪ್ರತಿವಿಂಧ್ಯನು ಚಿತ್ರರಾಜನನ್ನು ಐದು ಕಬ್ಬಿಣದ ಬಾಣಗಳಿಂದ ಹೊಡೆದು ಮೂರು ಬಾಣಗಳಿಂದ ಸಾರಥಿಯನ್ನು ಹೊಡೆದ. ಒಂದು ಬಾಣದಿಂದ ಧ್ವಜವನ್ನು ಕತ್ತರಿಸಿದ.

ತಂ ಚಿತ್ರೋ ನವಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ।
ಸ್ವರ್ಣಪುಂಖೈಃ ಶಿಲಾಧೌತೈಃ ಕಂಕಬರ್ಹಿಣವಾಜಿತೈಃ ॥೨೨॥

ಚಿತ್ರರಾಜನು ಚಿನ್ನದ ಬುಡ ಹರಿತವಾದ ತುದಿ ಮತ್ತು ಹದ್ದು ನವಿಲುಗಳ ಪುಕ್ಕಗಳುಳ್ಳ ಒಂಬತ್ತು ಬಾಣಗಳಿಂದ ಪ್ರತಿವಿಂಧ್ಯನನ್ನು ತೋಳುಗಳಲ್ಲಿಯೂ ಎದೆಯಲ್ಲಿಯೂ ಘಾಸಿಗೊಳಿಸಿದ.

ಪ್ರತಿವಿಂಧ್ಯೋ ಧನುಸ್ತಸ್ಯ ಚ್ಛಿತ್ತ್ವಾ ಭಾರತ ಸಾಯಕೈಃ ।
ಪಂಚಭಿರ್ನಿಶಿತೈರ್ಬಾಣೈರಥೈನಮಭಿಜಘ್ನಿವಾನ್ ॥೨೩॥

ಪ್ರತಿವಿಂಧ್ಯನು ಬಾಣಗಳಿಂದ ಚಿತ್ರರಾಜನ ಬಿಲ್ಲನ್ನು ಕಡಿದು, ಬಳಿಕ ಐದು ಹರಿತವಾದ ಬಾಣಗಳಿಂದ ರಾಜನನ್ನು ಹೊಡೆದ.

ತತಃ ಶಕ್ತಿಂ ಮಹಾರಾಜ ಹೇಮದಂಡಾಂ ದುರಾಸದಾಮ್ ।
ಪ್ರಾಹಿಣೋತ್ ಪ್ರತಿವಿಂಧ್ಯಾಯ ವಿಚಿನ್ವಂತೀಮಸೂನಿವ ॥೨೪॥

ಆಗ, ಮಹಾರಾಜ, ಶತ್ರುವಿನ ಪ್ರಾಣಗಳನ್ನು ಅವನ ಹೃದಯದಲ್ಲಿ ಅರಸುವಂತಿರುವ ಶತ್ರುಗಳಿಗೆ ತಡೆಯಲಸಾಧ್ಯವಾದ, ಬಂಗಾರದ ಕೋಲಿನ ಶಕ್ತ್ಯಾಯುಧವನ್ನು ಚಿತ್ರರಾಜ ಪ್ರತಿವಿಂಧ್ಯನ ಮೇಲೆ ಎಸೆದ.

ತಾಮಾಪತಂತೀಂ ಸಹಸಾ ಶಕ್ತಿಮುಲ್ಕಾಮಿವಾಂಬರಾತ್ ।
ತ್ರಿಧಾ ಚಿಚ್ಛೇದ ಸಮರೇ ಪ್ರತಿವಿಂಧ್ಯೋ ಹಸನ್ನಿವ ॥೨೫॥

ತನ್ನ ಮೈಮೇಲೆ ಆಗಸದಿಂದ ಉಲ್ಕೆಯಂತೆ ಬಂದೆರಗುತ್ತಿದ್ದ ಆ ಶಕ್ತ್ಯಾಯುಧವನ್ನು ಒಡನೆ ಪ್ರತಿವಿಂಧ್ಯನು ನಗುತ್ತ ರಣರಂಗದಲ್ಲಿ ಮೂರಾಗಿ ಕಡಿದು ಬೀಳಿಸಿದ.

ಸಾ ಪಪಾತ ತ್ರಿಧಾ ಚ್ಛಿನ್ನಾ ಪ್ರತಿವಿಂಧ್ಯಶರೈಸ್ತ್ರಿಭಿಃ ।
ಯುಗಾಂತೇ ಸರ್ವಭೂತಾನಿ ತ್ರಾಸಯಂತೀ ಯಥಾऽಶನಿಃ ॥೨೬॥

ಆ ಶಕ್ತ್ಯಾಯುಧವು ಯುಗಾಂತ್ಯದಲ್ಲಿ ಎಲ್ಲ ಜಂತುಗಳನ್ನೂ ಭಯಪಡಿಸುವ ಸಿಡಿಲಿನಂತಿದ್ದರೂ ಅದು ಪ್ರತಿವಿಂಧ್ಯನ ಮೂರು ಬಾಣಗಳಿಂದ ಮೂರು ಭಾಗವಾಗಿ ಕಡಿದು ಬಿದ್ದಿತು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಚಿತ್ರೋ ಗೃಹ್ಯ ಮಹಾಗದಾಮ್ ।
ಪ್ರತಿವಿಂಧ್ಯಾಯ ಚಿಕ್ಷೇಪ ರುಗ್ಮಪಟ್ಟೈರ್ವಿಭೂಷಿತಾಮ್ ॥೨೭॥

ಶಕ್ಯಾಯುಧವು ನಾಶವಾದುದನ್ನು ಕಂಡು ಚಿತ್ರರಾಜನು ಚಿನ್ನದ ಬಲೆಯಿಂದ ಅಲಂಕೃತವಾದ ಮಹಾಗದೆಯನ್ನು ಎತ್ತಿಕೊಂಡು ಪ್ರತಿವಿಂಧ್ಯನ ಮೇಲೆಸೆದ.

ಸಾ ಹತ್ವಾ ಸಹಸಾ ಸೂತಂ ಹಯಾಂಸ್ತಸ್ಯ ಮಹಾತ್ಮನಃ ।
ರಥಂ ಪ್ರಮೃದ್ಯ ವೇಗೇನ ಧರಣೀಮನ್ವಪದ್ಯತ ॥೨೮॥

ಆ ಗದೆಯು ಕ್ಷಣದಲ್ಲಿ ಮಹಾತ್ಮನಾದ ಪ್ರತಿವಿಂಧ್ಯನ ಸಾರಥಿಯನ್ನು ಕುದುರೆಗಳನ್ನೂ ರಥವನ್ನೂ ಪುಡಿಮಾಡಿ ವೇಗದಿಂದ ನೆಲದಲ್ಲಿ ನೆಟ್ಟಿತು.

ಪ್ರತಿವಿಂಧ್ಯಸ್ತತಃ ಕ್ರುದ್ಧೋ ರಥಾದಾಪ್ಲುತ್ಯ ಭಾರತ ।
ಶಕ್ತಿಂ ಚಿಕ್ಷೇಪ ಚಿತ್ರಾಯ ಸ್ವರ್ಣದಂಡಾಮಲಂಕೃತಾಮ್ ॥೨೯॥

ರಾಜನೆ, ಪ್ರತಿವಿಂಧ್ಯನು ಆಗ ಕುಪಿತನಾಗಿ ರಥದಿಂದ ಕೆಳಗೆ ಹಾರಿ ಚಿತ್ರರಾಜನ ಮೇಲೆ ಬಂಗಾರದ ದಂಡವಿರುವ, ಅಲಂಕೃತವಾದ ಶಕ್ಯಾಯುಧವನ್ನೆಸೆದ.

ತಾಮಾಪತಂತೀಂ ಜಗ್ರಾಹ ಚಿತ್ರೋ ರಾಜನ್ ಮಹಾಮನಾಃ ।
ತತಸ್ತಾಮೇವ ಚಿಕ್ಷೇಪ ಪ್ರತಿವಿಂಧ್ಯಾಯ ಪಾರ್ಥಿವಃ ॥೩೦॥

ರಾಜನೆ, ಮಹಾಬುದ್ಧಿಶಾಲಿಯಾದ ಚಿತ್ರರಾಜನು ತನ್ನ ಮೇಲೆರಗುತ್ತಿದ್ದ ಶಕ್ಯಾಯುಧವನ್ನು ಹಿಡಿದುಕೊಂಡ. ಆದನ್ನೇ ಪ್ರತಿವಿಂಧ್ಯನ ಮೇಲೆಸೆದ.

ಸಾ ಸಮಾಸಾದ್ಯ ತಂ ಶೂರಂ ಪ್ರತಿವಿಂಧ್ಯಂ ಮಹಾಪ್ರಭಾ ।
ನಿರ್ಭಿದ್ಯ ದಕ್ಷಿಣಂ ಬಾಹುಂ ನಿಪಪಾತ ಮಹೀತಳೇ ॥೩೧॥

ಮಹಾಪ್ರಭೆಯುಳ್ಳ ಆ ಶಕ್ಯಾಯುಧವು ಶೂರನಾದ ಪ್ರತಿವಿಂಧ್ಯನ ಮೇಲೆ ಬಿದ್ದು ಅವನ ಬಲಭುಜವನ್ನು ಗಾಯಗೊಳಿಸಿ ನೆಲದಲ್ಲಿ ಬಿದ್ದಿತು.

ಪತಿತಾऽಭಾಸಯಚ್ಚೈವ ತಂ ದೇಶಮಶನಿರ್ಯಥಾ ॥೩೨॥

ಬಿದ್ದ ಆ ಆಯುಧವು ಮಿಂಚಿನಂತೆ ಆ ಪ್ರದೇಶವನ್ನು ಬೆಳಗಿತು.

ತಂ ಚಿತ್ರೋ ನವಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ।
ಸ್ವರ್ಣಪುಂಖೈಃ ಶಿಲಾಧೌತೈಃ ಕಂಕಬರ್ಹಿಣವಾಜಿತೈಃ ॥೨೨॥

ಚಿತ್ರರಾಜನು ಚಿನ್ನದ ಬುಡ ಹರಿತವಾದ ತುದಿ ಮತ್ತು ಹದ್ದು ನವಿಲುಗಳ ಪುಕ್ಕಗಳುಳ್ಳ ಒಂಬತ್ತು ಬಾಣಗಳಿಂದ ಪ್ರತಿವಿಂಧ್ಯನನ್ನು ತೋಳುಗಳಲ್ಲಿಯೂ ಎದೆಯಲ್ಲಿಯೂ ಘಾಸಿಗೊಳಿಸಿದ.

ಪ್ರತಿವಿಂಧ್ಯೋ ಧನುಸ್ತಸ್ಯ ಚ್ಛಿತ್ತ್ವಾ ಭಾರತ ಸಾಯಕೈಃ ।
ಪಂಚಭಿರ್ನಿಶಿತೈರ್ಬಾಣೈರಥೈನಮಭಿಜಘ್ನಿವಾನ್ ॥೨೩॥

ಪ್ರತಿವಿಂಧ್ಯನು ಬಾಣಗಳಿಂದ ಚಿತ್ರರಾಜನ ಬಿಲ್ಲನ್ನು ಕಡಿದು, ಬಳಿಕ ಐದು ಹರಿತವಾದ ಬಾಣಗಳಿಂದ ರಾಜನನ್ನು ಹೊಡೆದ.

ತತಃ ಶಕ್ತಿಂ ಮಹಾರಾಜ ಹೇಮದಂಡಾಂ ದುರಾಸದಾಮ್ ।
ಪ್ರಾಹಿಣೋತ್ ಪ್ರತಿವಿಂಧ್ಯಾಯ ವಿಚಿನ್ವಂತೀಮಸೂನಿವ ॥೨೪॥

ಆಗ, ಮಹಾರಾಜ, ಶತ್ರುವಿನ ಪ್ರಾಣಗಳನ್ನು ಅವನ ಹೃದಯದಲ್ಲಿ ಅರಸುವಂತಿರುವ ಶತ್ರುಗಳಿಗೆ ತಡೆಯಲಸಾಧ್ಯವಾದ, ಬಂಗಾರದ ಕೋಲಿನ ಶಕ್ತ್ಯಾಯುಧವನ್ನು ಚಿತ್ರರಾಜ ಪ್ರತಿವಿಂಧ್ಯನ ಮೇಲೆ ಎಸೆದ.

ತಾಮಾಪತಂತೀಂ ಸಹಸಾ ಶಕ್ತಿಮುಲ್ಕಾಮಿವಾಂಬರಾತ್ ।
ತ್ರಿಧಾ ಚಿಚ್ಛೇದ ಸಮರೇ ಪ್ರತಿವಿಂಧ್ಯೋ ಹಸನ್ನಿವ ॥೨೫॥

ತನ್ನ ಮೈಮೇಲೆ ಆಗಸದಿಂದ ಉಲ್ಕೆಯಂತೆ ಬಂದೆರಗುತ್ತಿದ್ದ ಆ ಶಕ್ತ್ಯಾಯುಧವನ್ನು ಒಡನೆ ಪ್ರತಿವಿಂಧ್ಯನು ನಗುತ್ತ ರಣರಂಗದಲ್ಲಿ ಮೂರಾಗಿ ಕಡಿದು ಬೀಳಿಸಿದ.

ಸಾ ಪಪಾತ ತ್ರಿಧಾ ಚ್ಛಿನ್ನಾ ಪ್ರತಿವಿಂಧ್ಯಶರೈಸ್ತ್ರಿಭಿಃ ।
ಯುಗಾಂತೇ ಸರ್ವಭೂತಾನಿ ತ್ರಾಸಯಂತೀ ಯಥಾಽಶನಿಃ ॥೨೬॥

ಆ ಶಕ್ತ್ಯಾಯುಧವು ಯುಗಾಂತ್ಯದಲ್ಲಿ ಎಲ್ಲ ಜಂತುಗಳನ್ನೂ ಭಯಪಡಿಸುವ ಸಿಡಿಲಿನಂತಿದ್ದರೂ ಅದು ಪ್ರತಿವಿಂಧ್ಯನ ಮೂರು ಬಾಣಗಳಿಂದ ಮೂರು ಭಾಗವಾಗಿ ಕಡಿದು ಬಿದ್ದಿತು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಚಿತ್ರೋ ಗೃಹ್ಯ ಮಹಾಗದಾಮ್ ।
ಪ್ರತಿವಿಂಧ್ಯಾಯ ಚಿಕ್ಷೇಪ ರುಗ್ಮಪಟ್ಟೈರ್ವಿಭೂಷಿತಾಮ್ ॥೨೭॥

ಶಕ್ಯಾಯುಯಧವು ನಾಶವಾದುದನ್ನು ಕಂಡು ಚಿತ್ರರಾಜನು ಚಿನ್ನದ ಬಲೆಯಿಂದ ಅಲಂಕೃತವಾದ ಮಹಾಗದೆಯನ್ನು ಎತ್ತಿಕೊಂಡು ಪ್ರತಿವಿಂಧ್ಯನ ಮೇಲೆಸೆದ.

ಸಾ ಹತ್ವಾ ಸಹಸಾ ಸೂತಂ ಹಯಾಂಸ್ತಸ್ಯ ಮಹಾತ್ಮನಃ ।
ರಥಂ ಪ್ರಮೃದ್ಯ ವೇಗೇನ ಧರಣೀಮನ್ವಪದ್ಯತ ॥೨೮॥

ಆ ಗದೆಯು ಕ್ಷಣದಲ್ಲಿ ಮಹಾತ್ಮನಾದ ಪ್ರತಿವಿಂಧ್ಯನ ಸಾರಥಿಯನ್ನು ಕುದುರೆಗಳನ್ನೂ ರಥವನ್ನೂ ಪುಡಿಮಾಡಿ ವೇಗದಿಂದ ನೆಲದಲ್ಲಿ ನೆಟ್ಟಿತು.

ಪ್ರತಿವಿಂಧ್ಯಸ್ತತಃ ಕ್ರುದ್ಧೋ ರಥಾದಾಪ್ಲುತ್ಯ ಭಾರತ ।
ಶಕ್ತಿಂ ಚಿಕ್ಷೇಪ ಚಿತ್ರಾಯ ಸ್ವರ್ಣದಂಡಾಮಲಂಕೃತಾಮ್ ॥೨೯॥

ರಾಜನೆ, ಪ್ರತಿವಿಂಧ್ಯನು ಆಗ ಕುಪಿತನಾಗಿ ರಥದಿಂದ ಕೆಳಗೆ ಹಾರಿ ಚಿತ್ರರಾಜನ ಮೇಲೆ ಬಂಗಾರದ ದಂಡವಿರುವ, ಅಲಂಕೃತವಾದ ಶಕ್ಯಾಯುಧವನ್ನೆಸೆದ.

ತಾಮಾಪತಂತೀಂ ಜಗ್ರಾಹ ಚಿತ್ರೋ ರಾಜನ್ ಮಹಾಮನಾಃ ।
ತತಸ್ತಾಮೇವ ಚಿಕ್ಷೇಪ ಪ್ರತಿವಿಂಧ್ಯಾಯ ಪಾರ್ಥಿವಃ ॥೩೦॥

ರಾಜನೆ, ಮಹಾಬುದ್ಧಿಶಾಲಿಯಾದ ಚಿತ್ರರಾಜನು ತನ್ನ ಮೇಲೆರಗುತ್ತಿದ್ದ ಶಕ್ಯಾಯುಧವನ್ನು ಹಿಡಿದುಕೊಂಡ. ಅದನ್ನೇ ಪ್ರತಿವಿಂಧ್ಯನ ಮೇಲೆಸೆದ.

ಸಾ ಸಮಾಸಾದ್ಯ ತಂ ಶೂರಂ ಪ್ರತಿವಿಂಧ್ಯಂ ಮಹಾಪ್ರಭಾ ।
ನಿರ್ಭಿದ್ಯ ದಕ್ಷಿಣಂ ಬಾಹುಂ ನಿಪಪಾತ ಮಹೀತಲೇ ॥೩೧॥

ಮಹಾಪ್ರಭೆಯುಳ್ಳ ಆ ಶಕ್ಯಾಯುಧವು ಶೂರನಾದ ಪ್ರತಿವಿಂಧ್ಯನ ಮೇಲೆ ಬಿದ್ದು ಅವನ ಬಲಭುಜವನ್ನು ಗಾಯಗೊಳಿಸಿ ನೆಲದಲ್ಲಿ ಬಿದ್ದಿತು.

ಪತಿತಾऽಭಾಸಯಚ್ಚೈವ ತಂ ದೇಶಮಶನಿರ್ಯಥಾ ॥೩೨॥

ಬಿದ್ದ ಆ ಆಯುಧವು ಮಿಂಚಿನಂತೆ ಆ ಪ್ರದೇಶವನ್ನು ಬೆಳಗಿತು.

ಪ್ರತಿವಿಂಧ್ಯಸ್ತತೋ ರಾಜನ್ ತೋಮರಂ ಸ್ವರ್ಣಭೂಷಿತಮ್ ।
ಪ್ರೇಷಯಾಮಾಸ ಸಂಕ್ರುದ್ಧಶ್ಚಿತ್ರಸ್ಯ ವಧಕಾಂಕ್ಷಯಾ ॥೩೩॥

ಪ್ರತಿವಿಂಧ್ಯನು ಚಿತ್ರರಾಜನನ್ನು ವಧಿಸುವ ಸಂಕಲ್ಪದಿಂದ ಬಲುಕ್ರುದ್ಧನಾಗಿ ಬಂಗಾರದಿಂದ ಅಲಂಕೃತವಾದ ಈಟಿಯನ್ನು ಎಸೆದ.

ಸ ತಸ್ಯ ದೇಹಾವರಣಂ ಭಿತ್ತ್ವಾ ಹೃದಯಮೇವ ಚ ।
ಜಗಾಮ ಧರಣೀಂ ತೂರ್ಣಂ ಮಹೋರಗ ಇವಾಶಯಮ್ ॥೩೪॥

ಆ ಈಟಿ ಬೇಗನೆ ರಾಜನ ಶರೀರದ ಕವಚವನ್ನು ಸೀಳಿ ಎದೆಯನ್ನು ಬಗಿದು ದೊಡ್ಡ ಹಾವು ಬಿಲವನ್ನು ಸೇರುವಂತೆ ಭೂಮಿಯನ್ನು ಪ್ರವೇಶಿಸಿತು.

ಸ ಪಪಾತ ತದಾ ರಾಜಾ ತೋಮರೇಣ ಸಮಾಹತಃ ।
ಪ್ರಸಾರ್ಯ ವಿಪುಲೌ ಬಾಹೂ ಮಹಾಪರಿಘಸನ್ನಿಭೌ ॥೩೫॥

ಚಿತ್ರರಾಜ ಆ ಈಟಿಯ ಆಘಾತದಿಂದ ಮಹಾ ಪರಿಘಾಯುಧದಂಥ ಪುಷ್ಟವಾದ ತೋಳುಗಳನ್ನು ಅಗಲವಾಗಿ ಚಾಚಿಕೊಂಡು ಬಿದ್ದ.

ಚಿತ್ರಂ ಸಂಪ್ರೇಕ್ಷ್ಯ ನಿಹತಂ ತಾವಕಾ ರಣಶೋಭಿನಮ್ ।
ಅಭ್ಯಧಾವಂತ ವೇಗೇನ ಪ್ರತಿವಿಂಧ್ಯಂ ಸಮಂತತಃ ॥೩೬॥

ಯುದ್ಧದಿಂದ ಶೋಭಿಸುತ್ತಿದ್ದ ಚಿತ್ರರಾಜ ಹತನಾದುದನ್ನು ಕಂಡು, ನಿನ್ನ ಸೈನಿಕರು ಪ್ರತಿವಿಂಧ್ಯನ ಕಡೆಗೆ ಎಲ್ಲೆಡೆಯಿಂದಲೂ ವೇಗವಾಗಿ ಧಾವಿಸಿ ಬಂದರು.

ಸೃಜಂತೋ ವಿವಿಧಾನ್ ಬಾಣಾನ್ ಶತಘ್ನೀಶ್ಚ ಸಕಿಂಕಿಣೀಃ ।
ತಮೇಕಂ ಛಾದಯಾಮಾಸುಃ ಸೂರ್ಯಮಭ್ರಗಣಾ ಇವ ॥೩೭॥

ನಾನಾಬಗೆಯ ಬಾಣಗಳನ್ನೂ ಕಿರುಘಂಟೆಗಳಿಂದ ಯುಕ್ತವಾದ ಶತಘ್ನಿಗಳನ್ನೂ ಎಸೆಯುತ್ತ ಒಬ್ಬ, ಸೂರ್ಯನನ್ನು ಎಲ್ಲ ಮೋಡಗಳು ಆಚ್ಛಾದಿಸುವಂತೆ ಒಬ್ಬ, ಪ್ರತಿವಿಂಧ್ಯನನ್ನು ಸಮಸ್ತ ಸೈನಿಕರೂ ಆಚ್ಛಾದಿಸಿದರು.

ತಾನ್ ವಿವ್ಯಾಧ ಮಹಾಬಾಹುಃ ಶರಜಾಲೈರ್ಮಹಾಹವೇ ।
ವ್ಯದ್ರಾವಯತ್ ತವ ಚಮೂಂ ವಜ್ರಹಸ್ತ ಇವಾಸುರಾನ್ ॥೩೮॥

ಮಹಾಯುದ್ಧದಲ್ಲಿ ಮಹಾಬಾಹು ಪ್ರತಿವಿಂಧ್ಯನು ಆ ಸೈನಿಕರನ್ನು ಬಾಣಸಮೂಹಗಳಿಂದ ಚೆನ್ನಾಗಿ ಹೊಡೆದ. ವಜ್ರಾಯುಧಧಾರಿ ಇಂದ್ರನು ಅಸುರರನ್ನು ಓಡಿಸುವಂತೆ, ನಿನ್ನ ಸೈನ್ಯವನ್ನು ಓಡಿಸಿದ.

ತೇ ವಧ್ಯಮಾನಾಃ ಸಮರೇ ತಾವಕಾಃ ಪಾಂಡವೈರ್ನೃಪ ।
ವಿಪ್ರಕೀರ್ಯಂತ ಸಹಸಾ ವಾತನುನ್ನಾ ಘನಾ ಇವ ॥೫೯॥

ರಾಜನೆ, ಹೀಗೆ ಯುದ್ಧದಲ್ಲಿ ಪಾಂಡವರಿಂದ ಹೊಡೆಸಿಕೊಂಡ ನಿನ್ನವರು ಕ್ಷಣದಲ್ಲಿ ಬಿರುಗಾಳಿಗೆ ಸಿಲುಕಿದ ಮೋಡಗಳಂತೆ ಚದುರಿದರು.

ವಿದ್ರುತೇ ತು ಬಲೇ ತಸ್ಮಿನ್ ವಧ್ಯಮಾನೇ ಸಮಂತತಃ ।
ದ್ರೌಣಿರೇಕೋಽದ್ರವತ್ ತೂರ್ಣಂ ಭೀಮಸೇನಂ
ಮಹಾಬಲಮ್ ॥೪೦॥

ನಿನ್ನ ಸೈನ್ಯವು ಎಲ್ಲೆಡೆ ಹೊಡೆಸಿಕೊಂಡು ಓಡುವಾಗ ಅಶ್ವತ್ಥಾಮನೊಬ್ಬನೆ ಮಹಾಬಲನಾದ ಭೀಮಸೇನನ ಮುಂದೆ ಬೇಗನೆ ಧಾವಿಸಿ ಬಂದ.

ತಯೋಃ ಸಮಾಗಮೋ ಘೋರೋ ಬಭೂವ ಸಮರೇ ನೃಪ ।
ಯಥಾ ದೈವಾಸುರೇ ಯುದ್ಧೇ ವೃತ್ರವಾಸವಯೋರಿವ ॥೪೧॥

ರಾಜನೆ, ಭೀಮಾಶ್ವತ್ಥಾಮರ ಸಮಾಗಮವು ರಣರಂಗದಲ್ಲಿ ದೇವಾಸುರ ಸಂಗ್ರಾಮದಲ್ಲಿ ವೃತ್ರಾಸುರ ದೇವೇಂದ್ರರ ಸಮಾಗಮದಂತೆ ಬಲು ಭೀಕರವಾಗಿತ್ತು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಚಿತ್ರವಧೋ ನಾಮ ಚತುರ್ದಶೋಽಧ್ಯಾಯಃ ॥೧೪॥

❖

ಮಹಾಭಾರತತಾತ್ಪರ್ಯನಿರ್ಣಯ

ಶರಾಸನೇ ಮಾರುತಿನಾ ನಿರಾಕೃತೇ
ದ್ರೌಣಿರ್ಮಹಾಸ್ತ್ರಾಣಿ ಮುಮೋಚ ತಸ್ಮಿನ್ ।
ತಾನ್ಯಸ್ತ್ರವಿದ್ಭಿರ್ಬಲವಾನವಿಸ್ಮಯಃ
ಸಂಶಾಮಯಾಮಾಸ ಸುತೋಽನಿಲಸ್ಯ ॥೯॥

ಅಶ್ವತ್ಥಾಮನ ಬಿಲ್ಲನ್ನು ಭೀಮ ತುಂಡರಿಸಿದಾಗ ಅಶ್ವತ್ಥಾಮ ಅವನ ಮೇಲೆ ಬೇರೆ ಮಹಾ ಅಸ್ತ್ರಗಳನ್ನು ಪ್ರಯೋಗಿಸಿದ. ಬಲಿಷ್ಠನಾದ ಭೀಮ ಏನೂ ಶಂಕೆಪಡದೆ ಅವುಗಳನ್ನು ಶ್ರೇಷ್ಠ ಅಸ್ತ್ರಗಳಿಂದ ಶಮನಗೊಳಿಸಿದ.

ಪುನಃ ಶರೈರೇವ ಪರಸ್ಪರಂ ತಾ-
ವಯುದ್ಧ್ಯತಾಂ ಚಿತ್ರಮಲಂ ಚ ಸುಷ್ಠು ।
ತದಾ ತು ಭೀಮಸ್ಯ ಶರೈರ್ಭೃಶಾರ್ದಿತೋ
ದ್ರೌಣಿಃ ಪಪಾತಾಶು ದೃಢಂ ವಿಚೇತನಃ ॥೧೦॥

ಪುನಃ ಬಾಣಗಳಿಂದಲೆ ಅವರು ಇಬ್ಬರೂ ಬಲು ಆಶ್ಚರ್ಯಕರವಾಗಿ ಚೆನ್ನಾಗಿ ಪರಸ್ಪರ ಹೋರಾಡಿದರು. ಆಗ ಭೀಮನ ಬಾಣಗಳಿಂದ ಬಹಳ ಪೀಡಿತನಾದ ಅಶ್ವತ್ಥಾಮ ಬೇಗನೆ ಚೆನ್ನಾಗಿ ಮೂರ್ಛಿತನಾಗಿ ಬಿದ್ದ.

ಭೀಮಶ್ಚ ವಿಹ್ವಲತನುಃ ಸ ತು ಕಿಂಚಿದೇವ
ಪೂರ್ವಂ ಗತೇ ಗುರುಸುತೇ ಪ್ರಯಯೌ ಕ್ಷಣೇನ ।
ನಿರ್ಧೂತಯುದ್ಧಶ್ರಮ ಆತ್ತಧನ್ವಾ
ಯೋದ್ಧುಂ ಗಜೌಘಂ ಪ್ರತಿನಾದಿತಾಶಃ ॥೧೧॥

ಅಶ್ವತ್ಥಾಮ ಮೂರ್ಛಿತನಾಗಿ ಹೊರಟು ಹೋದಾಗ ಮೊದಲು ಸ್ವಲ್ಪ ಮಾತ್ರ ಆಯಾಸಗೊಂಡಿದ್ದ ಭೀಮ ಕ್ಷಣದಲ್ಲಿ ಯುದ್ಧದ ಆಯಾಸವನ್ನು ಪರಿಹರಿಸಿ ಕೊಂಡು ಬಿಲ್ಲನ್ನೆತ್ತಿ ಸಿಂಹ ಗರ್ಜನೆಯಿಂದ ದಿಕ್ಕುಗಳಲ್ಲಿ ಪ್ರತಿಧ್ವನಿ ಉಂಟುಮಾಡುತ್ತ ಗಜಸೇನೆಯೊಡನೆ ಯುದ್ಧ ಮಾಡಲು ಹೊರಟ.

❖ ❖ ❖

ಹದಿನೈದನೆಯ ಅಧ್ಯಾಯ

ಭೀಮನಿಂದ ಅಶ್ವತ್ಥಾಮನ ಪರಾಜಯ

ಸಂಜಯಃ

ಭೀಮಸೇನಂ ತತೋ ರಾಜನ್ ದ್ರೌಣಿರ್ವಿವ್ಯಾಧ ಪತ್ರಿಣಾ ।
ತ್ವರಯಾ ಪರಯಾ ಯುಕ್ತೋ ದರ್ಶಯನ್ನಸ್ತ್ರಲಾಘವಮ್ ॥೧॥

ಸಂಜಯ ಹೇಳತ್ತಾನೆ— ರಾಜನೆ, ಅಶ್ವತ್ಥಾಮನು ಆಗ ತನ್ನ ಅಸ್ತ್ರಕೌಶಲವನ್ನು ತೋರಿಸುವ ಸಲುವಾಗಿ ಬಲು ವೇಗದಿಂದ ಭೀಮಸೇನನನ್ನು ಬಾಣದಿಂದ ಹೊಡೆದ.

ಅಥೈನಂ ಪುನರಾಜಘ್ನೇ ನವತ್ಯಾ ನಿಶಿತೈಃ ಶರೈಃ ।
ಸರ್ವಮರ್ಮಾಣಿ ಸಂಪ್ರೇಕ್ಷ್ಯ ಮರ್ಮಜ್ಞೋ ಲಘುಹಸ್ತವತ್ ॥೨॥

ಬಳಿಕ ತಿರುಗಿ ಮರ್ಮಜ್ಞನಾದ ಅಶ್ವತ್ಥಾಮ ಭೀಮಸೇನನ ಎಲ್ಲ ಮರ್ಮಸ್ಥಾನಗಳನ್ನು ಚೆನ್ನಾಗಿ ನೋಡಿ ಹಸ್ತಕೌಶಲದಿಂದ ಹರಿತವಾದ ತೊಂಬತ್ತು ಬಾಣಗಳಿಂದ ಅವನನ್ನು ಚೆನ್ನಾಗಿ ಹೊಡೆದ.

ಭೀಮಸೇನಃ ಸಮಾಕೀರ್ಣೋ ದ್ರೌಣಿನಾ ನಿಶಿತೈಃ ಶರೈಃ ।
ರರಾಜ ಸಮರೇ ರಾಜನ್ ರಶ್ಮಿಮಾನಿವ ಭಾಸ್ಕರಃ ॥೩॥

ಭೀಮಸೇನ ಅಶ್ವತ್ಥಾಮನ ಹರಿತವಾದ ಬಾಣಗಳಿಂದ ಆಚ್ಛಾದಿತನಾಗಿ ರಣರಂಗದಲ್ಲಿ ಕಿರಣಗಳಿಂದ ಆಚ್ಛಾದಿತನಾದ ಸೂರ್ಯನಂತೆ ಬೆಳಗಿದ.

ತತಃ ಶರಸಹಸ್ರೇಣ ಸುಪ್ರಯುಕ್ತೇನ ಪಾಂಡವಃ ।
ದ್ರೌಣಿಪುತ್ರಮವಚ್ಛಾದ್ಯ ಸಿಂಹನಾದಮಥಾನದತ್ ॥೪॥

ಬಳಿಕ ಭೀಮಸೇನ ಸಾವಿರ ಬಾಣಗಳನ್ನು ಚೆನ್ನಾಗಿ ಪ್ರಯೋಗಿಸಿ ಅಶ್ವತ್ಥಾಮನನ್ನು ಆಚ್ಛಾದಿಸಿ ಸಿಂಹಗರ್ಜನೆ ಮಾಡಿದ.

ಶರೈಃ ಶರಾಂಸ್ತಥಾ ದ್ರೌಣಿಃ ಸಂವಾರ್ಯ ಯುಧಿ ಪಾಂಡವಮ್ ।
ಲಲಾಟೇಽಭ್ಯಹನದ್ ರಾಜನ್ ನಾರಾಚೇನ ಸ್ಮಯನ್ನಿವ ॥೫॥

ರಾಜನೆ, ರಣರಂಗದಲ್ಲಿ ಅಶ್ವತ್ಥಾಮನು ಬಾಣಗಳನ್ನು ಬಾಣಗಳಿಂದ ತಡೆಯುತ್ತ ನಗುತ್ತ ಭೀಮಸೇನನನ್ನು ಹಣೆಯಲ್ಲಿ ಬಾಣದಿಂದ ಹೊಡೆದ.

ಲಲಾಟಸ್ಥಂ ತತೋ ಬಾಣಂ ಧಾರಯಾಮಾಸ ಪಾಂಡವಃ ।
ಯಥಾಶೃಂಗಂ ವನೇ ದೃಪ್ತಃ ಖಡ್ಗೋ ಧಾರಯತೇ ನೃಪ ॥೬॥

ರಾಜನೆ, ಮದಿಸಿದ ಖಡ್ಗಮೃಗವು ಕಾಡಿನಲ್ಲಿ ತಲೆಯ ಮೇಲೆ ಕೋಡನ್ನು ಧರಿಸುವಂತೆ ಭೀಮಸೇನ ಹಣೆಯಲ್ಲಿ ನೆಟ್ಟ ಆ ಬಾಣವನ್ನು ಧರಿಸಿದ.

ತತೋ ದ್ರೌಣಂ ರಣೇ ಭೀಮಃ ಸ್ಮಯಮಾನಃ ಪರಾಕ್ರಮೀ ।
ತ್ರಿಭಿರ್ವಿವ್ಯಾಧ ನಾರಾಚೈರ್ಲಲಾಟೇ ವಿಸ್ಮಯನ್ನಿವ ॥೭॥

ಭೀಮನು ಪರಾಕ್ರಮಿ, ನಗುತ್ತಲೇ ಅಶ್ವತ್ಥಾಮನ ಹಣೆಯಲ್ಲಿ ಮೂರು ಬಾಣಗಳಿಂದ ಆಶ್ಚರ್ಯಕರವಾಗುವಂತೆ ಹೊಡೆದ.

ಲಲಾಟಸ್ಥೈಸ್ತ್ರಿಭಿರ್ಬಾಣೈರಶ್ವತ್ಥಾಮಾ ವ್ಯರೋಚತ ।
ಪ್ರಾವೃಷ್ಯಂಬುಪರಿಕ್ಷಿಪ್ತಸ್ತ್ರಿಶೃಂಗ ಇವ ಪರ್ವತಃ ॥೮॥

ಹಣೆಯಲ್ಲಿ ನೆಟ್ಟ ಮೂರುಬಾಣಗಳಿಂದ ಅಶ್ವತ್ಥಾಮನು ಮಳೆನೀರಿಂದ ತೊಯ್ದ ಮೂರು ಶಿಖರವುಳ್ಳ ಪರ್ವತದಂತೆ ಶೋಭಿಸಿದ.

ತತಃ ಶರಶತೈರ್ದ್ರೌಣಿರರ್ದಯಾಮಾಸ ಪಾಂಡವಮ್ ।
ನ ಚೈನಂ ಕಂಪಯಾಮಾಸ ಮಾತರಿಶ್ವೇವ ಪರ್ವತಮ್ ॥೯॥

ನೂರು ಬಾಣಗಳಿಂದ ಅಶ್ವತ್ಥಾಮನು ಭೀಮನನ್ನು ಹೊಡೆದರೂ ಬಿರುಗಾಳಿಗೆ ಪರ್ವತದಂತೆ ಬಾಣಗಳಿಗೆ ಭೀಮಸೇನ ಅಲ್ಲಾಡಲಿಲ್ಲ.

ತಥೈವ ಪಾಂಡವೋ ಯುದ್ಧೇ ದ್ರೌಣಂ ಶರಶತೈಃ ಶಿತೈಃ ।
ನಾಕಂಪಯತ ಸಂಹೃಷ್ಟೋ ವಾರ್ಯೋಘ ಇವ ಪರ್ವತಮ್ ॥೧೦॥

ಹಾಗೇ ನೂರುಬಾಣಗಳಿಂದ ಭೀಮ ಅಶ್ವತ್ಥಾಮನನ್ನು ಹೊಡೆದರೂ ಜಲಪ್ರವಾಹಕ್ಕೆ ಪರ್ವತದಂತೆ ಬಾಣಗಳಿಗೆ ಅಶ್ವತ್ಥಾಮನೂ ಅಲ್ಲಾಡಲಿಲ್ಲ.

ತಾವನ್ಯೋನ್ಯಂ ಶರೈರ್ಘೋರೈಶ್ಛಾದಯಂತೌ ಮಹಾರಥೌ ।
ರಥಚರ್ಯಾಗತೌ ವೀರೌ ಶುಶುಭಾತೇ ನರರ್ಷಭೌ ॥೧೧॥

ಅವರಿಬ್ಬರು ಪುರುಷೋತ್ತಮರು ಮಹಾರಥರು ವೀರರು, ರಥಚಲನದಿಂದ ಚಲಿಸುತ್ತ ಭಯಂಕರವಾದ ಬಾಣಗಳಿಂದ ಪರಸ್ಪರರನ್ನು ಮುಚ್ಚುತ್ತ ಕಂಗೊಳಿಸಿದರು.

ಆದಿತ್ಯಾವಿವ ಸಂದೀಪ್ತೌ ಲೋಕಕ್ಷಯಕರಾವುಭೌ ।
ಸ್ವರಶ್ಮಿಭಿರಿವಾನ್ಯೋನ್ಯಂ ತಾಪಯಂತೌ ಶರೋತ್ತಮೈಃ ॥೧೨॥

ಲೋಕಕ್ಷಯ ಮಾಡಲು ತೊಡಗಿದ ಇಬ್ಬರು ಸೂರ್ಯರು ತಮ್ಮ ಕಿರಣಗಳಿಂದ ಒಬ್ಬನು ಇನ್ನೊಬ್ಬನನ್ನು ಸುಡುವಂತೆ ಭೀಮ ಅಶ್ವತ್ಥಾಮರು ಶ್ರೇಷ್ಠ ಬಾಣಗಳಿಂದ ಜ್ವಲಿಸುತ್ತ ಒಬ್ಬನು ಇನ್ನೊಬ್ಬನನ್ನು ನೋಯಿಸುತ್ತ ಶೋಭಿಸಿದರು.

ಕೃತಪ್ರತಿಕೃತೇ ಯತ್ನಂ ಕುರ್ವಾಣೌ ತೌ ಮಹಾರಥೌ ।
ಕೃತಪ್ರತಿಕೃತೇ ಯತ್ತೌ ಬಾಣಸಂಘೈರಭೀತವತ್ ॥೧೩॥

ಏಟಿಗೆ ಇದಿರೇಟು ಕೊಡುವುದರಲ್ಲಿ ಯತ್ನಮಾಡುತ್ತ ಆ ಮಹಾರಥರಿಬ್ಬರೂ ನಿರ್ಭೀತರಾಗಿ ಬಾಣಸಮೂಹಗಳಿಂದ ಏಟಿಗೆ ಇದಿರೇಟು ಕೊಟ್ಟರು.

ವ್ಯಾಘ್ರಾವಿವ ಚ ಸಂರಬ್ಧೌ ಚೇರತುಸ್ತೌ ನರೋತ್ತಮೌ ।
ಶರದಂಷ್ಟ್ರೌ ದುರಾಧರ್ಷೌ ಚಾಪಹಸ್ತೌ ಭಯಂಕರೌ ॥೧೪॥

ಪುರುಷೋತ್ತಮರಿಬ್ಬರೂ ಒಬ್ಬರಿಗೊಬ್ಬರು ಮಣಿಯದವರು, ಧನುಸ್ಸನ್ನು ಹಿಡಿದು ಕೋರೆದಾಡೆಗಳಂಥ ಬಾಣಗಳಿಂದ ಕುಪಿತವಾದ ಎರಡು ಹುಲಿಗಳಂತೆ ರಣರಂಗದಲ್ಲಿ ಸಂಚರಿಸಿದರು.

ಅದೃಶ್ಯೌ ಚ ಮುಹೂರ್ತೇನ ಶರಜಾಲೈರ್ಬಭೂವತುಃ ।
ಮೇಘಜಾಲೈಃ ಪ್ರತಿಚ್ಛನ್ನೌ ಸೂರ್ಯಾಚಂದ್ರಮಸಾವಿವ ॥೧೫॥

ಬಾಣಸಮೂಹಗಳಿಂದ ಆಚ್ಛಾದಿತವಾಗಿ ಮೋಡಗಳಿಂದ ಮರೆಯಾಗುವ ಸೂರ್ಯ–ಚಂದ್ರರಂತೆ ಮುಹೂರ್ತಕಾಲ ಅದೃಶ್ಯರಾಗಿ ಬಿಡುತ್ತಿದ್ದರು.

ಪ್ರಕಾಶೌ ಚ ಮುಹೂರ್ತೇನ ತತ್ರೈವಾಸ್ತಾಮರಿಂದಮೌ ।
ವಿಮುಕ್ತೌ ಮೇಘಜಾಲೇನ ಶಶಿಸೂರ್ಯೌ ಯಥಾ ದಿವಿ ॥೧೬॥

ಶತ್ರುದಮನಕಾರಿಗಳಾದ ಭೀಮಾಶ್ವತ್ಥಾಮರು ಆಗಸದಲ್ಲಿ ಮೋಡಗಳಿಂದ ಮುಕ್ತರಾಗುವ ಚಂದ್ರ–ಸೂರ್ಯರಂತೆ ಬಾಣಸಮೂಹಗಳಿಂದ ಮುಕ್ತರಾಗಿ ಮುಹೂರ್ತಕಾಲ ಅದೇ ರಣರಂಗದಲ್ಲಿ ಬೆಳಗುತ್ತಲೂ ಇದ್ದರು.

ಅಥ ತತ್ರೈವ ಸಂಗ್ರಾಮೇ ವರ್ತಮಾನೇ ಸುದಾರುಣೇ ।
ಅಪಸವ್ಯಂ ತತಶ್ಚಕ್ರೇ ದ್ರೌಣಿಸ್ತತ್ರ ವೃಕೋದರಮ್ ॥೧೭॥

ತತೋ ದ್ರೌಣಂ ರಣೇ ಭೀಮಃ ಸ್ಮಯಮಾನಃ ಪರಾಕ್ರಮೀ ।
ತ್ರಿಭಿರ್ವಿವ್ಯಾಧ ನಾರಾಚೈರ್ಲಲಾಟೇ ವಿಸ್ಮಯನ್ನಿವ ॥೭॥

ಭೀಮನು ಪರಾಕ್ರಮಿ, ನಗುತ್ತಲೇ ಅಶ್ವತ್ಥಾಮನ ಹಣೆಯಲ್ಲಿ ಮೂರು ಬಾಣಗಳಿಂದ ಆಶ್ಚರ್ಯಕರವಾಗುವಂತೆ ಹೊಡೆದ.

ಲಲಾಟಸ್ಥೈಸ್ತ್ರಿಭಿರ್ಬಾಣೈರಶ್ವತ್ಥಾಮಾ ವ್ಯರೋಚತ ।
ಪ್ರಾವೃಷ್ಯಂಬುಪರಿಕ್ಷಿಪ್ತಸ್ತ್ರಿಶೃಂಗ ಇವ ಪರ್ವತಃ ॥೮॥

ಹಣೆಯಲ್ಲಿ ನೆಟ್ಟ ಮೂರುಬಾಣಗಳಿಂದ ಅಶ್ವತ್ಥಾಮನು ಮಳೆನೀರಿಂದ ತೊಯ್ದ ಮೂರು ಶಿಖರವುಳ್ಳ ಪರ್ವತದಂತೆ ಶೋಭಿಸಿದ.

ತತಃ ಶರಶತೈರ್ದ್ರೌಣಿರರ್ದಯಾಮಾಸ ಪಾಂಡವಮ್ ।
ನ ಚೈನಂ ಕಂಪಯಾಮಾಸ ಮಾತರಿಶ್ವೇವ ಪರ್ವತಮ್ ॥೯॥

ನೂರು ಬಾಣಗಳಿಂದ ಅಶ್ವತ್ಥಾಮನು ಭೀಮನನ್ನು ಹೊಡೆದರೂ ಬಿರುಗಾಳಿಗೆ ಪರ್ವತದಂತೆ ಬಾಣಗಳಿಗೆ ಭೀಮಸೇನ ಅಲ್ಲಾಡಲಿಲ್ಲ.

ತಥೈವ ಪಾಂಡವೋ ಯುದ್ಧೇ ದ್ರೌಣಂ ಶರಶತೈಃ ಶಿತೈಃ ।
ನಾಕಂಪಯತ ಸಂಹೃಷ್ಟೋ ವಾರ್ಯೋಘ ಇವ ಪರ್ವತಮ್ ॥೧೦॥

ಹಾಗೇ ನೂರುಬಾಣಗಳಿಂದ ಭೀಮ ಅಶ್ವತ್ಥಾಮನನ್ನು ಹೊಡೆದರೂ ಜಲಪ್ರವಾಹಕ್ಕೆ ಪರ್ವತದಂತೆ ಬಾಣಗಳಿಗೆ ಅಶ್ವತ್ಥಾಮನೂ ಅಲ್ಲಾಡಲಿಲ್ಲ.

ತಾವನ್ಯೋನ್ಯಂ ಶರೈರ್ಘೋರೈಶ್ಛಾದಯಂತೌ ಮಹಾರಥೌ ।
ರಥಚರ್ಯಾಗತೌ ವೀರೌ ಶುಶುಭಾತೇ ನರರ್ಷಭೌ ॥೧೧॥

ಅವರಿಬ್ಬರು ಪುರುಷೋತ್ತಮರು ಮಹಾರಥರು ವೀರರು, ರಥಚಲನದಿಂದ ಚಲಿಸುತ್ತ ಭಯಂಕರವಾದ ಬಾಣಗಳಿಂದ ಪರಸ್ಪರರನ್ನು ಮುಚ್ಚುತ್ತ ಕಂಗೊಳಿಸಿದರು.

ಆದಿತ್ಯಾವಿವ ಸಂದೀಪ್ತೌ ಲೋಕಕ್ಷಯಕರಾವುಭೌ ।
ಸ್ವರಶ್ಮಿಭಿರಿವಾನ್ಯೋನ್ಯಂ ತಾಪಯಂತೌ ಶರೋತ್ತಮೈಃ ॥೧೨॥

ಲೋಕಕ್ಷಯ ಮಾಡಲು ತೊಡಗಿದ ಇಬ್ಬರು ಸೂರ್ಯರು ತಮ್ಮ ಕಿರಣಗಳಿಂದ ಒಬ್ಬನು ಇನ್ನೊಬ್ಬನನ್ನು ಸುಡುವಂತೆ ಭೀಮ ಅಶ್ವತ್ಥಾಮರು ಶ್ರೇಷ್ಠ ಬಾಣಗಳಿಂದ ಜ್ವಲಿಸುತ್ತ ಒಬ್ಬನು ಇನ್ನೊಬ್ಬನನ್ನು ನೋಯಿಸುತ್ತ ಶೋಭಿಸಿದರು.

ಕೃತಪ್ರತಿಕೃತೇ ಯತ್ನಂ ಕುರ್ವಾಣೌ ತೌ ಮಹಾರಥೌ ।
ಕೃತಪ್ರತಿಕೃತೇ ಯತ್ತೌ ಬಾಣಸಂಘೈರಭೀತವತ್ ॥೧೩॥

ಏಟಿಗೆ ಇದಿರೇಟು ಕೊಡುವುದರಲ್ಲಿ ಯತ್ನಮಾಡುತ್ತ ಆ ಮಹಾರಥರಿಬ್ಬರೂ ನಿರ್ಭೀತರಾಗಿ ಬಾಣಸಮೂಹಗಳಿಂದ ಏಟಿಗೆ ಇದಿರೇಟು ಕೊಟ್ಟರು.

ವ್ಯಾಘ್ರಾವಿವ ಚ ಸಂರಬ್ಧೌ ಚೇರತುಸ್ತೌ ನರೋತ್ತಮೌ ।
ಶರದಂಷ್ಟ್ರೌ ದುರಾಧರ್ಷೌ ಚಾಪಹಸ್ತೌ ಭಯಂಕರೌ ॥೧೪॥

ಪುರುಷೋತ್ತಮರಿಬ್ಬರೂ ಒಬ್ಬರಿಗೊಬ್ಬರು ಮಣಿಯದವರು, ಧನುಸ್ಸನ್ನು ಹಿಡಿದು ಕೋರೆದಾಡೆಗಳಂಥ ಬಾಣಗಳಿಂದ ಕುಪಿತವಾದ ಎರಡು ಹುಲಿಗಳಂತೆ ರಣರಂಗದಲ್ಲಿ ಸಂಚರಿಸಿದರು.

ಅದೃಶ್ಯೌ ಚ ಮುಹೂರ್ತೇನ ಶರಜಾಲೈರ್ಬಭೂವತುಃ ।
ಮೇಘಜಾಲೈಃ ಪ್ರತಿಚ್ಛನ್ನೌ ಸೂರ್ಯಾಚಂದ್ರಮಸಾವಿವ ॥೧೫॥

ಬಾಣಸಮೂಹಗಳಿಂದ ಆಚ್ಛಾದಿತವಾಗಿ ಮೋಡಗಳಿಂದ ಮರೆಯಾಗುವ ಸೂರ್ಯ–ಚಂದ್ರರಂತೆ ಮುಹೂರ್ತಕಾಲ ಅದೃಶ್ಯರಾಗಿ ಬಿಡುತ್ತಿದ್ದರು.

ಪ್ರಕಾಶೌ ಚ ಮುಹೂರ್ತೇನ ತತ್ರೈವಾಸ್ತಾಮರಿಂದಮೌ ।
ವಿಮುಕ್ತೌ ಮೇಘಜಾಲೇನ ಶಶಿಸೂರ್ಯೌ ಯಥಾ ದಿವಿ ॥೧೬॥

ಶತ್ರುದಮನಕಾರಿಗಳಾದ ಭೀಮಾಶ್ವತ್ಥಾಮರು ಆಗಸದಲ್ಲಿ ಮೋಡಗಳಿಂದ ಮುಕ್ತರಾಗುವ ಚಂದ್ರ–ಸೂರ್ಯರಂತೆ ಬಾಣಸಮೂಹಗಳಿಂದ ಮುಕ್ತರಾಗಿ ಮುಹೂರ್ತಕಾಲ ಅದೇ ರಣರಂಗದಲ್ಲಿ ಬೆಳಗುತ್ತಲೂ ಇದ್ದರು.

ಅಥ ತತ್ರೈವ ಸಂಗ್ರಾಮೇ ವರ್ತಮಾನೇ ಸುದಾರುಣೇ ।
ಅಪಸವ್ಯಂ ತತಶ್ಚಕ್ರೇ ದ್ರೌಣಿಸ್ತತ್ರ ವೃಕೋದರಮ್ ॥೧೭॥

ಕಿರನ್ ಶರಶತೈರುಗ್ರೈರ್ಧಾರಾಭಿರಿವ ಪರ್ವತಮ್ ।
ನ ತು ತನ್ಮಮೃಷೇ ಭೀಮಃ ಶತ್ರೋರ್ವಿಜಯಲಕ್ಷಣಮ್ ॥೧೮॥

ಬಳಿಕ ಅದೇ ದಾರುಣ ಸಂಗ್ರಾಮ ನಡೆಯುತ್ತಿರುವಾಗಲೇ ಜಲಧಾರೆಗಳಿಂದ ಬೆಟ್ಟವನ್ನು ಮುಚ್ಚುವಂತೆ ಭಯಂಕರವಾದ ನೂರಾರು ಬಾಣಗಳಿಂದ ಭೀಮಸೇನನ್ನು ಮುಚ್ಚುತ್ತ ಅವನಿಗೆ ಅಶ್ವತ್ಥಾಮ ಪ್ರದಕ್ಷಿಣೆ ಮಾಡಲು ತೊಡಗಿದ. ಶತ್ರುವಿನ ಮೇಲೆ ಜಯವನ್ನು ಸಾಧಿಸಿದುದಕ್ಕೆ ಸೂಚಕವಾಗಬಲ್ಲ ಈ ಪ್ರದಕ್ಷಿಣೆಯನ್ನು ಭೀಮ ಸಹಿಸಲಿಲ್ಲ.

ಪ್ರತಿಚಕ್ರೇ ತತೋ ರಾಜನ್ ಪಾಂಡವೋಽಪ್ಯಪಸವ್ಯತಃ ।
ಮಂಡಲಾನಾಂ ವಿಭಾಗೇನ ಗತಪ್ರತ್ಯಾಗತೇನ ಚ ॥೧೯॥

ರಾಜನೆ, ಇದಕ್ಕೆ ಪ್ರತಿಯಾಗಿ ಭೀಮನೂ ಕೂಡ ಮಂಡಲವಿಭಾಗ ಗತಪ್ರತ್ಯಾಗತಗಳಿಂದ ಅಶ್ವತ್ಥಾಮನಿಗೆ ಪ್ರದಕ್ಷಿಣೆ ಬರಲು ತೊಡಗಿದ.

ಬಭೂವ ತುಮುಲಂ ಯುದ್ಧಂ ತಯೋಸ್ತತ್ರ ಮಹಾಮೃಧೇ ।
ಚರಿತ್ವಾ ವಿವಿಧಾನ್ ಮಾರ್ಗಾನ್ ಮಂಡಲಸ್ಥಾನಮೇವ ಚ ॥೨೦॥

ಶರೈಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಮಭಿಜಗ್ಮತುಃ ।
ಅನ್ಯೋನ್ಯಸ್ಯ ವಧೇ ಚೈವ ಚಕ್ರತುರ್ಯತ್ನಮಾಹವೇ ॥೨೧॥

ಹೀಗೆ ಮಹಾಯುದ್ಧದಲ್ಲಿ ಅವರಿಬ್ಬರಿಗೆ ದೊಂಬಿಕಾಳಗ ಉಂಟಾಯಿತು. ಮಂಡಲಸ್ಥಾನವನ್ನೂ ನಾನಾ ಮಾರ್ಗಗಳನ್ನೂ ಆಚರಿಸಿ ಹೆದೆಯನ್ನು ಪೂರ್ಣಸೆಳೆದು ಪ್ರಯೋಗಿಸಿದ ಬಾಣಗಳಿಂದ ಅವರು ಪರಸ್ಪರವಾಗಿ ಇದಿರಿಸಿದರು. ಕಾಳಗದಲ್ಲಿ ಪರಸ್ಪರರ ವಧೆಗೆ ಪ್ರಯತ್ನ ಮಾಡಿದರು.

ಇಯೇಷತುಶ್ಚ ವಿರಥಂ ಕರ್ತುಮನ್ಯೋನ್ಯಮಾಹವೇ ॥೨೨॥

ಕಾಳಗದಲ್ಲಿ ಅವರು ಪರಸ್ಪರ ರಥಗಳನ್ನು ಪುಡಿಮಾಡಲು ಬಯಸಿದರು.

ತತೋ ದ್ರೌಣಿರ್ಮಹಾಸ್ತ್ರಾಣಿ ಪ್ರಾದುಶ್ಚಕ್ರೇ ಮಹಾರಥಃ ॥೨೩॥
ತಾನ್ಯಸ್ತ್ರೈರೇವ ಸಮರೇ ಪ್ರತಿಜಘ್ನೇ ಸ ಪಾಂಡವಃ ॥೨೪॥

ಮಹಾರಥನಾದ ಅಶ್ವತ್ಥಾಮ ಮಹಾಅಸ್ತ್ರಗಳನ್ನು ಪ್ರಯೋಗಿಸಿದ. ಅವುಗಳನ್ನು ಅಸ್ತ್ರಗಳಿಂದಲೆ ಭೀಮ ತಡೆದ.

ತತೋ ಘೋರಂ ಮಹಾರಾಜ ಹ್ಯಸ್ತ್ರಯುದ್ಧಮವರ್ತತ ।
ಗ್ರಹಯುದ್ಧಂ ಯಥಾ ಘೋರಂ ಪ್ರಜಾಸಂಹರಣೇ ಹ್ಯಭೂತ್ ॥೨೫॥

ಆಗ ಮಹಾರಾಜ, ಸಕಲ ಪ್ರಾಣಿಸಂಹಾರಕಾಲದಲ್ಲಿ ಗ್ರಹಗಳ ನಡುವೆ ನಡೆಯುವ ಘೋರವಾದ ಯುದ್ಧದಂತೆ ಭೀಮ ಅಶ್ವತ್ಥಾಮರ ನಡುವೆ ಘೋರವಾದ ಅಸ್ತ್ರಯುದ್ಧ ನಡೆಯಿತು.

ತೇ ಬಾಣಾಃ ಸಮಸಜ್ಜಂತ ತಾಭ್ಯಾಂ ಕ್ಷಿಪ್ತಾ ಇತಸ್ತತಃ ।
ದ್ಯೋತಯಂತೋ ದಿಶಃ ಸರ್ವಾಸ್ತಚ್ಚ ಸೈನ್ಯಂ ಸಮಂತತಃ ॥೨೬॥

ಅವರಿಬ್ಬರಿಂದ ಪ್ರಯುಕ್ತವಾದ ಆ ಬಾಣಗಳು ಎಲ್ಲ ದಿಕ್ಕುಗಳನ್ನೂ ಬೆಳಗಿಸುತ್ತ ಒಂದನ್ನೊಂದು ಹೊಡೆದುಕೊಂಡವು. ಸೈನ್ಯವನ್ನು ಎಲ್ಲೆಡೆ ಹೊಡೆದುವು.

ಬಾಣಸಂಘಾವೃತಂ ಸರ್ವಮಾಕಾಶಂ ಸಮಪದ್ಯತ ।
ಉಲ್ಕಾಪಾತಾವೃತಂ ಯದ್ವತ್ ಪ್ರಜಾಸಂಹರಣೇ ನೃಪ ॥೨೭॥

ಇಡಿ ಆಕಾಶ ಬಾಣಸಮೂಹದಿಂದ, ಸರ್ವಪ್ರಾಣಿ ಸಂಹಾರಕಾಲದಲ್ಲಿ ಆಕಾಶವು ಉಲ್ಕಾಪಾತದಿಂದ ಆವೃತವಾಗುವಂತೆ ಆವೃತವಾಯಿತು.

ಬಾಣಾಭಿಘಾತಾತ್ ಸಂಜಜ್ಞೇ ತತ್ರ ಭಾರತ ಪಾವಕಃ ।
ಸವಿಷ್ಫುಲಿಂಗೋ ದೀಪ್ತಾರ್ಚಿರ್ಯೋಽದಹದ್ ವಾಹಿನೀದ್ವಯಮ್ ೨೮

ರಾಜನೆ, ಬಾಣಗಳ ಘರ್ಷಣದಿಂದ ಪ್ರಖರವಾದ ಜ್ವಾಲೆಗಳಿಂದ ಕಿಡಿಗಳಿಂದ ಕೂಡಿದ ಬೆಂಕಿ ಕಾಣಿಸಿಕೊಂಡಿತು. ಎರಡೂ ಸೈನ್ಯಗಳನ್ನು ದಹಿಸಿತು.

ತತ್ರ ಸಿದ್ಧಾ ಮಹಾರಾಜ ಸಂಪತಂತೋಽಬ್ರುವನ್ ವಚಃ ॥೨೯॥

ಮಹಾರಾಜ, ಆಗ ಆಕಾಶದಲ್ಲಿ ಹಾರಾಡುತ್ತಿರುವ ಸಿದ್ಧರು ಆಗಸದಿಂದ ಕೆಳಗೆ ಇಳಿದು ಹೇಳತೊಡಗಿದರು.

ಅತಿ ಯುದ್ಧಾನಿ ಸರ್ವಾಣಿ ಯುದ್ಧಮೇತದವರ್ತತ ।
ಸರ್ವಯುದ್ಧಾನಿ ಚೈತಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥೩೦॥

"ಎಲ್ಲ ಯುದ್ಧಗಳನ್ನು ಮೀರಿಸಿದುದು ಈ ಯುದ್ಧ. ಯಾವ ಯುದ್ಧವೂ ಇದಕ್ಕೆ ಹದಿನಾರನೆ ಒಂದಂಶಕ್ಕೆ ಸಮವಾಗದು.

ನೈತಾದೃಶಂ ಪುನರ್ಯುದ್ಧಂ ಭವಿಷ್ಯತಿ ಕದಾಚನ ।
ಅಹೋ ಜ್ಞಾನೇನ ಸಂಪನ್ನಾವುಭೌ ಚೋಗ್ರಪರಾಕ್ರಮೌ ॥೩೧॥

"ಇಂಥ ಯುದ್ಧ ಮುಂದೆ ಎಂದೂ ಆಗದು. ಆಹಾ! ಇಬ್ಬರೂ ಜ್ಞಾನಸಂಪನ್ನರು! ಇಬ್ಬರೂ ಭಯಂಕರ ಪರಾಕ್ರಮಿಗಳು!

ಅಹೋಽನಯೋರ್ಬಲಂ ಯುದ್ಧೇ ಅಹೋ ಚಾಪಿ ಕೃತಾಸ್ತ್ರತಾ ।
ಅಹೋ ಜ್ಞಾನಸ್ಯ ಸಂಪಚ್ಚ ಅಹೋ ಸೌಷ್ಠವಮೇವ ಚ ॥೩೨॥

"ಆಹಾ! ಇವರ ಯುದ್ಧ ಸಾಮರ್ಥ್ಯವೆ! ಆಹಾ! ಇವರ ಅಸ್ತ್ರಪಾಂಡಿತ್ಯವೆ! ಆಹಾ! ಇವರ ಜ್ಞಾನಸಂಪತ್ತೆ! ಆಹಾ! ಇವರ ಕೌಶಲವೆ!

ಸ್ಥಿತಾವೇತೌ ಹಿ ಸಮರೇ ಕಾಲಾಂತಕಯಮೋಪಮೌ ।
ರುದ್ರೌ ದ್ವಾವಿವ ಸಂಭೂತೌ ತಥಾ ದ್ವಾವಿವ ಭಾಸ್ಕರೌ ॥೩೩॥

"ರಣರಂಗದಲ್ಲಿ ಇವರು ಕಾಲಾಂತಕ ಯಮರಂತೆ ನಿಂತಿದ್ದಾರೆ! ಇಬ್ಬರೂ ಇಬ್ಬರು ರುದ್ರರಂತೇ, ಇಬ್ಬರು ಸೂರ್ಯರಂತೇ ಆಗಿದ್ದಾರೆ.

ಯಮಾವಿವ ನರವ್ಯಾಘ್ರೌ ಘೋರರೂಪಾವಿಮೌ ರಣೇ । ॥೩೪॥

"ಪುರುಷೋತ್ತಮರು ಇವರು, ರಣರಂಗದಲ್ಲಿ ಇಬ್ಬರೂ ಘೋರರೂಪದ ಯಮರಂತಿದ್ದಾರೆ."

ಇತಿ ಸ್ಮ ವಾಚಃ ಶ್ರೂಯಂತೇ ಸಂಪತಂತ್ಯೋ ಮುಹುರ್ಮುಹುಃ ।
ಸಿಂಹನಾದಶ್ಚ ಸಂಜಜ್ಞೇ ಸಮೇತಾನಾಂ ದಿವೌಕಸಾಮ್ ॥೩೫॥

ಹೀಗೆ ಮಾತುಗಳು ಮತ್ತೆ ಮತ್ತೆ ಕೇಳಿ ಬಂದುವು ಮತ್ತು ದೇವತೆಗಳು ಆಕಾಶದಲ್ಲಿ ಬಂದು ನೆರೆದು ಸಿಂಹನಾದವನ್ನೂ ಮಾಡಿದರು.

ಅದ್ಭುತಂ ಚಾಪ್ಯಚಿಂತ್ಯಂ ಚ ದೃಷ್ಟ್ವಾ ಯುದ್ಧಂ ಮಹಾರಣೇ ॥೩೬॥
ಸಿದ್ಧಚಾರಣಸಂಘಾನಾಂ ವಿಸ್ಮಯಃ ಸಮಪದ್ಯತ ।
ಪ್ರಶಂಸಂತಿ ತದಾ ದೇವಾಃ ಸಿದ್ಧಾಶ್ಚ ಪರಮರ್ಷಯಃ ॥೩೭॥

ಸಾಧು ದ್ರೌಣೇ ಮಹಾಬಾಹೋ ಸಾಧು ಭೀಮೇತಿ ಚಾಬ್ರುವನ್॥೩೮॥

ಮಹಾರಣರಂಗದಲ್ಲಿ ಅದ್ಭುತ ಅಚಿಂತ್ಯವಾದ ಯುದ್ಧವನ್ನು ಕಂಡು ಸಿದ್ಧ ಚಾರಣಸಮೂಹಗಳಿಗೆ ವಿಸ್ಮಯ ಉಂಟಾಯಿತು. ದೇವತೆಗಳೂ ಸಿದ್ಧರೂ ಮಹರ್ಷಿಗಳೂ ಹೊಗಳುತ್ತ 'ಭೇಷ್ ಮಹಾಬಾಹು ಅಶ್ವತ್ಥಾಮ, ಭೇಷ್ ಮಹಾಬಾಹು ಭೀಮ' ಎಂದರು.

ತೌ ಶೂರೌ ಸಮರೇ ರಾಜನ್ ಪರಸ್ಪರಕೃತಾಗಸೌ ॥೩೯॥
ಪರಸ್ಪರಮುದೀಕ್ಷೇತಾಂ ಕ್ರೋಧಾದುದ್ಧೃತ್ಯ ಚಕ್ಷುಷೀ ।
ಕ್ರೋಧರಕ್ತೇಕ್ಷಣೌ ತೌ ತು ಕ್ರೋಧಾತ್ ಪ್ರಸ್ಫುರಿತಾಧರೌ ॥೪೦॥

ರಾಜನೆ, ಯುದ್ಧದಲ್ಲಿ ಅವರಿಬ್ಬರು ಪರಸ್ಪರ ಹೊಡೆದು ಕೋಪದಿಂದ ಕಣ್ಣುಗಳನ್ನು ಎತ್ತಿ ಪರಸ್ಪರ ದುರುಗುಟ್ಟಿ ನೋಡಿದರು. ಕ್ರೋಧದಿಂದ ಅವರ ಕಣ್ಣು ಕೆಂಪಾದುವು. ಕ್ರೋಧದಿಂದ ತುಟಿಗಳು ಅದುರಿದುವು.

ಕ್ರೋಧಾತ್ ಸಂದಶ್ಯ ದಶನೈಸ್ತಥೈವ ದಶನಚ್ಛದೌ ।
ಛಾದಯಾಮಾಸತುರುಭೌ ತಾವನ್ಯೋನ್ಯಂ ರಣೇ ಶರೈಃ ॥೪೧॥

ಕ್ರೋಧದಿಂದ ಹಲ್ಲುಗಳಿಂದ ತುಟಿಗಳನ್ನು ಕಚ್ಚಿಕೊಂಡು ಇಬ್ಬರೂ ರಣರಂಗ ದಲ್ಲಿ ಬಾಣಗಳಿಂದ ಪರಸ್ಪರ ಮುಚ್ಚಿದರು.

ಶರಾಂಬುಧಾರೌ ಸಮರೇ ಶಸ್ತ್ರವಿದ್ಯುತ್ಪ್ರಕಾಶಿನೌ ।
ತಾವನ್ಯೋನ್ಯಂ ಧ್ವಜೌ ವಿದ್ಧ್ವಾ ಸಾರಥೀ ಚ ಮಹಾರಥೌ ॥೪೨॥

ಅನ್ಯೋನ್ಯಸ್ಯ ಹಯಾಂಶ್ಚಾಪಿ ಸಾಯಕೈರ್ನಿರ್ಬಿಭೇದತುಃ ॥೪೩॥

ಮಿಂಚಿನಂಥ ಶಸ್ತ್ರವನ್ನು ಝಳಪಿಸಿದರು. ಬಾಣಗಳ ಮಳೆಗರೆದರು. ಮಹಾರಥರಿಬ್ಬರೂ ಯುದ್ಧದಲ್ಲಿ ಪರಸ್ಪರ ಧ್ವಜಗಳನ್ನು ಕಡಿದರು. ಸಾರಥಿಗಳನ್ನು ಹೊಡೆದರು. ಪರಸ್ಪರವಾಗಿ ಕುದುರೆಗಳನ್ನು ಬಾಣಗಳಿಂದ ಹೊಡೆದರು.

ತತಃ ಕ್ರುದ್ಧೌ ಮಹಾರಾಜ ಬಾಣೌ ಗೃಹ್ಯ ಮಹಾಹವೇ ।
ಉಭೌ ಚಿಕ್ಷಿಪತುಸ್ತೂರ್ಣಮನ್ಯೋನ್ಯಸ್ಯ ವಧೈಷಿಣೌ ॥೪೪॥

ಮಹಾರಾಜ, ಬಳಿಕ ಕ್ರುದ್ಧರಾದ ಭೀಮ ಅಶ್ವತ್ಥಾಮರು ಇಬ್ಬರೂ ಪರಸ್ಪರ ವಧವನ್ನು ಬಯಸಿ ಬೇಗನೆ ಎರಡು ಬಾಣಗಳನ್ನು ಎತ್ತಿಕೊಂಡು ಎಸೆದರು.

ತೌ ಸಾಯಕೌ ಮಹಾರಾಜ ದ್ಯೋತಮಾನೌ ಚಮೂಮುಖೇ ।
ಆಜಘ್ನತುಃ ಸಮಾಸಾದ್ಯ ವಜ್ರವೇಗೌ ದುರಾಸದೌ ॥೪೫॥

ಮಹಾರಾಜ, ಆ ಎರಡು ಬಾಣಗಳು ಮಿಂಚಿನ ವೇಗದವು, ತಡೆಯ ಲಾಗದವು. ಸೈನ್ಯದ ಮುಂಭಾಗದಲ್ಲಿ ಹೊಳೆಯುತ್ತ ಇಬ್ಬರನ್ನೂ ಹೊಡೆದುವು.

ತೌ ಪರಸ್ಪರವೇಗೇನ ಶರಾಭ್ಯಾಮಾಹತೌ ಭೃಶಮ್ ।
ನಿಪೇತತುರ್ಮಹಾರಾಜ ಸ್ವರಥೋಪಸ್ಥಯೋಸ್ತದಾ ॥೪೬॥

ಮಹಾರಾಜ, ಅವರಿಬ್ಬರೂ ವೇಗದಿಂದ ಬಾಣಗಳಿಂದ ಬಹಳವಾಗಿ ಹೊಡೆದುಕೊಂಡು ತಮ್ಮ ರಥದ ಮಧ್ಯದಲ್ಲಿ ಬಿದ್ದರು.

ತತಸ್ತು ಸಾರಥಿರ್ಜ್ಞಾತ್ವಾ ದ್ರೋಣಪುತ್ರಮಚೇತನಮ್ ।
ಅಪೋವಾಹ ರಣಾದ್ ರಾಜನ್ ಸರ್ವಕ್ಷತ್ರಸ್ಯ ಪಶ್ಯತಃ ॥೪೭॥

ರಾಜನೆ, ಅಶ್ವತ್ಥಾಮ 'ಅಚೇತನ' ಶವದಂತೆ ಬಹಳ ಮೂರ್ಛೆಗೊಂಡು ಪ್ರಜ್ಞಾಶೂನ್ಯನಾದುದನ್ನು ತಿಳಿದು ಸಾರಥಿಯು ಎಲ್ಲ ಕ್ಷತ್ರಿಯಯೋಧರು ನೋಡುತ್ತಿದ್ದಂತೆ ರಣರಂಗದಿಂದಾಚೆಗೇ ಒಯ್ದನು.

ತತ್ರೈವ ಪಾಂಡವಂ ರಾಜನ್ ವಿಹ್ವಲಂತಂ ಮುಹುರ್ಮುಹುಃ ।
ಅಪೋವಾಹ ರಥೇನಾಜೌ ವಿಶೋಕಃ ಶತ್ರುತಾಪನಮ್ ॥೪೮॥

ಬಳಿಕ ಹಾಗೆಯೇ ಪುನಃಪುನಃ ಶತ್ರುಗಳಿಗೆ ತಾಪ ಉಂಟುಮಾಡುವ ಭೀಮ ಸೇನನೂ ಕೂಡ 'ವಿಹ್ವಲ' ಮೈ ನಡುಕಗೊಂಡಿದ್ದರಿಂದ ಸಾರಥಿ ವಿಶೋಕನು ರಥದಿಂದ ಅವನನ್ನು 'ತತ್ರೈವ ಆಜೌ' ಆ ರಣರಂಗದಲ್ಲಿಯೇ ಬೇರೆ ಕಡೆ ಒಯ್ದನು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಪಂಚದಶೋಽಧ್ಯಾಯಃ ॥೧೫॥

ಹದಿನಾರನೆಯ ಅಧ್ಯಾಯ

ಅರ್ಜುನ-ಸಂಶಪ್ತಕರ ಯುದ್ಧ

ಧೃತರಾಷ್ಟ್ರಃ

ಕಥಂ ಸಂಶಪ್ತಕೈಃ ಸಾರ್ಧಮರ್ಜುನಸ್ಯಾಭವದ್ ರಣಃ ।
ಅನ್ಯೇಷಾಂ ಚ ಮದೀಯಾನಾಂ ಸಹ ಪಾರ್ಥೈರ್ಬ್ರವೀಹಿ ಮೇ ॥೧॥
ಅಶ್ವತ್ಥಾಮ್ನಶ್ಚ ಯದ್ ಯುದ್ಧಮರ್ಜುನಸ್ಯ ಚ ಸಂಜಯ ॥೨॥

ಧೃತರಾಷ್ಟ್ರ ನುಡಿದ, 'ಸಂಜಯ, ಸಂಶಪ್ತಕರೊಂದಿಗೆ ಅರ್ಜುನನ ಯುದ್ಧ ಹೇಗೆ ನಡೆಯಿತು? ಬೇರೆ ನಮ್ಮವರಿಗೆ ಪಾಂಡವರೊಂದಿಗೆ ಹೇಗೆ ಯುದ್ಧ ನಡೆಯಿತು? ಅಶ್ವತ್ಥಾಮನಿಗೂ ಅರ್ಜುನನಿಗೂ ಹೇಗೆ ಯುದ್ಧ ನಡೆಯಿತು? ಹೇಳು.'

ಸಂಜಯಃ

ಶೃಣು ರಾಜನ್ ಯಥಾವೃತ್ತಂ ಸಂಗ್ರಾಮಂ ಬ್ರುವತೋ ಮಮ ।
ವೀರಾಣಾಂ ಶತ್ರುಭಿಃ ಸಾರ್ಧಂ ದೇಹಪಾಪ್ಮವಿನಾಶನಮ್ ॥೩॥

ಸಂಜಯನು ನುಡಿದ— ರಾಜನೆ, ವೀರರಿಗೆ ಶತ್ರುಗಳೊಂದಿಗೆ ಶರೀರ ಮತ್ತು ಪಾಪಗಳನ್ನು ನಾಶಗೊಳಿಸುವ ಸಂಗ್ರಾಮವನ್ನು ಹೇಗೆ ನಡೆಯಿತೋ ಹಾಗೇ ಹೇಳುತ್ತೇನೆ, ಕೇಳು.

ದುರ್ಯೋಧನನು ದ್ರೋಣರಲ್ಲಿ 'ಯುಧಿಷ್ಠಿರನನ್ನು ಜೀವಂತ ಸೆರೆಹಿಡಿದು ತನ್ನಿರಿ' ಎಂದು ಕೇಳಿಕೊಂಡ. ದ್ರೋಣನಿಗೆ ಸಂತೋಷವಾಯಿತು. 'ಏಕೆ? ಯುಧಿಷ್ಠಿರನನ್ನು ಕೊಲ್ಲಕೂಡದೆ? ನಿನಗೆ ಇಂಥಾ ಒಳ್ಳೆಯ ಬುದ್ಧಿ ಬಂತೆ? ಯುಧಿಷ್ಠಿರನನ್ನು ಗೆದ್ದು ಅವನಿಗೆ ಅವನ ರಾಜ್ಯ ನೀಡಿ ಸೋದರಸ್ನೇಹವನ್ನು ಉಳಿಸಿಕೊಳ್ಳುವ ಅಭಿಪ್ರಾಯ ನಿನಗೆ ಇದೆಯೇ?' ಎಂದು ದ್ರೋಣ ಕೇಳಿದ. ದುರ್ಯೋಧನನೆಂದ, 'ಪುನಃ ಜೂಜಾಡಿ ಅವನನ್ನು ಶಾಶ್ವತವಾಗಿ ಕಾಡಿಗೆ ಕಳಿಸಬೇಕು' ಎಂದು.

ದ್ರೋಣ ನಿರಾಶನಾಗಿ ನುಡಿದ, 'ಧರ್ಮರಾಜನು ಅರ್ಜುನನ ರಕ್ಷಣೆಯಲ್ಲಿ

ಇಲ್ಲದಿದ್ದರೆ ನಾನು ಸೆರೆ ಹಿಡಿಯಬಲ್ಲೆ. ಅವನನ್ನು ಹೇಗಾದರೂ ದೂರ ಒಯ್ಯಿರಿ. ಕೃಷ್ಣಾರ್ಜುನರು ಅಜೇಯರು.'

ಆಗ ತ್ರಿಗರ್ತರಾಜ ಸುಶರ್ಮನೆಂದ : 'ನಮ್ಮಲ್ಲಿ ಅರ್ಜುನ ಅಪರಾಧ ಗೈದಿದ್ದಾನೆ. ಅವನನ್ನು ನಾನು ಕೊಲ್ಲುತ್ತೇನೆ. ಇಲ್ಲವೆ, ನಾನು ಸಾಯುತ್ತೇನೆ.' ದುರ್ಯೋಧನ 'ಆಗಲಿ, ನೀನೆ ಕೊಲ್ಲು' ಎಂದು ಅವನನ್ನೆ ಆ ಕಾರ್ಯಕ್ಕೆ ನೇಮಿಸಿದ. ಸತ್ಯರಥ ಸತ್ಯವರ್ಮ ಸತ್ಯವ್ರತ ಸತ್ಯೇಷು ಸತ್ಯಕರ್ಮ– ಈ ಐದು ಮಂದಿ ಸುಶರ್ಮನ ಸೋದರರು ಕೂಡಿ ಅಗ್ನಿಪ್ರತಿಷ್ಠೆ ಮಾಡಿ ಯಜ್ಞಮಾಡಿ ಅಗ್ನಿಯ ಮುಂದೆ ಅರ್ಜುನನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದರು. 'ಕೊಲ್ಲದೆ ಹೋದರೆ ಪಂಚಮಹಾಪಾತಕಿಗಳ ಎಲ್ಲ ನರಕಗಳೂ ನಮಗಾಗಲಿ' ಎಂದು 'ಸಂ–ಶಪ್ತ–ಕ' ದೃಢವಾದ ಶಪಥ ಮಾಡಿದವರಾದ್ದರಿಂದ ಅವರು ಸಂಶಪ್ತಕರೆನಿಸಿದರು. ಅವರ ಸೈನ್ಯದಲ್ಲಿ ಒಂದು ಸಾವಿರ ರಥಗಳು, ಮುನ್ನೂರು ಆನೆಗಳು, ಹದಿನಾಲ್ಕು ಸಾವಿರ ಕುದುರೆಗಳು, ಎರಡು ಲಕ್ಷ ಕಾಲಾಳುಗಳಿದ್ದರು. ಜೊತೆಗೆ ಶಿಬಿಗಳೂ ಸಾಲ್ವರೂ ನಾರಾಯಣಸೈನ್ಯದವರೂ ಸೇರಿದ್ದರು. ಅರ್ಜುನನನ್ನು ಬಲುದೂರದಲ್ಲಿ ಯುದ್ಧಕ್ಕೆ ಆಹ್ವಾನಿಸಿ ಯುಧಿಷ್ಠಿರನಿಂದ ಅರ್ಜುನ ದೂರದಲ್ಲಿರುವಂತೆ ನೋಡಿಕೊಂಡರು. ಅವರ ಯುದ್ಧದ ವಿವರವನ್ನು ಧೃತರಾಷ್ಟ್ರ ಸಂಜಯನಿಂದ ತಿಳಿಯಲು ಬಯಸುತ್ತಾನೆ.

ಪಾರ್ಥಃ ಸಂಶಪ್ತಕಬಲಂ ಪ್ರವಿಶ್ಯಾರ್ಣವಸನ್ನಿಭಮ್ ।
ವ್ಯಕ್ಷೋಭಯದಮಿತ್ರಘ್ನೋ ಮಹಾವಾತ ಇವಾರ್ಣವಮ್ ॥೪॥

ರಾಜನೆ, ಶತ್ರುಸಂಹಾರಕನಾದ ಅರ್ಜುನ ಸಾಗರದಂತೆ ಅಪಾರವಾದ ಸಂಶಪ್ತಕಸೈನ್ಯವನ್ನು ಹೊಕ್ಕು ಚಂಡಮಾರುತವು ಸಾಗರವನ್ನು ಕ್ಷೋಭೆಗೊಳಿಸು ವಂತೆ ಕ್ಷೋಭೆಗೊಳಿಸಿದ.

ಶಿರಾಂಸ್ಯುನ್ಮಥ್ಯ ವೀರಾಣಾಂ ಶಿತೈರ್ಭಲ್ಲೈರ್ಧನಂಜಯಃ ।
ಪೂರ್ಣಚಂದ್ರಾಭವಕ್ತ್ರಾಣಿ ಸ್ವಕ್ಷಿಭ್ರೂದಶನಾನಿ ಚ ॥೫॥
ಸಂತಸ್ತಾರ ಕ್ಷಿತಿಂ ಕ್ಷಿಪ್ರಂ ವಿನಾಲೈರ್ನಲಿನೈರಿವ ॥೬॥

ಅರ್ಜುನನು ಹರಿತವಾದ ಭಲ್ಲೆಗಳಿಂದ ವೀರರ ಶಿರಸ್ಸುಗಳನ್ನು ತರಿದು ರಣಭೂಮಿಯಲ್ಲಿ ಚೆಲ್ಲಿದ. ಪೂರ್ಣಚಂದ್ರನಂಥ ಮುಖಗಳಿಂದ ಸುಂದರವಾದ

ಕಣ್ಣು ಹುಬ್ಬು ಹಲ್ಲುಗಳಿಂದ ಕೂಡಿದ್ದು ನಾಳದಿಂದ ಕತ್ತರಿಸಿದ ಕಮಲಗಳಂತಿದ್ದ ಆ ಶಿರಸ್ಸುಗಳಿಂದ ಕ್ಷಣದಲ್ಲಿ ರಣಭೂಮಿಯನ್ನು ಆಚ್ಛಾದಿಸಿದ.

ಸುವೃತ್ತಾನಾಯತಾನ್ ಪುಷ್ಟಾನ್ ಚಂದನಾಗರುರೂಷಿತಾನ್ ।
ಸಾಯುಧಾನ್ ಸತಲತ್ರಾಣಾನ್ ಪಂಚಾಸ್ಯಾನಿವ ಪನ್ನಗಾನ್ ॥೭॥

ಬಾಹೂನ್ ಪಾದಾನಮಿತ್ರಾಣಾಮುಚ್ಚಕರ್ತಾರ್ಜುನೋ ರಣೇ ॥೮॥

ದುಂಡಾದ ನಿಡಿದಾದ ಪುಷ್ಟವಾದ ಚಂದನ ಅಗರು ಲೇಪಿತವಾದ ಆಯುಧವನ್ನು ಕೈಚೀಲವನ್ನು ಹಿಡಿದಿರುವ ಐದು ಹೆಡೆಗಳ ಸರ್ಪಗಳಂತಿರುವ ಶತ್ರುಗಳ ಕೈ–ಕಾಲುಗಳನ್ನು ಕತ್ತರಿಸಿದ ಅರ್ಜುನ.

ಧುರ್ಯಾನ್ ಧುರ್ಯೇತರಾನ್ ಸೂತಾನ್ ಧ್ವಜಾಂಶ್ಚಾಪಾನಿ
ಸಾಯಕಾನ್ ।
ಪಾಣೀನೂರೂಂಶ್ಚ ನಿಶಿತೈರ್ಭಲ್ಲೈಶ್ಚಿಚ್ಛೇದ ಪಾಂಡವಃ ॥೯॥

ಶ್ರೇಷ್ಠರಥಿಕರನ್ನೂ ಇತರ ರಥಿಕರನ್ನೂ ಸೂತರನ್ನೂ ಧ್ವಜಗಳನ್ನೂ ಧನುಸ್ಸುಗಳನ್ನೂ ಬಾಣಗಳನ್ನೂ ಯೋಧರ ಕೈ–ತೊಡೆಗಳನ್ನೂ ಹರಿತವಾದ ಭಲ್ಲೆಗಳಿಂದ ಅರ್ಜುನ ಕತ್ತರಿಸಿದ.

ದ್ವಿಪಾನ್ ರಥಾನ್ ಹಯಾಂಶ್ಚೈವ ಸಾರೋಹಾನರ್ಜುನೋ ಯುಧಿ ।
ಶರೈರನೇಕಸಾಹಸ್ರೈರ್ನಿನ್ಯೇ ರಾಜನ್ ಯಮಕ್ಷಯಮ್ ॥೧೦॥

ಆನೆ ರಥ ಕುದುರೆಗಳನ್ನು ಅವುಗಳ ಸವಾರರನ್ನು ರಣರಂಗದಲ್ಲಿ ರಾಜನೆ, ಅರ್ಜುನನು ಅನೇಕ ಸಾವಿರ ಬಾಣಗಳಿಂದ ಯಮಲೋಕಕ್ಕೆ ಕಳಿಸಿದ.

ತೇ ಪ್ರವೀರಾಃ ಸುಸಂರಬ್ಧಾ ನರ್ದಮಾನಾ ಇವರ್ಷಭಾಃ ।
ವಾಶಿತಾರ್ಥಮಭಿಕ್ರುದ್ಧಾ ಅಭಿದ್ರುತ್ಯ ಮದೋತ್ಕಟಾಃ ॥೧೧॥

ನಿಘ್ನಂತಮಭಿಜಘ್ನುಸ್ತೇ ಶರೈಃ ಶೃಂಗೈರಿವರ್ಷಭಾಃ ॥೧೨॥

ಆ ಮಹಾವೀರರರು ಕುಪಿತರಾಗಿ, ಬೆದೆಗೆ ಬಂದ ಹಸುವಿಗಾಗಿ ಗುರುಗುಟ್ಟುವ ಮದಿಸಿದ ಗೂಳಿಗಳಂತೆ ಗರ್ಜಿಸುತ್ತ ಕ್ರೋಧದಿಂದ ಮುನ್ನುಗ್ಗಿ ಹೋರಿಗಳು

ಕೊಂಬುಗಳಿಂದ ಹೋರಿಯನ್ನು ತಿವಿಯುವಂತೆ, ಬಾಣಗಳಿಂದ ಹೊಡೆಯುತ್ತಿದ್ದ ಅರ್ಜುನನನ್ನು ಹೊಡೆದರು.

ತಸ್ಯ ತೇಷಾಂ ಚ ತದ್ಯುದ್ಧಮಭವದ್ ರೋಮಹರ್ಷಣಮ್ ।
ತ್ರೈಲೋಕ್ಯವಿಜಯೇ ಯದ್ವದ್ ದೈತ್ಯಾನಾಂ ಸಹ ವಜ್ರಿಣಾ ॥೧೩॥

ಅರ್ಜುನನಿಗೆ ಆ ಸಂಶಪ್ತಕರೊಡನೆ ರೋಮಾಂಚಕರವಾದ ಯುದ್ಧ ನಡೆಯಿತು. ಮೂರ್ಲೋಕದ ವಿಜಯಕ್ಕಾಗಿ ದೈತ್ಯರೊಡನೆ ಇಂದ್ರ ನಡೆಸಿದ ಯುದ್ಧ ದಂತಿತ್ತು ಆ ಯುದ್ಧ.

ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ವಿಷತಾಂ ಸರ್ವತೋಽರ್ಜುನಃ ।
ಇಷುಭಿರ್ಬಹುಭಿಸ್ತೂರ್ಣಂ ವಿದ್ಧ್ವಾ ಪ್ರಾಣಾನ್ ನಿರಾಸದತ್ ॥೧೪॥

ಶತ್ರುಗಳ ಎಲ್ಲ ಅಸ್ತ್ರಗಳನ್ನು ಅಸ್ತ್ರಗಳಿಂದ ತಡೆಯುತ್ತ ಅರ್ಜುನ ವೇಗವಾಗಿ ಬಹಳ ಬಾಣಗಳಿಂದ ಅವರ ಪ್ರಾಣಗಳನ್ನು ತೆಗೆದ.

ಛಿನ್ನತ್ರಿವೇಣುಚಕ್ರಾಕ್ಷಾನ್ ಹತಯೋಧಾಶ್ವಸಾರಥೀನ್ ।
ವಿಧ್ವಸ್ತಾಯುಧತೂಣೀರಾನ್ ಸಮುನ್ಮಥಿತಕೇತನಾನ್ ॥೧೫॥

ಸಂಛಿನ್ನಯೋಕ್ತ್ರರಶ್ಮೀಷಾನ್ ವಿತ್ರಿವೇಣೂನ್ ವಿಕೂಬರಾನ್ ।
ವಿಶಮ್ಯಾಬಂಧುರಯುಗಾನ್ ವಿಜಂಘಾಜಾನುಮಂಡಲಾನ್ ॥೧೬॥

ರಥಾನ್ ವಿಶಕಲೀಕುರ್ವನ್ ಮಹಾಭ್ರಾಣೀವ ಮಾರುತಃ ।
ವಿಸ್ಮಾಪಯನ್ ಪ್ರೇಕ್ಷಕಾಣಾಂ ದ್ವಿಷತಾಂ ಭಯವರ್ಧನಮ್ ॥೧೭॥

ಮಹಾರಥಸಹಸ್ರಸ್ಯ ಸಮಂ ಕರ್ಮಾರ್ಜುನೋಽಕರೋತ್ ॥೧೮॥

ಶತ್ರುಗಳ ರಥಗಳಲ್ಲಿ ತ್ರಿವೇಣು ಚಕ್ರ ಅಚ್ಚುಮರಗಳು ಪುಡಿಯಾದವು. ಯೋಧ ಅಶ್ವ ಸಾರಥಿಗಳು ಮಡಿದರು. ಆಯುಧ ಬತ್ತಳಿಕೆಗಳು ನಾಶವಾದವು. ಧ್ವಜಸ್ತಂಭಗಳು ಬಿದ್ದುವು. ನೊಗದ ಹಗ್ಗ ಕಡಿವಾಣಗಳು ಕಡಿದುವು. ತ್ರಿವೇಣು ಕೂಬರ ಶಮ್ಯಾ ಬಂಧುರ ಯುಗ ಜಂಘಾ ಜಾನುಮಂಡಲಗಳು ಎಲ್ಲವೂ ಪುಡಿಯಾದವು. ಬಿರುಗಾಳಿ ಮೋಡಗಳನ್ನು ಚದುರಿಸುವಂತೆ ಅರ್ಜುನ

ಸಂಶಪ್ತಕರ ರಥಗಳನ್ನು ಚೂರುಚೂರು ಮಾಡುತ್ತ ಪ್ರೇಕ್ಷಕರಿಗೆ ವಿಸ್ಮಯ ಉಂಟುಮಾಡಿದ, ಶತ್ರುಗಳಿಗೆ ಭಯ ಹೆಚ್ಚಿಸಿದ. ಸಾವಿರಮಹಾರಥರು ಮಾಡುವ ಸಾಹಸಗಳನ್ನು ಒಮ್ಮೆಲೆ ಅರ್ಜುನ ಮಾಡಿ ತೋರಿಸಿದ.

ಸಿದ್ಧದೇವರ್ಷಿಸಂಘಾಶ್ಚ ಚಾರಣಾಶ್ಚಾಪಿ ತುಷ್ಟುವುಃ ॥೧೯॥
ದೇವದುಂದುಭಯೋ ನೇದುಃ ಪುಷ್ಪವರ್ಷಾಣಿ ಚಾಪತನ್ ।
ಕೇಶವಾರ್ಜುನಯೋರ್ಮೂರ್ಧ್ನಿ ಪ್ರಾಹ ವಾಕ್ ಚಾಶರೀರಿಣೀ ॥೨೦॥

ಸಿದ್ಧರು ದೇವತೆಗಳು ಮತ್ತು ಋಷಿಗಳ ಸಮೂಹಗಳು ಚಾರಣರೂ ಕೊಂಡಾಡಿದರು. ದೇವದುಂದುಭಿಗಳು ಮೊಳಗಿದುವು. ಕೃಷ್ಣಾರ್ಜುನರ ತಲೆಯ ಮೇಲೆ ಹೂಮಳೆ ಸುರಿದವು. ಅಶರೀರವಾಣಿ ಕೇಳಿಸಿತು.

ಅಶರೀರಿಣೀ ವಾಕ್

ಚಂದ್ರಾರ್ಕಾನಿಲವಹ್ನೀನಾಂ ಕಾಂತಿದೀಪ್ತಿಬಲದ್ಯುತೀಃ ।
ಯೌ ಸದಾ ಬಿಭ್ರತೋ ವೀರಾವಿಮೌ ತೌ ಕೇಶವಾರ್ಜುನೌ ॥೨೧॥

ಅಶರೀರವಾಣಿ ನುಡಿಯಿತು— 'ಚಂದ್ರನ ಕಾಂತಿ, ಸೂರ್ಯಪ್ರಕಾಶ, ವಾಯು ಬಲ, ಅಗ್ನಿಯ ತೇಜಸ್ಸೆಲ್ಲವೂ ಸದಾ ವೀರರಾದ ಈ ಕೃಷ್ಣಾರ್ಜುನರಲ್ಲಿದೆ.

ಬ್ರಹ್ಮೇಶಾನಾವಿವ ಪುರಾ ವೀರಾವೇಕರಥೇ ಸ್ಥಿತೌ ।
ಸರ್ವಭೂತವರೌ ವೀರೌ ನರನಾರಾಯಣಾವಿಮೌ ॥೨೨॥

'ಹಿಂದೆ ಬ್ರಹ್ಮರುದ್ರರು ಒಂದು ರಥದಲ್ಲಿ ಕುಳಿತಂತೆ ಈಗ ಒಂದು ರಥದಲ್ಲಿ ಕುಳಿತ ಈ ಇಬ್ಬರು ವೀರರು ಎಲ್ಲ ಪ್ರಾಣಿಗಳಲ್ಲಿ ಶ್ರೇಷ್ಠರಾದ ನರನಾರಾಯಣರು' ಎಂದು.

ಸಂಜಯಃ

ಇತ್ಯೇತನ್ಮಹದಾಶ್ಚರ್ಯಂ ದೃಷ್ಟ್ವಾ ಶ್ರುತ್ವಾ ಚ ಭಾರತ ।
ಅಶ್ವತ್ಥಾಮಾ ಸುಸಂಕ್ರುದ್ಧಃ ಕೃಷ್ಣಾವಭ್ಯದ್ರವದ್ ರಣೇ ॥೨೩॥

ಸಂಜಯನು ನುಡಿದ— ರಾಜನೇ, ಈ ಮಹಾಶ್ಚರ್ಯವನ್ನು ಅಶ್ವತ್ಥಾಮನು ಕಂಡು, ಕೇಳಿ ಕುಪಿತನಾಗಿ ರಣರಂಗದಲ್ಲಿ ಕೃಷ್ಣಾರ್ಜುನರ ಕಡೆಗೆ ಮುನ್ನುಗ್ಗಿಬಂದ.

ಅಥ ಪಾಂಡವಮಸ್ಯಂತಮಮಿತ್ರಾಂತಕರಾನ್ ಶರಾನ್ ।
ಸೇಷುಣಾ ಪಾಣಿನಾऽऽಹೂಯ ಪ್ರಹಸನ್ ದ್ರೌಣಿರಬ್ರವೀತ್ ॥೨೪॥

ಶತ್ರುಗಳನ್ನು ನಾಶಮಾಡುವ ಬಾಣಗಳನ್ನು ಪ್ರಯೋಗಿಸುತ್ತಿದ್ದ ಅರ್ಜುನನನ್ನು ಬಾಣಸಹಿತವಾದ ಕೈಯಿಂದ ಯುದ್ಧಕ್ಕೆ ಆಹ್ವಾನಿಸಿ ನಗುತ್ತ ನುಡಿದ.

ಅಶ್ವತ್ಥಾಮಾ

ಯದಿ ಮಾಂ ಮನ್ಯಸೇ ವೀರ ಪ್ರಾಪ್ತಮಾರ್ಯಮಿವಾತಿಥಿಮ್ ।
ತತಃ ಸರ್ವಾತ್ಮನಾऽದ್ಯ ತ್ವಂ ಯುದ್ಧಾತಿಥ್ಯಂ ಪ್ರಯಚ್ಛ ಮೇ ॥೨೫॥

ಅಶ್ವತ್ಥಾಮ ನುಡಿದ— ವೀರನೆ, ಯೋಗ್ಯ ಅತಿಥಿಯಾಗಿ ನಾನು ಬರುವುದನ್ನು ನೀನು ಒಪ್ಪುವುದಾದರೆ ನನಗೆ ಎಲ್ಲ ರೀತಿಯ ಯುದ್ಧಾತಿಥ್ಯರೂಪ ಸತ್ಕಾರವನ್ನು ನೀಡು.

ಸಂಜಯಃ

ಏವಮಾಚಾರ್ಯಪುತ್ರೇಣ ಸಮಾಹೂತೋ ಯುಯುತ್ಸಯಾ ।
ಬಹುಮೇನೇऽರ್ಜುನೋऽತ್ಮಾನಮಿದಂ ಚಾಹ ಜನಾರ್ದನಮ್ ॥೨೬॥

ಸಂಜಯ ನುಡಿದ— ಹೀಗೆ ಗುರುಪುತ್ರನು ಯುದ್ಧೇಚ್ಛೆಯಿಂದ ಅರ್ಜುನನನ್ನು ಆಹ್ವಾನಿಸಿದ್ದರಿಂದ ಅರ್ಜುನ ಇದು ತನಗೆ ಸಂದ ಗೌರವವೆಂದು ಭಾವಿಸಿ ಕೃಷ್ಣನೊಡನೆ ಹೇಳಿದ

ಅರ್ಜುನಃ

ಸಂಶಪ್ತಕಾಶ್ಚ ಮೇ ವಧ್ಯಾ ದ್ರೌಣಿರಾಹ್ವಯತೇ ಚ ಮಾಮ್ ।
ಯದತ್ರಾನಂತರಂ ಪ್ರಾಪ್ತಂ ತತ್ ಪ್ರಶಾಧಿ ಮಹಾಭುಜ ॥೨೭॥

ಅರ್ಜುನ ನುಡಿದ— ನಾನೀಗ ಸಂಶಪ್ತಕರನ್ನು ಕೊಲ್ಲಬೇಕಾಗಿದೆ, ಅಶ್ವತ್ಥಾಮನ ಆಹ್ವಾನವನ್ನು ಮನ್ನಿಸಬೇಕಾಗಿದೆ. ಈಗ ಮೊದಲಿಗೆ ಮಾಡಬೇಕಾದುದನ್ನು ಹೇ ಮಹಾಬಾಹುವೆ, ನನಗೆ ಹೇಳು.

ಆತಿಥ್ಯಕರ್ಮಾಭ್ಯರ್ಹಾಯ ದೀಯತಾಂ ಯದಿ ರೋಚತೇ ॥೨೮॥

'ಅಭಿಅರ್ಥಾಯ' ಅತಿಥಿಯಾಗಿ ಮುಂದೆ ಬಂದು ಬೇಡಿರುವ ಅಶ್ವತ್ಥಾಮನಿಗೆ ಅವನು ಬೇಡಿದ ಯುದ್ಧರೂಪವಾದ ಆತಿಥ್ಯಕರ್ಮವನ್ನೇ, ನಿನಗೆ ಅದು ಇಷ್ಟವಾಗುವುದಾದರೆ, ನೀಡೋಣ ಎಂದು.

ಇಲ್ಲಿ 'ಅಭ್ಯರ್ಥಾಯ' ಎಂಬುದಕ್ಕೆ 'ಅಶ್ವತ್ಥಾಮ್ನೇ' ಎಂದು ಪಾಠಾಂತರವಿದೆ. ಅದಕ್ಕೆ ಅರ್ಥ ಸ್ಪಷ್ಟವೇ ಇದೆ ಎಂದು ಲಕ್ಷಾಲಂಕಾರ ಹೇಳಿದೆ. ನೀಲಕಂಠೀಯಾನುಸಾರಿ ಪಾಠ ಇಲ್ಲಿ 'ಅಭ್ಯುತ್ಥಾಯ' ಎಂದು. 'ಎದ್ದು' ಅತಿಥಿಸತ್ಕಾರ ನೀಡು ಎಂದರ್ಥ. ಇದರಿಂದ ಲಕ್ಷಾಲಂಕಾರಕ್ಕೆ ಒಂದು ಮೂಲಪಾಠದ ಸಂಶೋಧನದಲ್ಲಿ ಆಗ್ರಹವಿಲ್ಲವೆಂದು ತಿಳಿಯುತ್ತದೆ. ಯುಕ್ತವಾದ ಯಾವುದೇ ಪಾಠವನ್ನು ಸ್ವೀಕರಿಸಬಹುದೆಂದು ಅವರ ಅಭಿಪ್ರಾಯವಿದೆ.

ಏವಮುಕ್ತೋಽವದತ್ ಪಾರ್ಥಂ ಕೃಷ್ಣೋ ದ್ರೋಣಾತ್ಮಜಾಂತಿಕೇ ।
ಜೈತ್ರೇಣ ವಿಧಿನಾಽಽಹೂತಂ ವಾಯುಮಿಂದ್ರಮಿವಾಧ್ವರೇ ॥೨೯॥

ಅರ್ಜುನನು ಹೀಗೆ ಹೇಳಿದಾಗ ಶ್ರೀಕೃಷ್ಣ ಅವನನ್ನು ಅಶ್ವತ್ಥಾಮನ ಬಳಿಗೆ ಒಯ್ದು ಹೇಳಿದ, 'ಅರ್ಜುನ, ಯಜ್ಞದಲ್ಲಿ ಆಹುತಿ ಸ್ವೀಕರಿಸಲು ವಾಯುವೂ ಇಂದ್ರನೂ ಆಹ್ವಾನಿತರಾಗುತ್ತಾರೆ. ಹಾಗೇ ನೀನೂ 'ಜೈತ್ರವಿಧಿ'ಯಿಂದ, ಅಂದರೆ ಜಯದಾಯಕವಾದ ದೈವದಿಂದ ಯುದ್ಧಯಜ್ಞದಲ್ಲಿ ಆಹ್ವಾನಿತನಾಗಿರುವೆ' ಎಂದು.

ತಮಾಮಂತ್ರ್ಯೈಕಮನಸಂ ಕೇಶವೋ ದ್ರೌಣಿಮಬ್ರವೀತ್ । ॥೩೦॥

ಶ್ರೀಭಗವಾನ್

ಅಶ್ವತ್ಥಾಮನ್ ಸ್ಥಿರೋ ಭೂತ್ವಾ ಪ್ರಹರಾಶು ಸಹಸ್ವ ಚ ।
ನಿರ್ವೇಷ್ಟುಂ ಭರ್ತೃಪಿಂಡಂ ಹಿ ಕಾಲೋಽಯಮುಪಜೀವಿನಾಮ್ ॥೩೧॥

ಅಶ್ವತ್ಥಾಮನನ್ನು ಶ್ರೀಕೃಷ್ಣ ಸಂಬೋಧಿಸಿ, ತದೇಕಚಿತ್ತನಾಗಿ ಆಲಿಸುತ್ತಿದ್ದ ಅವನಿಗೆ ಹೇಳಿದ, 'ಅಶ್ವತ್ಥಾಮನೆ, ಯುದ್ಧದಲ್ಲಿ ಸ್ಥಿರವಾಗಿ ನಿಂತು ಬಾಣಪ್ರಹಾರ ಮಾಡು ಮತ್ತು ಬಾಣಪ್ರಹಾರವನ್ನು ಸಹಿಸಿಕೊಳ್ಳು. 'ಭರ್ತೃಪಿಂಡ'ವನ್ನು ಅಂದರೆ, ಯಜಮಾನನಾಗಿ ಅರ್ಜುನನು ನಿನಗೆ ನೀಡುತ್ತಿರುವ ಅನ್ನವನ್ನು 'ನಿರ್ವೇಷ್ಟುಂ' ಉಣಲು, ಅದನ್ನು ಉಪಜೀವಿಸುವ ಅತಿಥಿ ಬ್ರಾಹ್ಮಣರಿಗೆ ಇದು ಕಾಲ.

ಸೂಕ್ಷ್ಮೌ ವಿವಾದೌ ವಿಪ್ರಾಣಾಂ ಸ್ಥೂಲೌ ಕ್ಷತ್ರೇ ಜಯಾಜಯೌ ॥೩೨॥

ನ ಹಿ ಸಂಕ್ಷಮಸೇ ಮೋಹಾದ್ ದಿವ್ಯಂ ಪಾರ್ಥಸ್ಯ ಸತ್ಕ್ರಿಯಾಮ್ ।
ಸಮಾಪ್ತುಮಿಚ್ಛನ್ ಯುಧ್ಯಸ್ವ ಸ್ಥಿರೋ ಭೂತ್ವಾದ್ಯ
ಪಾಂಡವಮ್ ॥೩೩॥

'ವಿಪ್ರರ ವಾದ–ವಿವಾದಗಳು ಬುದ್ಧಿಮೂಲವಾಗಿದ್ದು. ಸೂಕ್ಷ್ಮವಾಗಿರುತ್ತವೆ. ಆದರೆ ಕ್ಷತ್ರಿಯರ ಜಯಾಪಜಯಗಳು ಶಾರೀರಕವಾಗಿದ್ದು ಸ್ಥೂಲವಾಗಿರುತ್ತವೆ. ವಿಪ್ರನಾದ ನೀನು ಅವನ್ನು ಅರಗಿಸಿಕೊಳ್ಳಲಾರೆ, 'ಮೋಹದಿಂದ' ಅಜ್ಞಾನದಿಂದ, ಅರ್ಜುನನು ನೀಡುವ ದಿವ್ಯವಾದ ಅತಿಥಿ ಸತ್ಕಾರವನ್ನು ಹೊಂದಲು ಬಯಸುವ ನೀನು ಈಗ ಸ್ಥಿರವಾಗಿ ನಿಂತು ಅರ್ಜುನನೊಂದಿಗೆ ಯುದ್ಧಮಾಡು.'

ಸಂಜಯಃ

ಇತ್ಯುಕ್ತೋ ವಾಸುದೇವೇನ ತಥೇತ್ಯುಕ್ತ್ವಾ ದ್ವಿಜೋತ್ತಮಃ ।
ವಿವ್ಯಾಧ ಕೇಶವಂ ಷಷ್ಟ್ಯಾ ನಾರಾಚೈರರ್ಜುನಂ ತ್ರಿಭಿಃ ॥೩೪॥

ಶ್ರೀಕೃಷ್ಣ ಹೀಗೆ ಹೇಳಿದಾಗ 'ಹಾಗೇ ಆಗಲಿ' ಎಂದು ಹೇಳಿ ವಿಪ್ರೋತ್ತಮ ಅಶ್ವತ್ಥಾಮನು ಶ್ರೀಕೃಷ್ಣನನ್ನು ಅರವತ್ತು ಬಾಣಗಳಿಂದ ಹೊಡೆದ, ಅರ್ಜುನನನ್ನು ಮೂರು ಬಾಣಗಳಿಂದ ಹೊಡೆದ.

ತಸ್ಯಾರ್ಜುನಃ ಸುಸಂಕ್ರುದ್ಧಃ ತ್ರಿಭಿರ್ಭಲ್ಲೈಃ ಶರಾಸನಮ್ ।
ಚಿಚ್ಛೇದಾಥಾನ್ಯದಾದತ್ತ ದ್ರೌಣಿರ್ಘೋರತರಂ ಧನುಃ ॥೩೫॥

ಅರ್ಜುನ ಕುಪಿತನಾಗಿ ಮೂರು ಭಲ್ಲೆಗಳಿಂದ ಅಶ್ವತ್ಥಾಮನ ಬಿಲ್ಲನ್ನು ಕಡಿದ. ಒಡನೆ ಅಶ್ವತ್ಥಾಮ ಇನ್ನೂ ಹೆಚ್ಚು ಭಯಂಕರವಾದ ಇನ್ನೊಂದು ಧನುಸ್ಸನ್ನು ಎತ್ತಿಕೊಂಡ.

ಸಜ್ಯಂ ಕೃತ್ವಾ ನಿಮೇಷಾತ್ತು ವಿವ್ಯಾಧಾರ್ಜುನಕೇಶವೌ ।
ತ್ರಿಭಿಃ ಶತೈರ್ವಾಸುದೇವಂ ಸಹಸ್ರೇಣ ಚ ಫಲ್ಗುನಮ್ ॥೩೬॥

ಆ ಧನುಸ್ಸನ್ನು ನಿಮಿಷದಲ್ಲಿ ಹೆದೆಯೇರಿಸಿ ಅಶ್ವತ್ಥಾಮನು ಅರ್ಜುನ ಕೃಷ್ಣರನ್ನು ಹೊಡೆದ– ಮುನ್ನೂರು ಬಾಣಗಳಿಂದ ಕೃಷ್ಣನನ್ನು ಮತ್ತು ಸಾವಿರ ಬಾಣಗಳಿಂದ ಅರ್ಜುನನನ್ನು

ತತಃ ಶರಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಸಸೃಜೇ ದ್ರೌಣಿರಾಯತ್ತಃ ಸ್ತಂಭಯಾಮಾಸ ಚಾರ್ಜುನಮ್ ॥೩೭॥

ಬಳಿಕ ಅಶ್ವತ್ಥಾಮ ಸಾವಿರ–ದಶಲಕ್ಷ–ದಶಕೋಟಿ ಬಾಣಗಳನ್ನು ಎಸೆದ. ಪ್ರಯತ್ನದಿಂದ ಅರ್ಜುನನನ್ನು ಅಲ್ಲಾಡದಂತೆ ಮಾಡಿದ.

ಇಷುಧೇರ್ಧನುಷೋ ಜ್ಯಾಯಾಸ್ತ್ವಂಗುಲಿಭ್ಯಶ್ಚ ಮಾರಿಷ ।
ಬಾಹ್ವೋಃ ಕರಾಭ್ಯಾಮುರಸೋ ವದನಾದ್ ಘ್ರಾಣನೇತ್ರತಃ ॥೩೮॥

ಕರ್ಣಾಭ್ಯಾಂ ಶಿರಸೋಽಂಗೇಭ್ಯೋ ಲೋಮವರ್ಮಭ್ಯ ಏವ ಚ ।
ರಥಧ್ವಜಾಭ್ಯಾಂ ಚ ಶರಾ ನಿಷ್ಪೇತುರ್ಬ್ರಹ್ಮವಾದಿನಃ ॥೩೯॥

ರಾಜನೆ, ಇದು ಹೇಗೆ ಸಾಧ್ಯವಾಯಿತೆಂದರೆ ಬ್ರಹ್ಮವಾದಿಯಾದ ಅಶ್ವತ್ಥಾಮನ ಬತ್ತಳಿಕೆಯಿಂದ, ಬಿಲ್ಲು ಹೆದೆ ತೋಳುಗಳು ಕೈಗಳು ಎದೆ ಬಾಯಿ ಮೂಗು ಕಣ್ಣು ಕಿವಿ ಮುಂತಾದ ಅಂಗಗಳಿಂದ, ತಲೆಯಿಂದ ಕೂದಲು ಕವಚ ರಥ ಧ್ವಜಗಳಿಂದಲೂ ಬಾಣಗಳು ಹೊರಟು ಬಂದುವು.

ಶರಜಾಲೇನ ಮಹತಾ ಬದ್ಧ್ವಾ ಕೇಶವಪಾಂಡವೌ ।
ನನಾದ ಮುದಿತೋ ದ್ರೌಣಿರ್ಮಹಾಮೇಘೌಘನಿಸ್ವನಃ ॥೪೦॥

ಬಾಣಗಳ ದೊಡ್ಡ ಸಮೂಹದಿಂದ ಕೃಷ್ಣಾರ್ಜುನರನ್ನು ಬಂಧಿಸಿ ಅಶ್ವತ್ಥಾಮ ಸಂತುಷ್ಟನಾಗಿ ದೊಡ್ಡ ಮೋಡಗಳ ಗುಡುಗಿನಂತೆ ಗರ್ಜನೆ ಮಾಡಿದ.

ತೈಃ ಪತದ್ಭಿರ್ಮಹಾರಾಜ ದ್ರೌಣಿಮುಕ್ತೈಃ ಸಮಂತತಃ ।
ಸಂಛಾದಿತೌ ರಥಸ್ಥೌ ತಾವುಭೌ ಕೃಷ್ಣಧನಂಜಯೌ ॥೪೧॥

ಮಹಾರಾಜ, ಅಶ್ವತ್ಥಾಮನು ಎಸೆದ ಬಾಣಗಳು ರಥದಲ್ಲಿದ್ದ ಕೃಷ್ಣಾರ್ಜುನರನ್ನು ಪೂರ್ತಿ ಆಚ್ಛಾದಿಸಿದುವು.

ತತಃ ಶರಶತೈಸ್ತೀಕ್ಷ್ಣೈರ್ಭಾರದ್ವಾಜಃ ಪ್ರತಾಪವಾನ್ ।
ನಿಶ್ಚೇಷ್ಟೌ ತಾವುಭೌ ಚಕ್ರೇ ರಣೇ ಮಾಧವಪಾಂಡವೌ ॥೪೨॥

ಪ್ರತಾಪಶಾಲಿ ಅಶ್ವತ್ಥಾಮನು ನೂರಾರು ತೀಕ್ಷ್ಣಬಾಣಗಳಿಂದ ಕೃಷ್ಣಾರ್ಜುನರಿಬ್ಬರನ್ನೂ ನಿಶ್ಚೇಷ್ಟರನ್ನಾಗಿ ಮಾಡಿದ.

ಹಾಹಾಕೃತಮಭೂತ್ ಸರ್ವಂ ಸ್ಥಾವರಂ ಜಂಗಮಂ ತಥಾ ।
ಚರಾಚರಸ್ಯ ಗೋಪ್ತಾರೌ ದೃಷ್ಟ್ವಾ ಸಂಛಾದಿತೌ ಶರೈಃ ॥೪೩॥

ಎಲ್ಲ ಸ್ಥಾವರ ಜಂಗಮಗಳೂ ಆಗ ಚರಾಚರ ರಕ್ಷಕರಾದ ಕೃಷ್ಣಾರ್ಜುನರೇ ಬಾಣಗಳಲ್ಲಿ ಮುಳುಗಿದುದನ್ನು ಕಂಡು ಹಾಹಾಕಾರ ಮಾಡಿದುವು.

ಸಿದ್ಧಚಾರಣಸಂಘಾಶ್ಚ ಸಂಪೇತುರ್ವೈ ಸಮಂತತಃ ।
ಅಪಿ ಸ್ವಸ್ತಿ ಭವೇದದ್ಯ ಲೋಕಾನಾಮಿತಿ ಚಾಬ್ರುವನ್ ॥೪೪॥

ಸಿದ್ಧಚಾರಣ ಸಮೂಹಗಳು ಎಲ್ಲೆಡೆಯಿಂದ ಬಂದವು, 'ಲೋಕಗಳಿಗೆ ಈಗ ಕ್ಷೇಮವಾಗುವುದೆ?' ಎಂದವು.

ನ ಮಯಾ ತಾದೃಶೋ ರಾಜನ್ ದೃಷ್ಟಪೂರ್ವಃ ಪರಾಕ್ರಮಃ ।
ಸಂಜಜ್ಞೇ ಯಾದೃಶೋ ದ್ರೌಣೇಃ ಕೃಷ್ಣೌ ಛಾದಯತೋ ರಣೇ ॥೪೫॥

ರಾಜನೆ, ನಾನು ಆ ರೀತಿಯ ಪರಾಕ್ರಮವನ್ನು ಎಂದೂ ಕಂಡಿಲ್ಲ. ರಣದಲ್ಲಿ ಕೃಷ್ಣಾರ್ಜುನರನ್ನು ಕೂಡ ಆಚ್ಛಾದನ ಮಾಡುವ ಪರಾಕ್ರಮ ಅಶ್ವತ್ಥಾಮನದು.

ದ್ರೌಣೇಸ್ತು ಧನುಷಃ ಶಬ್ದಂ ರಥಾನಾಂ ತ್ರಾಸನಂ ರಣೇ ।
ಅಶ್ರೌಷಂ ಬಹುಶೋ ರಾಜನ್ ಸಿಂಹಸ್ಯ ನದತೋ ಯಥಾ ॥೪೬॥

ಅಶ್ವತ್ಥಾಮನ ಧನುಸ್ಸಿನ ಶಬ್ದ ರಥಗಳ ಚಲನಶಬ್ದಗಳು ಸಿಂಹಗರ್ಜನೆಯಂತೆ. ಬಹುಬಾರಿ ಅವುಗಳನ್ನು ನಾನು ಆಲಿಸಿದೆ.

ಜ್ಯಾ ಚಾಸ್ಯ ಚರತೋ ಯುದ್ಧೇ ಸವ್ಯಂ ದಕ್ಷಿಣಮಸ್ಯತಃ ।
ವಿದ್ಯುದಂಭೋಧರಸ್ಯೇವ ಭ್ರಾಜಮಾನಾ ವ್ಯದೃಶ್ಯತ ॥೪೭॥

ಅಶ್ವತ್ಥಾಮನ ಬಿಲ್ಲಿನ ಹೆದೆ, ಅವನು ಎಡಕ್ಕೆ ಬಲಕ್ಕೆ ಬಾಣಗಳನ್ನೆಸೆಯುವಾಗ ರಣರಂಗದಲ್ಲಿ ಅವನು ಸಂಚರಿಸಿದಾಗ, ಮಿಂಚಿನಂತೆ ಹೊಳೆಯುತ್ತಿದ್ದುದು ಕಂಡುಬಂದಿತು.

ಸ ತದಾ ಕ್ಷಿಪ್ರಕಾರೀ ಚ ದೃಢಹಸ್ತಶ್ಚ ಪಾಂಡವಃ ।
ಪ್ರಮೋಹಂ ಪರಮಂ ಗತ್ವಾ ಪ್ರೇಕ್ಷನ್ನಾಸ್ತೇ ಧನಂಜಯಃ ॥೪೮॥

ವೇಗವುಳ್ಳವನು ದೃಢಹಸ್ತನು ಅರ್ಜುನನಾದರೂ ಆಗ ಬಹಳ ಮೈಮರೆತು ನೋಡುತ್ತಲೇ ಇದ್ದ.

ವಿಕ್ರಮಂ ಚ ಹೃತಂ ಮೇನೇ ಆತ್ಮನಸ್ತೇನ ಸಂಯುಗೇ ॥೪೯॥

ತನ್ನ ಪರಾಕ್ರಮವನ್ನು ಯುದ್ಧದಲ್ಲಿ ಅಶ್ವತ್ಥಾಮ ಅಪಹರಿಸಿದನೆಂದೇ ಭಾವಿಸಿದ, ಅರ್ಜುನ.

ತದಾऽಸ್ಯ ಸಮರೇ ರಾಜನ್ ವಪುರಾಸೀತ್ ಸುದುರ್ದೃಶಮ್ ।
ದ್ರೌಣೇಸ್ತತ್ ಕುರ್ವತಃ ಕರ್ಮ ಯಾದೃಗ್ರೂಪಂ ಪಿನಾಕಿನಃ ॥೫೦॥

ಅಶ್ವತ್ಥಾಮನ ಶರೀರ, ಅವನು ಆ ಸಾಹಸಕರ್ಮವನ್ನು ಮಾಡುವಾಗ ರುದ್ರನ ರೂಪದಂತೆ ನೋಡಲು ಅಸಾಧ್ಯವಾಗಿತ್ತು.

ವರ್ಧಮಾನೇ ತತಸ್ತತ್ರ ದ್ರೋಣಪುತ್ರೇ ವಿಶಾಂಪತೇ ।
ಹೀಯಮಾನೇ ಚ ಕೌಂತೇಯೇ ಕೃಷ್ಣಂ ರೋಷಃ ಸಮಾವಿಶತ್ ॥೫೧॥

ರಾಜನೆ, ಅಶ್ವತ್ಥಾಮನ ಪರಾಕ್ರಮ ಹೆಚ್ಚುತ್ತಿರುವಾಗ ಅರ್ಜುನನ ಪರಾಕ್ರಮ ಕ್ಷೀಣಿಸುತ್ತಿದ್ದುದನ್ನು ಕಂಡು ಕೃಷ್ಣನಿಗೆ ರೋಷ ಉಕ್ಕಿಬಂದಿತು.

ಸ ರೋಷಾನ್ನಿಶ್ವಸನ್ ರಾಜನ್ ನಿರ್ದಹನ್ನಿವ ಚಕ್ಷುಷಾ ।
ದ್ರೌಣಿಂ ದದರ್ಶ ಸಂಗ್ರಾಮೇ ಫಲ್ಗುನಂ ಚ ಮುಹುರ್ಮುಹುಃ ॥೫೨॥

ಕೃಷ್ಣ ರೋಷದಿಂದ, ಕಣ್ಣುಗಳಿಂದ ದಹಿಸುವಂತೆ, ಮತ್ತೆಮತ್ತೆ ಅಶ್ವತ್ಥಾಮನನ್ನು ದಿಟ್ಟಿಸಿದ. ಅರ್ಜುನನನ್ನೂ ದಿಟ್ಟಿಸಿದ.

ತತಃ ಕ್ರುದ್ಧೋऽಬ್ರವೀತ್ ಕೃಷ್ಣಃ ಪಾರ್ಥಂ ಸಪ್ರಣಯಂ ವಚಃ ॥೫೩॥

ಕ್ರುದ್ಧನಾದ ಕೃಷ್ಣ ಅರ್ಜುನನನ್ನು ಪ್ರೀತಿಯಿಂದ ಮಾತನಾಡಿಸಿದ.

ಶ್ರೀಭಗವಾನ್

ಅತ್ಯದ್ಭುತಮಹಂ ಪಾರ್ಥ ತ್ವಯಿ ಪಶ್ಯಾಮಿ ಸಂಯುಗೇ ।
ಯತ್ ತ್ವಾಂ ವಿಶೇಷಯತ್ಯಾಜೌ ದ್ರೋಣಪುತ್ರೋऽದ್ಯ ಭಾರತ ॥೫೪॥

ಶ್ರೀಭಗವಂತ ನುಡಿದ— ಅರ್ಜುನ, ನಾನು ಯುದ್ಧದಲ್ಲಿ ನಿನ್ನ ಅತ್ಯದ್ಭುತ ಪರಾಕ್ರಮವನ್ನು ಕಂಡೆ! ಏಕೆಂದರೆ, ಅಶ್ವತ್ಥಾಮ ಇಂದು ಯುದ್ಧದಲ್ಲಿ ನಿನ್ನನ್ನು ಮೀರಿಸುತ್ತಿದ್ದಾನೆ!

ಕಚ್ಚಿತ್ತೇ ಗಾಂಡಿವಂ ಹಸ್ತೇ ಮುಷ್ಟಿರ್ವಾ ನ ವ್ಯಶೀರ್ಯತ ।
ಕಚ್ಚಿದ್ವೀರ್ಯಂ ಯಥಾಪೂರ್ವಂ ಭುಜಯೋರ್ವಾ ಬಲಂ ತವ ॥೫೫॥

ನಿನ್ನ ಕೈಯಲ್ಲಿ ಗಾಂಡೀವವಾಗಲಿ ಮುಷ್ಟಿಯಾಗಲಿ ಹಾಳಾಗಿಲ್ಲ ತಾನೆ? ನಿನ್ನ ಪರಾಕ್ರಮ ಹಿಂದಿನಂತೆಯೆ ಇದೆ ತಾನೆ? ಭುಜಬಲವೂ ಹಿಂದಿನಂತೆಯೆ ಇದೆ ತಾನೆ?

ಉದೀರ್ಯಮಾಣಂ ಹಿ ರಣೇ ಪಶ್ಯಾಮಿ ದ್ರೌಣಮಾಹವೇ ॥೫೬॥

ಅಶ್ವತ್ಥಾಮ ಯುದ್ಧದಲ್ಲಿ ಹೆಚ್ಚುತ್ತಿರುವುದನ್ನು ಕಾಣುತ್ತಿದ್ದೇನೆ!

ಗುರುಪುತ್ರ ಇತಿ ಹ್ಯೇನಂ ಮಾನಯನ್ ಪಾಂಡವರ್ಷಭ ।
ಉಪೇಕ್ಷಾಂ ಮಾ ಕೃಥಾಃ ಪಾರ್ಥ ನಾಯಂ ಕಾಲೋ
ಹ್ಯುಪೇಕ್ಷಿತುಮ್ ॥೫೭॥

ಗುರುಪುತ್ರನೆಂದು ಈತನನ್ನು ಅರ್ಜುನ, ಉಪೇಕ್ಷೆ ಮಾಡಬೇಡ. ಇದು ಉಪೇಕ್ಷಿಸುವ ಕಾಲವಲ್ಲ' ಎಂದು.

ತಸ್ಯ ನಾದಂ ತತಃ ಶ್ರುತ್ವಾ ಪಾಂಡವೋಚ್ಯುತಮಬ್ರವೀತ್ ॥೫೮॥

ಆಗ ಅರ್ಜುನ ಅಶ್ವತ್ಥಾಮನ ಸಿಂಹನಾದವನ್ನು ಕೇಳಿ ಶ್ರೀಕೃಷ್ಣನಿಗೆ ಹೇಳಿದ.

ಅರ್ಜುನಃ

ಪಶ್ಯ ಮಾಧವ ದೌರಾತ್ಮ್ಯಂ ಗುರುಪುತ್ರಸ್ಯ ಸಾಂಪ್ರತಮ್ ।
ವಧಂ ಪ್ರಾಪ್ತೌ ಮನ್ಯತೇ ನೌ ಪ್ರಾವೇಶ್ಯ ಶರವೇಶ್ಮನಿ ॥೫೯॥

ಅರ್ಜುನ ನುಡಿದ— 'ನೋಡು ಈಗ ಕೃಷ್ಣ ಗುರುಪುತ್ರನು ಎಷ್ಟು ದುರಾತ್ಮನಾಗಿರುವನು. ಬಾಣಗಳ ಮನೆಯೊಳಗೆ ನಮ್ಮನ್ನು ಇರಿಸಿ ಹತರಾದೇವೆಂದು ತಿಳಿಯುತ್ತಾನೆ!

ಏಷೋಽಸ್ಯ ಹನ್ಮಿ ಸಂಕಲ್ಪಂ ಶಿಕ್ಷಯಾ ಚ ಬಲೇನ ಚ ॥೬೦॥

ನಾನು ನನ್ನ ವಿದ್ಯೆಯಿಂದಲೂ ಬಲದಿಂದಲೂ ಅವನ ಸಂಕಲ್ಪವನ್ನು ಸುಳ್ಳಾಗಿಸುತ್ತೇನೆ.'

ಏವಮುಕ್ತ್ವಾ ತಸ್ಯ ಚಿಚ್ಛೇದ ಭಲ್ಲೈಃ ಸನ್ನತಪರ್ವಭಿಃ ।
ಧನುಶ್ಛತ್ರಂ ಪತಾಕಾಂ ಚ ರಥಂ ಶಕ್ತಿಂ ಗದಾಂ ವರಾಮ್ ॥೬೧॥

ಸಂಜಯನು ನುಡಿದ— ಹೀಗೆ ಹೇಳಿದ ಅರ್ಜುನನು ಡೊಂಕುಗಿಣ್ಣಿನ ಭಲ್ಲೆಗಳಿಂದ ಅಶ್ವತ್ಥಾಮನ, ಧನುಸ್ ಛತ್ರ ಪತಾಕೆ ರಥ ಉತ್ತಮವಾದ ಶಕ್ತಿ ಗದೆಗಳನ್ನು ತುಂಡರಿಸಿದನು.

ಅಶ್ವತ್ಥಾಮ್ನಃ ಶರಾನಸ್ತಾನ್ ಛಿತ್ತ್ವೈಕೈಕಂ ತ್ರಿಭಿಸ್ತ್ರಿಭಿಃ ।
ವ್ಯಧಮದ್ ಭರತಶ್ರೇಷ್ಠೋ ನೀಹಾರಮಿವ ಮಾರುತಃ ॥೬೨॥

ಅಶ್ವತ್ಥಾಮನು ಎಸೆದ ಒಂದೊಂದೂ ಬಾಣವನ್ನು ಮೂರುಮೂರಾಗಿ ಕತ್ತರಿಸಿ, ಗಾಳಿಯು ಮಂಜನ್ನು ದೂರಮಾಡುವಂತೆ ಅರ್ಜುನ ಅವುಗಳನ್ನು ನಾಶಮಾಡಿದ.

ತತಃ ಸಂಶಪ್ತಕಾನ್ ಭೂಯಃ ಸಾಶ್ವಸೂತರಥದ್ವಿಪಾನ್ ।
ಸಪದಾತಿಗಣಾನುಗ್ರೈರ್ಬಾಣೈರ್ವಿವ್ಯಾಧ ಪಾಂಡವಃ ॥೬೩॥

ಬಳಿಕ ಅರ್ಜುನ ಅಶ್ವ ಸೂತ ರಥ ಆನೆ ಪದಾತಿಗಳೊಂದಿಗೆ ಸಂಶಪ್ತಕರನ್ನೂ ಭಯಂಕರ ಬಾಣಗಳಿಂದ ಮತ್ತೆಮತ್ತೆ ಹೊಡೆದ.

ಯೇ ಯೇ ದದೃಶಿರೇ ತತ್ರ ಯದ್ಯದ್ರೂಪಂ ತದಾ ಜನಾಃ ।
ತೇ ತೇ ತತ್ತಚ್ಚರೈರ್ವ್ಯಾಪ್ತಂ ಮೇನಿರೇಽತ್ಮಾನಮೇವ ಚ ॥೬೪॥

ಜನರು ಯಾರು ಯಾರು, ಯಾರು ಯಾರ ಮೈಗಳನ್ನು ಕಂಡರೋ, ಅವರನ್ನು ಮಾತ್ರವಲ್ಲದೆ, ತಮ್ಮ ಮೈಗಳನ್ನೂ ಕೂಡ ಅರ್ಜುನನ ಆಯಾ ಬಾಣಗಳಿಂದ ತುಂಬಿ ಕೊಂಡಂತೆಯೇ ಕಂಡರು.

ಗಾಂಡೀವಪ್ರಚ್ಯುತಾಸ್ತೇ ವೈ ನಾನಾರೂಪಾಃ ಪತತ್ರಿಣಃ ।
ಕ್ರೋಶೇ ಸಾಗ್ರೇ ಸ್ಥಿತಾನ್ ಜಘ್ನುರ್ದ್ವಿಪಾಂಶ್ಚ ಪುರುಷಾನ್ ರಣೇ ॥೬೫॥

ಅರ್ಜುನನ ಗಾಂಡೀವದಿಂದ ಹೊರಟ ನಾನಾ ರೂಪವಾದ ಬಾಣಗಳು ಎದುರಿನಲ್ಲಿ ಮಾತ್ರವಲ್ಲದೆ ಕ್ರೋಶ ದೂರದಷ್ಟು ಆಚೆಇರುವ ಆನೆಗಳನ್ನೂ ಯೋಧರನ್ನೂ ಸಂಹರಿಸುತ್ತಿದ್ದುವು.

ಭಲ್ಲೈಶ್ಛಿನ್ನಾಃ ಕರಾಃ ಪೇತುರ್ದ್ವಿಪಾನಾಂ ಮದವರ್ಷಿಣಾಮ್ ।
ವನೇ ಯಥಾ ಪರಶುಭಿಃ ನಿಕೃತ್ತಾಃ ಶಾಲ್ಮಲಿದ್ರುಮಾಃ ॥೬೬॥

ಕಾಡಿನಲ್ಲಿ ಕೊಡಲಿಯಿಂದ ಕಡಿದುಬೀಳುವ ಶಾಲ್ಮಲಿ ವೃಕ್ಷಗಳಂತೆ ಅರ್ಜುನನ ಭಲ್ಲೆಗಳಿಂದ ಮದಸುರಿಸುವ ಆನೆಗಳ ಸೊಂಡಿಲುಗಳು ಕಡಿದು ಬಿದ್ದುವು.

ಪಶ್ಚಾತ್ತು ಶೈಲವತ್ ಪೇತುಸ್ತೇ ಗಜಾಃ ಸಹ ಸಾದಿಭಿಃ ।
ವಜ್ರಿವಜ್ರಪ್ರಮಥಿತಾ ಯಥಾ ಶೈಲಚಯಾಸ್ತಥಾ ॥೬೭॥

ಬಳಿಕ ಇಂದ್ರನ ವಜ್ರಾಯುಧದಿಂದ ಪರ್ವತಸಮೂಹಗಳು ಕಡಿದುಬಿದ್ದಂತೆ, ಸೊಂಡಿಲು ಕಳೆದುಕೊಂಡ ಬೆಟ್ಟಗಳಂತಿದ್ದ ಗಜಗಳು ಗಜಾರೋಹಿಗಳೊಂದಿಗೆ ಕಡಿದುಬಿದ್ದುವು.

ಗಂಧರ್ವನಗರಾಕಾರಾನ್ ವಿಧಿವತ್ ಕಲ್ಪಿತಾನ್ ರಥಾನ್ ।
ವಿನೀತೈರ್ಜವನೈರ್ಯುಕ್ತಾನಾಸ್ಥಿತಾನ್ ಯುದ್ಧದುರ್ಮದೈಃ ॥೬೮॥

ಶರೈರ್ವಿಶಕಲೀಕುರ್ವನ್ನಮಿತ್ರಾನಭ್ಯವೀವೃಷತ್ ।
ಸ್ವಲಂಕೃತಾನಶ್ವಸಾದೀನ್ ಪತ್ತೀನ್ ನಿಘ್ನನ್ ರಣಾಜಿರೇ ॥೬೯॥

ಆಗಸದಲ್ಲಿ ಕಂಡುಬರುವ ಕಾಲ್ಪನಿಕ ಗಂಧರ್ವನಗರಾಕಾರದಲ್ಲಿ ವಿಧ್ಯುಕ್ತವಾಗಿ ಸಜ್ಜಾಗಿ ನಿಂತ ರಥಗಳಿಗೆ ಸುಶಿಕ್ಷಿತವಾದ ವೇಗದ ಕುದುರೆಗಳನ್ನು ಕಟ್ಟಿ ಅವುಗಳನ್ನೇರಿ ಯುದ್ಧಮಾಡುವ ಹವ್ಯಾಸದವರಾದ ಯೋಧರನ್ನೂ, ಆಭರಣಗಳಿಂದ ಅಲಂಕೃತರಾದ ಅಶ್ವಾರೋಹಿಗಳನ್ನೂ ಪದಾತಿಗಳನ್ನೂ ರಣರಂಗದಲ್ಲಿ ಅರ್ಜುನನು ಬಾಣಗಳಿಂದ ಚೂರುಚೂರಾಗಿ ಮಾಡುತ್ತ ಶತ್ರುಗಳ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದ.

ಧನಂಜಯಯುಗಾಂತಾಗ್ನಿಃ ಸಂಶಪ್ತಕಮಹಾರ್ಣವಮ್ ।
ವ್ಯಶೋಷಯತ ದುಃಶೇಷಂ ತಿಗ್ಮೈಃ ಶರಗಭಸ್ತಿಭಿಃ ॥೭೦॥

ಶೋಷಿಸಲಾಗದ ಮಹಾ ಸಮುದ್ರದ ಗರ್ಭದಲ್ಲಿ ವಾಡವಾಗ್ನಿಯು ಇದ್ದು ಪ್ರಳಯಕಾಲದಲ್ಲಿ ಅದು ಇಡೀ ಸಮುದ್ರವನ್ನೇ ಉಂಡು ಬರಿದುಮಾಡುತ್ತದೆ. ತೀಕ್ಷ್ಣಬಾಣಗಳೆಂಬ ಕಿರಣಗಳಿಂದ ಅರ್ಜುನನೆಂಬ ವಾಡವಾಗ್ನಿಯೂ ಹಾಗೇ, ಶೋಷಿಸಲಾಗದಂಥ ಸಂಶಪ್ತಕ ಸೈನ್ಯವೆಂಬ ಮಹಾಸಾಗರವನ್ನು ಪೂರ್ತಿ ಶೋಷಿಸಿದ.

ತಂ ಚ ದ್ರೌಣಿಮಹಾಶೈಲಂ ನಾರಾಚೈರ್ವಜ್ರಸನ್ನಿಭೈಃ ।
ನಿರ್ಬಿಭೇದ ಮಹಾವೇಗೈಃ ತ್ವರನ್ ವಜ್ರೀವ ಪರ್ವತಮ್ ॥೭೧॥

ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಕಡಿಯುವಂತೆ ಅರ್ಜುನನು ವಜ್ರಾಯುಧದಂಥ ಮಹಾವೇಗ ಉಳ್ಳ ಬಾಣಗಳಿಂದ ಅಶ್ವತ್ಥಾಮನೆಂಬ ಮಹಾಪರ್ವತವನ್ನು ಕೂಡ ಬೇಗನೆ ಭೇದಿಸಿದ.

ತಮಾಚಾರ್ಯಸುತಃ ಕ್ರುದ್ಧಃ ಸಾಶ್ವಯಂತಾರಮಾಶುಗೈಃ ।
ಛಾದಯಾಮಾಸ ಸಮರೇ ಪಾರ್ಥಸ್ತಾನಂತರಾऽಚ್ಛಿನತ್ ॥೭೨॥

ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮ ಕ್ರುದ್ಧನಾಗಿ ಅರ್ಜುನನನ್ನೂ ಅವನ ಕುದುರೆಗಳನ್ನೂ ಸಾರಥಿಯನ್ನೂ ಬಾಣಗಳ ಮಳೆಯಿಂದ ಮುಚ್ಚಿದ. ಆದರೆ ಅರ್ಜುನ ಅವುಗಳನ್ನು ನಡುವೆಯೇ ಕತ್ತರಿಸಿದ.

ತತಃ ಪರಮಸಂಕ್ರುದ್ಧಃ ಕಾಂಡಕೋಶಮವಾಸೃಜತ್ ।
ಅಶ್ವತ್ಥಾಮಾಭಿರೂಪಾಯ ಗೃಹಾನತಿಥಯೇ ಯಥಾ ॥೭೩॥

ಯೋಗ್ಯ ಅತಿಥಿ ಮನೆಗೆ ಬಂದಾಗ ಗೃಹಸ್ಥನು ಅವನಿಗೆ ಅಪೇಕ್ಷಿತವಾದ ಎಲ್ಲ ಉಪಚಾರಗಳನ್ನು ಅರ್ಪಿಸುವಂತೆ ಬಲು ಕ್ರುದ್ಧನಾದ ಅಶ್ವತ್ಥಾಮ ಅರ್ಜುನನಿಗೆ ಅಪೇಕ್ಷಿತವಾದ ಬಾಣಗಳ ಬೊಕ್ಕಸವನ್ನೇ ಸುರಿದ.

ಅಥ ಸಂಶಪ್ತಕಾನ್ಮುಕ್ತ್ವಾ ಪಾಂಡವೋ ದ್ರೌಣಿಮಭ್ಯಯಾತ್ ।
ಅಪಾಂಕ್ತೇಯಾನಿವ ತ್ಯಕ್ತ್ವಾ ದಾತಾ ಪಾಂಕ್ತೇಯಮರ್ಥಿನಮ್ ॥೭೪॥
ಸ್ಥಿತಾಃ ಸಂಶಪ್ತಕಾ ರಾಜನ್ ದೃಷ್ಟ್ವಾ ಯುದ್ಧಂ ಮಹಾತ್ಮನೋಃ ॥೭೫॥

ಬಳಿಕ ಅರ್ಜುನ ಸಂಶಪ್ತಕರೊಡನೆ ಯುದ್ಧ ಮಾಡುವುದನ್ನು ಬಿಟ್ಟು

ಅರ್ಜುನನ ಗಾಂಡೀವದಿಂದ ಹೊರಟ ನಾನಾ ರೂಪವಾದ ಬಾಣಗಳು ಎದುರಿನಲ್ಲಿ ಮಾತ್ರವಲ್ಲದೆ ಕ್ರೋಶ ದೂರದಷ್ಟು ಆಚೆಇರುವ ಆನೆಗಳನ್ನೂ ಯೋಧರನ್ನೂ ಸಂಹರಿಸುತ್ತಿದ್ದುವು.

ಭಲ್ಲೈಶ್ಛಿನ್ನಾಃ ಕರಾಃ ಪೇತುರ್ದ್ವಿಪಾನಾಂ ಮದವರ್ಷಿಣಾಮ್ ।
ವನೇ ಯಥಾ ಪರಶುಭಿಃ ನಿಕೃತ್ತಾಃ ಶಾಲ್ಮಲಿದ್ರುಮಾಃ ॥೬೬॥

ಕಾಡಿನಲ್ಲಿ ಕೊಡಲಿಯಿಂದ ಕಡಿದುಬೀಳುವ ಶಾಲ್ಮಲಿ ವೃಕ್ಷಗಳಂತೆ ಅರ್ಜುನನ ಭಲ್ಲೆಗಳಿಂದ ಮದಸುರಿಸುವ ಆನೆಗಳ ಸೊಂಡಿಲುಗಳು ಕಡಿದು ಬಿದ್ದುವು.

ಪಶ್ಚಾತ್ತು ಶೈಲವತ್ ಪೇತುಸ್ತೇ ಗಜಾಃ ಸಹ ಸಾದಿಭಿಃ ।
ವಜ್ರಿವಜ್ರಪ್ರಮಥಿತಾ ಯಥಾ ಶೈಲಚಯಾಸ್ತಥಾ ॥೬೭॥

ಬಳಿಕ ಇಂದ್ರನ ವಜ್ರಾಯುಧದಿಂದ ಪರ್ವತಸಮೂಹಗಳು ಕಡಿದುಬಿದ್ದಂತೆ, ಸೊಂಡಿಲು ಕಳೆದುಕೊಂಡ ಬೆಟ್ಟಗಳಂತಿದ್ದ ಗಜಗಳು ಗಜಾರೋಹಿಗಳೊಂದಿಗೆ ಕಡಿದುಬಿದ್ದುವು.

ಗಂಧರ್ವನಗರಾಕಾರಾನ್ ವಿಧಿವತ್ ಕಲ್ಪಿತಾನ್ ರಥಾನ್ ।
ವಿನೀತೈರ್ಜವನೈರ್ಯುಕ್ತಾನಾಸ್ಥಿತಾನ್ ಯುದ್ಧದುರ್ಮದೈಃ ॥೬೮॥

ಶರೈರ್ವಿಶಕಲೀಕುರ್ವನ್ನಮಿತ್ರಾನಭ್ಯವೀವೃಷತ್ ।
ಸ್ವಲಂಕೃತಾನಶ್ವಸಾದೀನ್ ಪತ್ತೀನ್ ನಿಘ್ನನ್ ರಣಾಜಿರೇ ॥೬೯॥

ಆಗಸದಲ್ಲಿ ಕಂಡುಬರುವ ಕಾಲ್ಪನಿಕ ಗಂಧರ್ವನಗರಾಕಾರದಲ್ಲಿ ವಿಧ್ಯುಕ್ತವಾಗಿ ಸಜ್ಜಾಗಿ ನಿಂತ ರಥಗಳಿಗೆ ಸುಶಿಕ್ಷಿತವಾದ ವೇಗದ ಕುದುರೆಗಳನ್ನು ಕಟ್ಟಿ ಅವುಗಳನ್ನೇರಿ ಯುದ್ಧಮಾಡುವ ಹವ್ಯಾಸದವರಾದ ಯೋಧರನ್ನೂ, ಆಭರಣಗಳಿಂದ ಅಲಂಕೃತರಾದ ಅಶ್ವಾರೋಹಿಗಳನ್ನೂ ಪದಾತಿಗಳನ್ನೂ ರಣರಂಗದಲ್ಲಿ ಅರ್ಜುನನು ಬಾಣಗಳಿಂದ ಚೂರುಚೂರಾಗಿ ಮಾಡುತ್ತ ಶತ್ರುಗಳ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದ.

ಧನಂಜಯಯುಗಾಂತಾಗ್ನಿಃ ಸಂಶಪ್ತಕಮಹಾರ್ಣವಮ್ ।
ವ್ಯಶೋಷಯತ ದುಃಶೇಷಂ ತಿಗ್ಮೈಃ ಶರಗಭಸ್ತಿಭಿಃ ॥೭೦॥

ಶೋಷಿಸಲಾಗದ ಮಹಾ ಸಮುದ್ರದ ಗರ್ಭದಲ್ಲಿ ವಾಡವಾಗ್ನಿಯು ಇದ್ದು ಪ್ರಳಯಕಾಲದಲ್ಲಿ ಅದು ಇಡೀ ಸಮುದ್ರವನ್ನೇ ಉಂಡು ಬರಿದುಮಾಡುತ್ತದೆ. ತೀಕ್ಷ್ಣಬಾಣಗಳೆಂಬ ಕಿರಣಗಳಿಂದ ಅರ್ಜುನನೆಂಬ ವಾಡವಾಗ್ನಿಯೂ ಹಾಗೇ, ಶೋಷಿಸಲಾಗದಂಥ ಸಂಶಪ್ತಕ ಸೈನ್ಯವೆಂಬ ಮಹಾಸಾಗರವನ್ನು ಪೂರ್ತಿ ಶೋಷಿಸಿದ.

ತಂ ಚ ದ್ರೌಣಿಮಹಾಶೈಲಂ ನಾರಾಚೈರ್ವಜ್ರಸನ್ನಿಭೈಃ ।
ನಿರ್ಬಿಭೇದ ಮಹಾವೇಗೈಃ ತ್ವರನ್ ವಜ್ರೀವ ಪರ್ವತಮ್ ॥೭೧॥

ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಕಡಿಯುವಂತೆ ಅರ್ಜುನನು ವಜ್ರಾಯುಧದಂಥ ಮಹಾವೇಗ ಉಳ್ಳ ಬಾಣಗಳಿಂದ ಅಶ್ವತ್ಥಾಮನೆಂಬ ಮಹಾಪರ್ವತವನ್ನು ಕೂಡ ಬೇಗನೆ ಭೇದಿಸಿದ.

ತಮಾಚಾರ್ಯಸುತಃ ಕ್ರುದ್ಧಃ ಸಾಶ್ವಯಂತಾರಮಾಶುಗೈಃ ।
ಛಾದಯಾಮಾಸ ಸಮರೇ ಪಾರ್ಥಸ್ತಾನಂತರಾऽಚ್ಛಿನತ್ ॥೭೨॥

ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮ ಕ್ರುದ್ಧನಾಗಿ ಅರ್ಜುನನನ್ನೂ ಅವನ ಕುದುರೆಗಳನ್ನೂ ಸಾರಥಿಯನ್ನೂ ಬಾಣಗಳ ಮಳೆಯಿಂದ ಮುಚ್ಚಿದ. ಆದರೆ ಅರ್ಜುನ ಅವುಗಳನ್ನು ನಡುವೆಯೇ ಕತ್ತರಿಸಿದ.

ತತಃ ಪರಮಸಂಕ್ರುದ್ಧಃ ಕಾಂಡಕೋಶಮವಾಸೃಜತ್ ।
ಅಶ್ವತ್ಥಾಮಾಭಿರೂಪಾಯ ಗೃಹಾನತಿಥಯೇ ಯಥಾ ॥೭೩॥

ಯೋಗ್ಯ ಅತಿಥಿ ಮನೆಗೆ ಬಂದಾಗ ಗೃಹಸ್ಥನು ಅವನಿಗೆ ಅಪೇಕ್ಷಿತವಾದ ಎಲ್ಲ ಉಪಚಾರಗಳನ್ನು ಅರ್ಪಿಸುವಂತೆ ಬಲು ಕ್ರುದ್ಧನಾದ ಅಶ್ವತ್ಥಾಮ ಅರ್ಜುನನಿಗೆ ಅಪೇಕ್ಷಿತವಾದ ಬಾಣಗಳ ಬೊಕ್ಕಸವನ್ನೇ ಸುರಿದ.

ಅಥ ಸಂಶಪ್ತಕಾನ್ಮುಕ್ತ್ವಾ ಪಾಂಡವೋ ದ್ರೌಣಿಮಭ್ಯಯಾತ್ ।
ಅಪಾಂಕ್ತೇಯಾನಿವ ತ್ಯಕ್ತ್ವಾ ದಾತಾ ಪಾಂಕ್ತೇಯಮರ್ಥಿನಮ್ ॥೭೪॥
ಸ್ಥಿತಾಃ ಸಂಶಪ್ತಕಾ ರಾಜನ್ ದೃಷ್ಟ್ವಾ ಯುದ್ಧಂ ಮಹಾತ್ಮನೋಃ ॥೭೫॥

ಬಳಿಕ ಅರ್ಜುನ ಸಂಶಪ್ತಕರೊಡನೆ ಯುದ್ಧ ಮಾಡುವುದನ್ನು ಬಿಟ್ಟು

ಅಶ್ವತ್ಥಾಮನೊಡನೇ ಯುದ್ಧವನ್ನು ಮಾಡಲುತೊಡಗಿದ, ದಾನ ಮಾಡುವ ಗೃಹಸ್ಥನು ಪಂಕ್ತಿಗೆ ಯೋಗ್ಯರಲ್ಲದವರನ್ನು ಬಿಟ್ಟು ಯೋಗ್ಯರಿಗೇ ಅನ್ನದಾನ ಮಾಡುವಂತೆ. ರಾಜನೆ, ಸಂಶಪ್ತಕರು ಆಗ ಮಹಾತ್ಮರಾದ ಅರ್ಜುನ ಅಶ್ವತ್ಥಾಮರ ಯುದ್ಧವನ್ನೇ ನೋಡುತ್ತ ನಿಂತರು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷೋಡಶೋಽಧ್ಯಾಯಃ ॥೧೬॥

❖

ಮಹಾಭಾರತತಾತ್ಪರ್ಯನಿರ್ಣಯ

ತದಾಭವದ್ ಯುದ್ಧಮತೀವ ದಾರುಣಂ
ದ್ರೌಣೇಸ್ತನೂಜೇನ ತು ವಜ್ರಪಾಣೇಃ ।
ತತ್ರಾಪಿ ಬದ್ಧಃ ಶರಪಂಜರೇಣ
ಪಾರ್ಥೋಪನುತ್ತಾಪಿ ಚ ಗಾಂಡಿವಜ್ಯಾ ॥ ೯೨ ॥

ಆಗ ಅಶ್ವತ್ಥಾಮ ಅರ್ಜುನರಿಗೆ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿಯೂ ಅರ್ಜುನ ಶರಪಂಜರದಲ್ಲಿ ಬದ್ಧನಾದ ಮತ್ತು ಗಾಂಡೀವದ ಹೆದೆಯೂ ಕಡಿಯಲ್ಪಟ್ಟಿತು.

ಪಾರ್ಥೋಽಥ ಕೃಷ್ಣೇ ಧೃತಬಾಹುವೀರ್ಯೋ
ನಿಹತ್ಯ ಸೂತಂ ಗುರುಪುತ್ರಕಸ್ಯ ।
ಛಿತ್ವಾ ಚ ರಶ್ಮೀಂಸ್ತುರಗಾನಮುಷ್ಯ
ವಿದ್ರಾವಯಾಮಾಸ ಶರೈಃ ಸುದೂರಮ್ ॥ ೯೩ ॥

ಬಳಿಕ ಅರ್ಜುನನ ಬಾಹುಪರಾಕ್ರಮವನ್ನು ಶ್ರೀಕೃಷ್ಣ ಹೆಚ್ಚಿಸಿದ. ಅರ್ಜುನನು ಅಶ್ವತ್ಥಾಮನ ಸಾರಥಿಯನ್ನು ಕೊಂದು ಅವನ ಕುದುರೆಗಳ ಹಗ್ಗಗಳನ್ನೂ ಕತ್ತರಿಸಿ ಕುದುರೆಗಳನ್ನು ಬಾಣಗಳಿಂದ ಬಲು ದೂರಕೆ ಓಡಿಸಿದ.

❖

ಹದಿನೇಳನೆಯ ಅಧ್ಯಾಯ

ಅರ್ಜುನನಿಂದ ಅಶ್ವತ್ಥಾಮನ ಪರಾಜಯ.

ಸಂಜಯಃ

ತತಃ ಸಮಭವದ್ ಯುದ್ಧಂ ಶುಕ್ರಾಂಗಿರಸವರ್ಚಸೋಃ ।
ನಕ್ಷತ್ರಮಭಿತೋ ವ್ಯೋಮ್ನಿ ಶುಕ್ರಾಂಗಿರಸಯೋರಿವ ॥೧॥

ಸಂಜಯನು ಹೇಳುತ್ತಾನೆ— ಆಕಾಶದಲ್ಲಿ ನಕ್ಷತ್ರಗಳ ನಡುವೆ ಶುಕ್ರ ಗುರು ಗ್ರಹಗಳಿಗೆ ಯುದ್ಧ ನಡೆದರೆ ಹೇಗಿರಬಹುದೋ ಹಾಗೆ ಶುಕ್ರ ಬೃಹಸ್ಪತಿಗಳಂತಿರುವ ಅರ್ಜುನ ಅಶ್ವತ್ಥಾಮರಿಗೆ ಯುದ್ಧ ನಡೆಯಿತು.

ಸನ್ತಾಪಯನ್ತಾವನ್ಯೋನ್ಯಂ ತೌ ದೀಪ್ತೈಃ ಶರರಶ್ಮಿಭಿಃ ।
ಲೋಕತ್ರಾಸಕರಾವಾಸ್ತಾಂ ವಿಮಾರ್ಗಸ್ಥಾವಿವ ಗ್ರಹೌ ॥೨॥

ವಕ್ರಗತಿಯಿಂದ ಸಂಚರಿಸುವ ಎರಡು ಗ್ರಹಗಳಿಗೆ ಯುದ್ಧವಾದರೆ ಲೋಕ ಭಯಗೊಳ್ಳುತ್ತದೆ. ಹಾಗೇ ಅರ್ಜುನ ಅಶ್ವತ್ಥಾಮರು ಯುದ್ಧಮಾಡಲು ತೊಡಗಿದಾಗ ಲೋಕ ಭಯಗೊಂಡಿತು. ಅವರಿಬ್ಬರೂ ಪ್ರಕಾಶಮಾನವಾದ ಬಾಣಗಳೆಂಬ ಕಿರಣಗಳಿಂದ ಪರಸ್ಪರ ತಾಪ ಉಂಟುಮಾಡಿದರು.

ತತೋऽವಿಧ್ಯದ್ ಭ್ರುವೋರ್ಮಧ್ಯೇ ನಾರಾಚೇನಾರ್ಜುನೋ ಭೃಶಮ್।
ಸ ತೇನ ವಿಬಭೌ ದ್ರೌಣಿರೂರ್ಧ್ವರಶ್ಮಿರ್ಯಥಾ ರವಿಃ ॥೩॥

ಅರ್ಜುನ ಅಶ್ವತ್ಥಾಮನನ್ನು ಹುಬ್ಬುಗಳ ನಡುವೆ ಬಾಣದಿಂದ ಚೆನ್ನಾಗಿ ಹೊಡೆದ. ಆಗ ಊರ್ಧ್ವಮುಖವಾದ ರಶ್ಮಿಯಿಂದ ಸೂರ್ಯನು ಹೊಳೆಯುವಂತೆ ಆ ಬಾಣದಿಂದ ಅಶ್ವತ್ಥಾಮ ಶೋಭಿಸಿದ.

ಅಥ ಕೃಷ್ಣೌ ಶರಶತೈರಶ್ವತ್ಥಾಮ್ನಾऽರ್ದಿತೌ ಭೃಶಮ್ ।
ಸ್ವರಶ್ಮಿಜಾಲವಿಕಚೌ ಯುಗಾಂತಾರ್ಕಾವಿವಾಸತುಃ ॥೪॥

ತಮ್ಮ ರಶ್ಮಿಸಮೂಹಗಳಿಂದ ಬೆಳಗುವ ಇಬ್ಬರು ಯುಗಾಂತಕಾಲದ ಸೂರ್ಯರಂತೆ, ಅಶ್ವತ್ಥಾಮನೆಸೆದ ನೂರಾರು ಬಾಣಗಳಿಂದ ಬಲವಾಗಿ ಹೊಡೆಸಿಕೊಂಡ ಕೃಷ್ಣಾರ್ಜುನರಿಬ್ಬರು ಬೆಳಗಿದರು.

ಅಶ್ವತ್ಥಾಮನೊಡನೇ ಯುದ್ಧವನ್ನು ಮಾಡಲುತೊಡಗಿದ, ದಾನ ಮಾಡುವ ಗೃಹಸ್ಥನು ಪಂಕ್ತಿಗೆ ಯೋಗ್ಯರಲ್ಲದವರನ್ನು ಬಿಟ್ಟು ಯೋಗ್ಯರಿಗೇ ಅನ್ನದಾನ ಮಾಡುವಂತೆ. ರಾಜನೆ, ಸಂಶಪ್ತಕರು ಆಗ ಮಹಾತ್ಮರಾದ ಅರ್ಜುನ ಅಶ್ವತ್ಥಾಮರ ಯುದ್ಧವನ್ನೇ ನೋಡುತ್ತ ನಿಂತರು.

ಇತಿ ಶ್ರೀಮನ್ಮಹಾಭಾರತೇ ಶತಸಾಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷೋಡಶೋಽಧ್ಯಾಯಃ ॥೧೬॥

❖

ಮಹಾಭಾರತತಾತ್ಪರ್ಯನಿರ್ಣಯ

ತದಾಭವದ್ ಯುದ್ಧಮತೀವ ದಾರುಣಂ
ದ್ರೌಣೇಸ್ತನೂಜೇನ ತು ವಜ್ರಪಾಣೇಃ ।
ತತ್ರಾಪಿ ಬದ್ಧಃ ಶರಪಂಜರೇಣ
ಪಾರ್ಥೋಪನುತ್ತಾಪಿ ಚ ಗಾಂಡಿವಜ್ಯಾ ॥ ೯೨ ॥

ಆಗ ಅಶ್ವತ್ಥಾಮ ಅರ್ಜುನರಿಗೆ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿಯೂ ಅರ್ಜುನ ಶರಪಂಜರದಲ್ಲಿ ಬದ್ಧನಾದ ಮತ್ತು ಗಾಂಡೀವದ ಹೆದೆಯೂ ಕಡಿಯಲ್ಪಟ್ಟಿತು.

ಪಾರ್ಥೋಽಥ ಕೃಷ್ಣೇ ಧೃತಬಾಹುವೀರ್ಯೋ
ನಿಹತ್ಯ ಸೂತಂ ಗುರುಪುತ್ರಕಸ್ಯ ।
ಛಿತ್ವಾ ಚ ರಶ್ಮೀಂಸ್ತುರಗಾನಮುಷ್ಯ
ವಿದ್ರಾವಯಾಮಾಸ ಶರೈಃ ಸುದೂರಮ್ ॥ ೯೩ ॥

ಬಳಿಕ ಅರ್ಜುನನ ಬಾಹುಪರಾಕ್ರಮವನ್ನು ಶ್ರೀಕೃಷ್ಣ ಹೆಚ್ಚಿಸಿದ. ಅರ್ಜುನನು ಅಶ್ವತ್ಥಾಮನ ಸಾರಥಿಯನ್ನು ಕೊಂದು ಅವನ ಕುದುರೆಗಳ ಹಗ್ಗಗಳನ್ನೂ ಕತ್ತರಿಸಿ ಕುದುರೆಗಳನ್ನು ಬಾಣಗಳಿಂದ ಬಲು ದೂರಕೆ ಓಡಿಸಿದ.

❖

ಹದಿನೇಳನೆಯ ಅಧ್ಯಾಯ

ಅರ್ಜುನನಿಂದ ಅಶ್ವತ್ಥಾಮನ ಪರಾಜಯ.

ಸಂಜಯಃ

ತತಃ ಸಮಭವದ್ ಯುದ್ಧಂ ಶುಕ್ರಾಂಗಿರಸವರ್ಚಸೋಃ ।
ನಕ್ಷತ್ರಮಭಿತೋ ವ್ಯೋಮ್ನಿ ಶುಕ್ರಾಂಗಿರಸಯೋರಿವ ॥೧॥

ಸಂಜಯನು ಹೇಳುತ್ತಾನೆ— ಆಕಾಶದಲ್ಲಿ ನಕ್ಷತ್ರಗಳ ನಡುವೆ ಶುಕ್ರ ಗುರು ಗ್ರಹಗಳಿಗೆ ಯುದ್ಧ ನಡೆದರೆ ಹೇಗಿರಬಹುದೋ ಹಾಗೆ ಶುಕ್ರ ಬೃಹಸ್ಪತಿಗಳಂತಿರುವ ಅರ್ಜುನ ಅಶ್ವತ್ಥಾಮರಿಗೆ ಯುದ್ಧ ನಡೆಯಿತು.

ಸನ್ತಾಪಯನ್ತಾವನ್ಯೋನ್ಯಂ ತೌ ದೀಪ್ತೈಃ ಶರರಶ್ಮಿಭಿಃ ।
ಲೋಕತ್ರಾಸಕರಾವಾಸ್ತಾಂ ವಿಮಾರ್ಗಸ್ಥಾವಿವ ಗ್ರಹೌ ॥೨॥

ವಕ್ರಗತಿಯಿಂದ ಸಂಚರಿಸುವ ಎರಡು ಗ್ರಹಗಳಿಗೆ ಯುದ್ಧವಾದರೆ ಲೋಕ ಭಯಗೊಳ್ಳುತ್ತದೆ. ಹಾಗೇ ಅರ್ಜುನ ಅಶ್ವತ್ಥಾಮರು ಯುದ್ಧಮಾಡಲು ತೊಡಗಿದಾಗ ಲೋಕ ಭಯಗೊಂಡಿತು. ಅವರಿಬ್ಬರೂ ಪ್ರಕಾಶಮಾನವಾದ ಬಾಣಗಳೆಂಬ ಕಿರಣಗಳಿಂದ ಪರಸ್ಪರ ತಾಪ ಉಂಟುಮಾಡಿದರು.

ತತೋಽವಿಧ್ಯದ್ ಭ್ರುವೋರ್ಮಧ್ಯೇ ನಾರಾಚೇನಾರ್ಜುನೋ ಭೃಶಮ್।
ಸ ತೇನ ವಿಬಭೌ ದ್ರೌಣಿರೂರ್ಧ್ವರಶ್ಮಿರ್ಯಥಾ ರವಿಃ ॥೩॥

ಅರ್ಜುನ ಅಶ್ವತ್ಥಾಮನನ್ನು ಹುಬ್ಬುಗಳ ನಡುವೆ ಬಾಣದಿಂದ ಚೆನ್ನಾಗಿ ಹೊಡೆದ. ಆಗ ಊರ್ಧ್ವಮುಖವಾದ ರಶ್ಮಿಯಿಂದ ಸೂರ್ಯನು ಹೊಳೆಯುವಂತೆ ಆ ಬಾಣದಿಂದ ಅಶ್ವತ್ಥಾಮ ಶೋಭಿಸಿದ.

ಅಥ ಕೃಷ್ಣೌ ಶರಶತೈರಶ್ವತ್ಥಾಮ್ನಾऽರ್ದಿತೌ ಭೃಶಮ್ ।
ಸ್ವರಶ್ಮಿಜಾಲವಿಕಚೌ ಯುಗಾಂತಾರ್ಕಾವಿವಾಸತುಃ ॥೪॥

ತಮ್ಮ ರಶ್ಮಿಸಮೂಹಗಳಿಂದ ಬೆಳಗುವ ಇಬ್ಬರು ಯುಗಾಂತಕಾಲದ ಸೂರ್ಯರಂತೆ, ಅಶ್ವತ್ಥಾಮನೆಸೆದ ನೂರಾರು ಬಾಣಗಳಿಂದ ಬಲವಾಗಿ ಹೊಡೆಸಿಕೊಂಡ ಕೃಷ್ಣಾರ್ಜುನರಿಬ್ಬರು ಬೆಳಗಿದರು.

ತತೋऽರ್ಜುನಃ ಸರ್ವತೋಧಾರಮಸ್ತ್ರಮ್
ಅವಾಸೃಜದ್ ವಾಸುದೇವೇऽಭಿಭೂತೇ ।
ದ್ರೌಣಾಯನಿಶ್ಚಾಪ್ಯಹನತ್ ಪೃಷತ್ಕೈ-
ರ್ವಜ್ರಾಗ್ನಿವೈವಸ್ವತದಂಡಕಲ್ಪೈಃ ॥೫॥

ಕೃಷ್ಣ ಅಶ್ವತ್ಥಾಮನ ಬಾಣಗಳಿಂದ ಆವೃತನಾದಾಗ ಅರ್ಜುನ ಎಲ್ಲಕಡೆ ಅಲುಗುಳ್ಳ ಬಾಣವನ್ನು ಎಸೆದ. ಅದಕ್ಕೆ ಅಶ್ವತ್ಥಾಮನೂ ವಜ್ರಾಯುಧ ಅಗ್ನಿ ಯಮ ದಂಡಗಳಿಗೆ ಸಮವಾದ ಬಾಣಗಳಿಂದ ಹೊಡೆದ.

ಸ ಕೇಶವಂ ಚಾರ್ಜುನಂ ಚಾತಿತೇಜಾ
ವಿವ್ಯಾಧ ಮರ್ಮಸ್ವತಿತೀವ್ರಕರ್ಮಾ ।
ಬಾಣೈಃ ಸುಮುಕ್ತೈರತಿತೀವ್ರವೇಗೈ-
ರ್ಯೈರಾಹತೋ ಮೃತ್ಯುರಪಿ ವ್ಯಥೇತ ॥೬॥

ಅತಿಪರಾಕ್ರಮಿ, ಅತಿತೀವ್ರವಾಗಿ ಅಸ್ತ್ರಪ್ರಯೋಗಮಾಡುವವನು ಅಶ್ವತ್ಥಾಮ. ಅತಿತೀವ್ರ ವೇಗದಿಂದ ಚೆನ್ನಾಗಿ ಬಾಣಪ್ರಯೋಗ ಮಾಡಿ ಆತ ಕೃಷ್ಣಾರ್ಜುನ ರಿಬ್ಬರನ್ನೂ ಮರ್ಮಗಳಲ್ಲಿ ಭೇದಿಸಿದ. ಆ ಬಾಣಗಳ ಹೊಡೆತಕ್ಕೆ ಮೃತ್ಯುಕೂಡ ವ್ಯಥೆಗೊಂಡೀತು.

ದ್ರೌಣೇರಿಷೂನರ್ಜುನಃ ಸನ್ನಿವಾರ್ಯ
ವ್ಯಾಯಚ್ಛತಸ್ತದ್ದ್ವಿಗುಣೈಃ ಸುಪುಂಖೈಃ ।
ತಂ ಸಾಶ್ವಸೂತಧ್ವಜಮೇಕವೀರಮ್
ಆವೃತ್ಯ ಸಂಶಪ್ತಕಸೈನ್ಯಮಾರ್ಚ್ಛತ್ ॥೭॥

ಆದರೂ ಅರ್ಜುನ ಪ್ರಯತ್ನಪೂರ್ವಕವಾಗಿ ಅಶ್ವತ್ಥಾಮನೆಸೆದ ಆ ಬಾಣ ಗಳನ್ನು ಅವುಗಳಿಗಿಂತ ಎರಡುಪಟ್ಟು ಹೆಚ್ಚು ಸುಂದರ ರೆಕ್ಕೆ ಉಳ್ಳ ಬಾಣಗಳಿಂದ ತಡೆದ. ಏಕೈಕ ವೀರನಾದ ಅಶ್ವತ್ಥಾಮನನ್ನೂ ಅವನ ಕುದುರೆ ಸಾರಥಿ ಧ್ವಜಗಳೊಂದಿಗೆ ಬಾಣಗಳಿಂದ ಆಚ್ಛಾದಿಸಿ, ಬಳಿಕ ಸಂಶಪ್ತಕಸೈನ್ಯವನ್ನೂ ಆಕ್ರಮಿಸಿದ.

ಧನೂಂಷಿ ಬಾಣಾನಿಷುಧೀರ್ಧನುಜ್ಯಾಃ
ಪಾಣೀನ್ ಭುಜಾನ್ ಪಾಣಿಗತಂ ಚ ಶಸ್ತ್ರಮ್ ।
ಧತ್ರಾಣಿ ಕೇತೂಂಸ್ತುರಗಾನ್ ಅಥೈಷಾಂ
ವಸ್ತ್ರಾಣಿ ಮಾಲ್ಯಾನ್ಯಥ ಭೂಷಣಾನಿ ॥೮॥

ಚರ್ಮಾಣಿ ವರ್ಮಾಣಿ ಸತೋಮರಾಣಿ
ಪ್ರಸಹ್ಯ ತೇಷಾಂ ಸ ಶಿರಾಂಸಿ ಚೈವ ।
ಚಿಚ್ಛೇದ ಪಾರ್ಥೋ ದ್ವಿಷತಾಂ ಸುಮುಕ್ತೈ
ರ್ಬಾಣೈಃ ಸ್ಥಿತಾನಾಮಪರಾಙ್ಮುಖಾನಾಮ್ ॥೯॥

ಶತ್ರುಗಳಾದ ಸಂಶಪ್ತಕರ ಧನುಸ್ ಬಾಣ ಬತ್ತಳಿಕೆ ಹೆದೆ ಕೈ ತೋಳು ಕೈಯಲ್ಲಿ ಹಿಡಿದ ಆಯುಧ ಛತ್ರ ಧ್ವಜ ಕುದುರೆ ವಸ್ತ್ರ ಮಾಲೆ ಆಭರಣ ಗುರಾಣಿ ಕವಚ ಈಟಿ ಹೀಗೆ ಎಲ್ಲವನ್ನೂ ತಲೆಗಳನ್ನೂ ಕೂಡ, ಅವರು ಪಲಾಯನ ಮಾಡದೆ ಇದಿರಿಗೆ ನಿಂತಿದ್ದರೆ ಮಾತ್ರ, ಚೆನ್ನಾಗಿ ಪ್ರಯೋಗಿಸಿದ ಬಾಣಗಳಿಂದ ಬಲಾತ್ಕಾರವಾಗಿ ಅರ್ಜುನ ಕಡಿದುಹಾಕಿದ.

ಸುಕಲ್ಪಿತಾಃ ಸ್ಯಂದನವಾಜಿನಾಗಾಃ
ಸಮಾಸ್ಥಿತಾಃ ಕೃತಯತ್ನೈರ್ನರವೀರೈಃ ।
ಪಾರ್ಥೇರಿತೈರ್ಬಾಣಗಣೈರ್ನಿರಸ್ತಾ
ಸ್ತೈರೇವ ಸಾರ್ಧಂ ನೃವರೈರ್ವಿನೇಶುಃ ॥೧೦॥

ಚೆನ್ನಾಗಿ ಸಜ್ಜಾಗಿದ್ದ ರಥ ಕುದುರೆ ಆನೆ ಸೈನ್ಯಗಳೂ ಒಳ್ಳೆಯ ಪ್ರಯತ್ನಮಾಡುವ ಪದಾತಿ ಸೈನ್ಯಗಳೂ ಅವುಗಳನ್ನು ತಂದಿದ್ದ ರಾಜರೊಂದಿಗೆ ಅರ್ಜುನನ ಬಾಣಗಳಿಗೆ ತುತ್ತಾಗಿ ನಾಶಹೊಂದಿದುವು.

ಪದ್ಮಾರ್ಕಪೂರ್ಣೇಂದುಸಮಾನನಾನಿ
ಕಿರೀಟಮಾಲಾಭರಣೋಜ್ವಲಾನಿ ।
ಭಲ್ಲಾರ್ಧಚಂದ್ರಕ್ಷುರಸನ್ನಿಕೃತ್ತಾ-
ನ್ಯಪಾತಯಚ್ಛತ್ರುಶಿರಾಂಸ್ಯಜಸ್ರಮ್ ॥೧೧॥

ಕಮಲದಂಥ ಸೂರ್ಯನಂಥ ಪೂರ್ಣಚಂದ್ರನಂಥ ಮುಖಗಳಿಂದ, ಕಿರೀಟ ಮಾಲೆ ಆಭರಣಗಳಿಂದ ಯುಕ್ತವಾಗಿ ಉಜ್ವಲವಾಗಿ ಕಾಣುತ್ತಿದ್ದ ಶತ್ರುಯೋಧರ ತಲೆಗಳನ್ನು, ಅರ್ಜುನ ಭಲ್ಲೆ ಅರ್ಧಚಂದ್ರ, ಕ್ಷುರಗಳಿಂದ ಕತ್ತರಿಸುತ್ತ ಒಂದೇ ಸವನೆ ಕೆಡವಿದ.

ಅಥ ದ್ವಿಪೈರ್ದೈತ್ಯರಿಪುದ್ವಿಷಾಭೈ
ರ್ದೇವಾರಿಕಲ್ಪಾ ಬಲಮನ್ಯುದರ್ಪಾಃ ।
ಕಲಿಂಗವಂಗಾಂಗನಿಷಾದವೀರಾ
ಜಿಘಾಂಸವಃ ಪಾಂಡವಮಭ್ಯಧಾವನ್ ॥೧೨॥

ದೈತ್ಯರಿಗೆ ಶತ್ರುವಾದ ದೇವೇಂದ್ರನ ಆನೆಯಂತಿರುವ ಆನೆಗಳನ್ನೇರಿ ದೇವೇಂದ್ರನಂತೆ ಬಲ ಕೋಪ–ದರ್ಪಗಳಿಂದ ದೈತ್ಯರಂಥ ಯುಕ್ತರಾದ ಕಲಿಂಗ ವಂಗ ಅಂಗ ನಿಷಾದದೇಶಗಳ ವೀರರು ಅರ್ಜುನನನ್ನು ಕೊಲ್ಲಲು ಬಯಸಿ ಇದಿರಿಗೆ ಬಂದರು.

ತೇಷಾಂ ದ್ವಿಪಾನಾಂ ನಿಚಕರ್ತ ಪಾರ್ಥ
ಶ್ಚರ್ಮಾಣಿ ವರ್ಮಾಣಿ ಕರಾನ್ ನಿಯಂತ್ಫಾನ್ ।
ಧ್ವಜಾಃ ಪತಾಕಾಶ್ಚ ತತಃ ಪ್ರಪೇತು-
ರ್ವಜ್ರಾಹತಾನೀವ ಗಿರೇಃ ಶಿರಾಂಸಿ ॥೧೩॥

ಆ ವೀರರ ಆನೆಗಳ ಚರ್ಮ ಕವಚ ಸೊಂಡಿಲುಗಳೂ ಗಜಾರೋಹಿ ಗಳೊಂದಿಗೆ ಅರ್ಜುನನ ಬಾಣಗಳಿಂದ ಕಡಿದುವು ಮಾತ್ರವಲ್ಲ ವಜ್ರಾಘಾತಕ್ಕೆ ಪರ್ವತಶಿಖರಗಳು ಉರುಳುವಂತೆ ರಥದ ಧ್ವಜ ಪತಾಕೆಗಳೂ ಉರುಳಿದುವು.

ತೇಷು ಪ್ರಭಗ್ನೇಷು ಗುರೋಸ್ತನೂಜಂ
ಬಾಣೈಃ ಕಿರೀಟೀ ನವಸೂರ್ಯವರ್ಣೈಃ ।
ಪ್ರಚ್ಛಾದಯಾಮಾಸ ಮಹಾಭ್ರಜಾಲೈ-
ರ್ವಾಯುಃ ಸಮುದ್ಯಂತಮಿವಾಂಶುಮಂತಮ್ ॥೧೪॥

ಹೀಗೆ ವೀರರ ಸೈನ್ಯ ನಾಶವಾದಾಗ ಅರ್ಜುನ ಬಾಲಸೂರ್ಯನಂತೆ ಹೊಳೆವ

ಬಾಣಗಳಿಂದ ಅಶ್ವತ್ಥಾಮನನ್ನು ವಾಯುವು ಉದಿಸುವ ಸೂರ್ಯನನ್ನು ದೊಡ್ಡಮೋಡಗಳ ಸಮೂಹದಿಂದ ಆಚ್ಛಾದಿಸುವಂತೆ ಆಚ್ಛಾದಿಸಿದ.

ತತೋಽರ್ಜುನೇಷೂನಿಷುಭಿರ್ನಿರಸ್ಯ
ದ್ರೌಣಿಃ ಶರೈರರ್ಜುನವಾಸುದೇವೌ ।
ಪ್ರಚ್ಛಾದಯಿತ್ವಾ ದಿವಿ ಚಂದ್ರಸೂರ್ಯೌ
ನನಾದ ಸೋಽಂಭೋದ ಇವಾತಪಾಂತೇ ॥೧೫॥

ಅಶ್ವತ್ಥಾಮನೂ ಕೂಡ ಅರ್ಜುನನ ಬಾಣಗಳನ್ನು ಬಾಣಗಳಿಂದ ನಾಶಪಡಿಸಿ, ಬಿಸಿಲುಗಾಲದ ಕೊನೆಯಲ್ಲಿ ಆಕಾಶದಲ್ಲಿ ಚಂದ್ರ-ಸೂರ್ಯರನ್ನು ಮೋಡವು ಆಚ್ಛಾದಿಸಿ ಗುಡುಗುವಂತೆ, ಕೃಷ್ಣಾರ್ಜುನರನ್ನು ಬಾಣಗಳಿಂದ ಆಚ್ಛಾದಿಸಿ ಗುಡುಗಿದ.

ತಮರ್ಜುನಸ್ತಾಂಶ್ಚ ಪುನಸ್ತ್ವದೀಯಾನ್
ಅಭ್ಯರ್ದಿತಸ್ತೈರಭಿಸೃತ್ಯ ಶಸ್ತ್ರೈಃ ।
ಬಾಣಾಂಧಕಾರಂ ಸಹಸೈವ ಕೃತ್ವಾ
ವಿವ್ಯಾಧ ಸರ್ವಾನಿಷುಭಿಃ ಸಪುಂಖೈಃ ॥೧೬॥

ಅಶ್ವತ್ಥಾಮನ ಮತ್ತು ನಿನ್ನ ಸೈನಿಕರ ಬಾಣಗಳಿಂದ ಪೀಡಿತನಾದ ಅರ್ಜುನ ಪುನಃ ಅವರನ್ನು ಶಸ್ತ್ರಗಳಿಂದ ಇದಿರಿಸಿ, ಕ್ಷಣದಲ್ಲಿ ಬಾಣಗಳಿಂದ ಅಂಧಕಾರವನ್ನು ನಿರ್ಮಿಸಿ, ಒಳ್ಳೆಯ ಪುಕ್ಕಗಳುಳ್ಳ ಬಾಣಗಳಿಂದ ಎಲ್ಲರನ್ನೂ ಹೊಡೆದ.

ನಾಪ್ಯಾದದತ್ ಸನ್ದಧನ್ನೈವ ಮುಂಚನ್
ಬಾಣಾನ್ ರಣೇಽದೃಶ್ಯತ ಸವ್ಯಸಾಚೀ ।
ರಥಾನ್ ಸನಾಗಾಂಸ್ತುರಗಾನ್ ಪದಾತೀನ್
ಸಂಸ್ಯೂತದೇಹಾನ್ ದದೃಶುರ್ಹತಾಂಶ್ಚ ॥೧೭॥

ಅರ್ಜುನನು ಬಾಣಗಳನ್ನು ಎತ್ತಿಕೊಳ್ಳುವುದನ್ನಾಗಲಿ, ಹೆದೆಗೇರಿಸುವು ದನ್ನಾಗಲಿ, ಎಸೆಯುವುದನ್ನಾಗಲಿ ಯಾರೂ ನೋಡಲೇ ಇಲ್ಲ. ರಥ ಗಜ ತುರಗ

ಪದಾತಿಗಳಲ್ಲಿ ಮೈಗೆ ಬಾಣಗಳು ನೆಟ್ಟಿದ್ದನ್ನು ಮತ್ತು ಅವರು ಹತರಾದುದನ್ನು ಮಾತ್ರ ನೋಡಿದರು. ಅಷ್ಟು ವೇಗದಿಂದ ಅರ್ಜುನ ಬಾಣಗಳನ್ನೆಸೆದ.

ಸಂಧಾಯ ನಾರಾಚವರಾನ್ ದಶಾಶು
ದ್ರೌಣಸ್ತ್ವರನ್ನೇಕಮಿವೋತ್ಸಸರ್ಜ ।
ತೇಷಾಂ ಚ ಪಂಚಾರ್ಜುನಮಭ್ಯವಿಧ್ಯನ್
ಪಂಚಾಚ್ಯುತಂ ನಿರ್ಬಿಭಿದುಃ ಸುಮುಕ್ತಾಃ ॥೧೮॥

ಅದಕ್ಕೆ ಅಶ್ವತ್ಥಾಮ ಬೇಗನೆ ಅವಸರದಿಂದ ಹತ್ತು ಉತ್ತಮ ಬಾಣಗಳನ್ನು ಒಂದೇ ಬಾಣದಂತೆ ಹೆದೆಗೆ ಏರಿಸಿ ಒಮ್ಮೆಲೆ ಎಸೆದ. ಆದರೆ ಅವುಗಳಲ್ಲಿ ಐದು ಬಾಣಗಳು ಅರ್ಜುನನನ್ನು ಹೊಡೆದಿದ್ದುವು. ಐದು ಕೃಷ್ಣನನ್ನು ಹೊಡೆದಿದ್ದುವು.

ತೈರಾಹತೌ ಸರ್ವಮನುಷ್ಯಮುಖ್ಯಾ-
ವಸೃಕ್ಕರೌ ವೈಶ್ರವಣೇಂದ್ರಕಲ್ಪೌ ।
ಸಮಾಪ್ತವಿದ್ಯೇನ ತಥಾऽಭಿಭೂತೌ
ಹತೌ ಸ್ವಿದೇತಾವಿತಿ ಮೇನಿರೇऽನ್ಯೇ ॥೧೯॥

ಎಲ್ಲ ಮನುಷ್ಯರಲ್ಲಿ ಶ್ರೇಷ್ಠರಾದ, ಕುಬೇರ ಇಂದ್ರರಿಗೆ ಸಮಾನರಾದ ಕೃಷ್ಣಾರ್ಜುನರು ಅಸ್ತ್ರವಿದ್ಯೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದ ಅಶ್ವತ್ಥಾಮನ ಬಾಣಗಳಿಂದ ಹೊಡೆಸಿಕೊಂಡು ನೆತ್ತರು ಸುರಿದರು. ಅವರನ್ನು ಕಂಡವರು ಇತರರು, ಅವರು ಪರಾಜಿತರಾಗಿ ಹತರಾದರೆಂದೇ ಭಾವಿಸಿದರು.

ಅಥಾರ್ಜುನಂ ಪ್ರಾಹ ದಶಾರ್ಹನಾಥಃ
ಪ್ರಮಾದ್ಯಸೇ ಕಿಂ ಜಹಿ ಯೋಧಮೇನಮ್ ।
ಕುರ್ಯಾದ್ಧಿ ದೋಷಂ ಸಮುಪೇಕ್ಷಿತೋऽಸೌ
ಕಷ್ಟೋ ಭವೇದ್ ವ್ಯಾಧಿರಿವಾಕ್ರಿಯಾವಾನ್ ॥೨೦॥

ಶ್ರೀಕೃಷ್ಣ ಅರ್ಜುನನಿಗೆ ಹೇಳಿದ, 'ಏಕೆ ಪ್ರಮಾದ ಮಾಡುವೆ? ಈತನನ್ನು ಬಿಡಬೇಡ, ಹೊಡೆ. ಸುಮ್ಮನೆ ಬಿಟ್ಟರೆ, ವ್ಯಾಧಿಗೆ ಸಕಾಲದಲ್ಲಿ ಸರಿಯಾದ ಚಿಕಿತ್ಸೆ

ಮಾಡದೆ ಬಿಟ್ಟರೆ ಅದು ಕಷ್ಟ ಉಂಟುಮಾಡುತ್ತದೆ, ಹಾಗೆ, ಈತನೂ ನಮಗೆ ಹಾನಿಕಾರಕನಾಗುವನು.'

ತಥೇತಿ ಚೋಕ್ತ್ವಾ ಽಚ್ಯುತಮಪ್ರಮಾದೀ
ದ್ರೌಣಿಂ ಪ್ರಯತ್ನಾದಿಷುಭಿಸ್ತತಕ್ಷ ।
ಭುಜೌ ವರೌ ಚಂದನಸಾರದಿಗ್ಧೌ
ವಕ್ಷಃ ಶಿರೋಽಥಾಪ್ರತಿಮಂ ತಥೋರೂ ॥೨೧॥

ಅರ್ಜುನ ಪ್ರಮಾದ ಮಾಡುವವನಲ್ಲ. ಶ್ರೀಕೃಷ್ಣನಿಗೆ 'ತಥಾಸ್ತು' ಹಾಗೇ ಆಗಲೆಂದು ಹೇಳಿ ಪ್ರಯತ್ನಮಾಡಿ ಬಾಣಗಳಿಂದ ಅಶ್ವತ್ಥಾಮನನ್ನು ಚೆನ್ನಾಗಿ ಹೊಡೆದ. ಶ್ರೀಗಂಧಲೇಪಿತವಾದ ಉತ್ತಮವಾದ ಆತನ ತೋಳುಗಳನ್ನೂ ಅಪ್ರತಿಮವಾದ ಆತನ ಎದೆ ತಲೆ ತೊಡೆಗಳನ್ನೂ ಹೊಡೆದ.

ಗಾಂಡೀವಮುಕ್ತೈಃ ಕುಪಿತಾಹಿಕಲ್ಪೈ-
ದ್ರೌಣಿಂ ಶರೈಃ ಸಂಯತಿ ನಿರ್ಬಿಭೇದ ॥೨೨॥

ಗಾಂಡೀವದಿಂದ ಹೊರಟ, ಕುಪಿತವಾದ ಹಾವಿನಂಥ ಬಾಣಗಳಿಂದ ಅರ್ಜುನ ಅಶ್ವತ್ಥಾಮನನ್ನು ರಣದಲ್ಲಿ ಭೇದಿಸಿದ.

ಛಿತ್ತ್ವಾ ಚ ರಶ್ಮೀಂಸ್ತುರಗಾನವಿಧ್ಯತ್
ತೇ ತಂ ರಣಾದೂಹುರತೀವ ದೂರಮ್ ॥೨೩॥

ಕುದುರೆಗಳ ಹಗ್ಗಗಳನ್ನೂ ಕಡಿದು ಕುದುರೆಗಳನ್ನೂ ಹೊಡೆದ. ಅವುಗಳು ಅಶ್ವತ್ಥಾಮನನ್ನು ರಣರಂಗದಿಂದ ದೂರಕ್ಕೆ ಒಯ್ದುವು.

ಸ ತೈರ್ಹೃತೋ ವಾತಜವೈಸ್ತುರಂಗೈ-
ದ್ರೌಣಿರ್ದೃಢಂ ಪಾರ್ಥಶರಾಭಿಭೂತಃ ।
ಆವೃತ್ಯ ನೇಯೇಷ ಪುನಃ ಸ ಯೋದ್ಧುಂ
ಪಾರ್ಥೇನ ಸಾರ್ಧಂ ಮತಿಮಾನ್ ವಿಮೃಶ್ಯ ॥೨೪॥

ಅರ್ಜುನನ ಬಾಣಗಳಿಂದ ಪರಾಜಿತನಾಗಿದ್ದು ಗಾಳಿಯ ವೇಗದ ಕುದುರೆ

ಗಳಿಂದ ದೂರಕ್ಕೆ ಒಯ್ಯಲ್ಪಟ್ಟ ಅಶ್ವತ್ಥಾಮ ಹಿಂತಿರುಗಿ ಪುನಃ ಅರ್ಜುನನೊಡನೆ ಯುದ್ಧಮಾಡಲು ಬಯಸಲಿಲ್ಲ. ಬುದ್ಧಿಶಾಲಿಯಾದ ಆತ ವಿಮರ್ಶೆ ಮಾಡಿ ಯುದ್ಧ ಮಾಡದಿರಲು ನಿರ್ಧರಿಸಿದ.

ಜಾನನ್ ಜಯಂ ನಿಯತಂ ವೃಷ್ಣಿವೀರೇ
ಧನಂಜಯೇ ಚಾಂಗಿರಸಾಂ ವರಿಷ್ಠಃ ।
ವಿವೇಶ ಕರ್ಣಸ್ಯ ಬಲಂ ತರಸ್ವೀ
ಕ್ಷೀಣೋತ್ಸಾಹಃ ಕ್ಷೀಣಬಾಣಾಸ್ತ್ರಯೋಗಃ ॥೨೫॥

ಕೃಷ್ಣ-ಅರ್ಜುನರಿಗೇ ಜಯ ಖಚಿತವೆಂದು ತಿಳಿದು ನಿರುತ್ಸಾಹಗೊಂಡು ಬಾಣ ಗಳ ಆಯುಧಗಳ ಪ್ರಯೋಗ ಮಾಡುವುದನ್ನು ಬಿಟ್ಟು ಬೇಗನೆ ಕರ್ಣನ ಸೈನ್ಯವನ್ನು ಸೇರಿಕೊಂಡ, ಅಶ್ವತ್ಥಾಮ.

ನಿಯಮ್ಯ ತು ಹಯಾನ್ ದ್ರೌಣಿಃ ಸಮಾಶ್ವಾಸ್ಯ ಪುನಃ ಪುನಃ ।
ಗಜಾಶ್ವರಥಸಂಬಾಧಂ ಕರ್ಣಸ್ಯ ಪ್ರಾವಿಶದ್ ಬಲಮ್ ॥೨೬॥

ಓಡುತ್ತಿದ್ದ ಕುದುರೆಗಳನ್ನು ವಶಕ್ಕೆ ತಂದುಕೊಂಡು, ಪುನಃಪುನಃ ಸಂತೈಸಿ ಗಜ ಅಶ್ವ ರಥಗಳಿಂದ ತುಂಬಿದ್ದ ಕರ್ಣನ ಸೈನ್ಯವನ್ನು ಪ್ರವೇಶಿಸಿದ, ಅಶ್ವತ್ಥಾಮ.

ಪ್ರತೀಪಕಾಮೇ ತು ರಣಾದ್ ಅಶ್ವತ್ಥಾಮ್ನಿ ಹೃತೇ ಹಯೈಃ ।
ಮಂತ್ರೌಷಧಿಕ್ರಿಯಾಯೋಗೈರ್ವ್ಯಾಧೌ ದೇಹಾದಿವಾಹೃತೇ ॥೨೭॥

ಸಂಶಪ್ತಕಾನಭಿಮುಖೌ ಪ್ರಯಾತೌ ಕೇಶವಾರ್ಜುನೌ ।
ವಾತೋದ್ಧೂತಪತಾಕೇನ ಸ್ಯಂದನೇನೌಘನಾದಿನಾ ॥೨೮॥

ಮಂತ್ರ ಔಷಧ ಚಿಕಿತ್ಸೆಗಳಿಂದ ವ್ಯಾಧಿಯು ದೇಹದಿಂದ ದೂರವಾಗುವಂತೆ, ತಮಗೆ ವಿರೋಧಮಾಡಲು ಬಯಸಿದ್ದ ಅಶ್ವತ್ಥಾಮನು ರಣರಂಗದಿಂದಾಚೆಗೆ ಸರಿದಾಗ, ಜಲಪ್ರವಾಹದಂತೆ ಸದ್ದುಮಾಡುವ, ಗಾಳಿಗೆ ಹಾರಾಡುವ ಪತಾಕೆಗಳುಳ್ಳ ರಥದಿಂದ ಕೃಷ್ಣಾರ್ಜುನರು ಸಂಶಪ್ತಕರಿಗೆ ಅಭಿಮುಖವಾಗಿ ಹೊರಟರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ದ್ರೌಣಿಪರಾಜಯೋ ನಾಮ ಸಪ್ತದಶೋಽಧ್ಯಾಯಃ ॥೧೭॥

❖

ಅಥ ವಿದ್ರಾವಯಾಮಾಸ ಪೃತನಾಂ ಪಾಂಡವೀಂ ಶರೈಃ ।
ತದಾ ಜಘಾನ ಪಾರ್ಥೋಽಪಿ ದಂಡಧಾರಾಖ್ಯಮಾಗಧಮ್ ॥ ೬೬ ॥

ಬಳಿಕ ಅಶ್ವತ್ಥಾಮ ಪಾಂಡವಸೇನೆಯನ್ನು ಬಾಣಗಳಿಂದ ಓಡಿಸಿದ. ಆಗ ಅರ್ಜುನನೂ ದಂಡಧಾರನೆಂಬ ಮಗಧರಾಜನನ್ನು ಕೊಂದ.

❖

ಹದಿನೆಂಟನೆಯ ಅಧ್ಯಾಯ

ಅರ್ಜುನನಿಂದ ದಂಡಧಾರ ಮತ್ತು ದಂಡರ ವಧ.

ಸಂಜಯಃ

ಅಥೋತ್ತರೇಣ ಪಾಂಡೂನಾಂ ಸೇನಾಯಾಂ ಧ್ವನಿರುತ್ಥಿತಃ ।
ರಥನಾಗಾಶ್ವಪತ್ತೀನಾಂ ದಂಡಧಾರೇಣ ವಧ್ಯತಾಮ್ ॥೧॥

ಸಂಜಯನು ನುಡಿದ— ಅನಂತರ ಪಾಂಡವ ಸೈನ್ಯದಲ್ಲಿ ದಂಡಧಾರನಿಂದ ಹತರಾಗುತ್ತಿದ್ದ ರಥ ಗಜ ಅಶ್ವ ಪದಾತಿಗಳ ಆರ್ತನಾದ ಕೇಳಿ ಬರತೊಡಗಿತು.

ನಿವರ್ತಯಿತ್ವಾ ತು ರಥಂ ಕೇಶವೋಽರ್ಜುನಮಬ್ರವೀತ್ ।
ವಾಹಯನ್ನೇವ ತುರಗಾನ್ ಗರುಡಾನಿಲರಂಹಸಃ ॥೨॥

ಅಶ್ವತ್ಥಾಮನ ಇದಿರಿನಿಂದ ಈಚೆಗೆ ರಥವನ್ನು ತಿರುಗಿಸಿದ ಬಳಿಕ ಶ್ರೀಕೃಷ್ಣ ಗರುಡವೇಗದ ವಾಯುವೇಗದ ಕುದುರೆಗಳನ್ನು ನಡೆಸುತ್ತಲೇ ಅರ್ಜುನನಿಗೆ ಹೇಳುತ್ತಾನೆ—

ಮಾಗಧೋಽಸಾವತಿಕ್ರಾಂತೋ ದ್ವಿರದೇನ ಪ್ರಮಾಥಿನಾ ।
ಭಗದತ್ತಾದನವರಃ ಶಿಕ್ಷಯಾ ಚ ಬಲೇನ ಚ ॥೩॥

'ಅರ್ಜುನ, ಮಗಧರಾಜ ದಂಡಧಾರ ಈತ, ಸೈನ್ಯವನ್ನು ಪುಡಿಗೈವ ಆನೆಯನ್ನೇರಿ, ಸೈನ್ಯವನ್ನು ಅತಿಯಾಗಿ ಆಕ್ರಮಿಸುತ್ತಿದ್ದಾನೆ. ಅವನು ಯುದ್ಧವಿದ್ಯೆ

ಯಲ್ಲಿಯೂ ಬಲದಲ್ಲಿಯೂ ಭಗದತ್ತನಿಗೆ ಸಮಾನ, ಅವನಿಗಿಂತ ಕಡಿಮೆಯವನೇನಲ್ಲ'

ಏನಂ ಹತ್ವಾ ನಿಹಂತಾಸಿ ಪುನಃ ಸಂಶಪ್ತಕಾನಿತಿ ।
ವಾಕ್ಯಾಂತೇ ಪ್ರಾಪಯತ್ ಪಾರ್ಥಂ ದಂಡಧಾರಾಂತಿಕಂ ಪ್ರತಿ ॥೪॥

'ಈತನನ್ನು ಕೊಂದೇ ಪುನಃ ಸಂಶಪ್ತಕರನ್ನು ಕೊಲ್ಲುವಿಯಂತೆ!' ಎಂದು ಶ್ರೀಕೃಷ್ಣ ಹೇಳುತ್ತ ಮಾತು ಮುಗಿಯುತ್ತಲೇ, ಅರ್ಜುನನನ್ನು ದಂಡಧಾರನ ಬಳಿಗೆ ಒಯ್ದನು.

ಸ ಮಾಗಧಾನಾಂ ಪ್ರವರೋಽಂಕುಶಗ್ರಹೇ
ಮಹಾಬಲಃ ಶೌರ್ಯಗುಣೈಃ ಸಮನ್ವಿತಃ ।
ಸಪತ್ನಸೇನಾಂ ಪ್ರಮಮಾಥ ದಾರುಣೋ
ಮಹೀಂ ಸಮಗ್ರಾಂ ಬಲವಾನಿವ ಗ್ರಹಃ ॥೫॥

ಆ ಮಾಗಧಯೋಧನು ಅಂಕುಶಗ್ರಹಣದಲ್ಲಿ ಅದ್ವಿತೀಯ. ಮಹಾಬಲಶಾಲಿ. ಶೌರ್ಯಾದಿ ಗುಣಗಳಿಂದ ಯುಕ್ತನಾಗಿದ್ದ. ಅವನು ದಾರುಣನಾಗಿ ಶತ್ರುಸೈನ್ಯವನ್ನು ಬಲಿಷ್ಠವಾದ ಉತ್ಪಾತಗ್ರಹವು ಸಮಗ್ರಭೂಮಿಯನ್ನು ಹೇಗೆ ಪೀಡಿಸುವುದೋ ಹಾಗೆ ಪುಡಿಮಾಡತೊಡಗಿದ.

ಸುಕಲ್ಪಿತಂ ದಾನವನಾಗಸನ್ನಿಭಂ
ಮಹಾಭ್ರನಿರ್ಹ್ರಾದಸಮಸ್ವನಂ ರಣೇ ।
ಸಮಾಸ್ಥಿತೋ ನಾಗವರಂ ನರೇಶ್ವರೋ
ರಥಾಶ್ವಮಾತಂಗನರಪ್ರಮಾಥಿನಮ್ ॥೬॥

ಗಜಾಸುರನಂಥ, ಮಹಾಮೇಘದ ಗರ್ಜನೆಯಂಥ ಶಬ್ದ ಮಾಡುವ, ರಥ ಅಶ್ವ ಗಜ ಪದಾತಿಗಳನ್ನು ಪುಡಿಗೈವ, ಬಲುಸಜ್ಜಾದ ದೊಡ್ಡ ಆನೆಯನ್ನೇರಿದ್ದ ಆ ದಂಡಧಾರ.

ಸ ನಾಗಯಂತ್ಫಾನ್ ಸಮರೇ ಮಹಾರಥಾನ್
ಸಪತ್ತಿಸಂಘಾನ್ ತುರಗಾನ್ ಸಸಾದಿನಃ ।

ದ್ವಿಪಾಂಶ್ಚ ಬಾಣೈರ್ನಿಜಘಾನ ವೀರ್ಯವಾನ್
ದ್ವಿಪಾಸ್ಥಿತೋ ಹಂತಿ ಚ ಕಾಲಚಕ್ರವತ್ ॥೭॥

ಗಜಾರೋಹಿಗಳನ್ನೂ ಮಹಾರಥರನ್ನೂ ಪದಾತಿಸಮೂಹಗಳನ್ನೂ ಅಶ್ವಾರೋಹಿಗಳೊಂದಿಗೆ ಅಶ್ವಗಳನ್ನೂ ಗಜಗಳನ್ನೂ ವೀರ್ಯಶಾಲಿಯಾದ ದಂಡಧಾರ ಬಾಣಗಳಿಂದ ಸಂಹರಿಸಿದ. ಆನೆಯನ್ನೇರಿ ಕುಳಿತು ಕಾಲಚಕ್ರದಂತೆ ಎಲ್ಲರನ್ನೂ ಸಂಹರಿಸಿದ.

ನಾಗಾಂಶ್ಚ ಕಾಂಸ್ಯಾಯಸವರ್ಮಭೂಷಣಾನ್
ನಿಪಾತ್ಯ ಪತ್ತೀನಪಿ ವಾಜಿಭಿಃ ಸಹ ।
ವ್ಯಪೋಥಯದ್ ದಂತಿವರೇಣ ಶುಷ್ಮಿಣಾ
ಸಶಬ್ದವತ್ ಸ್ಥೂಲನಲಂ ಯಥಾ ಗಜಃ ॥೮॥

ಕಂಚು ಕಬ್ಬಿಣಗಳ ಕವಚತೊಟ್ಟು ಆಭರಣ ಧರಿಸಿದ ಆನೆಗಳನ್ನೂ ಅಶ್ವಾರೋಹಿಗಳೊಂದಿಗೆ ಪದಾತಿಗಳನ್ನೂ ದಂಡಧಾರನು ಬಲಿಷ್ಠವಾದ ಮಹಾಗಜದ ಮೂಲಕ ದೊಡ್ಡ ಲಾಳದ ಕಾಡನ್ನು ಮದ್ದಾನೆ ತುಳಿಯುವಂತೆ ಶಬ್ದಮಾಡುತ್ತ ತುಳಿಸಿದ.

ಅಥಾರ್ಜುನೋ ಜ್ಯಾತಲನೇಮಿನಿಃಸ್ವನೇ
ಮೃದಂಗಭೇರೀಬಹುಶಂಖನಾದಿತೇ ।
ರಥಾಶ್ವಮಾತಂಗಸಹಸ್ರಸಂಕುಲೇ
ರಥೋತ್ತಮೇನಾಭ್ಯಪತದ್ ದ್ವಿಪೋತ್ತಮಮ್ ॥೯॥

ಧನುಷ್ಟಂಕಾರಶಬ್ದಗಳು ರಥಚಕ್ರಧ್ವನಿಗಳು ಮೃದಂಗ ಭೇರಿ ಬಹುಶಂಖ ಧ್ವನಿಗಳು ಎಲ್ಲೆಡೆ ತುಂಬುವಂತೆ ರಥ ಅಶ್ವ ಗಜಗಳು ಸಾವಿರಗಟ್ಟಲೆ ಪರಸ್ಪರ ಕಾದಾಡುತ್ತಿದ್ದಾಗ ಅರ್ಜುನ ಉತ್ತಮವಾದ ರಥದಿಂದ ಆ ಮದ್ದಾನೆಯನ್ನು ಇದಿರಿಸಿದ.

ತತೋಽರ್ಜುನಂ ದ್ವಾದಶಭಿಃ ಶರೋತ್ತಮೈ-
ರ್ಜನಾರ್ದನಂ ಷೋಡಶಭಿಃ ಸಮಾರ್ಪಯತ್ ।

ಸ ದಂಡಧಾರಸ್ತುರಗಾಂಸ್ತ್ರಿಭಿಸ್ತ್ರಿಭಿ-
ಸ್ತತೋ ನನಾದ ಪ್ರಜಹಾಸ ಚಾಸಕೃತ್ ॥೧೦॥

ಆಗ ದಂಡಧಾರ ಅರ್ಜುನನನ್ನು ಹನ್ನೆರಡು ದೊಡ್ಡಬಾಣಗಳಿಂದಲೂ ಕೃಷ್ಣನನ್ನು ಹದಿನಾರು ಬಾಣಗಳಿಂದಲೂ ಹೊಡೆದ. ಮೂರು ಬಾಣಗಳಿಂದ ಅವನ ಕುದುರೆಗಳನ್ನೂ ಹೊಡೆದು ಪುನಃ ಪುನಃ ಗರ್ಜನೆ ಮಾಡಿದ.

ತತೋಽಸ್ಯ ಪಾರ್ಥಃ ಸಗುಣೇಷುಕಾರ್ಮುಕಂ
ಚಕರ್ತ ಭಲ್ಲೈರ್ಧ್ವಜಮಪ್ಯಲಂಕೃತಮ್ ।
ಪುನರ್ನಿಯಂತ್ಸ್ಯನ್ ಸಹಸಾಽಥ ಗೋಪ್ತೃಭಿ
ಸ್ತತಃ ಸ ಚುಕ್ರೋಧ ಗಿರಿವ್ರಜೇಶ್ವರಃ ॥೧೧॥

ಅದಕ್ಕೆ ಅರ್ಜುನ ಭಲ್ಲೆಗಳಿಂದ ದಂಡಧಾರನ ಬಿಲ್ಲನ್ನು ಹೆದೆ ಬಾಣಗಳೊಂದಿಗೆ ಕತ್ತರಿಸಿದ. ಅಲಂಕೃತವಾದ ಧ್ವಜವನ್ನೂ ಕತ್ತರಿಸಿದ. ಆನೆಯ ಮಾವಟಿಗರನ್ನೂ ರಕ್ಷಕರನ್ನೂ ಸಂಹರಿಸಿದ. ಆಗ ಗಿರಿವ್ರಜಾಧಿಪತಿ ದಂಡಧಾರ ಕುಪಿತನಾದ.

ತತೋಽರ್ಜುನಂ ಭಿನ್ನಕಟೇನ ದಂತಿನಾ
ಘನಾಘನೇನಾನಿತುಲ್ಯರಂಹಸಾ ।
ಅತೀವ ಚುಕ್ಷೋಭಯಿಷುರ್ಜನಾರ್ದನಂ
ಧನಂಜಯಂ ಚಾಪಿ ಜಘಾನ ತೋಮರೈಃ ॥೧೨॥

ಗಾಳಿಗೆ ಸಮಾನ ವೇಗವುಳ್ಳ, ಗಂಡಸ್ಥಳದಿಂದ ಮದಜಲವನ್ನು ಸುರಿಸುವ ಬಲು ದೊಡ್ಡ ಗಾತ್ರದ ಆ ಆನೆಯ ಮೂಲಕ ಅರ್ಜುನನನ್ನೂ ಕೃಷ್ಣನನ್ನೂ ಅತಿಯಾಗಿ ನೋಯಿಸುವ ಬಯಕೆಯಿಂದ ತೋಮರಗಳಿಂದ ಇಬ್ಬರನ್ನೂ ಹೊಡೆದ.

ಅಥಾಸ್ಯ ಬಾಹೂ ದ್ವಿಪಹಸ್ತಸನ್ನಿಭೌ
ಶಿರಶ್ಚ ಪೂರ್ಣೇಂದುನಿಭಾನನಂ ತ್ರಿಭಿಃ ।
ಕ್ಷುರೈಃ ಪ್ರಚಿಚ್ಛೇದ ಸಹೈವ ಪಾಂಡವಃ
ತತೋ ದ್ವಿಪಂ ಬಾಣಶತೈಃ ಸಮಾರ್ಪಯತ್ ॥೧೩॥

ಬಳಿಕ ಅರ್ಜುನ ಆನೆಯ ಸೊಂಡಿಲಿನಂಥ ದಂಡಧಾರನ ತೋಳುಗಳನ್ನೂ ಪೂರ್ಣಚಂದ್ರನಂಥ ಮುಖಯುಕ್ತವಾದ ತಲೆಯನ್ನೂ ಒಮ್ಮೆಲೇ ಮೂರು ಕ್ಷುರಗಳಿಂದ ಕೂಡಿದ ನೂರಾರು ಬಾಣಗಳಿಂದ ಆನೆಯನ್ನೂ ಪೀಡಿಸಿದ.

ಸ ಪಾರ್ಥಬಾಣೈಸ್ತಪನೀಯಭೂಷಣೈಃ
ಸಮಾವೃತಃ ಕಾಂಚನವರ್ಮಭೃದ್ ದ್ವಿಪಃ ।
ಭೃಶಂ ಚಕಾಶೇ ನಿಶಿ ಪರ್ವತೋತ್ತಮೋ
ಯಥಾಗ್ನಿನಾ ಪ್ರಜ್ವಲಿತೌಷಧಿದ್ರುಮಃ ॥೧೪॥

ಬಂಗಾರದ ಅಲಂಕಾರಗಳಿಂದ ಆವೃತವಾಗಿದ್ದ ಬಂಗಾರದ ಕವಚ ಧರಿಸಿದ್ದ ಆನೆ ಈಗ ಅರ್ಜುನನ ಬಾಣಗಳಿಂದ ಆವೃತವಾಗಿ, ರಾತ್ರಿಕಾಲದಲ್ಲಿ ಕಾಳ್ಗಿಚ್ಚಿನಿಂದ ಔಷಧಿವೃಕ್ಷಗಳು ಸುಡುವಾಗಿನ ದೊಡ್ಡ ಬೆಟ್ಟದಂತೆ ಕಂಡುಬಂದಿತು.

ಸ ವೇದನಾರ್ತೋಽಂಬುದನಿಸ್ವನೋ ನದನ್
ಭ್ರಮಂಶ್ಚಲನ್ ಪ್ರಸ್ಖಲಿತಾತುರೋಽದ್ರವತ್ ।
ಪಪಾತ ರುಗ್ಣಃ ಸನಿಯಂತೃಕಸ್ತಥಾ
ಯಥಾ ಗಿರಿರ್ವಜ್ರವಿಘೂರ್ಣಿತಃ ಪುರಾ ॥೧೫॥

ಆನೆ ಬಾಣಗಳ ಏಟಿನ ವೇದನೆಯಿಂದ ಸಂಕಟಪಡುತ್ತ ಮೇಘಗರ್ಜನೆಯಂತೆ ಚೀತ್ಕಾರ ಮಾಡುತ್ತ ಸುತ್ತು ತಿರುಗುತ್ತ ಚಲಿಸುತ್ತ ತತ್ತರಿಸುತ್ತ ಧಾವಿಸಿತು. ಹಿಂದೆ ಪರ್ವತವು ವಜ್ರಾಘಾತದಿಂದ ಉರುಳಿದಂತೆ ಆನೆ ದಂಡಧಾರ ಸಹಿತವಾಗಿ ನೋವಿಂದ ನರಳುತ್ತ ಧರೆಗೊರಗಿತು.

ಹಿಮಾವದಾತೇನ ಸುವರ್ಣಮಾಲಿನಾ
ಹಿಮಾದ್ರಿಕೂಟಪ್ರತಿಮೇನ ದಂತಿನಾ ।
ಹತೇ ರಣೇ ಭ್ರಾತರಿ ದಂಡ ಆವ್ರಜ-
ಜ್ಜಿಘಾಂಸುರಿಂದ್ರಾವರಜಂ ಸಹಾರ್ಜುನಮ್ ॥೧೬॥

ಬಂಗಾರದ ಮಾಲೆಗಳಿಂದ ಅಲಂಕೃತವಾದ ಹಿಮದಂತೆ ಬಿಳಿಯಾದ ಹಿಮಾಲಯದ ಬೆಟ್ಟದ ಶಿಖರದಂತೆ ಕಾಣುತ್ತಿದ್ದ ಆನೆಯನ್ನೇರಿ ಬಂದಿದ್ದ

ದಂಡಧಾರನೂ ಆನೆಯೊಂದಿಗೆ ಹತನಾದಾಗ ಅಲ್ಲಿಗೆ ಅವನ ಸೋದರನಾದ ದಂಡನು ಕೃಷ್ಣಾರ್ಜುನರನ್ನು ವಧಿಸಲೆಂದು ಬಂದ.

ಸ ತೋಮರೈರರ್ಕಕರಪ್ರಭೈಸ್ತ್ರಿಭಿ-
ರ್ಜನಾರ್ದನಂ ಪಂಚಭಿರೇವ ಚಾರ್ಜುನಮ್ ।
ಸಮರ್ಪಯಿತ್ವಾ ವಿನನಾದ ಚಾರ್ದಯನ್
ತತೋಽಸ್ಯ ಬಾಹೂ ವಿಚಕರ್ತ ಪಾಂಡವಃ ॥೧೭॥

ದಂಡನು ಸೂರ್ಯಕಿರಣಗಳಂತೆ ಹೊಳೆಯುವ ಮೂರು ತೋಮರಗಳಿಂದ ಕೃಷ್ಣನನ್ನೂ ಐದು ತೋಮರಗಳಿಂದ ಅರ್ಜುನನನ್ನೂ ಹೊಡೆದು ಜೋರಾಗಿ ಗರ್ಜಿಸಿದ. ಆಗ ಅರ್ಜುನ ಅವನ ತೋಳುಗಳನ್ನು ಕಡಿದ.

ಕ್ಷುರಪ್ರಕೃತ್ತೌ ಸುಭೃಶಂ ಸುಮಾಂಸಲೌ
ಶುಭಾಂಗದೌ ಚಂದನರೂಷಿತೌ ಭುಜೌ ।
ಗಜಾತ್ ಪತಂತೌ ಯುಗಪದ್ ವಿರೇಜತು-
ರ್ಯಥಾದ್ರಿಶೃಂಗಾತ್ ಪತಿತೌ ಮಹೋರಗೌ ॥೧೮॥

ಬಲು ಪುಷ್ಟವಾಗಿದ್ದು ಶ್ರೀಗಂಧಲೇಪಿತವಾಗಿ ಒಳ್ಳೆಯ ತೋಳ್ಬಳೆಯಿಂದ ಕೂಡಿದ್ದ ದಂಡನ ತೋಳುಗಳು ಎರಡೂ ಜೊತೆಯಾಗಿ ಕ್ಷುರದಿಂದ ಕತ್ತರಿಸಿ ಆನೆಯ ಮೇಲಿಂದ ಕೆಳಗೆ ಬೀಳುವಾಗ, ಬೆಟ್ಟದ ಶಿಖರದಿಂದ ಎರಡು ದೊಡ್ಡ ಹಾವುಗಳು ಬಿದ್ದಂತೆ ಕಂಡುಬಂದವು.

ತಥಾರ್ಧಚಂದ್ರೇಣ ಹತಂ ಕಿರೀಟಿನಾ
ಪಪಾತ ದಂಡಸ್ಯ ಶಿರಃ ಕ್ಷಿತಿಂ ದ್ವಿಪಾತ್ ।
ಸ ಶೋಣಿತಾದ್ರ್ಯೋ ನಿಪತನ್ ವಿರೇಜೇ
ದಿವಾಕರೋಽಸ್ತಾದಿವ ಪಶ್ಚಿಮಾಂ ದಿಶಮ್ ॥೧೯॥

ಹಾಗೇ ಅರ್ಜುನನ ಅರ್ಧಚಂದ್ರ ಬಾಣದಿಂದ ದಂಡನ ತಲೆಯೂ ಕಡಿದು ಆನೆಯ ಮೇಲಿಂದ ನೆಲದ ಮೇಲೆ ಬಿದ್ದಿತು. ರಕ್ತಸಿಕ್ತನಾಗಿ ಆನೆಯ ಮೇಲಿಂದ ದಂಡನೂ ಕೆಳಗೆ ಉರುಳುತ್ತ ಅಸ್ತಾಚಲದಿಂದ ಪಶ್ಚಿಮದಿಕ್ಕಿಗೆ ಜಾರುವ ಸೂರ್ಯನಂತೆ ಕಂಡುಬಂದ.

ಅಥ ದ್ವಿಪಂ ಶ್ವೇತನಗಾಗ್ರಸನ್ನಿಭಂ
ದಿವಾಕರಾಂಶುಪ್ರತಿಮೈಃ ಶರೋತ್ತಮೈಃ ।
ಬಿಭೇದ ಪಾರ್ಥಃ ಸ ಪಪಾತ ನಾಗೋ
ಹಿಮಾದ್ರಿಕೂಟಂ ಕುಲಿಶಾಹತಂ ಯಥಾ ॥೨೦॥

ಬಳಿಕ ಶ್ವೇತಪರ್ವತದ ಶಿಖರದಂತಿದ್ದ ಆನೆಯನ್ನು ಅರ್ಜುನ ಸೂರ್ಯ ಕಿರಣಗಳಂಥ ಉತ್ತಮ ಬಾಣಗಳಿಂದ ಭೇದಿಸಿದ. ಆ ಆನೆ ವಜ್ರಾಯುಧದ ಏಟಿಗೆ ಬಿದ್ದ ಹಿಮಾಲಯ ಶಿಖರದಂತೇ ಬಿದ್ದಿತು.

ತತೋಽಪರೇ ತತ್ಪ್ರತಿಮಾ ಗಜೋತ್ತಮಾ
ಜಿಗೀಷವಃ ಸಂಯತಿ ಸವ್ಯಸಾಚಿನಮ್ ।
ತಥಾ ಹತಾಸ್ತೇಽಪಿ ಯಥೈವ ತೌ ದ್ವಿಪೌ
ತತಃ ಪ್ರಭಗ್ನಂ ಸುಮಹದ್ ರಿಪೋರ್ಬಲಮ್ ॥೨೧॥

ಬಳಿಕ ಆ ಆನೆಯಂತೆಯೇ ಇದ್ದ ಬೇರೆ ಮದ್ದಾನೆಗಳು ಅರ್ಜುನನನ್ನು ಗೆಲ್ಲಲು ಬಯಸಿದವು. ಆದರೆ ಅವುಗಳು ಕೂಡ ಈ ಎರಡು ಆನೆಗಳಂತೆಯೇ ಹತವಾದುವು. ಬಳಿಕ ಬಲು ದೊಡ್ಡ ಶತ್ರುಸೈನ್ಯವೂ ನಾಶವಾಯಿತು.

ಗಜಾ ರಥಾಶ್ವಾಃ ಪುರುಷಾಶ್ಚ ಸಂಘಶಃ
ಪರಸ್ಪರಘ್ನಾಃ ಪರಿಪೇತುರಾಹವೇ ।
ಪರಸ್ಪರಂ ಪ್ರಸ್ಖಲಿತಾಃ ಸಮಾಹತಾ
ಭೃಶಂ ಚ ತತ್ತದ್‌ಬಹುಭಾಷಿಣೋ ಹತಾಃ ॥೨೨॥

ಅಥಾರ್ಜುನಂ ಸಂಪರಿವಾರ್ಯ ಸೈನಿಕಾಃ
ಪುರಂದರಂ ದೇವಗಣಾ ಇವಾಬ್ರುವನ್ ॥೨೩॥

ಆನೆಗಳು ರಥಕ್ಕೆ ಕಟ್ಟಿದ್ದ ಕುದುರೆಗಳು ಯೋಧರು ಎಲ್ಲರೂ ಗುಂಪುಗುಂಪಾಗಿ ರಣರಂಗದಲ್ಲಿ ಪರಸ್ಪರ ಕಾದಾಡಿ ಸತ್ತು ಬಿದ್ದರು. ಪರಸ್ಪರ ಹೊಡೆದುಕೊಂಡು ಮನಬಂದಂತೆ ಆಡಿಕೊಳ್ಳುತ್ತ ತತ್ತರಿಸಿ ಬಿದ್ದು ಅಸುನೀಗಿದರು. ಬಳಿಕ ದೇವತೆಗಳು ದೇವೇಂದ್ರನನ್ನು ಸುತ್ತುವರಿದು ನಿಲ್ಲುವಂತೆ ಪಾಂಡವ ಸೈನಿಕರು ಅರ್ಜುನನನ್ನು ಸುತ್ತುವರಿದು ಹೇಳಿದರು—

ಪಾಂಡವಸೈನಿಕಾಃ

ಅಭೈಷ್ಮ ಯಸ್ಮಾನ್ಮರಣಾದಿವ ಪ್ರಜಾಃ
ಸ ಏಷ ದಿಷ್ಟ್ಯಾ ನಿಹತಸ್ತ್ವಯಾ ರಿಪುಃ ॥೨೪॥

ಪಾಂಡವರ ಸೈನಿಕರು ಹೇಳಿದರು— 'ಜಂತುಗಳು ಮರಣಕ್ಕೆ ಭಯಪಡುವಂತೆ ನಾವೆಲ್ಲರೂ ಯಾವ ಶತ್ರುಗಳಿಗೆ ಭಯಪಡುತ್ತಿದ್ದೆವೋ ಅವರನ್ನು ಹೇ ವೀರ, ನಮ್ಮ ಅದೃಷ್ಟದಿಂದ ನೀನು ಈಗ ಸಂಹರಿಸಿಬಿಟ್ಟೆ

ನ ಚೇತ್ ಪರಿಭ್ರಾಮ್ಯದಿಮಾನ್ ಜನಾನ್ ಭವಾನ್
ದ್ವಿಷದ್ಬಿರೇವಂ ಬಲಿಭಿಃ ಪ್ರಪೀಡಿತಾನ್ ।
ತತೋऽಭವಿಷ್ಯದ್ ದ್ವಿಷತಾಂ ಪ್ರಮೋದನಂ
ಯಥಾ ಹತೇಷ್ವೇಷ್ವಿಹ ನೋऽರಿಸೂದನ ॥೨೫॥

'ಶತ್ರುಗಳು ತಮ್ಮೊಳಗೇ ದುರ್ಬಲರು ಬಲಿಷ್ಠರಿಂದ ಹತರಾಗಿದ್ದಾರೆ. ನೀನು ಹೀಗೆ ಈ ಜನರನ್ನು ಭ್ರಮೆಯಲ್ಲಿ ಬೀಳಿಸದಿರುತ್ತಿದ್ದರೆ ಅವರಿಗೇ ಹಬ್ಬವಾಗುತ್ತಿತ್ತು ಶತ್ರುನಾಶಕನೆ, ಈಗ ಅವರ ಮರಣದಿಂದ ನಮಗೆ ಹಬ್ಬ ಉಂಟಾಗಿದೆ.'

ಅರ್ಜುನ ಇಲ್ಲಿ ತ್ವಾಷ್ಟವೆಂಬ ಸಂಮೋಹನಾಸ್ತ್ರದಿಂದ ಸಂಶಪ್ತಕರನ್ನು ನಾಶಗೊಳಿಸಿದನೆಂದು ಪರ್ಯಾಯವಾಗಿ ಹೇಳಿದಂತಾಗಿದೆ. ಶತ್ರುಗಳು ಭ್ರಮೆಯಲ್ಲಿ ಬಿದ್ದು ತಮ್ಮವರನ್ನೇ ಶತ್ರುಗಳೆಂದು ಭ್ರಮಿಸಿ ಮನಬಂದಂತೆ ಮಾತನಾಡಿ ಒಬ್ಬರಿಗೊಬ್ಬರು ಹೊಡೆದುಕೊಂಡು ಸತ್ತರು. ಇದು ಸಂಮೋಹನಾಸ್ತ್ರಪ್ರಭಾವ. ಹಿಂದೆ (ದ್ರೋಣ. 19.11,13) ಅರ್ಜುನ ಇದೇ ರೀತಿ ತ್ವಾಷ್ಟಾಸ್ತ್ರಪ್ರಯೋಗದಿಂದ ಶತ್ರುಗಳನ್ನು ಭ್ರಮೆಯಲ್ಲಿ ಕೆಡವಿ 'ಇವನೇ ಅರ್ಜುನ, ಇವನೇ ಕೃಷ್ಣ, ಇವರೇ ಪಾಂಡವರು' ಎಂದು ತಮ್ಮವರನ್ನೇ ಭ್ರಮಿಸುವಂತೆ ಮಾಡಿ ಪರಸ್ಪರ ಹೊಡೆದುಕೊಂಡು ಸತ್ತುಬೀಳುವಂತೆ ಮಾಡಿದ್ದು ವರ್ಣಿತವಾಗಿದೆ. ಅದರಿಂದ ಇಲ್ಲಿ 'ನ ಚೇತ್ ಪರಿಭ್ರಾಮ್ಯದಿಮಾನ್ ಜನಾನ್ ಭವಾನ್' ಎಂಬ ಪಾಠ ಸಂಗತವಾಗಿದೆ.

'ನ ಚೇದರಕ್ಷಿಷ್ಯ ಇಮಂ ಜನಂ ಭಯಾತ್' 'ನೀನು ನಮ್ಮನ್ನು ರಕ್ಷಿಸದಿರುತ್ತಿದ್ದರೆ' ಎಂಬ ಇದು ಪ್ರಚಲಿತ ಪಾಠಕ್ಕಿಂತ ಈ ಪಾಠ ಚೆನ್ನಾಗಿದೆ.

ಸಂಜಯಃ

ಇತೀವ ಭೂಯಶ್ಚ ಸುಹೃದ್ಭಿರೀರಿತಾ
ನಿಶಮ್ಯ ವಾಚಃ ಸುಮನಾಸ್ತದಾऽರ್ಜುನಃ ।
ಯಥಾನುರೂಪಂ ಪ್ರತಿಪೂಜ್ಯ ತಂ ಜನಂ
ಜಗಾಮ ಸಂಶಪ್ತಕಸಂಘಹಾ ಪುನಃ ॥೨೬॥

ಸಂಜಯ ನುಡಿದ— ಹೀಗೇ ಮತ್ತೂ ಮತ್ತೂ ಪ್ರೀತಿಯ ಸಜ್ಜನರು ಪ್ರಶಂಸೆ ಮಾಡಿದ್ದನ್ನು ಕೇಳಿ ಸಂತುಷ್ಟನಾದ ಅರ್ಜುನ ಅವರನ್ನು ಯೋಗ್ಯರೀತಿಯಲ್ಲಿ ಅಭಿನಂದಿಸಿ ಪುನಃ ಸಂಶಪ್ತಕರನ್ನು ಪೂರ್ತಿಯಾಗಿ ಸಂಹರಿಸಲು ಅವರ ಕಡೆಗೆ ತೆರಳಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಅಷ್ಟಾದಶೋऽಧ್ಯಾಯಃ ॥೧೮॥

❖

ಹತ್ತೊಂಬತ್ತನೆಯ ಅಧ್ಯಾಯ

ಅರ್ಜುನ ಸಂಶಪ್ತಕರ ಯುದ್ಧ

ಸಂಜಯಃ

ಪ್ರತ್ಯೇತ್ಯಾಥ ಪುನರ್ಜಿಷ್ಣುರ್ಹತ್ವಾ ಸಂಶಪ್ತಕಾನ್ ಬಭೌ ।
ವಕ್ರಾನುವಕ್ರಗಮನಾದ್ ಅಂಗಾರಕ ಇವ ಗ್ರಹಃ ॥೧॥

ಸಂಜಯ ನುಡಿದ— ಅರ್ಜುನ ಹಿಂತಿರುಗಿ ಬಂದು ಪುನಃ ಸಂಶಪ್ತಕರನ್ನು ಸಂಹರಿಸಿ, ಆಕಾಶದಲ್ಲಿ ವಕ್ರ ಅತಿಚಾರಗತಿಗಳಿಂದ ಲೋಕಕ್ಕೆ ಅನಿಷ್ಟ ಉಂಟುಮಾಡುವ ಮಂಗಳಗ್ರಹದಂತೆ ಶೋಭಿಸಿದ.

ಪಾರ್ಥಬಾಣೈರ್ಹತಾಸ್ತೇऽಥ ನರಾಶ್ವರಥಕುಂಜರಾಃ ।
ವಿಚೇಲುರ್ಬಭ್ರಮುರ್ನೇದುಃ ಪೇತುರ್ಮಮ್ರುಶ್ಚ ಭಾರತ ॥೨॥

ರಾಜನೆ, ಅರ್ಜುನನ ಬಾಣಗಳಿಗೆ ತುತ್ತಾಗಿ ಪದಾತಿ ಅಶ್ವ ರಥ ಗಜ ಸೈನಿಕರೆಲ್ಲರೂ ಓಡಿದರು. ಸುತ್ತು ಸುತ್ತಿದರು, ಕೂಗಿಕೊಂಡರು. ಬಿದ್ದರು, ಸತ್ತರು.

ಧುರ್ಯಾನ್ ಧುರ್ಯೇತರಾನ್ ಸೂತಾನ್
ಧ್ವಜಾಂಶ್ಚಾಪಾಸಿಸಾಯಕಾನ್ ।
ಪಾಣೀನ್ ಪಾಣಿಗತಂ ಶಸ್ತ್ರಂ
ಬಾಹೂನಪಿ ಶಿರಾಂಸಿ ಚ ॥೩॥

ಭಲ್ಲೈಃ ಕ್ಷುರೈರರ್ಧಚಂದ್ರೈರ್ವತ್ಸದಂತೈಶ್ಚ ಪಾಂಡವಃ ।
ಚಿಚ್ಛೇದಾಮಿತ್ರವೀರಾಣಾಂ ಸಮರೇ ಪ್ರತಿಯುಧ್ಯತಾಮ್ ॥೪॥

ರಣರಂಗದಲ್ಲಿ ಅರ್ಜುನನು ಎದುರಾಗಿ ನಿಂತು ಯುದ್ಧಮಾಡಿದ ಶತ್ರುವೀರರ ರಥದ ಕುದುರೆ, ಮತ್ತು ಬೇರೆ ಕುದುರೆಗಳನ್ನೂ ಸಾರಥಿ ಧ್ವಜ ಧನುಸ್ಸು ಖಡ್ಗ ಬಾಣಗಳನ್ನೂ ಕೈಗಳು, ಕೈಯಲ್ಲಿ ಹಿಡಿದ ಆಯುಧ, ತೋಳು, ತಲೆಗಳನ್ನೂ ಭಲ್ಲೆ ಕ್ಷುರ ಅರ್ಧಚಂದ್ರ ವತ್ಸದಂತ ಬಾಣಗಳಿಂದ ಕತ್ತರಿಸಿದ.

ತಂ ಪ್ರವೀರಾಸ್ತ್ವದೀಯಾನಾಂ ನರ್ದಮಾನಾ ಹಿ ದುದ್ರುವುಃ ।
ವಾಶಿತಾರ್ಥಂ ಯುಧ್ಯಮಾನಾ ವೃಷಭಾ ವೃಷಭಂ ಯಥಾ ॥೫॥

ಅಪತನ್ನರ್ಜುನಂ ಶೂರಾಃ ಶತಶೋಽಥ ಸಹಸ್ರಶಃ ॥೬॥

ಬೆದೆಗೆ ಬಂದ ಹಸುವಿಗಾಗಿ ಹೋರಿಗಳು ಹೋರಿಯೊಡನೆ ಹೋರಾಡುವಂತೆ, ನಿನ್ನ ಕಡೆಯ ವೀರರು ಶೂರರು ಗರ್ಜನೆ ಮಾಡುತ್ತ ನೂರಾರು ಸಾವಿರಾರು ಸಂಖ್ಯೆಯಲ್ಲಿ ಧಾವಿಸಿದರು, ಅರ್ಜುನನ ಮೇಲೇರಿ ಬಂದರು.

ತೇಷಾಂ ತಸ್ಯಾಪಿ ತದ್ಯುದ್ಧಮಭವದ್ ರೋಮಹರ್ಷಣಮ್ ।
ತ್ರೈಲೋಕ್ಯವಿಜಯೇ ಯಾದೃಗ್ ದೈತ್ಯಾನಾಂ ಸಹ ವಜ್ರಿಣಾ ॥೭॥

ಅವರಿಗೂ ಅವನಿಗೂ ನಡೆದ ಆ ಯುದ್ಧ ತ್ರೈಲೋಕ್ಯವಿಜಯಕ್ಕಾಗಿ ದೈತ್ಯರಿಗೂ ಇಂದ್ರನಿಗೂ ಎಂಥ ಯುದ್ಧ ನಡೆಯಿತೋ ಅಂಥ ಯುದ್ಧವಾಗಿತ್ತು. ರೋಮಾಂಚಕರವಾಗಿತ್ತು.

ಅಥಾವಿಧ್ಯತ್ ತ್ರಿಭಿರ್ಬಾಣೈರ್ದಂದಶೂಕೈರಿವಾಹಿಭಿಃ ।
ಉಗ್ರಾಯುಧೋಽಸ್ಯ ತಜ್ಜಿಷ್ಣುಃ ಶಿರಃ ಕಾಯಾದಪಾಹರತ್ ॥೮॥

ಉಗ್ರಾಯುಧನು ಭಯಂಕರ ಸರ್ಪಗಳಂಥ ಮೂರು ಬಾಣಗಳಿಂದ ಅರ್ಜುನನಿಗೆ ಹೊಡೆದ, ಅರ್ಜುನ ಅವನ ರುಂಡವನ್ನೇ ಮುಂಡದಿಂದ ಕತ್ತರಿಸಿ ತೆಗೆದ.

ತೇऽರ್ಜುನಂ ಸರ್ವತಃ ಕ್ರುದ್ಧಾ ನಾನಾಶಸ್ತ್ರೌರವೀವೃಷನ್ ।
ಮರುದ್ಭಿಃ ಪ್ರೇರಿತಾ ಮೇಘಾ ಹಿಮವಂತಮಿವೋಷ್ಣಗೇ ॥೯॥

ಆ ಸಂಶಪ್ತಕರು ಕ್ರುದ್ಧರಾಗಿ ಎಲ್ಲ ಕಡೆಯಿಂದ ಅರ್ಜುನನ ಮೇಲೆ ನಾನಾ ಆಯುಧಗಳ ಮಳೆಗರೆದರು, ಬೇಸಿಗೆಯ ಕೊನೆಯಲ್ಲಿ ಗಾಳಿಯ ಹೊಡೆತಕ್ಕೆ ಮೋಡಗಳು ಹಿಮಾಲಯದ ಮೇಲೆ ನೀರಿನ ಮಳೆಗೆರವಂತೆ.

ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ವಿಷತಾಂ ಸರ್ವತೋऽರ್ಜುನಃ ।
ಸಮ್ಯಗಸ್ತೈಃ ಶರೈಃ ಸರ್ವಾನ್ ಅಹಿತಾನಹನದ್ ಬಹೂನ್ ॥೧೦॥

ಅರ್ಜುನ ಎಲ್ಲಕಡೆ ಶತ್ರುಗಳ ಅಸ್ತ್ರಗಳನ್ನು ಅಸ್ತ್ರಗಳಿಂದ ತಡೆದು, ಚೆನ್ನಾಗಿ ಬಾಣಗಳನ್ನು ಎಸೆದು ಬಹುಸಂಖ್ಯೆಯ ಶತ್ರುಗಳನ್ನೆಲ್ಲರನ್ನೂ ವಧಿಸಿದ.

ಛಿನ್ನತ್ರಿವೇಣುಸಂಘಾತಾನ್ ಹತಾಶ್ವಪಾರ್ಷ್ಣಿಸಾರಥೀನ್ ।
ವಿಧ್ವಸ್ತಾಯುಧತೂಣೀರಾನ್ ವಿಚಕ್ರರಥಕೇತನಾನ್ ॥೧೧॥

ಸಂಛಿನ್ನರಶ್ಮಿಯೋಕ್ತ್ರಾನ್ ವ್ಯನುಕರ್ಷಯುಗಾನ್ ರಥಾನ್ ॥೧೨॥

ವಿಧ್ವಸ್ತಸರ್ವಸನ್ನಾಹಾನ್ ಬಾಣೈಶ್ಚಕ್ರೇऽರ್ಜುನಸ್ತ್ವರನ್ ॥೧೩॥

ರಥಗಳ ತ್ರಿವೇಣುಸಮೂಹಗಳನ್ನೂ ಕತ್ತರಿಸಿ, ಕುದುರೆಗಳ ಹಿಂದಿನ ಮುಂದಿನ ಸಾರಥಿಗಳನ್ನೂ ವಧಿಸಿ, ಆಯುಧ ಬತ್ತಳಿಕೆಗಳನ್ನೂ ನಾಶಪಡಿಸಿ, ರಥಗಳ ಚಕ್ರ ಧ್ವಜಗಳನ್ನೂ ಕಡಿದು, ಕುದುರೆಗಳ ಕಡಿವಾಣ ಹಗ್ಗಗಳನ್ನು ರಥಗಳ ಅಚ್ಚು ಮರ ನೊಗಗಳನ್ನು ಕತ್ತರಿಸಿ ಅರ್ಜುನ ತ್ವರೆಯಿಂದ ಸಂಶಪ್ತಕರ ಯುದ್ಧ ಸನ್ನಾಹವೆಲ್ಲವನ್ನೂ ಬಾಣಗಳಿಂದ ಧ್ವಂಸಮಾಡಿದ.

ತೇ ರಥಾಸ್ತತ್ರ ವಿಧ್ವಸ್ತಾಃ ಪರಾದ್ರ್ಯಾ ಭಾಂತ್ಯನೇಕಶಃ ।
ಧನಿನಾಮಿವ ವೇಶ್ಮಾನಿ ಹತಾನ್ಯಗ್ನ್ಯನಿಲಾಂಬುಭಿಃ ॥೧೪॥

ಬೆಂಕಿ ಗಾಳಿ ಮಳೆಗಳ ಅನಾಹುತಗಳಿಂದ ಬಹುಮೂಲ್ಯವಾದ ಶ್ರೀಮಂತರ ಮನೆಗಳು ನಾಶವಾಗುವಂತೆ ಶತ್ರುರಥಗಳು ಬಹುಸಂಖ್ಯೆಯಲ್ಲಿ ನಾಶ ಹೊಂದಿದುದು ಕಂಡುಬಂದಿತು.

ದ್ವಿಪಾಃ ಸಂಭಿನ್ನಮರ್ಮಾಣೋ ವಜ್ರಾಶನಿನಿಭೈಃ ಶರೈಃ ।
ಪೇತುರ್ನಿರ್ಯಗ್ರವೇಶ್ಮಾನಿ ವಜ್ರವಾತಾಗ್ನಿಭಿರ್ಯಥಾ ॥೧೫॥

ಪರ್ವತ ಶಿಖರಗಳಂಥ ಮನೆಗಳು ಸಿಡಿಲು ಗಾಳಿ ಬೆಂಕಿ ಅನಾಹುತಗಳಿಂದ ಮುರಿದು ಬೀಳುವಂತೆ, ವಜ್ರಾಯುಧ ಸಿಡಿಲುಗಳಂಥ ಅರ್ಜುನನ ಬಾಣಗಳಿಂದ ಆನೆಗಳು ಮರ್ಮಸ್ಥಳಗಳಲ್ಲಿ ಹೊಡೆಸಿಕೊಂಡು ಸತ್ತುಬಿದ್ದವು.

ಸಾರೋಹಾಸ್ತುರಗಾಃ ಪೇತುರ್ಬಹವೋಽರ್ಜುನಪೀಡಿತಾಃ ।
ನಿರ್ಜಿಹ್ವಾಂತಾಃ ಕ್ಷಿತೌ ಕ್ಷೀಣಾ ರುಧಿರಾರ್ದ್ರಾಃ ಸುದುರ್ದೃಶಃ ॥೧೬॥

ಕುದುರೆಗಳು ಆರೋಹಿಗಳೊಂದಿಗೇ ಅರ್ಜುನನಿಂದ ಪೀಡಿತವಾಗಿ ಬಹುಸಂಖ್ಯೆಯಲ್ಲಿ ನೆಲದಲ್ಲಿ ಬಿದ್ದುವು. ಅವು ನೆತ್ತರಿಂದ ತೊಯ್ದು ಕ್ಷೀಣವಾಗಿ ನಾಲಿಗೆಯ ತುದಿಯನ್ನು ಹೊರಚಾಚಿದ್ದುವು. ಆ ಸ್ಥಿತಿಯಲ್ಲಿ ಅವು ನೋಡಲು ಸಾಧ್ಯವಾಗದಂತಿದ್ದುವು.

ನರಾಶ್ವನಾಗಾ ನಾರಾಚೈಃ ಸಂಸ್ಯೂತಾಃ ಸವ್ಯಸಾಚಿನಾ ।
ಬಭ್ರಮುಶ್ಚಸ್ಖಲುರ್ನೇದುಃ ಪೇತುರ್ಮಮ್ಲುಶ್ಚ ಮಾರಿಷ ॥೧೭॥

ರಾಜನೆ, ಅರ್ಜುನನ ಬಾಣಗಳು ಮೈಯೆಲ್ಲ ಚುಚ್ಚಿದ್ದರಿಂದ ಯೋಧರೂ ಕುದುರೆಗಳೂ ಆನೆಗಳೂ ನೋವಿನಿಂದ ಸುತ್ತು ಸುತ್ತಿದರು, ಎಡವಿದರು, ಕೂಗಿಕೊಂಡರು, ಬಿದ್ದರು, ಸತ್ತರು.

ಅನೇಕೈಶ್ಚ ಶಿಲಾಘಾತೈರ್ವಜ್ರಾನಲವಿಷೋಪಮೈಃ ।
ಶರೈರ್ನಿಜಘ್ನಿವಾನ್ ಪಾರ್ಥೋ ಮಹೇಂದ್ರ ಇವ ದಾನವಾನ್ ॥೧೮॥

ದೇವೇಂದ್ರ ದಾನವರನ್ನು ಸಂಹರಿಸುವಂತೆ, ಅರ್ಜುನ ಮಸೆಗಲ್ಲಿಂದ ತಿಕ್ಕಿ ವಜ್ರಾಯುಧ ಬೆಂಕಿ ವಿಷಗಳಂತಾಗಿರುವ ಬಹುಸಂಖ್ಯೆಯ ಬಾಣಗಳಿಂದ ಸಂಶಪ್ತಕರನ್ನು ಸಂಹರಿಸಿದ.

ಮಹಾರ್ಹವರ್ಮಾಭರಣಾ ನಾನಾವರ್ಣಾಂಬರಾಯುಧಾಃ ।
ಸರಥಾಶ್ವದ್ವಿಪಾ ವೀರಾ ಹತಾಃ ಪಾರ್ಥೇನ ಶೇರತೇ ॥೧೯॥

ಬಹುಮೂಲ್ಯವಾದ ಕವಚ ಆಭರಣ ನಾನಾ ಬಣ್ಣದ ಉಡುಗೆ ಆಯುಧ ಗಳಿಂದ ಕೂಡಿದ ರಥ ಅಶ್ವ ಗಜ ಸೈನಿಕರೂ ಪದಾತಿವೀರರೂ ಅರ್ಜುನನಿಂದ ಹತರಾಗಿ ಬಿದ್ದರು.

ನಿರ್ಭಯಾಃ ಪುಣ್ಯಕರ್ಮಾಣೋ ವಿಶಿಷ್ಟಾಭಿಜನಶ್ರುತಾಃ ।
ಗತಾಃ ಶರೀರೈರ್ವಸುಧಾಮೂರ್ಜಿತೈಃ ಕರ್ಮಭಿರ್ದಿವಮ್ ॥೨೦॥

ಒಳ್ಳೆಯ ಕುಲ ವಿದ್ಯೆಗಳಿಂದ ನಿರ್ಭೀತಿಯಿಂದ ಯುದ್ಧರೂಪ ಪುಣ್ಯಕರ್ಮ ಮಾಡಿ ಸಂಶಪ್ತಕರು ಶರೀರದಿಂದ ಭೂಮಿಯಲ್ಲಿ ಬಿದ್ದರೂ ಉತ್ತಮ ಕರ್ಮಗಳಿಂದ ವೀರಸ್ವರ್ಗವನ್ನೇ ಸೇರಿದರು.

ಅಥಾರ್ಜುನರಥಂ ವೀರಾಸ್ತ್ವದೀಯಾಃ ಸಮಭಿದ್ರವನ್ ।
ನಾನಾಜನಪದಾಧ್ಯಕ್ಷಾಃ ಸಗಣಾ ಜಾತಮನ್ಯವಃ ॥೨೧॥

ನಿನ್ನ ಕಡೆಯ ನಾನಾ ದೇಶಾಧಿಪತಿಗಳಾದ ವೀರರಾದ ರಾಜರೂ ಅವರ ಪರಿವಾರಗಳೂ ಕೋಪಗೊಂಡು ಅರ್ಜುನನ ರಥವನ್ನು ಆಕ್ರಮಿಸಿದರು.

ಊಹ್ಯಮಾನಾ ರಥಾಶ್ವೇಭ್ಯೈಃ ಪತ್ತಯಶ್ಚ ಜಿಘಾಂಸವಃ ।
ಸಮಭ್ಯಧಾವನ್ನಸ್ಯಂತೋ ವಿವಿಧಂ ಕ್ಷಿಪ್ರಮಾಯುಧಮ್ ॥೨೨॥

ರಥ ಅಶ್ವ ಗಜಗಳನ್ನೇರಿದವರೂ ಪದಾತಿಗಳೂ ಅರ್ಜುನನನ್ನು ಕೊಲ್ಲುವ ಬಯಕೆಯಿಂದ ನಾನಾಬಗೆಯ ವೇಗದ ಆಯುಧಗಳನ್ನೆಸೆಯುತ್ತ ಇದಿರಿಗೆ ಧಾವಿಸಿ ಬಂದರು.

ತದಾಯುಧಮಹಾವರ್ಷಂ ಕ್ಷಿಪ್ತಂ ಯೋಧಮಹಾಂಬುದೈಃ ।
ವ್ಯಧಮನ್ನಿಶಿತೈರ್ಬಾಣೈಃ ಕ್ಷಿಪ್ರಮರ್ಜುನಮಾರುತಃ ॥೨೩॥

ಯೋಧರೆಂಬ ಮಹಾಮೇಘಗಳು ಸುರಿಸಿದ ಆಯುಧಗಳ ಜಡಿಮಳೆಯನ್ನು ಅರ್ಜುನನೆಂಬ ಬಿರುಗಾಳಿ ಬೇಗನೆ ಹರಿತವಾದ ಬಾಣಗಳಿಂದ ಧ್ವಂಸಮಾಡಿತು.

ಸಾಶ್ವಪತ್ತಿದ್ವಿಪರಥಂ ಮಹಾಶಸ್ತ್ರೌಘವಿಪ್ಲವಮ್ ।
ಸಹಸಾ ಸಂತತೀರ್ಷಂತಂ ಪಾರ್ಥಂ ಶಸ್ತ್ರಾಸ್ತ್ರಸೇತುನಾ ॥೨೪॥

ಅಥಾಬ್ರವೀದ್ ವಾಸುದೇವಃ ಪಾರ್ಥ ಕಿಂ ಕ್ರೀಡಸೇऽನಘ ।
ಸಂಶಪ್ತಕಾನ್ ಪ್ರಮಥ್ಯೈನಾನ್ ಅಥ ಕರ್ಣವಧೇ ತ್ವರ ॥೨೫॥

ಅಶ್ವ ಪದಾತಿ ಗಜ ರಥಗಳಿಂದ ತುಂಬಿ ಮಹಾ ಶಸ್ತ್ರಪ್ರವಾಹಗಳಿಂದ ಪೀಡೆ ಉಂಟುಮಾಡುತ್ತಿದ್ದ ಶತ್ರುಸೈನ್ಯವನ್ನು ಕೇವಲ ಶಸ್ತ್ರಾಸ್ತ್ರಗಳ ಸೇತುವಿನಿಂದಲೇ ಬಲಪ್ರಯೋಗದಿಂದ ಗೆದ್ದು ದಾಟಲು ಹೊರಟಿದ್ದ ಅರ್ಜುನನನ್ನು ತಡೆದು ಕೃಷ್ಣ ಹೇಳಿದ: 'ಅನಘ ಅರ್ಜುನ, ಇದೇನು, ಕ್ರೀಡೆ ಮಾಡುತ್ತಿರುವೆ? ಈ ಸಂಶಪ್ತಕರನ್ನು ಗೆಲ್ಲುವ ಯೋಚನೆಯನ್ನು ಬಿಟ್ಟು ಧ್ವಂಸವನ್ನೇ ಮಾಡಿ ಬಳಿಕ ಕರ್ಣನ ವಧೆಗೆ ಧಾವಿಸು'.

ತಥೇತ್ಯುಕ್ತ್ವಾ ತ್ವರ್ಜುನಃ ಕ್ರೋಧಾಚ್ಛಿಷ್ಟಾನ್ ಸಂಶಪ್ತಕಾನಥ ।
ಕ್ಷಪಯಿಷ್ಯನ್ ತದಾऽಸ್ತ್ರೇಣ ದೈತ್ಯಾನಿಂದ್ರ ಇವಾವಧೀತ್ ॥೨೬॥

'ಹಾಗೇ ಆಗಲಿ' ಎಂದು ಅರ್ಜುನ ನುಡಿದು, ಕ್ರೋಧದಿಂದ, ಉಳಿದ ಸಂಶಪ್ತಕರನ್ನು ನಾಶಮಾಡುವುದಕ್ಕಾಗಿ, ಇಂದ್ರನು ದೈತ್ಯರನ್ನು ಸಂಹರಿಸಿದಂತೆ, ಅಸ್ತ್ರದಿಂದ ಅವರನ್ನು ಸಂಹರಿಸಿದ.

ನಾದದತ್ ಸಂದಧಚ್ಚೈವ ದೃಷ್ಟಃ ಕೈಶ್ಚಿದ್ ರಣೇऽರ್ಜುನಃ ।
ವಿಮುಂಚನ್ ವಾ ಶರಾನ್ ಘೋರಾನ್ ದೃಶ್ಯಂತೇ ವೈ ನರಾ
ಹತಾಃ ॥೨೭॥

ಆಶ್ಚರ್ಯಮಿತಿ ಗೋವಿಂದೋ ಬ್ರುವನ್ನಶ್ವಾನಚೋದಯತ್ ॥೨೮॥

ಅರ್ಜುನ ರಣರಂಗದಲ್ಲಿ ಘೋರವಾದ ಬಾಣವನ್ನು ಎತ್ತಿಕೊಳ್ಳುವು ದನ್ನಾಗಲಿ ಬಿಲ್ಲಿಗೆ ಏರಿಸುವುದನ್ನಾಗಲಿ ಅಥವಾ ಪ್ರಯೋಗ ಮಾಡುವುದನ್ನಾಗಲಿ ಯಾರೂ ನೋಡಲಿಲ್ಲ. ಬಾಣದಿಂದ ಹತರಾಗಿ ಯೋಧರು ಬೀಳುವುದನ್ನೇ ಕಂಡರು. 'ಆಶ್ಚರ್ಯ!' ಎನ್ನುತ್ತ ಕೃಷ್ಣ ಕುದುರೆಗಳನ್ನು ಮುಂದೆ ನಡೆಸಿದ.

ತತಸ್ತೇ ಹಂಸಸದೃಶಾಃ ತುರಗಾ ವಾತರಂಹಸಃ ।
ತಾಂ ಸೇನಾಂ ವಿವಿಶುರ್ಹೃಷ್ಟಾ ಹಂಸಾ ಇವ ಮಹಾಸರಃ ॥೨೯॥

ಆಗ ಗಾಳಿಯ ವೇಗ ಉಳ್ಳ, ಹಂಸದಂತೆ ಬಿಳಿಯಾದ ಆ ಕುದುರೆಗಳು, ದೊಡ್ಡ ಸರೋವರವನ್ನು ಹಂಸಗಳು ಪ್ರವೇಶಿಸುವಂತೆ, ಉತ್ಸಾಹದಿಂದ ಆ ಶತ್ರುಸೈನ್ಯದೊಳಗೆ ಪ್ರವೇಶಿಸಿದುವು.

ತತಃ ಸಂಗ್ರಾಮಭೂಮಿಂ ತಾಂ ವರ್ತಮಾನೇ ಜನಕ್ಷಯೇ ।
ಅವೇಕ್ಷಮಾಣೋ ಗೋವಿಂದಃ ಸವ್ಯಸಾಚಿನಮಬ್ರವೀತ್ ॥೩೦॥

ಹೀಗೆ ಸೈನ್ಯ ನಾಶವಾಗುವಾಗ ಆ ರಣಭೂಮಿಯನ್ನು ನೋಡುತ್ತ ಕೃಷ್ಣ ಅರ್ಜುನನಿಗೆ ನುಡಿದ.

ಶ್ರೀಭಗವಾನ್

ಏಷ ಪಾರ್ಥ ಮಹಾರೌದ್ರೋ ವರ್ತತೇ ಭರತಕ್ಷಯಃ ।
ಪೃಥಿವ್ಯಾಂ ಪಾರ್ಥಿವಾನಾಂ ಚ ದುರ್ಯೋಧನಕೃತೇ ಮಹಾನ್ । ॥೩೧॥

ಶ್ರೀಭಗವಾನ್ ನುಡಿದ— ಅರ್ಜುನ, ನೋಡು, ಇದು ದುರ್ಯೋಧನನ ಸ್ವಾರ್ಥಕ್ಕಾಗಿ ಭೂಮಿಯ ಮೇಲೆ ಎಲ್ಲ ರಾಜರ ಮಹಾಭಯಂಕರವಾದ ಮಹಾವಿನಾಶ ನಡೆಯುತ್ತಿದೆ. ಕುರುಕುಲ ಕ್ಷಯವಾಗುತ್ತಿದೆ.

ಪಶ್ಯ ಭಾರತ ಚಾಪಾನಿ ರುಗ್ಮಪೃಷ್ಠಾನಿ ಧನ್ವಿನಾಮ್ ।
ಹತಾನಾಮಪವಿದ್ಧಾನಿ ಕಲಾಪಾನಿಷುಧೀಂಸ್ತಥಾ ॥೩೨॥

ಅರ್ಜುನ, ನೋಡು ಬಂಗಾರದ ಪೃಷ್ಠದಿಂದ ಯುಕ್ತವಾದ ಹತರಾದ ಬಿಲ್ಗಾರರ ಬಿಲ್ಲುಗಳು, ಆಭರಣಗಳು, ಬತ್ತಳಿಕೆಗಳು, ಅಸ್ತವ್ಯಸ್ತವಾಗಿ ಬಿದ್ದಿವೆ.

ಜಾತರೂಪಮಯೈಃ ಪುಂಖೈಃ ಶರಾಂಶ್ಚ ನತಪರ್ವಣಃ ।
ತೈಲಧೌತಾಂಶ್ಚ ನಾರಾಚಾನ್ ನಿರ್ಮುಕ್ತಾನಿವ ಪನ್ನಗಾನ್ ॥೩೩॥

ಎಣ್ಣೆಯಿಂದ ಹದಮಾಡಿದ್ದರಿಂದ ಪೊರೆಬಿಟ್ಟ ಹಾವುಗಳಂತೆ ಕಾಣುವ ಬಂಗಾರದ ಗರಿಯುಳ್ಳ ಡೊಂಕುಗಿಣ್ಣಿನ ಬಾಣಗಳನ್ನು ನೋಡು.

ಆಕೀರ್ಣಾಂಸ್ತೋಮರಾಂಶ್ಚಾಪಿ ಚಿತ್ರಾನ್ ಹೇಮವಿಭೂಷಿತಾನ್ ।
ದಂಡಾನ್ ಕನಕಚಿತ್ರಾಂಶ್ಚ ರಣಭೂಮಿಂ ಚ ಸಂವೃತಾಮ್ ॥೩೪॥

ಬಂಗಾರದಿಂದ ಅಲಂಕೃತವಾದ ಸುಂದರವಾದ ತೋಮರಗಳು ನೆಲದ ಮೇಲೆ ಹರಡಿರುವುದನ್ನು ನೋಡು. ಬಂಗಾರದ ಸುಂದರ ದಂಡಗಳನ್ನು ಅವು ರಣಭೂಮಿಯನ್ನು ಮುಚ್ಚಿರುವುದನ್ನು ನೋಡು.

ಹಸ್ತಿದಂತತ್ಸರೂನ್ ಖಡ್ಗಾನ್ ಜಾತರೂಪಪರಿಷ್ಕೃತಾನ್ ।
ವರ್ಮಾಣಿ ಚಾಪವಿದ್ಧಾನಿ ತೋಮರಾಂಶ್ಚ ಬಹೂನ್ ರಣೇ ॥೩೫॥

ಆನೆಯ ದಂತದ ಹಿಡಿಯುಳ್ಳ, ಬಂಗಾರದಿಂದ ಅಲಂಕೃತವಾದ ಖಡ್ಗಗಳು ಕವಚಗಳು ತೋಮರಗಳು ರಣರಂಗದಲ್ಲಿ ಬಹುವಾಗಿ ಚೆಲ್ಲಿರುವುದನ್ನು ನೋಡು.

ಸುವರ್ಣವಿಕೃತಾನ್ ಪ್ರಾಸಾನ್ ಶಕ್ತೀಃ ಕನಕಭೂಷಿತಾಃ ।
ಜಾಂಬೂನದಮಯೈಃ ಪಟ್ಟೈರ್ಬದ್ಧಾಶ್ಚ ವಿವಿಧಾ ಗದಾಃ ॥೩೬॥

ಬಂಗಾರದಿಂದ ಮಾಡಿದ ಪ್ರಾಸಗಳು ಬಂಗಾರದಿಂದ ಅಲಂಕೃತವಾದ ಶಕ್ತಿಗಳು, ಬಂಗಾರದ ಪಟ್ಟಿಗಳಿಂದ ಖಚಿತವಾದ ನಾನಾ ಬಗೆಯ ಗದೆಗಳು, ಚೆಲ್ಲಿರುವುದನ್ನು ನೋಡು.

ಜಾತರೂಪಮಯಾಂಶ್ಚೋಗ್ರಾನ್ ಪಟ್ಟಿಸಾನ್ ಹೇಮಭೂಷಿತಾನ್ ।
ದಂಡೈಃ ಕನಕಚಿತ್ರೈಶ್ಚ ವಿಪ್ರವಿದ್ಧಾನ್ ಪರಶ್ವಧಾನ್ ॥೩೭॥

ಬಂಗಾರದಿಂದ ಮಾಡಿ ಬಂಗಾರದಿಂದ ಅಲಂಕೃತವಾದ ಪಟ್ಟಿಸಗಳು, ಬಂಗಾರದ ಸುಂದರ ದಂಡಗಳು ಗಂಡುಗೊಡಲಿಗಳು ಚೆಲ್ಲಿರುವುದನ್ನು ನೋಡು.

ಪರಿಘಾನ್ ಭಿಂಡಿಪಾಲಾಂಶ್ಚ ಮುಸುಂಢೀಃ ಕ್ರಕಚಾನಪಿ ।
ಅಯಸ್ಕಂಧಾಂಶ್ಚ ಪತಿತಾನ್ ಮುಸಲಾನಿ ಗುರೂಣಿ ಚ ॥೩೮॥

ಪರಿಘ, ಭಿಂಡಿಪಾಲ ಮುಸುಂಢಿ, ಗರಗಸ, ಅಯಸ್ಕಂಧ, ದೊಡ್ಡ ಮುಸಲಗಳು ಬಿದ್ದಿರುವುದನ್ನು ನೋಡು.

ಶತಘ್ನೀಃ ಪಶ್ಯ ಚಿತ್ರಾಶ್ಚ ವಿಪುಲಾನ್ ಪರಿಘಾಂಸ್ತಥಾ ।
ಚಕ್ರಾಣಿ ಚಾಪವಿದ್ಧಾನಿ ಖಡ್ಗಾಂಶ್ಚಾಪಿ ಮಹಾರಥಾನ್ ॥೩೯॥

ಸುಂದರವಾದ ಶತಘ್ನಿಗಳು ದೊಡ್ಡ ಪರಿಘಗಳು ಚಕ್ರಗಳು ಖಡ್ಗಗಳು ದೊಡ್ಡ ರಥಗಳು ಬೆಲ್ಲಿರುವುದನ್ನು ನೋಡು.

ನಾನಾವಿಧಾನಿ ಶಸ್ತ್ರಾಣಿ ಪ್ರಗೃಹ್ಯ ಜಯಗೃದ್ಧಿನಃ ।
ಜೀವಂತ ಇವ ದೃಶ್ಯಂತೇ ಗತಸತ್ತ್ವಾಸ್ತರಸ್ವಿನಃ ॥೪೦॥

ವೀರರು ಜಯಾಕಾಂಕ್ಷಿಗಳಾಗಿ ನಾನಾವಿಧವಾದ ಶಸ್ತ್ರಗಳನ್ನು ಹಿಡಿದೇ ಅಸುನೀಗಿದ್ದಾರೆ, ಜೀವಂತರಾಗಿರುವಂತೆ ಕಾಣುತ್ತಾರೆ.

ಗದಾವಿಮಥಿತೈರ್ಗಾತ್ರೈರ್ಮುಸಲೈರ್ಭಿನ್ನಮಸ್ತಕಾನ್ ।
ಗಜವಾಜಿರಥಕ್ಷುಣ್ಣಾನ್ ಪಶ್ಯ ಯೋಧಾನ್ ಸಹಸ್ರಶಃ ॥೪೧॥

ಗದೆಯಿಂದ ಮೈ ಜರ್ಝರಿತವಾಗಿವೆ. ಮುಸಲಗಳಿಂದ ತಲೆ ಒಡೆದಿವೆ, ಸಾವಿರಾರು ಯೋಧರು ಗಜ ಅಶ್ವ ರಥಗಳಿಂದ ಪುಡಿಯಾಗಿದ್ದಾರೆ. ನೋಡು.

ಗಜವಾಜಿಮನುಷ್ಯಾಣಾಂ ಶರಶಕ್ಯೃಷ್ಟಿತೋಮರೈಃ ।
ನಿಸ್ತ್ರಿಂಶೈಃ ಪಟ್ಟಿಸೈಃ ಪ್ರಾಸೈರ್ನಖರೈರ್ಲಗುಡೈರಪಿ ॥೪೨॥

ಶರೀರೈರ್ಬಹುಧಾ ಚ್ಛಿನ್ನೈಃ ಶೋಣಿತೌಘಪರಿಪ್ಲುತೈಃ ।
ಗತಾಸುಭಿರಮಿತ್ರಘ್ನ ಸಂವೃತಾ ರಣಭೂಮಯಃ ॥೪೩॥

ಶರ ಶಕ್ತಿ ಋಷ್ಟಿ ತೋಮರ ಖಡ್ಗ ಪಟ್ಟಿಸ ಪ್ರಾಸ ನಖರ ಲಗುಡಗಳಿಂದ ಬಹುವಾಗಿ ತುಂಡರಿಸಲ್ಪಟ್ಟ ವೀರರ ಶರೀರಗಳು ರಕ್ತಪ್ರವಾಹದಲ್ಲಿ ತೇಲುತ್ತಿವೆ. ಶತ್ರುನಾಶಕ ಅರ್ಜುನನೆ, ರಣಭೂಮಿ ಎಲ್ಲವೂ ಇಂಥ ಶರೀರಯುಕ್ತರಾಗಿ ಹತರಾದ ವೀರರಿಂದ ಮುಚ್ಚಿಹೋಗಿವೆ.

ಬಹುಭಿಶ್ಚಂದನಾದಿಗ್ಧೈಃ ಸಾಂಗದೈರ್ಲಬ್ಧಭೂಷಣೈಃ ।
ಸತಳತ್ರೈಃ ಸಕೇಯೂರೈರ್ಭಾತಿ ಭಾರತ ಮೇದಿನೀ ॥೪೪॥

ಚಂದನದಿಂದ ಚೆನ್ನಾಗಿ ಲಿಪ್ತವಾದ ತೋಳ್ಬಳೆಗಳಿಂದ ಅಲಂಕೃತವಾದ ಕೈಚೀಲ ಹಿಡಿದಿರುವ ಕೇಯೂರಗಳಿಂದ ಕೂಡಿದ ಬಾಹುಗಳಿಂದ ರಣಭೂಮಿ ಶೋಭಿಸುತ್ತಿದೆ.

ಸಾಂಗುಲಿತ್ರೈರ್ಭುಜಾಗ್ರೈಶ್ಚ ವಿಪ್ರವಿದ್ಧೈರಲಂಕೃತೈಃ ।
ಹಸ್ತಿಹಸ್ತೋಪಮೈಶ್ಛಿನ್ನೈರೂರುಭಿಶ್ಚ ತರಸ್ವಿನಾಮ್ ॥೪೫॥

ಬೆರಳಿನ ಚೀಲ ಹಾಕಿಕೊಂಡು ಅಲಂಕೃತವಾಗಿರುವ ವೀರರ ಭುಜಾಗ್ರಗಳು ಕಡಿದುಬಿದ್ದಿವೆ. ಆನೆಯ ಸೊಂಡಿಲುಗಳಂಥ ತೊಡೆಗಳೂ ಕಡಿದುಬಿದ್ದಿವೆ.

ಬದ್ಧಚೂಡಾಮಣಿವರೈಃ ಶಿರೋಭಿಶ್ಚಾರುಕುಂಡಲೈಃ ।
ನಿಕೃತ್ತೈರ್ವ್ಯಪಭಾಕ್ಷಾಣಾಂ ವಿರಾಜತಿ ವಸುಂಧರಾ ॥೪೬॥

ಚೂಡಾಮಣಿಗಳನ್ನು ಧರಿಸಿರುವ ಸುಂದರಕುಂಡಲಗಳಿಂದ ಕೂಡಿದ ಯೋಧರ ಶಿರಸ್ಸುಗಳು ಕಡಿದುಬಿದ್ದಿವೆ. ಅದರಿಂದ ರಣಭೂಮಿಗೆ ಶೋಭೆ ಬಂದಿದೆ.

ಗಜವಾಜಿಮನುಷ್ಯಾಣಾಂ ಶರಶಕ್ತ್ಯೃಷ್ಟಿತೋಮರೈಃ ।
ಕಬಂಧೈಃ ಶೋಣಿತಾದಿಗ್ಧೈಶ್ಛಿನ್ನಗಾತ್ರಶಿರೋಧರೈಃ ॥೪೭॥
ಭೂರ್ಭಾತಿ ಭರತಶ್ರೇಷ್ಠ ಶಾಂತಾರ್ಚಿಭಿರಿವಾಗ್ನಿಭಿಃ ॥೪೮॥

ಆನೆ ಕುದುರೆ ಪದಾತಿಗಳ ಶರ ಶಕ್ತಿ ಋಷ್ಟಿ ತೋಮರಗಳಿಂದ ಅವರ ರುಂಡವಿಲ್ಲದ ನೆತ್ತರಿಂದ ತೊಯ್ದ ಮುಂಡಗಳಿಂದ, ಮುಂಡವಿಲ್ಲದ ರುಂಡಗಳಿಂದ ಜ್ವಾಲೆ ಆರಿದ ಬೆಂಕಿಯಿಂದ ಎಂಬಂತೆ ರಣಭೂಮಿಯು ಶೋಭಿಸುತ್ತಿದೆ.

ರಥಾಂಶ್ಚ ಬಹುಧಾ ಛಿನ್ನಾನ್ ಹೇಮಕಿಂಕಿಣಿಭೂಷಿತಾನ್ ।
ವಾಜಿನಶ್ಚ ಹತಾನ್ ಪಶ್ಯ ನಿಷ್ಕೀರ್ಣಾಂತ್ರಾನ್ ಶರಾಚಿತಾನ್ ॥೪೯॥

ಚಿನ್ನದ ಗಂಟೆಗಳಿಂದ ಅಲಂಕೃತವಾದ ರಥಗಳು ಬಹುವಾಗಿ ಚೂರಾಗಿವೆ. ಕುದುರೆಗಳು ಬಾಣಗಳಿಂದ ತುಂಬಿಕೊಂಡು ಕರುಳುಗಳನ್ನು ಹೊರಗೆ ಹಾಕಿ ಹತವಾಗಿವೆ ನೋಡು.

ಅನುಕರ್ಷಾನುಪಾಸಂಗಾನ್ ಪತಾಕಾ ವಿವಿಧಾನ್ ಧ್ವಜಾನ್ ।
ರಥಿನಾಂ ಚ ಮಹಾಶಂಖಾನ್ ಪಾಂಡುರಾಂಶ್ಚ ಪ್ರಕೀರ್ಣಕಾನ್ ॥೫೦॥

ತೋಳುಮರಗಳು ಬತ್ತಳಿಕೆಗಳು ಪತಾಕೆಗಳು ನಾನಾಬಗೆಯ ಧ್ವಜಗಳು. ಯೋಧರ ಬಿಳಿಯಾದ ಮಹಾಶಂಖಗಳು ಎಲ್ಲವೂ ಹರಡಿರುವುದನ್ನು ನೋಡು.

ನಿರಸ್ತಜಿಹ್ವಾನ್ ಮಾತಂಗಾನ್ ಶಯಾನಾನ್ ಪರ್ವತೋಪಮಾನ್ ।
ವೈಜಯಂತೀರ್ವಿಚಿತ್ರಾಶ್ಚ ಹತಾಂಶ್ಚ ಗಜಯೋಧಿನಃ ॥೫೧॥

ಬೆಟ್ಟದಂಥ ಗಾತ್ರದ ಆನೆಗಳು ನಾಲಿಗೆ ಹೊರಚಾಚಿ ಬಿದ್ದಿವೆ ನೋಡು. ಹತರಾದ ಗಜಯೋಧರನ್ನೂ ಅವರ ವಿಚಿತ್ರ ಪತಾಕೆಗಳನ್ನೂ ನೋಡು.

ವಾರಣಾನಾಂ ಪರಿಸ್ತೋಮಾನ್ ಸಂಯುಕ್ತಾನೇಕಕಂಬಳಾನ್ ।
ವಿಪಾಟಿತವಿಚಿತ್ರಾಶ್ಚ ರೌಪ್ಯಚಿತ್ರಾಃ ಕುಥಾಸ್ತಥಾ ॥೫೨॥

ಆನೆಗಳಿಗೆ ಹೊದ್ದಿಸಿದ ರಾಶಿರಾಶಿಯಾದ ಅನೇಕ ಕಂಬಳಿಗಳು, ಹರಿದುವಿಚಿತ್ರವಾಗಿರುವ, ಬೆಳ್ಳಿಯಿಂದ ಅಲಂಕೃತವಾದ ರತ್ನಕಂಬಳಿಗಳು ಬಿದ್ದಿವೆ.

ಭಿನ್ನಾಶ್ಚ ಬಹುಧಾ ಘಣ್ಟಾಃ ಪತದ್ಭಿಸ್ತಾಡಿತಾ ಗಜೈಃ ।
ವೈಡೂರ್ಯಮಣಿದಂಡಾಂಶ್ಚ ಪತಿತಾನಂಕುಶಾನ್ ಭುವಿ ॥೫೩॥

ಆನೆಗಳು ಬಿಳುವಾಗ ತಗುಲಿ ಒಡೆದ ಗಂಟೆಗಳು ಬಹಳವಾಗಿ ನೆಲದಲ್ಲಿ ಬಿದ್ದಿವೆ. ವೈಡೂರ್ಯಮಣಿ ದಂಡಗಳೂ ಅಂಕುಶಗಳೂ ಬಿದ್ದಿವೆ.

ಅಶ್ವಾನಾಂ ಚ ಯುಗಾನೀಷಾನ್ ರತ್ನಚಿತ್ರಪರಿಚ್ಛದಾನ್ ।
ಪಶ್ಯ ಸಾದಿಭುಜಾಗ್ರೇಷು ಸುವರ್ಣವಿಕೃತಾಃ ಕಶಾಃ ॥೫೪॥

ಕುದುರೆಗಳ ಆಭರಣಗಳು ರತ್ನಚಿತ್ರಿತವಾದ ಕವಚಗಳು ನೆಲದಲ್ಲಿ ಬಿದ್ದಿವೆ. ಅಶ್ವಾರೋಹಿಗಳು ಭುಜಾಗ್ರಗಳಲ್ಲಿ ಧರಿಸುವ ಸುವರ್ಣಮಯವಾದ ಬಾರುಕೋಲುಗಳೂ ಬಿದ್ದಿವೆ, ನೋಡು

ವಿಚಿತ್ರಾನ್ ಮಣಿಚಿತ್ರಾಂಶ್ಚ ಜಾತರೂಪಪರಿಷ್ಕೃತಾನ್ ।
ಅಶ್ವಾಸ್ತರಪರಿಸ್ತೋಮಾನ್ ರಾಂಕವಾನ್ ಪತಿತಾನ್ ಭುವಿ ॥೫೫॥

ಕುದುರೆಗಳ ಬೆನ್ನಮೇಲೆ ಹಾಸಿದ, ಸುವರ್ಣದಿಂದ ಮತ್ತು ಮಣಿಗಳಿಂದ ಅಲಂಕೃತವಾದ ವಿಚಿತ್ರವಾದ ಉಣ್ಣೆ ಕಂಬಳಿಗಳು ನೆಲದಲ್ಲಿ ಬಿದ್ದಿವೆ.

ಚೂಡಾಮಣೀನ್ ನರೇಂದ್ರಾಣಾಂ ವಿಚಿತ್ರಾಃ ಕಾಂಚನಸ್ರಜಃ ।
ಛತ್ರಾಣಿ ಚಾಪವಿದ್ಧಾನಿ ಚಾಮರವ್ಯಜನಾನಿ ಚ ॥೫೬॥

ರಾಜರ ಚೂಡಾಮಣಿಗಳು, ವಿಚಿತ್ರವಾದ ಚಿನ್ನದ ಹಾರಗಳು ಛತ್ರ ಚಾಮರ ವ್ಯಜನಗಳೂ ನೆಲದ ಮೇಲೆ ಚೆಲ್ಲಿವೆ.

ಚಂದ್ರನಕ್ಷತ್ರಭಾಸೈಶ್ಚ ವದನೈಶ್ಚಾರುಕುಂಡಲೈಃ ।
ಕ್ಲಪ್ತಶ್ಮಶ್ರುಭಿರತ್ಯರ್ಥಂ ವೀರಾಣಾಂ ಸಮಲಂಕೃತೈಃ ॥೫೭॥

ಚಂದ್ರನಂಥ ಮುಖ ನಕ್ಷತ್ರಗಳಂಥ ಸುಂದರಕುಂಡಲಗಳಿಂದ ಮತ್ತು ಅಲಂಕೃತವಾದ ಗಡ್ಡಮೀಸೆಗಳಿಂದೊಪ್ಪುವ ವೀರರ ಮುಖಗಳಿಂದ ರಣಭೂಮಿ ಅಲಂಕೃತವಾಗಿದೆ.

ಕುಮುದೋತ್ಪಲಪದ್ಮಾನಾಂ ಷಂಡೈಃ ಪೂರ್ಣಂ ಯಥಾ ಸರಃ ।
ತಥಾ ಮಹೀಭೃತಾಂ ವಕ್ತ್ರೈಃ ಕುಮುದೋತ್ಪಲಸನ್ನಿಭೈಃ ॥೫೮॥

ಕುಮುದ ಉತ್ಪಲ ಪದ್ಮಗಳ ಸಮೂಹಗಳಿಂದ ತುಂಬಿದ ಕೊಳದಂತೆ ರಾಜರ ಕುಮುದ ಉತ್ಪಲ ಸದೃಶವಾದ ಮುಖಗಳಿಂದಲೂ ಕಂಗೊಳಿಸುತ್ತಿದೆ.

ತಾರಾಗಣವಿಚಿತ್ರಸ್ಯ ನಿರ್ಮಲೇಂದುದ್ಯುತಿತ್ವಿಷಃ ।
ಪಶ್ಯೇಮಾಂ ನಭಸಸ್ತುಲ್ಯಾಂ ಶಿರೋನಕ್ಷತ್ರಮಾಲಿನೀಮ್ ॥೫೯॥
ವದನೈಃ ಪಶ್ಯ ಸಂಛನ್ನಾಂ ಮಹೀಂ ಶೋಣಿತಕರ್ದಮಾಮ್ ॥೬೦॥

ರಾಜರ ಶಿರಸ್ಸುಗಳೆಂಬ ನಕ್ಷತ್ರಮಾಲೆಗಳಿಂದ ಯುಕ್ತವಾದ ರಕ್ತಮಯವಾದ ಈ ರಣಭೂಮಿಯು ಅವರ ಮುಖಗಳಿಂದ ಆಚ್ಛಾದಿತವಾಗಿದ್ದು ನಿರ್ಮಲಚಂದ್ರನ ಬೆಳದಿಂಗಳ ಪ್ರಕಾಶದಿಂದ ಬೆಳಗುವ, ನಕ್ಷತ್ರ ಸಮೂಹಗಳಿಂದ ಶೋಭಿತವಾದ ಆಕಾಶದಂತೆ ಕಾಣುತ್ತಿದೆ, ನೋಡು.

ಸಜೀವಾಂಶ್ಚ ನರಾನ್ ಪಶ್ಯ ಕೂಜಮಾನಾನ್ ಸಮಂತತಃ ।
ಉಪಾಸ್ಯಮಾನಾಂಶ್ಚ ಬಹೂನ್ ನ್ಯಸ್ತಶಸ್ತ್ರೈರ್ವಿಶಾಂಪತೇ ॥೬೧॥

ಇನ್ನೂ ಉಸಿರಾಡುತ್ತ ನೋವಿಂದ ನರಳುತ್ತಿರುವ ಯೋಧರನ್ನು ನೋಡು. ಎಲ್ಲೆಡೆ ಬಹುಸಂಖ್ಯೆಯಲ್ಲಿ ಅವರು ಶಸ್ತ್ರಸನ್ಯಾಸ ಮಾಡಿದ ಇತರ ಯೋಧರಿಂದ ಶೈತ್ಯೋಪಚಾರ ಮಾಡಿಸಿಕೊಳ್ಳುತ್ತಿದ್ದಾರೆ.

ಜ್ಞಾತಿಭಿಶ್ಚ ಜಲಕ್ಲಿನ್ನಾನ್ ರೋದಮಾನೈರ್ಮುಹುರ್ಮುಹುಃ ।
ವ್ಯುತ್ಕ್ರಾಂತಾನಪರಾನ್ ಯೋಧಾಂಶ್ಚಾದಯಿತ್ವಾ ತರಸ್ವಿನಃ ॥೬೨॥
ಪುನರ್ಯುದ್ಧಾಯ ಗಚ್ಛಂತಿ ಜಯೇ ಲುಬ್ಧಾಃ ಪ್ರಮನ್ಯವಃ ॥೬೩॥

ಅವರ ಸಂಬಂಧಿಗಳು ಮತ್ತೆಮತ್ತೆ ಕಣ್ಣೀರಿಡುತ್ತ ಅವರನ್ನು ನೀರು ಚಿಮುಕಿಸಿ ಉಪಚರಿಸುತ್ತಿದ್ದಾರೆ. ಇನ್ನು ಕೆಲವರು ವೀರಯೋಧರು ಮಡಿದವರನ್ನು ಬಟ್ಟೆಯಿಂದ ಮುಚ್ಚಿ ಬಹಳ ಕೋಪಗೊಂಡು ಜಯದ ಆಕಾಂಕ್ಷೆಯಿಂದ ಪುನಃ ಯುದ್ಧಕ್ಕೆ ಹೋಗುತ್ತಿದ್ದಾರೆ.

ಅಪರೇ ತತ್ರ ತತ್ರೈವ ಪರಿಧಾವಂತಿ ಮಾನವಾಃ ।
ಜ್ಞಾತಿಭಿಃ ಪತಿತೈಃ ಶೂರಾ ಯಾಚ್ಯಮಾನಾ ಜಲಂ ತದಾ ॥೬೪॥

ಇನ್ನುಳಿದ ಮಾನವರು, ತಮ್ಮ ಸಂಬಂಧಿಗಳು ನೆಲದಲ್ಲಿ ಬಿದ್ದು ನೀರನ್ನು ಬೇಡುತ್ತಿರುವುದರಿಂದ, ನೀರಿಗಾಗಿ ಅಲ್ಲಲ್ಲಿ ಓಡಾಡುತ್ತಿದ್ದಾರೆ.

ಜಲಾರ್ಥಂ ಚ ಗತಾಃ ಕೇಚಿನ್ಮೃತಾ ವೈ ಬಹವೋ ಜನಾಃ ।
ಸನ್ನಿವೃತ್ತಾಶ್ಚ ತೇ ಶೂರಾ ದೃಷ್ಟ್ವಾ ಚೈನಾನ್ ವಿಚೇತಸಃ ॥೬೫॥

ನೀರಿಗಾಗಿ ಹೊರಟವರು ಬಹುಮಂದಿ ಕೆಲವರು ಹಾಗೇ ಅಸುನೀಗಿದರು. ಕೆಲವರು ಶೂರರು, ಈ ಬಂಧುಗಳು ಪ್ರಜ್ಞೆ ತಪ್ಪಿದ್ದನ್ನು ಕಂಡು, ಹಿಂತಿರುಗಿ ಬಂದಿದ್ದಾರೆ.

ಜಲಂ ತ್ಯಕ್ತ್ವಾ ಪ್ರಧಾವಂತಿ ಕ್ರೋಶಮಾನಾಃ ಪರಸ್ಪರಮ್ ॥೬೬॥
ಜಲಂ ಪೀತ್ವಾ ಮೃತಾನ್ ಪಶ್ಯ ಪಿಬಂತ್ಯನ್ಯೇ ಚ ಭಾರತ ॥೬೭॥

ಅವರು ನೀರನ್ನು ಬಿಟ್ಟು ಪರಸ್ಪರವಾಗಿ ಗೋಳಿಡುತ್ತ ಓಡಾಡುತ್ತಿದ್ದಾರೆ. ನೀರು ಕುಡಿದು ಕೆಲವರು ಸತ್ತಿದ್ದಾರೆ, ಕೆಲವರು ನೀರು ಕುಡಿಯುತ್ತಿದ್ದಾರೆ, ನೋಡು ಅರ್ಜುನ.

ಪರಿಷ್ವಜ್ಯ ಪ್ರಿಯಾನನ್ಯೇ ಬಾಂಧವಾನ್ ಬಂಧುವತ್ಸಲಾಃ ।
ವಿಸಂಜ್ಞಾಃ ಸಮರೇ ಯೋಧಾಸ್ತತ್ರ ತತ್ರ ಮಹಾರಣೇ ॥೬೮॥

ಈ ಮಹಾಯುದ್ಧದಲ್ಲಿ ಕೆಲವರು ಬಂಧುವತ್ಸಲರಾದ ಯೋಧರು ಪ್ರಿಯ ಬಾಂಧವರನ್ನು ತಬ್ಬಿಕೊಂಡೇ ಪ್ರಜ್ಞೆತಪ್ಪಿ ಬಿದ್ದಿದ್ದಾರೆ.

ಪಶ್ಯಾಪರಾನ್ ನರಶ್ರೇಷ್ಠ ಸಂದಷ್ಟೋಷ್ಠಪುಟಾನ್ ಪುನಃ ।
ಭ್ರುಕುಟೀಕುಟಿಲೈರ್ವಕ್ತ್ರೈಃ ಪ್ರೇಕ್ಷಮಾಣಾನ್ ಮಹಾರಣಮ್ ॥೬೯॥

ಇನ್ನು ಕೆಲವರನ್ನು ನೋಡು, ಅರ್ಜುನ, ಅವರು ಮತ್ತೆಮತ್ತೆ ಅವುಡು ಕಚ್ಚಿ ಹುಬ್ಬುಗಂಟಿಕ್ಕಿದ ಮುಖಗಳಿಂದ ಮಹಾಯುದ್ಧವನ್ನು ವೀಕ್ಷಿಸುತ್ತಿದ್ದಾರೆ.

ಗಾಯಗೊಂಡ ಯೋಧರಿಗೆ ಪ್ರಥಮಚಿಕಿತ್ಸೆಯ ಏರ್ಪಾಡು ಇರಲಿಲ್ಲವೆ? ಎಂದರೆ, ಇಲ್ಲ, ಅದು ಬೇಡ. ರಣರಂಗದಲ್ಲಿ ಶಸ್ತ್ರದಿಂದ ಗಾಯಗೊಂಡು ಮರಣ ಹೊಂದುವುದೇ ಸ್ವರ್ಗಸಾಧನ. ಅದನ್ನು ಕಳೆದುಕೊಳ್ಳಲು ಯಾರೂ ಸಿದ್ಧರಿರುವುದಿಲ್ಲ. ದಾರುಣವಾದ ಈ ಯೋಧರ ಸ್ಥಿತಿಯೆ ರಣಭೂಮಿಗೆ ಭೂಷಣವಾದ್ದರಿಂದ ಅದರ ದರ್ಶನವೂ ಪುಣ್ಯಕರವಾದ್ದರಿಂದ ಶ್ರೀಕೃಷ್ಣ ನಿಸಂಕೋಚವಾಗಿ ನಿರರ್ಗಳವಾಗಿ ವರ್ಣಿಸುತ್ತಿದ್ದಾನೆ. ರಣಭೂಮಿಯಲ್ಲಿ ನಡೆಯುವ ಹಿಂಸೆ ಹಿಂಸೆಯೆ ಅಲ್ಲ. ಯಜ್ಞದಲ್ಲಿ ಪಶುಹಿಂಸೆಯಂತೆ ರಣಯಜ್ಞದಲ್ಲಿ ಯೋಧರ ಹಿಂಸೆಯೂ ಪುಣ್ಯಕರವೆಂಬ ಭಾವನೆ ಆ ಕಾಲದಲ್ಲಿತ್ತು.

ಏತತ್ತವೈವಾನುರೂಪಂ ಕರ್ಮಾರ್ಜುನ ಮಹಾಹವೇ ।
ದಿವಿ ವಾ ದೇವರಾಜಸ್ಯ ತ್ವಯಾ ಯತ್ ಕೃತಮದ್ಯ ವೈ ॥೭೦॥

ಅರ್ಜುನ, ನೀನೇನು ಈಗ ಮಹಾಯುದ್ಧದಲ್ಲಿ ಪರಾಕ್ರಮ ತೋರಿ ವೀರ ಕ್ಷತ್ರಿಯರ ನಾಶ ಮಾಡಿರುವೆ. ಅದು ನಿನಗೇ ಒಪ್ಪುವಂಥದ್ದು. ಅಥವಾ ಸ್ವರ್ಗದಲ್ಲಿ ದೇವರಾಜನಿಗೇ ಒಪ್ಪುವಂಥದ್ದು. ಇನ್ನೊಬ್ಬರಿಗೆ ಇದು ಸಾಧ್ಯವಲ್ಲ.

ಸಂಜಯಃ

ಏವಂ ತಾಂ ದರ್ಶಯನ್ ಕೃಷ್ಣೋ ರಣಭೂಮಿಂ ಕಿರೀಟಿನೇ ।
ಗಚ್ಛನ್ನೇವಾಶ್ಮಕೋಚ್ಚಬ್ದಂ ದುರ್ಯೋಧನಬಲೇ ಮಹತ್ ॥೭೧॥

ಸಂಜಯನು ನುಡಿದ— ಹೀಗೆ ಕೃಷ್ಣ ಅರ್ಜುನನಿಗೆ ರಣಭೂಮಿಯನ್ನು

ತೋರಿಸುತ್ತ ಹೋಗುತ್ತಿದ್ದಂತೆಯೆ ಅತ್ತ ದುರ್ಯೋಧನನ ಸೈನ್ಯದಲ್ಲಿ ಮಹಾಶಬ್ದ ಕೇಳಿ ಬಂದಿತು.

ಶಂಖದುಂದುಭಿನಿರ್ಘೋಷಂ ಭೇರೀಪಣವಮಿಶ್ರಿತಮ್ ।
ರಥಾಶ್ವನರನಾಗಾನಾಂ ಪಾದಶಬ್ದಾಂಶ್ಚ ದಾರುಣಾನ್ ॥೭೨॥

ಶಂಖ ದುಂದುಭಿ ಘೋಷ, ಅದರೊಂದಿಗೆ ಭೇರಿಪಣವಗಳ ಶಬ್ದ ರಥ ಅಶ್ವ ಪದಾತಿ ಗಜ ಸೈನಿಕರ ದಾರುಣವಾದ ಆಯುಧಗಳ ಶಬ್ದಗಳು ಕೇಳಿಬಂದುವು.

ಪ್ರವಿಶ್ಯ ತದ್ಬಲಂ ಕೃಷ್ಣಸ್ತುರಗೈರ್ವಾತವೇಗಿತೈಃ ।
ಪಾಂಡ್ಯೇನಾಭ್ಯರ್ದಿತಾಂ ಸೇನಾಂ ತ್ವದೀಯಾಂ ವೀಕ್ಷ್ಯ ವಿಷ್ಠಿತಃ ॥೭೩॥

ರಾಜನೆ, ಗಾಳಿ ವೇಗದ ಕುದುರೆಗಳಿಂದ ಕೃಷ್ಣ ಆ ಸೈನ್ಯವನ್ನು ಪ್ರವೇಶಿಸಿ ಅಲ್ಲಿ ಪಾಂಡ್ಯರಾಜನು ನಿನ್ನ ಸೈನ್ಯವನ್ನು ಧ್ವಂಸಗೊಳಿಸುತ್ತಿದ್ದುದನ್ನು ನೋಡುತ್ತ ನಿಂತ.

ಸ ಹಿ ನಾನಾವಿಧೈಃ ಶಸ್ತ್ರೈರಿಷ್ವಸ್ತ್ರಪ್ರವರೋ ಯುಧಿ ।
ನ್ಯಹನದ್ ದ್ವಿಷತಾಂ ವ್ರಾತಾನ್ ಗತಾಸೂನಂತಕೋ ಯಥಾ ॥೭೪॥

ಪಾಂಡ್ಯರಾಜನು ಬಾಣಪ್ರಯೋಗದಲ್ಲಿ ನಿಷ್ಣಾತನಾಗಿದ್ದು ಆಯುಷ್ಯ ಮುಗಿದವರನ್ನು ಯಮನು ಹೇಗೋ ಹಾಗೇ ಶತ್ರುಸಮೂಹಗಳನ್ನು ಯುದ್ಧದಲ್ಲಿ ನಾನಾ ವಿಧ ಶಸ್ತ್ರಗಳಿಂದ ಸಂಹರಿಸುತ್ತಿದ್ದ.

ಗಜವಾಜಿಮನುಷ್ಯಾಣಾಂ ಶರೀರಾಣಿ ಶಿತೈಃ ಶರೈಃ ।
ಹತ್ವಾ ಪ್ರಹರತಾಂ ಶ್ರೇಷ್ಠೋ ವಿದೇಹಾಸೂನಥಾಕರೋತ್ ॥೭೫॥

ಶಸ್ತ್ರಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಪಾಂಡ್ಯರಾಜ ಗಜ ಅಶ್ವ ಪದಾತಿಗಳ ಶರೀರಗಳನ್ನು ಹರಿತವಾದ ಬಾಣಗಳಿಂದ ಹೊಡೆದು ಶರೀರ ಮತ್ತು ಪ್ರಾಣಗಳೆರಡನ್ನೂ ಇಲ್ಲದಂತೆ ಮಾಡುತ್ತಿದ್ದ.

ಶತ್ರುಪ್ರವೀರೈರಸ್ತಾನಿ ನಾನಾಶಸ್ತ್ರಾಣಿ ಸಾಯಕೈಃ ।
ಛಿತ್ತ್ವಾ ತಾನವಧೀತ್ ಪಾಂಡ್ಯಃ ಶತ್ರೂನ್ ಶಕ್ರ ಇವಾಸುರಾನ್ ॥೭೬॥

ಶತ್ರುವೀರರು ಎಸೆಯುವ ನಾನಾ ಶಸ್ತ್ರಗಳನ್ನು ಬಾಣಗಳಿಂದಲೇ ಕತ್ತರಿಸಿ

ಇಂದ್ರನು ಅಸುರರನ್ನು ಹೇಗೋ ಹಾಗೆ, ಪಾಂಡ್ಯರಾಜ ಆ ಶತ್ರುಗಳನ್ನು ಸಂಹರಿಸುತ್ತಿದ್ದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ಪಾಂಡ್ಯಯುದ್ಧಂ ನಾಮ ಏಕೋನವಿಂಶೋऽಧ್ಯಾಯಃ ॥೧೯॥

❖

ಮಹಾಭಾರತತಾತ್ಪರ್ಯನಿರ್ಣಯ

ಏವಂ ಸ ಮತ್ವಾ ಪ್ರವಿವೇಶ ಸೇನಾಂ
ಪಾಂಡೋಃ ಸುತಾನಾಮಥ ತಂ ಸಮಭ್ಯಯಾತ್ ।
ಪಾಂಡ್ಯಸ್ತಯೋರಾಸ ಸುಯುದ್ಧಮದ್ಭುತಂ
ಪ್ರವರ್ಷತೋಃ ಸಾಯಕಪೂಗಮುಗ್ರಮ್ ॥ ೬೩ ॥

ಹೀಗೆ ಅಶ್ವತ್ಥಾಮ ಆಲೋಚಿಸಿ ಪಾಂಡವರ ಸೈನ್ಯವನ್ನು ಹೊಕ್ಕ. ಆಗ ಪಾಂಡ್ಯದೇಶದ ರಾಜ ಅವನನ್ನು ಇದಿರಿಸಿದ. ಅವರೊಳಗೆ ಅದ್ಭುತವಾದ ಒಳ್ಳೆಯ ಯುದ್ಧ ನಡೆಯಿತು. ಅವರಿಬ್ಬರೂ ಭಯಂಕರ ಬಾಣಸಮೂಹದ ಮಳೆಗರೆದರು.

ಅಷ್ಟಾವಷ್ಟಗವಾನ್ಯೂಹುಃ ಶಕಟಾನಿ ಯದಾಯುಧಮ್ ।
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ತತ್ರ ಹ ॥ ೬೪ ॥

ಎಂಟು ಎತ್ತುಗಳು ಎಳೆಯುವ ಎಂಟು ಬಂಡಿಗಳು ಎಷ್ಟು ಆಯುಧಗಳನ್ನು ಹೊರಬಲ್ಲುವೋ ಅಷ್ಟು ಆಯುಧಗಳನ್ನು ಅಶ್ವತ್ಥಾಮ ಆ ಯುದ್ಧದಲ್ಲಿ ಹಗಲಿನ ಎಂಟನೆ ಒಂದು ಭಾಗ ಕಾಲದಲ್ಲಿ ಎಸೆದ.

ಅಥ ತಂ ವಿರಥಂ ಕೃತ್ವಾ ಛಿತ್ವಾ ಕಾರ್ಮುಕಮಾಹವೇ ।
ಸಕುಂಡಲಂ ಶಿರೋ ದ್ರೌಣಿರ್ಜಹಾರ ಮಕುಟೋಜ್ಜ್ವಲಮ್ ॥೬೫॥

ಅಶ್ವತ್ಥಾಮ ಯುದ್ಧದಲ್ಲಿ ಪಾಂಡ್ಯರಾಜನನ್ನು ವಿರಥನನ್ನಾಗಿ ಮಾಡಿ ಅವನ ಬಿಲ್ಲನ್ನು ಕಡಿದು ಕುಂಡಸಲಹಿತವಾದ, ಕಿರೀಟದಿಂದ ಶೋಭಿಸುತ್ತಿದ್ದ ಅವನ ಶಿರಸ್ಸನ್ನು ಕಡಿದ.

❖

ಇಪ್ಪತ್ತನೆಯ ಅಧ್ಯಾಯ

ಅಶ್ವತ್ಥಾಮನಿಂದ ಪಾಂಡ್ಯಮಲಯಧ್ವಜನ ವಧ ಮತ್ತು
ಕರ್ಣ–ಧೃಷ್ಟದ್ಯುಮ್ನರ ಯುದ್ಧ

ಧೃತರಾಷ್ಟ್ರಃ

ಪ್ರೋಕ್ತಸ್ತ್ವಯಾ ಪೂರ್ವಮೇವ ಪ್ರವೀರೋ ಲೋಕವಿಶ್ರುತಃ ।
ನ ತ್ವಸ್ಯ ಕರ್ಮ ಸಂಗ್ರಾಮೇ ತ್ವಯಾ ಸಂಜಯ ಕೀರ್ತಿತಮ್ ॥೧॥

ಧೃತರಾಷ್ಟ್ರ ಹೇಳುತ್ತಾನೆ— ಸಂಜಯ, ಪಾಂಡ್ಯರಾಜ ಮಲಯಧ್ವಜನು ಲೋಕಪ್ರಸಿದ್ಧನಾದ ವೀರನೆಂದು ನೀನು ಹಿಂದೆಯೇ ಹೇಳಿರುವೆ. ಯುದ್ಧದಲ್ಲಿ ಅವನ ಸಾಹಸಕಾರ್ಯವನ್ನು ನೀನು ಹೇಳಿಲ್ಲ.

ತಸ್ಯ ವಿಸ್ತರತೋ ಬ್ರೂಹಿ ಪ್ರವೀರಸ್ಯಾಸ್ಯ ವಿಕ್ರಮಮ್ ।
ಶಿಕ್ಷಾಂ ವೀರ್ಯಂ ಚ ಮಾನಂ ಚ ಪ್ರಭಾವಂ ದರ್ಪಮೇವ ಚ ॥೨॥

ಈ ವೀರನ ಪರಾಕ್ರಮ ವಿದ್ಯೆ ಬಲ ಅಭಿಮಾನ ಪ್ರಭಾವ ದರ್ಪವೆಲ್ಲವನ್ನೂ ವಿಸ್ತಾರವಾಗಿ ಹೇಳು.

ಸಂಜಯಃ

ದ್ರೋಣಭೀಷ್ಮಕೃಪದ್ರೌಣಿಕರ್ಣಾರ್ಜುನಜನಾರ್ದನಾನ್ ।
ಸಮಾಪ್ತವಿದ್ಯಾನ್ ಧನುಷಿ ಶ್ರೇಷ್ಠಾನ್ ಯಾನ್ ಮನ್ಯಸೇ ರಥಾನ್॥೩॥

ಸಂಜಯ ಹೇಳುತ್ತಾನೆ— ದ್ರೋಣ ಭೀಷ್ಮ ಕೃಪ ಅಶ್ವತ್ಥಾಮ ಕರ್ಣ ಅರ್ಜುನ ಕೃಷ್ಣರನ್ನು ಚೆನ್ನಾಗಿ ವಿದ್ಯೆಯನ್ನು ಗಳಿಸಿದವರು, ಧನುರ್ವಿದ್ಯೆಯಲ್ಲಿ ಶ್ರೇಷ್ಠರಾದ ರಥಿಕರು ಎಂದು ನೀನು ತಿಳಿದಿರುವೆ ತಾನೆ?

ಯೋ ಹ್ಯಾಕ್ಷಿಪತಿ ವೀರ್ಯೇಣ ಸರ್ವಾನೇತಾನ್ಮಹಾರಥಾನ್ ।
ನ ಮೇನೇ ಚಾತ್ಮನಾ ತುಲ್ಯಂ ಕಂಚಿದೇವ ನರೇಶ್ವರಮ್ ॥೪॥

ಪಾಂಡ್ಯರಾಜ ಮಲಯಧ್ವಜನು ಈ ಎಲ್ಲ ಮಹಾರಥರನ್ನೂ ಕೂಡ ಪರಾಕ್ರಮದಿಂದ ಕಡೆಗಣಿಸುತ್ತಾನೆ. ಯಾವ ರಾಜನನ್ನೂ ಈತ ತನಗೆ ಸಮಾನನೆಂದು ಪರಿಗಣಿಸುವುದಿಲ್ಲ.

ತುಲ್ಯತಾಂ ದ್ರೋಣಭೀಷ್ಮಾಭ್ಯಾಮಾತ್ಮನೋ ಯೋ ನ ಮೃಷ್ಯತೇ ।
ವಾಸುದೇವಾರ್ಜುನಾಭ್ಯಾಂ ಚ ನ್ಯೂನತಾಂ ಚಾಪಿ ನೇಚ್ಛತಿ ॥೫॥

ದ್ರೋಣ ಭೀಷ್ಮರಿಗೆ ತನ್ನನ್ನು ಸಮಾನ ಎಂದು ತಿಳಿದರೆ ಅದನ್ನು ಈತ ಸಹಿಸುವುದಿಲ್ಲ. ಕೃಷ್ಣ-ಅರ್ಜುನರಿಗಿಂತ ತಾನು ಕಡಿಮೆಯವನೆಂದರೆ ಅದನ್ನೂ ಒಪ್ಪುವುದೇ ಇಲ್ಲ.

ಈತ ಚಿತ್ರಾಂಗದೆಯ ತಂದೆ. ವೀರಸೇನ, ಪ್ರವೀರ, ಚಿತ್ರವಾಹನ ಎಂದೂ ಈತನಿಗೆ ಹೆಸರಿವೆ.

ಸ ಪಾಂಡ್ಯೋ ನೃಪತಿಶ್ರೇಷ್ಠಃ ಸರ್ವಶಸ್ತ್ರಭೃತಾಂ ವರಃ ।
ಕರ್ಣಸ್ಯಾನೀಕಮಹನತ್ ಪರಿಕ್ಷಿಪ್ತಮಿವಾಂತಕಃ ॥೬॥

ಆಯುಷ್ಯ ತೀರಿದವನನ್ನು ಯಮ ಸಂಹರಿಸುವಂತೆ, ಎಲ್ಲ ಶಸ್ತ್ರಧಾರಿಗಳಲ್ಲಿ ಶ್ರೇಷ್ಠ ರಾಜರಲ್ಲಿ ಶ್ರೇಷ್ಠನಾದ ಆ ಪಾಂಡ್ಯನು ಕರ್ಣನ ಸೈನ್ಯವನ್ನು ನಾಶ ಮಾಡತೊಡಗಿದ.

ತದುದೀರ್ಣರಥಾಶ್ವೇಭಪತ್ತಿಪ್ರವರಸಂಕುಲಮ್ ।
ಕುಲಾಲಚಕ್ರವದ್ ಭ್ರಾಂತಂ ಪಾಂಡ್ಯೇನಾಭ್ಯರ್ದಿತಂ ಬಲಮ್ ॥೭॥

ಶ್ರೇಷ್ಠ ರಥ ಅಶ್ವ ಗಜ, ಪದಾತಿಶ್ರೇಷ್ಠರಿಂದ ತುಂಬಿರುವ ಕರ್ಣನ ಸೈನ್ಯವು ಪಾಂಡ್ಯನಿಂದ ಪೀಡಿತವಾಗಿ ಕುಂಬಾರನ ಚಕ್ರದಂತೆ ತಿರುಗುತ್ತಿದೆ.

ವ್ಯಶ್ವಸೂತಧ್ವಜರಥಾನ್ ವಿಪ್ರಯುಕ್ತಶರಾಸನಾನ್ ।
ಸಮ್ಯಗಸ್ಯೈಃ ಶರೈಃ ಪಾಂಡ್ಯೋ ವಾಯುರ್ಮೇಘಾನಿವಾಕ್ಷಿಪತ್ ॥೮॥

ಪಾಂಡ್ಯನು ಚೆನ್ನಾಗಿ ಬಾಣಗಳನ್ನೆಸೆದು ಶತ್ರುಗಳನ್ನು ಕುದುರೆ ಸಾರಥಿ ಧ್ವಜ ರಥ ಧನುಸ್ಸುಗಳಿಂದ ರಹಿತರನ್ನಾಗಿಸಿ, ವಾಯು ಮೋಡಗಳನ್ನು ಹೇಗೋ ಹಾಗೆ ಹೊಡೆದೋಡಿಸಿದ.

ದ್ವಿರದಾನ್ ಪ್ರವರಾರೋಹಾನ್ ವಿಪತಾಕಾಯುಧಧ್ವಜಾನ್ ।
ಸಪಾದರಕ್ಷಾನ್ ನ್ಯಹನದ್ ವಜ್ರೇಣಾದ್ರೀನಿವಾದ್ರಿಹಾ ॥೯॥

ಗಜ ಮತ್ತು ಗಜಾರೋಹಿಗಳನ್ನು ಪತಾಕೆ ಆಯುಧ ಧ್ವಜರಹಿತರನ್ನಾಗಿಸಿ ಪಾದರಕ್ಷಕರೊಂದಿಗೇ ಅವರನ್ನು ಇಂದ್ರನು ಪರ್ವತಗಳನ್ನು ವಜ್ರಾಯುಧದಿಂದ ಹೊಡೆದಂತೆ ಹೊಡೆದ.

ಸಶಕ್ತಿಪ್ರಾಸಯಷ್ಟೀಂಶ್ಚ ಹಯಾರೋಹಾನ್ ಹಯಾನಪಿ ।
ಪುಳಿಂದಕಷಬಾಹ್ಲೀಕಾನ್ ನಿಷಾದಾಂಧ್ರಕಕುಂತಲಾನ್ ॥೧೦॥

ದಾಕ್ಷಿಣಾತ್ಯಾಂಶ್ಚ ಭೋಜಾಂಶ್ಚ ಕ್ರೂರಾನ್ ಸಂಗ್ರಾಮಕರ್ಕಶಾನ್ ।
ವಿಶಸ್ತ್ರಕವಚಾನ್ ಬಾಣೈಃ ಕೃತ್ವಾ ಪಾಂಡ್ಯೋಽಕರೋದ್
ವ್ಯಸೂನ್ ॥೧೧॥

ಶಕ್ತಿ ಪ್ರಾಸ ಯಷ್ಟಿಗಳನ್ನು ಹಿಡಿದಿದ್ದ ಅಶ್ವಾರೋಹಿಗಳನ್ನೂ ಅಶ್ವಗಳನ್ನೂ ಯುದ್ಧದಲ್ಲಿ ಬಲುಕ್ರೂರಿಗಳಾದ ಪುಲಿಂದ ಕಷ ಬಾಹ್ಲೀಕ ನಿಷಾದ ಆಂಧ್ರ ಕುಂತಲ ದಾಕ್ಷಿಣಾತ್ಯ ಭೋಜ ಮುಂತಾದವರನ್ನೂ ಪಾಂಡ್ಯನು ಬಾಣಗಳಿಂದ ಶಸ್ತ್ರ ಕವಚಗಳಿಲ್ಲದವರನ್ನಾಗಿ ಮಾಡಿ ಸಂಹರಿಸಿದ.

ಚತುರಂಗಂ ಬಲಂ ರಾಜನ್ ನಿಘ್ನಂತಂ ಪಾಂಡ್ಯಮಾಹವೇ ।
ದೃಷ್ಟ್ವಾ ದ್ರೌಣಿರಸಂಭ್ರಾಂತಮಸಂಭ್ರಾಂತತರೋ ಯಯೌ ॥೧೨॥

ರಾಜನೆ, ಯುದ್ಧದಲ್ಲಿ ಭಯೋದ್ವೇಗರಹಿತನಾಗಿ ಚತುರಂಗಬಲವನ್ನು ಪುಡಿಗೈಯುತ್ತಿದ್ದ ಪಾಂಡ್ಯನನ್ನು ಕಂಡು, ಭಯೋದ್ವೇಗಲೇಶವೂ ಇಲ್ಲದವನಾದ ಅಶ್ವತ್ಥಾಮ ಇದಿರಿಗೆ ಬಂದು ನಿಂತ.

ಆಭಾಷ್ಯ ಚೈನಂ ಮಧುರಮನುಸೃತ್ಯ ಹ್ಯಭೀತವತ್ ।
ಪ್ರಾಹ ಪ್ರಹರತಾಂ ಶ್ರೇಷ್ಠಃ ಸ್ಮಿತಪೂರ್ವಂ ಸಮಾಹ್ವಯತ್ ॥೧೩॥

ಪ್ರಹರಿಸುವವರಲ್ಲಿ ಶ್ರೇಷ್ಠನಾದ ಅಶ್ವತ್ಥಾಮನು ನಿರ್ಭೀತನಾಗಿ ನಯವಾಗಿ ಅವನನ್ನು ಮಾತನಾಡಿಸಿ, ಅವನನ್ನು ಅನುಸರಿಸಿ, ಅವನಂತೆಯೆ, ನಗುತ್ತ ಯುದ್ಧಕ್ಕೆ ಆಹ್ವಾನಿಸಿದ.

ಅಶ್ವತ್ಥಾಮಾ

ರಾಜನ್ ಕಮಲಪತ್ರಾಕ್ಷ ಪ್ರಧಾನಾಯುಧವಾಹನ ।
ವಜ್ರಸಂಹನನಾಚಿಂತ್ಯ ಪ್ರಖ್ಯಾತಬಲಪೌರುಷ ॥೧೪॥

ಅಶ್ವತ್ಥಾಮ ನುಡಿದ— ಕಮಲದಳದಂಥ ಕಣ್ಣುಳ್ಳವನು, ಉತ್ತಮ ಆಯುಧ ವಾಹನಗಳುಳ್ಳವನು, ವಜ್ರಕಾಯ, ಅಚಿಂತ್ಯಪ್ರಖ್ಯಾತ ಬಲಪೌರುಷಉಳ್ಳವನೂ ಆದ ರಾಜನೆ!

ಮುಷ್ಟಿಶ್ಲಿಷ್ಟಾಂಗುಲಿಭ್ಯಾಂ ಚ ವ್ಯಾಯತಾಭ್ಯಾಂ ಮಹದ್ಧನುಃ ।
ದೋರ್ಭ್ಯಾಂ ವಿಷ್ಫಾರಯನ್ ಭಾಸಿ ಮಹಾಜಲದವದ್
ಭೃಶಮ್ ॥೧೫॥

ಮುಷ್ಟಿಯಾಗಿ ಬಿಗಿದ ಬೆರಳುಗಳುಳ್ಳ ನೀಳವಾದ ತೋಳುಗಳಿಂದ ಮಹಾ ಧನುಸ್ಸನ್ನು ಬಹಳ ಠೇಂಕರಿಸುತ್ತಿದ್ದರೆ ನೀನು ಮಹಾಮೇಘದಂತೆ ಶೋಭಿಸುವೆ.

ಶರವರ್ಷೈರ್ಮಹಾವೇಗೈರಮಿತ್ರಾನಭಿವರ್ಷಸಿ ।
ಮದನ್ಯಂ ನಾನುಪಶ್ಯಾಮಿ ಪ್ರತಿವೀರಂ ತವಾಹವೇ ॥೧೬॥

ಶತ್ರುಗಳ ಮೇಲೆ ಬಲು ವೇಗದ ಬಾಣಗಳ ಮಳೆ ಸುರಿಸುವಿ. ನಿನಗೆ ಯುದ್ಧದಲ್ಲಿ ಇದಿರಾಗಿ ಹೋರಾಡಬಲ್ಲ ವೀರನನ್ನು ನನ್ನನ್ನು ಬಿಟ್ಟರೆ, ಇನ್ನೊಬ್ಬನನ್ನು ನಾ ಕಾಣೆ.

ರಥದ್ವಿರದಪತ್ತ್ಯಶ್ವಾನ್ ಏಕಃ ಪ್ರಮಥಸೇ ಬಹೂನ್ ।
ಮೃಗಸಂಘಾನಿವಾರಣ್ಯೇ ನಖೈರ್ಭೀಮಬಲೋ ಹರಿಃ ॥೧೭॥

ಅರಣ್ಯದಲ್ಲಿ ಭಯಂಕರ ಬಲಶಾಲಿಯಾದ ಸಿಂಹವು ಉಗುರುಗಳಿಂದ ಮೃಗ ಸಮೂಹಗಳನ್ನು ಹೇಗೋ ಹಾಗೆ ಒಬ್ಬನೇ ನೀನು ಬಹುಸಂಖ್ಯೆಯಲ್ಲಿ ರಥ ಗಜ ಪದಾತಿ ಅಶ್ವಸೈನ್ಯಗಳನ್ನು ಸಂಹರಿಸುವಿ.

ಮಹತಾ ರಥಘೋಷೇಣ ದಿವಂ ಭೂಮಿಂ ಚ ನಾದಯನ್ ।
ವರ್ಷಾಂತೇ ಸಮ್ಯಗಾದಿತ್ಯೋ ಭಾಭಿರಾಪೂರಯನ್ನಿವ ॥೧೮॥

ವರ್ಷಾಕಾಲ ಕಳೆದಾಗ ಸೂರ್ಯನು ಕಿರಣಗಳಿಂದ ಭೂಮಿ ಅಂತರಿಕ್ಷಗಳನ್ನು ಬೆನ್ನಾಗಿ ತುಂಬಿಸುವಂತೆ, ನೀನೂ ದೊಡ್ಡ ರಥಧ್ವನಿಯಿಂದ ಭೂಮ್ಯಂತರಿಕ್ಷಗಳನ್ನು ತುಂಬಿಸುವಿ.

ಸಂಸ್ಪೃಶಾನಃ ಶರೈಃ ಪೂರ್ಣೌ ತೂಣೀ ಚಾಶೀವಿಷೋಪಮೈಃ ।
ಮಯೈವೈಕೇನ ಯುಧ್ಯಸ್ವ ತ್ರ್ಯಂಬಕೇಣ ಯಥಾಽಂತಕಃ ॥೧೯॥

ಸರ್ಪಸದೃಶವಾದ ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನು ಸ್ಪರ್ಶಿಸುತ್ತ ಶಿವನೊಡನೆ ಯಮನಂತೆ, ನನ್ನೊಬ್ಬನೊಡನೇ ನೀನು ಯುದ್ಧಮಾಡು.

ಸಂಜಯಃ

ಏವಮುಕ್ತಸ್ತಥೇತ್ಯುಕ್ತ್ವಾ ಪ್ರಹಸ್ಯೈನಂ ಸ ಪಾರ್ಥಿವಃ ।
ಕರ್ಣೇನಾ ದ್ರೋಣತನಯಂ ವಿವ್ಯಾಧ ಮಲಯಧ್ವಜಃ ॥೨೦॥

ಸಂಜಯ ನುಡಿದ— ಅಶ್ವತ್ಥಾಮ ಹೀಗೆ ಹೇಳಿದಾಗ ರಾಜಾ ಮಲಯಧ್ವಜನು ಹಾಗೇ ಆಗಲೆಂದು ಹೇಳಿ ನಕ್ಕು ಬಾಣದಿಂದ ಅಶ್ವತ್ಥಾಮನಿಗೆ ಹೊಡೆದ.

ಮರ್ಮಭೇದಿಭಿರತ್ಯುಗ್ರೈರ್ಬಾಣೈರಗ್ನಿಶಿಖೋಪಮೈಃ ।
ಮರ್ಮಸ್ವಭ್ಯಹನದ್ ದ್ರೌಣಿಃ ಪಾಂಡ್ಯಮಾಚಾರ್ಯನಂದನಃ ॥೨೧॥

ದ್ರೋಣಪುತ್ರ ಅಶ್ವತ್ಥಾಮನೂ ಅಗ್ನಿಜ್ವಾಲೆಗೆ ಸಮವಾದ ಮರ್ಮಭೇದಿ ಅತ್ಯುಗ್ರವಾದ ಬಾಣಗಳಿಂದ ಮರ್ಮಸ್ಥಳಗಳಲ್ಲಿ ಪಾಂಡ್ಯನಿಗೆ ಹೊಡೆದ.

ತತೋಽಪರಾನ್ ನವಾಂಸ್ತೂರ್ಣಂ ನಾರಾಚಾನ್ ಕಂಕವಾಸಸಃ ।
ಗತ್ಯಾ ದಶಮ್ಯಾ ಸಂಯುಕ್ತಾನ್ ಅಶ್ವತ್ಥಾಮಾಽಪ್ಯವಾಸೃಜತ್ ॥೨೨॥

ಬಳಿಕ ಕಂಕಪತ್ರಯುಕ್ತವಾದ ಬೇರೆ ಹೊಸ ಬಾಣಗಳನ್ನು ಕೂಡ ಬೇಗನೆ ದಶಮಗತಿ ಯುಕ್ತವಾಗಿ ಅಶ್ವತ್ಥಾಮ ಎಸೆದ.

ಉನ್ಮುಖ್ಯಭಿಮುಖೀ ತಿರ್ಯಙ್ ಮಂದಾ ಗೋಮೂತ್ರಿಕಾ ಧ್ರುವಾ ।
ಸ್ಖಲಿತಾ ಯಮಕಾಕ್ರಾಂತಾ ಕ್ರುಷ್ಟೇತೀಷುಗತೀರ್ವಿದುಃ ॥

ಬಾಣವು ತಲೆ, ಎದೆ, ಪಾರ್ಶ್ವಗಳಿಗೆ ನಾಟುವುದು ಮೊದಲಿನ ಮೂರು ಗತಿಗಳು–ಉನ್ಮುಖೀ, ಅಭಿಮುಖೀ ಮತ್ತು ತಿರ್ಯಕ್ ಎಂದು. ಸ್ವಲ್ಪ ಚರ್ಮದಲ್ಲಿ ಗಾಯಮಾಡುವುದು ಮಂದಾ. ಎಡಬಲಗಳಿಗೆ ನಾಟಿ ಕವಚವನ್ನು ಪುಡಿಮಾಡುವುದು ಗೋಮೂತ್ರಿಕಾ. ಗುರಿ ತಪ್ಪದಿರುವುದು ಧ್ರುವಾ, ಗುರಿ ತಪ್ಪುವುದು ಸ್ಖಲಿತಾ. ಅನೇಕಬಾರಿ ಚುಚ್ಚಿ ಹೊರಗೆ ಬರುವುದು ಯಮಕಾಕ್ರಾಂತಾ. ತೋಳು ಮುಂತಾದ ಅಂಗಗಳನ್ನು ಕತ್ತರಿಸುವುದು ಕ್ರುಷ್ಟಾ. ಹೀಗೆ ಬಾಣದ ಗತಿಗಳು ಒಂಬತ್ತು ಬಗೆ. ತಲೆಯನ್ನು ಕತ್ತರಿಸಿ ಅದರೊಂದಿಗೇ ಬಾಣವು ದೂರ ಹೋಗಿ ಬೀಳುವುದು ಅತಿಕ್ರುಷ್ಟಾ ಎಂಬ ಹತ್ತನೇ ಗತಿ.

ತಾನಚ್ಛಿನತ್ ತದಾ ಪಾಂಡ್ಯಶ್ಚತುರ್ಭಿರಪರೈಃ ಶರೈಃ ।
ಚತುರೋಭ್ಯಾಹನಚ್ಚಾಶ್ವಾನ್ ಆಶು ತೇ ವ್ಯಸವೋಽಭವನ್ ॥೨೩॥

ಆ ಬಾಣಗಳನ್ನು ಆಗ ನಾಲ್ಕು ಬೇರೆ ಬಾಣಗಳಿಂದ ಪಾಂಡ್ಯ ಕತ್ತರಿಸಿದ. ಮತ್ತು ನಾಲ್ಕೂ ಕುದುರೆಗಳನ್ನು ಹೊಡೆದ. ಅವು ಒಡನೆ ಅಸುನೀಗಿದುವು.

ಅಥ ದ್ರೋಣಸುತಸ್ಯೇಷೂನ್ ಛಿತ್ವಾ ಛಿತ್ವಾ ಶಿತೈಃ ಶರೈಃ ।
ಧನುರ್ಜ್ಯಾಂ ವಿತತಾಂ ಪಾಂಡ್ಯಶ್ಚಿಚ್ಛೇದಾದಿತ್ಯತೇಜಸಃ ॥೨೪॥

ಸೂರ್ಯನಂತೆ ಬೆಳಗುವ ಆ ಅಶ್ವತ್ಥಾಮನ ಬಾಣಗಳನ್ನು ಹರಿತವಾದ ಬಾಣಗಳಿಂದ ಪುನಃಪುನಃ ಕಡಿದು, ಉದ್ದವಾದ ಹೆದೆಯನ್ನೂ ಕಡಿದ, ಪಾಂಡ್ಯ.

ಅಥಾಧಿಜ್ಯಂ ಮಹತ್ ಕೃತ್ವಾ ಧನುರ್ದ್ರೌಣೇರಮಿತ್ರಹಾ ।
ಪ್ರೇಕ್ಷ್ಯ ಚಾಶು ರಥೇ ಯುಕ್ತಾನ್ ನರೈರನ್ಯಾನ್ ಹಯೋತ್ತಮಾನ್ ।೨೫।

ಶತ್ರುನಾಶಕನಾದ ಅಶ್ವತ್ಥಾಮ ಮಹಾಧನುಸ್ಸಿಗೆ ಬೇರೆ ಹೆದೆಯೇರಿಸಿ, ಬೇರೆ ಉತ್ತಮವಾದ ಕುದುರೆಗಳನ್ನು ಪರೀಕ್ಷಿಸಿ ನೋಡಿ, ಸೇವಕರಿಂದ ಬೇಗನೆ ರಥಕ್ಕೆ ಕಟ್ಟಿಸಿದ.

ತತಃ ಶರಸಹಸ್ರಾಣಿ ಪ್ರೇಷಯಾಮಾಸ ಸ ದ್ವಿಜಃ ।
ಇಷುಸಂಬಾಧಮಾಕಾಶಮಕರೋದ್ ದಿಶ ಏವ ಚ ॥೨೬॥

ಬಳಿಕ ಅಶ್ವತ್ಥಾಮ ಸಾವಿರಾರು ಬಾಣಗಳನ್ನು ಎಸೆದ. ಆಕಾಶ ಮತ್ತು ದಿಕ್ಕುಗಳನ್ನು ಬಾಣಗಳಿಂದ ದಟ್ಟವಾಗಿ ತುಂಬಿಸಿದ.

ತತಸ್ತಾನಸ್ಯತಃ ಸರ್ವಾನ್ ದ್ರೌಣೇರ್ಬಾಣಾನ್ ಮಹಾತ್ಮನಃ ।
ಜಾನನ್ನಪ್ಯಕ್ಷಯಾನ್ ಪಾಂಡ್ಯೋಽಶಾತಯತ್ ಪುರುಷರ್ಷಭಃ ॥೨೭॥

ಮಹಾತ್ಮ ಅಶ್ವತ್ಥಾಮ ಬಾಣಗಳನ್ನು ಎಸೆಯುತ್ತಿದ್ದಂತೆಯೇ ಅವೆಲ್ಲವನ್ನೂ ಅಕ್ಷಯವೆಂದು ತಿಳಿದೂ ಸಹ ಪುರುಷಶ್ರೇಷ್ಠನಾದ ಪಾಂಡ್ಯನು ತುಂಡರಿಸಿದ.

ಪ್ರತತಾಂಸ್ತಾನ್ ಪ್ರಯತ್ನೇನ ಛಿತ್ತ್ವಾ ದ್ರೌಣೇರಿಷೂನರಿಃ ।
ಚಕ್ರರಕ್ಷೌ ತತಸ್ತಸ್ಯ ಪ್ರಾಣುದನ್ ನಿಶಿತೈಃ ಶರೈಃ ॥೨೮॥

ಎಲ್ಲೆಡೆ ಹಬ್ಬಿದ ಅಶ್ವತ್ಥಾಮನ ಆ ಬಾಣಗಳನ್ನು ಪಾಂಡ್ಯನು ಪ್ರಯತ್ನದಿಂದ ಹರಿತವಾದ ಬಾಣಗಳಿಂದ ಕತ್ತರಿಸಿ, ಅವನ ಚಕ್ರರಕ್ಷಕರನ್ನೂ ಸಂಹರಿಸಿದ.

ಅಥ ತಲ್ಲಾಘವಂ ದೃಷ್ಟ್ವಾ ಮಂಡಲೀಕೃತಕಾರ್ಮುಕಃ ।
ಪ್ರಾಸ್ಯದ್ ದ್ರೋಣಸುತೋ ಬಾಣಾನ್ ವರ್ಷಂ
ಪೂಷಾನುಜೋ ಯಥಾ ॥೨೯॥

ಪಾಂಡ್ಯನ ಬಾಣವೇಗವನ್ನು ಕಂಡು ಅಶ್ವತ್ಥಾಮನು ತನ್ನ ಬಿಲ್ಲನ್ನು ಮಂಡಲಾಕಾರವಾಗಿ ಸೆಳೆದು, ಪೂಷನ ತಮ್ಮನಾದ ಪರ್ಜನ್ಯನು ಮಳೆಗರೆವಂತೆ, ಬಾಣಗಳನ್ನು ಎಸೆದ.

ಅಷ್ಟಾವಷ್ಟಗವಾನ್ಯೂಹುಃ ಶಕಟಾನಿ ಯದಾಯುಧಮ್ ।
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ಮಾರಿಷ ॥೩೦॥

ರಾಜನೆ, ಎಂಟು ಎತ್ತುಗಳು ಎಳೆಯುವ ಎಂಟು ಬಂಡಿಗಳು ಎಷ್ಟು ಆಯುಧಗಳನ್ನು ಹೊರಬಲ್ಲವೋ ಅಷ್ಟು ಆಯುಧಗಳನ್ನು ಅಶ್ವತ್ಥಾಮ ಹಗಲಿನ ಎಂಟನೆ ಒಂದು ಭಾಗದಷ್ಟು ಕಾಲದಲ್ಲಿ ಎಸೆದಿದ್ದಾನೆ ಎಂದರೆ ಅದರ ವೇಗ ಎಷ್ಟಿರಬಹುದು!

ತಮಂತಕಮಿವ ಕ್ರುದ್ಧಮಂತಕಾಲಾಂತಕೋಪಮಮ್ ।
ಯೇ ಯೇ ದದೃಶಿರೇ ರೂಪಂ ವಿಸಂಜ್ಞಾಃ ಪ್ರಾಯಶೋಽಭವನ್॥೩೧॥

ಅಂತಕನಾದ ಯಮನಂತೆ ಕ್ರುದ್ಧನಾಗಿ ಪ್ರಳಯಕಾಲದ ಅಂತಕನಂತಾಗಿದ್ದ ಅಶ್ವತ್ಥಾಮನ ರೂಪವನ್ನು ಯಾರಾರು ಕಂಡರೋ ಅವರೆಲ್ಲರೂ ಪ್ರಾಯಃ ಪ್ರಜ್ಞೆ ತಪ್ಪಿ ಬಿದ್ದರು.

ಪರ್ಜನ್ಯ ಇವ ಘರ್ಮಾಂತೇ ವೃಷ್ಟ್ಯಾ ಸಾದ್ರಿದ್ರುಮಾಂ ಮಹೀಮ್ ।
ಆಚಾರ್ಯಪುತ್ರಸ್ತಾಂ ಸೇನಾಂ ಬಾಣವೃಷ್ಟ್ಯಾ ಹ್ಯವೀವೃಷತ್ ॥೩೨॥

ಬೇಸಿಗೆ ಕಳೆದೊಡನೆ ಮೋಡವು ಬೆಟ್ಟಕಾಡುಗಳೊಂದಿಗೆ ಇಡೀ ಭೂಮಿಯ ಮೇಲೆ ಮಳೆಗರೆಯುವಂತೆ, ಅಶ್ವತ್ಥಾಮ ಆ ಪಾಂಡ್ಯನ ಸೈನ್ಯದ ಮೇಲೆ ಬಾಣಗಳ ಮಳೆಗರೆದ.

ದ್ರೌಣಿಪರ್ಜನ್ಯಸೃಷ್ಟಾಂ ತಾಂ ಬಾಣವೃಷ್ಟಿಂ ದುರಾಸದಾಮ್ ।
ವಾಯವ್ಯಾಸ್ತ್ರೇಣ ಸ ಕ್ಷಿಪ್ರಂ ವಿದ್ಧ್ವಾ ಪಾಂಡ್ಯಾನಿಲೋಽನದತ್ ॥೩೩॥

ಅಶ್ವತ್ಥಾಮನೆಂಬ ಪರ್ಜನ್ಯನು ಸುರಿಸಿದ ತಡೆಯಲಾಗದ ಆ ಬಾಣಗಳ ಮಳೆಯನ್ನು ಪಾಂಡ್ಯನೆಂಬ ಬಿರುಗಾಳಿ ವಾಯವ್ಯಾಸ್ತ್ರದಿಂದ ಬೇಗನೆ ದೂರಕ್ಕೆ ಹೊಡೆದೋಡಿಸಿ ಗರ್ಜನೆ ಮಾಡಿದ.

ತಸ್ಯ ನಾನದತಃ ಕೇತುಂ ಚಂದನಾಗುರುರೂಷಿತಮ್ ।
ಮಲಯಪ್ರತಿಮಂ ದ್ರೌಣಿಶ್ಚಿತ್ವಾ ಬಾಣೈರಪಾತಯತ್ ॥೩೪॥

ಪಾಂಡ್ಯ ಗರ್ಜಿಸುತ್ತಿದ್ದಂತೆಯೇ ಮಲಯಾಚಲದಂತೆ ಇದ್ದ ಚಂದನ ಅಗುರುಗಳಿಂದ ಲೇಪಿತವಾಗಿದ್ದ ಅವನ ಧ್ವಜವನ್ನು ಅಶ್ವತ್ಥಾಮ ಬಾಣಗಳಿಂದ ಕಡಿದುರುಳಿಸಿದ.

ಸೂತಮೇಕೇಷುಣಾ ಹತ್ವಾ ಮಹಾಜಲದನಿಸ್ವನಮ್ ।
ಧನುಶ್ಚಿತ್ತ್ವಾರ್ಧಚಂದ್ರೇಣ ವ್ಯಧಮತ್ ತಿಲಶೋ ರಥಮ್ ॥೩೫॥

ಒಂದು ಬಾಣದಿಂದ ಸಾರಥಿಯನ್ನು ಕೊಂದು, ದೊಡ್ಡ ಮೋಡದಂತೆ ಸದ್ದು ಮಾಡುವ ಧನುಸ್ಸನ್ನೂ ಕಡಿದು, ಅರ್ಧಚಂದ್ರ ಬಾಣದಿಂದ ರಥವನ್ನು ಎಳ್ಳು ಕಾಳಿನಷ್ಟು ಸಣ್ಣಗೆ ಚೂರು ಮಾಡಿದ, ಅಶ್ವತ್ಥಾಮ.

ಅಸ್ತ್ರೈರಸ್ತ್ರಾಣಿ ಸಂವಾರ್ಯ ಚ್ಛಿತ್ತ್ವಾ ಸರ್ವಾಯುಧಾನಿ ಚ ।
ಪ್ರಾಪ್ತಮಪ್ಯಹಿತಂ ದ್ರೌಣಿರ್ನಾವಧೀದ್ ಯುದ್ಧತೃಷ್ಣಯಾ ॥೩೬॥

ಶತ್ರುವಿನ ಅಸ್ತ್ರಗಳನ್ನು ಅಸ್ತ್ರಗಳಿಂದ ತಡೆದು, ಎಲ್ಲ ಆಯುಧಗಳನ್ನೂ ಕತ್ತರಿಸಿ, ಶತ್ರು ತನ್ನ ನಿಯಂತ್ರಣದಲ್ಲಿ ಬಂದಿದ್ದರೂ ಇನ್ನೂ ಯುದ್ಧಮಾಡುವ ಬಯಕೆಯಿಂದ ಅವನನ್ನು ಕೊಲ್ಲದೆ ಬಿಟ್ಟ ಅಶ್ವತ್ಥಾಮ.

ಏತಸ್ಮಿನ್ನಂತರೇ ಕರ್ಣೋ ಮಹಾನೀಕಮುಪಾದ್ರವತ್ ।
ದ್ರಾವಯಾಮಾಸ ಸ ತದಾ ಪಾಂಡವಾನಾಂ ಮಹದ್ ಬಲಮ್ ॥೩೭॥

ಈ ನಡುವೆ ಕರ್ಣನು ಪಾಂಡವರ ಮಹಾಸೈನ್ಯವನ್ನು ಆಕ್ರಮಿಸಿದ. ಆ ಮಹಾಸೈನ್ಯವನ್ನು ಆಗ ಹೊಡೆದೋಡಿಸಿದ.

ವಿರಥಂ ರಥಿನಶ್ಚಕ್ರೇ ಗಜಾನಶ್ವಾಂಶ್ಚ ಭಾರತ ।
ರಾಜನ್ ಬಹುಭಿರಹನಚ್ಛರೈಃ ಸನ್ನತಪರ್ವಭಿಃ ॥೩೮॥

ರಾಜನೆ, ಕರ್ಣನು ಪಾಂಡವರ ರಥಿಕರನ್ನು ರಥರಹಿತರನ್ನಾಗಿ ಮಾಡಿದ. ಆನೆ ಕುದುರೆಗಳನ್ನು ಡೊಂಕುಗಿಣ್ಣಿನ ಬಹು ಬಾಣಗಳಿಂದ ಸಂಹರಿಸಿದ.

ಅಥ ದ್ರೌಣಿರ್ಮಹೇಷ್ವಾಸಃ ಪಾಂಡ್ಯಂ ಶತ್ರುನಿಬರ್ಹಣಮ್ ।
ವಿರಥಂ ರಥಿನಾಂ ಶ್ರೇಷ್ಠಂ ನಾಹನದ್ ಯುದ್ಧಕಾಂಕ್ಷಯಾ ॥೩೯॥

ಮಹಾಬಿಲ್ಲಾರ ಅಶ್ವತ್ಥಾಮನು ಶತ್ರುನಾಶಕನಾದ ರಥಿಕರಲ್ಲಿ ಶ್ರೇಷ್ಠನಾದ ಪಾಂಡ್ಯರಾಜನನ್ನು ರಥರಹಿತನನ್ನಾಗಿ ಮಾಡಿಯೂ ಕೊಲ್ಲದೆ ಬಿಟ್ಟ ಇನ್ನೂ ಯುದ್ಧನಡೆಸುವ ಬಯಕೆಯಿಂದ.

ಹತೇಶ್ವರೋ ದ್ವಿರದವರಃ ಸುಕಲ್ಪಿತಃ
ಶರಾಭಿಮೃಷ್ಟಃ ಪ್ರತಿಶಬ್ದಗೋ ಬಲೀ ॥೪೦॥

ತಮಾದ್ರವದ್ ದ್ರೌಣಿಶರಾಹತಸ್ತ್ವರನ್
ಜವೇನ ಕೃತ್ವಾ ಪ್ರತಿಹಸ್ತಿಗರ್ಜಿತಮ್ ।

ಆಗ ಯುದ್ಧಸಾಮಗ್ರಿಗಳಿಂದ ಸಜ್ಜಾಗಿದ್ದ ಒಂದು ದೊಡ್ಡ ಬಲಿಷ್ಠ ಆನೆ ಅಶ್ವತ್ಥಾಮನ ಬಾಣದಿಂದ ಸವಾರನನ್ನು ಕಳೆದುಕೊಂಡು ತಾನೂ ಗಾಯಗೊಂಡು ಇನ್ನೊಂದು ಆನೆಗೆ ಪ್ರತಿಯಾಗಿ ಗರ್ಜಿಸುತ್ತ ವೇಗವಾಗಿ ಪಾಂಡ್ಯರಾಜನ ಕಡೆಗೆ ಧಾವಿಸಿ ಬಂದಿತು.

ತಂ ವಾರಣಂ ವಾರಣಯುದ್ಧಕೋವಿದೋ
ದ್ವಿಪೋತ್ತಮಂ ಪರ್ವತಸಾನುಸನ್ನಿಭಮ್ ॥೪೧॥

ತದಾऽಧ್ಯತಿಷ್ಠನ್ ಮಲಯಧ್ವಜಸ್ತ್ವರನ್
ಯಥಾऽದ್ರಿಶೃಂಗಂ ಹರಿರುನ್ನದಂಸ್ತಥಾ ॥೪೨॥

ಪರ್ವತಶಿಖರದಂತಿದ್ದ ಆ ಆನೆಯನ್ನು ಗಜಯುದ್ಧಕೋವಿದನಾದ ಮಲಯ ಧ್ವಜ ಬೇಗನೆ ಏರಿದ. ಸಿಂಹವು ಪರ್ವತ ಶಿಖರವೇರಿ ಗರ್ಜಿಸುವಂತೆ ಗರ್ಜಿಸಿದ.

ಸ ತೋಮರಂ ಭಾಸ್ಕರರಶ್ಮಿವರ್ಚಸಂ
ಬಲಾಸ್ತ್ರಸರ್ಗೋತ್ತಮಯತ್ನಮನ್ಯುಭಿಃ ।
ಸಸರ್ಜ ಶೀಘ್ರಂ ಪ್ರತಿಪೀಡಯನ್ ಗಜಂ
ಗುರೋಃ ಸುತಾಯ ದ್ರಮಿಳೇಶ್ವರೋ ನದನ್ ॥೪೩॥

ದ್ರವಿಡದೇಶಾಧಿಪತಿ ಪಾಂಡ್ಯನು ಬಲ, ಅಸ್ತ್ರಪ್ರಯೋಗದ ಒಳ್ಳೆಯ ಯತ್ನ ಮತ್ತು ಕೋಪಗಳಿಂದ ಆನೆಯನ್ನು ಅಂಕುಶದಿಂದ ನಿಯಂತ್ರಿಸುತ್ತ ಸೂರ್ಯ ರಶ್ಮಿಯಂತೆ ಹೊಳೆಯುವ ತೋಮರವನ್ನು ಅಶ್ವತ್ಥಾಮನ ಮೇಲೆ ವೇಗವಾಗಿ ಎಸೆದ, ಗರ್ಜಿಸಿದ.

ಮಣಿಪ್ರವೇಕೋತ್ತಮವಜ್ರಹಾಟಕೈ-
ರಲಂಕೃತಂ ಚಾಂಶುಕಮಾಲ್ಯಮೌಕ್ತಿಕೈಃ ।
ಹತೋ ಮಯಾऽಸೀತ್ಯಸಕೃನ್ಮದಾ ನದನ್
ಪರಾಹನದ್ ದ್ರೌಣಿವರಾಂಗಭೂಷಣಮ್ ॥೪೪॥

ಉತ್ತಮರತ್ನ ಉತ್ತಮವಜ್ರ ಬಂಗಾರಗಳಿಂದಲೂ ವಸ್ತ್ರ ಮಾಲೆ ಮುತ್ತು

ಗಳಿಂದಲೂ ಅಲಂಕೃತವಾದ ಅಶ್ವತ್ಥಾಮನ ಕಿರೀಟವನ್ನು 'ಹತನಾದೆ ಹತನಾದೆ' ಎಂದು ಪುನಃಪುನಃ ಗರ್ಜಿಸುತ್ತ ತೋಮರದಿಂದ ಹೊಡೆದ, ಪಾಂಡ್ಯರಾಜ.

ತದರ್ಕಚಂದ್ರಗ್ರಹವೈದ್ಯುತತ್ವಿಷಂ
ಭೃಶಾಭಿಘಾತಾತ್ ಪತಿತಂ ವಿಘೂರ್ಣಿತಮ್ ।
ಮಹೇಂದ್ರವಜ್ರಾಭಿಹತಂ ಮಹಾಸ್ವನಂ
ಯಥಾऽದ್ರಿಶೃಂಗಂ ಧರಣೀತಳೇ ಯಥಾ ॥೪೫॥

ಸೂರ್ಯ ಚಂದ್ರ ಗ್ರಹ ಮಿಂಚುಗಳ ಕಾಂತಿಯಿಂದ ಹೊಳೆಯುತ್ತಿದ್ದ ಅಶ್ವತ್ಥಾಮನ ಕಿರೀಟ ತಿರುಗಿತಿರುಗಿ ದೊಡ್ಡ ಶಬ್ದದೊಂದಿಗೆ, ಮಹೇಂದ್ರನ ವಜ್ರಾಯುಧದೇಟಿಗೆ ಬೀಳುವ ಗಿರಿ ಶಿಖರದಂತೆ ನೆಲಕ್ಕೆ ಬಿದ್ದಿತು.

ತತಃ ಪ್ರಜಜ್ವಾಲ ಪರೇಣ ಮನ್ಯುನಾ
ಪದಾಹತೋ ನಾಗಪತಿರ್ಯಥಾ ತಥಾ ।
ಸಮಾದದೇ ಚಾಂತಕದಂಡಸನ್ನಿಭಾನ್
ಇಷೂನಮಿತ್ರಾನ್ತಕರಾಂಶ್ಚತುರ್ದಶ ॥೪೬॥

ಆಗ ಕಾಲಿಂದ ತುಳಿಸಿಕೊಂಡ ಮಹಾಸರ್ಪದಂತೆ ಅಶ್ವತ್ಥಾಮ ಮಹಾ ಕೋಪದಿಂದ ಉರಿದ, ಶತ್ರುನಾಶಕವಾದ ಯಮದಂಡದಂಥ ಹದಿನಾಲ್ಕು ಬಾಣಗಳನ್ನು ಎತ್ತಿಕೊಂಡ.

ದ್ವಿಪಸ್ಯ ಪಾದಾಗ್ರಕರಾನ್ ಸ ಪಂಚಭಿಃ
ನೃಪಸ್ಯ ಬಾಹೂರು ಶಿರೋऽಥ ಪತ್ರಿಭಿಃ ।
ಜಘಾನ ಷಡ್ಭಿಃ ಷಡನುತ್ತಮತ್ವಿಷಃ
ಸ ಪಾಂಡ್ಯರಾಜಾನುಚರಾನ್ ಮಹಾರಥಾನ್ ॥೪೭॥

ಐದು ಬಾಣಗಳಿಂದ ಆನೆಯ ಕಾಲುಗಳನ್ನು ಮತ್ತು ಸೊಂಡಿಲುಗಳನ್ನು ಮೂರು ಬಾಣಗಳಿಂದ ಪಾಂಡ್ಯರಾಜನ ತೋಳು ತೊಡೆ ಶಿರಸ್ಸುಗಳನ್ನು ಆರು ಬಾಣಗಳಿಂದ ಮಹಾಪರಾಕ್ರಮಿಗಳಾದ ಪಾಂಡ್ಯರಾಜನ ಕಡೆಯ ಆರುಮಂದಿ ಮಹಾರಥರನ್ನು ಹೊಡೆದುರುಳಿಸಿದ.

ಸುದೀರ್ಘವೃತ್ತೌ ವರಚಂದನೋಕ್ಷಿತೌ
ಸುವರ್ಣಮುಕ್ತಾಮಣಿವಜ್ರಭೂಷಿತೌ ।
ಭುಜೌ ಧರಾಯಾಂ ಪತಿತೌ ನೃಪಸ್ಯ ತೌ
ವಿಚೇಷ್ಟತುಸ್ತಾರ್ಕ್ಷ್ಯಹತಾವಿವೋರಗೌ ॥೪೮॥

ನೀಳವಾದ ದುಂಡಾದ ಒಳ್ಳೆಯ ಶ್ರೀಗಂಧಪೂಸಿದ ಚಿನ್ನ ಮುತ್ತು ರತ್ನ ವಜ್ರಗಳಿಂದ ಅಲಂಕೃತವಾದ ಪಾಂಡ್ಯರಾಜನ ಎರಡೂ ತೋಳುಗಳು ನೆಲದಲ್ಲಿ ಬಿದ್ದು ಗರುಡನ ಏಟಿನಿಂದ ಬಿದ್ದ ಎರಡು ಹಾವುಗಳಂತೆ ವಿಲವಿಲನೆ ಒದ್ದಾಡಿದುವು.

ಶಿರಶ್ಚ ತತ್ಪೂರ್ಣಶಶಿಪ್ರಭಾನನಂ
ಸರೋಷತಾಮ್ರಾಯತನೇತ್ರಮುನ್ನಸಮ್ ।
ಕ್ಷಿತಾವಪಿ ಭ್ರಾಜತಿ ತತ್ಸಕುಂಡಲಂ
ವಿಶಾಖಯೋರ್ಮಧ್ಯಗತೋ ಯಥಾ ಶಶೀ ॥೪೯॥

ಪಾಂಡ್ಯರಾಜನ ಶಿರಸ್ಸೂ ಕೂಡ ಕುಂಡಲ ಸಮೇತವಾಗಿ ನೆಲದಲ್ಲಿ ಬಿದ್ದಿತು. ಅದರಿಂದ ಪೂರ್ಣಚಂದ್ರನಂತೆ ಹೊಳೆಯುವ ಮುಖ, ಕೋಪದಿಂದ ಕೆಂಪಾದ ಉದ್ದವಾದ ಕಣ್ಣು ಉನ್ನತ ನಾಸಿಕೆಗಳಿಂದ ಕೂಡಿದ ಆ ಶಿರಸ್ಸು ನೆಲದಲ್ಲಿ ವಿಶಾಖಾ ನಕ್ಷತ್ರದ ಎರಡು ತಾರೆಗಳ ನಡುವೆ ಆಕಾಶದಲ್ಲಿ ಕಾಣುವ ಚಂದ್ರನಂತೆ ಶೋಭಿಸಿತು.

ಸ ತು ದ್ವಿಪಃ ಪಂಚಭಿರುತ್ತಮೇಷುಭಿಃ
ಕೃತಃ ಷಡಂಶಶ್ಚತುರೋ ನೃಪಸ್ತ್ರಿಭಿಃ ।
ಕೃತೋ ದಶಾಂಶಃ ಕುಲಿಶೇನ ಯುಧ್ಯತಾ
ಹರಿರ್ಯಥಾದ್ರಿಂ ದಶಧೈವ ತಂ ತಥಾ ॥೫೦॥

ಪಾಂಡ್ಯರಾಜನ ಆನೆಯನ್ನು ಅಶ್ವತ್ಥಾಮ ಐದು ಬಾಣಗಳಿಂದ ಹೊಡೆದು ಆರು ಭಾಗವಾಗಿ ಮಾಡಿದ. ರಾಜನನ್ನು ಮೂರು ಬಾಣಗಳಿಂದ ಹೊಡೆದು ನಾಲ್ಕು ಭಾಗವಾಗಿ ಮಾಡಿದ. ಹೀಗೆ ಒಟ್ಟು ಹತ್ತು ಭಾಗಗಳಾದುವು. ವಜ್ರಾಯುಧದಿಂದ

ದೇವೇಂದ್ರನು ಒಂದು ಬೆಟ್ಟವನ್ನು ಹತ್ತು ಅಂದರೆ ಹತ್ತಾರು, ಭಾಗವಾಗಿ ಮಾಡುವಂತೇ ಇದು.

ಸ ಪಾದಪಾನ್ ರಾಕ್ಷಸಭೋಜನಾನ್ ಬಹೂನ್
ಪ್ರದಾಹ್ಯ ಪಾಂಡ್ಯೋಽಶ್ವಮನುಷ್ಯಕುಂಜರಾನ್ ।
ಸ್ವಧಾಮವಾಪ್ಯ ಜ್ವಲನಃ ಪಿತೃಪ್ರಿಯ-
ಸ್ತತಃ ಪ್ರಶಾಂತಃ ಸಲಿಲಪ್ರವಾಹತಃ ॥೫೧॥

ಪಾಂಡ್ಯರಾಜನು ದಾವಾಗ್ನಿಯಂತೆ ರಾಕ್ಷಸರಿಗೆ ಭೋಜನ ಯೋಗ್ಯವಾದ ಅಶ್ವ ಪದಾತಿ ಗಜಗಳೆಂಬ ಮರಗಳನ್ನು ಸುಟ್ಟು, ಪಿತೃಪ್ರಿಯವಾದ ಚಿತಾಗ್ನಿಯಂತೆ ಕೀರ್ತಿರೂಪವಾದ ಸ್ವಧೆ ಎಂಬ ಆಹುತಿಯನ್ನು ಉಂಡು, ಬಳಿಕ ಅಶ್ವತ್ಥಾಮನ ಬಾಣಗಳೆಂಬ ನೀರಿನ ಪ್ರವಾಹದಿಂದ ಆರಿಹೋಯಿತು.

ಸಮಾಪ್ತವಿದ್ಯಂ ತು ಗುರೋಃ ಸುತಂ ನೃಪಃ
ಸಮಾಪ್ತಕರ್ಮಾಣಮುಪೇತ್ಯ ತೇ ಸುತಃ ।
ಸುಹೃದ್ವೃತೋಽತ್ಯರ್ಥಮಪೂಜಯನ್ ಮುದಾ
ಜಿತೇ ಬಲೌ ವಿಷ್ಣುಮಿವಾಮರೇಶ್ವರಃ ॥೫೨॥

ಗುರುವಿನಿಂದ ಅಸ್ತ್ರವಿದ್ಯೆಯನ್ನು ಪೂರ್ತಿಯಾಗಿ ಸಂಪಾದಿಸಿದ್ದ ಗುರುಸುತನಾದ ಅಶ್ವತ್ಥಾಮ ಶತ್ರುಸಂಹಾರ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದಾಗ, ರಾಜನೆ, ನಿನ್ನ ಮಗ ದುರ್ಯೋಧನ ಮಿತ್ರರೊಂದಿಗೆ ಅಶ್ವತ್ಥಾಮನ ಬಳಿಗೆ ಹೋಗಿ, ಅವನನ್ನು ಸಂತೋಷದಿಂದ ಬಹಳವಾಗಿ ವಿಷ್ಣು ಬಲಿಚಕ್ರವರ್ತಿಯನ್ನು ಗೆದ್ದಾಗ ಅವನನ್ನು ದೇವೇಂದ್ರ ಅಭಿನಂದಿಸಿದಂತೆ ಅಭಿನಂದಿಸಿದ,

ಧೃತರಾಷ್ಟ್ರಃ

ಪಾಂಡ್ಯೇ ಹತೇ ಕಿಮಕರೋದರ್ಜುನೋ ಜಯತಾಂವರಃ ।
ಏಕವೀರೇಣ ಕರ್ಣೇನ ದ್ರಾವಿತೇ ಚ ಯುಧಿಷ್ಠಿರೇ ॥೫೩॥

ಧೃತರಾಷ್ಟ್ರ ನುಡಿದ— ಪಾಂಡ್ಯ ಹತನಾದಾಗ, ಮುಖ್ಯವೀರನಾದ ಕರ್ಣನು ಯುಧಿಷ್ಠಿರನನ್ನು ರಣರಂಗದಿಂದ ಓಡಿಸಿದಾಗ, ಜಯಶಾಲಿಗಳಲ್ಲಿ ಶ್ರೇಷ್ಠನಾದ ಅರ್ಜುನ ಏನು ಮಾಡಿದ?

ಸಮಾಪ್ತವಿದ್ಯೋ ಬಲವಾನ್ ಯುಕ್ತೋ ವೀರಃ ಸ ಪಾಂಡವಃ ।
ಸರ್ವಭೂತೇಷ್ವನುಜ್ಞಾತಃ ಶಂಕರೇಣ ಮಹಾತ್ಮನಾ ॥೫೪॥

ಅರ್ಜುನನು ಚೆನ್ನಾಗಿ ವಿದ್ಯೆ ಸಂಪಾದಿಸಿದವನು, ಬಲಿಷ್ಠ ಪ್ರಯತ್ನಶೀಲ, ಎಲ್ಲ ಯೋಧರಲ್ಲಿ ಶ್ರೇಷ್ಠನಾದ ವೀರಯೋಧ, ಹಾಗೆ ಮಹಾತ್ಮನಾದ ಶಂಕರನಿಗೂ ಸಮ್ಮತನಾದವನು.

ತಸ್ಮಾನ್ಮಹದ್ಭಯಂ ತೀವ್ರಮಮಿತ್ರಘ್ನಾದ್ ಧನಂಜಯಾತ್ ।
ಸ ಯತ್ ತತ್ಕಾಕರೋತ್ ಪಾರ್ಥಸ್ತನ್ಮಮಾಚಕ್ಷ್ವ ಸಂಜಯ ॥೫೫॥

ಅದರಿಂದ, ಶತ್ರುನಾಶಕನಾದ ಅರ್ಜುನನಿಂದ ನಮಗೆ ತೀವ್ರವಾದ ಮಹಾಭಯವಿದೆ. ಅವನು ಆಗ ಏನು ಮಾಡಿದನೆಂದು ಹೇಳು, ಸಂಜಯ!

ಸಂಜಯಃ

ಹತೇ ಪಾಂಡ್ಯೇऽರ್ಜುನಂ ಕೃಷ್ಣಸ್ತ್ವರನ್ನಾಹ ವಚೋ ಹಿತಮ್ ।
ಪಶ್ಯಾಮಿ ನಾಹಂ ರಾಜಾನಮಪಾಯಾತಾಂಶ್ಚ ಪಾಂಡವಾನ್ ॥೫೬॥

ಸಂಜಯ ನುಡಿದ— ಪಾಂಡ್ಯರಾಜ ಹತನಾದಾಗ ಅರ್ಜುನನಿಗೆ ಶ್ರೀಕೃಷ್ಣ ಬೇಗನೆ ಹಿತವನ್ನು ನುಡಿದ,'ರಾಜಾಯುಧಿಷ್ಠಿರನನ್ನು ನಾನು ಕಾಣುತ್ತಿಲ್ಲ ದೂರಹೋಗಿರುವ ಪಾಂಡವರನ್ನೂ ಕಾಣುತ್ತಿಲ್ಲ.

ಕರ್ಣಂ ಪಶ್ಯ ಮಹಾರಂಗೇ ಜ್ವಲಂತಮಿವ ಪಾವಕಮ್ ।
ಅಸೌ ಭೀಮೋ ಮಹೇಷ್ವಾಸಃ ಪ್ರತಿವೃತ್ತೋ ರಣಂ ಪ್ರತಿ ॥೫೭॥

'ಕರ್ಣನನ್ನು ನೋಡು, ಮಹಾರಣರಂಗದಲ್ಲಿ ಬೆಂಕಿಯಂತೆ ಜ್ವಲಿಸುತ್ತಿದ್ದಾನೆ. ಬಿಲ್ಲಾರ ಭೀಮನೊಬ್ಬನೆ ಯುದ್ಧಕ್ಕೆ ಹಿಂತಿರುಗಿ ಬಂದಿದ್ದಾನೆ.'

ತ ಇಮೇ ನಾನುವರ್ತಂತೇ ಧೃಷ್ಟದ್ಯುಮ್ನಪುರೋಗಮಾಃ ।
ಪಾಂಚಾಲಾಃ ಸೃಂಜಯಾಶ್ಚೈವ ಪಾಂಡವಾನಾಂ
ಚಮೂಮುಖಮ್ ॥೫೮॥

'ಧೃಷ್ಟದ್ಯುಮ್ನ ಮುಂತಾದ ಪಾಂಚಾಲರು ಸೃಂಜಯರು ಪಾಂಡವರಸೈನ್ಯದ ಮುಂಭಾಗದಲ್ಲಿ ಭೀಮನನ್ನು ಬೆಂಬಲಿಸುತ್ತಿಲ್ಲ.'

ನಿವೃತ್ತೈಶ್ಚ ಪುನಃ ಪಾರ್ಥೈರ್ಭಗ್ನಂ ಶತ್ರುಬಲಂ ಮಹತ್ ।
ಕೌರವಾನ್ ದ್ರವತೋ ಹ್ಯೇಷ ಕರ್ಣೋ ವಾರಯತೇ ಭೃಶಮ್ ॥೫೯॥

'ಏಕೆಂದರೆ, ಪಾಂಡವಸೈನಿಕರು ಹಿಂತಿರುಗಿ ಬಂದು ಮಹತ್ತಾದ ಶತ್ರುಸೈನ್ಯವನ್ನು ಹೊಡೆದೋಡಿಸಿದರು. ಆದರೂ ಓಡುವ ಕುರುಸೈನಿಕರನ್ನು ಈ ಕರ್ಣ ಚೆನ್ನಾಗಿ ತಡೆಯುತ್ತಾನೆ.'

ಅಂತಕಪ್ರತಿಮೋ ವೇಗೇ ಶಕ್ರತುಲ್ಯಪರಾಕ್ರಮಃ ।
ಅಸೌ ಗಚ್ಛತಿ ಕೌಂತೇಯ ದ್ರೌಣಿಃ ಶಸ್ತ್ರಭೃತಾಂ ವರಃ ॥೬೦॥

'ಮತ್ತು ಅರ್ಜುನ, ಯಮನಂಥವನೂ, ವೇಗದಲ್ಲಿ ಇಂದ್ರಸಮಾನ ಪರಾಕ್ರಮ ಉಳ್ಳವನೂ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಆಗಿರುವ ಅಶ್ವತ್ಥಾಮ ನಮ್ಮ ಸೈನ್ಯದ ಕಡೆಗೆ ಹೋಗುತ್ತಿದ್ದಾನೆ.'

ತಮೇಷ ಪ್ರದ್ರುತಃ ಸಂಖ್ಯೇ ಧೃಷ್ಟದ್ಯುಮ್ನೋ ಮಹಾರಥಃ ।
ಅಶ್ವತ್ಥಾಮ್ನಾ ಹತಾಃ ಸಂಖ್ಯೇ ಸರ್ವೇ ಕೌಂತೇಯ ಸೃಂಜಯಾಃ ॥೬೧॥

'ಅವನನ್ನು ಇದಿರಿಸಲು ಮಹಾರಥನಾದ ಧೃಷ್ಟದ್ಯುಮ್ನ ಧಾವಿಸುತ್ತಿದ್ದಾನೆ. ಅಶ್ವಯುದ್ಧದಲ್ಲಿ ಎಲ್ಲ ಸೃಂಜಯರನ್ನು ಅಶ್ವತ್ಥಾಮ ಸಂಹರಿಸಿದ್ದಾನೆ.'

ರಥಾಶ್ವನರನಾಗಾನಾಂ ಕೃತಂ ಚ ಕದನಂ ಮಹತ್ ।
ಇತ್ಯೇತತ್ ಸರ್ವಮಾಚಷ್ಟ ವಾಸುದೇವಃ ಕಿರೀಟಿನೇ ॥೬೨॥

'ರಥ ಅಶ್ವ ಪದಾತಿ ಗಜ ಸೈನ್ಯಗಳ ದೊಡ್ಡ ಯುದ್ಧ ನಡೆಯುತ್ತಿದೆ' ಎಂದು ಮುಂತಾಗಿ ಎಲ್ಲವನ್ನೂ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ್ದಾನೆ.

ಏತಚ್ಛ್ರುತ್ವಾ ಚ ದೃಷ್ಟ್ವಾ ಚ ಭ್ರಾತೄಣಾಂ ವ್ಯಸನಂ ಮಹತ್ ।
ವಾಹಯಾಶ್ವಾನ್ ಹೃಷೀಕೇಶ ಕ್ಷಿಪ್ರಮಿತ್ಯಾಹ ಪಾಂಡವಃ ॥೬೩॥

ಅರ್ಜುನನು ಸೋದರರ ಮಹಾಕಷ್ಟವನ್ನು ಕೇಳಿ, ನೋಡಿ 'ಕೃಷ್ಣ ಕುದುರೆಗಳನ್ನು ಬೇಗನೆ ನಡೆಸು' ಎಂದ.

ತತಃ ಪ್ರಾಯಾದ್ ಹೃಷೀಕೇಶೋ ರಥೇನಾಪ್ರತಿಮೋ ಯುಧಿ ।
ತತೋ ರೇಣುಃ ಸಮಭವತ್ ಪುನಸ್ತತ್ರ ಮಹಾರಣೇ ॥೬೪॥

ಯುದ್ಧದಲ್ಲಿ ಅಪ್ರತಿಮನಾದ ಶ್ರೀಕೃಷ್ಣ ರಥದಿಂದ ಮುಂದೆ ನಡೆದ. ಆದರೆ ಪುನಃ ಮಹಾರಣರಂಗದಲ್ಲಿ ಧೂಳೆದ್ದಿತು

ತತೋ ರಾಜನ್ ಮಹಾನಾಸೀತ್ ಸಂಗ್ರಾಮೋ ರೋಮಹರ್ಷಣಃ ।
ಸಿಂಹನಾದರವಾಶ್ಚಾತ್ರ ಪ್ರಾದುರಾಸನ್ ಸಮಾಗಮೇ ।
ಉಭಯೋಃ ಸೇನಯೋ ರಾಜನ್ ಮೃತ್ಯುಂ ಕೃತ್ವಾ ನಿವರ್ತನಮ್ ॥೬೫॥

ರಾಜನೆ, ರೋಮಾಂಚಕರವಾದ ಮಹಾಯುದ್ಧ ನಡೆಯಿತು. ಎರಡೂ ಸೈನ್ಯಗಳ ಸಮಾಗಮದಿಂದ ಸಿಂಹನಾದ ಧ್ವನಿ ಎದ್ದಿತು. ಶತ್ರು ಮರಣವನ್ನು ಕಂಡೇ ಹಿಂತಿರುಗುವ ಸಂಕಲ್ಪ ಮಾಡಿದ್ದರು, ಯೋಧರು.

ತತಃ ಪುನಃ ಸಮಾಜಗ್ಮುರಭೀತಾಃ ಕುರುಸೃಂಜಯಾಃ ।
ಯುಧಿಷ್ಠಿರಮುಖಾಃ ಪಾರ್ಥಾ ವೈಕರ್ತನಮುಖಾ ವಯಮ್ ॥೬೬॥

ಅದರಿಂದ ಕುರು ಸೃಂಜಯರ ಸಮಾಗಮದಲ್ಲಿ ಎರಡೂ ಸೈನ್ಯ ನಿರ್ಭೀತ ವಾಗಿತ್ತು. ಯುಧಿಷ್ಠಿರನನ್ನು ಮುಂದೆ ಮಾಡಿಕೊಂಡು ಪಾಂಡವರೂ ಕರ್ಣನನ್ನು ಮುಂದೆ ಮಾಡಿಕೊಂಡು ಕೌರವರೂ ಬಂದಿದ್ದರು.

ತತಃ ಪ್ರವವೃತೇ ಯುದ್ಧಂ ಘೋರರೂಪಂ ವಿಶಾಂಪತೇ ।
ಕರ್ಣಸ್ಯ ಪಾಂಡವಾನಾಂ ಚ ಯಮರಾಷ್ಟ್ರವಿವರ್ಧನಮ್ ॥೬೭॥

ರಾಜನೆ, ಯಮರಾಜನ ರಾಜ್ಯ ದೊಡ್ಡದಾಗಲು ಕಾರಣವಾಗಬಲ್ಲ ಘೋರ ಯುದ್ಧ ಕರ್ಣನಿಗೂ ಪಾಂಡವರಿಗೂ ಪ್ರಾರಂಭವಾಯಿತು

ತಸ್ಮಿನ್ ಪ್ರವೃತ್ತೇ ಸಂಗ್ರಾಮೇ ತುಮುಲೇ ರೋಮಹರ್ಷಣೇ ।
ಸಂಶಪ್ತಕೇಷು ವೀರೇಷು ಕಿಂಚಚ್ಛೇಷೇಷು ಭಾರತ ॥೬೮॥

ರಾಜನೆ, ಸಂಶಪ್ತಕವೀರರೊಳಗೆ ಕೆಲವರು ಮಾತ್ರ ಉಳಿದಿರುವಾಗಲೆ ಈ ರೋಮಾಂಚಕರ ಯುದ್ಧ ನಡೆಯಿತು.

ಧೃಷ್ಟದ್ಯುಮ್ನೋ ಮಹಾರಾಜ ಸಹಿತಃ ಸರ್ವರಾಜಭಿಃ ।
ಕರ್ಣಮೇವಾಭಿದುದ್ರಾವ ಪಾಂಡವಾಶ್ಚ ಮಹಾರಥಾಃ ॥೬೯॥

ಮಹಾರಾಜ, ಮಹಾರಥರಾದ ಪಾಂಡವರೂ ಎಲ್ಲ ರಾಜರಿಂದ ಕೂಡಿದ ಧೃಷ್ಟದ್ಯುಮ್ನನೂ ಕರ್ಣನ ಇದಿರಿಗೆ ನುಗ್ಗಿ ಬಂದರು.

ಆಗಚ್ಛಮಾನಾಂಸ್ತಾನ್ ದೃಷ್ಟ್ವಾ ಸಂಗ್ರಾಮೇ ವಿಜಯೈಷಿಣಃ ।
ದಧಾರೈಕೋ ರಣೇ ಕರ್ಣೋ ಜಲೌಘಾನಿವ ಪರ್ವತಃ ॥೭೦॥

ನೀರಿನ ಪ್ರವಾಹಗಳನ್ನು ಬೆಟ್ಟ ಸಹಿಸಿಕೊಳ್ಳುವಂತೆ ಕರ್ಣನೊಬ್ಬನೇ ಯುದ್ಧದಲ್ಲಿ ವಿಜಯೇಚ್ಛೆಯಿಂದ ಬರುತ್ತಿದ್ದ ಪಾಂಡವರನ್ನು ನೋಡಿ ಇದಿರಿಸಿದ.

ಸಮಾಸಾದ್ಯ ತು ತೇ ಕರ್ಣಂ ವ್ಯಶೀರ್ಯಂತ ಮಹಾರಥಾಃ ।
ಯಥಾऽಚಲಂ ಸಮಾಸಾದ್ಯ ವಾಯೋರ್ಘಾಃ
ಸರ್ವತೋದಿಶಮ್ ॥೭೧॥

ಎಲ್ಲ ದಿಕ್ಕುಗಳಿಂದ ಬರುವ ನೀರಿನ ಪ್ರವಾಹಗಳು ಬೆಟ್ಟದ ಬುಡಕ್ಕೆ ಬಂದರೆ ವೇಗವನ್ನು ಕಳೆದುಕೊಳ್ಳುವಂತೆ, ಕರ್ಣನಿದಿರಿಗೆ ಬಂದ ಮಹಾರಥರು ಅಧೀರ ರಾದರು.

ತಯೋರಾಸೀನ್ ಮಹಾರಾಜ ಸಂಗ್ರಾಮೋ ಘೋರದರ್ಶನಃ ।
ಪ್ರವೃದ್ಧಯೋರ್ಮಹಾರಂಗೇ ಬಲಿನೋರ್ವಿಜಿಗೀಷತೋಃ ॥೭೨॥

ಮಹಾರಾಜ, ಕರ್ಣನಿಗೂ ಧೃಷ್ಟದ್ಯುಮ್ನನಿಗೂ ಘೋರ ದೃಶ್ಯವಾಗಿ ತೋರುವಂಥ ಯುದ್ಧ ನಡೆಯಿತು. ಇಬ್ಬರೂ ಮಹಾರಣರಂಗದಲ್ಲಿ ಬಲದಿಂದ ಕೊಬ್ಬಿದವರು, ಪರಸ್ಪರ ಜಯೇಚ್ಛುಗಳಾಗಿದ್ದರು.

ಧೃಷ್ಟದ್ಯುಮ್ನಸ್ತು ರಾಧೇಯಂ ಶರೇಣಾನತಪರ್ವಣಾ ।
ಛಾದಯಾಮಾಸ ಸಂಕ್ರುದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥೭೩॥

ಧೃಷ್ಟದ್ಯುಮ್ನ ಕ್ರುದ್ಧನಾಗಿ ಡೊಂಕುಗಿಣ್ಣಿನ ಬಾಣಗಳನ್ನು ಕರ್ಣನಿಗೆ ಎಸೆದು 'ನಿಲ್ಲು ನಿಲ್ಲು' ಎಂದ.

ವಿಜಯಂ ತು ಧನುಃ ಶ್ರೇಷ್ಠಂ ವಿಧೂನ್ವಾನೋ ಮಹಾರಥಃ ।
ಪಾರ್ಷತಸ್ಯ ಧನುಶ್ಚಿತ್ವಾ ಶರಾಂಶ್ಚಾಶೀವಿಷೋಪಮಾನ್ ॥೭೪॥

ವವರ್ಷ ಶರವರ್ಷಾಣಿ ತೋಯವರ್ಷಾನಿವಾಂಬುದಃ ।
ಛಾದಯಾಮಾಸ ಸಂಕ್ರುದ್ಧಃ ಪಾರ್ಷತಂ ನವಭಿಃ ಶರೈಃ ॥೭೫॥

ಮಹಾರಥನಾದ ಕರ್ಣ ಕುಪಿತನಾಗಿ ವಿಜಯ ಎಂಬ ಶ್ರೇಷ್ಠ ಧನುಸ್ಸನ್ನು ಹಿಡಿದು ತೂಗುತ್ತ ಹಾವುಗಳಂಥ ಬಾಣಗಳನ್ನೆಸೆದು ಧೃಷ್ಟದ್ಯುಮ್ನನ ಬಿಲ್ಲನ್ನು ಕಡಿದು, ಮೋಡವು ನೀರಿನ ಮಳೆ ಸುರಿಸುವಂತೆ, ಬಾಣಗಳ ಮಳೆ ಸುರಿಸಿದ. ಧೃಷ್ಟದ್ಯುಮ್ನನನ್ನು ಬಾಣಗಳ ಮಳೆಯಿಂದ ಆಚ್ಛಾದಿಸಿದ. ಬೇರೆ ಒಂಬತ್ತು ಬಾಣಗಳಿಂದಲೂ ಹೊಡೆದ.

ತೇ ಹೇಮವಿಕೃತಂ ವರ್ಮ ಭಿತ್ತ್ವಾ ತಸ್ಯ ಮಹಾತ್ಮನಃ ।
ಶೋಣಿತಾಕ್ತಾ ವ್ಯರಾಜಂತ ಶಕ್ರಗೋಪಾ ಇವಾನಘ ॥೭೬॥

ಆ ಬಾಣಗಳು ಮಹಾತ್ಮ ಧೃಷ್ಟದ್ಯುಮ್ನನ ಬಂಗಾರದ ಕವಚವನ್ನು ಭೇದಿಸಿ ನೆತ್ತರಿಂದ ಒದ್ದೆಯಾಗಿ ಇಂದ್ರಗೋಪದ ಹುಳುವಿನಂತೆ ಹೊಳೆದುವು.

ತದಪಾಸ್ಯ ಧನುಶ್ಚಿನ್ನಂ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ತತೋಽನ್ಯದ್ ಧನುರಾದಾಯ ಸಾರವದ್ ಭಾರಸಾಧನಮ್ ।
ಕರ್ಣಂ ವಿವ್ಯಾಧ ಸಪ್ತತ್ಯಾ ಶರೈಃ ಸನ್ನತಪರ್ವಭಿಃ ॥೭೭॥

ಕಡಿದುಹೋದ ಧನುಸ್ಸನ್ನು ದೂರ ಎಸೆದು, ಗಟ್ಟಿಯಾದ, ಭಾರವನ್ನು ತಡೆದುಕೊಳ್ಳಬಲ್ಲ ಇನ್ನೊಂದು ಧನುಸ್ಸನ್ನು ಪ್ರತಾಪಶಾಲಿ ಧೃಷ್ಟದ್ಯುಮ್ನ ಹಿಡಿದು ಡೊಂಕುಗಿಣ್ಣಿನ ಎಪ್ಪತ್ತು ಬಾಣಗಳಿಂದ ಕರ್ಣನನ್ನು ಹೊಡೆದ.

ತಥೈವ ರಾಜನ್ ಕರ್ಣೋಽಪಿ ಪಾರ್ಷತಂ ಶತ್ರುತಾಪನಮ್ ।
ದ್ರೋಣಶತ್ರುಂ ಮಹೇಷ್ವಾಸೋ ವಿವ್ಯಾಧ ನಿಶಿತೈಃ ಶರೈಃ ॥೭೮॥

ರಾಜನೆ, ಮಹಾಬಿಲ್ಲಾರನಾದ ಕರ್ಣನೂ ಕೂಡ ಶತ್ರುತಾಪಕನಾದ ದ್ರೋಣಶತ್ರುವಾದ ಧೃಷ್ಟದ್ಯುಮ್ನನನ್ನು ಹರಿತವಾದ ಬಾಣಗಳಿಂದ ಹೊಡೆದ.

ಪುನರನ್ಯಂ ಮಹಾರಾಜ ಶರಂ ಕನಕಭೂಷಣಮ್ ।
ಪ್ರೇಷಯಾಮಾಸ ಸಮರೇ ಮೃತ್ಯುದಂಡಮಿವಾಪರಮ್ ॥೭೯॥

ಮಹಾರಾಜ, ಕರ್ಣನು ಯುದ್ಧದಲ್ಲಿ ಪುನಃ ಬಂಗಾರದಿಂದ ಅಲಂಕೃತವಾದ ಯಮದಂಡದಂಥ ಇನ್ನೊಂದು ಬಾಣವನ್ನು ಎಸೆದ.

ತಮಾಪತಂತಂ ಸಹಸಾ ಘೋರರೂಪಂ ವಿಶಾಂಪತೇ ।
ಚಿಚ್ಛೇದ ಶತಧಾ ರಾಜನ್ ಪಾರ್ಷತಃ ಕೃತಹಸ್ತವತ್ ॥೮೦॥

ರಾಜನೆ, ಘೋರರೂಪದ ಆ ಬಾಣವು ವೇಗದಿಂದ ತನ್ನ ಮೇಲೆ ಎರಗುತ್ತಿದ್ದಂತೆಯೆ ಧೃಷ್ಟದ್ಯುಮ್ನನು ಕೈಚಳಕದಿಂದ ಅದನ್ನು ನೂರಾಗಿ ಕತ್ತರಿಸಿದ.

ದೃಷ್ಟವಾನ್ ಪತಿತಂ ಭೂಮೌ ಶರಂ ಕರ್ಣೋ ವಿಶಾಂಪತೇ ॥೮೧॥

ರಾಜನೆ, ಕರ್ಣನು ಆ ಬಾಣ ನೆಲದಲ್ಲಿ ಬಿದ್ದುದನ್ನು ಕಂಡ.

ಪಾರ್ಷತಃ ಶರವರ್ಷೇಣ ಸಮಂತಾತ್ ಪರ್ಯವಾರಯತ್ ।
ವಿವ್ಯಾಧ ಚೈನಂ ತ್ವರಿತೋ ನಾರಾಚೈಃ ಸಪ್ತಭಿಸ್ತದಾ ॥೮೨॥

ಧೃಷ್ಟದ್ಯುಮ್ನ ಕರ್ಣನನ್ನು ಬಾಣಗಳ ಮಳೆಯಿಂದ ಸುತ್ತಲೂ ಆಚ್ಛಾದಿಸಿದ. ಮತ್ತು ತ್ವರೆಯಿಂದ ಏಳು ಬಾಣಗಳಿಂದಲೂ ಹೊಡೆದ.

ತಂ ಪ್ರತ್ಯವಿಧ್ಯದ್ ದಶಭಿಃ ಶರೈರ್ಹೇಮವಿಭೂಷಿತೈಃ ।
ತಯೋರ್ಯುದ್ಧಂ ಸಮಭವದ್ ದೃಷ್ಟಿಶ್ರೋತ್ರಮನೋಹರಮ್ ॥೮೩॥

ಆಸೀದ್ ಘೋರಂ ಚ ಚಿತ್ರಂ ಚ ಪ್ರೇಕ್ಷಣೀಯಂ ಚ ಸರ್ವಶಃ ॥೮೪॥

ಅವನನ್ನು ಕರ್ಣನೂ ಬಂಗಾರದಿಂದ ಅಲಂಕೃತವಾದ ಹತ್ತು ಬಾಣಗಳಿಂದ ಹೊಡೆದ. ಅವರ ಯುದ್ಧ ಕಣ್ಣು ಕಿವಿಗಳಿಗೆ ಆಕರ್ಷಕವಾಗಿತ್ತು. ಎಲ್ಲ ರೀತಿಯಿಂದಲೂ ಅದು ಘೋರ ವಿಚಿತ್ರ ಪ್ರೇಕ್ಷಣೀಯವಾಗಿತ್ತು.

ಸರ್ವೇಷಾಂ ತತ್ರ ಭೂತಾನಾಂ ರೋಮಹರ್ಷೋ ವ್ಯಜಾಯತ ।
ದೃಷ್ಟ್ವಾ ತತ್ಸಮರೇ ಕರ್ಮ ಕರ್ಣಪಾರ್ಷತಯೋರ್ನೃಪ ॥೮೫॥

ರಾಜನೆ, ಕರ್ಣ ಧೃಷ್ಟದ್ಯುಮ್ನರ ಆ ಯುದ್ಧಕೌಶಲವನ್ನು ಕಂಡು ಎಲ್ಲ ಜನರಿಗೂ ರೋಮಾಂಚವಾಯಿತು.

ಏತಸ್ಮಿನ್ನಂತರೇ ದ್ರೌಣಿರಭ್ಯಯಾತ್ ತಂ ಮಹಾರಥಮ್ ।
ಪಾರ್ಷತಂ ಶತ್ರುದಮನಂ ಶತ್ರುವೀರ್ಯಾಸುನಾಶನಮ್ ॥೮೬॥

ಈ ನಡುವೆ ಶತ್ರುಗಳ ಬಲ, ಪ್ರಾಣಾಪಹಾರಕನಾದ ಶತ್ರುದಮನಕಾರಿಯಾದ ಮಹಾರಥನಾದ ಧೃಷ್ಟದ್ಯುಮ್ನನನ್ನು ಅಶ್ವತ್ಥಾಮ ಇದಿರಿಸಿ ನಿಂತ.

ಸ ದೃಷ್ಟ್ವಾ ಸಮರೇ ಯಾಂತಮಭೀತಂ ಚ ಮಹಾರಥಮ್ ।
ಅಭ್ಯಭಾಷತ ಸಂಕ್ರುದ್ಧಃ ಪಾರ್ಷತಂ ಶತ್ರುತಾಪನಮ್ ॥೮೭॥

ಮಹಾರಥನಾದ ಶತ್ರುತಾಪಕನಾದ ಧೃಷ್ಟದ್ಯುಮ್ನ ರಣರಂಗದಲ್ಲಿ ನಿರ್ಭೀತನಾಗಿ ಸಂಚರಿಸುತ್ತಿದ್ದುದನ್ನು ಕಂಡು ಕುಪಿತನಾದ ಅಶ್ವತ್ಥಾಮ ಆಕ್ಷೇಪಿಸಿ ನುಡಿದ.

ರಥಂ ರಥೇನ ಸಂಪೀಡ್ಯ ಪಾರ್ಷತಸ್ಯ ತು ಬ್ರಾಹ್ಮಣಃ ॥೮೮॥

ತಿಷ್ಠ ತಿಷ್ಠೇತಿ ಬ್ರಹ್ಮಘ್ನ ನ ಮೇ ಜೀವನ್ ವಿಮೋಕ್ಷಸೇ ।
ಇತ್ಯುಕ್ತ್ವಾ ಸುಭೃಶಂ ವೀರಃ ಶೀಘ್ರಕೃನ್ನಿಶಿತೈಃ ಶರೈಃ ।
ಛಾದಯಾಮಾಸ ಸಮರೇ ಯತಮಾನೋ ಮಹಾರಥಃ ॥೮೯॥

ಧೃಷ್ಟದ್ಯುಮ್ನನ ರಥವನ್ನು ತನ್ನ ರಥದಿಂದ ಹೊಡೆದು ಅಶ್ವತ್ಥಾಮ 'ನಿಲ್ಲು ನಿಲ್ಲೆಂ'ದು, 'ಬ್ರಹ್ಮಹತ್ಯೆ ಮಾಡುವವನೆ, ನನ್ನಿಂದ ನೀನು ಬದುಕಿ ಉಳಿಯಲಾರೆ' ಎಂದು ಹೇಳಿ ಶೀಘ್ರಕಾರಿಯಾದ ಮಹಾರಥನಾದ, ಯತ್ನಶೀಲನಾದ ಆತ ಹರಿತವಾದ ಬಾಣಗಳಿಂದ ಅವನನ್ನು ಆಚ್ಛಾದಿಸಿದ.

ಯತ್ನತಃ ಪರಯಾ ಶಕ್ತ್ಯಾ ಧೃಷ್ಟದ್ಯುಮ್ನಂ ಮಹಾರಥಮ್ ।
ಯೋಧಯಾಮಾಸ ಸಮರೇ ಕ್ರುದ್ಧರೂಪೋ ವಿಶಾಂಪತೇ ॥೯೦॥

ತಯೋಸ್ತು ಸನ್ನಿಪಾತೋ ಹಿ ಘೋರರೂಪೋ ವಿಶಾಂಪತೇ ॥೯೧॥

ಕ್ರುದ್ಧರೂಪನಾದ ಅಶ್ವತ್ಥಾಮನು ಮಹಾರಥನಾದ ಧೃಷ್ಟದ್ಯುಮ್ನನನ್ನು ಮಹಾಶಕ್ತಿಯಿಂದ ಯತ್ನಪಟ್ಟು ಆಯುಧಗಳಿಂದ ಪ್ರಹರಿಸಿದ. ರಾಜನೆ, ಅವರ ಹೋರಾಟ ಭಯಂಕರಾಕಾರದ್ದಾಗಿತ್ತು.

ಯಥಾ ಹಿ ಸಮರೇ ದ್ರೋಣಃ ಪಾರ್ಷತಂ ದೃಶ್ಯ ಮಾರಿಷ ।
ತಥಾ ದ್ರೌಣಿಂ ರಣೇ ದೃಷ್ಟ್ವಾ ಪಾರ್ಷತಃ ಪರವೀರಹಾ ।
ನಾತಿಹೃಷ್ಟಮನಾ ಹ್ಯಾಸೀನ್ಮನ್ವಾನೋ ಮೃತ್ಯುಮಾತ್ಮನಃ ॥೯೨॥

ರಾಜನೆ, ರಣರಂಗದಲ್ಲಿ ದ್ರೋಣನು ಧೃಷ್ಟದ್ಯುಮ್ನನನ್ನು ಕಂಡಾಗ ಮನಸಿನ ಮಹೋತ್ಸಾಹವನ್ನು ಕಳೆದುಕೊಂಡ. ಹಾಗೇ ಪರವೀರನಾಶಕನಾದ ಧೃಷ್ಟದ್ಯುಮ್ನನೂ ಅಶ್ವತ್ಥಾಮನನ್ನು ಕಂಡಾಗ ಮನದ ಉತ್ಸಾಹವನ್ನು ಕಳೆದುಕೊಂಡ. ತನಗೆ ಅವನೇ ಮೃತ್ಯು ಎಂದು ಭಾವಿಸಿದ.

ಆತ್ಮಾನಂ ಸಮರೇ ಜ್ಞಾತ್ವಾऽಶಸ್ತ್ರವಧ್ಯಂ ಮಹಾಬಲಃ ।
ಜವೇನಾಭಿಯಯೌ ದ್ರೌಣಿಂ ಕಾಲಃ ಕಾಲಕ್ಷಯೇ ಯಥಾ ॥೯೩॥

ಹಾಗಿದ್ದರೂ ಯುದ್ಧದಲ್ಲಿ ಮಹಾಬಲನಾದ ತಾನು ಅಶ್ವತ್ಥಾಮನಿಗೆ ಶಸ್ತ್ರವಧಾರ್ಹನಲ್ಲವೆಂದು ವಿಶ್ವಾಸವಿದ್ದುದರಿಂದ ವೇಗದಿಂದ, ಕಾಲಪ್ರಳಯ ಕಾಲದಲ್ಲಿ ಕಾಲ ಆಕ್ರಮಣ ಮಾಡುವಂತೆ, ಅಶ್ವತ್ಥಾಮನ ಕಡೆಗೆ ಮುನ್ನುಗ್ಗಿದ.

ಧೃಷ್ಟದ್ಯುಮ್ನ ಗೈದ ದ್ರೋಣವಧೆ ಶತ್ರುವಧರೂಪವಾದ್ದರಿಂದ ಅದು ಅವನಿಗೆ ಪುಣ್ಯಕರವಾಗಬೇಕಿತ್ತು. ಆದರೆ ಗುರುಹತ್ಯಾರೂಪವಾದ್ದರಿಂದ ಪುಣ್ಯಕರವಾಗಲಿಲ್ಲ. ಅವನು ದ್ರೋಣವಧೆಗೇ ಜನಿಸಿದವನಾದ್ದರಿಂದ ಪಾಪವೂ ಬರಲಿಲ್ಲ. ಹೀಗಾಗಿ ಅವನಿಗೆ ಅಶ್ವತ್ಥಾಮನಿಂದ ಪುಣ್ಯಕರವಾದ ಶಸ್ತ್ರವಧೆಯನ್ನು ಹೊಂದಲು ಯೋಗ್ಯತೆ ಬರಲಿಲ್ಲ. ತಾನು ಅಶಸ್ತ್ರ ವಧ್ಯನೆಂದು ಅವನಿಗೆ ತಿಳಿದಿತ್ತು.

ದ್ರೌಣಿಸ್ತು ದೃಷ್ಟ್ವಾ ರಾಜೇಂದ್ರ ಧೃಷ್ಟದ್ಯುಮ್ನಮವಸ್ಥಿತಮ್ ।
ಕ್ರೋಧೇನ ನಿಃಶ್ವಸನ್ ವೀರಃ ಪಾರ್ಷದಂ ಸಮಭಿದ್ರವತ್ ॥೯೪॥

ಅಶ್ವತ್ಥಾಮನು ಧೃಷ್ಟದ್ಯುಮ್ನ ತನ್ನನ್ನು ಇದಿರಿಸುತ್ತಿದ್ದುದನ್ನು ಕಂಡು ಕ್ರೋಧ ದಿಂದ ಉಸಿರುಬಿಡುತ್ತ ಅವನನ್ನು ಆಕ್ರಮಿಸಿದ.

ತಾವನ್ಯೋನ್ಯಂ ತು ದೃಷ್ಟ್ವೈವ ಸಂರಂಭಂ ಜಗೃತುಃ ಪರಮ್ ।
ಪ್ರಗೃಹ್ಯ ಮಹತೀ ಚಾಪೇ ಶರಾಸನಸಮನ್ವಿತೇ ॥೯೫॥

ಅವರಿಬ್ಬರೂ ದೊಡ್ಡ ಬಿಲ್ಲು ಬತ್ತಳಿಕೆಗಳನ್ನು ಧರಿಸಿ ಪರಸ್ಪರ ದಿಟ್ಟಿಸುತ್ತ ಬಲು ಕ್ರೋಧವಶರಾದರು.

ಅಥಾಬ್ರವೀನ್ಮಹಾರಾಜ ದ್ರೋಣಪುತ್ರಃ ಪ್ರತಾಪವಾನ್ ।
ಧೃಷ್ಟದ್ಯುಮ್ನಂ ಸಮೀಪಸ್ಥಂ ತ್ವರಮಾಣೋ ವಿಶಾಂಪತೇ ॥೯೬॥

ಮಹಾರಾಜ, ಅಶ್ವತ್ಥಾಮನು ತನ್ನ ಸಮೀಪಕ್ಕೆ ಬಂದು ನಿಂತ ಧೃಷ್ಟದ್ಯುಮ್ನನಿಗೆ ತ್ವರೆಯಿಂದ ಹೀಗೆ ನುಡಿದ—

ಪಾಂಚಾಲಾಪಶದಾದ್ಯ ತ್ವಾಂ ಪ್ರೇಷಯಾಮಿ ಯಮಕ್ಷಯಮ್ ।
ಪಾಪಂ ಹಿ ಯತ್ ತ್ವಯಾ ಕರ್ಮ ಕೃತಂ ತಾತಂ ಘ್ನತಾ ರಣೇ ॥೯೭॥

ಅದ್ಯ ತ್ವಂ ಪ್ರಾಪ್ಸ್ಯಸೇ ತದ್ವೈ ಯಥಾ ಹ್ಯಕುಶಲಸ್ತಥಾ ।
ಅರಕ್ಷ್ಯಮಾಣಃ ಪಾರ್ಥೇನ ಯದಿ ತಿಷ್ಠಸಿ ಸಂಯುಗೇ ।
ನಾಪಕ್ರಾಮಸಿ ವಾ ಮೋಹಾತ್ ಸತ್ಯಮೇತದ್ ಬ್ರವೀಮಿ ತೇ ॥೯೮॥

'ನೀಚನಾದ ಪಾಂಚಾಲನೆ, ನಾನೀಗಲೆ ನಿನ್ನನ್ನು ಯಮಸದನಕ್ಕೆ ಅಟ್ಟುವೆ, ರಣರಂಗದಲ್ಲಿ ತಾತ ದ್ರೋಣರನ್ನು ಕೊಂದು ನೀನು ಏನು ಪಾಪಕರ್ಮ ಮಾಡಿರುವೆಯೊ ಅದನ್ನೇ ನೀನೀಗ ನನ್ನ ಕೈಯಿಂದ ಹೊಂದಲಿರುವೆ. ಮೂರ್ಖನು ಪರರಿಗೆ ಮಾಡುವ ಪಾಪಕರ್ಮಕ್ಕೆ ತಾನೂ ಭಾಗಿಯಾಗುತ್ತಾನೆ. ಯುದ್ಧದ ಮೇಲಿನ ಮೋಹದಿಂದ ನೀನು ಪಲಾಯನ ಮಾಡದೆ ಅರ್ಜುನನ ರಕ್ಷಣೆ ಇಲ್ಲದಿದ್ದರೂ ನನ್ನಿದಿರಲ್ಲಿ ಯುದ್ಧಕ್ಕೆ ನಿಂತರೆ, ಇದು ಸತ್ಯವೇ ಆಗುವುದು, ನಾನು ಹೇಳುತ್ತೇನೆ, ಕೇಳು.'

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವ್ಯೆಯಾಸಿಕ್ಯಾಂ ಕರ್ಣಪರ್ವಣಿ ವಿಂಶೋಽಧ್ಯಾಯಃ ॥೨೦॥

❖

ಇಪ್ಪತ್ತೊಂದನೆಯ ಅಧ್ಯಾಯ

ಧೃಷ್ಟದ್ಯುಮ್ನ ಅಶ್ವತ್ಥಾಮರ ಯುದ್ಧ, ಅರ್ಜುನನಿಂದ ಧೃಷ್ಟದ್ಯುಮ್ನನ ರಕ್ಷಣೆ

ಸಂಜಯಃ

ಏವಮುಕ್ತಃ ಪ್ರತ್ಯುವಾಚ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ಪ್ರತಿವಾಕ್ಯಂ ಸ ಏವಾಸಿರ್ಮಾಮಕೋ ದಾಸ್ಯತೇ ತವ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಅಶ್ವತ್ಥಾಮನ ಈ ಮಾತಿಗೆ ಪ್ರತಾಪಶಾಲಿಯಾದ ಧೃಷ್ಟದ್ಯುಮ್ನ ಪ್ರತ್ಯುತ್ತರ ನುಡಿದ– 'ನಿನಗೆ ನನ್ನ ಕತ್ತಿಯೇ ಉತ್ತರ ನೀಡುತ್ತದೆ'

ಯೇನೈವ ತೇ ಪಿತುರ್ದತ್ತಂ ಯತಮಾನಸ್ಯ ಸಂಯುಗೇ ॥೨॥

'ಯುದ್ಧದಲ್ಲಿ ನನ್ನನ್ನು ಕೊಲ್ಲಲು ಯತ್ನಿಸಿದ ನಿನ್ನ ತಂದೆಗೆ ನನ್ನ ಕತ್ತಿಯೇ ಉತ್ತರ ನೀಡಿದೆ.'

ಯದಿ ತಾವನ್ಮಯಾ ದ್ರೋಣೋ ನಿಹತೋ ಬ್ರಾಹ್ಮಣಬ್ರುವಃ ।
ತ್ವಾಮಿದಾನೀಂ ಕಥಂ ಯುದ್ಧೇ ನ ಹನಿಷ್ಯಾಮಿ ಕಿಲ್ಬಿಷಮ್ ॥೩॥

'ದುರ್ಬ್ರಾಹ್ಮಣನಾದ ದ್ರೋಣನನ್ನು ನಾನು ಕೊಂದಿರುವುದು ನಿಜವಾದರೆ ಪಾಪಿಯಾದ ನಿನ್ನನ್ನು ನಾನು ಈಗ ಹೇಗೆ ಕೊಲ್ಲದೆ ಬಿಟ್ಟೇನು?'

ಏವಮುಕ್ತ್ವಾ ಮಹಾತೇಜಾಃ ಸೇನಾಪತಿರರಿಂದಮಃ ।
ಸುತೀಕ್ಷ್ಣೇನಾಥ ಭಲ್ಲೇನ ದ್ರೌಣಿಂ ವಿವ್ಯಾಧ ಪಾರ್ಷತಃ ॥೪॥

ಮಹಾಪರಾಕ್ರಮಿ ಸೇನಾಪತಿ ಶತ್ರುನಾಶಕನಾದ ಧೃಷ್ಟದ್ಯುಮ್ನ ಹೀಗೆ ಹೇಳಿ ಬಲುತೀಕ್ಷ್ಣವಾದ ಭಲ್ಲೆಯಿಂದ ಅಶ್ವತ್ಥಾಮನಿಗೆ ಹೊಡೆದ.

ತತೋ ದ್ರೌಣಿಃ ಸುಸಂಕ್ರುದ್ಧಃ ಶರೈಃ ಸನ್ನತಪರ್ವಭಿಃ ।
ಆಚ್ಛಾದಯದ್ ದಿಶೋ ರಾಜನ್ ಧೃಷ್ಟದ್ಯುಮ್ನಸ್ಯ ಸಂಯುಗೇ ॥೫॥

ಆಗ ಅಶ್ವತ್ಥಾಮ ಬಹಳ ಕುಪಿತನಾಗಿ ಡೊಂಕುಗಿಣ್ಣಿನ ಬಾಣಗಳಿಂದ ಧೃಷ್ಟದ್ಯುಮ್ನನ ಎಲ್ಲದಿಕ್ಕುಗಳನ್ನೂ ರಣರಂಗದಲ್ಲಿ ಆಚ್ಛಾದಿಸಿದ.

ನೈವಾಂತರಿಕ್ಷಂ ನ ದಿಶೋ ನಾಪಿ ಯೋಧಾಃ ಸಹಸ್ರಶಃ ।
ದೃಶ್ಯಂತೇ ವೈ ಮಹಾರಾಜ ಶರೈಶ್ಛನ್ನಾಃ ಸಮಂತತಃ ।
ಏಕಃ ಸನ್ ವಾರಯಾಮಾಸ ಪ್ರೇಕ್ಷಣೀಯಃ ಸಮಂತತಃ ॥೬॥

ಮಹಾರಾಜ, ಅಂತರಿಕ್ಷ ಕಾಣುವುದಿಲ್ಲ, ದಿಕ್ಕುಗಳು ಕಾಣುವುದಿಲ್ಲ. ಸಾವಿರಾರು ಸಂಖ್ಯೆಯಲ್ಲಿರುವ ಯೋಧರೂ ಯಾರೂ ಕಾಣುವುದಿಲ್ಲ. ಎಲ್ಲ ಕಡೆ ಬಾಣಗಳೇ ಆವರಿಸಿವೆ.

ತಥೈವ ಪಾರ್ಷತೋ ರಾಜನ್ ದ್ರೌಣಿಮಾಹವಶೋಭಿನಮ್ ।
ಶರೈಃ ಸಂಛಾದಯಾಮಾಸ ಸೂತಪುತ್ರಸ್ಯ ಪಶ್ಯತಃ ॥೭॥

ರಾಜನೇ, ಅದೇರೀತಿ ಧೃಷ್ಟದ್ಯುಮ್ನನೂ ಯುದ್ಧದಲ್ಲಿ ಶೋಭಿಸುವ ಅಶ್ವತ್ಥಾಮನನ್ನು ಕರ್ಣ ನೋಡುತ್ತಿದ್ದಂತೆಯೆ ಬಾಣಗಳಿಂದ ಆವರಿಸಿದ.

ರಾಧೇಯೋಽಪಿ ಮಹಾರಾಜ ಪಾಂಚಾಲಾನ್ ಸಹ ಪಾಂಡವೈಃ ।
ದ್ರೌಪದೇಯಾನ್ ಯುಧಾಮನ್ಯುಮುತ್ತಮೌಜಸಮೇವ ಚ ॥೮॥

ಸಾತ್ಯಕಿಶ್ಚ ಮಹಾರಾಜ ಯೋಧಾಂಶ್ಚಾನ್ಯಾನ್ ಸಹಸ್ರಶಃ ।
ಏಕಸ್ತಾನ್ ವಾರಯಾಮಾಸ ಪ್ರೇಕ್ಷಣೀಯಃ ಸಮಂತತಃ ॥೯॥

ಕರ್ಣನೂ ಕೂಡ, ಮಹಾರಾಜ, ಪಾಂಚಾಲರನ್ನು ಪಾಂಡವರನ್ನು ದ್ರೌಪದೀ ಪುತ್ರರನ್ನು ಯುಧಾಮನ್ಯುವನ್ನು ಉತ್ತಮೌಜನನ್ನು ಸಾತ್ಯಕಿಯನ್ನು ಬೇರೆ ಸಹಸ್ರಾರು ಯೋಧರನ್ನೂ ಒಬ್ಬನೆ ಪ್ರೇಕ್ಷಣೀಯನಾಗಿ ಬಾಣಗಳಿಂದ ಆವರಿಸಿದ.

ಧೃಷ್ಟದ್ಯುಮ್ನಸ್ತು ಸಮರೇ ದ್ರೌಣೇಶ್ಚಿಚ್ಛೇದ ಕಾರ್ಮುಕಮ್ ।
ಕ್ಷುರಪ್ರೇಣ ಸುತೀಕ್ಷ್ಣೇನ ಪಶ್ಯತಾಂ ಸರ್ವಯೋಧಿನಾಮ್ ॥೧೦॥

ಧೃಷ್ಟದ್ಯುಮ್ನನು ರಣರಂಗದಲ್ಲಿ ಎಲ್ಲ ಯೋಧರೂ ನೋಡುತ್ತಿದ್ದಂತೆಯೆ ಬಲು ತೀಕ್ಷ್ಣವಾದ ಬಾಣದಿಂದ ಅಶ್ವತ್ಥಾಮನ ಬಿಲ್ಲನ್ನು ಕಡಿದ.

ತದಪಾಸ್ಯ ಧನುಶ್ಛಿನ್ನಮನ್ಯದಾದತ್ತ ಕಾರ್ಮುಕಮ್ ।
ವೇಗವಾನ್ ಸಮರೇ ಘೋರೇ ಶರಾಂಶ್ಚಾಶೀವಿಷೋಪಮಾನ್ ॥೧೧॥

ಅಶ್ವತ್ಥಾಮನು ಕಡಿದುಹೋದ ಬಿಲ್ಲನ್ನು ದೂರಎಸೆದು ಇನ್ನೊಂದು ಬಿಲ್ಲನ್ನೆತ್ತಿ

ಕೊಂಡ. ಘೋರವಾದ ರಣರಂಗದಲ್ಲಿ ಸರ್ಪಗಳಂಥ ಬಾಣಗಳನ್ನು ವೇಗದಿಂದ ಎತ್ತಿಕೊಂಡ.

ಸ ಪಾರ್ಷತಸ್ಯ ರಾಜೇಂದ್ರ ಧನುಃ ಶಕ್ತಿಂ ಗದಾಂ ಧ್ವಜಮ್ ।
ಹಯಾನ್ ಸೂತಂ ರಥಂ ಚೈವ ನಿಮೇಷಾದ್ ವ್ಯಧಮಚ್ಛರೈಃ ॥೧೨॥

ರಾಜೇಂದ್ರ, ಅವನು ಧೃಷ್ಟದ್ಯುಮ್ನನ ಧನುಸ್ಸು ಶಕ್ತಿ ಗದೆ ಧ್ವಜ ಕುದುರೆಗಳು ಸಾರಥಿ ರಥ ಇವೆಲ್ಲವನ್ನೂ ನಿಮಿಷದಲ್ಲಿ ಬಾಣಗಳಿಂದ ಪುಡಿಮಾಡಿದ.

ಸ ಚ್ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಖಡ್ಗಮಾದತ್ತ ವಿಪುಲಂ ಶತಚಂದ್ರಂ ಚ ಭಾನುಮತ್ ॥೧೩॥

ಧೃಷ್ಟದ್ಯುಮ್ನನಿಗೆ ಬಿಲ್ಲು ಕಡಿದುಹೋಗಿದೆ, ರಥ ಇಲ್ಲ. ಕುದುರೆಗಳೂ ಸಾರಥಿ ಹತರಾಗಿದ್ದಾರೆ. ಅದರಿಂದ ಹೊಳೆಯುವ ದೊಡ್ಡ ಖಡ್ಗವನ್ನೂ ಶತಚಂದ್ರ ಗುರಾಣಿಯನ್ನೂ ಎತ್ತಿಕೊಂಡ.

ದ್ರೌಣಿಸ್ತದಪಿ ರಾಜೇಂದ್ರ ಭಲ್ಲೈಃ ಕ್ಷಿಪ್ರಂ ಮಹಾರಥಃ ।
ಚಿಚ್ಛೇದ ಸಮರೇ ವೀರಃ ಕ್ಷಿಪ್ರಹಸ್ತೋ ದೃಢಾಯುಧಃ ॥೧೪॥

ರಾಜೇಂದ್ರ, ಮಹಾರಥ, ವೀರ, ವೇಗದ ಹಸ್ತ ಮತ್ತು ದೃಢವಾದ ಆಯುಧ ಗಳುಳ್ಳವನಾದ ಅಶ್ವತ್ಥಾಮ ಬೇಗನೆ, ರಣರಂಗದಲ್ಲಿ ಭಲ್ಲೆಗಳಿಂದ ಧೃಷ್ಟದ್ಯುಮ್ನನ ಖಡ್ಗವನ್ನೂ ತುಂಡರಿಸಿದ.

ರಥಾದನವರೂಢಸ್ಯ ಧನ್ವಿನೋ ಬಾಹುಶಾಲಿನಃ ।
ಪಶ್ಯತಾಂ ಸರ್ವಸೈನ್ಯಾನಾಂ ತದದ್ಭುತಮಿವಾಭವತ್ ॥೧೫॥

ಧನುರ್ಧಾರಿ ಬಾಹುಶಾಲಿ ಅಶ್ವತ್ಥಾಮ ರಥದಿಂದ ಕೆಳಗೆ ಇಳಿಯದೆಯೆ, ಎಲ್ಲ ಸೈನ್ಯಗಳು ನೋಡುತ್ತಿದ್ದಂತೆಯೆ ಹೀಗೆ ಮಾಡಿದ್ದು ಅದ್ಭುತವಾಗಿತ್ತು.

ಧೃಷ್ಟದ್ಯುಮ್ನಂ ತು ವಿರಥಂ ಹತಾಶ್ವರಥಸಾರಥಿಮ್ ।
ಶಸ್ತ್ರೈಶ್ಚ ಬಹುಧಾ ವಿದ್ಧಮಸ್ತ್ರೈಶ್ಚ ಶಕಲೀಕೃತಮ್
ನಾತರದ್ ಭರತಶ್ರೇಷ್ಠ ಯತಮಾನೋ ಮಹಾರಥಃ ॥೧೬॥

ಧೃಷ್ಟದ್ಯುಮ್ನ ರಥವಿಲ್ಲದವನಾಗಿದ್ದಾನೆ. ಅಶ್ವ ರಥ ಸಾರಥಿಗಳು ನಾಶ ವಾಗಿದ್ದಾರೆ. ಶಸ್ತ್ರಗಳಿಂದ ಬಹಳ ಗಾಯಗೊಂಡಿದ್ದಾನೆ. ಅಸ್ತ್ರಗಳಿಂದ ಕ್ಷತವಿಕ್ಷತ ನಾಗಿದ್ದಾನೆ. ಆದರೂ ಅವನನ್ನು ಕೊಲ್ಲಲು ಮಹಾರಥನಾದ ಅಶ್ವತ್ಥಾಮ ಯತ್ನಿಸಿದರೂ ಶಕ್ತನಾಗಲಿಲ್ಲ.

ತಸ್ಯಾಂತಮಿಪ್ಸುಃ ರಾಜನ್ ಯದಾ ದ್ರೌಣಿರ್ನ ಗಚ್ಛತಿ ।
ಅಥ ತ್ಯಕ್ತ್ವಾ ರಥಂ ವೀರಃ ಪಾರ್ಷತಂ ತ್ವರಿತೋಽನ್ವಗಾತ್ ।
ಪ್ರಗೃಹ್ಯ ವಿಪುಲಂ ಖಡ್ಗಂ ಜಾತರೂಪಪರಿಷ್ಕೃತಮ್ ॥೧೭॥

ಅವನ ನಾಶವನ್ನು ಬಾಣಗಳಿಂದ ಮಾಡಲು ವೀರ ಅಶ್ವತ್ಥಾಮ ಶಕ್ತನಾಗ ದಿದ್ದಾಗ, ಬೇಗನೆ ರಥವನ್ನು ಬಿಟ್ಟು ಚಿನ್ನದಿಂದ ಅಲಂಕೃತವಾದ ದೊಡ್ಡ ಖಡ್ಗವನ್ನು ಹಿಡಿದು ಧೃಷ್ಟದ್ಯುಮ್ನನನ್ನು ಬೆನ್ನಟ್ಟಿದ.

ತಸ್ಯ ಸಂಪತತೋ ರಾಜನ್ ವಪುರಾಸೀನ್ ಮಹಾತ್ಮನಃ ।
ಗರುಡಸ್ಯೇವ ಪತತೋ ಜಿಘೃಕ್ಷೋಃ ಪನ್ನಗೋತ್ತಮಮ್ ॥೧೮॥

ರಾಜನೆ, ಧೃಷ್ಟದ್ಯುಮ್ನನನ್ನು ಬೆನ್ನಟ್ಟುತ್ತಿದ್ದಾಗ ಮಹಾತ್ಮ ಅಶ್ವತ್ಥಾಮನ ಶರೀರ ದೊಡ್ಡ ಹಾವನ್ನು ಹಿಡಿಯಲು ಹಾರುವ ಗಿಡುಗನ ಶರೀರದಂತೆ ವೇಗಯುಕ್ತ ವಾಗಿತ್ತು.

ಏತಸ್ಮಿನ್ನೇವ ಕಾಲೇ ತು ಕೇಶವಃ ಪರವೀರಹಾ ।
ಅಬ್ರವೀದ್ ಭರತಶ್ರೇಷ್ಠಮರ್ಜುನಂ ಜಯತಾಂ ವರಮ್ ॥೧೯॥

ಇದೇ ಸಮಯದಲ್ಲಿ ಶತ್ರುವೀರನಾಶಕನಾದ ಶ್ರೀಕೃಷ್ಣ ಜಯಶಾಲಿಗಳಲ್ಲಿ ಶ್ರೇಷ್ಠನಾದ ಮತ್ತು ಕುರುಕುಲಶ್ರೇಷ್ಠನಾದ ಅರ್ಜುನನಿಗೆ ಹೀಗೆ ಹೇಳಿದ.

ಪಶ್ಯ ದ್ರೌಣಿಂ ಪಾರ್ಷತಸ್ಯ ಯತಮಾನಂ ವಧಂ ಪ್ರತಿ ।
ಯತ್ನಂ ಕರೋತಿ ವಿಪುಲಂ ಹನ್ಯಾಚ್ಚೈನಂ ನ ಸಂಶಯಃ ॥೨೦॥

ನೋಡು, ಅಶ್ವತ್ಥಾಮನು ಧೃಷ್ಟದ್ಯುಮ್ನನ ವಧೆಗೆ ಯತ್ನ ಮಾಡುತ್ತಿದ್ದಾನೆ. ಬಹಳ ಯತ್ನ ಮಾಡಿದರೆ ಅವನನ್ನು ಆತ ಕೊಲ್ಲುತ್ತಾನೆ, ಸಂಶಯವಿಲ್ಲ.

ತ್ರಾಯಸ್ವೈನಂ ಮಹಾಬಾಹೋ ಪಾರ್ಷತಂ ಯುದ್ಧದುರ್ಮದಮ್ ।
ದ್ರೌಣೇರಾಸ್ಯಗತಂ ವೀರ ಮೃತ್ಯೋರಾಸ್ಯಗತಂ ಯಥಾ ॥೨೧॥

ವೀರನೆ, ಮಹಾಬಾಹುವೆ, ಯುದ್ಧದಲ್ಲಿ ಸುಖಕಾಣುವ ಈ ಧೃಷ್ಟದ್ಯುಮ್ನನನ್ನು ಕಾಪಾಡು. ಅವನು ಅಶ್ವತ್ಥಾಮನ ಕೈಯಲ್ಲಿ ಸಿಕ್ಕಿಹಾಕಿಕೊಂಡನೆಂದರೆ ಮೃತ್ಯುವಿನ ದವಡೆಯಲ್ಲಿ ಸಿಕ್ಕಿಕೊಂಡಂತೆಯೆ.

ಏವಮುಕ್ತ್ವಾ ಮಹಾರಾಜ ವಾಸುದೇವಃ ಪ್ರತಾಪವಾನ್ ।
ಪ್ರೈಷಯತ್ ತುರಗಾನ್ ಯತ್ರ ದ್ರೌಣಿರ್ವೀರೋ ವ್ಯವಸ್ಥಿತಃ ॥೨೨॥

ಹೀಗೆ ಹೇಳಿ ಪ್ರತಾಪಶಾಲಿಯಾದ ಶ್ರೀಕೃಷ್ಣ ವೀರ ಅಶ್ವತ್ಥಾಮನಿದ್ದೆಡೆಗೆ ಕುದುರೆಗಳನ್ನು ನಡೆಸಿದ.

ತೇ ಹಯಾಶ್ಚಂದ್ರಸಂಕಾಶಾಃ ಕೇಶವೇನ ಪ್ರಚೋದಿತಾಃ ।
ಪಿಬಂತ ಇವ ಚಾಕಾಶಂ ಜಗ್ಮುರ್ದ್ರೌಣೇರ್ಮಹಾರಥಮ್ ॥೨೩॥

ಆ ಕುದುರೆಗಳು ಚಂದ್ರನಂತೆ ಬೆಳ್ಳಗೆ ಹೊಳೆಯುವವು, ಆಕಾಶವನ್ನು ನುಂಗಿ ಬಿಡುವಂತೆ ಮುಖವನ್ನು ಮೇಲೆತ್ತಿಕೊಂಡು ಅಶ್ವತ್ಥಾಮನ ರಥದ ಮುಂದೆ ಬಂದುವು.

ದೃಷ್ಟ್ವಾ ದ್ರೌಣಿರ್ಮಹಾರಾಜ ವಾಸುದೇವಧನಂಜಯೌ ।
ಧೃಷ್ಟದ್ಯುಮ್ನವಧೇ ರಾಜಂಶ್ಚಕ್ರೇ ಯತ್ನಂ ಮಹಾಬಲಃ ॥೨೪॥

ಮಹಾರಾಜ, ಮಹಾಬಲಿ ಅಶ್ವತ್ಥಾಮ ಕೃಷ್ಣಾರ್ಜುನರನ್ನು ನೋಡುತ್ತಲೇ ಧೃಷ್ಟದ್ಯುಮ್ನನ ವಧೆಗೆ ಯತ್ನಿಸಿದ.

ವಿಕೃಷ್ಯಮಾಣಂ ದೃಷ್ಟ್ವೈವ ಧೃಷ್ಟದ್ಯುಮ್ನಂ ಜನೇಶ್ವರ ।
ಶರಾಂಶ್ಚಿಕ್ಷೇಪ ವೈ ಪಾರ್ಥೋ ದ್ರೌಣಿಂ ಪ್ರತಿ ಮಹಾರಥಃ ॥೨೫॥

ರಾಜನೆ, ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಸೆಳೆಯುತ್ತಿದ್ದುದನ್ನು ಕಂಡು ಮಹಾರಥನಾದ ಅರ್ಜುನ ಅಶ್ವತ್ಥಾಮನ ಮೇಲೆ ಬಾಣಗಳನ್ನು ಎಸೆದ.

ತೇ ಶರಾ ಹೇಮವಿಕೃತಾ ಗಾಂಡೀವಪ್ರೇಷಿತಾ ಭೃಶಮ್ ।
ದ್ರೌಣಿಮಾಸಾದ್ಯ ವಿವಿಶುರ್ವಲ್ಮೀಕಮಿವ ಪನ್ನಗಾಃ ॥೨೬॥

ಗಾಂಡೀವದಿಂದ ವೇಗವಾಗಿ ಹೊರಟ ಆ ಚಿನ್ನದ ಬಾಣಗಳು ಹಾವು ಹುತ್ತದಲ್ಲಿ ಹೋಗುವಂತೆ ಅಶ್ವತ್ಥಾಮನ ಮೈಗೆ ಬಿದ್ದು ನಾಟಿಕೊಂಡುವು.

ವಿದ್ಧಸ್ತು ತೈಃ ಶರೈಘೋರೈದ್ರೋಣಪುತ್ರಃ ಪ್ರತಾಪವಾನ್ ।
ಉತ್ಸೃಜ್ಯ ಸಮರೇ ರಾಜನ್ ಪಾಂಚಾಲಮಮಿತೌಜಸಮ್ ॥೨೭॥

ಆರುರೋಹ ರಥಂ ವೀರೋ ಧನಂಜಯಶರಾರ್ದಿತಃ ।
ಪ್ರಗೃಹ್ಯ ಚ ಧನುಃ ಶ್ರೇಷ್ಠಂ ಪಾರ್ಥಂ ವಿವ್ಯಾಧ ಸಾಯಕೈಃ ॥೨೮॥

ಪ್ರತಾಪಶಾಲಿ ವೀರ ಅಶ್ವತ್ಥಾಮನು ಘೋರವಾದ ಆ ಬಾಣಗಳಿಂದ ಹೊಡೆಸಿಕೊಂಡು, ಅಮಿತ ಪರಾಕ್ರಮಿಯಾದ ಧೃಷ್ಟದ್ಯುಮ್ನನನ್ನು ರಣರಂಗದಲ್ಲಿ ಬಿಟ್ಟು ರಥವನ್ನೇರಿದ. ಅರ್ಜುನನ ಬಾಣಗಳಿಂದ ಪೀಡಿತನಾಗಿದ್ದ ಆತ ಶ್ರೇಷ್ಠವಾದ ಧನುಸ್ಸನ್ನೆತ್ತಿಕೊಂಡ. ಅರ್ಜುನನನ್ನು ಬಾಣಗಳಿಂದ ಹೊಡೆದ.

ಏತಸ್ಮಿನ್ನಂತರೇ ಶೂರಃ ಸಹದೇವೋ ಜನಾಧಿಪ ।
ಅಪೋವಾಹ ರಥೇನಾಜೌ ಪಾರ್ಷತಂ ಶತ್ರುತಾಪನಮ್ ॥೨೯॥

ರಾಜನೆ, ಈ ನಡುವೆ ಶೂರನಾದ ಸಹದೇವ ರಣರಂಗದಲ್ಲಿದ್ದ, ಶತ್ರುತಾಪಕನಾದ ಧೃಷ್ಟದ್ಯುಮ್ನನನ್ನು ರಥದಿಂದ ದೂರಕ್ಕೆ ಒಯ್ದ.

ಅರ್ಜುನೋಽಪಿ ಮಹಾರಾಜ ದ್ರೌಣಿಂ ವಿವ್ಯಾಧ ಪತ್ರಿಭಿಃ ।
ತಂ ದ್ರೋಣಪುತ್ರಃ ಸಂರಬ್ಧೋ ಬಾಹ್ವೋರುರಸಿ ಚಾರ್ದಯತ್ ॥೩೦॥

ಮಹಾರಾಜ, ಅರ್ಜುನನು ಬಾಣಗಳಿಂದ ಅಶ್ವತ್ಥಾಮನನ್ನು ಹೊಡೆದನು. ಅವನನ್ನು ಕುಪಿತನಾದ ಅಶ್ವತ್ಥಾಮ ತೋಳು, ಎದೆಗಳಲ್ಲಿ ಹೊಡೆದ.

ಕ್ರೋಧಿತಸ್ತು ರಣೇ ಪಾರ್ಥೋ ನಾರಾಚಂ ಕಾಲಸನ್ನಿಭಮ್ ।
ದ್ರೋಣಪುತ್ರಾಯ ಚಿಕ್ಷೇಪ ಯಮದಂಡಮಿವಾಪರಮ್ ॥೩೧॥

ಕೋಪಗೊಂಡ ಅರ್ಜುನ ಯುದ್ಧದಲ್ಲಿ ಯಮದಂಡದಂಥ ಮೃತ್ಯು ಸದೃಶವಾದ ಇನ್ನೊಂದು ಬಾಣವನ್ನು ಅಶ್ವತ್ಥಾಮನ ಮೇಲೆ ಎಸೆದ.

ಸ ಬ್ರಾಹ್ಮಣಸ್ಯಾಂಸದೇಶೇ ನಿಪಪಾತ ಮಹಾದ್ಯುತೇಃ ।
ಸ ವಿಹ್ವಲೋ ಮಹಾರಾಜ ಶರವೇಗೇನ ಸಂಯುಗೇ ।
ನಿಷಸಾದ ರಥೋಪಸ್ಥೇ ವೈಕ್ಲವ್ಯಂ ಪರಮಂ ಯಯೌ ॥೩೨॥

ಮಹಾರಾಜ, ಆ ಬಾಣ ಮಹಾತೇಜಸ್ವಿಯಾದ ಅಶ್ವತ್ಥಾಮನ ಹೆಗಲಿನಲ್ಲಿ ಬಿದ್ದಿತು. ಅವನು ಯುದ್ಧದಲ್ಲಿ ಬಾಣದ ವೇಗದಿಂದ ವಿಹ್ವಲನಾದ. ಬಹು ಕಷ್ಟಕ್ಕೀಡಾಗಿ ರಥದ ಮಧ್ಯದಲ್ಲಿ ಕುಳಿತ.

ತಂ ತು ಮತ್ವಾ ಹತಂ ವೀರಂ ಸಾರಥಿಃ ಶತ್ರುಕರ್ಶನಮ್ ।
ಅಪೋವಾಹ ರಥೇನಾಜೌ ತ್ವರಮಾಣೋ ರಣಾಜಿರಾತ್ ॥೩೩॥

ಶತ್ರುಪೀಡಕನಾದ ಅಶ್ವತ್ಥಾಮ ಹತನಾಗುವನೆಂದು ಆಲೋಚಿಸಿ ಸಾರಥಿಯು ರಣರಂಗದಲ್ಲಿ ಅವನನ್ನು ಬೇಗನೆ ರಥದಿಂದ ಬೇರೆಡೆಗೆ ಒಯ್ದ.

ಅಥೋದ್ಧೃಷ್ಟಂ ಮಹಾರಾಜ ಪಾಂಚಾಲೈರ್ಜಿತಕಾಶಿಭಿಃ ।
ಮೋಕ್ಷಿತಂ ಪಾರ್ಷತಂ ದೃಷ್ಟ್ವಾ ದ್ರೋಣಪುತ್ರಂ ಚ ಪೀಡಿತಮ್ ॥೩೪॥

ಮಹಾರಾಜ, ಧೃಷ್ಟದ್ಯುಮ್ನ ಬಿಡುಗಡೆಯಾದುದನ್ನೂ ಅಶ್ವತ್ಥಾಮ ಪೀಡಿತನಾದುದನ್ನೂ ಕಂಡು ಪಾಂಚಾಲರು ವಿಜಯೋತ್ಸಾಹಗೊಂಡು ಗರ್ಜನೆ ಮಾಡಿದರು.

ವಾದಿತ್ರಾಣಿ ಚ ದಿವ್ಯಾನಿ ಪ್ರಾವಾದ್ಯನ್ತ ಸಹಸ್ರಶಃ ।
ಸಿಂಹನಾದಶ್ಚ ಸಂಜಜ್ಞೇ ದೃಷ್ಟ್ವಾ ಯುದ್ಧಂ ತದದ್ಭುತಮ್ ॥೩೫॥

ಸಹಸ್ರಾರು ದಿವ್ಯ ರಣವಾದ್ಯಗಳು ಮೊಳಗಿದುವು. ಆ ಅದ್ಭುತವಾದ ಯುದ್ಧವನ್ನು ನೋಡಿದವರಿಗೆ ಸಿಂಹನಾದ ಕೇಳಿ ಬಂದಿತು.

ತತಃ ಕರ್ಣೋ ಮಹಾರಾಜ ವ್ಯಾಕ್ಷಿಪದ್ ವಿಜಯಂ ಧನುಃ ।
ದೃಷ್ಟ್ವಾರ್ಜುನಂ ರಣೇ ಕ್ರುದ್ಧಃ ಪ್ರೇಕ್ಷತೇ ಚ ಮುಹುರ್ಮುಹುಃ ।
ದ್ವೈರಥಂ ಚಾಪಿ ಪಾರ್ಥೇನ ಗಂತುಕಾಮೋ ಮಹಾದ್ಯುತಿಃ ॥೩೬॥

ಆಗ ಕರ್ಣ ರಣರಂಗದಲ್ಲಿ ಅರ್ಜುನನನ್ನು ಕಂಡು ಕ್ರುದ್ಧನಾಗಿ ವಿಜಯಧನುಸ್ಸನ್ನು ಸೆಳೆದ. ಅರ್ಜುನನೊಡನೆ ದ್ವಂದ್ವರಥಯುದ್ಧ ಮಾಡಲು ಬಯಸಿ ಮಹಾತೇಜಸ್ವಿಯಾದ ಕರ್ಣ ಅವನನ್ನು ಪುನಃ ಪುನಃ ದಿಟ್ಟಿಸಿ ನೋಡಿದ.

ಏವಂ ಕೃತ್ವಾಬ್ರವೀತ್ ಪಾರ್ಥೋ ವಾಸುದೇವಂ ಧನಂಜಯಃ ।
ಯಾಹಿ ಸಂಶಪ್ತಕಾನ್ ಕೃಷ್ಣ ಕಾರ್ಯಮೇತತ್ ಪರಂ ಮಮ ॥೩೭॥

ಆದರೆ ಅರ್ಜುನ ಹೀಗೆ ಧೃಷ್ಟದ್ಯುಮ್ನನನ್ನು ರಕ್ಷಿಸಿದ ಬಳಿಕ ಕೃಷ್ಣನಿಗೆ 'ಕೃಷ್ಣ ಸಂಶಪ್ತಕರ ಕಡೆಗೆ ನಡೆ, ನನಗೆ ಅದು ಮುಖ್ಯವಾದ ಕಾರ್ಯವಾಗಿದೆ' ಎಂದ.

ತತಃ ಪ್ರಯಾತೋ ಗೋವಿಂದಃ ಶ್ರುತ್ವಾ ಪಾಂಡವಭಾಷಿತಮ್ ।
ರಥೇನಾತಿಪತಾಕೇನ ಮನೋಮಾರುತರಂಹಸಾ ॥೩೮॥

ಆಗ ಅರ್ಜುನನ ಮಾತನ್ನು ಕೇಳಿ ಕೃಷ್ಣ ಉತ್ತಮಪತಾಕೆಗಳಿಂದ ಕೂಡಿದ, ಮನೋವೇಗ ಗಾಳಿಯ ವೇಗಗಳಿಂದ ಯುಕ್ತವಾದ ರಥದಿಂದ ಹೊರಟ.

ಏವಮೇವ ಕ್ಷಯೋ ವೃತ್ತಃ ಪೃಥಿವ್ಯಾಂ ಪೃಥಿವೀಪತೇ ।
ತಾವಕಾನಾಂ ಪರೇಷಾಂ ಚ ರಾಜನ್ ದುರ್ಮಂತ್ರಿತೇ ತವ ॥೩೯॥

ಹೀಗೆಯೇ, ರಾಜನೆ, ನಿನ್ನ ದುರಾಲೋಚನೆಯ ಫಲವಾಗಿ ಭೂಮಿಯ ಮೇಲೆ ವೀರಯೋಧರ ವಿನಾಶ ಉಂಟಾಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಏಕವಿಂಶೋಽಧ್ಯಾಯಃ ॥೨೧॥

❖

ಇಪ್ಪತ್ತೆರಡನೆಯ ಅಧ್ಯಾಯ

ನಕುಲ-ಸಹದೇವರಿಂದ ಅಂಗರಾಜವಧ, ಗಜಸೈನ್ಯದ ನಾಶ.

ಸಂಜಯಃ

ತತಃ ಪ್ರವವೃತೇ ಭೂಯಃ ಸಂಗ್ರಾಮೋ ರಾಜಸತ್ತಮ ।
ಕರ್ಣಸ್ಯ ಪಾಂಡವಾನಾಂ ಚ ಯಮರಾಷ್ಟ್ರವಿವರ್ಧನಃ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ರಾಜನೆ, ಮುಂದೆ ಕರ್ಣನಿಗೂ ಪಾಂಡವರಿಗೂ ಯಮನ ರಾಜ್ಯವನ್ನು ಸಮೃದ್ಧಿಗೊಳಿಸುವಂಥ ಯುದ್ಧ ಪುನಃ ನಡೆಯಿತು.

ಧನೂಂಷಿ ಬಾಣಾನ್ ಪರಿಘಾನಸಿಪಟ್ಟಿಸತೋಮರಾನ್ ।
ಮುಸಲಾನಿ ಭುಶುಂಡೀಶ್ಚ ಶಕ್ತಿರಿಷ್ಟಿಪರಶ್ವಧಾನ್ ॥೨॥

ಗದಾಃ ಪ್ರಾಸಾನ್ ಶಿತಾನ್ ಕುಂತಾನ್ ಭಿಂಡಿಪಾಲಾನ್ ಮಹಾಂಕುಶಾನ್
ಪ್ರಗೃಹ್ಯ ಕ್ಷಿಪ್ರಮಾಪೇತುಃ ಪರಸ್ಪರಜಿಘಾಂಸಯಾ ॥೩॥

ಧನುಸ್ಸು ಬಾಣ ಪರಿಘ ಖಡ್ಗ ಪಟ್ಟಿಶ ತೋಮರ ಮುಸಲ ಭುಶುಂಡಿ ಶಕ್ತಿ ರಿಷ್ಟಿ ಪರಶು ಗದೆ ಪ್ರಾಸ ಹರಿತವಾದ ಕುಂತ ಭಿಂದಿಪಾಲ ಮಹಾ ಅಂಕುಶಗಳನ್ನು ಹಿಡಿದು ಯೋಧರು ಪರಸ್ಪರ ವಧಿಸುವ ಇಚ್ಛೆಯಿಂದ ಇದಿರಿಸಿ ನಿಂತರು.

ಬಾಣಜ್ಯಾತಳಶಬ್ದೇನ ದ್ಯಾಂ ದಿಶಃ ಪ್ರದಿಶೋ ವಿಯತ್ ।
ಪೃಥಿವೀಂ ನೇಮಿಘೋಷೇಣ ನಾದಯಂತೋऽಭ್ಯಯುಃ ಪರಾನ್ ॥೪॥

ಬಾಣಗಳ ಶಬ್ದ ಹೆದೆಮೀಟುವ ಧ್ವನಿಗಳಿಂದ ಅಂತರಿಕ್ಷ–ದಿಕ್ಕು–ವಿದಿಕ್ಕು–ಆಕಾಶಗಳನ್ನು ಮತ್ತು ರಥಚಕ್ರಧ್ವನಿಯಿಂದ ಪೃಥಿವಿಯನ್ನು ಪ್ರತಿಧ್ವನಿಸುವಂತೆ ಮಾಡುತ್ತ ಶತ್ರುಗಳನ್ನು ಆಕ್ರಮಿಸಿದರು.

ತೇನ ಶಬ್ದೇನ ಮಹತಾ ಸಂಹೃಷ್ಟಾಶ್ಚಕ್ರುರಾಹವಮ್ ।
ವೀರಾ ವೀರೈರ್ಮಹಾಘೋರಕಲಹಾಂತಂ ತಿತೀರ್ಷವಃ ॥೫॥

ಆ ಮಹಾಧ್ವನಿಯಿಂದ ಉತ್ಸಾಹಗೊಂಡು ಮಹಾಭಯಂಕರ ಯುದ್ಧದಲ್ಲಿ ಜಯವನ್ನು ಗೆದ್ದುಕೊಳ್ಳುವ ಬಯಕೆಯಿಂದ ವೀರರು ವೀರರನ್ನು ಇದಿರಿಸಿ ಯುದ್ಧ ಮಾಡಿದರು.

ಜ್ಯಾತಳತ್ರಧನುಃಶಬ್ದಾನ್ ಶಸ್ತ್ರಾಣಾಂ ಚ ನಿಪಾತ್ಯತಾಮ್ ।
ತಾಡಿತಾನಾಂ ಚ ಪತತಾಂ ನಿನದಾಂಶ್ಚೈವ ದಂತಿನಾಮ್ ॥೬॥

ಬಾಣಶಬ್ದಾಂಶ್ಚ ವಿವಿಧಾನ್ ಶೂರಾಣಾಂ ಚಾಭಿಗರ್ಜತಾಮ್ ।
ಶ್ರುತ್ವಾ ಗಜಾ ಭೃಶಂ ತ್ರೇಸುಃ ಪೇತುರ್ಮಮ್ಲುಶ್ಚ ಭಾರತ ॥೭॥

ಹೆದೆ ಕೈಚೀಲ ಧನುಸ್ಸುಗಳ ಶಬ್ದ ಶಸ್ತ್ರಗಳು ಬೀಳುವ ಶಬ್ದ ಹೊಡೆಸಿಕೊಂಡು ಬೀಳುವ ಆನೆಗಳ ಶಬ್ದ ಬಾಣಶಬ್ದಗಳು ಮತ್ತು ಸಿಂಹನಾದಗೈವ ವೀರರ ನಾನಾ ಬಗೆಯ ಶಬ್ದ ಇವೆಲ್ಲವನ್ನು ಕೇಳಿಯೆ ಆನೆಗಳು ಬಹಳ ಭಯಪಟ್ಟವು, ಆಯಾಸಗೊಂಡುವು, ಬಿದ್ದವು.

ತೇಷಾಂ ನಿನದತಾಂ ಚೈವ ಶಸ್ತ್ರವರ್ಷಂ ಚ ಮುಂಚತಾಮ್ ।
ಬಹೂನಾಧಿರಥಿರ್ವೀರಃ ಪ್ರಮಮಾಥೇಷುಭಿಃ ಪರಾನ್ ॥೮॥

ಶತ್ರುವೀರರು ಗರ್ಜಿಸುತ್ತಿದ್ದಂತೆಯೇ, ಶಸ್ತ್ರಗಳ ಮಳೆಗರೆಯುತ್ತಿದ್ದಂತೆಯೆ ವೀರ ಕರ್ಣನು ಬಹಳ ಶತ್ರುಗಳನ್ನು ಬಾಣಗಳಿಂದ ನಾಶಪಡಿಸಿದ.

ಪಂಚ ಪಾಂಚಾಲವೀರಾಣಾಂ ರಥಾನ್ ದಶ ಚ ಪಂಚ ಚ ।
ಸಾಶ್ವಸೂತಧ್ವಜಾನ್ ಕರ್ಣಃ ಶರೈರ್ನಿನ್ಯೇ ಯಮಕ್ಷಯಮ್ ॥೯॥

ಪಾಂಚಾಲವೀರರ ಇಪ್ಪತ್ತು ರಥಿಗಳನ್ನು ಅಶ್ವ ಸಾರಥಿ ಧ್ವಜಗಳೊಂದಿಗೇ ಬಾಣಗಳಿಂದ ಯಮಲೋಕಕ್ಕೆ ಕಳಿಸಿದ, ಕರ್ಣ.

ಯೋಧಮುಖ್ಯಾ ಮಹಾವೀರ್ಯಾಃ ಪಾಂಡೂನಾಂ ಕರ್ಣಮಾಹವೇ ।
ಶಿಕ್ಷಿತಾಸ್ತಮಭಿದ್ರುತ್ಯ ಪರಿವವ್ರುಃ ಸಮಂತತಃ ॥೧೦॥

ಮಹಾವೀರ್ಯಶಾಲಿಗಳಾದ ಅಸ್ತ್ರವಿದ್ಯೆಯಲ್ಲಿ ನುರಿತ ಪಾಂಡವಪಕ್ಷದ ಮುಖ್ಯ ಯೋಧರು ರಣರಂಗದಲ್ಲಿ ಕರ್ಣನನ್ನು ಇದಿರಿಸಿ ಎಲ್ಲೆಡೆ ಮುತ್ತಿದರು.

ತತಃ ಕರ್ಣೋ ದ್ವಿಷತ್ಸೇನಾಂ ಶರವರ್ಷೈರ್ವಿಲೋಡಯನ್ ।
ವಿಜಗಾಹಾಂಡಜಾಕೀರ್ಣಾಂ ಪದ್ಮಿನೀಮಿವ ಯೂಥಪಃ ॥೧೧॥

ಮೀನುಗಳಿಂದ ತುಂಬಿದ ಕೊಳವನ್ನು ಕದಡುತ್ತ ಆನೆ ಪ್ರವೇಶಿಸುವಂತೆ, ಶತ್ರು ಸೈನ್ಯವನ್ನು ಬಾಣಗಳ ಮಳೆಗಳಿಂದ ಕದಡುತ್ತ ಕರ್ಣ ಪ್ರವೇಶಿಸಿದ.

ದ್ವಿಷತ್ಸೈನ್ಯಮವಸ್ಕಂದ್ಯ ರಾಧೇಯೋ ಧನುರುತ್ತಮಮ್ ।
ವಿಧುನ್ವಾನಃ ಶಿತೈರ್ಬಾಣೈಃ ಶಿರಾಂಸ್ಯುನ್ಮಥ್ಯ ಪಾತಯತ್ ॥೧೨॥

ಶತ್ರುಸೈನ್ಯವನ್ನು ಕದಡಿ ಕರ್ಣನು ಉತ್ತಮವಾದ ಧನುಸ್ಸನ್ನು ಸೆಳೆಯುತ್ತ ಹರಿತವಾದ ಬಾಣಗಳಿಂದ ಶಿರಗಳನ್ನು ತರಿದು ಬೀಳಿಸಿದ.

ಹಸ್ತಿನಃ ಸಮಹಾಮಾತ್ರಾನ್ ಸಾಶ್ವಾರೋಹಾನ್ ಹಯಾನಪಿ ।
ರಥಿನೋಽಪ್ಯೇಕಬಾಣೇನ ಭ್ರಮತಶ್ಚಾವಪಾತಯತ್ ॥೧೩॥

ಗಜಗಳನ್ನು ಗಜಾರೋಹಿಗಳೊಂದಿಗೆ ಅಶ್ವಗಳನ್ನು ಅಶ್ವಾರೋಹಿಗಳೊಂದಿಗೆ

ಮತ್ತು ರಣರಂಗದಲ್ಲಿ ಸಂಚರಿಸುವ ರಥಗಳನ್ನು ಕೂಡ ಒಂದೊಂದು ಬಾಣದಿಂದಲೇ ಕೆಳಗೆ ಬೀಳಿಸಿದ.

ವರ್ಮ ವಾ ಚರ್ಮ ವಾऽಶ್ರಿತ್ಯ ನಿಪಾತಮಪಿ ದೇಹಿನಃ ।
ಏಷೇಹುರ್ನಾಸ್ಯ ಸಂಸ್ಪರ್ಶಂ ದ್ವಿತೀಯಸ್ಯ ಪತತ್ರಿಣಃ ॥೧೪॥

ಕವಚದ ಅಥವಾ ಗುರಾಣಿಯ ಸಹಾಯದಿಂದ ಒಂದು ವೇಳೆ ಯೋಧರು ಕರ್ಣನ ಒಂದು ಬಾಣದಿಂದ ತಮ್ಮ ಪತನವನ್ನು ತಪ್ಪಿಸಿಕೊಂಡರೂ ಎರಡನೇ ಬಾಣದ ಸ್ಪರ್ಶವನ್ನು ಸಹಿಸದಾದರು.

ವರ್ಮಯುಕ್ತೇಷು ದೇಹೇಷು ಧನುಷೋऽಸ್ಯನ್ ಶಿತಾನ್ ಶರಾನ್ ।
ಮೌರ್ವ್ಯಾ ತಳತ್ರೇ ನ್ಯಹನತ್ ಕಶಯಾ ವಾಜಿನೋ ಯಥಾ ॥೧೫॥

ಕವಚಯುಕ್ತವಾದ ದೇಹಗಳಲ್ಲಿ ಬಿಲ್ಲಿನ ಹೆದೆಯಿಂದ ಹರಿತವಾದ ಬಾಣಗಳನ್ನು ಎಸೆಯುತ್ತ, ಚಾವಟಿಯಿಂದ ಕುದುರೆಗಳಿಗೆ ಹೊಡೆಯುವಂತೆ, ಯೋಧರ ಕೈಚೀಲಗಳಲ್ಲಿಯೇ ಹೊಡೆದ, ಯೋಧರಿಗೆ ಬಾಣ ಎಸೆಯಲು ಸಾಧ್ಯವಾಗದಂತೆ ಮಾಡಿದ.

ಪಾಂಡುಸೃಂಜಯಪಾಂಚಾಲಾನ್ ಶರಗೋಚರಮಾಗತಾನ್ ।
ಮಮರ್ದ ತರಸಾ ಕರ್ಣಃ ಸಿಂಹೋ ಮೃಗಗಣಾನಿವ ॥೧೬॥

ಸಿಂಹವು ಜಿಂಕೆಗಳ ಹಿಂಡುಗಳನ್ನು ಹೇಗೋ ಹಾಗೇ ಕರ್ಣನು ಬಾಣಗಳ ಮಾರ್ಗದಲ್ಲಿ ಸಿಕ್ಕ ಪಾಂಡವ ಸೃಂಜಯ ಪಾಂಚಾಲಯೋಧರನ್ನು ಬಲವಾಗಿ ಮರ್ದನಗೈದ.

ತತಃ ಪಾಂಚಾಲಪುತ್ರಶ್ಚ ದ್ರೌಪದೇಯಾಶ್ಚ ಮಾರಿಷ ।
ಯಮೌ ಚ ಯುಯುಧಾನಶ್ಚ ತ್ವರಿತಾಃ ಕರ್ಣಮಭ್ಯಯುಃ ॥೧೭॥

ಆಗ ರಾಜನೆ, ಧೃಷ್ಟದ್ಯುಮ್ನ, ದ್ರೌಪದೀಪುತ್ರರು, ನಕುಲ-ಸಹದೇವರು ಮತ್ತು ಸಾತ್ಯಕಿ ಇವರೆಲ್ಲರೂ ವೇಗವಾಗಿ ಕರ್ಣನ ಕಡೆಗೆ ಮುನ್ನುಗ್ಗಿದರು.

ತೇಷು ವ್ಯಾಯಚ್ಛಮಾನೇಷು ಕುರುಪಾಂಚಾಲಪಾಂಡುಷು ।
ಪ್ರಿಯಾನಸೂನ್ ರಣೇ ತ್ಯಕ್ತ್ವಾ ಯೋಧಾ ಜಘ್ನುಃ ಪರಸ್ಪರಮ್ ॥೧೮॥

ಕೌರವ ಪಾಂಚಾಲ ಪಾಂಡವ ಸೈನ್ಯಗಳು ಯುದ್ಧನಿರತರಾದಾಗ ಯೋಧರು ಪ್ರಿಯವಾದ ಪ್ರಾಣದ ಹಂಗನ್ನು ತೊರೆದು ಪರಸ್ಪರವಾಗಿ ಹೋರಾಡಿದರು.

ಸುಸನ್ನದ್ಧಾಃ ಕವಚಿನಃ ಸಶಿರಸ್ತ್ರಾಣಭೂಷಣಾಃ ।
ಗದಾಭಿರ್ಮುಸಲೈಶ್ಚಾನ್ಯೇ ಪರಿಘೈಶ್ಚ ಮಹಾಬಲಾಃ ॥೧೯॥

ಸಮಭ್ಯಧಾವಂತ ಭೃಶಂ ಕಾಲದಂಡೈರಿವೋದ್ಯತೈಃ ।
ನರ್ದಂತಶ್ಚಾಹ್ವಯಂತಶ್ಚ ಪ್ರವಲ್ಗಂತಶ್ಚ ಮಾರಿಷ ॥೨೦॥

ಮಹಾಬಲಿಗಳಾದ, ಕವಚ ಶಿರಸ್ತ್ರಾಣಯುಕ್ತರಾದ ಸನ್ನದ್ಧರಾದ ಯೋಧರು ಗದೆಗಳಿಂದ ಮುಸಲಗಳಿಂದ ಯಮದಂಡದಂಥ ಪರಿಘಗಳಿಂದ ಯುಕ್ತರಾಗಿ ಚೆನ್ನಾಗಿ ಗರ್ಜನ ಮಾಡುತ್ತ ಇದಿರಾಳಿಯನ್ನು ಆಹ್ವಾನಿಸುತ್ತ ಕುಣಿಯುತ್ತ ಪರಸ್ಪರ ಆಕ್ರಮಣಗೈದರು.

ತತೋ ನಿಜಘ್ನುರನ್ಯೋನ್ಯಂ ಪೇತುಶ್ಚಾನ್ಯೋನ್ಯತಾಡಿತಾಃ ।
ವಮಂತೋ ರುಧಿರಂ ಗಾತ್ರೈರ್ವಿಮಸ್ತಿಷ್ಕೇಕ್ಷಣಾ ಯುಧಿ ॥೨೧॥

ಪರಸ್ಪರ ಹೊಡೆದರು, ಪರಸ್ಪರ ಹೊಡೆಸಿಕೊಂಡು ಬಿದ್ದರು. ರಣರಂಗದಲ್ಲಿ ಶರೀರದಿಂದ ನೆತ್ತರು ಹರಿಸುತ್ತ ತಲೆಯ ಮಿದುಳನ್ನು ಕಳೆದುಕೊಂಡರು, ಕಣ್ಣುಗಳನ್ನು ಕಳೆದುಕೊಂಡರು

ದಂತಪೂರ್ಣೈಃ ಸರುಧಿರೈರ್ವಕ್ತ್ರೈರ್ದಾಡಿಮಸನ್ನಿಭೈಃ ।
ಜೀವಂತ ಇವ ಚಾಪ್ಯೇಕೇ ತಸ್ಥುಃ ಶಸ್ತ್ರೌಘಬೃಂಹಿತಾಃ ॥೨೨॥

ಕೆಲವರು ಶಸ್ತ್ರಸಮೂಹದಿಂದ ತುಂಬಿಕೊಂಡು ರಕ್ತಸಿಕ್ತವಾದ ಹಲ್ಲುಗಳಿಂದ ಕೂಡಿ ದಾಳಿಂಬೆ ಹಣ್ಣಿನಂತಾದ ಮುಖಗಳಿಂದ ಜೀವಂತರಾಗಿಯೇ ಇರುವಂತೆ ಕಂಡುಬಂದರು.

ಪರಶ್ವಧೈಶ್ಚಾಪ್ಯಪರೇ ಪಟ್ಟಿಸೈರಸಿಭಿಸ್ತಥಾ ।
ಶಕ್ತಿಭಿರ್ಭಿಂಡಿಪಾಲೈಶ್ಚ ನಖರಪ್ರಾಸತೋಮರೈಃ ॥೨೩॥

ತತಕ್ಷುಶ್ಚಿಚ್ಛಿದುಶ್ಚಾನ್ಯೇ ಬಿಭಿದುಶ್ಚಿಕ್ಷಿಪುಸ್ತಥಾ ।
ಸಂಚಕರ್ತುಶ್ಚ ಜಘ್ನುಶ್ಚ ರಾಜನ್ ಯೋಧಾ ಮಹಾರಣೇ ॥೨೪॥

ಪರಶು ಪಟ್ಟಿಶ ಖಡ್ಗ ಶಕ್ತಿ ಭಿಂದಿಪಾಲ ನಖರ ಪ್ರಾಸ ತೋಮರಗಳಿಂದ ಕೆಲವರು ಯೋಧರು ಆ ಮಹಾಯುದ್ಧದಲ್ಲಿ ಪರಸ್ಪರ ಕಡಿದರು, ತುಂಡು ಮಾಡಿದರು, ಗಾಯಗೊಳಿಸಿದರು, ಎಸೆದರು,ಕತ್ತರಿಸಿದರು ಮತ್ತು ಕೊಂದರು.

ಪೇತುರನ್ಯೋನ್ಯನಿಹತಾ ವ್ಯಸವೋ ರುಧಿರೋಕ್ಷಿತಾಃ ।
ಕ್ಷರಂತಃ ಸ್ವರಸಂ ರಕ್ತಂ ಪ್ರಕೃತ್ತಾಶ್ಚಂದನಾ ಇವ ॥೨೫॥

ಅನ್ಯೋನ್ಯವಾಗಿ ಹೊಡೆದುಕೊಂಡು ರಕ್ತಸಿಕ್ತರಾಗಿ ಸತ್ತುಬಿದ್ದರು. ಕತ್ತರಿಸಿದ ಚಂದನವೃಕ್ಷವು ಕೆಂಪಾದ ತನ್ನ ರಸವನ್ನು ಸುರಿಸುವಂತೆ, ರಕ್ತವನ್ನು ಸುರಿಸಿದರು.

ರಥೈ ರಥಾ ವಿನಿಹತಾ ಹಸ್ತಿಭಿಶ್ಚಾಪಿ ಹಸ್ತಿನಃ ।
ನರೈರ್ನರಾ ಹತಾಃ ಪೇತುರಶ್ವಾಶ್ಚಾಶ್ವೈಃ ಸಹಸ್ರಶಃ ॥೨೬॥

ರಥಗಳಿಂದ ರಥಗಳು ಆನೆಗಳಿಂದ ಆನೆಗಳು ಪದಾತಿಗಳಿಂದ ಪದಾತಿಗಳು ಅಶ್ವಗಳಿಂದ ಅಶ್ವಗಳು ಸಹಸ್ರಾರು ಸಂಖ್ಯೆಯಲ್ಲಿ ಹತವಾಗಿ ಬಿದ್ದವು.

ಧ್ವಜಾಃ ಶಿರಾಂಸಿ ಚ್ಛತ್ರಾಣಿ ದ್ವಿಪಹಸ್ತಾ ನೃಣಾಂ ಭುಜಾಃ ।
ಕ್ಷುರೈರ್ಭಲ್ಲಾರ್ಧಚಂದ್ರೈಶ್ಚ ಚ್ಛಿನ್ನಾಃ ಪೇತುರ್ಮಹೀತಳೇ ॥೨೭॥

ಧ್ವಜಗಳು ಶಿರಸ್ಸುಗಳು ಛತ್ರಗಳು ಆನೆಯ ಸೊಂಡಿಲುಗಳು ಯೋಧರ ತೋಳುಗಳು ಕ್ಷುರ ಭಲ್ಲೆ ಅರ್ಧಚಂದ್ರಗಳಿಂದ ಕಡಿದು ನೆಲದಲ್ಲಿ ಬಿದ್ದುವು.

ವಧ್ಯತಾಂ ದಾರುಣಾಃ ಶಬ್ದಾಃ ಪತತಾಂ ಸ್ತನತಾಮಪಿ ।
ನರಾಶ್ವೇಭರಥಾನಾಂ ಹಿ ನರಾಶ್ವೇಭರಥೈಸ್ತಥಾ ॥೨೮॥

ಪದಾತಿ–ಅಶ್ವ–ಗಜ–ರಥ– ಸೈನಿಕರಿಂದ, ಪದಾತಿ–ಅಶ್ವ–ಗಜ–ರಥ ಸೈನಿಕರು ಹತರಾಗುವಾಗ, ಬೀಳುವಾಗ, ಕೂಗಿಕೊಳ್ಳುವಾಗ ದಾರುಣವಾದ ಶಬ್ದಗಳು ಕೇಳಿಬಂದುವು.

ನರಾಶ್ಚ ನಾಗಾಶ್ಚ ರಥಾ ಹಯಾನ್ ಮಮ್ಮೃದುರಾಹವೇ ॥೨೯॥
ಅಶ್ವಾರೋಹೈರ್ಹತಾಃ ಶೂರಾಶ್ಛಿನ್ನಹಸ್ತಾಶ್ಚ ದಂತಿನಃ ।
ಸಪತಾಕಾಧ್ವಜಾಃ ಪೇತುರ್ವಿಶೀರ್ಣಾ ಇವ ಪರ್ವತಾಃ ॥೩೦॥

ಪದಾತಿ–ಗಜ–ರಥಗಳು ಅಶ್ವಗಳನ್ನು ಯುದ್ಧದಲ್ಲಿ ಕೆಡವಿದುವು. ಅಶ್ವಾರೋಹಿಗಳು ಪದಾತಿಗಳನ್ನು ಕೊಂದರು, ಆನೆಗಳ ಸೊಂಡಿಲುಗಳನ್ನು ಕತ್ತರಿಸಿದರು. ಆಗ ಕಡಿದ ಬೆಟ್ಟಗಳಂತೆ ಆನೆಗಳು ಪತಾಕೆ, ಧ್ವಜಗಳೊಂದಿಗೇ ನೆಲದಲ್ಲಿ ಬಿದ್ದವು.

ಪತ್ತಿಭಿಶ್ಚ ಸಮಾಪ್ಲುತ್ಯ ದ್ವಿರದಾಃ ಸ್ಯಂದನಾಸ್ತಥಾ ।
ಹತಾಶ್ಚ ಹನ್ಯಮಾನಾಶ್ಚ ಪತಿತಾಶ್ಚೈವ ಸರ್ವಶಃ ॥೩೧॥

ಪದಾತಿಗಳಿಂದ ಹೊಡೆಸಿಕೊಂಡು ಎಲ್ಲ ಆನೆ ರಥ ಸೈನ್ಯಗಳು ಹತರಾಗಿಯೋ ಅಥವಾ ಹತರಾಗುತ್ತಿರುವಾಗಲೋ ಬೀಳುತ್ತಿದ್ದವು.

ಅಶ್ವಾರೋಹಾಃ ಸಮಾಸಾದ್ಯ ತ್ವರಿತಾಃ ಪತ್ತಿಭಿರ್ಹತಾಃ ।
ಸಾದಿಭಿಃ ಪತ್ತಿಸಂಘಾಶ್ಚ ನಿಹತಾ ಯುಧಿ ಶೇರತೇ ॥೩೨॥

ಅಶ್ವಾರೋಹಿಗಳೂ ಪದಾತಿಗಳಿಂದ ಹೊಡೆಸಿಕೊಂಡು, ಪದಾತಿಗಳು ಅಶ್ವಾರೋಹಿಗಳಿಂದ ಹೊಡೆಸಿಕೊಂಡು ರಣರಂಗದಲ್ಲಿ ಒರಗಿದರು.

ಮೃದಿತಾನೀವ ಪದ್ಮಾನಿ ಪ್ರಮ್ಲಾನಾ ಇವ ಚ ಸ್ರಜಃ ।
ಹತಾನಾಂ ವದನಾನ್ಯಾಸನ್ ಗಾತ್ರಾಣಿ ಚ ಮಹಾಹವೇ ॥೩೩॥

ಮಹಾರಣದಲ್ಲಿ ಹತರಾದ ಯೋಧರ ಮುಖಗಳು ಹೊಸಕಿದ ಕಮಲಗಳಂತೆ, ಶರೀರಗಳು ಬಾಡಿದ ಹೂಮಾಲೆಗಳಂತೆ ನಿಷ್ಪಭವಾದುವು.

ರೂಪಾಣ್ಯತ್ಯರ್ಥಕಾಂತಾನಿ ದ್ವಿರದಾಶ್ವನೃಣಾಂ ನೃಪ ।
ಸಮುನ್ನಾನೀವ ವಸ್ತ್ರಾಣಿ ಯಯುರ್ದುರ್ದರ್ಶತಾಂ ಪರಾಮ್ ॥೩೪॥

ಗಜ ಅಶ್ವ ಪದಾತಿಗಳ ಅತಿಸುಂದರವಾದ ರೂಪಗಳು ಕೆಸರಲ್ಲಿ ಅದ್ದಿದ ಬಟ್ಟೆಗಳಂತೆ ಸರ್ವಥಾ ಕಣ್ಣಿಂದ ನೋಡಲಾಗದಂಥ ಸ್ಥಿತಿಯನ್ನು ಹೊಂದಿದುವು.

ಹಸ್ತಿಭಿಸ್ತು ಮಹಾಮಾತ್ರಾಸ್ತವ ಪುತ್ರೇಣ ಚೋದಿತಾಃ ।
ಧೃಷ್ಟದ್ಯುಮ್ನಂ ಹತೇತ್ಯಾಶು ಕ್ರುದ್ಧಾಃ ಪಾರ್ಷತಮಭ್ಯಯುಃ ॥೩೫॥

ನಿನ್ನ ಮಗನಿಂದ ಗಜಾರೋಹಿಗಳು 'ಧೃಷ್ಟದ್ಯುಮ್ನನನ್ನು ಸಂಹರಿಸಿರಿ' ಎನ್ನುವ ಆಜ್ಞೆಯನ್ನು ಪಡೆದು, ಕ್ರುದ್ಧರಾಗಿ, ಧೃಷ್ಟದ್ಯುಮ್ನನ ಬಳಿಗೆ ಧಾವಿಸಿದರು.

ಪ್ರಾಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಪ್ರವರಾ ಗಜಯೋಧಿನಃ ।
ಅಂಗಾ ವಂಗಾಶ್ಚ ಪುಂಡ್ರಾಶ್ಚ ಮಾಗಧಾಸ್ತಾಮ್ರಲಿಪ್ತಿಕಾಃ ॥೩೬॥

ಮೇಕಲಾಃ ಕೋಶಲಾ ಮದ್ರಾ ದಶಾರ್ಣಾ ನಿಷಧಾಸ್ತಥಾ ।
ಗಜಯುದ್ಧೇಷು ಕುಶಲಾಃ ಕಲಿಂಗೈಃ ಸಹ ಭಾರತ ॥೩೭॥

ಪೂರ್ವದೇಶದವರು ದಕ್ಷಿಣದೇಶದವರು ಅಂಗ ವಂಗ ಪುಂಡ್ರ ಮಗಧ ತಾಮ್ರಲಿಪ್ತಿಕ ಮೇಕಲ ಕೋಶಲ ಕಲಿಂಗ ದೇಶಗಳ ಶ್ರೇಷ್ಠಗಜಾರೋಹಿ ಸೈನಿಕರು ಧೃಷ್ಟದ್ಯುಮ್ನನ ಮೇಲೇರಿ ಹೋದರು.

ಶರತೋಮರನಾರಾಚೈರ್ವರ್ಷಿಮನ್ತ ಇವಾಂಬುದಾಃ ।
ಸಿಷಿಚುಸ್ತೇ ತತಃ ಸರ್ವೇ ಪಾಂಚಾಲಬಲಮಾಹವೇ ॥೩೮॥

ಮಳೆಮೋಡಗಳಂತೆ ಅವರು ಎಲ್ಲರೂ ರಣರಂಗದಲ್ಲಿ ಧೃಷ್ಟದ್ಯುಮ್ನನ ಸೈನ್ಯದ ಮೇಲೆ ಶರ ತೋಮರ ನಾರಾಚಗಳ ಮಳೆಗರೆದರು.

ತಾನಭಿದ್ರವತೋ ನಾಗಾನ್ ಮದವೇಗಸಮುದ್ಧತಾನ್ ।
ವಿಪಾಠಕ್ಷುರನಾರಾಚೈರ್ಧೃಷ್ಟದ್ಯುಮ್ನೋ ಹ್ಯವೀವೃಷತ್ ॥೩೯॥

ಮದ ಮತ್ತು ವೇಗಗಳಿಂದ ಬಹಳ ಉದ್ಧತವಾದ, ನುಗ್ಗಿ ಬರುತ್ತಿದ್ದ ಆನೆಗಳ ಮೇಲೆ ಧೃಷ್ಟದ್ಯುಮ್ನ ವಿಪಾಠ ಕ್ಷುರ ನಾರಾಚಗಳ ಮಳೆಗರೆದ.

ಏಕೈಕಂ ದಶಭಿಃ ಷಡ್ಭಿರಷ್ಟಾಭಿರಪಿ ಪಾರ್ಷತಃ ।
ದ್ವಿರದಾನಭಿವಿವ್ಯಾಧ ಕ್ಷಿಪ್ರಂ ಗಿರಿನಿಭಾನ್ ಶರೈಃ ॥೪೦॥

ಬೆಟ್ಟದಷ್ಟು ಗಾತ್ರದ ಆ ಆನೆಗಳನ್ನು ಪ್ರತಿಯೊಂದನ್ನೂ ಹತ್ತು ಆರು ಎಂಟು ಬಾಣಗಳಿಂದ ಧೃಷ್ಟದ್ಯುಮ್ನ ಬೇಗನೆ ಹೊಡೆದ.

ಪ್ರಚ್ಛಾದ್ಯಮಾನಂ ದ್ವಿರದೈರ್ಮೇಘೈರಿವ ದಿವಾಕರಮ್ ।
ಪರ್ಯಯುಃ ಪಾಂಡುಪಾಂಚಾಲಾ ನದಂತೋ
ಹ್ಯಾತ್ತಕಾರ್ಮುಕಾಃ ॥೪೧॥

ಸೂರ್ಯನನ್ನು ಮೋಡಗಳಂತೆ ಧೃಷ್ಟದ್ಯುಮ್ನನನ್ನು ಆನೆಗಳು ಆವರಿಸಿದಾಗ

ಪಾಂಡವ ಪಾಂಚಾಲ ಸೈನಿಕರು ಬಿಲ್ಲು ಹಿಡಿದು ಗರ್ಜನೆ ಮಾಡುತ್ತ ಅವನನ್ನು ಸುತ್ತುವರಿದರು.

ತಾನ್ ನಾಗಾನಭಿವರ್ಷಂತೋ ಜ್ಯಾತಳತ್ರವಿನಾದಿನಃ ।
ವೀರನೃತ್ಯಂ ಪ್ರನೃತ್ಯಂತಃ ಶೂರತಾಲಪ್ರಚೋದಿತೈಃ ।
ನಕುಲಃ ಸಹದೇವಶ್ಚ ದ್ರೌಪದೇಯಾಃ ಪ್ರಭದ್ರಕಾಃ ॥೪೨॥

ಸಾತ್ಯಕಿಶ್ಚ ಶಿಖಂಡೀ ಚ ಚೇಕಿತಾನಶ್ಚ ವೀರ್ಯವಾನ್ ।
ಸಮಂತಾತ್ ಸಿಷಿಚುರ್ವೀರಾ ಮೇಘಾಸ್ತೋಯೈರಿವಾಚಲಾನ್ ॥೪೩॥

ಆ ಸೈನಿಕರು ಬಿಲ್ಲಿನ ಹೆದೆ ಕೈಚೀಲಗಳ ಶಬ್ದಮಾಡುತ್ತ ಆನೆಗಳ ಮೇಲೆ ಬಾಣಗಳ ಮಳೆಗರೆಯುತ್ತ ವೀರನೃತ್ಯ ಮಾಡಿದರು, ಶೂರರು ಚಪ್ಪಾಳೆಗಳಿಂದ ಅದನ್ನು ಹುರಿದುಂಬಿಸಿದರು. ನಕುಲ ಸಹದೇವ ದ್ರೌಪದೀಪುತ್ರರು ಪ್ರಭದ್ರಕರು ಸಾತ್ಯಕಿ ಶಿಖಂಡಿ ವೀರನಾದ ಚೇಕಿತಾನ ಇವರೆಲ್ಲರೂ ಬೆಟ್ಟದ ಮೇಲೆ ಮೋಡಗಳು ಮಳೆಗರೆವಂತೆ ಎಲ್ಲೆಡೆ ಆನೆಗಳ ಮೇಲೆ ಬಾಣಗಳ ಮಳೆಗರೆದರು.

ತೇ ಮ್ಲೇಚ್ಛೈಃ ಪ್ರೇಷಿತಾ ನಾಗಾ ನರಾನಶ್ವಾನ್ ರಥಾನಪಿ ।
ಹಸ್ತೈರಾಕ್ಷಿಪ್ಯ ಮಮೃದುಃ ಪದ್ಭಿಶ್ಚಾಪ್ಯತಿಮನ್ಯವಃ ॥೪೪॥

ಮ್ಲೇಚ್ಛರು ಕಳಿಸಿಕೊಟ್ಟ ಆ ಆನೆಗಳು ಬಹಳ ಕೋಪ ಉಳ್ಳವುಗಳು. ಪದಾತಿಗಳನ್ನು ಅಶ್ವಗಳನ್ನು ರಥಗಳನ್ನೂ ಸೊಂಡಿಲುಗಳಿಂದ ಮತ್ತು ಕಾಲುಗಳಿಂದ ಎತ್ತಿಹಾಕಿ ತುಳಿದು ಧ್ವಂಸ ಮಾಡಿದುವು.

ಬಿಭಿದುಶ್ಚ ವಿಷಾಣಾಗ್ರೈಃ ಸಮುತ್ಕ್ಷಿಪ್ಯ ಚ ಚಿಕ್ಷಿಪುಃ ।
ವಿಷಾಣಭಗ್ನಾಶ್ಚಾಪ್ಯನ್ಯೇ ತದಾ ಪೇತುರ್ವಿಭೀಷಣಮ್ ॥೪೫॥

ಪದಾತಿ ಅಶ್ವರಥಗಳನ್ನು ಆನೆಗಳು ದಂತದ ತುದಿಗಳಿಂದ ಚುಚ್ಚಿ ಎತ್ತಿ ನೆಲಕ್ಕೆ ಅಪ್ಪಳಿಸಿದುವು. ದಂತದ ತುದಿಯಿಂದ ಸೀಳಾದವರು ಕೆಲವರು ಭೀಕರವಾಗಿ ಪತನ ಹೊಂದಿದರು.

ಪ್ರಮುಖೇ ವರ್ತಮಾನಂ ತು ದ್ವಿಪಮಂಗಸ್ಯ ಸಾತ್ಯಕಿಃ ।
ನಾರಾಚೇನೋಗ್ರವೇಗೇನ ಭಿತ್ತ್ವಾ ಮರ್ಮಾಣ್ಯತಾಡಯತ್ ॥೪೬॥

ಸಾತ್ಯಕಿಯು ತನ್ನೆದುರಿಗೆ ಬಂದಿದ್ದ ಅಂಗರಾಜನ ಆನೆಯನ್ನು ಉಗ್ರವೇಗದ ಬಾಣದಿಂದ ಭೇದಿಸಿ ಮರ್ಮಸ್ಥಾನಗಳಿಗೆ ಹೊಡೆದ.

ತಸ್ಯಾವರ್ಜಿತಕಾಯಸ್ಯ ದ್ವಿರದಾದುತ್ಪತಿಷ್ಯತಃ ।
ನಾರಾಚೇನಾಹನದ್ ವಕ್ಷಃ ಸಾತ್ಯಕಿಃ ಸೋಽಪತದ್ ಭುವಿ ॥೪೭॥

ಆಗ ಆ ಆನೆಯ ಮೇಲಿಂದ ಅಂಗರಾಜ ಕೆಳಗೆ ಹಾರುವುದಕ್ಕಾಗಿ ಮೈಯನ್ನು ಬಗ್ಗಿಸಿಕೊಂಡು ಮೇಲೆ ಮಾಡುತ್ತಿದ್ದಾಗ ಅವನ ಎದೆಗೆ ಸಾತ್ಯಕಿ ಬಾಣದಿಂದ ಹೊಡೆದ. ಆತ ನೆಲದಲ್ಲಿ ಸತ್ತುಬಿದ್ದ.

ಈ ಅಂಗರಾಜ ಹಿಂದೆ ಹನ್ನೆರಡನೇ ದಿನದ ಯುದ್ಧದಲ್ಲಿ ಭೀಮನಿಂದ ಹತನಾದ ಅಂಗರಾಜನಲ್ಲ. ಇನ್ನೊಬ್ಬ ಅಂಗರಾಜ.

ಪುಂಡ್ರಸ್ಯಾಪತತೋ ನಾಗಂ ಚಲಂತಮಿವ ಪರ್ವತಮ್ ।
ಸಹದೇವಃ ಪ್ರಯತ್ನಾಸ್ಪೈರ್ನಾರಾಚೈರಹನತ್ ತ್ರಿಭಿಃ ॥೪೮॥

ನಡೆದಾಡುವ ಬೆಟ್ಟದಂತಿದ್ದ ಪುಂಡ್ರರಾಜನ ಆನೆ ಇದಿರಿಗೆ ನುಗ್ಗಿ ಬಂದಾಗ ಸಹದೇವ ಪ್ರಯತ್ನಪೂರ್ವಕವಾಗಿ ಮೂರು ಬಾಣಗಳನ್ನು ಎಸೆದು ಅದನ್ನು ಹೊಡೆದ.

ವಿಪತಾಕಂ ವಿಯಂತಾರಂ ವಿವರ್ಮಧ್ವಜಜೀವಿತಮ್ ।
ತಂ ಕೃತ್ವಾ ದ್ವಿರದಂ ಭೂಯಃ ಸಹದೇವೋಽಂಗಮಭ್ಯಯಾತ್ ॥೪೯॥

ಆ ಆನೆಯನ್ನು ಸಹದೇವನು ಪತಾಕೆ ಇಲ್ಲದಂತೆ, ಮಾವುತನಿಲ್ಲದಂತೆ, ಕವಚಧ್ವಜ ರಹಿತವಾಗಿ, ಕೇವಲ ಬದುಕಿರುವಂತೆ ಮಾಡಿ ಪುನಃ ಪುಂಡ್ರರಾಜನನ್ನು ಇದಿರಿಸಿದ.

ಸಹದೇವಂ ತು ನಕುಲೋ ವಾರಯಿತ್ವಾಂಗಮಾರ್ದಯತ್ ।
ನಾರಾಚೈರ್ಯಮದಂಡಾಭೈಸ್ತ್ರಿಭಿರ್ನಾಗಂ ಶತೇನ ತಮ್ ॥೫೦॥

ಆದರೆ ನಕುಲನು ಬಂದು ಸಹದೇವನನ್ನು ತಡೆದು ತಾನೇ ಅಂಗರಾಜನನ್ನು ಯಮದಂಡದಂಥ ಮೂರು ಬಾಣಗಳಿಂದ ಹೊಡೆದ. ಆನೆಯನ್ನು ನೂರು ಬಾಣಗಳಿಂದ ಹೊಡೆದ.

ಇಲ್ಲಿ 'ಅಂಗರಾಜ'ನೆಂದರೆ ಅಂಗದೇಶದ ಇನ್ನೊಬ್ಬ ರಾಜ. ಅವನ ಹೆಸರು ಪುಂಡ್ರ ಎಂದು 48ನೇ ಶ್ಲೋಕ ಹೇಳಿದೆ. ಅದರಿಂದ ವಿರೋಧವಿಲ್ಲ. ಮತ್ತು 'ವಿ-ವರ್ಮ ಧ್ವಜಜೀವಿತಂ' ಎಂದರೆ ಕವಚ ಧ್ವಜ ಪ್ರಾಣಗಳು ಮೂರೂ ಇಲ್ಲದ್ದೆಂದು ಅರ್ಥವಿಟ್ಟುಕೊಂಡರೆ ಆಗಲೆ ಪ್ರಾಣಬಿಟ್ಟಿದ್ದ ಆನೆಗೆ ನೂರು ಬಾಣಗಳನ್ನು ನಕುಲ ಏಕೆ ಎಸೆಯುತ್ತಾನೆ? ಅದರಿಂದ 'ವರ್ಮ ಧ್ವಜಗಳು ಇಲ್ಲದೆಯೆ ಬದುಕಿರುವಂತೆ ಸಹದೇವ ಮಾಡಿದ್ದನೆಂ'ದು ಹೇಳಬೇಕು. ಅಥವಾ ಇದೀಗ ಬೇರೆ ಒಂದು ಆನೆಗೆ ನಕುಲ ಬಾಣಗಳನ್ನೆಸೆಯುತ್ತಿದ್ದಾನೆ ಎನ್ನಬೇಕು.

ದಿವಾಕರಕರಪ್ರಖ್ಯಾನಂಗಶ್ಚಿಕ್ಷೇಪ ತೋಮರಾನ್ ।
ನಕುಲಾಯ ಶತಾನ್ಯಷ್ಟೌ ತ್ರಿಧೈಕೈಕಂ ತು ಸೋಽಚ್ಛಿನತ್ ॥೫೧॥

ಅಂಗರಾಜ ಸೂರ್ಯಕಿರಣಗಳಂಥ ಎಂಟುನೂರು ತೋಮರಗಳನ್ನು ನಕುಲನ ಮೇಲೆ ಎಸೆದ. ಅವೆಲ್ಲವನ್ನೂ ಒಂದೊಂದನ್ನು ಮೂರು ಮೂರು ತುಂಡುಗಳಾಗಿ ನಕುಲ ಕತ್ತರಿಸಿದ.

ತಥಾಽರ್ಧಚಂದ್ರೇಣ ಶಿರಸ್ತಸ್ಯ ಚಿಚ್ಛೇದ ಪಾಂಡವಃ ।
ಸ ಪಪಾತ ಹತೋ ಮ್ಲೇಚ್ಛಸ್ತೇನೈವ ಸಹ ದಂತಿನಾ ॥೫೨॥

ಮತ್ತು ಅರ್ಧಚಂದ್ರಬಾಣದಿಂದ ಅಂಗರಾಜನ ಶಿರವನ್ನೇ ತರಿದ. ಮ್ಲೇಚ್ಛನಾದ ಅಂಗರಾಜ ಆ ಆನೆಯೊಂದಿಗೇ ತಾನೂ ಸತ್ತುಬಿದ್ದ.

ಅಥಾಂಗಪುತ್ರೇ ನಿಹತೇ ಹಸ್ತಿಶಿಕ್ಷಾವಿಶಾರದೇ ।
ಅಂಗಾಃ ಕ್ರುದ್ಧಾ ಮಹಾಮಾತ್ರಾ ನಾಗೈರ್ನಕುಲಮಭ್ಯಯುಃ ॥೫೩॥

ಹಸ್ತಿಶಿಕ್ಷಾವಿಶಾರದನಾದ ಅಂಗಪುತ್ರನು ಹೀಗೆ ಹತನಾದಾಗ ಬಲುಕುಪಿತರಾದ ಅಂಗರಾಜ್ಯದ ಗಜಾರೋಹಿಗಳು ಗಜಗಳನ್ನೇರಿ ನಕುಲನ ಕಡೆಗೆ ನುಗ್ಗಿ ಬಂದರು.

ಇಲ್ಲಿ ಪುಂಡ್ರನೆಂಬ ಮ್ಲೇಚ್ಛ ಅಂಗರಾಜನನ್ನು 'ಅಂಗಪುತ್ರ' ಎಂದುದರಿಂದ ಈತ ಹಿಂದೆ ಹನ್ನೆರಡನೆ ದಿನದ ಯುದ್ಧದಲ್ಲಿ ಭೀಮನಿಂದ ಹತನಾದ ಮ್ಲೇಚ್ಛ ಅಂಗರಾಜನ ಪುತ್ರ ಎಂದಂತಾಯಿತು.

ಚಲತ್ಪತಾಕೈಃ ಸುಮುಖೈರ್ಹೇಮಕಕ್ಷ್ಯಾತನುಚ್ಛದೈಃ ।
ಮಿಮರ್ದಿಷಂತಸ್ತ್ವರಿತಾಃ ಪ್ರದೀಪ್ತೈರಿವ ಪರ್ವತೈಃ ॥೫೪॥

ಮೇಕಲೋತ್ಕಲಕಾಲಿಂಗಾ ನಿಷಧಾಸ್ತಾಮ್ರಲಿಪ್ತಿಕಾಃ ।
ಶರತೋಮರವರ್ಷಾಣಿ ವಿಮುಂಚಂತೋ ಜಿಘಾಂಸವಃ ॥೫೫॥

ಚಲಿಸುವ ಪತಾಕೆಗಳಿಂದ ಸುಂದರ ಮುಖಗಳಿಂದ ಕೂಡಿದ ಆ ಆನೆಗಳು ಬಂಗಾರದ ಕವಚ ಹಗ್ಗಗಳಿಂದ ಕಾಳ್ಗಿಚ್ಚಿನಿಂದ ಹೊತ್ತಿ ಉರಿವ ಬೆಟ್ಟದಂತೆ ಕಂಡುಬಂದುವು. ಮೇಕಲ ಉತ್ಕಲ ಕಲಿಂಗ ನಿಷಧ ತಾಮ್ರಲಿಪ್ತಿಕ ದೇಶಗಳ ಯೋಧರು ಆ ಆನೆಗಳ ಮೂಲಕ ಪಾಂಡವರ ಸೈನ್ಯವನ್ನು ಮರ್ದಿಸುವಾಸೆಯಿಂದ ಬೇಗನೆ ಬಂದು ಶರ ತೋಮರಗಳ ಮಳೆಗರೆದು ಕೊಲ್ಲಲು ಬಯಸಿದರು.

ತೈಶ್ಚಾದ್ಯಮಾನಂ ನಕುಲಂ ನಿಶಾಕರಮಿವಾಂಬುದೈಃ ।
ಪರಿಪೇತುಃ ಸುಸಂರಬ್ಧಾಃ ಪಾಂಡುಪಾಂಚಾಲಸಾತ್ಯಕಾಃ ॥೫೬॥

ಮೋಡಗಳು ಚಂದ್ರನನ್ನು ಮುಚ್ಚುವಂತೆ ಅವರು ನಕುಲನನ್ನು ಆವರಿಸುವಾಗ ಪಾಂಡವ ಪಾಂಚಾಲ ಸಾತ್ಯಕ ಸೈನಿಕರು ಕೋಪಗೊಂಡು ಸುತ್ತಲೂ ಆಕ್ರಮಿಸಿದರು.

ತತಸ್ತದಭವದ್ಯುದ್ಧಂ ರಥಿನಾಂ ಹಸ್ತಿಭಿಃ ಸಹ ।
ಸೃಜತಾಂ ಶರವರ್ಷಾಣಿ ತೋಮರಾಂಶ್ಚ ಸಹಸ್ರಶಃ ॥೫೭॥

ಆಗ ರಥಿಕರಿಗೆ ಆನೆಗಳೊಂದಿಗೆ ಯುದ್ಧ ನಡೆಯಿತು. ರಥಿಕರು ಬಾಣಗಳ ಮಳೆಗರೆದರು ಮತ್ತು ಸಾವಿರಾರು ತೋಮರಗಳನ್ನೆಸೆದರು.

ನಾಗಾನಾಂ ಪ್ರಾಸ್ಫುಟನ್ ಕುಂಭಾ ವರ್ಮಾಣಿ ವಿವಿಧಾನಿ ಚ ।
ದಂತಾಶ್ಚ್ಯವಾತಿವಿದ್ಧಾನಾಂ ನಾರಾಚೈರ್ಹೇಮಭೂಷಣೈಃ ॥೫೮॥

ಆನೆಗಳ ಕುಂಭಸ್ಥಳಗಳು ಒಡೆದುವು. ನಾನಾ ಬಗೆಯ ಕವಚಗಳು ಪುಡಿಯಾದುವು. ದಂತಗಳು ಮುರಿದುವು. ಏಕೆಂದರೆ ಬಂಗಾರದಿಂದ ಅಲಂಕೃತವಾದ ಬಾಣಗಳಿಂದ ಆನೆಗಳು ಬಹಳವಾಗಿ ಹೊಡೆಸಿಕೊಂಡುವು.

ತೇಷಾಮಷ್ಟೌ ಮಹಾನಾಗಾಂಶ್ಚತುಃಷಷ್ಟ್ಯಾ ಸುತೇಜನೈಃ ।
ನಾರಾಚೈಃ ಸಹದೇವಸ್ತಾನ್ ಪಾತಯಾಮಾಸ ಸಾದಿಭಿಃ ॥೫೯॥

ಅವುಗಳಲ್ಲಿ ಎಂಟು ಆನೆಗಳನ್ನು ಸವಾರರೊಂದಿಗೆ ಹರಿತವಾದ ಅರವತ್ತನಾಲ್ಕು ಬಾಣಗಳಿಂದ ಸಹದೇವನು ಹೊಡೆದು ಕೆಡವಿದ.

ಅಂಜೋಗತಿಭಿರಾಯಮ್ಯ ಪ್ರಯತ್ನಾದ್ಧನುರುತ್ತಮಮ್ ।
ನಾರಾಚೈರಹನನ್ನಾಗಾನ್ ನಕುಲಃ ಕುಲನಂದನಃ ॥೬೦॥

ಕುಲನಂದನನಾದ ನಕುಲನು ತನ್ನ ಉತ್ತಮವಾದ ಧನುಸ್ಸನ್ನು ಪ್ರಯತ್ನ ಪೂರ್ವಕವಾಗಿ ಬಗ್ಗಿಸಿ ಚೆನ್ನಾಗಿ ಹಾರುವ ಬಾಣಗಳಿಂದ ಆನೆಗಳನ್ನು ಸಂಹರಿಸಿದ.

ತತಃ ಪಾಂಚಾಲಶೈನೇಯೌ ದ್ರೌಪದೇಯಾಃ ಪ್ರಭದ್ರಕಾಃ ।
ಶಿಖಂಡೀ ಚ ಮಹಾನಾಗಾನ್ ಸಿಷಿಚುಃ ಶರವೃಷ್ಟಿಭಿಃ ॥೬೧॥

ಧೃಷ್ಟದ್ಯುಮ್ನ ಸಾತ್ಯಕಿ ದ್ರೌಪದೀಪುತ್ರರು ಪ್ರಭದ್ರಕರು ಮತ್ತು ಶಿಖಂಡಿ ಎಲ್ಲರೂ ಮಹಾಗಜಗಳ ಮೇಲೆ ಬಾಣಗಳ ಮಳೆಗರೆದರು.

ತೇ ಪಾಂಡುಯೋಧಾಂಬುಧರೈಃ ಶತ್ರುದ್ವಿರದಪರ್ವತಾಃ ।
ಬಾಣವರ್ಷೈರ್ಹತಾಃ ಪೇತುರ್ವಜ್ರವರ್ಷೈರಿವಾಚಲಾಃ ॥೬೨॥

ಪಾಂಡವಯೋಧರೆಂಬ ಮೋಡಗಳು ಸುರಿಸಿದ ಬಾಣಗಳ ಮಳೆಯಿಂದ, ವಜ್ರಪಾತಗಳ ಮಳೆಗಳಿಂದ ಬೆಟ್ಟಗಳು ಬೀಳುವಂತೆ, ಶತ್ರುಗಜಗಳೆಂಬ ಬೆಟ್ಟಗಳು ಪುಡಿಯಾಗಿ ಬಿದ್ದುವು.

ಏವಂ ಹತ್ವಾ ತವ ಗಜಾಂಸ್ತೇ ಪಾಂಡುರಥಕುಂಜರಾಃ ।
ದ್ರುತಂ ಸೇನಾಂ ಚ ವರ್ಷಂತೋ ಭಿನ್ನಕೂಲಾಮಿವಾಪಗಾಮ್ ॥೬೩॥

ಪಾಂಡವರ ರಥ ಗಜ ಸೈನಿಕರು, ನಿನ್ನ ಗಜಸೇನೆಯನ್ನು ಸಂಹರಿಸಿ ನಿನ್ನ ಸಮಸ್ತ ಸೈನ್ಯದ ಮೇಲೂ ಆಯುಧಗಳ ಮಳೆಗರೆದರು. ದಡಗಳನ್ನೊಡೆದುಕೊಂಡ ನದಿ ದಿಕ್ಕು ದಿಕ್ಕುಗಳಿಗೆ ಹರಿಯುವಂತೆ ಸೈನ್ಯ ದಿಕ್ಕಾಪಾಲಾಗಿ ಓಡುವಂತೆ ಮಾಡಿದರು.

ತಾಂ ತೇ ಸೇನಾಂ ಸಮಾಲೋಡ್ಯ ಪಾಂಡುಪುತ್ರಸ್ಯ ಸೈನಿಕಾಃ ।
ವಿಕ್ಷೋಭಯಿತ್ವಾ ಚ ಪುನಃ ಕರ್ಣಂ ಸಮಭಿದುದ್ರುವುಃ ॥೬೪॥

ಹೀಗೆ ಪಾಂಡವರ ಸೈನಿಕರು ಕೌರವಸೈನ್ಯವನ್ನು ಚೆನ್ನಾಗಿ ಕದಡಿ ಕ್ಷೋಭೆಗೊಳಿಸಿ ತಿರುಗಿ ಕರ್ಣನ ಕಡೆಗೆ ಮುನ್ನುಗ್ಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ದ್ವಾವಿಂಶೋಽಧ್ಯಾಯಃ ॥೨೨॥

ಇಪ್ಪತ್ತಮೂರನೆಯ ಅಧ್ಯಾಯ

ಸಹದೇವನಿಂದ ದುಃಶಾಸನನ ಪರಾಜಯ.

ಸಂಜಯಃ

ಸಹದೇವಂ ತದಾ ಕ್ರುದ್ಧಂ ನಿಘ್ನಂತಂ ತವ ವಾಹಿನೀಮ್ ।
ದುಃಶಾಸನೋ ಮಹಾರಾಜ ಭ್ರಾತಾ ಭ್ರಾತರಮಭ್ಯಯಾತ್ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಮಹಾರಾಜ, ನಿನ್ನ ಸೈನ್ಯವನ್ನು ಸಹದೇವನು ಕ್ರುದ್ಧನಾಗಿ ಸಂಹರಿಸುತ್ತಿದ್ದಾಗ ಸೋದರ ದುಃಶಾಸನನು ಸೋದರನಾದ ಸಹದೇವನನ್ನು ಇದಿರಿಸಿದ.

ತೌ ಸಮೇತೌ ಮಹಾರಂಗೇ ದೃಷ್ಟ್ವಾ ತತ್ರ ನರಾಧಿಪಾಃ ।
ಸಿಂಹನಾದರವಾಂಶ್ಚಕ್ರುರ್ವಾಸಾಂಸ್ಯಾದುಧುವುಶ್ಚ ಹ ॥೨॥

ಸಹದೇವ ದುಃಶಾಸನರಿಬ್ಬರು ಮಹಾ ರಣಭೂಮಿಯಲ್ಲಿ ಸಂಧಿಸಿದುದನ್ನು ಕಂಡು ರಾಜರು ಸಿಂಹನಾದ ಮಾಡಿದರು. ಅಂಗವಸ್ತ್ರಗಳನ್ನು ಮೇಲಕ್ಕೆ ಹಾರಿಸಿದರು.

ತತ್ರ ಭಾರತ ರುಷ್ಟೇನ ತವ ಪುತ್ರೇಣ ಧನ್ವಿನಾ ।
ಪಾಂಡುಪುತ್ರಸ್ತ್ರಿಭಿರ್ಬಾಣೈರ್ವಕ್ಷಸ್ಯಭಿಹತೋ ಭೃಶಮ್ ॥೩॥

ರಾಜನೆ, ಧನುರ್ಧಾರಿಯಾದ ನಿನ್ನ ಪುತ್ರ ಕುಪಿತನಾಗಿ ಸಹದೇವನನ್ನು ಎದೆಯಲ್ಲಿ ಮೂರು ಬಾಣಗಳಿಂದ ಚೆನ್ನಾಗಿ ಹೊಡೆದ.

ಸಹದೇವಸ್ತತೋ ರಾಜನ್ ನಾರಾಚೈಸ್ತು ತವಾತ್ಮಜಮ್ ।
ವಿವ್ಯಾಧೋರಸಿ ಸಪ್ತತ್ಯಾ ಸಾರಥಿಂ ಚೇಷುಭಿಸ್ತ್ರಿಭಿಃ ॥೪॥

ರಾಜನೆ, ಸಹದೇವನು ಆಗ ನಿನ್ನ ಪುತ್ರನನ್ನು ಎಪ್ಪತ್ತು ಬಾಣಗಳಿಂದ ಎದೆಯಲ್ಲಿ ಹೊಡೆದ. ಮೂರು ಬಾಣಗಳಿಂದ ಸಾರಥಿಯನ್ನು ಹೊಡೆದ.

ದುಃಶಾಸನಸ್ತತಶ್ಚಾಪಂ ಛಿತ್ತ್ವಾ ರಾಜನ್ ಮಹಾಹವೇ ।
ಸಹದೇವಂ ತ್ರಿಸಪ್ತತ್ಯಾ ಬಾಹ್ವೋರುರಸಿ ಚಾರ್ಪಯತ್ ॥೫॥

ರಾಜನೆ, ದುಃಶಾಸನನು ಮಹಾಯುದ್ಧದಲ್ಲಿ ಸಹದೇವನ ಬಿಲ್ಲನ್ನು ಕಡಿದು ಅವನನ್ನು ತೋಳುಗಳಲ್ಲಿ ಎದೆಯಲ್ಲಿ ಎಪ್ಪತ್ತಮೂರು ಬಾಣಗಳಿಂದ ಹೊಡೆದ.

ಸಹದೇವಸ್ತತಃ ಕ್ರುದ್ಧಃ ಖಡ್ಗಮುದ್ಯಮ್ಯ ಮಾರಿಷ ।
ಆವಿಧ್ಯ ವ್ಯಸೃಜತ್ ತೂರ್ಣಂ ತವ ಪುತ್ರರಥಂ ಪ್ರತಿ ॥೬॥

ರಾಜನೆ, ಸಹದೇವನು ಆಗ ಕ್ರುದ್ಧನಾಗಿ ಖಡ್ಗವನ್ನೆತ್ತಿ ತಿರುಗಿಸಿ ವೇಗವಾಗಿ ನಿನ್ನ ಪುತ್ರನ ರಥದ ಕಡೆಗೆ ಎಸೆದ.

ಸಮಾರ್ಗಣಗುಣಂ ಚಾಪಂ ದ್ವಿಧಾ ಕೃತ್ವಾ ಮಹಾನಸಿಃ ।
ನಿಪಪಾತ ತತೋ ಭೂಮೌ ಚ್ಯುತಃ ಸರ್ಪ ಇವಾಂಬರಾತ್ ॥೭॥

ಆ ಖಡ್ಗವು ದುಃಶಾಸನನ ಬಿಲ್ಲನ್ನು ಬಾಣ ಹೆದೆಗಳೊಂದಿಗೆ ಎರಡಾಗಿ ಛೇದಿಸಿದಾಗ ಆಕಾಶದಿಂದ ಚ್ಯುತವಾದ ಸರ್ಪದಂತೆ ಭೂಮಿಯಲ್ಲಿ ಬಿದ್ದಿತು.

ಅಥಾನ್ಯದ್ಧನುರಾದಾಯ ಮಾದ್ರೇಯಃ ಕ್ರೋಧಮೂರ್ಛಿತಃ ।
ದುಃಶಾಸನಾಯ ಚಿಕ್ಷೇಪ ಬಾಣಮಂತಕರಂ ಪರಮ್ ॥೮॥

ಬಳಿಕ ಸಹದೇವ ಕ್ರೋಧಪರವಶನಾಗಿ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಬಹಳ ನಾಶಕರವಾದ ಬಾಣವನ್ನು ದುಃಶಾಸನನಿಗೆ ಎಸೆದ.

ತಮಾಪತಂತಂ ವೇಗೇನ ಯಮದಂಡಮಿವಾಪರಮ್ ।
ಖಡ್ಗೇನ ಶಿತಧಾರೇಣ ದ್ವಿಧಾ ಚಿಚ್ಛೇದ ಕೌರವಃ ॥೯॥

ವೇಗವಾಗಿ ತನ್ನ ಮೇಲೆ ಬೀಳುತ್ತಿದ್ದ ಇನ್ನೊಂದು ಯಮದಂಡದಂತಿದ್ದ ಆ ಬಾಣವನ್ನು ದುಃಶಾಸನ ಹರಿತವಾದ ಅಲುಗಿನ ಕತ್ತಿಯಿಂದ ಎರಡಾಗಿ ಛೇದಿಸಿದ.

ತತಸ್ತಂ ನಿಶಿತಂ ಖಡ್ಗಂ ಪ್ರಾವಿಧ್ಯತ್ ತಸ್ಯ ಸತ್ವರಮ್ ।
ಧನುಶ್ಚಾನ್ಯತ್ ಸಮಾದಾಯ ಶರಂ ಜಗ್ರಾಹ ವೀರ್ಯವಾನ್ ॥೧೦॥

ಹರಿತವಾದ ಆ ಖಡ್ಗವನ್ನೆ ತಿರುಗಿಸಿ ವೇಗವಾಗಿ ಸಹದೇವನ ಮೇಲೆಸೆದ, ವೀರ್ಯಶಾಲಿಯಾದ ದುಃಶಾಸನ. ಇನ್ನೊಂದು ಬಿಲ್ಲನ್ನೆತ್ತಿಕೊಂಡು ಬಾಣವನ್ನು ಹೂಡಿದ.

ತಮಾಪತಂತಂ ವೇಗೇನ ನಿಸ್ತ್ರಿಂಶಂ ನಿಶಿತೈಃ ಶರೈಃ ।
ಸಮರೇಽಪಾತಯದ್ ಧೃಷ್ಟಃ ಸಹದೇವೋ ಹಸನ್ನಿವ ॥೧೧॥

ವೇಗವಾಗಿ ತನ್ನ ಮೇಲೆ ಬೀಳುತ್ತಿದ್ದ ಖಡ್ಗವನ್ನು ಧೀರನಾದ ಸಹದೇವ ನಗುತ್ತ ಹರಿತವಾದ ಬಾಣಗಳಿಂದ ರಣಭೂಮಿಯಲ್ಲಿ ಬೀಳಿಸಿದ.

ತತೋ ಬಾಣಾಂಶ್ಚತುಷ್ಷಷ್ಟಿಂ ತವ ಪುತ್ರೋ ಮಹಾರಥಃ ।
ಸಹದೇವರಥೇ ತೂರ್ಣಂ ಪ್ರೇಷಯಾಮಾಸ ಭಾರತ ॥೧೨॥

ರಾಜನೆ, ಮಹಾರಥನಾದ ನಿನ್ನ ಪುತ್ರನು ಅರವತ್ತನಾಲ್ಕು ಬಾಣಗಳನ್ನು ಸಹದೇವನ ರಥಕ್ಕೆ ವೇಗವಾಗಿ ಎಸೆದ.

ಶರಾನಾಪತತಸ್ತೂರ್ಣಂ ಸಮರೇ ತಾನ್ ಸುವೇಗಿನಃ ।
ಏಕೈಕಂ ಪಂಚಭಿರ್ಬಾಣೈರ್ಮಾದ್ರೇಯಸ್ತು ಸಮಾಚ್ಛಿನತ್ ॥೧೩॥

ಯುದ್ಧದಲ್ಲಿ ವೇಗವಾಗಿ ತನ್ನ ಮೇಲೆ ಬೀಳುತ್ತಿದ್ದ ಆ ಬಾಣಗಳನ್ನು ಒಂದೊಂದನ್ನೂ ಐದು ಬಾಣಗಳಿಂದ ಸಹದೇವ ಕತ್ತರಿಸಿದ.

ತಾನ್ ನಿವಾರ್ಯ ತತೋ ಬಾಣೈಃ ಸಹದೇವಃ ಪ್ರತಾಪವಾನ್ ।
ಶತಸಂಖ್ಯಾಂಸ್ತತೋ ಬಾಣಾನ್ ಪ್ರೇಷಯಾಮಾಸ ಸಂಯುಗೇ ॥೧೪॥

ಹೀಗೆ ಆ ಬಾಣಗಳನ್ನು ಪ್ರತಾಪಶಾಲಿಯಾದ ಸಹದೇವ ಬಾಣಗಳಿಂದ ತಡೆದು ಯುದ್ಧದಲ್ಲಿ ನೂರು ಬಾಣಗಳನ್ನು ದುಃಶಾಸನನ ಮೇಲೆಸೆದ.

ತಾನ್ ಬಾಣಾಂಸ್ತವ ಪುತ್ರೋಪಿ ಛಿತ್ತ್ವೈಕೈಕಂ ತ್ರಿಭಿಸ್ತ್ರಿಭಿಃ ।
ನನಾದ ಸುಮಹಾನಾದಂ ನಾದಯಾನೋ ವಸುಂಧರಾಮ್ ॥೧೫॥

ಆ ಬಾಣಗಳನ್ನು ನಿನ್ನ ಪುತ್ರನು ಒಂದೊಂದನ್ನು ಮೂರು ಮೂರು ಬಾಣಗಳಿಂದ ಕಡಿದು ರಣಭೂಮಿ ಪ್ರತಿಧ್ವನಿಸುವಂತೆ ಮಹಾನಾದಗೈದ.

ತತೋ ದುಃಶಾಸನೋ ರಾಜನ್ ದ್ವಾಭ್ಯಾಂ ಪಾಂಡುಸುತಂ ರಣೇ ।
ಸಾರಥಿಂ ನವಭಿರ್ಬಾಣೈರ್ಮಾದ್ರೇಯಸ್ಯ ಸಮಾಚಿನೋತ್ ॥೧೬॥

ರಾಜನೆ, ಬಳಿಕ ದುಃಶಾಸನ ಎರಡು ಬಾಣಗಳಿಂದ ಸಹದೇವನನ್ನು ಹೊಡೆದು, ಒಂಬತ್ತು ಬಾಣಗಳಿಂದ ಸಹದೇವನ ಸಾರಥಿಯನ್ನು ಪ್ರಹರಿಸಿದ.

ತತಃ ಕ್ರುದ್ಧೋ ಮಹಾರಾಜ ಸಹದೇವಃ ಪ್ರತಾಪವಾನ್ ।
ಸಮಧತ್ತ ಶರಂ ಘೋರಂ ಮೃತ್ಯುಕಾಲಾಂತಕೋಪಮಮ್ ॥೧೭॥
ವಿಕೃಷ್ಯ ಬಲವಚ್ಚಾಪಂ ತವ ಪುತ್ರಾಯ ಸೋಽಸೃಜತ್ ॥೧೮॥

ಮಹಾರಾಜ, ಆಗ ಕ್ರುದ್ಧನಾದ ಪ್ರತಾಪಶಾಲಿ ಸಹದೇವನು ಮೃತ್ಯು ಕಾಲ ಅಂತಕರಿಗೆ ಸಮವಾದ ಭಯಂಕರವಾದ ಬಾಣವನ್ನು ಬಿಲ್ಲಿಗೆ ಹೂಡಿ, ಬಲವಾಗಿ ಬಿಲ್ಲನ್ನು ಸೆಳೆದು, ನಿನ್ನ ಪುತ್ರನ ಮೇಲೆಸೆದ.

ಸ ತಂ ನಿರ್ಭಿದ್ಯ ವೇಗೇನ ಭಿತ್ತ್ವಾ ಚ ಕವಚಂ ಮಹತ್ ।
ಪ್ರಾವಿಶದ್ ಧರಣೀಂ ತೂರ್ಣಂ ವಲ್ಮೀಕಮಿವ ಪನ್ನಗಃ ॥೧೯॥

ಆ ಬಾಣವು ವೇಗದಿಂದ ದುಃಶಾಸನನ ದೊಡ್ಡಕವಚವನ್ನು ಭೇದಿಸಿ, ಅವನನ್ನೂ ಭೇದಿಸಿ ಹಾವು ಹುತ್ತದೊಳಗೆ ಸೇರಿಕೊಳ್ಳುವಂತೆ ರಣಭೂಮಿಯನ್ನು ಹೊಕ್ಕಿತು.

ಸ ಮುಮೋಹ ತತಃ ಪುತ್ರಸ್ತವ ರಾಜನ್ ಮಹಾಬಲಃ ॥೨೦॥

ರಾಜನೆ, ಆಗ ಮಹಾಬಲಿಯಾದ ನಿನ್ನ ಪುತ್ರ ಮೂರ್ಛೆಗೊಂಡ.

ಮೂಢಂ ಚೈನಂ ಸಮಾಲಕ್ಷ್ಯ ಸಾರಥಿಸ್ತ್ವರಿತೋ ರಣಾತ್ ।
ಅಪೋವಾಹ ಸುಸನ್ತ್ರಸ್ತೋ ವಧ್ಯಮಾನಂ ಶಿತೈಃ ಶರೈಃ ॥೨೧॥

ಮೂರ್ಛಿತನಾದ ದುಃಶಾಸನನು ಹರಿತವಾದ ಬಾಣಗಳಿಂದ ಹೊಡೆಸಿ ಕೊಳ್ಳುತ್ತಿರುವುದನ್ನು ಕಂಡು ಸಾರಥಿ ಭಯಪಟ್ಟು ಬೇಗನೆ ರಣಭೂಮಿಯಿಂದ ಅವನನ್ನು ದೂರಕ್ಕೆ ಒಯ್ದ.

ಪರಾಜಿತ್ಯ ರಣೇ ತಂ ತು ಪಾಂಡವಃ ಪಾಂಡುಪೂರ್ವಜ ।
ದುರ್ಯೋಧನಬಲಂ ಬಾಣೈಃ ಪ್ರಾಮಥದ್ ವೈ ಸಮಂತತಃ ॥೨೨॥

ರಾಜನೆ, ಸಹದೇವ ಹೀಗೆ ದುಃಶಾಸನನನ್ನು ಪರಾಭವಗೊಳಿಸಿ ದುರ್ಯೋಧನನ ಸೈನ್ಯವನ್ನು ಎಲ್ಲಕಡೆ ಬಾಣಗಳಿಂದ ಮಥಿಸಿದ.

ಪಿಪೀಲಿಕಾಪುಟಂ ರಾಜನ್ ಯಥಾ ಮೃದ್ನನ್ ನರೋ ರುಷಾ ।
ತಥಾ ಸಾ ಕೌರವೀ ಸೇನಾ ಮೃದಿತಾ ತೇನ ಭಾರತ ॥೨೩॥

ರಾಜನೆ, ಕುಪಿತನಾದ ಮನುಷ್ಯನು ಇರುವೆಗಳ ಎಲೆದೊನ್ನೆಗಳನ್ನು ಹೊಸಕುವಂತೆ ಸಹದೇವನು ಆ ಕೌರವಸೈನ್ಯವನ್ನು ಮರ್ದಿಸಿದನು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ಸಹದೇವಯುದ್ಧವರ್ಣನಂ ನಾಮ ತ್ರಯೋವಿಂಶೋಽಧ್ಯಾಯಃ ॥೨೩॥

❖

ಮಹಾಭಾರತತಾತ್ಪರ್ಯನಿರ್ಣಯ

ದೃಷ್ಟ್ವಾ ಕೃಪಸ್ತಂ ಸ್ವರಥಮಾರೋಪ್ಯಾಪಯಯೌ ತತಃ ।
ತದೈವ ಕರ್ಣನಕುಲೌ ಭೃಶಂ ಬಾಣೈರಯುದ್ಧ್ಯತಾಮ್ ॥೧೪॥

ಭೀಮನನ್ನು ಕಂಡು ಕೃಪ ದುರ್ಯೋಧನನನ್ನು ತನ್ನ ರಥದ ಮೇಲೆ ಹತ್ತಿಸಿಕೊಂಡು ಅಲ್ಲಿಂದ ಪಲಾಯನ ಮಾಡಿದ. ಆಗಲೆ ಕರ್ಣ ನಕುಲರೂ ಬಾಣಗಳಿಂದ ಚೆನ್ನಾಗಿ ಯುದ್ಧ ಮಾಡಿದರು.

ನಕುಲಂ ವಿರಥಂ ಕೃತ್ವಾ ಕರ್ಣೋಽಥ ಪ್ರಪಲಾಯಿನಮ್ ।
ಅನುದ್ರುತ್ಯ ಚ ವೇಗೇನ ಕಂಠೇ ಧನುರವಾಸೃಜತ್ ॥೧೫॥

ಕರ್ಣ ನಕುಲನನ್ನು ವಿರಥನನ್ನಾಗಿ ಮಾಡಿ, ಅವನು ಪಲಾಯನ ಮಾಡತೊಡಗಿದಾಗ ವೇಗದಿಂದ ಬೆನ್ನಟ್ಟಿ ಕುತ್ತಿಗೆಗೆ ಬಿಲ್ಲಿಂದ ತಿವಿದ.

ಉಕ್ತ್ವಾ ಚ ಪರುಷಾ ವಾಚಃ ಕುಂತ್ಯಾ ವಚನಗೌರವಾತ್ ।
ನ ಜಘಾನೈವ ನಕುಲಂ ವಿಸೃಜ್ಯ ಚ ಪರಾನ್ ಯಯೌ ॥೧೬॥

ಕರ್ಣ ಕುಂತಿಗೆ ಕೊಟ್ಟ ಮಾತಿಗೆ ಗೌರವ ಕೊಟ್ಟು ನಕುಲನನ್ನು ಕೊಲ್ಲದೆ ಬಿಟ್ಟ ಅವನಿಗೆ ಕಟುವಾದ ನಿಂದೆಯ ಮಾತುಗಳನ್ನಾಡಿ ಕಳಿಸಿ ಬೇರೆ ಯೋಧರೊಡನೆ ಯುದ್ಧಕ್ಕೆ ಹೊರಟುಹೋದ.

❖

ಇಪ್ಪತ್ತನಾಲ್ಕನೆಯ ಅಧ್ಯಾಯ

ಕರ್ಣನಿಂದ ನಕುಲ ಪರಾಭವ. ಪಾಂಡವ ಸೈನ್ಯ ಪರಾಭವ.

ಸಂಜಯಃ

ನಕುಲಂ ರಭಸಂ ಯುದ್ಧೇ ತಪಂತಂ ತವ ವಾಹಿನೀಮ್ ।
ಕರ್ಣೋ ವೈಕರ್ತನೋ ರಾಜನ್ ವಾರಯಾಮಾಸ ವೈ ರುಷಾ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿಯುತ್ತಾನೆ— ರಾಜನೆ, ಯುದ್ಧದಲ್ಲಿ ವೇಗಶಾಲಿಯಾದ ನಕುಲನು ನಿನ್ನ ಸೈನ್ಯವನ್ನು ನಾಶಪಡಿಸುವಾಗ ಕರ್ಣನು ಕೋಪದಿಂದ ಅವನನ್ನು ತಡೆದ.

ನಕುಲಸ್ತು ತತಃ ಕರ್ಣಂ ಪ್ರಹಸನ್ನಿದಮಬ್ರವೀತ್ ॥೨॥

ನಕುಲನು ಆಗ ನಗುತ್ತ ಕರ್ಣನಿಗೆ ಹೇಳಿದ—

ನಕುಲಃ

ಚಿರಸ್ಯ ಬತ ದೃಷ್ಟೋಽಹಂ ದೈವತೈಃ ಸೌಮ್ಯಚಕ್ಷುಷಾ ।
ಯಸ್ಯ ಮೇ ತ್ವಂ ರಣೇ ಪಾಪ ಚಕ್ಷುರ್ವಿಷಯಮಾಗತಃ ॥೩॥

ನಕುಲನು ನುಡಿದ, 'ಬಹುಕಾಲದ ಮೇಲೆ ನಾನೀಗ ದೇವತೆಗಳ ಸೌಮ್ಯದೃಷ್ಟಿಗೆ ಗೋಚರನಾಗಿದ್ದೇನೆ. ಏಕೆಂದರೆ ಪಾಪಿಯೆ, ನೀನು ರಣರಂಗದಲ್ಲಿ ನನ್ನ ದೃಷ್ಟಿಗೆ ಗೋಚರವಾಗಿರುವೆ.

ತ್ವಂ ಹಿ ಮೂಲಮನರ್ಥಾನಾಂ ವೈರಸ್ಯ ಕಲಹಸ್ಯ ಚ ।
ತ್ವದ್ದೋಷಾತ್ ಕೌರವಾಃ ಕ್ಷೀಣಾಃ ಸಮಾಸಾದ್ಯ ಪರಸ್ಪರಮ್ ॥೪॥

ನೀನೆ ಎಲ್ಲ ಅನರ್ಥಗಳಿಗೆ ಮೂಲ, ವೈರಕ್ಕೆ ಕಲಹಕ್ಕೆ ಪ್ರೇರಕ. ನಿನ್ನ ಅಪರಾಧದಿಂದಲೆ ಕುರುಕುಲದವರು ಪರಸ್ಪರ ವಿರೋಧಿಸಿ ಕ್ಷಯಹೊಂದಿದರು

ತ್ವಾಮದ್ಯ ಸಮರೇ ಹತ್ವಾ ಕೃತಕೃತ್ಯೋಽಸ್ಮಿ ಸತ್ವರಃ ॥೫॥

ನಾನಿಂದು ಯುದ್ಧದಲ್ಲಿ ನಿನ್ನನ್ನು ಬೇಗನೆ ಕೊಂದು ಕೃತಕೃತ್ಯನಾಗುತ್ತಿದ್ದೇನೆ.

ಸಂಜಯಃ

ಏವಮುಕ್ತಃ ಪ್ರತ್ಯುವಾಚ ನಕುಲಂ ಸೂತನಂದನಃ ॥೬॥

ಸಂಜಯ ನುಡಿದ— ಹೀಗೆ ನಕುಲ ಹೇಳಿದಾಗ ಕರ್ಣ ಪ್ರತಿಯಾಗಿ ಹೀಗೆ ನುಡಿದ—

ಕರ್ಣಃ

ಸದೃಶಂ ರಾಜಪುತ್ರಸ್ಯ ವಿಶೇಷೇಣ ಧನುಷ್ಮತಃ ।
ಪ್ರಹರಸ್ವ ರಣೇ ವೀರ ಪಶ್ಯಾಮಃ ಪುರುಷೋ ಭವ ॥೭॥
ಕರ್ಮ ಕೃತ್ವಾ ರಣೇ ಶೂರ ತತಃ ಕತ್ಥಿತುಮರ್ಹಸಿ ॥೮॥

ಕರ್ಣ ನುಡಿದ— ನೀನು ಹೇಳುವುದು ರಾಜಕುಮಾರನಿಗೆ, ವಿಶೇಷವಾಗಿ ಧನುರ್ಧಾರಿಗೆ ಒಪ್ಪುತ್ತದೆ. ಆದರಿಂದ ವೀರನೆ, ನೀನು ಯುದ್ಧಮಾಡು, ನಾನು ನೋಡುತ್ತೇನೆ, ನಿನ್ನ ಪೌರುಷ ತೋರು. ಯುದ್ಧದಲ್ಲಿ ಪೌರುಷ ತೋರಿದ ಬಳಿಕ ಕೊಚ್ಚಿಕೊಳ್ಳು.

ಅನುಕ್ತ್ವಾ ಸಮರೇ ತಾತ ಶೂರಾ ಯುಧ್ಯನ್ತಿ ಶಕ್ತಿತಃ ।
ಯುಧ್ಯಸ್ವ ಸಮರೇ ಶಕ್ತ್ಯಾ ಪ್ರತಿಯೋತ್ಸ್ಯಾಮಿ ತೇ ರಣೇ ॥೯॥

ಮಗು, ತಮ್ಮ ಬಗ್ಗೆ ಕೊಚ್ಚಿಕೊಳ್ಳದೇ ಶೂರರು ಮೊದಲಿಗೆ ಶಕ್ತನುಸಾರ ಯುದ್ಧ ಮಾಡುತ್ತಾರೆ. ರಣರಂಗದಲ್ಲಿ ಶಕ್ತನುಸಾರ ಯುದ್ಧಮಾಡು. ಯುದ್ಧದಲ್ಲಿ ನಿನಗೆ ನಾನು ಪ್ರತಿಯಾಗಿ ಯುದ್ಧ ಮಾಡುವೆನು.

ಸಂಜಯಃ

ಇತ್ಯುಕ್ತ್ವಾ ಪ್ರಾಹರತ್ ತೂರ್ಣಂ ಪಾಂಡುಪುತ್ರಾಯ ಸೂತಜಃ ।
ವಿವ್ಯಾಧ ಚೈನಂ ಸಮರೇ ತ್ರಿಸಪ್ತತ್ಯಾ ಶಿಲೀಮುಖೈಃ ॥೧೦॥

ಸಂಜಯನು ನುಡಿಯುತ್ತಾನೆ— ಕರ್ಣನು ಹೀಗೆ ನಕುಲನಿಗೆ ಹೇಳಿ ಬೇಗನೆ ಪ್ರಹಾರಗೈದ. ಯುದ್ಧದಲ್ಲಿ ಎಪ್ಪತ್ತಮೂರು ಬಾಣಗಳಿಂದ ಅವನನ್ನು ಹೊಡೆದ.

ನಕುಲಸ್ತು ತತೋ ವಿದ್ಧಃ ಸೂತಪುತ್ರೇಣ ಭಾರತ ।
ಆಶೀತ್ಯಾSSಶೀವಿಷಪ್ರಖ್ಯೈಃ ಸೂತಪುತ್ರಮವಿಧ್ಯತ ॥೧೧॥

ರಾಜನೆ, ನಕುಲನು ಕರ್ಣನಿಂದ ಹೊಡೆಸಿಕೊಂಡು ಭಯಂಕರ ವಿಷದ ಹಾವಿನಂಥ ಎಂಬತ್ತು ಬಾಣಗಳಿಂದ ಕರ್ಣನನ್ನು ಹೊಡೆದ.

ತಸ್ಯ ಕರ್ಣೋ ಧನುಶ್ಚಿತ್ತ್ವಾ ಸ್ವರ್ಣಪುಂಖೈಃ ಶಿಲಾಶಿತೈಃ ।
ತ್ರಿಂಶತಂ ಪ್ರೇಷಯಾಮಾಸ ಶರಾನಾಶೀವಿಷೋಪಮಾನ್ ॥೧೨॥

ಕರ್ಣನು ಚಿನ್ನದ ಪುಕ್ಕಉಳ್ಳ ಸಾಣೆ ಹಿಡಿದ ತೀಕ್ಷ್ಣವಾದ ಬಾಣಗಳಿಂದ ನಕುಲನ ಬಿಲ್ಲನ್ನು ಕಡಿದು, ಹಾವಿನಂಥ ಮೂವತ್ತು ಬಾಣಗಳನ್ನು ಅವನ ಮೇಲೆಸೆದ.

ತೇ ತಸ್ಯ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ ।
ಆಶೀವಿಷಾ ಯಥಾ ರಾಜನ್ ಭಿತ್ತ್ವಾ ಗಾಂ ಸಲಿಲಂ ಭೃಶಮ್ ॥೧೩॥

ರಾಜನೆ, ಆ ಬಾಣಗಳು ಹಾವುಗಳಂಥವು, ಯುದ್ಧದಲ್ಲಿ ನಕುಲನ ಕವಚವನ್ನು ಚೆನ್ನಾಗಿ ಪುಡಿಮಾಡಿ ಮೈಗೆ ಚುಚ್ಚಿ ಅವನ ನೆತ್ತರನ್ನು ಹಾವುಗಳು ನೆಲವನ್ನು ಕೊರೆದು ನೀರು ಕುಡಿಯುವಂತೆ ಕುಡಿದವು.

ಅಥಾನ್ಯದ್ಧನುರಾದಾಯ ಹೇಮಪೃಷ್ಠಂ ದುರಾನಮಮ್ ।
ಕರ್ಣಂ ವಿವ್ಯಾಧ ಸಪ್ತತ್ಯಾ ಸಾರಥಿಂ ಚ ತ್ರಿಭಿಃ ಶರೈಃ ॥೧೪॥

ನಕುಲನು ಬಂಗಾರದ ಹಿಂಭಾಗವುಳ್ಳ, ಬಗ್ಗಿಸಲಾಗದ ಬಿಲ್ಲನ್ನೆತ್ತಿಕೊಂಡು ಎಪ್ಪತ್ತು ಬಾಣಗಳಿಂದ ಕರ್ಣನನ್ನು ಹೊಡೆದ ಮತ್ತು ಮೂರು ಬಾಣಗಳಿಂದ ಸಾರಥಿಯನ್ನು ಹೊಡೆದ.

ತತಃ ಕ್ರುದ್ಧೋ ಮಹಾರಾಜ ನಕುಲಃ ಪರವೀರಹಾ ।
ಕ್ಷುರಪ್ರೇಣ ಸುತೀಕ್ಷ್ಣೇನ ಕರ್ಣಸ್ಯ ಧನುರಾಚ್ಛಿನತ್ ॥೧೫॥

ಮಹಾರಾಜ, ಬಳಿಕ ಶತ್ರುವೀರನಾಶಕನಾದ ನಕುಲನು ಕ್ರುದ್ಧನಾಗಿ ಬಲು ತೀಕ್ಷ್ಣವಾದ ಕ್ಷುರಪ್ರಬಾಣದಿಂದ ಕರ್ಣನ ಬಿಲ್ಲನ್ನು ಕಡಿದ.

ಅಥೈನಂ ಛಿನ್ನಧನ್ವಾನಂ ಸಾಯಕಾನಾಂ ತ್ರಿಭಿಃ ಶತೈಃ ।
ಆಜಘ್ನೇ ಪ್ರಹಸನ್ ವೀರಃ ಸರ್ವಲೋಕಮಹಾರಥಮ್ ॥೧೬॥

ಬಳಿಕ ವೀರ ನಕುಲನು ನಗುತ್ತ ಬಿಲ್ಲನ್ನು ಕಡಿದುಕೊಂಡಿದ್ದ ಸರ್ವಲೋಕ ಮಹಾರಥನೆನಿಸಿದ್ದ ಕರ್ಣನನ್ನು ಮುನ್ನೂರು ಬಾಣಗಳಿಂದ ಚೆನ್ನಾಗಿ ಹೊಡೆದ.

ಕರ್ಣಮಭ್ಯರ್ದಿತಂ ದೃಷ್ಟ್ವಾ ಪಾಂಡುಪುತ್ರೇಣ ಮಾರಿಷ ।
ವಿಸ್ಮಯಂ ಪರಮಂ ಜಗ್ಮುಃ ಋಷಯಃ ಸಹ ದೈವತೈಃ ॥೧೭॥

ರಾಜನೆ, ನಕುಲನು ಕರ್ಣನನ್ನು ಹೀಗೆ ಹೊಡೆದುದನ್ನು ಕಂಡು ದೇವತೆಗಳೂ ಋಷಿಗಳೂ ಬಹಳ ವಿಸ್ಮಯಗೊಂಡರು.

ಅಥಾನ್ಯದ್ಧನುರಾದಾಯ ಕರ್ಣೋ ವೈಕರ್ತನಸ್ತದಾ ।
ನಕುಲಂ ಪಂಚಭಿರ್ಬಾಣೈರ್ಜತ್ರುದೇಶೇ ಸಮಾರ್ಪಯತ್ ॥೧೮॥

ಕರ್ಣನು ಇನ್ನೊಂದು ಬಿಲ್ಲನ್ನೆತ್ತಿಕೊಂಡು ಐದು ಬಾಣಗಳಿಂದ ನಕುಲನ ಕೊರಳಿನ ಎಲುಬಿನ ಭಾಗದಲ್ಲಿ ಹೊಡೆದ.

ತತ್ರಸ್ಥೈರಥ ತೈರ್ಬಾಣೈರ್ಮಾದ್ರೀಪುತ್ರೋ ವ್ಯರೋಚತ ।
ಸ್ವರಶ್ಮಿಭಿರಿವಾದಿತ್ಯೋ ಭುವನೇ ವಿಸೃಜನ್ ಪ್ರಭಾಮ್ ॥೧೯॥

ಆ ಭಾಗದಲ್ಲಿ ನೆಟ್ಟ ಬಾಣಗಳಿಂದ ನಕುಲ ಸೂರ್ಯನು ತನ್ನ ಕಿರಣಗಳಿಂದ ಲೋಕದಲ್ಲಿ ಪ್ರಭೆಯನ್ನು ಹರಡುವಂತೆ ಶೋಭಿಸಿದ.

ನಕುಲಸ್ತು ತತಃ ಕರ್ಣಂ ವಿದ್ಧ್ವಾ ಸಪ್ತಭಿರಾಶುಗೈಃ ।
ಅಥಾಸ್ಯ ಧನುಷಃ ಕೋಟಿಂ ಪುನಶ್ಚಿಚ್ಛೇದ ಮಾರಿಷ ॥೨೦॥

ರಾಜನೆ, ನಕುಲನು ಏಳು ಬಾಣಗಳಿಂದ ಕರ್ಣನನ್ನು ಹೊಡೆದು ಪುನಃ ಅವನ ಬಿಲ್ಲಿನ ತುದಿಯನ್ನು ಕಡಿದ.

ಸೋऽನ್ಯತ್ ಕಾರ್ಮುಕಮಾದಾಯ ಸಮರೇ ವೇಗವತ್ತರಮ್ ।
ನಕುಲಸ್ಯ ತತೋ ಬಾಣೈಃ ಸಮಂತಾದ್ ವಾರಯನ್ ದಿಶಃ ॥೨೧॥

ಕರ್ಣನು ಯುದ್ಧದಲ್ಲಿ ಬಾಣಗಳಿಗೆ ಇನ್ನೂ ಹೆಚ್ಚಿನ ವೇಗವನ್ನು ಕೊಡುವ ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಬಾಣಗಳಿಂದ ನಕುಲನ ಸುತ್ತಲೂ ಎಲ್ಲ ದಿಕ್ಕುಗಳನ್ನೂ ಆವರಿಸಿದ.

ಸಂಛಾದ್ಯಮಾನಃ ಸಮರೇ ಕರ್ಣಚಾಪಚ್ಯುತೈಃ ಶರೈಃ ।
ಚಿಚ್ಛೇದ ಸ ಶರಾಂಸ್ತೂರ್ಣಂ ಶರೈರೇವ ಮಹಾಯಶಾಃ ॥೨೨॥

ಮಹಾಯಶಸ್ವಿಯಾದ ನಕುಲನು ಯುದ್ಧದಲ್ಲಿ ಕರ್ಣನ ಬಿಲ್ಲಿನಿಂದ ಹೊರಟ ಬಾಣಗಳಿಂದ ಆಚ್ಛಾದಿತನಾಗುತ್ತಿದ್ದಂತೆ ಆ ಎಲ್ಲ ಬಾಣಗಳನ್ನು ಆತ ಬಾಣಗಳಿಂದಲೇ ಕತ್ತರಿಸಿದ.

ತತೋ ಬಾಣಮಯಂ ಜಾಲಂ ವಿತತಂ ವ್ಯೋಮ್ನ್ಯದೃಶ್ಯತ ।
ಖದ್ಯೋತಾನಾಮಿವ ವ್ರಾತೈಃ ಸಂಪತದ್ಭಿರ್ಯಥಾ ನಭಃ ॥೨೩॥

ಆಗ ಮಿಣುಕುಹುಳುಗಳು ರಾಶಿರಾಶಿಗಳಾಗಿ ಆಕಾಶದಲ್ಲಿ ಹಾರಾಡಿದಂತೆ, ಬಾಣಗಳ ರಾಶಿಗಳು ಆಕಾಶದಲ್ಲಿ ಹರಡಿದುದು ಗೋಚರವಾಯಿತು.

ತೈರ್ವಿಮುಕ್ತೈಃ ಶರಶತೈಶ್ಛಾದಿತಂ ಗಗನಂ ಮಹತ್ ।
ಶಲಭಾನಾಂ ಯಥಾ ವ್ರಾತೈಸ್ತದ್ವದಾಸೀದ್ ವಿಶಾಂಪತೇ ॥೨೪॥

ರಾಜನೆ, ಮಿಡತೆಗಳ ರಾಶಿಗಳು ಆಕಾಶದಲ್ಲಿ ಹಾರಾಡಿದರೆ ಹೇಗೋ ಹಾಗೇ ವೀರರಿಬ್ಬರು ಎಸೆದ ನೂರಾರು ಬಾಣಗಳಿಂದ ವಿಶಾಲವಾದ ಆಕಾಶ ಆವೃತ ವಾಯಿತು.

ತೇ ಶರಾ ಹೇಮವಿಕೃತಾಃ ಸಂಪತಂತೋ ಮುಹುರ್ಮುಹುಃ ।
ಶ್ರೇಣೀಕೃತಾ ವ್ಯರೋಚಂತ ಕ್ರೌಂಚಾಃ ಶ್ರೇಣೀಕೃತಾ ಇವ ॥೨೫॥

ಬಂಗಾರದ ಬಾಣಗಳು ಮತ್ತೂ ಮತ್ತೂ ಸಾಲುಸಾಲಾಗಿ ಹಾರಾಡುತ್ತ ಸಾಲು ಸಾಲಾಗಿ ಹಾರುವ ಕ್ರೌಂಚಪಕ್ಷಿಗಳಂತೆ ಶೋಭಿಸಿದುವು.

ಬಾಣಜಾಲಾವೃತೇ ವ್ಯೋಮ್ನಿ ಚ್ಛಾದಿತೇ ಚ ದಿವಾಕರೇ ।
ನ ಸ್ಮ ಸಂಪತತೇ ಭೂತಂ ಕಿಂಚಿದಪ್ಯಂತರಿಕ್ಷಗಮ್ ॥೨೬॥

ನಿರುದ್ಧೇ ತತ್ರ ಮಾರ್ಗೇ ತು ಶರಸಂಘೈಃ ಸಮಂತತಃ ।
ವ್ಯರೋಚೇತಾಂ ಮಹಾತ್ಮಾನೌ ಕಾಲಸೂರ್ಯಾವಿವೋದಿತೌ ॥೨೭॥

ಆಕಾಶವು ಬಾಣರಾಶಿಗಳಿಂದ ಆವೃತವಾದಾಗ, ಸೂರ್ಯನೂ ಆಚ್ಛಾದಿತನಾದಾಗ, ಆಕಾಶದಲ್ಲಿ ಸಂಚರಿಸುವ ಯಾವ ಪ್ರಾಣಿ–ಪಕ್ಷಿಗಳೂ ಹಾರಾಡಲಿಲ್ಲ. ಏಕೆಂದರೆ ಹಾರಾಡುವ ಆಕಾಶಮಾರ್ಗ ಪೂರ್ತಿಯಾಗಿ ಬಾಣಸಮೂಹಗಳಿಂದಲೆ ತುಂಬಿತ್ತು. ಹೀಗಾಗಿ ಉದಿಸಿದ ಪ್ರಳಯಕಾಲದ ಇಬ್ಬರು ಸೂರ್ಯರಂತೆ ಮಹಾತ್ಮರಾದ ಕರ್ಣ–ನಕುಲರೇ ಆಕಾಶದಲ್ಲಿ ಪ್ರಕಾಶಿಸಿದರು.

ಕರ್ಣಚಾಪಚ್ಯುತೈರ್ಬಾಣೈರ್ವಧ್ಯಮಾನಾಸ್ತು ಸೋಮಕಾಃ ।
ಅವಾಲೀಯಂತ ರಾಜೇಂದ್ರ ವೇದನಾರ್ತಾ ಭೃಶಾರ್ದಿತಾಃ ॥೨೮॥

ರಾಜನೆ, ಕರ್ಣನ ಬಿಲ್ಲಿನಿಂದ ಹೊರಟ ಬಾಣಗಳಿಂದ ಹೊಡೆಸಿಕೊಂಡ ಪಾಂಡವರ ಸೈನಿಕರು ಬಹಳ ಗಾಯಗೊಂಡು, ವೇದನೆಪಡುತ್ತ ಅಲ್ಲಲ್ಲಿ ಮರೆಯಾಗುತ್ತಿದ್ದರು.

ನಕುಲಸ್ಯ ತತೋ ಬಾಣೈರ್ವಧ್ಯಮಾನಾ ಚಮೂಸ್ತವ ।
ವ್ಯದೀರ್ಯತ ತತೋ ರಾಜನ್ ವಾತನುನ್ನ ಇವಾಂಬುದಃ ॥೨೯॥

ರಾಜನೆ, ನಿನ್ನ ಸೈನ್ಯವೂ ಕೂಡ ನಕುಲನ ಬಾಣಗಳಿಂದ ಹೊಡೆಸಿಕೊಂಡು ಬಿರುಗಾಳಿಗೆ ಸಿಲುಕಿದ ಮೋಡದಂತೆ ಚದುರಿಹೋಗುತ್ತಿತ್ತು.

ತೇ ಸೇನೇ ವಧ್ಯಮಾನೇ ತು ತಾಭ್ಯಾಂ ದಿವ್ಯೈರ್ಮಹಾಶರೈಃ ।
ಶರಪಾತಾನತಿಕ್ರಮ್ಯ ತಸ್ಥತುಃ ಪ್ರೇಕ್ಷಕೇ ಇವ ॥೩೦॥

ಎರಡೂ ಸೈನ್ಯಗಳ ಯೋಧರು ಅವರಿಬ್ಬರ ದಿವ್ಯವಾದ ಮಹಾಬಾಣಗಳಿಂದ ಹೊಡೆಸಿಕೊಳ್ಳಲು ತೊಡಗಿದಾಗ, ಬಾಣಗಳು ಬೀಳುವ ಪ್ರದೇಶಗಳನ್ನು ಬಿಟ್ಟು ಆಚೆ ಹೋಗಿ ಪ್ರೇಕ್ಷಕರಂತೆ ನಿಂತುಬಿಟ್ಟರು.

ಪ್ರೋತ್ಸಾರಿತೇ ಜನೇ ತಸ್ಮಿನ್ ಕರ್ಣಪಾಂಡವಯೋಃ ಶರೈಃ ।
ಜಘ್ನತುಸ್ತೌ ಮಹಾತ್ಮಾನಾವನ್ಯೋನ್ಯಂ ಶರವೃಷ್ಟಿಭಿಃ ॥೩೧॥

ಕರ್ಣ ಮತ್ತು ನಕುಲರ ಬಾಣಗಳು ಆ ಪ್ರದೇಶವನ್ನು ಜನರಿಂದ ತೆರವು ಗೊಳಿಸಿದ್ದರಿಂದ ಮಹಾತ್ಮರಾದ ಅವರಿಬ್ಬರೇ ಪರಸ್ಪರ ಬಾಣಗಳ ಮಳೆಗಳಿಂದ ಹೊಡೆಸಿಕೊಂಡರು.

ವಿದರ್ಶಯಂತೌ ಶಸ್ತ್ರಾಣಿ ದಿವ್ಯಾನಿ ರಣಮೂರ್ಧನಿ ।
ಘಾದಯಂತೌ ಚ ಸಹಸಾ ಪರಸ್ಪರವಧೈಷಿಣೌ ॥೩೨॥

ರಣಾಂಗಣದಲ್ಲಿ ದಿವ್ಯಶಸ್ತ್ರಗಳನ್ನು ಪ್ರದರ್ಶಿಸುತ್ತ ಪರಸ್ಪರ ವಧೆ ಮಾಡಲು ಬಯಸಿ ಬಲವಾಗಿ ಒಬ್ಬನಿನ್ನೊಬ್ಬನನ್ನು ಬಾಣಗಳಿಂದ ಮರೆಮಾಡುತ್ತಿದ್ದರು.

ನಕುಲೇನ ಶರಾ ಮುಕ್ತಾಃ ಕಂಕಬರ್ಹಿಣವಾಸಸಃ ।
ಸೂತಪುತ್ರಮವಚ್ಛಾದ್ಯ ವ್ಯತಿಷ್ಠಂತ ಇವಾಂಬರೇ ॥೩೩॥

ನಕುಲನು ಬಿಟ್ಟ ಹದ್ದು ನವಿಲುಗಳ ಗರಿಗಳಿಂದ ಯುಕ್ತವಾದ ಬಾಣಗಳು ಕರ್ಣನನ್ನು ಆಚ್ಛಾದಿಸಿ ಆಕಾಶದಲ್ಲಿ ನಿಂತಂತೆ ಕಂಡುಬಂದುವು.

ತಥೈವ ಸೂತಪುತ್ರೇಣ ಪ್ರೇಷಿತಾಃ ಪರಮಾಹವೇ ।
ಪಾಂಡುಪುತ್ರಮವಚ್ಛಾದ್ಯ ವ್ಯತಿಷ್ಠಂತ ಇವಾಂಬರೇ ॥೩೪॥

ಹಾಗೆಯೇ ಕರ್ಣನು ಮಹಾಯುದ್ಧದಲ್ಲಿ ಎಸೆದ ಬಾಣಗಳು ನಕುಲನನ್ನು ಆಚ್ಛಾದಿಸಿ ಆಕಾಶದಲ್ಲೇ ನಿಂತಂತೆ ಕಂಡುಬಂದುವು.

ಶರವೇಶ್ಮಪ್ರವಿಷ್ಟೌ ತೌ ನ ದೃಶ್ಯೇತೇ ಕಥಂಚನ ।
ಚಂದ್ರಸೂರ್ಯೌ ಯಥಾ ರಾಜನ್ ಘಾದ್ಯಮಾನೌ ಜಲಾಗಮೇ ॥೩೫॥

ಬಾಣಗಳ ಮನೆಯಲ್ಲಿ ಪ್ರವಿಷ್ಟರಾದ ಅವರಿಬ್ಬರೂ ಮಳೆಗಾಲ ಬಂದಾಗ ಆಚ್ಛಾದಿತರಾಗುವ ಚಂದ್ರ–ಸೂರ್ಯರಂತೆ ಯಾರಿಗೂ ಕಾಣಿಸುತ್ತಿರಲಿಲ್ಲ.

ತತಃ ಕ್ರುದ್ಧೋ ರಣೇ ಕರ್ಣಃ ಕೃತ್ವಾ ಘೋರತರಂ ವಪುಃ ।
ಪಾಂಡವಂ ಘಾದಯಾಮಾಸ ಸಮಂತಾಚ್ಛರವೃಷ್ಟಿಭಿಃ ॥೩೬॥

ಬಳಿಕ ಕ್ರುದ್ಧನಾದ ಕರ್ಣನು ರಣದಲ್ಲಿ ಉಗ್ರರೂಪ ತಳೆದು ನಕುಲನನ್ನು ಎಲ್ಲೆಡೆ ಬಾಣಗಳ ಮಳೆಯಿಂದ ಆಚ್ಛಾದಿಸಿದ.

ಸ ಚ್ಛಾದ್ಯಮಾನಃ ಸಮರೇ ಸೂತಪುತ್ರೇಣ ಪಾಂಡವಃ ।
ನ ಚಕಾರ ವ್ಯಥಾಂ ರಾಜನ್ ಭಾಸ್ಕರೋ ಜಲದೈರ್ಯಥಾ ॥೩೭॥

ನಕುಲನು ಯುದ್ಧದಲ್ಲಿ ಕರ್ಣನಿಂದ ಆಚ್ಛಾದಿತನಾದರೂ ಮೋಡಗಳಿಂದ ಆಚ್ಛಾದಿತನಾದ ಸೂರ್ಯನಂತೆ ವೇದನೆಯನ್ನು ಹೊಂದಲಿಲ್ಲ.

ತತಃ ಪ್ರಹಸ್ಯಾಧಿರಥಿಃ ಶರಜಾಲಾನಿ ಮಾರಿಷ ।
ಪ್ರೇಷಯಾಮಾಸ ಸಮರೇ ಶತಶೋಽಥ ಸಹಸ್ರಶಃ ॥೩೮॥

ರಾಜನೆ, ಕರ್ಣನು ನಕ್ಕು ಬಾಣಗಳ ಬಲೆಗಳನ್ನು ನೂರಾರು ಸಾವಿರಾರು ಸಂಖ್ಯೆಯಲ್ಲಿ ರಣರಂಗದಲ್ಲಿ ಎಸೆದ.

ಏಕಚ್ಛಾಯಮಭೂತ್ ಸರ್ವಂ ತಸ್ಯ ಬಾಣೈರ್ಮಹಾತ್ಮನಃ ।
ಅಭ್ರಚ್ಛಾಯೇವ ಸಂಜಜ್ಞೇ ಸಂಪತದ್ಭಿಃ ಶರೋತ್ತಮೈಃ ॥೩೯॥

ಮಹಾತ್ಮ ಕರ್ಣನ ಬಾಣಗಳಿಂದ ಎಲ್ಲ ಪ್ರದೇಶವು ಅಂಧಕಾರಮಯವಾಯಿತು. ಹಾರುವ ಉತ್ತಮ ಬಾಣಗಳಿಂದ ಮೋಡ ಕವಿದಂತಾಯಿತು.

ತತಃ ಕರ್ಣೋ ಮಹಾರಾಜ ಧನುಶ್ಛಿತ್ತ್ವಾ ಮಹಾತ್ಮನಃ ।
ಸಾರಥಿಂ ಪಾತಯಾಮಾಸ ರಥನೀಡಾದ್ಧಸನ್ನಿವ ॥೪೦॥

ಮಹಾರಾಜ, ಕರ್ಣನು ಮಹಾತ್ಮ ನಕುಲನ ಬಿಲ್ಲನ್ನು ಕತ್ತರಿಸಿ ನಗುತ್ತ ಸಾರಥಿಯನ್ನು ರಥಪೀಠದಿಂದ ಕೆಳಗೆ ಉರುಳಿಸಿದ.

ತತೋಽಶ್ವಾಂಶ್ಚತುರಸ್ತಸ್ಯ ಚತುರ್ಭಿರ್ನಿಶಿತೈಃ ಶರೈಃ ।
ಯಮಸ್ಯ ಸದನಂ ತೂರ್ಣಂ ಪ್ರೇಷಯಾಮಾಸ ಭಾರತ ॥೪೧॥

ಬಳಿಕ ನಕುಲನ ನಾಲ್ಕೂ ಕುದುರೆಗಳನ್ನು ಹರಿತವಾದ ನಾಲ್ಕು ಬಾಣಗಳಿಂದ ಬೇಗನೆ ಯಮಸದನಕ್ಕೆ ಅಟ್ಟಿದ.

ಅಥಾಸ್ಯ ತಂ ರಥಂ ದಿವ್ಯಂ ತಿಲಶೋ ವ್ಯಧಮಚ್ಛರೈಃ ।
ಪತಾಕಾಂ ಚಕ್ರರಕ್ಷಾಂಶ್ಚ ಗದಾಂ ಖಡ್ಗಂ ಚ ಮಾರಿಷ ॥೪೨॥

ಶತಚಂದ್ರಂ ಚ ತಚ್ಚರ್ಮ ಸರ್ವೋಪಕರಣಾನಿ ಚ ।
ಸುವರ್ಣವಿಕೃತಂ ತಚ್ಚ ಧನುಃ ಸಶರಮಾಹವೇ ॥೪೩॥

ಬಳಿಕ ನಕುಲನ ದಿವ್ಯವಾದ ರಥವನ್ನೂ ಪತಾಕೆಯನ್ನೂ ಚಕ್ರರಕ್ಷಕರನ್ನೂ ಗದೆಯನ್ನೂ ಖಡ್ಗವನ್ನೂ ಶತಚಂದ್ರಗುರಾಣಿಯನ್ನೂ ಎಲ್ಲ ಯುದ್ಧೋಪಕರಣಗಳನ್ನೂ ಬಂಗಾರದಿಂದ ಮಾಡಿದ ಧನುರ್ಬಾಣಗಳನ್ನೂ ಕರ್ಣನು ಯುದ್ಧದಲ್ಲಿ ಎಳ್ಳುಕಾಳಿನಷ್ಟು ಪುಡಿಗೈದ.

ಹತಾಶ್ವೋ ವಿರಥಶ್ಚೈವ ವಿಚರ್ಮಾ ಚ ವಿಶಾಂಪತೇ ।
ಅವತೀರ್ಯ ರಥಾತ್ ತೂರ್ಣಂ ಪರಿಘಂ ಗೃಹ್ಯ ವಿಷ್ಠಿತಃ ॥೪೪॥

ರಾಜನೆ, ನಕುಲ ಈಗ ಕುದುರೆ ರಥ ಗುರಾಣಿಗಳಿಲ್ಲದವನಾಗಿ ರಥದಿಂದ ಬೇಗನೆ ಕೆಳಗೆ ಇಳಿದು ಪರಿಘವನ್ನು ಹಿಡಿದು ನಿಂತ.

ಸಮುದ್ಯತಂ ಮಹಾಘೋರಂ ಪರಿಘಂ ತಸ್ಯ ಸೂತಜಃ ।
ವ್ಯಧಮತ್ ಸಾಯಕೈಸ್ತೂರ್ಣಂ ತದದ್ಭುತಮಿವಾಭವತ್ ॥೪೫॥

ನಕುಲನು ಎತ್ತಿದ ಮಹಾಭಯಂಕರವಾದ ಪರಿಘವನ್ನು ಕೂಡ ಕರ್ಣ ಬೇಗನೆ ಬಾಣಗಳಿಂದ ಕತ್ತರಿಸಿದ. ಇದು ಅದ್ಭುತವಾಗಿತ್ತು.

ವ್ಯಾಯುಧಂ ಚೈನಮಾಲಕ್ಷ್ಯ ಶರೈಃ ಸನ್ನತಪರ್ವಭಿಃ ।
ಅರ್ದಯನ್ ಬಹುಶಃ ಕರ್ಣೋ ನ ಚೈನಂ ಸಮಪೀಡಯತ್ ॥೪೬॥

ನಕುಲ ಆಯುಧರಹಿತನಾಗಿರುವುದನ್ನು ನೋಡಿ ಕರ್ಣ ಅವನನ್ನು ಡೊಂಕುಗಿಣ್ಣಿನ ಬಾಣಗಳಿಂದ ಬಹುವಾಗಿ ಹೊಡೆದ. ಆದರೆ ಅವನನ್ನು ಪೀಡಿಸಲಿಲ್ಲ.

ಸ ವಧ್ಯಮಾನಃ ಸಮರೇ ಕೃತಾಸ್ತ್ರೇಣ ಬಲೀಯಸಾ ।
ಪ್ರಾದ್ರವತ್ ಸಹಸಾ ರಾಜನ್ ನಕುಲೋ ವ್ಯಾಕುಲೇಂದ್ರಿಯಃ ॥೪೭॥

ಕರ್ಣನು ಅಸ್ತ್ರವಿದ್ಯಾ ಪಾರಂಗತ, ಬಲಿಷ್ಠ ರಾಜನೆ, ಅವನು ಹೊಡೆಯುವಾಗ ನಕುಲನು ಇಂದ್ರಿಯಗಳಲ್ಲಿ ವ್ಯಾಕುಲಗೊಂಡು ಬೇಗನೆ ಪಲಾಯನ ಮಾಡತೊಡಗಿದ.

ತಮಭಿದ್ರುತ್ಯ ರಾಧೇಯಃ ಪ್ರಹಸನ್ ವೈ ಪುನಃ ಪುನಃ ।
ಸಜ್ಯಂ ಚ ಸ್ವಧನುಃ ಕಂಠೇ ವಿಸಸರ್ಜ ಚ ಭಾರತ ॥೪೮॥

ಕರ್ಣ ಅವನನ್ನು ಬೆನ್ನಟ್ಟಿ ಪುನಃ ಪುನಃ ನಗುತ್ತ ಹೆದೆಯೇರಿಸಿದ್ದ ಬಿಲ್ಲನ್ನು ಕುತ್ತಿಗೆಗೆ ಹಾಕಿದ.

ತತಃ ಸ ಶುಶುಭೇ ರಾಜನ್ ಕಂಠಸಕ್ತಮಹಾಧನುಃ ।
ಪರಿವೇಷಮನುಪ್ರಾಪ್ತೋ ನಭಸೀವ ತಮೋನುದಃ ॥೪೯॥

ಯಥಾ ಚೈವಾಸಿತೋ ಮೇಘಃ ಶಕ್ರಚಾಪೇನ ಶೋಭಿತಃ ।
ಅಶೋಭತ ಮಹಾರಾಜ ಪಾಂಡುಪುತ್ರಸ್ತಥಾ ರಣೇ ॥೫೦॥

ಕುತ್ತಿಗೆಯಲ್ಲಿ ಮಹಾಧನುಸ್ಸನ್ನು ಹೊತ್ತು ನಕುಲನು ಪರಿವೇಷಗೊಂಡ ಚಂದ್ರ ಆಕಾಶದಲ್ಲಿ ಶೋಭಿಸುವಂತೆ, ಕರಿಮೋಡ ಕಾಮನ ಬಿಲ್ಲಿನಿಂದ ಶೋಭಿಸುವಂತೆ ಶೋಭಿಸಿದ.

ತಮಬ್ರವೀತ್ ತದಾ ಕರ್ಣೋ ವ್ಯರ್ಥಂ ವ್ಯಾಹೃತವಾನಸಿ ।
ವದೇದಾನೀಂ ಪುನರ್ಹೃಷ್ಟೋ ವಧ್ಯೋ ಮೇ ತ್ವಂ ಪುನಃ ಪುನಃ ॥೫೧॥

ಆಗ ಕರ್ಣ ನಕುಲನಿಗೆ ಹೇಳಿದ— ನಕುಲ, ನೀನು ವ್ಯರ್ಥವಾದ ಮಾತನ್ನಾಡಿರುವೆ. ಈಗ ಪುನಃ ಹೃಷ್ಟನಾಗಿ 'ನೀನು ನನ್ನ ಕೈಯಿಂದ ಸಾಯುವೆ' ಎಂದು ಪುನಃಪುನಃ ಹೇಳು, ನೋಡೋಣ.

ಮಾ ಯೋತ್ಸೀಃ ಕುರುಭಿಃ ಸಾರ್ಧಂ ಬಲವದ್ಭಿಶ್ಚ ಪಾಂಡವ ।
ಸದೃಶೈಸ್ತಾತ ಯುಧ್ಯಸ್ವ ವ್ರೀಡಾಂ ಮಾ ಕುರು ಪಾಂಡವ ॥೫೨॥

'ಮಗು, ನಕುಲ, ಬಲಿಷ್ಠರಾದ ಕೌರವರೊಂದಿಗೆ ಯುದ್ಧಕ್ಕೆ ಬರಬೇಡ. ನಾಚಿಕೆ ಪಡಬೇಡ, ಸಮಾನಿಕರೊಂದಿಗೆ ಯುದ್ಧಮಾಡು.'

ಅಥಾಸ್ಯ ತಂ ರಥಂ ದಿವ್ಯಂ ತಿಲಶೋ ವ್ಯಧಮಚ್ಛರೈಃ ।
ಪತಾಕಾಂ ಚಕ್ರರಕ್ಷಾಂಶ್ಚ ಗದಾಂ ಖಡ್ಗಂ ಚ ಮಾರಿಷ ॥೪೨॥

ಶತಚಂದ್ರಂ ಚ ತಚ್ಚರ್ಮ ಸರ್ವೋಪಕರಣಾನಿ ಚ ।
ಸುವರ್ಣವಿಕೃತಂ ತಚ್ಚ ಧನುಃ ಸಶರಮಾಹವೇ ॥೪೩॥

ಬಳಿಕ ನಕುಲನ ದಿವ್ಯವಾದ ರಥವನ್ನೂ ಪತಾಕೆಯನ್ನೂ ಚಕ್ರರಕ್ಷಕರನ್ನೂ ಗದೆಯನ್ನೂ ಖಡ್ಗವನ್ನೂ ಶತಚಂದ್ರಗುರಾಣಿಯನ್ನೂ ಎಲ್ಲ ಯುದ್ಧೋಪಕರಣಗಳನ್ನೂ ಬಂಗಾರದಿಂದ ಮಾಡಿದ ಧನುರ್ಬಾಣಗಳನ್ನೂ ಕರ್ಣನು ಯುದ್ಧದಲ್ಲಿ ಎಳ್ಳುಕಾಳಿನಷ್ಟು ಪುಡಿಗೈದ.

ಹತಾಶ್ವೋ ವಿರಥಶ್ಚೈವ ವಿಚರ್ಮಾ ಚ ವಿಶಾಂಪತೇ ।
ಅವತೀರ್ಯ ರಥಾತ್ ತೂರ್ಣಂ ಪರಿಘಂ ಗೃಹ್ಯ ವಿಷ್ಠಿತಃ ॥೪೪॥

ರಾಜನೆ, ನಕುಲ ಈಗ ಕುದುರೆ ರಥ ಗುರಾಣಿಗಳಿಲ್ಲದವನಾಗಿ ರಥದಿಂದ ಬೇಗನೆ ಕೆಳಗೆ ಇಳಿದು ಪರಿಘವನ್ನು ಹಿಡಿದು ನಿಂತ.

ಸಮುದ್ಯತಂ ಮಹಾಘೋರಂ ಪರಿಘಂ ತಸ್ಯ ಸೂತಜಃ ।
ವ್ಯಧಮತ್ ಸಾಯಕೈಸ್ತೂರ್ಣಂ ತದದ್ಭುತಮಿವಾಭವತ್ ॥೪೫॥

ನಕುಲನು ಎತ್ತಿದ ಮಹಾಭಯಂಕರವಾದ ಪರಿಘವನ್ನು ಕೂಡ ಕರ್ಣ ಬೇಗನೆ ಬಾಣಗಳಿಂದ ಕತ್ತರಿಸಿದ. ಇದು ಅದ್ಭುತವಾಗಿತ್ತು.

ವ್ಯಾಯುಧಂ ಚೈನಮಾಲಕ್ಷ್ಯ ಶರೈಃ ಸನ್ನತಪರ್ವಭಿಃ ।
ಅರ್ದಯನ್ ಬಹುಶಃ ಕರ್ಣೋ ನ ಚೈನಂ ಸಮಪೀಡಯತ್ ॥೪೬॥

ನಕುಲ ಆಯುಧರಹಿತನಾಗಿರುವುದನ್ನು ನೋಡಿ ಕರ್ಣ ಅವನನ್ನು ಡೊಂಕುಗಿಣ್ಣಿನ ಬಾಣಗಳಿಂದ ಬಹುವಾಗಿ ಹೊಡೆದ. ಆದರೆ ಅವನನ್ನು ಪೀಡಿಸಲಿಲ್ಲ.

ಸ ವಧ್ಯಮಾನಃ ಸಮರೇ ಕೃತಾಸ್ತ್ರೇಣ ಬಲೀಯಸಾ ।
ಪ್ರಾದ್ರವತ್ ಸಹಸಾ ರಾಜನ್ ನಕುಲೋ ವ್ಯಾಕುಲೇಂದ್ರಿಯಃ ॥೪೭॥

ಕರ್ಣನು ಅಸ್ತ್ರವಿದ್ಯಾ ಪಾರಂಗತ, ಬಲಿಷ್ಠ ರಾಜನೆ, ಅವನು ಹೊಡೆಯುವಾಗ ನಕುಲನು ಇಂದ್ರಿಯಗಳಲ್ಲಿ ವ್ಯಾಕುಲಗೊಂಡು ಬೇಗನೆ ಪಲಾಯನ ಮಾಡತೊಡಗಿದ.

ತಮಭಿದ್ರುತ್ಯ ರಾಧೇಯಃ ಪ್ರಹಸನ್ ವೈ ಪುನಃ ಪುನಃ ।
ಸಜ್ಯಂ ಚ ಸ್ವಧನುಃ ಕಂಠೇ ವಿಸಸರ್ಜ ಚ ಭಾರತ ॥೪೮॥

ಕರ್ಣ ಅವನನ್ನು ಬೆನ್ನಟ್ಟಿ ಪುನಃ ಪುನಃ ನಗುತ್ತ ಹೆದೆಯೇರಿಸಿದ್ದ ಬಿಲ್ಲನ್ನು ಕುತ್ತಿಗೆಗೆ ಹಾಕಿದ.

ತತಃ ಸ ಶುಶುಭೇ ರಾಜನ್ ಕಂಠಸಕ್ತಮಹಾಧನುಃ ।
ಪರಿವೇಷಮನುಪ್ರಾಪ್ತೋ ನಭಸೀವ ತಮೋನುದಃ ॥೪೯॥

ಯಥಾ ಚೈವಾಸಿತೋ ಮೇಘಃ ಶಕ್ರಚಾಪೇನ ಶೋಭಿತಃ ।
ಅಶೋಭತ ಮಹಾರಾಜ ಪಾಂಡುಪುತ್ರಸ್ತಥಾ ರಣೇ ॥೫೦॥

ಕುತ್ತಿಗೆಯಲ್ಲಿ ಮಹಾಧನುಸ್ಸನ್ನು ಹೊತ್ತು ನಕುಲನು ಪರಿವೇಷಗೊಂಡ ಚಂದ್ರ ಆಕಾಶದಲ್ಲಿ ಶೋಭಿಸುವಂತೆ, ಕರಿಮೋಡ ಕಾಮನ ಬಿಲ್ಲಿನಿಂದ ಶೋಭಿಸುವಂತೆ ಶೋಭಿಸಿದ.

ತಮಬ್ರವೀತ್ ತದಾ ಕರ್ಣೋ ವ್ಯರ್ಥಂ ವ್ಯಾಹೃತವಾನಸಿ ।
ವದೇದಾನೀಂ ಪುನರ್ಹೃಷ್ಟೋ ವಧ್ಯೋ ಮೇ ತ್ವಂ ಪುನಃ ಪುನಃ ॥೫೧॥

ಆಗ ಕರ್ಣ ನಕುಲನಿಗೆ ಹೇಳಿದ— ನಕುಲ, ನೀನು ವ್ಯರ್ಥವಾದ ಮಾತನ್ನಾಡಿರುವೆ. ಈಗ ಪುನಃ ಹೃಷ್ಟನಾಗಿ 'ನೀನು ನನ್ನ ಕೈಯಿಂದ ಸಾಯುವೆ' ಎಂದು ಪುನಃಪುನಃ ಹೇಳು, ನೋಡೋಣ.

ಮಾ ಯೋತ್ಸೀಃ ಕುರುಭಿಃ ಸಾರ್ಧಂ ಬಲವದ್ಭಿಶ್ಚ ಪಾಂಡವ ।
ಸದೃಶೈಸ್ತಾತ ಯುಧ್ಯಸ್ವ ವ್ರೀಡಾಂ ಮಾ ಕುರು ಪಾಂಡವ ॥೫೨॥

'ಮಗು, ನಕುಲ, ಬಲಿಷ್ಠರಾದ ಕೌರವರೊಂದಿಗೆ ಯುದ್ಧಕ್ಕೆ ಬರಬೇಡ. ನಾಚಿಕೆ ಪಡಬೇಡ, ಸಮಾನಿಕರೊಂದಿಗೆ ಯುದ್ಧಮಾಡು.'

ಗೃಹಂ ವಾ ಗಚ್ಛ ಮಾದ್ರೇಯ ಯತ್ರ ವಾ ಕೇಶವಾರ್ಜುನೌ ।
ಏವಮುಕ್ತ್ವಾ ಮಹಾರಾಜ, ವಿಸಸರ್ಜ ಸ ತಂ ತದಾ ॥೫೩॥

'ನಕುಲ, ನೀನು ಮನೆಗೇ ಹೋಗು, ಅಥವಾ ಕೃಷ್ಣಾರ್ಜುನರಿರುವಲ್ಲಿಗೇ ಹೋಗು.' ಮಹಾರಾಜ, ಕರ್ಣನು ಹೀಗೆ ನಕುಲನನ್ನು ಆಗ ಬಿಟ್ಟುಬಿಟ್ಟ

ವಧೇ ಪ್ರಾಪ್ತೇ ತು ತಂ ಶತ್ರುಂ ನಾವಧೀತ್ ಸೂತನಂದನಃ ।
ಸ್ಮೃತ್ವಾ ಮಾತುರ್ವಚೋ ರಾಜನ್ ತತ ಏನಂ ವ್ಯಸರ್ಜಯತ್ ॥೫೪॥

ವಧಮಾಡಲು ಅವಕಾಶ ಸಿಕ್ಕಿರುವಾಗಲೂ ಶತ್ರುವನ್ನು ಕರ್ಣ ಕೊಲ್ಲಲಿಲ್ಲ. ಏಕೆಂದರೆ ಅವನು ತಾಯಿಗೆ ಕೊಟ್ಟಿದ್ದ ಮಾತನ್ನು ನೆನೆದ. ಅದರಿಂದ ನಕುಲನನ್ನು ಬಿಟ್ಟ

ವಿಸೃಷ್ಟಃ ಪಾಂಡವೋ ರಾಜನ್ ಸೂತಪುತ್ರೇಣ ಧನ್ವಿನಾ ।
ವ್ರೀಡನ್ನಿವ ಜಗಾಮಾಥ ಯುಧಿಷ್ಠಿರರಥಂ ಪ್ರತಿ ॥೫೫॥

ರಾಜನೆ, ಧನುರ್ಧಾರಿಯಾದ ಕರ್ಣನು ಬಿಟ್ಟಾಗ ನಕುಲ ನಾಚಿ ಯುಧಿಷ್ಠಿರನ ರಥಕ್ಕೆ ನಡೆದ.

ಕರ್ಣನು ನಕುಲನನ್ನೇಕೆ ಕೊಲ್ಲದೆ ಬಿಟ್ಟ? ತಾಯಿಗೆ ಹಾಗೆ ಆತ ಮಾತು ಕೊಟ್ಟಿದ್ದನೆಂದರೆ ಇದು ಸರಿಯಾದ ಕಾರಣವಾಗಲಾರದು. ಇದು ರಹಸ್ಯದಲ್ಲಿ ನಡೆದ ಮಾತುಕತೆ. ಸಂಜಯನಿಗೆ ಇದು ತಿಳಿದಿರುವುದು ಶಕ್ಯವಿಲ್ಲ. ಅದರಿಂದ ಈ ಭಾಗ ಭಾರತದಲ್ಲಿ ಪ್ರಕ್ಷಿಪ್ತ. ಕರ್ಣನು ಕುತ್ತಿಗೆಗೆ ಬಿಲ್ಲನ್ನು ಹಾಕುವಾಗ ನಕುಲನೇಕೆ ಸುಮ್ಮನಿದ್ದ? ಅದನ್ನು ಪೌರುಷದಿಂದ ಕಿತ್ತೊಗೆಯಲಾಗುತ್ತಿದ್ದಿಲ್ಲವೆ? ಅದರಿಂದಲೂ ಈ ಭಾಗ ಪ್ರಕ್ಷಿಪ್ತ ಎಂದು ವಿಮರ್ಶಕರು ಆಕ್ಷೇಪಿಸುತ್ತಾರೆ.

ವಸ್ತುತಃ ಈ ಆಕ್ಷೇಪ ಸಲ್ಲದು. ವ್ಯಾಸರ ಅನುಗ್ರಹದಿಂದ ಸಂಜಯ ಎಲ್ಲವನ್ನೂ ತಿಳಿದಿದ್ದಾನೆ. ಅದನ್ನು ಧೃತರಾಷ್ಟ್ರನಿಗೆ ಹೇಳಿದ್ದಾನೆ. ಮತ್ತು ನಕುಲನು ತನ್ನ ಕುತ್ತಿಗೆಯಿಂದ ಬಿಲ್ಲನ್ನು ಕಿತ್ತುಹಾಕಿದ ಮಾತ್ರಕ್ಕೆ ಅದು ಪೌರುಷ ಎನಿಸುವುದಿಲ್ಲ ಮತ್ತು ಹಾಕಿಸಿಕೊಂಡಿದ್ದರಿಂದ ತನಗಾದ ಅಪಮಾನವನ್ನು ಕಿತ್ತುಹಾಕಿದ್ದರಿಂದ ಕಳೆದುಕೊಂಡಂತಾಗುವುದಿಲ್ಲ. ಅದರಿಂದ ಸುಮ್ಮನಿದ್ದ.

ಆರುರೋಹ ರಥಂ ಚಾಪಿ ಧರ್ಮರಾಜಸ್ಯ ಪಾಂಡವಃ ।
ನಿಃಶ್ವಸನ್ ದುಃಖಸಂತಪ್ತಃ ಕುಂಭಕ್ಷಿಪ್ತ ಇವೋರಗಃ ॥೫೬॥

ನಕುಲನು ಧರ್ಮರಾಜನ ರಥವನ್ನೇರಿದ. ತಾನು ಕರ್ಣನಿಗೆ ಸೋತೆನೆಂದು ದುಃಖ, ಅಪಮಾನಗಳಿಂದ ಮಡಕೆಯಲ್ಲಿ ಹಿಡಿದಿಟ್ಟ ಹಾವಿನಂತೆ ನಿಟ್ಟುಸಿರಿಟ್ಟ ದುಃಖ ಸಂತಪ್ತನಾದ.

ತಂ ವಿಜಿತ್ಯ ರಣೇ ಕರ್ಣಃ ಪಾಂಚಾಲಾಂಸ್ತ್ವರಿತೋ ಯಯೌ ।
ರಥೇನಾತಿಪತಾಕೇನ ಚಂದ್ರವರ್ಣಹಯೇನ ಚ ॥೫೭॥

ನಕುಲನನ್ನು ರಣದಲ್ಲಿ ಗೆದ್ದು ಕರ್ಣನು ಬಹಳ ಪತಾಕೆಗಳಿಂದ ಯುಕ್ತವಾದ, ಚಂದ್ರನಂತೆ ಬಿಳಿಬಣ್ಣದ ಕುದುರೆಗಳಿಂದ ಕೂಡಿದ ರಥದಿಂದ ಬೇಗನೆ ಪಾಂಚಾಲಸೈನ್ಯದ ಕಡೆಗೆ ತೆರಳಿದ.

ತತ್ರಾಕ್ರಂದೋ ಮಹಾನಾಸೀತ್ ಪಾಂಡವಾನಾಂ ವಿಶಾಂಪತೇ ।
ದೃಷ್ಟ್ವಾ ಸೇನಾಪತಿಂ ಯಾಂತಂ ಪಾಂಚಾಲಾನಾಂ ರಥವ್ರಜಾನ್ ॥೫೮॥

ರಾಜನೆ, ಸೇನಾಪತಿ ಕರ್ಣನು ಪಾಂಚಾಲರ ರಥಸೈನ್ಯದ ಕಡೆಗೆ ಹೋಗುತ್ತಿದ್ದುದನ್ನು ಕಂಡು ಪಾಂಡವರು ಬಹಳ ಹಾಹಾಕಾರ ಮಾಡಿದರು.

ತತ್ರಾಕರೋನ್ಮಹಾರಾಜ ಕದನಂ ಸೂತನಂದನಃ ।
ಮಧ್ಯಂ ಪ್ರಾಪ್ತೇ ದಿನಕರೇ ಚಕ್ರವದ್ ವ್ಯಚರತ್ ಪ್ರಭುಃ ॥೫೯॥

ಅಲ್ಲಿ ಮಹಾರಾಜ, ಕರ್ಣನು ಯುದ್ಧಮಾಡಿದ. ಸೂರ್ಯನು ಆಕಾಶದಲ್ಲಿ ಮಧ್ಯಕ್ಕೆ ಬಂದಿದ್ದಾಗ ವೀರ ಕರ್ಣನು ಚಕ್ರದಂತೆ ಸಂಚರಿಸಿದ.

ಭಗ್ನಚಕ್ರೈ ರಥೈಃ ಕೇಚಿಚ್ಛಿನ್ನಧ್ವಜಪತಾಕಿಭಿಃ ।
ಹತಾಶ್ವೈರ್ಹತಸೂತೈಶ್ಚ ಭಗ್ನಾಕ್ಷೈ ರ್ಭಗ್ನಕೂಬರೈಃ ॥೬೦॥
ಹ್ರಿಯಮಾಣಾನಪಶ್ಯಾಮ ಪಾಂಚಾಲಾನಾಂ ರಥವ್ರಜಾನ್ ॥೬೧॥

ರಥಗಳಲ್ಲಿ ಚಕ್ರಗಳು ಧ್ವಜಪತಾಕೆಗಳು ಕುದುರೆ ಸಾರಥಿಗಳು ಆಚ್ಚುಮರಗಳು ಎಲ್ಲವೂ ಪುಡಿಯಾದುವು. ಹೀಗೆ ಪಾಂಚಾಲರ ರಥಗಳ ಸಮೂಹಗಳೇ ನಾಶವಾಗುತ್ತಿದ್ದುದನ್ನು ಕಂಡೆವು.

ತತ್ರ ತತ್ರ ಚ ಸಂಭ್ರಾಂತಾ ವಿಚೇರುಸ್ತತ್ರ ಕುಂಜರಾಃ ।
ದಾವಾಗ್ನ್ಯಭಿಪರೀತಾಂಗಾ ಯಥೈವ ಸ್ಯುರ್ಮಹಾವನೇ ॥೬೨॥

ಆನೆಗಳೂ ಅಲ್ಲಲ್ಲಿ ಮಹಾ ಅರಣ್ಯದಲ್ಲಿ ಕಾಳ್ಗಿಚ್ಚಿನಿಂದ ಸುತ್ತುವರಿಯಲ್ಪಟ್ಟ ಆನೆಗಳಂತೆ ಗಾಬರಿಗೊಂಡು ಸಂಚರಿಸಿದುವು.

ಭಿನ್ನಕುಂಭಾಃ ಸರುಧಿರಾಶ್ಚಿನ್ನಹಸ್ತಾಶ್ಚ ವಾರಣಾಃ ।
ಭಿನ್ನಗಾತ್ರಾವರಾಶ್ಚೈವ ಚ್ಛಿನ್ನವಾಲಾಶ್ಚ ಮಾರಿಷ ॥೬೩॥
ಭಿನ್ನಾಭ್ರಾಣೀವ ಸಂಪೇತುರ್ವಧ್ಯಮಾನಾ ಮಹಾತ್ಮನಾ ॥೬೪॥

ಆನೆಗಳ ಕುಂಭಸ್ಥಳಗಳು ಒಡೆದುವು. ಸೊಂಡಿಲುಗಳು ಕಡಿದುಹೋದವು. ನೆತ್ತರು ಸುರಿಸಿದುವು, ಕವಚಗಳು ಪುಡಿಯಾದುವು, ಬಾಲಗಳು ಕತ್ತರಿಸಿ ಹೋದುವು. ಮಹಾತ್ಮನಾದ ಕರ್ಣನಿಂದ ಹತವಾಗುತ್ತಿದ್ದ ಆನೆಗಳು ಚದುರಿದ ಕಾರ್ಮೋಡ ಗಳಂತೆ ನೆಲದಲ್ಲಿ ಬಿದ್ದುವು.

ಅಪರೇ ತ್ರಾಸಿತಾ ನಾಗಾ ನಾರಾಚಶರತೋಮರೈಃ ।
ತಮೇವಾಭಿಮುಖಂ ಜಗ್ಮುಃ ಶಲಭಾ ಇವ ಪಾವಕಮ್ ॥೬೫॥

ಕೆಲವು ಆನೆಗಳು ಕರ್ಣನ ನಾರಾಚ ಶರ ತೋಮರಗಳಿಂದ ಹೊಡೆಸಿ ಕೊಂಡು ಅವನೆದುರಿಗೇ ದೀಪದ ಹುಳುಗಳು ಬೆಂಕಿಯಲ್ಲಿಯೇ ಬೀಳುವಂತೆ ಧಾವಿಸಿದುವು.

ಅಪರೇ ನಿಷ್ಪನಂತಸ್ತು ವ್ಯದೃಶ್ಯಂತ ಮಹಾದ್ವಿಪಾಃ ।
ಕ್ಷರಂತಃ ಶೋಣಿತಂ ಗಾತ್ರೈರ್ನಗಾ ಇವ ಜಲಸ್ರವಾಃ ॥೬೬॥

ಇನ್ನು ಕೆಲವು ದೊಡ್ಡ ಆನೆಗಳು ಗಟ್ಟಿಯಾಗಿ ಕೂಗಿಕೊಳ್ಳುತ್ತ ಬೆಟ್ಟಗಳು ನೀರಿನ ಪ್ರವಾಹವನ್ನು ಹರಿಸುವಂತೆ ಮೈಯಿಂದ ರಕ್ತದ ಹೊಳೆ ಹರಿಸಿದುವು.

ಉರಶ್ಛದೈರ್ವಿಮುಕ್ತಾಶ್ಚ ವಾಲಬಂಧೈಶ್ಚ ವಾಜಿನಃ ।
ರಾಜತೈಶ್ಚ ತಥಾ ಕಾಂಸ್ಯೈಃ ಸೌವರ್ಣೈಶ್ಚ ವಿಭೂಷಣೈಃ ॥೬೭॥

ಕುದುರೆಗಳಿಗೆ ಎದೆಮುಚ್ಚುವ ಕವಚಗಳಿಲ್ಲವಾಯಿತು. ಬಾಲಕ್ಕೆ ಚರ್ಮದ ಪಟ್ಟಿಗಳಿಲ್ಲವಾಯಿತು. ಬೆಳ್ಳಿ ಕಂಚು ಬಂಗಾರಗಳ ಒಡವೆಗಳಿಲ್ಲವಾದುವು.

ಹೀನಾಂಶ್ಚಾಭರಣೈಶ್ಚೈವ ಖಲೀನೈಶ್ಚ ವಿವರ್ಜಿತಾನ್ ।
ಚಾಮರೈಶ್ಚ ಕುಥಾಭಿಶ್ಚ ತೂಣೀರೈಃ ಪತಿತೈರಪಿ ॥೬೮॥

ಆಭರಣಗಳಿಲ್ಲ, ಕಡಿವಾಣಗಳಿಲ್ಲ, ಚಾಮರ ರತ್ನಗಂಬಳಿ ಬತ್ತಳಿಕೆಗಳೆಲ್ಲವೂ ಬಿದ್ದುಹೋದುವು.

ನಿಹತೈಃ ಸಾದಿಭಿಶ್ಚೈವ ಶೂರೈರಾಹವಶೋಭಿಭಿಃ ।
ಅಪಶ್ಯಾಮ ರಣೇ ತತ್ರ ಭ್ರಾಮ್ಯಮಾಣಾನ್ ಹಯೋತ್ತಮಾನ್ ॥೬೯॥

ಯುದ್ಧದಲ್ಲಿ ಶೋಭಿಸುವ ಶೂರರಾದ ಅಶ್ವಾರೋಹಿಗಳೂ ಇಲ್ಲದೆ ರಣರಂಗದಲ್ಲಿ ಶ್ರೇಷ್ಠವಾದ ಕೆಲವು ಕುದುರೆಗಳು ಓಡಾಡುತ್ತಿದ್ದುದನ್ನು ಕಂಡೆವು.

ಪ್ರಾಸೈಃ ಖಡ್ಗೈಶ್ಚ ಸಂಸ್ಯೂತಾನೃಷ್ಟಿಭಿಶ್ಚೈವ ಭಾರತ ॥೭೦॥
ಹಯಯೋಧಾನಪಶ್ಯಾಮ ಕಂಚುಕೋಷ್ಣೀಷವೇಷ್ಟಿತಾನ್ ।
ನಿಹತಾನ್ ಧಾವಮಾನಾಂಶ್ಚ ವೇಷ್ಟಮಾನಾಂಶ್ಚ ಮಾರಿಷ ॥೭೧॥
ನಾನಾಂಗಾವಯವೈರ್ಹೀನಾಂಸ್ತತ್ರತತ್ರೈವ ಭಾರತ ॥೭೨॥

ಕೆಲವು ಕುದುರೆಗಳು ಪ್ರಾಸ ಖಡ್ಗ ಋಷ್ಟಿ ಮುಂತಾದವುಗಳಿಂದ ಗಾಯಗೊಂಡು ಹತವಾದವು. ಕವಚ ಶಿರಸ್ತ್ರಾಣಗಳನ್ನು ಧರಿಸಿದ ಅಶ್ವಾರೋಹಿ ಯೋಧರು ಹೊಡೆಸಿಕೊಂಡು ಧಾವಿಸುವುದನ್ನೂ ನಾನಾ ಅಂಗ ಅವಯವಗಳಿಂದ ರಹಿತರಾಗಿ ಅಲ್ಲಲ್ಲಿ ಬಿದ್ದು ಹೊರಳಾಡುವುದನ್ನೂ ಕಂಡೆವು.

ರಥಾನ್ ಹೇಮಪರಿಷ್ಕಾರಾನ್ ಸುಯುಕ್ತಾನ್ ಜವನೈರ್ಹಯೈಃ ।
ಭ್ರಾಮ್ಯಮಾಣಾನಪಶ್ಯಾಮ ಹತೇಷು ರಥಿಷು ದ್ರುತಮ್ ॥೭೩॥

ಬಂಗಾರದ ಅಲಂಕಾರಗಳಿಂದ ಕೂಡಿದ್ದ ವೇಗದ ಕುದುರೆಗಳನ್ನು ಕಟ್ಟಿದ್ದ ರಥಗಳು, ರಥಿಕರು ಹತರಾದಾಗ ವೇಗವಾಗಿ ರಣಾಂಗಣದಲ್ಲಿ ಸಂಚರಿಸುತ್ತಿದ್ದು ದನ್ನು ಕಂಡೆವು.

ಹತಾಕ್ಷಕೂಬರಾನ್ ಕಾಂಶ್ಚಿದ್ ಭಗ್ನಚಕ್ರಾಂಶ್ಚ ಭಾರತ ।
ವಿಪತಾಕಧ್ವಜಾಂಶ್ಚೈವ ಛಿನ್ನೋಪಾದಂಡಬಂಧುರಾನ್ ॥೭೪॥
ವಿಹೀನಾನ್ ರಥಿಭಿಸ್ತತ್ರ ಧಾವಮಾನಾಂಸ್ತತಸ್ತತಃ ।
ರಥಾಂಸ್ತು ತತ್ರ ವಿಚ್ಛಿನ್ನಾಸ್ತಿಲಶಃ ಕರ್ಣವಿಕ್ರಮೈಃ ॥೭೫॥

ರಥಗಳಲ್ಲಿ ಅಚ್ಚುಮರ ಮೂಕಿಗಳು ಚಕ್ರಗಳು ಪತಾಕೆ ಧ್ವಜಗಳು ಈಷಾ ದಂಡಗಳು ಮುರಿದುದನ್ನು ಕಂಡೆವು. ಅಂಥ ರಥಗಳು ರಥಿಕರಿಲ್ಲದೆ ಅಲ್ಲಲ್ಲಿ ಓಡಾಡುವುದನ್ನೂ ಕಂಡೆವು. ಅನೇಕ ರಥಗಳು ಕರ್ಣನ ಪರಾಕ್ರಮದಿಂದ ಎಳ್ಳುಕಾಳಿನಷ್ಟು ಚೂರಾದುದನ್ನು ಕಂಡೆವು.

ಸೂತಪುತ್ರಶರೈಸ್ತಪ್ತಾನ್ ಅಪಶ್ಯಾಮ ಜಗತ್ಪತೇ ।
ವಿಶಸ್ತ್ರಾಂಶ್ಚ ತಥೈವಾನ್ಯಾನ್ ಸಶಸ್ತ್ರಾಂಶ್ಚ ಬಹೂನ್ ಹತಾನ್ ॥೭೬॥

ರಾಜನೆ, ಕರ್ಣನ ಬಾಣಗಳಿಂದ ಸತ್ತವರು ಕೆಲವರು ವಿಶಸ್ತ್ರರಾಗಿ ಸತ್ತರು. ಸಶಸ್ತ್ರರಾಗಿ ಬಹುಮಂದಿ ಸತ್ತಿರುವುದನ್ನು ಕಂಡೆವು.

ನಾನಾವರ್ಣವಿಚಿತ್ರಾಭಿಃ ಪತಾಕಾಭಿರಲಂಕೃತಾನ್ ।
ನಾಗಾನವಯವೈರ್ಹೀನಾಂಸ್ತತ್ರ ತತ್ರ ವಿನಿಷ್ಠಿತಾನ್ ॥೭೭॥

ನಾನಾ ವರ್ಣಗಳ ವಿಚಿತ್ರ ಪತಾಕೆಗಳಿಂದ ಅಲಂಕೃತವಾದ ಆನೆಗಳು ಅವಯವಗಳನ್ನು ಕಡಿದುಕೊಂಡು ಅಲ್ಲಲ್ಲಿ ನಿಂತಿದ್ದುದನ್ನು ಕಂಡೆವು.

ತಾರಕಾಜಾಲಸಂಛನ್ನಾನ್ ಉರುಘಂಟೋಪಶೋಭಿತಾನ್ ।
ವಾರಣಾನನುಪಶ್ಯಾಮ ಧಾವಮಾನಾನ್ ಸಮಂತತಃ ॥೭೮॥

ನಕ್ಷತ್ರಸಮೂಹದ ಚಿನ್ನ ಬೆಳ್ಳಿ ಅಲಂಕಾರಗಳಿಂದ, ದೊಡ್ಡ ಗಂಟೆಗಳಿಂದ ಶೋಭಿಸುವ ಆನೆಗಳು ಆರೋಹಿಗಳಿಲ್ಲದೆ ಎಲ್ಲೆಡೆ ಧಾವಿಸುವುದನ್ನು ಕಂಡೆವು.

ಶಿರೋಭಿರ್ಬಾಹುಭಿರ್ಹೀನಾನ್ ಭಿನ್ನೈರೂರುಭಿರೇವ ಚ ।
ಕರ್ಣಚಾಪಚ್ಯುತೈರ್ಬಾಣೈರದೃಶ್ಯಂತ ವಿನಾಕೃತಾಃ ॥೭೯॥

ಕರ್ಣನ ಬಿಲ್ಲಿನಿಂದ ಹೊರಟ ಬಾಣಗಳು ಯೋಧರನ್ನು ತಲೆ ತೋಳು ತೊಡೆಗಳಿಲ್ಲದವರಾಗಿ ಮಾಡಿದುದು ಎಲ್ಲೆಡೆ ಕಂಡುಬಂದಿತು.

ಮಹಾನ್ ವ್ಯತಿಕರೋ ರೌದ್ರೋ ಯೋಧಾನಾಮನ್ವದೃಶ್ಯತ ।
ಕರ್ಣಸಾಯಕನುನ್ನಾನಾಂ ವಧ್ಯತಾಂ ನಿಶಿತೈಃ ಶರೈಃ ॥೮೦॥

ಕರ್ಣನ ಬಾಣಗಳಿಂದ ಪೀಡಿತರಾಗಿ ಹರಿತವಾದ ಬಾಣಗಳಿಂದ ಹತರಾಗುವ ಯೋಧರ ಮಹಾಭಯಂಕರ ವಿನಾಶ ಕಂಡುಬಂದಿತು.

ತೇ ವಧ್ಯಮಾನಾಃ ಸಮರೇ ಸೂತಪುತ್ರೇಣ ಸೃಂಜಯಾಃ ।
ತಮೇವಾಭಿಮುಖಾ ಯಾಂತಿ ಪತಂಗಾ ಇವ ಪಾವಕಮ್ ॥೮೧॥

ಸೃಂಜಯಯೋಧರು ಕರ್ಣನಿಂದ ಯುದ್ಧದಲ್ಲಿ ಹೊಡೆಸಿಕೊಂಡು, ದೀಪದ ಹುಳುಗಳು ಬೆಂಕಿಯ ಕಡೆಗೆ ಧಾವಿಸುವಂತೆ, ಕರ್ಣನ ಕಡೆಗೇ ಧಾವಿಸಿದರು.

ತಂ ದಹಂತಮನೀಕಾನಿ ತತ್ರ ತತ್ರ ಮಹಾರಥಮ್ ।
ಕ್ಷತ್ರಿಯಾ ವರ್ಜಯಾಮಾಸುರ್ಘೋರಾಂತಾಗ್ನಿಮಿವೋಲ್ಬಣಮ್ ॥೮೨॥

ಮಹಾರಥನಾದ ಕರ್ಣನು ಘೋರವಾದ ಪ್ರಳಯಾಗ್ನಿಯಂತೆ ಸೈನ್ಯಗಳನ್ನು ಸುಡುತ್ತಿದ್ದರೆ, ಕ್ಷತ್ರಿಯರು ಕೈಲಾಗದೆ ಅಸಹಾಯಕರಾಗಿ ದೂರ ನಿಂತರು.

ಹತಶೇಷಾಸ್ತು ಯೇ ವೀರಾಃ ಪಾಂಚಾಲಾನಾಂ ರಥವ್ರಜಾಃ ।
ತಾನ್ ಭಗ್ನಾನ್ ದ್ರುತಂ ಕರ್ಣಃ ಪೃಷ್ಠತೋ ವಿಕಿರನ್ ಶರೈಃ ॥೮೩॥

ಅಳಿದುಳಿದ ಪಾಂಚಾಲರ ವೀರರಥಿಕರು ಕೂಡ ಸೋತು ಓಡಿದರು. ಅವರನ್ನು ಕರ್ಣ ಬಾಣಗಳನ್ನೆಸೆಯುತ್ತ ಬೆನ್ನಟ್ಟಿದ.

ಅಭ್ಯದ್ರವತ ತೇಜಸ್ವೀ ವಿಶೀರ್ಣಕವಚಧ್ವಜಾನ್ ।
ತಾಪಯನ್ ಸಮರೇ ಬಾಣೈಃ ಸೂತಪುತ್ರೋ ಮಹಾರಥಃ ।
ಮಧ್ಯಂದಿನಮನುಪ್ರಾಪ್ತೋ ಭೂತಾನೀವ ತಮೋನುದಃ ॥೮೪॥

ಕವಚಧ್ವಜರಹಿತರಾದ ಆ ಯೋಧರನ್ನು ಪರಾಕ್ರಮಶಾಲಿ ಮಹಾರಥನಾದ ಕರ್ಣ ಬೆನ್ನಟ್ಟಿದ. ಮಧ್ಯಾಹ್ನದ ಸೂರ್ಯ ಪ್ರಾಣಿಗಳನ್ನು ಸುಡುವಂತೆ ಬಾಣಗಳಿಂದ ಕರ್ಣ ಅವರನ್ನು ಸಂತಾಪಗೊಳಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಚತುರ್ವಿಂಶೋಽಧ್ಯಾಯಃ ॥೨೪॥

❖

ಇಪ್ಪತ್ತೈದನೆಯ ಅಧ್ಯಾಯ

ಉಲೂಕ–ಯುಯುತ್ಸು, ಶತಾನೀಕ–ಶ್ರುತಕರ್ಮ,
ಸುತಸೋಮ–ಶಕುನಿ ಯುದ್ಧಗಳು ಸಮವಾದುವು.

ಸಂಜಯಃ

ಯುಯುತ್ಸುಂ ತವ ಪುತ್ರಸ್ಯ ತಾಪಯಂತಂ ವರೂಥಿನೀಮ್ ।
ಉಲೂಕೋऽಭ್ಯಪತತ್ ತೂರ್ಣಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ– ಯುಯುತ್ಸು ನಿನ್ನ ಮಗನ ಸೈನ್ಯವನ್ನು ಸಂತಾಪಗೊಳಿಸುತ್ತಿದ್ದಾಗ ಉಲೂಕ ಬೇಗನೆ ಎದುರಿಗೆ ಬಂದು 'ನಿಲ್ಲುನಿಲ್ಲು' ಎಂದ.

ಯುಯುತ್ಸುಶ್ಚ ತತೋ ರಾಜನ್ ಶಿತಧಾರೇಣ ಪತ್ರಿಣಾ ।
ಉಲೂಕಂ ತಾಡಯಾಮಾಸ ವಜ್ರೇಣೇವ ಮಹಾಚಲಮ್ ॥೨॥

ರಾಜನೆ, ಯುಯುತ್ಸು ತೀಕ್ಷ್ಣವಾದ ಅಲುಗುಳ್ಳ ಬಾಣದಿಂದ ಉಲೂಕನನ್ನು ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಹೊಡೆದಂತೆ ಹೊಡೆದ.

ಉಲೂಕಸ್ತು ತತಃ ಕ್ರುದ್ಧಸ್ತವ ಪುತ್ರಸ್ಯ ಮಾರಿಷ ।
ಕ್ಷುರಪ್ರೇಣ ಸುತೀಕ್ಷ್ಣೇನ ಧನುಶ್ಚಿಚ್ಛೇದ ಸಂಯುಗೇ ॥೩॥

ಉಲೂಕನು ಕ್ರುದ್ಧನಾಗಿ ಬಲು ತೀಕ್ಷ್ಣವಾದ ಬಾಣದಿಂದ ರಣದಲ್ಲಿ ನಿನ್ನ ಪುತ್ರನಾದ ಯುಯುತ್ಸುವಿನ ಬಿಲ್ಲನ್ನು ಕಡಿದ.

ಅಪಾಸ್ಯ ತದ್ಧನುಶ್ಛಿನ್ನಂ ಯುಯುತ್ಸುರ್ವೇಗವತ್ತರಮ್ ।
ಅನ್ಯದಾದತ್ತ ಸುಮಹಚ್ಚಾಪಂ ಸಂರಕ್ತಲೋಚನಃ ॥೪॥

ಯುಯುತ್ಸು ಕೋಪದಿಂದ ಕಣ್ಣು ಕೆಂಪುಮಾಡಿಕೊಂಡು ಕಡಿದ ಬಿಲ್ಲನ್ನು ಆಚೆಗೆ ಎಸೆದು ಬಾಣಗಳಿಗೆ ಇನ್ನೂ ಹೆಚ್ಚು ವೇಗ ಉಂಟುಮಾಡುವ ಇನ್ನೊಂದು ದೊಡ್ಡ ಬಿಲ್ಲನ್ನು ಎತ್ತಿಕೊಂಡ.

ಶಾಕುನಿಂ ತು ತತಃ ಷಷ್ಟ್ಯಾ ವಿವ್ಯಾಧ ಭರತರ್ಷಭ ।
ಸಾರಥಿಂ ತ್ರಿಭಿರಾನರ್ಚ್ಛತ್ತಂ ಚ ಭೂಯೋ ವ್ಯವಿಧ್ಯತ ॥೫॥

ಶಕುನಿಪುತ್ರನಾದ ಉಲೂಕನನ್ನು ಯುಯುತ್ಸು ಅರವತ್ತು ಬಾಣಗಳಿಂದ ಹೊಡೆದು ಮೂರು ಬಾಣಗಳಿಂದ ಅವನ ಸಾರಥಿಯನ್ನು ಹೊಡೆದ. ಪುನಃ ಉಲೂಕನನ್ನೂ ಹೊಡೆದ.

ಉಲೂಕಃ ಪಂಚವಿಂಶತ್ಯಾ ವಿದ್ಧ್ವಾ ರುಗ್ಮವಿಭೂಷಿತೈಃ ।
ಅಥಾಸ್ಯ ಸಮರೇ ಕ್ರುದ್ಧೋ ಧ್ವಜಂ ಚಿಚ್ಛೇದ ಕಾಂಚನಮ್ ॥೬॥

ಉಲೂಕನು ಕ್ರುದ್ಧನಾಗಿ ಬಂಗಾರದಿಂದ ಅಲಂಕೃತವಾದ ಇಪ್ಪತ್ತೈದು ಬಾಣಗಳಿಂದ ಯುಯುತ್ಸುವನ್ನು ಹೊಡೆದು ಬಂಗಾರದ ಧ್ವಜವನ್ನೂ ಕತ್ತರಿಸಿದ.

ಸ ಛಿನ್ನಯಷ್ಟಿಃ ಸುಮಹಾನ್ ಶೀರ್ಯಮಾಣೋ ಮಹಾಧ್ವಜಃ ।
ಪಪಾತ ಪ್ರಮುಖೇ ರಾಜನ್ ಯುಯುತ್ಸೋರ್ವಿಶ್ರುತೋ
ರಥಾತ್ ॥೭॥

ಧ್ವಜ ದಂಡ ಕಡಿದು ಬಿದ್ದಾಗ, ರಾಜನೆ, ಬಲು ದೊಡ್ಡದಾದ ಪ್ರಸಿದ್ಧವಾದ ಮಹಾಧ್ವಜ ಕಡಿದು ಯುಯುತ್ಸುವಿನ ಮುಂಭಾಗದಲ್ಲಿ ರಥದಿಂದ ಕೆಳಗೆ ಬಿದ್ದಿತು.

ಧ್ವಜಮುನ್ಮಥಿತಂ ದೃಷ್ಟ್ವಾ ಯುಯುತ್ಸುಃ ಕ್ರೋಧಮೂರ್ಚ್ಛಿತಃ ।
ಉಲೂಕಂ ಪಂಚಭಿರ್ಬಾಣೈ ರಾಜಘಾನ ಸ್ತನಾಂತರೇ ॥೮॥

ಧ್ವಜ ನಾಶವಾದುದನ್ನು ನೋಡಿ ಕೋಪದಿಂದ ಮೈಮರೆತು ಯುಯುತ್ಸು ಐದು ಬಾಣಗಳಿಂದ ಉಲೂಕನನ್ನು ಎದೆಯಲ್ಲಿ ಪ್ರಹರಿಸಿದ.

ಉಲೂಕಸ್ತಸ್ಯ ಭಲ್ಲೇನ ತೈಲಧೌತೇನ ಮಾರಿಷ ।
ಯಂತುಶ್ಚಿಚ್ಛೇದ ಸಮರೇ ಶಿರೋ ಭರತಸತ್ತಮ ॥೯॥

ರಾಜನೆ, ಉಲೂಕನು ಎಣ್ಣೆಯಿಂದ ಹದಮಾಡಲ್ಪಟ್ಟ ಭಲ್ಲೆಯಿಂದ ಯುಯುತ್ಸುವಿನ ಸಾರಥಿಯ ಶಿರಸ್ಸನ್ನು ಯುದ್ಧದಲ್ಲಿ ಕೆಡವಿದ.

ತಚ್ಛಿನ್ನಮಪತದ್ ಭೂಮೌ ಯುಯುತ್ಸೋಃ ಸಾರಥೇಸ್ತದಾ ।
ತಾರಾರೂಪಂ ಯಥಾ ಚಿತ್ರಂ ನಿಪಪಾತ ಮಹೀತಳೇ ॥೧೦॥

ಕಡಿದುಹೋದ ಯುಯುತ್ಸುವಿನ ಸಾರಥಿಯ ಆ ಶಿರಸ್ಸು ಆಕಾಶದಿಂದ ವಿಚಿತ್ರವಾದ ನಕ್ಷತ್ರ ಭೂಮಿಯಲ್ಲಿ ಬೀಳುವಂತೆ, ಭೂಮಿಯಲ್ಲಿ ಬಿದ್ದಿತು.

ಜಘಾನ ಚತುರೋಽಶ್ವಾಂಶ್ಚ ತಂ ಚ ವಿವ್ಯಾಧ ಪಂಚಭಿಃ ।
ಸೋಽತಿವಿದ್ಧೋ ಬಲವತಾ ಪ್ರತ್ಯಪಾಯಾದ್ ರಥಾಂತರಮ್ ॥೧೧॥

ಯುಯುತ್ಸುವಿನ ರಥದ ನಾಲ್ಕು ಕುದುರೆಗಳನ್ನೂ ಯುಯುತ್ಸುವನ್ನೂ ಉಲೂಕನು ಐದು ಬಾಣಗಳಿಂದ ಹೊಡೆದ. ಬಲಿಷ್ಠನಾದ ಉಲೂಕನಿಂದ ಬಹಳ ಹೊಡೆಸಿಕೊಂಡ ಯುಯುತ್ಸು ಬೇರೊಬ್ಬನ ರಥವನ್ನು ಏರಿದ.

ನಿರ್ಜಿತ್ಯ ತಂ ರಣೇ ರಾಜನ್ನುಲೂಕಸ್ತ್ವರಿತೋ ಯಯೌ ।
ಪಾಂಚಾಲಾನ್ ಸೃಂಜಯಾಂಶ್ಚೈವ ವಿಕಿರನ್ ನಿಶಿತೈಃ ಶರೈಃ ॥೧೨॥

ಹೀಗೆ, ರಾಜನೆ, ಉಲೂಕನು ಯುಯುತ್ಸುವನ್ನು ರಣದಲ್ಲಿ ಪರಾಭವಗೊಳಿಸಿ ವೇಗದಿಂದ ಪಾಂಚಾಲರನ್ನೂ ಸೃಂಜಯರನ್ನೂ ತೀಕ್ಷ್ಣವಾದ ಬಾಣಗಳಿಂದ ಹೊಡೆಯಲು ತೆರಳಿದ.

ಶತಾನೀಕಂ ಮಹಾರಾಜ ಶ್ರುತಕರ್ಮಾ ಸುತಸ್ತವ ।
ವ್ಯಶ್ವಸೂತರಥಂ ಚಕ್ರೇ ನಿಮೇಷಾರ್ಧಾದಸಂಭ್ರಮಃ ॥೧೩॥

ಮಹಾರಾಜ, ನಿನ್ನ ಮಗ ಶ್ರುತಕರ್ಮನು ಶತಾನೀಕನನ್ನು ನಿರ್ಭೀತಿಯಿಂದ ಅರೆಕ್ಷಣದಲ್ಲಿ ಅಶ್ವ ಸಾರಥಿ ರಥಗಳಿಲ್ಲದವನನ್ನಾಗಿ ಮಾಡಿದ.

ನಕುಲನಿಂದ ದ್ರೌಪದಿಯಲ್ಲಿ ಜನಿಸಿದ ಪುತ್ರ ಶತಾನೀಕ. ಸಹದೇವನಿಂದ ದ್ರೌಪದಿಯಲ್ಲಿ ಜನಿಸಿದ ಪುತ್ರನೂ ಶ್ರುತಕರ್ಮ. ಆದರೆ ಪ್ರಕೃತದಲ್ಲಿ ಶ್ರುತಕರ್ಮ ಧೃತರಾಷ್ಟ್ರ ಪುತ್ರರಲ್ಲೊಬ್ಬ.

ಹತಾಶ್ವೇ ತು ರಥೇ ತಿಷ್ಠನ್ ಶತಾನೀಕೋ ಮಹಾರಥಃ ।
ಗದಾಂ ಚಿಕ್ಷೇಪ ಸಂಕ್ರುದ್ಧಸ್ತವ ಪುತ್ರಸ್ಯ ಮಾರಿಷ ॥೧೪॥

ರಾಜನೆ, ಕುದುರೆ ಇಲ್ಲದೆ ರಥದಲ್ಲಿ ನಿಂತು ಮಹಾರಥನಾದ ಶತಾನೀಕ ಕ್ರುದ್ಧನಾಗಿ ನಿನ್ನ ಮಗನ ಮೇಲೆ ಗದೆಯನ್ನೆಸೆದ.

ಸಾ ಕೃತ್ವಾ ಸ್ಯಂದನಂ ಭಸ್ಮ ಹಯಾನ್ ಸಾರಥಿಮೇವ ಚ ।
ಧ್ವಜಂ ಚೈವ ಪತಾಕಾಂ ಚ ಮೇದಿನೀಮನ್ವಪದ್ಯತ ॥೧೫॥

ಆ ಗದೆ ಶ್ರುತಕರ್ಮನ ರಥ ಕುದುರೆ ಸಾರಥಿ ಧ್ವಜ ಪತಾಕೆಗಳೆಲ್ಲವನ್ನೂ ಭಸ್ಮಮಾಡಿ ನೆಲದಲ್ಲಿ ಬಿದ್ದಿತು.

ತಾವುಭೌ ವಿರಥೌ ವೀರೌ ಕುರೂಣಾಂ ಕೀರ್ತಿವರ್ಧನೌ ।
ವ್ಯಪಾಕ್ರಮೇತಾಂ ಯುದ್ಧಾತ್ತು ಪ್ರೇಕ್ಷಮಾಣೌ ಪರಸ್ಪರಮ್ ॥೧೬॥

ಶತಾನೀಕ ಶ್ರುತಕರ್ಮರಿಬ್ಬರೂ ಕುರುವಂಶದ ಕೀರ್ತಿಯನ್ನು ಹೆಚ್ಚಿಸುವವರು. ಇಬ್ಬರೂ ವಿರಥರಾಗಿ ಪರಸ್ಪರ ದಿಟ್ಟಿಸಿ ನೋಡುತ್ತ ಯುದ್ಧದಿಂದ ಹಿಂದೆ ಸರಿದರು.

ಪುತ್ರಸ್ತು ತವ ಸಂಭ್ರಾಂತೋ ವಿವಿಂಶೋ ರಥಮಾವ್ರಜತ್ ।
ಶತಾನೀಕೋಽಪಿ ರಾಜೇಂದ್ರ ಪ್ರತಿವಿಂಧ್ಯರಥಂ ಗತಃ ॥೧೭॥

ರಾಜನೆ, ಸಂಭ್ರಾಂತನಾದ ನಿನ್ನ ಪುತ್ರ ಶ್ರುತಕರ್ಮನು ವಿವಿಂಶುವಿನ ರಥವನ್ನೇರಿದ. ಶತಾನೀಕನು ಪ್ರತಿವಿಂಧ್ಯನ ರಥವನ್ನೇರಿದ.

ಸುತಸೋಮಂ ತು ಶಕುನಿರ್ವಿದ್ಧ್ವಾ ಸುನಿಶಿತೈಃ ಶರೈಃ ।
ನಾಕಂಪಯತ ಸಂಕ್ರುದ್ಧೋ ವಾಯುರ್ಮೇಘ ಇವ ಪರ್ವತಮ್ ॥೧೮॥

ದ್ರೌಪದೀಪುತ್ರನಾದ ಸುತಸೋಮನನ್ನು ಬಲುಕ್ರುದ್ಧನಾದ ಶಕುನಿ ತೀಕ್ಷ್ಣವಾದ ಬಾಣಗಳಿಂದ ಹೊಡೆದೂ ಕೂಡ ಅವನನ್ನು ವಿಚಲಿತನನ್ನಾಗಿ ಮಾಡಲು ಶಕ್ತನಾಗಲಿಲ್ಲ. ನೀರಿನ ಪ್ರವಾಹವು ಪರ್ವತವನ್ನು ವಿಚಲಿತಗೊಳಿಸದು.

ಸುತಸೋಮಸ್ತು ತಂ ದೃಷ್ಟ್ವಾ ಪಿತುರತ್ಯಂತವೈರಿಣಮ್ ।
ಶರೈರನೇಕಸಾಹಸ್ರೈಶ್ಛಾದಯಾಮಾಸ ಭಾರತ ॥೧೯॥

ಆದರೆ ರಾಜನೆ, ಸುತಸೋಮನು ತಂದೆಯಾದ ಭೀಮನಿಗೆ ಅತ್ಯಂತ ವೈರಿಯಾದ ಶಕುನಿಯನ್ನು ಕಂಡು ಅನೇಕ ಸಾವಿರ ಬಾಣಗಳಿಂದ ಅವನನ್ನು ಆಚ್ಛಾದಿಸಿದ.

ತಾನ್ ಶರಾನ್ ಶಕುನಿಸ್ತೂರ್ಣಂ ಚಿಚ್ಛೇದಾನ್ಯೈಃ ಪತತ್ರಿಭಿಃ ।
ಲಘ್ವಸ್ತ್ರಶ್ಚಿತ್ರಯೋಧೀ ಚ ಜಿತಕಾಶೀ ಚ ಸಂಯುಗೇ ॥೨೦॥

ಶಕುನಿಯು ಆ ಬಾಣಗಳನ್ನು ಬೇಗನೆ ಬೇರೆ ಬಾಣಗಳಿಂದ ಕತ್ತರಿಸಿದ. ಏಕೆಂದರೆ ಶಕುನಿ ಅಸ್ತ್ರಪ್ರಯೋಗದಲ್ಲಿ ಹಸ್ತಲಾಘವ(ಕೌಶಲ)ಉಳ್ಳವನು. ವಿಚಿತ್ರ ಯುದ್ಧ ಮಾಡುವವನು ಮತ್ತು ಜಯಶಾಲಿಯಾಗಿ ಮೆರೆಯುವವನು.

ನಿವಾರ್ಯ ಸಮರೇ ಚಾಪಿ ಶರಾಂಸ್ತಾನ್ ನಿಶಿತೈಃ ಶರೈಃ ।
ಆಜಘಾನ ಸುಸಂಕ್ರುದ್ಧಃ ಸುತಸೋಮಂ ತ್ರಿಭಿಃ ಶರೈಃ ॥೨೧॥

ಶಕುನಿ ಆ ಬಾಣಗಳನ್ನು ಯುದ್ಧದಲ್ಲಿ ತೀಕ್ಷ್ಣಬಾಣಗಳಿಂದ ತಡೆದು ಬಹಳ ಕುಪಿತನಾಗಿ ಸುತಸೋಮನನ್ನು ಮೂರು ಬಾಣಗಳಿಂದ ಹೊಡೆದ.

ತಸ್ಯಾಶ್ವಾನ್ ಸ್ಯಂದನಂ ಕೇತುಂ ತಿಲಶೋ ವ್ಯಧಮಚ್ಛರೈಃ ।
ಶ್ಯಾಲಸ್ತವ ಮಹಾರಾಜ ತತ ಉಚ್ಚುಕ್ರುಶುರ್ಜನಾಃ ॥೨೨॥

ಮಹಾರಾಜ, ನಿನ್ನ ಭಾವಮೈದುನ ಶಕುನಿ ಸುತಸೋಮನ ಕುದುರೆ ರಥ ಧ್ವಜಗಳನ್ನು ಬಾಣಗಳಿಂದ ಎಳ್ಳುಕಾಳುಗಳಷ್ಟು ಚೂರಾಗಿ ಮಾಡಿದ. ಜನರು ಹರ್ಷೋದ್ಗಾರ ಮಾಡಿದರು.

ಹತಾಶ್ವೋ ವಿರಥಶ್ಚೈವ ಛಿನ್ನಕೇತುಶ್ಚ ಮಾರಿಷ ।
ಧನ್ವೀ ಧನುರ್ವರಂ ಗೃಹ್ಯ ರಥಾದ್ ಭೂಮೌ ವ್ಯತಿಷ್ಠತ ॥೨೩॥

ವ್ಯಸೃಜತ್ ಸಾಯಕಾಂಶ್ಚೈವ ಸ್ವರ್ಣಪುಂಖಾನ್ ಶಿಲಾಶಿತಾನ್ ॥೨೪॥

ರಾಜನೆ, ಸುತಸೋಮನ ಕುದುರೆಗಳು ಹತವಾದುವು. ರಥ ನಾಶವಾಯಿತು. ಧ್ವಜ ಮುರಿಯಿತು. ಬಿಲ್ಲಾರನಾದ ಆತ ಒಳ್ಳೆಯ ಬಿಲ್ಲನ್ನು ಹಿಡಿದು ರಥದಿಂದ ನೆಲಕ್ಕೆ ಹಾರಿ ನಿಂತ. ಮತ್ತು ಬಂಗಾರದ ಪುಕ್ಕಉಳ್ಳ ಸಾಣೆಹಿಡಿದ ಬಾಣಗಳನ್ನೆಸೆದ.

ಛಾದಯಾಮಾಸುರಥ ತೇ ತವ ಶ್ಯಾಲಸ್ಯ ತಂ ರಥಮ್ ।
ಪತಂಗಾನಾಮಿವ ವ್ರಾತಾಃ ಶರವ್ರಾತಾ ಮಹಾರಥಮ್ ॥೨೫॥

ಆ ಬಾಣಗಳು ನಿನ್ನ ಭಾವಮೈದುನನ ರಥವನ್ನು ಆಚ್ಛಾದಿಸಿದವು.

ಮಿಡತೆಗಳ ಸಮೂಹಗಳಂಥ ಬಾಣಸಮೂಹಗಳು ಆ ಮಹಾರಥವನ್ನು ಆವರಿಸಿದುವು.

ಸಂಛಾದ್ಯಮಾನೋಽಪಿ ದೃಢಂ ವಿವ್ಯಥೇ ನೈವ ಸೌಬಲಃ ।
ಪ್ರಾಮರ್ದತ ಶರಾನಸ್ತಾನ್ ಶರಜಾಲೈರ್ಮಹಾರಥಃ ॥೨೬॥

ತನ್ನ ರಥವನ್ನು ದೃಢವಾಗಿ ಬಾಣಗಳು ಆವರಿಸುತ್ತಿದ್ದರೂ ಶಕುನಿ ವಿಚಲಿತನಾಗಲಿಲ್ಲ. ಮಹಾರಥನಾದ ಆತ ಬಾಣಸಮೂಹಗಳಿಂದ ಆ ಬಾಣಗಳನ್ನು ನಾಶಪಡಿಸಿದ.

ತತ್ರಾತುಷ್ಯಂತ ಯೋಧಾಶ್ಚ ಸಿದ್ಧಾಶ್ಚೈವ ದಿವಿ ಸ್ಥಿತಾಃ ।
ಸುತಸೋಮಸ್ಯ ತತ್ ಕರ್ಮ ದೃಷ್ಟ್ವಾಽಶ್ರದ್ಧೇಯಮದ್ಭುತಮ್ ॥೨೭॥
ರಥಸ್ಥಂ ನೃಪತಿಂ ಯತ್ತು ಪದಾತಿಃ ಸಮಯೋಧಯತ್ ॥೨೮॥

ಆಗ ರಥದಲ್ಲಿ ಕುಳಿತಿದ್ದ ರಾಜನೊಡನೆ ಒಬ್ಬ ಪದಾತಿ ಚೆನ್ನಾಗಿ ಯುದ್ಧಮಾಡುತ್ತಾನೆ ಎಂದರೆ ಇದೊಂದು ಅದ್ಭುತವೇ ಸರಿ. ಸುತಸೋಮ ಪದಾತಿಯಾಗಿ ರಥಿಕನಾದ ಶಕುನಿಯೊಡನೆ ಚೆನ್ನಾಗಿ ಯುದ್ಧಮಾಡುವುದನ್ನು ಕಂಡ ಯೋಧರೂ ಆಕಾಶದಲ್ಲಿ ನಿಂತ ಸಿದ್ಧರೂ ಸಂತುಷ್ಟರಾದರು. ಅದನ್ನು ಅದ್ಭುತ, ನಂಬಲು ಅಸಾಧ್ಯ ಎಂದರು.

ತಸ್ಯ ತೀಕ್ಷ್ಣೈರ್ಮಹಾವೇಗೈರ್ಭಲ್ಲೈಃ ಸನ್ನತಪರ್ವಭಿಃ ।
ವ್ಯಧಮತ್ ಕಾರ್ಮುಕಂ ರಾಜನ್ ತೂಣೀರಾಂಶ್ಚೈವ ಸರ್ವಶಃ ॥೨೯॥

ಶಕುನಿಯು ತೀಕ್ಷ್ಣವಾದ ಮಹಾವೇಗಉಳ್ಳ ಡೊಂಕುಗಿನ್ನಿನ ಭಲ್ಲೆಗಳಿಂದ ಸುತಸೋಮನ ಬಿಲ್ಲನ್ನೂ ಎಲ್ಲ ಬತ್ತಳಿಕೆಗಳನ್ನೂ ಧ್ವಂಸ ಮಾಡಿದ.

ಸ ಛಿನ್ನಧನ್ವಾ ವಿರಥಃ ಖಡ್ಗಮುದ್ಯಮ್ಯ ಚಾನದತ್ ।
ವೈದೂರ್ಯೋತ್ಪಲವರ್ಣಾಭಂ ದಂತಿದಂತಮಯತ್ಸರುಮ್ ॥೩೦॥

ಸುತಸೋಮನ ಧನುಸ್ಸು ಕಡಿದರೂ ರಥಪುಡಿಯಾದರೂ ವೈಡೂರ್ಯ ನೀಲಕಮಲಗಳಂಥ ವರ್ಣದ, ಆನೆಯ ದಂತದಿಂದ ಅಲಂಕೃತವಾದ ಹಿಡಿಯುಳ್ಳ ಖಡ್ಗವನ್ನೆತ್ತಿ ಅವನು ಗರ್ಜಿಸಿದ.

ಭ್ರಾಮ್ಯಮಾಣಂ ತತಸ್ತಂ ತು ವಿಮಲಾಂಬರದರ್ಶನಮ್ ।
ಕಾಲೋಪಮಂ ತದಾ ಮೇನೇ ಸುತಸೋಮಸ್ಯ ಧೀಮತಃ ॥೩೧॥

ಧೀಮಂತನಾದ ಸುತಸೋಮನು ನಿರ್ಮಲವಾದ ಆಕಾಶದಂತೆ ನೀಲ ವಾಗಿರುವ ಆ ಖಡ್ಗವನ್ನು ತಿರುಗಿಸಿದರೆ ಶಕುನಿ ಅದನ್ನು ಯಮದಂಡಸದೃಶವೇ ಎಂದುಕೊಂಡ.

ಸೋಽಚರತ್ ಸಹಸಾ ಖಡ್ಗೀ ಮಂಡಲಾನಿ ಸಮಂತತಃ ।
ಚತುರ್ದಶ ಮಹಾರಾಜ ಶಿಕ್ಷಾಬಲಸಮನ್ವಿತಃ ॥೩೨॥

ಮಹಾರಾಜ, ಸುತಸೋಮನು, ಖಡ್ಗಧಾರಿ, ಶಿಕ್ಷಣ ಮತ್ತು ಬಲಗಳಿಂದ ಯುಕ್ತನಾಗಿದ್ದ. ಅವನು ಎಲ್ಲೆಡೆ ಹದಿನಾಲ್ಕು ಬಗೆಯ ಕತ್ತಿವರಸೆಗಳನ್ನು ಯುದ್ಧದಲ್ಲಿ ತೋರಿಸುತ್ತಿದ್ದ.

ಭ್ರಾಂತಮುದ್ಭ್ರಾಂತಮಾವಿದ್ಧಮಾಪ್ಲುತಂ ವಿಪ್ಲುತಂ ಸೃತಮ್ ।
ಸಂಪಾತಂ ಸಮುದೀರ್ಯಂ ಚ ದರ್ಶಯಾಮಾಸ ಸಂಯುಗೇ ॥೩೩॥

ಭ್ರಾಂತ ಉದ್ಭ್ರಾಂತ ಆವಿದ್ಧ ಆಪ್ಲುತ ವಿಪ್ಲುತ ಸೃತ ಸಂಪಾತ ಸಮುದೀರ್ಯ ಮೊದಲಾದ ಹದಿನಾಲ್ಕು ಬಗೆಯ ಕತ್ತಿವರಸೆಗಳನ್ನು ಸುತಸೋಮನು ರಣದಲ್ಲಿ ಪ್ರದರ್ಶಿಸಿದ.

ಸೌಬಲಸ್ತು ತತಸ್ತಸ್ಯ ಶರಾಂಶ್ಚಿಕ್ಷೇಪ ವೀರ್ಯವಾನ್ ।
ತಾನಾಪತತ ಏವಾಶು ಚಿಚ್ಛೇದ ಪರಮಾಸಿನಾ ॥೩೪॥

ವೀರ್ಯಶಾಲಿ ಶಕುನಿಯು ಸುತಸೋಮನ ಮೇಲೆ ಬಾಣಗಳನ್ನೆಸೆದ. ಸುತಸೋಮ ಅವುಗಳನ್ನು ಒಡನೆ ಉತ್ತಮವಾದ ಖಡ್ಗದಿಂದ ಕತ್ತರಿಸಿದ.

ತತಃ ಕ್ರುದ್ಧೋ ಮಹಾರಾಜ ಸೌಬಲಃ ಪರವೀರಹಾ ।
ಪ್ರಾಹಿಣೋತ್ ಸುತಸೋಮಸ್ಯ ಶರಾನಾಶೀವಿಷೋಪಮಾನ್ ॥೩೫॥

ಮಹಾರಾಜ, ಪರವೀರಹಂತಕನಾದ ಶಕುನಿ ಕ್ರುದ್ಧನಾಗಿ ಹಾವುಗಳಂಥ ಬಾಣಗಳನ್ನು ಎಸೆದ.

ಚಿಚ್ಛೇದ ತಾಂಸ್ತು ಖಡ್ಗೇನ ಶಿಕ್ಷಯಾ ಚ ಬಲೇನ ಚ ।
ದರ್ಶಯಂಲ್ಲಾಘವಂ ಯುದ್ಧೇ ತಾರ್ಕ್ಷ್ಯತುಲ್ಯಪರಾಕ್ರಮಃ ॥೩೬॥

ಸುತಸೋಮನು ಗರುಡಸದೃಶ ಪರಾಕ್ರಮಿ. ಯುದ್ಧದಲ್ಲಿ ಶಿಕ್ಷಣದಿಂದಲೂ ಬಲದಿಂದಲೂ ಕೈಚಳಕ ತೋರಿಸುತ್ತ ಖಡ್ಗದಿಂದ ಆ ಎಲ್ಲ ಬಾಣಗಳನ್ನು ಕತ್ತರಿಸಿದ.

ತಸ್ಯ ಸಂಚರತೋ ರಾಜನ್ ಮಂಡಲಾವರ್ತನೇ ತದಾ ।
ಕ್ಷುರಪ್ರೇಣ ಸುತೀಕ್ಷ್ಣೇನ ಖಡ್ಗಂ ಚಿಚ್ಛೇದ ಸುಪ್ರಭಮ್ ॥೩೭॥

ರಾಜನೆ, ಮಂಡಲಾವರ್ತನದಲ್ಲಿ ಸಂಚರಿಸುತ್ತಿದ್ದ ಸುತಸೋಮನ ಒಳ್ಳೆ ಪ್ರಭೆಯ ಖಡ್ಗವನ್ನೂ ಕೂಡ ಶಕುನಿ ಬಲುತೀಕ್ಷ್ಣವಾದ ಬಾಣದಿಂದ ಕತ್ತರಿಸಿದ.

ಸ ಛಿನ್ನಃ ಸಹಸಾ ಭೂಮೌ ನಿಪಪಾತ ಮಹಾನಸಿಃ ॥೩೮॥

ಕಡಿದುಹೋದ ಆ ದೊಡ್ಡ ಖಡ್ಗ ತಕ್ಷಣ ನೆಲದಲ್ಲಿ ಬಿದ್ದಿತು.

ಅರ್ಧಮಸ್ಯ ಸ್ಥಿತಂ ಹಸ್ತೇ ಸತ್ಸರೋರ್ಯತ್ತು ಭಾರತ ।
ಛಿನ್ನಮಾಜ್ಞಾಯ ನಿಸ್ತ್ರಿಂಶಮವಪ್ಲುತ್ಯ ಪದಾನಿ ಷಟ್ ॥೩೯॥
ಪ್ರಾವಿಧ್ಯತಾಸೇಸ್ತಚ್ಛೇಷಂ ಸುತಸೋಮೋ ಮಹಾಬಲಃ ॥೪೦॥

ರಾಜನೆ, ಒಳ್ಳೆಯ ಹಿಡಿಯುಳ್ಳ ಆ ಖಡ್ಗದ ಅರ್ಧ ಸುತಸೋಮನ ಕೈಯಲ್ಲಿಯೆ ಉಳಿಯಿತು. ತನ್ನ ಖಡ್ಗ ಕಡಿದುಹೋದುದನ್ನು ತಿಳಿದು ಮಹಾಬಲಿ ಸುತಸೋಮ ಆರು ಹೆಜ್ಜೆಗಳಷ್ಟು ಮುಂದಕ್ಕೆ ಹಾರಿ ಕೈಯಲ್ಲಿದ್ದ ಖಡ್ಗದ ಆ ತುಂಡನ್ನು ಶಕುನಿಯ ಕಡೆಗೆ ಎಸೆದ.

ತಚ್ಛಿತ್ತ್ವಾ ಸಗುಣಂ ಚಾಪಂ ರಣೇ ತಸ್ಯ ಮಹಾತ್ಮನಃ ।
ಪಪಾತ ಧರಣೀಂ ತೂರ್ಣಂ ಸ್ವರ್ಣವಜ್ರವಿಭೂಷಿತಮ್ ॥೪೧॥

ಆ ಖಡ್ಗದ ತುಂಡು ಮಹಾತ್ಮ ಶಕುನಿಯ ಬಿಲ್ಲನ್ನೂ ಹೆದೆಯನ್ನೂ ಒಡನೆ ಕಡಿದು ನೆಲಕ್ಕೆ ಬಿದ್ದಿತು. ಅದು ಬಂಗಾರ ವಜ್ರಗಳಿಂದ ಅಲಂಕೃತವಾಗಿತ್ತು.

ಸುತಸೋಮಸ್ತತೋ ರಾಜನ್ ಶ್ರುತಕೀರ್ತಿರಥಂ ಗತಃ ॥೪೨॥

ರಾಜನೆ, ಸುತಸೋಮನು ಬಳಿಕ ಶ್ರುತಕೀರ್ತಿಯ ರಥವನ್ನೇರಿದ.

ಸೌಬಲೋऽಪಿ ಧನುರ್ಗೃಹ್ಯ ಘೋರಮನ್ಯತ್ ಸುದುಃಸಹಮ್ ।
ಅಭ್ಯಯಾತ್ ಪಾಂಡವಾನೀಕಂ ನಿಘ್ನನ್ ಶತ್ರುಗಣಾನ್ ಬಹೂನ್ ॥

ಶಕುನಿಯೂ ಬೇರೆ ಭಯಂಕರವಾದ ಬಲು ದುಃಸಹವಾದ ಧನುಸ್ಸನ್ನು ಹಿಡಿದು ಬಹು ಶತ್ರುಸಮೂಹಗಳನ್ನು ಸಂಹರಿಸುತ್ತ ಪಾಂಡವಸೈನ್ಯವನ್ನು ಆಕ್ರಮಿಸಿದ.

ತತ್ರ ನಾದೋ ಮಹಾನಾಸೀತ್ ಪಾಂಡವಾನಾಂ ವಿಶಾಂಪತೇ ।
ಸೌಬಲಂ ಸಮರೇ ದೃಷ್ಟ್ವಾ ವಿಚರಂತಮಭೀತವತ್ ॥೪೪॥

ರಾಜನೆ, ಶಕುನಿಯು ರಣದಲ್ಲಿ ನಿರ್ಭೀತನಾಗಿ ಸಂಚರಿಸುವುದನ್ನು ಕಂಡು ಪಾಂಡವರ ಸೈನ್ಯದಲ್ಲಿ ಕೋಲಾಹಲ ಉಂಟಾಯಿತು.

ತಾನ್ಯನೀಕಾನಿ ದೃಪ್ತಾನಿ ಶಸ್ತ್ರವಂತಿ ಮಹಾಂತಿ ಚ ।
ದ್ರಾವ್ಯಮಾಣಾನ್ಯದೃಶ್ಯಂತ ಸೌಬಲೇನ ಮಹಾತ್ಮನಾ ॥೪೫॥

ಪಾಂಡವರ ಸೈನ್ಯವು ದರ್ಪದಿಂದ ಕೂಡಿತ್ತು. ಶಸ್ತ್ರಗಳಿಂದ ಕೂಡಿತ್ತು. ಮಹತ್ತಾಗಿತ್ತು. ಮಹಾತ್ಮ ಶಕುನಿ ಅದನ್ನು ಓಡಿಸುತ್ತಿದ್ದುದು ಕಂಡುಬಂದಿತು.

ಯಥಾ ದೈತ್ಯಚಮೂಂ ರಾಜನ್ ದೇವರಾಜೋ ಮಮರ್ದ ಹ ।
ತಥೈವ ಪಾಂಡವಾನೀಕಂ ಸೌಬಲೇಯೋ ವ್ಯನಾಶಯತ್ ॥೪೬॥

ರಾಜನೆ, ದೈತ್ಯಸೈನ್ಯವನ್ನು ದೇವರಾಜ ಮರ್ದಿಸಿದಂತೆ ಪಾಂಡವಸೈನ್ಯವನ್ನು ಶಕುನಿ ನಾಶಮಾಡತೊಡಗಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸುತಸೋಮ ಸೌಬಲಯುದ್ಧಂ ನಾಮ ಪಂಚವಿಂಶೋऽಧ್ಯಾಯಃ ।೨೫॥

❖

ಕೃಪಮಾಯಾಂತಮೀಕ್ಷ್ಯೈವ ತಪಸಾ ಮಾಂ ಪ್ರಪೀಡಯೇತ್ ।
ಇತಿ ಮತ್ವಾ ಪಾರ್ಷತಸ್ತು ಭೀಮಂ ಶರಣಮೇಯಿವಾನ್ ॥ ೨೧ ॥

ಧೃಷ್ಟದ್ಯುಮ್ನ ತನಗೆ ಇದಿರಾಗಿ ಕೃಪ ಬರುತ್ತಿದ್ದುದನ್ನು ಕಂಡು ಅವನು ತನ್ನನ್ನು ತಪೋಬಲದಿಂದ ಬಹಳ ಪೀಡಿಸಬಹುದೆಂದುಬಗೆದು ಭೀಮನನ್ನು ಮೊರೆಹೊಕ್ಕ.

❖

ಇಪ್ಪತ್ತಾರನೆಯ ಅಧ್ಯಾಯ

ಧೃಷ್ಟದ್ಯುಮ್ನ–ಕೃಪರ ಯುದ್ಧ. ಕೃತವರ್ಮನಿಂದ ಶಿಖಂಡಿ ಪರಾಜಯ.

ಸಂಜಯಃ

ಧೃಷ್ಟದ್ಯುಮ್ನಂ ಕೃಪೋ ರಾಜನ್ ವಾರಯಾಮಾಸ ಸಂಯುಗೇ ।
ಯಥಾ ದೃಪ್ತಂ ವನೇ ಸಿಂಹಂ ಶರಭೋ ವಾರಯೇದ್ ಯುಧಿ ॥೧॥

ಸಂಜಯ ಧೃತರಾಷ್ಟ್ರನಿಗೆ ಹೇಳುತ್ತಾನೆ— ರಾಜನೆ, ಕೃಪಾಚಾರ್ಯರು ಯುದ್ಧದಲ್ಲಿ ಧೃಷ್ಟದ್ಯುಮ್ನನನ್ನು ದರ್ಪದ ಸಿಂಹವನ್ನು ಕಾಡಿನಲ್ಲಿ ಶರಭವು ಇದಿರಿಸಿದಂತೆ ಇದಿರಿಸಿದರು.

ಶರಭ ಪ್ರಾಚೀನಕಾಲದ ಮೃಗರಾಜ, ಎಂಟುಕಾಲಿನ ಈ ಮೃಗಕ್ಕೆ ಸಿಂಹವೂ ಕೂಡ ಹೆದರುತ್ತಿತ್ತು.

ನಿರುದ್ಧಃ ಪಾರ್ಷತಸ್ತೇನ ಗೌತಮೇನ ಬಲೀಯಸಾ ।
ಪದಾತ್ ಪದಂ ವಿಚಲಿತುಂ ನಾಶಕತ್ ತತ್ರ ಭಾರತ ॥೨॥

ಬಲಿಷ್ಠನಾದ ಕೃಪ ಧೃಷ್ಟದ್ಯುಮ್ನನನ್ನು ತಡೆದು ನಿಲ್ಲಿಸಿದಾಗ ಧೃಷ್ಟದ್ಯುಮ್ನ ಒಂದು ಹೆಜ್ಜೆ ಕೂಡ ಮುಂದುವರಿಯಲು ಶಕ್ತನಾಗಲಿಲ್ಲ.

ಗೌತಮಸ್ಯ ರಥಂ ದೃಷ್ಟ್ವಾ ಧೃಷ್ಟದ್ಯುಮ್ನರಥಂ ಪ್ರತಿ ।
ವಿತ್ರೇಸುಃ ಸರ್ವಭೂತಾನಿ ಕ್ಷಯಂ ಪ್ರಾಪ್ತಂ ಚ ಮೇನಿರೇ ॥೩॥

ಧೃಷ್ಟದ್ಯುಮ್ನನ ರಥಕ್ಕೆ ಇದಿರಾಗಿ ಕೃಪನ ರಥ ನಿಂತುದನ್ನು ಕಂಡು ಎಲ್ಲರೂ ಭಯಪಟ್ಟರು. ಪ್ರಳಯಕಾಲವೇ ಬಂದಿತೇನೋ ಎಂದುಕೊಂಡರು.

ತತ್ರ ಜಲ್ಪಂತಿ ಪಾಂಡೂನಾಂ ರಥಿನಃ ಸಾದಿನಸ್ತಥಾ ॥೪॥

ಪಾಂಡವರ ರಥಿಕರೂ ಅಶ್ವಾರೋಹಿಗಳು ಆಗ ಮಾತನಾಡಿಕೊಂಡರು—

ಪಾಂಡುಸೈನಿಕಾಃ

ದ್ರೋಣಸ್ಯ ನಿಧನಾನ್ನೂನಂ ಸಂಕ್ರುದ್ಧೋ ದ್ವಿಪದಾಂ ವರಃ ।
ಶಾರದ್ವತೋ ಮಹಾತೇಜಾ ದಿವ್ಯಾಸ್ತ್ರವಿದುದಾರಧೀಃ ॥೫॥

ಪಾಂಡವ ಸೈನಿಕರು ಹೇಳಿದರು— 'ದ್ರೋಣವಧೆಯಿಂದ ಪ್ರಾಯಶಃ ಕೃಪ ಬಲು ಕ್ರುದ್ಧನಾಗಿದ್ದಾನೆ. ಅವನು ಗೌತಮವಂಶದ ಶರದ್ವಂತನ ಮಗ, ಮಹಾ ಪರಾಕ್ರಮಿ, ದಿವ್ಯಾಸ್ತ್ರಜ್ಞಾನಿ, ಸರ್ವಜ್ಞ.

ಅಪಿ ಸ್ವಸ್ತಿ ಭವೇದದ್ಯ ಧೃಷ್ಟದ್ಯುಮ್ನಸ್ಯ ಗೌತಮಾತ್ ।
ಅಪೀಯಂ ವಾಹಿನೀ ಕೃತ್ಸ್ನಾ ಮುಚ್ಯೇತ ಮಹತೋ ಭಯಾತ್ ॥೬॥

ಧೃಷ್ಟದ್ಯುಮ್ನನಿಗೆ ಕೃಪನಿಂದ ಕ್ಷೇಮವಾದೀತು ತಾನೆ? ನಮ್ಮ ಇಡೀ ಸೈನ್ಯ ಕೃಪನ ಭಯದಿಂದ ಮುಕ್ತವಾದೀತು ತಾನೆ?

ಅಪ್ಯಯಂ ಬ್ರಾಹ್ಮಣಃ ಸರ್ವಾನ್ ನ ನೋ ಹನ್ಯಾತ್ ಸಮಾಗತಾನ್ ॥

ಈ ಬ್ರಾಹ್ಮಣ ಯುದ್ಧಕ್ಕೆ ಬರುವ ನಮ್ಮೆಲ್ಲರನ್ನೂ ಕೊಲ್ಲಲಾರ ತಾನೆ?

ಯಾದೃಶಂ ದೃಶ್ಯತೇ ರೂಪಮಂತಕಪ್ರತಿಮಂ ರಣೇ ।
ಗಮಿಷ್ಯತ್ಯದ್ಯ ಪದವೀಂ ಭಾರದ್ವಾಜಸ್ಯ ಗೌತಮಃ ॥೮॥

ಈತನ ರೂಪ ಯಮನ ರೂಪದಂತೆ ಇದೆ. ಇವನು ದ್ರೋಣನ ಹಾದಿಯನ್ನೇ ಹಿಡಿಯುವನೇ? ದ್ರೋಣನಂತೆ ಸೇನಾಧಿಪತಿಯಾಗುವನೆ?

ಆಚಾರ್ಯಃ ಕ್ಷಿಪ್ರಹಸ್ತಶ್ಚ ವಿಜಯೀ ಚ ಸದಾ ಯುಧಿ ।
ಅಸ್ತ್ರವಾನ್ ವೀರ್ಯಸಂಪನ್ನಃ ಕ್ರೋಧೇನ ಚ ಸಮನ್ವಿತಃ ॥೯॥

ಪಾರ್ಷತಶ್ಚ ಮಹಾಯುದ್ಧೇ ವಿಮುಖೋಽದ್ಯಾಪಿ ಲಕ್ಷ್ಯತೇ ॥೧೦॥

ಆಚಾರ್ಯ ಕೃಪನು ಯುದ್ಧದಲ್ಲಿ ಕೈಚಳಕ ಉಳ್ಳವನು, ಸದಾ ಜಯಶೀಲ, ಅಸ್ತ್ರಜ್ಞ, ವೀರ್ಯಉಳ್ಳವನು ಕ್ರೋಧದಿಂದಲೂ ಕೂಡಿದವನು. ಇತ್ತ ಧೃಷ್ಟದ್ಯುಮ್ನನು ಇವನೊಂದಿಗೆ ಮಹಾಯುದ್ಧ ಮಾಡಲು ಈಗ ಹಿಂಜರಿಯುತ್ತಿದ್ದಾನೆ.'

ಸಂಜಯಃ

ಇತ್ಯೇವಂ ವಿವಿಧಾ ವಾಚೋ ವ್ಯಶ್ರೂಯಂತ ರಣಾಜಿರೇ ।
ವ್ಯಶ್ರೂಯಂತ ಮಹಾರಾಜ ತಯೋಸ್ತತ್ರ ಸಮಾಗಮೇ ॥೧೧॥

ಸಂಜಯ ನುಡಿದ— ರಣರಂಗದಲ್ಲಿ ಹೀಗೆ ನಾನಾವಿಧವಾದ ಮಾತು ಕೇಳಿಸಿತು. ಕೇಳಿಸಿತು, ಮಹಾರಾಜ, ಅವರಿಬ್ಬರ ಸಮಾಗಮವಾದಾಗ.

ವಿನಿಶ್ವಸ್ಯ ತತಃ ಕ್ರೋಧಾತ್ ಕೃಪಃ ಶಾರದ್ವತೋ ನೃಪ ।
ಪಾರ್ಷತಂ ಛಾದಯಾಮಾಸ ನಿಶ್ಚೇಷ್ಟಂ ಶರವೃಷ್ಟಿಭಿಃ ॥೧೨॥

ಬಳಿಕ ರಾಜನೆ, ಕೃಪನು ಕೋಪದಿಂದ ನಿಟ್ಟುಸಿರು ಬಿಟ್ಟು ಧೃಷ್ಟದ್ಯುಮ್ನನನ್ನು ಬಾಣಗಳ ಮಳೆಯಲ್ಲಿ ಆಚ್ಛಾದಿಸಿ ನಿಶ್ಚೇಷ್ಟನನ್ನಾಗಿ ಮಾಡಿದ.

ಸ ವಧ್ಯಮಾನಃ ಸಮರೇ ಗೌತಮೇನ ಮಹಾತ್ಮನಾ ।
ಕರ್ತವ್ಯಂ ನಾಭಿಜಜ್ಞೇ ವೈ ಮೋಹೇನ ಮಹತಾ ವೃತಃ ॥೧೩॥

ರಣದಲ್ಲಿ ಮಹಾತ್ಮ ಕೃಪನಿಂದ ಹೊಡೆಸಿಕೊಳ್ಳುವಾಗ ಧೃಷ್ಟದ್ಯುಮ್ನ ದೊಡ್ಡ ಗೊಂದಲದಲ್ಲಿ ಮುಳುಗಿ ಏನು ಮಾಡಬೇಕೆಂಬುದನ್ನು ತಿಳಿಯದೆ ಹೋದ.

ತಮಬ್ರವೀತ್ ತತೋ ಯಂತಾ ಕಚ್ಚಿತ್ ಕ್ಷೇಮಂ ನು ಮಾರಿಷ ।
ಈದೃಶಂ ವ್ಯಸನಂ ಯುದ್ಧೇ ನ ಮೇ ದೃಷ್ಟಂ ಕದಾಚನ ॥೧೪॥

ಆಗ ಸಾರಥಿ, 'ರಾಜನೆ, ಕ್ಷೇಮದಿಂದಿರುವೆ ತಾನೆ? ಯುದ್ಧದಲ್ಲಿ ಹೀಗೆ ನೀನು ಗೊಂದಲಕ್ಕೊಳಗಾದುದನ್ನು ನಾನೆಂದೂ ನೋಡೇ ಇಲ್ಲ

ದೈವಯೋಗಾದಿಮೇ ಬಾಣಾ ನ ಜಘ್ನುರ್ಮರ್ಮ ಚಾಹವೇ ।
ಪ್ರೇಷಿತಾ ದ್ವಿಜಮುಖ್ಯೇನ ಮರ್ಮಾಣ್ಯುದ್ದಿಶ್ಯ ಸರ್ವಶಃ ॥೧೫॥

ದೈವಾತ್ ಈ ಬಾಣಗಳು ಯುದ್ಧದಲ್ಲಿ ನನ್ನ ಮರ್ಮಸ್ಥಾನವನ್ನು ಹೊಡೆಯಲಿಲ್ಲ. ಬ್ರಾಹ್ಮಣ ಶ್ರೇಷ್ಠನು ಎಲ್ಲ ಮರ್ಮಸ್ಥಾನಗಳಿಗೆ ಬಾಣವೆಸೆಯುತ್ತಿದ್ದಾನೆ.

ವ್ಯಾವರ್ತಯೇ ತವ ರಥಂ ನದೀ ವೇಗಮಿವಾಹವಾತ್ ।
ಅವಧ್ಯಂ ಬ್ರಾಹ್ಮಣಂ ಮನ್ಯೇ ಯೇನ ತೇ ವಿಕ್ರಮೋ ಹತಃ ॥೧೬॥

ಬ್ರಾಹ್ಮಣನಿಗೆ ಹೊಡೆಯಬಾರದೆಂದು ನಿನ್ನ ಅಭಿಪ್ರಾಯವಿರಬಹುದು. ಅದರಿಂದ ನಿನ್ನ ಪರಾಕ್ರಮ ಕುಂಠಿತವಾಗುತ್ತಿದೆ ತಾನೆ? ನದಿಯು ಸಮುದ್ರವನ್ನು ಸೇರುವಲ್ಲಿ ತನ್ನ ವೇಗವನ್ನು ಹಿಂತಿರುಗಿಸಿಕೊಳ್ಳುವಂತೆ ನಾನೂ ನಿನ್ನ ರಥವನ್ನು ಯುದ್ಧದಿಂದ ಈಚೆಗೆ ಹಿಂತಿರುಗಿಸುತ್ತೇನೆ.'

ಧೃಷ್ಟದ್ಯುಮ್ನಸ್ತತೋ ರಾಜನ್ ಶನಕೈರಬ್ರವೀದ್ ವಚಃ ॥೧೭॥

ರಾಜನೆ, ಆಗ ಧೃಷ್ಟದ್ಯುಮ್ನ ಸಾರಥಿಗೆ ನಿಧಾನವಾಗಿ ಹೇಳಿದ.

ಧೃಷ್ಟದ್ಯುಮ್ನಃ

ಮುಹ್ಯತೇ ಮೇ ಮನಸ್ತಾತ ಗಾತ್ರಸ್ವೇದಶ್ಚ ಜಾಯತೇ ।
ವೇಪಥುಶ್ಚ ಕ್ಲಮಶ್ಚೈವ ರೋಮಹರ್ಷಶ್ಚ ಜಾಯತೇ ॥೧೮॥

ಧೃಷ್ಟದ್ಯುಮ್ನ ನುಡಿದ— ಸಾರಥಿ, ನನ್ನ ಮನಸ್ಸು ಗೊಂದಲಕ್ಕೀಡಾಗಿದೆ. ಮೈ ಬೆವರುತ್ತಿದೆ. ನಡುಕ, ಆಯಾಸ, ರೋಮಾಂಚನಗಳುಂಟಾಗುತ್ತಿವೆ.

ಬ್ರಾಹ್ಮಣಂ ವರ್ಜಯನ್ ಯುದ್ಧೇ ಶನೈರ್ಯಾಹಿ ಯತೋಽಚ್ಯುತೌ ॥

ಬ್ರಾಹ್ಮಣನನ್ನು ಸುಮ್ಮನೆ ಬಿಟ್ಟು ನಿಧಾನವಾಗಿ ಕೃಷ್ಣಾರ್ಜುನರಿರುವಲ್ಲಿಗೇ ಹೋಗು.

ಅರ್ಜುನಂ ಭೀಮಸೇನಂ ವಾ ಸಮರೇ ಪ್ರಾಪ್ಯ ಸಾರಥೇ ।
ಕ್ಷೇಮಮದ್ಯ ಭವೇನ್ಮಹ್ಯಮಿತಿ ಮೇ ನೈಷ್ಠಿಕೀ ಮತಿಃ ॥೨೦॥

ಅರ್ಜುನನ್ನಾಗಲಿ ಭೀಮನನ್ನಾಗಲಿ ಸೇರಿದರೆ ನನಗೆ ಕ್ಷೇಮವೆಂದು ನನಗೆ ವಿಶ್ವಾಸವಿದೆ.

ಸಂಜಯಃ

ತತಃ ಪ್ರಾಯಾನ್ಮಹಾರಾಜ ಸಾರಥಿಸ್ತ್ವರಯನ್ ಹಯಾನ್ ।
ಯತೋ ಭೀಮೋ ಮಹೇಷ್ವಾಸೋ ಯುಯುಧೇ ತವ ಸೈನಿಕೈಃ ॥೨೧॥

ಸಂಜಯ ನುಡಿದ— ಮಹಾರಾಜ, ಆಗ ಸಾರಥಿ ಬೇಗನೆ ಕುದುರೆಗಳನ್ನು ಮಹಾ ಬಿಲ್ಲಾಳುವಾದ ಭೀಮಸೇನ ನಿನ್ನ ಸೈನಿಕರೊಂದಿಗೆ ಯುದ್ಧಮಾಡುವಲ್ಲಿಗೆ ಓಡಿಸಿದ.

ಪ್ರದ್ರುತಂ ತು ರಥಂ ದೃಷ್ಟ್ವಾ ಧೃಷ್ಟದ್ಯುಮ್ನಸ್ಯ ಮಾರಿಷ ।
ಕಿರನ್ ಶರಶತಾನ್ಯೇವ ಗೌತಮೋऽನುಯಯೌ ತದಾ ॥೨೨॥

ರಾಜನೆ, ಧೃಷ್ಟದ್ಯುಮ್ನನ ರಥ ಪಲಾಯನ ಮಾಡುವುದನ್ನು ಕಂಡು ಕೃಪ ಅವನ ಮೇಲೆ ನೂರಾರು ಬಾಣಗಳನ್ನು ಎಸೆಯುತ್ತ ಬೆನ್ನಟ್ಟಿದ.

ಶಂಖಂ ಚ ಪೂರಯಾಮಾಸ ಮುಹುರ್ಮುಹುರರಿಂದಮಃ ।
ಪಾರ್ಷತಂ ದ್ರಾವಯಾಮಾಸ ಮಹೇಂದ್ರ ಇವ ಶಂಬರಮ್ ॥೨೩॥

ಶತ್ರುನಾಶಕನಾದ ಕೃಪ ಪುನಃಪುನಃ ಶಂಖನಾದ ಮಾಡುತ್ತ ಧೃಷ್ಟದ್ಯುಮ್ನನನ್ನು ಮಹೇಂದ್ರನು ಶಂಬರಾಸುರನನ್ನು ಅಟ್ಟಿದಂತೆ ಅಟ್ಟಿದ.

ಶಿಖಂಡಿನಂ ತು ಸಮರೇ ಭೀಷ್ಮಮೃತ್ಯುಂ ದುರಾಸದಮ್ ।
ಹಾರ್ದಿಕ್ಯೋ ವಾರಯಾಮಾಸ ಸ್ಮಯನ್ನಿವ ಮುಹುರ್ಮುಹುಃ ॥೨೪॥

ಭೀಷ್ಮನ ಮರಣಕ್ಕೆ ಕಾರಣನಾದ, ಶತ್ರುಗಳಿಗೆ ವಶನಾಗದ ಶಿಖಂಡಿಯನ್ನು ಹೃದಿಕನ ಪುತ್ರನಾದ ಕೃತವರ್ಮನು ಪುನಃ ಪುನಃ ಅಟ್ಟಹಾಸಗೈಯುತ್ತ ತಡೆದ.

ಶಿಖಂಡೀ ತು ಸಮಾಸಾದ್ಯ ಹೃದಿಕಾನಾಂ ಮಹಾರಥಮ್ ।
ಪಂಚಭಿರ್ನಿಶಿತೈರ್ಬಾಲ್ಯೇ ರ್ಜತ್ರುದೇಶೇ ಸಮಾರ್ದಯತ್ ॥೨೫॥

ಶಿಖಂಡಿಯು ಹೃದಿಕರ ಮಹಾರಥನಾದ ಕೃತವರ್ಮನನ್ನು ಸಂಧಿಸಿ ತೀಕ್ಷ್ಣವಾದ ಐದು ಭಲ್ಲೆಗಳಿಂದ ಕೊರಳಿನ ಎಲುಬಿಗೆ ಹೊಡೆದ.

ಕೃತವರ್ಮಾ ತು ಸಂಕ್ರುದ್ಧೋ ವಿದ್ಧ್ವಾ ಷಷ್ಟಿಭಿರಾಶುಗೈಃ ।
ಧನುರೇಕೇನ ಚಿಚ್ಛೇದ ಸ್ಮಯನ್ನಿವ ಮಹಾರಥಃ ॥೨೬॥

ಮಹಾರಥನಾದ ಕೃತವರ್ಮ ನಗುತ್ತ ಕೋಪದಿಂದ ಶಿಖಂಡಿಯನ್ನು ಅರವತ್ತು ಬಾಣಗಳಿಂದ ಹೊಡೆದು ಒಂದು ಬಾಣದಿಂದ ಅವನ ಬಿಲ್ಲನ್ನು ಕಡಿದ.

ಅಥಾನ್ಯದ್ ಧನುರಾದಾಯ ದ್ರುಪದಸ್ಯಾತ್ಮಜೋ ಬಲೀ ।
ತಿಷ್ಠ ತಿಷ್ಠೇತಿ ಸಂಕ್ರುದ್ಧಃ ಹಾರ್ದಿಕ್ಯಂ ಪ್ರತ್ಯಭಾಷತ ॥೨೭॥

ಬಲಿಷ್ಠನಾದ ಶಿಖಂಡಿ ಇನ್ನೊಂದು ಬಿಲ್ಲನ್ನೆತ್ತಿ ಕೋಪದಿಂದ 'ನಿಲ್ಲುನಿಲ್ಲು' ಎಂದು ಕೃತವರ್ಮನಿಗೆ ಪ್ರತಿಯಾಗಿ ನುಡಿದ.

ತತೋಽಸ್ಯ ನವತಿಂ ಬಾಣಾನ್ ರುಗ್ಮಪುಂಖಾನ್ ಸುತೇಜಸಃ ।
ಪ್ರೇಷಯಾಮಾಸ ಸಮರೇ ತೇಽಸ್ಯಾಭ್ರಶ್ಯಂತ ವರ್ಮಣಾ ॥೨೮॥

ಮತ್ತು ಕೃತವರ್ಮನ ಮೇಲೆ ಬಂಗಾರದ ಪುಕ್ಕಉಳ್ಳ ತೇಜಸ್ವಿಯಾದ ತೊಂಬತ್ತು ಬಾಣಗಳನ್ನು ರಣದಲ್ಲಿ ಎಸೆದ. ಆದರೆ ಅವು ಕವಚಕ್ಕೆ ತಗುಲಿ ಕೆಳಕ್ಕೆ ಜಾರಿದುವು.

ವಿತಥಾಂಸ್ತಾನ್ ಸಮಾಲಕ್ಷ್ಯ ಪತಿತಾಂಶ್ಚ ಮಹೀತಳೇ ।
ಕ್ಷುರಪ್ರೇಣ ಸುತೀಕ್ಷ್ಣೇನ ಸೋಽಚ್ಛಿನತ್ ಕಾರ್ಮುಕಂ ದೃಢಮ್ ॥೨೯॥

ಬಾಣಗಳು ವ್ಯರ್ಥವಾಗಿ ನೆಲದಲ್ಲಿ ಬಿದ್ದಿದ್ದನ್ನು ನೋಡಿ ಶಿಖಂಡಿ ಬಲು ತೀಕ್ಷ್ಣವಾದ ಬಾಣದಿಂದ ಕೃತವರ್ಮನ ಬಿಲ್ಲನ್ನು ದೃಢವಾಗಿ ಕತ್ತರಿಸಿದ.

ಅಥೈನಂ ಛಿನ್ನಧನ್ವಾನಂ ಭಗ್ನಶೃಂಗಮಿವರ್ಷಭಮ್ ।
ಅಶೀತ್ಯಾ ಮಾರ್ಗಣೈಃ ಕ್ರುದ್ಧೋ ಬಾಹ್ವೋರುರಸಿ ಚಾರ್ಪಯತ್ ॥

ಬಿಲ್ಲನ್ನು ಕಡಿದುಕೊಂಡ ಕೃತವರ್ಮ ಕೊಂಬು ಮುರಿದ ಎತ್ತಿನಂತಾದ.

ಕ್ರುದ್ಧನಾದ ಶಿಖಂಡಿ ಅವನ ತೋಳುಗಳಲ್ಲಿಯೂ ಎದೆಯಲ್ಲಿಯೂ ಎಂಬತ್ತು ಬಾಣಗಳನ್ನು ಎಸೆದ.

ಕೃತವರ್ಮಾ ತು ಸಂಕ್ರುದ್ಧೋ ಮಾರ್ಗಣೈಃ ಕ್ಷತವಿಕ್ಷತಃ ।
ಸುಸ್ರಾವ ರುಧಿರಂ ಗಾತ್ರೈಃ ಕುಂಭವಕ್ತ್ರಾದಿವೋದಕಮ್ ॥೩೧॥

ಕ್ರುದ್ಧನಾದ ಕೃತವರ್ಮನು ಬಾಣಗಳಿಂದ ಕ್ಷತ ವಿಕ್ಷತನಾಗಿ, ಬಿಂದಿಗೆ ಬಾಯಿಂದ ನೀರು ಸುರಿಸುವಂತೆ ಎಲ್ಲ ಅವಯವಗಳಿಂದ ರಕ್ತವನ್ನು ಸುರಿಸಿದ.

ರುಧಿರೇಣ ಪರಿಕ್ಲಿನ್ನಃ ಕೃತವರ್ಮಾ ವ್ಯರೋಚತ ।
ವರ್ಷೇಣ ಕ್ಲೇದಿತೋ ರಾಜನ್ ಯಥಾ ಗೈರಿಕಪರ್ವತಃ ॥೩೨॥

ರಾಜನೆ, ಕೆಂಬಣ್ಣದ ಗೈರಿಕಧಾತುವಿನ ಪರ್ವತ ಮಳೆನೀರಿನಿಂದ ನೆನೆದಾಗ ಹೇಗೆ ಕಾಣುವುದೋ ಹಾಗೆ ರಕ್ತದಿಂದ ತೊಯ್ದ ಕೃತವರ್ಮ ಶೋಭಿಸಿದ.

ಅಥಾನ್ಯದ್ ಧನುರಾದಾಯ ಸಮಾರ್ಗಣಗಣಂ ತತಃ ।
ಶಿಖಂಡಿನಂ ತ್ರಿಭಿರ್ಬಾಣೈಃ ಸ್ಕಂಧದೇಶೇऽಭ್ಯತಾಡಯತ್ ॥೩೩॥

ಕೃತವರ್ಮ ಬೇರೆ ಬಿಲ್ಲು ಬಾಣಗಳನ್ನೆತ್ತಿಕೊಂಡು ಮೂರು ಬಾಣಗಳಿಂದ ಶಿಖಂಡಿಯನ್ನು ಕೊರಳ ಎಲುಬಿನ ಮೇಲೆ ಹೊಡೆದ.

ಸ್ಕಂಧದೇಶೇ ಸ್ಥಿತೈರ್ಬಾಣೈಃ ಶಿಖಂಡೀ ತು ವ್ಯರಾಜತ ।
ಶಾಖಾಪ್ರಶಾಖೈರ್ವಿಮಲೈಃ ಸುಮಹಾನ್ ವೈ ಯಥಾ ದ್ರುಮಃ ॥೩೪॥

ಹೆಗಲಿನಲ್ಲಿ ನೆಟ್ಟ ಬಾಣಗಳಿಂದ ಶಿಖಂಡಿ ನಿರ್ಮಲವಾದ ಕೊಂಬೆರೆಂಬೆ ಗಳಿಂದ ಯುಕ್ತವಾದ ಬಲು ದೊಡ್ಡ ಮರದಂತೆ ಶೋಭಿಸಿದ.

ತಾವನ್ಯೋನ್ಯಂ ರಣೇ ವಿದ್ಧ್ವಾ ರುಧಿರೇಣ ಸಮುಕ್ಷಿತೌ ।
ಪ್ರೋಪ್ಲೂಯಮಾನೌ ಹಿ ಯಥಾ ಮಹಾಂತೌ ಶೋಣಿತಹ್ರದೌ ॥೩೫॥

ಶಿಖಂಡಿ ಕೃತವರ್ಮರು ಪರಸ್ಪರ ಹೊಡೆದುಕೊಂಡು ರಕ್ತದಿಂದ ತೊಯ್ದು ಹೋದರು. ಮಡುಗಟ್ಟಿದ ರಕ್ತದಿಂದ ಕೂಡಿದ ಅವರು ದೊಡ್ಡ ಎರಡು ಕೆನ್ನೀರ ಕೊಳಗಳಂತೆ ಕಂಡರು.

ತದ್ವದ್ವಿರೇಜತುರ್ವೀರೌ ಶೋಣಿತೇನ ಪರಿಪ್ಲುತೌ ।
ಯಥಾ ಚ ಕಿಂಶುಕೌ ಫುಲ್ಲೌ ಪುಷ್ಪಮಾಸೇऽಭ್ಯುಪಾಗತೇ ॥೩೬॥

ಇಬ್ಬರೂ ವೀರರು ರಕ್ತದಿಂದ ತೊಯ್ದು ಪುಷ್ಪಮಾಸದಲ್ಲಿ ಹೂಬಿಟ್ಟ ಎರಡು ಕಿಂಶುಕ(ಮುತ್ತುಗದ) ವೃಕ್ಷಗಳಂತೆ ಕಂಡರು.

ರುಧಿರೋಕ್ಷಿತಸರ್ವಾಂಗೌ ರಕ್ತಚಂದನರೂಷಿತೌ ।
ಭುಜಗಾವಿವ ಸಂಕ್ರುದ್ಧೌ ರೇಜತುಸ್ತೌ ನರೋತ್ತಮೌ ॥೩೭॥

ಸರ್ವಾಂಗಗಳಲ್ಲಿ ರಕ್ತದಿಂದ ತೊಯ್ದ ಇಬ್ಬರು ಕೆಂಪುಗಂಧ ಬಳಿದುಕೊಂಡ ರಾಜರ, ಕುಪಿತವಾದ ಎರಡು ಹಾವುಗಳಂತೆ ಕಂಡುಬಂದರು.

ತಾವುಭೌ ಶರನುನ್ನಾಂಗೌ ಪರಸ್ಪರಶರಕ್ಷತೌ ।
ಅನ್ಯೋನ್ಯಶೃಂಗಾಭಿಹತೌ ರೇಜತುರ್ವೃಷಭಾವಿವ ॥೩೮॥

ಅವರಿಬ್ಬರು ಬಾಣಪೀಡಿತಶರೀರರಾಗಿ, ಪರಸ್ಪರ ಬಾಣಗಳಿಂದ ಗಾಯ ಗೊಂಡು, ಪರಸ್ಪರ ಕೊಂಬುಗಳಿಂದ ಹೋರಾಡಿದ ಎತ್ತುಗಳಂತೆ ಶೋಭಿಸಿದರು.

ಅನ್ಯೋನ್ಯಸ್ಯ ವಧೇ ಯತ್ನಂ ಕುರ್ವಾಣೌ ತೌ ಮಹಾರಥೌ ।
ರಥಾಭ್ಯಾಂ ಚೇರತುಸ್ತತ್ರ ಮಂಡಲಾನಿ ಸಹಸ್ರಶಃ ॥೩೯॥

ಮಹಾರಥರಾದ ಇಬ್ಬರು ಪರಸ್ಪರ ವಧೆಗೆ ಯತ್ನ ಮಾಡುತ್ತ ಸಾವಿರಾರು ಮಂಡಲ ಗತಿಗಳಿಂದ ರಥಸಂಚಾರ ಮಾಡಿದರು.

ಕೃತವರ್ಮಾ ಮಹಾರಾಜ ಪಾರ್ಷತಂ ನಿಶಿತೈಃ ಶರೈಃ ।
ರಣೇ ವಿವ್ಯಾಧ ಸಪ್ತತ್ಯಾ ಸ್ವರ್ಣಪುಂಖೈಃ ಶಿಲಾಶಿತೈಃ ॥೪೦॥

ಮಹಾರಾಜ, ಕೃತವರ್ಮನು ಬಂಗಾರದ ಪುಕ್ಕವುಳ್ಳ ಸಾಣೆಹಿಡಿದ ಹರಿತವಾದ ಎಪ್ಪತ್ತು ಬಾಣಗಳಿಂದ ಶಿಖಂಡಿಯನ್ನು ಹೊಡೆದ.

ತತೋऽಸ್ಯ ಸಮರೇ ಬಾಣಂ ಭೋಜಃ ಪ್ರಹರತಾಂ ವರಃ ।
ಜೀವಿತಾಂತಕರಂ ಘೋರಂ ವ್ಯಸೃಜತ್ ತ್ವರಯಾऽನ್ವಿತಃ ॥೪೧॥

ಯೋಧರಲ್ಲಿ ಶ್ರೇಷ್ಠನಾದ ಕೃತವರ್ಮ ಯುದ್ಧದಲ್ಲಿ ಶಿಖಂಡಿಯ ಮೇಲೆ ಪ್ರಾಣಾಂತಕರವಾದ ಭಯಂಕರ ಬಾಣವನ್ನು ವೇಗವಾಗಿ ಎಸೆದ.

ಸ ತೇನಾಭಿಹತೋ ರಾಜನ್ ಮೂರ್ಚ್ಛಯಾऽಭಿಪರಿಪ್ಲುತಃ ।
ಧ್ವಜಯಷ್ಟಿಂ ಚ ಸಹಸಾ ಶಿಶ್ರಿಯೇ ಕಶ್ಮಲಾವೃತಃ ॥೪೨॥

ರಾಜನೆ, ಶಿಖಂಡಿ ಆ ಬಾಣದಿಂದ ಹೊಡೆಸಿಕೊಂಡು ಮೈಮರೆತು ಒಡನೆ ಧ್ವಜಸ್ತಂಭವನ್ನು ಗಟ್ಟಿಯಾಗಿ ಹಿಡಿದು ಮೂರ್ಛೆಗೊಂಡ

ಅಪೋವಾಹ ರಣಾತ್ ತಂ ತು ಸಾರಥೀ ರಥಿನಾಂ ವರಮ್ ।
ಹಾರ್ದಿಕ್ಯಶರಸಂತಪ್ತಂ ನಿಃಶ್ವಸಂತಂ ಪುನಃ ಪುನಃ ॥೪೩॥

ರಥಿಕರಲ್ಲಿ ಶ್ರೇಷ್ಠನಾದ ಶಿಖಂಡಿ ಕೃತವರ್ಮನ ಬಾಣಗಳಿಂದ ಪೀಡಿತನಾಗಿ ನಿಟ್ಟುಸಿರು ಬಿಡುತ್ತಿದ್ದುದನ್ನು ಕಂಡು ಅವನನ್ನು ಸಾರಥಿಯು ರಣರಂಗದಿಂದಾಚೆಗೆ ಒಯ್ದ.

ಪರಾಜಿತೇ ತತ್ರ ಶೂರೇ ದ್ರುಪದಸ್ಯ ಸುತೇ ಪ್ರಭೋ ।
ಪ್ರಾದ್ರವತ್ ಪಾಂಡವೀ ಸೇನಾ ವಧ್ಯಮಾನಾ ಸಮಂತತಃ ॥೪೪॥

ರಾಜನೆ, ಶೂರನಾದ ದ್ರುಪದಪುತ್ರ ಶಿಖಂಡಿ ಪರಾಜಿತನಾದಾಗ ಎಲ್ಲೆಡೆಯಿಂದ ಹೊಡೆಸಿಕೊಂಡು ಪಾಂಡವ ಸೈನ್ಯ ಪಲಾಯನ ಮಾಡಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷಡ್‌ವಿಂಶೋऽಧ್ಯಾಯಃ ॥೨೬॥

❖

ಇಪ್ಪತ್ತೇಳನೆಯ ಅಧ್ಯಾಯ

ಅರ್ಜುನನಿಂದ ಸಂಶಪ್ತಕರ ವಧ.

ಸಂಜಯಃ

ಶ್ವೇತಾಶ್ವೋऽಪಿ ಮಹಾರಾಜ ವ್ಯಧಮತ್ ತಾವಕಂ ಬಲಮ್ ।
ಯಥಾ ವಾಯುಃ ಸಮಾಸಾದ್ಯ ತೂಲರಾಶಿಂ ಸಮಂತತಃ ॥೧॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ಮಹಾರಾಜ, ಗಾಳಿ ಬೀಸಿ ಹತ್ತಿಯ ರಾಶಿಯನ್ನು ಎಲ್ಲೆಡೆ ಚದುರಿಸುವಂತೆ ಅರ್ಜುನ ನಿನ್ನ ಸೈನ್ಯವನ್ನು ನಾಶಮಾಡಿದ್ದಾನೆ.

ಪ್ರತ್ಯುದ್ಯಯುಸ್ತ್ರಿಗರ್ತಾಸ್ತಂ ಶಿಬಯಃ ಸಹ ಕೌರವೈಃ ।
ವಸಾತಯೋऽಥ ಸಾಲ್ವಾಶ್ಚ ಗೋಪಾಲಾಶ್ಚ ಯಶಸ್ವಿನಃ ॥೨॥

ಅರ್ಜುನನನ್ನು ಯಶಸ್ವಿಗಳಾದ ತ್ರಿಗರ್ತರು, ಶಿಬಿಗಳು, ಕೌರವರು, ವಸಾತಿಗಳು ಸಾಲ್ವರು ಗೋಪಾಲರು ಇದಿರಿಸಿದರು.

ಸತ್ಯದೇವಃ ಸತ್ಯಕೀರ್ತಿರ್ಮಿತ್ರದೇವಃ ಶ್ರುತಂಜಯಃ ।
ಸೌಶ್ರುತಿಶ್ಚಂದ್ರದೇವಶ್ಚ ಮಿತ್ರವರ್ಮಾ ಚ ಭಾರತ ॥೩॥

ಸತ್ಯದೇವ, ಸತ್ಯಕೀರ್ತಿ ಮಿತ್ರದೇವ ಶ್ರುತಂಜಯ ಸೌಶ್ರುತಿ ಚಂದ್ರದೇವ ಮಿತ್ರವರ್ಮರೂ ಅರ್ಜುನನನ್ನು ಇದಿರಿಸಿದರು.

ತ್ರಿಗರ್ತರಾಜಃ ಸಮರೇ ಭ್ರಾತೃಭಿಃ ಪರಿವಾರಿತಃ ।
ಪುತ್ರೈಶ್ಚೈವ ಮಹೇಷ್ವಾಸೈರ್ನಾನಾಶಸ್ತ್ರಧರೈರ್ಯುಧಿ ॥೪॥

ತ್ರಿಗರ್ತರಾಜ ಸುಶರ್ಮನು, ಮಹಾಬಿಲ್ಗಾರರಾದ ನಾನಾಶಸ್ತ್ರಧಾರಿಗಳಾದ ಸೋದರರಿಂದಲೂ ಪುತ್ರರಿಂದಲೂ ಪರಿವಾರಿತನಾಗಿ ರಣದಲ್ಲಿ ಅರ್ಜುನನನ್ನು ಇದಿರಿಸಿದ.

ತೇ ಸೃಜಂತಃ ಶರಾನ್ ಘೋರಾನ್ ಕಿರಂತೋऽರ್ಜುನಮಾಹವೇ ।
ಅಭ್ಯವರ್ತಂತ ಸಹಸಾ ವಾಯರ್ಘೋಷ ಇವ ಸಾಗರಮ್ ॥೫॥

ನೀರಿನ ಪ್ರವಾಹ ಸಾಗರವನ್ನು ಪ್ರವೇಶಿಸುವಂತೆ ಇವರೆಲ್ಲರೂ ಒಡನೆ ರಣದಲ್ಲಿ ಘೋರವಾದ ಬಾಣಗಳನ್ನು ಎಸೆಯುತ್ತ ಅರ್ಜುನನ ಇದಿರಿಗೆ ಬಂದರು.

ತೇ ತ್ವರ್ಜುನಂ ಸಮಾಸಾದ್ಯ ಯೋಧಾಃ ಶತಸಹಸ್ರಶಃ ।
ಅಗಚ್ಛನ್ ವಿಲಯಂ ಸರ್ವೇ ತಾರ್ಕ್ಷ್ಯಂ ದೃಷ್ಟ್ವೇವ ಪನ್ನಗಾಃ ॥೬॥

ಆದರೆ ನೂರಾರು ಸಾವಿರಾರು ಸಂಖ್ಯೆಯಲ್ಲಿದ್ದ ಆ ಯೋಧರೆಲ್ಲರೂ ಅರ್ಜುನನ ಇದಿರಿಗೆ ಬಂದು, ಗರುಡನನ್ನು ಕಂಡ ಹಾವುಗಳಂತೆ, ನಾಶ ಹೊಂದಿದರು.

ತೇ ವಧ್ಯಮಾನಾಃ ಸಮರೇ ನ ಜಹುಃ ಪಾಂಡವಂ ತದಾ ।
ದಹ್ಯಮಾನಾ ಮಹಾರಾಜ ಶಲಭಾ ಇವ ಪಾವಕಮ್ ॥೭॥

ಮಹಾರಾಜ, ಅವರು ಯುದ್ಧದಲ್ಲಿ ಹೊಡೆಸಿಕೊಂಡರೂ ಅರ್ಜುನನನ್ನು ಬಿಟ್ಟು ಮಿಡತೆಗಳು ಬೆಂಕಿಯಿಂದ ಸುಡಿಸಿಕೊಂಡರೂ ಬೆಂಕಿಯನ್ನು ಬಿಟ್ಟು ಬೇರೆ ಕಡೆಗೆ ಹೇಗೆ ಹೋಗುವುದಿಲ್ಲವೋ ಹಾಗೆ ಪಲಾಯನ ಮಾಡಲಿಲ್ಲ.

ಸತ್ಯದೇವಸ್ತ್ರಿಭಿರ್ಬಾಣೈರ್ವಿವ್ಯಾಧ ಯುಧಿ ಪಾಂಡವಮ್ ।
ಮಿತ್ರದೇವಸ್ತ್ರಿಷಷ್ಟ್ಯಾ ಚ ಚಂದ್ರದೇವಶ್ಚ ಸಪ್ತಭಿಃ ॥೮॥

ಮಿತ್ರವರ್ಮಾ ತ್ರಿಸಪ್ತತ್ಯಾ ಸೌಶ್ರುತಿಶ್ಚಾಪಿ ಪಂಚಭಿಃ ।
ಶ್ರುತಂಜಯಶ್ಚ ವಿಂಶತ್ಯಾ ಸುಶರ್ಮಾ ನವಭಿಃ ಶರೈಃ ॥೯॥

ಸತ್ಯದೇವನು ಅರ್ಜುನನನ್ನು ಯುದ್ಧದಲ್ಲಿ ಮೂರು ಬಾಣಗಳಿಂದ ಹೊಡೆದ. ಮಿತ್ರದೇವನು ಅರವತ್ತು ಬಾಣಗಳಿಂದ, ಚಂದ್ರದೇವನು ಏಳು ಬಾಣಗಳಿಂದ. ಮಿತ್ರವರ್ಮನು ಎಪ್ಪತ್ತಮೂರು ಬಾಣಗಳಿಂದ, ಸೌಶ್ರುತಿಯು ಐದು ಬಾಣಗಳಿಂದ, ಶ್ರುತಂಜಯನು ಇಪ್ಪತ್ತು ಬಾಣಗಳಿಂದ, ಸುಶರ್ಮನು ಒಂಬತ್ತು ಬಾಣಗಳಿಂದ ಅರ್ಜುನನನ್ನು ಹೊಡೆದರು.

ಸ ವಿದ್ಧೋ ಬಹುಭಿಃ ಸಂಖೇ ಪ್ರತಿವಿವ್ಯಾಧ ತಾನ್ ನೃಪಾನ್ ।
ಸೌಶ್ರುತಿಂ ಪಂಚವಿಂಶತ್ಯಾ ಸತ್ಯದೇವಂ ತ್ರಿಭಿಃ ಶರೈಃ ॥೧೦॥

ಮಿತ್ರದೇವಂ ಶತೇನೈವ ಚಂದ್ರದೇವಂ ತಥಾऽಷ್ಟಭಿಃ ।
ಅಷ್ಟಾಭಿರ್ಮಿತ್ರವರ್ಮಾಣಂ ಸುಶರ್ಮಾಣಂ ತಥೈವ ಚ ॥೧೧॥

ಬಹುಮಂದಿ ಶತ್ರುಗಳಿಂದ ಹೀಗೆ ಹೊಡೆಸಿಕೊಳ್ಳುತ್ತಿದ್ದ ಅರ್ಜುನನು ರಣದಲ್ಲಿ ಆ ರಾಜರಿಗೆ ಪ್ರತಿಯಾಗಿ ಬಾಣಗಳಿಂದ ಹೊಡೆದ. ಸೌಶ್ರುತಿಯನ್ನು ಇಪ್ಪತ್ತೈದು ಬಾಣಗಳಿಂದ, ಸತ್ಯದೇವನನ್ನು ಮೂರು ಬಾಣಗಳಿಂದ, ಮಿತ್ರದೇವನನ್ನು ನೂರು ಬಾಣಗಳಿಂದ, ಚಂದ್ರದೇವನನ್ನು ಎಂಟು ಬಾಣಗಳಿಂದ, ಮಿತ್ರವರ್ಮನನ್ನು ಎಂಟು ಬಾಣಗಳಿಂದ, ಸುಶರ್ಮನನ್ನೂ ಎಂಟು ಬಾಣಗಳಿಂದ ಹೊಡೆದ.

ಶ್ರುತಂಜಯಂ ಚ ರಾಜಾನಂ ಹತ್ವಾ ತತ್ರ ಶಿಲಾಶಿತೈಃ ।
ಸೌಶ್ರುತೇಃ ಸಶಿರಸ್ತ್ರಾಣಂ ಶಿರಃ ಕಾಯಾದಪಾಹರತ್ ॥೧೨॥
ತ್ವರಿತಂ ಚಂದ್ರದೇವಂ ಚ ಶರೈರ್ನಿನ್ಯೇ ಯಮಕ್ಷಯಮ್ ॥೧೩॥

ಸಾಣೆ ಹಿಡಿದ ಹರಿತವಾದ ಬಾಣಗಳಿಂದ ರಾಜಾ ಶ್ರುತಂಜಯನನ್ನು ಕೊಂದು, ಸೌಶ್ರುತಿಯ ಶಿರಸ್ತ್ರಾಣಸಹಿತವಾದ ಶಿರಸ್ಸನ್ನು ಶರೀರದಿಂದ ಕಿತ್ತು ತೆಗೆದ. ಮತ್ತು ಬೇಗನೆ ಚಂದ್ರದೇವನನ್ನೂ ಯಮಲೋಕಕ್ಕೆ ಅಟ್ಟಿದ.

ಅಥೇತರಾನ್ ಮಹಾರಾಜ ಯತಮಾನಾನ್ ಮಹಾರಥಾನ್ ।
ಪಂಚಭಿಃ ಪಂಚಭಿರ್ಬಾಣೈರೇಕೈಕಂ ಪ್ರತ್ಯತಾಡಯತ್ ॥೧೪॥

ಮಹಾರಾಜ, ಬಳಿಕ ಅರ್ಜುನನು ತನ್ನನ್ನು ಕೊಲ್ಲಲು ಯತ್ನಿಸಿದ ಇತರ ಮಹಾರಥರನ್ನು ಐದೈದು ಬಾಣಗಳಿಂದ ಪ್ರತಿಯೊಬ್ಬನನ್ನೂ ಹೊಡೆದ.

ಸತ್ಯದೇವಸ್ತು ಸಂಕ್ರುದ್ಧಸ್ತೋಮರಂ ಸಸೃಜೇ ಶಿತಮ್ ।
ಸಮುದ್ದಿಶ್ಯ ರಣೇ ಕೃಷ್ಣಂ ಸಿಂಹನಾದಂ ನನಾದ ಚ ॥೧೫॥

ಸತ್ಯದೇವನು ಕ್ರುದ್ಧನಾಗಿ ರಣದಲ್ಲಿ ಕೃಷ್ಣನ ಮೇಲೆ ಹರಿತವಾದ ತೋಮರವನ್ನು ಎಸೆದು ಸಿಂಹನಾದ ಗೈದ.

ಸ ನಿರ್ಭಿದ್ಯ ಭುಜಂ ಸವ್ಯಂ ಮಾಧವಸ್ಯ ಮಹಾತ್ಮನಃ ।
ಅಯಸ್ಮಯಃ ಸ್ವರ್ಣದಂಡೋ ಜಗಾಮ ಧರಣೀತಳಮ್ ॥೧೬॥

ಮಹಾತ್ಮನಾದ ಕೃಷ್ಣನ ಎಡತೋಳನ್ನು ಹೊಡೆದು, ಬಂಗಾರದ ದಂಡಯುಕ್ತವಾದ ಕಬ್ಬಿಣದ ಆ ತೋಮರವು ನೆಲದಲ್ಲಿ ಬಿದ್ದಿತು.

ಮಾಧವಸ್ಯ ತು ವಿದ್ಧಸ್ಯ ತೋಮರೇಣ ಮಹಾರಣೇ ।
ಪ್ರತೋದೋ ನ್ಯಪತದ್ಧಸ್ತಾದ್ ರಶ್ಮಯಶ್ಚ ವಿಶಾಂಪತೇ ॥೧೭॥

ಮಹಾಯುದ್ಧದಲ್ಲಿ ಕೃಷ್ಣನು ತೋಮರದಿಂದ ಹೊಡೆಸಿಕೊಂಡಾಗ, ರಾಜನೆ, ಕೃಷ್ಣನ ಕೈಯಿಂದ ಕಡಿವಾಣವೂ ಲಗಾಮುಗಳೂ ಬಿದ್ದುವು.

ವಿಷ್ವಕ್ಸೇನಂ ಸುನಿರ್ವಿದ್ಧಂ ದೃಷ್ಟ್ವಾ ಪಾರ್ಥೋ ಧನಂಜಯಃ ।
ಕ್ರೋಧಮಾಹಾರಯತ್ ತೀವ್ರಂ ಕೃಷ್ಣಂ ಚೇದಮುವಾಚ ಹ ॥೧೮॥

ಕೃಷ್ಣನು ಬಹಳ ಹೊಡೆಸಿಕೊಂಡಿದ್ದನ್ನು ಕಂಡು ಅರ್ಜುನ ತೀವ್ರಕ್ರೋಧ ತಂದುಕೊಂಡು ಕೃಷ್ಣನಿಗೆ ಹೇಳಿದ.

ಅರ್ಜುನಃ

ಚೋದಯಾಶ್ವಾನ್ ಮಹಾಬಾಹೋ ಸತ್ಯದೇವರಥಂ ಪ್ರತಿ ।
ಯಾವದೇನಂ ಶರೈಸ್ತೀಕ್ಷ್ಣೈರ್ನಯಾಮಿ ಯಮಸಾದನಮ್ ॥೧೯॥

ಅರ್ಜುನ ಕೃಷ್ಣನಿಗೆ ಹೇಳಿದ— ಮಹಾಬಾಹುವೆ, ಕುದುರೆಗಳನ್ನು ಸತ್ಯದೇವನ ರಥದ ಕಡೆಗೆ ಇನ್ನೂ ಮುಂದಕ್ಕೆ ಓಡಿಸು, ತೀಕ್ಷ್ಣವಾದ ಬಾಣಗಳಿಂದ ಅವನನ್ನು ಯಮಸದನಕ್ಕೆ ಅಟ್ಟುತ್ತೇನೆ.

ಸಂಜಯಃ

ಪ್ರತೋದಂ ಗೃಹ್ಯ ಸೋನ್ಯತ್ ತು ರಶ್ಮೀನ್ ಸಂಗೃಹ್ಯ ಚ ದ್ರುತಮ್ ॥
ತತಃ ಸ ಚೋದಯಾಮಾಸ ಸತ್ಯದೇವರಥಂ ಪ್ರತಿ ॥೨೧॥
ಅಥ ದಿವ್ಯಾಸ್ತ್ರವಿಚ್ಛೂರೋ ಜಾತಮನ್ಯುರ್ಧನಂಜಯಃ ॥೨೨॥
ವಿಷ್ವಕ್ಸೇನಂ ತು ನಿರ್ಭಿನ್ನಂ ದೃಷ್ಟ್ವಾ ಪಾರ್ಥೋ ಧನಂಜಯಃ ।
ಸತ್ಯದೇವಂ ಶರೈಸ್ತೀಕ್ಷ್ಣೈರ್ವಾರಯಿತ್ವಾ ಮಹಾಬಲಃ ॥೨೩॥

ತತಃ ಸುನಿಶಿತೈರ್ಭಲ್ಲೈ ರಾಜಂಸ್ತಸ್ಯ ಮಹಾತ್ಮನಃ ।
ಕುಂಡಲೋಪಚಿತಂ ಕಾಯಾಚ್ಚಕರ್ತ ಪ್ರಹಸನ್ ಶಿರಃ ॥೨೪॥

ಸಂಜಯನು ನುಡಿದ, ಕೃಷ್ಣನು ಬೇರೆ ಕಡಿವಾಣವನ್ನು ಮತ್ತು ಲಗಾಮುಗಳನ್ನು ಎತ್ತಿಕೊಂಡು ಬೇಗನೆ ಕುದುರೆಗಳನ್ನು ಸತ್ಯದೇವನ ರಥದ ಕಡೆಗೆ ಇನ್ನೂ ಮುಂದಕ್ಕೆ ಓಡಿಸಿದ. ಬಳಿಕ ದಿವ್ಯಾಸ್ತ್ರಗಳನ್ನು ಬಲ್ಲ ಶೂರ ಮಹಾಬಲಿ ಅರ್ಜುನನು ಕೋಪಗೊಂಡು, ಕೃಷ್ಣನು ಗಾಯಗೊಂಡಿರುವುದನ್ನು ನೋಡುತ್ತ ತೀಕ್ಷ್ಣವಾದ ಬಾಣಗಳಿಂದ ಸತ್ಯದೇವನನ್ನು ತಡೆದು, ಬಲು ಹರಿತವಾದ ಭಲ್ಲೆಗಳಿಂದ ಮಹಾತ್ಮನಾದ ಆ ಸತ್ಯದೇವನ ಕುಂಡಲಗಳಿಂದ ಅಲಂಕೃತವಾದ ಶಿರಸ್ಸನ್ನು ನಗುತ್ತ ಶರೀರದಿಂದ ಕತ್ತರಿಸಿದ.

ತಂ ನಿಹತ್ಯ ಶಿತೈರ್ಬಾಣೈರ್ಮಿತ್ರವರ್ಮಾಣಮಾಕ್ಷಿಪತ್ ।
ವತ್ಸದಂತೇನ ತೀಕ್ಷ್ಣೇನ ಸಾರಥಿಂ ಚಾಸ್ಯ ಮಾರಿಷ ॥೨೫॥

ತೀಕ್ಷ್ಣವಾದ ಬಾಣಗಳಿಂದ ಆ ಮಿತ್ರವರ್ಮನನ್ನು ಕೊಂದು ತೀಕ್ಷ್ಣವಾದ ವತ್ಸದಂತ ಬಾಣದಿಂದ ಸಾರಥಿಯನ್ನೂ ಅರ್ಜುನ ಕೊಂದ.

ತತಃ ಶರಶತೈರ್ಭೂಯಃ ಸಂಶಪ್ತಕಗಣಾನ್ ಬಹೂನ್ ।
ಪಾತಯಾಮಾಸ ಸಂಕ್ರುದ್ಧಃ ಶತಶೋಽಥ ಸಹಸ್ರಶಃ ॥೨೬॥

ಬಳಿಕ ನೂರಾರು ಸಾವಿರಾರು ಸಂಖ್ಯೆಯ ಬಹುಮಂದಿ ಸಂಶಪ್ತಕಗಣಗಳನ್ನು ಬಹಳ ಕ್ರುದ್ಧನಾದ ಅರ್ಜುನ ನೂರಾರು ಬಾಣಗಳಿಂದ ಪುನಃ ಕೊಂದ.

ತತೋ ರಜತಪುಂಖೇನ ರಾಜನ್ ಶೀರ್ಷಂ ಮಹಾತ್ಮನಃ ।
ಮಿತ್ರಸೇನಸ್ಯ ಚಿಚ್ಛೇದ ಕ್ಷುರಪ್ರೇಣ ಮಹಾಯಶಾಃ ॥೨೭॥

ರಾಜನೆ, ಬಳಿಕ ಮಹಾಯಶಸ್ವಿಯಾದ ಅರ್ಜುನ ಮಹಾತ್ಮನಾದ ಮಿತ್ರಸೇನನ ಶಿರಸ್ಸನ್ನು ಬೆಳ್ಳಿಯ ಪುಕ್ಕಉಳ್ಳ ಕ್ಷುರಪ್ರ ಬಾಣದಿಂದ ಕತ್ತರಿಸಿದ.

ಸುಶರ್ಮಾಣಂ ಸುಸಂಕ್ರುದ್ಧೋ ಜತ್ರುದೇಶೇ ಸಮರ್ಪಯತ್ ।
ನಾರಾಚೇನ ಸುಮುಕ್ತೇನ ಸುತೀಕ್ಷ್ಣೇನ ಮಹಾಯಶಾಃ ॥೨೮॥

ಮಹಾಯಶಸ್ವಿ ಅರ್ಜುನನು ಬಲು ಕ್ರುದ್ಧನಾಗಿ ಬಲುತೀಕ್ಷ್ಣವಾದ ಬಾಣವನ್ನು ಸರಿಯಾಗಿ ಪ್ರಯೋಗಿಸಿ ಸುಶರ್ಮನನ್ನು ಹೆಗಲಿನಲ್ಲಿ ಹೊಡೆದ.

ತತಃ ಸಂಶಪ್ತಕಾಃ ಸರ್ವೇ ಪರಿವಾರ್ಯ ಧನಂಜಯಮ್ ।
ಶಸ್ತ್ರೌಘೈರ್ಮಮೃದುಃ ಕ್ರುದ್ಧಾ ನಾದಯಂತೋ ದಿಶೋ ದಶ ॥೨೯॥

ಒಡನೆ ಸಂಶಪ್ತಕರು ಎಲ್ಲರೂ ಕ್ರುದ್ಧರಾಗಿ ಅರ್ಜುನನನ್ನು ಸುತ್ತುವರಿದು ಶಸ್ತ್ರಪ್ರವಾಹಗಳಿಂದ ಮರ್ದನ ಮಾಡಿದರು. ಹತ್ತುದಿಕ್ಕುಗಳನ್ನು ಸಿಂಹನಾದದಿಂದ ತುಂಬಿದರು.

ಸ ತೈರಭ್ಯರ್ದಿತೋ ಜಿಷ್ಣುಃ ಶಕ್ರತುಲ್ಯಪರಾಕ್ರಮಃ ।
ಐಂದ್ರಮಸ್ತ್ರಮಮೇಯಾತ್ಮಾ ಪ್ರಾದುಶ್ಚಕ್ರೇ ಮಹಾರಥಃ ॥೩೦॥

ಇಂದ್ರನಂತೆ ಪರಾಕ್ರಮಿ, ಅಮೇಯ ಸ್ವರೂಪಿಯಾದ ಮಹಾರಥ ಅರ್ಜುನನು ಸಂಶಪ್ತಕಗಣಗಳಿಂದ ಪೀಡಿತನಾಗಿ ಇಂದ್ರದೇವತಾಕವಾದ ಅಸ್ತ್ರವನ್ನು ಪ್ರಾದುರ್ಭಾವಗೊಳಿಸಿದ.

ತತಃ ಶರಸಹಸ್ರಾಣಿ ಪ್ರಾದುರಾಸನ್ ವಿಶಾಂಪತೇ ॥೩೧॥
ಕಾರ್ಮುಕಾತ್ ಪಾಂಡುಪುತ್ರಸ್ಯ ಪಾರ್ಥಸ್ಯಾಮಿತತೇಜಸಃ ॥೩೨॥

ರಾಜನೆ, ಆಗ ಸಾವಿರಾರು ಬಾಣಗಳು ಅಮಿತ ತೇಜನಾದ ಪಾಂಡುಪುತ್ರ ಪಾರ್ಥನ ಬಿಲ್ಲಿನಿಂದ ಪ್ರಾದುರ್ಭವಿಸಿದುವು.

ತತಸ್ತು ಚ್ಛಿದ್ಯಮಾನಾನಾಂ ಧ್ವಜಾನಾಂ ಧನುಷಾಂ ತಥಾ ।
ರಥಾನಾಂ ಸಪತಾಕಾನಾಂ ತೂಣೀರಾಣಾಂ ಯುಗೈಃ ಸಹ ॥೩೩॥

ಅಕ್ಷಾಣಾಮಥ ಚಕ್ರಾಣಾಂ ಯೋಕ್ತ್ರಾಣಾಂ ರಶ್ಮಿಭಿಃ ಸಹ ।
ಕೂಬರಾಣಾಂ ವರೂಥಾನಾಂ ಪೃಷತ್ಕಾನಾಂ ಚ ಸಂಯುಗೇ ॥೩೪॥

ಅಶ್ವಾನಾಂ ಪತತಾಂ ಚಾಪಿ ಪ್ರಾಸಾನಾಮಸಿಚರ್ಮಣಾಮ್ ।
ಗದಾನಾಂ ಪರಿಘಾನಾಂ ಚ ಶಕ್ತೀನಾಂ ತೋಮರೈಃ ಸಹ ॥೩೫॥

ಶತಘ್ನೀನಾಂ ಸಚಕ್ರಾಣಾಂ ಭುಜಾನಾಂ ಚೋರುಭಿಃ ಸಹ ।
ಕಂಠಸೂತ್ರಾಂಗದಾನಾಂ ಚ ಕೇಯೂರಾಣಾಂ ಚ ಮಾರಿಷ ॥೩೬॥

ಹಾರಾಣಾಂ ಹೇಮಸೂತ್ರಾಣಾಂ ಕಟಕಾನಾಂ ಚ ಭಾರತ ।
ಛತ್ರಾಣಾಂ ಮಕುಟಾನಾಂ ಚ ವ್ಯಜನಾನಾಂ ಮಹಾತ್ಮನಾಮ್ ॥೩೭॥
ಅಶ್ರೂಯತ ಮಹಾಶಬ್ದಸ್ತತ್ರತತ್ರ ವಿಶಾಂಪತೇ ॥೩೮॥
ರಾಶಯಶ್ಚಾತ್ರ ದೃಶ್ಯಂತೇ ಪತಿತಾನಾಂ ಮಹೀತಳೇ ॥೩೯॥

ಆಗ ಧ್ವಜ ಧನುಸ್ಸು ರಥ ಪತಾಕೆ ಬತ್ತಳಿಕೆ ನೊಗ ಅಕ್ಷ ಚಕ್ರ ಯೋಕ್ತ್ರ ರಶ್ಮಿ ಕೂಬರ ವರೂಥ ಬಾಣ ಅಶ್ವ ಪ್ರಾಸ ಖಡ್ಗ ಗುರಾಣಿ ಗದೆ ಪರಿಘ ಶಕ್ತಿ ತೋಮರ ಶತಘ್ನಿ ಚಕ್ರ ತೋಳು ತೊಡೆ ಕಂಠಹಾರ ತೋಳ್ಬಳೆ ಹಾರ ಚಿನ್ನದ ದಾರ ಕಟಕ ಛತ್ರ ಕಿರೀಟ ವ್ಯಜನ ಮುಂತಾದ ಮಹಾತ್ಮರಾದ ಯೋಧರ ಯುದ್ಧ ಸಾಮಗ್ರಿಗಳು ಅರ್ಜುನನ ಬಾಣಗಳಿಂದ ಕಡಿದು ಬೀಳುವಾಗ ಅಲ್ಲಲ್ಲಿ ಮಹಾಶಬ್ದ ಕೇಳಿಬಂದಿತು.

ರಣಭೂಮಿಯಲ್ಲಿ ಸತ್ತುಬಿದ್ದ ಯೋಧರ ಹೆಣಗಳ ರಾಶಿಗಳು ಕಂಡು ಬಂದುವು.

ಸಕುಂಡಲಾನಿ ಸ್ರಗ್ವೀಣಿ ಪೂರ್ಣಚಂದ್ರನಿಭಾನಿ ಚ ।
ಶಿರಾಂಸ್ಯುರ್ವ್ಯಾಮದೃಶ್ಯಂತ ತಾರಾಗಣ ಇವಾಂಬರೇ ॥೪೦॥

ಆಕಾಶದಲ್ಲಿ ನಕ್ಷತ್ರ ಪುಂಜಗಳಂತೆ, ರಣಭೂಮಿಯಲ್ಲಿ ಕುಂಡಲಹಾರಗಳಿಂದ ಕೂಡಿದ ಪೂರ್ಣಚಂದ್ರನಂಥ ಶಿರಸ್ಸುಗಳು ಕಂಡುಬಂದುವು.

ಸುಖಾರ್ಹಾಣಿ ಸುವಾಸಾಂಸಿ ಚಂದನೇನೋಕ್ಷಿತಾನಿ ಚ ।
ಶರೀರಾಣಿ ವ್ಯದೃಶ್ಯಂತ ನಿಹತಾನಾಂ ಮಹೀತಳೇ ॥೪೧॥

ಸುಖಭೋಗಾರ್ಹವಾದ ಒಳ್ಳೆಯ ಬಟ್ಟೆ ಉಟ್ಟ ಚಂದನಲಿಪ್ತವಾದ ಹತರಾದ ಯೋಧರ ಶರೀರಗಳು ರಣಭೂಮಿಯಲ್ಲಿ ಕಂಡುಬಂದುವು.

ರುದ್ರಸ್ಯಾಕ್ರೀಡಸದೃಶಂ ಘೋರಮಾಯೋಧನಂ ತದಾ ॥೪೨॥
ನಿಹತೈ ರಾಜಪುತ್ರೈಶ್ಚ ಕ್ಷತ್ರಿಯೈಶ್ಚ ಮಹಾಬಲೈಃ ।
ಅರ್ಜುನೇನ ಮಹಾರಾಜ ತತ್ರ ತತ್ರ ಮಹಾರಣೇ ॥೪೩॥

ಮಹಾರಾಜ, ಅರ್ಜುನನಿಂದ ಮಹಾರಣದಲ್ಲಿ ಹತರಾದ ಮಹಾಬಲಶಾಲಿ

ರಾಜಕುಮಾರರ ಮತ್ತು ಕ್ಷತ್ರಿಯಯೋಧರ ಶವಗಳಿಂದ ಭಯಂಕರವಾದ ರಣಭೂಮಿ ರುದ್ರನ ವಿಹಾರಭೂಮಿಯಾದ ಸ್ಮಶಾನಕ್ಕೆ ಸದೃಶವಾಯಿತು.

ಹಸ್ತಿಭಿಃ ಪತಿತೈಶ್ಚೈವ ತುರಂಗೈಶ್ಚಾಭವನ್ಮಹೀ ।
ಅಗಮ್ಯರೂಪಾ ಸಮರೇ ವಿಶೀರ್ಣೈರಿವ ಪರ್ವತೈಃ ॥೪೪॥

ಒಡೆದು ಬಿದ್ದ ಪರ್ವತಗಳಂಥ ಸತ್ತುಬಿದ್ದ ಆನೆ–ಕುದುರೆಗಳಿಂದ ರಣಭೂಮಿಯು ಅಗಮ್ಯವಾಯಿತು.

ನಾಸೀದ್ರಥಪಥಸ್ತಸ್ಯ ಪಾಂಡವಸ್ಯ ಮಹಾತ್ಮನಃ ।
ನಿಘ್ನತಃ ಶಾತ್ರವಾನ್ ಭಲ್ಲೈರ್ಹಸ್ತ್ಯಶ್ವಂ ಚಾಮಿತಂ ಮಹತ್ ॥೪೫॥

ಶತ್ರುಯೋಧರನ್ನು ಅಮಿತವಾದ ಮಹತ್ತಾದ ಆನೆ ಕುದುರೆಗಳ ಸಮೂಹವನ್ನು ಭಲ್ಲೆಗಳಿಂದ ಕೊಲ್ಲಬೇಕೆಂದರೆ ಮಹಾತ್ಮನಾದ ಅರ್ಜುನನಿಗೆ ಆ ರಣಭೂಮಿಯಲ್ಲಿ ತನ್ನ ರಥ ಚಲಿಸಲು ಮಾರ್ಗವಿಲ್ಲದಂತಾಯಿತು.

ಆರ್ತವಚ್ಚಾವಸೀದಂತಿ ರಥಚಕ್ರಾಣಿ ಮಾರಿಷ ।
ರಣೇ ವಿಚರತಸ್ತಸ್ಯ ತಸ್ಮಿನ್ ಲೋಹಿತಕರ್ದಮೇ ॥೪೬॥

ರಾಜನೆ, ರಣಭೂಮಿಯಲ್ಲಿ ಸಂಚರಿಸುವ ಅರ್ಜುನನ ರಥಚಕ್ರಗಳು ನೆತ್ತರಿನ ಕೆಸರಲ್ಲಿ ಹೂತುಹೋಗುತ್ತಿವೆ. ರೋಗದಿಂದ ಬಳಲಿದವುಗಳಂತೆ ನಿಧಾನವಾಗಿ ಚಲಿಸುತ್ತಿವೆ.

ಸೀದಮಾನೇ ತು ಚಕ್ರೇ ತೇ ಸಮೂಹುಸ್ತುರಗಾ ಭೃಶಮ್ ।
ಶ್ರಮೇಣ ಮಹತಾ ಯುಕ್ತಾ ಮನೋಮಾರುತರಂಹಸಃ ॥೪೭॥

ಚಕ್ರ ಹೂತು ಹೋದಾಗ ಮನೋವೇಗ ಗಾಳಿವೇಗವುಳ್ಳ ಕುದುರೆಗಳು ಕೂಡ ಮಹಾಶ್ರಮದಿಂದ ಯುಕ್ತವಾಗಿ ರಥವನ್ನು ಎಳೆಯುತ್ತವೆ.

ವಧ್ಯಮಾನಂ ತು ತತ್ಸೈನ್ಯಂ ಪಾಂಡುಪುತ್ರೇಣ ಧನ್ವಿನಾ ।
ಪ್ರಾಯಶೋ ವಿಮುಖಂ ಸೈನ್ಯಂ ನಾವತಿಷ್ಠತ ಸಂಯುಗೇ ॥೪೮॥

ಧನುರ್ಧಾರಿ ಅರ್ಜುನನಿಂದ ಹೊಡೆಸಿಕೊಳ್ಳುವಾಗ ಸೈನ್ಯ ಪ್ರಾಯಶಃ ಬೆನ್ನುಹಾಕಿ ಪಲಾಯನ ಮಾಡುತ್ತಿತ್ತೆ ಹೊರತು ಧೈರ್ಯದಿಂದ ನಿಂತೇ ಇಲ್ಲ.

ತಾನ್ ಜಿತ್ವಾ ಸಮರೇ ಜಿಷ್ಣುಃ ಸಂಶಪ್ತಕಗಣಾನ್ ಬಹೂನ್ ।
ರರಾಜ ಸ ಮಹಾರಾಜ ವಿಧೂಮೋಽಗ್ನಿರಿವ ಜ್ವಲನ್ ॥೪೯॥

ಮಹಾರಾಜ, ಬಹುಸಂಖ್ಯೆಯಲ್ಲಿದ್ದ ಸಂಶಪ್ತಕಗಣಗಳನ್ನು ಅರ್ಜುನ ಪರಾಭವಗೊಳಿಸಿ ಧೂಮರಹಿತವಾದ ಅಗ್ನಿಯಂತೆ ಜ್ವಲಿಸುತ್ತ ಪ್ರಕಾಶಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸಂಶಪ್ತಕಯುದ್ಧಂ ನಾಮ ಸಪ್ತವಿಂಶೋಽಧ್ಯಾಯಃ ॥೨೭॥

❖

ಇಪ್ಪತ್ತೆಂಟನೆಯ ಅಧ್ಯಾಯ

ಯುಧಿಷ್ಠಿರನಿಂದ ದುರ್ಯೋಧನನ ಪರಾಭವ, ಎರಡು ಸೈನ್ಯಗಳ ದೊಂಬಿಕಾಳಗ

ಸಂಜಯಃ

ಯುಧಿಷ್ಠಿರಂ ಮಹಾರಾಜ ವಿಸೃಜಂತಂ ಶರಾನ್ ಬಹೂನ್ ।
ಸ್ವಯಂ ದುರ್ಯೋಧನೋ ರಾಜಾ ಪ್ರತ್ಯಗೃಹ್ಣಾದಭೀತವತ್ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಮಹಾರಾಜ, ಯುಧಿಷ್ಠಿರನು ನಿನ್ನ ಸೈನ್ಯದ ಮೇಲೆ ಬಹಳ ಬಾಣಗಳನ್ನು ಎಸೆಯುವಾಗ ಸ್ವತಃ ರಾಜಾ ದುರ್ಯೋಧನ ಭಯರಹಿತನಾಗಿ ಅವನನ್ನು ಇದಿರಿಸಿದ.

ತಮಾಪತಂತಂ ಸಹಸಾ ತವ ಪುತ್ರಂ ಮಹಾರಥಮ್ ।
ಧರ್ಮರಾಜೋ ದ್ರುತಂ ವಿದ್ಧ್ವಾ ತಿಷ್ಠ ತಿಷ್ಠೇತಿ ಚಾಬ್ರವೀತ್ ॥೨॥

ಬಲವಾಗಿ ನುಗ್ಗಿಬಂದ ಮಹಾರಥನಾದ ದುರ್ಯೋಧನನನ್ನು ಧರ್ಮರಾಜನು ಬೇಗನೆ ಹೊಡೆದು 'ನಿಲ್ಲು ನಿಲ್ಲು' ಎಂದ.

ಸ ತು ತಂ ಪ್ರತಿವಿವ್ಯಾಧ ನವಭಿರ್ನಿಶಿತೈಃ ಶರೈಃ ।
ಸಾರಥಿಂ ಚಾಸ್ಯ ಭಲ್ಲೇನ ಭೃಶಂ ಕ್ರುದ್ಧೋಽಭ್ಯತಾಡಯತ್ ॥೩॥

ದುರ್ಯೋಧನ ಅವನನ್ನು ತೀಕ್ಷ್ಣವಾದ ಒಂಬತ್ತು ಬಾಣಗಳಿಂದ ಹೊಡೆದ, ಮತ್ತು ಕ್ರುದ್ಧನಾಗಿ ಅವನ ಸಾರಥಿಯನ್ನು ಭಲ್ಲೆಯಿಂದ ಚೆನ್ನಾಗಿ ಹೊಡೆದ.

ತತೋ ಯುಧಿಷ್ಠಿರೋ ರಾಜನ್ ಸ್ವರ್ಣಪುಂಖಾನ್ ಶಿಲೀಮುಖಾನ್ ।
ದುರ್ಯೋಧನಾಯ ಚಿಕ್ಷೇಪ ತ್ರಯೋದಶ ಶಿಲಾಶಿತಾನ್ ॥೪॥

ಆಗ ರಾಜನೆ, ಯುಧಿಷ್ಠಿರನು ಬಂಗಾರದ ಪುಕ್ಕಉಳ್ಳ ಸಾಣೆಹಿಡಿದ ಹದಿಮೂರು ಬಾಣಗಳನ್ನು ದುರ್ಯೋಧನನಿಗೆ ಎಸೆದ.

ಚತುರ್ಭಿಶ್ಚತುರೋ ವಾಹಾಂಸ್ತಸ್ಯ ಹತ್ವಾ ಮಹಾರಥಃ ।
ಪಂಚಮೇನ ಶಿರಃ ಕಾಯಾತ್ ಸಾರಥೇಶ್ಚ ಸಮಾಕ್ಷಿಪತ್ ॥೫॥

ಮಹಾರಥನಾದ ಯುಧಿಷ್ಠಿರನು ದುರ್ಯೋಧನನ ನಾಲ್ಕೂ ಕುದುರೆಗಳನ್ನು ನಾಲ್ಕು ಬಾಣಗಳಿಂದ ಕೊಂದು, ಐದನೇ ಬಾಣದಿಂದ ಸಾರಥಿಯ ಶಿರಸ್ಸನ್ನು ಶರೀರದಿಂದ ಕಿತ್ತೆಸೆದ.

ಷಷ್ಠೇನ ತು ಧ್ವಜಂ ರಾಜ್ಞಃ ಸಪ್ತಮೇನ ತು ಕಾರ್ಮುಕಮ್ ।
ಅಷ್ಟಮೇನ ತಥಾ ಖಡ್ಗಂ ಪಾತಯಾಮಾಸ ಭೂತಳೇ ॥೬॥
ಪಂಚಭಿರ್ನೃಪತಿಂ ಚಾಪಿ ಧರ್ಮರಾಜೋಽರ್ದಯದ್ ಭೃಶಮ್ ॥೭॥

ಆರನೆ ಬಾಣದಿಂದ ರಾಜನ ಧ್ವಜವನ್ನು, ಏಳನೇ ಬಾಣದಿಂದ ಬಿಲ್ಲನ್ನು, ಎಂಟನೇ ಬಾಣದಿಂದ ಖಡ್ಗವನ್ನೂ ನೆಲದಲ್ಲಿ ಕೆಡವಿದ. ಐದು ಬಾಣಗಳಿಂದ ದುರ್ಯೋಧನನನ್ನು ಚೆನ್ನಾಗಿ ಹೊಡೆದ.

ಹತಾಶ್ವಾತ್ತು ರಥಾತ್ತಸ್ಮಾದವಪ್ಲುತ್ಯ ಸುತಸ್ತವ ।
ಉತ್ತಮಂ ವ್ಯಸನಂ ಪ್ರಾಪ್ತೋ ಭೂಮಾವೇವಾವತಿಷ್ಠತ ॥೮॥

ಕುದುರೆಗಳು ಸತ್ತಿದ್ದರಿಂದ ದುರ್ಯೋಧನ ರಥದಿಂದ ಕೆಳಗೆ ಹಾರಿ ಬಹಳ ಚಿಂತೆ ಮಾಡುತ್ತ ನೆಲದಲ್ಲಿಯೇ ನಿಂತ.

ತಂ ತು ಕೃಚ್ಛ್ರಗತಂ ದೃಷ್ಟ್ವಾ ಕರ್ಣದ್ರೌಣಿಕೃಪಾದಯಃ ।
ಅಭ್ಯವರ್ತಂತ ಸಹಸಾ ಪರೀಪ್ಸಂತೋ ನರಾಧಿಪಮ್ ॥೯॥

ದುರ್ಯೋಧನ ದುರವಸ್ಥೆಗೀಡಾದುದನ್ನು ಕಂಡು ಕರ್ಣ ಅಶ್ವತ್ಥಾಮ ಕೃಪ ಮುಂತಾದವರು ಬೇಗನೆ ಅವನ ರಕ್ಷಣೆಗೆ ಧಾವಿಸಿ ಬಂದರು.

ಅಥ ಪಾಂಡುಸುತಾಃ ಸರ್ವೇ ಪರಿವಾರ್ಯ ಯುಧಿಷ್ಠಿರಮ್ ।
ಅನ್ವಯುಃ ಸಮರೇ ರಾಜನ್ ತತೋ ಯುದ್ಧಮವರ್ತತ ॥೧೦॥
ತತಸ್ತೂರ್ಯಸಹಸ್ರಾಣಿ ಪ್ರಾವಾದ್ಯಂತ ಮಹಾಮೃಧೇ ॥೧೧॥

ಆಗ ಪಾಂಡವರೆಲ್ಲರೂ ಯುಧಿಷ್ಠಿರನನ್ನು ಸುತ್ತುವರಿದು ಶತ್ರುಗಳನ್ನು ಬೆನ್ನಟ್ಟಿದರು. ರಾಜನೆ, ಆಗ, ಯುದ್ಧ ನಡೆಯಿತು. ಸಾವಿರಾರು ರಣವಾದ್ಯಗಳು ಮಹಾರಣದಲ್ಲಿ ಮೊಳಗಿಸಲ್ಪಟ್ಟುವು.

ಕ್ಷ್ವೇಲಾಃ ಕಿಲಕಿಲಾಶಬ್ದಾಃ ಪ್ರಾದುರಾಸನ್ ಮಹೀಪತೇ ।
ಯತ್ರಾಭ್ಯಗಚ್ಛನ್ ಸಮರೇ ಪಾಂಚಾಲಾಃ ಕೌರವೈಃ ಸಹ ॥೧೨॥

ಸಿಂಹನಾದಗಳೂ ಅಟ್ಟಹಾಸಧ್ವನಿಗಳೂ, ರಾಜನೆ! ಪಾಂಚಾಲರು ಕೌರವರೊಂದಿಗೆ ಹೋರಾಡುವಾಗ ಸಮರಾಂಗಣದಲ್ಲಿ ಕೇಳಿ ಬಂದುವು.

ನರಾ ನರೈಃ ಸಮಾಜಗ್ಮುರ್ವಾರಣಾ ವರವಾರಣೈಃ ।
ರಥಾಶ್ಚ ರಥಿಭಿಃ ಸಾರ್ಧಂ ಹಯಾಶ್ಚ ಹಯಸಾದಿಭಿಃ ॥೧೩॥

ಪದಾತಿಗಳು ಪದಾತಿಗಳೊಂದಿಗೆ, ಗಜಾರೋಹಿಗಳು ಗಜಾರೋಹಿಗಳೊಂದಿಗೆ, ರಥಿಕರು ರಥಿಕರೊಂದಿಗೆ, ಅಶ್ವಾರೋಹಿಗಳು ಅಶ್ವಾರೋಹಿಗಳೊಂದಿಗೆ ಸೆಣಸಾಡಿದರು.

ದ್ವಂದ್ವಾನ್ಯಾಸನ್ ಮಹಾರಾಜ ಪ್ರೇಕ್ಷಣೀಯಾನಿ ಸಂಯುಗೇ ।
ವಿವಿಧಾನ್ಯಪ್ಯಚಿಂತ್ಯಾನಿ ಶಸ್ತ್ರವಂತ್ಯುತ್ತಮಾನಿ ಚ ॥೧೪॥

ಮಹಾರಾಜ, ರಣರಂಗದಲ್ಲಿ ಪ್ರೇಕ್ಷಣೀಯವಾದ ದ್ವಂದ್ವಯುದ್ಧಗಳು ನಡೆದುವು. ಅವು ನಾನಾ ಬಗೆಯವುಗಳಾಗಿದ್ದು ಅಚಿಂತ್ಯವಾಗಿದ್ದುವು. ಉತ್ತಮವಾದ ಶಸ್ತ್ರಯುದ್ಧಗಳಾಗಿದ್ದುವು.

ತೇ ಶೂರಾಃ ಸಮರೇ ಸರ್ವೇ ಚಿತ್ರಂ ಲಘು ಚ ಸುಷ್ಠು ಚ ।
ಅಯುಧ್ಯಂತ ಮಹಾವೇಗಾಃ ಪರಸ್ಪರವಧೈಷಿಣಃ ॥೧೫॥

ಆ ಶೂರರೆಲ್ಲರೂ ಯುದ್ಧದಲ್ಲಿ ಮಹಾವೇಗ ಉಳ್ಳವರು ಪರಸ್ಪರ ವಧೇಚ್ಛು ಗಳಾಗಿದ್ದು ಸುಂದರವಾಗಿ ವೇಗವಾಗಿ ಹಾಗೂ ಉತ್ತಮವಾಗಿ ಹೋರಾಡಿದರು.

ಅನ್ಯೋನ್ಯಂ ಸಮರೇ ಜಘ್ನುರ್ಯೋಧವ್ರತಮನುಷ್ಠಿತಾಃ ।
ನ ಹಿ ತೇ ಸಮರಂ ಚಕ್ರುಃ ಪೃಷ್ಠತೋ ವೈ ಕಥಂಚನ ॥೧೬॥

ಪರಸ್ಪರ ಯುದ್ಧದಲ್ಲಿ ಕೊಲ್ಲುತ್ತಿದ್ದರು. ಆದರೆ ಆಗ ಯೋಧರ ಯುದ್ಧ ನಿಯಮವನ್ನು ಅನುಷ್ಠಾನ ಮಾಡಿದರು. ಹಿಂದಿನಿಂದ ಬಂದು ಹೊಡೆಯುತ್ತಿರಲಿಲ್ಲ.

ಮುಹೂರ್ತಮೇವ ತದ್ಯುದ್ಧಮಾಸೀನ್ಮಧುರದರ್ಶನಮ್ ।
ತತ ಉನ್ಮತ್ತವದ್ ರಾಜನ್ನಿರ್ಮರ್ಯಾದಮವರ್ತತ ॥೧೭॥

ಆ ಯುದ್ಧ ಯುದ್ಧದ ನಿಯಮಾನುಸಾರ ನಡೆದುದರಿಂದ ಪ್ರೇಕ್ಷಣೀಯ ವಾಗಿತ್ತು. ಆದರೆ ಇದು ಒಂದು ಮುಹೂರ್ತಕಾಲಮಾತ್ರ. ಮುಂದೆ, ರಾಜನೆ, ಎಲ್ಲರೂ ಹದ್ದುಬಸ್ತು ತಪ್ಪಿದ ಯುದ್ಧವನ್ನೇ ನಡೆಸಿದರು. ಎಲ್ಲ ಯುದ್ಧ ನಿಯಮಗಳನ್ನು ಗಾಳಿಗೆ ತೂರಿ ಹುಚ್ಚರಂತೆ ಹೋರಾಡಿದರು.

ರಥೀ ನಾಗಂ ಸಮಾಸಾದ್ಯ ದಾರಯನ್ನಿಶಿತೈಃ ಶರೈಃ ।
ಪ್ರೇಷಯಾಮಾಸ ಕಾಲಾಯ ಶರೈಃ ಸನ್ನತಪರ್ವಭಿಃ ॥೧೮॥

ರಥಿಕನು ಆನೆಯನ್ನು ಆಕ್ರಮಿಸಿ ತೀಕ್ಷ್ಣವಾದ ಡೊಂಕುಗಿಣ್ಣಿನ ಬಾಣಗಳಿಂದ ಸೀಳಿ ಯಮನೂರಿಗೆ ಕಳಿಸಿದ.

ನಾಗಾ ಹಯಾನ್ ಸಮಾಸಾದ್ಯ ವಿಕ್ಷಿಪಂತೋ ಬಹೂನ್ ರಣೇ ।
ದಾರಯಾಮಾಸುರತ್ಯುಗ್ರಂ ತತ್ರ ತತ್ರ ತದಾ ತದಾ ॥೧೯॥

ಆನೆಗಳು ಕುದುರೆಗಳನ್ನು ಅಲ್ಲಲ್ಲಿ ಆಗಾಗ ಆಕ್ರಮಿಸಿ ಎತ್ತಿ ಎಸೆದು ಅತಿ ಉಗ್ರವಾಗಿ ತುಳಿದು ಸೀಳಿದುವು.

ಹಯಾರೋಹಾಶ್ಚ ಬಹವಃ ಪರಿವಾರ್ಯ ಗಜೋತ್ತಮಾನ್ ।
ತಳಶಬ್ದರವಾಂಶ್ಚಕ್ರುಃ ಸಂಪತಂತಸ್ತತಸ್ತತಃ ॥೨೦॥

ಅಶ್ವಾರೋಹಿಗಳು ಬಹುಮಂದಿ ಅಲ್ಲಲ್ಲಿ ಆನೆಗಳನ್ನು ಸುತ್ತುವರಿದು ಆಕ್ರಮಿಸಿ ಚಪ್ಪಾಳೆ ತಟ್ಟಿ ಗಾಬರಿಪಡಿಸಿದರು.

ಧಾವಮಾನಾಂಸ್ತತಸ್ತಾಂಸ್ತು ಯುಧ್ಯಮಾನಾನ್ ಮಹಾಗಜಾನ್ ।
ಪಾರ್ಶ್ವತಃ ಪೃಷ್ಠತಶ್ಚೈವ ನಿಜಘ್ನುರ್ಹಯಸಾದಿನಃ ॥೨೧॥

ಆನೆಗಳು ಓಡುತ್ತಿದ್ದರೆ ಅಥವಾ ಹೋರಾಡಲು ತೊಡಗಿದರೆ ಅಶ್ವಾರೋಹಿಗಳು ಅದಕ್ಕೆ ಪಾರ್ಶ್ವಗಳಲ್ಲಿ ಹಿಂಬದಿಯಲ್ಲಿ ಹೊಡೆದು ಕೊಂದರು.

ವಿದ್ರಾವ್ಯ ಚ ಬಹೂನಶ್ವಾನ್ನಾಗಾ ರಾಜನ್ ಮದೋತ್ಕಟಾಃ ।
ವಿಷಾಣೈಶ್ಚಾಪರೇ ಜಘ್ನುರ್ಮಮೃದುಶ್ಚಾಪರೇ ಭೃಶಮ್ ॥೨೧॥

ರಾಜನೆ, ಮದಿಸಿದ ಆನೆಗಳು ಬಹು ಅಶ್ವಗಳನ್ನು ಓಡಿಸಿದುವು. ದಂತಗಳಿಂದ ತಿವಿದುವು. ಕಾಲಿಂದ ತುಳಿದು ಪುಡಿಗೈದುವು.

ಸಾಶ್ವಾರೋಹಾಂಶ್ಚ ತುರಗಾನ್ ವಿಷಾಣೈರ್ವಿವ್ಯಧೂ ರುಷಾ ।
ಅಪರೇ ಚಿಕ್ಷಿಪುರ್ವೇಗಾತ್ ಪ್ರಗೃಹ್ಯಾತಿಬಲಾಸ್ತದಾ ॥೨೩॥

ಸವಾರರ ಸಮೇತವಾಗಿ ಕುದುರೆಗಳನ್ನು ಬಲಿಷ್ಠ ಆನೆಗಳು ದಂತಗಳಿಂದ ತಿವಿದುವು. ಹಿಡಿದೆತ್ತಿ ವೇಗದಿಂದ ನೆಲಕ್ಕೆ ಅಪ್ಪಳಿಸಿದುವು.

ಪದಾತೈರಾಹತಾ ನಾಗಾ ವಿವರೇಷು ಸಮಂತತಃ ।
ಚಕ್ರುರಾರ್ತಸ್ವರಂ ಘೋರಂ ದುದ್ರುವುಶ್ಚ ದಿಶೋ ದಶ ॥೨೪॥

ಪದಾತಿಗಳು ಆನೆಗಳನ್ನು ಮರ್ಮಸ್ಥಾನಗಳಲ್ಲಿ ಎಲ್ಲೆಡೆ ಇರಿದಾಗ ಅವು ನೋವಿನಿಂದ ಭಯಂಕರವಾಗಿ ಕೂಗಿಕೊಂಡು ಹತ್ತು ದಿಕ್ಕುಗಳಿಗೆ ಓಡಿದುವು.

ಪದಾತೀನಾಂ ತು ಸಹಸಾ ಪ್ರದ್ರುತಾನಾಂ ಮಹಾಹವೇ ।
ಉತ್ಸೃಜ್ಯ ಚ ರಣಂ ತೂರ್ಣಮವವವ್ರೂ ರಣಾಜಿರೇ ॥೨೫॥

ನಿಮಿತ್ತಂ ಮನ್ಯಮಾನಾಸ್ತು ಪರಿಕ್ರಮ್ಯ ಮಹಾಗಜಾಃ ।
ಜಗೃಹುರ್ಬಿಭಿದುಶ್ಚೈವ ಚಿತ್ರಾಣ್ಯಾಭರಣಾನಿ ಚ ॥೨೬॥

ಯುದ್ಧವನ್ನು ಬಿಟ್ಟು ಪದಾತಿಗಳು ವೇಗದಿಂದ ಪಲಾಯನ ಮಾಡುವಾಗ ಹಾಗೆ ಸ್ಪರ್ಧೆಯಿಂದ ಓಡುವುದನ್ನೇ ಜಯನಿಮಿತ್ತವೆಂದು ಭಾವಿಸಿ ಮಹಾಗಜಗಳು

ತಾವೂ ವೇಗದಿಂದ ಓಡಿ ಅವರನ್ನೂ ಅವರ ಸುಂದರವಾದ ಆಭರಣಗಳನ್ನು ಹಿಡಿದು ಪುಡಿಮಾಡಿದುವು.

ತಾಂಸ್ತು ತತ್ರ ಪ್ರಸಕ್ತಾನ್ ವೈ ಪರಿವಾರ್ಯ ಪದಾತಯಃ ।
ಹಸ್ತ್ಯಾರೋಹಾನ್ನಿಜಘ್ನುಸ್ತೇ ಮಹಾವೇಗಾ ಬಲೋತ್ಕಟಾಃ ॥೨೭॥

ಪದಾತಿಗಳ ನಾಶಕ್ಕೆ ತೊಡಗಿದ ಗಜಗಳನ್ನು ಮಹಾವೇಗದ ಬಲಿಷ್ಠ ಪದಾತಿಗಳು ಸುತ್ತುವರಿದು ಗಜಾರೋಹಿಗಳನ್ನು ಹೊಡೆದರು.

ಅಪರೇ ಹಸ್ತಿಭಿರ್ಹಸ್ತೈಃ ಖಂ ವಿಕ್ಷಿಪ್ತಾ ಮಹಾಹವೇ ।
ನಿಪತಂತೋ ವಿಷಾಣಾಗ್ರೈರ್ಭೃಶಂ ವಿದ್ಧಾಃ ಸುಶಿಕ್ಷಿತೈಃ ॥೨೮॥

ಸುಶಿಕ್ಷಿತವಾದ ಆನೆಗಳು ಪದಾತಿಗಳನ್ನು ಸೊಂಡಿಲುಗಳಿಂದ ಎತ್ತಿ ಮೇಲೆಸೆದು ಅವರು ಬೀಳುವಾಗ ದಂತದ ತುದಿಗಳಿಂದ ಸೀಳಿದವು.

ಅಪರೇ ಸಹಸಾ ಗೃಹ್ಯ ವಿಷಾಣೈರೇವ ಸೂದಿತಾಃ ।
ಸೇನಾಂತರಂ ಸಮಾಸಾದ್ಯ ಕೇಚಿತ್ತತ್ರ ಮಹಾಗಜೈಃ ॥೨೯॥

ಇನ್ನು ಕೆಲವು ಪದಾತಿಗಳು ಸೈನ್ಯದೊಳಗೆ ನುಗ್ಗಿ ಬಂದ ಗಜಗಳ ದಂತಗಳಿಂದ ಇರಿಯಲ್ಪಟ್ಟು ಅಸುನೀಗಿದರು.

ಕ್ಷುಣ್ಣಗಾತ್ರಾ ಮಹಾರಾಜ ವಿಕ್ಷಿಪ್ಯ ಚ ಪುನಃ ಪುನಃ ।
ಅಪರೇ ವ್ಯಜನಾನೀವ ವಿಭ್ರಾಮ್ಯ ನಿಹತಾ ಮೃಧೇ ॥೩೦॥

ಇನ್ನು ಕೆಲವರನ್ನು ಆನೆಗಳು ಸೊಂಡಿಲುಗಳಿಂದ ಎತ್ತಿ ಬೀಸಣಿಗೆಯಂತೆ ಬೀಸಿ ಪುನಃ ಪುನಃ ನೆಲದ ಮೇಲೆ ಅಪ್ಪಳಿಸಿದುವು.

ಪುರೋಗಮೈಶ್ಚ ನಾಗಾನಾಮಪರೇಷಾಂ ವಿಶಾಂಪತೇ ।
ಶರೀರಾಣ್ಯತಿವಿದ್ಧಾನಿ ತತ್ರ ತತ್ರ ರಣಾಜಿರೇ ॥೩೧॥

ಪದಾತಿಗಳಲ್ಲಿ ಮುಂದಾಳುಗಳಾದವರು ಅಲ್ಲಲ್ಲಿ ಬೇರೆ ಆನೆಗಳ ಶರೀರಗಳನ್ನು ಅತಿಯಾಗಿ ಇರಿದರು.

ಪ್ರತಿಮಾನೇಷು ಕುಂಭೇಷು ದಂತವೇಷ್ಟೇಷು ಚಾಪರೇ ।
ನಿಗೃಹೀತಾ ಭೃಶಂ ನಾಗಾಃ ಪ್ರಾಸತೋಮರಶಕ್ತಿಭಿಃ ॥೩೨॥

ದಂತಮೂಲಗಳಲ್ಲಿ ಪ್ರಾಸಗಳಿಂದ, ಕುಂಭಸ್ಥಳಗಳಲ್ಲಿ ತೋಮರಗಳಿಂದ, ಕೆಳತುಟಿಗಳಲ್ಲಿ ಶಕ್ತ್ಯಾಯುಧಗಳಿಂದ ಪದಾತಿಗಳು ಆನೆಗಳನ್ನು ಬಹುವಾಗಿ ಪೀಡಿಸಿದರು.

ನಿಗೃಹ್ಯ ಚ ಗಜಾಃ ಕೇಚಿತ್ ಪಾರ್ಶ್ವಸ್ಥೈರ್ಭೃಶದಾರುಣೈಃ ।
ರಥಾಶ್ವಸಾದಿಭಿಸ್ತತ್ರ ಸಂಭಿನ್ನಾ ನ್ಯಪತನ್ ಭುವಿ ॥೩೩॥

ಕೆಲವು ಆನೆಗಳನ್ನು ಪಾರ್ಶ್ವಗಳಲ್ಲಿದ್ದ ಬಲುಕ್ರೂರಿಯಾದ ರಥಿಕರು ಅಶ್ವಾರೋಹಿಗಳು ಬಾಣಗಳಿಂದ ಹೊಡೆದು ನೆಲದಲ್ಲಿ ಕೆಡವಿದರು.

ಸರಥಂ ಸಾದಿನಂ ತತ್ರ ಅಪರೇ ತೇ ಮಹಾಗಜಾಃ ।
ಭೂಮಾವಮೃದ್ನನ್ ವೇಗೇನ ಸವರ್ಮಾಣಂ ಪದಾತಿನಮ್ ॥೩೪॥

ರಥಿಕನನ್ನೂ ಅಶ್ವಾರೋಹಿಯನ್ನೂ ಪದಾತಿಯನ್ನೂ ಕವಚಸಹಿತವಾಗಿ ಕೆಲವು ಆನೆಗಳು ವೇಗದಿಂದ ನೆಲದಲ್ಲಿ ಕೆಡವಿ ಮರ್ದಿಸಿದುವು.

ತಥಾ ಸಾವರಣಾನ್ ಕಾಂಶ್ಚಿತ್ ತತ್ರ ತತ್ರ ವಿಶಾಂಪತೇ ।
ರಥಾನ್ನಾಗಾಃ ಸಮಾಸಾದ್ಯ ಪರಿಗೃಹ್ಯ ಚ ಮಾರಿಷ ॥೩೫॥
ವ್ಯಾಕ್ಷಿಪನ್ ಸಹಸಾ ತತ್ರ ಘೋರರೂಪೇ ಮಹಾಮೃಧೇ ॥೩೬॥

ಆನೆಗಳು ಆವರಣಸಹಿತವಾಗಿ ರಥಗಳನ್ನು ಘೋರ ಮಹಾರಣದಲ್ಲಿ ಮೇಲೆ ಎತ್ತಿ ಹಿಡಿದು ಬಲವಾಗಿ ಬಿಸುಟುವು.

ನಾರಾಚೈರ್ನಿಹತಾಶ್ಚಾಪಿ ಗಜಾಃ ಪೇತುರ್ಮಹಾಬಲಾಃ ।
ಗಿರೀಣಾಂ ಶಿಖಿರಾಣೀವ ವಜ್ರರುಗ್ಣಾನಿ ಭೂತಲೇ ॥೩೭॥

ಅಂಥ ಮಹಾಬಲಿಷ್ಠ ಆನೆಗಳು ಬಾಣಗಳಿಂದ ಹತವಾಗಿ ವಜ್ರಾಯುಧದಿಂದ ಕಡಿದುರುಳುವ ಗಿರಿಶಿಖರಗಳಂತೆ ನೆಲದಲ್ಲಿ ಬಿದ್ದುವು.

ಯೋಧಾ ಯೋಧಾನ್ ಸಮಾಸಾದ್ಯ ಮುಷ್ಟಿಭಿರ್ವ್ಯಹನನ್ಯುಧಿ ।
ಕೇಶೇಷ್ವನ್ಯೋನ್ಯಮಾಕ್ಷಿಪ್ಯ ಚಿಕ್ಷಿಪುರ್ಬಿಭಿದುಶ್ಚ ಹ ॥೩೮॥

ಯೋಧರು ಯೋಧರನ್ನು ಆಕ್ರಮಿಸಿ ಮುಷ್ಟಿಗಳಿಂದ ಹೊಡೆಸಿಕೊಂಡರು. ಪರಸ್ಪರ ಒಬ್ಬರು ಮತ್ತೊಬ್ಬರ ಜುಟ್ಟು ಹಿಡಿದು ಸೆಳೆದು ತಳ್ಳಿದರು, ಮುಷ್ಟಿಗಳಿಂದ ಗುದ್ದಿದರು.

ಉತ್ಪಾಟ್ಯ ಚ ಭುಜಾನನ್ಯೋ ನಿಕ್ಷಿಪ್ಯ ಚ ಮಹೀತಳೇ ।
ಪದಾ ಚೋರಃ ಸಮಾಕ್ರಮ್ಯ ಸ್ಫುರತೋಽಪಾಹರಚ್ಛಿರಃ ॥೩೯॥

ಒಬ್ಬನು ಇನ್ನೊಬ್ಬನ ತೋಳುಗಳನ್ನು ಕಿತ್ತು ಅವನನ್ನು ನೆಲದಲ್ಲಿ ಕೆಡವಿ, ಅವನು ಹೊರಳಾಡುತ್ತಿದ್ದಂತೆಯೇ ಎದೆಯ ಮೇಲೆ ಕಾಲಿಂದ ತುಳಿದು, ತಲೆಯನ್ನು ಕತ್ತರಿಸಿದರು.

ಪತತಶ್ಚಾಪರೋ ರಾಜನ್ ವಿಜಹಾರಾಸಿನಾ ಶಿರಃ ।
ಮೃತಮನ್ಯೋ ಮಹಾರಾಜ ಪದಾ ತಾಡಿತವಾಂಸ್ತದಾ ॥೪೦॥

ಸತ್ತುಬೀಳುವ ಒಬ್ಬನ ತಲೆಯನ್ನು ಇನ್ನೊಬ್ಬ ಕತ್ತಿಯಿಂದ ಕಡಿದ, ಸತ್ತುಬಿದ್ದವನನ್ನು ಇನ್ನೊಬ್ಬ ಕಾಲಿಂದ ತುಳಿದ.

ಜೀವತಶ್ಚ ತಥೈವಾನ್ಯಃ ಶಸ್ತ್ರಂ ಕಾಯೇ ನ್ಯಮಜ್ಜಯತ್ ।
ಮುಷ್ಟಿಯುದ್ಧಂ ಮಹಚ್ಚಾಸೀದ್ ಯೋಧಾನಾಂ ತತ್ರ ಭಾರತ ॥೪೧॥
ತಥಾ ಕೇಶಗ್ರಹಶ್ಚೋಗ್ರೋ ಬಾಹುಯುದ್ಧಂ ಚ ಭೈರವಮ್ ॥೪೨॥

ಸಾಯುತ್ತಿರುವವನು ಒಬ್ಬ ಇನ್ನೂ ಉಸಿರಾಡುತ್ತಿರುವಾಗ ಅವನ ಶರೀರದೊಳಗೆ ಇನ್ನೊಬ್ಬ ಶಸ್ತ್ರದಿಂದ ಇರಿದ. ದೊಡ್ಡ ಮುಷ್ಟಿಯುದ್ಧ ಉಗ್ರಕೇಶ ಗ್ರಹಣ ಮತ್ತು ಭಯಂಕರ ಬಾಹುಯುದ್ಧಗಳು ನಡೆದುವು.

ಸಮಾಸಕ್ತಸ್ಯ ಚಾನ್ಯೇನ ಅವಿಜ್ಞಾತಸ್ತಥಾಽಪರಃ ।
ಜಹಾರ ಸಮರೇ ಪ್ರಾಣಾನ್ನಾನಾಶಸ್ತ್ರೈರನೇಕಶಃ ॥೪೩॥

ಒಬ್ಬನು ಇನ್ನೊಬ್ಬನೊಡನೆ ಹೋರಾಡುತ್ತಿರುವಾಗ ಅವನಿಗೆ ತಿಳಿಯದಂತೆ ಮತ್ತೊಬ್ಬ ಬಂದು ನಾನಾಶಸ್ತ್ರಗಳಿಂದ ಅವನ ಪ್ರಾಣಗಳನ್ನು ಅಪಹರಿಸಿದ.

ಸಂಸಕ್ತೇಷು ಚ ಯೋಧೇಷು ವರ್ತಮಾನೇ ಚ ಸಂಕುಲೇ ।
ಕಬಂಧಾನ್ಯುತ್ಥಿತಾನಿ ಸ್ಮ ಶತಶೋಽಥ ಸಹಸ್ರಶಃ ॥೪೪॥

ಯೋಧರು ಯೋಧರೊಂದಿಗೆ ಪರಸ್ಪರ ಹೋರಾಡುತ್ತ ದೊಂಬಿಕಾಳಗ ನಡೆಸುತ್ತಿದ್ದಾಗ ರುಂಡವಿಲ್ಲದ ಮುಂಡಗಳು ನೂರಾರು ಸಾವಿರಾರು ಸಂಖ್ಯೆಯಲ್ಲಿ ಎದ್ದು ಕುಣಿದುವು.

ಶೋಣಿತೈಃ ಸಿಚ್ಯಮಾನಾನಿ ಶಸ್ತ್ರಾಣಿ ಕವಚಾನಿ ಚ ।
ಮಹಾರಜನರಕ್ತಾನಿ ವಸ್ತ್ರಾಣೀವ ಚಕಾಶಿರೇ ॥೪೫॥

ನೆತ್ತರಿನಲ್ಲಿ ತೊಯ್ದ ಶಸ್ತ್ರಗಳು ಕವಚಗಳು ಕುಸುಬೆ ಹೂವಿನ ರಂಗಿನಲ್ಲಿ (ಬಣ್ಣದಲ್ಲಿ) ಅದ್ದಿದ ಬಟ್ಟೆಗಳಂತೆ ಕಂಡುಬಂದುವು.

ಏವಮೇತನ್ಮಹದ್ ಯುದ್ಧಂ ದಾರುಣಂ ಶಸ್ತ್ರಸಂಕುಲಮ್ ।
ಉನ್ಮತ್ತರಂಗಪ್ರತಿಮಂ ಶಬ್ದೇನಾಪೂರಯಜ್ಜಗತ್ ॥೪೬॥

ಹೀಗೆ ಬಲು ದಾರುಣವಾದ ದೊಡ್ಡ ಶಸ್ತ್ರಗಳ ದೊಂಬಿಕಾಳಗ ಹುಚ್ಚರ ಕುಣಿತದಂತೆ ಜಗತ್ತನ್ನೇ ಗದ್ದಲದಿಂದ ತುಂಬಿತು.

ನೈವ ಸ್ವೇ ನ ಪರೇ ರಾಜನ್ ವಿಜ್ಞಾಯಂತೇ ಶರಾತುರಾಃ ।
ಯೋದ್ಧವ್ಯಮಿತಿ ಯುಧ್ಯಂತೇ ರಾಜಾನೋ ಜಯಗೃದ್ಧಿನಃ ॥೪೭॥

ಆ ಮಹಾಯುದ್ಧದಲ್ಲಿ ಯೋಧರು ತಮ್ಮವರಾರು, ಹೆರವರು ಯಾರೆಂದು ನೋಡಲಿಲ್ಲ. ಜಯದಾಸೆಯಿಂದ ಯುದ್ಧಮಾಡಬೇಕೆಂದು ಯುದ್ಧಮಾಡಿದರು.

ಸ್ವಾನ್ ಸ್ವೇ ಜಘ್ನುರ್ಮಹಾರಾಜ ಪರಾಂಶ್ಚೈವ ಸಮಾಗತಾನ್ ।
ಉಭಯೋಃ ಸೇನಯೋರ್ವೀರೈರ್ವ್ಯಾಕುಲಂ ಸಮಪದ್ಯತ ॥೪೮॥

ಇದಿರಿಗೆ ಬಂದ ತಮ್ಮವರನ್ನೂ ಕೊಂದರು. ಪರರನ್ನೂ ಕೊಂದರು. ಎರಡೂ ಸೈನ್ಯಗಳಲ್ಲಿ ವೀರರಿಗೆ ಹಿಂದುಮುಂದು ತಿಳಿಯದಂತಾಯಿತು.

ರಥೈರ್ಭಗ್ನೈರ್ಮಹಾರಾಜ ವಾರಣೈಶ್ಚ ನಿಪಾತಿತೈಃ ।
ಹಯೈಶ್ಚ ಪತಿತೈಸ್ತತ್ರ ನರೈಶ್ಚ ವಿನಿಪಾತಿತೈಃ ॥೪೯॥

ಅಗಮ್ಯರೂಪಾ ಪೃಥಿವೀ ಕ್ಷಣೇನ ಸಮಪದ್ಯತ ।
ಕ್ಷಣೇನಾಸೀನ್ಮಹೀಪಾಲ ಕ್ಷತಜೌಘಪ್ರವರ್ತಿನೀ ॥೫೦॥

ಮುರಿದ ರಥಗಳಿಂದ ಕೆಡವಿ, ಆನೆಕುದುರೆಗಳಿಂದ ಹತರಾದ ಪದಾತಿಗಳಿಂದ ರಣಭೂಮಿ ಕ್ಷಣದಲ್ಲಿ ಕಾಲಿಡಲಾಗದಂತಾಯಿತು. ಕ್ಷಣದಲ್ಲಿ ನೆತ್ತರ ಹೊಳೆ ಹರಿಸಿತು.

ಪಾಂಚಾಲಾನಹನತ್ ಕರ್ಣಸ್ತ್ರಿಗರ್ತಾಂಶ್ಚ ಧನಂಜಯಃ ।
ಭೀಮಸೇನಃ ಕುರೂನ್ ರಾಜನ್ ಹಸ್ತ್ಯನೀಕಂ ಚ ಸರ್ವಶಃ ॥೫೧॥

ಪಾಂಚಾಲರನ್ನು ಕರ್ಣ, ತ್ರಿಗರ್ತರನ್ನು ಅರ್ಜುನ, ಕೌರವರನ್ನೂ ಗಜಸೈನ್ಯವನ್ನೂ ಭೀಮ ಪೂರ್ತಿಯಾಗಿ ಸಂಹರಿಸಿದರು.

ಏವಮೇವ ಕ್ಷಯೋ ವೃತ್ತಃ ಕುರುಪಾಂಡವಸೇನಯೋಃ ।
ಅಪರಾಹ್ಣೇ ಗತೇ ಸೂರ್ಯೇ ಕಾಂಕ್ಷಂತ್ಯೋರ್ವಿಪುಲಂ ಯಶಃ ॥೫೨॥

ಹೀಗೆ ಕೌರವ-ಪಾಂಡವ ಸೈನ್ಯಗಳು ದೊಡ್ಡ ಯಶಸ್ಸನ್ನು ಬಯಸಿ ಸೂರ್ಯನು ಅಪರಾಹ್ಣಕ್ಕೆ ಹೋಗುವ ವೇಳೆಗೆ ಅಪಾರ ನಷ್ಟವನ್ನು ಅನುಭವಿಸಿದುವು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥೨೮॥

❖

ಮಹಾಭಾರತತಾತ್ಪರ್ಯನಿರ್ಣಯ

ತಸ್ಮಿನ್ ಗಜಾನ್ ಮರ್ದಯತಿ ಧಾರ್ತರಾಷ್ಟ್ರೋ ಯುಧಿಷ್ಠಿರಮ್ ।
ಆಗಾದ್ ಯುದ್ಧಾಯ ತೌ ಯುದ್ಧಂ ರಾಜಾನೌ ಚಕ್ರತುಶ್ಚಿರಮ್ ॥೨॥

ಭೀಮ ಆನೆಗಳನ್ನು ಮರ್ದಿಸುತ್ತಿದ್ದಾಗ ದುರ್ಯೋಧನ ಧರ್ಮರಾಜನೊಡನೆ ಯುದ್ಧಕ್ಕೆ ಬಂದ. ಅವರಿಬ್ಬರೂ ಬಹುಕಾಲ ಯುದ್ಧ ಮಾಡಿದರು.

ತತ್ರ ತಂ ವಿರಥಂ ಚಕ್ರೇ ಸಹಸೈವ ಯುಧಿಷ್ಠಿರಃ ।
ಸ ಗದಾಮಾದದೇ ಗುರ್ವೀಂ ತಂ ಭೀಮೋಭ್ಯಪತದ್ ಗದೀ ॥೩॥

ಆ ಯುದ್ಧದಲ್ಲಿ ಧರ್ಮರಾಜ ದುರ್ಯೋಧನನನ್ನು ತಕ್ಷಣವೆ ವಿರಥನನ್ನಾಗಿ ಮಾಡಿದ. ದುರ್ಯೋಧನ ದೊಡ್ಡ ಗದೆಯನ್ನೆತ್ತಿಕೊಂಡ. ಆಗ ಗದಾಧಾರಿಯಾದ ಭೀಮ ಅವನನ್ನು ಆಕ್ರಮಿಸಿದ.

ದೃಷ್ಟ್ವಾ ಕೃಪಸ್ತಂ ಸ್ವರಥಮಾರೋಪ್ಯಾಪಯಯೌ ತತಃ ।
ತದೈವ ಕರ್ಣನಕುಲೌ ಭೃಶಂ ಬಾಣೈರಯುದ್ಧ್ಯತಾಮ್ ॥ ೧೪ ॥

ಭೀಮನನ್ನು ಕಂಡು ಕೃಪ ದುರ್ಯೋಧನನನ್ನು ತನ್ನ ರಥದ ಮೇಲೆ ಹತ್ತಿಸಿಕೊಂಡು ಅಲ್ಲಿಂದ ಪಲಾಯನ ಮಾಡಿದ. ಆಗಲೆ ಕರ್ಣ ನಕುಲರೂ ಬಾಣಗಳಿಂದ ಚೆನ್ನಾಗಿ ಯುದ್ಧ ಮಾಡಿದರು.

❖

ಇಪ್ಪತ್ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನಿಂದ ದುರ್ಯೋಧನ ಪರಾಜಯ ಮುಂದುವರಿಯುತ್ತದೆ.

ಧೃತರಾಷ್ಟ್ರಃ

ಅತಿತೀವ್ರಾಣಿ ದುಃಖಾನಿ ದುಃಸಹಾನಿ ಬಹೂನಿ ಚ ।
ತತ್ತ್ವತೋಽಹಂ ಸಂಜಯಾಶ್ರೌಷಂ ಪುತ್ರಾಣಾಂ ಚೈವ ಸಂಕ್ಷಯಮ್ ॥೧॥

ಧೃತರಾಷ್ಟ್ರ ಸಂಜಯನಿಗೆ ನುಡಿದ— ಸಂಜಯ, ಅತಿ ತೀವ್ರವಾದ ದುಃಸಹವಾದ ಬಹು ದುಃಖ ಪ್ರಸಂಗಗಳನ್ನೂ ಪುತ್ರರ ವಿನಾಶವನ್ನೂ ನಾನು ನಿನ್ನಿಂದ ಕೇಳಿ ತಿಳಿದೆ.

ಯಥಾ ತ್ವಂ ಮೇ ಕಥಯಸೇ ಯಥಾ ಯುದ್ಧಮವರ್ತತ ।
ನ ಸಂತಿ ಸೂತ ಕೌರವ್ಯಾ ಇತಿ ಮೇ ನಿಶ್ಚಿತಾ ಮತಿಃ ॥೨॥

ನೀನು ಹೇಳಿದ ರೀತಿಯಲ್ಲಿ ಯುದ್ಧ ನಡೆಯಿತೆಂದರೆ ಕೌರವರು ಇನ್ನಿಲ್ಲವಾಗುತ್ತಾರೆ ಎನ್ನುವುದು ನನಗೆ ಮನವರಿಕೆಯಾಗಿದೆ.

ದುರ್ಯೋಧನಶ್ಚ ವಿರಥಃ ಕೃತಸ್ತತ್ರ ಮಹಾರಥಃ ।
ಧರ್ಮಪುತ್ರಃ ಕಥಂ ಚಕ್ರೇ ತಸ್ಯ ವಾ ನೃಪತಿಃ ಕಥಮ್ ॥೩॥

ಮಹಾರಥನಾದ ದುರ್ಯೋಧನ ವಿರಥನಾದ ಬಳಿಕ ಧರ್ಮರಾಜ ಹೇಗೆ ಯುದ್ಧ ಮಾಡಿದ? ದುರ್ಯೋಧನ ಹೇಗೆ ಯುದ್ಧ ಮಾಡಿದ?

ಅಪರಾಹ್ಣೇ ಕಥಂ ಯುದ್ಧಮಭವದ್ ರೋಮಹರ್ಷಣಮ್ ।
ತನ್ಮಮಾಚಕ್ಷ್ವ ತತ್ತ್ವೇನ ಕುಶಲೋ ಹ್ಯಸಿ ಸಂಜಯ ॥೪॥

ರೋಮಾಂಚಕರವಾದ ಈ ಯುದ್ಧ ಅಪರಾಹ್ಣದಲ್ಲಿ ಹೇಗೆ ನಡೆಯಿತು? ಅದನ್ನು ನನಗೆ ಹೇಳು. ಸಂಜಯ, ಹೇಳುವಲ್ಲಿ ನೀನು ಕುಶಲನಾಗಿರುವೆ ತಾನೆ?

ಸಂಜಯಃ

ಸಂಸಕ್ತೇಷು ತು ಸೈನ್ಯೇಷು ವಧ್ಯಮಾನೇಷು ಭಾಗಶಃ ।
ರಥಮನ್ಯಂ ಸಮಾಸ್ಥಾಯ ಪುತ್ರಸ್ತವ ವಿಶಾಂಪತೇ ॥೫॥

ಕ್ರೋಧೇನ ಮಹತಾ ಯುಕ್ತಃ ಸವಿಷೋ ಭುಜಗೋ ಯಥಾ ।
ದುರ್ಯೋಧನಃ ಸಮಾಲಕ್ಷ್ಯ ಧರ್ಮರಾಜಂ ಯುಧಿಷ್ಠಿರಮ್ ॥೬॥
ಪ್ರೋವಾಚ ಸೂತಂ ತ್ವರಿತೋ ಯಾಹಿ ಯಾಹೀತಿ ಭಾರತ ॥೭॥

ಸಂಜಯನು ನುಡಿದ— ಸೈನ್ಯಗಳು ಪರಸ್ಪರವಾಗಿ ಹೋರಾಡಿ ಭಾಗಶಃ ನಾಶಹೊಂದುವಾಗ ರಾಜನೆ, ನಿನ್ನ ಮಗನು ಇನ್ನೊಂದು ರಥವನ್ನೇರಿ ವಿಷಸರ್ಪದಂತೆ ಮಹಾಕೋಪಯುಕ್ತನಾಗಿ ಧರ್ಮರಾಜನನ್ನು ನೋಡುತ್ತ ಸೂತನಿಗೆ ''ಹೋಗು, ಬೇಗನೆ ಹೋಗು' ಎಂದ.

ತತ್ರ ಮಾಂ ಪ್ರಾಪಯ ಕ್ಷಿಪ್ರಂ ಸಾರಥೇ ಯತ್ರ ಪಾಂಡವಃ ।
ಧ್ರಿಯಮಾಣಾತಪತ್ರೇಣ ರಾಜಾ ರಾಜತಿ ದಂಸಿತಃ ॥೮॥

'ಸಾರಥಿ, ರಾಜಾ ಧರ್ಮರಾಜನು ಕವಚ ಧರಿಸಿ, ಶ್ವೇತಚ್ಛತ್ರಯುಕ್ತನಾಗಿ ಇರುವಲ್ಲಿಗೆ ನನ್ನನ್ನು ಬೇಗ ಒಯ್ಯು' ಎಂದ.

ಸ ಸೂತಶ್ಚೋದಿತೋ ರಾಜ್ಞಾ ರಾಜ್ಞಃ ಸ್ಯಂದನಮುತ್ತಮಮ್ ।
ಯುಧಿಷ್ಠಿರಸ್ಯಾಭಿಮುಖಂ ಪ್ರೇಷಯಾಮಾಸ ಸಂಯುಗೇ ॥೯॥

ರಾಜಾ ದುರ್ಯೋಧನನ ಆದೇಶದಂತೆ ಸಾರಥಿ ರಾಜನ ಉತ್ತಮವಾದ ರಥವನ್ನು ರಣದಲ್ಲಿ ಯುಧಿಷ್ಠಿರನ ಕಡೆಗೆ ನಡೆಸಿದ.

ತತೋ ಯುಧಿಷ್ಠಿರಃ ಕ್ರುದ್ಧಃ ಪ್ರಭಿನ್ನ ಇವ ಕುಂಜರಃ ।
ಸಾರಥಿಂ ಚೋದಯಾಮಾಸ ಯಾಹಿ ಯತ್ರ ಸುಯೋಧನಃ ॥೧೦॥

ಮದಜಲವನ್ನು ಸುರಿಸುವ ಆನೆಯಂತೆ ಕ್ರುದ್ಧನಾದ ಯುಧಿಷ್ಠಿರ ಸಾರಥಿಗೆ ಹೇಳಿದ, 'ಸುಯೋಧನನಿರುವಲ್ಲಿಗೆ ನಡೆ'

ತೌ ಸಮಾಜಗ್ಮತುರ್ವೀರೌ ಭ್ರಾತರೌ ರಥಸತ್ತಮೌ ॥೧೧॥

ಸಮೇತ್ಯ ಚ ಮಹಾವೀರೌ ಸಂರಬ್ಧೌ ಯುದ್ಧದುರ್ಮದೌ ।
ವವರ್ಷತುರ್ಮಹೇಷ್ವಾಸೌ ಶರೈರನ್ಯೋನ್ಯಮಾಹವೇ ॥೧೨॥

ಶ್ರೇಷ್ಠರಥಿಕರಾದ ಇಬ್ಬರು ವೀರಸೋದರರಾದ ಯುಧಿಷ್ಠಿರ ದುರ್ಯೋಧನರು ಪರಸ್ಪರ ಸೇರಿದರು. ಮಹಾಬಿಲ್ಲಾರರಾದ ಮಹಾವೀರರಾದ ಯುದ್ಧರಸಿಕರಾದ ಆ ಇಬ್ಬರೂ ಕೋಪಗೊಂಡು ರಣದಲ್ಲಿ ಪರಸ್ಪರವಾಗಿ ಬಾಣಗಳ ಮಳೆಗರೆದರು.

ತತೋ ದುರ್ಯೋಧನೋ ರಾಜಾ ಧರ್ಮಶೀಲಸ್ಯ ಮಾರಿಷ ।
ಶಿಲಾಶಿತೇನ ಭಲ್ಲೇನ ಧನುಶ್ಚಿಚ್ಛೇದ ಸಂಯುಗೇ ॥೧೩॥

ರಾಜಾ ದುರ್ಯೋಧನ ಯುದ್ಧದಲ್ಲಿ ಧರ್ಮಶೀಲನಾದ ಯುಧಿಷ್ಠಿರನ ಧನುಸ್ಸನ್ನು ಸಾಣೆಹಿಡಿದು ತೀಕ್ಷ್ಣವಾಗಿರುವ ಭಲ್ಲೆಯಿಂದ ಕತ್ತರಿಸಿದ.

ತಂ ನಾಮೃಷ್ಯತ ಸಂಕ್ರುದ್ಧೋ ಹ್ಯವಮಾನಂ ಯುಧಿಷ್ಠಿರಃ ।
ಅಪವಿಧ್ಯ ಧನುಶ್ಛಿನ್ನಂ ಕ್ರೋಧಸಂರಕ್ತಲೋಚನಃ ॥೧೪॥

ಅನ್ಯತ್ಕಾರ್ಮುಕಮಾದಾಯ ಧರ್ಮಪುತ್ರಶ್ಚಮೂಮುಖೇ ।
ದುರ್ಯೋಧನಸ್ಯ ಚಿಚ್ಛೇದ ಧ್ವಜಂ ಕಾರ್ಮುಕಮೇವ ಚ ॥೧೫॥

ಯುಧಿಷ್ಠಿರ ಈ ಅವಮಾನವನ್ನು ಸಹಿಸಲಿಲ್ಲ. ಕುಪಿತನಾಗಿ ಕಡಿದುಹೋಗಿದ್ದ ಧನುಸ್ಸನ್ನು ತ್ಯಜಿಸಿ ಕೋಪದಿಂದ ಕಣ್ಣುಕೆಂಪಾಗಿಸಿಕೊಂಡು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ದುರ್ಯೋಧನನ ಧ್ವಜವನ್ನು ಧನುಸ್ಸನ್ನೂ ಕತ್ತರಿಸಿದ.

ಅಥಾನ್ಯದ್ಧನುರಾದಾಯ ಪುತ್ರಸ್ತೇ ಭರತರ್ಷಭ ।
ಯುಧಿಷ್ಠಿರಸ್ಯ ಚಿಕ್ಷೇಪ ಶರಾನ್ ಕನಕಭೂಷಣಾನ್ ॥೧೬॥
ರುಗ್ಮಪುಂಖಾನ್ ಪ್ರಸನ್ನಾಗ್ರಾನ್ ಸವಿಷಾನಿವ ಪನ್ನಗಾನ್ ॥೧೭॥

ರಾಜನೆ, ನಿನ್ನ ಮಗನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಚಿನ್ನದಿಂದ ಅಲಂಕೃತವಾದ ಚಿನ್ನದಪುಕ್ಕ ಉಳ್ಳ ತೀಕ್ಷ್ಣವಾದ ತುದಿಯುಳ್ಳ ವಿಷದ ಹಾವುಗಳಂತಿರುವ ಯುಧಿಷ್ಠಿರನ ಬಾಣಗಳನ್ನು ನಾಶಪಡಿಸಿದ.

ತಾವನ್ಯೋನ್ಯಂ ಸುಸಂಕ್ರುದ್ಧೌ ಶಸ್ತ್ರವರ್ಷಾಣ್ಯಮುಂಚತಾಮ್ ।
ಸಿಂಹಾವಿವ ಸುಸಂರಬ್ಧೌ ಪರಸ್ಪರಜಿಗೀಷಯಾ ॥೧೮॥

ಅವರಿಬ್ಬರೂ ಪರಸ್ಪರ ಜಯೇಚ್ಛೆಯಿಂದ ಸಿಂಹಗಳಂತೆ ಕ್ರುದ್ಧರಾಗಿ ಕುಪಿತರಾಗಿ ಪರಸ್ಪರವಾಗಿ ಶಸ್ತ್ರಗಳ ಮಳೆ ಸುರಿಸಿದರು.

ಜಘ್ನತುಸ್ತೌ ರಣೇऽನ್ಯೋನ್ಯಂ ನರ್ದಮಾನೌ ವೃಷಾವಿವ ।
ಅಂತರಂ ಮಾರ್ಗಮಾಣೌ ಚ ಚೇರತುಸ್ತೌ ಮಹಾರಥೌ ॥೧೯॥

ಮಹಾರಥರಾದ ಅವರಿಬ್ಬರೂ ಎರಡು ಎತ್ತುಗಳಂತೆ ಗರ್ಜನೆ ಮಾಡುತ್ತ ಒಬ್ಬರು ಮತ್ತೊಬ್ಬರಲ್ಲಿ ದೌರ್ಬಲ್ಯವನ್ನು ಹುಡುಕುತ್ತ ಸಂಚರಿಸಿದರು.

ಅಂತರಂ ನಾಗಮತ್ ತತ್ರ ರಾಜಾ ನ ಸುಯೋಧನಃ ॥೨೦॥

ಯುಧಿಷ್ಠಿರನೂ ದುರ್ಯೋಧನನಲ್ಲಿ ದೌರ್ಬಲ್ಯವನ್ನು ಕಾಣಲಿಲ್ಲ. ದುರ್ಯೋಧನನೂ ಯುಧಿಷ್ಠಿರನಲ್ಲಿ ದೌರ್ಬಲ್ಯವನ್ನು ಕಾಣಲಿಲ್ಲ.

ತತಃ ಪೂರ್ಣಾಯತೋತ್ಸೃಷ್ಟೈಃ ಶರೈಸ್ತೌ ತು ಕೃತವ್ರಣೌ ।
ವಿರೇಜತುರ್ಮಹಾರಾಜ ಪುಷ್ಪಿತೌ ಕಿಂಶುಕಾವಿವ ॥೨೧॥

ಮಹಾರಾಜ, ಇಬ್ಬರೂ ಬಿಲ್ಲನ್ನು ಪೂರ್ತಿಸೆಳೆದು ಎಸೆದ ಬಾಣಗಳಿಂದ ಗಾಯಗೊಂಡು ಹೂಬಿಟ್ಟ ಕಿಂಶುಕವೃಕ್ಷದಂತೆ ಶೋಭಿಸಿದರು.

ತತೋ ರಾಜನ್ ವಿಮುಂಚಂತೌ ಸಿಂಹನಾದಾನ್ ಮುಹುರ್ಮುಹುಃ ।
ತಳಯೋಶ್ಚ ಯಥಾ ಶಬ್ದಾನ್ ಧನುಷಶ್ಚ ಮಹಾಹವೇ ॥೨೨॥

ಶಂಖಿಶಬ್ದವರಾಂಶ್ಚೈವ ಚಕ್ರತುಸ್ತೌ ನರೇಶ್ವರೌ ।
ಅನ್ಯೋನ್ಯಂ ತೌ ಮಹಾರಾಜ ಪೀಡಯಾಂಚಕ್ರತುರ್ಭೃಶಮ್ ॥೨೩॥

ರಾಜನೆ, ಆ ಇಬ್ಬರೂ ರಾಜರು ಪುನಃ ಪುನಃ ಸಿಂಹಗರ್ಜನೆ ಮಾಡುತ್ತ ಕೈತಾಳಗಳ ಶಬ್ದ ಧನುಸ್ಸಿನ ಶಬ್ದ ಶಂಖಿಶಬ್ದಗಳನ್ನು ಮಹಾರಣದಲ್ಲಿ ಮಾಡಿದರು, ಒಬ್ಬರು ಮತ್ತೊಬ್ಬರನ್ನು ಚೆನ್ನಾಗಿ ಪೀಡಿಸಿದರು.

ತತೋ ಯುಧಿಷ್ಠಿರೋ ರಾಜಾ ಪುತ್ರಂ ತವ ಶರೈಸ್ತ್ರಿಭಿಃ ।
ಆಜಘಾನೋರಸಿ ಕ್ರುದ್ಧೋ ವಜ್ರವೇಗೈರ್ದುರಾಸದೈಃ ॥೨೪॥

ರಾಜಾ ಯುಧಿಷ್ಠಿರನು ಕ್ರುದ್ಧನಾಗಿ ನಿನ್ನ ಮಗನನ್ನು ಎದೆಯಲ್ಲಿ ಮಿಂಚಿನಂಥ ವೇಗದ, ತಡೆಯಲಸಾಧ್ಯವಾದ ಮೂರು ಬಾಣಗಳಿಂದ ಹೊಡೆದ.

ಪ್ರತಿವಿವ್ಯಾಧ ತಂ ತೂರ್ಣಂ ತವ ಪುತ್ರೋ ಮಹೀಪತೇ ।
ಪಂಚಭಿರ್ನಿಶಿತೈರ್ಬಾಣೈಃ ಸ್ವರ್ಣಪುಂಖೈಃ ಶಿಲಾಶಿತೈಃ ॥೨೫॥

ರಾಜನೆ, ಅದಕ್ಕೆ ಪ್ರತಿಯಾಗಿ ನಿನ್ನ ಪುತ್ರನೂ ಚಿನ್ನದ ಪುಕ್ಕಉಳ್ಳ ಸಾಣೆಹಿಡಿದ ತೀಕ್ಷ್ಣವಾದ ಐದು ಬಾಣಗಳಿಂದ ಯುಧಿಷ್ಠಿರನನ್ನು ಹೊಡೆದ.

ತತೋ ದುರ್ಯೋಧನೋ ರಾಜಾ ಶಕ್ತಿಂ ಚಿಕ್ಷೇಪ ಭಾರತ ।
ಸರ್ವಪಾರಶವೀಂ ತೀಕ್ಷ್ಣಾಂ ಮಹೋಲ್ಕಾಪ್ರತಿಮಾಂ ತದಾ ॥೨೬॥

ರಾಜನೆ, ಮಹಾ ಉಲ್ಕೆಯಂಥ, ಕಬ್ಬಿಣದಿಂದ ಮಾಡಿದ ತೀಕ್ಷ್ಣವಾದ ಶಕ್ತಿಯನ್ನು ರಾಜಾ ದುರ್ಯೋಧನ ಯುಧಿಷ್ಠಿರನಿಗೆ ಎಸೆದ.

ತಾಮಾಪತಂತಿಂ ಸಹಸಾ ಧರ್ಮರಾಜಃ ಶಿತೈಃ ಶರೈಃ ।
ತ್ರಿಭಿಶ್ಚಿಚ್ಛೇದ ಸಹಸಾ ತಂ ಚ ವಿವ್ಯಾಧ ಪಂಚಭಿಃ ॥೨೭॥

ಆ ಶಕ್ತಿಯು ತನ್ನಮೇಲೆ ಬೀಳುತ್ತಿದ್ದಂತೆಯೇ ಧರ್ಮರಾಜ ಅದನ್ನು ತೀಕ್ಷ್ಣವಾದ ಮೂರು ಬಾಣಗಳಿಂದ ಕಡಿದು, ಐದು ಬಾಣಗಳಿಂದ ದುರ್ಯೋಧನನನ್ನೂ ಹೊಡೆದ.

ನಿಪಪಾತ ತತಃ ಸಾऽಥ ಸ್ವರ್ಣದಂಡಾ ಮಹಾಸ್ವನಾ ।
ನಿಪತಂತೀ ಮಹೋಲ್ಕೇವ ವ್ಯರಾಜಚ್ಛಿಖಿಸನ್ನಿಭಾ ॥೨೮॥

ಬಂಗಾರದ ದಂಡದಿಂದ ಯುಕ್ತವಾದ ದೊಡ್ಡ ಶಬ್ದಮಾಡುವ ಆ ಶಕ್ತಿ ಬೆಂಕಿಯಂತೆ ಹೊಳೆಯುತ್ತ ಬಿದ್ದಿತು. ಬೀಳುವಾಗ ದೊಡ್ಡ ಉಲ್ಕೆಯಂತೆಯೇ ಬೆಳಗಿತು.

ಶಕ್ತಿಂ ವಿನಿಹತಾಂ ದೃಷ್ಟ್ವಾ ಪುತ್ರಸ್ತವ ವಿಶಾಂಪತೇ ।
ನವಭಿರ್ನಿಶಿತೈರ್ಭಲ್ಲೈರ್ನಿಜಘಾನ ಯುಧಿಷ್ಠಿರಮ್ ॥೨೯॥

ರಾಜನೆ! ಶಕ್ತಿಯು ಕಡಿದು ಬಿದ್ದಿದ್ದನ್ನು ಕಂಡು ನಿನ್ನ ಮಗನು ಹರಿತವಾದ ಒಂಬತ್ತು ಭಲ್ಲೆಗಳಿಂದ ಯುಧಿಷ್ಠಿರನನ್ನು ಹೊಡೆದ.

ಸೋऽತಿವಿದ್ಧೋ ಬಲವತಾ ಶತ್ರುಣಾ ಶತ್ರುತಾಪನಃ ।
ದುರ್ಯೋಧನಂ ಸಮುದ್ದಿಶ್ಯ ಬಾಣಂ ಜಗ್ರಾಹ ಸತ್ವರಃ ॥೩೦॥

ಶತ್ರುನಾಶಕನಾದ ಯುಧಿಷ್ಠಿರನು ಬಲಿಷ್ಠ ಶತ್ರುವಾದ ದುರ್ಯೋಧನನಿಂದ ಅತಿಯಾಗಿ ಗಾಯಗೊಂಡು ದುರ್ಯೋಧನನಿಗೆ ಎಸೆಯುವುದಕ್ಕಾಗಿ ಬೇಗನೆ ಬಾಣವನ್ನು ಎತ್ತಿಕೊಂಡ.

ಸಮಾಧತ್ತ ಚ ತಂ ಬಾಣಂ ಧನುರ್ಮಧ್ಯೇ ಮಹಾಬಲಃ ।
ಚಿಕ್ಷೇಪ ಚ ಮಹಾರಾಜ ತತಃ ಕ್ರುದ್ಧಃ ಪರಾಕ್ರಮೀ ॥೩೧॥

ಆ ಬಾಣವನ್ನು ಮಹಾಬಲಶಾಲಿಯಾದ ಯುಧಿಷ್ಠಿರ ಧನುಸ್ಸಿನ ಮಧ್ಯದಲ್ಲಿ ಹೂಡಿದ. ಪರಾಕ್ರಮಿಯಾದ ಆತ ಕ್ರುದ್ಧನಾಗಿ ಅದನ್ನು ಎಸೆದ.

ಸ ತು ಬಾಣಃ ಸಮಾಸಾದ್ಯ ತವ ಪುತ್ರಂ ಮಹಾರಥಮ್ ।
ವ್ಯಾಮೋಹಯತ ರಾಜಾನಂ ಧರಣೀಂ ಚ ದದಾರ ಹ ॥೩೨॥

ಆ ಬಾಣವು ಮಹಾರಥನಾದ ನಿನ್ನ ಮಗನಾದ ರಾಜಾ ದುರ್ಯೋಧನನನ್ನು ಹೊಡೆದು ಮೂರ್ಛೆಗೊಳಿಸಿತು, ನೆಲವನ್ನು ಸೀಳಿತು.

ತತೋ ದುರ್ಯೋಧನಃ ಕ್ರುದ್ಧೋ ಗದಾಮುದ್ಯಮ್ಯ ವೇಗಿತಃ ।
ವಿಧಿತ್ಸುಃ ಕಲಹಸ್ಯಾಂತಂ ಧರ್ಮರಾಜಮುಪಾದ್ರವತ್ ॥೩೩॥

ಮೂರ್ಛೆಯಿಂದ ಎಚ್ಚೆತ್ತ ಬಳಿಕ ದುರ್ಯೋಧನ ಕ್ರುದ್ಧನಾಗಿ ಯುದ್ಧವನ್ನು ಕೊನೆಗಾಣಿಸಲು ಬಯಸಿ ವೇಗದಿಂದ ಗದೆಯನ್ನೆತ್ತಿಕೊಂಡು ಯುಧಿಷ್ಠಿರನ ಸಮೀಪಕ್ಕೆ ರಥದಿಂದ ನುಗ್ಗಿದ.

ತಮುದ್ಯತಗದಂ ದೃಷ್ಟ್ವಾ ದಂಡಹಸ್ತಮಿವಾಂತಕಮ್ ।
ಧರ್ಮರಾಜೋ ಮಹಾಶಕ್ತಿಂ ಪ್ರಾಹಿಣೋತ್ತವ ಸೂನವೇ ॥೩೪॥

ದುರ್ಯೋಧನ ಗದೆಯನ್ನೆತ್ತಿ ದಂಡಧಾರಿಯಮನಂತೇ ಬರುತ್ತಿರುವುದನ್ನು ಕಂಡು ಧರ್ಮರಾಜ ಅವನ ಮೇಲೆ ಮಹಾಶಕ್ತಿಯನ್ನು ಎಸೆದ.

ದೀಪ್ಯಮಾನಾಂ ಮಹಾವೇಗಾಂ ಮಹೋಲ್ಕಾಂ ಜ್ವಲಿತಾಮಿವ ।
ಯಮದಂಡನಿಭಾಂ ಘೋರಾಂ ಕಾಲರಾತ್ರಿಮಿವಾಪರಾಮ್ ॥೩೫॥

ಆ ಮಹಾಶಕ್ತಿ ಹೊಳೆಯುವುದು, ಮಹಾವೇಗಉಳ್ಳದ್ದು. ಉರಿವ ದೊಡ್ಡ ಉಲ್ಕೆಯಂಥದ್ದು ಯಮದಂಡಸದೃಶ, ಘೋರ ಹಾಗೂ ಇನ್ನೊಂದು ಕಾಲರಾತ್ರಿಯೊ ಎಂಬಂತಿರುವುದು.

ರಥಸ್ಥಃ ಸ ತಯಾ ವಿದ್ಧೋ ವರ್ಮ ಭಿತ್ತ್ವಾ ತ್ವಸ್ತನಾಂತರೇ ।
ಭೃಶಂ ಸಂವಿಗ್ನಹೃದಯಃ ಪಪಾತ ಚ ಮುಮೋಹ ಚ ॥೩೬॥

ದುರ್ಯೋಧನ ರಥದಲ್ಲಿದ್ದಂತೆಯೇ ಆ ಶಕ್ತಿ ಅವನ ಕವಚವನ್ನು ಒಡೆದು ಎದೆಯನ್ನು ಸೀಳಿ ಹೃದಯದಲ್ಲಿ ಚುಚ್ಚಿತು. ದುರ್ಯೋಧನ ಅಲ್ಲಿಯೇ ಕುಸಿದು ಬಿದ್ದು ಮೂರ್ಛಿತನಾದ.

ಭೀಮಸ್ತಮಾಹ ಚ ತತಃ ಪ್ರತಿಜ್ಞಾಮನುಪಾಲಯ ।
ನಾಯಂ ವಧ್ಯಸ್ತವ ನೃಪ ಇತ್ಯುಕ್ತಃ ಸ ನ್ಯವರ್ತತ ॥೩೭॥

ಒಡನೆ ಭೀಮ ನುಡಿದ, 'ನನ್ನ ಪ್ರತಿಜ್ಞೆಯನ್ನು ಕಾಪಾಡು, ಈ ರಾಜ ನಿನ್ನ ಕೈಯಲ್ಲಿ ಸಾಯಬಾರದು. ಪುನಃ ಶಕ್ತಿಯನ್ನು ಅವನ ಮೇಲೆ ಪ್ರಯೋಗಿಸಬೇಡ' ಎಂದು. ಆಗ ಧರ್ಮರಾಜ ಸುಮ್ಮನಾದ.

ತತಸ್ತ್ವರಿತಮಾಗಮ್ಯ ಕೃತವರ್ಮಾ ತವಾತ್ಮಜಮ್ ।
ಪ್ರತ್ಯಪದ್ಯತ ರಾಜಾನಂ ನಿಮಗ್ನಂ ವ್ಯಸನಾರ್ಣವೇ ॥೩೮॥

ಆಗ ಕೃತವರ್ಮನು ಗದಾಧಾರಿ ಭೀಮನನ್ನು ಕಂಡು ಬೇಗನೆ ದುಃಖಸಾಗರದಲ್ಲಿ ಮುಳುಗಿದ್ದ ನಿನ್ನ ಮಗನ ಬಳಿಗೆ ಧಾವಿಸಿಬಂದ.

ನಿರ್ಣಯ ಪ್ರಕಾರ, ಕೃಪನು ದುರ್ಯೋಧನನನ್ನು ತನ್ನ ರಥವೇರಿಸಿಕೊಂಡು ರಕ್ಷಣೆ ಮಾಡುತ್ತಾನೆ. ಕೃತವರ್ಮನಲ್ಲ. ಇದನ್ನು ಪುರುಷವ್ಯತ್ಯಾಸಶೈಲಿ ಎಂದು ತಿಳಿಯಬೇಕು.

ಗದಾಮಾದಾಯ ಭೀಮೋಽಪಿ ಹೇಮಪಟ್ಟಪರಿಷ್ಕೃತಾಮ್ ।
ಅಭಿದುದ್ರಾವ ವೇಗೇನ ಕೃತವರ್ಮಾಣಮಾಹವೇ ॥೫೯॥

ಬಂಗಾರದ ಪಟ್ಟಿಯಿಂದ ಅಲಂಕೃತವಾದ ಗದೆಯನ್ನು ಹಿಡಿದು ಬಂದಿದ್ದ ಭೀಮ ವೇಗದಿಂದ ಕೃತವರ್ಮನನ್ನು ಆಕ್ರಮಿಸಿದ.

ಏವಂ ತದಭವದ್ ಯುದ್ಧಂ ತ್ವದೀಯಾನಾಂ ಪರೈಃ ಸಹ ॥೪೦॥
ಅಪರಾಹ್ಣೇ ಮಹಾರಾಜ ಕಾಂಕ್ಷತಾಂ ವಿಜಯಂ ಯುಧಿ ॥೪೧॥

ಹೀಗೆ, ಮಹಾರಾಜ, ಯುದ್ಧದಲ್ಲಿ ಜಯವನ್ನು ಬಯಸಿದ್ದ ನಿನ್ನವರಿಗೆ ಪಾಂಡವರೊಡನೆ ಅಪರಾಹ್ಣದಲ್ಲಿ ಯುದ್ಧ ನಡೆಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥೨೯॥

❖

ಮಹಾಭಾರತತಾತ್ಪರ್ಯನಿರ್ಣಯ

ಕರ್ಣಂ ಸಮಂತಾತ್ ಪ್ರತಿಕಾಲಯಂತಂ
ವರೂಥಿನೀಮಿಂದ್ರಸುತಃ ಸಮಭ್ಯಯಾತ್ ।
ಕ್ಷಣಾತ್ ತಮಾಜೌ ವಿರಥಂ ಚ ಚಕ್ರೇ
ತತೋಪಹಾರಂ ಸ ಚಕಾರ ಚಮ್ವಾಃ ॥ ೨೨ ॥

ಸೈನ್ಯವನ್ನು ಯುದ್ಧದಲ್ಲಿ ಎಲ್ಲೆಡೆಯೂ ಮರ್ದಿಸುತ್ತಿದ್ದ ಕರ್ಣನನ್ನು ಅರ್ಜುನ ಇದಿರಿಸಿದ. ಕ್ಷಣದಲ್ಲಿ ಅವನನ್ನು ವಿರಥನನ್ನಾಗಿ ಮಾಡಿದ. ಆಗ ಕರ್ಣ ಸೈನ್ಯವನ್ನು ಹಿಂದೆ ಕರೆಸಿಕೊಂಡ.

ಮೂವತ್ತನೆಯ ಅಧ್ಯಾಯ

ಅರ್ಜುನನಿಂದ ದುರ್ಯೋಧನ ಪರಾಭವ, ಕರ್ಣನ ಆಕ್ರಮಣಕ್ಕೆ ತಡೆ.

ಸಂಜಯಃ

ತತಃ ಕರ್ಣಂ ಪುರಸ್ಕೃತ್ಯ ತ್ವದೀಯಾ ಯುದ್ಧದುರ್ಮದಾಃ ।
ಪುನರಾವರ್ತ್ಯ ಸಂಗ್ರಾಮಂ ಚಕ್ರುರ್ದೇವಾಸುರೋಪಮಮ್ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಬಳಿಕ ಕರ್ಣನನ್ನು ಮುಂದೆ ಮಾಡಿಕೊಂಡು ಯುದ್ಧರಸಿಕರಾದ ನಿನ್ನವರು ಪುನಃ ಬಂದು ದೇವಾಸುರ ಯುದ್ಧದಂಥ ಯುದ್ಧವನ್ನು ಮಾಡಿದರು.

ದ್ವಿರದನರರಥಾಶ್ವಶಂಖಶಬ್ದೈಃ
ಪರಿಹೃಷಿತಾ ವಿವಿಧೈಶ್ಚ ಶಸ್ತ್ರಪಾತೈಃ ।
ದ್ವಿರದರಥಪದಾತಿಸಾದಿಸಂಘಾಃ
ಪರಿಕುಪಿತಾಭಿಮುಖಾಃ ಪ್ರಜಘ್ನಿರೇ ತೇ ॥೨॥

ರಥ ಗಜ ಅಶ್ವ ಪದಾತಿಗಳ ಘೋಷಗಳಿಂದ ಮತ್ತು ಶಂಖಧ್ವನಿಗಳಿಂದ ಉತ್ಸಾಹಗೊಂಡ ಗಜ ರಥ ಪದಾತಿ ಅಶ್ವ ಸೈನಿಕರ ಸಮೂಹಗಳು ಕುಪಿತರಾಗಿ ಇದಿರಿಸಿ ನಾನಾ ಬಗೆಯ ಶಸ್ತ್ರಪ್ರಯೋಗಗಳಿಂದ ಶತ್ರುಗಳನ್ನು ಪ್ರಹರಿಸಿದರು.

ಶಿತಪರಶುವರಾಸಿಪಟ್ಟಿಸೈ-
ರಿಷುಭಿರನೇಕವಿಧೈಶ್ಚ ಸೂದಿತಾಃ ।
ದ್ವಿರದರಥಹಯಾ ಮಹಾಹವೇ
ವರಪುರುಷೈಃ ಪುರುಷಾಶ್ಚ ತೇ ಹತಾಃ ॥೩॥

ಮಹಾಯುದ್ಧದಲ್ಲಿ ಗಜ ರಥ ಅಶ್ವ ಪದಾತಿಗಳು ಉತ್ತಮಯೋಧರಿಂದ ತೀಕ್ಷ್ಣವಾದ ಪರಶು ಖಡ್ಗ ಪಟ್ಟಿಶ ಅನೇಕವಿಧ ಬಾಣಗಳಿಂದ ಹೊಡೆಸಿಕೊಂಡು ಹತರಾದರು.

ಕಮಲದಿನಕರೇಂದುಸನ್ನಿಭೈಃ
ಸಿತದಶನೈಃ ಸುಮುಖಾಕ್ಷಿನಾಸಿಕೈಃ ।

ರುಚಿರಮಕುಟಕುಂಡಲೈರ್ಮಹೀ
ಪುರುಷಶಿರೋಭಿರುಪಸ್ಕೃತಾ ಬಭೌ ॥೪॥

ಕಮಲದಂತೆ ಸೂರ್ಯ–ಚಂದ್ರರಂತೆ ಹೊಳೆವ, ಬಿಳಿ ಹಲ್ಲು ಬಾಯಿ, ಮೂಗುಗಳಿಂದ ಯುಕ್ತವಾದ, ಸುಂದರವಾದ ಮುಕುಟ–ಕುಂಡಲಗಳಿಂದ ಯುಕ್ತವಾದ ಯೋಧರ ಶಿರಸ್ಸುಗಳಿಂದ ರಣಭೂಮಿ ತುಂಬಿ ಶೋಭಿಸಿತು.

ಪರಿಘಮುಸಲಶಕ್ತಿತೋಮರೈ-
ರ್ನಖರಭುಶುಂಡಿಗದಾಶತೈರ್ಹತಾಃ ।
ದ್ವಿರದನರಹಯಾಃ ಸಹಸ್ರಶೋ
ರುಧಿರನದೀಪ್ರವಹಾಸ್ತದಾऽಭವನ್ ॥೫॥

ಸಹಸ್ರಾರು ಗಜ ಪದಾತಿ ಅಶ್ವಗಳು ಪರಿಘ ಮುಸಲ ಶಕ್ತಿ ತೋಮರ ನಖರ ಭುಶುಂಡಿ ಗದೆ ಮುಂತಾದ ನೂರಾರು ಆಯುಧಗಳಿಂದ ಹತರಾದರು. ರಕ್ತನದೀಪ್ರವಾಹಗಳು ಹರಿದುವು.

ಪ್ರಹತರಥನರಾಶ್ವಕುಂಜರಂ
ಪ್ರತಿಭಯದರ್ಶನಮುಲ್ಬಣವ್ರಣಮ್ ।
ತದಹಿತಹತಮಾಬಭೌ ಬಲಂ
ಪಿತೃಪತಿರಾಷ್ಟ್ರಮಿವ ಪ್ರಜಾಕ್ಷಯೇ ॥೬॥

ಶತ್ರುಗಳಿಂದ ಹೊಡೆಸಿಕೊಂಡು ಹತರಾದ ರಥ ಪದಾತಿ ಅಶ್ವ ಗಜಗಳಿಂದ ಕೂಡಿದ ಸೈನ್ಯವು ಉಲ್ಬಣವಾಗಿ ಗಾಯಗೊಂಡು, ನೋಡಲು ಭೀಕರವಾಗಿದ್ದು ಲಯಕಾಲದಲ್ಲಿ ಗೋಚರವಾಗುವ ಯಮರಾಷ್ಟ್ರದಂತೆ ಕಂಡುಬಂದಿತು.

ಅಥ ತವ ನರದೇವ ಸೈನಿಕಾ-
ಸ್ತವ ಚ ಸುತಾಃ ಸುರಸೂನುಸನ್ನಿಭಾಃ ।
ಅಮಿತಬಲಪುರಃಸರಾ ರಣೇ
ಕುರುವೃಷಭಾಃ ಶಿನಿಪೌತ್ರಮಭ್ಯಯುಃ ॥೭॥

ರಾಜನೆ, ನಿನ್ನ ಸೈನಿಕರೂ ಕುರುಶ್ರೇಷ್ಠರಾದ ದೇವಪುತ್ರರಂಥ ನಿನ್ನ ಪುತ್ರರೂ

ಅಮಿತ ಸೈನ್ಯವನ್ನು ಮುಂದು ಮಾಡಿಕೊಂಡು ರಣದಲ್ಲಿ ಸಾತ್ಯಕಿಯನ್ನು ಇದಿರಿಸಿದರು.

ತದತಿರುಧಿರಭೀಮಮಾಬಭೌ
ಪುರುಪ್ರವರಾಶ್ವರಥದ್ವಿಪಾಕುಲಮ್ ।
ಲವಣಜಲಸಮುದ್ಧತಸ್ವನಂ
ಬಲಮಸುರಾಮರಸೈನ್ಯಸಪ್ರಭಮ್ ॥೮॥

ಸಾತ್ಯಕಿಯ ಸೈನ್ಯವು ಶ್ರೇಷ್ಠ ಪದಾತಿ ಅಶ್ವ ರಥ ಗಜಯುಕ್ತವಾಗಿದ್ದು ಸಮುದ್ರದಂತೆ ಭೋರ್ಗರೆಯುತ್ತ ದೇವಾಸುರರ ಸೈನ್ಯದಂತಿದ್ದರೂ ಅತಿಯಾಗಿ ರಕ್ತರಂಜಿತವಾಗಿ ಭೀಕರವಾಗಿ ಕಂಡಿತು.

ಸುರಪತಿಸಮವಿಕ್ರಮಸ್ತತ-
ಸ್ತ್ರಿದಶವರಾವರಜೋಪಮಂ ಯುಧಿ ।
ದಿನಕರಕಿರಣಪ್ರಭೈಃ ಪೃಷತ್ಕೈ
ರವಿತನಯೋಽಭ್ಯಹನಚ್ಛಿನಿಪ್ರವೀರಮ್ ॥೯॥

ಇಂದ್ರಸಮಾನ ಪರಾಕ್ರಮವುಳ್ಳ ಸೂರ್ಯಪುತ್ರ ಕರ್ಣನು ಯುದ್ಧದಲ್ಲಿ ಇಂದ್ರನ ತಮ್ಮನಾದ ಉಪೇಂದ್ರನಿಗೆ ಸಮಾನನಾದ ಸಾತ್ಯಕಿಯನ್ನು ಸೂರ್ಯ ಕಿರಣದಂತೆ ಹೊಳೆಯುವ ಬಾಣಗಳಿಂದ ಹೊಡೆದ.

ತಮಪಿ ಸರಥವಾಜಿಸಾರಥಿಂ
ಶಿನಿವೃಷಭೋ ವಿವಿಧೈಃ ಶರೈಸ್ತ್ವರನ್ ।
ಭುಜಗವಿಷಸಮಪ್ರಭೈ ರಣೇ
ಪುರುಷವರಂ ಸಮವಾಸೃಣೋತ್ತದಾ ॥೧೦॥

ಪುರುಷಶ್ರೇಷ್ಠನಾದ ಕರ್ಣನನ್ನು ರಥ ಕುದುರೆ ಸಾರಥಿಗಳೊಂದಿಗೆ ಸಾತ್ಯಕಿಯು ಹಾವಿನ ವಿಷದಂತೆ ಜ್ವಲಿಸುವ ನಾನಾವಿಧ ಬಾಣಗಳಿಂದ ಬೇಗನೆ ಹೊಡೆದ.

ಶಿನಿವೃಷಭಶರೈರ್ನಿಪೀಡಿತಂ
ತವ ಸುಹೃದೋ ವಸುಷೇಣಮಭ್ಯಯುಃ ।

ತ್ವರಿತಮತಿರಥಾ ರಥರ್ಷಭಂ
ದ್ವಿರದರಥಾಶ್ವಪದಾತಿಭಿಃ ಸಹ ॥೧೧॥

ರಥಿಕಶ್ರೇಷ್ಠನಾದ ಕರ್ಣನು ಸಾತ್ಯಕಿಯ ಬಾಣಗಳಿಂದ ಪೀಡಿತನಾದಾಗ ಅವನ ಬಳಿಗೆ ಅತಿರಥರಾದ ನಿನ್ನ ಮಿತ್ರರು ಗಜರಥ ಅಶ್ವಪದಾತಿ ಸೈನ್ಯಗಳೊಂದಿಗೆ ಬೇಗನೆ ಬಂದರು.

ತದುದಧಿನಿಭಮಾದ್ರವದ್ ಬಲಂ
ತ್ವರಿತತರೈಃ ಸಮಭಿದ್ರುತಂ ಪರೈಃ ।
ದ್ರುಪದಸುತಮುಖೈಸ್ತದಾऽಭವತ್
ಪುರುಷರಥಾಶ್ವಗಜಕ್ಷಯೋ ಮಹಾನ್ ॥೧೨॥

ಸಾಗರದಂತೆ ಅಪಾರವಾದ ಆ ನಿನ್ನ ಸೈನ್ಯವನ್ನು ಧೃಷ್ಟದ್ಯುಮ್ನ ಮುಂತಾದ ಶತ್ರುಗಳು ಅತಿವೇಗದಿಂದ ಆಕ್ರಮಿಸಿದರು. ಆಗ ಪದಾತಿ ರಥ ಅಶ್ವ ಗಜ ಸೈನ್ಯಗಳ ಮಹಾವಿನಾಶ ನಡೆಯಿತು.

ಅಥ ಪುರುಷವರೌ ಮಹಾಬಲೌ
ಯುಧಿ ಸಂಶಪ್ತಕ ಸೈನ್ಯಮುಲ್ಬಣಮ್ ।
ಪ್ರಸಭಮಭಿನಿಹತ್ಯ ಸತ್ವರೌ
ತವ ಬಲಮರ್ಜುನಕೇಶವೌ ಸೃತೌ ॥೧೩॥

ಮಹಾಬಲಿಷ್ಠರಾದ ಪುರುಷೋತ್ತಮರಾದ ಕೃಷ್ಣಾರ್ಜುನರು ರಣದಲ್ಲಿ ಕ್ರೂರವಾದ ಸಂಶಪ್ತಕಸೈನ್ಯವನ್ನು ರಭಸದಿಂದ ನಿಗ್ರಹಿಸಿ ಬೇಗನೆ ನಿನ್ನ ಸೈನ್ಯವನ್ನು ಪ್ರವೇಶಿಸಿದರು.

ಜಲದನಿನದನಿಃಸ್ವನಂ ರಥಂ
ಪವನವಿಧೂತಪತಾಕಕೇತನಮ್ ।
ಸಿತಹಯಮುಪಯಾಂತಮಂತಿಕಂ
ಹೃತಮನಸೋ ದದೃಶುಸ್ತದಾऽರಯಃ ॥೧೪॥

ಮೋಡದ ಗುಡುಗಿನಂಥ ಧ್ವನಿ ಮತ್ತು ಗಾಳಿಗೆ ಹಾರಾಡುವ ಪತಾಕೆ

ಧ್ವಜಗಳುಳ್ಳ ಬಿಳಿಕುದುರೆ ಕಟ್ಟಿದ ಅರ್ಜುನನ ರಥ ಹತ್ತಿರಕ್ಕೆ ಬರುತ್ತಿದ್ದಂತೆ ಶತ್ರುಗಳು ಅಧೀರರಾಗಿ ನೋಡಿದರು.

ಅಥ ವಿಷ್ಫಾರ್ಯ ಗಾಂಡೀವಂ ರಥೇ ನೃತ್ಯನ್ನಿವಾರ್ಜುನಃ ।
ಶರಸಂಬಾಧಮಕರೋತ್ ಖಂ ದಿಶಃ ಪ್ರದಿಶಸ್ತಥಾ ॥೧೫॥

ಅರ್ಜುನನು ರಥದಲ್ಲಿ ಗಾಂಡೀವವನ್ನು ಠೇಂಕರಿಸಿ ತಾನು ಸ್ವತಃ ಕುಣಿಯುವಂತೆ ಕಾಣಿಸಿಕೊಳ್ಳುತ್ತ ಅಂತರಿಕ್ಷ ದಿಕ್ಕು ವಿದಿಕ್ಕುಗಳನ್ನೆಲ್ಲ ದಟ್ಟವಾಗಿ ಬಾಣಗಳಿಂದ ತುಂಬಿಸಿದ.

ರಥಾನ್ ವಿಮಾನಪ್ರತಿಮಾನ್ ಸಹಯಾನ್ ಸಾಯುಧಧ್ವಜಾನ್ ।
ಸಸಾರಥೀಂಸ್ತದಾ ಬಾಣೈರಭ್ರಾಣೀವಾನಿಲೋಽವಧೀತ್ ॥೧೬॥

ಅರ್ಜುನನು ಬಾಣಗಳಿಂದ ಶತ್ರುಗಳ ರಥಗಳನ್ನು ಕುದುರೆ ಆಯುಧ ಧ್ವಜ ಸಾರಥಿಗಳೊಂದಿಗೆ ವಿಮಾನಗಳಂತೆ ಮೇಲೆ ಹಾರಿಸಿ, ಹಾರುವ ಮೋಡಗಳನ್ನು ಗಾಳಿಯು ನಾಶಮಾಡುವಂತೆ, ನಾಶಗೊಳಿಸಿದ.

ಗಜಾನ್ ಗಜನಿಯಂತೃಂಶ್ಚ ವೈಜಯಂತೀಶುಭಧ್ವಜಾನ್ ।
ಸಾದಿನೋಽಶ್ವಾಂಶ್ಚ ಪತ್ತೀಂಶ್ಚ ಶರೈರ್ನಿನ್ಯೇ ಯಮಕ್ಷಯಮ್ ॥೧೭॥

ಅರ್ಜುನನು ಗಜಗಳನ್ನು ಗಜಾರೋಹಿಗಳೊಂದಿಗೆ ಮತ್ತು ಪತಾಕೆಗಳಿಂದ ಶುಭಕರವಾದ ಧ್ವಜಗಳೊಂದಿಗೆ, ಅಶ್ವಗಳನ್ನು ಅಶ್ವಾರೋಹಿಗಳೊಂದಿಗೆ ಮತ್ತು ಪದಾತಿಗಳನ್ನೂ ಕೂಡ ಯಮಸದನಕ್ಕೆ ಅಟ್ಟಿದ.

ತಮಂತಕಮಿವ ಕ್ರುದ್ಧಮನಿವಾರ್ಯಂ ಮಹಾರಥಮ್ ।
ದುರ್ಯೋಧನೋಭ್ಯಯಾದೇಕೋ ನಿಘ್ನನ್ ಬಾಣೈರಜಿಹ್ಮಗೈಃ ॥೧೮॥

ಯಮನಂತೆ ಕ್ರುದ್ಧನಾದ, ಯಾರಿಗೂ ತಡೆಯಲಾಗದ ಮಹಾರಥನಾದ ಅರ್ಜುನನನ್ನು ದುರ್ಯೋಧನನೊಬ್ಬನೇ ನೇರವಾಗಿ ಹೋಗುವ ಬಾಣಗಳಿಂದ ಹೊಡೆಯುತ್ತ ಇದಿರಿಸಿದ.

ತಸ್ಯಾರ್ಜುನೋ ಧನುಃ ಸೂತಮಶ್ವಾನ್ ಕೇತುಂ ಚ ಸಾಯಕೈಃ ।
ಹತ್ವಾ ಸಪ್ತಭಿರೇಕೇನ ಚ್ಛತ್ರಂ ಚಿಚ್ಛೇದ ಪತ್ರಿಣಾ ॥೧೯॥

ಅರ್ಜುನನು ದುರ್ಯೋಧನನ ಬಿಲ್ಲು ಸಾರಥಿ ಕುದುರೆ ಧ್ವಜಗಳನ್ನು ಏಳುಬಾಣಗಳಿಂದ ವಧಿಸಿದ ಮತ್ತು ಛತ್ರವನ್ನು ಒಂದು ಬಾಣದಿಂದ ಛೇದಿಸಿದ.

ನವಮಂ ಚ ಸಮಾಧಾಯ ವ್ಯಸೃಜತ್ ಪ್ರಾಣಘಾತಿನಮ್ ।
ದುರ್ಯೋಧನಾಯೇಷುವರಂ ತಂ ದ್ರೌಣಿಃ ಸಪ್ತಧಾऽಚ್ಛಿನತ್ ॥೨೦॥

ಪ್ರಾಣಾಂತಕವಾದ ಒಂಬತ್ತನೇ ಬಾಣವನ್ನು ಹೂಡಿ ಅರ್ಜುನ ದುರ್ಯೋಧನನ ಮೇಲೆಸೆದ. ಅದನ್ನು ಅಶ್ವತ್ಥಾಮ ಏಳು ಚೂರಾಗಿ ಕತ್ತರಿಸಿದ.

ತತೋ ದ್ರೌಣೇರ್ಧನುಶ್ಛಿತ್ತ್ವಾ ಹತ್ವಾ ಚಾಶ್ವರಥಾನ್ ಶರೈಃ ।
ಕೃಪಸ್ಯಾಪಿ ತದತ್ಯುಗ್ರಂ ಧನುಶ್ಚಿಚ್ಛೇದ ಪಾಂಡವಃ ॥೨೧॥

ಅರ್ಜುನನು ಬಾಣಗಳಿಂದ ಅಶ್ವತ್ಥಾಮನ ಬಿಲ್ಲನ್ನು ಕಡಿದು ಅಶ್ವರಥಗಳನ್ನೂ ವಧಿಸಿ ಕೃಪನ ಅತಿಉಗ್ರವಾದ ಬಿಲ್ಲನ್ನೂ ಕಡಿದ.

ಹಾರ್ದಿಕ್ಯಸ್ಯ ಧನುಶ್ಛಿತ್ತ್ವಾ ಧ್ವಜಂ ಚಾಶ್ವಾಂಸ್ತದಾऽವಧೀತ್ ।
ದುಃಶಾಸನಸ್ಯೇಷ್ವಸನಂ ಛಿತ್ತ್ವಾ ರಾಧೇಯಮಭ್ಯಯಾತ್ ॥೨೨॥

ಅರ್ಜುನನು ಕೃತವರ್ಮನ ಬಿಲ್ಲನ್ನೂ ಕಡಿದು ಧ್ವಜವನ್ನು ಅಶ್ವಗಳನ್ನು ವಧಿಸಿದ. ದುಃಶಾಸನನ ಬಿಲ್ಲನ್ನೂ ಕಡಿದು ಕರ್ಣನನ್ನೂ ಇದಿರಿಸಿದ.

ಅಥ ಸಾತ್ಯಕಿಮುತ್ಸೃಜ್ಯ ತ್ವರನ್ ಕರ್ಣೋऽರ್ಜುನಂ ತ್ರಿಭಿಃ ।
ವಿದ್ಧ್ವಾ ವಿವ್ಯಾಧ ವಿಂಶತ್ಯಾ ಕೃಷ್ಣಂ ಪಾರ್ಥಂ ಪುನಃ ಪುನಃ ॥೨೩॥

ಕರ್ಣನು ಸಾತ್ಯಕಿಯನ್ನು ಬಿಟ್ಟು ಬೇಗನೆ ಅರ್ಜುನನನ್ನು ಮೂರು ಬಾಣಗಳಿಂದ ಹೊಡೆದು, ಇಪ್ಪತ್ತು ಬಾಣಗಳಿಂದ ಕೃಷ್ಣನನ್ನೂ ಅರ್ಜುನನನ್ನೂ ಪುನಃ ಪುನಃ ಹೊಡೆದ.

ನ ಗ್ಲಾನಿರಾಸೀತ್ ಕರ್ಣಸ್ಯ ಕ್ಷಿಪತಃ ಸಾಯಕಾನ್ ಬಹೂನ್ ।
ರಣೇ ನಿಘ್ನತಃ ಶತ್ರೂನ್ ಕ್ರುದ್ಧಸ್ಯೇವ ಶತಕ್ರತೋಃ ॥೨೪॥

ಬಹಳ ಬಾಣಗಳನ್ನು ಎಸೆದರೂ, ರಣದಲ್ಲಿ ಶತ್ರುಗಳನ್ನು ವಧಿಸಿದರೂ, ಕ್ರುದ್ಧನಾದ ಇಂದ್ರನಂತೆ, ಕ್ರುದ್ಧನಾದ ಕರ್ಣನಿಗೂ ನಿರುತ್ಸಾಹ ಉಂಟಾಗಲಿಲ್ಲ.

ಅಥ ಸಾತ್ಯಕಿರಾಗತ್ಯ ಕರ್ಣಂ ವಿದ್ಧ್ವಾ ಶಿತೈಃ ಶರೈಃ ।
ನವತ್ಯಾ ನವಭಿಶ್ಚೋಗ್ರೈಃ ಶತೇನ ಪುನರಾರ್ಪಯತ್ ॥೨೫॥

ಬಳಿಕ ಸಾತ್ಯಕಿ ಬಂದು ತೀಕ್ಷ್ಣವಾದ ತೊಂಬತ್ತೊಂಬತ್ತು ಬಾಣಗಳಿಂದ ಕರ್ಣನನ್ನು ಹೊಡೆದು ಪುನಃ ನೂರು ಬಾಣಗಳನ್ನು ಎಸೆದ.

ತತಃ ಪ್ರವೀರಾಃ ಪಾರ್ಥಾನಾಂ ಸರ್ವೇ ಕರ್ಣಮಪೀಡಯನ್ ।
ಯುಧಾಮನ್ಯುಃ ಶಿಖಂಡೀ ಚ ದ್ರೌಪದೇಯಾಃ ಪ್ರಭದ್ರಕಾಃ ॥೨೬॥

ಯುಧಾಮನ್ಯು ಶಿಖಂಡಿ ದ್ರೌಪದೀಪುತ್ರರು ಪ್ರಭದ್ರಕರು ಮುಂತಾದ ಪಾಂಡವರ ವೀರರು ಎಲ್ಲರೂ ಕರ್ಣನನ್ನು ಪೀಡಿಸಿದರು.

ಉತ್ತಮೌಜಾ ಯುಯುತ್ಸುಶ್ಚ ಯಮೌ ಪಾರ್ಷತ ಏವ ಚ ।
ಚೇದಿಕಾರೂಶಮಾತ್ಸ್ಯಾನಾಂ ಕೈಕಯಾನಾಂ ಚ ತದ್ ಬಲಮ್ ॥೨೭॥

ಉತ್ತಮೌಜ ಯುಯುತ್ಸು ನಕುಲ ಸಹದೇವ ಧೃಷ್ಟದ್ಯುಮ್ನರು ಚೇದಿ ಕರೂಶ ಮತ್ಸ್ಯ ಕೇಕಯರ ಸೈನ್ಯಗಳನ್ನು ಪೀಡಿಸಿದರು.

ಚೇಕಿತಾನಶ್ಚ ಬಲವಾನ್ ಧರ್ಮರಾಜಶ್ಚ ಸುವ್ರತಃ ।
ಏತೇ ರಥಾಶ್ವದ್ವಿರದೈಃ ಪತ್ತಿಭಿಶ್ಚೋಗ್ರವಿಕ್ರಮೈಃ ॥೨೮॥

ಪರಿವಾರ್ಯ ರಣೇ ಕರ್ಣಂ ನಾನಾಶಸ್ತ್ರೈರವಾಕಿರನ್ ।
ಭಾಷಂತೋ ವಾಗ್ಭಿರುಗ್ರಾಭಿಃ ಸರ್ವೇ ಕರ್ಣವಧೇ ಧೃತಾಃ ॥೨೯॥

ಬಲಿಷ್ಠನಾದ ಚೇಕಿತಾನ ವ್ರತನಿಷ್ಠನಾದ ಧರ್ಮರಾಜ ಮತ್ತು ಎಲ್ಲ ವೀರರೂ ಉಗ್ರಪರಾಕ್ರಮಿಗಳಾದ ರಥ ಅಶ್ವ ಗಜ ಪದಾತಿಗಳೊಂದಿಗೆ ಕರ್ಣನನ್ನು ಸುತ್ತುವರಿದು ರಣದಲ್ಲಿ ನಾನಾ ಶಸ್ತ್ರಗಳಿಂದ ಹೊಡೆದರು. ಕರ್ಣನ ವಧೆಯಲ್ಲಿ ಮನಸ್ಸಿಟ್ಟು ಉಗ್ರಮಾತುಗಳಿಂದ ಆಕ್ಷೇಪಿಸಿ ನುಡಿದರು.

ತಾಂ ಶಸ್ತ್ರವೃಷ್ಟಿಂ ಬಹುಧಾ ಕರ್ಣಶ್ಚಿತ್ತ್ವಾ ಶಿತೈಃ ಶರೈಃ ।
ಅಪೋವಾಹಾಸ್ತ್ರವೀರ್ಯೇಣ ದ್ರುಮಂ ಭಂಕ್ತ್ವೇವ ಮಾರುತಃ ॥೩೦॥

ಆ ಶಸ್ತ್ರಗಳ ಮಳೆಯನ್ನು ಕರ್ಣನು ಹರಿತವಾದ ಬಾಣಗಳಿಂದ ಬಹುವಾಗಿ

ಛೇದಿಸಿ, ಬಿರುಗಾಳಿ ಮರವನ್ನು ಮುರಿದು ಕೆಡೆಯುವಂತೆ, ಅಸ್ತ್ರಬಲದಿಂದ ನಾಶಮಾಡಿದ.

ರಥಿನಸ್ತು ಮಹಾಮಾತ್ರಾನ್ ಗಜಾನಶ್ವಾನ್ ಸಸಾದಿನಃ ।
ಪತ್ತಿವ್ರಾತಾಂಶ್ಚ ಸಂಕ್ರುದ್ಧೋ ನಿಘ್ನನ್ ಕರ್ಣೋ ವ್ಯದೃಶ್ಯತ ॥೩೧॥

ರಥಿಕರನ್ನೂ ಗಜಾರೋಹಿಗಳನ್ನೂ ಗಜಗಳನ್ನೂ ಅಶ್ವಗಳನ್ನೂ ಅಶ್ವಾರೋಹಿಗಳನ್ನೂ ಪದಾತಿ ಸಮೂಹಗಳನ್ನೂ ಕ್ರುದ್ಧನಾದ ಕರ್ಣನು ವಧಿಸುತ್ತ ಪ್ರೇಕ್ಷಣೀಯನಾದ.

ತದ್ವಧ್ಯಮಾನಂ ಪಾಂಡೂನಾಂ ಬಲಂ ಕರ್ಣಾಸ್ತ್ರತೇಜಸಾ ।
ವಿಶಸ್ತ್ರಕ್ಷತದೇಹಂ ಚ ಪ್ರಾಯ ಆಸೀತ್ ಪರಾಙ್ಮುಖಮ್ ॥೩೨॥

ಕರ್ಣನ ಅಸ್ತ್ರಬಲದಿಂದ ವಧಿಸಲ್ಪಡುತ್ತ ಪಾಂಡವಸೈನ್ಯವು ವಿವಿಧ ಶಸ್ತ್ರಗಳಿಂದ ಶರೀರದಲ್ಲಿ ಗಾಯಗೊಂಡು ಪ್ರಾಯಃ ಪಲಾಯನಕ್ಕೇ ತೊಡಗಿತು.

ಅಥ ಕರ್ಣಾಸ್ತ್ರಮಸ್ತ್ರೇಣ ಪ್ರತಿಹತ್ಯಾರ್ಜುನಃ ಸ್ಮಯನ್ ।
ದಿಶಂ ಖಂ ಚೈವ ಭೂಮಿಂ ಚ ಪ್ರಾವೃಣೋಚ್ಛರವೃಷ್ಟಿಭಿಃ ॥೩೩॥

ಅರ್ಜುನನು ನಸುನಕ್ಕು ಕರ್ಣನ ಅಸ್ತ್ರವನ್ನು ಅಸ್ತ್ರದಿಂದ ತಡೆದು ದಿಕ್ಕುಗಳನ್ನೂ ಅಂತರಿಕ್ಷವನ್ನೂ ಭೂಮಿಯನ್ನೂ ಬಾಣಗಳ ಮಳೆಗಳಿಂದ ಮುಚ್ಚಿದ.

ಮುಸಲಾನೀವ ಸಂಪೇತುಃ ಪರಿಘಾ ಇವ ಚೇಷವಃ ।
ಶತಘ್ನ್ಯ ಇವ ಚಾಪ್ಯನ್ಯೇ ವಜ್ರಾಣ್ಯುಗ್ರಾಣಿ ಚಾಪರೇ ॥೩೪॥

ಅರ್ಜುನನ ಬಾಣಗಳು ಕೆಲವು ಮುಸಲಗಳಂತೆ, ಪರಿಘಗಳಂತೆ, ಇನ್ನೂ ಕೆಲವು ಶತಘ್ನಿಗಳಂತೆ, ಉಗ್ರವಾದ ವಜ್ರಾಯುಧಗಳಂತೆ ಶತ್ರುಗಳ ಮೇಲೆ ಬಿದ್ದುವು.

ತೈರ್ವಧ್ಯಮಾನಂ ತತ್ಸೈನ್ಯಂ ಸಪತ್ತ್ಯಶ್ವರಥದ್ವಿಪಮ್ ।
ನಿಮೀಲಿತಾಕ್ಷಮತ್ಯರ್ಥಂ ಬಭ್ರಾಮ ಚ ನನಾದ ಚ ॥೩೫॥

ಆ ಬಾಣಗಳಿಂದ ಪದಾತಿ ಅಶ್ವ ರಥ ಗಜಗಳೊಂದಿಗೆ ಆ ಸೈನ್ಯವು ಹೊಡೆಸಿಕೊಳ್ಳುತ್ತ ಕಣ್ಣುಮುಚ್ಚಿ ಬುದ್ಧಿಭ್ರಮಣ ಹೊಂದಿ ಬಹಳ ಕೂಗಿಕೊಂಡಿತು.

ನಿಷ್ಕೈವಲ್ಯಂ ತದಾ ಯುದ್ಧಂ ಪ್ರಾಪುರಶ್ವನರದ್ವಿಪಾಃ ।
ಹನ್ಯಮಾನಾಃ ಶರೈರಾರ್ತಾಸ್ತದಾ ಭೀತಾಃ ಪ್ರದುದ್ರುವುಃ ॥೩೬॥

ಅಶ್ವ ಪದಾತಿ ಗಜಗಳು 'ನಿಷ್ಕೈವಲ್ಯ'ಯುದ್ಧವನ್ನು ಕೈಗೊಂಡವು. ಅಂದರೆ ಅವಿರತವಾಗಿ ಹೊಡೆಸಿಕೊಂಡವು. ಬಾಣಗಳಿಂದ ಪೀಡಿತರಾಗಿ ಭಯದಿಂದ ಪಲಾಯನಗೈದವು.

'ನಿಷ್ಕೈವಲ್ಯವಾದ ಯುದ್ಧ' ಅಂದರೆ, ಕೈವಲ್ಯ, ಯುದ್ಧವಿಲ್ಲದ ಕ್ಷಣ. ಅದು ಒಂದೂ ಇಲ್ಲದ ಅವಿರತವಾದ ಯುದ್ಧ.

ತ್ವದೀಯಾನಾಂ ತದಾ ಯುದ್ಧೇ ಸಂಸಕ್ತಾನಾಂ ಜಯೈಷಿಣಾಮ್ ।
ಗಿರಿಮಸ್ತಂ ಸಮಾಸಾದ್ಯ ಪ್ರತ್ಯಪದ್ಯತ ಭಾನುಮಾನ್ ॥೩೭॥

ಜಯದಾಸೆಯಿಂದ ಯುದ್ಧದಲ್ಲಿ ನಿನ್ನ ಸೈನಿಕರು ಆಸಕ್ತರಾಗಿರುವಾಗಲೇ ಸೂರ್ಯನು ಅಸ್ತಾಚಲವನ್ನು ಸೇರಿದ.

ತಮಸಾ ಚ ಮಹಾರಾಜ ರಜಸಾ ಚ ವಿಶೇಷತಃ ।
ನ ಕಿಂಚಿತ್ ಪ್ರತ್ಯಪಶ್ಯಾಮ ಶುಭಂ ವಾ ಯದಿ ವಾऽಶುಭಮ್ ॥೩೭॥

ಮಹಾರಾಜ, ಕತ್ತಲಿನಿಂದಲೂ, ವಿಶೇಷವಾಗಿ ಧೂಳಿನಿಂದಲೂ ಶುಭವಾಗಲಿ ಅಶುಭವಾಗಲಿ ಒಂದೂ ಕೂಡ ನಮಗೆ ಕಾಣಿಸದಾಯಿತು.

ತೇ ತ್ರಸ್ಯಂತೋ ಮಹೇಷ್ವಾಸಾ ರಾತ್ರಿಯುದ್ಧಸ್ಯ ಭಾರತ ।
ಅಪಯಾನಂ ತತಶ್ಚಕ್ರುಃ ಸಹಿತಾಃ ಸರ್ವಯೋಧಿಭಿಃ ॥೩೮॥

ರಾಜನೆ, ಮಹಾಬಿಲ್ಲಾಳುಗಳು ರಾತ್ರಿಯುದ್ಧಕ್ಕೆ ಹೆದರಿ, ಎಲ್ಲ ಯೋಧರೊಂದಿಗೆ ಶಿಬಿರಗಳಿಗೆ ಹಿಂತಿರುಗಿದರು.

ಕೌರವೇಷ್ವಪಯಾತೇಷು ತದಾ ರಾಜನ್ ದಿನಕ್ಷಯೇ ।
ಜಯಂ ಸುಮನಸಃ ಪ್ರಾಪ್ಯ ಪಾರ್ಥಾಃ ಸ್ವಶಿಬಿರಂ ಯಯುಃ ॥೩೯॥

ರಾಜನೆ, ಹಗಲಿನ ಕೊನೆಯಲ್ಲಿ ಕೌರವರು ಹಿಂತಿರುಗಿದಾಗ, ಜಯ ಸಂಪಾದಿಸಿ ಹರ್ಷಚಿತ್ತರಾದ ಪಾಂಡವರು ತಮ್ಮ ಶಿಬಿರಗಳಿಗೆ ಹೋದರು.

ವಾದಿತ್ರಶಬ್ದೈರ್ವಿವಿಧೈಃ ಸಿಂಹನಾದ್ಯೈಃ ಸಗರ್ಜಿತೈಃ ।
ಪರಾನುಪಹಸಂತಶ್ಚ ಸ್ತುವಂತಶ್ಚಾಚ್ಯುತಾರ್ಜುನೌ ॥೪೦॥

ನಾನಾ ವಾದ್ಯಘೋಷ ಸಿಂಹನಾದ ಗರ್ಜನೆಗಳಿಂದ ಶತ್ರುಗಳನ್ನು ಅಪಹಾಸಗೈಯುತ್ತ, ಕೃಷ್ಣಾರ್ಜುನರನ್ನು ಹೊಗಳುತ್ತ ಶಿಬಿರಗಳನ್ನು ಸೇರಿದರು.

ಕೃತೇऽವಹಾರೇ ತೈರ್ವೀರೈಃ ಸೈನಿಕಾಃ ಸರ್ವ ಏವ ತೇ ।
ಆಶೀರ್ವಾಚಃ ಪಾಂಡವೇಷು ಪ್ರಾಯುಂಜಂತ ನರೇಶ್ವರಾಃ ॥೪೧॥

ವೀರಪಾಂಡವರು ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡಾಗ ನಿನ್ನ ಸೈನಿಕರೆಲ್ಲರೂ ರಾಜರೂ ಕೂಡ ಪಾಂಡವರನ್ನು ಹರಸಿದರು.

ತತಃ ಕೃತೇऽವಹಾರೇ ಚ ಪ್ರಹೃಷ್ಟಾಸ್ತತ್ರ ಪಾಂಡವಾಃ ।
ನಿಶಾಯಾಂ ಶಿಬಿರಂ ಗತ್ವಾ ನ್ಯವಸಂತ ನರೇಶ್ವರಾಃ ॥೪೨॥

ಪಾಂಡವರ ಕಡೆಯವರು ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು ಹರ್ಷಗೊಂಡು ಶಿಬಿರವನ್ನು ಸೇರಿ ರಾತ್ರಿಯಲ್ಲಿ ಸುಖವಾಗಿ ವಾಸಮಾಡಿದರು.

ತತೋ ರಕ್ಷಃಪಿಶಾಚಾಶ್ಚ ಶ್ವಾಪದಾಶ್ಚೈವ ಸಂಘಶಃ ।
ಜಗ್ಮುರಾಯೋಧನಂ ಘೋರಂ ರುದ್ರಸ್ಯಾಕ್ರೀಡಸನ್ನಿಭಮ್ ॥೪೩॥

ರಾಕ್ಷಸ ಪಿಶಾಚಗಳೂ ಹಿಂಸ್ರಪ್ರಾಣಿಗಳೂ ಗುಂಪುಗುಂಪಾಗಿ ರುದ್ರವಿಹಾರ ಸ್ಥಳವಾದ ಸ್ಮಶಾನದಂತೆ ಭೀಕರವಾದ ರಣಭೂಮಿಯನ್ನು ಪ್ರವೇಶಿಸಿದುವು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ತ್ರಿಂಶೋऽಧ್ಯಾಯಃ ॥೩೦॥

❖

ಮಹಾಭಾರತತಾತ್ಪರ್ಯನಿರ್ಣಯ

ಪರಾಜಿತಃ ಸಂಯತಿ ಸೂರ್ಯಸೂನುಃ
ಸುತೇನ ಶಕ್ರಸ್ಯ ಸ ಧಾರ್ತರಾಷ್ಟ್ರಮ್ ।
ಜಗಾದ ಬಾಹುಂ ಪ್ರತಿಗೃಹ್ಯ ಪಾರ್ಥೋ
ಜಿಗಾಯ ಮಾಮನ್ಯಮನಸ್ಕಮಾಜೌ ॥೨೩॥

ಕಾಮಂ ರಥೋ ಮೇ ಧನುರಪ್ಯಭೇದ್ಯಂ
ದತ್ತಂ ಭೃಗೂಣಾಮಧಿಪೇನ ದಿವ್ಯಮ್ ।
ಯಂತಾ ನ ತಾದೃಙ್ ಮಮ ಯಾದೃಶೋ ಹರಿಃ
ಶಲ್ಯೋ ಯದಿ ಸ್ಯಾತ್ ತ್ವದರಿಂ ನಿಹನ್ಯಾಮ್ ॥೨೪॥

ಯುದ್ಧದಲ್ಲಿ ಅರ್ಜುನನಿಂದ ಪರಾಜಿತನಾದ ಕರ್ಣ ದುರ್ಯೋಧನನ ಕೈಹಿಡಿದು ಹೇಳಿದ, 'ನನ್ನ ಲಕ್ಷ್ಯ ಬೇರೆ ಕಡೆ ಇದ್ದಾಗ ಅರ್ಜುನ ನನ್ನನ್ನು ಪರಾಭವಗೊಳಿಸಿದ. ಪರಶುರಾಮ ನನಗೆ ಯಥೇಚ್ಛವಾಗಿ ರಥವನ್ನೂ ದಿವ್ಯವೂ ಅಭೇದ್ಯವೂ ಆದ ಧನುಸ್ಸನ್ನೂ ಕೊಟ್ಟಿದ್ದಾನೆ. ಆದರೂ ನನಗೆ ಕೃಷ್ಣನಂಥ ಸಾರಥಿ ಇಲ್ಲ. ಶಲ್ಯ ನನಗೆ ಸಾರಥಿಯಾದರೆ ನಾನು ನಿನ್ನ ಶತ್ರುವನ್ನು ನಿಶ್ಚಯವಾಗಿ ಕೊಲ್ಲಬಲ್ಲೆ.'

❖

ಮೂವತ್ತೊಂದನೆಯ ಅಧ್ಯಾಯ

ಶಲ್ಯಸಾರಥ್ಯಕ್ಕೆ ಕರ್ಣನ ಒತ್ತಾಯ.

ಧೃತರಾಷ್ಟ್ರಃ

ಸ್ವೇನ ಚ್ಛಂದೇನ ನಃ ಸರ್ವಾನವಧೀದ್ವ್ಯಕ್ತಮರ್ಜುನಃ ।
ನ ಹ್ಯಸ್ಯ ಸಮರೇ ಮುಚ್ಯೇದಂತಕೋಽಪ್ಯಾತತಾಯಿನಃ ॥೧॥

ಧೃತರಾಷ್ಟ್ರನು ಸಂಜಯನಿಗೆ ಹೇಳುತ್ತಾನೆ— ಅರ್ಜುನನು ಸ್ವಚ್ಛಂದವಾಗಿ ನಮ್ಮ ಎಲ್ಲ ಸೈನಿಕರನ್ನೂ ವ್ಯಕ್ತವಾಗಿ ಸಂಹರಿಸಿದ. ಅರ್ಜುನ ಶಸ್ತ್ರಹಿಡಿದು ಇದಿರಿಗೆ ಬಂದರೆ ಯುದ್ಧದಲ್ಲಿ ಅವನಿಂದ ಯಮನೂ ತಪ್ಪಿಸಿಕೊಳ್ಳಲಾರ.

ಪಾಥೋ೯ ಹ್ಯೇಕೋಽಹರದ್ ಭದ್ರಾಮೇಕಶ್ಚಾಗ್ನಿಮತರ್ಪಯತ್ ।
ಏಕಶ್ಚೇಮಾಂ ಮಹೀಂ ಜಿತ್ವಾ ಚಕ್ರೇ ಬಲಿಭೃತೋ ನೃಪಾನ್ ॥೨॥

ಅರ್ಜುನ ಏಕಾಕಿಯಾಗಿ ಸುಭದ್ರೆಯನ್ನು ಹರಣ ಮಾಡಿದ. ಒಬ್ಬನೇ ಖಾಂಡವದಲ್ಲಿ ಅಗ್ನಿಯನ್ನು ತೃಪ್ತಿಪಡಿಸಿದ. ಒಬ್ಬನೇ ಭೂಮಿಯನ್ನು ಗೆದ್ದು ರಾಜರನ್ನು ಯುಧಿಷ್ಠಿರನಿಗೆ ಕಪ್ಪಕೊಡುವಂತೆ ಮಾಡಿದ.

ಏಕೋ ನಿವಾತಕವಚಾನ್ ಅಹನದ್ ದಿವ್ಯಕಾರ್ಮುಕಃ ।
ಏಕಃ ಕಿರಾತರೂಪೇಣ ಸ್ಥಿತಂ ಶರ್ವಮಯೋಧಯತ್ ॥೩॥

ಅರ್ಜುನ ದಿವ್ಯಧನುಸ್ಸನ್ನು ಹಿಡಿದು ಏಕಾಕಿಯಾಗಿ ನಿವಾತಕವಚರನ್ನು ವಧಿಸಿದ. ಒಬ್ಬನೇ ಕಿರಾತರೂಪದಿಂದ ನಿಂತ ಈಶ್ವರನೊಡನೆ ಯುದ್ಧ ಮಾಡಿದ.

ಏಕೋ ಹ್ಯರಕ್ಷದ್ ಭರತಾನೇಕೋ ಭವಮತೋಷಯತ್ ।
ತೇನೈಕೇನ ಜಿತಾಃ ಸರ್ವೇ ಮದೀಯಾ ಹ್ಯುಗ್ರತೇಜಸಃ ॥೪॥

ಅರ್ಜುನನೊಬ್ಬನೇ ಘೋಷಯಾತ್ರೆಯಲ್ಲಿ ಕೌರವರನ್ನು ಗಂಧರ್ವರಿಂದ ರಕ್ಷಿಸಿದ. ಒಬ್ಬನೇ ಯುದ್ಧದಿಂದ ಈಶ್ವರನನ್ನು ಸಂತೋಷಗೊಳಿಸಿದ. ಅವನೇ ಈಗ ಉಗ್ರಪರಾಕ್ರಮದಿಂದ ಒಬ್ಬನೇ ನನ್ನವರೆಲ್ಲರನ್ನೂ ಪರಾಭವಗೊಳಿಸಿದ್ದಾನೆ.

ನ ತೇ ನಿಂದ್ಯಾಃ ಪ್ರಶಸ್ಯಾಸ್ತೇ ಯತ್ತೇ ಚಕ್ರುರ್ಬ್ರವೀಹಿ ತತ್ ।
ತತೋ ದುರ್ಯೋಧನಃ ಸೂತ ಪಶ್ಚಾತ್ ಕಿಮಕರೋತ್ ತದಾ ॥೫॥

ಅದರಿಂದ ನನ್ನವರನ್ನು ಕೈಲಾಗದವರೆಂದು ನಿಂದಿಸುವಂತಿಲ್ಲ. ಮುಂದೆ ಅವರೇನು ಮಾಡಿದರು ಹೇಳು, ಸಂಜಯ, ಬಳಿಕ ದುರ್ಯೋಧನನೇನು ಮಾಡಿದ?

ಸಂಜಯಃ

ಹತಪ್ರವೀರಾ ವಿಧ್ವಸ್ತಾ ವಿವರ್ಮಾಯುಧವಾಹನಾಃ ।
ದೀನಸ್ವರಾ ದ್ರುಯಮಾನಾ ಮಾನಿನಃ ಶತ್ರುನಿರ್ಜಿತಾಃ ॥೬॥

ಶಿಬಿರಸ್ಥಾಃ ಪುನರ್ಮಂತ್ರಂ ಮಂತ್ರಯಂತಿ ಸ್ಮ ಕೌರವಾಃ ।
ಭಗ್ನದಂಷ್ಟ್ರಾ ಹತವಿಷಾಃ ಪಾದಾಕ್ರಾಂತಾ ಇವೋರಗಾಃ ॥೭॥

ಸಂಜಯ ನುಡಿದ— ಅಭಿಮಾನಿಗಳಾದ ಕೌರವರು ಶತ್ರುಗಳಿಗೆ ಸೋತು ತಮ್ಮ ವೀರಯೋಧರನ್ನು ಕಳೆದುಕೊಂಡು, ಕವಚ ಆಯುಧ ವಾಹನರಹಿತರಾಗಿ ದುಃಖಿತರಾದರು. ಹಲ್ಲುಕಿತ್ತು ವಿಷರಹಿತವಾಗಿ ಮಾಡಿ ಕಾಲಿಂದ ತುಳಿದ ಹಾವುಗಳಂತಾದರು. ಶಿಬಿರದಲ್ಲಿ ಕುಳಿತು ಪುನಃ ಮಂತ್ರಾಲೋಚನೆಗೈದರು.

ತಾನಬ್ರವೀತ್ ತತಃ ಕರ್ಣಃ ಕ್ರುದ್ಧಃ ಸರ್ಪ ಇವ ಶ್ವಸನ್ ।
ಕರಂ ಕರೇಣ ನಿಷ್ಪೀಡ್ಯ ಪ್ರೇಕ್ಷಮಾಣಸ್ತವಾತ್ಮಜಮ್ ॥೮॥

ಕರ್ಣನು ಕ್ರುದ್ಧನಾಗಿ ಕ್ರುದ್ಧವಾದ ಸರ್ಪದಂತೆ ಭುಸುಗುಟ್ಟುತ್ತ ಕೈಕೈ ಹಿಸುಕಿಕೊಂಡು ದುರ್ಯೋಧನನನ್ನು ನೋಡುತ್ತ ಅವರ ಮುಂದೆ ನುಡಿದ.

ಯತ್ತೋ ದೃಢಶ್ಚ ದಕ್ಷಶ್ಚ ಧೃತಿಮಾನರ್ಜುನಃ ಸದಾ ।
ಸಂಬೋಧಯತಿ ಚಾಪ್ಯೇನಂ ಯಥಾಕಾಲಮಧೋಕ್ಷಜಃ ॥೯॥

ಅರ್ಜುನ ಯತ್ನಶೀಲ, ದೃಢ, ದಕ್ಷ ಧೈರ್ಯಶಾಲಿಯೂ ಆಗಿದ್ದಾನೆ. ಜೊತೆಗೆ ಕೃಷ್ಣ ಅವನಿಗೆ ಸಮಯೋಚಿತವಾಗಿ ಯೋಗ್ಯ ಸಲಹೆಯನ್ನೂ ಕೊಡುತ್ತಾನೆ.

ಸಹಸಾಽಸ್ತ್ರವಿಸರ್ಗೇಣ ಕಥಂ ತೇನಾದ್ಯ ವಂಚಿತಾಃ ।
ಶ್ವಸ್ತ್ವಹಂ ತಸ್ಯ ಸಂಕಲ್ಪಂ ಸರ್ವಂ ಹಂತಾ ಮಹೀಪತೇ ॥೧೦॥

ಅಕಸ್ಮಾತ್ ಅಸ್ತ್ರಪ್ರಯೋಗದಿಂದ ಹೇಗೋ ಅವನು ಇಂದು ನಮ್ಮನ್ನು ಜಯದಿಂದ ವಂಚಿಸಿದ್ದಾನೆ. ರಾಜನೆ, ನಾಳೆ ಮಾತ್ರ ನಾನು ಅವನ ಎಲ್ಲ ಸಂಕಲ್ಪವನ್ನು ನಿರರ್ಥಗೊಳಿಸುತ್ತೇನೆ.

ಏವಮುಕ್ತಸ್ತಥೇತ್ಯುಕ್ತ್ವಾ ಸೋಽನುಜಜ್ಞೇ ನೃಪೋತ್ತಮಾನ್ ।
ತೇಽನುಜ್ಞಾತಾ ನೃಪಾಃ ಸರ್ವೇ ಸ್ವಾನಿ ವೇಶ್ಮಾನಿ ಭೇಜಿರೇ ॥೧೧॥

ಕರ್ಣ ಹೀಗೆ ಹೇಳಿ ರಾಜರನ್ನು ತಮ್ಮ ನಿವಾಸಗಳಿಗೆ ಹೋಗಲು ಅನುಮತಿ ನೀಡಿದ. ಅವರು ಹೊರಟುಹೋದರು.

ಸುಖೋಷಿತಾಸ್ತಾಂ ರಜನೀಂ ಹೃಷ್ಟಾ ಯುದ್ಧಾಯ ನಿರ್ಯಯುಃ ।
ತೇಽಪಶ್ಯನ್ ವಿಹಿತಂ ವ್ಯೂಹಂ ಧರ್ಮರಾಜೇನ ದುರ್ಜಯಮ್ ॥೧೨॥
ಪ್ರಯತ್ನಾತ್ ಕುರುಮುಖ್ಯೇನ ಬೃಹಸ್ಪತ್ಯುಶನೋಮತಾತ್ ॥೧೩॥

ಆ ರಾತ್ರಿಯನ್ನು ಸುಖವಾಗಿ ಕಳೆದು ಮರುದಿನ ಉತ್ಸಾಹದಿಂದ ಯುದ್ಧಕ್ಕೆ ಹೊರಟರು. ಅಲ್ಲಿ ಧರ್ಮರಾಜನು ಬೃಹಸ್ಪತಿ ಶುಕ್ರರ ಮತಾನುಸಾರವಾಗಿ ಪ್ರಯತ್ನಪೂರ್ವಕ ದುರ್ಜಯವಾದ ವ್ಯೂಹ ರಚಿಸಿದ್ದನ್ನು ಕಂಡರು.

ಅಥ ಪ್ರತೀಪಕರ್ತಾರಂ ಸತತಂ ವಿಜಯಾತ್ಮನಃ ।
ಸಸ್ಮಾರ ವೃಷಭಸ್ಕಂಧಂ ಕರ್ಣಂ ದುರ್ಯೋಧನಸ್ತದಾ ॥೧೪॥

ದುರ್ಯೋಧನನು ಆಗ ಅರ್ಜುನನ ಪ್ರಯತ್ನಕ್ಕೆ ಸತತ ವಿರೋಧವಾಗಿ ಯತ್ನಮಾಡುವ ವೃಷಭಸ್ಕಂಧನಾದ ಕರ್ಣನನ್ನು ನೆನೆದ.

ಪುರಂದರಸಮಂ ಯುದ್ಧೇ ಮರುದ್ಗಣಸಮಂ ಬಲೇ ।
ಕಾರ್ತವೀರ್ಯಸಮಂ ವೀರ್ಯೇ ಕರ್ಣಂ ರಾಜ್ಞೋಽಗಮನ್ಮನಃ ॥೧೫॥

ಯುದ್ಧದಲ್ಲಿ ಇಂದ್ರನಿಗೆ ಸಮಾನ, ಬಲದಲ್ಲಿ ಮರುದ್ಗಣದವರಿಗೆ ಸಮಾನ, ವೀರ್ಯದಲ್ಲಿ ಕಾರ್ತವೀರ್ಯನಿಗೆ ಸಮಾನನೆನಿಸಿದ ಕರ್ಣನನ್ನು ರಾಜಾ ದುರ್ಯೋಧನ ನೆನೆದ.

ಸರ್ವೇಷಾಂ ಚೈವ ಸೈನ್ಯಾನಾಂ ಕರ್ಣಮೇವಾಗಮನ್ಮನಃ ।
ಸೂತಪುತ್ರಂ ಮಹೇಷ್ವಾಸಂ ಬಂಧುಮಾತ್ಯಂತಿಕೇಷ್ವಿವ ॥೧೬॥

ಎಲ್ಲ ಸೈನಿಕರೂ ಕೂಡ ಆಪತ್ಕಾಲದಲ್ಲಿ ಬಂಧುವನ್ನು ನೆನೆಯುವಂತೆ ರಣರಂಗದಲ್ಲಿ ಮಹಾಬಿಲ್ಲಾರನಾದ ಕರ್ಣನನ್ನೇ ನೆನೆದರು.

ಧೃತರಾಷ್ಟ್ರಃ

ಯದ್ಧೋಽಗಮನ್ಮನೋ ಮಂದಾಃ ಕರ್ಣಂ ವೈಕರ್ತನಂ ಪ್ರತಿ ॥೧೭॥
ಅಪ್ಯಪಶ್ಯತ ರಾಧೇಯಂ ಶೀತಾರ್ತಾ ಇವ ಭಾಸ್ಕರಮ್ ।
ಕೃತೇಽವಹಾರೇ ಸೈನ್ಯಾನಾಂ ಪ್ರವೃತ್ತೇ ಚ ರಣೇ ಪುನಃ ॥೧೮॥

ದುರ್ಯೋಧನಂ ಚ ತತ್ರಾಜೌ ಪಾಂಡವೇನ ಭೃಶಾರ್ದಿತಮ್ ।
ಪರಾಕ್ರಾಂತಾನ್ ಪಾಂಡುಸುತಾನ್ ದೃಷ್ಟ್ವಾ ಪಿ ಚ ಮಹಾರಣೇ ॥೧೯॥

ಧೃತರಾಷ್ಟ್ರ ಸಂಜಯನನ್ನು ಕೇಳಿದ— ಮೂರ್ಖರೆ, ಕರ್ಣನನ್ನೇಕೆ ನೆನೆದಿರಿ? ಚಳಿಯಿಂದ ನಡುಗುವವರು ಸೂರ್ಯನ ಕಡೆಗೆ ನೋಡುವಂತೆ ನೀವು ಕರ್ಣನನ್ನು ಹಿಂದೆ ನೋಡಿರುವಿರಿ ತಾನೆ? ಸೈನ್ಯವನ್ನು ಹಿಂದೆ ಕರೆಸಿಕೊಂಡ ಬಳಿಕ ಪುನಃ ಯುದ್ಧ ನಡೆದಾಗ ಆ ಯುದ್ಧದಲ್ಲಿ ಯುಧಿಷ್ಠಿರನಿಂದ ಬಹಳ ಪೀಡಿತನಾದ ದುರ್ಯೋಧನನನ್ನೂ ಪರಾಕ್ರಮ ತೋರಿದ ಪಾಂಡವರನ್ನೂ ಮಹಾರಣದಲ್ಲಿ ನೋಡಿದ ಬಳಿಕವೂ ಈಗ ಏಕೆ ಪುನಃ ಕರ್ಣನನ್ನು ನೆನೆದಿರಿ?

ಕಥಂ ವೈಕರ್ತನಃ ಕರ್ಣಸ್ತತ್ರಾಯುಧ್ಯತ ಸಂಜಯ ।
ಕಥಂ ಚ ಪಾಂಡವಾಃ ಸರ್ವೇ ಯುಯುಧುಸ್ತತ್ರ ಸೂತಜಮ್ ॥೨೦॥

ಸಂಜಯ, ಕರ್ಣನು ಹೇಗೆ ಯುದ್ಧಮಾಡಿದ? ಪಾಂಡವರು ಅವನೊಡನೆ ಹೇಗೆ ಯುದ್ಧ ಮಾಡಿದರು?

ಕರ್ಣೋ ಹ್ಯೇಕೋ ಮಹಾಬಾಹುರ್ಹನ್ಯಾತ್ ಪಾರ್ಥಾನ್
ಸಸೃಂಜಯಾನ್ ।
ಕರ್ಣಸ್ಯ ಭುಜಯೋರ್ವೀರ್ಯಂ ಶಕ್ರವಿಷ್ಣುಸಮಂ ಯುಧಿ ॥೨೧॥

ತಸ್ಯ ಶಸ್ತ್ರಾಣಿ ಘೋರಾಣಿ ವಿಕ್ರಮಶ್ಚ ಮಹಾತ್ಮನಃ ।
ಕರ್ಣಮಾಶ್ರಿತ್ಯ ಸಂಗ್ರಾಮೇ ಮತ್ತೋ ದುರ್ಯೋಧನೋ ನೃಪಃ ॥೨೨॥
ಜೇತುಮುತ್ಸಹತೇ ಪಾರ್ಥಾನ್ ಸಪುತ್ರಾನ್ ಸಹಕೇಶವಾನ್ ॥೨೩॥

'ಕರ್ಣನೊಬ್ಬನೇ ಮಹಾಬಾಹು. ಪಾಂಡವರನ್ನೂ ಸೃಂಜಯರನ್ನೂ ಕೊಲ್ಲಬಲ್ಲ. ಕರ್ಣನ ಬಾಹುಬಲವು ಯುದ್ಧದಲ್ಲಿ ಇಂದ್ರ, ಉಪೇಂದ್ರರಿಗೆ ಸಮ. ಅವನ ಶಸ್ತ್ರಗಳು ಘೋರ. ಮಹಾತ್ಮನಾದ ಅವನ ಪರಾಕ್ರಮವೂ ಘೋರ.' ಎಂದುಕೊಂಡು ರಾಜಾ ದುರ್ಯೋಧನ ಹುಚ್ಚನಾಗಿ ಯುದ್ಧದಲ್ಲಿ ಕರ್ಣನ ಸಹಾಯದಿಂದ ಪಾಂಡವರನ್ನೂ ಅವರ ಪುತ್ರರನ್ನೂ ಕೃಷ್ಣನನ್ನೂ ಪರಾಭವ ಗೊಳಿಸಲು ಹೊರಡುತ್ತಿದ್ದಾನೆ!

ಯಃ ಸೌಬಲಂ ತಥಾ ತಾತ ನೀತಿಮಾನಿತಿ ಮನ್ಯತೇ ।
ಕರ್ಣಂ ಚಾಪ್ರತಿಮಂ ಯುದ್ಧೇ ದೇವೈರಪಿ ದುರುತ್ಸಹಮ್ ॥೨೪॥

ಮನ್ಯತೇऽಭ್ಯಧಿಕಂ ಪಾರ್ಥಾದೇವಂ ಚಾಸ್ಯ ಹೃದಿ ಸ್ಥಿತಮ್ ।
ವಿಜೇಷ್ಯತಿ ರಣೇ ಕರ್ಣ ಏಕಃ ಪಾರ್ಥಾನ್ ಸಸೋಮಕಾನ್ ॥೨೫॥

ಮಮ ಚೈವ ಸದಾ ಮಂದಃ ಶಂಸತೇ ನಿತ್ಯಮಗ್ರತಃ ॥೨೬॥

ಸಂಜಯ, ದುರ್ಯೋಧನನು ಶಕುನಿಯನ್ನು ನೀತಿಜ್ಞನೆಂದು ತಿಳಿಯುತ್ತಾನೆ! 'ಕರ್ಣನನ್ನು ಯುದ್ಧದಲ್ಲಿ ಅಪ್ರತಿಮ, ದೇವತೆಗಳಿಗೂ ಅಜೇಯ, ಪಾರ್ಥನಿಗಿಂತ ಹೆಚ್ಚು ಎಂದು ತಿಳಿಯುತ್ತಾನೆ!' 'ಕರ್ಣನೊಬ್ಬನೆ ರಣದಲ್ಲಿ ಪಾರ್ಥರನ್ನೂ ಸೋಮಕರನ್ನೂ ಗೆಲ್ಲುತ್ತಾನೆ' ಎನ್ನುತ್ತಾನೆ! ಮೂರ್ಖ, ನನ್ನ ಮುಂದೆಯೂ ಸದಾ ಹೀಗೆ ಹೇಳುತ್ತಿರುತ್ತಾನೆ!

ಅಹೋ ಬತ ಮಹದ್ ದುಃಖಂ ಯತ್ರ ಪಾಂಡುಸುತಾನ್ ರಣೇ ।
ನಾತರದ್ ರಭಸಃ ಕರ್ಣೋ ದೈವಂ ನೂನಂ ಪರಾಯಣಮ್ ॥೨೭॥

ಅಯ್ಯೋ! ಮಹಾದುಃಖ ಪ್ರಾಪ್ತವಾಗಿದೆ! ಯುದ್ಧದಲ್ಲಿ ಪಾಂಡವರನ್ನು ಮಹಾವೇಗಶಾಲಿ ಕರ್ಣ ಗೆಲ್ಲಲಾರದೆ ಹೋಗಿದ್ದಾನೆ! ನಿಶ್ಚಯವಾಗಿಯೂ ದೈವಬಲವೇ ಬಲ!

ಅಹೋ ದ್ಯೂತಸ್ಯ ನಿಷ್ಠೇಯಂ ಘೋರಾ ಸಂಪ್ರತಿ ವರ್ತತೇ ॥೨೮॥

ಅಯ್ಯೋ! ಜೂಜನ್ನು ನಂಬಿದ್ದರ ಪರಿಣಾಮವಿದೊ ಘೋರವಾಗಿದೆ!

ಅಹೋ ತೀವ್ರಾಣಿ ದುಃಖಾನಿ ದುರ್ಯೋಧನಕೃತಾನ್ಯಹಮ್ ।
ಸೋಢಾ ಘೋರಾಣಿ ಬಹುಶಃ ಶಲ್ಯಭೂತಾನಿ ಸಂಜಯ ॥೨೯॥

ಅಯ್ಯೋ! ದುರ್ಯೋಧನನು ಹುಟ್ಟುಹಾಕಿದ ತೀವ್ರದುಃಖಗಳನ್ನು ನಾನು ಈಗ ಸಹಿಸಿಕೊಳ್ಳಬೇಕಾಗಿದೆ. ಅವು ಬಹಳವಾಗಿವೆ, ಎದೆಯಲ್ಲಿ ಶೂಲದಂತೆ ನಾಟಿವೆ.

ಸೌಬಲಂ ಚ ತದಾ ತಾತ ನೀತಿಮಾನಿತಿ ಮನ್ಯತೇ ।
ಕರ್ಣಶ್ಚ ರಭಸೋ ನಿತ್ಯಂ ರಾಜಾ ತಂ ಚಾಪ್ಯನುವ್ರತಃ ॥೩೦॥

ಆಗ ದುರ್ಯೋಧನ ಜೂಜಿನ ವಿಷಯದಲ್ಲಿ ಶಕುನಿಯೇ ನೀತಿಜ್ಞನೆಂದು ಭ್ರಮಿಸಿದ್ದ. ಕರ್ಣನೂ ರಥದಲ್ಲಿ ವೇಗಶಾಲಿ ಎಂದು ನಂಬಿದ್ದ. ಅದರಿಂದ ಸದಾ ಅವನನ್ನೇ ಆಶ್ರಯಿಸಿದ.

ಯದೇವಂ ವರ್ತಮಾನೇಷು ಮಹಾಯುದ್ಧೇಷು ಸಂಜಯ ।
ಅಶ್ರೌಷಂ ನಿಹತಾನ್ ಪುತ್ರಾನ್ನಿತ್ಯಮೇವ ವಿನಿರ್ಜಿತಾನ್ ॥೩೧॥

ಸಂಜಯ, ಹೀಗಾಗಿ ಈಗ ನಡೆಯುತ್ತಿರುವ ಮಹಾಯುದ್ಧಗಳಲ್ಲಿ ನನ್ನ ಪುತ್ರರು ಸೋಲುತ್ತಿರುವುದನ್ನೇ ಹತರಾಗುತ್ತಿರುವುದನ್ನೇ ಪ್ರತಿದಿನವೂ ಕೇಳುತ್ತಿದ್ದೇನೆ.

ನ ಪಾಂಡವಾನಾಂ ಸಮರೇ ಕಶ್ಚಿದಸ್ತಿ ನಿವಾರಕಃ ।
ಸ್ತ್ರೀಮಧ್ಯಮಿವ ಗಾಹಂತೇ ದೈವಂ ತು ಬಲವತ್ತರಮ್ ॥೩೨॥

ಯುದ್ಧದಲ್ಲಿ ಪಾಂಡವರನ್ನು ತಡೆಯುವವರು ಯಾರೂ ಇಲ್ಲ. ಅವರು ನಮ್ಮ ಸೈನ್ಯದ ಮಧ್ಯಕ್ಕೆ ಸ್ತ್ರೀಯರ ಮಧ್ಯಕ್ಕೆ ಹೋಗುವಂತೆ ನುಗ್ಗಿ ಹೋಗುತ್ತಾರೆ! ದೈವವೆ ಎಲ್ಲಕ್ಕಿಂತ ಪ್ರಬಲ.

ಸಂಜಯಃ

ರಾಜನ್ ಪೂರ್ವನಿಮಿತ್ತಾನಿ ಧರ್ಮಿಷ್ಠಾನಿ ವಿಚಿಂತಯ ॥೩೩॥

ಸಂಜಯ ನುಡಿದ— ರಾಜನೆ, ಹಿಂದಿನ ಜೂಜು ಮುಂತಾದ ನಿಮಿತ್ತಗಳು ಧರ್ಮಸಮ್ಮತವಾಗಿದ್ದುವೆ? ಆಲೋಚಿಸು. ದೈವವನ್ನು ಹಳಿಯಬೇಡ.

ಅತಿಕ್ರಾತಂ ಹಿ ಯತ್ಕಾರ್ಯಂ ಪಶ್ಚಾಚ್ಚಿಂತಯತೇ ನರಃ ।
ತಚ್ಚಾಸ್ಯ ನ ಭವೇತ್ ಕಾರ್ಯಂ ಚಿಂತಯಾ ಚ ವಿನಶ್ಯತಿ ॥೩೪॥

ಹಿಂದೆ ನಡೆದ ಅಚಾತುರ್ಯದ ಕೃತ್ಯವನ್ನು ಮಾನವನು ಮತ್ತೆ ಚಿಂತಿಸಿದರೆ ಅದರಿಂದ ಅವನಿಗೇನೂ ಪ್ರಯೋಜಜನವಾಗುವುದಿಲ್ಲ. ಚಿಂತೆ ಮಾಡಿದರೂ ವಿನಾಶ ತಪ್ಪುವುದಿಲ್ಲ.

ತದಿದಂ ತವ ಕಾರ್ಯಂ ತು ದೂರಪ್ರಾಪ್ತಂ ವಿಜಾನತಃ ।
ನ ಕೃತಂ ಯತ್ತ್ವಯಾ ಪೂರ್ವಂ ಪ್ರಾಪ್ತಾಪ್ರಾಪ್ತವಿಚಾರಣಮ್ ॥೩೫॥

ತಿಳಿದೂ ತಿಳಿದೂ ನೀನು ಮಾಡಿದ್ದ ಅಕೃತ್ಯ ಇಂದು ಹಿಂತಿರುಗಿ ಬರಲಾಗದಷ್ಟು ದೂರಹೋಗಿಬಿಟ್ಟಿದೆ. ಅದನ್ನು ಈಗ ಸರಿಪಡಿಸಲಾಗದು. ಹಿಂದೆಯೇ ಅದನ್ನು 'ಪ್ರಾಪ್ತವಾಗುವುದೆ? ಅಪ್ರಾಪ್ತವಾಗುವುದೇ?' ಎಂದು ವಿಚಾರಣೆ ಮಾಡಬೇಕಿತ್ತು. ನೀನು ಮಾಡಲಿಲ್ಲ.

ಉಕ್ತೋಽಸಿ ಬಹುಧಾ ರಾಜನ್ ಮಾ ಯುಧ್ಯಸ್ವೇತಿ ಪಾಂಡವೈಃ ।
ನ ಚ ತತ್ತ್ವಗ್ರಹೀದ್ದ್ವೇಷಾತ್ ಪಾಂಡವೇಷು ವಿಶಾಂಪತೇ ॥೩೬॥

ರಾಜನೆ, ಯುದ್ಧ ಬೇಡವೆಂದು ಪಾಂಡವರು ಬಹುಬಾರಿ ಹೇಳಿದ್ದರು. ಪಾಂಡವರ ಮೇಲಿನ ದ್ವೇಷದಿಂದ ನೀನು ಅದನ್ನು ಕೇಳಲಿಲ್ಲ.

ತ್ವಯಾ ಪಾಪಾನಿ ಘೋರಾಣಿ ಸಮಾಚೀರ್ಣಾನಿ ಪಾಂಡುಷು ।
ತತ್ಕೃತೇ ವರ್ತತೇ ಘೋರಃ ಪಾರ್ಥಿವಾನಾಂ ಜನಕ್ಷಯಃ ॥೩೭॥

ಪಾಂಡವರಲ್ಲಿ ನೀನು ಘೋರ ಪಾಪಕೃತ್ಯಗಳನ್ನು ಮಾಡಿರುವೆ. ನಿನ್ನ ಸಲುವಾಗಿ ಈಗ ರಾಜರಿಗೆ ಘೋರ ಜನಕ್ಷಯ ಬಂದೊದಗಿದೆ.

ತತ್ತ್ವದಾನೀಮತಿಕ್ರಾಂತಂ ಮಾ ಶುಚೋ ಭರತರ್ಷಭ ।
ಶೃಣು ಸರ್ವಂ ಯಥಾವೃತ್ತಂ ಘೋರಂ ವೈಶಸಮುಚ್ಯತೇ ॥೩೮॥

ರಾಜನೆ, ಹಿಂದೆ ಆಗಿಹೋದುದಕ್ಕೆ ಈಗ ಶೋಕಿಸಬೇಡ. ಘೋರವಾದ ವಿನಾಶಕಾರ್ಯವನ್ನೆಲ್ಲವನ್ನೂ ಅದು ನಡೆದಂತೆಯೇ ಹೇಳುತ್ತೇನೆ, ಕೇಳು.

ಪ್ರಭಾತಾಯಾಂ ರಜನ್ಯಾಂ ತು ಕರ್ಣೋ ರಾಜಾನಮಭ್ಯಯಾತ್ ।
ಸಮೇತ್ಯ ಚ ಮಹಾಬಾಹುರ್ದುರ್ಯೋಧನಮಥಾಬ್ರವೀತ್ ॥೩೯॥

ರಾತ್ರಿ ಬೆಳಗಾದಾಗ ಮಹಾಬಾಹು ಕರ್ಣ ರಾಜಾ ದುರ್ಯೋಧನನ ಬಳಿಗೆ ಬಂದು ಹೇಳಿದ.

ಕರ್ಣಃ

ಅದ್ಯ ರಾಜನ್ ಸಮೇಷ್ಯಾಮಿ ಪಾಂಡವೇನ ಯಶಸ್ವಿನಾ ।
ನಿಹನಿಷ್ಯಾಮಿ ತಂ ವೀರಂ ಸ ವಾ ಮಾಂ ನಿಹನಿಷ್ಯತಿ ॥೪೦॥

ಕರ್ಣ ನುಡಿದ— ರಾಜನೆ, ಇಂದು ಯಶಸ್ವಿಯಾದ ಅರ್ಜುನನೊಡನೆ ಹೋರಾಡುವೆನು. ನಾನು ಅವನನ್ನು ಕೊಲ್ಲುತ್ತೇನೆ ಅಥವಾ ಅವನು ನನ್ನನ್ನು ಕೊಲ್ಲುತ್ತಾನೆ.

ಬಹುತ್ವಾನ್ಮಮ ಕಾರ್ಯಾಣಾಂ ತಥಾ ಪಾರ್ಥಸ್ಯ ಭಾರತ ।
ನಾಭೂತ್ಸಮಾಗಮೋ ರಾಜನ್ ಮಮ ಚೈವಾರ್ಜುನಸ್ಯ ಚ ॥೪೧॥

ರಾಜನೆ, ಪಾಂಚಾಲ ಸೃಂಜಯಾದಿ ನಿಗ್ರಹರೂಪವಾದ ಕಾರ್ಯಗಳು ನನಗೂ ಸಂಶಪ್ತಕವಧಾದಿರೂಪಕಾರ್ಯಗಳು ಅರ್ಜುನನಿಗೂ ಬಹಳ ಇದ್ದಿದ್ದರಿಂದ ನಮ್ಮಿಬ್ಬರ ಸಮಾಗಮ ಸರಿಯಾಗಿ ಆಗಿರಲಿಲ್ಲ.

ಇದಂ ತು ಮೇ ಮಹಾರಾಜ ಶೃಣು ವಾಕ್ಯಂ ವಿಶಾಂಪತೇ ।
ಅನಿಹತ್ಯ ರಣೇ ಪಾರ್ಥಂ ನಾಹಮೇಷ್ಯಾಮಿ ಭಾರತ ॥೪೨॥

ರಾಜನೆ, ನನ್ನ ಈ ಒಂದು ಮಾತನ್ನು ಕೇಳು. ಯುದ್ಧದಲ್ಲಿ ಅರ್ಜುನನನ್ನು ಕೊಲ್ಲದೆ ನಾನು ಹಿಂತಿರುಗಿ ಬರುವುದಿಲ್ಲ.

ಹತಪ್ರವೀರೇ ಸೈನ್ಯೇಽಸ್ಮಿನ್ ಮಯಿ ಚಾವಸ್ಥಿತೇ ಯುಧಿ ।
ಅಭಿಯಾಸ್ಯತಿ ಮಾಂ ಪಾರ್ಥಃ ಶಕ್ರಶಕ್ತಿವಿನಾಕೃತಮ್ ॥೪೩॥

ನಮ್ಮ ಈ ಸೈನ್ಯದಲ್ಲಿ ಪ್ರಧಾನವೀರರು ಎಲ್ಲರೂ ಹತರಾಗಿದ್ದಾರೆ. ನಾನೊಬ್ಬನೆ ಈಗ ಇದ್ದೇನೆ. ಮತ್ತು ನನ್ನಲ್ಲಿ ಇಂದ್ರನು ಕೊಟ್ಟ ಶಕ್ತಿ ಇರುವುದಿಲ್ಲ. ಆದರಿಂದ ಅರ್ಜುನ ನನ್ನನ್ನೇ ಇದಿರಿಸುತ್ತಾನೆ.

ತತ್ರ ಶ್ರೇಯಸ್ಕರಂ ಯಚ್ಚ ತನ್ನಿಬೋಧ ಜನೇಶ್ವರ ।
ಆಯುಧಾನಾಂ ಚ ಮೇ ವೀರ್ಯಂ ದಿವ್ಯಾನಾಮರ್ಜುನಸ್ಯ ಚ ॥೪೪॥

ನನ್ನ ಮತ್ತು ನನ್ನ ಆಯುಧಗಳ ಬಲ ಹಾಗೂ ಅರ್ಜುನ ಮತ್ತು ಅವನ ಆಯುಧಗಳ ಬಲ, ಇವುಗಳಲ್ಲಿ ಯಾವುದು ಹೆಚ್ಚು ಕಾರ್ಯಕಾರಿ ಎಂಬುದನ್ನು ನೀನು ಆಲೋಚಿಸು.

ಕಾಯಸ್ಯ ಮಹತೋ ಭೇದೇ ಲಾಘವೇ ದೂರಪಾತನೇ ।
ಸೌಷ್ಠವೇ ಚಾಸ್ತ್ರವೀರ್ಯೇ ಚ ಸವ್ಯಸಾಚೀ ನ ಮತ್ಸಮಃ ॥೪೫॥

ದೊಡ್ಡ ಆನೆಗಳಂಥ ಶರೀರಭೇದನದಲ್ಲಿ ಕೈಚಳಕದಲ್ಲಿ ದೂರಕ್ಕೆ ಶಸ್ತ್ರ ಎಸೆಯುವುದರಲ್ಲಿ ಅಸ್ತ್ರಕೌಶಲದಲ್ಲಿ ಅಸ್ತ್ರಬಲದಲ್ಲಿ ಸವ್ಯಸಾಚಿಯು ನನಗೆ ಸಮನಲ್ಲ.

ಪ್ರಾಣೇ ಶೌರ್ಯೇऽಥ ವಿಜ್ಞಾನೇ ವಿಕ್ರಮೇ ಚಾಪಿ ಭಾರತ ।
ನಿಮಿತ್ತಜ್ಞಾನಯೋಗೇ ಚ ಸವ್ಯಸಾಚೀ ನ ಮತ್ಸಮಃ ॥೪೬॥

ಶರೀರಬಲ, ಶೌರ್ಯ, ಅಸ್ತ್ರಜ್ಞಾನ, ಪರಾಕ್ರಮ, ಲಕ್ಷ್ಯಭೇದಜ್ಞಾನಯೋಗ ಇವುಗಳಲ್ಲಿ ಸವ್ಯಸಾಚಿ ನನಗೆ ಸಾಟಿಯಲ್ಲ.

ಸರ್ವಾಯುಧಮಹಾಮಾತ್ರಂ ವಿಜಯಂ ನಾಮ ತದ್ಧನುಃ ।
ಇಂದ್ರಾರ್ಥಂ ಪ್ರಿಯಕಾಮೇನ ನಿರ್ಮಿತಂ ವಿಶ್ವಕರ್ಮಣಾ ॥೪೭॥

ಎಲ್ಲ ಆಯುಧಗಳಲ್ಲಿ ಶ್ರೇಷ್ಠ ವಿಜಯ ಎಂಬ ಧನುಸ್ಸು. ಅದು ಇಂದ್ರನಿಗಾಗಿ ಅವನಿಗೆ ಪ್ರಿಯವನ್ನುಂಟು ಮಾಡುವ ಬಯಕೆಯಿಂದ ವಿಶ್ವಕರ್ಮ ನಿರ್ಮಿಸಿದುದು.

ಯೇನ ದೈತ್ಯಗಣಾನ್ ರಾಜನ್ ಜಿತವಾನ್ ವೈ ಶತಕ್ರತುಃ ।
ತಸ್ಯ ಘೋಷೇಣ ದೈತ್ಯಾನಾಂ ವ್ಯಾಮುಹ್ಯಂತ ದಿಶೋ ದಶ ॥೪೮॥

ರಾಜನೆ, ಆ ಧನುಸ್ಸಿನಿಂದ ಇಂದ್ರನು ದೈತ್ಯಸಮೂಹಗಳನ್ನು ಗೆದ್ದ. ಅದರ ಠೇಂಕಾರದಿಂದ ದೈತ್ಯರಿಗೆ ಹತ್ತು ದಿಕ್ಕುಗಳೇ ಕಾಣುತ್ತಿರಲಿಲ್ಲ.

ತದ್ ಭಾರ್ಗವಾಯ ಪ್ರಾಯಚ್ಛತ್ ಶಕ್ರಃ ಪರಮಸಮ್ಮತಮ್ ।
ತದ್ದಿವ್ಯಂ ಭಾರ್ಗವೋ ಮಹ್ಯಮದದಾದ್ ಧನುರುತ್ತಮಮ್ ॥೪೯॥

ಆ ಧನುಸ್ಸನ್ನು ಇಂದ್ರನು ಪರಶುರಾಮನಿಗಿತ್ತ. ಪರಮಸಂಮತವಾದ ಉತ್ತಮವಾದ ದಿವ್ಯವಾದ ಆ ಧನುಸ್ಸನ್ನು ಪರಶುರಾಮ ನನಗೆ ಇತ್ತ.

ತೇನ ಯೋತ್ಸ್ಯೇ ಮಹಾಬಾಹುಮರ್ಜುನಂ ಜಯತಾಂ ವರಮ್ ।
ಯಥೇಂದ್ರಃ ಸಮರೇ ಸರ್ವಾನ್ ದೈತೇಯಾನ್ ವೈ ಸಮಾಗತಾನ್ ॥

ನಿಜಘಾನ ತಥಾ ಸರ್ವಾನ್ ಜೇಷ್ಯಾಮಿ ಯುಧಿ ಪಾಂಡವಾನ್ ॥೫೧॥

ಆ ಧನುಸ್ಸಿನಿಂದ ನಾನು ಜಯಶಾಲಿಗಳಲ್ಲಿ ಉತ್ತಮನಾದ ಅರ್ಜುನನೊಡನೆ ಯುದ್ಧಕ್ಕೆ ಬಂದ ಎಲ್ಲ ದೈತ್ಯರನ್ನು ಈ ಧನುಸ್ಸಿನಿಂದ ಇಂದ್ರ ಹೇಗೆ ವಧಿಸಿದನೋ ಹಾಗೆ ಹೋರಾಡುವೆನು.

ಧನುಷೋರ್ಯಂ ರಾಮದತ್ತಂ ಗಾಂಡೀವಾತ್ ತದ್ ವಿಶಿಷ್ಯತೇ ।
ತ್ರಿಃಸಪ್ತಕೃತ್ವಃ ಪೃಥಿವೀ ಧನುಷಾ ಯೇನ ನಿರ್ಜಿತಾ ॥೫೨॥

ಪರಶುರಾಮ ನನಗೆ ನೀಡಿದ್ದ ಆ ಧನುಸ್ಸು ಗಾಂಡೀವಕ್ಕಿಂತ ಶ್ರೇಷ್ಠ ಪರಶುರಾಮ ಆ ಧನುಸ್ಸಿನಿಂದ ಇಪ್ಪತ್ತೊಂದು ಬಾರಿ ಭೂಮಿಯನ್ನು ಗೆದ್ದ.

ಧನುಷೋ ಹ್ಯಸ್ಯ ಕರ್ಮಾಣಿ ದಿವ್ಯಾನಿ ಪ್ರಾಹ ಭಾರ್ಗವಃ ।
ತದ್ರಾಮೋ ಹ್ಯದದಾನ್ಮಹ್ಯಂ ತೇನ ಯೋತ್ಸ್ಯಾಮಿ ಪಾಂಡವಮ್ ॥೫೩॥

ಆ ಧನುಸ್ಸಿನ ದಿವ್ಯ ಕಾರ್ಯಸಾಧನಗಳನ್ನು ಪರಶುರಾಮ ತಾನೇ ನನಗೆ ಹೇಳಿ ಅದನ್ನು ನನಗೆ ಕೊಟ್ಟಿದ್ದಾನೆ. ಆ ಧನುಸ್ಸಿನಿಂದ ಅರ್ಜುನನನ್ನು ಇದಿರಿಸುತ್ತೇನೆ.

ಅದ್ಯ ದುರ್ಯೋಧನಾಹಂ ತ್ವಾಂ ನಂದಯಿಷ್ಯೇ ಸಬಾಂಧವಮ್ ।
ನಿಹತ್ಯ ಸಮರೇ ವೀರಮರ್ಜುನಂ ಜಯತಾಂ ವರಮ್ ॥೫೪॥

ದುರ್ಯೋಧನ, ಇಂದು ನಾನು ಯುದ್ಧದಲ್ಲಿ ಜಯಶಾಲಿಗಳಲ್ಲಿ ಶ್ರೇಷ್ಠನಾದ ವೀರ ಅರ್ಜುನನನ್ನು ಸಂಹರಿಸಿ, ನಿನಗೂ ನಿನ್ನ ಬಂಧುಗಳಿಗೂ ಸಂತೋಷ ನೀಡುತ್ತೇನೆ.

ಸಪರ್ವತವನದ್ವೀಪಾ ಹತದ್ವಿಟ್ಸಾಗರಾಂಬರಾ ।
ಪುತ್ರಪೌತ್ರಪ್ರತಿಷ್ಠಾ ತೇ ಭವಿಷ್ಯತ್ಯದ್ಯ ಮೇದಿನೀ ॥೫೫॥

ರಾಜನೆ, ಪರ್ವತ ವನ ದ್ವೀಪ ಸಾಗರಗಳಿಂದ ಕೂಡಿದ ಈ ಭೂಮಂಡಲದಲ್ಲಿ ನಿನ್ನ ದ್ವೇಷಿಗಳು ಹತರಾಗಿ ಇನ್ನಿಲ್ಲವಾಗುವಂತೆ ಮಾಡುವೆನು. ಭೂಮಿ ನಿನ್ನ ಪುತ್ರ, ಪೌತ್ರರಲ್ಲಿಯೂ ಪ್ರತಿಷ್ಠಿತವಾಗುವಂತೆ ಮಾಡುವೆನು.

ನಾಶಕ್ಯಂ ವಿದ್ಯತೇ ಮೇಽದ್ಯ ತ್ವತ್ಪ್ರಿಯಾರ್ಥಂ ವಿಶೇಷತಃ ।
ಸತ್ಯಧರ್ಮಾನುರಕ್ತಸ್ಯ ಸಿದ್ಧಿರಾತ್ಮವತೋ ಯಥಾ ॥೫೬॥

ನನಗೆ ಅಶಕ್ಯವಾದುದು ಏನೂ ಇಲ್ಲ. ವಿಶೇಷವಾಗಿ ನಿನ್ನ ಸಂತೋಷದ ಸಲುವಾಗಿ ಏನು ಬೇಕಾದರೂ ಮಾಡಬಲ್ಲೆ. ಸತ್ಯ–ಧರ್ಮನಿಷ್ಠನಿಗೆ ಸಿದ್ಧಿ ಯಾವ ವಿಷಯದಲ್ಲಿಯೂ ಅಶಕ್ಯವಿರುವುದಿಲ್ಲ.

ನ ಹಿ ಮೇ ವಿಕ್ರಮಂ ಸೋಢುಂ ಸ ಶಕ್ತೋಽಗ್ನಿಂ ತರುರ್ಯಥಾ ।
ಅವಶ್ಯಂ ತು ಮಯಾ ವಾಚ್ಯಂ ಯೇನ ಹೀನೋಽಸ್ಮಿ ಫಲ್ಗುನಾತ್ ॥೫೭॥

ಕಾಳ್ಗಿಚ್ಚನ್ನು ಇದಿರಿಸಲು ಕಾಡುಮರದಂತೆ, ನನ್ನನ್ನು ಇದಿರಿಸಲು ಅರ್ಜುನ ಶಕ್ತನಾಗಲಾರ. ಆದರೆ ಒಂದು ವಿಷಯದಲ್ಲಿ ನಾನು ಅರ್ಜುನನಿಗಿಂತ ಕಡಿಮೆಯವನು. ಅದನ್ನು ನಾನು ನಿನಗೆ ಹೇಳಬೇಕಾಗಿದೆ.

ಜ್ಯಾ ತಸ್ಯ ಧನುಷೋ ದಿವ್ಯಾ ತಥಾಽಕ್ಷಯ್ಯೌ ಮಹೇಷುಧೀ ।
ಸಾರಥಿಸ್ತಸ್ಯ ಗೋವಿಂದೋ ಮಮ ತಾದೃಜ್ ನ ವಿದ್ಯತೇ ॥೫೮॥

ಅರ್ಜುನನ ಹಿರಿಮೆ ಇದು— ಅವನ ಧನುಸ್ಸಿನ ಹೆದೆ ದಿವ್ಯವಾಗಿದೆ. ಬತ್ತಳಿಕೆಗಳೂ ಅಕ್ಷಯವಾಗಿವೆ. ಅವನಿಗೆ ಕೃಷ್ಣ ಸಾರಥಿಯಾಗಿದ್ದಾನೆ. ನನಗೆ ಸಾರಥಿ ಅಂಥವನಿಲ್ಲ.

ತಸ್ಯ ದಿವ್ಯಂ ಧನುಃ ಶ್ರೇಷ್ಠಂ ಗಾಂಡೀವಮಜಿತಂ ಯುಧಿ ।
ವಿಜಯಂ ಚ ಮಹದ್ದಿವ್ಯಂ ಮಮಾಪಿ ಧನುರುತ್ತಮಮ್ ॥೫೯॥

ಅವನ ಗಾಂಡೀವ ಧನುಸ್ಸು ದಿವ್ಯ, ಯುದ್ಧದಲ್ಲಿ ಅದು ಅಜೇಯ. ಆದರೆ ನನ್ನ ವಿಜಯ ಧನುಸ್ಸೂ ಕೂಡಾ ಹಾಗೇ ದಿವ್ಯ, ಉತ್ತಮವೇ ಆಗಿದೆ.

ತತ್ರಾಹಮಧಿಕಃ ಪಾರ್ಥಾದ್ ಧನುಷಾ ತೇನ ಪಾರ್ಥಿವ ।
ಯೇನ ಚಾಪ್ಯಧಿಕೋ ವೀರಃ ಪಾಂಡವಸ್ತನ್ನಿಬೋಧ ಮೇ ॥೬೦॥

ರಾಜನೆ, ಧನುಸ್ಸಿನ ವಿಷಯದಲ್ಲಿ ನಾನು ಅರ್ಜುನನಿಗಿಂತ ಹೆಚ್ಚೇ. ವೀರ ಅರ್ಜುನ ಯಾವ ವಿಷಯದಲ್ಲಿ ನನಗಿಂತ ಹೆಚ್ಚೆಂಬುದನ್ನು ಹೇಳಿದ್ದೇನೆ, ಅದನ್ನು ಮನವರಿಕೆ ಮಾಡಿಕೊಳ್ಳು.

ರಶ್ಮಿಗ್ರಾಹಶ್ಚ ದಾಶಾರ್ಹಃ ಸರ್ವಲೋಕನಮಸ್ಕೃತಃ ।
ಅಗ್ನಿದತ್ತಶ್ಚ ವೈ ದಿವ್ಯೋ ರಥಃ ಕಾಂಚನಭೂಷಣಃ ॥೬೧॥

ಅರ್ಜುನನಿಗೆ ಸಾರಥಿ ಕೃಷ್ಣ ಅವನು ಸರ್ವಲೋಕಗಳಿಂದ ನಮಸ್ಕೃತ ನೆನಿಸಿದ್ದಾನೆ. ಅರ್ಜುನನ ರಥ ಬಂಗಾರದಿಂದ ಅಲಂಕೃತ, ದಿವ್ಯ, ಅಗ್ನಿಯಿಂದ ದತ್ತವಾದುದು.

ಅಚ್ಛೇದ್ಯಾಃ ಸರ್ವತೋ ವೀರ ವಾಜಿನಶ್ಚ ಮನೋಜವಾಃ ।
ಧ್ವಜಶ್ಚ ದಿವ್ಯೋ ದ್ಯುತಿಮಾನ್ ವಾನರೋಽಪಿ ಭಯಂಕರಃ ॥೬೨॥

ಅರ್ಜುನನ ಕುದುರೆಗಳೂ ಮನೋವೇಗದವು, ಶತ್ರುಗಳಿಗೆಲ್ಲರಿಗೂ ಅವು ಅಚ್ಛೇದ್ಯವಾಗಿವೆ. ಧ್ವಜವೂ ದಿವ್ಯ, ಪ್ರಕಾಶಮಾನ, ಶತ್ರುಭಯಂಕರವಾದ ವಾನರನೆ ಧ್ವಜವಾಗಿ ನೆಲೆಸಿದ್ದಾನೆ.

ಕೃಷ್ಣಶ್ಚ ಜಗತಃ ಸ್ರಷ್ಟಾ ರಥಂ ತಮಭಿರಕ್ಷತಿ ।
ಏಭಿಸ್ತ್ರಿಭಿರಹಂ ಹೀನೋ ಯೋದ್ಧುಮಿಚ್ಛಾಮಿ ಪಾಂಡವಮ್ ॥೬೩॥

ಜಗತ್ತಿನ ಸೃಷ್ಟಿಕರ್ತನಾದ ಕೃಷ್ಣ ಆ ರಥವನ್ನು ರಕ್ಷಿಸುತ್ತಾನೆ. ಹೀಗೆ ಸಾರಥಿ ಕುದುರೆ ಧ್ವಜ ಮೂರೂ ವಿಷಯದಲ್ಲಿ ಅರ್ಜುನನಿಗಿಂತ ಕಡಿಮೆಯವನಾದ ನಾನೀಗ ಅರ್ಜುನನೊಂದಿಗೆ ಹೋರಾಡಲು ಬಯಸಿದ್ದೇನೆ.

ಅಯಂ ತು ಸದೃಶಃ ಶೌರೇಃ ಶಲ್ಯಃ ಸಮಿತಿಶೋಭನಃ ।
ಸಾರಥ್ಯಂ ಯದಿ ಮೇ ಕುರ್ಯಾದ್ ಧ್ರುವಸ್ತೇ ವಿಜಯೋ ಭವೇತ್ ॥

ಯುದ್ಧದಲ್ಲಿ ಶೋಭಿಸುವ ಈ ಶಲ್ಯಮಹಾರಾಜ ಸಾರಥ್ಯದಲ್ಲಿ ಕೃಷ್ಣನಿಗೆ ಸಮಾನ. ಅವನು ನನಗೆ ಸಾರಥಿಯಾಗುವುದಾದರೆ ನಿನಗೆ ವಿಜಯ ನಿಶ್ಚಿತ.

ತಸ್ಯ ಮೇ ಸಾರಥಿಃ ಶಲ್ಯೋ ಭವತ್ವಸುಕರಃ ಪರೈಃ ।
ನಾರಾಚಾನ್ ಗಾರ್ಧ್ರಪತ್ರಾಂಶ್ಚ ಶಕಟಾನಿ ವಹಂತು ಮೇ ॥೬೫॥

ಶತ್ರುಗಳಿಗೆ ಮಣಿಸಲಾಗದ ಶಲ್ಯ ನನಗೆ ಸಾರಥಿಯಾಗಲಿ. ರಣಹದ್ದಿನ ರೆಕ್ಕೆವುಳ್ಳ ಬಾಣಗಳನ್ನು ನನಗೆ ಗಾಡಿಗಳು ಹೊತ್ತು ತರಲಿ.

ರಥಾಶ್ಚ ಮುಖ್ಯಾ ರಾಜೇಂದ್ರ ಯುಕ್ತಾ ವಾಜಿಭಿರುತ್ತಮೈಃ ।
ಆಯಾಂತು ಪಶ್ಚಾತ್ತತತಂ ಮಾಮೇವ ಭರತರ್ಷಭ ॥೬೬॥

ರಾಜನೆ, ಉತ್ತಮ ಅಶ್ವಗಳನ್ನು ಹೂಡಿದ ದೊಡ್ಡರಥಗಳು ಸದಾ ನನ್ನ ಹಿಂದೆಯೇ ಬರುತ್ತಿರಲಿ.

ಏವಮಭ್ಯಧಿಕಃ ಪಾರ್ಥಾದ್ ಭವಿಷ್ಯಾಮಿ ಗುಣೈರಹಮ್ ।
ಶಲ್ಯೋಪ್ಯಭ್ಯಧಿಕಃ ಕೃಷ್ಣಾದರ್ಜುನಾದಪಿ ಚಾಪ್ಯಹಮ್ ॥೬೭॥

ಆಗ ನಾನು ಗುಣಗಳಿಂದ ಪಾರ್ಥನಿಗಿಂತ ಮೇಲೆನಿಸುತ್ತೇನೆ. ಹೀಗಾಗಿ ಶಲ್ಯನೂ ಕೃಷ್ಣನಿಗಿಂತ ಮೇಲು, ನಾನೂ ಅರ್ಜುನನಿಗಿಂತ ಮೇಲು.

ಯಥಾऽಶ್ವಹೃದಯಂ ವೇದ ದಾಶಾರ್ಹಃ ಪರವೀರಹಾ ।
ತಥಾ ಶಲ್ಯೋ ವಿಜಾನೀತೇ ಹಯಜ್ಞಾನಂ ಮಹಾರಥಃ ॥೬೮॥

ಶತ್ರುವೀರನಾಶಕನಾದ ಕೃಷ್ಣ ಹೇಗೆ ಅಶ್ವಶಾಸ್ತ್ರವನ್ನು ಬಲ್ಲನೋ ಹಾಗೇ ಮಹಾರಥನಾದ ಶಲ್ಯನೂ ಅಶ್ವಶಾಸ್ತ್ರವನ್ನು ಬಲ್ಲ.

ಬಾಹುವೀರ್ಯೇ ಸಮೋ ನಾಸ್ತಿ ಮದ್ರರಾಜಸ್ಯ ಕಶ್ಚನ ।
ತಥಾऽಸ್ತ್ರೇ ಮತ್ಸಮೋ ನಾಸ್ತಿ ಕಶ್ಚಿದೇವ ಧನುರ್ಧರಃ ॥೬೯॥

ಬಾಹುಬಲದಲ್ಲಿ ಶಲ್ಯನಿಗೆ ಹೇಗೆ ಯಾರೂ ಸಮರಿಲ್ಲವೋ ಹಾಗೇ ಅಸ್ತ್ರಬಲದಲ್ಲಿ ನನಗೆ ಸಮಾನನಾದ ಧನುರ್ಧರ ಯಾರೂ ಇಲ್ಲ.

ತಥಾ ಶಲ್ಯಸಮೋ ನಾಸ್ತಿ ಹಯಜ್ಞಾನೇ ಹಿ ಕಶ್ಚನ ।
ಸೋऽಯಮಭ್ಯಧಿಕಃ ಪಾರ್ಥಾದ್ ಭವಿಷ್ಯತಿ ರಥೋ ಮಮ ॥೭೦॥

ಅಶ್ವಶಾಸ್ತ್ರದಲ್ಲಿ ಶಲ್ಯಸಮಾನ ಯಾರೂ ಇಲ್ಲದ್ದರಿಂದ ನನ್ನ ಈ ರಥವೂ ಪಾರ್ಥನ ರಥಕ್ಕಿಂತ ಮೇಲೆನಿಸುತ್ತದೆ.

ಸಮುದ್ಯಂತಂ ನ ಶಕ್ಷ್ಯಂತಿ ದೇವಾ ಅಪಿ ಸವಾಸವಾಃ ।
ಏತತ್ಕೃತಂ ಮಹಾರಾಜ ತ್ವಯೇಚ್ಛಾಮಿ ಪರಂತಪ ॥೭೧॥

ಆಗ ಇಂದ್ರಾದಿ ದೇವತೆಗಳೂ ಕೂಡ ನನ್ನನ್ನು ಗೆಲ್ಲಲು ಶಕ್ತರಾಗಲಾರರು. ಮಹಾರಾಜ, ನೀನಿದನ್ನು ಮಾಡೆಂದು ನಾನು ಬಯಸುತ್ತೇನೆ.

ಕ್ರಿಯತಾಮೇಷ ಕಾಮೋ ಮೇ ಮಾ ವಃ ಕಾಲೋऽತ್ಯಗಾದಯಮ್ ೭೨

ಈ ನನ್ನ ಅಭಿಲಾಷೆಯನ್ನು ಪೂರೈಸು. ನಿಮಗೆ ಕಾಲ ಮೀರಿ ಹೋಗದಿರಲಿ.

ಏವಂ ಕೃತೇ ರಥಸ್ಥೋऽಹಂ ಗುಣೈರಭ್ಯಧಿಕೋऽರ್ಜುನಾತ್ ।
ವಿಜಯೇಯಮಹಂ ಸಂಖೇ ಫಲ್ಗುನಂ ಕುರುಸತ್ತಮ ॥೭೩॥

ಹೀಗೆ ಮಾಡಿದರೆ ನಾನು ರಥದಲ್ಲಿದ್ದು ಅರ್ಜುನನಿಗಿಂತ ಗುಣದಲ್ಲಿ ಮೇಲೆನಿಸುತ್ತೇನೆ. ಯುದ್ಧದಲ್ಲಿ ಅರ್ಜುನನನ್ನು ಗೆಲ್ಲುತ್ತೇನೆ.

ಏವಂ ಕೃತೇ ಕೃತಂ ಸಾಹ್ಯಂ ತ್ವಯಾ ಸರ್ವಂ ಭವಿಷ್ಯತಿ ॥೭೪॥

ಇದೊಂದು ಕೆಲಸ ಮಾಡಿಕೊಟ್ಟರೆ ನನಗೆ ನೀನು ಎಲ್ಲ ಸಹಾಯ ಮಾಡಿಕೊಟ್ಟಂತಾಗುತ್ತದೆ.

ತತೋ ದ್ರಕ್ಷ್ಯಸಿ ಸಂಗ್ರಾಮೇ ಯತ್ಕರಿಷ್ಯಾಮಿ ಭಾರತ ।
ಸರ್ವಥಾ ಪಾಂಡವಾನ್ ಸಂಖೇ ವಿಜೇಷ್ಯೇ ವೈ ಸಮಾಗತಾನ್ ॥೭೫॥

ಆಗ ನೀನೆ ನೋಡುವೆ, ಯುದ್ಧದಲ್ಲಿ ನಾನೇನು ಮಾಡುವೆನೆಂದು. ಯುದ್ಧಕ್ಕೆ ಬರುವ ಪಾಂಡವರನ್ನು ನಾನು ಸರ್ವಥಾ ಪರಾಭವಗೊಳಿಸುತ್ತೇನೆ.

ನ ಹಿ ಮೇ ಸಮರೇ ಶಕ್ತಾಃ ಸಮುದ್ಯಾತುಂ ಸುರಾಸುರಾಃ ।
ಕಿಮು ಪಾಂಡುಸುತಾ ರಾಜನ್ ರಣೇ ಮಾನುಷಯೋನಯಃ ॥೭೬॥

ರಾಜನೆ, ಯುದ್ಧದಲ್ಲಿ ನನ್ನನ್ನು ಮೀರಿಸಲು ದೇವ–ದಾನವರೂ ಶಕ್ತರಲ್ಲ. ಇನ್ನು ಮಾನವರಾಗಿ ಜನಿಸಿದ ಪಾಂಡುಪುತ್ರರ ಬಗ್ಗೆ ಏನು ಹೇಳಬೇಕು?

ಸಂಜಯಃ

ಏವಮುಕ್ತಸ್ತವ ಸುತಃ ಕರ್ಣೇನಾಹವಶೋಭಿನಾ ।
ಸಂಪೂಜ್ಯ ಸಂಪ್ರಹೃಷ್ಟಾತ್ಮಾ ತತೋ ರಾಧೇಯಮಬ್ರವೀತ್ ॥೭೭॥

ಸಂಜಯ ನುಡಿದ— ಯುದ್ಧದಲ್ಲಿ ಶೋಭಿಸುವ ಕರ್ಣ ಹೀಗೆ ನುಡಿದಾಗ, ನಿನ್ನ ಪುತ್ರ ಬಲು ಪ್ರಸನ್ನಚಿತ್ತನಾಗಿ ಕರ್ಣನನ್ನು ಅಭಿನಂದಿಸಿ ಹೇಳಿದ.

ದುರ್ಯೋಧನಃ

ಸರ್ವಮೇತತ್ಕರಿಷ್ಯಾಮಿ ಯಥಾ ತ್ವಂ ಕರ್ಣ ಮನ್ಯಸೇ ।
ಸೋಪಾಸಂಗಾ ರಥಾಃ ಸಾಶ್ವಾಃ ಸ್ವನುಯಾಸ್ಯಂತಿ ಸಂಯುಗೇ ॥೭೮॥

ದುರ್ಯೋಧನ ನುಡಿದ— ಕರ್ಣ, ನೀನು ಅಪೇಕ್ಷಿಸಿದಂತೆ ನಾನು ಎಲ್ಲವನ್ನೂ ಮಾಡುವೆ. ಕುದುರೆಗಳನ್ನು ಹೂಡಿದ ಸುಸಜ್ಜಿತವಾದ ರಥಗಳು ಯುದ್ಧದಲ್ಲಿ ನಿನ್ನನ್ನು ಹಿಂಬಾಲಿಸಿ ಬರುತ್ತವೆ.

ನಾರಾಚಾನ್ ಗಾರ್ಧ್ರಪತ್ರಾಂಶ್ಚ ಶಕಟಾನಿ ವಹಂತು ತೇ ।
ಅನುಯಾಸ್ಯಾಮ ಕರ್ಣ ತ್ವಾಂ ವಯಂ ಸರ್ವೇ ಚ ಪಾರ್ಥಿವಾಃ ॥೭೯॥

ಹದ್ದಿನ ಪುಕ್ಕಗಳುಳ್ಳ ಬಾಣಗಳನ್ನು ಬಂಡಿಗಳು ನಿನಗೆ ಹೊತ್ತು ತರುತ್ತವೆ. ಕರ್ಣ, ನಾವೆಲ್ಲ ರಾಜರೂ ನಿನ್ನನ್ನು ಹಿಂಬಾಲಿಸಿ ಬರುತ್ತೇವೆ.

ಸಂಜಯಃ

ಏವಮುಕ್ತ್ವಾ ಮಹಾರಾಜ ತವ ಪುತ್ರಃ ಪ್ರತಾಪವಾನ್ ।
ಅಭಿಗಮ್ಯಾಬ್ರವೀದ್ ರಾಜಾ ಮದ್ರರಾಜಮಿದಂ ವಚಃ ॥೮೦॥

ಮಹಾರಾಜ, ಪ್ರತಾಪಶಾಲಿಯಾದ ನಿನ್ನ ಪುತ್ರ ರಾಜಾ ದುರ್ಯೋಧನ ಶಲ್ಯನ ಬಳಿಗೆ ಹೋಗಿ ಹೀಗೆ ಹೇಳಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಏಕತ್ರಿಂಶೋಽಧ್ಯಾಯಃ ॥೩೧॥

❖

ಮಹಾಭಾರತತಾತ್ಪರ್ಯನಿರ್ಣಯ

ಇತೀರಿತೇ ಸೌತ್ಯಕೃತೇ ಸ ಶಲ್ಯಂ
ಪ್ರೋವಾಚ ಸ ಕ್ರುದ್ಧ ಇವಾಭವತ್ ತದಾ ।
ದುರ್ಯೋಧನೋ ರಥಿನಃ ಸಾರಥೇಸ್ತು
ವ್ಯಾವರ್ಣಯನ್ನುತ್ತಮತಾಮಶಾಮಯತ್ ॥ ೨೫ ॥

ಕರ್ಣ ಹೀಗೆ ಹೇಳಿದಾಗ ದುರ್ಯೋಧನ ಶಲ್ಯನಲ್ಲಿ ಕರ್ಣನಿಗೆ ಸಾರಥಿ ಆಗಲು ಕೇಳಿಕೊಂಡ. ಆಗ ಶಲ್ಯ ಕೋಪಗೊಂಡವನಂತೆ ತೋರಿಕೊಂಡ. ರಥಿಕನಿಗಿಂತ ಸಾರಥಿ ಉತ್ತಮನಾಗಿರಬೇಕೆಂದು ಹೇಳುತ್ತ ದುರ್ಯೋಧನ ಅವನನ್ನು ಸಮಾಧಾನಪಡಿಸಿದ.

❖

ಮೂವತ್ತೆರಡನೆಯ ಅಧ್ಯಾಯ

ಕರ್ಣನಿಗೆ ಸಾರಥ್ಯ ಮಾಡಲು ಶಲ್ಯನ ಒಪ್ಪಿಗೆ.

ಸಂಜಯಃ

ಏವಮುಕ್ತೋ ಮಹಾರಾಜ ತವ ಪುತ್ರಃ ಪ್ರತಾಪವಾನ್ ।
ಮದ್ರೇಶ್ವರಂ ಪ್ರತಿ ರಣೇ ಪರಸೈನ್ಯಭಯಂಕರಮ್ ॥೧॥
ಸರ್ವಂ ತಥಾಽಕರೋತ್ ತೂರ್ಣಂ ರಾಧೇಯಸ್ತದ್ಯಥಾಽಬ್ರವೀತ್॥೨॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಮಹಾರಾಜ, ಪ್ರತಾಪಶಾಲಿಯಾದ ನಿನ್ನ ಮಗನು ರಣದಲ್ಲಿ ಶತ್ರುಸೈನ್ಯಕ್ಕೆ ಭಯ ಉಂಟುಮಾಡಬಲ್ಲ ಮಹಾರಥನಾದ ಶಲ್ಯನ ವಿಷಯದಲ್ಲಿ ಕರ್ಣನು ಹೇಳಿದಂತೆ ಎಲ್ಲ ಕಾರ್ಯಗಳನ್ನು ಬೇಗನೆ ಮಾಡಿದ.

ಮದ್ರರಾಜಂ ಚ ಸಮರೇ ಪ್ರಣಮ್ಯ ಚ ಮಹಾರಥಮ್ ।
ವಿನಯೇನೋಪಸಂಗಮ್ಯ ಪ್ರಣಯಾದ್ ವಾಕ್ಯಮಬ್ರವೀತ್ ॥೩॥
ಪುತ್ರಸ್ತವ ಮಹಾರಾಜ ಮದ್ರರಾಜಂ ಮಹಾರಥಮ್ ॥೪॥

ಮಹಾರಾಜ, ರಣರಂಗದಲ್ಲಿ ಮಹಾರಥನಾದ ಶಲ್ಯನನ್ನು ನಮಸ್ಕರಿಸಿ ವಿನಯದಿಂದ ಬಳಿಯಲ್ಲಿ ನಿಂತು ನಿನ್ನ ಪುತ್ರ ನುಡಿದ.

ಸತ್ಯವ್ರತ ಮಹಾಭಾಗ ದ್ವಿಷತಾಂ ತಾಪವರ್ಧನ ।
ಮದ್ರೇಶ್ವರ ರಣೇ ಶೂರ ಪರಸೈನ್ಯಭಯಂಕರ ॥೫॥

ಸತ್ಯವ್ರತ, ಮಹಾಭಾಗ್ಯಶಾಲಿ, ಶತ್ರುಗಳಿಗೆ ತಾಪವನ್ನು ಹೆಚ್ಚಿಸುವ ಮತ್ತು ಶತ್ರುಸೈನ್ಯಗಳಿಗೆ ಭಯಂಕರನಾದ ರಣದಲ್ಲಿ ಶೂರನಾದ ಶಲ್ಯನೆ!

ಮತ್ಪ್ರಿಯಾರ್ಥಂ ಹಿತಾರ್ಥಂ ಚ ತಥಾ ಪಾರ್ಥವಧಾಯ ಚ ।
ಶ್ರುತವಾನಸಿ ಕರ್ಣಸ್ಯ ಬ್ರುವತೋ ವದತಾಂ ವರ ॥೬॥

ಉತ್ತಮ ಮಾತುಗಾರನೆ, ಕರ್ಣನು ಪಾರ್ಥನ ವಧೆಗಾಗಿ ನನ್ನ ಸಂತೋಷಕ್ಕಾಗಿ ಹಿತಕ್ಕಾಗಿ ನುಡಿದುದನ್ನು ನೀನು ಕೇಳಿಸಿಕೊಂಡಿರುವೆ.

ಯಥಾ ನೃಪತಿಸಿಂಹಾನಾಂ ಮಧ್ಯೇ ತ್ವಾಂ ವರಯೇ ಸ್ವಯಮ್ ॥೭॥

ನಾನು ಸ್ವತಃ ರಾಜಶ್ರೇಷ್ಠರ ಮಧ್ಯದಲ್ಲಿ ನಿನ್ನನ್ನು ಕೇಳಿಕೊಳ್ಳುತ್ತೇನೆ.

ತತ್ತ್ವಮಪ್ರತಿವೀರ್ಯಾದ್ಯ ಶತ್ರುಪಕ್ಷಕ್ಷಯಾವಹ ।
ಮದ್ರೇಶ್ವರ ಪ್ರಯಾಚೇಽಹಂ ಶಿರಸಾ ವಿನಯೇನ ಚ ॥೮॥

ನಿನ್ನ ವೀರ್ಯ ಅಪ್ರತಿಮ. ಶತ್ರುಪಕ್ಷ ಕ್ಷಯಕಾರಿಯಾಗಿರುವ, ಅಂಥ ಶಲ್ಯನೆ, ನಿನಗೆ ತಲೆಬಾಗಿ ವಿನಯದಿಂದ ಬೇಡುತ್ತೇನೆ.

ತಸ್ಮಾತ್ ಪಾರ್ಥವಿನಾಶಾರ್ಥಂ ಹಿತಾರ್ಥಂ ಮಮ ಚೈವ ಹಿ ।
ತ್ವಂ ಪಾಹಿ ಸರ್ವತಃ ಕರ್ಣಂ ಭವಂ ಬ್ರಹ್ಮೇವ ಸುವ್ರತ ॥೯॥

ಅದರಿಂದ ಪಾರ್ಥನ ವಿನಾಶಕ್ಕಾಗಿ, ನನ್ನ ಹಿತಕ್ಕಾಗಿ, ರುದ್ರನನ್ನು ಬ್ರಹ್ಮನಂತೆ, ಕರ್ಣನನ್ನು ನೀನು ಎಲ್ಲ ಆಪತ್ತುಗಳಲ್ಲಿ ರಕ್ಷಿಸು.

ಸಾರಥ್ಯಂ ರಥಿನಾಂ ಶ್ರೇಷ್ಠ ಪ್ರಣಯಾತ್ ಕರ್ತುಮರ್ಹಸಿ ।
ತ್ವಯಿ ಯಂತರಿ ರಾಧೇಯೋ ವಿದ್ವಿಷೋ ಮೇ ವಿಜೇಷ್ಯತೇ ॥೧೦॥

ರಥಿಕರಲ್ಲಿ ಶ್ರೇಷ್ಠನೆ, ನೀನು ಕರ್ಣನಿಗೆ ಪ್ರೀತಿಯಿಂದ ಸಾರಥ್ಯಮಾಡು. ನೀನು ಸಾರಥಿಯಾದರೆ ಕರ್ಣ ಶತ್ರುಗಳನ್ನು ಗೆಲ್ಲುತ್ತಾನೆ.

ಅಭೀಷೂಣಾಂ ಹಿ ಕರ್ಣಸ್ಯ ಗ್ರಹೀತಾನ್ಯೋ ನ ವಿದ್ಯತೇ ।
ಋತೇ ಹಿ ತ್ವಾಂ ಮಹಾಭಾಗ ವಾಸುದೇವಸಮಂ ಯುಧಿ ॥೧೧॥

ಮಹಾಶಯನೆ, ಕೃಷ್ಣಸದೃಶನಾದ ನಿನ್ನನ್ನು ಬಿಟ್ಟರೆ ಕರ್ಣನ ಕುದುರೆ ಲಗಾಮುಗಳನ್ನು ಹಿಡಿಯಬಲ್ಲವನು ಇನ್ನೊಬ್ಬನಿಲ್ಲ.

ಲೋಕೇಽಭೀಷುಗ್ರಹೀತಾ ಹಿ ನಾನ್ಯೋಽಸ್ತಿ ಭವತಾ ಸಮಃ ।
ಸ ಪಾಹಿ ಸರ್ವಥಾ ಕರ್ಣಂ ಯಥಾ ಬ್ರಹ್ಮಾ ಮಹೇಶ್ವರಮ್ ॥೧೨॥

ಲೋಕದಲ್ಲಿ ನಿನಗೆ ಸಮಾನನಾದ ಸಾರಥಿ ಇನ್ನೊಬ್ಬನಿಲ್ಲ. ಅದರಿಂದ ಬ್ರಹ್ಮನು ಮಹೇಶ್ವರನನ್ನು ಹೇಗೋ ಹಾಗೆ ನೀನು ಕರ್ಣನನ್ನು ಸರ್ವಾಪತ್ತುಗಳಲ್ಲಿ ಕಾಪಾಡು.

ಪಾರ್ಥಸ್ಯ ಸಚಿವಃ ಕೃಷ್ಣೋ ಯಥಾಽಭೀಷುವರಗ್ರಹಃ ॥೧೩॥

ಯಥಾ ಚ ಸರ್ವಥಾಽಽಪತ್ಸು ವಾರ್ಷ್ಣೇಯಃ ಪಾತಿ ಪಾಂಡವಮ್ ।
ತಥಾ ಮದ್ರೇಶ್ವರಾದ್ಯ ತ್ವಂ ರಾಧೇಯಂ ಪ್ರತಿಪಾಲಯ ॥೧೪॥

ಅರ್ಜುನನಿಗೆ ಕೃಷ್ಣ ಸಾರಥಿಯಾಗಿ ಸಹಾಯಕನಾಗಿರುವಂತೆ, ಎಲ್ಲ ಆಪತ್ತುಗಳಲ್ಲಿ ಕೃಷ್ಣ ಅರ್ಜುನನನ್ನು ಕಾಪಾಡುವಂತೆ, ಮದ್ರೇಶ್ವರ, ಈಗ ನೀನು ಕರ್ಣನನ್ನು ಕಾಪಾಡಬೇಕಿದೆ.

ಭೀಷ್ಮೋ ದ್ರೋಣಃ ಕೃಪಃ ಕರ್ಣೋ ಭವಾನ್ ಭೋಜಶ್ಚ ವೀರ್ಯವಾನ್ ।
ಶಕುನಿಃ ಸೌಬಲೋ ದ್ರೌಣಿರಹಮೇವ ಚ ನೋ ಬಲಮ್ ॥೧೫॥

ಭೀಷ್ಮ, ದ್ರೋಣ, ಕೃಪ, ಕರ್ಣ, ನೀನು ಶಲ್ಯ, ವೀರ್ಯಶಾಲಿ ಕೃತವರ್ಮ, ಶಕುನಿ, ಅಶ್ವತ್ಥಾಮ ಮತ್ತು ನಾನು–ಇವರೆ ನಮ್ಮ ಬಲ.

ಏವಮೇಷ ಕೃತೋ ಭಾಗೋ ನವಧಾ ಪೃಥಿವೀಪತೇ ।
ನ ಚ ಭಾಗೋಽತ್ರ ಭೀಷ್ಮಸ್ಯ ದ್ರೋಣಸ್ಯ ಚ ಮಹಾತ್ಮನಃ ॥೧೬॥

ರಾಜನೆ, ಈ ಒಂಬತ್ತುಮಂದಿಗೆ ಶತ್ರುಸೈನ್ಯದಲ್ಲಿ ಒಂಬತ್ತು ಭಾಗಗಳಿದ್ದುವು. ಈಗ ಮಹಾತ್ಮ ಭೀಷ್ಮನ ಭಾಗ, ದ್ರೋಣನ ಭಾಗಗಳಿಲ್ಲ.

ತಾಭ್ಯಾಮತೀತ್ಯ ತೌ ಭಾಗೌ ನಿಹತಾ ಮಮ ಶತ್ರವಃ ।
ವೃದ್ಧೌ ಹಿ ತೌ ಮಹೇಷ್ವಾಸೌ ಛಲೇನ ನಿಹತೌ ಯುಧಿ ॥೧೭॥

ಅವರಿಬ್ಬರೂ ಆ ಭಾಗಗಳನ್ನು ಮೀರಿ ಇನ್ನೂ ಹೆಚ್ಚಾಗಿಯೆ ಶತ್ರುಗಳನ್ನು ಸಂಹರಿಸಿದ್ದಾರೆ. ವೃದ್ಧರಾದರೂ ಮಹಾಬಿಲ್ಲಾಳುಗಳಾಗಿದ್ದರು. ವಂಚನೆಯಿಂದ ಅವರನ್ನು ಶತ್ರುಗಳು ಸಂಹರಿಸಿದರು.

ಕೃತ್ವಾ ಚಾಸುಕರಂ ಕರ್ಮ ಗತೌ ಸ್ವರ್ಗಮಿತೋಽನಘ ।
ತಥಾಽನ್ಯೇ ಪುರುಷವ್ಯಾಘ್ರಾಃ ಪರೈರ್ವಿನಿಹತಾ ಯುಧಿ ॥೧೮॥

ಅವರು ರಣದಲ್ಲಿ ಅಸಾಧ್ಯಕಾರ್ಯಗಳನ್ನು ಮಾಡಿ ಇಲ್ಲಿಂದ ಸ್ವರ್ಗಕ್ಕೆ ತೆರಳಿದರು. ಹಾಗೆಯೇ ಬೇರೆ ಉತ್ತಮ ಯೋಧರೂ ಶತ್ರುಗಳಿಂದ ಹತರಾಗಿ ಸ್ವರ್ಗಕ್ಕೆ ಹೋದರು.

ಅಸ್ಮದೀಯಾಶ್ಚ ಬಹವಃ ಸ್ವರ್ಗಾಯ ಗಮಿತಾಃ ಪರೈಃ ।
ತ್ಯಕ್ತ್ವಾ ಪ್ರಾಣಾನ್ ಯಥಾಶಕ್ತಿ ಚೇಷ್ಟಾಂ ಕೃತ್ವಾ ಚ ಪುಷ್ಕಲಾಮ್॥೧೯॥

ನಮ್ಮಲ್ಲಿ ಬಹುಮಂದಿ ಪ್ರಾಣಗಳನ್ನು ಒತ್ತೆಯಿಟ್ಟು ಯಥಾಶಕ್ತಿ ಬಹಳ ಸಾಹಸಕಾರ್ಯ ಮಾಡಿ ಶತ್ರುಗಳಿಂದ ಸ್ವರ್ಗಕ್ಕೆ ಕಳಿಸಲ್ಪಟ್ಟರು.

ತದಿದಂ ಹತಭೂಯಿಷ್ಠಂ ಬಲಂ ಮಮ ನರಾಧಿಪ ।
ಪೂರ್ವಮಪ್ಯಲ್ಪಕೈಃ ಪಾರ್ಥೈರ್ಹತಂ ಕಿಮುತ ಸಾಂಪ್ರತಮ್ ॥೨೦॥

ರಾಜನೆ, ನಮ್ಮ ಸೈನ್ಯದಲ್ಲಿ ಹೆಚ್ಚಿನವರು ಹತರಾಗಿದ್ದಾರೆ. ಹಿಂದೆಯೂ ಅಲ್ಪಸಂಖ್ಯೆಯಲ್ಲಿದ್ದ ಪಾಂಡವರಿಂದ ನಮ್ಮ ಸೈನ್ಯ ಹತವಾಯಿತು. ಇನ್ನು ಈಗ ಹೇಳುವುದೇನಿದೆ?

ಬಲವಂತೋ ಮಹಾತ್ಮಾನಃ ಕೌಂತೇಯಾಃ ಸತ್ಯವಿಕ್ರಮಾಃ ।
ಬಲಂ ಶೇಷಂ ನ ಹನ್ಯುರ್ಮೇ ಯಥಾ ತತ್ಕುರು ಪಾರ್ಥಿವ ॥೨೧॥

ಬಲಿಷ್ಠರು, ಮಹಾತ್ಮರು, ಸಫಲವಾಗುವಂಥ ಪರಾಕ್ರಮವುಳ್ಳವರು ಪಾಂಡವರು. ರಾಜನೆ, ಅವರು ನಮ್ಮ ಉಳಿದುಳಿದ ಸೈನ್ಯವನ್ನು ರಣದಲ್ಲಿ ನಾಶಮಾಡದಂತೆ ಮಾಡು.

ಹತವೀರಮಿದಂ ಸೈನ್ಯಂ ಪಾಂಡವೈಃ ಸಮರೇ ವಿಭೋ ।
ಕರ್ಣೋ ಹ್ಯೇಕೋ ಮಹಾಬಾಹುರಸ್ಮತ್‌ಪ್ರಿಯಹಿತೇ ರತಃ ॥೨೨॥

ರಾಜನೆ, ಪಾಂಡವರಿಂದ ನಮ್ಮ ಸೈನ್ಯದಲ್ಲಿ ಬಹಳಷ್ಟು ವೀರರು ರಣದಲ್ಲಿ ಹತರಾಗಿದ್ದಾರೆ. ಮಹಾಬಾಹು ಕರ್ಣನೊಬ್ಬನೇ ಈಗ ನಮ್ಮ ಸಂತೋಷ, ಹಿತಸಾಧನೆಗಳಲ್ಲಿ ನಿರತನಾಗಿದ್ದಾನೆ.

ಭವಾಂಶ್ಚ ಪುರುಷವ್ಯಾಘ್ರ ಸರ್ವಲೋಕಮಹಾರಥಃ ।
ಶಲ್ಯ ಕರ್ಣೋಽರ್ಜುನೇನಾದ್ಯ ಯೋದ್ಧುಮಿಚ್ಛತಿ ಸಂಯುಗೇ ॥೨೩॥

ಹಾಗೇ ಪುರುಷಶ್ರೇಷ್ಠನೆ, ಸರ್ವಲೋಕಗಳಲ್ಲಿ ಉತ್ತಮ ಮಹಾರಥನೆನಿಸಿರುವವನು ನೀನು ಕೂಡ. ಶಲ್ಯ, ಕರ್ಣನು ಈಗ ಅರ್ಜುನನೊಡನೆ ರಣರಂಗದಲ್ಲಿ ಹೋರಾಡಲು ಬಯಸಿದ್ದಾನೆ.

ತಸ್ಮಿನ್ ಜಯಾಶಾ ವಿಪುಲಾ ಮದ್ರರಾಜ ನರಾಧಿಪ ।
ತಸ್ಯಾಭೀಶುಗ್ರಹವರೋ ನಾನ್ಯೋಽಸ್ತಿ ಭುವಿ ಕಶ್ಚನ ॥೨೪॥

ಮದ್ರರಾಜ ಶಲ್ಯ, ಕರ್ಣನಲ್ಲಿ ನಮ್ಮ ಪಕ್ಷಕ್ಕೆ ಜಯದಾಸೆ ಬಹಳ ಇದೆ. ಅವನಿಗೆ ಸಾರಥಿಯಾಗಬಲ್ಲವನು ಭೂಮಿಯಲ್ಲಿ ಬೇರೊಬ್ಬನು ಯಾವನೂ ಇಲ್ಲ.

ಪಾರ್ಥಸ್ಯ ಸಮರೇ ಕೃಷ್ಣೋ ಯಥಾಽಭೀಶುಗ್ರಹೋ ವರಃ ।
ತಥಾ ತ್ವಮಪಿ ಕರ್ಣಸ್ಯ ರಥೇಽಭೀಶುಗ್ರಹೋ ಭವ ॥೨೫॥

ಅರ್ಜುನನಿಗೆ ಯುದ್ಧದಲ್ಲಿ ಹೇಗೆ ಕೃಷ್ಣನು ಉತ್ತಮ ಸಾರಥಿಯಾಗಿರುವನೋ ಹಾಗೇ ನೀನೂ ಕರ್ಣನಿಗೆ ರಥದಲ್ಲಿ ಸಾರಥಿಯಾಗು.

ತೇನ ಯುಕ್ತೋ ರಣೇ ಪಾರ್ಥೋ ರಕ್ಷ್ಯಮಾಣಶ್ಚ ಪಾರ್ಥಿವ ।
ಯಾನಿ ಕರ್ಮಾಣಿ ಕುರುತೇ ಪ್ರತ್ಯಕ್ಷಾಣಿ ತಥೈವ ಚ ॥೨೬॥

ಅರ್ಜುನನು ಕೃಷ್ಣನಿಂದ ಯುಕ್ತನಾಗಿ, ರಣದಲ್ಲಿ ಅವನಿಂದ ರಕ್ಷಿತನಾಗಿ ಏನು ಕಾರ್ಯಗಳನ್ನು ಮಾಡುತ್ತಿರುವನೋ ಅವು ಪ್ರತ್ಯಕ್ಷ ಕಾಣುತ್ತಿವೆ.

ಪೂರ್ವಂ ನ ಸಮರೇ ಹ್ಯೇವಮವಧೀದರ್ಜುನೋ ರಿಪೂನ್ ।
ಇದಾನೀಂ ವಿಕ್ರಮೋ ಹ್ಯಸ್ಯ ಕೃಷ್ಣೇನ ಸಹಿತಸ್ಯ ಚ ॥೨೭॥

ಹಿಂದೆ ಅರ್ಜುನ ಯುದ್ಧದಲ್ಲಿ ಈ ರೀತಿ ಶತ್ರುಗಳನ್ನು ಕೊಲ್ಲುತ್ತಿರಲಿಲ್ಲ. ಈಗ ಕೃಷ್ಣನ ಸಹಾಯದಿಂದ ಅವನು ಪರಾಕ್ರಮ ತೋರುತ್ತಿದ್ದಾನೆ.

ಕೃಷ್ಣೇನ ಸಹಿತಃ ಪಾರ್ಥೋ ಧಾರ್ತರಾಷ್ಟ್ರೀಂ ಮಹಾಚಮೂಮ್ ।
ಅಹನ್ಯಹನಿ ಮದ್ರೇಶ ದ್ರಾವಯನ್ ದೃಶ್ಯತೇ ಯುಧಿ ॥೨೮॥

ಮದ್ರರಾಜ, ಕೃಷ್ಣನೊಡಗೂಡಿ ಅರ್ಜುನನು ಕೌರವಸೈನ್ಯವನ್ನು ಯುದ್ಧದಲ್ಲಿ ಪ್ರತಿದಿನ ಹೊಡೆದೋಡಿಸುವುದು ಕಂಡುಬರುತ್ತಿದೆ.

ಭಾಗೋಽವಶಿಷ್ಟಃ ಕರ್ಣಸ್ಯ ತವ ಚೈವ ಮಹಾದ್ಯುತೇ ।
ತಂ ಭಾಗಂ ಸಹ ಕರ್ಣೇನ ಯುಗಪನ್ನಾಶಯಾದ್ಯ ಹಿ ॥೨೯॥

ಮಹಾಪರಾಕ್ರಮಿಯೆ, ಪಾಂಡವಸೈನ್ಯದಲ್ಲಿ ಈಗ ಕರ್ಣನ ಭಾಗ ಮತ್ತು ನಿನ್ನ ಭಾಗ ಉಳಿದಿದೆ. ಅವೆರಡನ್ನೂ ನೀನು ಕರ್ಣನ ಜೊತೆಗೂಡಿ ಒಮ್ಮೆಲೆ ವಿನಾಶ ಮಾಡಿಬಿಡು.

ಅರುಣೇನ ಯಥಾ ಸಾರ್ಧಂ ತಮಃ ಸೂರ್ಯೋ ವ್ಯಪೋಹತಿ ।
ತಥಾ ಕರ್ಣೇನ ಸಹಿತೋ ಜಹಿ ಪಾರ್ಥಂ ಮಹಾಹವೇ ॥೩೦॥

ಅರುಣನ ಜೊತೆಗೂಡಿ ಸೂರ್ಯನು ಕತ್ತಲನ್ನು ನಾಶಮಾಡುವಂತೆ ಕರ್ಣನ ಜೊತೆಗೂಡಿ ನೀನು ಅರ್ಜುನನನ್ನು ಮಹಾರಣದಲ್ಲಿ ನಾಶಮಾಡು.

ಉದ್ಯಂತೌ ಚ ಯಥಾ ಸೂರ್ಯೌ ಬಾಲಸೂರ್ಯಸಮಪ್ರಭೌ ।
ಕರ್ಣಶಲ್ಯೌ ರಣೇ ದೃಷ್ಟ್ವಾ ವಿದ್ರವಂತು ಮಹಾರಥಾಃ ॥೩೧॥

ಸೂರ್ಯರಂತೆ ಉದಿಸುತ್ತಲೇ ಹಾಗೇ ಬಾಲಸೂರ್ಯರಂತಿರುವ ನೀವಿಬ್ಬರು

ಕರ್ಣ–ಶಲ್ಯರು ರಣದಲ್ಲಿ ಗೋಚರರಾಗಿರಿ, ನಿಮ್ಮನ್ನು ಕಂಡೊಡನೆ ಪಾಂಡವರ ಮಹಾರಥರು ಪಲಾಯನ ಮಾಡಲಿ.

ಸೂರ್ಯಾರುಣೌ ಯಥಾ ದೃಷ್ಟ್ವಾ ತಮೋ ನಶ್ಯತಿ ಮಾರಿಷ ।
ತಥಾ ನಶ್ಯಂತು ಕೌಂತೇಯಾಃ ಸಪಾಂಚಾಲಾಃ ಸಸೃಂಜಯಾಃ ॥೩೨॥

ಸೂರ್ಯ–ಅರುಣರನ್ನು ಕಂಡೊಡನೆ ಕತ್ತಲು ನಶಿಸುತ್ತದೆ. ಹಾಗೆಯೇ ನಿಮ್ಮಿಬ್ಬರನ್ನು ಕಂಡೊಡನೆ ಪಾಂಡವ ಪಾಂಚಾಲ ಸೃಂಜಯರು ನಶಿಸಲಿ.

ರಥಿನಾಂ ಪ್ರವರಃ ಕರ್ಣೋ ಯಂತೄಣಾಂ ಪ್ರವರೋ ಭವಾನ್ ।
ಸಂಯೋಗೋ ಯುವಯೋರ್ಲೋಕೇ ನಾಭೂನ್ನ ಚ ಭವಿಷ್ಯತಿ ॥೩೩॥

ರಥಿಕರಲ್ಲಿ ಶ್ರೇಷ್ಠನು ಕರ್ಣ. ಸಾರಥಿಗಳಲ್ಲಿ ಶ್ರೇಷ್ಠನು ನೀನು. ನೀವಿಬ್ಬರು ಜೊತೆಗೂಡಿದರೆ ಅದು ನ ಭೂತೋ ನ ಭವಿಷ್ಯತಿ–ಹಿಂದೆ ಆಗಿರಲಿಲ್ಲ ಮುಂದೆ ಆಗುವಂಥದ್ದೂ ಅಲ್ಲ ಅಪೂರ್ವವೆನಿಸುವುದು.

ಯಥಾ ಸರ್ವಾಸ್ವವಸ್ಥಾಸು ವಾರ್ಷ್ಣೇಯಃ ಪಾತಿ ಪಾಂಡವಮ್ ।
ತಥಾ ಭವಾನ್ ಪರಿತ್ರಾತು ಕರ್ಣಂ ವೈಕರ್ತನಂ ರಣೇ ॥೩೪॥

ಎಲ್ಲ ಪರಿಸ್ಥಿತಿಗಳಲ್ಲಿಯೂ ಅರ್ಜುನನನ್ನು ಕೃಷ್ಣ ರಕ್ಷಿಸುವಂತೆ ನೀನೂ ರಣದಲ್ಲಿ ಕರ್ಣನನ್ನು ರಕ್ಷಿಸುತ್ತಿರು.

ಸಾರಥ್ಯಂ ಕ್ರಿಯತಾಂ ತಸ್ಯ ಯುಧ್ಯಮಾನಸ್ಯ ಸಂಯುಗೇ ॥೩೫॥

ರಣರಂಗದಲ್ಲಿ ಹೋರಾಡುವಾಗ ಕರ್ಣನಿಗೆ ನೀನು ಸಾರಥ್ಯಮಾಡು.

ಯಥಾ ಚ ಸಮರೇ ಕೃಷ್ಣೋ ರಕ್ಷತೇ ಸರ್ವತೋಽರ್ಜುನಮ್ ।
ತಥಾ ತ್ವಮಪಿ ರಾಧೇಯಂ ರಕ್ಷಸ್ವ ಚ ಮಹಾರಣೇ ॥೩೬॥

ರಣರಂಗದಲ್ಲಿ ಕೃಷ್ಣ ಅರ್ಜುನನನ್ನು ಎಲ್ಲ ಕಡೆಗಳಿಂದ ರಕ್ಷಿಸುವಂತೆ ನೀನೂ ಕೂಡ ಕರ್ಣನನ್ನು ರಕ್ಷಿಸುತ್ತಿರು.

ತ್ವಯಾ ಸಾರಥಿನಾ ಹ್ಯೇಷ ಅಪ್ರಧೃಷ್ಯೋ ಭವಿಷ್ಯತಿ ।
ದೇವತಾನಾಮಪಿ ರಣೇ ಸಶಕ್ರಾಣಾಂ ಮಹೀಪತೇ ॥೩೭॥

ಕಿಂ ಪುನಃ ಪಾಂಡವೇಯಾನಾಂ ಮಾ ವಿಶಂಕೀರ್ಮಚೋ ಮಮ ॥೩೮॥

ರಾಜನೆ, ನೀನು ಸಾರಥಿಯಾದರೆ ಕರ್ಣನು ಇಂದ್ರಾದಿ ದೇವತೆಗಳಿಗೂ ಮಣಿಸಲಾಗದವನಾಗುತ್ತಾನೆ ಎಂದಮೇಲೆ ಪಾಂಡವಯೋಧರಿಗೆ ಇನ್ನೇನು ಹೇಳಬೇಕು? ಅದರಿಂದ ನಿನ್ನನ್ನು ಕರ್ಣನಿಗೆ ಸಾರಥಿಯಾಗಲು ಕೇಳಿಕೊಂಡೆನಷ್ಟೆ. ನನ್ನ ಮಾತನ್ನು ತಪ್ಪಾಗಿ ತಿಳಿಯಬೇಡ.

ಸಂಜಯಃ

ದುರ್ಯೋಧನವಚಃ ಶ್ರುತ್ವಾ ಶಲ್ಯಃ ಕ್ರೋಧಸಮನ್ವಿತಃ ।
ಧಾರ್ತರಾಷ್ಟ್ರಮಥೋವಾಚ ಸೃಕ್ವಿಣೀ ಪರಿಲೇಲಿಹನ್ ॥೩೯॥

ಸಂಜಯ ನುಡಿದ— ದುರ್ಯೋಧನನ ಮಾತನ್ನು ಕೇಳಿ ಶಲ್ಯನು ಕೋಪಿಸಿಕೊಂಡು, ಕಟವಾಯಿಯನ್ನು ನೆಕ್ಕಿ ನುಡಿದ.

ತ್ರಿಶಿಖಾಂ ಭ್ರುಕುಟಿಂ ಕೃತ್ವಾ ಧುನ್ವನ್ ಹಸ್ತೌ ಪುನಃ ಪುನಃ ।
ಕ್ರೋಧರಕ್ತೇ ಮಹಾನೇತ್ರೇ ಪರಿವೃತ್ಯ ಮಹಾಭುಜಃ ॥೪೦॥
ಕುಲೈಶ್ವರ್ಯಶ್ರುತಬಲೈರ್ದೃಪ್ತಃ ಶಲ್ಯೋಽಬ್ರವೀದಿದಮ್ ॥೪೧॥

ಹಣೆ ಮೇಲೆ ಮೂರು ಗೆರೆಗಳು ಕಾಣಿಸಿಕೊಳ್ಳುವಂತೆ ಹುಬ್ಬುಗಂಟಿಕ್ಕಿ, ಎರಡು ತೋಳುಗಳನ್ನು ಬೀಸುತ್ತ ಕೋಪದಿಂದ ಕೆಂಪಾದ ದೊಡ್ಡ ಕಣ್ಣುಗಳನ್ನು ತಿರುಗಿಸುತ್ತ ಕುಲ ಐಶ್ವರ್ಯ ವಿದ್ಯೆ ಬಲದಿಂದ ದೃಪ್ತನಾದ ಮಹಾ ಬಾಹುವಾದ ಶಲ್ಯ ಹೀಗೆ ನುಡಿದ.

ಶಲ್ಯಃ

ಅವಮನ್ಯಸೇ ಮಾಂ ಗಂಧಾರೇ ಧ್ರುವಂ ಮಾಂ ಪರಿಶಂಕಸೇ ।
ಯನ್ಮಾ ಬ್ರವೀಷಿ ವಿಸ್ರಬ್ಧಃ ಸಾರಥ್ಯಂ ಕ್ರಿಯತಾಮಿತಿ ॥೪೨॥

ಶಲ್ಯ ನುಡಿದ— ದುರ್ಯೋಧನ, ನೀನು ಅಳುಕದೆ ನನ್ನ ಮುಂದೆ 'ಸಾರಥ್ಯ ಮಾಡೆಂ'ದು ಹೇಳಿ ನನ್ನನ್ನು ಅವಮಾನಿಸುತ್ತಿರುವೆ.ನಿಶ್ಚಯವಾಗಿ ನನ್ನ ಸಾಮರ್ಥ್ಯದ ವಿಷಯದಲ್ಲಿ ಸಂದೇಹಪಡುತ್ತಿರುವೆ.

ಅಸ್ಮತ್ತೋಽಭ್ಯಧಿಕಂ ಕರ್ಣಂ ಮನ್ವಾನಸ್ತಂ ಪ್ರಶಂಸಸಿ ।
ನ ಚಾಹಂ ಯುಧಿ ರಾಧೇಯಂ ಗಣಯೇ ತುಲ್ಯಮಾತ್ಮನಃ ॥೪೩॥

ಕರ್ಣನನ್ನು ನನಗಿಂತ ಮೇಲೆಂದು ತಿಳಿದು ನನ್ನ ಮುಂದೆ ಕರ್ಣನ ಪ್ರಶಂಸೆ ಮಾಡುತ್ತಿರುವೆ. ಕರ್ಣನನ್ನು ರಣದಲ್ಲಿ ನನಗೆ ಸಮಾನನೆಂದರೂ ಕೂಡ ನಾನು ಒಪ್ಪಲಾರೆ.

ಆದಿಶ್ಯತಾಮಭ್ಯಧಿಕೇ ಮಮಾಂಶಃ ಪೃಥಿವೀಪತೇ ।
ತಮಹಂ ಸಮರೇ ಹತ್ವಾ ಗಮಿಷ್ಯಾಮಿ ಯಥಾಗತಮ್ ॥೪೪॥

ಶತ್ರುಪಕ್ಷದಲ್ಲಿ ನನ್ನ ಭಾಗವನ್ನು ನನಗಿಂತ ಮೇಲೆನಿಸಿದವನೊಬ್ಬನಿಗೆ ವಹಿಸಿಕೊಡು. ಅವನನ್ನು ರಣದಲ್ಲಿ ಕೊಂದು ನಾನು ಬಂದ ದಾರಿಯಿಂದ ಹಿಂತಿರುಗುವೆನು.

ಅಥವಾಪ್ಯೇಕ ಏವಾಹಂ ಯೋತ್ಸ್ಯಾಮಿ ತವ ಶತ್ರುಭಿಃ ।
ಪಶ್ಯ ವೀರ್ಯಂ ಮಮಾದ್ಯ ತ್ವಂ ಸಂಗ್ರಾಮೇ ದಹತೋ ರಿಪೂನ್ ॥

ಅಥವಾ ನಾನೊಬ್ಬನೇ ನಿನ್ನ ಶತ್ರುಗಳೊಂದಿಗೆ ಹೋರಾಡುವೆನು. ರಣದಲ್ಲಿ ಶತ್ರುಗಳನ್ನು ನಾನು ಸುಡುವಾಗ ನೀನೆ ನನ್ನ ಬಲವನ್ನು ಕಣ್ಣಾರೆ ನೋಡು.

ತವಾತಿಕಾಮಂ ಕೌರವ್ಯ ನಿಧಾಯ ಹೃದಯೇ ಪುಮಾನ್ ।
ಅಸ್ಮದ್ವಿಧಃ ಪ್ರವರ್ತೇತ ಮಾ ಮಾ ತ್ವಮತಿಶಂಕಿಥಾಃ ॥೪೬॥

ದುರ್ಯೋಧನ, ಹೀನನಾದ ಕರ್ಣನಿಗೆ ನನ್ನಿಂದ ಸಾರಥ್ಯ ಮಾಡಿಸುವ ಈ ಹೀನ ಕಾಮನೆಯನ್ನು ಬಿಟ್ಟು ಬೇರೆ 'ಅತಿಕಾಮ'ವನ್ನು ಅತಿಶಯಿತವಾದ ಒಳ್ಳೆಯ ಕಾಮನೆಯನ್ನು ಮಾಡು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮಂಥ ಪುರುಷರು ಪ್ರವೃತ್ತಿ ಮಾಡುತ್ತಾರೆ, ನನ್ನ ಸಾಮರ್ಥ್ಯದಲ್ಲಿ ಅತಿಯಾಗಿ ಸಂದೇಹಿಸಬೇಡ.

ಅಪಿ ಚಾಪ್ಯವಮಾನೋ ಮೇ ನ ಕರ್ತವ್ಯಃ ಕಥಂಚನ ।
ಪಶ್ಯ ಭೀಮೌ ಮಮ ಭುಜೌ ವಜ್ರಸಂಹನನೌ ದೃಢೌ ॥೪೭॥

ಮತ್ತು ನನಗೆ ನೀನು ಯಾವ ದೃಷ್ಟಿಯಿಂದಲೂ ಅವಮಾನ ಮಾಡುವುದು ಸರಿಯಲ್ಲ. ವಜ್ರದಂತೆ ದೃಢವಾದ ಭಯಂಕರವಾದ ನನ್ನ ಬಾಹುಗಳನ್ನು ನೋಡು.

ಧನುಃ ಪಶ್ಯ ಚ ಮೇ ಚಿತ್ರಂ ಶರಾಂಶ್ಚಾಶೀವಿಷೋಪಮಾನ್ ।
ರಥಂ ಚ ಪಶ್ಯ ಮೇ ಕ್ಲಪ್ತಂ ಸದಶ್ವೈರ್ವಾತವೇಗಿಭಿಃ ॥೪೮॥

ನನ್ನ ಸುಂದರವಾದ ಧನುಸ್ಸನ್ನು ನೋಡು. ಹಾವುಗಳಂಥ ಬಾಣಗಳನ್ನು ನೋಡು. ಗಾಳಿವೇಗದ ಒಳ್ಳೆ ಜಾತಿಯ ಕುದುರೆಗಳನ್ನು ಹೂಡಿರುವ ನನ್ನ ರಥವನ್ನು ನೋಡು.

ಗದಾಂ ಚ ಪಶ್ಯ ಗಾಂಧಾರೇ ಹೇಮಪಟ್ಟವಿಭೂಷಿತಾಮ್ ।
ದಾರಯೇಯಂ ಮಹೀಂ ಕ್ರುದ್ಧೋ ವಿಕಿರೇಯಂ ಚ ಪರ್ವತಾನ್॥೪೯॥

ಬಂಗಾರದ ಪಟ್ಟಿಯಿಂದ ಅಲಂಕೃತವಾದ ನನ್ನ ಗದೆಯನ್ನೂ ನೋಡು. ನಾನು ಇಡೀ ಭೂಮಿಯನ್ನು ಸೀಳಬಲ್ಲೆ. ಪರ್ವತಗಳನ್ನು ಪುಡಿಮಾಡಿ ಎರಚಬಲ್ಲೆ.

ಶೋಷಯೇಯಂ ಸಮುದ್ರಾಂಶ್ಚ ಪಾತಯೇಯಂ ಚ ಭಾಸ್ಕರಮ್ ॥

ಸಮುದ್ರವನ್ನು ಶೋಷಿಸಬಲ್ಲೆ. ಸೂರ್ಯನನ್ನು ಕೆಳಗೆ ಬೀಳಿಸಬಲ್ಲೆ.

ತಂ ಮಾಮೇವಂವಿಧಂ ರಾಜನ್ ಸಮರ್ಥಮರಿನಿಗ್ರಹೇ ।
ಕಸ್ಮಾದ್ಯುನಂಕ್ಷಿ ಸಾರಥ್ಯೇ ಸೂತಸ್ಯಾಧಿರಥೇಸ್ತು ಮಾಮ್ ॥೫೧॥

ರಾಜನೆ, ಶತ್ರುನಿಗ್ರಹದಲ್ಲಿ ಸಮರ್ಥನಾದ ಇಂಥ ನನ್ನನ್ನು ಸೂತನಾದ ಕರ್ಣನ ಸಾರಥ್ಯ ಮಾಡಲು ಏನು ಕಾರಣ ನಿಯೋಜಿಸುತ್ತಿರುವೆ?

ನ ಚಾಪಿ ಮಮ ರಾಧೇಯಃ ಕಲಾಮರ್ಹತಿ ಷೋಡಶೀಮ್ ॥೫೨॥

ಕರ್ಣ ನನ್ನ ಹದಿನಾರನೆ ಒಂದಂಶಕ್ಕೂ ಸಮನಾಗಲಾರ.

ಸಕರ್ಣಾ ಯೇ ತ್ರಯೋ ಲೋಕಾಃ ಸಾರ್ಜುನಾಃ ಸಜನಾರ್ದನಾಃ ।
ನಿಬದ್ಧಾಂಸ್ತಾನ್ ರಣೇ ರಾಜನ್ನ ಗಣೇಯಂ ಕಥಂಚನ ॥೫೩॥

ಕರ್ಣನಿಂದ ಅರ್ಜುನನಿಂದ ಮತ್ತು ಕೃಷ್ಣನಿಂದ ಕೂಡಿದ ಮೂರುಲೋಕ ರಣದಲ್ಲಿ ನನಗೆ ಇದಿರಾಗಿ ನಿಂತರೂ, ರಾಜನೆ, ಅದನ್ನು ನಾನು ಲೆಕ್ಕಿಸುವುದಿಲ್ಲ.

ನ ಚಾಹಂ ಪ್ರಾಕೃತಃ ಕಶ್ಚಿನ್ನ ಚಾಸ್ಮ್ಯಧಿಗತಃ ಸ್ವಯಮ್ ॥೫೪॥

ನಾನೇನೂ ಒಬ್ಬ ನೀಚವ್ಯಕ್ತಿಯಲ್ಲ, ಸ್ವತಃ ಆಶ್ರಯ ಬೇಡಿ ನಿನ್ನ ಬಳಿಗೆ ಬಂದವನೂ ಅಲ್ಲ.

ನ ಮಾಮರ್ಹಸಿ ರಾಜೇಂದ್ರ ನಿಯೋಕ್ತುಂ ಕರ್ಮಣೇದೃಶೇ ।
ನ ಹಿ ಪಾಪೀಯಸಃ ಶ್ರೇಯಾನ್ ಪ್ರೇಷ್ಯತ್ವಂ ಕರ್ತುಮರ್ಹತಿ ॥೫೫॥

ಏಕೆಂದರೆ ರಾಜೇಂದ್ರ, ನನ್ನನ್ನು ನೀನು ಇಂಥ ನೀಚಕಾರ್ಯದಲ್ಲಿ ನಿಯೋಜಿಸಬಾರದು. ನೀಚನಲ್ಲಿ ಉತ್ತಮನು ಸೇವಕತ್ವವನ್ನು ವಹಿಸಬಾರದು.

ಯೋ ಹ್ಯಭ್ಯುಪಗತಂ ಮಿತ್ರಂ ಗರೀಯಾಂಸಂ ವಿಶೇಷತಃ ।
ವಶೇ ಪಾಪೀಯಸೋ ಧತ್ತೇ ತತ್ಕಾರ್ಯಮಧರೋತ್ತರಮ್ ॥೫೬॥

ಬಳಿಗೆ ಬಂದ ಮಿತ್ರನನ್ನು ಅದರಲ್ಲಿಯೂ ವಿಶೇಷವಾಗಿ ಉತ್ತಮನಾದ ನನ್ನಂಥ ಮಿತ್ರನನ್ನು ನೀಚನ ವಶದಲ್ಲಿ ಇರಿಸಬಾರದು. ಇರಿಸಿದರೆ ಆ ಕಾರ್ಯ ತಲೆಕೆಳಗಾಗುವುದು, ವಿಪರೀತ ಪರಿಣಾಮ ಉಂಟುಮಾಡುವುದು.

ಬ್ರಹ್ಮಣಾ ಬ್ರಾಹ್ಮಣಾಃ ಸೃಷ್ಟಾ ಮುಖಾತ್ ಕ್ಷತ್ರಂ ಚ ಬಾಹುತಃ ।
ಊರುಭ್ಯಾಮಥ ವೈಶ್ಯಾ ವೈ ಶೂದ್ರಾಃ ಪದ್ಭ್ಯಾಮಿತಿ ಶ್ರುತಿಃ ॥೫೭॥

ಬ್ರಹ್ಮನು ಮುಖದಿಂದ ಬ್ರಾಹ್ಮಣರನ್ನು, ಬಾಹುವಿನಿಂದ ಕ್ಷತ್ರಿಯರನ್ನು, ತೊಡೆಗಳಿಂದ ವೈಶ್ಯರನ್ನು, ಪಾದಗಳಿಂದ ಶೂದ್ರರನ್ನು ಹುಟ್ಟಿಸಿದನೆಂದು ಶ್ರುತಿ ಸಾರುತ್ತಿದೆ.

ತೇಭ್ಯೋ ವರ್ಣವಿಶೇಷಾಶ್ಚ ಪ್ರತಿಲೋಮಾನುಲೋಮಜಾಃ ।
ಅಥಾನ್ಯೋನ್ಯಸ್ಯ ಸಂಯೋಗಾಚ್ಚಾತುರ್ವರ್ಣ್ಯಸ್ಯ ಭಾರತ ॥೫೮॥

ಸೂತ ವೈದೇಹಿಕ ಚಂಡಾಲಾದಿಗಳು ಪಿತನಿಗೆ ಪ್ರತಿಲೋಮ ಮಾತೆಗೆ ಅನುಲೋಮವಾಗಿ ಹುಟ್ಟುತ್ತಾರೆ, ಬ್ರಾಹ್ಮಣಸ್ತ್ರೀಯಲ್ಲಿ ಕ್ಷತ್ರಿಯನಿಂದ ಸೂತ,

ವೈಶ್ಯನಿಂದ ವೈದೇಹಿಕ, ಶೂದ್ರನಿಂದ ವೃಷಲ ಹುಟ್ಟುತ್ತಾನೆ. ನಾಲ್ಕು ವರ್ಣಗಳ ಪರಸ್ಪರ ಸಂಬಂಧದಿಂದ ಈ ಜಾತಿಗಳು ಹುಟ್ಟುತ್ತವೆ.

ಗೋಪ್ತಾರಃ ಸಂಗೃಹೀತಾರೋ ದಾತಾರಃ ಕ್ಷತ್ರಿಯಾಃ ಸ್ಮೃತಾಃ ॥೫೯॥

ರಾಜ್ಯರಕ್ಷಣೆ ಮಾಡಿ ಕರ ವಸೂಲಿ ಮಾಡಿ ದಾನಮಾಡುವವರು ಕ್ಷತ್ರಿಯರು.

ಯಾಜನಾಧ್ಯಾಪನೈರ್ವಿಪ್ರಾ ವಿಶುದ್ಧೈಶ್ಚ ಪ್ರತಿಗ್ರಹೈಃ ।
ಲೋಕಸ್ಯಾನುಗ್ರಹಾರ್ಥಾಯ ಸ್ಥಾಪಿತಾ ಬ್ರಾಹ್ಮಣಾ ಭುವಿ ॥೬೦॥

ಯಜ್ಞ ಮಾಡಿಸುವುದು, ವಿದ್ಯೆ ಹೇಳಿಕೊಡುವುದು, ಶುದ್ಧವಾದ ದಾನ ಸ್ವೀಕರಿಸುವುದು, ಇವುಗಳಿಂದ ಲೋಕಾನುಗ್ರಹ ಮಾಡುವುದು ಈ ಕಾರ್ಯಗಳಿಂದಾಗಿ ಭೂಮಿಯಲ್ಲಿ ಬ್ರಾಹ್ಮಣರನ್ನು ಬ್ರಹ್ಮ ಇರಿಸಿದ್ದಾನೆ.

ಕೃಷಿಶ್ಚ ಪಾಶುಪಾಲ್ಯಂ ಚ ವಿಶಾಂ ದಾನಂ ಚ ಧರ್ಮತಃ ।
ಬ್ರಹ್ಮಕ್ಷತ್ರವಿಶಾಂ ಶೂದ್ರಾ ವಿಹಿತಾಃ ಪರಿಚಾರಕಾಃ ॥೬೧॥

ಕೃಷಿ ಪಶುಪಾಲನೆ ಧರ್ಮಾನುಸಾರ ದಾನಗಳು ವೈಶ್ಯರ ಕರ್ಮ. ಬ್ರಾಹ್ಮಣ ಕ್ಷತ್ರಿಯ ವೈಶ್ಯರ ಪರಿಚರ್ಯೆಯು ಶೂದ್ರರಿಗೆ ವಿಹಿತ.

ಬ್ರಹ್ಮಕ್ಷತ್ರಸ್ಯ ವಿಹಿತಾಃ ಸೂತಾ ವೈ ಪರಿಚಾರಕಾಃ ।
ನ ಕ್ಷತ್ರಿಯೋ ವೈ ಸೂತಾನಾಂ ಶೃಣು ಚೇದಂ ವಚೋ ಮಮ ॥೬೨॥

ಸೂತರು ಬ್ರಾಹ್ಮಣ ಕ್ಷತ್ರಿಯರ ಪರಿಚರ್ಯೆ ಮಾಡುವುದು ವಿಹಿತ. ಕ್ಷತ್ರಿಯನು ಸೂತನ ಪರಿಚರ್ಯೆ ಮಾಡಬಾರದು. ನನ್ನ ಮಾತನ್ನು ಕೇಳು.

ಅಹಂ ಮೂರ್ಧಾಭಿಷಿಕ್ತೋ ಹಿ ರಾಜರ್ಷಿಕುಲಜೋ ನೃಪಃ ।
ಮಹಾರಥಸಮಾಖ್ಯಾತಃ ಸೇವ್ಯಃ ಸ್ತುತ್ಯಶ್ಚ ವಂದಿನಾಮ್ ॥೬೩॥

ನಾನು ರಾಜರ್ಷಿಗಳ ಕುಲದಲ್ಲಿ ಜನಿಸಿ ಪಟ್ಟಾಭಿಷಿಕ್ತನಾದ ರಾಜನೆನಿಸಿದ್ದೇನೆ. ಮಹಾರಥನೆಂದು ಪ್ರಸಿದ್ಧನಾಗಿದ್ದೇನೆ. ವಂದಿ–ಮಾಗಧರಿಂದ ಸೇವ್ಯನೂ ಸ್ತುತ್ಯನೂ ಆಗಿದ್ದೇನೆ.

ಸೋऽಹಮೇತಾದೃಶೋ ಭೂತ್ವಾ ನೇಹಾರಿಬಲಸೂದನಃ ।
ಸೂತಪುತ್ರಸ್ಯ ಸಂಗ್ರಾಮೇ ಸಾರಥ್ಯಂ ಕರ್ತುಮುತ್ಸಹೇ ॥೬೪॥

ಶತ್ರು ಸೈನ್ಯನಾಶಕನಾದ ನಾನು ಇಂಥವನಾಗಿದ್ದೂ ಸೂತಪುತ್ರನಿಗೆ ರಣದಲ್ಲಿ ಸಾರಥ್ಯ ಮಾಡಲು ಒಪ್ಪುವುದಿಲ್ಲ.

ಅವಮನ್ಯಸೇ ಮಾಂ ಗಾಂಧಾರೇ ಧ್ರುವಂ ಚಾಪ್ಯತಿಶಂಕಸೇ ।
ಅಯಂ ಚಾಪ್ಯವಮಾನೋ ಮೇ ನ ಕರ್ತವ್ಯಃ ಕಥಂಚನ ॥೬೫॥

ದುರ್ಯೋಧನ, ನೀನು ನನ್ನನ್ನು ಅವಮಾನಿಸುವೆ, ನಿಶ್ಚಯವಾಗಿಯೂ ನನ್ನ ಸಾಮರ್ಥ್ಯದ ವಿಷಯದಲ್ಲಿ ಅತಿಯಾಗಿ ಸಂದೇಹಪಡುವೆ. ಇಂಥ ಅವಮಾನವನ್ನು ನನಗೆ ನೀನು ಮಾಡಬಾರದಾಗಿತ್ತು.

ಆಪೃಚ್ಛೇ ತ್ವಾದ್ಯ ಗಾಂಧಾರೇ ಯಾಸ್ಯಾಮಿ ವಿಷಯಂ ಪ್ರತಿ ।
ನ ಚಾಹಂ ಸೂತಪುತ್ರಸ್ಯ ಸಾರಥ್ಯಮುಪಜಗ್ಮಿವಾನ್ ॥೬೬॥

ನನಗೆ ಅನುಜ್ಞೆ ಕೊಡು, ದುರ್ಯೋಧನ, ನಾನು ನನ್ನ ದೇಶಕ್ಕೆ ಹಿಂತಿರುಗುವೆ. ಸೂತಪುತ್ರನಿಗೆ ನಾನು ಸಾರಥ್ಯ ಮಾಡಲಾರೆ.

ಅವಮಾನಮಹಂ ಪ್ರಾಪ್ಯ ನ ಯೋತ್ಸ್ಯೇ ಕಥಂಚನ ।
ಆಪೃಚ್ಛೇ ತ್ವಾऽದ್ಯ ಗಾಂಧಾರೇ ಗಮಿಷ್ಯಾಮಿ ಗೃಹಾಯ ವೈ ॥೬೭॥

ದುರ್ಯೋಧನ, ನಿನ್ನಿಂದ ಅವಮಾನಿತನಾದ ಮೇಲೆ ನಾನು ಸರ್ವಥಾ ನಿನ್ನ ಯುದ್ಧದಲ್ಲಿ ಭಾಗವಹಿಸುವುದಿಲ್ಲ. ಈಗಲೇ ನಾನು ನಿನ್ನ ಅನುಜ್ಞೆಯನ್ನು ಕೇಳುವೆ, ಮನೆಗೆ ಹೋಗುವೆ.

ಸಂಜಯಃ

ಏವಮುಕ್ತ್ವಾ ಮಹಾರಾಜ ಶಲ್ಯಃ ಸಮಿತಿಶೋಭನಃ ।
ಉತ್ಥಾಯ ಪ್ರಯಯೌ ತೂರ್ಣಂ ರಾಜಮಧ್ಯಾದಮರ್ಷಿತಃ ॥೬೮॥

ಸಂಜಯ ನುಡಿದ— ಮಹಾರಾಜ, ಯುದ್ಧದಲ್ಲಿ ಶೋಭಿಸುವ ಶಲ್ಯ ಕುಪಿತನಾಗಿ ರಾಜರ ಮಧ್ಯದಿಂದ ಎದ್ದು ಸರಸರನೆ ಹೊರಟ.

ಪ್ರಣಯಾದ್ ಬಹುಮಾನಾಚ್ಚ ತಂ ನಿಗೃಹ್ಯ ಸುತಸ್ತವ ।
ಅಬ್ರವೀನ್ಮಧುರಂ ವಾಕ್ಯಂ ಸಾಮ್ನಾ ಸರ್ವಾರ್ಥಸಾಧಕಮ್ ॥೬೯॥

ನಿನ್ನ ಮಗನು ಅವನನ್ನು ಹಿಡಿದು ನಿಲ್ಲಿಸಿ ಪ್ರೀತಿಗೌರವಪೂರ್ವಕವಾಗಿ ಎಲ್ಲ ಅಭೀಷ್ಟವನ್ನು ಸಾಧಿಸಲು ಸಮರ್ಥವಾದ ಸಂತೈಸುವ ಮಾತನ್ನು ಮಧುರವಾಗಿ ನುಡಿದ.

ಯಥಾ ಶಲ್ಯ ತ್ವಮಾತ್ಥೇದಮೇವಮೇತದಸಂಶಯಮ್ ।
ಅಭಿಪ್ರಾಯಸ್ತು ಮೇ ಕಶ್ಚಿತ್ತಂ ನಿಬೋಧ ಜನೇಶ್ವರ ॥೭೦॥

ಶಲ್ಯ, ನೀನು ಏನು ಹೇಳಿದೆಯೋ ಅದು ಸರಿಯಾಗಿಯೇ ಇದೆ, ಸಂಶಯವಿಲ್ಲ. ಆದರೆ ರಾಜನೆ, ನನ್ನ ಅಭಿಪ್ರಾಯ ಬೇರೆಯೆ ಒಂದಿತ್ತು. ಅದನ್ನು ತಿಳಿ.

ನ ಕರ್ಣೋಽಭ್ಯಧಿಕಸ್ತ್ವತ್ತೋ ನ ಚಾನ್ಯೋ ಚೈವ ಪಾರ್ಥಿವಾಃ ।
ನ ಚ ಮದ್ರೇಶ್ವರ ತ್ವಾಂ ವೈ ಕರ್ಣಃ ಸೋಢುಂ ಚ ಶಕ್ಷ್ಯತಿ ॥೭೧॥

ನಿನಗಿಂತ ಕರ್ಣನಾಗಲಿ, ಬೇರೆ ರಾಜರಾಗಲಿ ಶ್ರೇಷ್ಠರೆಂದು ನನ್ನ ಅಭಿಪ್ರಾಯವಲ್ಲ. ರಾಜನೆ, ನಿನ್ನನ್ನು ರಣದಲ್ಲಿ ಇದಿರಿಸಲು ಕರ್ಣನೂ ಶಕ್ತನಾಗಲಾರ.

ಋತಮೇವ ಹಿ ಪೂರ್ವಾಸ್ತೇ ವದಂತಿ ಪುರುಷೋತ್ತಮಾಃ ।
ತಸ್ಮಾದಾರ್ತಾಯನಿಃ ಪ್ರೋಕ್ತೋ ಭವಾನಿತಿ ಮತಿರ್ಮಮ ॥೭೨॥

ನಿನ್ನ ಪೂರ್ವಜರಾದ ಉತ್ತಮ ಪುರುಷರು 'ಋತ'ವನ್ನೇ ಸತ್ಯವನ್ನೇ ನುಡಿದರು. ಅದರಿಂದ 'ಆರ್ತಾಯನಿ' 'ಋತವನ್ನು ಸತ್ಯವನ್ನೇ ನುಡಿಯುವವರ ವಂಶಜ' ಎಂದು ನಿನ್ನನ್ನು ಕರೆಯುತ್ತಾರೆ ಎಂದು ನಾನು ತಿಳಿದಿದ್ದೇನೆ.

ಶಲ್ಯಭೂತಸ್ತು ಶತ್ರೂಣಾಂ ಯಸ್ಮಾತ್ತ್ವಂ ಯುಧಿ ಮಾನದ ।
ತಸ್ಮಾಚ್ಛಲ್ಯೇತಿ ತೇ ನಾಮ ಕಥ್ಯತೇ ಪೃಥಿವೀತಳೇ ॥೭೩॥

ಶತ್ರುಗಳ ದರ್ಪವಡಗಿಸುವವನೆ, ರಣದಲ್ಲಿ ನೀನು ಶತ್ರುಗಳಿಗೆ 'ಶಲ್ಯ' ಮುಳ್ಳು ಎನಿಸಿರುವುದರಿಂದ ಭೂತಳದಲ್ಲಿ ಶಲ್ಯನಾಮದಿಂದಲೇ ನಿನ್ನನ್ನು ಕರೆಯುತ್ತಾರೆ.

ಯದೇತದ್ವ್ಯಾಹೃತಂ ಪೂರ್ವಂ ಭವತಾ ಭೂರಿದಕ್ಷಿಣ ।
ತದೇವ ಕುರು ಧರ್ಮಜ್ಞ ಮದರ್ಥಂ ಯದ್ಯದುಚ್ಯಸೇ ॥೭೪॥

ಯುದ್ಧದಲ್ಲಿ ಸಹಾಯಮಾಡುವೆನೆಂದು ಮಾತುಕೊಟ್ಟು ಅದನ್ನು ನಡೆಸಿ ಕೊಡುವೆನೆಂದು ಏನು ನೀನು ಹಿಂದೆ ಮಾತುಕೊಟ್ಟಿರುವೆಯೋ ಅದನ್ನು ನಡೆಸಿಕೊಡು, ಧರ್ಮಜ್ಞನೆ, ಬಹಳ ದಕ್ಷಿಣೆ ನೀಡುವವನೆ, ನನ್ನ ಹಿತಕ್ಕಾಗಿ ನಾನು ನಿನಗೆ ಏನೇನು ಹೇಳುವೆನೋ ಅದನ್ನು ನಡೆಸಿಕೊಡು.

ನ ಚ ತ್ವತ್ತೋ ಹಿ ರಾಧೇಯೋ ನ ಚಾಹಮಪಿ ವೀರ್ಯವಾನ್ ।
ವೃಣೇಽಹಂ ತ್ವಾಂ ಹಯಾಗ್ರ್ಯಾಣಾಂ ಯಂತಾರಮಿಹ
ಸಂಯುಗೇ ॥೭೫॥

ನಿನಗಿಂತ ಯುದ್ಧದಲ್ಲಿ ಕರ್ಣನಾಗಲಿ, ನಾನಾಗಲಿ ಹೆಚ್ಚು ವೀರ್ಯಶಾಲಿಯಲ್ಲ. ಅದರಿಂದ ನೀನು ಯುದ್ಧದಲ್ಲಿ ಕರ್ಣನಿಗೆ ಉತ್ತಮಾಶ್ವಗಳ ನಿಯಂತ್ರಣ ಸಮರ್ಥನಾದ ಸಾರಥಿಯಾಗೆಂದು ನಿನ್ನನ್ನು ಕೇಳಿಕೊಳ್ಳುತ್ತೇನೆ.

ಮನ್ಯೇ ಚಾಭ್ಯಧಿಕಂ ಶಲ್ಯ ಗುಣೈಃ ಕರ್ಣಂ ಧನಂಜಯಾತ್ ।
ಭವಂತಂ ವಾಸುದೇವಾಚ್ಚ ಲೋಕೋಽಯಮತಿಮನ್ಯತೇ ॥೭೬॥

ಶಲ್ಯ, ಅರ್ಜುನನಿಗಿಂತ ಕರ್ಣ ಗುಣದಲ್ಲಿ ಮೇಲೆಂದು ನಾನು ತಿಳಿದಿದ್ದೇನೆ. ನಿನ್ನನ್ನು ಕೃಷ್ಣನಿಗಿಂತ ಮೇಲೆಂದು ನಾನು ಮಾತ್ರವಲ್ಲ ಈ ಲೋಕವೂ ತಿಳಿದಿದೆ.

ಕರ್ಣೋ ಹ್ಯಭ್ಯಧಿಕಃ ಪಾರ್ಥಾದಸ್ತ್ರೈರೇವ ನರರ್ಷಭ ।
ಭವಾನಭ್ಯಧಿಕಃ ಕೃಷ್ಣಾದಶ್ವಜ್ಞಾನೇ ಬಲೇ ತಥಾ ॥೭೭॥

ರಾಜನೆ, ಅಸ್ತ್ರಜ್ಞಾನದಲ್ಲಿ ಮಾತ್ರ ಕರ್ಣನು ಅರ್ಜುನನಿಗಿಂತ ಮೇಲು. ನೀನು ಕೃಷ್ಣನಿಗಿಂತ ಅಶ್ವಜ್ಞಾನದಲ್ಲಿ ಮಾತ್ರವಲ್ಲದೆ ಬಲದಲ್ಲಿಯೂ ಮೇಲು.

ಯಥಾಽಶ್ವಹೃದಯಂ ವೇದ ವಾಸುದೇವೋ ಮಹಾಮನಾಃ ।
ದ್ವಿಗುಣಂ ತ್ವಂ ತಥಾ ವೇತ್ಸಿ ಮದ್ರರಾಜೇಶ್ವರಾತ್ಮಜ ॥೭೮॥

ರಾಜನೆ, ಸರ್ವಜ್ಞನಾದ ಕೃಷ್ಣನು ಹೇಗೆ ಅಶ್ವಶಾಸ್ತ್ರಜ್ಞನೋ ಹಾಗೆ ಅದಕ್ಕಿಂತಲೂ ಎರಡು ಪಾಲು ಮಿಗಿಲಾಗಿ ನೀನು ಅಶ್ವಶಾಸ್ತ್ರವನ್ನು ಬಲ್ಲೆ.

ಶಲ್ಯಃ

ಯನ್ಮಾಂ ಬ್ರವೀಷಿ ಗಾಂಧಾರೇ ಮಧ್ಯೇ ಸೈನ್ಯಸ್ಯ ಕೌರವ ।
ವಿಶಿಷ್ಟಂ ದೇವಕೀಪುತ್ರಾತ್ ಪ್ರೀತಿಮಾನಸ್ಮ್ಯಹಂ ತ್ವಯಿ ॥೭೯॥

ಶಲ್ಯನುಡಿದ— ದುರ್ಯೋಧನ, ಸೈನ್ಯದ ಮಧ್ಯದಲ್ಲಿ ನನ್ನನ್ನು ಕೃಷ್ಣನಿಗಿಂತ ಮಿಗಿಲು ಎಂದು ನೀನು ಹೇಳುತ್ತಿರುವುದರಿಂದ ನಿನ್ನ ವಿಷಯದಲ್ಲಿ ನಾನು ಸುಪ್ರೀತನಾಗಿದ್ದೇನೆ.

ಏಷ ಸಾರಥ್ಯಮಾತಿಷ್ಠೇ ರಾಧೇಯಸ್ಯ ಯಶಸ್ವಿನಃ ।
ಯುಧ್ಯತಃ ಪಾಂಡವಾಗ್ರ್ಯೇಣ ಯಥಾ ತ್ವಂ ವೀರ ಮನ್ಯಸೇ ॥೮೦॥

ಯಶಸ್ವಿಯಾದ ಕರ್ಣನಿಗೆ ಅವನು ಅರ್ಜುನನೊಂದಿಗೆ ಯುದ್ಧಮಾಡುವಾಗ ನಿನ್ನ ಅಪೇಕ್ಷೆಯಂತೆ ನಾನು ಸಾರಥ್ಯ ಮಾಡುತ್ತೇನೆ.

ಸಮಯಶ್ಚ ಹಿ ಮೇ ವೀರ ಕಶ್ಚಿದ್ವೈಕರ್ತನಂ ಪ್ರತಿ ।
ಉತ್ಸೃಜೇಯಂ ಯಥಾಶ್ರದ್ಧಮಹಂ ವಾಚೋಽಸ್ಯ ಸನ್ನಿಧೌ ॥೮೧॥

ಆದರೆ ನನ್ನದೊಂದು ನಿಬಂಧನೆ ಇದೆ– ನಾನು ಕರ್ಣನ ಬಳಿ ನನ್ನ ಗ್ರಹಿಕೆಗೆ ಅನುಗುಣವಾಗಿ, ಅದು ಅವನಿಗೆ ಇಷ್ಟವಾಗಲಿ ಬಿಡಲಿ, ಮಾತನ್ನಾಡುತ್ತೇನೆ.

ಸಂಜಯಃ

ತಥೇತಿ ರಾಜನ್ ಪುತ್ರಸ್ತೇ ಸಹ ಕರ್ಣೇನ ಭಾರತ ।
ಅಬ್ರವೀನ್ಮದ್ರರಾಜಸ್ಯ ಮತಂ ಭರತಸತ್ತಮ ॥೮೨॥

ಸಂಜಯ ನುಡಿದ— ರಾಜನೆ, ನಿನ್ನ ಮಗನು ಕರ್ಣನೊಡಗೂಡಿ ಶಲ್ಯನ ಅಭಿಪ್ರಾಯಕ್ಕೆ 'ತಥಾಸ್ತು' ಎಂದು ಹೇಳಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಶಲ್ಯಸಾರಥ್ಯನಿರ್ಣಯೋ ನಾಮ ದ್ವಾತ್ರಿಂಶೋಽಧ್ಯಾಯಃ ॥೩೨॥

❖

ಮಹಾಭಾರತತಾತ್ಪರ್ಯನಿರ್ಣಯ

ಯಥಾ ಶಿವಸ್ಯ ಬ್ರಹ್ಮಾಭೂದ್ ದಹತಸ್ತ್ರಿಪುರಂ ಪುರಾ ।
ಇತ್ಯಾದಿವಾಕ್ಯೈಃ ಸಂಶಾಂತ ಇವ ಶಲ್ಯೋಽಸ್ಯ ಸಾರಥಿಃ ॥೨೭॥

ಹಿಂದೆ ತ್ರಿಪುರದಹನ ಮಾಡುವಾಗ ಶಿವನಿಗೆ ಬ್ರಹ್ಮ ಹೇಗೆ ಸಾರಥಿಯಾದನೋ ಹಾಗೆ, ನೀನೂ ಕರ್ಣನಿಗೆ ಸಾರಥಿಯಾಗಬೇಕು, ಎಂಬ ಮುಂತಾದ ಮಾತುಗಳಿಂದ ಸಮಾಧಾನಗೊಂಡವನಂತೆ ತೋರಿಕೊಂಡು ಶಲ್ಯ ಕರ್ಣನಿಗೆ ಸಾರಥಿಯಾದ.

❖ ❖ ❖

ಮೂವತ್ತಮೂರನೆಯ ಅಧ್ಯಾಯ

ತ್ರಿಪುರ ಸಂಹಾರಕ್ಕೆ ದೇವತೆಗಳ ಪ್ರಾರ್ಥನೆ.

ದುರ್ಯೋಧನಃ

ಭೂಯ ಏವ ತು ಮದ್ರೇಶ ಯತ್ತ್ವಾಂ ವಕ್ಷ್ಯಾಮಿ ತಚ್ಛೃಣು ।
ಯಥಾ ಪುರಾವೃತ್ತಮಿದಂ ಯುದ್ಧೇ ದೇವಾಸುರೇ ಪ್ರಭೋ ॥೧॥

ದುರ್ಯೋಧನ ಶಲ್ಯನಿಗೆ ನುಡಿದ— ಶಲ್ಯ, ಹಿಂದೆ ದೇವಾಸುರರ ಯುದ್ಧದಲ್ಲಿ ನಡೆದ ಒಂದು ಸಂಗತಿಯನ್ನು ಕೂಡ ನಿನಗೆ ಹೇಳುತ್ತೇನೆ, ಕೇಳು.

ಯದುಕ್ತವಾನ್ ಪಿತುರ್ಮಹ್ಯಂ ಮಾರ್ಕಂಡೇಯೋ ಮಹಾತಪಾಃ ।
ಬ್ರುವತಸ್ತದಶೇಷೇಣ ಮಮ ರಾಜರ್ಷಿಸತ್ತಮ ॥೨॥
ನಿಬೋಧ ಮನಸಾ ಚಾತ್ರ ನ ತೇ ಕಾರ್ಯಾ ವಿಚಾರಣಾ ॥೩॥

ಅದನ್ನು ಮಹಾತಪಸ್ವಿಯಾದ ಮಾರ್ಕಂಡೇಯಮುನಿ ನನ್ನ ತಂದೆಗೆ ಹೇಳಿದರು. ರಾಜರ್ಷಿ ಶಲ್ಯನೆ, ಅದನ್ನು ಪೂರ್ತಿ ಹೇಳುತ್ತೇನೆ, ಮನಸಿಟ್ಟು ಕೇಳು. ಅನುಮಾನಿಸಬೇಡ.

ಮುಂದೆ ದುರ್ಯೋಧನ ತ್ರಿಪುರಾಖ್ಯಾನವನ್ನು ಹೇಳುತ್ತಾನೆ. ಯದ್ಯಪಿ

'ಶಲ್ಯನು ಕರ್ಣನ ಸಾರಥ್ಯಮಾಡುವುದಾಗಿ ಒಪ್ಪಿಕೊಂಡನಂತರ ತ್ರಿಪುರಾಖ್ಯಾನವನ್ನು ಹೇಳುವ ಅವಶ್ಯಕತೆ ಇರಲಿಲ್ಲ. ಅದರಿಂದ ಈ ಭಾಗ ಪ್ರಕ್ಷಿಪ್ತವಿರಬಹುದು. ಇದನ್ನು ಬಿಟ್ಟು ಓದಿದರೂ ಕಥೆಯ ಓಟದಲ್ಲಿ, ವಸ್ತುನಿರೂಪಣೆಯಲ್ಲಾಗಲಿ ಏನೂ ವ್ಯತ್ಯಯ ಉಂಟಾಗುವುದಿಲ್ಲ' ಎಂಬ ಸಮಸ್ಯೆ ಬರುತ್ತದೆ. ಆದರೆ ಶಲ್ಯ ತಾನು ಕೊಟ್ಟ ಮಾತಿಗೆ ಕಟ್ಟುಬಿದ್ದು ಸಾರಥ್ಯ ಮಾಡಲು ಒಪ್ಪಿದ್ದಾನೆ. ಮನಃಪೂರ್ವಕವಾಗಿ ಅಲ್ಲ. ಕ್ಷತ್ರಿಯರಾಜನಾದ ತಾನು ಸೂತಪುತ್ರನಿಗೆ ಸಾರಥ್ಯ ಮಾಡುವುದು ಸರಿಯಲ್ಲ ಎಂಬ ಅಸಮಾಧಾನವಿದ್ದೇ ಇದ್ದಿತು. ಅದನ್ನು ಕಳೆಯಲು ದುರ್ಯೋಧನ ಈ ಉಪಾಖ್ಯಾನವನ್ನು ಹೇಳಿ 'ಬ್ರಹ್ಮನು ತನಗಿಂತ ಕಡಿಮೆಯವನಾದ ಶಿವನಿಗೆ ಸಾರಥ್ಯ ಮಾಡಿದಂತೆ ನೀನೂ ಕಡಿಮೆಯವನಾದ ಕರ್ಣನಿಗೆ ಸಾರಥ್ಯ ಮಾಡಿದರೆ ತಪ್ಪಾಗುವುದಿಲ್ಲ' ಎನ್ನುತ್ತಾನೆ. ದ್ರೋಣಪರ್ವದ ಕೊನೆಯಲ್ಲಿ (ದ್ರೋಣ 202.76) ಈ ಉಪಾಖ್ಯಾನ ಹಿಂದೆ ಒಮ್ಮೆ ಬಂದಿದೆ. ಆದರೆ ಬ್ರಹ್ಮನು ಶಿವನಿಗಿಂತ ಹೆಚ್ಚೆನ್ನುವ ಪ್ರಸ್ತಾಪ ಅಲ್ಲಿ ಬಂದಿಲ್ಲ. ಇಲ್ಲಿ ದುರ್ಯೋಧನ ಅದನ್ನು ಒತ್ತಿ ಹೇಳುತ್ತಾನೆ. ರಥಿಕನಿಗಿಂತ ಸಾರಥಿ ಹೆಚ್ಚೇ ಆಗಿರುತ್ತಾನೆ ಎಂದು ಮನದಟ್ಟು ಮಾಡಿಸುತ್ತಾನೆ. ಆದರಿಂದ ಈ ಭಾಗ ಇಲ್ಲಿ ಸಂಗತವೇ ಆಗಿದೆ.

ದೇವಾನಾಮಸುರಾಣಾಂ ಚ ಮಹಾನಾಸೀತ್ ಸಮುಚ್ಛ್ರಯಃ ।
ಸೈಂಹಿಕೇಯಾಸ್ತದೋದ್ಭೃತ್ತಾ ವಿಬುಧಾನವಸೂದಯನ್ ॥೪॥

ದೇವತೆಗಳಿಗೂ ಅಸುರರಿಗೂ ದೊಡ್ಡ ಯುದ್ಧ ನಡೆಯಿತು. ಸಿಂಹಿಕೆಯ ಮಕ್ಕಳು ದುರಾಚಾರಿಗಳಾಗಿ ದೇವತೆಗಳನ್ನು ಪೀಡಿಸಿದರು.

ತೇ ನಿರಸ್ತಾಃ ಕೃತಾ ದೇವೈರ್ದಾನವಾ ಬಲಗರ್ವಿತಾಃ ॥೫॥
ತತ್ರಾಸೀತ್ ಪ್ರಥಮೋ ರಾಜನ್ ಸಂಗ್ರಾಮಸ್ತಾರಕಾಮಯಃ ॥೬॥

ಆಗ ಬಲ-ದರ್ಪದಿಂದ ಕೊಬ್ಬಿದ ದಾನವರನ್ನು ದೇವತೆಗಳು ಹೊಡೆದೋಡಿಸಿದರು. ರಾಜನೆ, 'ತಾರಕಾಮಯ' 'ತಾರಕ'ಗಳಿಗೆ ಕಣ್ಣಿನ ಗುಡ್ಡೆಗಳಿಗೆ 'ಆಮಯ' ಆಯುಧ ರುಳಪಿನಿಂದ ನೋಡುವವರಿಗೆ ನೋವನ್ನುಂಟು ಮಾಡುವಂಥ ಮೊದಲನೇ ದೊಡ್ಡಯುದ್ಧ ಉಂಟಾಯಿತು.

ಕಶ್ಚಿತ್ ಪ್ರಜಾಪತಿಘೋರಸ್ತೇನ ಸಾರ್ಧಂ ದುರಾತ್ಮನಾ ।
ಯುದ್ಧಮಾಸೀತ್ ಮಹಾಘೋರಂ ದೇವಾನಾಮಿತಿ ನಃ ಶ್ರುತಮ್ ॥೭॥

ಮಹಾಭಾರತತಾತ್ಪರ್ಯನಿರ್ಣಯ

ಯಥಾ ಶಿವಸ್ಯ ಬ್ರಹ್ಮಾಭೂದ್ ದಹತಸ್ತ್ರಿಪುರಂ ಪುರಾ ।
ಇತ್ಯಾದಿವಾಕ್ಯೈಃ ಸಂಶಾಂತ ಇವ ಶಲ್ಯೋಽಸ್ಯ ಸಾರಥಿಃ ॥೨೭॥

ಹಿಂದೆ ತ್ರಿಪುರದಹನ ಮಾಡುವಾಗ ಶಿವನಿಗೆ ಬ್ರಹ್ಮ ಹೇಗೆ ಸಾರಥಿಯಾದನೋ ಹಾಗೆ, ನೀನೂ ಕರ್ಣನಿಗೆ ಸಾರಥಿಯಾಗಬೇಕು, ಎಂಬ ಮುಂತಾದ ಮಾತುಗಳಿಂದ ಸಮಾಧಾನಗೊಂಡವನಂತೆ ತೋರಿಕೊಂಡು ಶಲ್ಯ ಕರ್ಣನಿಗೆ ಸಾರಥಿಯಾದ.

❖ ❖ ❖

ಮೂವತ್ತಮೂರನೆಯ ಅಧ್ಯಾಯ

ತ್ರಿಪುರ ಸಂಹಾರಕ್ಕೆ ದೇವತೆಗಳ ಪ್ರಾರ್ಥನೆ.

ದುರ್ಯೋಧನಃ

ಭೂಯ ಏವ ತು ಮದ್ರೇಶ ಯತ್ತ್ವಾಂ ವಕ್ಷ್ಯಾಮಿ ತಚ್ಛೃಣು ।
ಯಥಾ ಪುರಾವೃತ್ತಮಿದಂ ಯುದ್ಧೇ ದೇವಾಸುರೇ ಪ್ರಭೋ ॥೧॥

ದುರ್ಯೋಧನ ಶಲ್ಯನಿಗೆ ನುಡಿದ— ಶಲ್ಯ, ಹಿಂದೆ ದೇವಾಸುರರ ಯುದ್ಧದಲ್ಲಿ ನಡೆದ ಒಂದು ಸಂಗತಿಯನ್ನು ಕೂಡ ನಿನಗೆ ಹೇಳುತ್ತೇನೆ, ಕೇಳು.

ಯದುಕ್ತವಾನ್ ಪಿತುರ್ಮಹ್ಯಂ ಮಾರ್ಕಂಡೇಯೋ ಮಹಾತಪಾಃ ।
ಬ್ರುವತಸ್ತದಶೇಷೇಣ ಮಮ ರಾಜರ್ಷಿಸತ್ತಮ ॥೨॥
ನಿಬೋಧ ಮನಸಾ ಚಾತ್ರ ನ ತೇ ಕಾರ್ಯಾ ವಿಚಾರಣಾ ॥೩॥

ಅದನ್ನು ಮಹಾತಪಸ್ವಿಯಾದ ಮಾರ್ಕಂಡೇಯಮುನಿ ನನ್ನ ತಂದೆಗೆ ಹೇಳಿದರು. ರಾಜರ್ಷಿ ಶಲ್ಯನೆ, ಅದನ್ನು ಪೂರ್ತಿ ಹೇಳುತ್ತೇನೆ, ಮನಸಿಟ್ಟು ಕೇಳು. ಅನುಮಾನಿಸಬೇಡ.

ಮುಂದೆ ದುರ್ಯೋಧನ ತ್ರಿಪುರಾಖ್ಯಾನವನ್ನು ಹೇಳುತ್ತಾನೆ. ಯದ್ಯಪಿ

'ಶಲ್ಯನು ಕರ್ಣನ ಸಾರಥ್ಯಮಾಡುವುದಾಗಿ ಒಪ್ಪಿಕೊಂಡನಂತರ ತ್ರಿಪುರಾಖ್ಯಾನವನ್ನು ಹೇಳುವ ಅವಶ್ಯಕತೆ ಇರಲಿಲ್ಲ. ಅದರಿಂದ ಈ ಭಾಗ ಪ್ರಕ್ಷಿಪ್ತವಿರಬಹುದು. ಇದನ್ನು ಬಿಟ್ಟು ಓದಿದರೂ ಕಥೆಯ ಓಟದಲ್ಲಿ, ವಸ್ತುನಿರೂಪಣೆಯಲ್ಲಾಗಲಿ ಏನೂ ವ್ಯತ್ಯಯ ಉಂಟಾಗುವುದಿಲ್ಲ' ಎಂಬ ಸಮಸ್ಯೆ ಬರುತ್ತದೆ. ಆದರೆ ಶಲ್ಯ ತಾನು ಕೊಟ್ಟ ಮಾತಿಗೆ ಕಟ್ಟುಬಿದ್ದು ಸಾರಥ್ಯ ಮಾಡಲು ಒಪ್ಪಿದ್ದಾನೆ. ಮನಃಪೂರ್ವಕವಾಗಿ ಅಲ್ಲ. ಕ್ಷತ್ರಿಯರಾಜನಾದ ತಾನು ಸೂತಪುತ್ರನಿಗೆ ಸಾರಥ್ಯ ಮಾಡುವುದು ಸರಿಯಲ್ಲ ಎಂಬ ಅಸಮಾಧಾನವಿದ್ದೇ ಇದ್ದಿತು. ಅದನ್ನು ಕಳೆಯಲು ದುರ್ಯೋಧನ ಈ ಉಪಾಖ್ಯಾನವನ್ನು ಹೇಳಿ 'ಬ್ರಹ್ಮನು ತನಗಿಂತ ಕಡಿಮೆಯವನಾದ ಶಿವನಿಗೆ ಸಾರಥ್ಯ ಮಾಡಿದಂತೆ ನೀನೂ ಕಡಿಮೆಯವನಾದ ಕರ್ಣನಿಗೆ ಸಾರಥ್ಯ ಮಾಡಿದರೆ ತಪ್ಪಾಗುವುದಿಲ್ಲ' ಎನ್ನುತ್ತಾನೆ. ದ್ರೋಣಪರ್ವದ ಕೊನೆಯಲ್ಲಿ (ದ್ರೋಣ 202.76) ಈ ಉಪಾಖ್ಯಾನ ಹಿಂದೆ ಒಮ್ಮೆ ಬಂದಿದೆ. ಆದರೆ ಬ್ರಹ್ಮನು ಶಿವನಿಗಿಂತ ಹೆಚ್ಚೆನ್ನುವ ಪ್ರಸ್ತಾಪ ಅಲ್ಲಿ ಬಂದಿಲ್ಲ. ಇಲ್ಲಿ ದುರ್ಯೋಧನ ಅದನ್ನು ಒತ್ತಿ ಹೇಳುತ್ತಾನೆ. ರಥಿಕನಿಗಿಂತ ಸಾರಥಿ ಹೆಚ್ಚೇ ಆಗಿರುತ್ತಾನೆ ಎಂದು ಮನದಟ್ಟು ಮಾಡಿಸುತ್ತಾನೆ. ಅದರಿಂದ ಈ ಭಾಗ ಇಲ್ಲಿ ಸಂಗತವೇ ಆಗಿದೆ.

ದೇವಾನಾಮಸುರಾಣಾಂ ಚ ಮಹಾನಾಸೀತ್ ಸಮುಚ್ಛ್ರಯಃ ।
ಸೈಂಹಿಕೇಯಾಸ್ತದೋದ್ಯತ್ತಾ ವಿಬುಧಾನವಸೂದಯನ್ ॥೪॥

ದೇವತೆಗಳಿಗೂ ಅಸುರರಿಗೂ ದೊಡ್ಡ ಯುದ್ಧ ನಡೆಯಿತು. ಸಿಂಹಿಕೆಯ ಮಕ್ಕಳು ದುರಾಚಾರಿಗಳಾಗಿ ದೇವತೆಗಳನ್ನು ಪೀಡಿಸಿದರು.

ತೇ ನಿರಸ್ತಾಃ ಕೃತಾ ದೇವೈರ್ದಾನವಾ ಬಲಗರ್ವಿತಾಃ ॥೫॥
ತತ್ರಾಸೀತ್ ಪ್ರಥಮೋ ರಾಜನ್ ಸಂಗ್ರಾಮಸ್ತಾರಕಾಮಯಃ ॥೬॥

ಆಗ ಬಲ-ದರ್ಪದಿಂದ ಕೊಬ್ಬಿದ ದಾನವರನ್ನು ದೇವತೆಗಳು ಹೊಡೆದೋಡಿಸಿದರು. ರಾಜನೆ, 'ತಾರಕಾಮಯ' 'ತಾರಕ'ಗಳಿಗೆ ಕಣ್ಣಿನ ಗುಡ್ಡೆಗಳಿಗೆ 'ಆಮಯ' ಆಯುಧ ಝಳಪಿನಿಂದ ನೋಡುವವರಿಗೆ ನೋವನ್ನುಂಟು ಮಾಡುವಂಥ ಮೊದಲನೇ ದೊಡ್ಡಯುದ್ಧ ಉಂಟಾಯಿತು.

ಕಶ್ಚಿತ್ ಪ್ರಜಾಪತಿಘ್ನೋರಸ್ತೇನ ಸಾರ್ಧಂ ದುರಾತ್ಮನಾ ।
ಯುದ್ಧಮಾಸೀತ್ ಮಹಾಘೋರಂ ದೇವಾನಾಮಿತಿ ನಃ ಶ್ರುತಮ್ ॥೭॥

ಪರಾಬಭೂವುರಸುರಾ ದೈವತೈಃ ಸಹ ಸಂಯುಗೇ ।
ದೇವೈರ್ನಿರಸ್ತಾ ಹ್ಯಸುರಾ ನಿಶ್ವಸ್ತಾ ಮರ್ದಿತಾಸ್ತತಃ ॥೮॥
ನಿರ್ಜಿತಾಶ್ಚ ತತೋ ದೈತ್ಯಾ ದೈವತೈರಿತಿ ನಃ ಶ್ರುತಿಃ ॥೯॥

ಒಬ್ಬ 'ಪ್ರಜಾಪತಿ' ದೈತ್ಯಪ್ರಜೆಗಳಿಗೆ ನಾಯಕ ತಾರಕಾಸುರನ ಮಗ ತಾರಾಕ್ಷನೆಂಬುವನು, 'ಘೋರ' ಭಯಂಕರನಿದ್ದ ದುರಾತ್ಮನಾದ ಅವನೊಂದಿಗೆ ದೇವತೆಗಳಿಗೆ ಮಹಾ ಭಯಂಕರವಾದ ಯುದ್ಧ ಉಂಟಾಯಿತು. ಆ ಯುದ್ಧದಲ್ಲಿ ಅಸುರರು ದೇವತೆಗಳೊಂದಿಗೆ ರಣದಲ್ಲಿ ದೇವತೆಗಳಿಂದ ಪರಾಜಿತರಾಗಿ ನಿಟ್ಟುಸಿರಿಟ್ಟರು. ಬಲು ಪೀಡಿತರಾದರು ಎಂದು ನಾವು ಕೇಳಿದ್ದೇವೆ.

ಭಗ್ನದರ್ಪಾ ನಿರುತ್ಸಾಹಾಃ ಪಾತಾಲಂ ವಿವಿಶುಸ್ತದಾ ॥೧೦॥

ದರ್ಪವನ್ನು ಕಳೆದುಕೊಂಡು ನಿರುತ್ಸಾಹಗೊಂಡು ಅಸುರರು ಪಾತಾಳವನ್ನು ಹೊಕ್ಕರು.

ನಿರ್ಜಿತೇಷು ಚ ದೈತ್ಯೇಷು ತಾರಕಸ್ಯ ಸುತಾಸ್ತ್ರಯಃ ।
ತಾರಾಕ್ಷಃ ಕಮಲಾಕ್ಷಶ್ಚ ವಿದ್ಯುನ್ಮಾಲೀ ಚ ಪಾರ್ಥಿವ ॥೧೧॥

ತಪ ಉಗ್ರಂ ಸಮಾಸ್ಥಾಯ ನಿಯಮೇ ಪರಮೇ ಸ್ಥಿತಾಃ ।
ತಪಸಾ ಕರ್ಶಯಾಮಾಸುರ್ದೇಹಾಂಸ್ತಾನ್ ಶತ್ರುಕರ್ಶನಾಃ ॥೧೨॥

ರಾಜನೆ, ಪರಾಜಿತರಾದ ಅಸುರರಲ್ಲಿ ತಾರಾಕ್ಷ ಕಮಲಾಕ್ಷ ಮತ್ತು ವಿದ್ಯುನ್ಮಾಲಿ ಎಂಬ ಮೂರು ಮಂದಿ ತಾರಕಾಸುರನ ಮಕ್ಕಳು ತಾವು ಶತ್ರುನಾಶಕರಾಗಬೇಕೆಂಬ ಉದ್ದೇಶದಿಂದ ಉಗ್ರವಾದ ತಪಸ್ಸಿಗಾಗಿ ತೀವ್ರ ವ್ರತನಿಯಮನಿಷ್ಠರಾಗಿ ತಪಸ್ಸಿನಿಂದ ಅವರ ಆ ದೇಹಗಳನ್ನು ಕೃಶಗೊಳಿಸಿಕೊಂಡರು.

ದಮೇನ ತಪಸಾ ಚೈವ ನಿಯಮೇನ ಸಮಾಧಿನಾ ।
ತೇಷಾಂ ಪಿತಾಮಹಃ ಪ್ರೀತೋ ವರದಃ ಪ್ರದದೌ ವರಮ್ ॥೧೩॥

ಇಂದ್ರಿಯನಿಗ್ರಹ ದೇಹದಂಡನೆ ವ್ರತನಿಯಮ ಹಾಗೂ ಯೋಗಸಮಾಧಿ ಗಳಿಂದ ತಪಗೈದರು. ಅದಕ್ಕೆ ವರದಾಯಕನಾದ ಪಿತಾಮಹ ಬ್ರಹ್ಮದೇವನು ಒಲಿದು ವರ ಕೊಡುವೆನೆಂದ.

ಅವಧ್ಯತ್ವಂ ಚ ತೇ ಸರ್ವೇ ಸರ್ವಭೂತೇಷು ಸರ್ವದಾ ।
ಸಹಿತಾ ವರಯಾಮಾಸುಃ ಸರ್ವಲೋಕಪಿತಾಮಹಮ್ ॥೧೪॥

ತಾವು ಎಲ್ಲರೂ ಎಲ್ಲ ಪ್ರಾಣಿ–ಮನುಷ್ಯಾದಿಗಳಿಂದ ಎಲ್ಲ ಕಾಲದಲ್ಲಿಯೂ ಅವಧ್ಯರೆನಿಸಿಕೊಳ್ಳಬೇಕೆಂದು ಎಲ್ಲರೂ ಕೂಡಿ ಎಲ್ಲ ಲೋಕಗಳಿಗೆ ಪಿತಾಮಹ ನಾದ ಬ್ರಹ್ಮದೇವನಲ್ಲಿ ವರವನ್ನು ಬೇಡಿದರು.

ತಾನಬ್ರವೀತ್ ತದಾ ದೇವಃ ಸರ್ವಲೋಕಗುರುಃ ಪ್ರಭುಃ ।
ನಾಸ್ತಿ ಸರ್ವಾಮರತ್ವಂ ವೈ ನಿವರ್ತಧ್ವಮಿತೋಽಸುರಾಃ ॥೧೫॥
ಅನ್ಯಂ ವರಂ ವೃಣೀಧ್ವಂ ವೈ ರೋಚತೇ ಯಾದೃಶೋ ಹಿ ವಃ ॥೧೬॥

ಸರ್ವಲೋಕಗಳಿಗೆ ಪೂಜ್ಯನಾದ ಸರ್ವಶಕ್ತನಾದ ಬ್ರಹ್ಮದೇವನು ಹೇಳಿದ. ಅಸುರರೆ, ಹೊರಟು ಹೋಗಿರಿ. ಏಕೆಂದರೆ ಸರ್ವರಿಂದ ಸರ್ವಕಾಲದಲ್ಲಿ ಅವಧ್ಯತ್ವವೆಂಬುದು ಯಾರಿಗೂ ಇಲ್ಲ. ಬೇರೆ ವರವನ್ನು, ನಿಮಗೆ ಅದು ಬೇಕೆನಿಸಿದರೆ, ಯಾವುದು ಬೇಕೊ ಅದನ್ನು ಕೇಳಿರಿ.

ತತಸ್ತೇ ಸಹಿತಾ ರಾಜನ್ ಸಂಪ್ರಧಾರ್ಯಾಸಕೃದ್ ಬಹು ।
ಸರ್ವಲೋಕೇಶ್ವರಂ ವಾಕ್ಯಂ ಪ್ರಣಮ್ಯೈನಮಥಾಬ್ರುವನ್ ॥೧೭॥

ರಾಜನೆ, ಆ ಅಸುರರು ಆಗ ಎಲ್ಲರೂ ಸೇರಿ ಬಹಳ ವಿಚಾರಮಾಡಿ ಸರ್ವಲೋಕಪತಿಯಾದ ಬ್ರಹ್ಮದೇವನನ್ನು ನಮಿಸಿ ಈ ಮಾತನ್ನು ನಿವೇದಿಸಿ ಕೊಂಡರು.

ವಸ್ತುಮಿಚ್ಛಾಮ ನಗರಂ ಕರ್ತುಂ ಕಾಮಗಮಂ ಶುಭಮ್ ।
ಸರ್ವಕಾಮಸಮೃದ್ಧಾರ್ಥಮವಧ್ಯಂ ದೇವದಾನವೈಃ ॥೧೮॥

ಯಕ್ಷರಕ್ಷೋರಗಗಣೈರ್ನಾನಾಜಾತಿಭಿರೇವ ಚ ।
ನ ಕೃತ್ಯಾಭಿರ್ನ ಶಸ್ತ್ರೈಶ್ಚ ನ ಶಾಪೈರ್ಬ್ರಹ್ಮವಾದಿನಾಮ್ ॥೧೯॥
ವಧ್ಯೇತ ತ್ರಿಪುರಂ ದೇವ ಪ್ರಯಚ್ಛೇಮಂ ಪಿತಾಮಹ ॥೨೦॥

ನಾವು ವಾಸಮಾಡಲು ನಗರ ನಿರ್ಮಾಣ ಮಾಡಲು ಬಯಸುತ್ತೇವೆ. ಆ

ನಗರವು ಆಕಾಶದಲ್ಲಿ ಎಲ್ಲೆಂದರಲ್ಲಿ ನಮ್ಮ ಇಚ್ಛಾನುಸಾರ ತೇಲುವಂತಿರಬೇಕು. ಸುಖಕರವಾಗಿರಬೇಕು. ಎಲ್ಲ ಭೋಗಪದಾರ್ಥ ಸಮೃದ್ಧಿಯಿಂದ ಕೂಡಿರಬೇಕು. ದೇವ–ದಾನವರಿಂದ ನಾಶವಾಗದಂತಿರಬೇಕು. ನಾನಾ ಜಾತಿಗಳ ಯಕ್ಷ ರಾಕ್ಷಸ ನಾಗ ಗಣಗಳಿಂದಾಗಲಿ ಮಾಟ ಕೃತ್ರಿಮದೇವತೆಗಳಿಂದಾಗಲಿ ಶಸ್ತ್ರಗಳಿಂದಾಗಲಿ ಬ್ರಹ್ಮಜ್ಞಾನಿಗಳ ಶಾಪಗಳಿಂದಾಗಲಿ ನಾಶವಾಗಬಾರದು. ಇಂಥ ಮೂರು ನಗರಗಳ ವರವನ್ನು ಹೇ ದೇವ, ನಮಗೆ ನೀಡು.

ವಯಂ ಪುರಾಣಿ ತ್ರೀಣ್ಯೇವ ಸಮಾಸ್ಥಾಯ ಮಹೀಮಿಮಾಮ್ ।
ವಿಚರಿಷ್ಯಾಮ ಲೋಕೇಽಸ್ಮಿನ್ ತ್ವತ್ಪ್ರಸಾದಪುರಸ್ಕೃತಾಃ ॥೨೧॥

ನಾವು ಈ ಮೂರು ಪುರಗಳಲ್ಲಿಯೇ ವಾಸವಾಗಿದ್ದು ಈ ಲೋಕದಲ್ಲಿ ಈ ಭೂಮಿಯಲ್ಲಿ ನಿನ್ನ ಅನುಗ್ರಹದಿಂದ ಸಂಚರಿಸುವೆವು.

ತತೋ ವರ್ಷಸಹಸ್ರೇಷು ಸಮೇಷ್ಯಾಮಃ ಪರಸ್ಪರಮ್ ।
ಏಕಭಾವಂ ಗಮಿಷ್ಯಂತಿ ಪುರಾಣ್ಯೇತಾನಿ ಚಾನಘ ॥೨೨॥

ಸಾವಿರ ವರ್ಷಗಳಿಗೊಮ್ಮೆ ನಾವು ಪರಸ್ಪರ ಕೂಡುವೆವು. ನಿರ್ದುಷ್ಟನಾದ ದೇವನೆ, ಈ ಮೂರು ಪುರಗಳು ಆಗ ಒಂದೇ ಪ್ರದೇಶದಲ್ಲಿ ಸೇರಿಕೊಂಡು ಒಂದಾಗುವುವು.

ಸಮಾಗತಾನಿ ಚೈತಾನಿ ಯೋ ಹನ್ಯಾದ್ ಭಗವಾಂಸ್ತದಾ ।
ಏಕೇಷುಣಾ ದೇವವರಃ ಸ ನೋ ಮೃತ್ಯುರ್ಭವಿಷ್ಯತಿ ॥೨೩॥

ಹೀಗೆ ಸಮಾಗಮ ಹೊಂದಿದ ಈ ಮೂರು ಪಟ್ಟಣಗಳನ್ನು ಷಡ್ಗುಣ ಪೂರ್ಣನಾದ ದೇವೋತ್ತಮನು ಯಾವನು ಒಂದು ಬಾಣದಿಂದ ನಾಶಗೊಳಿಸುವನೋ ಅವನು ನಮಗೆ ಮೃತ್ಯುವಾಗಬಲ್ಲನು.

ದುರ್ಯೋಧನಃ

ತೇಷಾಂ ತದ್ವಚನಂ ಶ್ರುತ್ವಾ ದಾನವಾನಾಂ ಪಿತಾಮಹಃ ।
ಏವಮಸ್ತ್ವಿತಿ ತಾನ್ ದೇವಃ ಪ್ರತ್ಯುಕ್ತ್ವಾ ಪ್ರಾವಿಶದ್ ದಿವಮ್ ॥೨೪॥

ದುರ್ಯೋಧನ ಶಲ್ಯನಿಗೆ ನುಡಿದ— ಬ್ರಹ್ಮದೇವನು ಆ ಅಸುರರ ಮಾತನ್ನು ಕೇಳಿ 'ಹಾಗೆ ಆಗಲಿ' ಎಂದು ಅವರಿಗೆ ವರವಿತ್ತು ತನ್ನ ಲೋಕವನ್ನು ಹೋಗಿ ಸೇರಿದ.

ತೇ ತು ಲಬ್ಧವರಾಃ ಪ್ರೀತಾಃ ಸಂಪ್ರಧಾರ್ಯ ಪರಸ್ಪರಮ್ ।
ಪುರತ್ರಯವಿಸೃಷ್ಟ್ಯರ್ಥಂ ಮಯಂ ವವ್ರುರ್ಮಹಾರಥಾಃ ॥೨೫॥
ವಿಶ್ವಕರ್ಮಾಣಮಜರಂ ದೈತ್ಯದಾನವಪೂಜಿತಮ್ ॥೨೬॥

ಮಹಾರಥರಾದ ಆ ಅಸುರರು ಹೀಗೆ ವರಪಡೆದು ಸಂತುಷ್ಟರಾಗಿ ಪರಸ್ಪರ ಸಮಾಲೋಚನೆ ಮಾಡಿ, ತ್ರಿಪುರನಿರ್ಮಾಣಕ್ಕಾಗಿ ಮಯಾಸುರನನ್ನು ಬೇಡಿ ಕೊಂಡರು. ಮಯನು 'ವಿಶ್ವಕರ್ಮ' ಎಲ್ಲ ವಾಸ್ತುಶಿಲ್ಪ ನಿರ್ಮಾಣಕರ್ಮಗಳನ್ನು ಮಾಡುವವನು. ಮುಪ್ಪಿಲ್ಲದವನು ದೇವತೆಗಳಿಂದಲೂ ದಾನವರಿಂದಲೂ ಪೂಜಿಸಲ್ಪಡುವವನು.

ತತೋ ಮಯಃ ಸ್ವತಪಸಾ ಚಕ್ರೇ ಧೀಮಾನ್ ಪುರಾಣಿ ಚ ।
ತ್ರೀಣಿ ಕಾಂಚನಮೇಕಂ ವೈ ರೌಪ್ಯಂ ಕಾರ್ಷ್ಣಾಯಸಂ ತಥಾ ॥೨೭॥

ಧೀಮಂತನಾದ ಮಯನು ಬಳಿಕ ತನ್ನ ಶಿಲ್ಪನಿರ್ಮಾಣರೂಪವಾದ ತಪಸ್ಸಿನಿಂದ ಮೂರು ಪುರಗಳನ್ನು ನಿರ್ಮಿಸಿದ. ಒಂದು ಚಿನ್ನದ್ದು ಒಂದು ಬೆಳ್ಳಿಯದ್ದು ಇನ್ನೊಂದು ಕಬ್ಬಿಣದ್ದು.

ಕಾಂಚನಂ ದಿವಿ ತತ್ರಾಸೀದಂತರಿಕ್ಷೇ ಚ ರಾಜತಮ್ ।
ಆಯಸಂ ಚಾಭವದ್ ಭೌಮಂ ತದಾ ತೇಷಾಂ ಪರಂತಪ ॥೨೮॥

ಶತ್ರುನಾಶಕನೆ, ಚಿನ್ನದ ಪುರವು ಸ್ವರ್ಗದಲ್ಲಿ ಬೆಳ್ಳಿಯ ಪುರವು ಅಂತರಿಕ್ಷದಲ್ಲಿ ಕಬ್ಬಿಣದ ಪುರವು ಭೂಮಿಯಲ್ಲಿ ಅಂದರೆ ಭೂಮಿಯ ಸಮೀಪದ ಆಕಾಶದಲ್ಲಿ ಹಾರಾಡುವಂಥದ್ದಾಯಿತು.

ಏಕೈಕಂ ಯೋಜನಶತಂ ವಿಸ್ತೃತಂ ತಾವದಾಯತಮ್ ।
ದೃಢಂ ಚಾಟ್ಟಾಲಕಯುತಂ ಬೃಹತ್ತೋರಣತೋರಣಮ್ ॥೨೯॥

ಪ್ರತಿಯೊಂದು ಪುರವೂ ನೂರು ಯೋಜನಗಳಷ್ಟು ಉದ್ದಗಲವಾಗಿದ್ದು ದೃಢವಾಗಿದ್ದುವು. ದೊಡ್ಡ ಮೂಳಿಗೆ ಮನೆಗಳಿಂದ, ದೊಡ್ಡ ಕೋಟೆ ಮತ್ತು ಹೆಬ್ಬಾಗಿಲು ಗಳಿಂದ ಕೂಡಿದ್ದುವು.

ಗೃಹಪ್ರವರಸಂಬಾಧಮಸಂಬಾಧಮಹಾಪಥಮ್ ।
ಪ್ರಾಸಾದೈರ್ವಿವಿಧೈಶ್ಚಾಪಿ ದ್ವಾರೈಶ್ಚೈವೋಪಶೋಭಿತಮ್ ॥೩೦॥

ಭವ್ಯವಾದ ಮನೆಗಳಿಂದ ಪುರವು ನಿಬಿಡವಾದರೂ ರಾಜಮಾರ್ಗಗಳು ವಿಶಾಲವಾಗಿದ್ದು ವಾಹನಗಳ ದಟ್ಟಣೆ ಇರಲಿಲ್ಲ. ನಾನಾಬಗೆಯ ಮನೆಗಳಿಂದಲೂ ದ್ವಾರಗಳಿಂದಲೂ 'ತ್ರಿಪುರಂ' ಮೂರು ಪುರಗಳು ಶೋಭಿಸಿದುವು.

ತ್ರಿಪುರಂ ತೇಷು ಚಾಪ್ಯಾಸನ್ ರಾಜಾನೋ ವೈ ಪೃಥಕ್‌ಪೃಥಕ್ ।
ದಿವ್ಯಮಾಲ್ಯಾಂಬರಧರಾ ದೈತೇಯಾ ರಾಜಸತ್ತಮ ॥೩೧॥

ರಾಜನೆ, ಮೂರು ಪಟ್ಟಣಗಳಿಗೂ ಮೂರು ಮಂದಿ ಬೇರೆ ಬೇರೆ ಅಧಿ ಪತಿಗಳು ದಿವ್ಯ ಮಾಲೆ, ವಸ್ತ್ರಗಳನ್ನು ಧರಿಸಿದ ಅಸುರರೇ ಆಗಿದ್ದರು.

ಕಾಂಚನಂ ತಾರಕಾಕ್ಷಸ್ಯ ದಿವ್ಯಮಾಸೀನ್ಮಹಾತ್ಮನಃ ।
ರಾಜತಂ ಕಮಲಾಕ್ಷಸ್ಯ ವಿದ್ಯುನ್ಮಾಲಿನ ಆಯಸಮ್ ॥೩೨॥

ದಿವ್ಯವಾದ ಚಿನ್ನದ ಪಟ್ಟಣಕ್ಕೆ ಮಹಾತ್ಮ ತಾರಕಾಕ್ಷ ಅಧಿಪತಿಯಾಗಿದ್ದ. ಬೆಳ್ಳಿಯ ಪಟ್ಟಣ ಕಮಲಾಕ್ಷನ ವಶದಲ್ಲಿತ್ತು. ಕಬ್ಬಿಣದ ಪಟ್ಟಣ ವಿದ್ಯುನ್ಮಾಲಿಯದಾಗಿತ್ತು.

ತ್ರಯಸ್ತೇ ದೈತ್ಯರಾಜಾನಸ್ತ್ರೀನ್ ಲೋಕಾನಾಶು ತೇಜಸಾ ।
ಆಕ್ರಮ್ಯ ತಸ್ಥುರೂಚುಶ್ಚ ಕಶ್ಚ ನಾಮ ಪ್ರಜಾಪತಿಃ ? ॥೩೩॥

ಆ ಮೂರು ಅಸುರರಾಜರು ಮೂರುಲೋಕಗಳನ್ನು ಪರಾಕ್ರಮದಿಂದ ಬೇಗನೆ ಆಕ್ರಮಿಸಿ ನಿಂತರು. 'ಆ ಪ್ರಜಾಪತಿ ಬ್ರಹ್ಮ ಎಂಬುವನು ಯಾರು?' ಎಂದು ತಿರಸ್ಕಾರದಿಂದ ಬ್ರಹ್ಮನ ಮುಂದೆಯೆ ಹೇಳತೊಡಗಿದರು.

ತೇಷಾಂ ದಾನವಮುಖ್ಯಾನಾಂ ಪ್ರಯುತಾನ್ಯರ್ಬುದಾನಿ ಚ ।
ಕೋಟ್ಯಶ್ಚಾಪ್ರತಿವೀರಾಣಾಂ ಸಮಾಜಗ್ಮುಸ್ತತಸ್ತತಃ ॥೩೪॥

ಆ ದಾನವರಾಜರಿಗೆ ಪರಿವಾರವಾಗಿ ದಶಲಕ್ಷ ಕೋಟಿ, ದಶಕೋಟಿ ಸಂಖ್ಯೆಗಳಲ್ಲಿ ಅಪ್ರತಿಮರಾದ ದಾನವವೀರರು ಬೇರೆ ಬೇರೆ ಪ್ರದೇಶಗಳಿಂದ ಬಂದು ಸೇರಿದರು.

ಮಾಂಸಾಶಿನಃ ಸುದೃಪ್ತಾಶ್ಚ ಸುರೈರ್ವಿನಿಕೃತಾಃ ಪುರಾ ।
ಮಹದೈಶ್ವರ್ಯಮಿಚ್ಛಂತಸ್ತ್ರಿಪುರಂ ದುರ್ಗಮಾಶ್ರಿತಾಃ ॥೩೫॥

ಆ ದಾನವವೀರರು ಮಾಂಸಾಹಾರಿಗಳು. ಮಹಾದರ್ಪಿಷ್ಠರು. ಹಿಂದೆ ದೇವತೆಗಳಿಂದ ಪರಾಭವ ಹೊಂದಿದ್ದವರು. ಈಗ ಮಹಾಐಶ್ವರ್ಯವನ್ನು ಬಯಸಿ ದೇವತೆಗಳಿಗೆ ದುರ್ಗಮವಾಗಿರುವ ಮೂರು ಪುರಗಳನ್ನು ಆಶ್ರಯಿಸಿದರು.

ಸರ್ವೇಷಾಂ ಚ ಪುನಶ್ಚೈಷಾಂ ಸರ್ವಯೋಗವಹೋ ಮಯಃ ।
ತಮಾಶ್ರಿತ್ಯ ಹಿ ತೇ ಸರ್ವೇऽವರ್ತಯನ್ನಕುತೋಭಯಾಃ ॥೩೬॥

ಇವರೆಲ್ಲರಿಗೂ ಸರ್ವೇಷ್ಟಭೋಗ ನಿರ್ವಾಹಕನು ಮಯನಾಗಿದ್ದ. ಅವನನ್ನು ಆಶ್ರಯಿಸಿ ಅವರೆಲ್ಲರೂ ಯಾವ ಭಯವೂ ಇಲ್ಲದೆ ವಾಸಮಾಡಿದರು.

ಯೋ ಹಿ ಯಂ ಮನಸಾ ಕಾಮಂ ದಧ್ಯೌ ತ್ರಿಪುರಸಂಶ್ರಯಃ ।
ತಸ್ಮೈ ತಸ್ಮೈ ಮಯಸ್ತಂ ತಂ ವಿದಧೇ ಮಾಯಯಾ ತದಾ ॥೩೭॥

ತ್ರಿಪುರವನ್ನಾಶ್ರಯಿಸಿದ ದಾನವನು ಯಾರು ಯಾರು ಯಾವ ಇಷ್ಟಭೋಗವನ್ನು ಮನಸ್ಸಿನಲ್ಲಿ ಆಲೋಚಿಸುವನೋ ಅವನವನಿಗೆ ಅದನ್ನು ಮಯನು ಮಾಯೆಯಿಂದ ಒದಗಿಸಿಕೊಟ್ಟ.

ತಾರಕಾಕ್ಷಸುತಶ್ಚಾಸೀದ್ಧರಿರ್ನಾಮ ಮಹಾಬಲಃ ।
ತಪಸ್ತೇಪೇ ಪರಮಕಂ ಯೇನಾತುಷ್ಯತ್ ಪಿತಾಮಹಃ ॥೩೮॥

ತಾರಕಾಕ್ಷನ ಮಗನಾದ ಹರಿ ಎಂಬುವನು ಮಹಾಬಲಿಷ್ಠ. ಅವನು ದೊಡ್ಡ ತಪಸ್ಸನ್ನು ಮಾಡಿದ. ಅದಕ್ಕೆ ಬ್ರಹ್ಮದೇವ ಸಂತುಷ್ಟನಾದ.

ಸಂತುಷ್ಟಮವೃಣೋದ್ ದೇವಂ ವಾಪೀ ಭವತು ನಃ ಪುರೇ ।
ಶಸ್ತ್ರೈರ್ವಿನಿಹತಾ ಯತ್ರ ಕ್ಷಿಪ್ತಾಃ ಸ್ಯುರ್ಬಲವತ್ತರಾಃ ॥೩೯॥

ಸಂತುಷ್ಟನಾದ ಬ್ರಹ್ಮದೇವನನ್ನು ಹರಿ ಕೇಳಿಕೊಂಡ: 'ನಮ್ಮ ನಗರದಲ್ಲಿ ರಸಬಾವಿಯ ನಿರ್ಮಾಣವಾಗಬೇಕು. ಶಸ್ತ್ರದಿಂದ ಹತರಾದ ದಾನವರನ್ನು ಆ ಬಾವಿಯಲ್ಲಿ ಹಾಕಿದರೆ ಅವರು ಇನ್ನೂ ಹೆಚ್ಚು ಬಲಿಷ್ಠರಾಗಿ ಹುಟ್ಟಿಕೊಳ್ಳಬೇಕು'.

ಸ ತು ಲಬ್ಧ್ವಾ ವರಂ ವೀರಸ್ತಾರಕಾಕ್ಷಸುತೋ ಹರಿಃ ।
ಸಸೃಜೇ ತತ್ರ ವಾಪೀಂ ತಾಂ ಮೃತಸಂಜೀವಿನೀಂ ಪ್ರಭೋ ॥೪೦॥

ತಾರಕಾಕ್ಷಸುತನಾದ ವೀರ ಹರಿ ಎಂಬ ದಾನವನು ಹೀಗೆ ವರಪಡೆದು ಅಲ್ಲಿ ರಸಬಾವಿ ನಿರ್ಮಾಣ ಮಾಡಿಸಿದ. ರಾಜನೆ, ಆ ಬಾವಿ ಮೃತಸಂಜೀವಿನಿಯಾಯಿತು.

ಯೇನ ರೂಪೇಣ ಯೋ ದೈತ್ಯೋ ಯೇನ ವೇಷೇಣ ಚಾಪ್ಯಥ ।
ಕ್ಷಿಪ್ಯತೇ ನಿಹತೋ ವಾಪ್ಯಾಂ ತಾದೃಶೇನೈವ ಜಾಯತೇ ॥೪೧॥

ಸಂಪೂರ್ಣಬಲವೀರ್ಯಸ್ತು ರಾಜನ್ ಶೌರ್ಯಸಮನ್ವಿತಃ ॥೪೨॥

ಯಾವುದೇ ರೂಪದ, ಯಾವುದೇ ವೇಷದ ದಾನವ ಹತನಾಗಲಿ, ಬಾವಿಯಲ್ಲಿ ಹಾಕಿದಾಗ, ಅದೇ ರೂಪ, ಅದೇ ವೇಷದವನಾಗಿ ಹುಟ್ಟಿ ಬರುತ್ತಾನೆ. ರಾಜನೆ, ಹತನಾದವನು ಶೌರ್ಯಯುಕ್ತನಾಗಿದ್ದರೆ ಪೂರ್ಣ ಬಲವೀರ್ಯ ಶೌರ್ಯ ಯುಕ್ತನಾಗಿಯೆ ಪುನಃ ಬದುಕಿಬರುತ್ತಾನೆ.

ಏವಂ ವೀರ್ಯೇಣ ಸಂಯುಕ್ತಾಃ ಕೃತಾಸ್ತೇನ ಮಹಾತ್ಮನಾ ।
ತಾಂ ಪ್ರಾಪ್ಯ ತ್ರೈಪುರಾ ವಾಪೀಂ ಲೋಕಾನ್ ಸರ್ವಾನ್ ಬಬಾಧಿರೇ ॥

ಹೀಗೆ ಮಹಾತ್ಮ ಹರಿದಾನವನು ದಾನವರನ್ನು ವೀರ್ಯಶಾಲಿಗಳನ್ನಾಗಿ ಮಾಡಿದ. ಹೀಗಾಗಿ ಆ ಮೃತಸಂಜೀವಿನೀ ರಸಬಾವಿಯನ್ನು ಹೊಂದಿದ ದಾನವರು ಸರ್ವಲೋಕಗಳನ್ನು ಪೀಡಿಸಿದರು.

ಮಹತಾ ತಪಸಾ ಸಿದ್ಧಾಃ ಸುರಾಣಾಂ ಭಯವರ್ಧನಾಃ ।
ಏಕಸ್ಮಿನ್ನಿಹತೇ ದೈತ್ಯೇ ಸೃಜಂತಿ ಸ್ಮ ದಶಾಸುರಾನ್ ॥೪೪॥

ಒಬ್ಬ ದಾನವ ಹತನಾದರೆ ಅವನು ಹತ್ತು ದಾನವರನ್ನು ಉತ್ಪಾದಿಸಿದ. ಅವರು ಮಹತ್ತಾದ ತಪಃಸಿದ್ಧಿಯಿಂದ ದೇವತೆಗಳಿಗೆ ಭಯವನ್ನು ಹೆಚ್ಚಿಸಿದರು.

ಮೂಢಗ್ರಾಹೇಣಾತ್ಮನೋ ಯತ್ ಪೀಡಯಾ ಕ್ರಿಯತೇ ತಪಃ ।
ಪರಸ್ಯೋತ್ಸಾದನಾರ್ಥಂ ವಾ ತತ್ ತಾಮಸಮುದಾಹೃತಮ್ ॥
(ಗೀ.17.16)

ಎಂದು ಗೀತೆಯಲ್ಲಿ ಹೇಳಿದಂತೆ, ಲೋಕನಾಶಕ್ಕಾಗಿ ತಾಮಸಜನರು ತಪಗೈಯುತ್ತಾರೆ. ಅದರಿಂದ ಲೋಕಪೀಡೆಯಾದಾಗ, ಅಸುರರಿಗೆ ವರಬಲವಿರುವುದರಿಂದ, ಲೋಕಪಾಲಕರಾದ ದೇವತೆಗಳು ತಾವು ಅಸಹಾಯಕರಾಗಿ, ಲೋಕನಾಶವಾದೀತೆಂದು ಭಯ ಪಡುತ್ತಾರೆ.

ನ ತೇಷಾಂ ವಿದ್ಯತೇ ಯುದ್ಧೇ ಕ್ಷಯೋ ರಾಜನ್ ಕಥಂಚನ ॥೪೫॥

ರಾಜನೆ, ಅಸುರರಿಗೆ ಯಾವ ರೀತಿಯಿಂದೂ ಯುದ್ಧದಲ್ಲಿ ಹಾನಿ ಸಂಭವಿಸಲಿಲ್ಲ.

ತತಸ್ತೇ ಲೋಭಮೋಹಾಭ್ಯಾಮಭಿಭೂತಾ ವಿಚೇತಸಃ ।
ನಿರ್ಭೀಕಾಃ ಸಂಸ್ಥಿತಿಂ ಸರ್ವೇ ಸ್ಥಾಪಿತಾಂ ಸಮಲೂಲುಪನ್ ॥೪೬॥

ಅದರಿಂದ ಅಸುರರು ಲೋಭ ಮೋಹಗಳ ಪ್ರಭಾವಕ್ಕೊಳಗಾಗಿ ಬುದ್ಧಿಶೂನ್ಯರಾಗಿ ಭೀತಿ ಇಲ್ಲದೆ ಎಲ್ಲರೂ ಜೊತೆಸೇರಿ ಲೋಕದಲ್ಲಿ ದೇವತೆಗಳಿಂದ ಸ್ಥಾಪಿತವಾಗಿದ್ದ ಸುಸ್ಥಿತಿಯನ್ನು ನಾಶಗೊಳಿಸಿದರು.

ವಿದ್ರಾವ್ಯ ಸಗಣಾನ್ ದೇವಾಂಸ್ತತ್ರ ತತ್ರ ತದಾ ತದಾ ।
ವಿಚೇರುಃ ಸ್ವೇನ ಕಾಮೇನ ವರದಾನೇನ ದರ್ಪಿತಾಃ ॥೪೭॥

ದೇವತೆಗಳನ್ನು ಪರಿವಾರಸಮೇತವಾಗಿ ಸ್ವರ್ಗದಿಂದ ಹೊರಗೆ ಓಡಿಸಿ, ವರಬಲದಿಂದ ದೃಪ್ತರಾದ ಅಸುರರು ತಮಗೆ ಮನಬಂದಂತೆ, ಎಲ್ಲ ಕಡೆ ಎಲ್ಲ ಕಾಲಗಳಲ್ಲಿ ಸಂಚರಿಸಿದರು.

ದೇವೋದ್ಯಾನಾನಿ ಸರ್ವಾಣಿ ಸ್ಥಾನಾನಿ ಚ ದಿವೌಕಸಾಮ್ ।
ಋಷೀಣಾಮಾಶ್ರಮಾನ್ ಪುಣ್ಯಾನ್ ರಮ್ಯಾನ್ ಜನಪದಾಂಸ್ತಥಾ॥೪೮॥
ಉತ್ಸಾದಯಂತ ಮರ್ಯಾದಾಂ ದಾನವಾ ದುಷ್ಟಚಾರಿಣಃ ॥೪೯॥

ಎಲ್ಲ ದೇವೋದ್ಯಾನಗಳನ್ನೂ ದೇವತೆಗಳ ಸ್ಥಾನಗಳನ್ನೂ ಋಷಿಗಳ

ಪುಣ್ಯಾಶ್ರಮಗಳನ್ನೂ ರಮ್ಯವಾದ ರಾಜ್ಯಗಳನ್ನೂ ಲೋಕಮರ್ಯಾದೆಯನ್ನೂ ದುಷ್ಪಚಾರಿಗಳಾದ ದಾನವರು ನಾಶಪಡಿಸಿದರು.

ನಿಃಸ್ಥಾನಾಶ್ಚ ಕೃತಾ ದೇವಾ ಋಷಯಃ ಪಿತೃಭಿಃ ಸಹ ।
ದೈತ್ಯೈಸ್ತ್ರಿಭಿಸ್ತ್ರಯೋ ಲೋಕಾ ಹ್ಯಾಕ್ರಾಂತಾಸ್ತೈಃ ಸುರೇತರೈಃ ॥೫೦॥

ದೇವತೆಗಳೂ ಋಷಿಗಳೂ ಪಿತೃಗಳೂ ನಿರಾಶ್ರಯರಾದರು. ಹೀಗೆ ಸುರಸ್ವಭಾವದವರಲ್ಲದ ಅಸುರರು ಮೂವರು ಮೂಲೋರ್ಕಗಳನ್ನು ಆಕ್ರಮಿಸಿದರು.

ಪೀಡ್ಯಮಾನೇಷು ಲೋಕೇಷು ತತಃ ಶಕ್ರೋ ಮರುದ್ವೃತಃ ।
ಪುರಾಣ್ಯಾಯೋಧಯಾಂಚಕ್ರೇ ವಜ್ರಹಸ್ತಃ ಸಮಂತತಃ ॥೫೧॥

ಲೋಕಗಳು ಪೀಡೆಗೊಳಗಾದಾಗ ದೇವೇಂದ್ರನು ವಜ್ರಾಯುಧವನ್ನು ಹಿಡಿದು, ಮರುದ್ಗಣಗಳಿಂದ ಯುಕ್ತನಾಗಿ ತ್ರಿಪುರರ ಮೇಲೆ ಎಲ್ಲಕಡೆಯಿಂದ ದಾಳಿ ನಡೆಸಿದ.

ನಾಶಕತ್ ತಾನ್ಯಭೇದ್ಯಾನಿ ಯದಾ ಭೇತ್ತುಂ ಪುರಂದರಃ ।
ಪುರಾಣಿ ವರದತ್ತಾನಿ ಧಾತ್ರಾ ತೇನ ನರಾಧಿಪ ॥೫೨॥

ರಾಜನೆ, ಪುರಗಳನ್ನು ಅಸುರರಿಗೆ ಬ್ರಹ್ಮದೇವ ವರವಾಗಿ ನೀಡಿದ್ದಾದ್ದರಿಂದ ಪುರಂದರನಿಗೂ ಅಭೇದ್ಯವಾದ ಆ ಪುರಗಳನ್ನು ಭೇದಿಸಲು ಶಕ್ಯವಾಗಲಿಲ್ಲ.

ತದಾ ಭೀತಃ ಸುರಪತಿರ್ಮುಕ್ತ್ವಾ ತಾನಿ ಪುರಾಣ್ಯಥ ।
ತೈರೇವ ವಿಬುಧೈಃ ಸಾರ್ಧಂ ಪಿತಾಮಹಮರಿಂದಮ ॥೫೩॥
ಜಗಾಮಾಥ ತದಾಖ್ಯಾತುಂ ವಿಪ್ರಕಾರಂ ಸುರೇತರೈಃ ॥೫೪॥

ಆಗ ರಾಜನೆ, ದೇವರಾಜನು ಆ ಪುರಗಳನ್ನು ಹಾಗೇ ಬಿಟ್ಟು ದೇವತೆಗಳೊಂದಿಗೆ ಬ್ರಹ್ಮದೇವನ ಬಳಿಯಲ್ಲಿ ಅಸುರರ ದಬ್ಬಾಳಿಕೆಯನ್ನು ನಿವೇದಿಸಿಕೊಳ್ಳಲು ತೆರಳಿದ.

ತೇ ತತ್ತ್ವಂ ಸರ್ವಮಾಖ್ಯಾಯ ಶಿರೋಭಿಃ ಸಂಪ್ರಣಮ್ಯ ಚ ।
ತದ್ವಧೋಪಾಯಮಾಚಕ್ಷ್ವ ಭಗವನ್ನಿತಿ ಚಾಬ್ರುವನ್ ॥೫೫॥

ಬ್ರಹ್ಮದೇವನ ಬಳಿಯಲ್ಲಿ ಅವರು ನಿಜಸಂಗತಿಯನ್ನೆಲ್ಲ ಹೇಳಿ ತಲೆಬಾಗಿ ನಮಿಸಿ ''ಪೂಜ್ಯನೆ, ಅಸುರರ ವಧೆಗೆ ಉಪಾಯವನ್ನು ಹೇಳು' ಎಂದರು.

ಶ್ರುತ್ವಾ ತದ್ ಭಗವಾನ್ ದೇವೋ ದೇವಾನಿದಮುವಾಚ ಹ ।
ಶ್ರೂಯತಾಂ ತ್ರಿದಶಾಃ ಸರ್ವೇ ಯಥೇದಂ ವಾಕ್ಯಗೌರವಮ್ ॥೫೬॥

ಪೂಜ್ಯ ಬ್ರಹ್ಮದೇವನು ಎಲ್ಲವನ್ನೂ ಕೇಳಿ ದೇವತೆಗಳಿಗೆ ಹೇಳಿದ, 'ದೇವತೆಗಳೆಲ್ಲರೂ ಕೇಳಿ, ಇದು ಎಲ್ಲವೂ ನನ್ನ ವರದಾನ ವಾಕ್ಯದ ಮಹತ್ವ.

ಮಮಾಪಿ ಸೋಽಪರಾಧ್ನೋತಿ ಯೋ ಯುಷ್ಮಾಕಮಸೌಖ್ಯಕೃತ್ ।
ಅಸುರಾಶ್ಚ ದುರಾತ್ಮಾನಃ ಸರ್ವ ಏವ ಸುರದ್ವಿಷಃ ॥೫೭॥

ಯಾವನು ನಿಮಗೆ ಅಪರಾಧ ಮಾಡುವನೋ ಅವನು ನನಗೂ ಅಪರಾಧ ಮಾಡಿದಂತೆಯೇ ಆಗುತ್ತದೆ. ದುರಾತ್ಮರಾದ ಅಸುರರೆಲ್ಲರೂ ಸುರದ್ವೇಷಿಗಳು, ಸುರರಲ್ಲಿ ನಿತ್ಯ ಅಪರಾಧ ಮಾಡುತ್ತಾರೆ.

ದುರಾತ್ಮಾನೋಽಸುರಾ ನಿತ್ಯಂ ತೇ ಚಾಪಿ ವಿಬುಧಾ ಮಮ ।
ನ ಶಕ್ನುವಂತಿ ತೇ ಸರ್ವೇ ಯುಷ್ಮಾನ್ ವೈ ಪೀಡಯಂತಿ ತೇ ॥೫೮॥

ಏಕೆಂದರೆ, ದೇವತೆಗಳೆ! ದುರಾತ್ಮರಾದ ಅಸುರರು ನಿತ್ಯ ನಮಗೆ ಅಪರಾಧ ಮಾಡಲು ಶಕ್ತರಾಗುವುದಿಲ್ಲ. ಅದಕ್ಕೆ ಸಜ್ಜನರಲ್ಲಿ ಸತತ ಅಪರಾಧ ಮಾಡುವ ಮೂಲಕ ನಿಮ್ಮನ್ನು ಅವರು ಪೀಡಿಸುತ್ತಾರೆ.

ಅಹಂ ಸಮಸ್ತು ಸರ್ವೇಷಾಂ ಭೂತಾನಾಂ ನಾತ್ರ ಸಂಶಯಃ ।
ಅವಿನೀತಾ ನಿಹಂತವ್ಯಾ ಇತ್ಯೇವಂ ಪ್ರಬ್ರವೀಮಿ ವಃ ॥೫೯॥

ನಾನು ತಪಸ್ಸು ಮಾಡುವ ಸರ್ವಪ್ರಜೆಗಳಲ್ಲಿಯೂ ಸಮನಾಗಿ ವರ್ತಿಸುತ್ತೇನೆ. ಎಲ್ಲರಿಗೂ ವರ ನೀಡುತ್ತೇನೆ. ಇದರಲ್ಲಿ ಸಂಶಯವಿಲ್ಲ. ಆದರೂ ಅವಿನೀತರಾಗಿರುವ ಅಸುರರನ್ನು ಕೊಲ್ಲಲೇಬೇಕಾಗಿದೆ. ಅದರಿಂದ ನಿಮಗೆ ತಕ್ಕ ಉಪಾಯವನ್ನು ಹೇಳುತ್ತೇನೆ.

ಏಕೇಷುಣಾ ವಿಭೇದ್ಯಾನಿ ತಾನಿ ದುರ್ಗಾಣಿ ನಾನ್ಯಥಾ ।
ಶಕ್ತಸ್ತು ತಾನಿ ಬಾಣೇನ ಭೇತ್ತುಂ ಕಾಮಂ ತ್ರಿಲೋಚನಃ ॥೬೦॥

ಒಂದು ಬಾಣದಿಂದ ದುರ್ಗಮವಾದ ಆ ಪುರಗಳನ್ನು ಭೇದಿಸಬೇಕು. ಅವುಗಳನ್ನು ಬಾಣದಿಂದ ಭೇದಿಸಲು ಬಲು ಸಮರ್ಥನು ಮುಕ್ಕಣ್ಣನಾದ ರುದ್ರದೇವ.

ತೇ ಯೂಯಂ ಸ್ಥಾಣುಮೀಶಾನಂ ಜಿಷ್ಣುಮಕ್ಲಿಷ್ಟಕಾರಿಣಮ್ ।
ಯೋದ್ಧಾರಂ ವೃಣುತ ಕ್ಷಿಪ್ರಂ ಸ ತಾನ್ ಹಂತಾ ಸುರೇತರಾನ್ ॥೬೧॥

ಕ್ಲೇಶವಿಲ್ಲದೆ ಕಾರ್ಯವನ್ನು ಪೂರೈಸಬಲ್ಲವನು, ಜಯಶೀಲನಾದ ಸ್ಥಾಣುವಾದ ಈಶ್ವರ. ಅವನನ್ನು ಯೋಧನನ್ನಾಗಿ ವರಿಸಿರಿ. ಅವನು ಬೇಗನೆ ಆ ಅಸುರನನ್ನು ಕೊಲ್ಲುವನು.'

ತೇ ದೇವಾಸ್ತೇನ ವಾಕ್ಯೇನ ಚೋದಿತಾಃ ಪ್ರಣತಾಃ ಸ್ಥಿತಾಃ ।
ದಿವ್ಯಂ ವರ್ಷಸಹಸ್ರಂ ವೈ ತಪಸ್ತಪ್ತ್ವಾ ಸುರರ್ಷಭಾಃ ॥೬೨॥

ದೇವತೆಗಳು ಬ್ರಹ್ಮದೇವನ ಮಾತಿನಿಂದ ಪ್ರೇರಿತರಾಗಿ ನಮಿಸಿ ಮುಕ್ಕಣ್ಣ ಶಿವನ ಕುರಿತು ದೇವಮಾನದ ಸಾವಿರವರ್ಷಕಾಲ ತಪಸ್ಸು ಮಾಡುತ್ತಲಿದ್ದರು.

ಶುಭಾತ್ಮಾನೋ ಮಹಾತ್ಮಾನೋ ಜಗ್ಮುರ್ವೈ ವೃಷಭಧ್ವಜಮ್ ॥೬೩॥

ಬ್ರಹ್ಮಾಣಮಗ್ರತಃ ಕೃತ್ವಾ ಶರಣ್ಯಂ ಶರಣಾಗತಾಃ ।
ತಪಃ ಪರಮಮಾಜಗ್ಮುರ್ಗೃಣಂತೋ ಬ್ರಹ್ಮ ಶಾಶ್ವತಮ್ ॥೬೪॥

ಶುಭಸ್ವರೂಪರಾದ ಮಹಾತ್ಮರಾದ ದೇವತೆಗಳು ಬ್ರಹ್ಮದೇವನನ್ನು ಮುಂದೆ ಮಾಡಿಕೊಂಡು ಶರಣುಹೊಂದಲು ಯೋಗ್ಯನಾದ ವೃಷಭಧ್ವಜನ ಅಂತರ್ಯಾಮಿಯನ್ನು ಶರಣು ಹೊಂದಿದರು. ಮತ್ತು ಅಂತರ್ಯಾಮಿಯಾದ ಶಾಶ್ವತ ಪರಬ್ರಹ್ಮವಿಷ್ಣುವನ್ನು ಸ್ತುತಿಸುತ್ತ ಉತ್ತಮವಾದ ತಪಸ್ಸನ್ನು ಮಾಡಿದರು.

ಇಲ್ಲಿ ಮುಂದೆ 35ನೇ ಅಧ್ಯಾಯದ 39ನೇ ಶ್ಲೋಕ-
'ವಿಷ್ಣುಶ್ಚಾತ್ಮಾ ಭಗವತೋ ಭವಸ್ಯಾಮಿತತೇಜಸಃ'
ಎಂಬಲ್ಲಿ ಶಿವನಲ್ಲಿ ಶಿವರೂಪದಿಂದ ಅಂತರ್ಯಾಮಿಯಾಗಿರುವ ವಿಷ್ಣುವನ್ನೇ 'ಭವಸ್ಯ ಆತ್ಮಾ' ಎಂದಿದೆ. ಶಿವನನ್ನು ಸಂತೋಷಪಡಿಸಿದರೆ ಅವನ ಅಂತರ್ಯಾಮಿ ಒಲಿಯುತ್ತಾನೆ. ಅದಕ್ಕೆ ಬ್ರಹ್ಮಾದಿ ದೇವತೆಗಳು ಶಿವನನ್ನು

ಶರಣುಹೊಂದಿದರು. ಮತ್ತು ಶಿವನ ಅಂತರ್ಯಾಮಿಯಾದ ಪರಬ್ರಹ್ಮ ನಾರಾಯಣನನ್ನು ಶಿವನ ಹೆಸರುಗಳಿಂದ ಸ್ತುತಿಸಿದರು.

ಭಾಗವತದಲ್ಲಿ (4.3.22) ಶಿವನು ಸತಿಗೆ ಹೇಳುತ್ತಾನೆ–

'ಪ್ರತ್ಯುದ್ಗಮ ಪ್ರಶ್ರಯಣಾಭಿವಾದನಂ-
ವಿಧೀಯತೇ ಸಾಧು ಮಿಥಃ ಸುಮಧ್ಯಮೇ ।
ಪ್ರಾಜ್ಞೈಃ ಪರಸ್ಮೈ ಪುರುಷಾಯ ಚೇತಸಾ-
ಗುಹಾಶಯಾಯೈವ, ನ ದೇಹಮಾನಿನೇ ॥'

'ಬಂದ ಅತಿಥಿಗಳನ್ನು ಇದಿರುಗೊಂಡು ನಮಿಸುವಾಗ, ತಿಳಿದವರು ಅವರೊಳಗೆ ಅಂತರ್ಯಾಮಿಯಾಗಿರುವ ಪರಮಪುರುಷನನ್ನೇ ನಮಿಸಬೇಕು' ಎಂದು. ಈ ಅಭಿಪ್ರಾಯದಿಂದಲೇ 'ಶಾಶ್ವತಂ ಪರಮಂ ಬ್ರಹ್ಮ ಗೃಣಂತಃ' ಎಂದು ಪ್ರಕೃತದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಮುಂದೆ ದೇವತೆಗಳು ರುದ್ರಾಧ್ಯಾಯದಿಂದ ರುದ್ರದೇವನನ್ನು ಸ್ತುತಿಸುವುದು ಮುಖ್ಯವಾಗಿ ರುದ್ರಾಂತರ್ಯಾಮಿಗೇ ಸಲ್ಲುತ್ತದೆ ಎಂದು ತಿಳಿಯಬೇಕು. ಇಲ್ಲದಿದ್ದರೆ 'ಬ್ರಹ್ಮಾಣಮಗ್ರತಃ ಕೃತ್ವಾ' ಬ್ರಹ್ಮದೇವರನ್ನು ಮುಂದೆ ಮಾಡಿಕೊಂಡು ದೇವತೆಗಳು ಬ್ರಹ್ಮಪುತ್ರನಾದ ಶಿವನನ್ನು ಶರಣುಹೊಂದುವುದು, ಸ್ತುತಿಸುವುದು ಯುಕ್ತವಾಗಲಾರದು.

'ತ್ರಿಮೂರ್ತಿಗಳು ಪರಬ್ರಹ್ಮಸ್ವರೂಪರು, ಸಮಾನರೆ'ನ್ನುವುದು ಭಾರತಕ್ಕೆ ಸಮ್ಮತವಲ್ಲ. ಈ ತ್ರಿಪುರಾಖ್ಯಾನ ಹೊರಟಿರುವುದೇ ಬ್ರಹ್ಮನು ಶಿವನಿಗಿಂತ ಉತ್ತಮನೆಂದೂ, ಶಿವನಿಗಿಂತ ಉತ್ತಮನಾದ ಬ್ರಹ್ಮ ಶಿವನಿಗೆ ಸಾರಥ್ಯ ಮಾಡಿದನೆಂದೂ ಹೇಳುವ ಉದ್ದೇಶದಿಂದ. ಹಾಗೆ ಹೇಳಿ, ಸೂತಜಾತಿಯ ಕರ್ಣನಿಗೆ ಉತ್ತಮ ಕ್ಷತ್ರಿಯಜಾತಿಯವನಾದ ಶಲ್ಯನು ಸಾರಥ್ಯ ಮಾಡುವುದನ್ನು ಉಚಿತವೆಂದು ಸಮರ್ಥಿಸುತ್ತಾನೆ ದುರ್ಯೋಧನ.

ಅನಂಗಮಥನಂ ಸರ್ವೇ ಭವಂ ಸರ್ವಾತ್ಮನಾ ಗತಾಃ ।
ದೇವದೇವಂ ಪರಂ ಸ್ಥಾಣುಂ ವರದಂ ತ್ರ್ಯಂಬಕಂ ಶಿವಮ್ ॥೬೫॥

ಮನ್ಮಥನನ್ನು ಸುಟ್ಟವನು ದೇವದೇವ ಸ್ಥಾಣು ತ್ರ್ಯಂಬಕ ಪರಶಿವನು ತಮಗೆ ವರದಾಯಕನಾಗಲೆಂದು ಸರ್ವಾತ್ಮನಾ ಶರಣಾಗತರಾದರು ದೇವತೆಗಳು.

ಶರ್ವಮೀಡ್ಯಮಜಂ ರುದ್ರಂ ಶಶಾಂಕಾಂಕಿತಮೂರ್ಧಜಮ್ ।
ತುಷ್ಟುವುರ್ವಾಗ್ಭಿರಗ್ರ್ಯಾಭಿರ್ಭಯೇಷ್ವಭಯಮಚ್ಯುತಮ್ ॥೬೬॥

ಶರ್ವ, ಈಡ್ಯ, ಅಜ, ಉಗ್ರ, ಚಂದ್ರಶೇಖರ, ಭಯಬಂದಾಗ ಅಭಯ ನೀಡುವವನು ಸರ್ವಾಂತರ್ಯಾಮಿಯಾಗಿ ಸರ್ವವನ್ನು ವಶದಲ್ಲಿರಿಸಿ ಕೊಂಡವನು ಮಹಾತ್ಮನಾದ ಶಿವನ ಅಂತರ್ಯಾಮಿ ಅಚ್ಯುತ. ಅವನನ್ನು ಉತ್ತಮವಾದ ಶಬ್ದಗಳಿಂದ ದೇವತೆಗಳು ಸ್ತುತಿಸಿದರು.

ಸರ್ವಾತ್ಮಾನಂ ಮಹಾತ್ಮಾನಂ ಯೇನಾಪ್ತಂ ವಿಶ್ವಮಾತ್ಮನಾ ॥೬೭॥
ತಪೋವಿಶೇಷೈರ್ವಿವಿಧೈರ್ಯೋಗಂ ಯೋ ವೇದ ಚಾತ್ಮನಾ ।
ಯಃ ಸಾಂಖ್ಯಮಾತ್ಮನಾ ವೇತ್ತಿ ಯಸ್ಯ ಚಾತ್ಮಾ ವಶೇ ಸದಾ ॥೬೮॥

ವಿವಿಧ ಉತ್ತಮ ತಪಗಳಿಂದ ಮೋಕ್ಷೋಪಾಯವಾದ ವಿಷ್ಣುಭಕ್ತಿಯನ್ನು ಮನಸಿನಲ್ಲಿ ಸಂಪಾದಿಸಿದವನು, ಮನಸಿನಿಂದ 'ಸಾಂಖ್ಯ'ವನ್ನು ಶುದ್ಧಾತ್ಮತತ್ವಜ್ಞಾನ ವನ್ನು ತಿಳಿದವನು. ಮನಸ್ಸನ್ನು ವಶದಲ್ಲಿರಿಸಿಕೊಂಡವನು ಶಿವ.

ತಂ ತೇ ದದೃಶುರೀಶಾನಂ ತೇಜೋರಾಶಿಮುಮಾಪತಿಮ್ ।
ಪರೇಣ ಯತ್ನೇನ ಭವಂ ತ್ರಿದಶಾಃ ಶರ್ವಮೀಶ್ವರಮ್ ॥೬೯॥

ಈಶಾನ ಭವ ಶರ್ವ ಈಶ್ವರನೆಂದು ಮುಂತಾಗಿ ಪ್ರಸಿದ್ಧನಾದ ತೇಜೋರಾಶಿ ಯಾದ ಆ ಉಮಾಪತಿಯನ್ನು ಮಹಾ ಪ್ರಯತ್ನದಿಂದ ದೇವತೆಗಳು ದರ್ಶನ ಮಾಡಿದರು.

ಅನನ್ಯಸದೃಶಂ ಲೋಕೇ ಪ್ರತಪಂತಮಕಲ್ಮಷಮ್ ॥೭೦॥
ಏಕಂ ಚ ಭಗವಂತಂ ತೇ ನಾನಾರೂಪಮಕಲ್ಪಯನ್ ।
ಆತ್ಮನಃ ಪ್ರತಿರೂಪಾಣಿ ರೂಪಾಣ್ಯಥ ಮಹಾತ್ಮನಿ ॥೭೧॥
ಪರಸ್ಪರಸ್ಯ ಚಾಪಶ್ಯನ್ ಸರ್ವೇ ಪರಮವಿಸ್ಮಿತಾಃ ॥೭೨॥

ಲೋಕದಲ್ಲಿ ಅಸದೃಶ ತಪೋನಿರತ ಪಾಪರಹಿತ–ಇಂಥ ಶಿವನ ಅಂತರ್ಯಾಮಿಯಾದ ಸರ್ವೋತ್ತಮ ಭಗವಂತನನ್ನು ನಾನಾರೂಪಗಳಲ್ಲಿ ದೇವತೆಗಳು ಕಂಡುಕೊಂಡರು. ಪಶ್ಯಾಮಿ ದೇವಾನ್ ತವ ದೇವ ದೇಹೇ (ಗೀತಾ. ೧೧.೧೫) ಎಂದು ಗೀತೆ ಹೇಳುವಂತೆ ಅರ್ಜುನ ಕೃಷ್ಣನ ವಿಶ್ವರೂಪದಲ್ಲಿ ಎಲ್ಲ ದೇವತೆಗಳನ್ನು ಕಂಡ. ಹಾಗೇ ಮಹಾತ್ಮನಾದ ಶಿವನಲ್ಲಿ ಅವನ

ಅಂತರ್ಯಾಮಿಯಲ್ಲಿ ಎಲ್ಲ ದೇವತೆಗಳು ತಮ್ಮನ್ನು, ತಮ್ಮ ಪ್ರತಿರೂಪಗಳಾದ ತಮ್ಮ ರೂಪಗಳನ್ನು ಕಂಡು ವಿಸ್ಮಯಪಟ್ಟರು.

ಸರ್ವಭೂತಮಯಂ ದೃಷ್ಟ್ವಾ ತಮಜಂ ಜಗತಃ ಪತಿಮ್ ।
ದೇವಾ ಬ್ರಹ್ಮರ್ಷಯಶ್ಚೈವ ಶಿರೋಭಿರ್ಧರಣೀಂ ಗತಾಃ ॥೭೩॥

ಎಲ್ಲ ಚೇತನ, ಅಚೇತನಗಳಿಗೆ ಆಶ್ರಯನಾಗಿದ್ದು ಜನ್ಮರಹಿತನಾಗಿದ್ದು, ಜಗನ್ನಾಥನೆನಿಸಿದ ಶಿವಾಂತರ್ಯಾಮಿಯನ್ನು ದೇವತೆಗಳೂ ಬ್ರಹ್ಮರ್ಷಿಗಳೂ ತಲೆಬಾಗಿ ನಮಿಸಿದರು.

ತಾನ್ ಸ್ವಸ್ತಿವಾಚ್ಯ ಚಾಭ್ಯರ್ಚ್ಯ ಸಮುತ್ಥಾಪ್ಯ ಚ ಶಂಕರಃ ।
ಬ್ರೂತ ಬ್ರೂತೇತಿ ಭಗವಾನ್ ಸ್ಮಯಮಾನೋಽಭ್ಯಭಾಷತ ॥೭೪॥

ಭಗವಾನ್ ಶಿವನು 'ಶುಭವಾಗಲಿ' ಎನ್ನುತ್ತ ಹರಸಿ ಸಂತೋಷಪಡಿಸಿ ಮೇಲೆಬ್ಬಿಸಿ 'ನಿಮ್ಮಿಷ್ಟವನ್ನು ಹೇಳಿರಿ, ಹೇಳಿರಿ' ಎಂದು ನಸುನಗುತ್ತ ನುಡಿದ.

ತ್ರ್ಯಂಬಕೇಣಾಭ್ಯನುಜ್ಞಾತಾಸ್ತತಸ್ತೇ ಸ್ವಸ್ಥಚೇತಸಃ ।
ನಮೋ ನಮೋ ನಮಸ್ತೇಽಸ್ತು ಪ್ರಭೋ ಇತ್ಯಬ್ರುವನ್ ಭವಮ್ ॥೭೫॥

ಹೇಳಲು ಅನುಜ್ಞೆ ಪಡೆದು ಸ್ವಸ್ಥಚಿತ್ತರಾದ ದೇವತೆಗಳು 'ಪ್ರಭುವೆ, ನಿನಗೆ ನಮಸ್ಕಾರ, ನಮಸ್ಕಾರ ನಮಸ್ಕಾರ' ಎಂದರು.

ನಮೋ ದೇವಾಧಿದೇವಾಯ ಧನ್ವಿನೇ ಚಾತಿಮನ್ಯವೇ ।
ಪ್ರಜಾಪತಿಮಖಘ್ನಾಯ ಪ್ರಜಾಪತಿಭಿರೀಡ್ಯತೇ ॥೭೬॥

ನಮಃ ಸ್ತುತಾಯ ಸ್ತುತ್ಯಾಯ ಸ್ತೂಯಮಾನಾಯ ಶಂಭವೇ ।
ವಿಲೋಹಿತಾಯ ಚೋಗ್ರಾಯ ನೀಲರುದ್ರಾಯ ಶೂಲಿನೇ ॥೭೭॥

ಅಮೋಘಾಯ ಮೃಗಾಕ್ಷಾಯ ಸೂಕ್ಷ್ಮಾಯ ಸುಧನಾಯ ಚ ।
ಅರ್ಹಾಯ ಚೈವ ಶುಕ್ಲಾಯ ಕ್ಷಮಾಯ ಕೃಥನಾಯ ಚ ॥೭೮॥
ಈಶಾನಾಯಾಪ್ರಮೇಯಾಯ ನಿಹನ್ತ್ರೇ ಚೀರವಾಸಸೇ ॥೭೯॥

ತಪೋರತಾಯ ಪಿಂಗಾಯ ವ್ರತಿನೇ ಕೃತ್ತಿವಾಸಸೇ ।
ಕುಮಾರಪಿತ್ರೇ ತ್ರ್ಯಕ್ಷಾಯ ಪ್ರವರಾಯುಧಧಾರಿಣೇ ॥೮೦॥

ಪ್ರಪನ್ನಾರ್ತಿವಿನಾಶಾಯ ಬ್ರಹ್ಮದ್ವಿಟ್‌ಸಂಘಘಾತಿನೇ ।
ವನಸ್ಪತೀನಾಂ ಪತಯೇ ವನಾನಾಂ ಪತಯೇ ನಮಃ ॥೮೧॥

ಗವಾಶ್ವ ಪತಯೇ ನಿತ್ಯಂ ಯಜ್ವನಾಂ ಪತಯೇ ನಮಃ ।
ನಮೋಸ್ತು ತೇ ಸಸೈನ್ಯಾಯ ತ್ರ್ಯಂಬಕಾಯಾಮಿತೌಜಸೇ ॥೮೨॥

ಮನೋವಾಕ್ಕರ್ಮಭಿರ್ದೇವ ತ್ವಾಂ ಪ್ರಪನ್ನಾನ್ ಭಜಸ್ವ ನಃ ॥೮೩॥

ದೇವಾಧಿದೇವನಿಗೆ ನಮನ. ಪಿನಾಕಧನುರ್ಧಾರಿಗೆ ನಮನ. ಅತಿಕ್ರುದ್ಧನಿಗೆ ನಮನ. ದಕ್ಷಯಜ್ಞ ವಿನಾಶಕನಿಗೆ ನಮನ. ಪ್ರಜಾಪತಿಗಳಿಗೆ ಸ್ತುತ್ಯನಾದ ಸರ್ವಸ್ತುತ್ಯ ಸರ್ವಸ್ತುತ ಸರ್ವಸ್ತೂಯಮಾನನಾದ ಶಂಭುವಿಗೆ ನಮನ, ಪಂಚಮುಖಗಳಲ್ಲಿ ಉತ್ತರದ ವಾಮದೇವಮುಖದಲ್ಲಿ ವಿಶೇಷ ರಕ್ತವರ್ಣದವನಿಗೆ ನಮನ, ದಕ್ಷಿಣದ ಅಘೋರಮುಖದಲ್ಲಿ ಕಪ್ಪಾದ ರುದ್ರನಿಗೆ ನಮನ, ತ್ರಿಶೂಲಧಾರಿಗೆ ನಮನ,

ಅಮೋಘ ಫಲದಾಯಿಗೆ ನಮನ, ಜಿಂಕೆ ಕಣ್ಣಿನವನಿಗೆ ನಮನ, ಸೂಕ್ಷ್ಮ ಮನಸ್ಸುಗಳಲ್ಲಿ ನಿಯಾಮಕನಾಗಿರುವ ಸೂಕ್ಷ್ಮರೂಪಿಗೆ ನಮನ, ಬೇಡಿದವರಿಗೆ ಒಳ್ಳೆಯ ಧನಸಂಪತ್ತು ನೀಡುವವಗೆ ನಮನ, ಸರ್ವಪೂಜಾಯೋಗ್ಯನಿಗೆ ನಮನ. ಪಶ್ಚಿಮದ ಸದ್ಯೋಜಾತಮುಖದಲ್ಲಿ ಬಿಳಿಯ ಬಣ್ಣದವನಿಗೆ ನಮನ. ಅಪರಾಧಕ್ಷಮಾಶೀಲನಿಗೆ ನಮನ. ಜಗಲ್ಲಯಕಾರಿಗೆ ನಮನ,

ಪಂಚಮುಖಗಳಲ್ಲಿ ನಡುವಿನ ಈಶಾನಮುಖದವನಿಗೆ ನಮನ, ಅಪ್ರಮೇಯನಿಗೆ ನಮನ, ಮೃತ್ಯುವನ್ನು ಕೊಲ್ಲುವವನಿಗೆ ನಮನ, ದುರ್ವಾಸಾದಿ ಯತಿರೂಪದಲ್ಲಿ ಚಿಂದಿ ಬಟ್ಟೆ ಉಡುವವನಿಗೆ ನಮನ,

ತಪೋನಿರತನಿಗೆ ನಮನ, ಪೂರ್ವದ ತತ್ಪುರುಷಮುಖದಲ್ಲಿ ಕಳದಿ ಬಣ್ಣದವನಿಗೆ ನಮನ, ಪಾಶುಪತವ್ರತನಿಷ್ಠನಿಗೆ ನಮನ, ಗಜ ವ್ಯಾಘ್ರಚರ್ಮ ಉಡುವವನಿಗೆ ನಮನ, ಕುಮಾರನ ಪಿತನಿಗೆ ನಮನ, ಮುಕ್ಕಣ್ಣನಿಗೆ ನಮನ, ಕುಠಾರ ಶೂಲ ಡಮರು ಹರಿಣ ಖಟ್ವಾಂಗ ಪಿನಾಕ ಮುಂತಾದ ಅಸಂಖ್ಯ ಶ್ರೇಷ್ಠ ಆಯುಧಗಳನ್ನು ಹಿಡಿದು ನರ್ತನ ಮಾಡುವವನಿಗೆ ನಮನ.

ಭಕುತರ ಭಯನಾಶಕನಿಗೆ ನಮನ. ಬ್ರಹ್ಮದ್ವೇಷಿ ಸಮೂಹನಾಶಕನಿಗೆ ನಮನ. ವನಸ್ಪತಿಗಳ ಪತಿಗೆ ನಮನ. ಪ್ರೇತವನಗಳ, ಸ್ಮಶಾನಗಳ ಒಡೆಯನಿಗೆ ನಮನ.

ಗೋ ಅಶ್ವಗಳ ಪತಿಗೆ ನಮನ. ಅಷ್ಟಮೂರ್ತಿಗಳಲ್ಲಿ ಸೇರಿದ ಯಜ್ಞಕರ್ತರ ಒಡೆಯನಿಗೆ ನಮನ. ಪ್ರಮಥ ಸೈನ್ಯಗಳಿಂದ ಕೂಡಿದ ಅಮಿತಪರಾಕ್ರಮಿ, ತ್ರ್ಯಂಬಕನಾದ ನಿನಗೆ ನಮನ.

ಮನಸು ಮಾತು ಕೃತಿಗಳಿಂದ ನಿನ್ನನ್ನೇ ಭಜಿಸುವ ನಮ್ಮನ್ನು ಕಾಪಾಡು' ಎಂದು ದೇವತೆಗಳು ಬೇಡಿದರು.

ತತಃ ಪ್ರಸನ್ನೋ ಭಗವಾನ್ ಸ್ವಾಗತೇನಾಭಿನಂದ್ಯ ಚ ।
ಪ್ರೋವಾಚ ವ್ಯೇತು ವಸ್ತ್ರಾಸೋ ಬ್ರೂತ ಕಿಂ ಕರವಾಣಿ ವಃ ॥೮೪॥

ಆಗ ಸಂತುಷ್ಟನಾದ ಶಿವ ಸ್ವಾಗತ ನೀಡಿ ಅಭಿನಂದಿಸಿ ನುಡಿದ 'ಭಯ ಪಡಬೇಡಿರಿ. ನಾನು ನಿಮಗೆ ಏನು ಕಾರ್ಯ ಮಾಡಿಕೊಡಲಿ?'

ದೇವಾಃ ಶರ್ವಸ್ಯ ವಚನಂ ಶ್ರುತ್ವಾ ಹರ್ಷಮುಪಾಗತಾಃ ॥೮೫॥

ದೇವತೆಗಳು ಶಿವನ ಮಾತನ್ನು ಕೇಳಿ ಹರ್ಷಪಟ್ಟರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ತ್ರಯಸ್ತ್ರಿಂಶೋಧ್ಯಾಽಯಃ ॥೩೩॥

❖

ಮೂವತ್ತನಾಲ್ಕನೆಯ ಅಧ್ಯಾಯ

ರುದ್ರನು 'ಪಶುಪತಿ' ಎನಿಸಿದ, 'ಮಹಾದೇವ'ನೆನಿಸಿದ ಬಗೆ.

ದುರ್ಯೋಧನಃ

ಪಿತೃದೇವರ್ಷಿಸಂಘೇಭ್ಯೋ ವರೇ ದತ್ತೇ ಮಹಾತ್ಮನಾ ।
ಸತ್ಕೃತ್ಯ ಶಂಕರಂ ಪ್ರಾಹ ಬ್ರಹ್ಮಾ ಲೋಕಪಿತಾಮಹಃ ॥೧॥

ದುರ್ಯೋಧನ ಶಲ್ಯನಿಗೆ ನುಡಿದ— ಪಿತೃ ದೇವ ಋಷಿಗಳ ಸಮೂಹಗಳಿಗೆ

ಶಿವನು ಸತ್ಕರಿಸಿ ವರ ನೀಡುವೆನೆಂದಾಗ ಲೋಕಪಿತಾಮಹನಾದ ಬ್ರಹ್ಮದೇವ ನುಡಿದ.

ಇಮಾನ್ಯಸುರದುರ್ಗಾಣಿ ಲೋಕಾಂಸ್ತ್ರೀನಾಕ್ರಮಂತಿ ನಃ ।
ಕಶ್ಚ ಪ್ರಜಾಪತಿಶ್ಚೋರಾಂಸ್ತಾನ್ ಸರ್ವಾನ್ ಜಹಿ ಮಾಚಿರಮ್ ॥೨॥

ಈ ಅಸುರದುರ್ಗಗಳು ನಮ್ಮ ಮೂರೂ ಲೋಕಗಳನ್ನು ಆಕ್ರಮಿಸುತ್ತಿವೆ. ಅಸುರರ ಪ್ರಜಾಪತಿಯೂ ಒಬ್ಬನು ಲೋಕಗಳನ್ನು ಆಕ್ರಮಿಸಿದ್ದಾನೆ. ಅವರೆಲ್ಲರನ್ನೂ ಬೇಗನೆ ನಾಶ ಮಾಡು.

ವರಾತಿಸರ್ಗಾದ್ ದೇವೇಶ ಪ್ರಾಜಾಪತ್ಯಮಿದಂ ಪದಮ್ ।
ಮಯಾऽಧಿತಿಷ್ಠತಾ ದತ್ತೋ ದಾನವೇಭ್ಯೋ ಮಹಾನ್ ವರಃ ॥೩॥

ದೇವೇಶನೆ, ತಪಸ್ಸಿಗೆ ವರನೀಡಲೆಂದೇ ನಾನು ಈ ಬ್ರಹ್ಮಪದವಿಯನ್ನಾಳುವುದರಿಂದ ದಾನವರಿಗೆ ಅವರ ತಪಸ್ಸಿಗೆ ದೊಡ್ಡ ವರ ನೀಡಿದ್ದೇನೆ.

ತಾನತಿಕ್ರಾಂತಮರ್ಯಾದಾನ್ನಾನ್ಯಃ ಸಂಹರ್ತುಮರ್ಹತಿ ॥೪॥
ತ್ವಾಮೃತೇ ಸರ್ವಭೂತೇಶ ತ್ವಂ ಹ್ಯೇಷಾಂ ಪ್ರತ್ಯರಿರ್ವಧೇ ॥೫॥

ಆದರಿಂದ ಸರ್ವಭೂತಪತಿಯೆ, ನೀನೇ ಇವರ ವಧಕಾರ್ಯದಲ್ಲಿ ಇವರಿಗೆ ವಿರೋಧಿ ಶತ್ರುವಾಗಬೇಕು. ನಿನ್ನ ಹೊರತು ಬೇರೆ ಯಾರೂ ಧರ್ಮ ಮರ್ಯಾದೆಯನ್ನು ಉಲ್ಲಂಘಿಸಿರುವ ಅವರನ್ನು ಕೊಲ್ಲಲು ಶಕ್ತರಾಗಲಾರರು.

ಸ ತ್ವಂ ದೇವ ಪ್ರಪನ್ನಾನಾಂ ಯಾಚತಾಂ ಚ ದಿವೌಕಸಾಮ್ ।
ಕುರು ಪ್ರಸಾದಂ ವರದ ದಾನವಾನ್ ಜಹಿ ಸಂಯುಗೇ ॥೬॥

ಶರಣಾಗತರಾಗಿ ಬೇಡುತ್ತಿರುವ ದೇವತೆಗಳಿಗೆ, ದೇವ! ವರದಾಯಕ! ನೀನೆ ಅನುಗ್ರಹ ಮಾಡು, ರಣದಲ್ಲಿ ದಾನವರನ್ನು ಸಂಹರಿಸು.

ತ್ವತ್ಪ್ರಸಾದಾಜ್ಜಗತ್ಸರ್ವಂ ಸುಖಮೈಧತ ಮಾನದ ।
ಶರಣ್ಯಸ್ತ್ವಂ ಹಿ ದೇವಾನಾಂ ವಯಂ ತ್ವಾಂ ಶರಣಂ ಗತಾಃ ॥೭॥

ನೀನು ಅನುಗ್ರಹಿಸಿದರೆ ಎಲ್ಲ ಜಗತ್ತೂ ಸುಖಸಮೃದ್ಧಿ ಹೊಂದುವುದು ನಿಶ್ಚಿತ. ದೇವತೆಗಳಿಗೆ ಆಶ್ರಯ ನೀಡಬಲ್ಲವನು ನೀನು. ನಿನ್ನನ್ನೇ ನಾವು ಆಶ್ರಯಿಸಿದ್ದೇವೆ.

ಈಶ್ವರಃ

ಹಂತವ್ಯಾಃ ಶತ್ರವಃ ಸರ್ವೇ ಯುಷ್ಮಾಕಮಿತಿ ಮೇ ಮತಿಃ ।
ನ ತ್ವೇಕಶ್ಚೋತ್ಸಹೇ ಹಂತುಂ ಬಲಿನಃ ಸುರವಿದ್ವಿಷಃ ॥೮॥

ಈಶ್ವರನು ನುಡಿದ— ನಿಮ್ಮ ಶತ್ರುಗಳನ್ನು ನಾನು ಕೊಲ್ಲಬೇಕು. ಅದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಬ್ರಹ್ಮವರದಿಂದ ಬಲಿಷ್ಠರಾಗಿರುವ ಅಸುರರನ್ನು ನಾನೊಬ್ಬನೆ ಕೊಲ್ಲಲು ಶಕ್ತನಾಗಲಾರೆ.

ತೇ ಯೂಯಂ ಸಹಿತಾಃ ಸರ್ವೇ ಮದೀಯೇನಾಪಿ ತೇಜಸಾ ।
ಜಯಧ್ವಂ ಯುಧಿ ತಾನ್ ಸರ್ವಾನ್ ಸಂಘಾತೇನ
ಮಹಾಬಲಾನ್ ॥೯॥

ನನ್ನ ತೇಜಸ್ಸಿನಿಂದಲೂ ಕೂಡಿ ನೀವೆಲ್ಲರೂ ಒಟ್ಟಾಗಿ ರಣದಲ್ಲಿ ಮಹಾಬಲಶಾಲಿಗಳಾದ ಅವರೆಲ್ಲರನ್ನೂ ಕೊಲ್ಲಿರಿ.

ದೇವಾಃ

ಅಸ್ಮತ್ತೇಜೋಬಲಂ ಯಾವತ್ ತಾವದ್ ದ್ವಿಗುಣಮೇವ ವಾ ।
ತತ್ತೇಷಾಮಿತಿ ಮನ್ಯಾಮೋ ದೃಷ್ಟತೇಜೋಬಲಾ ಹಿ ತೇ ॥೧೦॥

ದೇವತೆಗಳು ನುಡಿದರು— ನಮ್ಮ ತೇಜೋಬಲವೆಲ್ಲವನ್ನು ಕೂಡಿದರೂ ಅದಕ್ಕೆ ಸಮವಾಗಿ ಅಥವಾ ಅದಕ್ಕಿಂತ ಎರಡುಪಟ್ಟು ಹೆಚ್ಚಾಗಿಯೇ ಅವರ ಬಲವಿದೆ ಎಂದು ಭಾವಿಸುತ್ತೇವೆ. ಏಕೆಂದರೆ ಅವರ ತೇಜೋಬಲವನ್ನು ನಾವು ಕಂಡಿದ್ದೇವೆ.

ಈಶ್ವರಃ

ವಧ್ಯಾಸ್ತೇ ಸರ್ವಥಾ ಪಾಪಾ ಯೇ ಯುಷ್ಮಾಸ್ವಪರಾಧಿನಃ ।
ಮಮ ತೇಜೋಬಲಾರ್ಧೇನ ಸರ್ವಾನ್ ಮೃದ್ನಥ ಶಾತ್ರವಾನ್ ॥೧೧॥

ಈಶ್ವರನು ನುಡಿದ— ನಿಮ್ಮಲ್ಲಿ ಅಪರಾಧ ಮಾಡಿರುವ ಆ ಪಾಪಿಗಳು ಸರ್ವಥಾ ವಧಾರ್ಹರೆ. ಅದರಿಂದ ನನ್ನ ಅರ್ಧಬಲವನ್ನು ತೆಗೆದುಕೊಂಡು ನೀವು ಎಲ್ಲ ಶತ್ರುಗಳನ್ನು ಸಂಹರಿಸಬೇಕು.

ದೇವಾಃ

ಬಿಭರ್ತುಂ ತವ ತೇಜೋರ್ಧಂ ನ ಶಕ್ಷ್ಯಾಮ ಸುರೇಶ್ವರ ।
ಸರ್ವೇಷಾಂ ನೋ ಬಲಾರ್ಧೇನ ತ್ವಮೇವ ಜಹಿ ಶಾತ್ರವಾನ್ ॥೧೨॥

ದೇವತೆಗಳು ನುಡಿದರು— ದೇವೇಶ, ನಿನ್ನ ಅರ್ಧತೇಜಸ್ಸನ್ನು ಧರಿಸಲು ನಮಗೆ ಶಕ್ತಿ ಇಲ್ಲ. ಅದು ನಮ್ಮ ಅಧೀನವಲ್ಲ. ನಮ್ಮೆಲ್ಲರ ಅರ್ಧಬಲದಿಂದ ನೀನೇ ಶತ್ರುಗಳನ್ನು ವಧಿಸು. ಅದು ನಿನ್ನ ಅಧೀನ.

ವಯಂ ಚ ಸರ್ವಥಾ ದೇವ ರಕ್ಷಣೀಯಾಸ್ತಥೈವ ಚ ।
ಸ ನೋ ರಕ್ಷ ಮಹಾದೇವ ತ್ವಮೇವ ಜಹಿ ಶಾತ್ರವಾನ್ ॥೧೩॥

ದೇವ, ಎಲ್ಲ ರೀತಿಯಿಂದಲೂ ನೀನು ನಮ್ಮನ್ನು ಕಾಪಾಡಬೇಕು. ಮಹಾದೇವ, ನಮ್ಮನ್ನು ರಕ್ಷಿಸು. ನೀನೇ ಶತ್ರುಗಳನ್ನು ಕೊಲ್ಲು.

ಈಶ್ವರಃ

ಮಮ ತೇಜೋ ನ ಶಕ್ತಾ ಹಿ ಸರ್ವೇ ಧಾರಯಿತುಂ ಯದಿ ।
ಅಹಮೇನಾನ್ವಧಿಷ್ಯಾಮಿ ಯುಷ್ಮತ್ತೇಜೋರ್ಧಸಂಯುತಃ ॥೧೪॥

ಈಶ್ವರನು ನುಡಿದ— ನನ್ನ ತೇಜಸ್ಸನ್ನು ಧರಿಸಲು ನೀವು ಶಕ್ತರಾಗದಿದ್ದಲ್ಲಿ ನಿಮ್ಮ ಅರ್ಧಬಲದಿಂದ ಯುಕ್ತನಾಗಿ ನಾನು ಇವರನ್ನು ವಧಿಸುವೆನು.

ಬಲಾರ್ಧಂ ಯದಿ ಮೇ ದೇವಾ ನ ಧಾರಯಿತುಮಾಹವೇ ।
ಶಕ್ತಾಃ ಸರ್ವೇ ಹಿ ಸಂಹತ್ಯ ಯೂಯಂ ತತ್ರಬ್ರವೀಮಿ ವಃ ॥೧೫॥

ದೇವತೆಗಳೆ, ನನ್ನ ಅರ್ಧಬಲವನ್ನು ಧರಿಸಲು ನೀವು ಒಬ್ಬೊಬ್ಬರು ಶಕ್ತರಾಗದಿದ್ದಲ್ಲಿ ಎಲ್ಲರೂ ನನ್ನೊಂದಿಗೆ ಸೇರಿ ಪ್ರಯತ್ನಮಾಡಿರಿ. ಅದು ಹೇಗೆ ಎಂಬುದನ್ನು ನಾನು ನಿಮಗೆ ಹೇಳುತ್ತೇನೆ.

ಸಮಾ ಭವಂತಿ ಮೇ ಸರ್ವೇ ದಾನವಾಶ್ಚಾಮರಾಶ್ಚ ಯೇ ।
ಶಿವೋಽಸ್ಮಿ ಸರ್ವಭೂತಾನಾಂ ಶಿವತ್ವಂ ತೇನ ಮೇ ಸುರಾಃ ॥೧೬॥

ಯದ್ಯಪಿ ನನಗೆ ಎಲ್ಲ ದಾನವರೂ ದೇವತೆಗಳೂ ಸಮಾನರು. ಎಲ್ಲ ಜೀವಿಗಳಿಗೂ ನಾನು ಶುಭ ಉಂಟುಮಾಡುವೆನು. ಅದರಿಂದಲೆ ಶಿವನೆನಿಸಿದ್ದೇನೆ.

ಕಿಂತ್ವಧರ್ಮೇಣ ವರ್ತಂತೇ ಯಸ್ಮಾತ್ ತೇ ಸುರಶತ್ರವಃ ।
ತಸ್ಮಾದ್ ವಧ್ಯಾ ಮಯಾಪ್ಯೇತೇ ಯುಷ್ಮಾಕಂ ಚ ಹಿತೇಪ್ಸಯಾ ॥೧೬॥

ಆದರೂ ದಾನವರು ಅಧರ್ಮದಿಂದ ವರ್ತಿಸುತ್ತಿದ್ದಾರೆ. ಅದರಿಂದ ನಿಮ್ಮ ಹಿತಕ್ಕಾಗಿ ನಾನು ಕೂಡ ಅವರನ್ನು ವಧಿಸಬೇಕಾಗಿದೆ.

ಶರಣಂ ವಃ ಪ್ರಪನ್ನಾನಾಂ ಧರ್ಮೇಣ ಚ ಜಿಗೀಷತಾಮ್ ।
ಸಾಹಾಯ್ಯಂ ವಃ ಕರಿಷ್ಯಾಮಿ ನಿಹನಿಷ್ಯಾಮಿ ವೋ ರಿಪೂನ್ ॥೧೮॥

ಧರ್ಮದಿಂದ ಅಧರ್ಮವನ್ನು ತುಳಿಯಲು ಬಯಸಿ ನೀವು ನನ್ನನ್ನು ಆಶ್ರಯಿಸಿರುವಿರಿ ಎಂದಮೇಲೆ ನಾನು ನಿಮಗೆ ಸಹಾಯ ಮಾಡುತ್ತೇನೆ. ನಿಮ್ಮ ಶತ್ರುಗಳನ್ನು ಕೊಲ್ಲುತ್ತೇನೆ.

ದೀಯತಾಂ ಚ ಬಲಾರ್ಧಂ ಮೇ ಸರ್ವೈರಪಿ ಪೃಥಕ್‌ಪೃಥಕ್ ।
ಪಶುತ್ವಂ ಚೈವ ಮೇ ಲೋಕಾಃ ಸರ್ವೇ ಕಲ್ಪಂತು ಪೀಡಿತಾಃ ॥೧೯॥

ನೀವೆಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಅರ್ಧಬಲವನ್ನು ನನಗೆ ಕೊಡಿರಿ. ಮತ್ತು ಲೋಕಗಳೆಲ್ಲವೂ ಪೀಡಿತವಾಗಿರುವುದರಿಂದ ನೀವು ನನಗೆ ಪಶುಗಳಾಗಿರಿ.

ಪಶೂನಾಂ ತು ಪತಿತ್ವಂ ಮೇ ಭವತ್ವದ್ಯ ದಿವೌಕಸಃ ।
ಏವಂ ನ ಪಾಪಂ ಪ್ರಾಪ್ಸ್ಯಾಮಿ ಪಶೂನ್ ಹತ್ವಾ ಸುರದ್ವಿಷಃ ॥೨೦॥

ದೇವತೆಗಳೆ, ಈಗ ನಾನು ಪಶುಗಳಿಗೆ ಪತಿಯಾಗಬೇಕು. ಹಾಗಾದಾಗ ಅಸುರರನ್ನು ಪಶುರೂಪದಿಂದ ನಾನು ಸಂಹರಿಸುವೆನು. ಪಶುವಧೆಯ ಪಾಪ ನನಗೆ ಸುತ್ತಿಕೊಳ್ಳುವುದಿಲ್ಲ.

ರುದ್ರದೇವರು ಲಯಕಾಲದಲ್ಲಿ ಇಡೀ ಸ್ಥಾವರ ಜಂಗಮ ಪ್ರಪಂಚವನ್ನು ವಧಿಸಿದರೂ ಅವರಿಗೆ ಪಾಪ ಏಕೆ ಬರುವುದಿಲ್ಲ? ಎಂದರೆ ಅವರು ಎಲ್ಲ ಜೀವಿಗಳನ್ನು ಯಜ್ಞಪಶುವಾಗಿ ಮಾಡಿಕೊಂಡು ಲಯಯಜ್ಞದಲ್ಲಿ ಆಹುತಿ ರೂಪದಿಂದ ಭಗವಂತನಿಗೆ ಅರ್ಪಿಸುತ್ತಾರೆ. ಯಾಗೀಯ ಹಿಂಸೆ ಹಿಂಸೆ

ಎನಿಸುವುದಿಲ್ಲ. ಪಾಪಕರವಾಗುವುದಿಲ್ಲ. ಹೀಗೆ ತ್ರಿಪುರಾಸುರರನ್ನು ಯುದ್ಧಯಜ್ಞದಲ್ಲಿ ಪಶುರೂಪವಾಗಿ ಅರ್ಪಿಸಲು ಶಿವನು ಪಶುಗಳಿಗೆ ಪತಿ, ಪಶುಪತಿಯಾಗಬೇಕು. ಪಶು ಶಿವನ ಸೊತ್ತಾಗಬೇಕು. ಇಲ್ಲದಿದ್ದರೆ ತನ್ನದಲ್ಲದ ಪಶುವನ್ನು ತಾನು ಪಶುವಾಗಿ ಮಾಡಿ ವಧಿಸುವುದು ನಿಷಿದ್ಧ, ಪಾಪಕರ. ಅದಕ್ಕಾಗಿ ಶಿವ ತಾನು ಮೊದಲಿಗೆ ಪಶುಪತಿಯಾಗುವೆನು ಎನ್ನುತ್ತಾನೆ.

ತನಗೆ ದೇವತೆಗಳು ಅರ್ಧಬಲ ಕೊಡಲಿ ಎನ್ನುತ್ತಾನೆ.

ಯದಾದಿತ್ಯಗತಂ ತೇಜೋ ಜಗದ್ ಭಾಸಯತೇऽಖಿಲಮ್ ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥

(ಗೀತಾ.15.12)

ಎಂದು ಗೀತೆಯಲ್ಲಿ ಹೇಳಿದಂತೆ ದೇವತೆಗಳಲ್ಲಿರುವ ತೇಜಸ್ಸೆಲ್ಲವೂ ಭಗವಂತನದು. ಅವೆಲ್ಲದರ ಅರ್ಧಾಂಶವನ್ನು ಅವರು ಶಿವನಿಗೆ ಸಹಾಯವಾಗಿ ಕೊಟ್ಟರೆ ತಾನು ತನ್ನಲ್ಲಿರುವ ಭಗವತ್ ತೇಜದ ಬಲದಿಂದ ಯುದ್ಧಯಜ್ಞವನ್ನು ಮಾಡುವೆನೆನ್ನುತ್ತಾನೆ, ಶಿವ. ಅದರಂತೆ ರಥ ಧನು ಬಾಣ ಸಾರಥಿ ಮುಂತಾದ ರೂಪಗಳಿಂದ ಬ್ರಹ್ಮಾದಿದೇವತೆಗಳು ಎಲ್ಲರೂ ತಮ್ಮ ತೇಜಸ್ಸಿನ ಅರ್ಧವನ್ನು ಶಿವನಿಗೆ ನೀಡುತ್ತಾರೆ. ಬಾಣರೂಪದಿಂದ ಭಗವಂತನೂ ನೀಡುತ್ತಾನೆ. ಆಗ ಶಿವ 'ಮಹಾದೇವ'ನೆನಿಸುತ್ತಾನೆ. 'ಬ್ರಹ್ಮಾದಿ ದೇವತೆಗಳೆಲ್ಲರೂ ಶಿವನನ್ನು ಸ್ತುತಿಸುತ್ತಾರೆ' ಎಂದು ಭಾಗವತದಲ್ಲಿಯೂ ಇದನ್ನೇ ಹೇಳಿದೆ. (7.11.19)

ಕಲ್ಪಯಧ್ವಂ ರಥಂ ದಿವ್ಯಂ ರಥಾಶ್ವಾಂಶ್ಚೈವ ಪಾರಗಾನ್ ।
ಧನುಃ ಶರಂ ಸಾರಥಿಂ ಚ ತತೋ ಜೇಷ್ಯಾಮಿ ವೋ ರಿಪೂನ್ ॥೨೧॥

ದೇವತೆಗಳೆ, ನನಗೆ ನೀವು ಎಲ್ಲರೂ ಸೇರಿ ಒಂದು ದಿವ್ಯರಥವನ್ನೂ ಅದನ್ನು ಹೊರಲು ಸಮರ್ಥವಾದ ಕುದುರೆಗಳನ್ನೂ ಸಾರಥಿಯನ್ನೂ ಧನುರ್ಬಾಣ ಗಳನ್ನೂ ಸಿದ್ಧಗೊಳಿಸಿರಿ. ಆಗ ಶತ್ರುಗಳನ್ನು ನಾನು ಗೆಲ್ಲುತ್ತೇನೆ.

ಇತಿ ಶ್ರುತ್ವಾ ವಚೋ ದೇವಾ ದೇವದೇವಸ್ಯ ಭೂಪತೇ ।
ವಿಷಾದಮಗಮನ್ಸರ್ವೇ ಪಶುತ್ವಂ ಪ್ರತಿ ಶಂಕಿತಾಃ ॥೨೨॥

ದೇವದೇವನಾಡಿದ ಮಾತನ್ನು ಕೇಳಿ, ಶಲ್ಯ ಮಹಾರಾಜ! ದೇವತೆಗಳು ಎಲ್ಲರೂ ಪಶುತ್ವದ ವಿಷಯದಲ್ಲಿ 'ತಾವು ಪಶುಗಳಾಗಿ ಸಾಯಬೇಕೆ?' ಎಂದು ಸಂದೇಹ ತಾಳಿ ವಿಷಣ್ಣರಾದರು.

ತೇಷಾಂ ಭಾವಂ ಭವೋ ಜ್ಞಾತ್ವಾ ದೇವಸ್ತಾನಬ್ರವೀದಿದಮ್ ।
ಮಾ ವೋಸ್ತು ಪಶುಭಾವೇಽಸ್ಮಿನ್ ಭಯಂ ವಿಬುಧಸತ್ತಮಾಃ ॥೨೩॥
ಶ್ರೂಯತಾಂ ಪಶುಭಾವಸ್ಯ ವಿಮೋಕ್ಷಃ ಕ್ರಿಯತಾಂ ಚ ಸಃ ॥೨೪॥

ಅವರ ಇಂಗಿತವನ್ನು ಅರಿತು ಶಿವನು ನುಡಿದ— ದೇವೋತ್ತಮರೆ, ಈ ಪಶುತ್ವವಿಷಯದಲ್ಲಿ ನಿಮಗೆ ಭಯಬೇಡ. ಪಶುತ್ವದ ವಿಮೋಚನೆ ಮಾಡಿ ಕೊಳ್ಳಲು ಬರುತ್ತದೆ. ಹೇಳುತ್ತೇನೆ, ಕೇಳಿ. ಅದರಂತೆ ಮಾಡಿರಿ.

ಯೋ ವಃ ಪಶುಪತೇಶ್ಚರ್ಯಾಂ ಚರಿಷ್ಯತಿ ಸ ಮೋಕ್ಷ್ಯತೇ ।
ಪಶುತ್ವಾದಿತಿ ಸತ್ಯಂ ವಃ ಪ್ರತಿಜಾನೇ ಸಮಾಗಮೇ ॥೨೫॥
ಯೇ ಚಾಪ್ಯನ್ಯೇ ಚರಿಷ್ಯಂತಿ ವ್ರತಂ ಮೋಕ್ಷ್ಯಂತಿ ತೇಽಪಿ ಚ ॥೨೬॥

ರಣಯಜ್ಞದಲ್ಲಿ ಪಶುಪತಿಯ ಚರ್ಯೆಯನ್ನು ನಿಮ್ಮಲ್ಲಿ ಯಾವನು ಮಾಡುವನೋ ಅವನು ಪಶುತ್ವದಿಂದ ವಿಮುಕ್ತನಾಗುತ್ತಾನೆ. ಇದು ಸತ್ಯ. ಶಪಥಪೂರ್ವಕವಾಗಿ ಇದನ್ನು ಹೇಳುತ್ತೇನೆ. ಬೇರೆಯವರೂ ಕೂಡ ಈ ವ್ರತವನ್ನು ಮಾಡಿದರೆ ಅವರೂ ಮುಕ್ತರಾಗುತ್ತಾರೆ.

ನೈಷ್ಠಿಕಂ ದ್ವಾದಶಾಬ್ದಂ ವಾ ಅರ್ಧಮಬ್ದಮೃತುತ್ರಯಮ್ ।
ಮಾಸಂ ದ್ವಾದಶರಾತ್ರಂ ವಾ ಸ ಪಶುತ್ವಾದ್ವಿಮೋಕ್ಷ್ಯತೇ ॥೨೭॥
ತಸ್ಮಾತ್ ಪರಮಿದಂ ಗುಹ್ಯಂ ವ್ರತಂ ದಿವ್ಯಂ ಚರಿಷ್ಯಥ ॥೨೮॥

ಬದುಕಿರುವಷ್ಟೂ ಕಾಲವಾಗಲಿ, ಹನ್ನೆರಡು ವರ್ಷಗಳಾಗಲಿ, ಆರು ವರ್ಷ ಅಥವಾ ಆರು ತಿಂಗಳು ಅಥವಾ ಒಂದು ತಿಂಗಳು, ಕನಿಷ್ಠ ಹನ್ನೆರಡು ದಿನ ಗಳಾದರೂ ಈ ಪಾಶುಪತ ವ್ರತ ಮಾಡಿದರೆ ಪಶುತ್ವದಿಂದ ವಿಮುಕ್ತಿ ದೊರೆಯು ವುದು. ಆದ್ದರಿಂದ ಗೋಪ್ಯವಾದ ದಿವ್ಯವಾದ ಈ ಶ್ರೇಷ್ಠವ್ರತವನ್ನು ಮಾಡಿರಿ.

ಇಲ್ಲಿ 'ಪಾಶುಪತವ್ರತ'ವೆಂದರೆ ಪಾಶುಪತಾಗಮದಲ್ಲಿ ಹೇಳಿದ ಪಶುಪತಿಯ ಆರಾಧನೆಯಲ್ಲ. ಅದು ವೇದವಿರುದ್ಧವಾದ್ದರಿಂದ ವೈದಿಕರಿಗೆ ನಿಷಿದ್ಧ. ಪಶುಪತಿ ಎನಿಸಿದ ಶಿವನ ಆರಾಧನೆಯನ್ನು ತಂತ್ರಸಾರಾಗಮ ರೀತಿಯಿಂದಲೆ ಶಿವಾಂತರ್ಯಾಮಿಯ ಪ್ರೀತಿಗಾಗಿ ಮಾಡಬೇಕು. ಈ

ಪಶುಪತಿಚರ್ಯಾದಿಂದಲೇ ಶಿವನಿಗೆ ಪಶುಪತಿತ್ವಪ್ರಾಪ್ತಿ. ಬೇರೆ ಪಶುಗಳನ್ನು ತಮ್ಮದಾಗಿಸಿಕೊಳ್ಳುವುದು. ಅದರಿಂದ ಪಶುತ್ವನಿವೃತ್ತಿ. ಅಂದರೆ ತಾವು ಪಶುವಾಗಿ ಮರಣ ಹೊಂದುವುದು ದೇವತೆಗಳಿಗೆ ತಪ್ಪುತ್ತದೆ. ಶಿವನಿಗೂ ತಾನು ಈ ಪಶುಪತಿಚರ್ಯಾ ಮಾಡಿದ್ದರಿಂದಲೇ ಪಶುಪತಿಯಾಗಿ ರಣಯಜ್ಞದಲ್ಲಿ ಶತ್ರುಗಳನ್ನು ಪಶುರೂಪದಿಂದ ವಧಿಸುವುದು, ಜಯಗಳಿಸುವುದು ಶಕ್ಯವಾಗುತ್ತದೆ. ಮುಂದೆ ತ್ರಿಪುರಾಸುರರೇ ಈ ವ್ರತವನ್ನು ಮಾಡದಿದ್ದುದರಿಂದ ಪಶುಗಳಾಗಿ ಹತರಾಗುತ್ತಾರೆ. ದೇವತೆಗಳು ಮಾತ್ರ ಪಶುತ್ವದಿಂದ ಮುಕ್ತರಾಗುತ್ತಾರೆ, ಜಯವನ್ನೇ ಗಳಿಸುತ್ತಾರೆ. ಹಿಂದೆಯೂ ಯಜ್ಞಭಾವನೆಯ ಬಲದಿಂದಲೇ ಶಿವ ದಕ್ಷವಧ, ದಕ್ಷಯಜ್ಞಧ್ವಂಸ ಮಾಡಲು ಶಕ್ತನಾದ. ಪಾಪವೂ ಬರಲಿಲ್ಲ.

ತಂ ತಥೇತ್ಯಬ್ರುವನ್ ದೇವಾ ದೇವದೇವನಮಸ್ಕೃತಮ್ ।
ಊಚುಶ್ಚೇದಂ ಗೃಹಾಣೇದಂ ತೇಜಸೋಽರ್ಧಮಿತಿ ಪ್ರಭುಮ್ ॥೨೯॥

ಶಿವನ ಮಾತಿಗೆ ದೇವತೆಗಳು 'ತಥಾಸ್ತು' ಎಂದರು. 'ನಮ್ಮ ನಮ್ಮ ತೇಜಸ್ಸುಗಳ ಅರ್ಧವನ್ನು ಸ್ವೀಕರಿಸು' ಎಂದರು.

ಪ್ರತ್ಯುವಾಚ ತಥೇತ್ಯೇವ ಶೂಲಧೃದ್ ರಾಜಸತ್ತಮ ।
ತತಸ್ತೇ ಪ್ರದದುಃ ಸರ್ವೇ ತೇಜಸೋಽರ್ಧಂ ಮಹಾತ್ಮನೇ ॥೩೦॥

ಶಲ್ಯ ಮಹಾರಾಜ, ಶಿವನು 'ಆಗಲಿ' ಎಂದ. ಒಡನೆ ದೇವತೆಗಳು ತಮ್ಮಲ್ಲಿದ್ದ ಭಗವತ್ತೇಜಗಳಲ್ಲಿ ಅರ್ಧವನ್ನು ಮಹಾತ್ಮನಾದ ಶಿವನಿಗೆ ಕೊಟ್ಟರು.

ಸರ್ವಮಾದಾಯ ಸರ್ವೇಷಾಂ ತೇಜಸೋಽರ್ಧಂ ದಿವೌಕಸಾಮ್ ।
ತೇಜಸಾಭ್ಯಧಿಕೋ ಭೂತ್ವಾ ಭೂಯೋಽಪ್ಯತಿಬಲೋಽಭವತ್ ॥೩೧॥

ದೇವತೆಗಳೆಲ್ಲರ ತೇಜಸ್ಸಿನ ಅರ್ಧವನ್ನು ಶಿವನು ಸ್ವೀಕರಿಸಿ, ಅಧಿಕ ತೇಜಸ್ಸುಗಳಿಗೆ ಪಾತ್ರನಾಗಿ, ಹಿಂದಿನಿಂದಲೂ ಅತಿ ಬಲಿಷ್ಠನೇ ಆಗಿದ್ದ ಶಿವನು ಇನ್ನೂ ಅಧಿಕ ಬಲಿಷ್ಠನಾದ.

ಭಾಗವತದಲ್ಲಿ 'ಭಗವತ್ತೇಜಸಾ ಗುಪ್ತೋ ದದಾಹ ತ್ರಿಪುರಂ ನೃಪ' (7.11.17) 'ಭಗವಂತನ ತೇಜಸ್ಸಿನಿಂದ ಸುರಕ್ಷಿತನಾದ ಶಿವ ತ್ರಿಪುರಗಳನ್ನು ಸುಟ್ಟ' ಎಂದಿದೆ. ಭಗವತ್ತೇಜದ ರಕ್ಷಣೆ ಇಲ್ಲದಿರುತ್ತಿದ್ದರೆ ಬ್ರಹ್ಮನ ವರಬಲದಿಂದ ಅತಿ ಬಲಿಷ್ಠರಾದ ತ್ರಿಪುರರನ್ನು ದಹಿಸಲು ಶಿವನಿಂದ ಶಕ್ಯವಾಗುತ್ತಿರಲಿಲ್ಲ.

ತತಃಪ್ರಭೃತಿ ದೇವಾನಾಂ ದೇವದೇವೋಽಭವತ್ ಪತಿಃ ।
ಪತಿಶ್ಚ ಸರ್ವಭೂತಾನಾಂ ಪಶೂನಾಂ ಚಾಭವತ್ತದಾ ॥೩೨॥

ಅಂದಿನಿಂದ ದೇವದೇವನಾದ ಶಿವ 'ದೇವದೇವ'ನೆನಿಸಿದ. ಸಕಲ ದೇವತೆಗಳಿಗೆ ಪತಿ ಎನಿಸಿದ. ಸರ್ವಭೂತಗಳಿಗೆ ಪತಿಯೆನಿಸಿದ. ಮತ್ತು ಪಶುಗಳಿಗೆ ಪತಿಯೆನಿಸಿದ.

ತಸ್ಮಾತ್ ಪಶುಪತಿಶ್ಚೋಕ್ತೋ ಭವತ್ವಾಚ್ಚ ಭವೇತಿ ವೈ ॥೩೩॥

ಆದರಿಂದ ಶಿವ ಪಶುಪತಿ ಎನಿಸಿದ. ಮತ್ತು ತ್ರಿಪುರದಾಹದಿಂದ ಮೂರ್ಲೋಕದ ಒಡೆತನದ ಸಂಪತ್ತನ್ನು ಪುನಃ ದೇವತೆಗಳಿಗೆ ಸಿಗುವಂತೆ ಮಾಡಿ, ಸಂಪತ್ತಿನ ಉತ್ಪಾದಕನಾದ್ದರಿಂದ 'ಭವ'ನೆಂದೂ ಪ್ರಸಿದ್ಧನಾದ.

'ಭವ' ಎಂದರೆ ಭಾವಕ, ಉತ್ಪಾದಕ.

ಅರ್ಧಮಾದಾಯ ಸರ್ವೇಷಾಂ ತೇಜಸಾ ಪ್ರಜ್ವಲನ್ನಿವ ।
ಭಾಸಯಾಮಾಸ ತಾನ್ ಸರ್ವಾನ್ ದೇವದೇವೋ ಮಹಾದ್ಯುತಿಃ ॥೩೪॥

ಎಲ್ಲರ ತೇಜಸ್ಸುಗಳ ಅರ್ಧವನ್ನು ಸ್ವೀಕರಿಸಿದ್ದರಿಂದ ತೇಜಸ್ಸಿನಿಂದ ಉಜ್ವಲವಾಗಿ ಬೆಳಗಿ ಮಹಾಪ್ರಕಾಶ ಉಳ್ಳವನಾಗಿ ಎಲ್ಲ 'ದೇವತೆಗಳನ್ನೂ ಬೆಳಗಿಸಿದ.' 'ದೇವದೇವ' ಶಿವ.

ದೇವತೆಗಳ ತೇಜಸ್ಸು ಶಿವನ ಅಧೀನವಾದ್ದರಿಂದ ಅವನೆ ಅವರನ್ನು ತೇಜಸ್ಸಿನಿಂದ ಬೆಳಗಿಸಿದನೆಂದೇ ಹೇಳಿದಂತಾಯಿತು. ಅವರಿಂದ ಶಿವ ತೇಜಸ್ಸನ್ನು ಪಡೆದಾಗ ಅವರಲ್ಲಿ ತೇಜಸ್ಸಿಲ್ಲವೆಂದಾಗುವುದಿಲ್ಲ. ಹೆಚ್ಚೇ ಆಗುತ್ತದೆ.

ತತೋಽಭಿಷಿಷಿಚುಃ ಸರ್ವೇ ಸುರಾ ರುದ್ರಂ ಪುರಾರಿಣಮ್ ।
ಮಹಾದೇವ ಇತಿ ಹ್ಯಾಸೀದ್ ದೇವದೇವೋ ಮಹೇಶ್ವರಃ ॥೩೫॥

ಪುರಾರಿಯಾದ ದೇವದೇವನಾದ ರುದ್ರನನ್ನು ಎಲ್ಲ ದೇವತೆಗಳು 'ಮಹಾದೇವ'ನೆಂದೇ ಬಿರುದನ್ನಿತ್ತು ಅಭಿಷೇಕ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥೩೪॥

❖

ಮೂವತ್ತೈದನೆಯ ಅಧ್ಯಾಯ

ಸರ್ವದೇವತಾಮಯವಾದ ರಥದ ನಿರ್ಮಾಣ. ಶಿವನಿಗೆ ಬ್ರಹ್ಮ ಸಾರಥಿ.
ರಥವನ್ನು ಎತ್ತಿಹಿಡಿಯಲು ಹರಿಯ ವೃಷಭಾವತಾರ. ತ್ರಿಪುರ ದಹನ.
ಕರ್ಣನಿಗೆ ಪರಶುರಾಮನಿಂದ ಶಿವಪ್ರೋಕ್ತ ದಿವ್ಯ ಅಸ್ತ್ರಗಳ ಉಪದೇಶ.

ದುರ್ಯೋಧನಃ

ತತಸ್ತಥೇತಿ ದೇವೇಶಸ್ಸೈರುಕ್ತೋ ರಾಜಸತ್ತಮ ।
ಅರ್ಧಮಾದಾಯ ಸರ್ವೇಭ್ಯಸ್ತೇಜಸಾಭ್ಯಧಿಕೋऽಭವತ್ ॥೧॥

ದುರ್ಯೋಧನ ಶಲ್ಯನಿಗೆ ತ್ರಿಪುರಾಖ್ಯಾನವನ್ನು ಹೇಳುತ್ತಿದ್ದಾನೆ— ಶಲ್ಯಮಹಾರಾಜ! ದೇವೇಶ ಶಿವ ದೇವತೆಗಳ ಪ್ರಾರ್ಥನೆಗೆ 'ತಥಾಸ್ತು' ಎನ್ನುತ್ತ ಅವರ ತೇಜದ ಅರ್ಧವನ್ನು ಸ್ವೀಕರಿಸಿ ಮಹಾತೇಜನೆನಿಸಿದ.

ಸ ತು ದೇವೋ ಬಲೇನಾಸೀತ್ ಸರ್ವೇಭ್ಯೋ ಬಲವತ್ತರಃ ।
ಮಹಾದೇವ ಇತಿ ಖ್ಯಾತಸ್ತದಾಪ್ರಭೃತಿ ಶಂಕರಃ ॥೨॥

ರುದ್ರದೇವನು ದೇವತೆಗಳ ಬಲವನ್ನು ಸ್ವೀಕರಿಸಿ ಎಲ್ಲರಿಗಿಂತ ಬಲಿಷ್ಠನೆನಿಸಿದ. ಅಂದಿನಿಂದ ಶಂಕರನು ಮಹಾದೇವನೆಂದು ಪ್ರಸಿದ್ಧನಾದ.

ತತೋऽಬ್ರವೀನ್ಮಹಾದೇವೋ ಧನುರ್ಬಾಣಧರಸ್ತ್ವಹಮ್ ।
ಹನಿಷ್ಯಾಮಿ ರಥೇನಾಜೌ ತಾನ್ ರಿಪೂನ್ ವೈ ದಿವೌಕಸಃ ॥೩॥

ತೇ ಯೂಯಂ ಮೇ ರಥಂ ಚೈವ ಧನುರ್ಬಾಣಂ ತಥೈವ ಚ ।
ಭವಧ್ವಂ ಯಾವದದ್ಯೈತಾನ್ ಪಾತಯಾಮಿ ಮಹೀತಳೇ ॥೪॥

ಆಗ ಮಹಾದೇವನೆಂದ, ನಾನು ರಥವನ್ನೇರಿ ಧನುರ್ಬಾಣಧಾರಿಯಾಗಿ ಅಸುರರನ್ನು ಭೂತಳದಲ್ಲಿ ಕೆಡಹುತ್ತೇನೆ. ಅದಕ್ಕೆ ನೀವು ನನಗೆ ರಥವನ್ನೂ ಧನುರ್ಬಾಣಗಳನ್ನೂ ಸಿದ್ಧಗೊಳಿಸಿರಿ.

ದೇವಾಃ

ಮೂರ್ತಿಸರ್ವಸ್ವಮಾದಾಯ ತ್ರೈಲೋಕ್ಯಸ್ಯ ತತಸ್ತತಃ ।
ರಥಂ ತೇ ಕಲ್ಪಯಿಷ್ಯಾಮ ದೇವೇಶ್ವರ ಮಹೌಜಸಮ್ ॥೫॥

ದೇವತೆಗಳು ನುಡಿದರು. ದೇವೇಶ, ನಾವು ಮೂರ್ಲೋಕದಲ್ಲಿರುವ ಎಲ್ಲ ತೇಜಸ್ಸುಗಳ ಮೂರ್ತಸ್ವರೂಪವನ್ನು ಎಲ್ಲ ಕಡೆಗಳಿಂದ ಸಂಗ್ರಹಿಸಿ ಮಹಾಸಾಮರ್ಥ್ಯ ಉಳ್ಳ ರಥವನ್ನು ನಿನಗಾಗಿ ಸಿದ್ಧಪಡಿಸುತ್ತೇವೆ.

ತಥೈವ ಬುದ್ಧ್ಯಾ ವಿಹಿತಂ ವಿಶ್ವಕರ್ಮಕೃತಂ ಶುಭಮ್ ॥೬॥

ರಥದ ಮಂಗಳಕರವಾದ ಆಕೃತಿಯನ್ನು ಸ್ವಬುದ್ಧಿಯಿಂದ ವಿಶ್ವಕರ್ಮನು ಆಲೋಚಿಸಿ ಸಿದ್ಧಪಡಿಸುತ್ತಾನೆ.

ತತೋ ವಿಬುಧಶಾರ್ದೂಲಾಸ್ತಂ ರಥಂ ಸಮಕಲ್ಪಯನ್ ॥೭॥

ಬಳಿಕ ದೇವತೆಗಳು ಶಿವನಿಗೆ ರಥವನ್ನು ಸಿದ್ಧಗೊಳಿಸಿದರು.

ವಿಷ್ಣುಂ ಸೋಮಂ ಹುತಾಶಂ ಚ ತಸ್ಯೇಷುಂ ಸಮಕಲ್ಪಯನ್ ।
ಶೃಂಗಮಗ್ನಿರ್ಬಭೂವಾಸ್ಯ ಭಲ್ಲಃ ಸೋಮೋ ವಿಶಾಂಪತೇ ।
ಕುಡ್ಮಲಶ್ಚಾಭವದ್ ವಿಷ್ಣುಸ್ತಸ್ಮಿನ್ನಿಷುವರೇ ತದಾ ॥೮॥

ವಿಷ್ಣು ಸೋಮ ಅಗ್ನಿಗಳ ತೇಜಸ್ಸಿನಿಂದ ಬಾಣವನ್ನು ಸಿದ್ಧಗೊಳಿಸಿದರು. ಬಾಣದ ತುದಿಯಲ್ಲಿ ಗಿಣ್ಣು ಅಗ್ನಿ, ಅದರ ಅಲುಗು ಸೋಮ, ನಡುವಿನ ದಂಡದ ತುದಿಯು ವಿಷ್ಣು.

ರಥಂ ವಸುಂಧರಾಂ ದೇವೀಂ ವಿಶಾಲಪುರಮಾಲಿನೀಮ್ ।
ಸಪರ್ವತವನದ್ವೀಪಾಂ ಚಕ್ರುರ್ಭೂತಧರಾಂ ತದಾ ॥೯॥

ವಿಶಾಲವಾದ ಪಟ್ಟಣಗಳ ಸಮೂಹಗಳಿಂದ ಕೂಡಿದ ಪರ್ವತ ವನ ದ್ವೀಪಯುಕ್ತವಾದ ಭೂಮಿದೇವಿಯನ್ನು ರಥವನ್ನಾಗಿ ಮಾಡಿದರು.

ಮಂದರಂ ಪರ್ವತಂ ಚಾಕ್ಷಂ ಜಂಘಾಸ್ತಸ್ಯ ಮಹಾನದೀಃ ।
ದಿಶಶ್ಚ ಪ್ರದಿಶಶ್ಚೈವ ಪರಿವಾರಂ ರಥಸ್ಯ ಹಿ ॥೧೦॥

ಮಂದರಪರ್ವತವು ರಥದ ಅಚ್ಚುಮರ, ಮಹಾನದಿಗಳು ರಥದ ತಳಭಾಗ. ದಿಕ್ಕು ವಿದಿಕ್ಕುಗಳು ಆವರಣ.

ಈಷಾ ನಕ್ಷತ್ರವಂಶಶ್ಚ ಯುಗಃ ಕೃತಯುಗೋऽಭವತ್ ।
ಕೂಬರಶ್ಚ ರಥಸ್ಯಾಸೀದ್ ವಾಸುಕಿರ್ಭುಜಗೋತ್ತಮಃ ॥೧೧॥

ನಕ್ಷತ್ರಗಳ ಸಾಲು ಈಷಾದಂಡ. ಕೃತಯುಗವು ನೊಗ. ವಾಸುಕಿಸರ್ಪ ನೊಗವನ್ನಿಡುವ ಮೂಕೀಮರ.

ಅಪಸ್ಕರಮಧಿಷ್ಠಾನೇ ಹಿಮವಾನ್ ವಿಂಧ್ಯಪರ್ವತಃ ।
ಉದಯಾಸ್ತಾವಧಿಷ್ಠಾನೇ ಗಿರೀ ಚಕ್ರುಃ ಸುರೋತ್ತಮಾಃ ॥೧೨॥

ಹಿಮಾಲಯ–ವಿಂಧ್ಯಪರ್ವತಗಳು ಉಪಸ್ಕರಚಕ್ರಗಳು. ಉದಯಾಚಲ–ಅಸ್ತಾಚಲಗಳು ಅಧಿಷ್ಠಾನಗಳು.

ಸಮುದ್ರಮಕ್ಷಮಸೃಜನ್ ದಾನವಾಲಯಮುತ್ತಮಮ್ ।
ಸಪ್ತರ್ಷಿಮಂಡಲಂ ಚೈವ ರಥಸ್ಯಾಸೀತ್ ಪರಿಷ್ಕರಃ ॥೧೩॥

ದಾನವರ ಆವಾಸಸ್ಥಾನವಾದ ಸಮುದ್ರವು ರಥಕ್ಕೆ ಕಟ್ಟುವ ಹಗ್ಗವಾದರೆ ಸಪ್ತರ್ಷಿಮಂಡಲವು ಅಲಂಕಾರ.

ಗಂಗಾ ಸರಸ್ವತೀ ಸಿಂಧುರ್ಧ್ವರಮಾಕಾಶಮೇವ ಚ ।
ಉಪಸ್ಕರೋ ರಥಸ್ಯಾಸನ್ನಾಪಃ ಸರ್ವಾಶ್ಚ ನಿಮ್ನಗಾಃ ।
ಅಹೋರಾತ್ರಂ ಕಲಾಶ್ಚೈವ ಕಾಷ್ಠಾಶ್ಚ ಋತವಸ್ತಥಾ ॥೧೪॥

ಗಂಗಾ ಸರಸ್ವತೀ ಸಿಂಧೂ ಆಕಾಶಗಳು ನೊಗಗಳು. ಬೇರೆ ಎಲ್ಲ ನದೀ ಸರೋವರಗಳು ಹಗಲು–ರಾತ್ರಿಗಳು ಕಲಾ ಕಾಷ್ಠಾ ಋತುಗಳು ಉಪಸ್ಕರ ಗಳಾದುವು.

ಓಷಧೀರ್ವಿವಿಧಾಸ್ತತ್ರ ಘಂಟಾಃ ಪುಷ್ಪಫಲೋದ್ಗಮಾಃ ।
ಸೂರ್ಯಾಚಂದ್ರಮಸೌ ಕೃತ್ವಾ ಚಕ್ರೇ ರಥವರೋತ್ತಮೇ ॥೧೫॥

ಪುಷ್ಪ–ಫಲಗಳನ್ನು ನೀಡುವ ನಾನಾವಿಧ ಓಷಧಿಗಳು ಘಂಟೆಗಳು. ಸೂರ್ಯ–ಚಂದ್ರರೂ ಇನ್ನೆರಡು ಚಕ್ರಗಳು.

ಅನುಕರ್ಷಂ ಗ್ರಹಾ ದೀಪ್ತಾಃ ವರೂಥಂ ಚಾಪಿ ತಾರಕಾಃ ।
ಧರ್ಮಾರ್ಥಕಾಮಸಂಯುಕ್ತಂ ತ್ರಿವೇಣುಂ ಚಾಪಿ ಬಂಧುರಮ್ ॥೧೬॥

ಪ್ರಕಾಶಮಾನವಾದ ಗ್ರಹಗಳು ಅನುಕರ್ಷ. ನಕ್ಷತ್ರ, ತಾರೆಗಳು ವರೂಥ. ಧರ್ಮ ಅರ್ಥ ಕಾಮಗಳನ್ನು ಜೊತೆಗೂಡಿಸಿ ಸುಂದರವಾದ ತ್ರಿವೇಣುವಾಗಿ ಮಾಡಿದರು.

ಪಕ್ಷೌ ಪೂರ್ವಾಪರೌ ತತ್ರ ಕೃತೇ ರಾತ್ರ್ಯಹನೀ ಶುಭೇ ।
ದಶ ನಾಗಪತೀನೀಷಾಂ ಧೃತರಾಷ್ಟ್ರಮುಖಾನ್ ದೃಢಾಮ್ ।
ಯೋಕ್ತ್ರಾಣಿ ಚಕ್ರುರ್ನಾಗಾಂಶ್ಚ ನಿಃಶ್ವಸಂತೋ ಮಹೋರಗಾನ್ ॥೧೭॥

ಶುಕ್ಲ–ಕೃಷ್ಣಪಕ್ಷಗಳೂ ಹಗಲು–ರಾತ್ರಿಗಳೂ ಚಕ್ರಗಳು. ಧೃತರಾಷ್ಟ್ರ ಮುಂತಾದ ಹತ್ತು ನಾಗರು ಈಷಾ ಆದರು. ಬೇರೆ ಭುಸುಗುಟ್ಟುವ ಮಹಾನಾಗರು ಕಡಿವಾಣಗಳು.

ದ್ಯಾಂ ಯುಗಂ ಯುಗಚರ್ಮಾಣಿ ಸಂವರ್ತಕಬಲಾಹಕಾನ್ ॥೧೮॥

ಅಂತರಿಕ್ಷವು ನೊಗ. ಸಂವರ್ತಕ ಮೇಘಗಳು ನೊಗದ ಚರ್ಮಗಳು.

ಕಾಲಪೃಷ್ಠೋಽಥ ನಹುಷಃ ಕರ್ಕೋಟಕಧನಂಜಯೌ ।
ಇತರೇ ಚಾಭವನ್ನಾಗಾ ಹಯಾನಾಂ ಬಾಲಬಂಧನಾಃ ।
ದಿಶಶ್ಚ ಪ್ರದಿಶಶ್ಚೈವ ರಶ್ಮಯೋ ರಥವಾಜಿನಾಮ್ ॥೧೯॥

ಕಾಲಪೃಷ್ಠ ನಹುಷ ಕರ್ಕೋಟಕ ಧನಂಜಯ ಮತ್ತು ಬೇರೆ ನಾಗರು ಕುದುರೆಗಳ ಬಾಲಗಳಿಗೆ ಬಿಗಿಯುವ ಹಗ್ಗಗಳು. ದಿಕ್ಕು–ವಿದಿಕ್ಕುಗಳು ಕುದುರೆಯ ಹಗ್ಗಗಳು.

ಅಶ್ವಾಶ್ಚ ವೇದಾಶ್ಚತ್ವಾರಃ ಪುರಾಣಾಂಗವಿಭೂಷಿತಾಃ ॥೨೦॥

ನಾಲ್ಕು ವೇದಗಳು ಪುರಾಣ ಮತ್ತು ಅಂಗಯುಕ್ತವಾಗಿ ಕುದುರೆಗಳಾದುವು.

ವಷಟ್‌ಕಾರಃ ಪ್ರತೋದೋಽಭೂದ್ ಗಾಯತ್ರೀ ಶೀರ್ಷಬಂಧನಾ ।
ಯೋ ಯಜ್ಞೇ ವಿಹಿತಃ ಪೂರ್ವಮೀಶಾನಸ್ಯ ಮಹಾತ್ಮನಃ ॥೨೧॥

ಸಂವತ್ಸರೋ ಧನುಸ್ತದ್ವೈ ಸಾವಿತ್ರೀ ಜ್ಯಾ ಮಹಾಸ್ವನಾ ।
ದಿವ್ಯಂ ಚ ವರ್ಮ ವಿಹಿತಂ ಮಹಾರ್ಹಂ ರತ್ನಭೂಷಿತಮ್ ॥೨೨॥

ಅಭೇದ್ಯಂ ವಿರಜಸ್ಕಂ ವೈ ಕಾಲಚಕ್ರಂ ಪರಿಷ್ಕೃತಮ್ ।
ಧ್ವಜಯಷ್ಟಿರಭೂನ್ಮೇರುಃ ಶ್ರೀಮಾನ್ ಕನಕಪರ್ವತಃ ॥೨೩॥

ಯಜ್ಞದಲ್ಲಿ ವಿಹಿತವಾದ ವಷಟ್ಕಾರವು ಕಡಿವಾಣ. ಗಾಯತ್ರಿಯು ಶೀರ್ಷಬಂಧನ. ಮಹಾತ್ಮನಾದ ಈಶ್ವರನಿಗೆ ಸಂವತ್ಸರನಾಮಕ ಚತುರ್ಮುಖನು ಧನುಸ್. ಮಹಾಶಬ್ದಮಾಡುವ ಸಾವಿತ್ರಿಯೆ ಹೆದೆ. ಬಹುಮೂಲ್ಯವಾದ ರತ್ನಖಚಿತವಾದ, ನಿರ್ಮಲವಾದ ಅಭೇದ್ಯವಾದ ಕವಚವಾಗಿ ಕಾಲಚಕ್ರಾಭಿಮಾನಿ ಚತುರ್ಮುಖನೆ ಪರಿಷ್ಕೃತ ನಾದ. ಹೊಳೆಯುವ ಬಂಗಾರದ ಬೆಟ್ಟವಾದ ಮೇರುವೇ ಧ್ವಜದಂಡ.

ಇಲ್ಲಿ ಸಂವತ್ಸರಾದಿ ಜಡಪದಾರ್ಥಗಳು ಅಲ್ಲ. ಅವು ಧನುರ್ಬಾಣ-ಕವಚ-ರಥಗಳಾಗಲು ಶಕ್ಯವಿಲ್ಲ. ಹಿಂದೆ ಹೇಳಿದಂತೆ ಅವುಗಳಲ್ಲಿರುವ ತೇಜಸ್ಸುಗಳು ಚಿನ್ಮಯ ಕಾಮರೂಪಗಳಾಗಿದ್ದರಿಂದ ಧನುಸ್ ಮುಂತಾದ ರೂಪದಿಂದ ಧನುಸ್ ಮುಂತಾದವುಗಳಲ್ಲಿದ್ದು ಶಿವನಿಗೆ ಸಹಾಯ ಮಾಡಿವೆ. ಸಂವತ್ಸರನಾಮಕನು ಚತುರ್ಮುಖನೆಂದು ಭಾಷ್ಯೋದಾಹೃತ ಮಹಾಕೂರ್ಮ ಪುರಾಣವಚನ ಹೀಗೆ ಹೇಳುತ್ತದೆ—

'ತತ್ರ ಸಂವತ್ಸರಂ ನಾಮ ಬ್ರಹ್ಮಾಣಮಸೃಜತ್ ಪ್ರಭುಃ ।'

ಪತಾಕಾಶ್ಚಾಭವನ್ ಮೇಘಾಸ್ತಡಿದ್ಭಿಃ ಸಮಲಂಕೃತಾಃ ।
ರೇಜುರಧ್ವರ್ಯುಮಧ್ಯಸ್ಥಾ ಜ್ವಲಂತ ಇವ ಪಾವಕಾಃ ॥೨೪॥

ಮಿಂಚುಗಳಿಂದ ಅಲಂಕೃತವಾದ ಮೇಘಗಳು, ಅಂದರೆ ಅವುಗಳ ಅಭಿಮಾನಿ ತೇಜಸ್ಸುಗಳು ಪತಾಕೆಗಳಾದುವು. ಯಜ್ಞದಲ್ಲಿ ಅಧ್ವರ್ಯು ಮುಂತಾದ ಋತ್ವಿಜರ ನಡುವೆ ಜ್ವಲಿಸುವ ಯಾಗಾಗ್ನಿಗಳಂತೆ ಈ ಪತಾಕೆಗಳು ಹೊಳೆಯುತ್ತವೆ.

ಸಂಧ್ಯಾಂ ಧೃತಿಂ ಚ ಮೇಧಾಂ ಚ ಸ್ಥಿತಿಂ ಸನ್ನತಿಮೇವ ಚ ।
ಗ್ರಹನಕ್ಷತ್ರತಾರಾಭಿಶ್ಚರ್ಮ ಚಿತ್ರಂ ನಭಸ್ತಳಮ್ ॥೨೫॥

ಸಂಧ್ಯಾ ಧೃತಿ ಮೇಧಾ ಸ್ಥಿತಿ ಸನ್ನತಿ ದೇವಿಯರನ್ನೂ ಗ್ರಹ ನಕ್ಷತ್ರ ತಾರೆಗಳಿಂದ ಅಲಂಕೃತವಾದ ಆಕಾಶದ ಅಭಿಮಾನಿಯನ್ನೂ ರಥಕ್ಕೆ ಆವಾರಕವಾದ ಸುಂದರವಾದ ಚರ್ಮವಾಗಿ ಮಾಡಿದರು.

ಸುರಾಂಬುಪ್ರೇತವಿತ್ತಾನಾಂ ಪತೀನ್ ಲೋಕೇಶ್ವರಾನ್ ಹಯಾನ್ ।
ಸಿನೀವಾಲೀಮನುಮತಿಂ ಕುಹೂಂ ರಾಕಾಂ ಚ ಸುವ್ರತಾಮ್ ।
ಯೋಕ್ತ್ರಾಣಿ ಚಕ್ರುರ್ವಾಹಾನಾಂ ಘಂಟಿಕಾಶ್ಚಾಪಿ ಪನ್ನಗಾನ್ ॥೨೬॥

ಸುರಪತಿ, ಅಂಬುಪತಿ, ಪ್ರೇತಪತಿ, ವಿತ್ತಪತಿಗಳೆನಿಸಿದ ಇಂದ್ರ ವರುಣ ಯಮ ಕುಬೇರರೆಂಬ ಲೋಕಪಾಲಕರನ್ನು ಕುದುರೆಗಳನ್ನಾಗಿ ಮಾಡಿದರು. ಕುಹೂ ಸಿನೀವಾಲೀ ರಾಕಾ ಅನುಮತಿಗಳೆಂಬ ಅಮಾವಾಸ್ಯಾ ಪೂರ್ಣಿಮಾಭಿಮಾನಿ ದೇವತೆಗಳನ್ನು ನೊಗಕ್ಕೆ ಕುದುರೆಗಳನ್ನು ಕಟ್ಟುವ ಚರ್ಮದ ಹಗ್ಗಗಳಾಗಿ ಮಾಡಿದರು. ಹಾವುಗಳನ್ನು ಕಿರುಘಂಟೆಗಳಾಗಿಯೂ ಮಾಡಿದರು.

ಹಿಂದೆ ನಾಲ್ಕು ವೇದಗಳನ್ನು ಕುದುರೆಗಳಾಗಿ ಮಾಡಿದ್ದರೆಂದಿದೆ. ಇದೀಗ ಇಂದ್ರಾದಿದೇವತೆಗಳನ್ನು ಕುದುರೆಗಳಾಗಿ ಮಾಡಿದ್ದಾರೆ, ಕುದುರೆಗಳಲ್ಲಿ ವೇದಾಭಿಮಾನಿಗಳಾದ ಇಂದ್ರಾದಿದೇವತೆಗಳ ತೇಜಸ್ಸು ತುಂಬಿತ್ತೆಂದರ್ಥ. ಒಂದು ಚಂದ್ರಕಲೆಯಿಂದ ಯುಕ್ತವಾದ ಅಮಾವಾಸ್ಯೆ ಸಿನೀವಾಲಿ. ಕಲೆ ಇಲ್ಲದ ಅಮಾವಾಸ್ಯೆ ಕುಹೂ. ಎಲ್ಲ ಕಲೆಯಿಂದ ಕೂಡಿದ ಹುಣ್ಣಿಮೆ ರಾಕಾ. ಒಂದು ಕಲೆ ಕಡಿಮೆ ಇದ್ದರೆ ಅನುಮತಿ ಎನಿಸುತ್ತದೆ. ಈ ಹುಣ್ಣಿಮೆ-ಅಮಾವಾಸ್ಯೆಗಳ ಅಭಿಮಾನಿ ದೇವತೆಗಳ ತೇಜಸ್ಸುಗಳು ಕುದುರೆಗಳ ಹಗ್ಗಗಳಲ್ಲಿದ್ದುವು.

ಧರ್ಮಃ ಸತ್ಯಂ ತಪೋಽರ್ಥಶ್ಚ ವಿಹಿತಾಸ್ತತ್ರ ರಶ್ಮಯಃ ।
ಅಧಿಷ್ಠಾನಂ ಮನಸ್ತಾ ಸ್ತೀತ್ ಪರಿರಥ್ಯಾ ಸರಸ್ವತೀ ॥೨೭॥

ಧರ್ಮ ಸತ್ಯ ತಪಸ್ಸು ಅರ್ಥಗಳು ಕುದುರೆ ಕಟ್ಟುವ ಹಗ್ಗಗಳಾದುವು. ಮನಸ್ಸು ರಥಕ್ಕೆ ಆಧಾರವಾದ ಸ್ಥಳ. ಮಾತು ರಥವು ಮುಂದೆ ಸರಿಯಲು ಬೇಕಾಗುವ ಮಾರ್ಗ.

ನಾನಾವರ್ಣಾಶ್ಚ ಚಿತ್ರಾಶ್ಚ ಪತಾಕಾಃ ಪವನೇರಿತಾಃ ।
ವಿದ್ಯುದಿಂದ್ರಧನುರ್ಬದ್ಧಂ ರಥಂ ದೀಪ್ತಂ ವ್ಯದೀಪಯತ್ ॥೨೮॥

ನಾನಾ ವರ್ಣಗಳಿಂದೊಪ್ಪುವ ಸುಂದರ ಪತಾಕೆಗಳು ಗಾಳಿಯಲ್ಲಿ ಚಲಿಸುತ್ತ ಮಿಂಚಿನಿಂದ ಮತ್ತು ಮಳೆಬಿಲ್ಲುಗಳಿಂದ ಅಲಂಕೃತವಾದ ಪ್ರಕಾಶಮಾನವಾದ ರಥವನ್ನು ಇನ್ನೂ ಹೆಚ್ಚು ಬೆಳಗಿಸಿದವು.

ಕ್ಲೃಪ್ತಂ ತು ತಂ ರಥಂ ದೃಷ್ಟ್ವಾ ವಿಸ್ಮಿತಾ ದೇವತಾಭವನ್ ।
ಸರ್ವಲೋಕಸ್ಯ ತೇಜಾಂಸಿ ದೃಷ್ಟ್ವೈಕಸ್ಥಾನಿ ಮಾರಿಷ ।
ಯುಕ್ತಂ ನಿವೇದಯಾಮಾಸುರ್ದೇವಾಸ್ತಸ್ಮೈ ಮಹಾತ್ಮನೇ ॥೨೯॥

ಸಜ್ಜಾದ ರಥವನ್ನು ಕಂಡು ದೇವತೆಗಳು ವಿಸ್ಮಿತರಾದರು. ಸರ್ವಲೋಕಗಳ ಸರ್ವ ತೇಜಸ್ಸುಗಳು ರಥದಲ್ಲಿ ಒಂದೇ ಕಡೆ ನೆಲೆಸಿದ್ದನ್ನು ಕಂಡು ರಥವು ಸಜ್ಜಾಯಿತೆಂದು ಶಿವನಿಗೆ ನಿವೇದಿಸಿದರು.

ಏವಂ ತಸ್ಮಿನ್ ಮಹಾರಾಜ ಕಲ್ಪಿತೇ ರಥಸತ್ತಮೇ ।
ದೇವೈರ್ಮನುಜಶಾರ್ದೂಲ ದ್ವಿಷತಾಮಭಿಮರ್ದನೇ ॥೩೦॥

ಸ್ವಾನ್ಯಾಯುಧಾನಿ ಮುಖ್ಯಾನಿ ನ್ಯದಧಾಚ್ಛಂಕರೋ ರಥೇ ।
ಧ್ವಜಯಷ್ಟಿಂ ವಿಯತ್ಕೃತ್ವಾ ಸ್ಥಾಪಯಾಮಾಸ ಗೋವೃಷಮ್ ॥೩೧॥

ಮಹಾರಾಜ, ಹೀಗೆ ಶ್ರೇಷ್ಠವಾದ ರಥವನ್ನು ಶತ್ರುಸಂಹಾರಕ್ಕಾಗಿ ದೇವತೆಗಳು ಸಿದ್ಧಪಡಿಸಿದಾಗ ಶಂಕರನು ತನ್ನ ಮುಖ್ಯ ಆಯುಧಗಳನ್ನು ಆ ರಥದಲ್ಲಿ ಇರಿಸಿದನು. ಆಕಾಶವನ್ನು ಧ್ವಜಸ್ತಂಭವಾಗಿ ಮಾಡಿ ಅದರ ತುದಿಯಲ್ಲಿ ತನ್ನ ವೃಷಭವನ್ನು ಸ್ಥಾಪಿಸಿದ. ಹಿಂದೆ ಹೇಳಿದಂತೆ ಮೇರುಪರ್ವತದ ಅಭಿಮಾನಿಯೂ ಧ್ವಜಸ್ತಂಭದಲ್ಲಿ ನೆಲೆಸಿದ್ದಾನೆ.

''ನಾನಾ ವರ್ಣಾಶ್ಚ ಚಿತ್ರಾಶ್ಚ ಪತಾಕಾಃ ಪವನೇರಿತಾಃ'' ಎಂದು ಹೇಳಿದಂತೆ, ಗಾಳಿಯಲ್ಲಿ ಫಟಫಟನೆ ಹಾರಾಡುವ ಬಣ್ಣಬಣ್ಣದ ಪತಾಕೆಗಳು ಬೇರೆ. ಧ್ವಜವು ಬೇರೆ. ಧ್ವಜರೂಪವಾಗಿ ವೃಷಭವನ್ನು ಧ್ವಜಸ್ತಂಭದ ಮೇಲಿರಿಸಿದ್ದಾನೆ, ಶಿವ. ಅವನು ತನ್ನ ಎಲ್ಲ ಆಯುಧಗಳನ್ನು ರಥದಲ್ಲಿ ಇರಿಸಿದ್ದೇಕೆ? ವಿಷ್ಣುರೂಪವಾದ ಬಾಣದಿಂದ ತಾನೆ ಶಿವ ತ್ರಿಪುರಗಳನ್ನು ಸುಡಬೇಕಾಗಿದೆ? ಎಂದರೆ, ತನ್ನ ಎಲ್ಲ ಆಯುಧಗಳ ತೇಜಸ್ಸುಗಳಿಂದ ಸಹಿತವಾದ ವಿಷ್ಣುತೇಜಸ್ಸನ್ನು ಬಾಣದಲ್ಲಿಟ್ಟು ಆ ಬಾಣವನ್ನು ರಥದಲ್ಲಿರಿಸಿದ್ದಾನೆ.

ಬ್ರಹ್ಮದಂಡಃ ಕಾಲದಂಡೋ ರುದ್ರದಂಡಸ್ತಥಾ ಜ್ವರಃ ।
ಪರಿಸ್ಕಂದಾ ರಥಸ್ಯಾಸ್ಯ ಸರ್ವತೋದಿಶಮುದ್ಯತಾಃ ॥೩೨॥

ಬ್ರಹ್ಮದಂಡ, ಕಾಲರೂಪಿ ವಿಷ್ಣುದಂಡ, ರುದ್ರದಂಡ ಮತ್ತು ಶೈವ ವೈಷ್ಣವ ಜ್ವರಪುರುಷರು ಈ ರಥದ ಎಲ್ಲ ದಿಕ್ಕುಗಳಲ್ಲಿ ಪಾರ್ಶ್ವರಕ್ಷಕರಾಗಿ ನಿಂತರು.

ಅಥರ್ವಾಂಗಿರಸಾವಾಸ್ತಾಂ ಚಕ್ರರಕ್ಷೌ ಮಹಾತ್ಮನಃ ।
ಋಗ್ವೇದಃ ಸಾಮವೇದಶ್ಚ ಪುರಾಣಂ ಚ ಪುರಸ್ಸರಾಃ ॥೩೩॥

ಅಥರ್ವಾಂಗಿರಸ ವೇದಾಭಿಮಾನಿಗಳು ಚಕ್ರರಕ್ಷಕರಾದರು. ರಥಕ್ಕೆ ಮುಂದೆ ಋಗ್ವೇದ ಸಾಮವೇದ ಪುರಾಣಾಭಿಮಾನಿಗಳು, ರಕ್ಷಕರಾಗಿ ನಿಂತರು.

ಇತಿಹಾಸಯಜುರ್ವೇದೌ ಪೃಷ್ಠರಕ್ಷೌ ಬಭೂವತುಃ ।
ದಿವ್ಯಾ ವಾಚಶ್ಚ ವಿದ್ಯಾಶ್ಚ ಪರಿಪಾರ್ಶ್ವಚರಾಃ ಕೃತಾಃ ॥೩೪॥

ಇತಿಹಾಸ ಯಜುರ್ವೇದಾಭಿಮಾನಿಗಳು ರಥಕ್ಕೆ ಹಿಂದೆ ರಕ್ಷಕರಾದರು. ದಿವ್ಯ ವಚನಗಳು ಶಾಸ್ತ್ರಗಳು ಪಾರ್ಶ್ವರಕ್ಷಕರಾದರು.

ಸ್ತೋತ್ರಾದಯಶ್ಚ ರಾಜೇಂದ್ರ ವಷಟ್‌ಕಾರಸ್ತಥೈವ ಚ ।
ಓಂಕಾರಶ್ಚ ಮುಖೇ ರಾಜನ್ನತಿಶೋಭಾಕರೋಽಭವತ್ ॥೩೫॥

ಸ್ತೋತ್ರಾದಿಗಳು, ವಷಟ್‌ಕಾರ ಓಂಕಾರಗಳು ಮುಂದೆ ರಕ್ಷಕರಾಗಿ ನಿಂತು ರಥಕ್ಕೆ ಬಹಳ ಶೋಭೆ ಉಂಟುಮಾಡಿದರು.

ವಿಚಿತ್ರಮೃತುಭಿಃ ಷಡ್ಭಿಃ ಕೃತ್ವಾ ಸಂವತ್ಸರಂ ಧನುಃ ।
ಛಾಯಾಮೇವಾತ್ಮನಶ್ಚಕ್ರೇ ಧನುರ್ಜ್ಯಾಮಕ್ಷಯಾಂ ರಣೇ ।
ಕಾಲೋ ಹಿ ಭಗವಾನ್ ರುದ್ರಸ್ತಸ್ಯ ಸಂವತ್ಸರೋ ಧನುಃ ॥೩೬॥
ತಸ್ಮಾದ್ ರೌದ್ರೀ ಕಾಲರಾತ್ರಿರ್ಜ್ಯಾ ಕೃತಾ ಧನುಷೋಽಜರಾ ॥೩೭॥

ಆರು ಋತುಗಳಿಂದ ಯುಕ್ತವಾದ ಸಂವತ್ಸರವನ್ನು ಧನುಸ್ಸನ್ನಾಗಿ ಮಾಡಿ ತನ್ನ ಪ್ರತಿಬಿಂಬವನ್ನು ಅಕ್ಷಯವಾದ ಹೆದೆಯನ್ನಾಗಿ ಕಾಲರುದ್ರನು ಮಾಡಿದ. ಕಾಲನೆಂದರೆ ಭಗವಾನ್ ರುದ್ರ. ಸಂವತ್ಸರ ಅವನ ಧನುಸ್ಸು. ಅದರಿಂದ ಅವನು ತನ್ನ ಛಾಯೆಯಾದ ಕಾಲರಾತ್ರಿಯನ್ನು ಧನುಸ್ಸಿನ ಅಕ್ಷಯವಾದ ಹೆದೆಯಾಗಿ ಮಾಡಿಕೊಂಡ.

ಇಲ್ಲಿ 'ಕಾಲ'ನೆಂದರೆ, ಗೀತೆಯಲ್ಲಿ 'ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' (11.31) ಎಂದು ಹೇಳಿದಂತೆ ಕೃಷ್ಣನೆ. ರುದ್ರ ಎಂಬ ರೂಪದಿಂದ ಅವನು ಲೋಕ ಲಯ ಮಾಡುತ್ತಾನೆ. ವಾಮನನು ಬಲಿಯನ್ನು ಬಂಧಿಸಿದಾಗ ಬಲಿ ಇಂದ್ರನಿಗೆ ಹೇಳುತ್ತಾನೆ—

ಕ್ಲೃಪ್ತಂ ತು ತಂ ರಥಂ ದೃಷ್ಟ್ವಾ ವಿಸ್ಮಿತಾ ದೇವತಾಭವನ್ ।
ಸರ್ವಲೋಕಸ್ಯ ತೇಜಾಂಸಿ ದೃಷ್ಟ್ವೈಕಸ್ಥಾನಿ ಮಾರಿಷ ।
ಯುಕ್ತಂ ನಿವೇದಯಾಮಾಸುರ್ದೇವಾಸ್ತಸ್ಮೈ ಮಹಾತ್ಮನೇ ॥೨೯॥

ಸಜ್ಜಾದ ರಥವನ್ನು ಕಂಡು ದೇವತೆಗಳು ವಿಸ್ಮಿತರಾದರು. ಸರ್ವಲೋಕಗಳ ಸರ್ವ ತೇಜಸ್ಸುಗಳು ರಥದಲ್ಲಿ ಒಂದೇ ಕಡೆ ನೆಲೆಸಿದ್ದನ್ನು ಕಂಡು ರಥವು ಸಜ್ಜಾಯಿತೆಂದು ಶಿವನಿಗೆ ನಿವೇದಿಸಿದರು.

ಏವಂ ತಸ್ಮಿನ್ ಮಹಾರಾಜ ಕಲ್ಪಿತೇ ರಥಸತ್ತಮೇ ।
ದೇವೈರ್ಮನುಜಶಾರ್ದೂಲ ದ್ವಿಷತಾಮಭಿಮರ್ದನೇ ॥೩೦॥

ಸ್ವಾನ್ಯಾಯುಧಾನಿ ಮುಖ್ಯಾನಿ ನ್ಯದಧಾಚ್ಛಂಕರೋ ರಥೇ ।
ಧ್ವಜಯಷ್ಟಿಂ ವಿಯತ್ಕೃತ್ವಾ ಸ್ಥಾಪಯಾಮಾಸ ಗೋವೃಷಮ್ ॥೩೧॥

ಮಹಾರಾಜ, ಹೀಗೆ ಶ್ರೇಷ್ಠವಾದ ರಥವನ್ನು ಶತ್ರುಸಂಹಾರಕ್ಕಾಗಿ ದೇವತೆಗಳು ಸಿದ್ಧಪಡಿಸಿದಾಗ ಶಂಕರನು ತನ್ನ ಮುಖ್ಯ ಆಯುಧಗಳನ್ನು ಆ ರಥದಲ್ಲಿ ಇರಿಸಿದನು. ಆಕಾಶವನ್ನು ಧ್ವಜಸ್ತಂಭವಾಗಿ ಮಾಡಿ ಅದರ ತುದಿಯಲ್ಲಿ ತನ್ನ ವೃಷಭವನ್ನು ಸ್ಥಾಪಿಸಿದ. ಹಿಂದೆ ಹೇಳಿದಂತೆ ಮೇರುಪರ್ವತದ ಅಭಿಮಾನಿಯೂ ಧ್ವಜಸ್ತಂಭದಲ್ಲಿ ನೆಲೆಸಿದ್ದಾನೆ.

''ನಾನಾ ವರ್ಣಾಶ್ಚ ಚಿತ್ರಾಶ್ಚ ಪತಾಕಾಃ ಪವನೇರಿತಾಃ'' ಎಂದು ಹೇಳಿದಂತೆ, ಗಾಳಿಯಲ್ಲಿ ಫಟಫಟನೆ ಹಾರಾಡುವ ಬಣ್ಣಬಣ್ಣದ ಪತಾಕೆಗಳು ಬೇರೆ. ಧ್ವಜವು ಬೇರೆ. ಧ್ವಜರೂಪವಾಗಿ ವೃಷಭವನ್ನು ಧ್ವಜಸ್ತಂಭದ ಮೇಲಿರಿಸಿದ್ದಾನೆ, ಶಿವ. ಅವನು ತನ್ನ ಎಲ್ಲ ಆಯುಧಗಳನ್ನು ರಥದಲ್ಲಿ ಇರಿಸಿದ್ದೇಕೆ? ವಿಷ್ಣುರೂಪವಾದ ಬಾಣದಿಂದ ತಾನೆ ಶಿವ ತ್ರಿಪುರಗಳನ್ನು ಸುಡಬೇಕಾಗಿದೆ? ಎಂದರೆ, ತನ್ನ ಎಲ್ಲ ಆಯುಧಗಳ ತೇಜಸ್ಸುಗಳಿಂದ ಸಹಿತವಾದ ವಿಷ್ಣುತೇಜಸ್ಸನ್ನು ಬಾಣದಲ್ಲಿಟ್ಟು ಆ ಬಾಣವನ್ನು ರಥದಲ್ಲಿರಿಸಿದ್ದಾನೆ.

ಬ್ರಹ್ಮದಂಡಃ ಕಾಲದಂಡೋ ರುದ್ರದಂಡಸ್ತಥಾ ಜ್ವರಃ ।
ಪರಿಸ್ಕಂದಾ ರಥಸ್ಯಾಸ್ಯ ಸರ್ವತೋದಿಶಮುದ್ಯತಾಃ ॥೩೨॥

ಬ್ರಹ್ಮದಂಡ, ಕಾಲರೂಪಿ ವಿಷ್ಣುದಂಡ, ರುದ್ರದಂಡ ಮತ್ತು ಶೈವ ವೈಷ್ಣವ ಜ್ವರಪುರುಷರು ಈ ರಥದ ಎಲ್ಲ ದಿಕ್ಕುಗಳಲ್ಲಿ ಪಾರ್ಶ್ವರಕ್ಷಕರಾಗಿ ನಿಂತರು.

ಅಥರ್ವಾಂಗಿರಸಾವಾಸ್ತಾಂ ಚಕ್ರರಕ್ಷೌ ಮಹಾತ್ಮನಃ ।
ಋಗ್ವೇದಃ ಸಾಮವೇದಶ್ಚ ಪುರಾಣಂ ಚ ಪುರಸ್ಸರಾಃ ॥೩೩॥

ಅಥರ್ವಾಂಗಿರಸ ವೇದಾಭಿಮಾನಿಗಳು ಚಕ್ರರಕ್ಷಕರಾದರು. ರಥಕ್ಕೆ ಮುಂದೆ ಋಗ್ವೇದ ಸಾಮವೇದ ಪುರಾಣಾಭಿಮಾನಿಗಳು, ರಕ್ಷಕರಾಗಿ ನಿಂತರು.

ಇತಿಹಾಸಯಜುರ್ವೇದೌ ಪೃಷ್ಠರಕ್ಷೌ ಬಭೂವತುಃ ।
ದಿವ್ಯಾ ವಾಚಶ್ಚ ವಿದ್ಯಾಶ್ಚ ಪರಿಪಾರ್ಶ್ವಚರಾಃ ಕೃತಾಃ ॥೩೪॥

ಇತಿಹಾಸ ಯಜುರ್ವೇದಾಭಿಮಾನಿಗಳು ರಥಕ್ಕೆ ಹಿಂದೆ ರಕ್ಷಕರಾದರು. ದಿವ್ಯ ವಚನಗಳು ಶಾಸ್ತ್ರಗಳು ಪಾರ್ಶ್ವರಕ್ಷಕರಾದರು.

ಸ್ತೋತ್ರಾದಯಶ್ಚ ರಾಜೇಂದ್ರ ವಷಟ್‌ಕಾರಸ್ತಥೈವ ಚ ।
ಓಂಕಾರಶ್ಚ ಮುಖೇ ರಾಜನ್ನತಿಶೋಭಾಕರೋಽಭವತ್ ॥೩೫॥

ಸ್ತೋತ್ರಾದಿಗಳು, ವಷಟ್‌ಕಾರ ಓಂಕಾರಗಳು ಮುಂದೆ ರಕ್ಷಕರಾಗಿ ನಿಂತು ರಥಕ್ಕೆ ಬಹಳ ಶೋಭೆ ಉಂಟುಮಾಡಿದರು.

ವಿಚಿತ್ರಮೃತುಭಿಃ ಷಡ್ಭಿಃ ಕೃತ್ವಾ ಸಂವತ್ಸರಂ ಧನುಃ ।
ಛಾಯಾಮೇವಾತ್ಮನಶ್ಚಕ್ರೇ ಧನುರ್ಜ್ಯಾಮಕ್ಷಯಾಂ ರಣೇ ।
ಕಾಲೋ ಹಿ ಭಗವಾನ್ ರುದ್ರಸ್ತಸ್ಯ ಸಂವತ್ಸರೋ ಧನುಃ ॥೩೬॥
ತಸ್ಮಾದ್ ರೌದ್ರೀ ಕಾಲರಾತ್ರಿರ್ಜ್ಯಾ ಕೃತಾ ಧನುಷೋಽಜರಾ ॥೩೭॥

ಆರು ಋತುಗಳಿಂದ ಯುಕ್ತವಾದ ಸಂವತ್ಸರವನ್ನು ಧನುಸ್ಸನ್ನಾಗಿ ಮಾಡಿ ತನ್ನ ಪ್ರತಿಬಿಂಬವನ್ನು ಅಕ್ಷಯವಾದ ಹೆದೆಯನ್ನಾಗಿ ಕಾಲರುದ್ರನು ಮಾಡಿದ. ಕಾಲನೆಂದರೆ ಭಗವಾನ್ ರುದ್ರ. ಸಂವತ್ಸರ ಅವನ ಧನುಸ್ಸು. ಅದರಿಂದ ಅವನು ತನ್ನ ಛಾಯೆಯಾದ ಕಾಲರಾತ್ರಿಯನ್ನು ಧನುಸ್ಸಿನ ಅಕ್ಷಯವಾದ ಹೆದೆಯಾಗಿ ಮಾಡಿಕೊಂಡ.

ಇಲ್ಲಿ 'ಕಾಲ'ನೆಂದರೆ, ಗೀತೆಯಲ್ಲಿ 'ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' (11.31) ಎಂದು ಹೇಳಿದಂತೆ ಕೃಷ್ಣನೆ. ರುದ್ರ ಎಂಬ ರೂಪದಿಂದ ಅವನು ಲೋಕ ಲಯ ಮಾಡುತ್ತಾನೆ. ವಾಮನನು ಬಲಿಯನ್ನು ಬಂಧಿಸಿದಾಗ ಬಲಿ ಇಂದ್ರನಿಗೆ ಹೇಳುತ್ತಾನೆ—

ನಿಯತಂ ಕಾಲಪಾಶೇನ ಬದ್ಧಂ ಶಕ್ರ ವಿಕತ್ಥಸೇ
ಅಯಂ ಸ ಪುರುಷಃ ಶ್ಯಾಮೋ ಲೋಕಸ್ಯ ಹರತಿ ಪ್ರಜಾಃ
ಬಧ್ವಾ ತಿಷ್ಠತಿ ಮಾಂ ರೌದ್ರಃ ಪಶುಂ ರಶನಯಾ ಯಥಾ

'ಈ ವಾಮನ ನನ್ನನ್ನು ಬಂಧಿಸಿದ್ದಾನೆ. ನಾನು ಕಾಲಪಾಶದಿಂದ ಬದ್ಧನಾಗಿದ್ದೇನೆ. ಕಾಲನೆಂದರೆ ಇವನೆ. ಪಶುಗಳನ್ನು ಹಗ್ಗದಿಂದ ಕಟ್ಟುವಂತೆ ನಮ್ಮನ್ನು ಈತ ಬಂಧಿಸುತ್ತಾನೆ. 'ರುದ್ರ' ಅತ್ಯುಗ್ರನಾದ್ದರಿಂದ ಈತನೇ 'ಕಾಲ' ಎಂದು. ಇದು ಮೋಕ್ಷಧರ್ಮವಚನ. ಹೀಗಾಗಿ ಕಾಲನೆಂದು ಮುಖ್ಯವಾಗಿ ಪ್ರಸಿದ್ಧನಾದವನು ವಿಷ್ಣುವೆ. ಅವನ ಛಾಯೆ, ಮುಖ್ಯಪ್ರತಿಬಿಂಬ ಕಾಲಾಭಿಮಾನಿನಿ ದುರ್ಗೆ. ಅವಳನ್ನು ಸಂವತ್ಸರನಾಮಕ ಚತುರ್ಮುಖ ಸ್ವರೂಪವಾದ ಧನುಸ್ಸನ್ನು ಬಗ್ಗಿಸಿ ಕಟ್ಟುವ ಹೆದೆಯನ್ನಾಗಿ ಭಗವಾನ್ ಕಾಲರುದ್ರನಾದ ವಿಷ್ಣುವೇ ಮಾಡಿಕೊಟ್ಟಿದ್ದಾನೆ. ಹಿಂದೆ ಚತುರ್ಮುಖನೆಂಬ ಧನುಸ್ಸಿಗೆ ಸರಸ್ವತಿ ಹೆದೆ ಎಂದಿದೆ. ಅದರಿಂದ ಹೆದೆಯಲ್ಲಿ ಸರಸ್ವತಿಯ ತೇಜಸ್ಸೂ ಕೂಡ ದುರ್ಗಾ ತೇಜಸ್ಸಿನೊಂದಿಗೆ ಇದೆ ಎಂದು ತಿಳಿಯಬೇಕು.

ಇಷುಶ್ಚಾಪ್ಯಭವದ್ ವಿಷ್ಣುರ್ಜ್ವಲನಃ ಸೋಮ ಏವ ಚ ।
ಅಗ್ನೀಷೋಮಮಯಂ ಸರ್ವಂ ವೈಷ್ಣವಂ ಚೋಚ್ಯತೇ ಜಗತ್ ॥೩೮॥

ವಿಷ್ಣುವೂ ಅಗ್ನಿಯೂ ಸೋಮನೂ ಬಾಣದಲ್ಲಿ ಸನ್ನಿಹಿತರಾದರು. ಪ್ರಪಂಚವು 'ಅಗ್ನಿ ಸೋಮಮಯ' ಅಂದರೆ ರುದ್ರಬ್ರಹ್ಮಮಯವೆಂದೂ, 'ವಿಷ್ಣುಮಯ' ವೆಂದೂ ಪ್ರಸಿದ್ಧವಾಗಿದೆ.

ವಿಷ್ಣುಶ್ಚಾತ್ಮಾ ಭಗವತೋ ಭವಸ್ಯಾಮಿತತೇಜಸಃ ।
ತಸ್ಮಾದ್ಧನುರ್ಜ್ಯಾಸಂಸ್ಪರ್ಶಂ ನ ವಿಷೇಹುರ್ಹರಸ್ಯ ತೇ ॥೩೯॥

ವಿಷ್ಣುವು ಅಮಿತತೇಜನಾದ ಭಗವಾನ್ ಶಿವನಿಗೆ 'ಆತ್ಮ' ಸ್ವಾಮಿಯಾಗಿದ್ದಾನೆ. ಅದರಿಂದ ಶಿವನು ಬಿಲ್ಲಿನ ಹೆದೆಯನ್ನೆಳೆದರೆ ಅಸುರರು ಸಹಿಸಿಕೊಂಡು ಉಳಿಯುವುದಿಲ್ಲ.

ವಿಷ್ಣು ಶಿವನಿಗೆ ಆತ್ಮಸ್ವರೂಪನೆಂದು ಇಲ್ಲಿ ಅರ್ಥವಲ್ಲ.
'ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿ ಚ'

ಎಂದು ಬ್ರಹ್ಮಸೂತ್ರದಲ್ಲಿ ಆತ್ಮತ್ವೋಪಾಸನೆಯನ್ನು ಹೇಳಿದೆ. ಆತ್ಮತ್ವೋಪಾಸನೆ

ಸ್ವರೂಪೋಪಾಸನೆಯಲ್ಲ. ಸ್ವಾಮಿತ್ವೋಪಾಸನೆಯನ್ನು ಎಲ್ಲರೂ ಮಾಡ ಬೇಕೆಂದು ಅಲ್ಲಿ ನಿರ್ಣಯವಾಗಿದೆ. ಅದರಿಂದ ವಿಷ್ಣು ಶಿವನಿಗೆ ಸ್ವಾಮಿ ಎಂದರ್ಥ. ಹೀಗಾಗಿ ಶಿವ ಬಿಲ್ಲಿನ ಹೆದೆಯನ್ನೆಳೆದರೆ ಅಸುರರು ಬದುಕಿ ಉಳಿಯುವುದಿಲ್ಲ. ವಿಷ್ಣು ಅವರನ್ನು ಉಳಿಸುವುದಿಲ್ಲ.

ತಸ್ಮಿನ್ ಶರೇ ತಿಗ್ಮಮನ್ಯುರ್ಮುಮೋಚಾವಿಷಹಂ ಪ್ರಭುಃ ।
ಭೃಗ್ವಂಗಿರೋಮನ್ಯುಭವಂ ಕ್ರೋಧಾಗ್ನಿಮತಿದುಃಸಹಮ್ ॥೪೦॥

ಶಿವನು ತೀಕ್ಷ್ಣಕೋಪಿಯಾದ್ದರಿಂದ ಭೃಗು ಮತ್ತು ಅಂಗಿರಮುನಿಗಳ ಕೋಪ ದಿಂದ ಉದ್ಭೂತವಾದ ಅತಿ ದುಃಸಹವಾದ ಕ್ರೋಧಾಗ್ನಿಯನ್ನು ವಿಷ್ಣುಮಯ ವಾದ ಬಾಣದಲ್ಲಿರಿಸಿದನು.

ಕೋಪದಿಂದ ತನ್ನ ಮೂರನೆ ಕಣ್ಣಿನ ಅಗ್ನಿಯನ್ನು ಇರಿಸಲಿಲ್ಲ. ಏಕೆಂದರೆ ಬಾಣದ ತುದಿಯಲ್ಲಿದ್ದ ಅಗ್ನಿ ಶಿವನ ನೇತ್ರಾಗ್ನಿಯಲ್ಲ.

ಸ ನೀಲಲೋಹಿತೋ ಧೂಮ್ರಃ ಕೃತ್ತಿವಾಸಾ ಭಯಂಕರಃ ।
ಆದಿತ್ಯಾಯುತಸಂಕಾಶಸ್ತೇಜೋಜ್ವಾಲಾವೃತೋ ಜ್ವಲನ್ ॥೪೧॥

ಕಪ್ಪು ಕೊರಳು, ಕೆಂಜಡೆಯವನು, ಕಂದು ಬಣ್ಣದ ಮೈಯವನು, ತೊಗಲುಡಿಗೆ ಯವನು, ಭಯಂಕರನು, ಸಾವಿರಾರು ಸೂರ್ಯರಂತೆ ತೇಜೋ ಜ್ವಾಲೆವುಳ್ಳವನು. ಜ್ವಲಿಸುವವನು ಶಿವ.

ದುಶ್ಚ್ಯವಶ್ಚ್ಯವನೋ ಜೇತಾ ಹಂತಾ ಬ್ರಹ್ಮದ್ವಿಷಾಂ ಹರಃ ।
ನಿತ್ಯಂ ತ್ರಾತಾ ಚ ಹಂತಾ ಚ ಧರ್ಮಾಧರ್ಮಾಶ್ರಿತಾನ್ ಜನಾನ್॥೪೨॥

ವಿಚಲಿತಗೊಳಿಸಲಾಗದವನು, ವಿಚಲಿತಗೊಳಿಸಬಲ್ಲವನು, ಗೆಲ್ಲುವವನು, ಬ್ರಹ್ಮ ದ್ವೇಷಿಗಳನ್ನು ಕೊಲ್ಲುವವನು, ಧರ್ಮಾಶ್ರಿತರನ್ನು ರಕ್ಷಿಸುವವನು, ಅಧರ್ಮಾಶ್ರಿತರನ್ನು ಕೊಲ್ಲುವವನು ಹರ.

ಪ್ರಮಾಥಿಭಿಘೋರರೂಪೈ ರ್ಭೀಮೋದಗ್ರೈರ್ಗಣೈರ್ವೃತಃ ।
ವಿಭಾತಿ ಭಗವಾನ್ ಸ್ಥಾಣುಸ್ತೈರೇವಾತ್ಮಗುಣೈರ್ವೃತಃ ॥೪೩॥

ಕೊಲ್ಲುವವ ಘೋರರೂಪಿ ಭೀಕರ ಪ್ರಮಥಗಣಗಳಿಂದ ಪರಿವೃತನಾಗಿ ಅದೇರೀತಿಯ ತನ್ನ ಗುಣಗಳಿಂದ ಕೂಡಿ ಭಗವಾನ್ ಸ್ಥಾಣು ಬೆಳಗುತ್ತಾನೆ.

ತಸ್ಯಾಂಗಾನಿ ಸಮಾಶ್ರಿತ್ಯ ಸ್ಥಿತಂ ವಿಶ್ವಮಿದಂ ಜಗತ್ ।
ಜಂಗಮಾಜಂಗಮಂ ರಾಜನ್ ಶುಶುಭೇSದ್ಭುತದರ್ಶನಮ್ ॥೪೪॥

ರಾಜನೆ, ಹರನ ಅಂಗಗಳನ್ನು ಆಶ್ರಯಿಸಿ ಅದ್ಭುತವಾಗಿ ಕಾಣುವ ಈ ಎಲ್ಲ ಚರಾಚರ ಪ್ರಪಂಚವು ಶೋಭಿಸುತ್ತದೆ.

ದೃಷ್ಟ್ವಾ ತು ತಂ ರಥಂ ದಿವ್ಯಂ ಕವಚೀ ಸ ಶರಾಸನೀ ।
ಬಾಣಮಾದಾಯ ತಂ ದಿವ್ಯಂ ಸೋಮವಿಷ್ಣ್ವಗ್ನಿವಾತಜಮ್ ॥೪೫॥

ದಿವ್ಯವಾದ ಆ ರಥವನ್ನು ಕಂಡು ಹರನು ಕವಚತೊಟ್ಟು ಬಿಲ್ಲನ್ನು ಹಿಡಿದು, ಸೋಮ ವಿಷ್ಣು ಅಗ್ನಿ ವಾಯುಗಳಿಂದ ಉತ್ಪನ್ನವಾದ ದಿವ್ಯವಾದ ಬಾಣವನ್ನು ಎತ್ತಿಕೊಂಡು ಶೋಭಿಸಿದನು.

ತಸ್ಯ ವಾಜಾಂಸ್ತತೋ ದೇವಾಃ ಕಲ್ಪಯಾಂಚಕ್ರಿರೇ ವಿಭೋಃ ।
ಪುಣ್ಯಗಂಧವಹಂ ರಾಜನ್ ಶ್ವಸನಂ ದೇವಸತ್ತಮಮ್ ॥೪೬॥

ಬಾಣವು ವಾಯುವಿನಿಂದಲೂ ಉತ್ಪನ್ನವಾದುದು. ಏಕೆಂದರೆ ದೇವೋತ್ತಮನಾದ ಪುಣ್ಯಗಂಧವನ್ನು ಹರಡುವ ವಾಯುವಿನಿಂದ ಬಾಣದ 'ವಾಜ'ಗಳನ್ನು ಅಂದರೆ ಪುಕ್ಕಗಳನ್ನು ದೇವತೆಗಳು ಸಿದ್ಧಪಡಿಸಿದರು.

ಮುಂದೆ (87ಅ. 56ಶ್ಲೋ.) ಅರ್ಜುನನ ಬಾಣವು 'ಶೋಣಿತ ದಿಗ್ಧವಾಜ' ವಾಯಿತೆಂದು ವರ್ಣನೆ ಬರುತ್ತದೆ. 'ವಾಜ' ಎಂದರೆ ಇಲ್ಲಿ ಬಾಣದ ಪುಕ್ಕ ಎಂದು ಲಕ್ಷಾಲಂಕಾರದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಪ್ರಕೃತ ಶ್ಲೋಕದಲ್ಲಿ ಬಾಣದ ವಾಜಗಳನ್ನು ದೇವತೆಗಳು ವಾಯುವಿನಿಂದ ಸಿದ್ಧಪಡಿಸಿದರೆಂದಿರುವುದರಿಂದ ವಾಯುವಿನಿಂದಲೂ ಬಾಣ ಉತ್ಪನ್ನವಾಗಿದೆ ಎಂದು ಹೇಳಿದಂತಾಗುತ್ತದೆ. ಪ್ರಚಲಿತ ಪಾಠದಲ್ಲಿ—

ತಸ್ಯ ರಾಜಂಸ್ತದಾ ದೇವಾಃ ಕಲ್ಪಯಾಂಚಕ್ರಿರೇ ಪ್ರಭೋ ।
ಪುಣ್ಯಗಂಧವಹಂ ರಾಜನ್ ಶ್ವಸನಂ ದೇವಸತ್ತಮಮ್ ॥

ಎಂದು ವ್ಯರ್ಥವಾಗಿ ಎರಡು ಬಾರಿ 'ರಾಜನ್' ಶಬ್ದ ಬಂದಿದೆ. 'ತಸ್ಯಾನುಕೂಲಂ ಜಯಾವಹಂ ಶ್ವಸನಂ ಕಲ್ಪಯಾಂಚಕ್ರೇ' ಎಂದು ನೀಲಕಂಠಿಯಲ್ಲಿ ಅನ್ವಯವೆ ಇಲ್ಲದ ಅನ್ವಯವನ್ನು ತೋರಿಸಲಾಗಿದೆ! 'ತಸ್ಯ ವಾಜಾಂಸ್ತದಾ ದೇವಾಃ' ಎಂಬ ಪಾಠದಲ್ಲಿ ಏನೂ ಅಧ್ಯಾಹಾರ ಮಾಡದೇ ಸುಂದರವಾದ ಅರ್ಥವತ್ತಾದ ಅನ್ವಯವನ್ನು ಮಾಡಲು ಶಕ್ಯವಿದೆ. ಅದನ್ನು ಬಿಟ್ಟು 'ವಾಯುದೇವನನ್ನು ಶಿವನಿಗೆ ಅನುಕೂಲವಾಗಿ ಗಾಳಿ ಬೀಸುವ ಕಾರ್ಯದಲ್ಲಿ ದೇವತೆಗಳು ನಿಯೋಜಿಸಿದರು' ಎಂದು ಅರ್ಥವಿವರಣೆ ನೀಡುವುದು ಅನುಚಿತ.

ತಮಾದಾಯ ಮಹಾದೇವಸ್ತ್ರಾಸಯನ್ ಸರ್ವದಾನವಾನ್ ।
ಆರುರೋಹ ತದಾ ಯತ್ತಃ ಕಂಪಯನ್ನಿವ ರೋದಸೀ ॥೪೭॥

ಮಹಾದೇವನು ಆ ಬಾಣವನ್ನು ಎತ್ತಿಕೊಂಡು ಸರ್ವದಾನವರನ್ನು ಭಯಪಡಿಸುತ್ತ ಭೂಮ್ಯಂತರಿಕ್ಷಗಳನ್ನು ಕಂಪಿಸುವಂತೆ ರಥವನ್ನೇರಿದ.

ತಮಾರುರುಕ್ಷುಂ ದೇವೇಶಂ ತುಷ್ಟುವುಃ ಪರಮರ್ಷಯಃ ।
ಗಂಧರ್ವಾ ದೇವಸಂಘಾಶ್ಚ ತಥೈವಾಪ್ಸರಸಾಂ ಗಣಾಃ ॥೪೮॥

ಮಹಾದೇವನು ಆ ರಥವನ್ನು ಏರಲು ಹೊರಟಾಗ ಮಹರ್ಷಿಗಳು, ಗಂಧರ್ವರು, ದೇವಸಮೂಹಗಳು, ಅಪ್ಸರೆಯರ ಸಮೂಹಗಳು ಸ್ತುತಿಸಿದರು.

ಮಹರ್ಷಿಭಿಃ ಸ್ತೂಯಮಾನೋ ವಂದ್ಯಮಾನಶ್ಚ ವಂದಿಭಿಃ ।
ಉಪನೃತ್ತಶ್ಚಾಪ್ಸರಸಾಂ ಗಣೈರ್ನೃತ್ತವಿಶಾರದೈಃ ॥೪೯॥

ಸ ಶೋಭಮಾನೋ ವರದಃ ಖಡ್ಗೀ ಬಾಣೀ ಶರಾಸನೀ ।
ಹಸನ್ನಿವಾಬ್ರವೀದ್ ದೇವೋ ಸಾರಥಿಃ ಕೋ ಭವಿಷ್ಯತಿ ॥೫೦॥

ಮಹರ್ಷಿಗಳಿಂದ ಸ್ತುತಿಸಿಕೊಂಡು, ಬಂದಿಗಳಿಂದ ವಂದಿಸಿಕೊಂಡು, ನೃತ್ತವಿಶಾರದರಾದ ಅಪ್ಸರೆಯರ ಸಮೂಹಗಳಿಂದ ನೃತ್ಯಸೇವೆ ಕೈಗೊಂಡು ಖಡ್ಗಬಾಣಬಿಲ್ಲುಗಳನ್ನು ಹಿಡಿದು ಶೋಭಿಸುತ್ತ ವರದಾಯಕನಾದ ಮಹಾದೇವ ನಗುತ್ತ ನುಡಿದ, 'ಸಾರಥಿ ಯಾರಾಗುವರು?' ಎಂದು.

ತಮಬ್ರುವನ್ ದೇವಗಣಾ ಯಂ ಭವಾನ್ ಸಂನಿಯೋಕ್ಷ್ಯತೇ ।
ಸ ಭವಿಷ್ಯತಿ ದೇವೇಶ ಸಾರಥಿಸ್ತೇ ನ ಸಂಶಯಃ ॥೫೧॥

ದೇವತೆಗಳು ಹೇಳಿದರು, ನೀನು ಯಾರನ್ನು ನಿಯೋಜಿಸುವೆಯೋ ಅವನು ಸಾರಥಿಯಾಗುತ್ತಾನೆ, ಸಂಶಯವಿಲ್ಲ.

ತಾನಬ್ರವೀತ್ ಪುನರ್ದೇವೋ ಮತ್ತಃ ಶ್ರೇಷ್ಠತರೋ ಹಿ ಯಃ ।
ತಂ ಸಾರಥಿಂ ಕುರುಧ್ವಂ ಮೇ ಸ್ವಯಂ ಸಂಚಿಂತ್ಯ ಮಾ ಚಿರಮ್ ॥೫೨॥

ಮಹಾದೇವ ಪುನಃ ನುಡಿದ, ನನಗಿಂತ ಶ್ರೇಷ್ಠನಾದವನನ್ನು ನೀವೇ ಆಲೋಚಿಸಿ ನನಗೆ ಸಾರಥಿಯನ್ನಾಗಿ ಮಾಡಿರಿ. ತಡ ಮಾಡಬೇಡಿರಿ.

ಏತಚ್ಛ್ರುತ್ವಾ ತತೋ ದೇವಾ ವಾಕ್ಯಮುಕ್ತಂ ಮಹಾತ್ಮನಾ ।
ಗತ್ವಾ ಪಿತಾಮಹಂ ದೇವಂ ಪ್ರಸಾದ್ಯೈವಂ ವಚೋಽಬ್ರುವನ್ ॥೫೩॥

ಮಹಾತ್ಮ ಶಿವನಾಡಿದ ಮಾತನ್ನು ಕೇಳಿ ದೇವತೆಗಳು ಬ್ರಹ್ಮದೇವನ ಬಳಿಗೆ ಹೋಗಿ ಒಲಿಸಿಕೊಂಡು ಹೇಳಿದರು.

ದೇವ ತ್ವಯೇದಂ ಕಥಿತಂ ತ್ರಿದಶಾರಿನಿಬರ್ಹಣಮ್ ।
ತಥಾ ಚ ಕೃತಮಸ್ಮಾಭಿಃ ಪ್ರಸನ್ನೋ ವೃಷಭಧ್ವಜಃ ॥೫೪॥

ದೇವ, ಅಸುರಸಂಹಾರಕ್ಕೆ ಸಿದ್ಧತೆಯನ್ನು ನೀನು ಹೇಗೆ ಹೇಳಿದೆಯೋ ಹಾಗೆ ನಾವು ಮಾಡಿದ್ದೇವೆ. ಶಿವ ಪ್ರಸನ್ನನಾಗಿದ್ದಾನೆ.

ರಥಶ್ಚ ವಿಹಿತೋಸ್ಮಾಭಿರ್ವಿಚಿತ್ರಾಯುಧಸಂವೃತಃ ।
ಸಾರಥಿಂ ತು ನ ಜಾನೀಮಃ ಕಃ ಸ್ಯಾತ್ ತಸ್ಮಿನ್ ರಥೋತ್ತಮೇ ॥೫೫॥

ಶಿವನಿಗೆ ಬೇಕಾಗಿರುವ ನಾನಾ ಆಯುಧಗಳಿಂದ ಸಜ್ಜಾದ ರಥವನ್ನು ಸಿದ್ಧಪಡಿಸಿದ್ದೇವೆ. ಆ ರಥದಲ್ಲಿ ಸಾರಥಿ ಯಾರೆಂಬುದನ್ನು ನಾವು ತಿಳಿಯೆವು.

ತಸ್ಮಾದ್ ವಿಧೀಯತಾಂ ಕಶ್ಚಿತ್ ಸಾರಥಿರ್ದೇವಸತ್ತಮ ।
ಸಫಲಾಂ ತಾಂ ಗಿರಂ ದೇವ ಕರ್ತುಮರ್ಹಸಿ ನೋ ವಿಭೋ ॥೫೬॥

ದೇವೋತ್ತಮ, ಒಬ್ಬ ಸಾರಥಿಯನ್ನು ಒದಗಿಸು. ಪ್ರಭು, ನೀನು ಕೊಟ್ಟಿರುವ ಮಾತನ್ನು ಸಫಲವಾಗಿ ನಡೆಸಿಕೊಡು.

ಏವಮಸ್ಮಾಸು ಹಿ ಪುರಾ ಭಗವನ್ನುಕ್ತವಾನಸಿ ।
ಹಿತಂ ಕರ್ತಾಸ್ಮಿ ಭವತಾಮಿತಿ ತತ್ಕರ್ತುಮರ್ಹಸಿ ॥೫೭॥

ನಮಗೆ ಹಿಂದೆ ನೀನು 'ನಿಮಗೆ ಹಿತ ಉಂಟುಮಾಡುವೆನೆ'ಂದು ಮಾತು ಕೊಟ್ಟಿರುವೆ. ಪೂಜ್ಯನೆ, ಆ ಮಾತನ್ನು ನಡೆಸಿಕೊಡಬೇಕು.

ಸ ದೇವ ಯುಕ್ತೋ ರಥಸತ್ತಮೋ ನೋ
ದುರಾವರೋ ದ್ರಾವಣಃ ಶಾತ್ರವಾಣಾಮ್ ।
ಪಿನಾಕಪಾಣೆರ್ವಿಹಿತೋಽತ್ರ ಯೋದ್ಧಾ
ವಿಭೀಷಯನ್ ದಾನವಾನುದ್ಯತೋಽಸೌ ॥೫೮॥

ದೇವ, ಶತ್ರುಗಳಿಗೆ ಅಭೇದ್ಯವಾದ, ಅವರನ್ನು ಓಡಿಸಬಲ್ಲ ಉತ್ತಮವಾದ ರಥ ಸಜ್ಜಾಗಿ ನಿಂತಿದೆ. ಶಿವನು ಅದರಲ್ಲಿ ಯೋಧನಾಗಿ ದಾನವರನ್ನು ಅಂಜಿಸಲು ಉದ್ಯುಕ್ತನಾಗಿದ್ದಾನೆ.

ತಥೈವ ವೇದಾಶ್ಚತುರೋ ಹಯಾಗ್ರ್ಯಾ
ಧರಾ ಸಶೈಲಾ ಚ ರಥೋ ಮಹಾತ್ಮನ್ ।
ನಕ್ಷತ್ರವಂಶೋಽನುಗತೋ ವರೂಥೇ
ಯಸ್ಮಿನ್ ಯೋದ್ಧಾ ಸಾರಥಿನಾಭಿರಕ್ಷ್ಯಃ ॥೫೯॥

ನಾಲ್ಕು ವೇದಗಳು ಕುದುರೆಗಳಾಗಿ ನಿಂತಿವೆ. ಪರ್ವತಗಳಿಂದ ಯುಕ್ತವಾದ ಧರೆ ರಥವಾಗಿ ನಿಂತಿದೆ. ನಕ್ಷತ್ರಪುಂಜದಿಂದ ಅಲಂಕೃತವಾದ ಆಕಾಶ ಅದಕ್ಕೆ ಆವರಣವಾಗಿದೆ. ಮಹಾತ್ಮನೆ, ಆ ಯೋಧನನ್ನು ಒಬ್ಬ ಸಾರಥಿ ರಕ್ಷಿಸಬೇಕಾಗಿದೆ.

ತತ್ರ ಸಾರಥಿರೇಷ್ಟವ್ಯಃ ಸರ್ವೈರೇತೈರ್ವಿಶೇಷವಾನ್ ।
ತತ್ಪ್ರತಿಷ್ಠೋ ರಥೋ ದೇವ ಹಯಾ ಯೋದ್ಧಾ ತಥೈವ ಚ ।
ಕವಚಾನಿ ಚ ಶಸ್ತ್ರಾಣಿ ಕಾರ್ಮುಕಂ ಚ ಪಿತಾಮಹ ॥೬೦॥

ರಥ ಅಶ್ವ ಮತ್ತು ಯೋಧರೆಲ್ಲರಿಗಿಂತ ಶ್ರೇಷ್ಠನಾದವನು ಒಬ್ಬ ಸಾರಥಿ ಬೇಕಾಗಿದ್ದಾನೆ. ಅವನಿಂದಲೆ ರಥ ಅಶ್ವ ಯೋಧರ ಕವಚ ಆಯುಧ ಧನುಸ್ಸುಗಳ ಯೋಗಕ್ಷೇಮ ನಿರ್ವಾಹ ಸಾಧ್ಯವಾಗುತ್ತದೆ.

ತ್ವಾಮೃತೇ ಸಾರಥಿಂ ತತ್ರ ನಾನ್ಯಂ ಪಶ್ಯಾಮಹೇ ವಯಮ್ ।
ತ್ವಂ ಹಿ ಸರ್ವೈರ್ಗುಣೈರ್ಯುಕ್ತೋ ದೇವತಾಭ್ಯೋಽಧಿಕಃ ಪ್ರಭೋ ।
ಸಾರಥ್ಯೇ ತೂರ್ಣಮಾರೋಹ ಸಂಯಚ್ಛ ಪರಮಾನ್ ಹಯಾನ್ ॥೬೧॥

ಜಯಾಯ ತ್ರಿದಿವೇಶಾನಾಂ ವಧಾಯ ತ್ರಿದಶದ್ವಿಷಾಮ್ ॥೬೨॥

ಅಂಥ ಸಾರಥಿಯಾಗಲು ನಿನ್ನೊಬ್ಬನನ್ನು ಹೊರತು ಇನ್ನೊಬ್ಬನನ್ನು ನಾವು ಕಾಣೆವು. ಪ್ರಭು, ನೀನೇ ಸಕಲಗುಣಸಂಪನ್ನ ದೇವತೆಗಳಿಗಿಂತ ಉತ್ತಮ. ದೇವತೆಗಳಿಗೆ ಜಯವಾಗಬೇಕು. ಅಸುರರ ವಿನಾಶವಾಗಬೇಕು. ಅದಕ್ಕೆ ನೀನೇ ಸಾರಥಿಯಾಗಿ ಬೇಗನೆ ರಥವನ್ನೇರು, ಉತ್ತಮವಾದ ಕುದುರೆಗಳನ್ನು ನಿಯಂತ್ರಿಸು.

ದುರ್ಯೋಧನಃ

ಇತಿ ತೇ ಶಿರಸಾ ನತ್ವಾ ತ್ರಿಲೋಕೇಶಂ ಪಿತಾಮಹಮ್ ।
ದೇವಾಃ ಪ್ರಸಾದಯಾಮಾಸುಃ ಸಾರಥ್ಯಾಯೇತಿ ನಃ ಶ್ರುತಮ್ ॥೬೩॥

ಹೀಗೆ ದೇವತೆಗಳು ಮೂರ್ಲೋಕದೊಡೆಯನಾದ ಬ್ರಹ್ಮದೇವನನ್ನು ತಲೆಬಾಗಿ ನಮಿಸಿ ಸಾರಥ್ಯಕ್ಕಾಗಿ ಅವನನ್ನು ಒಲಿಸಿಕೊಂಡರು ಎಂದು ಹೇಳುವುದನ್ನೂ ಕೇಳಿದ್ದೇವೆ.

ಬ್ರಹ್ಮಾ

ನಾತ್ರ ಕಿಂಚಿನ್ಮೃಷಾ ವಾಕ್ಯಂ ಯದುಕ್ತಂ ವೋ ದಿವೌಕಸಃ ।
ಸಂಯಚ್ಛಾಮಿ ಹಯಾನೇಷ ಯುಧ್ಯತೋ ವೈ ಕಪರ್ದಿನಃ ॥೬೪॥

ಬ್ರಹ್ಮದೇವನು ದೇವತೆಗಳಿಗೆ ನುಡಿದ— ದೇವತೆಗಳೆ, ನಾನೆಂದೂ ಕೊಟ್ಟ ಮಾತಿಗೆ ತಪ್ಪಿದ್ದೇ ಇಲ್ಲ ಶಿವನು ಯುದ್ಧ ಮಾಡುವಾಗ ನಾನು ಕುದುರೆಗಳನ್ನು ನಿಯಂತ್ರಿಸುತ್ತೇನೆ.

ತತಃ ಸ ಭಗವಾನ್ ದೇವೋ ಲೋಕಸ್ರಷ್ಟಾ ಪಿತಾಮಹಃ ।
ಸಾರಥ್ಯೇ ಕಲ್ಪಿತೋ ದೇವೈರೀಶಾನಸ್ಯ ಮಹಾತ್ಮನಃ ॥೬೫॥

ಹೀಗೆ ಲೋಕಗಳ ಸೃಷ್ಟಿಕರ್ತನಾದ ಭಗವಾನ್ ಬ್ರಹ್ಮದೇವನನ್ನು ಶಿವನಿಗೆ ಸಾರಥಿಯಾಗಲು ದೇವತೆಗಳು ಒಪ್ಪಿಸಿದರು.

ಆರುಹ್ಯ ಭಗವಾನ್ ದೇವೋ ದೀಪ್ಯಮಾನಃ ಸ್ವತೇಜಸಾ ॥೬೬॥
ಅಭೀಶೂನ್ ಹಿ ತ್ರಿಲೋಕೇಶಃ ಸಂಗೃಹ್ಯ ಪ್ರಪಿತಾಮಹಃ ।
ತಾನಶ್ವಾಂಶ್ಚೋದಯಾಮಾಸ ಮನೋಮಾರುತರಂಹಸಃ ॥೬೭॥

ಭಗವಾನ್ ಬ್ರಹ್ಮದೇವನು ತನ್ನ ತೇಜಸ್ಸಿನಿಂದ ಬೆಳಗುತ್ತ ರಥವನ್ನೇರಿ ಕುದುರೆಗಳ ಹಗ್ಗಗಳನ್ನು ಹಿಡಿದು ಮನೋವೇಗ, ವಾಯುವೇಗಗಳುಳ್ಳ ಆ ಕುದುರೆಗಳನ್ನು ನಡೆಸತೊಡಗಿದ.

ತತೋಽಧಿರೂಢೇ ವರದೇ ಪ್ರಯಾತೇ ಚಾಸುರಾನ್ ಪ್ರತಿ ।
ಸಾಧು ಸಾಧ್ವಿತಿ ವಿಶ್ವೇಶಃ ಸ್ಮಯಮಾನೋಽಭ್ಯಭಾಷತ ॥೬೮॥

ಅಸುರರಿಗೆ ವರವಿತ್ತ ಬ್ರಹ್ಮದೇವನೆ ಅಸುರರ ಕಡೆಗೆ ರಥವನ್ನು ನಡೆಸುವಾಗ ವಿಶ್ವೇಶ್ವರನು ನಸುನಗುತ್ತ 'ಭಲೇ! ಭೇಷ್!' ಎಂದ.

ಯಾಹಿ ದೇವ ಯತೋ ದೈತ್ಯಾಶ್ಚೋದಯಾಶ್ವಾನತಂದ್ರಿತಃ ।
ಪಶ್ಯ ಬಾಹ್ವೋರ್ಬಲಂ ಮೇಽದ್ಯ ನಿಘ್ನತಃ ಶಾತ್ರವಾನ್ ರಣೇ ॥೬೯॥

ದೇವ, ದೈತ್ಯರಿರುವಲ್ಲಿಗೆ ಕುದುರೆಗಳನ್ನು ಎಚ್ಚರಿಕೆಯಿಂದ ನಡೆಸು, ನೋಡು ನನ್ನ ಬಾಹುಬಲವನ್ನು. ರಣದಲ್ಲಿ ಶತ್ರುಗಳನ್ನು ವಧಿಸುತ್ತೇನೆ.

ತತಸ್ತಾಂಶ್ಚೋದಯಾಮಾಸ ವಾಯುವೇಗಸಮಾನ್ ಜವೇ ।
ಪುರಾಣ್ಯುದ್ದಿಶ್ಯ ಸ್ವಸ್ಥಾನಿ ದಾನವಾನಾಂ ತರಸ್ವಿನಾಮ್ ॥೭೦॥

ವೇಗದಲ್ಲಿ ವಾಯುವೇಗಕ್ಕೆ ಸಮವಾದ ಕುದುರೆಗಳನ್ನು ಬಲಿಷ್ಠರಾದ ದಾನವರ ತ್ರಿಪುರಗಳು ಸ್ವಸ್ಥವಾಗಿ ಅಂತರಿಕ್ಷದಲ್ಲಿ ತೇಲುತ್ತಿರುವಲ್ಲಿಗೆ ಬ್ರಹ್ಮದೇವನು ನಡೆಸಿದ.

ಪಿಬದ್ಭಿರಿವ ಚಾಕಾಶಂ ತೈರ್ಹಯೈರ್ಲೋಕ ಪೂಜಿತೈಃ ।
ಜಗಾಮ ಭಗವಾನ್ ಕ್ಷಿಪ್ರಂ ಜಯಾಯ ತ್ರಿದಿವೌಕಸಾಮ್ ॥೭೩॥

ಲೋಕಪೂಜಿತವಾದ ಕುದುರೆಗಳು ಕತ್ತನ್ನೆತ್ತಿ ಆಗಸವನ್ನು ಕುಡಿದು ಬಿಡುವಂತೆ ನೋಡುತ್ತ ಹಾರಿದವು. ಭಗವಾನ್ ಶಿವನು ದೇವತೆಗಳಿಗೆ ಜಯ ತಂದುಕೊಡಲು ವೇಗವಾಗಿ ಹೊರಟ.

ಪ್ರಯಾತೇ ರಥಮಾಸ್ಥಾಯ ತ್ರಿಪುರಾಭಿಮುಖೇ ಭವೇ ।
ನನಾದ ಸುಮಹಾನಾದಂ ವೃಷಭಃ ಪೂರಯನ್ ದಿಶಃ ॥೭೪॥

ಭವನು ರಥವನ್ನೇರಿ ತ್ರಿಪುರಗಳ ಕಡೆಗೆ ಹೊರಟಾಗ ಧ್ವಜದಲ್ಲಿದ್ದ ನಂದಿಕೇಶ್ವರ ವೃಷಭನು ದಿಕ್ಕುಗಳೆಲ್ಲ ತುಂಬುವಂತೆ ಮಹಾನಾದ ಮಾಡಿದನು.

ವೃಷಭಸ್ಯಾಸ್ಯ ನಿನದಂ ಶ್ರುತ್ವಾ ಭಯಕರಂ ಮಹತ್ ।
ವಿನಾಶಮಗಮಂಸ್ತತ್ರ ತಾರಕಾಃ ಸುರಶತ್ರವಃ ॥೭೫॥

ವೃಷಭನ ಭಯಂಕರವಾದ ಆ ಮಹಾಧ್ವನಿಯನ್ನು ಕೇಳಿ ತಾರಕಾಸುರನ ಕಡೆಯ ಅಸುರರು ಹೆಚ್ಚಿನವರು ಹೆದರಿ ಅಲ್ಲಲ್ಲಿ ಅಡಗಿ ಕುಳಿತರು.

ಅಪರೇಽವಸ್ಥಿತಾಸ್ತತ್ರ ಯುದ್ಧಾಯಾಭಿಮುಖಾಸ್ತದಾ ।
ತತಃ ಸ್ಥಾಣುರ್ಮಹಾರಾಜ ಶೂಲಧೃಕ್ ಕ್ರೋಧಮೂರ್ಛಿತಃ ॥೭೬॥

ಉಳಿದವರು ಯುದ್ಧಕ್ಕೆ ಇದಿರಾಗಿ ಬಂದು ನಿಂತರು. ಮಹಾರಾಜ ಶಲ್ಯನೆ, ಶೂಲಧಾರಿ ಸ್ಥಾಣುವು ಆಗ ಕ್ರೋಧದಿಂದ ಮೈಮರೆತ.

ತ್ರಸ್ತಾನಿ ಸರ್ವಭೂತಾನಿ ತ್ರೈಲೋಕ್ಯಂ ಭೂಃ ಪ್ರಕಂಪತೇ ।
ನಿಮಿತ್ತಾನಿ ಚ ಘೋರಾಣಿ ತತ್ರ ಸಂದಧತಃ ಶರಮ್ ॥೭೭॥

ಎಲ್ಲ ಜೀವಿಗಳೂ ಭಯಗ್ರಸ್ತರಾದರು, ಮೂರ್ಲೋಕ ನಡುಗಿತು, ಭೂಮಿ ಕಂಪಿಸಿತು. ಘೋರವಾದ ಶಕುನಗಳು ತಲೆದೋರಿದುವು. ಶಿವ ಶರಸಂಧಾನ ಮಾಡಿದ.

ತಸ್ಮಿನ್ ಸೋಮಾಗ್ನಿವಿಷ್ಣೂನಾಂ ಕ್ಷೋಭೇಣ ಬ್ರಹ್ಮರುದ್ರಯೋಃ ।
ಸ ರಥೋ ಧನುಷಃ ಕ್ಷೋಭಾದತೀವ ಹ್ಯವಸೀದತಿ ॥೭೮॥

ಶರದಲ್ಲಿದ್ದ ಸೋಮ ಅಗ್ನಿ ವಿಷ್ಣುಗಳ ತೇಜಸ್ಸಿನಿಂದಲೂ ಬ್ರಹ್ಮ–ರುದ್ರರ ಕೋಪದಿಂದಲೂ ಧನುಸ್ಸಿನ ಭಾರದಿಂದಲೂ ರಥವು ಕೆಳಗೆ ಕುಸಿಯತೊಡಗಿತು.

ತತೋ ನಾರಾಯಣಸ್ತಸ್ಮಾತ್ ಶರಭಾಗಾದ್ವಿನಿಃಸೃತಃ ।
ವೃಷರೂಪಂ ಸಮಾಸ್ಥಾಯ ಉಜ್ಜಹಾರ ಮಹಾರಥಮ್ ॥೭೯॥

ಆಗ ನಾರಾಯಣನು ಶರಭಾಗದಿಂದ ಈಚೆಗೆ ಬಂದು ವೃಷಭರೂಪ ತಾಳಿ ಆ ಮಹಾರಥವನ್ನು ಎತ್ತಿ ಹಿಡಿದ.

ಸೀದಮಾನೇ ರಥೇ ಚೈವ ನರ್ದಮಾನೇಷು ಶತ್ರುಷು ।
ಸ ಸಂಭ್ರಮಾತ್ತು ಭಗವಾನ್ನಾದಂ ಚಕ್ರೇ ಮಹಾಬಲಃ ॥೮೦॥

ರಥವು ಕುಸಿಯುತ್ತಿರುವಾಗ, ದೈತ್ಯರು ಉತ್ಸಾಹಗೊಂಡು ಗರ್ಜಿಸುತ್ತಿರುವಾಗ ಮಹಾಬಲಿಷ್ಠನಾದ ಭಗವಾನ್ ವೃಷಭರೂಪಿ ನಾರಾಯಣನು ರಥವನ್ನೆತ್ತಿ ಹಿಡಿದು ಸಂಭ್ರಮದಿಂದ ಮಹಾನಾದವನ್ನು ಮಾಡಿದ.

ವೃಷಭಸ್ಯ ಸ್ಥಿತೋ ಮೂರ್ಧ್ನಿ ಹಯಪೃಷ್ಠೇ ಚ ಮಾನದ ।
ತದಾ ಸ ಭಗವಾನ್ ರುದ್ರೋ ನಿರೈಕ್ಷದ್ ದಾನವಂ ಪುರಮ್ ॥೮೧॥

ಆಗ ಭಗವಾನ್ ರುದ್ರನು ವೃಷಭದ ಶಿರಸ್ಸಿನ ಮೇಲ್ಗಡೆ ಮತ್ತು ಕುದುರೆಗಳ ಬೆನ್ನಿನ ಮೇಲ್ಗಡೆ ರಥದಲ್ಲಿ ನಿಂತು ಬಾಣಕ್ಕೆ ಲಕ್ಷ್ಯವಾದ ದಾನವರ ತ್ರಿಪುರವನ್ನು ನೋಡುತ್ತ ನಿಂತ.

ವೃಷಭಸ್ಯಾಸ್ಥಿತೋ ರುದ್ರೋ ಹಯಸ್ಯ ಚ ನರೋತ್ತಮ ।
ಸ್ತನಾಂಸ್ತದಾऽಶಾತಯತ ಖಿರಾಂಶ್ಚೈವ ದ್ವಿಧಾऽಕರೋತ್ ॥೮೨॥

ರಥದಲ್ಲಿ ಚೆನ್ನಾಗಿ ನಿಂತ ರುದ್ರನು ಮೊದಲಿಗೆ ಕುದುರೆಯ ಸ್ತನಗಳನ್ನು ಕೊಯ್ದ. ವೃಷಭದ ಗೊರಸುಗಳನ್ನು ಎರಡಾಗಿ ಸೀಳಿದ.

ತತಃ ಪ್ರಭೃತಿ ಭದ್ರಂ ತೇ ಗವಾಂ ದ್ವೈಧೀಕೃತಾಃ ಖಿರಾಃ ।
ಹಯಾನಾಂ ಚ ಸ್ತನಾ ರಾಜಂಸ್ತದಾಪ್ರಭೃತಿ ನಾಭವನ್ ।
ಪೀಡಿತಾನಾಂ ಬಲವತಾ ರುದ್ರೇಣಾದ್ಭುತಕರ್ಮಣಾ ॥ ೮೩ ॥

ಅಂದಿನಿಂದ ಪ್ರಪಂಚದಲ್ಲಿ ಗೋವುಗಳ ಗೊರಸುಗಳು ಎರಡಾಗಿ 'ಭದ್ರಂ' ಮಂಗಳಕರವಾಗಿ ಸೀಳಿದುವು ಮತ್ತು ಕುದುರೆಗಳಿಗೂ ಅಂದಿನಿಂದ ಮಂಗಳಕರವಾಗಿ ಸ್ತನಗಳಿಲ್ಲವಾದುವು. ಅದ್ಭುತಕರ್ಮವನ್ನು ಮಾಡುವ ಬಲಿಷ್ಠನಾದ ರುದ್ರನು ಪೀಡಿಸಿದ್ದರಿಂದ ಇದು ಹೀಗಾಯಿತು.

ವೃಷಭದ ಶಿರಸ್ಸಿನ ಮೇಲೂ ಕುದುರೆಯ ಬೆನ್ನಿನ ಮೇಲೂ ಕುಳಿತಿದ್ದ ರುದ್ರನು ದಾನವರನ್ನು ನೋಡಿದುದೇಕೆ? ಕುದುರೆಯ ಸ್ತನಗಳನ್ನು ಕಿತ್ತುದುದೇಕೆ? ವೃಷಭದ ಗೊರಸುಗಳನ್ನು ಸೀಳಿದುದೇಕೆ? ರಥದಲ್ಲಿ ಕುಳಿತಿದ್ದವನು ಕುದುರೆಯ ಮೇಲೂ ವೃಷಭದ ಮೇಲೂ ಕಾಲಿಟ್ಟುದುದೇಕೆ?

ತ್ರಿಮೂರ್ತಿಗಳಲ್ಲಿ ಯಾವ ಭೇದವಿರದಿದ್ದರೂ ಶಿವನೆ, ತನಗಿಂತಲೂ ಬ್ರಹ್ಮನು ಅಧಿಕನೆಂದು ಹೇಳಿಕೊಂಡುದುದೂ ಅಚ್ಚರಿಯಾಗಿ ಕಾಣುತ್ತದೆ. ತ್ರಿಪುರಾಸುರರನ್ನು ಸಂಹಾರ ಮಾಡಲು ಶಿವನಿಗೊಬ್ಬನಿಗಲ್ಲದೆ ಮತ್ತಾರಿಂದಲೂ ಸಾಧ್ಯವಾಗುವುದಿಲ್ಲ. ಇದನ್ನು ಬ್ರಹ್ಮನೇ ಹೇಳುತ್ತಾನೆ. 'ನ ಚ ಸ್ಥಾಣುಮೃತೇ ಶಕ್ತೋ ಭೇತ್ತುಮೇಕೇಷುಣಾ ಪುರಃ' ಎಂದು. ಮತ್ತು

'ತವಾತಿಸರ್ಗಾತ್ ದೇವೇಶ ಪ್ರಾಜಾಪತ್ಯಮಿದಂ ಪದಮ್ ।
ಮಯಾऽಧಿತಿಷ್ಠತಾ ದತ್ತೋ ದಾನವೇಭ್ಯೋ ಮಹಾನ್ ವರಃ ॥'

'ನಿನ್ನ ಆದೇಶಾನುಸಾರ ಪ್ರಜಾಪತಿಯ ಸ್ಥಾನವನ್ನು ವಹಿಸಿಕೊಂಡಿರುವ ನಾನು ದಾನವರಿಗೆ ಮಹತ್ತರವಾದ ವರವೊಂದನ್ನು ದಯಪಾಲಿಸಿದೆನು' ಎಂದೂ ಬ್ರಹ್ಮನೇ ಹೇಳುತ್ತಾನೆ. ಅದರಿಂದ ಯಾರು ಹೆಚ್ಚು, ಯಾರು ಕಡಿಮೆ ಎಂಬ ಜಿಜ್ಞಾಸೆಗೆ ಅವಕಾಶವೇ ಇಲ್ಲ.

ಹೀಗೆ ಈ ಮೂರು ಅಧ್ಯಾಯಗಳೂ ಬಗೆಹರಿಸಲಾಗದ ಹಲವಾರು ವಿರೋಧಾಭಾಸಗಳಿಂದ ಕೂಡಿವೆ. ಈ ಅಧ್ಯಾಯಗಳನ್ನು ಬಿಟ್ಟು ಓದಿದರೂ ಕಥೆಯ ಓಟದಲ್ಲಾಗಲಿ, ವಸ್ತುನಿರೂಪಣೆಯಲ್ಲಾಗಲಿ ಲೋಪವೇನೂ ಉಂಟಾಗುವುದಿಲ್ಲ. ಆದರೆ ಎಲ್ಲ ಪುಸ್ತಕಗಳಲ್ಲಿಯೂ ಈ ಅಧ್ಯಾಯಗಳಿವೆ!

—ಓದುಗರ ಈ ಪ್ರಶ್ನೆಗಳಿಗೆ ಸಮಾಧಾನ ನೀಡುವುದು ಕಷ್ಟಕರವಲ್ಲ. ಮೊದಲಿಗೆ ವೃಷಭದ ಮೇಲೂ ಕುದುರೆಯ ಮೇಲೂ ಕುಳಿತಿದ್ದ ರುದ್ರನು ದಾನವರನ್ನು ನೋಡಿದ್ದು ಏಕೆ ಎನ್ನುವ ಪ್ರಶ್ನೆಯೇ ಅಸಂಗತ. ಬಿಲ್ಲಿಗೆ ಬಾಣವನ್ನು ಹೂಡಿ ಬಿಲ್ಗಾರನು ಲಕ್ಷ್ಯವನ್ನು ಸರಿಯಾಗಿ ನೋಡಿಯೇ ಗುರಿಯಿಟ್ಟು ಬಾಣವನ್ನೆಸೆಯಬೇಕು. ರಥವು ಕುಸಿಯುತ್ತಿದ್ದುದರಿಂದ ಶಿವನಿಗೆ ದಾನವರನ್ನು ಹೀಗೆ ನೋಡಲಾಗುತ್ತಿರಲಿಲ್ಲವೆಂದೇ ವೃಷಭವೂ ಕುದುರೆಗಳೂ ಸೇರಿ ರಥವನ್ನು ಹೊತ್ತಿದ್ದುವು ತಾನೆ?

ರುದ್ರನು ಕುದುರೆಯ ಸ್ತನಗಳನ್ನು ಕಿತ್ತಿದ್ದೇಕೆ? ವೃಷಭದ ಗೊರಸುಗಳನ್ನು ಸೀಳಿದ್ದೇಕೆ? ಎಂಬ ಪ್ರಶ್ನೆಗಳು ಬರುವುದು ಸಹಜ. ರಣರಂಗದಲ್ಲಿ ಯುದ್ಧಕ್ಕೆ

ಸನ್ನದ್ಧನಾಗಿ ನಿಂತಿರುವಾಗ ಯೋಧನು ಇಂಥ ಬೇರೆ ಯಾವುದೋ ಕಾರ್ಯಕ್ಕೆ ತೊಡಗುವುದು ಅಸಹಜವಾಗಿ ಕಾಣುತ್ತದೆ.

ವಸ್ತುತಃ ರಣವಾದ್ಯಗಳನ್ನು ಮೊಳಗಿಸುವುದು, ಜಯಘೋಷ, ಗಂಧರ್ವಾಪ್ಸರೆಯರ ಗಾನ-ನೃತ್ಯಗಳು ಮುಂತಾದವು ಮಂಗಳಕರವಾಗಿದ್ದು ಯೋಧನಿಗೆ ಜಯ ತಂದುಕೊಡುವ ಉದ್ದೇಶದವುಗಳಾಗಿರುತ್ತವೆ. ಹಾಗೇ ಕುದುರೆಗಳ ಎದೆಯಲ್ಲಿನ ಸ್ತನಗಳನ್ನು ಕೀಳುವುದೂ ವೃಷಭದ ಗೊರಸುಗಳನ್ನು ಸೀಳುವುದೂ ಮಂಗಳಕಾರ್ಯವೆ. ಏಕೆಂದರೆ ಸ್ತನಗಳು 'ಸ್ತನಕೇಶವತೀ ನಾರೀ' ಎಂಬಂತೆ ಸ್ತ್ರೀಲಕ್ಷಣಗಳಾಗಿದ್ದು ಪುರುಷಯೋಧರಲ್ಲಿ ಅವು ಅವಲಕ್ಷಣಗಳಾಗಿರುತ್ತವೆ.

ಗಂಡುಪ್ರಾಣಿಗಳಲ್ಲಿ ಸ್ತನಗಳು ಸೂಕ್ಷ್ಮವಾಗಿಯಾದರೂ ಇರುವುದು ನಿಜವೆ. ಅವುಗಳಿಗೆ ಅವು ಅಮಂಗಳಕರವಲ್ಲ. ಆದರೆ ಭೀಷ್ಮನು ಶಿಖಂಡಿಯ ಮುಂದೆ ಯುದ್ಧ ಏಕೆ ಮಾಡಲಿಲ್ಲ ಎಂದರೆ ಭೀಷ್ಮನು ಹೇಳುತ್ತಾನೆ— 'ಶಿಖಂಡಿ' ಎಂಬ ನಾಮ ಸ್ತ್ರೀಯಳದು. ಸುಂದರಕೇಶಪಾಶಉಳ್ಳ ಸ್ತ್ರೀ ಎಂದರ್ಥ. ಶಿಖಂಡಿ ಸ್ತ್ರೀಯಾಗಿದ್ದಾಗ ಅವನಿಗಿಟ್ಟಿದ್ದ ಹೆಸರು ಅದು. ಶಿಖಂಡಿ ಈಗ ಪುರುಷನಾಗಿ ಮಹಾರಥನೆನಿಸಿದರೂ ಅದೇ ಸ್ತ್ರೀನಾಮವಿನ್ನೂ ಅವನಿಗೆ ಇದೆ. ಇದು 'ಅಮಂಗಳಕರ'ಎಂದು. ಹಾಗೆ ಪ್ರಕೃತದಲ್ಲಿ ಕುದುರೆಗಳು ಗಂಡಾಗಿದ್ದರೂ ಹಿಂದೆ ಅವುಗಳಿಗೆ ಸ್ತ್ರೀಲಕ್ಷಣವಾದ ಸ್ತನಗಳಿದ್ದುವು. ಅವು ಅಲ್ಪವಾಗಿದ್ದರೂ ರುದ್ರನು ಸಹಿಸದೆ ಅವುಗಳನ್ನು ಕಿತ್ತನೆನ್ನಬಹುದು.

ಲಕ್ಷಾಲಂಕಾರದಲ್ಲಿ ''ಸ್ತ್ರೀತ್ವ- ಸ್ತ್ರೀನಾಮಧೇಯತ್ವ-ಕ್ಲೀಬತ್ವಾದಿಕಂ ಯೋದ್ಧುಃ ಅಮಾಂಗಲ್ಯಸ್ಯ ಧ್ವಜಃ ಚಿಹ್ನಂ' (ಭೀಷ್ಮ 103) ಎಂದು ವಿವರಣೆ ನೀಡಿದ್ದಾರೆ.

ವೃಷಭಗಳೂ ಕೂಡ, 'ಆತಾಮ್ರ ಸಂಹತ ಖುರಾಃ ಶುಭದಾಃ' ಎನ್ನುವಂತೆ ನಿಬಿಡವಾಗಿ ಜೊತೆ ಸೇರಿದ ಎರಡು ಗೊರಸುಗಳಿದ್ದರೇ ಮಂಗಳಕರ. ಯದ್ಯಪಿ ಪ್ರಕೃತದ 'ದಿವ್ಯವಾದ' ವೃಷಭ ಮತ್ತು ಅಶ್ವಗಳ ಗೊರಸು, ಸ್ತನಗಳು ಅಮಂಗಳಕರವಾಗಿರಲು ಶಕ್ಯವಿಲ್ಲ. ಆದರೂ ಲೋಕದಲ್ಲಿ ಎಲ್ಲ ಕಡೆ ಎಲ್ಲ ಕಾಲದಲ್ಲಿ ಅವು ಮಂಗಳಕರವಾಗಿರಲೆಂದು, ಮಂಗಳಕರನಾದ್ದರಿಂದಲೇ 'ಶಿವ'ನೆನಿಸಿದ ಶಿವನು, ಈ ಮಂಗಳಕಾರ್ಯಗಳನ್ನು ಮಾಡಿದ್ದಾನೆ ಎಂದು ಇಲ್ಲಿಯೇ ಹೇಳಿದೆ—

ತತಃ ಪ್ರಭೃತಿ 'ಭದ್ರಂ' ತೇ ಗವಾಂ 'ದ್ವೈಧೀ'ಕೃತಾಃ ಖುರಾಃ ।
ಹಯಾನಾಂ ಚ ಸ್ತನಾ ರಾಜನ್ ತದಾಪ್ರಭೃತಿ ನಾಭವನ್ ॥

'ಭದ್ರಂ' 'ಮಂಗಳಕರವಾಗುವಂತೆ' ಎಂದು ಕ್ರಿಯಾವಿಶೇಷಣವು ಇಲ್ಲಿ ಗಮನಾರ್ಹವಿದೆ.

'ರಥದಲ್ಲಿ ಕುಳಿತಿದ್ದವನು ರುದ್ರ ಕುದುರೆಯ ಮೇಲೂ ವೃಷಭದ ಮೇಲೂ ಕಾಲಿಟ್ಟಿದ್ದೇಕೆ?' ಎಂದರೆ, 'ಕಾಲಿಟ್ಟ'ದ್ದ ಅಂಶವೆ ಶ್ಲೋಕದಲ್ಲಿಲ್ಲ! ವೃಷಭದ ಮೇಲೂ ಕುದುರೆಯ ಮೇಲೂ ರಥವಿದೆ. ರಥದಲ್ಲಿ ರುದ್ರನಿದ್ದಾನೆ, ಎಂದಮೇಲೆ 'ಮಂದಿರೇ ಮಣಿಮಾಲಾ' ಎಂಬಂತೆ ರುದ್ರನು ವೃಷಭದ ಮೇಲೂ ಇದ್ದಾನೆ, ಹಯದ ಮೇಲೂ ಇದ್ದಾನೆ.

ಇದರಲ್ಲೇನು ವಿಶೇಷ? ಇಲ್ಲಿ ಇದನ್ನು ಹೇಳಿದ್ದೇಕೆ? ಎಂದರೆ, ವೃಷಭ ಹಯಗಳು ಪ್ರೀತಿಯಿಂದ ರುದ್ರನನ್ನು ಹೊತ್ತಿದ್ದುವು. ಭೂತಾಯಿಯು ಮಕ್ಕಳಾದ ನಮ್ಮನ್ನು ಹೊರುವಂತೆ. ವೃಷಭರೂಪದಲ್ಲಿದ್ದ ನಾರಾಯಣನೂ ಹಯರೂಪದಲ್ಲಿದ್ದ ವೇದಾಭಿಮಾನಿ ಲಕ್ಷ್ಮೀ ಬ್ರಹ್ಮಾದಿ ದೇವತೆಗಳೂ ಪ್ರೀತಿಯಿಂದ ತಮ್ಮ ಕಂದನಾದ ರುದ್ರನನ್ನು ಹೊತ್ತು ಅವನಿಂದ ಈ ಮಹಾಕಾರ್ಯವನ್ನು ಮಾಡಿಸುತ್ತಿದ್ದಾರೆ ಎಂದು ಇದರಿಂದ ಸೂಚಿತವಾಗುತ್ತದೆ.

ಶ್ಲೋಕದಲ್ಲಿ, 'ವೃಷಭಸ್ಯಾಸ್ಥಿತೋ ರುದ್ರಃ ಹಯಸ್ಯ ಚ' ಎಂಬಲ್ಲಿ 'ವೃಷಭಸ್ಯ ಹಯಸ್ಯ ಚ' ಎನ್ನುವುದು 'ಆಸ್ಥಿತಃ' ಎಂಬಲ್ಲಿ ಅನ್ವಯಿಸುವುದಿಲ್ಲ. ವೃಷಭದ ಮೇಲೂ ಕುದುರೆಯ ಮೇಲೂ ರುದ್ರ ಕಾಲಿಟ್ಟನೆಂದು ಆ ಅನ್ವಯ ಕೂಡುವುದೂ ಇಲ್ಲ. 'ವೃಷಭಸ್ಯ ಖುರಾಂಶ್ಚೈವ' 'ಹಯಸ್ಯ ಚ ಸ್ತನಾನ್' ಎಂದು ಅನ್ವಯ. 'ಆಸ್ಥಿತಃ' ಎಂದರೆ ರಥದಲ್ಲಿ ಚೆನ್ನಾಗಿ ನಿಂತವನೆಂದರ್ಥ. ಹೀಗೇ ಲಕ್ಷಾಲಂಕಾರದಲ್ಲಿ ವ್ಯಾಖ್ಯಾನಿಸಿದ್ದಾರೆ.

'ತ್ರಿಮೂರ್ತಿಗಳಲ್ಲಿ ಯಾವ ಭೇದವಿರುವುದಿಲ್ಲ' ಎನ್ನುವುದು ಅದ್ವೈತಿಗಳಿಗೂ ಸಮ್ಮತವಲ್ಲ.

ಸತ್ವಂ ರಜಸ್ತಮ ಇತೀಶ ತವಾತ್ಮಬಂಧೋ
ಮಾಯಾಮಯಾಃ ಸ್ಥಿತಿ ಲಯೋದಯ ಹೇತವೋऽಸ್ಯ ।
ಲೀಲಾ ಧೃತಾ ಯದಪಿ ಸತ್ವಮಯೀ ಪ್ರಶಾಂತ್ಯೈ
ನಾನ್ಯೇ ನೃಣಾಂ ವ್ಯಸನ ಮೋಹ ಭಯಶ್ಚ ಯಾಭ್ಯಾಮ್ ॥

(ಭಾಗವತ 11.8.45)

ಎಂಬ ಭಾಗವತ ವಚನಕ್ಕೆ ಶ್ರೀಧರಸ್ವಾಮಿ ವ್ಯಾಖ್ಯಾನ ಹೀಗಿದೆ—

'ಯಾ ಸತ್ವಮಯೀ ಸೈವ ಪ್ರಶಾಂತ್ಯೈ ಮೋಕ್ಷಾಯ। ನ ಕೇವಲಂ ಪ್ರಶಾಂತ್ಯಭಾವಮಾತ್ರಂ ಅನ್ಯಭಜನೇ। ಕಿಂತು ಅನಿಷ್ಟಂ ಚ ಭವೇದಿತ್ಯಾಹ ವ್ಯಸನೇತಿ'

'ಸತ್ವ ರಜಸ್ಸು ತಮಸ್ಸುಗಳು ನಿನ್ನ ಇಚ್ಛಾಧೀನವಾಗಿ ಸ್ಥಿತಿ ಲಯ ಸೃಷ್ಟಿಗಳಿಗೆ ಸಾಧನವಾಗಿವೆ. ಆದರೂ ಸಾತ್ವಿಕ ದೇಹ ಮಾತ್ರ ಮೋಕ್ಷಸಾಧನವಾಗುವುದು. ರಜಸ್ಸು ತಮಸ್ಸುಗಳು ಮೋಕ್ಷಾಭಾವಕ್ಕೆ ಕಾರಣವಾಗಿರುವುದು ಮಾತ್ರವಲ್ಲ, ವ್ಯಸನ ಮೋಹ ಭಯರೂಪವಾದ ಅನಿಷ್ಟಗಳಿಗೇ ಕಾರಣವಾಗುವುವು.' ಇದರಿಂದ ಮೋಕ್ಷಬೇಕೆನ್ನುವವರು ಸತ್ವಮೂರ್ತಿಯಾದ ವಿಷ್ಣುವನ್ನೇ ಭಜಿಸಬೇಕೇ ಹೊರತು ತಮೋಮೂರ್ತಿಯಾದ ಹರನನ್ನಲ್ಲ. ರಜೋ ಮೂರ್ತಿಯಾದ ಬ್ರಹ್ಮನನ್ನೂ ಅಲ್ಲ ಎಂದಂತಾಯಿತು.

'ತ್ರಿಪುರಸಂಹಾರ ಶಿವನಿಂದ ಹೊರತು ಬೇರಾರಿಂದಲೂ ಶಕ್ಯವಲ್ಲ' ಎಂದು ಬ್ರಹ್ಮದೇವ ಹೇಳಿದ್ದು ನಿಜವೆ. ಆದರೆ, ಬ್ರಹ್ಮ ತಾನೇ ವರ ಕೊಟ್ಟಿದ್ದರಿಂದ ಅಸುರಸಂಹಾರವನ್ನು ತಾನೆ ಮಾಡಲಾರ. ವಿಷ್ಣುವು ಬ್ರಹ್ಮಾದಿ ದೇವತೆಗಳಲ್ಲಿ ಸೇರಿದವನಲ್ಲ. ಸ್ವತಂತ್ರನಾದ್ದರಿಂದ ಅವನೂ ಮಾಡುತ್ತಿಲ್ಲ. ಯದ್ಯಪಿ ಬ್ರಹ್ಮವರವಿದ್ದದ್ದರಿಂದ ಶಿವನೂ ಅದನ್ನು ಕಡೆಗಣಿಸಲು ಶಕ್ತನಲ್ಲ. ಆದರೆ ಸಾರಥಿಯಾದ ಬ್ರಹ್ಮನ ಮತ್ತು ಬಾಣರೂಪೀ ವೃಷಭರೂಪೀ ವಿಷ್ಣುಗಳ ಸಹಾಯದಿಂದ ಶಿವನು ಅಸುರಸಂಹಾರ ಮಾಡಬಲ್ಲ ಎಂದು ಬ್ರಹ್ಮದೇವನ ಅಭಿಪ್ರಾಯ.

'ವರಾತಿಸರ್ಗಾತ್ ದೇವೇಶ ಪ್ರಾಜಾಪತ್ಯಮಿದಂ ಪದಂ' ಎಂಬ ಪಾಠದಲ್ಲಿ 'ನಿನ್ನ ಆದೇಶಾನುಸಾರ' ಎಂದು ಅರ್ಥೈಸಲು 'ತವ' ಎಂಬ ಪದವಿಲ್ಲ. 'ವರ ಅತಿಸರ್ಗ' ಶ್ರೇಷ್ಠನಾದ ವಿಷ್ಣುವಿನ ಆದೇಶದಿಂದ ಎಂದರ್ಥ ಹೇಳಬೇಕು. ವಸ್ತುತಃ 'ವರಾತಿಸರ್ಗಂ ಉದ್ದಿಶ್ಯ' ಎಲ್ಲರಿಗೂ ವರಪ್ರದಾನ ಮಾಡುವ ಸಲುವಾಗಿ ಅದಕ್ಕೆ ಶಕ್ತನಾದ ಬ್ರಹ್ಮನು ಬ್ರಹ್ಮಪದವಿಯಲ್ಲಿದ್ದಾನೆ.

ಹೀಗೆ ಈ ಮೂರು ಅಧ್ಯಾಯಗಳಲ್ಲಿ ಎಲ್ಲಿಯೂ ಬಗೆಹರಿಸಲಾಗದ ವಿರೋಧಾಭಾಸವೇನಿಲ್ಲ. 'ಕರ್ಣನಿಗಿಂತ ತಾನು ಮೇಲು, ಕರ್ಣನಿಗೆ ತಾನು ಸಾರಥ್ಯ ಮಾಡುವುದಾಗದು' ಎಂದು ಕೋಪಿಸಿಕೊಂಡಿದ್ದ ಶಲ್ಯನಿಗೆ 'ಶಿವನಿಗಿಂತ ಮೇಲಾಗಿರುವ ಬ್ರಹ್ಮನು ಶಿವನಿಗೆ ಸಾರಥ್ಯ ಮಾಡಲಿಲ್ಲವೆ?' ಎಂದು ಮನದಟ್ಟು ಮಾಡಿಸಲು ಈ ಮೂರು ಅಧ್ಯಾಯಗಳು ಬಂದಿವೆ. ಅವಿಲ್ಲದಿದ್ದರೆ ಕಥೆಯ ಓಟದಲ್ಲಿ, ವಸ್ತುನಿರೂಪಣೆಯಲ್ಲಿ ಲೋಪ ಬರುತ್ತದೆ.

ಅಥಾಧಿಜ್ಯಂ ಧನುಃ ಕೃತ್ವಾ ಶರ್ವಃ ಸಂಧಾಯ ತಂ ಶರಮ್ ।
ಯುಕ್ತ್ವಾ ಪಾಶುಪತಾಸ್ತ್ರೇಣ ತ್ರಿಪುರಂ ಸಮಚಿಂತಯತ್ ॥೮೨॥

ಬಳಿಕ ಶಿವನು ಬಿಲ್ಲಿಗೆ ಹೆದೆಯನ್ನೇರಿಸಿ ಬಾಣವನ್ನು ಹೂಡಿ ಅದಕ್ಕೆ ಪಾಶುಪತಾಸ್ತ್ರ ಮಂತ್ರದಿಂದ ಅಭಿಮಂತ್ರಣ ಮಾಡಿ ತ್ರಿಪುರಗಳು ಏಕತ್ರ ಕೂಡುವುದನ್ನು ನಿರೀಕ್ಷೆ ಮಾಡಿ ನಿಂತ.

ತಸ್ಮಿನ್ ಸ್ಥಿತೇ ತದಾ ರಾಜನ್ ಕ್ರುದ್ಧೇ ವಿಧೃತಕಾರ್ಮುಕೇ ।
ಪುರಾಣಿ ತಾನಿ ಕಾಲೇನ ಜಗ್ಮುರೇವೈಕತಾಂ ತದಾ ॥೮೩॥

ರಾಜನೆ, ಶಿವ ಹಾಗೆ ಬಿಲ್ಲು ಹಿಡಿದು ಕ್ರುದ್ಧನಾಗಿ ನಿಂತಾಗ ಮೂರು ಪಟ್ಟಣಗಳು ಒಂದೆಡೆ ಸೇರುವ ಕಾಲ ಬಂದಿದ್ದರಿಂದ ಅವು ಏಕತ್ರ ಸೇರಿದುವು.

ಏಕೀಭಾವಂ ಗತೇ ಚೈವ ತ್ರಿಪುರೇ ಸಮುಪಾಗತೇ ।
ಬಭೂವ ತುಮಲೋ ಹರ್ಷೋ ದೈವತಾನಾಂ ಮಹಾತ್ಮನಾಮ್ ॥೮೪॥

ಏಕತ್ರ ತ್ರಿಪುರಗಳು ಬಂದು ಸೇರಿ ಗೋಚರವಾದಾಗ ಮಹಾತ್ಮರಾದ ದೇವತೆಗಳಿಗೆ ತಡೆಯಲಾಗದಂಥ ಹರ್ಷ ಉಂಟಾಯಿತು.

ತತೋ ದೇವಗಣಾಃ ಸರ್ವೇ ಸಿದ್ಧಾಶ್ಚ ಪರಮರ್ಷಯಃ ।
ಜಯೇತಿ ವಾಚೋ ಮುಮುಚುಃ ಸಂಸ್ತುವಂತೋ ಮುದಾನ್ವಿತಾಃ ॥೮೫॥

ಆಗ ದೇವತೆಗಳು, ಸಿದ್ಧರು, ಮಹರ್ಷಿಗಳು ಎಲ್ಲರೂ ಶಿವನನ್ನು ಕೊಂಡಾಡುತ್ತ ಸಂತೋಷದಿಂದ 'ಜಯವಾಗಲಿ' 'ಜಯವಾಗಲಿ' ಎನ್ನುವ ಮಾತುಗಳನ್ನಾಡಿದರು.

ತತೋಽಗ್ರತಃ ಪ್ರಾದುರಭೂತ್ ತ್ರಿಪುರಂ ನಿಘ್ನತೋಽಸುರಾನ್ ।
ಅನಿರ್ದೇಶ್ಯೋಗ್ರವಪುಷೋ ದೇವಸ್ಯಾಸಹ್ಯತೇಜಸಃ ॥೮೬॥

ಅಷ್ಟರಲ್ಲಿ ಇದಿರಿಸಲಾಗದ ಪರಾಕ್ರಮ, ಹೇಳಲಾಗದ ಉಗ್ರ ಆಕೃತಿಗಳುಳ್ಳ ಅಸುರಸಂಹಾರಿಯಾದ ಮಹಾದೇವನ ಮುಂದೆ ತ್ರಿಪುರವು ಕಾಣಿಸಿಕೊಂಡಿತು.

ಸ ತದ್ವಿಕೃಷ್ಯ ಭಗವಾನ್ ದಿವ್ಯಂ ಲೋಕೇಶ್ವರೋ ಧನುಃ ।
ತ್ರೈಲೋಕ್ಯಸಾರಂ ತಮಿಷುಂ ಮುಮೋಚ ತ್ರಿಪುರಂ ಪ್ರತಿ ॥೮೭॥

ಲೋಕೇಶ್ವರನಾದ ಭಗವಾನ್ ಶಿವನು ದಿವ್ಯವಾದ ಧನುಸ್ಸನ್ನು ಸೆಳೆದು

ಮೂರ್ಲೋಕದ ತೇಜಸ್ಸುಗಳ ಸಾರರೂಪವಾದ ಆ ಬಾಣವನ್ನು ತ್ರಿಪುರದ ಮೇಲೆ ಎಸೆದ.

ಏವಂ ತತ್ ತ್ರಿಪುರಂ ದಗ್ಧಂ ದಾನವಾಶ್ಚಾಪ್ಯಶೇಷತಃ ।
ಮಹೇಶ್ವರೇಣ ಕ್ರುದ್ಧೇನ ತ್ರೈಲೋಕ್ಯಸ್ಯ ಹಿತೈಷಿಣಾ ॥೮೮॥

ಹೀಗೆ ಮೂರ್ಲೋಕದ ಹಿತೈಷಿಯಾದ ಮಹೇಶ್ವರ ಕ್ರುದ್ಧನಾಗಿ ತ್ರಿಪುರವನ್ನೂ ಅಲ್ಲಿದ್ದ ಸಮಸ್ತ ದಾನವರನ್ನೂ ಸುಟ್ಟು ಭಸ್ಮ ಮಾಡಿದನು.

ಸ ಚಾತ್ಮಕ್ರೋಧಜೋ ವಹ್ನಿರ್ದಹೇತ್ಯುಕ್ತೋ ನಿವಾರಿತಃ ।
ಮಾ ಕಾರ್ಷೀರ್ಭಸ್ಮಸಾಲ್ಲೋಕಾನಿತಿ ತ್ರ್ಯಕ್ಷೋಽಬ್ರವೀಚ್ಚ ತಮ್ ॥೮೯॥

ಕ್ರೋಧದಿಂದ 'ತ್ರಿಪುರವನ್ನು ದಹಿಸು' ಎನ್ನುತ್ತ ತಾನು ಕಳಿಸಿದ್ದ ಅಗ್ನಿಯನ್ನು ಈಗ ತಡೆದು 'ಎಲ್ಲ ಲೋಕಗಳನ್ನು ಭಸ್ಮ ಮಾಡಬೇಡ' ಎಂದು ನುಡಿದ ಶಿವ.

ತತಃ ಪ್ರಕೃತಿಮಾಪನ್ನಾ ದೇವಾ ಲೋಕಾಸ್ತಥರ್ಷಯಃ ।
ತುಷ್ಟುವುರ್ವಾಗ್ಭಿರರ್ಥ್ಯಾಭಿಃ ಸ್ಥಾಣುಮಪ್ರತಿಮೌಜಸಮ್ ॥೯೦॥

ಆಗ ದೇವತೆಗಳು ಋಷಿಗಳು ಮುಂತಾದ ಎಲ್ಲ ಜನರೂ ಸ್ವಸ್ಥರಾದರು. ಅಪ್ರತಿಮ ಪರಾಕ್ರಮಿಯಾದ ಶಿವನನ್ನು ಅರ್ಥಗರ್ಭಿತವಾದ ನುಡಿಗಳಿಂದ ಕೊಂಡಾಡಿದರು.

ತೇಽನುಜ್ಞಾತಾ ಭಗವತಾ ಜಗ್ಮುಃ ಸರ್ವೇ ಯಥಾಗತಮ್ ।
ಕೃತಕಾಮಾಃ ಪ್ರಸನ್ನೇನ ಪ್ರಜಾಪತಿಮುಖಾಃ ಸುರಾಃ ॥೯೧॥

ಪ್ರಜಾಪತಿ ಮುಂತಾದ ಎಲ್ಲ ದೇವತೆಗಳು ಕೃತಕೃತ್ಯರಾಗಿ ಪ್ರಸನ್ನನಾದ ಭಗವಾನ್ ಶಿವನಿಂದ ಅನುಮತಿ ಪಡೆದು ಹಿಂತಿರುಗಿ ಹೋದರು.

ಯಥೈವ ಭಗವಾನ್ ಬ್ರಹ್ಮಾ ಲೋಕಧಾತಾ ಪಿತಾಮಹಃ ।
ಸಂಯಚ್ಛ ತ್ವಂ ಹಯಾನಸ್ಯ ರಾಧೇಯಸ್ಯ ಮಹಾತ್ಮನಃ ॥೯೨॥

ಶಲ್ಯಮಹಾರಾಜ, ಲೋಕಧಾರಕ ಲೋಕಪಿತಾಮಹ ಭಗವಾನ್ ಬ್ರಹ್ಮದೇವನಂತೆ ನೀನೂ ಕೂಡ ಮಹಾತ್ಮನಾದ ಕರ್ಣನ ಕುದುರೆಗಳನ್ನು ನಿಯಂತ್ರಿಸು.

ಬಳಿಕ ಶಿವನು ಬಿಲ್ಲಿಗೆ ಹೆದೆಯನ್ನೇರಿಸಿ ಬಾಣವನ್ನು ಹೂಡಿ ಅದಕ್ಕೆ ಪಾಶುಪತಾಸ್ತ್ರ ಮಂತ್ರದಿಂದ ಅಭಿಮಂತ್ರಣ ಮಾಡಿ ತ್ರಿಪುರಗಳು ಏಕತ್ರ ಕೂಡುವುದನ್ನು ನಿರೀಕ್ಷೆ ಮಾಡಿ ನಿಂತ.

ತಸ್ಮಿನ್ ಸ್ಥಿತೇ ತದಾ ರಾಜನ್ ಕ್ರುದ್ಧೇ ವಿಧೃತಕಾರ್ಮುಕೇ ।
ಪುರಾಣಿ ತಾನಿ ಕಾಲೇನ ಜಗ್ಮುರೇವೈಕತಾಂ ತದಾ ॥೮೩॥

ರಾಜನೆ, ಶಿವ ಹಾಗೆ ಬಿಲ್ಲು ಹಿಡಿದು ಕ್ರುದ್ಧನಾಗಿ ನಿಂತಾಗ ಮೂರು ಪಟ್ಟಣಗಳು ಒಂದೆಡೆ ಸೇರುವ ಕಾಲ ಬಂದಿದ್ದರಿಂದ ಅವು ಏಕತ್ರ ಸೇರಿದುವು.

ಏಕೀಭಾವಂ ಗತೇ ಚೈವ ತ್ರಿಪುರೇ ಸಮುಪಾಗತೇ ।
ಬಭೂವ ತುಮಲೋ ಹರ್ಷೋ ದೈವತಾನಾಂ ಮಹಾತ್ಮನಾಮ್ ॥೮೪॥

ಏಕತ್ರ ತ್ರಿಪುರಗಳು ಬಂದು ಸೇರಿ ಗೋಚರವಾದಾಗ ಮಹಾತ್ಮರಾದ ದೇವತೆಗಳಿಗೆ ತಡೆಯಲಾಗದಂಥ ಹರ್ಷ ಉಂಟಾಯಿತು.

ತತೋ ದೇವಗಣಾಃ ಸರ್ವೇ ಸಿದ್ಧಾಶ್ಚ ಪರಮರ್ಷಯಃ ।
ಜಯೇತಿ ವಾಚೋ ಮುಮುಚುಃ ಸಂಸ್ತುವಂತೋ ಮುದಾನ್ವಿತಾಃ ॥೮೫॥

ಆಗ ದೇವತೆಗಳು, ಸಿದ್ಧರು, ಮಹರ್ಷಿಗಳು ಎಲ್ಲರೂ ಶಿವನನ್ನು ಕೊಂಡಾಡುತ್ತ ಸಂತೋಷದಿಂದ 'ಜಯವಾಗಲಿ' 'ಜಯವಾಗಲಿ' ಎನ್ನುವ ಮಾತುಗಳನ್ನಾಡಿದರು.

ತತೋಽಗ್ರತಃ ಪ್ರಾದುರಭೂತ್ ತ್ರಿಪುರಂ ನಿಘ್ನತೋಽಸುರಾನ್ ।
ಅನಿರ್ದೇಶ್ಯೋಗ್ರವಪುಷೋ ದೇವಸ್ಯಾಸಹ್ಯತೇಜಸಃ ॥೮೬॥

ಅಷ್ಟರಲ್ಲಿ ಇದಿರಿಸಲಾಗದ ಪರಾಕ್ರಮ, ಹೇಳಲಾಗದ ಉಗ್ರ ಆಕೃತಿಗಳುಳ್ಳ ಅಸುರಸಂಹಾರಿಯಾದ ಮಹಾದೇವನ ಮುಂದೆ ತ್ರಿಪುರವು ಕಾಣಿಸಿಕೊಂಡಿತು.

ಸ ತದ್ವಿಕೃಷ್ಯ ಭಗವಾನ್ ದಿವ್ಯಂ ಲೋಕೇಶ್ವರೋ ಧನುಃ ।
ತ್ರೈಲೋಕ್ಯಸಾರಂ ತಮಿಷುಂ ಮುಮೋಚ ತ್ರಿಪುರಂ ಪ್ರತಿ ॥೮೭॥

ಲೋಕೇಶ್ವರನಾದ ಭಗವಾನ್ ಶಿವನು ದಿವ್ಯವಾದ ಧನುಸ್ಸನ್ನು ಸೆಳೆದು

ಮೂರ್ಲೋಕದ ತೇಜಸ್ಸುಗಳ ಸಾರರೂಪವಾದ ಆ ಬಾಣವನ್ನು ತ್ರಿಪುರದ ಮೇಲೆ ಎಸೆದ.

ಏವಂ ತತ್ ತ್ರಿಪುರಂ ದಗ್ಧಂ ದಾನವಾಶ್ಚಾಪ್ಯಶೇಷತಃ ।
ಮಹೇಶ್ವರೇಣ ಕ್ರುದ್ಧೇನ ತ್ರೈಲೋಕ್ಯಸ್ಯ ಹಿತೈಷಿಣಾ ॥೮೮॥

ಹೀಗೆ ಮೂರ್ಲೋಕದ ಹಿತೈಷಿಯಾದ ಮಹೇಶ್ವರ ಕ್ರುದ್ಧನಾಗಿ ತ್ರಿಪುರವನ್ನೂ ಅಲ್ಲಿದ್ದ ಸಮಸ್ತ ದಾನವರನ್ನೂ ಸುಟ್ಟು ಭಸ್ಮ ಮಾಡಿದನು.

ಸ ಚಾತ್ಮಕ್ರೋಧಜೋ ವಹ್ನಿರ್ದಹೇತ್ಯುಕ್ತೋ ನಿವಾರಿತಃ ।
ಮಾ ಕಾರ್ಷೀರ್ಭಸ್ಮಸಾಲ್ಲೋಕಾನಿತಿ ತ್ರ್ಯಕ್ಷೋಽಬ್ರವೀಚ್ಚ ತಮ್ ॥೮೯॥

ಕ್ರೋಧದಿಂದ 'ತ್ರಿಪುರವನ್ನು ದಹಿಸು' ಎನ್ನುತ್ತ ತಾನು ಕಳಿಸಿದ್ದ ಅಗ್ನಿಯನ್ನು ಈಗ ತಡೆದು 'ಎಲ್ಲ ಲೋಕಗಳನ್ನು ಭಸ್ಮ ಮಾಡಬೇಡ' ಎಂದು ನುಡಿದ ಶಿವ.

ತತಃ ಪ್ರಕೃತಿಮಾಪನ್ನಾ ದೇವಾ ಲೋಕಾಸ್ತಥರ್ಷಯಃ ।
ತುಷ್ಟುವುರ್ವಾಗ್ಭಿರರ್ಥ್ಯಾಭಿಃ ಸ್ಥಾಣುಮಪ್ರತಿಮೌಜಸಮ್ ॥೯೦॥

ಆಗ ದೇವತೆಗಳು ಋಷಿಗಳು ಮುಂತಾದ ಎಲ್ಲ ಜನರೂ ಸ್ವಸ್ಥರಾದರು. ಅಪ್ರತಿಮ ಪರಾಕ್ರಮಿಯಾದ ಶಿವನನ್ನು ಅರ್ಥಗರ್ಭಿತವಾದ ನುಡಿಗಳಿಂದ ಕೊಂಡಾಡಿದರು.

ತೇಽನುಜ್ಞಾತಾ ಭಗವತಾ ಜಗ್ಮುಃ ಸರ್ವೇ ಯಥಾಗತಮ್ ।
ಕೃತಕಾಮಾಃ ಪ್ರಸನ್ನೇನ ಪ್ರಜಾಪತಿಮುಖಾಃ ಸುರಾಃ ॥೯೧॥

ಪ್ರಜಾಪತಿ ಮುಂತಾದ ಎಲ್ಲ ದೇವತೆಗಳು ಕೃತಕೃತ್ಯರಾಗಿ ಪ್ರಸನ್ನನಾದ ಭಗವಾನ್ ಶಿವನಿಂದ ಅನುಮತಿ ಪಡೆದು ಹಿಂತಿರುಗಿ ಹೋದರು.

ಯಥೈವ ಭಗವಾನ್ ಬ್ರಹ್ಮಾ ಲೋಕಧಾತಾ ಪಿತಾಮಹಃ ।
ಸಂಯಚ್ಛ ತ್ವಂ ಹಯಾನಸ್ಯ ರಾಧೇಯಸ್ಯ ಮಹಾತ್ಮನಃ ॥೯೨॥

ಶಲ್ಯಮಹಾರಾಜ, ಲೋಕಧಾರಕ ಲೋಕಪಿತಾಮಹ ಭಗವಾನ್ ಬ್ರಹ್ಮದೇವನಂತೆ ನೀನೂ ಕೂಡ ಮಹಾತ್ಮನಾದ ಕರ್ಣನ ಕುದುರೆಗಳನ್ನು ನಿಯಂತ್ರಿಸು.

ತ್ವಂ ಹಿ ಕೃಷ್ಣಾಚ್ಚ ಕರ್ಣಾಚ್ಚ ಫಲ್ಗುನಾಚ್ಚ ವಿಶೇಷತಃ ।
ವಿಶಿಷ್ಟೋ ರಾಜಶಾರ್ದೂಲ ನಾಸ್ತಿ ತತ್ರ ವಿಚಾರಣಾ ॥೯೩॥

ಮಹಾರಾಜ, ನೀನು ಕೃಷ್ಣನಿಗಿಂತಲೂ ಅರ್ಜುನನಿಗಿಂತಲೂ ವಿಶೇಷವಾಗಿ ಕರ್ಣನಿಗಿಂತಲೂ ಶ್ರೇಷ್ಠನಾಗಿರುವಿ. ಇದರಲ್ಲಿ ಸಂಶಯವಿಲ್ಲ.

ಯುದ್ಧೇ ಹ್ಯಯಂ ರುದ್ರಕಲ್ಪಸ್ತ್ವಂ ಚ ಬ್ರಹ್ಮಸಮೋ ನಯೇ ।
ತಸ್ಮಾಚ್ಚಕ್ತೌ ಯುವಾಂ ಜೇತುಂ ಮಚ್ಛತ್ರೂಂಸ್ತಾವಿವಾಸುರಾನ್ ॥೯೪॥

ಯುದ್ಧದಲ್ಲಿ ಕರ್ಣನು ರುದ್ರನಂತೆ ಎನ್ನುವುದಾದರೆ ಸಾರಥ್ಯದಲ್ಲಿ ನೀನು ಬ್ರಹ್ಮನಿಗೆ ಸಮನಾಗಿರುವೆ. ಆದರಿಂದ ಅವರು ಅಸುರರನ್ನು ಗೆಲ್ಲುವಂತೆ ನೀವು ನನ್ನ ಶತ್ರುಗಳನ್ನು ಗೆಲ್ಲಬಲ್ಲಿರಿ.

ಯಥಾ ಶಲ್ಯಾದ್ಯ ಕರ್ಣೋಽಯಂ ಶ್ವೇತಾಶ್ವಂ ಕೃಷ್ಣಸಾರಥಿಮ್ ।
ಪ್ರಮಥ್ಯ ಹನ್ಯಾತ್ ಕೌಂತೇಯಂ ತಥಾ ಶೀಘ್ರಂ ವಿಧೀಯತಾಮ್ ।
ತ್ವಯಿ ಕರ್ಣಶ್ಚ ರಾಜ್ಯಂ ಚ ವಯಂ ಚೈವ ಪ್ರತಿಷ್ಠಿತಾಃ ॥೯೫॥

ಕೃಷ್ಣನ ಸಾರಥ್ಯವುಳ್ಳ ಅರ್ಜುನನನ್ನು ಕರ್ಣನು ಬೇಗನೆ ಹೊಡೆದು ಕೊಲ್ಲುವಂತೆ ನೀನು ಅವನಿಗೆ ಸಾರಥ್ಯ ಮಾಡು. ಕರ್ಣನೂ ನಮ್ಮ ರಾಜ್ಯವೂ ನಾವೂ ಉಳಿಯವುದು ನಿನ್ನನ್ನೇ ಅವಲಂಬಿಸಿದೆ.

ಇಮಂ ಚಾಪ್ಯಪರಂ ಭೂಯ ಇತಿಹಾಸಂ ನಿಬೋಧ ಮೇ ।
ಪಿತುರ್ಮಮ ಸಕಾಶೇ ಯಂ ಬ್ರಾಹ್ಮಣಃ ಪ್ರಾಹ ಧರ್ಮವಿತ್ ॥೯೬॥

ನಾನು ನಿನಗೆ ಇನ್ನೊಂದು ಇತಿಹಾಸವನ್ನೂ ಹೇಳುತ್ತೇನೆ. ನನ್ನ ತಂದೆಯ ಬಳಿ ಧರ್ಮಜ್ಞ ಬ್ರಾಹ್ಮಣನೊಬ್ಬ ಇದನ್ನು ಹೇಳಿದ್ದ.

ಶ್ರುತ್ವಾ ಚೈತದ್ ವಚಶ್ಚಿತ್ರಂ ಹೇತುಕಾರ್ಯಾರ್ಥತತ್ವವಿತ್ ।
ಕುರು ಶಲ್ಯ ವಿನಿಶ್ಚಿತ್ಯ ಮಾ ಭೂದತ್ರ ವಿಚಾರಣಾ ॥೯೭॥

ಕರ್ಣನ ಅಸ್ತ್ರವಿದ್ಯಾರ್ಜನ ಬಗ್ಗೆ ನಾವು ಹೇಳುವ ವಿಚಿತ್ರವಾದ ಈ ಮಾತನ್ನು ಕೇಳಿ, 'ಅಸ್ತ್ರಜ್ಞಾನ ಮತ್ತು ಅದರಿಂದ ಪಡೆಯುವ ಶತ್ರುಜಯ' ಎಂಬ 'ಹೇತು

ಮತ್ತು ಕಾರ್ಯಸಾಧನೆ'ಗಳ ತತ್ವವನ್ನು ತಿಳಿದವನು ನೀನು ಅದನ್ನು ನಿಶ್ಚಯ ಮಾಡಿಕೊಂಡು ಪ್ರವೃತ್ತನಾಗು. ಇದರಲ್ಲಿ ಸಂಶಯಕ್ಕೆ ಆಸ್ಪದವಿಲ್ಲ. ನಿನ್ನ ಸಹಾಯ ಒಂದಿದ್ದರೆ ಕರ್ಣನು ಅಸ್ತ್ರಜ್ಞಾನದಿಂದ ಜಯ ಸಂಪಾದಿಸುವುದರಲ್ಲಿ ಸಂಶಯವಿಲ್ಲ.

ಭಾರ್ಗವಾಣಾಂ ಕುಲೇ ಜಾತೋ ಜಮದಗ್ನಿರ್ಮಹಾತಪಾಃ ।
ತಸ್ಯ ರಾಮೇತಿ ವಿಖ್ಯಾತಃ ಪುತ್ರಸ್ತೇಜೋಗುಣಾನ್ವಿತಃ ॥೯೮॥

ಭಾರ್ಗವರ ಕುಲದಲ್ಲಿ ಮಹಾತಪಸ್ವಿಯಾದ ಜಮದಗ್ನಿ ಋಷಿ ಜನಿಸಿದ. ಅವನ ಪುತ್ರ ರಾಮನೆಂದು ಪ್ರಸಿದ್ಧ ಪರಾಕ್ರಮ ಮತ್ತು ಸದ್ಗುಣಗಳಿಂದ ಕೂಡಿದವನು.

ಸ ತೀವ್ರಂ ತಪ ಆಸ್ಥಾಯ ಪ್ರಸಾದಯಿತವಾನ್ ಭವಮ್ ।
ಅಸ್ತ್ರಹೇತೋಃ ಪ್ರಸನ್ನಾತ್ಮಾ ನಿಯತಃ ಸಂಯತೇಂದ್ರಿಯಃ ॥೯೯॥

ಅವನು ಅಸ್ತ್ರಸಂಪಾದನೆಗಾಗಿ ಇಂದ್ರಿಯನಿಗ್ರಹ ಮಾಡಿಕೊಂಡು ಪ್ರಸನ್ನಚಿತ್ತನಾಗಿ ನಿಯಮಾನುಷ್ಠಾನಮಾಡಿ ತೀವ್ರ ತಪಸಿನಲ್ಲಿ ತೊಡಗಿ ಶಿವನನ್ನು ಒಲಿಸಿಕೊಂಡ.

ತಸ್ಯ ತುಷ್ಟೋ ಮಹಾದೇವೋ ಭಕ್ತ್ಯಾ ಚ ಪ್ರಶಮೇನ ಚ ।
ಹೃದ್ಗತಂ ಚಾಸ್ಯ ವಿಜ್ಞಾಯ ದರ್ಶಯಾಮಾಸ ಶಂಕರಃ ॥೧೦೦॥

ಅವನ ಭಕ್ತಿಗೂ ಮನೋನಿಗ್ರಹಕ್ಕೂ ಮೆಚ್ಚಿದ ಮಹಾದೇವ ಅವನ ಹೃದ್ಗತವನ್ನು ತಿಳಿದು ಮೈದೋರಿದ.

ಈಶ್ವರಃ

ರಾಮ ತುಷ್ಟೋಽಸ್ಮಿ ಭದ್ರಂ ತೇ ವಿದಿತಂ ಮೇ ತವೇಪ್ಸಿತಮ್ ।
ಕುರುಷ್ವ ಪೂತಮಾತ್ಮಾನಂ ಸರ್ವಮೇತದವಾಪ್ಸ್ಯಸಿ ॥೧೦೧॥

ಈಶ್ವರನು ನುಡಿದ– ರಾಮ, ನಾನು ಮೆಚ್ಚಿದ್ದೇನೆ. ನಿನಗೆ ಒಳ್ಳೆಯದಾಗಲಿ. ನನಗೆ ನಿನ್ನ ಅಭೀಷ್ಟವೇನೆಂದು ತಿಳಿದಿದೆ. ನಿನ್ನನ್ನು ನೀನು ಪವಿತ್ರೀಕರಿಸಿಕೊಳ್ಳು. ನೀನು ಇಷ್ಟಪಡುವುದನ್ನೆಲ್ಲ ಹೊಂದುವೆ.

ದಾಸ್ಯಾಮಿ ತೇ ತದಾಸ್ತ್ರಾಣಿ ಯದಾ ಪೂತೋ ಭವಿಷ್ಯಸಿ ।
ಅಪಾತ್ರಮಸಮರ್ಥಂ ಚ ದಹಂತ್ಯಸ್ತ್ರಾಣಿ ಭಾರ್ಗವ ॥೧೦೨॥

ನೀನು ಪವಿತ್ರನಾದಾಗ ನಿನಗೆ ಅಸ್ತ್ರಗಳನ್ನು ಉಪದೇಶಿಸುತ್ತೇನೆ. ರಾಮ, ಅಪಾತ್ರನೂ ಅಸಮರ್ಥನೂ ಅಸ್ತ್ರೋಪದೇಶ ಪಡೆದರೆ ಆ ಅಸ್ತ್ರಗಳು ಅವನನ್ನೇ ಸುಡುತ್ತವೆ.

ದುರ್ಯೋಧನಃ

ಇತ್ಯುಕ್ತೋ ಜಾಮದಗ್ನ್ಯಸ್ತು ದೇವದೇವೇನ ಶೂಲಿನಾ ।
ಪ್ರತ್ಯುವಾಚ ಮಹಾತ್ಮಾನಂ ಶಿರಸಾವನತಃ ಪ್ರಭುಮ್ ॥೧೦೩॥

ದೇವದೇವನಾದ ಶಿವ ಹೀಗೆ ಹೇಳಿದಾಗ ರಾಮನು ಮಹಾತ್ಮಪ್ರಭುವಿಗೆ ಶಿರಬಾಗಿ ನಮಿಸಿ ಪ್ರತಿಯಾಗಿ ನುಡಿದ.

ಯದಾ ಜಾನಾಸಿ ದೇವೇಶ ಪಾತ್ರಂ ಮಾಮಸ್ತ್ರಧಾರಣೇ ।
ತದಾ ಶುಶ್ರೂಷವೇಽಸ್ತ್ರಾಣಿ ಭವಾನ್ ಮೇ ದಾತುಮರ್ಹತಿ ॥೧೦೪॥

'ದೇವೇಶ, ಅಸ್ತ್ರೋಪದೇಶ ಪಡೆಯಲು ನಾನು ಪಾತ್ರನಾದೆನೆಂದು ಯಾವಾಗ ನೀನು ತಿಳಿಯುವೆಯೋ ಆಗಲೆ ಸೇವಕನಾದ ನನಗೆ ಅಸ್ತ್ರಗಳನ್ನು ಉಪದೇಶಿಸು'.

ತತಃ ಸ ತಪಸಾ ಚೈವ ದಮೇನ ನಿಯಮೇನ ಚ ।
ಪೂಜೋಪಹಾರಬಲಿಭಿರ್ಹೋಮಮಂತ್ರಪುರಸ್ಕೃತೈಃ ॥೧೦೫॥

ಆರಾಧಯಿತವಾನ್ ಶರ್ವಂ ಬಹೂನ್ ವರ್ಷಗಣಾಂಸ್ತದಾ ।
ಪ್ರಸನ್ನಶ್ಚ ಮಹಾದೇವೋ ಭಾರ್ಗವಸ್ಯ ಮಹಾತ್ಮನಃ ॥೧೦೬॥

ಬಳಿಕ ರಾಮನು ತಪಸ್ಸು ದಮ ನಿಯಮ ಹೋಮ ಮಂತ್ರಯುಕ್ತವಾದ ಪೂಜೆ ನಿವೇದನ ಬಲಿಪ್ರದಾನಗಳಿಂದ ಬಹುವರ್ಷಕಾಲ ಶಿವನನ್ನು ಆರಾಧಿಸಿದ. ಮಹಾತ್ಮನಾದ ರಾಮನಿಗೆ ಮಹಾದೇವ ಒಲಿದ.

ಅಬ್ರವೀತ್ ತಸ್ಯ ಬಹುಶೋ ಗುಣಾನ್ ದೇವ್ಯಾಃ ಸಮೀಪತಃ ।
ಭಕ್ತಿಮಾನೇಷ ಸತತಂ ಮಯಿ ರಾಮೋ ದೃಢವ್ರತಃ ॥೧೦೭॥

ರಾಮನ ಗುಣಗಳನ್ನು ಬಹಳವಾಗಿ ದೇವಿ ಪಾರ್ವತಿಯ ಮುಂದೆ ಶಿವನು ಹೊಗಳಿದ– ರಾಮನು ನನ್ನಲ್ಲಿ ಸದಾ ಭಕ್ತಿಮಾಡುತ್ತಾನೆ, ದೃಢವಾಗಿ ವ್ರತಾನುಷ್ಠಾನ ಮಾಡುತ್ತಾನೆ ಎಂದು.

ಏವಂ ತಸ್ಯ ಗುಣಾನ್ ಪ್ರೀತೋ ಬಹುಶೋಽಕಥಯತ್ ಪ್ರಭುಃ ।
ದೇವತಾನಾಂ ಪಿತೄಣಾಂ ಚ ಸಮಕ್ಷಮರಿಸೂದನಃ ॥೧೦೮॥

ದೇವತೆಗಳ ಮತ್ತು ಪಿತೃಗಳ ಬಳಿಯಲ್ಲಿಯೂ ಪ್ರೀತನಾದ ಶಿವ ರಾಮನ ಗುಣಗಳನ್ನು ಬಹಳವಾಗಿ ಬಣ್ಣಿಸಿದ.

ಏತಸ್ಮಿನ್ನೇವ ಕಾಲೇ ತು ದೈತ್ಯಾ ಆಸನ್ ಮಹಾಬಲಾಃ ।
ತೈಸ್ತದಾ ದರ್ಪಮೋಹಾಂಧೈರಬಾಧ್ಯಂತ ದಿವೌಕಸಃ ॥೧೦೯॥

ಇದೇ ಸಮಯದಲ್ಲಿ ಮಹಾಬಲಿಷ್ಠರಾದ ದಾನವರಿದ್ದರು. ದರ್ಪ ಮೋಹ ಗಳಿಂದ ಕುರುಡರಾದ ಅವರು ದೇವತೆಗಳನ್ನು ಪೀಡಿಸಿದರು.

ತತಃ ಸಂಭೂಯ ವಿಬುಧಾಸ್ತಾನ್ ಹಂತುಂ ಕೃತನಿಶ್ಚಯಾಃ ।
ಚಕ್ರುಃ ಶತ್ರುವಧೇ ಯತ್ನಂ ನ ಶೇಕುರ್ಜೇತುಮೇವ ತೇ ॥೧೧೦॥

ಆಗ ದೇವತೆಗಳೆಲ್ಲರೂ ಸೇರಿ ದಾನವರನ್ನು ಕೊಲ್ಲಲು ನಿಶ್ಚಯಮಾಡಿ ಶತ್ರುವಧದಲ್ಲಿ ಪ್ರಯತ್ನ ಮಾಡಿದರು. ಆದರೆ ಅವರನ್ನು ಗೆಲ್ಲುವುದಕ್ಕೇ ಅಸಮರ್ಥರಾದರು.

ಅಭಿಗಮ್ಯ ತತೋ ದೇವಾ ಮಹೇಶ್ವರಮಥಾಬ್ರುವನ್ ।
ಪ್ರಸಾದಯಂತಸ್ತಂ ಭಕ್ತ್ಯಾ ಜಹಿ ಶತ್ರುಗಣಾನಿತಿ ॥೧೧೧॥

ಬಳಿಕ ದೇವತೆಗಳು ಮಹೇಶ್ವರನ ಬಳಿಗೆ ಹೋಗಿ ಭಕ್ತಿಯಿಂದ ಒಲಿಸಿಕೊಂಡು ಶತ್ರುಸಮೂಹಗಳನ್ನು ನಾಶಪಡಿಸೆಂದು ಬೇಡಿದರು.

ಪ್ರತಿಜ್ಞಾಯ ತತೋ ದೇವೋ ದೇವತಾನಾಂ ರಿಪುಕ್ಷಯಮ್ ।
ರಾಮಂ ಭಾರ್ಗವಮಾಹೂಯ ಸೋಽಭ್ಯಭಾಷತ ಶಂಕರಃ ॥೧೧೨॥

ಶಿವನು ದೇವತೆಗಳ ಶತ್ರುಗಳನ್ನು ನಾಶಪಡಿಸುವೆನೆಂದು ಮಾತುಕೊಟ್ಟು ಭಾರ್ಗವರಾಮನನ್ನು ಕರೆಸಿ ಹೇಳಿದ.

ರಿಪೂನ್ ಭಾರ್ಗವ ದೇವಾನಾಂ ಜಹಿ ಸರ್ವಾನ್ ಸಮಾಗತಾನ್ ।
ಲೋಕಾನಾಂ ಹಿತಕಾಮಾರ್ಥಂ ಮತ್ಪ್ರೀತ್ಯರ್ಥಂ ತಥೈವ ಚ ॥೧೧೩॥

'ರಾಮ, ಲೋಕಹಿತ ಸಾಧನೆಗಾಗಿ ಮತ್ತು ನನ್ನ ಪ್ರೀತಿಗಾಗಿ ನೀನು ಇದಿರಿಗೆ ಬರುವ ಎಲ್ಲ ದೇವಶತ್ರುಗಳನ್ನು ಕೊಲ್ಲು' ಎಂದು.

ರಾಮಃ

ಅಕೃತಾಸ್ತ್ರಸ್ಯ ದೇವೇಶ ಕಾ ಶಕ್ತಿರ್ಮೇ ಮಹೇಶ್ವರ ।
ನಿಹಂತುಂ ದಾನವಾನ್ ಸರ್ವಾನ್ ಕೃತಾಸ್ತ್ರಾನ್ ಯುದ್ಧದುರ್ಮದಾನ್॥

ರಾಮ ನುಡಿದ— ದೇವ ಮಹೇಶ್ವರ, ಅಸ್ತ್ರೋಪದೇಶವಿಲ್ಲದ ನನಗೆ, ಅಸ್ತ್ರೋಪದೇಶಪಡೆದು ಯುದ್ಧಹವ್ಯಾಸಿಗಳಾಗಿರುವ ಎಲ್ಲ ದಾನವರನ್ನು ಕೊಲ್ಲಲು ಏನು ಶಕ್ತಿ ಇದೆ?

ಈಶ್ವರಃ

ಗಚ್ಛ ತ್ವಂ ಮದನುಜ್ಞಾತೋ ನಿಹನಿಷ್ಯಸಿ ದಾನವಾನ್ ।
ವಿಜಿತ್ಯ ಚ ರಿಪೂನ್ ಸರ್ವಾನ್ ಗುಣಾನ್ ಪ್ರಾಪ್ಸ್ಯಸಿ ಪುಷ್ಕಲಾನ್ ॥

ಈಶ್ವರ ನುಡಿದ— ನನ್ನ ಅನುಜ್ಞೆ ಇದೆ, ನೀನು ಹೋಗು. ಶತ್ರುಗಳಾದ ದಾನವರೆಲ್ಲರನ್ನೂ ಗೆದ್ದು ಕೊಲ್ಲುವಿ. ಎಲ್ಲ ಸದ್ಗುಣಗಳನ್ನೂ ಪೂರ್ಣವಾಗಿ ಹೊಂದುವಿ.

ದುರ್ಯೋಧನಃ

ಏತಚ್ಛ್ರುತ್ವಾ ಚ ವಚನಂ ಪ್ರತಿಗೃಹ್ಯ ಚ ಸರ್ವಶಃ ।
ರಾಮಃ ಕೃತಸ್ವಸ್ತ್ಯಯನಃ ಪ್ರಯಯೌ ದಾನವಾನ್ ಪ್ರತಿ ॥೧೧೬॥

ದುರ್ಯೋಧನ ನುಡಿದ— ಶಿವನ ಈ ಮಾತನ್ನು ಕೇಳಿ, ಎಲ್ಲ ಆದೇಶವನ್ನೂ ಒಪ್ಪಿಕೊಂಡು ಸ್ವಸ್ತಿವಾಚನ ಮಾಡಿಸಿಕೊಂಡು ರಾಮ ದಾನವರ ಬಳಿಗೆ ನಡೆದ.

ಅವಧೀದ್ ದೇವಶತ್ರೂಂಸ್ತಾನ್ ಮದದರ್ಪಬಲಾನ್ವಿತಾನ್ ।
ಶಕ್ರಾಶನಿಸಮಸ್ಪರ್ಶೈಃ ಪ್ರಹಾರೈರೇವ ಭಾರ್ಗವಃ ॥೧೧೭॥

ಇಂದ್ರನ ವಜ್ರಾಯುಧಕ್ಕೆ ಸಮಸ್ಪರ್ಶವುಳ್ಳ ಹೊಡೆತಗಳಿಂದಲೇ ರಾಮನು ಮದ ದರ್ಪ ಬಲಯುಕ್ತರಾದ ಆ ದೇವಶತ್ರುಗಳನ್ನು ಕೊಂದನು.

ಸ ದಾನವೈಃ ಕ್ಷತತನುರ್ಜಾಮದಗ್ನ್ಯೋ ದ್ವಿಜೋತ್ತಮಃ ।
ಸಂಹೃಷ್ಟಃ ಸ್ಥಾಣುಮಾಸಾದ್ಯ ನಿಪುಣಃ ಸಮಜಾಯತ ॥೧೧೮॥

ರಾಮನು ದಾನವರಿಂದ ಮೈಗೆ ಹೊಡೆಸಿಕೊಂಡರೂ ಬಲು ಹೃಷ್ಟನೇ ಆಗಿದ್ದ. ಬಳಿಕ ಶಿವನ ಬಳಿಗೆ ಬಂದು ಅಸ್ತ್ರೋಪದೇಶದಿಂದ ನಿಪುಣನೆನಿಸಿದ.

ಪ್ರೀತಶ್ಚ ಭಗವಾನ್ ದೇವಃ ಕರ್ಮಣಾ ತೇನ ತಸ್ಯ ವೈ ।
ವರಾನ್ ಪ್ರಾದಾದ್ ಬ್ರಹ್ಮವಿದೇ ಭಾರ್ಗವಾಯ ಮಹಾತ್ಮನೇ ॥೧೧೯॥

ರಾಮನ ಆ ಯುದ್ಧಕರ್ಮದಿಂದ ಭಗವಾನ್ ಮಹಾದೇವ ಪ್ರೀತನಾದ. ಬ್ರಹ್ಮಜ್ಞಾನಿಯಾದ ಮಹಾತ್ಮ ಭಾರ್ಗವನಿಗೆ ಅಸ್ತ್ರೋಪದೇಶ ವರವನ್ನಿತ್ತ.

ಉಕ್ತಶ್ಚ ದೇವದೇವೇನ ಪ್ರೀತಿಯುಕ್ತೇನ ಶೂಲಿನಾ ।
ನಿಪಾತಾತ್ ತವ ಶಸ್ತ್ರಾಣಾಂ ಶರೀರೇ ಮಾಭವದ್ ರುಜಾ ॥೧೨೦॥

ಪ್ರೀತಿಯುಕ್ತನಾದ ದೇವದೇವ ಶೂಲಿಯು ನುಡಿದ— ಶಸ್ತ್ರಗಳ ಹೊಡೆತದಿಂದ ನಿನ್ನ ಶರೀರದಲ್ಲಿ ನೋವು ಉಂಟಾಗಲಿಲ್ಲ.

ತಯಾ ತೇऽಮಾನುಷಂ ಕರ್ಮ ನಾಪೋಹದ್ ಭೃಗುನಂದನ ।
ಗೃಹಾಣಾಸ್ತ್ರಾಣಿ ದಿವ್ಯಾನಿ ಮತ್ಸಕಾಶಾದ್ಯಥೇಪ್ಸಿತಮ್ ॥೧೨೧॥

ನೋವಿನಿಂದ ನಿನ್ನ ಅಮಾನುಷ ಕರ್ಮಕ್ಕೆ ಅಡ್ಡಿಯಾಗಲಿಲ್ಲ. ನಿನ್ನಿಷ್ಟದಂತೆ ದಿವ್ಯಾಸ್ತ್ರ ಮಂತ್ರಗಳ ಉಪದೇಶವನ್ನು ನನ್ನಿಂದ ಸ್ವೀಕರಿಸು.

ಲಬ್ಧ್ವಾ ಬಹುವಿಧಾನ್ ರಾಮಃ ಪ್ರಣಮ್ಯ ಶಿರಸಾ ಶಿವಮ್ ।
ಅನುಜ್ಞಾಂ ಪ್ರಾಪ್ಯ ದೇವೇಶಾತ್ ಜಗಾಮ ಸ ಮಹಾತಪಾಃ ॥೧೨೨॥

ತತೋಽಸ್ತ್ರಾಣಿ ಸಮಸ್ತಾನಿ ವರಾಂಶ್ಚ ಮನಸೇಪ್ಸಿತಾನ್ ॥೧೨೩॥

ರಾಮನು ಶಿವನಿಗೆ ತಲೆಬಾಗಿ ನಮಿಸಿ, ಅವನಿಂದ ಎಲ್ಲ ಅಸ್ತ್ರಗಳ ಉಪದೇಶವನ್ನೂ ಬಹುವಿಧವಾದ ಅಭೀಷ್ಟವಾದ ಎಲ್ಲ ವರಗಳನ್ನೂ ಪಡೆದು, ಅನುಜ್ಞೆ ಪಡೆದು ಹೊರಟುಹೋದ.

ಏವಮೇತತ್ ಪುರಾವೃತ್ತಂ ತದಾ ಕಥಿತವಾನೃಷಿಃ ॥೧೨೪॥

ಭಾರ್ಗವೋಽಪ್ಯದದಾತ್ ಸರ್ವಂ ಧನುರ್ವೇದಂ ಮಹಾತ್ಮನೇ ।
ಕರ್ಣಾಯ ಪುರುಷವ್ಯಾಘ್ರ ಸುಪ್ರೀತೇನಾಂತರಾತ್ಮನಾ ॥೧೨೫॥

ಇದು ಹಿಂದೆ ನಡೆದ ವೃತ್ತಾಂತ, ಋಷಿ ಆಗ ಇದನ್ನು ಹೇಳಿದ. ಭಾರ್ಗವ ಎಲ್ಲ ಧನುರ್ವೇದವನ್ನೂ ಸಂತುಷ್ಟವಾದ ಮನಸಿನಿಂದ ಮಹಾತ್ಮನಾದ ಕರ್ಣನಿಗೆ ಉಪದೇಶವಿತ್ತ.

ವೃಜಿನಂ ಹಿ ಭವೇತ್ ಕಿಂಚಿದ್ಯದಿ ಕರ್ಣಸ್ಯ ಪಾರ್ಥಿವ ।
ನಾಸ್ತ್ರೇ ಹ್ಯಸ್ತ್ರಾಣಿ ದಿವ್ಯಾನಿ ಪ್ರಾದಾಸ್ಯದ್ ಭೃಗುನಂದನಃ ॥೧೨೬॥

ರಾಜನೆ, ಕರ್ಣನಲ್ಲಿ ಏನಾದರೂ ಸ್ವಲ್ಪ ದೋಷವಿರುತ್ತಿದ್ದರೆ ಅವನಿಗೆ ದಿವ್ಯವಾದ ಅಸ್ತ್ರಮಂತ್ರಗಳನ್ನು ಭಾರ್ಗವ ರಾಮ ಉಪದೇಶಿಸುತ್ತಿರಲಿಲ್ಲ.

ನಾಪಿ ಸೂತಕುಲೇ ಜಾತಂ ಕರ್ಣಂ ಮನ್ಯೇ ಕಥಂಚನ ।
ದೇವಪುತ್ರಮಹಂ ಮನ್ಯೇ ಕ್ಷತ್ರಿಯಾಣಾಂ ಕುಲೋದ್ಭವಮ್
ವಿಸೃಷ್ಟಂ ನಾವಬೋಧಾರ್ಥಂ ಕುಲಸ್ಯೇತಿ ಮತಿರ್ಮಮ ॥೧೨೭॥

ಮತ್ತು ಕರ್ಣನು ಸೂತಕುಲದಲ್ಲಿ ಹುಟ್ಟಿದವನೆಂದು ನಾನು ಸರ್ವಥಾ ನಂಬಲಾರೆ. ದೇವಪುತ್ರನೊಬ್ಬ ಕ್ಷತ್ರಿಯ ಕುಲದಲ್ಲಿ ಹುಟ್ಟಿದವನೆಂದೇ ನಂಬುತ್ತೇನೆ. ಕುಲದ ಬಗ್ಗೆ ಯಾರಿಗೂ ತಿಳಿಯದಂತೆ ಪರಿತ್ಯಕ್ತನಾದವನೆಂದೇ ನನ್ನ ಊಹೆ.

ಸಕುಂಡಲಂ ಸಕವಚಂ ದೀರ್ಘಬಾಹುಂ ಮಹಾರಥಮ್ ।
ಕಥಮಾದಿತ್ಯಸದೃಶಂ ಮೃಗೀ ವ್ಯಾಘ್ರಂ ಜನಿಷ್ಯತಿ ॥೧೨೮॥

ಕುಂಡಲ ಕವಚಯುಕ್ತನಾದ ಆದಿತ್ಯನಂತೆ ಹೊಳೆವ ದೀರ್ಘಬಾಹು

ಮಹಾರಥಕರ್ಣನನ್ನು ಸೂತಸ್ತ್ರೀಯೊಬ್ಬಳು ಹಡೆದಿರಲಾರಳು. ಜಿಂಕೆಯ ಉದರದಲ್ಲಿ ಹುಲಿ ಹೇಗೆ ಜನಿಸೀತು?

ಪಶ್ಯ ಹ್ಯಸ್ಯ ಭುಜೌ ಪೀನೌ ನಾಗರಾಜಕರೋಪಮೌ ।
ವಕ್ಷಃ ಪಶ್ಯ ವಿಶಾಲಂ ಚ ಸರ್ವಶತ್ರುನಿಬರ್ಹಣಮ್ ॥೧೨೯॥

ನೋಡು, ಅವನ ಪುಷ್ಟವಾದ ತೋಳುಗಳನ್ನು ಮದ್ದಾನೆಯ ಸೊಂಡಿಲಿನಂತೆ ಇವೆ! ವಿಶಾಲವಾದ ಎದೆಯನ್ನು ನೋಡು, ಸರ್ವಶತ್ರುನಾಶಕನ ಎದೆ ಅದು!

ನ ತ್ವೇಷ ಪ್ರಾಕೃತಃ ಕಶ್ಚಿತ್ ಕರ್ಣೋ ವೈಕರ್ತನೋ ವೃಷಃ ।
ಮಹಾತ್ಮಾ ಹ್ಯೇಷ ರಾಜೇಂದ್ರ ರಾಮಶಿಷ್ಯಃ ಪ್ರತಾಪವಾನ್ ॥೧೩೦॥

ಈ ಕರ್ಣನೊಬ್ಬ ಅಜ್ಞಮಾನವನಲ್ಲ ಮಹಾರಾಜ, ಈತ ಮಹಾತ್ಮ ಪ್ರತಾಪಶಾಲಿ ರಾಮಶಿಷ್ಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಪಂಚತ್ರಿಂಶೋಧ್ಯಾಯಃ ॥೩೫॥

❖

ಮಹಾಭಾರತತಾತ್ಪರ್ಯನಿರ್ಣಯ

ಬುದ್ಧ್ಯಾ ಬಲೇನ ಜ್ಞಾನೇನ ಧೈರ್ಯಾದ್ಯೈರಪಿ ಯೋಧಿಕಃ ।
ರಥಿನಃ ಸಾರಥಿಃ ಸ ಸ್ಯಾದರ್ಜುನಸ್ಯ ಯಥಾ ಹರಿಃ ।
ಯಥಾ ಶಿವಸ್ಯ ಬ್ರಹ್ಮಾಭೂದ್ ದಹತಸ್ತ್ರಿಪುರಂ ಪುರಾ ॥ ೨೬ ॥

ಬುದ್ಧಿ ಬಲ ಜ್ಞಾನ ಧೈರ್ಯ ಮುಂತಾದವುಗಳಿಂದ ಯಾವನು ರಥಿಕನಿಗಿಂತ ಶ್ರೇಷ್ಠನಾಗಿರುವನೋ ಅವನೇ ಸಾರಥಿಯಾಗಬೇಕು. ಅರ್ಜುನನಿಗೆ ಕೃಷ್ಣ ಹೇಗೋ ಹಾಗೆ. ಹಿಂದೆ ತ್ರಿಪುರದಹನಕ್ಕೆ ಹೊರಟ ಶಿವನಿಗೆ ಬ್ರಹ್ಮ ಹೇಗೆ ಸಾರಥಿಯಾದನೋ ಹಾಗೆ, ನೀನೂ ಕರ್ಣನಿಗೆ ಸಾರಥಿಯಾಗಬೇಕು.

❖

ಮೂವತ್ತಾರನೆಯ ಅಧ್ಯಾಯ

'ಕರ್ಣನಿಗಿಂತ ಶಲ್ಯ ನೀನು ಹೆಚ್ಚು' ಎಂದಾಗ
ಶಲ್ಯ ಕರ್ಣನಿಗೆ ಸಾರಥಿಯಾಗಲು ಒಪ್ಪಿದ.

ದುರ್ಯೋಧನಃ

ಏವಂ ಸ ಭಗವಾನ್ ದೇವಃ ಸರ್ವಲೋಕಪಿತಾಮಹಃ ।
ಸಾರಥ್ಯಮಕರೋತ್ ತತ್ರ ಬ್ರಹ್ಮಾ ರುದ್ರೋಽಭವದ್ ರಥೀ ॥೧॥

ದುರ್ಯೋಧನ ಶಲ್ಯನಿಗೆ ನುಡಿದ— ಹೀಗೆ ಸರ್ವಲೋಕ ಪಿತಾಮಹನಾದ ಬ್ರಹ್ಮದೇವ ಸಾರಥ್ಯ ಮಾಡಿದ, ರುದ್ರನು ರಥಿಕನಾದ.

ರಥಿನೋಽಭ್ಯಧಿಕೋ ವೀರಃ ಕರ್ತವ್ಯೋ ರಥಸಾರಥಿಃ ।
ತಸ್ಮಾತ್ತ್ವಂ ಪುರುಷವ್ಯಾಘ್ರ ನಿಯಚ್ಛ ತುರಗಾನ್ ಯುಧಿ ॥೨॥

ರಥಿಕನಿಗಿಂತಲೂ ಹೆಚ್ಚಿನ ವೀರನನ್ನೇ ರಥಕ್ಕೆ ಸಾರಥಿಯನ್ನಾಗಿ ಮಾಡಬೇಕು. ಅದರಿಂದ ಹೇ ಪುರುಷಶ್ರೇಷ್ಠನೆ, ನೀನು ಯುದ್ಧದಲ್ಲಿ ಕುದುರೆಗಳನ್ನು ನಿಯಂತ್ರಿಸು.

ಯಥಾ ದೇವಗಣೈಸ್ತತ್ರ ವೃತೋ ಯತ್ನಾತ್ಪಿತಾಮಹಃ ।
ತಥಾಽಸ್ಮಾಭಿರ್ಭವಾನ್ಯತ್ನಾತ್ ಕರ್ಣಾದಭ್ಯಧಿಕೋ ವೃತಃ ॥೩॥

ಆಗ ದೇವತೆಗಳು ಸಾರಥ್ಯಕ್ಕೆ ಪಿತಾಮಹನಾದ ಬ್ರಹ್ಮದೇವನನ್ನು ಪ್ರಯತ್ನದಿಂದ ಕೇಳಿಕೊಂಡಂತೆ ನಾವು ಕರ್ಣನಿಗಿಂತ ಹೆಚ್ಚಿನವನಾದ ನಿನ್ನನ್ನು ಕೇಳಿಕೊಳ್ಳುತ್ತಿದ್ದೇವೆ.

ಯಥಾ ದೇವೈರ್ಮಹಾರಾಜ ಈಶ್ವರಾದಧಿಕೋ ವೃತಃ ।
ತಥಾ ಭವಾನಪಿ ಕ್ಷಿಪ್ರಂ ರುದ್ರಸ್ಯೇವ ಪಿತಾಮಹಃ ॥೪॥
ನಿಯಚ್ಛ ತುರಗಾನ್ ಯುದ್ಧೇ ರಾಧೇಯಸ್ಯ ಮಹಾದ್ಯುತೇ ॥೫॥

ಹೇಗೆ ದೇವತೆಗಳು ಈಶ್ವರನಿಗಿಂತ ಮೇಲಾದ ಬ್ರಹ್ಮದೇವನನ್ನು ಕೇಳಿಕೊಂಡರೋ ಹಾಗೆ ನಾವೂ ನಿನ್ನನ್ನು ಕೇಳಿಕೊಳ್ಳುತ್ತಿದ್ದೇವೆ. ರುದ್ರನಿಗೆ ಬ್ರಹ್ಮದೇವನಂತೆ ನೀನು ಬೇಗನೆ ಕರ್ಣನಿಗೆ ಯುದ್ಧದಲ್ಲಿ ಕುದುರೆಗಳನ್ನು ನಿಯಂತ್ರಿಸು.

ಶಲ್ಯಃ

ಮಮಾಪ್ಯೇತನ್ನರಶ್ರೇಷ್ಠ ಬಹುಶೋ ನರಸಿಂಹಯೋಃ ।
ಕಥ್ಯಮಾನಂ ಶ್ರುತಂ ದಿವ್ಯಮಾಖ್ಯಾನಮತಿಮಾನುಷಮ್ ॥೬॥

ಶಲ್ಯ ನುಡಿದ— ರಾಜನೆ, ಬ್ರಹ್ಮರುದ್ರರ ಈ ದಿವ್ಯವಾದ ಅತಿಮಾನುಷವಾದ ಈ ಕಥೆಯನ್ನು ಹೇಳುವುದನ್ನು ಬಹುಬಾರಿ ನಾನೂ ಕೇಳಿದ್ದೇನೆ.

ಯಥಾ ಚ ಚಕ್ರೇ ಸಾರಥ್ಯಂ ಭವಸ್ಯ ಪ್ರಪಿತಾಮಹಃ ।
ಯಥಾಽಸುರಾಶ್ಚ ನಿಹತಾ ಇಷುಣೈಕೇನ ಭಾರತ ॥೭॥
ಕೃಷ್ಣಸ್ಯ ಚಾಪಿ ವಿದಿತಂ ಸರ್ವಮೇತತ್ಪುರಾ ಹ್ಯಭೂತ್ ॥೮॥

ಶಿವನಿಗೆ ಬ್ರಹ್ಮನು ಸಾರಥ್ಯ ಮಾಡಿದಾಗ ಶಿವನು ಒಂದೇ ಬಾಣದಿಂದ ಅಸುರರನ್ನು ಕೊಂದನೆಂದು ಕೇಳಿದ್ದೇನೆ. ಕೃಷ್ಣನಿಗೂ ಇದೆಲ್ಲವೂ ಹಿಂದೆಯೆ ಗೊತ್ತಿತ್ತು.

ಯಥಾ ಪಿತಾಮಹೋ ಜಜ್ಞೇ ಭಗವಾನ್ ಸಾರಥಿಸ್ತದಾ ।
ಅನಾಗತಮತಿಕ್ರಾಂತಂ ವೇದ ಕೃಷ್ಣೋಽಪಿ ತತ್ತ್ವತಃ ॥೯॥

ಭಗವಾನ್ ಪಿತಾಮಹನು ಸಾರಥಿಯಾದುದು ಕೃಷ್ಣನಿಗೆ ಗೊತ್ತಿತ್ತು. ಅವನು ಭವಿಷ್ಯ ಹಾಗೂ ಭೂತಗಳನ್ನು ಸರಿಯಾಗಿ ತಿಳಿಯಬಲ್ಲವನು.

ಏತದರ್ಥಂ ವಿದಿತ್ವಾಽಪಿ ಸಾರಥ್ಯಮುಪಜಗ್ಮಿವಾನ್ ।
ಸ್ವಯಂಭೂರಿವ ರುದ್ರಸ್ಯ ಕೃಷ್ಣಃ ಪಾರ್ಥಸ್ಯ ಭಾರತ ॥೧೦॥

ಈ ವಿಷಯವನ್ನು ಕೂಡ ಕೃಷ್ಣ ತಿಳಿದಿದ್ದರಿಂದ ಅರ್ಜುನನಿಗೆ ಸಾರಥ್ಯ ಮಾಡುತ್ತಿದ್ದಾನೆ, ರುದ್ರನಿಗೆ ಬ್ರಹ್ಮನು ಸಾರಥ್ಯ ಮಾಡಿದಂತೆ.

ಯದಿ ಹನ್ಯಾಚ್ಚ ಕೌಂತೇಯಂ ಸೂತಪುತ್ರಃ ಕಥಂಚನ ।
ದೃಷ್ಟ್ವಾ ಪಾರ್ಥಂ ಹಿ ನಿಹತಂ ಸ್ವಯಂ ಯೋತ್ಸ್ಯತಿ ಕೇಶವಃ । ೧೧॥
ಶಂಖಚಕ್ರಗದಾಪಾಣಿರ್ಧಕ್ಷ್ಯತೇ ತವ ವಾಹಿನೀಮ್ ।
ನ ಚಾಪಿ ತಸ್ಯ ಕ್ರುದ್ಧಸ್ಯ ವಾರ್ಷ್ಣೇಯಸ್ಯ ಮಹಾತ್ಮನಃ ॥೧೨॥

ಸ್ಥಾಸ್ಯತೇ ಪ್ರತ್ಯನೀಕೇಷು ಕ್ವಚಿದತ್ರ ನೃಪಸ್ತವ ॥೧೩॥

ಕೃಷ್ಣನು ಸಾರಥ್ಯವನ್ನು ಮಾಡುವುದು ಮಾತ್ರವಲ್ಲ ಒಂದುವೇಳೆ ಹೇಗಾದರೂ ಅರ್ಜುನನನ್ನು ಕರ್ಣ ಕೊಂದರೆ ಕೃಷ್ಣ ತಾನೇ ಶಂಖ ಚಕ್ರಗದಾಪಾಣಿಯಾಗಿ ನಿನ್ನ ಸೈನ್ಯವನ್ನು ಇದಿರಿಸಿ ಯುದ್ಧವನ್ನೂ ಮಾಡುತ್ತಾನೆ. ಮಹಾತ್ಮನಾದ ಕೃಷ್ಣನು ಕ್ರುದ್ಧನಾಗಿ ಯುದ್ಧಕ್ಕೆ ನಿಂತರೆ ಈ ಶತ್ರುಸೈನ್ಯದಲ್ಲಿ ಯಾವ ರಾಜನೂ ಅವನಿಗೆ ಇದಿರಾಗಿ ಯುದ್ಧದಲ್ಲಿ ನಿಲ್ಲಲಾರ.

ಸಂಜಯಃ

ತಂ ತಥಾ ಭಾಷಮಾಣಂ ತು ಮದ್ರರಾಜಮರಿಂದಮಃ ।
ಪ್ರತ್ಯುವಾಚ ಮಹಾಬಾಹುರದೀನಾತ್ಮಾ ಸುತಸ್ತವ ॥೧೪॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಶಲ್ಯ ಹೀಗೆ ನುಡಿದಾಗ, ಧೃತರಾಷ್ಟ್ರನೆ, ಮಹಾಬಾಹುವಾದ ದೈನ್ಯರಹಿತನಾದ ನಿನ್ನ ಮಗನು ಪ್ರತಿಯಾಗಿ ನುಡಿದ—

ಮಾವಮಂಸ್ಥಾ ಮಹಾಬಾಹೋ ಕರ್ಣಂ ವೈಕರ್ತನಂ ರಣೇ ।
ಸರ್ವಶಸ್ತ್ರಭೃತಾಂ ಶ್ರೇಷ್ಠಂ ಸರ್ವಶಾಸ್ತ್ರಾರ್ಥಪಾರಗಮ್ ॥೧೫॥

ಮಹಾಬಾಹುವಾದ ಶಲ್ಯನೆ, ಶಾಸ್ತ್ರವೆಲ್ಲ ತಿಳಿದವನು ಮತ್ತು ಶಸ್ತ್ರಧಾರಿಗಳಲ್ಲೆಲ್ಲ ಶ್ರೇಷ್ಠನೂ ಆದ ಕರ್ಣನನ್ನು ಅವಮಾನಿಸಬೇಡ.

ಶಲ್ಯನು ಸಾರಥ್ಯ ಮಾಡಲು ಒಪ್ಪಿಕೊಂಡ ಬಳಿಕ ಈ ಪ್ರಕರಣ ಇಲ್ಲಿಗೇ ಮುಕ್ತಾಯವಾಗಬೇಕಿತ್ತು. ಆದರೆ ಪುನಃ ಪ್ರಕರಣ ಪ್ರಾರಂಭವಾದ ರೀತಿಯಲ್ಲಿದೆ, ಎಂದು ಒಂದು ಪ್ರಶ್ನೆ.

ಇನ್ನೊಂದು ಪ್ರಶ್ನೆ— 'ಕರ್ಣನು ಅರ್ಜುನನನ್ನು ಸಂಹರಿಸಿದರೆ ಶಂಖ ಚಕ್ರ ಗದಾಪಾಣಿಯಾದ ಶ್ರೀಕೃಷ್ಣ ನಿನ್ನ ಸೈನ್ಯವನ್ನು ದಹಿಸುತ್ತಾನೆ, ಅವನನ್ನೆದುರಿಸಿ ನಿನ್ನ ಸೈನ್ಯದಲ್ಲಿ ಯಾರೂ ನಿಲ್ಲಲಾರರು' ಎಂದು ಶಲ್ಯ ಹೇಳುತ್ತಿದ್ದಾನೆ. ಇದರಲ್ಲಿ ಕರ್ಣನನ್ನು ಅವಮಾನಗೊಳಿಸಿದ ಪ್ರಸಂಗವೇನೂ ಕಾಣುವುದಿಲ್ಲ. ಆದರೂ ಸಹ ದುರ್ಯೋಧನನು ಕರ್ಣನನ್ನು 'ಅವಮಾನಿಸಬೇಡ' ಎಂದು ಪ್ರಾರಂಭಿಸಿ ಅವನ ಸಾಹಸಕಾರ್ಯಗಳನ್ನು ಪಟ್ಟಮಾಡಿ ಹೇಳುತ್ತಾನೆ. ಭೀಮಸೇನನನ್ನು ಹೊಟ್ಟೆಬಾಕ ಎಂದು ನಿಂದಿಸಿದ ಕರ್ಣನ ಧೀರತ್ವವನ್ನು ಉದಾಹರಿಸುತ್ತಾನೆ.

ಇಲ್ಲಿ ಶಲ್ಯನ ಪ್ರಶ್ನೆ– ಕರ್ಣನು ಅರ್ಜುನನನ್ನು ಕೊಂದನಂತರ ಕೃಷ್ಣನು ಯುದ್ಧಕ್ಕೆ ನಿಂತರೆ ಅವನನ್ನು ಯಾವನು ಎದುರಿಸುತ್ತಾನೆ ಎಂಬುದು. ಇದಕ್ಕೆ ದುರ್ಯೋಧನನ ಉತ್ತರ ಕರ್ಣನು ಪಾಂಡವರನ್ನು ಜಯಿಸುತ್ತಾನೆ ಎಂಬುದು. ಇದು ಸ್ವಲ್ಪ ಅಸಂಗತವಾಗಿ ಕಾಣುತ್ತದೆ. ಕರ್ಣನೇ ಶ್ರೀಕೃಷ್ಣನನ್ನು ಎದುರಿಸಬಲ್ಲನು ಎಂದು ಹೇಳಬಹುದಾಗಿತ್ತು! ಎಂದು.

ಹೀಗೆ ಇಲ್ಲಿ ಎರಡು ಪ್ರಶ್ನೆಗಳು.

ಈ ಎರಡೂ ಪ್ರಶ್ನೆಗಳು ಸರಿಯಲ್ಲ. ಶಲ್ಯನು ಸಾರಥ್ಯ ಮಾಡಲು ಒಪ್ಪಿಕೊಂಡ ಬಳಿಕ ಪುನಃ ಈ ಪ್ರಕರಣ ಏಕೆ ಪ್ರಾರಂಭವಾಯಿತೆಂದರೆ ಮುಂದೆ ಕರ್ಣ ದುರ್ಯೋಧನನಿಗೆ ಹೇಳುತ್ತಾನೆ– 'ನಾತಿಹೃಷ್ಟಮನಾ ಹ್ಯೇಷ ಮದ್ರ ರಾಜೋऽಭಿಭಾಷತೇ' ದುರ್ಯೋಧನ, ಈ ಶಲ್ಯನಿಗೆ ತಾನು ಕರ್ಣಸಾರಥ್ಯ ಮಾಡುವುದರ ಔಚಿತ್ಯವಿನ್ನೂ ಕೂಡ ಮನವರಿಕೆಯಾಗಿಲ್ಲ, ಏನೂ ಸಮಾಧಾನವಾದಂತಿಲ್ಲ. 'ನ ಅತಿಹೃಷ್ಟಮನಾಃ' ಸಾರಥ್ಯ ಮಾಡುವುದರಲ್ಲಿ ಪೂರ್ಣವಾಗಿ ಹರ್ಷ–ಉತ್ಸಾಹಗಳು ಅವನಲ್ಲಿ ಕಂಡುಬರುವುದಿಲ್ಲ. ದಾಕ್ಷಿಣ್ಯಕ್ಕಾಗಿ 'ಸಾರಥ್ಯ ಮಾಡುತ್ತೇನೆ' ಎಂದು ಬಾಯಲ್ಲಿ ಹೇಳುತ್ತಾನೆ, ಅಷ್ಟೆ. ಅದರಿಂದ ಪ್ರಕರಣ ನಿಂತೇ ಇಲ್ಲ, ಮುಂದುವರಿಯುತ್ತಿದೆ.

'ಕರ್ಣನು ಅರ್ಜುನನನ್ನು ಸಂಹರಿಸಿದ ಬಳಿಕ ಕೃಷ್ಣನನ್ನು ಇದಿರಿಸುವವರು ಯಾರು?' ಎಂದು ಶಲ್ಯನ ಪ್ರಶ್ನೆ ಸರ್ವಥಾ ಇಲ್ಲ. ಅದು ಶಲ್ಯನಿಗೆ ಸಂಬಂಧಪಟ್ಟಿದ್ದೇ ಅಲ್ಲ. ಅದನ್ನು ದುರ್ಯೋಧನ ತಾನೇ ಆಲೋಚಿಸಬೇಕು. ಮತ್ತು ಈ ಪ್ರಶ್ನೆಗೆ ಉತ್ತರವನ್ನು ದುರ್ಯೋಧನ ಹೇಳುವುದೂ ಕಾಣುತ್ತದೆ– 'ಶ್ರೀಕೃಷ್ಣನು ಪಾಂಡವಬಲದ ನಾಯಕತ್ವ ವಹಿಸಿದರೆ ಶಲ್ಯ! ನೀನೇ ನಮ್ಮ ದಳದ ನಾಯಕತ್ವ ವಹಿಸು' ಎಂದು. ಶಲ್ಯನ ಪ್ರಶ್ನೆ ಇದಲ್ಲ.

'ಯದಿ ಹನ್ಯಾಚ್ಚ ಕೌಂತೇಯಂ ಸೂತಪುತ್ರಃ ಕಥಂಚನ' 'ಹೇಗಾದರೂ ಕಷ್ಟದಿಂದ ಅರ್ಜುನನನ್ನು ಕರ್ಣ ಕೊಂದರೆ' ಎಂದು ಶಲ್ಯನು ಹೇಳುವಲ್ಲಿ 'ರೆ' ಶಬ್ದದಿಂದಲೆ ಕರ್ಣ ಕೊಲ್ಲಲಾರ ಎಂಬ ಭಾವ ಅವನಿಗಿರುವುದು ಕಾಣುತ್ತದೆ. 'ಕಥಂಚನ' 'ಹೇಗಾದರೂ ಕಷ್ಟದಿಂದ' ಎಂದು ಸ್ಪಷ್ಟವಾಗಿ ಕರ್ಣನಲ್ಲಿ ಸಾಮರ್ಥ್ಯವಿಲ್ಲ ಎಂದಂತಾಗಿದೆ. ಇದು ಅವಮಾನ. ಅದಕ್ಕೇ ದುರ್ಯೋಧನ ಕರ್ಣನನ್ನು ಅವಮಾನಿಸಬೇಡ ಎನ್ನುತ್ತಾನೆ. ಕರ್ಣನು ಪಾಂಡವರನ್ನು ಅವಶ್ಯ ಜಯಿಸುತ್ತಾನೆ ಎನ್ನುತ್ತಾನೆ. ಅರ್ಥಾತ್ ಪಾಂಡವಪಕ್ಷದವನಾದ ಶ್ರೀಕೃಷ್ಣನನ್ನೂ ಕೂಡ ಕರ್ಣನೆ ಜಯಿಸುತ್ತಾನೆ ಎಂದು ದುರ್ಯೋಧನ ಹೇಳುತ್ತಿದ್ದಾನೆ. ಹೀಗೆ ಈ ಪ್ರಕರಣ ಸುಸಂಗತವೇ ಆಗಿದೆ.

ಯಸ್ಯ ಜ್ಯಾತಲನಿಘೋರ್ಷಂ ಶ್ರುತ್ವಾ ಭಯಕರಂ ಮಹತ್ ।
ಪಾಂಡವೇಯಾನಿ ಸೈನ್ಯಾನಿ ವಿದ್ರವಂತಿ ದಿಶೋ ದಶ ॥೧೬॥

ಕರ್ಣನು ಧನುಷ್ಟೇಂಕಾರ ಮಾಡಿದನೆಂದರೆ ಭಯಂಕರವಾದ ಆ ಮಹಾಧ್ವನಿಯನ್ನು ಕೇಳಿ ಪಾಂಡವರ ಸೈನ್ಯಗಳು ಹತ್ತು ದಿಕ್ಕುಗಳಿಗೆ ಪಲಾಯನ ಮಾಡುತ್ತವೆ.

ಪ್ರತ್ಯಕ್ಷಂ ತೇ ಮಹಾಬಾಹೋ ಯಥಾ ರಾತ್ರೌ ಘಟೋತ್ಕಚಃ ।
ಮಾಯಾಶತಾನಿ ಕುರ್ವಾಣೋ ಹತೋ ಮಾಯಾಪುರಸ್ಕೃತಃ ॥೧೭॥

ಮಹಾಬಾಹು, ನೀನೆ ಪ್ರತ್ಯಕ್ಷ ಕಂಡಿರುವೆ, ರಾತ್ರಿಯಲ್ಲಿ ಘಟೋತ್ಕಚನು ನೂರಾರು ಮಾಯೆಗಳನ್ನು ಸೃಜಿಸಿ ಮಾಯೆಗಳನ್ನೇ ಮುಂದುಮಾಡಿ ಕರ್ಣನಿಂದ ಹತನಾಗಿದ್ದಾನೆ.

ನ ಚಾತಿಷ್ಠತ ಬೀಭತ್ಸುಃ ಪ್ರತ್ಯನೀಕೇ ಕಥಂಚನ ।
ಏತಾಂಶ್ಚ ದಿವಸಾನ್ ಸರ್ವಾನ್ ಭಯೇನ ಮಹತಾ ವೃತಃ ॥೧೮॥

ಅರ್ಜುನನೂ ಕೂಡ ಮಹಾಭಯ ಪೀಡಿತನಾದ್ದರಿಂದ ಈ ಯಾವ ದಿವಸಗಳಲ್ಲಿಯೂ ಕರ್ಣನಿಗೆ ಯಾವ ರೀತಿಯಿಂದಲೂ ಎದುರಾಗಿ ನಿಲ್ಲಲಿಲ್ಲ!

ಭೀಮಸೇನಶ್ಚ ಬಲವಾನ್ ಧನುಷ್ಕೋಟ್ಯಾಭಿಚೋದಿತಃ ।
ಉಕ್ತಶ್ಚ ಸಂಜ್ಞಯಾ ರಾಜನ್ ಮೂಢ ಔದರಿಕೋ ಯಥಾ ॥೧೯॥

ಬಲಿಷ್ಠನಾದ ಭೀಮಸೇನನನ್ನು ಕೂಡ ಕರ್ಣನು ಬಿಲ್ಲಿನ ತುದಿಯಿಂದ ಸೆಳೆದು 'ಮೂರ್ಖ, ಹೊಟ್ಟೆ ಬಾಕ' ಎಂದು ಹೆಸರಿನಿಂದ ಕರೆದು ನಿಂದಿಸಿದ.

ಮಾದ್ರೀಪುತ್ರೌ ತಥಾ ಶೂರೌ ಯೇನ ಜಿತ್ವಾ ಮಹಾರಣೇ ।
ಕಮಪ್ಯರ್ಥಂ ಪುರಸ್ಕೃತ್ಯ ನ ಹತೌ ಯುಧಿ ಮಾರಿಷ ॥೨೦॥

ಶೂರರಾದ ನಕುಲ-ಸಹದೇವರನ್ನೂ ಮಹಾರಣದಲ್ಲಿ ಗೆದ್ದೂಕೂಡ ಏನೋ ಉದ್ದೇಶವನ್ನು ಮುಂದು ಮಾಡಿ ಕೊಲ್ಲದೆ ಬಿಟ್ಟಿದ್ದಾನೆ.

'ಏನೋ ಉದ್ದೇಶ' ಎಂದರೆ, ಕರ್ಣನು ಕುಂತಿಗೆ ನಿನ್ನ ಮಕ್ಕಳನ್ನು ಕೊಲ್ಲುವುದಿಲ್ಲವೆಂದು ಮಾತು ಕೊಟ್ಟಿದ್ದಾನೆ. ಅದಕ್ಕೆ ತಪ್ಪದಿರುವ ಉದ್ದೇಶ ವೆಂದು ದುರ್ಯೋಧನ ಹೇಳುತ್ತಿದ್ದಾನೆ. ಹಾಗೇ ಭೀಮನೂ, ಅರ್ಜುನ ಕರ್ಣನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದ್ದಾನೆ, ಅದು ಹಾಳಾಗಬಾರದೆಂದು ತಾನು ಸುಮ್ಮನಿದ್ದ. ಅರ್ಜುನನೂ ಕೂಡ ಸಂಶಪ್ತಕರನ್ನು ಕೊಲ್ಲುವ ಪ್ರತಿಜ್ಞೆ ಮಾಡಿದ್ದರಿಂದ ಆ ಕಾರ್ಯವನ್ನು ಮಾಡಿ ಮುಗಿಸದೇ ಕರ್ಣನನ್ನು ಕೊಲ್ಲಲು ಹೊರಡುವಂತಿರಲಿಲ್ಲ, ಹೊರತು, ಭಯದಿಂದ ದೂರ ನಿಂತಿರಲಿಲ್ಲ ಅರ್ಜುನ. ದುರ್ಯೋಧನ ಇದನ್ನು ತಿಳಿದೂ ಕೂಡ ಎಲ್ಲವನ್ನೂ ಮರೆಮಾಚಿ ಇವೆಲ್ಲವೂ ಕರ್ಣನ ಸಾಹಸಕಾರ್ಯಗಳೆಂದು ಹೊಗಳುತ್ತಾನೆ. ಇದು ಕೇವಲ ಆತ್ಮವಂಚನೆ.

ಯೇನ ವೃಷ್ಣಿಪ್ರವೀರಸ್ತು ಸಾತ್ಯಕಿಃ ಸಾತ್ವತಾಂ ವರಃ ।
ನಿರ್ಜಿತ್ಯ ಸಮರೇ ಶೂರೋ ವಿರಥಶ್ಚ ಬಲಾತ್ಕೃತಃ ॥೨೧॥

ಯಾದವರಲ್ಲಿ ಮುಖ್ಯನಾದ ವೀರ ಸಾತ್ಯಕಿಯನ್ನೂ ಕೂಡ ಯುದ್ಧದಲ್ಲಿ ಪರಾಭವಗೊಳಿಸಿ ಬಲಾತ್ಕಾರವಾಗಿ ಅವನ ರಥವನ್ನು ಮುರಿದಿದ್ದಾನೆ ಕರ್ಣ.

ಸೃಂಜಯಾಶ್ಚೇತರೇ ಸರ್ವೇ ಧೃಷ್ಟದ್ಯುಮ್ನಪುರೋಗಮಾಃ ।
ಅಸಕೃನ್ನಿರ್ಜಿತಾಃ ಸಂಖೇ ಸ್ಮಯಮಾನೇನ ಸಂಯುಗೇ ॥೨೨॥

ಧೃಷ್ಟದ್ಯುಮ್ನ ಮುಂತಾದ ಬೇರೆ ಎಲ್ಲ ಸೃಂಜಯರನ್ನೂ ಅನೇಕ ಬಾರಿ ನಗುತ್ತಲೆ ಪರಾಭವಗೊಳಿಸಿದ್ದಾನೆ, ಕರ್ಣ.

ತಂ ಕಥಂ ಪಾಂಡವಾ ಯುದ್ಧೇ ವಿಜೇಷ್ಯಂತಿ ಮಹಾರಥಮ್ ।
ಯೋ ಹನ್ಯಾತ್ ಸಮರೇ ಕ್ರುದ್ಧೋ ವಜ್ರಹಸ್ತಂ ಪುರಂದರಮ್ ॥೨೩॥

ಅಂಥ ಮಹಾರಥನಾದ ಕರ್ಣನನ್ನು ಪಾಂಡವರು ಯುದ್ಧದಲ್ಲಿ ಹೇಗೆ ಕೊಲ್ಲಬಲ್ಲರು? ಅವನು ರಣರಂಗದಲ್ಲಿ ಕ್ರುದ್ಧನಾದರೆ ವಜ್ರಾಯುಧವನ್ನು ಹಿಡಿದ ದೇವೇಂದ್ರನನ್ನೂ ಕೊಲ್ಲುತ್ತಾನೆ.

ತ್ವಂ ಚ ಸರ್ವಾಸ್ತ್ರವಿದ್ ವೀರಃ ಸರ್ವವಿದ್ಯಾಸ್ತ್ರಪಾರಗಃ ।
ಬಾಹುವೀರ್ಯೇಣ ತೇ ತುಲ್ಯಃ ಪೃಥಿವ್ಯಾಂ ನಾಸ್ತಿ ಕಶ್ಚನ ॥೨೪॥

ನೀನೂ ಕೂಡ ಸರ್ವವಿದ್ಯಾಸ್ತ್ರಪಾರಂಗತ, ಸರ್ವ ಅಸ್ತ್ರಗಳನ್ನೂ ತಿಳಿದವನು, ಬಾಹುಬಲದಲ್ಲಿಯೂ ನಿನಗೆ ಸಮಾನ ಭೂಮಿಯ ಮೇಲೆ ಯಾವನೂ ಇಲ್ಲ.

ತ್ವಂ ಶಲ್ಯಭೂತಃ ಶತ್ರೂಣಾಮವಿಷಹ್ಯಃ ಪರಾಕ್ರಮೇ ।
ತತಸ್ತ್ವಮುಚ್ಯಸೇ ರಾಜನ್ ಶಲ್ಯ ಇತ್ಯರಿಸೂದನ ॥೨೫॥

ಪರಾಕ್ರಮದಲ್ಲಿ ಶತ್ರುಗಳಿಗೆ ಯಾರಿಗೂ ಇದಿರಿಸಲಾಗದವನು. ಅವರಿಗೆ 'ಶಲ್ಯ'ದಂತೆ, ಮುಳ್ಳಿನಂತಿರುವುದರಿಂದ ಶಲ್ಯ ಎಂದು ಕರೆಸಿಕೊಳ್ಳುತ್ತಿರುವೆ.

ತವ ಬಾಹುಬಲಂ ಪ್ರಾಪ್ಯ ನ ಶೇಕುಃ ಸರ್ವಸಾತ್ವತಾಃ ।
ತವ ಬಾಹುಬಲಾದ್ ರಾಜನ್ ಕಿಂ ನು ಕೃಷ್ಣೋ ಬಲಾಧಿಕಃ ॥೨೬॥

ನಿನ್ನ ಬಾಹುಬಲವನ್ನು ಇದಿರಿಸಲೂ ಯಾವ ಯಾದವರೂ ಶಕ್ತರಲ್ಲ. ನಿನ್ನ ಬಾಹುಬಲಕ್ಕಿಂತ ಕೃಷ್ಣನೇನು ಬಲದಲ್ಲಿ ಹೆಚ್ಚೆ?

ಯಥಾಹಿ ಕೃಷ್ಣೇನ ಬಲಂ ಧಾರ್ಯಂ ವೈ ಫಲ್ಗುನೇ ಹತೇ ।
ತಥಾ ಕರ್ಣಾತ್ಯಯೀಭಾವೇ ತ್ವಯಾ ಧಾರ್ಯಂ ಮಹದ್ ಬಲಮ್ ॥

ಅರ್ಜುನ ಹತನಾದಾಗ ಕೃಷ್ಣನೇ ಪಾಂಡವಸೈನ್ಯವನ್ನು ಮುನ್ನಡೆಸುವಂತೆ ಕರ್ಣನ ನಾಶವಾದಾಗ ನೀನೆ ನಮ್ಮ ಮಹಾಸೈನ್ಯವನ್ನು ಮುನ್ನಡೆಸಬೇಕು.

ಕಿಮರ್ಥಂ ಸಮರೇ ಸೈನ್ಯಂ ವಾಸುದೇವೋ ನಿವಾರಯೇತ್ ।
ಕಿಮರ್ಥಂ ಚ ಭವಾನ್ ಸೈನ್ಯಂ ನ ಹನಿಷ್ಯತಿ ಮಾರಿಷ ॥೨೮॥

ಕೃಷ್ಣನೇಕೆ ನಮ್ಮ ಸೈನ್ಯವನ್ನು ವಧಿಸಬೇಕು? ನೀನೇಕೆ ಪಾಂಡವಸೈನ್ಯವನ್ನು ವಧಿಸಬಾರದು?

ತ್ವತ್ಕೃತಾಂ ಪದವೀಂ ಪ್ರಾಪ್ತುಮಿಚ್ಛೇಯಂ ಯುಧಿ ಮಾರಿಷ ।
ಸೋದರಾಣಾಂ ಚ ವೀರಾಣಾಂ ಸರ್ವೇಷಾಂ ಚ ಮಹೀಕ್ಷಿತಾಮ್ ॥

ರಾಜನೆ, ಯುದ್ಧದಲ್ಲಿ ನೀನು ಸೇನಾನಾಯಕನಾಗಿ ವೀರರಾದ ನನ್ನ ಸೋದರರಿಗೂ ಎಲ್ಲ ರಾಜರಿಗೂ ತೋರುವ ಮಾರ್ಗವನ್ನು ನಾನೂ ಹೊಂದಲು ಬಯಸುತ್ತೇನೆ.

ಶಲ್ಯಃ

ಯನ್ಮಾಂ ಬ್ರವೀಷಿ ಗಾಂಧಾರೇ ಅಗ್ರೇ ಸೈನ್ಯಸ್ಯ ಮಾನದ ।
ವಿಶಿಷ್ಟಂ ದೇವಕೀಪುತ್ರಾತ್ ಪ್ರೀತಿಮಾನಸ್ಮ್ಯಹಂ ತ್ವಯಿ ॥೩೦॥

ಶಲ್ಯನು ದುರ್ಯೋಧನನಿಗೆ ಹೇಳುತ್ತಾನೆ– ದುರ್ಯೋಧನ, ಎಲ್ಲ ಸೈನ್ಯದ ಮುಂದೆ ನೀನು ನನ್ನನ್ನು ಕೃಷ್ಣನಿಗಿಂತ ಶ್ರೇಷ್ಠನೆನ್ನುತ್ತಿರುವುದರಿಂದ ನನಗೆ ನಿನ್ನಲ್ಲಿ ಪ್ರೀತಿ ಉಂಟಾಗಿದೆ.

ಏಷ ಸಾರಥ್ಯಮಾತಿಷ್ಠೇ ರಾಧೇಯಸ್ಯ ಯಶಸ್ವಿನಃ ।
ಯುಧ್ಯತಃ ಪಾಂಡವಾಗ್ರ್ಯೇಣ ಯಥಾ ತ್ವಂ ವೀರ ಮನ್ಯಸೇ ॥೩೧॥

ನೀನು ಬಯಸಿದಂತೆ, ಕೀರ್ತಿಶಾಲಿಯಾದ ಕರ್ಣನು ಅರ್ಜುನನೊಡನೆ ಯುದ್ಧಮಾಡುವಾಗ ನಾನು ಅವನಿಗೆ ಸಾರಥ್ಯ ಮಾಡುತ್ತೇನೆ.

ಸಮಯಶ್ಚ ಹಿ ಮೇ ವೀರ ಕಶ್ಚಿದ್ ವೈಕರ್ತನಂ ಪ್ರತಿ ।
ಉತ್ಸೃಜೇಯಂ ಯಥಾಶ್ರದ್ಧಮಹಂ ವಾಚೋಽಸ್ಯ ಸನ್ನಿಧೌ ॥೩೨॥

ವೀರನೆ, ನನ್ನದೊಂದು ಶರತ್ತಿದೆ, ಕರ್ಣನಿಗೆ ಅವನ ಮುಂದೆ, ನನಗೆ ಏನು ಅನಿಸಿರುತ್ತದೋ ಅದನ್ನು, ಸ್ಪಷ್ಟಮಾತಿನಿಂದ ಹೇಳಿಬಿಡುತ್ತೇನೆ.

ಸಂಜಯಃ

ತಥೇತಿ ರಾಜನ್ ಪುತ್ರಸ್ತೇ ಸಹ ಕರ್ಣೇನ ಮಾರಿಷ ।
ಅಬ್ರವೀದ್ ಮದ್ರರಾಜಾನಂ ಸರ್ವಕ್ಷತ್ರಸ್ಯ ಸನ್ನಿಧೌ ॥೩೩॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ರಾಜನೆ, ಎಲ್ಲ ಕ್ಷತ್ರಿಯರ ಮುಂದೆ ನಿನ್ನ ಮಗನೂ ಕರ್ಣನೂ, ಶಲ್ಯನಿಗೆ 'ಹಾಗೇ ಆಗಲಿ' ಎಂದು ಆಶ್ವಾಸನೆ ನೀಡಿದರು.

ಸಾರಥ್ಯಸ್ಯಾಭ್ಯುಪಗಮಾತ್ ಶಲ್ಯೇನಾಶ್ವಾಸಿತಸ್ತದಾ ।
ದುರ್ಯೋಧನಸ್ತದಾ ಹೃಷ್ಟಃ ಕರ್ಣಂ ತಮಭಿಪಸ್ವಜೇ ॥೩೪॥

ಶಲ್ಯನು ಸಾರಥ್ಯಕ್ಕೆ ಒಪ್ಪಿ ಅದನ್ನು ಮಾಡುವೆನೆಂದು ಆಶ್ವಾಸನ ನೀಡಿದಾಗ ದುರ್ಯೋಧನ ಸಂತೋಷದಿಂದ ಕರ್ಣನನ್ನು ತಬ್ಬಿಕೊಂಡ.

ಅಬ್ರವೀಚ್ಚ ಪುನಃ ಕರ್ಣಂ ಸ್ತೂಯಮಾನಃ ಸುತಸ್ತವ ।
ಜಹಿ ಪಾರ್ಥಾನ್ ರಣೇ ಸರ್ವಾನ್ ಮಹೇಂದ್ರೋ ದಾನವಾನಿವ ॥೩೫॥

ಪುನಃ ಕರ್ಣನನ್ನು ಹೊಗಳುತ್ತ ಮಹೇಂದ್ರನು ದಾನವರನ್ನು ಕೊಂದಂತೆ ನೀನು ರಣದಲ್ಲಿ ಪಾಂಡವರೆಲ್ಲರನ್ನೂ ಕೊಲ್ಲು ಎಂದ, ದುರ್ಯೋಧನ.

ಸ ಶಲ್ಯೇನಾಭ್ಯುಪಗತೇ ಹಯಾನಾಂ ಸನ್ನಿಯಚ್ಛನೇ ।
ಕರ್ಣೋ ಹೃಷ್ಟಾತ್ಮನಾ ಭೂಯೋ ದುರ್ಯೋಧನಮಭಾಷತ ॥೩೬॥

ಶಲ್ಯನು ಸಾರಥ್ಯಕ್ಕೆ ಒಪ್ಪಿದಾಗ ಕರ್ಣ ಹರ್ಷಚಿತ್ತನಾದರೂ ಪುನಃ ದುರ್ಯೋಧನನಿಗೆ ಹೇಳಿದ—

ನಾತಿಹೃಷ್ಟಮನಾ ಹ್ಯೇಷ ಮದ್ರರಾಜೋಽಭಿಭಾಷತೇ ।
ರಾಜನ್ ಮಧುರಯಾ ವಾಚಾ ಪುನರೇನಂ ಬ್ರವೀಹಿ ವೈ ॥೩೭॥

'ಪೂರ್ತಿ ಹರ್ಷಚಿತ್ತನಾಗಿ ಶಲ್ಯ ನುಡಿಯುತ್ತಿಲ್ಲ. ರಾಜನೆ, ಸವಿಮಾತಿನಿಂದ ಅವನಿಗೆ ಇನ್ನೂ ಹೇಳು.'

ತತೋ ರಾಜಾ ಮಹಾಪ್ರಾಜ್ಞಃ ಸರ್ವಾಸ್ತ್ರಕುಶಲೋ ಬಲೀ ।
ದುರ್ಯೋಧನೋಽಬ್ರವೀಚ್ಛಲ್ಯಂ ಮದ್ರರಾಜಂ ಮಹೀಪತಿಮ್ ॥೩೮॥

ಆಗ ಮಹಾಪ್ರಾಜ್ಞನಾದ ಸರ್ವಾಶ್ತ್ರಕುಶಲನಾದ ಬಲಿಷ್ಠನಾದ ರಾಜಾ ದುರ್ಯೋಧನ ಶಲ್ಯರಾಜನಿಗೆ ಹೇಳಿದ.

ಪೂರಯನ್ನಿವ ಘೋಷೇಣ ಮೇಘಗಂಭೀರಯಾ ಗಿರಾ ।
ಶಲ್ಯ ಕರ್ಣೋಽರ್ಜುನೇನಾದ್ಯ ಯೋದ್ಧವ್ಯಮಿತಿ ಮನ್ಯತೇ ॥೩೯॥

ಗುಡುಗಿನಂತೆ ಗಂಭೀರಧ್ವನಿಯಿಂದ ದಿಕ್ಕುಗಳನ್ನು ತುಂಬಿಸುವಂತೆ ದುರ್ಯೋಧನ ನುಡಿದ, ಶಲ್ಯನೆ, ಕರ್ಣನು ಈಗ ಅರ್ಜುನನೊಡನೆ ಯುದ್ಧ ಮಾಡಬೇಕೆಂದಿದ್ದಾನೆ.

ತಸ್ಯ ತ್ವಂ ಪುರುಷವ್ಯಾಘ್ರ ನಿಯಚ್ಛ ತುರಗಾನ್ ಯುಧಿ ।
ಕರ್ಣೋ ಹತ್ವೇತರಾನ್ ಸರ್ವಾನ್ ಫಲ್ಗುನಂ ಹಂತುಮಿಚ್ಛತಿ ॥೪೦॥

ತಸ್ಯಾಭೀಪ್ಸುಗ್ರಹೇ ರಾಜನ್ ಪ್ರಯಾಚೇ ತ್ವಾಂ ಪುನಃ ಪುನಃ ॥೪೧॥

ರಾಜನೆ, ಕರ್ಣನ ಕುದುರೆಗಳನ್ನು ರಣದಲ್ಲಿ ನಿಯಂತ್ರಿಸು, ಅವನು ಇತರ ಎಲ್ಲ ಸೈನಿಕರನ್ನು ಕೊಂದು ಅರ್ಜುನನನ್ನು ಕೊಲ್ಲಲು ಬಯಸುತ್ತಾನೆ. ಅವನ ಸಾರಥ್ಯ ಮಾಡಲು ನಿನ್ನನ್ನು ಪುನಃ ಪುನಃ ಬೇಡಿಕೊಳ್ಳುತ್ತೇನೆ.

ಪಾರ್ಥಸ್ಯ ಸಚಿವಃ ಕೃಷ್ಣೋ ಯಥಾऽಭೀಪ್ಸುಗ್ರಹೋ ವರಃ ।
ತಥಾ ತ್ವಮಪಿ ರಾಧೇಯಂ ಸರ್ವತಃ ಪರಿಪಾಲಯ ॥೪೨॥

ಅರ್ಜುನನಿಗೆ ಕೃಷ್ಣನು ಹೇಗೆ ಸಾರಥಿಯಾಗಿರುವನೋ ಹಾಗೇ ನೀನೂ ಕರ್ಣನಿಗೆ ಸಾರಥಿಯಾಗಿ ಅವನನ್ನು ಎಲ್ಲ ಬಗೆಯಿಂದ ಕಾಪಾಡು.

ಸಂಜಯಃ

ತತಃ ಶಲ್ಯಃ ಪರಿಷ್ವಜ್ಯ ಸುತಂ ತೇ ವಾಕ್ಯಮಬ್ರವೀತ್ ।
ದುರ್ಯೋಧನಮಮಿತ್ರಘ್ನಂ ಪ್ರೀತೋ ಮದ್ರಾಧಿಪಸ್ತದಾ ॥೪೩॥

ಸಂಜಯನು ನುಡಿದ— ಆಗ ನಿಜವಾಗಿ ಸಂತುಷ್ಟನಾಗದಿದ್ದರೂ ಸಂತುಷ್ಟನಾದಂತೆ ತೋರಿಕೊಳ್ಳುತ್ತ ಶಲ್ಯನು ದುರ್ಯೋಧನನನ್ನು ತಬ್ಬಿಕೊಂಡು ಹೇಳಿದ.

ಶಲ್ಯಃ

ಏವಂ ಚೇನ್ಮನ್ಯಸೇ ರಾಜನ್ ಗಾಂಧಾರೇ ಪ್ರಿಯದರ್ಶನ ।
ತಸ್ಮಾತ್ತೇ ಯತ್ಪ್ರಿಯಂ ಕಿಂಚಿತ್ ತತ್ಸರ್ವಂ ಕರವಾಣ್ಯಹಮ್ ॥೪೪॥

'ರಾಜನೆ, ಹೀಗೆ ನೀನು ಬಯಸಿದರೆ ನಾನು ನೀನೇನು ಬಯಸುವೆಯೋ ಅದೆಲ್ಲವನ್ನೂ ಮಾಡುತ್ತೇನೆ.

ಯತ್ರಾಸ್ಮಿ ಭರತಶ್ರೇಷ್ಠ ಯೋಗ್ಯಃ ಕರ್ಮಣಿ ಕರ್ಹಿಚಿತ್ ।
ತತ್ರ ಸರ್ವಾತ್ಮನಾ ಯುಕ್ತೋ ವಕ್ಷ್ಯೇ ಕಾರ್ಯಂ ಪರಂತಪ ॥೪೫॥

'ಎಲ್ಲಿ ಯಾವ ಕಾರ್ಯದಲ್ಲಿ ನಾನು ಯೋಗ್ಯನಿರುವೆನೋ ಅಲ್ಲಿ ಆ ಕಾರ್ಯದಲ್ಲಿ ನನ್ನನ್ನು ನಾನು ಪೂರ್ತಿ ತೊಡಗಿಸಿಕೊಂಡು ಆ ಕಾರ್ಯವನ್ನು ನಿರ್ವಹಿಸುವೆನು.

ಯತ್ತು ಕರ್ಣಮಹಂ ಬ್ರೂಯಾಂ ಹಿತಕಾಮಃ ಪ್ರಿಯಾಪ್ರಿಯೇ ।
ಮಮ ತತ್ಕ್ಷಮತಾಂ ಸರ್ವಂ ಭವಾನ್ ಕರ್ಣಶ್ಚ ಸರ್ವಶಃ ॥೪೬॥

ಆದರೆ ಹಿತೈಷಿಯಾಗಿ ಕರ್ಣನಿಗೆ ಪ್ರಿಯವಾಗಲಿ, ಅಪ್ರಿಯವಾಗಲಿ ನಾನು ಏನೇ ಹೇಳಿದರೂ ಅದನ್ನು ನೀನೂ ಕರ್ಣನೂ ಪೂರ್ತಿಯಾಗಿ ಸಹಿಸಿಕೊಳ್ಳಬೇಕು.'

ಕರ್ಣಃ

ಈಶಾನಸ್ಯ ಯಥಾ ಬ್ರಹ್ಮಾ ಯಥಾ ಪಾರ್ಥಸ್ಯ ಕೇಶವಃ ।
ತಥಾ ನಿತ್ಯಂ ಹಿತೇ ಯುಕ್ತೋ ಮದ್ರರಾಜ ಭವಸ್ವ ನಃ ॥೪೭॥

ಕರ್ಣ ಶಲ್ಯನಿಗೆ ಹೇಳಿದ, 'ಶಿವನಿಗೆ ಬ್ರಹ್ಮನಂತೆ, ಅರ್ಜುನನಿಗೆ ಕೃಷ್ಣನಂತೆ ನೀನು ನನಗೆ ಸದಾ ಹಿತಕರನಾಗು.'

ಶಲ್ಯಃ

ಆತ್ಮನಿಂದಾತ್ಮಪೂಜಾ ಚ ಪರನಿಂದಾ ಪರಸ್ತವಃ ।
ಅನಾಚರಿತಮಾರ್ಯಾಣಾಂ ವೃತ್ತಮೇತಚ್ಚತುರ್ವಿಧಮ್ ॥೪೮॥

ಶಲ್ಯನು ಕರ್ಣನಿಗೆ ಹೇಳಿದ— 'ತನ್ನ ನಿಂದೆ, ತನ್ನ ಹೊಗಳಿಕೆ, ಪರರ ನಿಂದೆ, ಪರರ ಹೊಗಳಿಕೆ ಈ ನಾಲ್ಕು ಬಗೆಯ ಆಚಾರವನ್ನು ಸತ್ಪುರುಷರು ಮಾಡುವುದಿಲ್ಲ.

ಯತ್ತು ವಿದ್ವನ್ ಪ್ರವಕ್ಷ್ಯಾಮಿ ಪ್ರತ್ಯಯಾರ್ಥಮಹಂ ತವ ।
ಆತ್ಮನಃ ಸ್ತವಸಂಯುಕ್ತಂ ತನ್ನಿಬೋಧ ಯಥಾತಥಮ್ ॥೪೯॥

'ಆದರೂ ನಿನಗೆ ವಿಶ್ವಾಸ ಉಂಟುಮಾಡುವುದಕ್ಕಾಗಿ ನಾನು ನನ್ನ ಬಗ್ಗೆ ಹೊಗಳಿಕೆಯ ಒಂದು ಮಾತನ್ನು ನಿನಗೆ ಹೇಳುತ್ತೇನೆ. ಅದನ್ನು ಸರಿಯಾಗಿ ತಿಳಿದುಕೊಳ್ಳು.

ಅಹಂ ಶಕ್ರಸ್ಯ ಸಾರಥ್ಯೇ ಯೋಗ್ಯೋ ಮಾತಲಿವತ್ಪ್ರಭೋ ।
ಅಪ್ರಮಾದಾತ್ ಪ್ರಯೋಗಾಚ್ಚ ಜ್ಞಾನವಿದ್ಯಾಚಿಕಿತ್ಸನೈಃ ॥೫೦॥

'ಇಂದ್ರನಿಗೆ ಮಾತಲಿಯಂತೆ ನಾನು ನಿನಗೆ ಸಾರಥ್ಯ ಮಾಡಲು

ಯೋಗ್ಯನಿದ್ದೇನೆ. ಏಕೆಂದರೆ ನನಗೆ ಪ್ರಮಾದವಿಲ್ಲ. ಅಶ್ವಗಳ ಪರಿಜ್ಞಾನ, ಅಶ್ವಶಾಸ್ತ್ರ ಅಶ್ವಚಿಕಿತ್ಸೆಗಳರಿವಿರುವುದರಿಂದ ಚೆನ್ನಾಗಿ ಸಾರಥ್ಯ ಮಾಡಬಲ್ಲೆ.

ತತಃ ಪಾರ್ಥೇನ ಸಂಗ್ರಾಮೇ ಯುಧ್ಯಮಾನಸ್ಯ ತೇऽನಘ ।
ವಾಹಯಿಷ್ಯಾಮಿ ತುರಗಾನ್ ವಿಜ್ವರೋ ಭವ ಸೂತಜ ॥೫೦॥

'ಅದರಿಂದ ಸೂತಪುತ್ರನೆ, ನೀನು ಅರ್ಜುನನೊಡನೆ ಯುದ್ಧಮಾಡುವಾಗ ಕುದುರೆಗಳನ್ನು ನಡೆಸುತ್ತೇನೆ. ಸಂದೇಹವನ್ನು ಬಿಟ್ಟುಬಿಡು.'

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷಟ್‌ತ್ರಿಂಶೋಧ್ಯಾಯಃ ॥೩೬॥

❖

ಮೂವತ್ತೇಳನೆಯ ಅಧ್ಯಾಯ

'ಪಾಂಡವರನ್ನು ಅವಮಾನಿಸಬೇಡ' ಎಂದು ಕರ್ಣನಿಗೆ ಶಲ್ಯನ ಬುದ್ಧಿವಾದ.

ದುರ್ಯೋಧನಃ

ಅಯಂ ತೇ ಕರ್ಣ ಸಾರಥ್ಯಂ ಮದ್ರರಾಜಃ ಕರಿಷ್ಯತಿ ।
ಕೃಷ್ಣಾದಭ್ಯಧಿಕೋ ಯಂತಾ ದೇವೇಶಸ್ಯೇವ ಮಾತಲಿಃ ॥೧॥

ದುರ್ಯೋಧನ ಕರ್ಣನಿಗೆ ಹೇಳಿದ— ಶಲ್ಯನು ನಿನಗೆ ಸಾರಥ್ಯ ಮಾಡುತ್ತಾನೆ. ಅವನು ಕೃಷ್ಣನಿಗಿಂತ ಶ್ರೇಷ್ಠನಾದ ಸಾರಥಿ, ಇಂದ್ರನಿಗೆ ಮಾತಲಿಯಂತೆ ಇದ್ದಾನೆ.

ಯಥಾ ರಥಂ ಹಯೈರ್ಯುಕ್ತಂ ಸಂಗೃಹ್ಣಾತಿ ಸ ಮಾತಲಿಃ ।
ಶಲ್ಯಸ್ತಥಾ ತವಾದ್ಯಾಯಂ ಸಂಯಂತಾ ರಥವಾಜಿನಾಮ್ ॥೨॥

ಮಾತಲಿಯು ಹೇಗೆ ರಥವನ್ನೂ ಕುದುರೆಗಳನ್ನೂ ನಿಯಂತ್ರಿಸುತ್ತಾನೋ ಹಾಗೇ ಶಲ್ಯನೂ ನಿನಗೆ ರಥವನ್ನೂ ಕುದುರೆಗಳನ್ನೂ ನಿಯಂತ್ರಿಸುತ್ತಾನೆ.

ಯೋಧೇ ತ್ವಯಿ ರಥಸ್ಥೇ ಚ ಮದ್ರರಾಜೇ ಚ ಸಾರಥೌ ।
ರಥಶ್ರೇಷ್ಠೋ ಧ್ರುವಂ ಸಂಖ್ಯೇ ಪಾರ್ಥಾನಭಿಭವಿಷ್ಯತಿ ॥೩॥

ಯೋಧನಾಗಿ ನೀನು ರಥದಲ್ಲಿದ್ದರೆ, ಸಾರಥಿಯಾಗಿ ಶಲ್ಯನೂ ಇದ್ದರೆ ಶ್ರೇಷ್ಠವಾದ ಈ ರಥ ನಿಶ್ಚಯವಾಗಿ ಯುದ್ಧದಲ್ಲಿ ಪಾಂಡವರನ್ನು ಪರಾಭವ ಗೊಳಿಸುತ್ತದೆ.

ಸಂಜಯಃ

ತತೋ ದುರ್ಯೋಧನೋ ಭೂಯೋ ಮದ್ರರಾಜಂ ತರಸ್ವಿನಮ್ ।
ಉವಾಚ ರಾಜನ್ ಸಂಗ್ರಾಮೇಽಧ್ಯುಷಿತೇ ಪರ್ಯುಪಸ್ಥಿತೇ ॥೪॥

ಸಂಜಯ ನುಡಿದ— ರಾಜನೆ, ಬಳಿಕ ಮನಸ್ಸಿನಲ್ಲಿ ಸಂಕಲ್ಪಿಸಿದ್ದ ಯುದ್ಧ ಪ್ರತ್ಯಕ್ಷವಾಗಿ ಸನ್ನಿಹಿತವಾದಾಗ ದುರ್ಯೋಧನನು ಶಲ್ಯನಿಗೆ ಪುನಃ ಹೇಳಿದ.

ಕರ್ಣಸ್ಯ ಯಚ್ಛ ಸಂಗ್ರಾಮೇ ಮದ್ರರಾಜ ಹಯೋತ್ತಮಾನ್ ।
ತ್ವಯಾಽಭಿಗುಪ್ತೋ ರಾಧೇಯೋ ವಿಜೇಷ್ಯತಿ ಧನಂಜಯಮ್ ॥೫॥

ಮದ್ರರಾಜ, ಯುದ್ಧದಲ್ಲಿ ಕರ್ಣನ ಕುದುರೆಗಳನ್ನು ನಿಯಂತ್ರಿಸು. ನೀನು ಅವನನ್ನು ಕಾಪಾಡಿದರೆ ಅವನು ಅರ್ಜುನನನ್ನು ಗೆಲ್ಲುತ್ತಾನೆ.

ಇತ್ಯುಕ್ತೋ ರಥಮಾಸ್ಥಾಯ ತಥೇತಿ ಪ್ರಾಹ ಭಾರತ ।
ಶಲ್ಯೇಽಭ್ಯುಪಗತೇ ಕರ್ಣಃ ಸಾರಥಿಂ ಸುಮನಾಽಬ್ರವೀತ್ ॥೬॥
ತ್ವಂ ಸೂತ ಸ್ಯಂದನಂ ಮಹ್ಯಂ ಕಲ್ಪಯೇತ್ಯಸಕೃತ್ ತ್ವರನ್ ॥೭॥

ದುರ್ಯೋಧನ ಹೀಗೆ ಹೇಳಿದಾಗ ಶಲ್ಯ 'ಹಾಗೇ ಆಗಲಿ' ಎನ್ನುತ್ತ ರಥವನ್ನು ತನ್ನ ವಶಕ್ಕೆ ತೆಗೆದುಕೊಂಡ. ರಥವನ್ನು ಶಲ್ಯನು ನಿಯಂತ್ರಣಕ್ಕೆ ತೆಗೆದುಕೊಂಡಾಗ ಕರ್ಣನು ಸಂತುಷ್ಟನಾಗಿ ಸಾರಥಿಗೆ, 'ಸಾರಥಿಯೆ, ನನಗೆ ರಥವನ್ನು ಸಜ್ಜುಗೊಳಿಸು, ಸಜ್ಜುಗೊಳಿಸು' ಎಂದು ತ್ವರೆಯಿಂದ ಅನೇಕಬಾರಿ ನುಡಿದ.

ತತೋ ಜೈತ್ರಂ ರಥವರಂ ಗಂಧರ್ವನಗರೋಪಮಮ್ ।
ವಿಧಿವತ್ಕಲ್ಪಿತಂ ಭದ್ರಂ ಜಯೇತ್ಯುಕ್ತ್ವಾ ನ್ಯವೇದಯತ್ ॥೮॥

ಆಗ ವಿಧ್ಯುಕ್ತವಾಗಿ ಗಂಧರ್ವನಗರದಂತೆ ಸುಂದರವಾದ ಜಯ ತಂದುಕೊಡಬಲ್ಲ ರಥವನ್ನು ಸಜ್ಜುಗೊಳಿಸಿ ಸಾರಥಿಯು 'ಜಯಶಾಲಿಯಾಗೆ'ನ್ನುತ್ತ ನಿವೇದಿಸಿದ.

ತಂ ರಥಂ ರಥಿನಾಂ ಶ್ರೇಷ್ಠಃ ಕರ್ಣೋಽಭ್ಯರ್ಚ್ಯ ಯಥಾವಿಧಿ ।
ಸಂಪಾದಿತಂ ಬ್ರಹ್ಮವಿದಾ ಪೂರ್ವಮೇವ ಪುರೋಧಸಾ ॥೯॥

ಕೃತ್ವಾ ಪ್ರದಕ್ಷಿಣಂ ಯತ್ನಾದುಪಸ್ಥಾಯ ಚ ಭಾಸ್ಕರಮ್ ।
ಸಮೀಪಸ್ಥಂ ಮದ್ರರಾಜಮಾರೋಹ ತ್ವಮಥಾಬ್ರವೀತ್ ॥೧೦॥

ರಥಿಕರಲ್ಲಿ ಶ್ರೇಷ್ಠನಾದ ಕರ್ಣ ಮೊದಲೇ ಪುರೋಹಿತನಿಂದ ವಿಧ್ಯುಕ್ತವಾಗಿ ಪೂಜಿಸಿ ಸಿದ್ಧಪಡಿಸಿದ್ದ ಆ ರಥಕ್ಕೆ ಪ್ರದಕ್ಷಿಣೆ ಮಾಡಿ ಸೂರ್ಯೋಪಸ್ಥಾನವನ್ನೂ ಮಾಡಿ ಸಮೀಪದಲ್ಲಿ ನಿಂತಿದ್ದ ಶಲ್ಯನಿಗೆ 'ರಥವನ್ನೇರು' ಎಂದ.

ತತಃ ಕರ್ಣಸ್ಯ ದುರ್ಧರ್ಷಂ ಸ್ಯಂದನಪ್ರವರಂ ಮಹತ್ ।
ಆರುರೋಹ ಮಹಾತೇಜಾಃ ಶಲ್ಯಃ ಸಿಂಹ ಇವಾಚಲಮ್ ॥೧೧॥

ಶತ್ರುಗಳಿಗೆ ಮುರಿಯಲಾಗದ ಆ ಮಹಾರಥವನ್ನು ಸಿಂಹವು ಬೆಟ್ಟವನ್ನೇರುವಂತೆ ಮಹಾಪರಾಕ್ರಮಿ ಶಲ್ಯ ಏರಿದ.

ತತಃ ಶಲ್ಯಾಶ್ರಿತಂ ದೃಷ್ಟ್ವಾ ಕರ್ಣಃ ಸ್ವಂ ರಥಮುತ್ತಮಮ್ ।
ಅಧ್ಯತಿಷ್ಠದ್ಯಥಾಽಂಭೋದಂ ವಿದ್ಯುತ್ವಂತಂ ದಿವಾಕರಃ ॥೧೨॥

ಶಲ್ಯನು ತನ್ನ ರಥದಲ್ಲಿ ಕುಳಿತುದನ್ನು ಕಂಡು ಕರ್ಣನು ತಾನೂ ಅದನ್ನೇರಿ ಮಿಂಚಿನಿಂದ ಕೂಡಿದ ಮೋಡವನ್ನು ಸೂರ್ಯನು ಏರುವಂತೆ ಕುಳಿತ.

ತಾವೇಕರಥಮಾರೂಢಾವಾದಿತ್ಯಾಗ್ನಿಸಮತ್ವಿಷೌ ।
ವ್ಯಭ್ರಾಜೇತಾಂ ಯಥಾ ಮೇಘಂ ಸೂರ್ಯಾಗ್ನೀ ಸಹಿತೌ ದಿವಿ ॥೧೩॥

ಶಲ್ಯ–ಕರ್ಣರು ಒಂದು ರಥದಲ್ಲಿ ಕುಳಿತಾಗ ಸೂರ್ಯ ಮತ್ತು ಅಗ್ನಿಗಳಂತೆ ಹೊಳೆಯುವ ಅವರು ಅಂತರಿಕ್ಷದಲ್ಲಿ ಮೋಡವನ್ನು ಜೊತೆಯಾಗಿ ಏರಿದ ಸೂರ್ಯ–ಅಗ್ನಿಗಳಂತೆಯೇ ಶೋಭಿಸಿದರು.

ಸಂಸ್ತೂಯಮಾನೌ ತೌ ವೀರೌ ತದಾಸ್ತಾಂ ದ್ಯುತಿಸತ್ತಮೌ ।
ಋತ್ವಿಕ್‌ಸದಸ್ಯೈರಿಂದ್ರಾಗ್ನೀ ಸ್ತೂಯಮಾನಾವಿವಾಧ್ವರೇ ॥೧೪॥

ಯಜ್ಞದಲ್ಲಿ ಋತ್ವಿಜರಿಂದಲೂ ಸದಸ್ಯರಿಂದಲೂ ಇಂದ್ರ–ಅಗ್ನಿಗಳು ಜೊತೆ

ಯಾಗಿ ಸ್ತುತಿಸಿಕೊಳ್ಳುತ್ತಾರೆ. ಹಾಗೇ ರಣದಲ್ಲಿ ಬೆಳಗುತ್ತಿದ್ದ ಕರ್ಣ–ಶಲ್ಯರು ಜೊತೆಯಾಗಿ ಸ್ತುತಿಸಿಕೊಂಡರು.

ಸ ಶಲ್ಯಸಂಗೃಹೀತಾಶ್ವೇ ರಥೇ ಕರ್ಣಃ ಸ್ಥಿತೋ ಬಭೌ ।
ಧನುರ್ವಿಷ್ಫಾರಯನ್ ಘೋರಂ ಪರಿವೇಷೀವ ಭಾಸ್ಕರಃ ॥೧೫॥

ಕುದುರೆಗಳು ಶಲ್ಯನ ನಿಯಂತ್ರಣದಲ್ಲಿದ್ದಾಗ ರಥದಲ್ಲಿ ನಿಂತ ಕರ್ಣನು ಬಿಲ್ಲಿನ ಹೆದೆಯನ್ನು ಸೆಳೆಯುತ್ತಿದ್ದರೆ ಪರಿವೇಷಗೊಂಡ ಸೂರ್ಯನಂತೆ ಕಂಡುಬಂದ.

ಆಸ್ಥಿತಃ ಸ ರಥಶ್ರೇಷ್ಠಂ ಕರ್ಣಃ ಶರಗಭಸ್ತಿಮಾನ್ ।
ಪ್ರಬಭೌ ಪುರುಷವ್ಯಾಘ್ರೋ ಮಂದರಸ್ಥ ಇವಾಂಶುಮಾನ್ ॥೧೬॥

ರಥದಲ್ಲಿ ನಿಂತ ಕರ್ಣನು ಸೂರ್ಯಕಿರಣಗಳಂತೆ ಹೊಳೆಯುವ ಬಾಣಗಳನ್ನು ಎತ್ತಿಕೊಂಡಾಗ ಮಂದರಪರ್ವತವನ್ನೇರಿದ ಬೆಳಗಿನ ಸೂರ್ಯನಂತೆ ಕಂಡುಬಂದ.

ತಂ ರಥಸ್ಥಂ ಮಹಾಬಾಹುಂ ಯುದ್ಧಾಯಾಮಿತತೇಜಸಮ್ ।
ದುರ್ಯೋಧನಸ್ತು ರಾಧೇಯಮಿದಂ ವಚನಮಬ್ರವೀತ್ ॥೧೭॥

ಯುದ್ಧಕ್ಕಾಗಿ ರಥವನ್ನೇರಿದ ಅಮಿತತೇಜನಾದ ಕರ್ಣನಿಗೆ ದುರ್ಯೋಧನ ಈ ಮಾತನ್ನು ಹೇಳಿದ.

ಅಕೃತಂ ದ್ರೋಣಭೀಷ್ಮಾಭ್ಯಾಂ ದುಷ್ಕರಂ ಕರ್ಮ ಸಂಯುಗೇ ।
ಕುರುಷ್ವಾಧಿರಥೇ ವೀರ ಮಿಷತಾಂ ಸರ್ವಧನ್ವಿನಾಮ್ ॥೧೮॥

ದ್ರೋಣ ಭೀಷ್ಮರಿಂದ ರಣದಲ್ಲಿ ಮಾಡಲಾಗದಿದ್ದ ದುಷ್ಕರಕಾರ್ಯವನ್ನು ಎಲ್ಲ ಬಿಲ್ಲಾರರೂ ನೋಡುತ್ತಿರುವಂತೆ ನೀನು ಸಾಧಿಸಬೇಕು.

ಮನೋಗತಂ ಮಮ ಹ್ಯಾಸೀದ್ ಭೀಷ್ಮದ್ರೌಣೀ ಮಹಾರಥೌ ।
ಅರ್ಜುನಂ ಭೀಮಸೇನಂ ಚ ನಿಹಂತಾರಾವಿತಿ ಧ್ರುವಮ್ ॥೧೯॥

ಮಹಾರಥರಾದ ಭೀಷ್ಮ ದ್ರೋಣರು ಅರ್ಜುನನನ್ನೂ ಭೀಮನನ್ನೂ ನಿಶ್ಚಯವಾಗಿ ಕೊಲ್ಲುವರೆಂದು ನನ್ನ ಮನೋಗತವಿತ್ತು.

ತಾಭ್ಯಾಂ ಯದಕೃತಂ ವೀರ ವೀರಕರ್ಮ ಮಹಾಮೃಧೇ ।
ತತ್ಕರ್ಮ ಕುರು ರಾಧೇಯ ವಜ್ರಪಾಣಿರಿವಾಪರಃ ॥೨೦॥

ಅವರು ಮಾಡದಿದ್ದ ವೀರಕರ್ಮವನ್ನು ನೀನು ಮಾಡಬೇಕು. ನೀನು ಇನ್ನೊಬ್ಬ ವಜ್ರಾಯುಧಧಾರಿ ಇಂದ್ರನಂತಿರುವೆ.

ಗೃಹಾಣ ಧರ್ಮರಾಜಂ ವಾ ಜಹಿ ವಾ ತ್ವಂ ಧನಂಜಯಮ್ ।
ಭೀಮಸೇನಂ ಚ ರಾಧೇಯ ಮಾದ್ರೀಪುತ್ರೌ ಯಮಾವಪಿ ॥೨೧॥

'ನೀನು ಧರ್ಮರಾಜನನ್ನು ಸೆರೆ ಹಿಡಿ ಅಥವಾ ಅರ್ಜುನ ಭೀಮಸೇನ ನಕುಲ ಸಹದೇವರನ್ನು ಕೊಲ್ಲು.

ಜಯಶ್ಚ ತೇಽಸ್ತು ಭದ್ರಂ ತೇ ಪ್ರಯಾಹಿ ಪುರುಷರ್ಷಭ ।
ಪಾಂಡುಪುತ್ರಸ್ಯ ಸೈನ್ಯಾನಿ ಕುರು ಸರ್ವಾಣಿ ಭಸ್ಮಸಾತ್ ॥೨೨॥

'ನಿನಗೆ ಜಯವಾಗಲಿ, ಶುಭವಾಗಲಿ, ಯುದ್ಧಕ್ಕೆ ಹೋಗು. ಧರ್ಮರಾಜನ ಸೈನ್ಯವನ್ನೆಲ್ಲ ಭಸ್ಮಮಾಡು.'

ತತಸ್ತೂರ್ಯಸಹಸ್ರಾಣಿ ಭೇರೀಣಾಮಯುತಾನಿ ಚ ।
ವಾದ್ಯಮಾನಾನ್ಯರೋಚಂತ ಮೇಘಶಬ್ದೋ ಯಥಾ ದಿವಿ ॥೨೩॥

ಒಡನೆ ಸಾವಿರ ರಣವಾದ್ಯಗಳು, ಹತ್ತುಸಾವಿರ ಭೇರಿಗಳು ಅಂತರಿಕ್ಷದಲ್ಲಿ ಮೋಡಗಳಂತೆ ಮೊಳಗುತ್ತ ಶೋಭಿಸಿದುವು.

ಪ್ರತಿಗೃಹ್ಯ ತು ತದ್ವಾಕ್ಯಂ ರಥಸ್ಥೋ ರಥಸತ್ತಮಃ ।
ಅಭ್ಯಭಾಷತ ರಾಧೇಯಃ ಶಲ್ಯಂ ಯುದ್ಧವಿಶಾರದಮ್ ॥೨೪॥

ದುರ್ಯೋಧನನ ಮಾತನ್ನು ಸ್ವೀಕರಿಸಿದ ರಥಸ್ಥನಾದ ರಥಿಕಶ್ರೇಷ್ಠನಾದ ಕರ್ಣ ಯುದ್ಧವಿಶಾರದನಾದ ಶಲ್ಯನಿಗೆ ಹೇಳಿದ.

ಚೋದಯಾಶ್ವಾನ್ ಮಹಾಬಾಹೋ ಯಾವದ್ಧನ್ಮಿ ಧನಂಜಯಮ್ ।
ಭೀಮಸೇನಂ ಯಮೌ ಚೋಭೌ ರಾಜಾನಂ ಚ ಯುಧಿಷ್ಠಿರಮ್ ॥೨೫॥

ಮಹಾಬಾಹುವೇ, ಕುದುರೆಗಳನ್ನು ಓಡಿಸು. ನಾನು ಅರ್ಜುನ ಭೀಮಸೇನ ನಕುಲ ಸಹದೇವರನ್ನೂ ರಾಜಾ ಯುಧಿಷ್ಠಿರನನ್ನೂ ಹೊಡೆಯುತ್ತೇನೆ.

ಅದ್ಯ ಪಶ್ಯತು ಮೇ ಶಲ್ಯ ಬಾಹುವೀರ್ಯಂ ಧನಂಜಯಃ ।
ಅಸ್ಯತಃ ಕಂಕಪತ್ರಾಣಾಂ ಸಹಸ್ರಾಣಿ ಶತಾನಿ ಚ ॥೨೬॥

ಶಲ್ಯ, ಈಗ ರಣಹದ್ದಿನ ರೆಕ್ಕೆಯುಳ್ಳ ನೂರಾರು ಸಾವಿರಾರು ಬಾಣಗಳನ್ನು ಎಸೆಯುವ ನನ್ನ ಬಾಹುಬಲವನ್ನು ಅರ್ಜುನ ನೋಡಲಿ.

ಅದ್ಯ ಕ್ಷೇಪ್ಸ್ಯಾಮ್ಯಹಂ ಶಲ್ಯ ಶರಾನ್ ಪರಮತೇಜನಾನ್ ।
ಪಾಂಡವಾನಾಂ ವಿನಾಶಾಯ ದುರ್ಯೋಧನಜಯಾಯ ಚ ॥೨೭॥

ಶಲ್ಯ, ನಾನು ಈಗ ಪಾಂಡವರ ವಿನಾಶಕ್ಕೆ, ದುರ್ಯೋಧನನ ವಿಜಯಕ್ಕೆ ಬಲು ತೀಕ್ಷ್ಣವಾದ ಬಾಣಗಳನ್ನೆಸೆಯುತ್ತೇನೆ.

ಸಂಜಯಃ

ಏತಚ್ಛ್ರುತ್ವಾ ವಚಸ್ತಸ್ಯ ಶಲ್ಯಃ ಕರ್ಣಂ ವಚೋಽಬ್ರವೀತ್ ।
ಕಥಂ ನು ತಾನ್ ಮಹಾವೀರ್ಯಾನ್ ಪಾಂಡವಾನವಮನ್ಯಸೇ ॥೨೮॥

ಸಂಜಯ ನುಡಿದ— ಕರ್ಣನ ಈ ಮಾತನ್ನು ಕೇಳಿ ಶಲ್ಯ ನುಡಿದ. ಮಹಾ ಪರಾಕ್ರಮಿಗಳಾದ ಆ ಪಾಂಡವರನ್ನು ನೀನು ಹೇಗೆ ತಾನೆ ಈರೀತಿ ಅವಮಾನಿಸುವೆ?

ಸರ್ವಾಸ್ತ್ರಜ್ಞಾನ್ ಮಹೇಷ್ವಾಸಾನ್ ಸರ್ವಾನೇವ ಮಹಾಬಲಾನ್ ।
ಅನಿವರ್ತಿನೋ ಮಹಾಭಾಗಾನಜಯ್ಯಾನ್ ಸತ್ಯವಿಕ್ರಮಾನ್ ॥೨೯॥

ಅಪಿ ಸಂಜನಯೇಯುರ್ಯೇ ಭಯಂ ಸಾಕ್ಷಾಚ್ಛತಕ್ರತೋಃ ॥೩೦॥

ಪಾಂಡವರು ಎಲ್ಲರೂ ಸರ್ವಾಸ್ತ್ರಗಳನ್ನು ಬಲ್ಲವರು. ಮಹಾಧನುರ್ಧಾರಿಗಳು, ಮಹಾಬಲಿಷ್ಠರು, ಸೋತು ಹಿಂದಿರುಗದವರು, ಮಹಾಭಾಗ್ಯಶಾಲಿಗಳು, ಅಜೇಯರು, ಅಮೋಘ ಪರಾಕ್ರಮಿಗಳು. ಸಾಕ್ಷಾತ್ ದೇವೇಂದ್ರನಿಗೂ ಕೂಡ ಭಯ ಉಂಟುಮಾಡಬಲ್ಲರು.

ಯದಾ ಶ್ರೋಷ್ಯಸಿ ನಿಘೋರ್ಷಂ ವಿಸೃಜ್ಯಂತಮಿವಾಶನೇಃ ।
ರಾಧೇಯ ಪಾರ್ಥಧನುಷಸ್ತದಾ ನೈವಂ ವದಿಷ್ಯಸಿ ॥೩೧॥

ಕರ್ಣ, ಅರ್ಜುನನ ಧನುಸ್ಸಿನ ಮೇಘಗರ್ಜನದಂಥ ಧ್ವನಿಯನ್ನು ನೀನು ಕೇಳಿದಾಗ ನೀನು ಈ ರೀತಿ ಮಾತನಾಡಲಾರೆ.

ಯದಾ ದ್ರಕ್ಷ್ಯಸಿ ಭೀಮೇನ ಕುಂಜರಾನೀಕಮಾಹವೇ ।
ವಿಶೀರ್ಣದಂತಂ ನಿಹತಂ ತದಾ ನೈವಂ ವದಿಷ್ಯಸಿ ॥೩೨॥

ರಣದಲ್ಲಿ ಗಜಸೇನೆಯನ್ನು ಭೀಮಸೇನ ಆಕ್ರಮಿಸಿ ದಂತಗಳನ್ನು ಮುರಿದುಕೊಲ್ಲುವುದನ್ನು ಕಂಡಾಗ ನೀನು ಈರೀತಿ ಮಾತನಾಡಲಾರೆ.

ಯದಾ ದ್ರಕ್ಷ್ಯಸಿ ಸಂಗ್ರಾಮೇ ಧರ್ಮಪುತ್ರಂ ಯಮೌ ತಥಾ ।
ಶಿತೈಃ ಪೃಷತ್ಕೈಃ ಕುರ್ವಾಣಾನಭ್ರಚ್ಛಾಯಾಮಿವಾಂಬರೇ ॥೩೩॥

ರಣದಲ್ಲಿ ಧರ್ಮರಾಜನೂ ನಕುಲ ಸಹದೇವರೂ ತೀಕ್ಷ್ಣವಾದ ಬಾಣಗಳಿಂದ ಅಂತರಿಕ್ಷವನ್ನು ಮೋಡಮುಸುಕಿದಾಕಾಶದಂತೆ ಮಾಡುವುದನ್ನು ಕಂಡಾಗ ನೀನು ಈ ರೀತಿ ಮಾತನಾಡಲಾರೆ.

ಅಸ್ಯತಃ ಕ್ಷಿಣ್ವತಶ್ಚಾರೀನ್ ಲಘುಹಸ್ತಾನ್ ದುರಾಸದಾನ್ ।
ಪಾರ್ಥಿವಾನಪಿ ಚಾನ್ಯಾಂಸ್ತ್ವಂ ತದಾ ನೈವಂ ವದಿಷ್ಯಸಿ ॥೩೪॥

ಬೇರೆ ರಾಜರೂ ಹಸ್ತವೇಗ ಉಳ್ಳವರು ಶತ್ರುಗಳಿಗೆ ಮಣಿಯದವರು ಶತ್ರುಗಳನ್ನು ಓಡಿಸುತ್ತಾರೆ ನಾಶಮಾಡುತ್ತಾರೆ. ಅದನ್ನು ನೋಡಿದಾಗ ನೀನು ಈರೀತಿ ಮಾತನಾಡಲಾರೆ.

ಸಂಜಯಃ

ಅನಾದೃತ್ಯ ತು ತದ್ವಾಕ್ಯಂ ಮದ್ರರಾಜೇನ ಭಾಷಿತಮ್ ।
ದ್ರಕ್ಷ್ಯಸ್ಯದ್ಯೇತ್ಯವೋಚತ್ ತಂ ಶಲ್ಯಂ ಕರ್ಣೋ ಜನೇಶ್ವರ ॥೩೫॥

ಸಂಜಯ ನುಡಿದ— ರಾಜನೆ, ಶಲ್ಯನು ಆಡಿದ ಈ ಮಾತನ್ನು ಕಡೆಗಣಿಸಿ ಕರ್ಣನು 'ನೀನೇ ನೋಡುವಿ' ಎಂದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಶಲ್ಯಸಂವಾದೇ ಸಪ್ತತ್ರಿಂಶೋಧ್ಯಾಯಃ ॥೩೭॥

ಮೂವತ್ತೆಂಟನೆಯ ಅಧ್ಯಾಯ

ಕರ್ಣ ಯುದ್ಧಕ್ಕೆ ಹೊರಟಾಗ ಅಪಶಕುನಗಳು. ಅರ್ಜುನನಿಗೆ ತಾನು ಭಯಪಡಲಾರೆ ಎನ್ನುತ್ತಾನೆ ಕರ್ಣ. ಶಲ್ಯ ಅರ್ಜುನನನ್ನೇ ಹೊಗಳುತ್ತಾನೆ.

ಸಂಜಯಃ

ದೃಷ್ಟ್ವಾ ಕರ್ಣಂ ಮಹಾವೀರ್ಯಂ ಯುಯುತ್ಸುಂ ಸಮವಸ್ಥಿತಮ್ ।
ಚುಕ್ರುಶುಃ ಕುರವಃ ಸರ್ವೇ ಹೃಷ್ಟರೂಪಾಃ ಸಮಂತತಃ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಮಹಾಪರಾಕ್ರಮಿಯಾದ ಕರ್ಣನು ಯುದ್ಧಕ್ಕೆ ಸನ್ನದ್ಧನಾಗಿ ಬಂದುದನ್ನು ಕಂಡು ಕೌರವರೆಲ್ಲರೂ ಉತ್ಸಾಹಗೊಂಡು ಎಲ್ಲೆಡೆ ಗರ್ಜನೆ ಮಾಡಿದರು.

ತತೋ ದುಂದುಭಿನಿರ್ಘೋಷೈರ್ಭೇರೀಣಾಂ ನಿನದೇನ ಚ ।
ಬಾಣಶಬ್ದೈಶ್ಚ ವಿವಿಧೈರ್ಗರ್ಜಿತೈಶ್ಚ ತರಸ್ವಿನಾಮ್ ॥೨॥
ನಿರ್ಯಯುಸ್ತಾವಕಾಃ ಸರ್ವೇ ಮೃತ್ಯುಂ ಕೃತ್ವಾ ನಿವರ್ತನಮ್ ॥೩॥

ದುಂದುಭಿಘೋಷ ಭೇರಿನಿನಾದ ಬಾಣಶಬ್ದ ಆನೆ ಕುದುರೆಗಳ ನಾನಾ ಬಗೆಯ ಸಿಂಹನಾದಗಳೊಂದಿಗೆ ನಿನ್ನ ಸೈನಿಕರೆಲ್ಲರೂ ಮರಣವನ್ನೂ ಲೆಕ್ಕಿಸದೆ ಶಿಬಿರಗಳಿಂದ ಹೊರಗೆ ನಡೆದರು.

ಪ್ರಯಾತೇ ತು ತತಃ ಕರ್ಣೇ ಯೋಧೇಷು ವಿವಿಧೇಷು ಚ ।
ಚಚಾಲ ಚ ಮಹೀ ಸರ್ವಾ ರರಾಸ ಚ ಸುವಿಸ್ವರಮ್ ॥೪॥
ನಿಃಸರಂತೋ ವ್ಯದೃಶ್ಯಂತ ಸೂರ್ಯಾತ್ ತಪ್ತಮಹಾಗ್ರಹಾಃ ॥೫॥

ಕರ್ಣನು ಹೊರಟಾಗ ರಥಿಕರು ಅಶ್ವಾರೋಹಿಗಳು ಮುಂತಾದ ವಿವಿಧ ಯೋಧಸಮೂಹಗಳೂ ರಣರಂಗದಲ್ಲಿ ಬಂದು ಕೂಡಿದಾಗ ಇಡೀ ಭೂಮಿ ನಡುಗಿತು. ಅಪಸ್ವರ ಧ್ವನಿ ಉಂಟುಮಾಡಿತು. ಸೂರ್ಯಮಂಡಲದಿಂದ ಉರಿಯುವ ಮಹಾಗ್ರಹಗಳು ಹೊರಟುಬಂದುವು.

ಉಲ್ಕಾಪಾತಾಶ್ಚ ಸಂಜಜ್ಞುರ್ದಿಗ್ದಾಹಾಶ್ಚೈವ ದಾರುಣಾಃ ।
ತಥಾಽಶನ್ಯಶ್ಚ ಸಂಪೇತುರ್ವವುರ್ವಾತಾಶ್ಚ ಭೈರವಾಃ ॥೬॥

ಉಲ್ಕಾಪಾತಗಳೂ ದಾರುಣವಾದ ದಿಗ್‌ದಾಹಗಳೂ ಸಿಡಿಲಿನ ಆಘಾತಗಳೂ ಭೀಕರ ಬಿರುಗಾಳಿಗಳೂ ಉಂಟಾದುವು.

ಮೃಗಪಕ್ಷಿಗಣಾಶ್ಚೈವ ಪೃತನಾಂ ಬಹುಶಸ್ತವ ।
ಅಪಸವ್ಯಂ ತದಾ ಚಕ್ರುರ್ವೇದಯಂತೋ ಮಹಾಭಯಮ್ ॥೭॥

ನಿನ್ನ ಸೈನ್ಯಕ್ಕೆ ಬಹುಸಂಖ್ಯೆಯಲ್ಲಿ ಮೃಗ–ಪಕ್ಷಿಗಳು ಅಪ್ರದಕ್ಷಿಣವಾಗಿ ಸಂಚರಿಸಿ ಮಹಾ ಅನಿಷ್ಟವನ್ನು ಸೂಚಿಸಿದುವು.

ಪ್ರಸ್ಥಿತಸ್ಯ ಚ ಕರ್ಣಸ್ಯ ನಿಪೇತುಸ್ತುರಗಾ ಭುವಿ ।
ಅಸ್ಥಿವರ್ಷಂ ಚ ಪತಿತಮಂತರಿಕ್ಷಾದ್ ಭಯಾನಕಮ್ ॥೮॥

ಕರ್ಣನು ಹೊರಡುತ್ತಿದ್ದಂತೆ ಅವನ ಕುದುರೆಗಳು ನೆಲದ ಮೇಲೆ ಮುಗ್ಗರಿಸಿದುವು. ಅಂತರಿಕ್ಷದಿಂದ ಭಯಾನಕವಾದ ಮೂಳೆಗಳ ಮಳೆ ಸುರಿಯಿತು.

ಜಜ್ವಲುಶ್ಚೈವ ಶಸ್ತ್ರಾಣಿ ಧ್ವಜಾಶ್ಚೈವ ಚಕಂಪಿರೇ ।
ಅಶ್ರೂಣಿ ಚ ವ್ಯಮುಂಚಂತ ವಾಹನಾನಿ ವಿಶಾಂಪತೇ ॥೯॥

ಆಯುಧಗಳು ಉರಿಯತೊಡಗಿದುವು. ಧ್ವಜಗಳು ಕಂಪಿಸಿದುವು. ಆನೆ ಕುದುರೆ ವಾಹನಗಳು ಕಣ್ಣೀರು ಸುರಿಸಿದುವು.

ಏತೇ ಚಾನ್ಯೇ ಚ ಬಹವ ಉತ್ಪಾತಾಸ್ತತ್ರ ಮಾರಿಷ ।
ಸಮುತ್ಪೇತುರ್ವಿನಾಶಾಯ ಕೌರವಾಣಾಂ ಸುದಾರುಣಾಃ ॥೧೦॥

ಇನ್ನೂ ಬೇರೆ ಅನೇಕ ಭೀಕರ ಉತ್ಪಾತಗಳು ತಲೆದೋರಿದುವು. ಕೌರವರ ವಿನಾಶವನ್ನು ಸೂಚಿಸಿದುವು.

ನ ಚ ತಾನ್ ಗಣಯಾಮಾಸುಃ ಸರ್ವೇ ದೈವೇನ ಮೋಹಿತಾಃ ।
ಪ್ರಸ್ಥಿತಂ ಸೂತಪುತ್ರಂ ಚ ಜಯೇತ್ಯೂಚುರ್ನರಾಧಿಪಾಃ ॥೧೧॥

ದೈವದಿಂದ ವಿಮೋಹಗೊಂಡಿದ್ದ ಕೌರವರಿಗೆ ಯಾರಿಗೂ ಈ ಅಪಶಕುನಗಳು ಗಮನಕ್ಕೇ ಬರಲಿಲ್ಲ. ಎಲ್ಲ ರಾಜರು ಯುದ್ಧಕ್ಕೆ ಹೊರಟ ಕರ್ಣನಿಗೆ ಜಯಕಾರವನ್ನೇ ಮಾಡಿದರು.

ಶಲ್ಯೇನ ಸಹಿತಂ ದೃಷ್ಟ್ವಾ ಕರ್ಣಮಾಹವಶೋಭಿನಮ್ ।
ನಿರ್ಜಿತಾನ್ ಪಾಂಡವಾಂಶ್ಚೈವ ಮೇನಿರೇ ತತ್ರ ಕೌರವಾಃ ॥೧೨॥

ಯುದ್ಧದಲ್ಲಿ ಶೋಭಿಸುವ ಕರ್ಣನು ಶಲ್ಯನಿಂದೊಡಗೂಡಿದ್ದನ್ನು ಕಂಡು ಪಾಂಡವರು ಪರಾಭವಗೊಳ್ಳುವುದು ಖಚಿತ ಎಂದುಕೊಂಡರು.

ತತೋ ರಥಸ್ಥಃ ಪರವೀರಹಂತಾ
ಭೀಷ್ಮದ್ರೋಣಾವಸುವೀರ್ಯೌ ನಿರೀಕ್ಷ್ಯ ।
ಸಮುಜ್ಜ್ವಲನ್ ಭಾಸ್ಕರಪಾವಕಾಭೋ
ವೈಕರ್ತನೋಽಸೌ ರಥಕುಂಜರೋ ವೃಷಾ ॥೧೩॥

ಶತ್ರುವೀರನಾಶಕನಾದ ಕರ್ಣನು ರಣರಂಗದಲ್ಲಿ ಭೀಷ್ಮ-ದ್ರೋಣ ಮುಂತಾದವರು ಶತ್ರುನಾಶದಲ್ಲಿ ಅಸಮರ್ಥರಾಗಿ ತಾವೇ ಬಿದ್ದಿರುವುದನ್ನು ಕಂಡು ಸೂರ್ಯಾಗ್ನಿಸಮತೇಜಸ್ವಿಯಾದ ಮಹಾರಥನಾದ ಕರ್ಣನು ರಥದಲ್ಲಿ ಕೋಪದಿಂದ ಜ್ವಲಿಸಿದ.

ಸ ಶಲ್ಯಮಾಭಾಷ್ಯ ಜಗಾದ ವಾಕ್ಯಂ
ಪಾರ್ಥಸ್ಯ ದೃಷ್ಟ್ವಾಽಪ್ರತಿಮಂ ಚ ಕರ್ಮ ।
ಮಾನೇನ ದರ್ಪೇಣ ವಿದಹ್ಯಮಾನಃ
ಕ್ರೋಧೇನ ದೀಪ್ಯನ್ನಿವ ನಿಃಶ್ವಸಂಶ್ಚ ॥೧೪॥

ಕರ್ಣನು ರಣದಲ್ಲಿ ಅರ್ಜುನನ ಅಪ್ರತಿಮ ಸಾಹಸವನ್ನು ಕಂಡು ಅಭಿಮಾನ ದರ್ಪಗಳಿಂದ ಬೇಯುತ್ತ ಕೋಪದಿಂದ ಉರಿಯುವಂತೆ ನಿಟ್ಟುಸಿರುಬಿಡುತ್ತ ಶಲ್ಯನನ್ನು ಕರೆದು ನುಡಿದ.

ನಾಹಂ ಮಹೇಂದ್ರಾದಪಿ ವಜ್ರಪಾಣೇಃ
ಕ್ರುದ್ಧಾದ್ ಬಿಭೇಮ್ಯಾತ್ತಧನೂ ರಥಸ್ಥಃ ।
ದೃಷ್ಟ್ವಾಽಪಿ ಭೀಷ್ಮಪ್ರಮುಖಾನ್ ಶಯಾನಾ-
ನ್ನತ್ವೇವ ಮಾಂ ಸಾ ಸ್ಥಿರತಾ ಜಹಾತಿ ॥೧೫॥

ನಾನು ಬಿಲ್ಲು ಹಿಡಿದು ರಥದಲ್ಲಿ ನಿಂತೆನೆಂದರೆ ವಜ್ರಪಾಣಿಯಾದ

ಮಹೇಂದ್ರನಿಗೂ ಹೆದರುವುದಿಲ್ಲ. ಭೀಷ್ಮ ಮುಂತಾದವರು ನೆಲದಲ್ಲಿ ಒರಗಿದ್ದನ್ನು ನಾನು ಕಾಣುತ್ತಿದ್ದರೂ ನನ್ನಲ್ಲಿ ಧೈರ್ಯ ಸ್ಥಿರತೆ ಹೊರಟು ಹೋಗುವುದಿಲ್ಲ.

ಮಹೇಂದ್ರವಿಷ್ಣುಪ್ರತಿಮಾವನಿಂದಿತೌ
ರಥಾಶ್ವನಾಗಪ್ರವರಪ್ರಮಾಥಿನೌ।
ಅವಧ್ಯಕಲ್ಪೌ ನಿಹತೌ ಯದಾ ಪರೈ-
ಸ್ತಥಾಪಿ ಮೇ ನಾಸ್ತಿ ರಣೇऽದ್ಯ ಸಾಧ್ವಸಮ್ ॥೧೬॥

ಭೀಷ್ಮ–ದ್ರೋಣರು ಇಂದ್ರ–ವಿಷ್ಣುಗಳಂಥ ಪರಾಕ್ರಮಿಗಳು, ಶ್ರೇಷ್ಠ ರಥ ಅಶ್ವ ಗಜಗಳನ್ನೂ ಪುಡಿ ಮಾಡಬಲ್ಲವರು. ಅವಧ್ಯರಂತಿದ್ದವರು. ಯಾವುದೇ ದೋಷವಿಲ್ಲದಿದ್ದವರು. ಅವರೂ ಕೂಡ ಶತ್ರುಗಳಿಂದ ಹತರಾದರು. ಆದರೂ ನನಗೆ ರಣರಂಗದಲ್ಲಿ ಭಯವಿಲ್ಲ.

ಸಮೀಕ್ಷ್ಯ ಸಂಖೇऽತಿಬಲಾನ್ ನರಾಧಿಪಾನ್
ನರಾಶ್ವಮಾತಂಗರಥಾನ್ ಪರೈರ್ಹತಾನ್।
ಕಥಂ ನ ಸರ್ವಾನಹಿತಾನ್ ರಣೇऽವಧೀತ್
ಮಹಾಸ್ತ್ರವಿದ್ ಬ್ರಾಹ್ಮಣಪುಂಗವೋ ಗುರುಃ ॥೧೭॥

ರಣದಲ್ಲಿ ಪದಾತಿ ಅಶ್ವ ಗಜ ರಥ ಸೈನ್ಯ ಸಮೇತರಾದ ಅತಿಬಲಿಷ್ಠರಾದ ರಾಜರು ಶತ್ರುಗಳಿಂದ ಹತರಾಗಿ ಬಿದ್ದುದನ್ನು ಕಂಡೂ ಕೂಡ ಮಹಾ ಅಸ್ತ್ರಜ್ಞಾನಿಯಾದ ಬ್ರಾಹ್ಮಣಶ್ರೇಷ್ಠನಾದ ಗುರು ದ್ರೋಣರು ಏಕೆ ರಣದಲ್ಲಿ ಎಲ್ಲ ಶತ್ರುಗಳನ್ನು ಕೊಲ್ಲಲಿಲ್ಲ?

ಸ ಸಂಸ್ಮರನ್ ದ್ರೋಣಮಹಂ ಮಹಾಹವೇ
ಬ್ರವೀಮಿ ಸತ್ಯಂ ಕುರವೋ ನಿಬೋಧತ।
ನ ವೋ ಮದನ್ಯಃ ಪ್ರಸಹೇದ್ ರಣೇऽರ್ಜುನಂ
ಸಮಾಗತಂ ಮೃತ್ಯುಮಿವೋಗ್ರರೂಪಿಣಮ್ ॥೧೮॥

ಮಹಾಯುದ್ಧದಲ್ಲಿ ಮಡಿದ ದ್ರೋಣರನ್ನು ನೆನೆದು, ಕೌರವರೆ, ಕೇಳಿರಿ,

ನಿಜವನ್ನೇ ಹೇಳುತ್ತೇನೆ, ರಣದಲ್ಲಿ ಮೃತ್ಯುವಿನಂತೆ ಉಗ್ರರೂಪಿಯಾಗಿ ಬರುವ ಅರ್ಜುನನನ್ನು ನನ್ನ ಹೊರತು ಇನ್ನೊಬ್ಬನು ಇದಿರಿಸಲಾರ.

ಶಿಕ್ಷಾ ಪ್ರಸಾದಶ್ಚ ಬಲಂ ಧೃತಿಶ್ಚ
ದ್ರೋಣೇ ಮಹಾಸ್ತ್ರಾಣಿ ಚ ಸಂನತಿಶ್ಚ ।
ಸ ಚೇದಗಾನ್ಮೃತ್ಯುವಶಂ ಮಹಾತ್ಮಾ
ಸರ್ವಾನನ್ಯಾನಾತುರಾನದ್ಯ ಮನ್ಯೇ ॥೧೯॥

ಶಿಕ್ಷಣ ಪ್ರಸನ್ನತೆ ಬಲ ಧೈರ್ಯ ಮಹಾಸ್ತ್ರಗಳು ವಿನಯ ಈ ಎಲ್ಲ ಗುಣಗಳು ದ್ರೋಣರಲ್ಲಿದ್ದುವು. ಅಂಥ ಮಹಾತ್ಮದ್ರೋಣರೂ ಮೃತ್ಯುವಶರಾದರೆಂದ ಮೇಲೆ ಬೇರೆ ಎಲ್ಲರೂ ಸಾವಿಗೆ ಸನಿಹದಲ್ಲಿರುವವರೇ ಎಂದು ಭಾವಿಸುತ್ತೇನೆ.

ನೇಹ ಧ್ರುವಂ ಕಿಂಚಿದಪಿ ಪ್ರಚಿಂತಯನ್
ವದಾಮಿ ಲೋಕೇ ಕರ್ಮಣೋ ದೈವಯೋಗಾತ್ ।
ಸೂರ್ಯೋದಯೇ ಕೋ ಹಿ ವಿಮುಕ್ತಸಂಶಯೋ
ಭಾವಂ ಕುರ್ವೀತಾದ್ಯ ಗುರೌ ನಿಪಾತಿತೇ ॥೨೦॥

ಪೌರುಷದ ಮೇಲೆ ದೈವದ ನಿಯಂತ್ರಣವಿದ್ದೇ ಇರುವುದರಿಂದ ಲೋಕದಲ್ಲಿ ಪೌರುಷ ಯಾವುದೂ ಸ್ಥಿರವಲ್ಲ. ಇದನ್ನು ಚೆನ್ನಾಗಿ ಆಲೋಚಿಸಿ ಹೇಳುತ್ತಿದ್ದೇನೆ. ಇದೀಗ ಉಷಃಕಾಲ. ಮುಂದೆ ಬರಲಿರುವ ಸೂರ್ಯೋದಯ ಕಾಲದಲ್ಲಿ ನಾನಿರುತ್ತೇನೆ ಎಂದು ನಿಃಸಂದಿಗ್ಧವಾಗಿ ಯಾವನು ತಾನೆ ಹೇಳಬಲ್ಲ? ಏಕೆಂದರೆ ಗುರುದ್ರೋಣರು ಹತರಾಗಿ ಬಿದ್ದಿದ್ದಾರೆ!

ನ ನೂನಮಸ್ತ್ರಾಣಿ ಬಲಂ ಪರಾಕ್ರಮಃ
ಕ್ರಿಯಾಃ ಸುನೀತಂ ಪರಮಾಯುಧಾನಿ ವಾ ।
ಅಲಂ ಮನುಷ್ಯಸ್ಯ ಸುಖಾಯ ವರ್ತಿತುಂ
ತಥಾ ಹಿ ಯುದ್ಧೇ ನಿಹತಃ ಪರೈರ್ಗುರುಃ ॥೨೧॥

ಅಸ್ತ್ರಗಳು ಬಲ ಪರಾಕ್ರಮ ಕ್ರಿಯಾಶೀಲತೆ ಸರಿಯಾದ ನೀತಿ ಉತ್ತಮ

ಆಯುಧಗಳು ಇವು ಯಾವುವೂ ಮನುಷ್ಯನಿಗೆ ಸುಖವಾಗಿ ಇರಲು ಸಾಲವು. ಏಕೆಂದರೆ ಇವೆಲ್ಲ ಇದ್ದೂ ಕೂಡ ಗುರುದ್ರೋಣರು ಯುದ್ಧದಲ್ಲಿ ಶತ್ರುಗಳಿಂದ ಹತರಾದರು.

ಹುತಾಶನಾದಿತ್ಯಸಮಾನತೇಜಸಂ
ಪರಾಕ್ರಮೇ ವಿಷ್ಣುಪುರಂದರೋಪಮಮ್ ।
ನಯೇ ಬೃಹಸ್ಪತ್ಯುಶನಃಸಮಂ ಸದಾ
ನ ಚೈನಮಸ್ತ್ರಂ ತದುಪಾಸ್ತ ದುಃಸಹಮ್ ॥೨೨॥

ಅಗ್ನಿ ಸೂರ್ಯರ ಸಮಾನತೇಜಸ್ವಿಗಳು, ಪರಾಕ್ರಮದಲ್ಲಿ ವಿಷ್ಣು ಇಂದ್ರ ಸದೃಶರು. ನೀತಿಯಲ್ಲಿಯೂ ಸದಾ ಬೃಹಸ್ಪತಿಗೆ ಶುಕ್ರಾಚಾರ್ಯನಿಗೆ ಸಮಾನರು ಗುರುದ್ರೋಣರಾಗಿದ್ದರು. ಆದರೂ ಶತ್ರುಗಳಿಗೆ ಇದಿರಿಸಲಾಗದ ಅಸ್ತ್ರವೂ ಅವರನ್ನು ಕೊನೆಗಾಲದಲ್ಲಿ ಕಾಪಾಡಲಿಲ್ಲ.

ಪರಾಕೃಷ್ಟೇ ರುದಿತಸ್ತ್ರೀಕುಮಾರೇ
ಪರಾಭೂತೇ ಪೌರುಷೇ ಧಾರ್ತರಾಷ್ಟ್ರೇ ।
ಮಯಾ ಕೃತ್ಯಮಿತಿ ಜಾನಾಮಿ ಶಲ್ಯ
ಪ್ರಯಾಹಿ ತಸ್ಮಾದ್ ದ್ವಿಷತಾಮನೀಕಮ್ ॥೨೩॥

ರಣದಲ್ಲಿ ಶತ್ರುಗಳಿಂದ ವೀರಪುತ್ರರು ಹತರಾದಾಗ ಅವರ ತಾಯಂದಿರು ಕಣ್ಣೀರು ಸುರಿಸಿದರು. ಕೌರವರ ಪೌರುಷ ಸೋತಿತು. ಈಗ ನಾನು ಪೌರುಷ ತೋರಬೇಕು ಎಂದು, ಶಲ್ಯ, ನಾನು ತಿಳಿದಿದ್ದೇನೆ. ಅದರಿಂದ ಶತ್ರುಸೈನ್ಯದ ಕಡೆಗೆ ಹೋಗು.

ಸ ಯತ್ರ ರಾಜಾ ಪಾಂಡವಃ ಸತ್ಯಸಂಧೋ
ವ್ಯವಸ್ಥಿತೋ ಭೀಮಸೇನಾರ್ಜುನೌ ಚ ।
ಸ ವಾಸುದೇವಃ ಸಾತ್ಯಕಿಃ ಸೃಂಜಯಾಶ್ಚ
ಯಮೌ ಚ ಕಸ್ತಾನ್ ವಿಷಹೇನ್ಮದನ್ಯಃ ॥೨೪॥

ಸತ್ಯಸಂಧನಾದ ರಾಜಾ ಯುಧಿಷ್ಠಿರ, ಭೀಮಸೇನ ಅರ್ಜುನ ಕೃಷ್ಣ ಸಾತ್ಯಕಿ

ಧೃಷ್ಟದ್ಯುಮ್ನ ಮುಂತಾದ ಸೃಂಜಯರು ಮತ್ತು ನಕುಲ-ಸಹದೇವರು ಇರುವಲ್ಲಿಗೆ ಹೋಗು, ನನ್ನ ಹೊರತು ಇನ್ನಾವನು ಅವರನ್ನು ಇದಿರಿಸಬಲ್ಲ?

ತಸ್ಮಾತ್ ಕ್ಷಿಪ್ರಂ ಮದ್ರಪತೇ ಪ್ರಯಾಹಿ
ರಣೇ ಪಾಂಚಾಲಾನ್ ಪಾಂಡವಾನ್ ಸೃಂಜಯಾಂಶ್ಚ ।
ತಾನ್ ವಾ ಹನಿಷ್ಯಾಮಿ ಸಮೇತ್ಯ ಸಂಖೇ
ಯಾಸ್ಯಾಮಿ ವಾ ದ್ರೋಣಮುಖೋ ಯಮಾಯ ॥೨೫॥

ಅದರಿಂದ, ಶಲ್ಯ, ಪಾಂಚಾಲರ ಪಾಂಡವರ ಸೃಂಜಯರ ಇದಿರಾಗಿ ಬೇಗನೆ ಹೋಗು, ನಾನು ಅವರನ್ನು ರಣದಲ್ಲಿ ಇದಿರಿಸಿ ಕೊಲ್ಲುವೆನು ಅಥವಾ ದ್ರೋಣರನ್ನು ಮುಂದೆ ಮಾಡಿಕೊಂಡು ಯಮನ ಬಳಿಗೆ ಹೋಗುವೆನು.

ನ ತ್ವೇವಾಹಂ ನ ಗಮಿಷ್ಯಾಮಿ ಮಧ್ಯೇ
ತೇಷಾಂ ಶೂರಾಣಾಮಿತಿ ಶಲ್ಯಾದ್ಯ ವಿದ್ಧಿ ।
ಮಿತ್ರದ್ರೋಹೋ ಮರ್ಷಣೀಯೋ ನ ಮೇಽಯಂ
ತ್ಯಕ್ತ್ವಾ ಪ್ರಾಣಾನನುಯಾಸ್ಯಾಮಿ ದ್ರೋಣಮ್ ॥೨೬॥

ಶಲ್ಯ, ನಾನೀಗ ಆ ಶೂರರ ಮಧ್ಯಕ್ಕೆ ಹೋಗದಿರಲಾರೆ ಎಂದು ತಿಳಿ. ಹೋಗದಿದ್ದರೆ ಅದು ಮಿತ್ರದ್ರೋಹವಾಗುವುದು. ಅದನ್ನು ನಾನು ಸಹಿಸುವುದಾಗದು. ಅಸುತೊರೆದು ದ್ರೋಣರನ್ನು ಹಿಂಬಾಲಿಸಿಯಾದರೂ ಹೋದೆನು.

ಪ್ರಾಜ್ಞಸ್ಯ ಮೂಢಸ್ಯ ಚ ಜೀವಿತಾಂತೇ
ನಾಸ್ತಿ ಪ್ರಮೋಕ್ಷೋಽಂತಕಸತ್ಕೃತಸ್ಯ ।
ಅತೋ ವಿದ್ವನ್ನಭಿಯೋತ್ಸ್ಯಾಮಿ ಪಾರ್ಥಂ
ದಿಷ್ಟಂ ನ ಶಕ್ಯಂ ವ್ಯತಿವರ್ತಿತುಂ ವೈ ॥೨೭॥

ಪ್ರಾಜ್ಞನಾಗಲಿ ಮೂಢನಾಗಲಿ ಆಯುಷ್ಯದ ಕೊನೆಯಲ್ಲಿ ಅಂತಕನಿಂದ ಅತಿಥಿ ಸತ್ಕಾರವನ್ನು ಹೊಂದಲೇಬೇಕಾಗುತ್ತದೆ. ಅದರಿಂದ ಬಿಡುಗಡೆ ಇರುವುದಿಲ್ಲ. ಅದರಿಂದ ಪ್ರಾಜ್ಞನಾದ ಶಲ್ಯನೆ, ಪಾಂಡವರ ಇದಿರಿಗೆ ನಾನು ಹೋಗುವೆನು. ದೈವವನ್ನು ಅತಿಕ್ರಮಿಸಲು ಯಾರಿಗೂ ಶಕ್ಯವಾಗದು.

ಕಲ್ಯಾಣವೃತ್ತಃ ಸತತಂ ಹಿ ರಾಜಾ
ವೈಚಿತ್ರವೀರ್ಯಸ್ಯ ಸುತೋ ಮಮಾಸೀತ್ ।
ತಸ್ಯಾರ್ಥಸಿದ್ಧ್ಯರ್ಥಮಹಂ ತ್ಯಜಾಮಿ
ಪ್ರಿಯಾನ್ ಭೋಗಾನ್ ದುಸ್ತ್ಯಜಂ ಜೀವಿತಂ ಚ ॥೨೮॥

ರಾಜಾ ದುರ್ಯೋಧನ ನನಗೆ ಸದಾ ಒಳ್ಳೆಯದನ್ನೇ ಮಾಡಿದ್ದಾನೆ. ಅವನ ಅಭೀಷ್ಟಸಿದ್ಧಿಗಾಗಿ ನಾನು ಇಷ್ಟವಾದ ಭೋಗವನ್ನೂ ಬಿಡಲಾಗದ ಪ್ರಾಣವನ್ನೂ ಬಿಡಲು ಸಿದ್ಧನಿದ್ದೇನೆ.

ವೈಯಾಘ್ರಚರ್ಮಾಣಮಕೂಜನಾಕ್ಷಂ
ಹೈಮಂ ತ್ರಿಕೋಶಂ ರಜತತ್ರಿವೇಣುಮ್ ।
ರಥಪ್ರಬರ್ಹಂ ತುರಗಪ್ರಬರ್ಹೈ-
ರ್ಯುಕ್ತಂ ಪ್ರಾದಾನ್ಮಹ್ಯಮಿಮಂ ಹಿ ರಾಮಃ ॥೨೯॥

ಹುಲಿಚರ್ಮದಿಂದ ಆವೃತವಾದ, ಶಬ್ದಮಾಡದ ಅಕ್ಷ ಉಳ್ಳ, ಬಂಗಾರದ ಮೂರು ಕೋಶ ಮತ್ತು ಬೆಳ್ಳಿಯ ತ್ರಿವೇಣುಗಳಿಂದ ಕೂಡಿದ, ಒಳ್ಳೆಯ ಕುದುರೆಗಳಿಂದ ಯುಕ್ತವಾದ ಶ್ರೇಷ್ಠವಾದ ಈ ರಥವನ್ನು ನನಗೆ ಪರಶುರಾಮ ನೀಡಿದ್ದಾನೆ.

ಧನೂಂಷಿ ಚಿತ್ರಾಣಿ ನಿರೀಕ್ಷ್ಯ ಶಲ್ಯ
ಧ್ವಜಾನ್ ಗದಾಃ ಸಾಯಕಾಂಶ್ಚೋಗ್ರರೂಪಾನ್ ।
ಅಸಿಂ ಚ ದೀಪ್ತಂ ಪರಮಾಯುಧಂ ಚ
ಶಂಖಿಂ ಚ ಶುಭ್ರಂ ಸ್ವನವನ್ತಮುಗ್ರಮ್ ॥೩೦॥

ಶಲ್ಯ, ನನ್ನನ್ನು ಪ್ರೀತಿಯಿಂದ ನೋಡಿ ಪರಶುರಾಮನು ನನಗೆ ಸುಂದರವಾದ ಈ ಧನುಸ್ಸು ಧ್ವಜ ಗದೆ ಉಗ್ರವಾದ ಬಾಣಗಳು ಖಡ್ಗ ಜ್ವಲಿಸುವ ಶ್ರೇಷ್ಠವಾದ ಆಯುಧ ಭಯಂಕರ ಶಬ್ದ ಮಾಡುವ ಬಿಳಿಯಾದ ಶಂಖ ಇವೆಲ್ಲವನ್ನೂ ದಯಪಾಲಿಸಿದ್ದಾನೆ.

ಪತಾಕಿನಂ ವಜ್ರನಿಪಾತನಿಃಸ್ವನಂ
ಸಿತಾಶ್ವಯುಕ್ತಂ ಶುಭತೂಣಶೋಭಿತಮ್ ।

ಇಮಂ ಸಮಾಸ್ಥಾಯ ರಥರ್ಷಭಂ ರಣೇ
ದೃಢಂ ಹನಿಷ್ಯಾಮ್ಯಹಮರ್ಜುನಂ ಬಲಾತ್ ॥೩೧॥

ಪತಾಕೆಗಳಿಂದ ಕೂಡಿರುವ, ಸಿಡಿಲು ಬಡಿದಂಥ ಶಬ್ದಮಾಡುವ, ಬಿಳಿ ಕುದುರೆಗಳನ್ನು ಹೂಡಿರುವ ಸುಂದರ ಬತ್ತಳಿಕೆಗಳಿಂದ ತುಂಬಿರುವ ಈ ಉತ್ತಮವಾದ ರಥವನ್ನೇರಿ ಅರ್ಜುನನನ್ನು ಭುಜಬಲದಿಂದ ದೃಢವಾಗಿ ಹೊಡೆದು ಕೊಲ್ಲುತ್ತೇನೆ.

ನ ಚೇನ್ಮೃತ್ಯುಃ ಸರ್ವಹರೋಽಭಿರಕ್ಷೇತ್
ಸದಾಽಪ್ರಮತ್ತಃ ಸಮರೇ ಪಾಂಡುಪುತ್ರಮ್ ।
ತಂ ವಾ ಹನಿಷ್ಯಾಮಿ ರಣೇ ಸಮೇತ್ಯ
ಯಾಸ್ಯಾಮಿ ವಾ ದ್ರೋಣಮುಖೋ ಯಮಾಯ ॥೩೨॥

ಸರ್ವಸಂಹಾರಕನಾದ ಮೃತ್ಯು ರಣದಲ್ಲಿ ಅರ್ಜುನನನ್ನು ರಕ್ಷಿಸದಿದ್ದರೆ ಎಂದೂ ಪ್ರಮಾದವೆ ಇಲ್ಲದ ನಾನು ರಣದಲ್ಲಿ ಅವನನ್ನು ಇದಿರಿಸಿ ಕೊಲ್ಲುವೆ ಅಥವಾ ನಾನೇ ದ್ರೋಣನನ್ನು ಹಿಂಬಾಲಿಸಿ ಯಮನ ಬಳಿಗೆ ಹೋಗುವೆ.

ಯಮವರುಣಕುಬೇರವಾಸವಾದ್ಯಾ
ಯದಿ ಯುಗಪತ್ಸಗಣಾ ಮಹಾಹವೇ ।
ಜುಗುಪುರಿಹ ಸಮೇತ್ಯ ಫಲ್ಗುನಂ
ಕಿಮು ಬಹುನಾ ಸಹ ತೈರ್ಜಯಾಮಿ ತಮ್ ॥೩೩॥

ಹೆಚ್ಚೇನು ಹೇಳಬೇಕು? ಯಮ ವರುಣ ಕುಬೇರ ಇಂದ್ರ ಮುಂತಾದವರು ಒಟ್ಟಿಗೆ ತಮ್ಮ ಪರಿವಾರದವರೊಂದಿಗೆ ಬಂದು ಅರ್ಜುನನನ್ನು ಕಾಪಾಡಿದರೂ ಅವರೊಂದಿಗೇ ಅವನನ್ನು ನಾನು ಪರಾಭವಗೊಳಿಸುವೆ.

ಸಂಜಯಃ

ಇತಿ ರಣರಭಸಸ್ಯ ಕತ್ಥತ-
ಸ್ತದುಪನಿಶಮ್ಯ ವಚಃ ಸ ಮದ್ರರಾಟ್ ।

ಅವಹಸದವಮನ್ಯ ವೀರ್ಯವಾನ್
ಪ್ರತಿಷಿಷಿಧೇ ಚ ಜಗಾದ ಚೋತ್ತರಮ್ ॥೩೪॥

ಸಂಜಯ ನುಡಿದ— ಹೀಗೆ ರಣದಲ್ಲಿ ಆವೇಶಹೊಂದುವ ಕರ್ಣನು ಬಡಾಯಿ ಕೊಚ್ಚಿಕೊಳ್ಳುವುದನ್ನು ಕೇಳಿ ಪರಾಕ್ರಮಿಯಾದ ಶಲ್ಯನು ಅವಮಾನಿಸುತ್ತ ಜೋರಾಗಿ ನಕ್ಕ. ನಿಷೇಧಿಸಿದ ಮತ್ತು ಅವನ ಮಾತಿಗೆ ಉತ್ತರ ನೀಡಿದ.

ಶಲ್ಯಃ

ವಿರಮ ವಿರಮ ಕರ್ಣ ಕತ್ಥನಾತ್
ಅತಿರಭಸೋಽಪ್ಯತಿವಾಚಮುಕ್ತವಾನ್ ।
ಕ್ವ ಚ ಹಿ ನರವರೋ ಧನಂಜಯಃ
ಕ್ವ ಪುನರಿಹ ತ್ವಮಹೋ ನರಾಧಮಃ ॥೩೫॥

ಶಲ್ಯ ನುಡಿದ— ಸಾಕುಮಾಡು ನಿನ್ನ ಬಡಾಯಿ ಮಾತನ್ನು, ಸಾಕುಮಾಡು. ರಣದಲ್ಲಿ ಆರ್ಭಟ ಮಾಡುವವನೇ ನೀನು, ನಿಜ. ಆದರೂ ಅತಿಯಾಗಿ ಬಡಾಯಿ ಕೊಚ್ಚಿಕೊಳ್ಳುವಿ. ಪುರುಷಶ್ರೇಷ್ಠನಾದ ಅರ್ಜುನನೆಲ್ಲಿ? ಆಹಾ! ಪುರುಷಾಧಮನಾದ ನೀನೆಲ್ಲಿ?

ಯದುಸದನಮುಪೇಂದ್ರಪಾಲಿತಂ
ತ್ರಿದಿವಮಿವಾಮರರಾಜರಕ್ಷಿತಮ್ ।
ಪ್ರಸಭಮತಿವಿಲೋಡ್ಯ ಕೋ ಹರೇತ್
ಪುರುಷವರಾವರಜಾಮೃತೇಽರ್ಜುನಾತ್ ॥೩೬॥

ಇಂದ್ರನಿಂದ ರಕ್ಷಿತವಾದ ಸ್ವರ್ಗದಂತೆ ದುರ್ಗಮವಾಗಿರುವ ಕೃಷ್ಣ ರಕ್ಷಿತವಾದ ದ್ವಾರಕೆಯನ್ನು ಬಲಾತ್ಕಾರವಾಗಿ ಪೀಡಿಸಿ ಅಲ್ಲಿಂದ ಸುಭದ್ರೆಯನ್ನು ಅರ್ಜುನನಲ್ಲದೆ ಇನ್ನಾವನು ಅಪಹರಿಸಿ ತರಬಲ್ಲ?

ತ್ರಿಭುವನಸೃಜಮೀಶ್ವರೇಶ್ವರಂ
ಕ ಇಹ ಪುಮಾನ್ ಭವಮಾಹ್ವಯೇದ್ ಯುಧಿ ।

ಮೃಗವಧಕಲಹೇ ಋತೇऽರ್ಜುನಾತ್
ಸುರಪತಿವೀರ್ಯಸಮಪ್ರಭಾವತಃ ॥೩೭॥

ಮೂರ್ಲೋಕವನ್ನು ಸೃಜಿಸುವ ಈಶ್ವರರಿಗೆ ಈಶ್ವರನಾದ ಕಿರಾತರೂಪ ಶಿವನನ್ನು ಕಾಡುಹಂದಿಯನ್ನು ಕೊಂದವನು ಯಾವನು ಎನ್ನುವ ಬಗ್ಗೆ ಕಲಹವಾದಾಗ, ಯುದ್ಧದಲ್ಲಿ ಇಂದ್ರಸಮಾನ ಪರಾಕ್ರಮದಿಂದ ಅರ್ಜುನನಲ್ಲದೆ ಇನ್ನಾವನು ತಾನೆ ಇದಿರಿಸಬಲ್ಲ?

ಅಸುರಸುರಮಹೋರಗಾನ್ನರಾನ್
ಗರುಡಪಿಶಾಚಸಯಕ್ಷರಾಕ್ಷಸಾನ್ ।
ಇಷುಭಿರಜಯದಗ್ನಿಗೌರವಾತ್
ಸ್ವಭಿಲಷಿತಂ ಚ ಹವಿರ್ದದೌ ಜಯಃ ॥೩೮॥

ಖಾಂಡವದಹನಕಾಲದಲ್ಲಿ ಅಗ್ನಿಯ ಮೇಲಿನ ಗೌರವಭಾವನೆಯಿಂದ ಅರ್ಜುನನು ಇಂದ್ರನ ಕಡೆಯ ಅಸುರ ಸುರ ಮಹಾಸರ್ಪ ನರ ಗರುಡ ಪಿಶಾಚ ಯಕ್ಷರಾಕ್ಷಸರೆಲ್ಲರನ್ನೂ ತೀಕ್ಷ್ಣವಾದ ಬಾಣಗಳಿಂದ ಪರಾಭವಗೊಳಿಸಿದನು ಮತ್ತು ಖಾಂಡವ ವನವನ್ನು ಅಗ್ನಿಗೆ ಆಹುತಿಯಾಗಿ ನೀಡಿದನು.

ಸ್ಮರಸಿ ನನು ಯದಾ ಪರೈರ್ಹೃತಃ
ಸ ಚ ಧೃತರಾಷ್ಟ್ರಸುತೋ ವಿಮೋಕ್ಷಿತಃ ।
ಅಧಿರಥಜ ನರೋತ್ತಮೈರ್ಯುತಾನ್
ಕುರುಷು ಬಹೂನ್ ವಿನಿಹತ್ಯ ತಾನರೀನ್ ॥೩೯॥

ಕರ್ಣ, ನಿನಗೆ ನೆನಪಿದೆ ತಾನೆ? ಘೋಷಯಾತ್ರಾ ಕಾಲದಲ್ಲಿ ಕೌರವರ ವಿಷಯದಲ್ಲಿ ಶತ್ರುಗಳಂತೆ ವರ್ತಿಸಿದ ಬಹುಸಂಖ್ಯೆಯ ಗಂಧರ್ವರನ್ನು ಅರ್ಜುನನೇ ಚೆನ್ನಾಗಿ ಹೊಡೆದೋಡಿಸಿ, ಅವರು ಅಪಹರಿಸಿದ್ದ ದುರ್ಯೋಧನನನ್ನು ಅವರ ಬಂಧನದಿಂದ ಬಿಡುಗಡೆ ಮಾಡಿಸಿದ.

ಪ್ರಥಮಮಪಿ ಪಲಾಯಿತೇ ತ್ವಯಿ
ಪ್ರಿಯಕಲಹಾ ಧೃತರಾಷ್ಟ್ರಸೂನವಃ ।

ಸ್ಮರಸಿ ನನು ಯದಾ ಪ್ರಮೋಚಿತಾಃ
ಖಚರಗಣಾನವಜಿತ್ಯ ಪಾಂಡವೈಃ ॥೪೦॥

ಮೊದಲೇ ನೀನು ಪಲಾಯನ ಮಾಡಿದ್ದಾಗ, ಪಾಂಡವರು ಗಂಧರ್ವರ ಸಮೂಹಗಳನ್ನು ಗೆದ್ದು ತಮ್ಮೊಡನೆ ಸದಾ ಕಲಹಪ್ರಿಯರಾದ ಕೌರವರನ್ನು ಬಿಡುಗಡೆ ಮಾಡಿಸಿದರು. ಇದು ನಿನಗೆ ನೆನಪಿದೆ ತಾನೆ?

ಸಮುದಿತಬಲವಾಹನಾಃ ಪುನಃ
ಪುರುಷವರೇಣ ಜಿತಾಃ ಸ್ಥ ಗೋಗ್ರಹೇ ।
ಸಗುರುಗುರುಸುತಾಃ ಸಭೀಷ್ಮಕಾಃ
ಕಿಮು ನ ಜಿತಃ ಸ ತದಾ ತ್ವಯಾऽರ್ಜುನಃ ॥೪೧॥

ಪುನಃ ಗೋಗ್ರಹಣಕಾಲದಲ್ಲಿ ದ್ರೋಣ ಅಶ್ವತ್ಥಾಮ ಭೀಷ್ಮರಿಂದಲೂ ಸೈನ್ಯ ವಾಹನ ಸಮೂಹಗಳಿಂದಲೂ ಕೂಡಿದ್ದ ನೀವು ಒಬ್ಬ ಅರ್ಜುನನಿಂದ ಪರಾಜಿತ ರಾಗಿರುವಿರಿ. ಆಗ ನೀನು ಅರ್ಜುನನನ್ನು ಏಕೆ ಪರಾಜಯಗೊಳಿಸಲಿಲ್ಲ?

ಇದಮಪರಮುಪಸ್ಥಿತಂ ಪುನ-
ಸ್ತವ ನಿಧನಾಯ ಸುಯುದ್ಧಮದ್ಯ ವೈ ।
ಯದಿ ನ ರಿಪುಭಯಾತ್ ಪಲಾಯಸೇ
ಸಮರಗತೋऽದ್ಯ ಹತೋऽಸಿ ಸೂತಜ ॥೪೨॥

ಕರ್ಣ, ಈಗ ಇನ್ನೊಂದು ದೊಡ್ಡ ಯುದ್ಧ ಪುನಃ ನಿನ್ನ ವಧೆಗಾಗಿ ನಡೆಯುತ್ತಿದೆ. ಶತ್ರುಭಯದಿಂದ ನೀನು ಈಗ ಪಲಾಯನ ಮಾಡದಿದ್ದರೆ ಯುದ್ಧದಲ್ಲಿ ನೀನು ಹತನಾಗುವುದು ನಿಶ್ಚಿತ.

ಸಂಜಯಃ

ಇತಿ ಬಹುಪರುಷಂ ಪ್ರಭಾಷತಿ
ಪ್ರಮನಸಿ ಮದ್ರಪತೌ ರಿಪುಸ್ತವಮ್ ।
ಭೃಶಮಭಿರುಷಿತಃ ಪರಂತಪಃ
ಕುರುಪೃತನಾಪತಿರಾಹ ಮದ್ರಪಮ್ ॥೪೩॥

ಸಂಜಯ ನುಡಿದ— ಬುದ್ಧಿ ಹೇಳುವ ಒಳ್ಳೆಯ ಮನಸ್ಸುಳ್ಳ ಶಲ್ಯರಾಜನು ಬಹುಕಠೋರವಾಗಿ ಶತ್ರುವಾದ ಅರ್ಜುನನ ಸ್ತುತಿಗೈದಾಗ ಕೌರವಸೇನಾಧಿಪತಿಯಾದ ಶತ್ರುತಾಪಕನಾದ ಕರ್ಣ ಬಲು ಕೋಪಗೊಂಡು ಹೇಳಿದ.

ಕರ್ಣಃ

ಭವತು ಭವತು ಕಿಂ ವಿಕತ್ಥಸೇ
ನನು ಮಮ ತಸ್ಯ ಹಿ ಯುದ್ಧಮುದ್ಯತಮ್ ।
ಯದಿ ಸ ಜಯತಿ ಮಾಮಿಹಾಹವೇ
ತತ ಇದಮಸ್ತು ಸುಕತ್ಥಿತಂ ತವ ॥೪೪॥

ಕರ್ಣ ನುಡಿದ— ಆಗಲಿ ಆಗಲಿ, ಏಕೆ ಕೆಟ್ಟದಾಗಿ ಅರ್ಜುನನನ್ನು ಹೊಗಳುವೆ? ನನಗೂ ಅವನಿಗೂ ಯುದ್ಧ ಪ್ರಾರಂಭವಾಗುತ್ತಿದೆ. ಅವನು ಈ ಯುದ್ಧದಲ್ಲಿ ನನ್ನನ್ನು ಗೆದ್ದರೆ ಆಗ ಮಾತ್ರ ಈ ನಿನ್ನ ಹೊಗಳಿಕೆಯ ಮಾತು ಒಳ್ಳೆಯ ಹೊಗಳಿಕೆಯಾದೀತು.

ಸಂಜಯಃ

ಏವಮಸ್ತ್ವಿತಿ ಮದ್ರೇಶ ಉಕ್ತ್ವಾನೋತ್ತರಮುಕ್ತವಾನ್ ।
ಯಾಹಿ ಶಲ್ಯೇತಿ ಚಾಪ್ಯೇನಂ ಕರ್ಣಃ ಪ್ರಾಹ ಯುಯುತ್ಸಯಾ ॥೪೫॥

ಸಂಜಯ ನುಡಿದ— 'ಹಾಗೇ ಆಗಲಿ' ಎಂದು ಶಲ್ಯ ನುಡಿದು, ಸುಮ್ಮನಾದ, ಏನೂ ಉತ್ತರವನ್ನು ನುಡಿಯಲಿಲ್ಲ. 'ಹೋಗು ಶಲ್ಯ' ಎಂದು ಕರ್ಣ ಯುದ್ಧೋತ್ಸಾಹದಿಂದ ನುಡಿದ.

ಸ ರಥಃ ಪ್ರಯಯೌ ತೂರ್ಣಂ ಶ್ವೇತಾಶ್ವಃ ಶಲ್ಯಸಾರಥಿಃ ।
ನಿಘ್ನನ್ನಮಿತ್ರಾನ್ ಸಮರೇ ತಮೋಘ್ನಃ ಸವಿತಾ ಯಥಾ ॥೪೬॥

ಬಿಳಿಕುದುರೆಗಳನ್ನು ಕಟ್ಟಿದ್ದ ಆ ಕರ್ಣನ ರಥವು ಶಲ್ಯನ ಸಾರಥ್ಯದಲ್ಲಿ ಶತ್ರುಗಳನ್ನು ವಧಿಸುತ್ತ ತಮಸ್ಸನ್ನು ನಾಶಪಡಿಸುವ ಸೂರ್ಯನಂತೆ ವೇಗವಾಗಿ ರಣರಂಗದಲ್ಲಿ ಸಂಚರಿಸಿತು.

ತತಃ ಪ್ರಾಯಾತ್ ಪ್ರೀತಿಮಾನ್ ವೈ ರಥೇನ
ವೈಯಾಘ್ರೇಣ ಶ್ವೇತಯುಜಾऽಥ ಕರ್ಣಃ ।

ಸ ಚಾಲೋಕ್ಯ ಧ್ವಜಿನೀಂ ಪಾಂಡವಾನಾಂ
ಧನಂಜಯಂ ತ್ವರಯಾ ಪರ್ಯಪೃಚ್ಛತ್ ॥೪೬॥

ಆಗ ಸಂತುಷ್ಟನಾದ ಕರ್ಣನು,ಬಿಳಿಕುದುರೆಗಳನ್ನು ಕಟ್ಟಿದ, ಹುಲಿಚರ್ಮವನ್ನು ಹೊದ್ದಿಸಿದ್ದ ಆ ರಥದಿಂದ ಪಾಂಡವಸೈನ್ಯವನ್ನು ಪ್ರವೇಶಿಸಿದ. ಆ ಸೈನ್ಯವನ್ನು ಕಂಡು ತ್ವರೆಯಿಂದ 'ಅರ್ಜುನನೆಲ್ಲಿರುವನು? ತೋರಿಸಿರಿ' ಎಂದು ಕೇಳಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಅಷ್ಟತ್ರಿಂಶೋಧ್ಯಾಯಃ ॥೩೮॥

❖

ಮಹಾಭಾರತತಾತ್ಪರ್ಯನಿರ್ಣಯ-ಅಧ್ಯಾಯ 27

ಇತ್ಯಾದಿವಾಕ್ಯೈಃ ಸಂಶಾಂತ ಇವ ಶಲ್ಯೋಽಸ್ಯ ಸಾರಥಿಃ ।
ಬಭೂವ ತೇನ ಸಹಿತಃ ಸೇನಾಂ ವ್ಯೂಹ್ಯ ರವೇಃ ಸುತಃ ॥ ೨೭ ॥

ಗಚ್ಛನ್ ಯುದ್ಧಾಯ ದರ್ಪೇಣ ಪ್ರಾಹ ಯೋ ಮೇಽರ್ಜುನಂ
ಪುಮಾನ್ ।
ದರ್ಶಯೇತ್ ತಸ್ಯ ದಾಸ್ಯಾಮಿ ಪ್ರೀತೋ ವಿತ್ತಮನರ್ಗಲಮ್ ॥ ೨೮ ॥

ಬುದ್ಧಿ ಬಲ ಜ್ಞಾನ ಧೈರ್ಯ ಮುಂತಾದವುಗಳಿಂದ ಯಾವನು ರಥಿಕನಿಗಿಂತ ಶ್ರೇಷ್ಠನಾಗಿರುವನೋ ಅವನೇ ಸಾರಥಿಯಾಗಬೇಕು. ಅರ್ಜುನನಿಗೆ ಕೃಷ್ಣ ಹೇಗೋ ಹಾಗೆ. ಹಿಂದೆ ತ್ರಿಪುರದಹನಕ್ಕೆ ಹೊರಟ ಶಿವನಿಗೆ ಬ್ರಹ್ಮ ಹೇಗೆ ಸಾರಥಿಯಾದನೋ ಹಾಗೆ, ನೀನೂ ಕರ್ಣನಿಗೆ ಸಾರಥಿಯಾಗಬೇಕು, ಎಂಬ ಮುಂತಾದ ಮಾತುಗಳಿಂದ ಸಮಾಧಾನ ಗೊಂಡವನಂತೆ ತೋರಿಕೊಂಡು ಶಲ್ಯ ಕರ್ಣನಿಗೆ ಸಾರಥಿಯಾದ. ಅವನೊಡನೆ ಕೂಡಿ ಕರ್ಣ ಸೈನ್ಯವನ್ನು ವ್ಯೂಹವಾಗಿ ನಿಲ್ಲಿಸಿ ದರ್ಪದಿಂದ ಯುದ್ಧಕ್ಕೆ ಹೊರಟು ಹೇಳಿದ, 'ಯಾವ ಮನುಷ್ಯ ನನಗೆ ಅರ್ಜುನನನ್ನು ತೋರಿಸುವನೊ ಅವನಿಗೆ ನಾನು ಸಂತುಷ್ಟನಾಗಿ ಅಮಿತ ಧನಸಂಪತ್ತನ್ನು ನೀಡುವೆನು' ಎಂದ.

ಇತಿ ಬ್ರುವಾಣಂ ಬಹುಶಃ ಪ್ರಾಹ ಶಲ್ಯಃ ಪ್ರಹಸ್ಯ ಚ ।
ನಿವಾತಕವಚಾ ಯೇನ ಹತಾ ದಗ್ಧಂ ಹಿ ಖಾಂಡವಮ್ ॥ ೨೯ ॥

ಕೋ ನಾಮ ತಂ ಜಯೇನ್ಮತ್ಕೋ೯ ದೃಷ್ಟೋ ವೋಽಪಿ ಸ ಗೋಗ್ರಹೇ।
ಕಾಕಗೋಮಾಯುಧರ್ಮಾ ತ್ವಂ ಹಂಸಸಿಂಹೋಪಮಂ ರಣೇ ॥ ೩೦

ಮಾ ಯಾಹಿ ಪಾರ್ಥಂ ಮಾ ಯಾಹಿ ಹತೋನೇನ ಯಮಕ್ಷಯಮ್ ।
ಇತ್ಯುಕ್ತೋ ರವಿಜೋ ಮದ್ರಾನ್ ನಿತರಾಂ ಪರ್ಯಕುತ್ಸಯತ್ ॥ ೩೧

ಹೀಗೆ ಮತ್ತೆ ಮತ್ತೆ ಕರ್ಣ ಹೇಳಲು ತೊಡಗಿದಾಗ ಶಲ್ಯ ನಕ್ಕು ಹೇಳಿದ: 'ಅರ್ಜುನ ನಿವಾತಕವಚರನ್ನು ಕೊಂದವನು, ಖಾಂಡವವನವನ್ನು ಸುಟ್ಟವನು. ಅವನನ್ನು ಯಾವ ಮಾನವ ಗೆಲ್ಲಬಲ್ಲ? ಗೋಗ್ರಹಣಕಾಲದಲ್ಲಿ ನೀವೂ ಅವನನ್ನು ನೋಡಿರುವಿರಿ ತಾನೆ? ಕಾಗೆ–ನರಿಗಳಂತಿರುವ ನೀನು ಹಂಸ–ಸಿಂಹಗಳಂತಿರುವ ಅರ್ಜುನನನ್ನು ಯುದ್ಧದಲ್ಲಿ ಇದಿರಿಸಲು ಹೋಗಬೇಡ. ಅವನಿಂದ ಹತನಾಗಿ ಯಮಲೋಕಕ್ಕೆ ಹೋಗಬೇಡ'. ಹೀಗೆ ಶಲ್ಯ ಹೇಳಿದಾಗ ಕರ್ಣ ಮದ್ರದೇಶದ ಜನರನ್ನು ಬಹಳ ಹೀನಾಯವಾಗಿ ತೆಗಳಿದ.

❖

ಮೂವತ್ತೊಂಬತ್ತನೆಯ ಅಧ್ಯಾಯ

ಕೃಷ್ಣಾರ್ಜುನರ ರಥವನ್ನು ತೋರಿಸಿದರೆ, ಅವರನ್ನು ವಧಿಸಿ, ಅವರ ಸಂಪತ್ತೆಲ್ಲವನ್ನು ಬಹುಮಾನವಾಗಿ ನೀಡುವೆನು ಎಂದು ಘೋಷಿಸಿದ ಕರ್ಣನಿಗೆ, 'ಅರ್ಜುನ ಸಿಂಹ, ನೀನು ಗುಳ್ಳೆನರಿ' ಎಂದು ಶಲ್ಯನ ಉತ್ತರ.

ಸಂಜಯಃ

ಪ್ರಯಾತೇ ಚ ತದಾ ಕರ್ಣೋ ಹರ್ಷಯನ್ ವಾಹಿನೀಂ ತವ ।
ಏಕೈಕಂ ಸಮರೇ ದೃಷ್ಟ್ವಾ ಪಾಂಡವಂ ಪರ್ಯಪೃಚ್ಛತ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಕರ್ಣನು ಪಾಂಡವಸೇನೆಯೊಳಗೆ ಹೋಗಿ ನಿನ್ನ ಸೈನ್ಯದಲ್ಲಿ ಉತ್ಸಾಹ ತುಂಬುವುದಕ್ಕಾಗಿ ರಣಾಂಗಣದಲ್ಲಿ ಪ್ರತಿಯೊಬ್ಬ ಯೋಧನನ್ನು ನೋಡಿ ಅರ್ಜುನ ಎಲ್ಲಿರುವನೆಂದು ಕೇಳಿದ.

ಯೋ ಮಮಾದ್ಯ ಮಹಾತ್ಮಾನಂ ದರ್ಶಯೇತ್ ಶ್ವೇತವಾಹನಮ್ ।
ತಸ್ಮೈ ದದ್ಯಾಮಭಿಪ್ರೇತಂ ಧನಂ ಯನ್ಮನಸೇಚ್ಛತಿ ॥೨॥

ಯಾವನು ನನಗೆ ಈಗ ಮಹಾತ್ಮನಾದ ಶ್ವೇತವಾಹನನಾದ ಅರ್ಜುನನನ್ನು ತೋರಿಸುವನೋ ಅವನಿಗೆ ಅವನ ಇಷ್ಟವಾದ ಬಹುಮಾನವನ್ನು ನೀಡುತ್ತೇನೆ. ಅವನು ಎಷ್ಟು ಧನವನ್ನು ಮನಸಿನಿಂದ ಆಶಿಸುವನೋ ಅಷ್ಟು ಧನವನ್ನು ನೀಡುತ್ತೇನೆ.

ನ ಚೇತ್ತದಭಿಮನ್ಯೇತ ತಸ್ಮೈ ದದ್ಯಾಮಹಂ ಪುನಃ ।
ಶಕಟಂ ರತ್ನಸಂಪೂರ್ಣಂ ಯೋ ಮೇ ಬ್ರೂಯಾದ್ ಧನಂಜಯಮ್ ॥

ಅವನಿಗೆ ಅದು ಬೇಡವಾದರೆ ಅರ್ಜುನನನ್ನು ತೋರಿಸಿದ ಆತನಿಗೆ ರತ್ನಗಳಿಂದ ತುಂಬಿದ ಬಂಡಿಯನ್ನೆ ಕೊಡುತ್ತೇನೆ.

ನ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್ ।
ಶತಂ ದದ್ಯಾಂ ಗವಾಂ ತಸ್ಮೈ ನೈತ್ಯಕಂ ಕಾಂಸ್ಯದೋಹನಮ್ ॥೪॥

ಅದು ಬೇಡವಾದರೆ ಅರ್ಜುನನನ್ನು ತೋರಿಸಿದ ಆತನಿಗೆ ನೂರು ಹಸುಗಳನ್ನೂ ನಿತ್ಯ ಹಾಲು ಕರೆಯಲು ಕಂಚಿನ ಪಾತ್ರೆಗಳನ್ನೂ ಕೊಡುತ್ತೇನೆ.

ಶತಂ ಗ್ರಾಮವರಾಂಶ್ಚೈವ ದದ್ಯಾಮರ್ಜುನದರ್ಶಿನೇ ।
ತಥಾ ತಸ್ಮೈ ಪುನರ್ದದ್ಯಾಂ ಶ್ವೇತಮಶ್ವತರೀರಥಮ್ ॥೫॥
ಯುಕ್ತಮಂಜನಕೇಶೀಭಿರ್ಯೋ ಮೇ ಬ್ರೂಯಾದ್ ಧನಂಜಯಮ್ ॥

ಅರ್ಜುನನನ್ನು ತೋರಿಸಿದವನಿಗೆ ಒಳ್ಳೆಯ ನೂರು ಗ್ರಾಮಗಳನ್ನು ಕೊಡುತ್ತೇನೆ. ಹಾಗೇ ಅರ್ಜುನನನ್ನು ತೋರಿಸಿದವನಿಗೆ ಕಾಡಿಗೆಯಂತೆ ಕಪ್ಪಾದ ಕೊರಳ ಕೂದಲುಳ್ಳ ಹೆಣ್ಣು ಹೇಸರಗತ್ತೆಗಳು ಎಳೆಯುವ ಬಿಳಿಯಾದ ರಥವನ್ನೂ ಕೂಡ ಕೊಡುತ್ತೇನೆ.

ನ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್ ।
ಅನ್ಯಂ ವಾಽಸ್ಮೈ ಪುನರ್ದದ್ಯಾಂ ಸೌವರ್ಣಂ ಹಸ್ತಿಷಡ್‌ಗತಮ್ ॥೭॥

ಅಥವಾ ಅದು ಬೇಡವಾದರೆ ಅರ್ಜುನನನ್ನು ತೋರಿಸಿದವನಿಗೆ ಬೇರೆ ಆರು ಆನೆಗಳು ಹೊರುವಷ್ಟು ಚಿನ್ನದ ರಾಶಿಯನ್ನು ಕೊಡುತ್ತೇನೆ.

ತಥಾಪ್ಯಸ್ಮೈ ಪುನರ್ದದ್ಯಾಂ ಸ್ತ್ರೀಣಾಂ ಶತಮಲಂಕೃತಮ್ ।
ಶ್ಯಾಮಾನಾಂ ನಿಷ್ಕಕಂಠೀನಾಂ ಗೀತವಾದ್ಯವಿಪಶ್ಚಿತಾಮ್ ॥೮॥

ಅವನಿಗೆ ಪುನಃ ಹದಿನಾರು ವಯಸ್ಸಿನವರಾದ, ಚಿನ್ನದ ಹಾರ ಧರಿಸಿದ, ಗೀತವಾದ್ಯಗಳಲ್ಲಿ ನಿಷ್ಣಾತರಾದ, ಅಲಂಕೃತರಾದ ನೂರು ಸ್ತ್ರೀಯರನ್ನು ಕೊಡಬಲ್ಲೆ.

ನ ಚೇತ್ತದಭಿಮನ್ಯೇತ ಪುರುಷೋऽರ್ಜುನದರ್ಶಿವಾನ್ ।
ತಸ್ಮೈ ದದ್ಯಾಂ ಶತಂ ನಾಗಾನ್ ಶತಂ ಗ್ರಾಮಾನ್ ಶತಂ ರಥಾನ್ ॥೯॥

ಅರ್ಜುನನನ್ನು ತೋರಿಸಿದ ಆ ವ್ಯಕ್ತಿ ಅದನ್ನೂ ಬೇಡವೆಂದರೆ ನೂರು ಆನೆಗಳನ್ನು ನೂರು ಗ್ರಾಮಗಳನ್ನು ನೂರು ರಥಗಳನ್ನೂ ಕೊಡಬಲ್ಲೆ.

ಸುವರ್ಣಸ್ಯ ಚ ಮುಖ್ಯಸ್ಯ ಹಯಾಗ್ರ್ಯಾಣಾಂ ಶತಂ ಶತಾನ್ ।
ಋದ್ಧ್ಯಾ ಗುಣೈಃ ಸುದಾಂತಾಂಶ್ಚ ಧುರ್ಯವಾಹಾನ್
ಸುಶಿಕ್ಷಿತಾನ್ ॥೧೦॥

ಉತ್ತಮ ಸುವರ್ಣರಥಕ್ಕೆ ಹೂಡುವಂಥ ಉತ್ತಮವಾದ ಹತ್ತುಸಾವಿರ ಕುದುರೆಗಳನ್ನು ಕೊಡಬಲ್ಲೆ. ಪುಷ್ಟಿಯಿಂದ ಗುಣಗಳಿಂದ ಯುಕ್ತವಾದ ವಿನೀತವಾದ, ಭಾರ ಎಳೆಯಬಲ್ಲ ಹತ್ತು ಸಾವಿರ ಬೇರೆ ಕುದುರೆಗಳನ್ನೂ ಕೊಡಬಲ್ಲೆ.

ತಥಾ ಸುವರ್ಣಶೃಂಗೀಣಾಂ ಗೋಧೇನೂನಾಂ ಚತುಃಶತಮ್ ।
ದದ್ಯಾಂ ತಸ್ಮೈ ಸವತ್ಸಾನಾಂ ಯೋ ಮೇ ಬ್ರೂಯಾದ್
ಧನಂಜಯಮ್ ॥೧೧॥

ಅರ್ಜುನನೆಲ್ಲಿರುವನೆಂದು ಹೇಳುವವನಿಗೆ ಕರುಗಳಿಂದ ಕೂಡಿದ ಚಿನ್ನದ ಕೊಂಬುಗಳುಳ್ಳ ನಾನೂರು ಹಾಲು ಕೊಡುವ ಹಸುಗಳನ್ನು ಕೊಡಬಲ್ಲೆ.

ನ ಚೇತ್ತದಭಿಮನ್ಯೇತ ಪುರುಷೋರ್ಜುನದರ್ಶಿವಾನ್ ।
ಅನ್ಯದಸ್ಮೈ ವರಂ ದದ್ಯಾಂ ಶ್ವೇತಾನ್ ಪಂಚಶತಾನ್ ಹಯಾನ್ ॥೧೨॥

ಅರ್ಜುನನನ್ನು ತೋರಿಸಿದವನು ಅದನ್ನೂ ಸಾಲದೆಂದರೆ ಅವನಿಗೆ ಐದುನೂರು ಬಿಳಿಕುದುರೆಗಳನ್ನೂ ಬೇರೆ ಬಹುಮಾನವಾಗಿ ಕೊಡುತ್ತೇನೆ.

ಹೇಮಭಾಂಡಪರಿಚ್ಛನ್ನಾನ್ ಸುಮೃಷ್ಟಮಣಿಭೂಷಣಾನ್ ।
ಸುದಾಂತಾನಪಿ ಚೈವಾಹಂ ದದ್ಯಾಮ್ ಅಷ್ಟಾದಶಾಪರಾನ್ ॥೧೩॥

ಅದೂ ಸಾಲದೆಂದರೆ ಬಂಗಾರದ ಆಭರಣಗಳಿಂದ ಅಲಂಕೃತವಾದ ನಿರ್ಮಲ ರತ್ನಾಲಂಕಾರದಿಂದ ಯುಕ್ತವಾದ ವಿನೀತವಾದ ಬೇರೆ ಹದಿನೆಂಟು ಕುದುರೆಗಳನ್ನು ಕೊಡಬಲ್ಲೆ.

ರಥಂ ಚ ಶುಭ್ರಂ ಸೌವರ್ಣಂ ದದ್ಯಾಂ ತಸ್ಮೈ ಸ್ವಲಂಕೃತಮ್ ।
ಯುಕ್ತಂ ಪರಮಕಾಂಭೋಜೈರ್ಯೋ ಮೇ ಬ್ರೂಯಾದ್
ಧನಂಜಯಮ್ ॥೧೪॥

ಅರ್ಜುನನೆಲ್ಲಿರುವನೆಂದು ಹೇಳುವವನಿಗೆ ಶುಭ್ರ ಸುವರ್ಣಮಯ ಮತ್ತು ಅಲಂಕೃತವಾದ ಉತ್ತಮ ಕಾಂಭೋಜ ಕುದುರೆಗಳಿಂದ ಯುಕ್ತವಾದ ರಥವನ್ನು ಕೊಡುತ್ತೇನೆ.

ನ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್ ।
ಅನ್ಯದಸ್ಮೈ ವರಂ ದದ್ಯಾಂ ಕುಂಜರಾಣಾಂ ಶತಾನಿ ಷಟ್ ॥೧೫॥

ಕಾಂಚನೈರ್ವಿವಿಧೈರ್ಭಾಂಡೈರಾಚ್ಛನ್ನಾನ್ ಹೇಮಮಾಲಿನಃ ।
ಉತ್ಪನ್ನಾನಪರಾನ್ತೇಷು ವಿನೀತಾನ್ ಹಸ್ತಿಶಿಕ್ಷಕೈಃ ॥೧೬॥

ಅರ್ಜುನನನ್ನು ತೋರಿಸಿದವನು ಅದನ್ನೂ ಸಾಲದೆಂದರೆ ಬಂಗಾರದ ವಿವಿಧ ಆಭರಣಗಳಿಂದ ಮುಚ್ಚಿದ ಬಂಗಾರದ ಮಾಲೆ ತೊಡಿಸಿದ ಅಪರಾಂತ ದೇಶದಲ್ಲಿ ಹುಟ್ಟಿದ ಗಜಶಿಕ್ಷಕರಿಂದ ಶಿಕ್ಷಿತವಾದ ಆರುನೂರು ಆನೆಗಳನ್ನು ಬೇರೆ ವರವಾಗಿ ಕೊಡುತ್ತೇನೆ.

ನ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್ ।
ಅನ್ಯದಸ್ಮೈ ವರಂ ದದ್ಯಾಂ ವೈಶ್ಯಗ್ರಾಮಾಂಶ್ಚತುರ್ದಶ ॥೧೭॥

ಸುಸ್ಫೀತಾನ್ ಧನಸಂಯುಕ್ತಾನ್ ಪ್ರತ್ಯಾಸನ್ನವನೋದಕಾನ್ ।
ಅಕುತೋಭಯಾನ್ ಸುಸಂಪನ್ನಾನ್ ರಾಜಭೋಜ್ಯಾಂಶ್ಚತುರ್ದಶ ॥೧೮॥

ಅರ್ಜುನನನ್ನು ತೋರಿಸಿದವನು ಅದನ್ನೂ ಸಾಲದೆಂದರೆ ಧಾನ್ಯ ಧನ

ಸಮೃದ್ಧವೂ ಅರಣ್ಯದ ಬಳಿ ಸರೋವರದ ಬಳಿ ಇರುವುದೂ ನಿರ್ಭಯವೂ ಸಂಪತ್ ಸಮೃದ್ಧವೂ ರಾಜಭೋಗಯುಕ್ತವೂ ಆದ ಹದಿನಾಲ್ಕು ವೈಶ್ಯಗ್ರಾಮಗಳನ್ನು ಕೊಡುವೆನು.

ದಾಸೀನಾಂ ನಿಷ್ಕಕಂಠೀನಾಂ ಮಾಗಧೀನಾಂ ಶತಂ ತಥಾ ।
ಪ್ರತ್ಯಗ್ರವಯಸಾಂ ದದ್ಯಾಂ ಯೋ ಮೇ ಬ್ರೂಯಾದ್
ಧನಂಜಯಮ್ ॥೧೯॥

ಬಂಗಾರದ ಹಾರ ತೊಟ್ಟ ನವಯೌವನವತಿಯರಾದ ನೂರು ದಾಸಿಯರನ್ನೂ ಮಾಗಧಿಯರನ್ನೂ ಅರ್ಜುನನೆಲ್ಲಿರುವನೆಂಬುದನ್ನು ಹೇಳುವವನಿಗೆ ಕೊಡುವೆನು.

ನ ಚೇತ್ತದಭಿಮನ್ಯೇತ ಪುರುಷೋऽರ್ಜುನದರ್ಶಿವಾನ್ ।
ಅನ್ಯಂ ತಸ್ಮೈ ವರಂ ದದ್ಯಾಂ ಯಮಸೌ ಕಾಮಯೇತ್
ಸ್ವಯಮ್ ॥೨೦॥

ಪುತ್ರದಾರಾನ್ ವಿಹಾಯೈವ ಯದನ್ಯದ್ ವಿತ್ತಮಸ್ತಿ ಮೇ ।
ತಚ್ಚ ತಸ್ಮೈ ಪುನರ್ದದ್ಯಾಂ ಯದ್ಯಚ್ಚ ಮನಸೇಚ್ಛತಿ ॥೨೧॥

ಅರ್ಜುನನನ್ನು ತೋರಿಸಿದವನು ಅದನ್ನೂ ಸಾಲದೆಂದರೆ ಅವನೇನು ಬಯಸುವನೋ ಅದನ್ನು ವರವಾಗಿ ಕೊಡುತ್ತೇನೆ. ಹೆಂಡಿರು ಮಕ್ಕಳನ್ನು ಹೊರತುಪಡಿಸಿ ಬೇರೆ ಏನು ನನ್ನ ಸೊತ್ತು ಇರುವುದೋ ಏನನ್ನು ಮನಸಿನಿಂದ ಆತ ಬಯಸುವನೋ ಅದನ್ನು ನಾನು ಕೊಡುತ್ತೇನೆ.

ಹತ್ವಾ ಚ ಸಹಿತೌ ಕೃಷ್ಣೌ ತಯೋರ್ವಿತ್ತಾನಿ ಸರ್ವಶಃ ।
ತಸ್ಮೈ ದದ್ಯಾಮಹಂ ಯೋ ಮೇ ಪ್ರಬ್ರೂಯಾತ್
ಕೇಶವಾರ್ಜುನೌ ॥೨೨॥

ಕೃಷ್ಣಾರ್ಜುನರೆಲ್ಲಿರುವರೆಂದು ಹೇಳುವವನಿಗೆ, ಅವರಿಬ್ಬರನ್ನೂ ಕೊಂದು ಅವರ ಎಲ್ಲ ಸಂಪತ್ತನ್ನು ಕೊಡುತ್ತೇನೆ.

ಏತಾ ವಾಚಃ ಸುಬಹುಶಃ ಕರ್ಣ ಉಚ್ಚಾರಯನ್ ಯುಧಿ ।
ದಧ್ಮೌ ಸಾಗರಸಂಭೂತಂ ಸುಸ್ವರಂ ಶಂಖಮುತ್ತಮಮ್ ॥೨೩॥

ಇಂಥ ಮಾತುಗಳನ್ನು ಬಹುವಾಗಿ ಉಚ್ಚರಿಸುತ್ತ ಸಾಗರೋತ್ಪನ್ನವಾದ ಸುಸ್ವರವುಳ್ಳ ಉತ್ತಮ ಶಂಖವನ್ನು ರಣರಂಗದಲ್ಲಿ ಕರ್ಣನು ಊದಿದನು.

ತಾ ವಾಚಃ ಸೂತಪುತ್ರಸ್ಯ ತಥಾ ಯುಕ್ತಾ ನಿಶಮ್ಯ ತು ।
ದುರ್ಯೋಧನೋ ಮಹಾರಾಜ ಸಂಹೃಷ್ಟಃ ಸಾನುಜೋಽಭವತ್ ॥೨೪॥

ಮಹಾರಾಜ, ದುರ್ಯೋಧನನು ಮತ್ತು ಅವನ ತಮ್ಮಂದಿರು ಕರ್ಣನಾಡಿದ ಆ ಮಾತುಗಳನ್ನು ಕೇಳಿ ಹರ್ಷಿತರಾದರು.

ತತೋ ದುಂದುಭಿನಿರ್ಘೋಷೋ ಮೃದಂಗಾನಾಂ ಚ ಸರ್ವಶಃ ।
ಸಿಂಹನಾದಃ ಸವಾದಿತ್ರಃ ಕುಂಜರಾಣಾಂ ಚ ನಿಃಸ್ವನಃ ॥೨೫॥

ಪ್ರಾದುರಾಸೀತ್ ತದಾ ರಾಜಂಸ್ತತ್ರಾನ್ಯೇ ಪುರುಷರ್ಷಭ ।
ಯೋಧಾನಾಂ ಸಂಪ್ರಹೃಷ್ಟಾನಾಂ ತಥಾ ಸಮಭವತ್ಸ್ವನಃ ॥೨೬॥

ರಾಜನೆ, ಆಗ ದುಂದುಭಿ ಮೃದಂಗ ಧ್ವನಿಗಳು, ಸಿಂಹನಾದ, ವಾದ್ಯಘೋಷ, ಆನೆಗಳ ಧ್ವನಿಗಳು ಎಲ್ಲೆಡೆ ನಿನ್ನ ಸೈನ್ಯದಲ್ಲಿ ಕೇಳಿಬಂದುವು. ಹರ್ಷಿತರಾದ ಯೋಧರ ಗರ್ಜನೆಗಳು ಉಂಟಾದುವು.

ತಥಾ ಪ್ರಹೃಷ್ಟೇ ಸೈನ್ಯೇ ತಂ ಪ್ಲವಮಾನಂ ಮಹಾರಥಮ್ ।
ವಿಕತ್ಥಮಾನಂ ಚ ತದಾ ರಾಧೇಯಮರಿಕರ್ಶನಮ್ ॥೨೭॥
ಮದ್ರರಾಜಃ ಪ್ರಸಹ್ಯೇದಂ ವಚನಂ ಪ್ರತ್ಯಭಾಷತ ॥೨೮॥

ಹರ್ಷಗೊಂಡ ಸೈನ್ಯದ ನಡುವೆ ಹೋಗುತ್ತ ಆತ್ಮಶ್ಲಾಘನೆ ಮಾಡಿಕೊಳ್ಳುತ್ತಿದ್ದ ಶತ್ರುನಾಶಕ ಮಹಾರಥನಾದ ಕರ್ಣನಿಗೆ ಶಲ್ಯನು ಬಲವಾಗಿ ಪ್ರತ್ಯುತ್ತರ ನೀಡಿದ.

ಶಲ್ಯಃ

ಮಾ ಸೂತಪುತ್ರ ಮಾಮೈವ ಸೌವರ್ಣಂ ಹಸ್ತಿಷಡ್ಗತಮ್ ।
ಪ್ರಯಚ್ಛಸಿ ಮುಧೈವ ತ್ವಂ ದ್ರಕ್ಷ್ಯಸ್ಯದ್ಯ ಧನಂಜಯಮ್ ॥೨೯॥

ಶಲ್ಯ ನುಡಿದ— ಬೇಡ, ಕರ್ಣ ಬೇಡ, ಹೀಗೆ ಮಾಡಬೇಡ. ಅರ್ಜುನನನ್ನು

ತೋರಿಸುವವನಿಗೆ ಆರು ಆನೆಗಳು ಹೊರುವಷ್ಟು ಹೊನ್ನು ವ್ಯರ್ಥವಾಗಿ ಕೊಟ್ಟು ಪೋಲು ಮಾಡುತ್ತಿರುವಿ. ನೀನೇ ಅರ್ಜುನನನ್ನು ಈಗ ನೋಡುವಿ.

ಬಲೇನ ಮತ್ತಸ್ಯಜಸಿ ವಸು ವೈಶ್ರವಣೋ ಯಥಾ ।
ಅಯತ್ನೇನೈವ ರಾಧೇಯ ದ್ರಷ್ಟಾಸ್ಯದ್ಯ ಧನಂಜಯಮ್ ॥೩೦॥

ಬಲದಿಂದ ಮತ್ತನಾಗಿ ಕುಬೇರನಂತೆ ಸಂಪತ್ತನ್ನು ಕೊಡುತ್ತಿರುವೆ. ಕರ್ಣ, ಹೀಗೆ ಮಾಡಬೇಡ. ಏನೂ ಪ್ರಯತ್ನವಿಲ್ಲದೆ ನೀನೆ ಈಗ ಅರ್ಜುನನನ್ನು ಕಾಣುವೆ.

ಪುರಾ ಸೃಜಸಿ ಯಚ್ಚಾಪಿ ವಿತ್ತಂ ಬಹು ಚ ಮೂಢವತ್ ।
ಅಪಾತ್ರದಾನಾದ್ ಯೇ ದೋಷಾಸ್ತಾನ್ ಮೋಹಾನ್ನಾವಬುಧ್ಯಸೇ ॥೩೧॥

ಮೂರ್ಖನಂತೆ ಬಹು ಧನವನ್ನು ಅಪಾತ್ರರಿಗೆ ನೀನು ಕೊಡುತ್ತಿರುವೆ. ಅಪಾತ್ರ ದಾನದಿಂದ ಬರುವ ದೋಷಗಳನ್ನು ಮೋಹದಿಂದ ನೀನು ತಿಳಿಯಲಾರದವನು ಆಗಿರುವೆ.

ಯತ್ತ್ವವೇದಯಸೇ ವಿತ್ತಂ ಬಹು ತೇನ ಖಲು ತ್ವಯಾ ।
ಶಕ್ಯಂ ಬಹುವಿಧೈರ್ಯಜ್ಞೈರ್ಯಷ್ಟುಂ ಸೂತ ಯಜಸ್ವ ತೈಃ ॥೩೨॥

ಸೂತನೆ, ನೀನು ಕೊಡುವ ಭಾರೀ ಮೊತ್ತದ ಸಂಪತ್ತಿನಿಂದ ನಾನಾ ವಿಧದ ಯಜ್ಞಗಳನ್ನು ನಡೆಸಲು ನಿನಗೆ ಶಕ್ಯವಿದೆ. ಯಜ್ಞವನ್ನೇ ಮಾಡು.

ಯಚ್ಚ ಪ್ರಾರ್ಥಯಸೇ ಹಂತುಂ ಕೃಷ್ಣೌ ಮೋಹಾದ್ ವೃಥೈವ ತತ್ ।
ನ ಹಿ ಶುಶ್ರುಮ ಸಮ್ಮರ್ದೇ ಕ್ರೋಷ್ಟಾ ಸಿಂಹೌ ನಿಪಾತಿತೌ ॥೩೩॥

ಕೃಷ್ಣಾರ್ಜುನರನ್ನು ಕೊಲ್ಲಬೇಕೆಂದು ಮೋಹದಿಂದ ನೀನು ಸಂಕಲ್ಪಿಸುತ್ತಿರುವುದು ಬರಿ ವ್ಯರ್ಥವೆ ಸರಿ. ಒಂದು ಗುಳ್ಳೆ ನರಿ ಹೋರಾಟದಲ್ಲಿ ಎರಡು ಸಿಂಹಗಳನ್ನು ಕೊಂದಿತು ಎಂದರೆ ಅದನ್ನು ನಾವು ಎಂದೂ ಕೇಳಿಲ್ಲ.

ಅಪ್ರಾರ್ಥಿತಂ ಪ್ರಾರ್ಥಯಸೇ ಸುಹೃದೋ ನ ಹಿ ಸಂತಿ ತೇ ।
ಯೇ ತ್ವಾಂ ನಿವಾರಯನ್ತ್ಯಾಶು ಪ್ರಪತಂತಂ ಹುತಾಶನೇ ॥೩೪॥

ಹಿತವರು ಬಯಸದಿರುವ ಕಾರ್ಯವನ್ನು ಅವರಿಗಾಗಿ ಮಾಡಲು

ಹೊರಟಿರುವೆ. ಏಕೆಂದರೆ ಬೇಗನೆ ಬೆಂಕಿಯಲ್ಲಿ ಬೀಳಲು ಹೊರಟಿರುವ ನಿನ್ನನ್ನು ತಡೆಯುವಂಥ ಹಿತವರೇ ನಿನಗೆ ಇಲ್ಲ.

ಕಾರ್ಯಾಕಾರ್ಯಂ ನ ಜಾನೀಷೇ ಕಾಲಪಕ್ವೋಽಸ್ಯಸಂಶಯಮ್ ।
ಬಹ್ವಬದ್ಧಮಕರ್ಣೀಯಂ ಕೋ ಹಿ ಬ್ರೂಯಾಜ್ಜಿಜೀವಿಷುಃ ॥೩೫॥

ಏನು ಮಾಡಬೇಕು, ಏನು ಮಾಡಬಾರದೆಂದು ನೀನು ತಿಳಿಯೆ, ನಿಶ್ಚಯವಾಗಿ ನಿನಗೀಗ ಮರಣಕಾಲ ಪಕ್ವವಾಗಿದೆ. ಬಹು ಅಬದ್ಧವಾಗಿ, ಕೇಳಲು ಸಾಧ್ಯವಲ್ಲದ ಇಂಥ ಮಾತನ್ನು ಬದುಕಿ ಉಳಿಯಲು ಬಯಸುವವನು ಯಾವನು ತಾನೆ ಆಡಿಯಾನು?

ಸಮುದ್ರತರಣಂ ದೋರ್ಭ್ಯಾಂ ಕಂಠೇ ಬದ್ಧ್ವಾ ಯಥಾ ಶಿಲಾಮ್ ।
ಗಿರ್ಯಗ್ರಾದ್ವಾ ನಿಪತನಂ ತಾದೃಕ್ ತವ ಚಿಕೀರ್ಷಿತಮ್ ॥೩೬॥

ನೀನು ಮಾಡಲು ಹೊರಟಿರುವ ಕಾರ್ಯ ಕೊರಳಿಗೆ ಕಲ್ಲು ಕಟ್ಟಿಕೊಂಡು ಸಾಗರವನ್ನು ಬಾಹುಗಳಿಂದ ಈಜಿದಾಟಲು ಹೊರಟಂತಿದೆ. ಬೆಟ್ಟದ ತುದಿಯಿಂದ ಬೀಳಲು ಹೊರಟಂತಿದೆ.

ಸಹಿತಃ ಸರ್ವಯೋಧೈಸ್ತ್ವಂ ವ್ಯೂಢಾನೀಕೈಃ ಸುರಕ್ಷಿತಃ ।
ಧನಂಜಯೇನ ಯುದ್ಧ್ಯಸ್ವ ಶ್ರೇಯಶ್ಚೇತ್‌ಪ್ರಾಪ್ತುಮಿಚ್ಛಸಿ ॥೩೭॥

ವ್ಯೂಹದಿಂದ ನಿಂತ ಸೈನ್ಯಗಳಿಂದ ಸುರಕ್ಷಿತವಾಗಿ ಎಲ್ಲ ಯೋಧರಿಂದ ಕೂಡಿಕೊಂಡೇ ಅರ್ಜುನನೊಡನೆ ಯುದ್ಧ ಮಾಡು. ಹೊರತು, ಶ್ರೇಯಸ್ಸನ್ನು ಹೊಂದಲು ಬಯಸುವಿಯಾದರೆ ನೀನು ಅಹಂಕಾರದಿಂದ ಮೂಢತನದಿಂದ ಒಬ್ಬನೇ ಅರ್ಜುನನನ್ನು ಕೊಲ್ಲಲು ಹೋಗಬೇಡ.

ಹಿತಾರ್ಥಂ ಧಾರ್ತರಾಷ್ಟ್ರಸ್ಯ ಬ್ರವೀಮಿ ತ್ವಾಂ ನ ಹಿಂಸಯಾ ।
ಶ್ರದ್ಧಸ್ಟೇದಂ ಮಯಾ ಪ್ರೋಕ್ತಂ ಯದಿ ತೇಽಸ್ತಿ ಜಿಜೀವಿಷಾ ॥೩೮॥

ದುರ್ಯೋಧನನ ಒಳ್ಳೆಯದಕ್ಕಾಗಿ ನಾನು ಈ ಮಾತನ್ನು ನಿನಗೆ ಹೇಳುತ್ತಿದ್ದೇನೆ. ನಿನ್ನ ಮನಸಿಗೆ ಹಿಂಸೆ ಮಾಡುವುದಕ್ಕಾಗಿ ಅಲ್ಲ. ಅದರಿಂದ ನನಗೇನೂ ಪ್ರಯೋಜನವಿಲ್ಲ. ನಿನಗೆ ಬದುಕಿ ಉಳಿವ ಆಸೆ ಇರುವುದಾದರೆ ನನ್ನ ಮಾತಿನಲ್ಲಿ ವಿಶ್ವಾಸವಿಡು.

ಕರ್ಣಃ

ಸ್ವಬಾಹುವೀರ್ಯಮಾಶ್ರಿತ್ಯ ಪ್ರಾರ್ಥಯಾಮ್ಯರ್ಜುನಂ ರಣೇ ।
ತ್ವಂ ತು ಮಿತ್ರಮುಖಃ ಶತ್ರುರ್ಮಾಂ ಭೀಷಯಿತುಮಿಚ್ಛಸಿ ॥೩೯॥

ಕರ್ಣ ನುಡಿದ— ನನ್ನ ಬಾಹುಬಲವನ್ನು ಆಶ್ರಯಿಸಿಯೇ ನಾನು ಅರ್ಜುನನನ್ನು ಯುದ್ಧಕ್ಕೆ ಕರೆಯುತ್ತೇನೆ. ನೀನು ಮಿತ್ರನಂತೆ ಕಾಣುವ ಶತ್ರು. ನನ್ನನ್ನು ಭಯಪಡಿಸಲು ಯತ್ನಿಸುತ್ತಿರುವೆ.

ನ ಮಾಮಸ್ಮಾದಭಿಪ್ರಾಯಾತ್ ಕಶ್ಚಿದದ್ಯ ನಿವರ್ತಯೇತ್ ।
ಅಪೀಂದ್ರೋ ವಜ್ರಮುದ್ಯಮ್ಯ ಕಿಮು ಮರ್ತ್ಯಃ ಕಥಂಚನ ॥೪೦॥

ನನ್ನ ಈ ನಿರ್ಧಾರದಿಂದ ಈಗ ಯಾರೂ ಯಾವ ರೀತಿಯಿಂದಲೂ ನನ್ನನ್ನು ಹಿಮ್ಮೆಟ್ಟಿಸಲಾರರು. ವಜ್ರಾಯುಧ ಹಿಡಿದು ಇಂದ್ರನೇ ಬಂದರೂ ಸರಿಯೆ. ಇನ್ನು ಮಾನವನ ಬಗ್ಗೆ ಏನು ಹೇಳಬೇಕು?

ಸಂಜಯಃ

ಇತಿ ಕರ್ಣಸ್ಯ ವಾಕ್ಯಾಂತೇ ಶಲ್ಯಃ ಪ್ರಾಹೋತ್ತರಂ ವಚಃ ।
ಚುಕೋಪಯಿಷುರತ್ಯರ್ಥಂ ಕರ್ಣಂ ಮದ್ರೇಶ್ವರಃ ಪುನಃ ॥೪೧॥

ಸಂಜಯ ನುಡಿದ— ಹೀಗೆ ಕರ್ಣನು ನುಡಿದಾಗ, ಅವನನ್ನು ಅತ್ಯಂತ ಕೋಪಾವಿಷ್ಟನನ್ನಾಗಿ ಮಾಡುವ ಇಚ್ಛೆಯಿಂದ ಶಲ್ಯ ಪುನಃ ನುಡಿದ.

ಯದಾ ವೈ ತ್ವಾಂ ಫಲ್ಗುನಬಾಹುವೇಗಾತ್
ಜ್ಯಾಚೋದಿತಾ ವೇಗವಂತೋಽಗ್ನಿಕಲ್ಪಾಃ ।
ಅನ್ವೇತಾರಃ ಕಂಕಪತ್ರಾಃ ಶಿತಾಗ್ರಾ-
ಸ್ತಕ್ಷ್ಯತ್ಯೇಷಾ ತ್ವಾಂ ತದಾ ಕರ್ಣ ಬುದ್ಧಿಃ ॥೪೨॥

ಕರ್ಣನೆ, ವೇಗಉಳ್ಳ, ಬೆಂಕಿಯಂತಿರುವ, ಹದ್ದಿನ ರೆಕ್ಕೆಯುಳ್ಳ ತೀಕ್ಷ್ಣವಾದ, ಅರ್ಜುನನ ಬಾಹುವೇಗದಿಂದ ಬಿಲ್ಲಿನ ಹೆದೆಯಿಂದ ಎಸೆಯಲ್ಪಡುವ ಬಾಣಗಳು ಪಲಾಯನ ಮಾಡುವ ನಿನ್ನನ್ನು ಬೆನ್ನಟ್ಟಿ ಬರುವಾಗ, ನಿನ್ನ ಈ ಮೂಢಬುದ್ಧಿ ನಿನ್ನಿಂದ ತೊಲಗುತ್ತದೆ.

ಯದಾ ದಿವ್ಯಂ ಧನುರಾದಾಯ ಪಾರ್ಥಃ
ಪ್ರತಾಪಯನ್ ಪೃತನಾಂ ಸವ್ಯಸಾಚೀ ।
ತ್ವಾಂ ಮರ್ದಯಿಷ್ಯತ್ಯಸುಖೈಃ ಪೃಷತ್ಕೈ-
ಸ್ತದಾ ಪೃಚ್ಛಾಂ ತ್ಯಕ್ಷ್ಯಸೇ ಪಾಂಡವಸ್ಯ ॥೪೩॥

ಸವ್ಯಸಾಚಿ ಅರ್ಜುನನು ದಿವ್ಯವಾದ ಧನುಸ್ಸನ್ನು ಹಿಡಿದು ನಿನ್ನ ಸೈನ್ಯವನ್ನು ಸುಡುತ್ತ ಸುಖನೀಡದ ಬಾಣಗಳಿಂದ ನಿನ್ನನ್ನು ಕೊಲ್ಲುವಾಗ ಅರ್ಜುನನೆಲ್ಲಿ ಎಂಬ ಪ್ರಶ್ನೆಯನ್ನು ನೀನು ಬಿಟ್ಟು ಬಿಡುವೆ.

ಬಾಲಶ್ಚಂದ್ರಂ ಮಾತುರಂಕೇ ಶಯಾನೋ
ಯಥಾ ಕಶ್ಚಿತ್ಪಾರ್ಥಯತೇಪಹರ್ತುಮ್ ।
ತದ್ವನ್ಮೋಹಾದ್ ದ್ಯೋತಮಾನಂ ರಥಸ್ಥಂ
ಜೇತುಂ ಪಾರ್ಥಂ ಕಾಂಕ್ಷಸೇ ಸೂತಪುತ್ರ ॥೪೪॥

ಮಾತೆಯ ಮಡಿಲಲ್ಲಿ ಮಲಗಿದ ಬಾಲಕನೊಬ್ಬ ಚಂದ್ರನನ್ನು ಕಿತ್ತುಕೊಳ್ಳಲು ಬಯಸುವಂತೆ ರಥದಲ್ಲಿ ಬೆಳಗುವ ಪಾರ್ಥನನ್ನು ಗೆಲ್ಲಲು ಮೋಹದಿಂದ ಇಚ್ಛಿಸುವೆ, ಕರ್ಣ!

ತ್ರಿಶೂಲಮಾಶ್ಲಿಷ್ಯ ಸುತೀಕ್ಷ್ಣಧಾರಂ
ಸರ್ವಾಣಿ ಗಾತ್ರಾಣಿ ನಿಕರ್ಷಸಿ ತ್ವಮ್ ।
ಸುತೀಕ್ಷ್ಣಶಸ್ತ್ರೋಪಮಕರ್ಮಣೇಹ
ಯುಯುತ್ಸಸೇ ಫಲ್ಗುನೇನಾದ್ಯ ಕರ್ಣ ॥೪೫॥

ಕರ್ಣ, ಬಲುತೀಕ್ಷ್ಣಧಾರೆಯುಳ್ಳ ತ್ರಿಶೂಲವನ್ನು ಆಲಿಂಗಿಸಿ ಮೈಯೆಲ್ಲ ಗಾಯ ಮಾಡಿಕೊಳ್ಳುತ್ತಿರುವೆ ನೀನು. ಏಕೆಂದರೆ, ಬಲು ತೀಕ್ಷ್ಣಶಸ್ತ್ರದಂತೆ ಕಾರ್ಯಮಾಡುವ ಅರ್ಜುನನೊಡನೆ ಯುದ್ಧಮಾಡಲು ಬಯಸುವೆ.

ಹನ್ಯಾದಸಿಂ ತೀಕ್ಷ್ಣಧಾರಂ ಯಥಾಽತಃ
ಸುತೇಜನಂ ನಿಹಿತಂ ವೈ ಪೃಥಿವ್ಯಾಮ್ ।

ಕರ್ಣಃ

ಸ್ವಬಾಹುವೀರ್ಯಮಾಶ್ರಿತ್ಯ ಪ್ರಾರ್ಥಯಾಮ್ಯರ್ಜುನಂ ರಣೇ ।
ತ್ವಂ ತು ಮಿತ್ರಮುಖಃ ಶತ್ರುರ್ಮಾಂ ಭೀಷಯಿತುಮಿಚ್ಛಸಿ ॥೫೯॥

ಕರ್ಣ ನುಡಿದ— ನನ್ನ ಬಾಹುಬಲವನ್ನು ಆಶ್ರಯಿಸಿಯೇ ನಾನು ಅರ್ಜುನನನ್ನು ಯುದ್ಧಕ್ಕೆ ಕರೆಯುತ್ತೇನೆ. ನೀನು ಮಿತ್ರನಂತೆ ಕಾಣುವ ಶತ್ರು. ನನ್ನನ್ನು ಭಯಪಡಿಸಲು ಯತ್ನಿಸುತ್ತಿರುವೆ.

ನ ಮಾಮಸ್ಮಾದಭಿಪ್ರಾಯಾತ್ ಕಶ್ಚಿದದ್ಯ ನಿವರ್ತಯೇತ್ ।
ಅಪೀಂದ್ರೋ ವಜ್ರಮುದ್ಯಮ್ಯ ಕಿಮು ಮರ್ತ್ಯಃ ಕಥಂಚನ ॥೬೦॥

ನನ್ನ ಈ ನಿರ್ಧಾರದಿಂದ ಈಗ ಯಾರೂ ಯಾವ ರೀತಿಯಿಂದಲೂ ನನ್ನನ್ನು ಹಿಮ್ಮೆಟ್ಟಿಸಲಾರರು. ವಜ್ರಾಯುಧ ಹಿಡಿದು ಇಂದ್ರನೇ ಬಂದರೂ ಸರಿಯೆ. ಇನ್ನು ಮಾನವನ ಬಗ್ಗೆ ಏನು ಹೇಳಬೇಕು?

ಸಂಜಯಃ

ಇತಿ ಕರ್ಣಸ್ಯ ವಾಕ್ಯಾಂತೇ ಶಲ್ಯಃ ಪ್ರಾಹೋತ್ತರಂ ವಚಃ ।
ಚುಕೋಪಯಿಷುರತ್ಯರ್ಥಂ ಕರ್ಣಂ ಮದ್ರೇಶ್ವರಃ ಪುನಃ ॥೬೧॥

ಸಂಜಯ ನುಡಿದ— ಹೀಗೆ ಕರ್ಣನು ನುಡಿದಾಗ, ಅವನನ್ನು ಅತ್ಯಂತ ಕೋಪಾವಿಷ್ಟನನ್ನಾಗಿ ಮಾಡುವ ಇಚ್ಛೆಯಿಂದ ಶಲ್ಯ ಪುನಃ ನುಡಿದ.

ಯದಾ ವೈ ತ್ವಾಂ ಫಲ್ಗುನಬಾಹುವೇಗಾತ್
ಜ್ಯಾಚೋದಿತಾ ವೇಗವಂತೋऽಗ್ನಿಕಲ್ಪಾಃ ।
ಅನ್ವೇತಾರಃ ಕಂಕಪತ್ರಾಃ ಶಿತಾಗ್ರಾ-
ಸ್ತ್ಯಕ್ಷ್ಯತ್ಯೇಷಾ ತ್ವಾಂ ತದಾ ಕರ್ಣ ಬುದ್ಧಿಃ ॥೬೨॥

ಕರ್ಣನೆ, ವೇಗಉಳ್ಳ, ಬೆಂಕಿಯಂತಿರುವ, ಹದ್ದಿನ ರೆಕ್ಕೆಯುಳ್ಳ ತೀಕ್ಷ್ಣವಾದ, ಅರ್ಜುನನ ಬಾಹುವೇಗದಿಂದ ಬಿಲ್ಲಿನ ಹೆದೆಯಿಂದ ಎಸೆಯಲ್ಪಡುವ ಬಾಣಗಳು ಪಲಾಯನ ಮಾಡುವ ನಿನ್ನನ್ನು ಬೆನ್ನಟ್ಟಿ ಬರುವಾಗ, ನಿನ್ನ ಈ ಮೂಢಬುದ್ಧಿ ನಿನ್ನಿಂದ ತೊಲಗುತ್ತದೆ.

ಯದಾ ದಿವ್ಯಂ ಧನುರಾದಾಯ ಪಾರ್ಥಃ
ಪ್ರತಾಪಯನ್ ಪೃತನಾಂ ಸವ್ಯಸಾಚೀ ।
ತ್ವಾಂ ಮರ್ದಯಿಷ್ಯತ್ಯಸುಖೈಃ ಪೃಷತ್ಕೈ-
ಸ್ತದಾ ಪೃಚ್ಛಾಂ ತ್ಯಕ್ಷ್ಯಸೇ ಪಾಂಡವಸ್ಯ ॥೪೩॥

ಸವ್ಯಸಾಚಿ ಅರ್ಜುನನು ದಿವ್ಯವಾದ ಧನುಸ್ಸನ್ನು ಹಿಡಿದು ನಿನ್ನ ಸೈನ್ಯವನ್ನು ಸುಡುತ್ತ ಸುಖನೀಡದ ಬಾಣಗಳಿಂದ ನಿನ್ನನ್ನು ಕೊಲ್ಲುವಾಗ ಅರ್ಜುನನೆಲ್ಲಿ ಎಂಬ ಪ್ರಶ್ನೆಯನ್ನು ನೀನು ಬಿಟ್ಟು ಬಿಡುವೆ.

ಬಾಲಶ್ಚಂದ್ರಂ ಮಾತುರಂಕೇ ಶಯಾನೋ
ಯಥಾ ಕಶ್ಚಿತ್ಪಾರ್ಥಯತೇಪಹರ್ತುಮ್ ।
ತದ್ವನ್ಮೋಹಾದ್ ದ್ಯೋತಮಾನಂ ರಥಸ್ಥಂ
ಜೇತುಂ ಪಾರ್ಥಂ ಕಾಂಕ್ಷಸೇ ಸೂತಪುತ್ರ ॥೪೪॥

ಮಾತೆಯ ಮಡಿಲಲ್ಲಿ ಮಲಗಿದ ಬಾಲಕನೊಬ್ಬ ಚಂದ್ರನನ್ನು ಕಿತ್ತುಕೊಳ್ಳಲು ಬಯಸುವಂತೆ ರಥದಲ್ಲಿ ಬೆಳಗುವ ಪಾರ್ಥನನ್ನು ಗೆಲ್ಲಲು ಮೋಹದಿಂದ ಇಚ್ಛಿಸುವೆ, ಕರ್ಣ!

ತ್ರಿಶೂಲಮಾಶ್ಲಿಷ್ಯ ಸುತೀಕ್ಷ್ಣಧಾರಂ
ಸರ್ವಾಣಿ ಗಾತ್ರಾಣಿ ನಿಕರ್ಷಸಿ ತ್ವಮ್ ।
ಸುತೀಕ್ಷ್ಣಶಸ್ತ್ರೋಪಮಕರ್ಮಣೇಹ
ಯುಯುತ್ಸಸೇ ಫಲ್ಗುನೇನಾದ್ಯ ಕರ್ಣ ॥೪೫॥

ಕರ್ಣ, ಬಲುತೀಕ್ಷ್ಣಧಾರೆಯುಳ್ಳ ತ್ರಿಶೂಲವನ್ನು ಆಲಿಂಗಿಸಿ ಮೈಯೆಲ್ಲ ಗಾಯ ಮಾಡಿಕೊಳ್ಳುತ್ತಿರುವೆ ನೀನು. ಏಕೆಂದರೆ, ಬಲು ತೀಕ್ಷ್ಣಶಸ್ತ್ರದಂತೆ ಕಾರ್ಯಮಾಡುವ ಅರ್ಜುನನೊಡನೆ ಯುದ್ಧಮಾಡಲು ಬಯಸುವೆ.

ಹನ್ಯಾದಸಿಂ ತೀಕ್ಷ್ಣಧಾರಂ ಯಥಾಽತಃ
ಸುತೇಜನಂ ನಿಹಿತಂ ವೈ ಪೃಥಿವ್ಯಾಮ್ ।

ತಥಾ ಖನಸ್ಯದ್ಯ ಶಿತಾನ್ ಪೃಷತ್ಕಾನ್
ಯಥಾರ್ಥಯಸ್ಯರ್ಜುನೇನೇಹ ಯುದ್ಧಮ್ ॥೪೬॥

ನೆಲದಲ್ಲಿ ಗೂಟದಂತೆ, ಚೂಪಾದ ತೀಕ್ಷ್ಣವಾದ ತುದಿ ಮೇಲೇ ಬರುವಂತೆ, ಅಲುಗುಳ್ಳ ಕತ್ತಿಯನ್ನು ನೆಟ್ಟು ಬರಿಕೈಯಿಂದ ಬಡಿಯುವಂತೆ ಈಗ ನೀನು ಅರ್ಜುನನ ಹರಿತವಾದ ಬಾಣಗಳನ್ನು ನಿನ್ನ ಮೈಯಲ್ಲಿ ನೆಡಿಸಿಕೊಂಡು ಹೊಡೆದು ಅರ್ಜುನನೊಡನೆ ಮಾಡುವ ಯುದ್ಧವನ್ನು ಯಥಾರ್ಥವನ್ನಾಗಿಸುವೆ.

'ಯುಧ ಸಂಪ್ರಹಾರೇ' ಧಾತು ನಿಷ್ಪನ್ನವಾದ್ದರಿಂದ 'ಯುದ್ಧ' ಶಬ್ದಕ್ಕೆ ಹೊಡೆಯುವುದೆಂದೇ ನಿಜವಾದ ಅರ್ಥ. ಕರ್ಣ ಈಗ ಅರ್ಜುನನ ಬಾಣಗಳಿಂದ ತನ್ನ ಮೈಯನ್ನು ತಾನೇ ಹೊಡೆಸಿಕೊಳ್ಳುತ್ತಿದ್ದಾನೆ. ಯುದ್ಧ ಶಬ್ದವನ್ನು ಹೀಗೆ ಅನರ್ಥಗೊಳಿಸುತ್ತಾನೆ.

ಕ್ರುದ್ಧಂ ಸಿಂಹಂ ಕೇಸರಿಣಂ ಬೃಹಂತಂ
ಬಾಲೋ ಮೂಢಃ ಕ್ಷುದ್ರಮೃಗಸ್ತರಸ್ವೀ ।
ಸಮಾಹ್ವಯೇದ್ ಧೃಷ್ಟಮುಪೇತ್ಯ ಯೋದ್ಧುಂ
ತಥಾ ತ್ವಮದ್ಯಾಹ್ವಯಸೇ ಹಿ ಪಾರ್ಥಮ್ ॥೪೭॥

ಬುದ್ಧಿ ಇಲ್ಲದ ಆತುರಬುದ್ಧಿಯ ಸಣ್ಣ ಜಿಂಕೆಮರಿ ಕೋಪಗೊಂಡಿರುವ ದೊಡ್ಡ ಸಿಂಹವನ್ನು ಜಗಳಕ್ಕೆ ಕರೆಯುವಂತೆಯೆ, ಸೂತಪುತ್ರನೇ, ನೀನೀಗ ಅರ್ಜುನನನ್ನು ಯುದ್ಧಕ್ಕೆ ಕರೆಯುವುದು ಕೂಡ ಮೂರ್ಖತನ.

ಮಾ ಸೂತಪುತ್ರಾಹ್ವಯ ರಾಜಪುತ್ರಂ
ಮಹಾವೀರ್ಯಂ ಕೇಸರಿಣಂ ಯಥೈವ ।
ವನೇ ಶೃಗಾಲಃ ಪಿಶಿತೇನ ದೃಪ್ತಃ
ಪಾರ್ಥಂ ಸಮಾಸಾದ್ಯ ವಿನಂಕ್ಷ್ಯಸಿ ತ್ವಮ್ ॥೪೮॥

ಸೂತಪುತ್ರ, ಮಹಾವೀರನಾದ ರಾಜಪುತ್ರನಾದ ಅರ್ಜುನನನ್ನು ಯುದ್ಧಕ್ಕೆ ಕರೆಯಬೇಡ. ಕಾಡಿನಲ್ಲಿ ಮಾಂಸದಿಂದ ಕೊಬ್ಬಿದ ಗುಳ್ಳೆನರಿ ಸಿಂಹವನ್ನು ಜಗಳಕ್ಕೆ ಕರೆದು ನಾಶವಾಗುವಂತೆ ನೀನು ಅರ್ಜುನನನ್ನು ಯುದ್ಧಕ್ಕೆ ಕರೆದು ನಾಶ ಹೊಂದುವೆ.

ಈಷಾದಂತಂ ಮಹಾನಾಗಂ ಪ್ರಭಿನ್ನಕರಟಾಮುಖಿಮ್ ।
ಶಶಕೋ ಹ್ವಯಸೇ ಯುದ್ಧೇ ಕರ್ಣ ಪಾರ್ಥಂ ಧನಂಜಯಮ್ ॥೪೯॥

ಈಷಾದಂಡದಂಥ ದಂತಗಳುಳ್ಳ ಮದಜಲವನ್ನು ಸುರಿಸುವ ದೊಡ್ಡ ಆನೆಯನ್ನು ಮೊಲದಂತೆ, ಧನಂಜಯನಾದ ಪಾರ್ಥನನ್ನು ನೀನು ಯುದ್ಧಕ್ಕೆ ಆಹ್ವಾನಿಸುತ್ತಿರುವೆ.

ಬಿಲಸ್ಥಂ ಕೃಷ್ಣಸರ್ಪಂ ತ್ವಂ ಬಾಲ್ಯಾತ್ ಕಾಷ್ಠೇನ ವಿಧ್ಯಸಿ ।
ಮಹಾವಿಷಂ ಪೂರ್ಣಕೋಪಂ ಯತ್ಪಾರ್ಥಂ ಯೋದ್ಧುಮಿಚ್ಛಸಿ ॥೫೦॥

ಕರ್ಣ, ನೀನು ಬಿಲದಲ್ಲಿರುವ ಮಹಾವಿಷದ ಅತಿಕೋಪಿಯಾದ ಕೃಷ್ಣಸರ್ಪವನ್ನು ಹುಡುಗುತನದ ಬುದ್ಧಿಯಿಂದ ಕೋಲಿಂದ ಚುಚ್ಚುತ್ತಿರುವೆ, ಅರ್ಜುನನೊಡನೆ ಯುದ್ಧಮಾಡಲು ಬಯಸುತ್ತಿರುವೆ.

ಸಿಂಹಂ ಕೇಸರಿಣಂ ಕ್ರುದ್ಧಮಭಿಕ್ರಮ್ಯಾಭಿನರ್ದಸೇ ।
ಶೃಗಾಲ ಇವ ಮೂಢಸ್ತ್ವಂ ನೃಸಿಂಹಂ ಕರ್ಣ ಪಾಂಡವಮ್ ॥೫೧॥

ಕೇಸರವುಳ್ಳ ಕ್ರುದ್ಧವಾದ ಸಿಂಹವನ್ನು ಗುಳ್ಳೆನರಿಯಂತೆ ಏರಿಹೋಗಿ ಕೂಗುವೆ. ಮೂಢ ನೀನು, ಕರ್ಣ, ಸಿಂಹದಂಥ ಅರ್ಜುನನನ್ನು ಇದಿರಿಸುತ್ತಿರುವೆ.

ಸುಪರ್ಣಂ ಪತಗಶ್ರೇಷ್ಠಂ ವೈನತೇಯಂ ತರಸ್ವಿನಮ್ ।
ಭೋಗೀವಾಹ್ವಯಸೇ ಪಾರ್ಥಂ ತಥಾ ಕರ್ಣ ಧನಂಜಯಮ್ ॥೫೨॥

ವೇಗವುಳ್ಳ ಪಕ್ಷಿಶ್ರೇಷ್ಠ ವೈನತೇಯ ಗರುಡನನ್ನು ಹಾವಿನಂತೆ, ಧನಂಜಯ ಪಾರ್ಥನನ್ನು ನೀನು ಯುದ್ಧಕ್ಕೆ ಕರೆಯುವೆ.

ಸರ್ವಾಂಭಸಾಂ ನಿಧಿಂ ಭೀಮಮೂರ್ಮಿಮಂತಂ ಝಷಾಕುಲಮ್ ।
ಚಂದ್ರೋದಯೇ ವಿವರ್ಧಂತಮಪ್ಲವಸ್ತ್ವಂ ತಿತೀರ್ಷಸಿ ॥೫೩॥

ಭೀಕರವಾದ ಅಲೆಗಳಿಂದ ಕೂಡಿದ, ತಿಮಿಂಗಿಲ–ಮೊಸಳೆಗಳಿಂದ ತುಂಬಿದ, ಚಂದ್ರೋದಯದಲ್ಲಿ ಉಕ್ಕುವ ಸಮುದ್ರವನ್ನು ನೌಕೆ ಇಲ್ಲದೇ ದಾಟಲು ಬಯಸುವೆ.

ಋಷಭಂ ದುಂದುಭಿಗ್ರೀವಂ ತೀಕ್ಷ್ಣ ಶೃಂಗಂ ಪ್ರಹಾರಿಣಮ್ ।
ವತ್ಸ ಆಹ್ವಯಸೇ ಯುದ್ಧೇ ಕರ್ಣ ಪಾರ್ಥಂ ಧನಂಜಯಮ್ ॥೫೪॥

ದುಂದುಭಿಯಂತೆ ಗುಟುರುಹಾಕುವ ತೀಕ್ಷ್ಣ ಕೊಂಬುಗಳಿಂದ ಹಾಯುವ ಎತ್ತನ್ನು ಎಳೆ ಕರುವಿನಂತೆ ನೀನು ಧನಂಜಯ ಪಾರ್ಥನನ್ನು ಯುದ್ಧಕ್ಕೆ ಕರೆಯುವೆ.

ಮಹಾಮೇಘಂ ಮಹಾಘೋಷಂ ದರ್ದುರಃ ಪ್ರತಿನರ್ದಸಿ ।
ಬಾಣ ತೋಯಪ್ರದಂ ಲೋಕೇ ನರಪರ್ಜನ್ಯಮರ್ಜುನಮ್ ॥೫೫॥

ಬಾಣಗಳ ಮಳೆಗರೆವ, ಗುಡುಗಿನಂತೆ ಗರ್ಜಿಸುವ, ಧನಂಜಯ ಪಾರ್ಥನೆನಿಸಿದ ಅರ್ಜುನನೆಂಬ ದೊಡ್ಡ ಮೋಡಕ್ಕೆ ಪ್ರತಿಯಾಗಿ ಮಳೆಗಾಲದ ಕಪ್ಪೆಯಂತೆ ನೀನು ವಟಗುಟ್ಟುವಿ.

ಯಥಾ ಚ ಸ್ವಗೃಹಸ್ಥಃ ಶ್ವಾ ವ್ಯಾಘ್ರಂ ವನಗತಂ ಭಷೇತ್ ।
ತಥಾ ತ್ವಂ ಭಷಸೇ ಕರ್ಣ ನರವ್ಯಾಘ್ರಂ ಧನಂಜಯಮ್ ॥೫೬॥

ಮನೆಯ ನಾಯಿ ಕಾಡಿನ ಹುಲಿಗೆ ಪ್ರತಿಯಾಗಿ ಬೊಗಳುವಂತೆ, ಕರ್ಣ, ನೀನು ಹುಲಿಯಂಥ ಧನಂಜಯನ ಮುಂದೆ ಬೊಗಳುವೆ.

ಶೃಗಾಲೋ ಹಿ ವನೇ ಕರ್ಣ ಶಶೈಃ ಪರಿವೃತೋ ವಸನ್ ।
ಮನ್ಯತೇ ಸಿಂಹಮಾತ್ಮಾನಂ ಯಾವತ್ ಸಿಂಹಂ ನ ಪಶ್ಯತಿ ॥೫೭॥

ಕರ್ಣ, ಗುಳ್ಳೆನರಿ ಮೊಲಗಳ ನಡುವೆ ವಾಸಮಾಡುತ್ತ ತಾನೆ ಸಿಂಹ ಎಂದುಕೊಳ್ಳುತ್ತದೆ. ಇದು ಸಿಂಹವನ್ನು ನರಿ ನೋಡದಿರುವವರೆಗೆ ಮಾತ್ರ.

ತಥಾ ತ್ವಮಪಿ ರಾಧೇಯ ಸಿಂಹಮಾತ್ಮಾನಮಿಚ್ಛಸಿ ।
ಅಪಶ್ಯನ್ ಶತ್ರುದಮನಂ ನರಸಿಂಹಂ ರಣೇऽರ್ಜುನಮ್ ॥೫೮॥

ಹಾಗೇ ಕರ್ಣ, ನೀನೂ ಕೂಡ ನಿನ್ನನ್ನು ಸಿಂಹ ಎಂದು ಹೇಳಿಕೊಳ್ಳಲು ಇಚ್ಛಿಸುವಿ. ಇದು ನೀನು ರಣದಲ್ಲಿ ಶತ್ರುದಮನ ಮಾಡುವ ನರಸಿಂಹನಾದ ಅರ್ಜುನನನ್ನು ಇನ್ನೂ ಕಾಣದಿರುವುದರಿಂದ.

ವ್ಯಾಘ್ರಂ ತ್ವಂ ಮನ್ಯಸೇऽऽತ್ಮಾನಂ ಯಾವತ್ ಕೃಷ್ಣೌ ನ ಪಶ್ಯಸಿ ।
ಸಮಾಸ್ಥಿತಾವೇಕರಥೇ ಸೂರ್ಯಾಚಂದ್ರಮಸಾವಿವ ॥೫೯॥

ಕೃಷ್ಣಾರ್ಜುನರನ್ನು ಒಂದೇ ರಥದಲ್ಲಿ ಸೂರ್ಯ–ಚಂದ್ರರಂತೆ ಕಾಣದಿರುವವರೆಗೆ ಮಾತ್ರ ನೀನು ನಿನ್ನನ್ನು ಹುಲಿ ಎಂದುಕೊಳ್ಳುವೆ.

ಯಾವದ್ ಗಾಂಡೀವಘೋಷಂ ತ್ವಂ ನ ಶೃಣೋಷಿ ಮಹಾಹವೇ ।
ತಾವದೇವ ತ್ವಯಾ ಕರ್ಣ ಶಕ್ಯಂ ವಕ್ತುಂ ಯಥೇಚ್ಛಸಿ ॥೬೦॥

ಮಹಾರಣದಲ್ಲಿ ಗಾಂಡೀವಧ್ವನಿಯನ್ನು ನೀನು ಕೇಳದಿರುವವರೆಗೆ ಮಾತ್ರ ನೀನು ಮನಬಂದಂತೆ ಮಾತನಾಡಲು ಶಕ್ಯವಿದೆ.

ರಥಶಂಖಧನುಃಶಬ್ದೈರ್ನಾದಯಂತಂ ದಿಶೋ ದಶ ।
ನರ್ದಂತಮಿವ ಶಾರ್ದೂಲಂ ದೃಷ್ಟ್ವಾ ಕ್ರೋಷ್ಟಾ ಭವಿಷ್ಯಸಿ ॥೬೧॥

ರಥಧ್ವನಿ, ಶಂಖಧ್ವನಿ, ಧನುಃಶಬ್ದಗಳಿಂದ ಅರ್ಜುನನು ಹತ್ತುದಿಕ್ಕುಗಳನ್ನು ತುಂಬಿಸುತ್ತಿದ್ದರೆ, ಹುಲಿಯಂತೆ ಗರ್ಜಿಸುತ್ತಿದ್ದರೆ, ನೋಡಿ ನೀನು ಗುಳ್ಳೆನರಿಯೇ ಆಗುವೆ.

ನಿತ್ಯಮೇವ ಶೃಗಾಲಸ್ತ್ವಂ ನಿತ್ಯಂ ಸಿಂಹೋ ಧನಂಜಯಃ ।
ವೀರಪ್ರದ್ವೇಷಣಾನ್ಮೂಢ ತಸ್ಮಾತ್ ಕ್ರೋಷ್ಟೇವ ಲಕ್ಷ್ಯಸೇ ॥೬೨॥

ನೀನೆಂದಿಗೂ ಗುಳ್ಳೆ ನರಿಯೆ, ಅರ್ಜುನನೆಂದಿಗೂ ಸಿಂಹವೆ. ಅದರಿಂದ ಮೂರ್ಖನೆ, ನೀನು ವೀರರನ್ನು ದ್ವೇಷಿಸುವುದರಿಂದ ನರಿಯಂತೇ ಕಾಣುವೆ.

ಯಥಾऽऽಖುಃ ಸ್ಯಾದ್ ಬಿಡಾಲಶ್ಚ ಶ್ವಾ ವ್ಯಾಘ್ರಶ್ಚ ಬಲಾಬಲೇ ।
ಯಥಾ ಶೃಗಾಲಃ ಸಿಂಹಶ್ಚ ಯಥಾ ಚ ಶಶಕುಂಜರೌ ॥೬೩॥

ಯಥಾऽನೃತಂ ಚ ಸತ್ಯಂ ಚ ಯಥಾ ಚಾಪಿ ವಿಷಾಮೃತೇ ।
ತಥಾ ತ್ವಮಪಿ ಪಾರ್ಥಶ್ಚ ಪ್ರಖ್ಯಾತಾವಾತ್ಮಕರ್ಮಭಿಃ ॥೬೪॥

ಬೆಕ್ಕು–ಇಲಿಗಳಂತೆ, ಹುಲಿ–ನಾಯಿಗಳಂತೆ, ಸಿಂಹ–ನರಿಗಳಂತೆ, ಆನೆ–ಮೊಲಗಳಂತೆ, ಸತ್ಯ–ಅನೃತಗಳಂತೆ, ವಿಷ–ಅಮೃತಗಳಂತೆ ಬಲಾಬಲಗಳ ವಿಷಯದಲ್ಲಿ ತಮ್ಮ ತಮ್ಮ ಸಾಧನೆಗಳಿಂದ ಹೆಸರಾಗಿರುವ ನೀನು ಮತ್ತು ಅರ್ಜುನರಿರುವಿರಿ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಏಕೋನಚತ್ವಾರಿಂಶೋಧ್ಯಾಯಃ ॥೩೯॥

ಮಹಾಭಾರತತಾತ್ಪರ್ಯನಿರ್ಣಯ

ಮಾ ಯಾಹಿ ಪಾರ್ಥಂ ಮಾ ಯಾಹಿ ಹತೋನೇನ ಯಮಕ್ಷಯಮ್ ।
ಇತ್ಯುಕ್ತೋ ರವಿಜೋ ಮದ್ರಾನ್ ನಿತರಾಂ ಪರ್ಯಕುತ್ಸಯತ್ ॥ ೩೧

'ಅರ್ಜುನನನ್ನು ಯುದ್ಧದಲ್ಲಿ ಇದಿರಿಸಲು ಹೋಗಬೇಡ. ಅವನಿಂದ ಹತನಾಗಿ ಯಮಲೋಕಕ್ಕೆ ಹೋಗಬೇಡ'. ಹೀಗೆ ಶಲ್ಯ ಹೇಳಿದಾಗ ಕರ್ಣ ಮದ್ರದೇಶದ ಜನರನ್ನು ಬಹಳ ಹೀನಾಯವಾಗಿ ತೆಗಳಿದ.

❖

ನಲವತ್ತನೆಯ ಅಧ್ಯಾಯ

ನನ್ನಲ್ಲಿ ಘೋರವಾದ ಸರ್ಪಾಸ್ತ್ರವಿದೆ. ಅದರಿಂದ ಮೇರುಪರ್ವತವನ್ನು ಭೇದಿಸಬಲ್ಲೆ. ಅರ್ಜುನನನ್ನು ಹೊಗಳಿ ನನ್ನನ್ನು ಭಯಪಡಿಸಲು ಯತ್ನಿಸುವವನು ನೀನು ಮಿತ್ರನಲ್ಲ, ಶತ್ರು. ನಿನ್ನ ದೇಶದವರು ಯಾರೂ ನಂಬಲರ್ಹರಲ್ಲ. ನಿನ್ನದು ಅನಾಚಾರಿಗಳ ದೇಶ ಎನ್ನುತ್ತಾನೆ ಕರ್ಣ.

ಸಂಜಯಃ

ಅಧಿಕ್ಷಿಪ್ತಸ್ತು ರಾಧೇಯಃ ಶಲ್ಯೇನಾಮಿತತೇಜಸಾ ।
ಶಲ್ಯಮಾಹ ಸುಸಂಕ್ರುದ್ಧೋ ವಾಕ್ಯಲ್ಯಮವಧಾರಯನ್ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಅಮಿತಪರಾಕ್ರಮಿಯಾದ ಶಲ್ಯನು ಕರ್ಣನನ್ನು ಹಳಿದಾಗ ಕರ್ಣನು ಬಹಳ ಕ್ರುದ್ಧನಾಗಿ, 'ಶಲ್ಯ'ವೆಂದರೆ ಮುಳ್ಳು, ಮುಳ್ಳಿನಂತೆ ಚುಚ್ಚುವ ಮಾತುಗಳನ್ನಾಡುವುದರಿಂದಲೇ ಈತ 'ಶಲ್ಯ' ಎಂದು ಶ್ರೋತೃಗಳಿಗೆ ನಿಶ್ಚಯವಾಗಿ ತಿಳಿಸುವುದಕ್ಕಾಗಿ ಶಲ್ಯನಿಗೆ ಹೀಗೆ ಹೇಳಿದ—

ಕರ್ಣಃ

ಗುಣಾನ್ ಗುಣವತಾಂ ಶಲ್ಯ ಗುಣವಾನ್ ವೇತ್ತಿ ನಾಗುಣಃ ।
ತ್ವಂ ತು ನಿತ್ಯಂ ಗುಣೈರ್ಹೀನಃ ಕಿಂ ಜ್ಞಾಸ್ಯಸಿ ಗುಣಾಗುಣಾನ್ ॥೨॥

ಕರ್ಣನು ನುಡಿದ— ಗುಣವುಳ್ಳವರ ಗುಣಗಳನ್ನು ಗುಣವುಳ್ಳವನೇ

ತಿಳಿಯುತ್ತಾನೆ. ಗುಣಶೂನ್ಯನು ತಿಳಿಯುವುದಿಲ್ಲ. ನೀನು ಎಂದಿಗೂ ಗುಣಹೀನ. ಗುಣ–ಅಗುಣಗಳನ್ನು ನೀನೇನು ತಿಳಿಯಬಲ್ಲೆ?

ಅರ್ಜುನಸ್ಯ ಮಹಾಸ್ತ್ರಾಣಿ ಕ್ರೋಧಂ ವೀರ್ಯಂ ಧನುಃ ಶರಾನ್ ।
ಅಹಂ ಶಲ್ಯಾಭಿಜಾನಾಮಿ ನ ತ್ವಂ ಜಾನಾಸಿ ತತ್ತಥಾ ॥೩॥

ಶಲ್ಯ, ಅರ್ಜುನನ ಮಹಾಅಸ್ತ್ರಗಳನ್ನು ಕ್ರೋಧ ವೀರ್ಯ ಧನುರ್ಬಾಣಗಳನ್ನು ನಾನು ಬಲ್ಲೆ ನಾನು ತಿಳಿದಂತೆ ನೀನು ತಿಳಿದಿಲ್ಲ.

ತಥಾ ಕೃಷ್ಣಸ್ಯ ಮಾಹಾತ್ಮ್ಯಮೃಷಭಸ್ಯ ಮಹೀಕ್ಷಿತಾಮ್ ।
ಯಥಾಹಂ ಶಲ್ಯ ಜಾನಾಮಿ ನ ತ್ವಂ ಜಾನಾಸಿ ತತ್ತಥಾ ॥೪॥

ಹಾಗೆ ರಾಜರಲ್ಲಿ ಶ್ರೇಷ್ಠನಾದ ಕೃಷ್ಣನ ಮಹಾತ್ಮೆಯನ್ನು ಕೂಡ ನಾನು ತಿಳಿದಂತೆ ನೀನು ತಿಳಿದುಕೊಂಡಿಲ್ಲ.

ಏವಮೇವಾತ್ಮನೋ ವೀರ್ಯಮಹಂ ವೀರ್ಯಂ ಚ ಪಾಂಡವೇ ।
ಜಾನಂಸ್ತಾವಾಹ್ವಯೇ ಯುದ್ಧೇ ಶಲ್ಯ ನಾಗ್ನಿಂ ಪತಂಗವತ್ ॥೫॥

ಹೀಗೆಯೇ ನನ್ನ ಬಲವನ್ನೂ ಅರ್ಜುನನ ಬಲವನ್ನೂ ತಿಳಿದೇ ನಾನು ಅವರನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೇನೆ. ತಿಳಿಯದೆ, ದೀಪದ ಹುಳು ಬೆಂಕಿಯಲ್ಲಿ ಬೀಳುವಂತೆ ಅಲ್ಲ.

ಅಸ್ತಿ ಚಾಯಮಿಷುಃ ಶಲ್ಯ ಸುಪುಂಖೋ ರಕ್ತಭೋಜನಃ ।
ಏಕಸ್ತೂಣೇಶಯಃ ಪತ್ರೀ ಸುಧೌತಃ ಸಮಲಂಕೃತಃ ॥೬॥

ಶಲ್ಯ, ನನ್ನಲ್ಲಿ ಇದೊಂದು ಬಾಣ ಬತ್ತಳಿಕೆಯಲ್ಲಿ ಇದೆ. ಒಳ್ಳೆಯ ಪುಕ್ಕ ಉಳ್ಳದ್ದು ಶತ್ರುಗಳ ಮೈರಕ್ತ ಇದಕ್ಕೆ ಆಹಾರ. ಚೆನ್ನಾಗಿ ಶುದ್ಧಗೊಳಿಸಿ ಅಲಂಕಾರ ಮಾಡಿ ಇಟ್ಟಿರುತ್ತೇನೆ.

ಶೇತೇ ಚಂದನಚೂರ್ಣೇನ ಪೂಜಿತೋ ಬಹುಲಾಃ ಸಮಾಃ ।
ಆಹೇಯೋ ವಿಷವಾನುಗ್ರೋ ನರಾಶ್ವದ್ವಿಪಸಂಘಹಾ ॥೭॥

ಶ್ರೀಗಂಧದ ಚೂರ್ಣದಲ್ಲಿ ಅದ್ದಿದ್ದು ಇರುತ್ತದೆ. ಬಹಳ ವರ್ಷಗಳಿಂದ

ಪೂಜಿತವಾಗಿದೆ. ಸರ್ಪಮಯ, ಅಂದರೆ ನಾಗದೇವತೆ ಹೊರತು ಅಶ್ವಸೇನನಲ್ಲ. ವಿಷಉಳ್ಳದ್ದು ಉಗ್ರವಾಗಿದೆ. ಎಲ್ಲ ಪದಾತಿ ಅಶ್ವ ಗಜ ಸೈನ್ಯಸಮೂಹಗಳನ್ನು ಇದೊಂದೇ ಬಾಣ ಸಂಹರಿಸಬಲ್ಲುದು.

ಘೋರರೂಪೋ ಮಹಾರೌದ್ರಸ್ತನುತ್ರಾಸ್ಥಿವಿದಾರಣಃ ।
ನಿರ್ಭಿಂದ್ಯಾಂ ಯೇನ ರುಷ್ಟೋಽಹಮಪಿ ಮೇರುಂ
ಮಹಾಗಿರಿಮ್ ॥೮॥

ಭಯಂಕರ ರೂಪವುಳ್ಳದ್ದು, ಮಹಾಭೀಕರ, ಕವಚವನ್ನು ಮಾತ್ರವಲ್ಲದೆ ಮೂಳೆಗಳನ್ನೂ ಭೇದಿಸುವುದು. ನಾನು ಕುಪಿತನಾದರೆ ಈ ಬಾಣದಿಂದ ಮೇರುಪರ್ವತವನ್ನೂ ಭೇದಿಸಬಲ್ಲೆ.

ತಮಹಂ ಜಾತು ನಾಸ್ಯೇಯಮನ್ಯಸ್ಮಿನ್ ಫಲ್ಗುನಾದೃತೇ ।
ಕೃಷ್ಣಾದ್ವಾ ದೇವಕೀಪುತ್ರಾತ್ಸತ್ಯಂ ಚಾಪಿ ಶೃಣುಷ್ವ ಮೇ ॥೯॥

ಅದನ್ನು ನಾನು ಅರ್ಜುನನ ಮೇಲೆ ಅಥವಾ ಕೃಷ್ಣನ ಮೇಲೆ ಹೊರತು ಇನ್ನೊಬ್ಬರ ಮೇಲೆ ಎಂದೂ ಪ್ರಯೋಗಿಸುವುದಿಲ್ಲ. ಸತ್ಯವನ್ನೇ ಹೇಳುತ್ತಿದ್ದೇನೆ, ಕೇಳು.

ತೇನಾಹಮಿಷುಣಾ ಶಲ್ಯ ವಾಸುದೇವಧನಂಜಯೌ ।
ಯೋತ್ಸ್ಯೇ ಪರಮಸಂರಬ್ಧೋ ತತ್ಕರ್ಮ ಸದೃಶಂ ಮಮ ॥೧೦॥

ಬಹಳ ಕ್ರುದ್ಧರಾದ ಕೃಷ್ಣಾರ್ಜುನರೊಡನೆ ಮಾತ್ರ ಆ ಬಾಣದಿಂದ ಯುದ್ಧ ಮಾಡುತ್ತೇನೆ. ಈ ಕಾರ್ಯ ನನಗೆ ಒಪ್ಪುವಂಥದ್ದು.

ಸರ್ವೇಷಾಂ ವೃಷ್ಣಿವೀರಾಣಾಂ ಕೃಷ್ಣೇ ಲಕ್ಷ್ಮೀಃ ಪ್ರತಿಷ್ಠಿತಾ ।
ಸರ್ವೇಷಾಂ ಪಾಂಡುಪುತ್ರಾಣಾಂ ಜಯಃ ಪಾರ್ಥೇ ಪ್ರತಿಷ್ಠಿತಃ ॥೧೧॥
ಉಭಯಂ ತು ಸಮಾಸಾದ್ಯ ಕೋ ನಿವರ್ತಿತುಮರ್ಹತಿ ॥೧೨॥

ಎಲ್ಲ ಯಾದವರ ಸಂಪತ್ತು ಕೃಷ್ಣನ ಅಧೀನ. ಎಲ್ಲ ಪಾಂಡವರ ವಿಜಯ ಅರ್ಜುನನ ಅಧೀನ. ಎರಡನ್ನೂ ಏಕಕಾಲದಲ್ಲಿ ವಶಪಡಿಸಿಕೊಳ್ಳುವ ಅವಕಾಶ ಪಡೆದಮೇಲೆ ಯಾವನು ತಾನೆ ಯುದ್ಧ ಬಿಟ್ಟು ಹಿಂತಿರುಗುತ್ತಾನೆ?

ತಾವೇತೌ ಪುರುಷವ್ಯಾಘ್ರೌ ಸಮೇತೌ ಸ್ಯಂದನೇ ಸ್ಥಿತೌ ।
ಮಾಮೇಕಮಭಿಸಂಯುದ್ಧೇ ಸುಜಾತಂ ಪಶ್ಯ ಶಲ್ಯ ಮೇ ॥೧೩॥

ಅವರಿಬ್ಬರು ಪುರುಷಶ್ರೇಷ್ಠರು, ಜೊತೆಗೆ ರಥದಲ್ಲಿ ನಿಂತು ನನ್ನೊಬ್ಬನನ್ನೇ ಯುದ್ಧಕ್ಕೆ ಕರೆಯಲು ಬರುತ್ತಾರೆ. ನೋಡು ಶಲ್ಯ, ನನ್ನ ಜನ್ಮ ಎಷ್ಟು ಸಾರ್ಥಕವಾಗಿದೆ!

ಪಿತೃಷ್ವಸಾಮಾತುಲಜೌ ಭ್ರಾತರಾವಪರಾಜಿತೌ ।
ಮಣೀ ಸೂತ್ರ ಇವ ಪ್ರೋತೌ ದ್ರಷ್ಟಾಸಿ ನಿಹತೌ ಮಯಾ ॥೧೪॥

ಕೃಷ್ಣನಿಗೆ ಅರ್ಜುನ, ಅರ್ಜುನನಿಗೆ ಕೃಷ್ಣ ಸೋದರತ್ತೆ ಸೋದರಮಾವರ ಮಕ್ಕಳು, ಸೋದರರಂತೇ. ಒಂದು ದಾರದಲ್ಲಿ ಪೋಣಿಸಿದ ಎರಡು ಮಣಿಗಳಂತಿರುವವರು. ಇಬ್ಬರನ್ನೂ ಕೊಲ್ಲುತ್ತೇನೆ, ನೋಡು.

ಅರ್ಜುನೇ ಗಾಂಡಿವಂ ಕೃಷ್ಣೇ ಚಕ್ರಂ ತಾರ್ಕ್ಷ್ಯಕಪಿಧ್ವಜೌ ।
ಭೀರೂಣಾಂ ತ್ರಾಸಜನನಂ ಶಲ್ಯ ಹರ್ಷಕರಂ ಮಮ ॥೧೫॥

ಅರ್ಜುನನಲ್ಲಿ ಗಾಂಡಿವ, ಕೃಷ್ಣನಲ್ಲಿ ಚಕ್ರ, ಒಬ್ಬ ಗರುಡಧ್ವಜ, ಇನ್ನೊಬ್ಬ ಕಪಿಧ್ವಜ, ಇದು ಹೇಡಿಗಳಿಗೆ ಭಯ ಉಂಟು ಮಾಡುತ್ತದೆ, ನನಗೆ ಉತ್ಸಾಹವನ್ನೇ ಉಂಟುಮಾಡುತ್ತದೆ.

ತ್ವಂ ತು ದುಷ್ಟಕೃತಿರ್ಮೂಢೋ ಮಹಾಯುದ್ಧೇಷ್ವಕೋವಿದಃ ।
ಭಯಾದುದೀರ್ಣಃ ಸಂತ್ರಾಸಾದಬದ್ಧಂ ಬಹು ಭಾಷಸೇ ॥೧೬॥

ಶಲ್ಯ, ನೀನು ದುಷ್ಟಸ್ವಭಾವದವನು, ಮೂಢ, ಮಹಾಯುದ್ಧಗಳ ವಿಷಯದಲ್ಲಿ ನಿನಗೇನು ತಿಳಿಯದು. ಭಯಕಂಪನಗಳಿಂದ ಪರವಶನಾಗಿ ಬಹು ಅಬದ್ಧ ಮಾತುಗಳನ್ನೇ ಆಡುತ್ತಿರುವೆ.

ಸಂಸ್ತೌಷಿ ತೌ ತು ಕೇನಾಪಿ ಹೇತುನಾ ತ್ವಂ ಕುದೇಶಜಃ ।
ತೌ ಹತ್ವಾ ಸಮರೇ ಹಂತಾ ತ್ವಾಮದ್ಯ ಸಹಬಾಂಧವಮ್ ॥೧೭॥

ನೀನು ಹುಟ್ಟಿದ ಮದ್ರದೇಶವೆ ಕೆಟ್ಟದು. ಅದರಿಂದ ಕೃಷ್ಣಾರ್ಜುನರನ್ನು

ಯಾವುದೋ ಕಾರಣದಿಂದ ಹೊಗಳುತ್ತಿರುವೆ. ಶಲ್ಯನೆ, ನಾನು ಯುದ್ಧದಲ್ಲಿ ಅವರಿಬ್ಬರನ್ನು ಕೊಂದ ಬಳಿಕ ಇಂದೇ ನಿನ್ನನ್ನೂ ನಿನ್ನ ಬಾಂಧವರೊಂದಿಗೆ ಕೊಲ್ಲುತ್ತೇನೆ.

ಪಾಪದೇಶಜ ದುರ್ಬುದ್ಧೇ ಕ್ಷುದ್ರ ಕ್ಷತ್ರಿಯಪಾಂಸನ ।
ಸುಹೃದ್ರೂಪೋ ರಿಪುಃ ಕಿಂ ಮಾಂ ಕೃಷ್ಣಾಭ್ಯಾಂ ಭೀಷಯಿಷ್ಯಸಿ ॥೧೮॥

ಪಾಪದೇಶದಲ್ಲಿ ಹುಟ್ಟಿರುವವನಾದ ದುರ್ಬುದ್ಧಿಯವನಾದ ಕ್ಷುದ್ರನಾದ ಕ್ಷತ್ರಿಯಕುಲಕ್ಕೆ ಕಳಂಕಪ್ರಾಯನಾದ ಶಲ್ಯನೆ, ನೀನು ಮಿತ್ರರಂತೆ ತೋರಿಕೊಳ್ಳುವ ಶತ್ರು. ಇಲ್ಲದಿದ್ದರೆ ಕೃಷ್ಣಾರ್ಜುನರ ಭಯದಿಂದ ನನ್ನನ್ನು ಏಕೆ ಅಂಜಿಸುವೆ?

ತೌ ವಾ ಮಾಮದ್ಯ ಹಂತಾರೌ ಹನಿಷ್ಯೇ ವಾऽಪಿ ತಾವಹಮ್ ।
ನಾಹಂ ಬಿಭೇಮಿ ಕೃಷ್ಣಾಭ್ಯಾಂ ವಿಜಾನನ್ನಾತ್ಮನೋ ಬಲಮ್ ॥೧೯॥

ಇಂದು ಅವರು ನನ್ನನ್ನು ಕೊಲ್ಲುತ್ತಾರೆ ಅಥವಾ ನಾನು ಅವರನ್ನು ಕೊಲ್ಲುತ್ತೇನೆ ಹೊರತು, ನಾನು ಅವರಿಗೆ ಅಂಜುವುದಿಲ್ಲ. ನನಗೆ ನನ್ನ ಬಲ ಗೊತ್ತು.

ವಾಸುದೇವಸಹಸ್ರಂ ವಾ ಫಲ್ಗುನಾನಾಂ ಶತಾನಿ ವಾ ।
ಅಹಮೇಕೋ ಹನಿಷ್ಯಾಮಿ ಜೋಷಮಾಸ್ಸ್ವ ಕುದೇಶಜ ॥೨೦॥

ಸಾವಿರ ಕೃಷ್ಣರನ್ನಾಗಲಿ, ನೂರು ಅರ್ಜುನರನ್ನಾಗಲಿ ನಾನೊಬ್ಬನೆ ಕೊಲ್ಲುವೆನು. ಪಾಪದೇಶ ಜಾತನಾದ ಶಲ್ಯನೆ, ನೀನು ಸುಮ್ಮನಿರು.

ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಪ್ರಾಯಃ ಕ್ರೀಡಾಗತಾ ಜನಾಃ ॥೨೧॥

ಯಾ ಗಾಥಾಃ ಸಂಪ್ರಗಾಯಂತಿ ಕುರ್ವಂತೋऽಧ್ಯಯನಂ ಯಥಾ ।
ತಾ ಗಾಥಾಃ ಶೃಣು ಮೇ ಶಲ್ಯ ಮದ್ರಕೇಷು ದುರಾತ್ಮಸು ॥೨೨॥

ಸ್ತ್ರೀಯರು ಬಾಲರು ವೃದ್ಧರು ಪ್ರಾಯಃ ಕ್ರೀಡಾನಿರತರಾದ ಜನರು, ದ್ವಿಜರು ಅಧ್ಯಯನ ಮಾಡುವಂತೆಯೇ ಕೆಲವು ಗಾಥೆಗಳನ್ನು ಹಾಡುತ್ತಾರೆ. ದುರಾತ್ಮರಾದ ಮದ್ರದೇಶದ ಜನರ ವಿಷಯದಲ್ಲಿ ಅವರು ಹಾಡುವ ಆ ಗಾಥೆಗಳನ್ನು ಹೇಳುತ್ತೇನೆ, ಕೇಳು.

ಬ್ರಾಹ್ಮಣೈಃ ಕಥಿತಾಃ ಪೂರ್ವಂ ಯಥಾವದ್ ರಾಜಸನ್ನಿಧೌ ।
ಶ್ರುತ್ವಾ ಚೈಕಮನಾ ಮೂಢ ಕ್ಷಮ ವಾ ಬ್ರೂಹಿ ವೋತ್ತರಮ್ ॥೨೩॥

ಹಿಂದೆ ರಾಜರ ಸನ್ನಿಧಿಯಲ್ಲಿ ಬ್ರಾಹ್ಮಣರು ಯಥಾವತ್ತಾಗಿ ಹೇಳುತ್ತಿದ್ದರು. ಮೂಢನೆ, ಅವುಗಳನ್ನು ಏಕಮನಸ್ಸಿನಿಂದ ಕೇಳು, ಕೇಳಿ ಸಹಿಸಿಕೊಳ್ಳು, ಸಹಿಸಿ ಕೊಳ್ಳಲು ಆಗದಿದ್ದರೆ ಉತ್ತರವನ್ನಾದರೂ ನನಗೆ ಹೇಳು.

ಮಿತ್ರಧ್ರುಙ್ ಮದ್ರಕೋ ನಿತ್ಯಂ ಯೋ ನೋ ದ್ವೇಷ್ಟಿ ಸ ಮದ್ರಕಃ ।
ಮದ್ರಕೇ ಸಂಗತಂ ನಾಸ್ತಿ ಕ್ಷುದ್ರವಾಕ್ಯೇ ನರಾಧಮೇ ॥೨೪॥

ಆ ಗಾಥೆಗಳು ಹೀಗಿವೆ— ಮದ್ರದೇಶದವನು ಎಂದೂ ಮಿತ್ರದ್ರೋಹಿಯೆ. ನಮಗೆ ದ್ವೇಷಿ ಯಾವನಿರುತ್ತಾನೋ ಅವನು ಮದ್ರದೇಶದವನೆ ಇರುತ್ತಾನೆ. ಕ್ಷುದ್ರ ಮಾತುಗಳನ್ನಾಡುವ ಆ ನರಾಧಮನೊಂದಿಗೆ ಯಾರಿಗೂ ಸಹವಾಸ ಸೌಹಾರ್ದ ವಿರುವುದಿಲ್ಲ.

ದುರಾತ್ಮಾ ಮದ್ರಕೋ ನಿತ್ಯಂ ನಿತ್ಯಮಾನೃತಿಕೋऽನೃಜುಃ ।
ಯಾವದಂತಂ ಹಿ ದೌರಾತ್ಮ್ಯಂ ಮದ್ರಕೇಷ್ವಿತಿ ನಃ ಶ್ರುತಮ್ ॥೨೫॥

ಮದ್ರದೇಶದವನು ಎಂದೂ ದುರ್ಬುದ್ಧಿಯವನು, ಎಂದೂ ಸುಳ್ಳಾಡುವವನು, ಎಂದೂ ವಂಚಕನೇ ಆಗಿರುತ್ತಾನೆ. ಮದ್ರದೇಶದವರ ದುರ್ಬುದ್ಧಿ ಸಾಯುವವರೆಗೂ ಅವರಲ್ಲಿರುತ್ತದೆ ಎಂದು ಕೇಳಿರುವೆವು.

ಪಿತಾ ಪುತ್ರಶ್ಚ ಮಾತಾ ಚ ಶ್ವಶ್ರೂಶ್ವಶುರಮಾತುಲಾಃ ।
ಭಗಿನೀ ದುಹಿತಾ ಭ್ರಾತಾ ನಪ್ತಾ ಯೇऽನ್ಯೇ ಚ ಬಾಂಧವಾಃ ॥೨೬॥

ವಯಸ್ಯಾಭ್ಯಾಗತಾಶ್ಚಾನ್ಯೇ ದಾಸದಾಸೀವ ಸಂಗತಾಃ ।
ಪುಂಭಿರ್ವಿಮಿಶ್ರಾ ನಾರ್ಯಶ್ಚ ಜ್ಞಾತಾಜ್ಞಾತಾಃ ಸ್ವಯೇಚ್ಛಯಾ ॥೨೭॥

ತಂದೆ ಮಗ ತಾಯಿ ಅತ್ತೆ ಮಾವ ಸೋದರಮಾವ ಅಳಿಯ ಮಗಳು ಅಣ್ಣ ತಮ್ಮಂದಿರು ಮೊಮ್ಮಗ ಮತ್ತು ಇನ್ನಿತರ ಬಾಂಧವರು ಸ್ನೇಹಿತರು ಅತಿಥಿಗಳಾಗಿ ಬಂದವರು ಎಲ್ಲರೂ ಸ್ವೇಚ್ಛಾನುಸಾರ ದಾಸ–ದಾಸಿಯರಂತೆ ಪರಸ್ಪರ ಬೆರೆಯುತ್ತಾರೆ. ಪರಿಚಿತರು ಅಪರಿಚಿತರು ಎನ್ನದೆ ಎಲ್ಲ ಪುರುಷರೊಡನೆ ಸ್ತ್ರೀಯರು ಬೆರೆಯುತ್ತಾರೆ.

ಯೇಷಾಂ ಗೃಹೇಷು ಶಿಷ್ಟಾನಾಂ ಸಕ್ತುಮಂಥಾಶಿನಾಂ ಸದಾ ।
ಪೀತ್ವಾ ಸೀಧುಂ ಸಗೋಮಾಂಸಂ ಕ್ರಂದಂತಿ ಚ ಹಸಂತಿ ಚ ॥೨೮॥

ಸದಾ ಸಕ್ತು-ಮಂಥಗಳೆಂಬ ಶುದ್ಧ ಆಹಾರವನ್ನೆ ಸೇವಿಸುವ ಶಿಷ್ಟರ ಮನೆಯಲ್ಲಿ ಇವರು ಗೋಮಾಂಸ ಮದ್ಯ ಸೇವಿಸಿ ಪರಸ್ಪರ ಜಗಳಾಡುವುದು, ನಗುವುದು ಮಾಡುತ್ತಾರೆ.

ಗಾಯಂತಿ ಚಾಪ್ಯಬದ್ಧಾನಿ ಪ್ರವರ್ತಂತೇ ಚ ಕಾಮತಃ ।
ಕಾಮಪ್ರಲಾಪಿನೋಽನ್ಯೋನ್ಯಂ ತೇಷು ಧರ್ಮಃ ಕಥಂ ಭವೇತ್ ।೨೯।

ಅಸಂಬದ್ಧವಾಗಿ ಹಾಡುತ್ತಾರೆ, ಸ್ವೇಚ್ಛೆಯಿಂದ ಪ್ರವೃತ್ತಿ ಮಾಡುತ್ತಾರೆ. ಮನ ಬಂದಂತೆ ಅನ್ಯೋನ್ಯವಾಗಿ ಪ್ರಲಾಪ ಮಾಡುತ್ತಾರೆ. ಇಂಥವರಲ್ಲಿ ಧರ್ಮಾಚರಣೆ ಹೇಗೆ ಇದ್ದೀತು?

ಮದ್ರಕೇಷ್ವವಲಿಪ್ತೇಷು ಪ್ರಖ್ಯಾತಾಶುಭಕರ್ಮಸು ।
ನಾಪಿ ವೈರಂ ನ ಸೌಹಾರ್ದಂ ಮದ್ರಕೇಣ ಸಮಾಚರೇತ್ ॥೩೦॥

ಮದ್ರದೇಶದವರು ದರ್ಪದಿಂದ ಪಾಪಕರ್ಮವನ್ನು ಮಾಡುವುದರಲ್ಲಿ ಪ್ರಖ್ಯಾತರು. ಅವರಲ್ಲಿ ಧರ್ಮಾಚರಣೆ ಹೇಗೆ ಇದ್ದೀತು? ಮದ್ರದೇಶದವನೊಡನೆ ವೈರವನ್ನೂ ಮಾಡಬಾರದು, ಸೌಹಾರ್ದವನ್ನೂ ಮಾಡಬಾರದು.

ಮದ್ರಕೇ ಸಂಗತಂ ನಾಸ್ತಿ ಮದ್ರಕೋ ಹಿ ಸದಾಮಲಃ ।
ಮದ್ರಕೇಷು ನ ಸಂಸ್ಪೃಷ್ಟಂ ಶೌಚಂ ಗಾಂಧಾರಕೇಷು ಚ ॥೩೧॥

ಮದ್ರದೇಶದವನೊಡನೆ ಸಹವಾಸ ಕೂಡದು. ಅವನು ಸದಾ ಅಶುಚಿ. ಮದ್ರದೇಶದವರಲ್ಲಿ ಸಂಸ್ಪರ್ಶವಿಲ್ಲ. ಸಂಸ್ಪರ್ಶಕ್ಕೆ ಅವರು ಯೋಗ್ಯರಲ್ಲ. ಗಾಂಧಾರದೇಶದವರಲ್ಲಿಯೂ ಶೌಚವಿಲ್ಲ.

ರಾಜಯಾಜಕಯಾಜ್ಯೇ ಹಿ ಯಥಾ ದತ್ತಂ ಹವಿರ್ನಶೇತ್ ।
ಶೂದ್ರಸಂಸ್ಕಾರಕೋ ವಿಪ್ರೋ ಯಥಾ ಯಾತಿ ಪರಾಭವಮ್ ॥೩೨॥

ಯಥಾ ಬ್ರಹ್ಮದ್ವಿಷೋ ನಿತ್ಯಂ ಗಚ್ಛಂತೀಹ ಪರಾಭವಮ್ ।
ತಥೈವ ಸಂಗತಂ ಕೃತ್ವಾ ನರಃ ಪತತಿ ಮದ್ರಕೈಃ ॥೩೩॥

ರಾಜನೇ ಪುರೋಹಿತನಾಗಿರುವ ಯಜ್ಞದಲ್ಲಿ ಅಗ್ನಿಗೆ ನೀಡಿದ ಹವಿಸ್ಸು ದೇವತೆಗಳಿಗೆ ತಲುಪದೆ ನಾಶವನ್ನೇ ಹೊಂದುತ್ತದೆ, ಕೇವಲ ಭಸ್ಮವಾಗುತ್ತದೆ. ಶೂದ್ರನಿಗೆ ಉಪನಯನಾದಿ ಸಂಸ್ಕಾರ ಮಾಡುವ ವಿಪ್ರನು ಪರಾಭವ ಹೊಂದುತ್ತಾನೆ, ಶಿಷ್ಯರಿಂದ ಬಹಿಷ್ಕಾರಕ್ಕೊಳಗಾಗುತ್ತಾನೆ. ಬ್ರಹ್ಮದ್ವೇಷಿಗಳು ಎಂದಿಗೂ ಪರಾಭವವನ್ನೇ ಹೊಂದುತ್ತಾರೆ. ಇದೇರೀತಿ ಮದ್ರದೇಶದವರೊಡನೆ ಸಹವಾಸ ಮಾಡಿದರೆ ಮಾನವನು ನರಕಭಾಗಿಯಾಗುತ್ತಾನೆ.

ಮದ್ರಕೇ ಸಂಗತಂ ನಾಸ್ತಿ ಹತಂ ವೃಶ್ಚಿಕ ತೇ ವಿಷಮ್ ।
ಆಥರ್ವಣೇನ ಮಂತ್ರೇಣ ಯಥಾ ಶಾಂತಿಃ ಕೃತಾ ಮಯಾ ॥೩೪॥

ಅದರಿಂದ ಮದ್ರದೇಶದವನಲ್ಲಿ ಬೇರೆ ಯಾರೊಡನೆಯೂ ಸಹವಾಸಕ್ಕೆ ಯೋಗ್ಯತ್ವವಿಲ್ಲ. ಅವನು ಅಹಂಕಾರಿ. ಶಲ್ಯನೆ, ನಿನ್ನ ಅಹಂಕಾರವೆಂಬ ವಿಷವನ್ನು ನಿನ್ನ ಜನ್ಮದೇಶದ ದೋಷವನ್ನು ಹೇಳುವ ಮೂಲಕ ನಾನು ನಾಶಪಡಿಸಿದ್ದೇನೆ. 'ಹತಂ ವೃಶ್ಚಿಕ ತೇ ವಿಷಂ' 'ಎಲೈ ಚೇಳೆ, ನಿನ್ನ ವಿಷವನ್ನು ನಾಶಪಡಿಸಿದ್ದೇನೆ' ಎನ್ನುವ ಅಥರ್ವಣವೇದದ ಮಂತ್ರದಿಂದ ತಜ್ಞವೈದ್ಯರು ಹೇಗೆ ವ್ಯಾಧ್ಯಾದಿಶಾಂತಿ ಮಾಡುವರೋ ಹಾಗೇ ನಾನು ನಿನ್ನ ಅಹಂಕಾರವೆಂಬ ವಿಷಜನ್ಯವ್ಯಾಧಿಯನ್ನು ನಾಶಪಡಿಸಿದ್ದೇನೆ.

ಇತಿ ವೃಶ್ಚಿಕದಷ್ಟಸ್ಯ ವಿಷವೇಗಹತಸ್ಯ ಚ ।
ಕುರ್ವಂತಿ ಭೇಷಜಂ ಪ್ರಾಜ್ಞಾಃ ಸತ್ಯಂ ತಚ್ಚಾಪಿ ದೃಶ್ಯತೇ ॥೩೫॥

'ಹತಂ ವೃಶ್ಚಿಕ ತೇ ವಿಷಂ' ಎಂಬ ಆಥರ್ವಣ ಮಂತ್ರದಿಂದ ಚೇಳು ಕಡಿದ ವ್ಯಕ್ತಿಗೆ ವಿಷದ ವೇಗವನ್ನು ಪ್ರಾಜ್ಞರು ಪರಿಹರಿಸುತ್ತಾರೆ. ಅದು ಸತ್ಯವೆ ಆಗುತ್ತದೆ. ಅಂದರೆ ಸಫಲವೇ ಆಗುತ್ತದೆ, ವ್ಯರ್ಥವಾಗುವುದಿಲ್ಲ.

ಏವಂ ವಿದ್ವಾನ್ ಜೋಷಮಾಸ್ಸ್ವ ಶೃಣು ಚಾತ್ರೋತ್ತರಂ ವಚಃ ।
ವಾಸಾಂಸ್ಯುತ್ಸೃಜ್ಯ ನೃತ್ಯಂತಿ ಸ್ತ್ರಿಯೋ ಮದ್ಯವಿಮೋಹಿತಾಃ ॥೩೬॥

ಹೀಗೆ ತಿಳಿದು ನೀನು ಈಗ ಸುಮ್ಮನಿರು. ಈ ವಿಷಯದಲ್ಲಿ ನನ್ನ ಮುಂದಿನ ಮಾತನ್ನೂ ಕೇಳು. ಮದ್ರದೇಶದಲ್ಲಿ ಸ್ತ್ರೀಯರು ಮದ್ಯದ ಅಮಲೇರಿ ವಸ್ತ್ರಗಳನ್ನು ಕಳಚಿಕೊಂಡು ನೃತ್ಯ ಮಾಡುತ್ತಾರೆ!

ಮೈಥುನೇऽಸಂಯತಾಶ್ಚಾಪಿ ಯಥಾಕಾಮವರಾಶ್ಚ ತಾಃ ।
ತಾಸಾಂ ಪುತ್ರಃ ಕಥಂ ಧರ್ಮಂ ಮದ್ರಕೋ ವಕ್ತುಮರ್ಹತಿ ॥೩೭॥

ಪುರುಷಸಂಗದಲ್ಲಿ ಮದ್ರದೇಶದ ಸ್ತ್ರೀಯರು ಸಂಯಮ, ಮರ್ಯಾದೆ ಏನೂ ಇಲ್ಲದವರು. ಮನಬಂದಂತೆ ಬಯಸಿದ ಪುರುಷರನ್ನು ಕೂಡುತ್ತಾರೆ. ಅಂಥ ಸ್ತ್ರೀಯರ ಹೊಟ್ಟೆಯಲ್ಲಿ ಹುಟ್ಟಿದ ಮದ್ರದೇಶದವನು ಧರ್ಮವನ್ನು ಹೇಳಲು ಹೇಗೆ ಯೋಗ್ಯನೆನಿಸುತ್ತಾನೆ?

ಯಾಸ್ತಿಷ್ಠಂತ್ಯಃ ಪ್ರಮೇಹಂತಿ ಯಥೈವೋಷ್ಟ್ರೀ ದಶೇರಕೀ ।
ತಾಸಾಂ ವಿಭ್ರಷ್ಟಧರ್ಮಾಣಾಂ ನಿರ್ಲಜ್ಜಾನಾಂ ತತಸ್ತತಃ ॥೩೮॥
ತ್ವಂ ಪುತ್ರಸ್ತಾದೃಶೀನಾಂ ಹಿ ಧರ್ಮಂ ವಕ್ತುಮಿಹೇಚ್ಛಸಿ ॥೩೯॥

ದಾಶೇರಕ ಎನಿಸುವ ಹೆಣ್ಣುಒಂಟೆಯಂತೆ ಮದ್ರಸ್ತ್ರೀಯರು ನಿಂತೇ ಮೂತ್ರವಿಸರ್ಜನೆ ಮಾಡುತ್ತಾರೆ. ಧರ್ಮಪ್ರಜ್ಞೆ ಇಲ್ಲದ ನಾಚಿಕೆಯೂ ಇಲ್ಲದ ಅವರು ಮೂತ್ರವಿಸರ್ಜನೆ ಮಾಡುವ ಸಮಯದಲ್ಲಿಯೂ ತಿಂಡಿ ತಿನ್ನುತ್ತ ಹಲ್ಲುದವಡೆಗಳನ್ನು ಆಡಿಸುತ್ತಿರುತ್ತಾರೆ. ಅವರ ಹೊಟ್ಟೆಯಲ್ಲಿ ಹುಟ್ಟಿದವನು ನೀನು ಧರ್ಮವನ್ನು ಹೇಳಲು ಇಚ್ಛಿಸುತ್ತಿರುವೆ.

'ದಾಶೇರಕೀ' ಎಂದರೆ ಹಲ್ಲು-ದವಡೆಗಳನ್ನು ಆಡಿಸುವ ಹೆಣ್ಣುಒಂಟೆ. 'ದಾಶ', ದಶನ ಎಂದರೆ ಹಲ್ಲು. 'ಈರಕೀ' ಈರಪ್ರೇರಣೇ ಧಾತು. ಪ್ರೇರಿಸುವ, ತಿಂಡಿ ತಿನ್ನಲು ಹಲ್ಲುಗಳನ್ನು ಆಡಿಸುವ ಹೆಣ್ಣು ಒಂಟೆ ಎಂದರ್ಥ. ದಾಶೇರಕಿಯ ಉದರದಲ್ಲಿ ಹುಟ್ಟಿದವು ದಾಶೇರಕಗಳು ಒಂಟೆಗಳು, ಮೂತ್ರವಿಸರ್ಜನೆಯ ಕಾಲದಲ್ಲಿಯೂ ತಿಂಡಿ ತಿನ್ನುತ್ತಿರುತ್ತವೆ ಎಂದು ದೋಷವನ್ನು ಹೇಳಲು ಹೆಣ್ಣು ಒಂಟೆಗೆ ದಾಶೇರಕೀ ವಿಶೇಷಣ.

ಇಲ್ಲಿ 'ಯಥೈವೋಷ್ಟ್ರ ದಶೇರಕಾಃ' ಎಂದು ಪಾಠವಿಟ್ಟುಕೊಂಡು 'ದಶೇರಕಾಃ ಗರ್ದಭಾಃ' ಎಂದು ನೀಲಕಂಠಿಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಲಕ್ಷಾಲಂಕಾರದಲ್ಲಿ 'ಹಲ್ಲುಗಳನ್ನು ಆವರ್ತಿಸುವ ತಿರುಗಿಸುವ ಹೆಣ್ಣುಒಂಟೆಗೆ 'ದಾಶೇರಕೀ' ಎಂದು ಅನರ್ಥಕವಾದ ಹೆಸರು'ಎಂದಿದ್ದಾರೆ. ದಾಶೇರಕಿಯ ಸಂತತಿ ದಾಶೇರಕ ಎನಿಸುತ್ತದೆ ಎಂದು ಹೇಳಿ, ಒಂಟೆಗೆ ದಾಶೇರಕ ಎಂಬ ಹೆಸರಿದೆ ಎನ್ನಲು,

'ದಾಶೇರಕಃ ಕ್ರಮೇಲಕ ಉಷ್ಟ್ರೀ ಮಯ ರವಣ ಕರಭ ಶೃಂಖಲಕಾಃ'

ಎಂದು ಹಲಾಯುಧಕೋಶದ ಆಧಾರವನ್ನು ತೋರಿಸಿದ್ದಾರೆ.

'ಉಷ್ಟ್ರೀ' ಹೆಣ್ಣು ಒಂಟೆ ಎಂದು ಹೇಳಿ ಅದಕ್ಕೆ 'ದಾಶೇರಕೀ' ಎಂದು ಅದೇ ಅರ್ಥದ ವಿಶೇಷಣವನ್ನು ಭಾರತದಲ್ಲಿ ಕೊಡಲಾಗಿದೆ. ಇದನ್ನು ವ್ಯರ್ಥ ಪುನರುಕ್ತಿ ಎನ್ನಬಾರದು. ಒಂಟೆ, ಮೂತ್ರ ಸುರಿಸುವಾಗಲೂ ಹಲ್ಲುಗಳನ್ನು ತಿರುಗಿಸುತ್ತದೆ. ಹಾಗೆ ಮದ್ರಕಸ್ತ್ರೀಯೂ ಮೂತ್ರವಿಸರ್ಜನೆ ಮಾಡುವಾಗಲೂ ಬಾಯಲ್ಲಿ ತಿಂಡಿಯನ್ನು ಇಟ್ಟುಕೊಂಡು ಹಲ್ಲುಗಳಿಂದ ಕಡಿಯುತ್ತಾಳೆ ಎಂದು ವಿಶೇಷಾರ್ಥ ಬರುತ್ತದೆ.

ಯದ್ಯಪಿ ಮೂಲದಲ್ಲಿಯೂ ಲಕ್ಷಾಲಂಕಾರದಲ್ಲಿಯೂ 'ದಶೇರಕೀ' ಎಂದು ಪಾಠ ಕಾಣುತ್ತದೆ. ಆದರೆ ಹಲಾಯುಧ ಕೋಷದಲ್ಲಿ ಉಷ್ಟ್ರ ಪರ್ಯಾಯವಾಗಿ 'ದಾಶೇರಕ' ಶಬ್ದವಿದೆ. ಭಾರತದಲ್ಲಿಯೂ 'ಯಥೈವೋಷ್ಟ್ರೀ ದಾಶೇರಕೀ' ಎಂದು ಒಂದು ಪಾಠವಿರುವುದರಿಂದ ಅದನ್ನೇ ಸ್ವೀಕರಿಸಬಹುದು. ಅಥವಾ ಛಂದಸ್ಸಿಗಾಗಿ 'ದಾಶೇರಕೀ' 'ದಶೇರಕೀ' ಆಗಿದೆ.

ಸೌವೀರಕಂ ಯಾಚ್ಯಮಾನಾ ಮದ್ರಿಕಾ ಪ್ರಾತಿವೇಶ್ಮಿಕೈಃ ।
ಅದಾತುಕಾಮಾ ವಚನಮಿದಂ ವದತಿ ದಾರುಣಮ್ ॥೪೦॥

ಭಿಕ್ಷೆ ಬೇಡುತ್ತ ಮನೆಮನೆ ತಿರುಗುವವನು ಗಂಜಿಯನ್ನು ಬೇಡಿದರೆ ಮದ್ರಕ ಸ್ತ್ರೀಯು ಅಂಬಲಿ ಕೊಡಲು ಇಷ್ಟವಿಲ್ಲದೆ ಕರ್ಣಕಠೋರವಾದ ಈ ಮಾತನ್ನು ಆಡುತ್ತಾಳೆ—

ಮಾ ಮಾಂ ಸೌವೀರಕಂ ಕಶ್ಚಿದ್ ಯಾಚತಾಂ ದಯಿತಂ ಮಮ ।
ಪುತ್ರಂ ದದ್ಯಾಂ ಪತಿಂ ದದ್ಯಾಂ ನ ತು ಸೌವೀರಕಂ ಕ್ವಚಿತ್ ॥೪೧॥

'ಅಂಬಲಿ ಕೊಡೆಂದು ನನ್ನನ್ನು ಯಾರೂ ಕೇಳಬಾರದು. ಅಂಬಲಿ ನನಗೆ ಇಷ್ಟ ಬೇಡಿದರೆ ಪುತ್ರನನ್ನು ಕೊಟ್ಟೇನು, ಪತಿಯನ್ನು ಕೊಟ್ಟೇನು. ಅಂಬಲಿಯನ್ನು ಮಾತ್ರ ಕೊಡಲಾರೆ' ಎಂದು.

'ಪ್ರಾತಿವೇಶ್ಮಿಕ' ಎಂದರೆ 'ಪ್ರತಿ'ಯೊಂದು 'ವೇಶ್ಮ'ವನ್ನೂ ಮನೆಮನೆಯನ್ನೂ ತಿರುಗಿ ಬೇಡುವವನು. 'ಮದ್ರಿಕಾ ಕಷತಿ ಸ್ಫಿಚೌ' ಎಂದೂ ಇಲ್ಲಿ ಪಾಠವಿದೆ ಎಂದು ಲಕ್ಷಾಲಂಕಾರ ಹೇಳಿ, 'ಅದೂ ಸರಿಯೆ. ಬೇಡುವವನಿಗೆ

ಮೈಥುನೇऽಸಂಯತಾಶ್ಚಾಪಿ ಯಥಾಕಾಮವರಾಶ್ಚ ತಾಃ ।
ತಾಸಾಂ ಪುತ್ರಃ ಕಥಂ ಧರ್ಮಂ ಮದ್ರಕೋ ವಕ್ತುಮರ್ಹತಿ ॥೩೭॥

ಪುರುಷಸಂಗದಲ್ಲಿ ಮದ್ರದೇಶದ ಸ್ತ್ರೀಯರು ಸಂಯಮ, ಮರ್ಯಾದೆ ಏನೂ ಇಲ್ಲದವರು. ಮನಬಂದಂತೆ ಬಯಸಿದ ಪುರುಷರನ್ನು ಕೂಡುತ್ತಾರೆ. ಅಂಥ ಸ್ತ್ರೀಯರ ಹೊಟ್ಟೆಯಲ್ಲಿ ಹುಟ್ಟಿದ ಮದ್ರದೇಶದವನು ಧರ್ಮವನ್ನು ಹೇಳಲು ಹೇಗೆ ಯೋಗ್ಯನೆನಿಸುತ್ತಾನೆ?

ಯಾಸ್ತಿಷ್ಠಂತ್ಯಃ ಪ್ರಮೇಹಂತಿ ಯಥೈವೋಷ್ಟ್ರೀ ದಶೇರಕೀ ।
ತಾಸಾಂ ವಿಭ್ರಷ್ಟಧರ್ಮಾಣಾಂ ನಿರ್ಲಜ್ಜಾನಾಂ ತತಸ್ತತಃ ॥೩೮॥
ತ್ವಂ ಪುತ್ರಸ್ತಾದೃಶೀನಾಂ ಹಿ ಧರ್ಮಂ ವಕ್ತುಮಿಹೇಚ್ಛಸಿ ॥೩೯॥

ದಾಶೇರಕ ಎನಿಸುವ ಹೆಣ್ಣುಒಂಟೆಯಂತೆ ಮದ್ರಸ್ತ್ರೀಯರು ನಿಂತೇ ಮೂತ್ರವಿಸರ್ಜನೆ ಮಾಡುತ್ತಾರೆ. ಧರ್ಮಪ್ರಜ್ಞೆ ಇಲ್ಲದ ನಾಚಿಕೆಯೂ ಇಲ್ಲದ ಅವರು ಮೂತ್ರವಿಸರ್ಜನೆ ಮಾಡುವ ಸಮಯದಲ್ಲಿಯೂ ತಿಂಡಿ ತಿನ್ನುತ್ತ ಹಲ್ಲುದವಡೆಗಳನ್ನು ಆಡಿಸುತ್ತಿರುತ್ತಾರೆ. ಅವರ ಹೊಟ್ಟೆಯಲ್ಲಿ ಹುಟ್ಟಿದವನು ನೀನು ಧರ್ಮವನ್ನು ಹೇಳಲು ಇಚ್ಛಿಸುತ್ತಿರುವೆ.

'ದಾಶೇರಕೀ' ಎಂದರೆ ಹಲ್ಲು-ದವಡೆಗಳನ್ನು ಆಡಿಸುವ ಹೆಣ್ಣುಒಂಟೆ. 'ದಾಶ', ದಶನ ಎಂದರೆ ಹಲ್ಲು. 'ಈರಕೀ' ಈರಪ್ರೇರಣೇ ಧಾತು. ಪ್ರೇರಿಸುವ, ತಿಂಡಿ ತಿನ್ನಲು ಹಲ್ಲುಗಳನ್ನು ಆಡಿಸುವ ಹೆಣ್ಣು ಒಂಟೆ ಎಂದರ್ಥ. ದಾಶೇರಕಿಯ ಉದರದಲ್ಲಿ ಹುಟ್ಟಿದವು ದಾಶೇರಕಗಳು ಒಂಟೆಗಳು, ಮೂತ್ರವಿಸರ್ಜನೆಯ ಕಾಲದಲ್ಲಿಯೂ ತಿಂಡಿ ತಿನ್ನುತ್ತಿರುತ್ತವೆ ಎಂದು ದೋಷವನ್ನು ಹೇಳಲು ಹೆಣ್ಣು ಒಂಟೆಗೆ ದಾಶೇರಕೀ ವಿಶೇಷಣ.

ಇಲ್ಲಿ 'ಯಥೈವೋಷ್ಟ್ರ ದಶೇರಕಾಃ' ಎಂದು ಪಾಠವಿಟ್ಟುಕೊಂಡು 'ದಶೇರಕಾಃ ಗರ್ದಭಾಃ' ಎಂದು ನೀಲಕಂಠಿಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಲಕ್ಷಾಲಂಕಾರದಲ್ಲಿ 'ಹಲ್ಲುಗಳನ್ನು ಆವರ್ತಿಸುವ ತಿರುಗಿಸುವ ಹೆಣ್ಣುಒಂಟೆಗೆ 'ದಾಶೇರಕೀ' ಎಂದು ಅನ್ವರ್ಥಕವಾದ ಹೆಸರು'ಎಂದಿದ್ದಾರೆ. ದಾಶೇರಕಿಯ ಸಂತತಿ ದಾಶೇರಕ ಎನಿಸುತ್ತದೆ ಎಂದು ಹೇಳಿ, ಒಂಟೆಗೆ ದಾಶೇರಕ ಎಂಬ ಹೆಸರಿದೆ ಎನ್ನಲು,

'ದಾಶೇರಕಃ ಕ್ರಮೇಲಕ ಉಷ್ಟ್ರೀ ಮಯ ರವಣ ಕರಭ ಶೃಂಖಿಲಕಾಃ'

ಎಂದು ಹಲಾಯುಧಕೋಶದ ಆಧಾರವನ್ನು ತೋರಿಸಿದ್ದಾರೆ.

'ಉಷ್ಟ್ರೀ' ಹೆಣ್ಣು ಒಂಟೆ ಎಂದು ಹೇಳಿ ಅದಕ್ಕೆ 'ದಾಶೇರಕೀ' ಎಂದು ಅದೇ ಅರ್ಥದ ವಿಶೇಷಣವನ್ನು ಭಾರತದಲ್ಲಿ ಕೊಡಲಾಗಿದೆ. ಇದನ್ನು ವ್ಯರ್ಥ ಪುನರುಕ್ತಿ ಎನ್ನಬಾರದು. ಒಂಟೆ, ಮೂತ್ರ ಸುರಿಸುವಾಗಲೂ ಹಲ್ಲುಗಳನ್ನು ತಿರುಗಿಸುತ್ತದೆ. ಹಾಗೆ ಮದ್ರಕಸ್ತ್ರೀಯೂ ಮೂತ್ರವಿಸರ್ಜನೆ ಮಾಡುವಾಗಲೂ ಬಾಯಲ್ಲಿ ತಿಂಡಿಯನ್ನು ಇಟ್ಟುಕೊಂಡು ಹಲ್ಲುಗಳಿಂದ ಕಡಿಯುತ್ತಾಳೆ ಎಂದು ವಿಶೇಷಾರ್ಥ ಬರುತ್ತದೆ.

ಯದ್ಯಪಿ ಮೂಲದಲ್ಲಿಯೂ ಲಕ್ಷ್ಮಾಲಂಕಾರದಲ್ಲಿಯೂ 'ದಶೇರಕೀ' ಎಂದು ಪಾಠ ಕಾಣುತ್ತದೆ. ಆದರೆ ಹಲಾಯುಧ ಕೋಷದಲ್ಲಿ ಉಷ್ಟ್ರ ಪರ್ಯಾಯವಾಗಿ 'ದಾಶೇರಕ' ಶಬ್ದವಿದೆ. ಭಾರತದಲ್ಲಿಯೂ 'ಯಥೈವೋಷ್ಟ್ರೀ ದಾಶೇರಕೀ' ಎಂದು ಒಂದು ಪಾಠವಿರುವುದರಿಂದ ಅದನ್ನೇ ಸ್ವೀಕರಿಸಬಹುದು. ಅಥವಾ ಛಂದಸ್ಸಿಗಾಗಿ 'ದಾಶೇರಕೀ' 'ದಶೇರಕೀ' ಆಗಿದೆ.

ಸೌವೀರಕಂ ಯಾಚ್ಯಮಾನಾ ಮದ್ರಿಕಾ ಪ್ರಾತಿವೇಶ್ಮಿಕೈಃ ।
ಅದಾತುಕಾಮಾ ವಚನಮಿದಂ ವದತಿ ದಾರುಣಮ್ ॥೪೦॥

ಭಿಕ್ಷೆ ಬೇಡುತ್ತ ಮನೆಮನೆ ತಿರುಗುವವನು ಗಂಜಿಯನ್ನು ಬೇಡಿದರೆ ಮದ್ರಕ ಸ್ತ್ರೀಯು ಅಂಬಲಿ ಕೊಡಲು ಇಷ್ಟವಿಲ್ಲದೆ ಕರ್ಣಕಠೋರವಾದ ಈ ಮಾತನ್ನು ಆಡುತ್ತಾಳೆ—

ಮಾ ಮಾಂ ಸೌವೀರಕಂ ಕಶ್ಚಿದ್ ಯಾಚತಾಂ ದಯಿತಂ ಮಮ ।
ಪುತ್ರಂ ದದ್ಯಾಂ ಪತಿಂ ದದ್ಯಾಂ ನ ತು ಸೌವೀರಕಂ ಕ್ವಚಿತ್ ॥೪೧॥

'ಅಂಬಲಿ ಕೊಡೆಂದು ನನ್ನನ್ನು ಯಾರೂ ಕೇಳಬಾರದು. ಅಂಬಲಿ ನನಗೆ ಇಷ್ಟ ಬೇಡಿದರೆ ಪುತ್ರನನ್ನು ಕೊಟ್ಟೇನು, ಪತಿಯನ್ನು ಕೊಟ್ಟೇನು. ಅಂಬಲಿಯನ್ನು ಮಾತ್ರ ಕೊಡಲಾರೆ' ಎಂದು.

'ಪ್ರಾತಿವೇಶ್ಮಿಕ' ಎಂದರೆ 'ಪ್ರತಿ'ಯೊಂದು 'ವೇಶ್ಮ'ವನ್ನೂ ಮನೆಮನೆಯನ್ನೂ ತಿರುಗಿ ಬೇಡುವವನು. 'ಮದ್ರಿಕಾ ಕಷತಿ ಸ್ಫಿಚೌ' ಎಂದೂ ಇಲ್ಲಿ ಪಾಠವಿದೆ ಎಂದು ಲಕ್ಷ್ಮಾಲಂಕಾರ ಹೇಳಿ, 'ಅದೂ ಸರಿಯೆ. ಬೇಡುವವನಿಗೆ

ಮೈಥುನೇऽಸಂಯತಾಶ್ಚಾಪಿ ಯಥಾಕಾಮವರಾಶ್ಚ ತಾಃ ।
ತಾಸಾಂ ಪುತ್ರಃ ಕಥಂ ಧರ್ಮಂ ಮದ್ರಕೋ ವಕ್ತುಮರ್ಹತಿ ॥೩೭॥

ಪುರುಷಸಂಗದಲ್ಲಿ ಮದ್ರದೇಶದ ಸ್ತ್ರೀಯರು ಸಂಯಮ, ಮರ್ಯಾದೆ ಏನೂ ಇಲ್ಲದವರು. ಮನಬಂದಂತೆ ಬಯಸಿದ ಪುರುಷರನ್ನು ಕೂಡುತ್ತಾರೆ. ಅಂಥ ಸ್ತ್ರೀಯರ ಹೊಟ್ಟೆಯಲ್ಲಿ ಹುಟ್ಟಿದ ಮದ್ರದೇಶದವನು ಧರ್ಮವನ್ನು ಹೇಳಲು ಹೇಗೆ ಯೋಗ್ಯನೆನಿಸುತ್ತಾನೆ?

ಯಾಸ್ತಿಷ್ಠಂತ್ಯಃ ಪ್ರಮೇಹಂತಿ ಯಥೈವೋಷ್ಟ್ರೀ ದಶೇರಕೀ ।
ತಾಸಾಂ ವಿಭ್ರಷ್ಟಧರ್ಮಾಣಾಂ ನಿರ್ಲಜ್ಜಾನಾಂ ತತಸ್ತತಃ ॥೩೮॥
ತ್ವಂ ಪುತ್ರಸ್ತಾದೃಶೀನಾಂ ಹಿ ಧರ್ಮಂ ವಕ್ತುಮಿಹೇಚ್ಛಸಿ ॥೩೯॥

ದಾಶೇರಕ ಎನಿಸುವ ಹೆಣ್ಣುಒಂಟೆಯಂತೆ ಮದ್ರಸ್ತ್ರೀಯರು ನಿಂತೇ ಮೂತ್ರವಿಸರ್ಜನೆ ಮಾಡುತ್ತಾರೆ. ಧರ್ಮಪ್ರಜ್ಞೆ ಇಲ್ಲದ ನಾಚಿಕೆಯೂ ಇಲ್ಲದ ಅವರು ಮೂತ್ರವಿಸರ್ಜನೆ ಮಾಡುವ ಸಮಯದಲ್ಲಿಯೂ ತಿಂಡಿ ತಿನ್ನುತ್ತ ಹಲ್ಲುದವಡೆಗಳನ್ನು ಆಡಿಸುತ್ತಿರುತ್ತಾರೆ. ಅವರ ಹೊಟ್ಟೆಯಲ್ಲಿ ಹುಟ್ಟಿದವನು ನೀನು ಧರ್ಮವನ್ನು ಹೇಳಲು ಇಚ್ಛಿಸುತ್ತಿರುವೆ.

'ದಾಶೇರಕೀ' ಎಂದರೆ ಹಲ್ಲು–ದವಡೆಗಳನ್ನು ಆಡಿಸುವ ಹೆಣ್ಣುಒಂಟೆ. 'ದಾಶ', ದಶನ ಎಂದರೆ ಹಲ್ಲು. 'ಈರಕೀ' ಈರಪ್ರೇರಣೇ ಧಾತು. ಪ್ರೇರಿಸುವ, ತಿಂಡಿ ತಿನ್ನಲು ಹಲ್ಲುಗಳನ್ನು ಆಡಿಸುವ ಹೆಣ್ಣು ಒಂಟೆ ಎಂದರ್ಥ. ದಾಶೇರಕಿಯ ಉದರದಲ್ಲಿ ಹುಟ್ಟಿದವು ದಾಶೇರಕಗಳು ಒಂಟೆಗಳು, ಮೂತ್ರವಿಸರ್ಜನೆಯ ಕಾಲದಲ್ಲಿಯೂ ತಿಂಡಿ ತಿನ್ನುತ್ತಿರುತ್ತವೆ ಎಂದು ದೋಷವನ್ನು ಹೇಳಲು ಹೆಣ್ಣು ಒಂಟೆಗೆ ದಾಶೇರಕೀ ವಿಶೇಷಣ.

ಇಲ್ಲಿ 'ಯಥೈವೋಷ್ಟ್ರ ದಶೇರಕಾಃ' ಎಂದು ಪಾಠವಿಟ್ಟುಕೊಂಡು 'ದಶೇರಕಾಃ ಗರ್ದಭಾಃ' ಎಂದು ನೀಲಕಂಠಿಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಲಕ್ಷಾಲಂಕಾರದಲ್ಲಿ 'ಹಲ್ಲುಗಳನ್ನು ಆವರ್ತಿಸುವ ತಿರುಗಿಸುವ ಹೆಣ್ಣುಒಂಟೆಗೆ 'ದಾಶೇರಕೀ' ಎಂದು ಅನರ್ಥಕವಾದ ಹೆಸರು'ಎಂದಿದ್ದಾರೆ. ದಾಶೇರಕಿಯ ಸಂತತಿ ದಾಶೇರಕ ಎನಿಸುತ್ತದೆ ಎಂದು ಹೇಳಿ, ಒಂಟೆಗೆ ದಾಶೇರಕ ಎಂಬ ಹೆಸರಿದೆ ಎನ್ನಲು,

'ದಾಶೇರಕಃ ಕ್ರಮೇಲಕ ಉಷ್ಟ್ರೀ ಮಯ ರವಣ ಕರಭ ಶೃಂಖಲಕಾಃ'

ಎಂದು ಹಲಾಯುಧಕೋಶದ ಆಧಾರವನ್ನು ತೋರಿಸಿದ್ದಾರೆ.

'ಉಷ್ಟ್ರೀ' ಹೆಣ್ಣು ಒಂಟೆ ಎಂದು ಹೇಳಿ ಅದಕ್ಕೆ 'ದಾಶೇರಕೀ' ಎಂದು ಅದೇ ಅರ್ಥದ ವಿಶೇಷಣವನ್ನು ಭಾರತದಲ್ಲಿ ಕೊಡಲಾಗಿದೆ. ಇದನ್ನು ವ್ಯರ್ಥ ಪುನರುಕ್ತಿ ಎನ್ನಬಾರದು. ಒಂಟೆ, ಮೂತ್ರ ಸುರಿಸುವಾಗಲೂ ಹಲ್ಲುಗಳನ್ನು ತಿರುಗಿಸುತ್ತದೆ. ಹಾಗೆ ಮದ್ರಕಸ್ತ್ರೀಯೂ ಮೂತ್ರವಿಸರ್ಜನೆ ಮಾಡುವಾಗಲೂ ಬಾಯಲ್ಲಿ ತಿಂಡಿಯನ್ನು ಇಟ್ಟುಕೊಂಡು ಹಲ್ಲುಗಳಿಂದ ಕಡಿಯುತ್ತಾಳೆ ಎಂದು ವಿಶೇಷಾರ್ಥ ಬರುತ್ತದೆ.

ಯದ್ಯಪಿ ಮೂಲದಲ್ಲಿಯೂ ಲಕ್ಷಾಲಂಕಾರದಲ್ಲಿಯೂ 'ದಶೇರಕೀ' ಎಂದು ಪಾಠ ಕಾಣುತ್ತದೆ. ಆದರೆ ಹಲಾಯುಧ ಕೋಷದಲ್ಲಿ ಉಷ್ಟ್ರ ಪರ್ಯಾಯವಾಗಿ 'ದಾಶೇರಕ' ಶಬ್ದವಿದೆ. ಭಾರತದಲ್ಲಿಯೂ 'ಯಥೈವೋಷ್ಟ್ರೀ ದಾಶೇರಕೀ' ಎಂದು ಒಂದು ಪಾಠವಿರುವುದರಿಂದ ಅದನ್ನೇ ಸ್ವೀಕರಿಸಬಹುದು. ಅಥವಾ ಛಂದಸ್ಸಿಗಾಗಿ 'ದಾಶೇರಕೀ' 'ದಶೇರಕೀ' ಆಗಿದೆ.

ಸೌವೀರಕಂ ಯಾಚ್ಯಮಾನಾ ಮದ್ರಿಕಾ ಪ್ರಾತಿವೇಶ್ಮಿಕೈಃ ।
ಅದಾತುಕಾಮಾ ವಚನಮಿದಂ ವದತಿ ದಾರುಣಮ್ ॥೪೦॥

ಭಿಕ್ಷೆ ಬೇಡುತ್ತ ಮನೆಮನೆ ತಿರುಗುವವನು ಗಂಜಿಯನ್ನು ಬೇಡಿದರೆ ಮದ್ರಕ ಸ್ತ್ರೀಯು ಅಂಬಲಿ ಕೊಡಲು ಇಷ್ಟವಿಲ್ಲದೆ ಕರ್ಣಕಠೋರವಾದ ಈ ಮಾತನ್ನು ಆಡುತ್ತಾಳೆ—

ಮಾ ಮಾಂ ಸೌವೀರಕಂ ಕಶ್ಚಿದ್ ಯಾಚತಾಂ ದಯಿತಂ ಮಮ ।
ಪುತ್ರಂ ದದ್ಯಾಂ ಪತಿಂ ದದ್ಯಾಂ ನ ತು ಸೌವೀರಕಂ ಕ್ವಚಿತ್ ॥೪೧॥

'ಅಂಬಲಿ ಕೊಡೆಂದು ನನ್ನನ್ನು ಯಾರೂ ಕೇಳಬಾರದು. ಅಂಬಲಿ ನನಗೆ ಇಷ್ಟ. ಬೇಡಿದರೆ ಪುತ್ರನನ್ನು ಕೊಟ್ಟೇನು, ಪತಿಯನ್ನು ಕೊಟ್ಟೇನು. ಅಂಬಲಿಯನ್ನು ಮಾತ್ರ ಕೊಡಲಾರೆ' ಎಂದು.

'ಪ್ರಾತಿವೇಶ್ಮಿಕ' ಎಂದರೆ 'ಪ್ರತಿ'ಯೊಂದು 'ವೇಶ್ಮ'ವನ್ನೂ ಮನೆಮನೆಯನ್ನೂ ತಿರುಗಿ ಬೇಡುವವನು. 'ಮದ್ರಿಕಾ ಕಷತಿ ಸ್ಫಿಚೌ' ಎಂದೂ ಇಲ್ಲಿ ಪಾಠವಿದೆ ಎಂದು ಲಕ್ಷಾಲಂಕಾರ ಹೇಳಿ, 'ಅದೂ ಸರಿಯೆ. ಬೇಡುವವನಿಗೆ

ಅಂಬಲಿಯನ್ನು ಕೊಡಲು ಇಷ್ಟವಿಲ್ಲದೆ ನಿತಂಬಗಳನ್ನು ಕೆರೆದುಕೊಳ್ಳುತ್ತಾಳೆ ಎಂದು ಅರ್ಥ ಕೊಡುತ್ತದೆ' ಎಂದಿದ್ದಾರೆ.

ಗೌರ್ಯೋ ಬೃಹತ್ಯೋ ನಿರ್ಮ್ಯಕಾ ಮದ್ರಿಕಾಃ ಕಂಬಲಾವೃತಾಃ ।
ಘುಸ್ಮರಾ ನಷ್ಟಶೌಚಾಶ್ಚ ಪ್ರಾಯ ಇತ್ಯನುಶುಶ್ರುಮ ॥೪೨॥

ಮದ್ರಸ್ತ್ರೀಯರು ಹೆಚ್ಚಾಗಿ ಗೌರವರ್ಣದವರೂ ಸ್ಥೂಲಕಾಯರೂ ಆಗಿದ್ದು ನಿರ್ಲಜ್ಜರಾಗಿರುತ್ತಾರೆ. ಕಂಬಳಿ ಉಡುತ್ತಾರೆ. ಹೊಟ್ಟೆಬಾಕರಾಗಿ ಶೌಚವಿಲ್ಲದವರಾಗಿರುತ್ತಾರೆ ಎಂದು ಕೇಳಿದ್ದೇವೆ.

ಪ್ರಮೇಹಿತ್ವಾ ಸ್ಫಿಚಾ ಭೂಮಿಂ ಘರ್ಷಂತ್ಯೋ ಹೀನಶೋಧನಾಃ ।
ಶುದ್ಧಾ ನಾದ್ಭಿರ್ನ ಮೃದ್ಭಿಶ್ಚ ನಿತ್ಯೋಚ್ಛಿಷ್ಟಾ ಭವಂತಿ ಹಿ ॥೪೩॥

ಮೂತ್ರವಿಸರ್ಜನೆ ಮಾಡಿದ ಮೇಲೆ ನೆಲವನ್ನು ನಿತಂಬದಿಂದ ಉಜ್ಜುತ್ತಾರೆ ಹೊರತು ನೀರಿನಿಂದ, ಮಣ್ಣಿನಿಂದ ಶೋಧನ ಮಾಡುವುದಿಲ್ಲ. ಹೀಗೆ ಮದ್ರಸ್ತ್ರೀಯರು ಎಂದಿಗೂ ಅಶುದ್ಧರಾಗಿರುತ್ತಾರೆ.

ಏವಮಾದಿ ಮಯಾನ್ಯೈರ್ವಾ ಶಕ್ಯಂ ವಕ್ತುಂ ಭವೇದ್ ಬಹು ।
ಆಕೇಶಾಂತಾನ್ನಖಾಗ್ರಾಚ್ಚ ವಕ್ತವ್ಯೇಷು ಕುಕರ್ಮಸು ॥೪೪॥

ಕೇಶದ ತುದಿಯಿಂದ ತೊಡಗಿ ಕಾಲುಗುರಿನ ತುದಿವರೆಗೂ ನಿಂದ್ಯವಾದ ಇಂಥ ಕುಕರ್ಮಗಳ ಬಗ್ಗೆ ನಾನಾಗಲಿ, ಬೇರೆಯವರಾಗಲಿ ಇನ್ನೂ ಬಹಳವಾಗಿ ಹೇಳಲು ಶಕ್ಯವಿದೆ.

ಮದ್ರಕಾಃ ಸಿಂಧುಸೌವೀರಾ ಧರ್ಮಂ ವಿದ್ಯುಃ ಕಥಂ ತ್ವಿಹ ।
ಪಾಪದೇಶೋದ್ಭವಾ ಮ್ಲೇಚ್ಛಾಃ ಕರ್ಮಲೋಪವಿಚಕ್ಷಣಾಃ ॥೪೫॥

ಮದ್ರ ಸಿಂಧು ಸೌವೀರ ದೇಶದವರು ಪಾಪದೇಶಗಳಲ್ಲಿ ಹುಟ್ಟಿದವರು ಮ್ಲೇಚ್ಛರು. ಕರ್ಮಲೋಪದಲ್ಲಿ ನಿಪುಣರು. ಧರ್ಮಾಸಕ್ತರು ಹೇಗಾದಾರು?

ಏಷ ಮುಖ್ಯತಮೋ ಧರ್ಮಃ ಕ್ಷತ್ರಿಯಸ್ಯೇತಿ ನಃ ಶ್ರುತಮ್ ।
ಯದಾಜೌ ನಿಹತಃ ಶೇತೇ ಸದ್ಭಿಃ ಸಮಭಿಪೂಜಿತಃ ॥೪೬॥

ಯುದ್ಧದಲ್ಲಿ ಹತನಾಗಿ ಸಜ್ಜನರಿಂದ ಹೊಗಳಿಸಿಕೊಳ್ಳುತ್ತ ನೆಲದ ಮೇಲೆ ಒರಗುವುದು ಕ್ಷತ್ರಿಯನಿಗೆ ಅತಿಮುಖ್ಯವಾದ ಧರ್ಮ ಎಂದು ನಾವು ಕೇಳಿರುವೆವು.

ಆಯುಧಾನಾಂ ಸಾಂಪರಾಯೇ ಯನ್ಮುಂಚೇಯಮಹಂ ತನುಮ್ ।
ಮಮೈಷ ಪ್ರಥಮಃ ಕಲ್ಪೋ ನಿಧನೇ ಸ್ವರ್ಗಮಿಚ್ಛತಃ ॥೪೭॥

ಮರಣಾನಂತರದಲ್ಲಿ ಸ್ವರ್ಗವನ್ನು ಹೊಂದಲು ಇಚ್ಛಿಸುವ ನಾನು ಆಯುಧಗಳಿಂದ ನಡೆಯುವ ಯುದ್ಧದಲ್ಲಿ ಶರೀರತ್ಯಾಗಮಾಡುವ ವಿಧಾನಕ್ಕೇ ಆದ್ಯತೆ ನೀಡುತ್ತೇನೆ.

ಸೋಯಂ ಪ್ರಿಯಸಖಾ ಚಾಸ್ಮಿ ಧಾರ್ತರಾಷ್ಟ್ರಸ್ಯ ಧೀಮತಃ ।
ತದರ್ಥೇ ಹಿ ಮಮ ಪ್ರಾಣಾ ಯಚ್ಚ ಮೇ ವಿದ್ಯತೇ ವಸು ॥೪೮॥

ನಾನು ಧೀಮಂತನಾದ ದುರ್ಯೋಧನನಿಗೆ ಪ್ರಿಯಮಿತ್ರ. ನನ್ನ ಪ್ರಾಣಗಳು ಅವನಿಗಾಗಿಯೆ ಇವೆ. ನನ್ನಲ್ಲಿ ಏನು ಸಂಪತ್ತು ಇದೆಯೋ ಅದೂ ಅವನಿಗಾಗಿಯೆ.

ವ್ಯಕ್ತಂ ತ್ವಮಸ್ಯುಪಹಿತಃ ಪಾಂಡವೈಃ ಪಾಪದೇಶಜ ।
ಯಥಾ ಚಾಮಿತ್ರವತ್ಸಂಖ್ಯೇ ತ್ವಮಸ್ಮಾಸು ಪ್ರವರ್ತಸೇ ॥೪೯॥

ಪಾಪದೇಶದಲ್ಲಿ ಜನಿಸಿದವನೆ, ನೀನು ಪಾಂಡವರಿಂದ ನಮ್ಮಲ್ಲಿ ಇರಿಸಲ್ಪಟ್ಟವನು ಎನ್ನುವುದು ಖಚಿತವಾಯಿತು. ಏಕೆಂದರೆ ಯುದ್ಧದಲ್ಲಿ ಶತ್ರುಗಳಂತೆ ನಮ್ಮಲ್ಲಿ ಪ್ರವೃತ್ತಿ ಮಾಡುವೆ.

ಕಾಮಂ ನ ಖಲು ಶಕ್ಯೋಽಹಂ ತ್ವದ್ವಿಧಾನಾಂ ಶತೈರಪಿ ।
ಸಂಗ್ರಾಮಾದ್ ವಿಮುಖಂ ಕರ್ತುಂ ಧರ್ಮಜ್ಞ ಇವ ನಾಸ್ತಿಕೈಃ ॥೫೦॥

ನಿನ್ನಂಥವರು ನೂರು ಮಂದಿ ಯತ್ನಿಸಿದರೂ ನನ್ನನ್ನು ಯುದ್ಧದಿಂದ ವಿಮುಖನನ್ನಾಗಿಸುವುದು ಶಕ್ಯವಿಲ್ಲ. ನೂರುಮಂದಿ ನಾಸ್ತಿಕರಿಂದಲೂ ಧರ್ಮಜ್ಞಾನಿಯನ್ನು ಧರ್ಮವಿಮುಖಗೊಳಿಸಲು ಶಕ್ಯವಾಗಲಾರದು.

ಸಾರಂಗ ಇವ ಘರ್ಮಾಂತೇ ಕಾಮಂ ವಿಲಪ ಶುಷ್ಯ ಚ ।
ನಾಹಂ ಭೀಷಯಿತುಂ ಶಕ್ಯಃ ಕ್ಷತ್ರಧರ್ಮೇ ವ್ಯವಸ್ಥಿತಃ ॥೫೧॥

ಬೇಸಿಗೆಯ ಕೊನೆಯಲ್ಲಿ ಚಾತಕಪಕ್ಷಿ ಕೂಗಿ ಗಂಟಲು ಒಣಗಿಸಿಕೊಳ್ಳುತ್ತದೆ.

ಹಾಗೇ ನೀನು ಕೂಡ ಎಷ್ಟು ಬೇಕಾದರೂ ಪ್ರಲಾಪ ಮಾಡು, ಗಂಟಲು ಒಣಗಿಸಿ ಕೊಳ್ಳು. ನನ್ನನ್ನು ಭಯಪಡಿಸುವುದು ಶಕ್ಯವಿಲ್ಲ. ಕ್ಷಾತ್ರಧರ್ಮದಲ್ಲಿ ಸ್ಥಿರವಾಗಿ ನಿಂತವನು ನಾನು.

ತನುತ್ಯಜಾಂ ನೃಸಿಂಹಾನಾಮಾಹವೇಷ್ವನಿವರ್ತಿನಾಮ್ ।
ಯಾ ಗತಿರ್ಗುರುಣಾ ಪ್ರೋಕ್ತಾ ಪ್ರೇಮ್ಣಾ ರಾಮೇಣ ತಾಂ ಸ್ಮರೇ ।।೫೨।।

ಯುದ್ಧದಿಂದ ಹಿಂಜರಿಯದೆ ಶರೀರತ್ಯಾಗ ಮಾಡುವ ಪುರುಷಶ್ರೇಷ್ಠರಿಗೆ ಯಾವ ಉತ್ತಮ ಗತಿ ಲಭ್ಯವೆಂದು ಪ್ರೀತಿಯಿಂದ ಗುರುವಾದ ಪರಶುರಾಮ ಹೇಳಿರುವನೋ ಅದನ್ನು ಸ್ಮರಿಸುತ್ತೇನೆ.

ಸ್ವೇಷಾಂ ತ್ರಾಣಾರ್ಥಮುದ್ಯಂತಂ ವಧಾರ್ಥಂ ದ್ವಿಷತಾಮಪಿ ।
ವಿದ್ಧಿ ಮಾಮಾಸ್ಥಿತಂ ವೃತ್ತಂ ಪೌರೂರವಸಮುತ್ತಮಮ್ ।।೫೩।।

ನಮ್ಮವರ ರಕ್ಷಣೆಗಾಗಿ, ಶತ್ರುಗಳ ವಧೆಗಾಗಿ ನಾನು ಪುರೂರವ ಮಹಾರಾಜನ ಉತ್ತಮ ಆದರ್ಶವನ್ನು ಇಟ್ಟುಕೊಂಡವನು ಎಂದು ತಿಳಿ.

ಮಿತ್ರನಾದ ದೇವೇಂದ್ರನ ಪ್ರೀತಿಗಾಗಿ ರಾಜಾ ಪುರೂರವನು ಕೇಶಿ ಮಹಾದಾನವನೊಂದಿಗೆ ಯುದ್ಧದಲ್ಲಿ ಹೋರಾಡಿ, ಅವನನ್ನು ಕೊಂದು, ಅವನು ಅಪಹರಿಸಿದ್ದ ಊರ್ವಶಿಯನ್ನು ದೇವೇಂದ್ರನಿಗಿತ್ತ. ಅವನಿಂದ ಇಂದ್ರನ ಸಿಂಹಾಸನವನ್ನೂ ಕೂಡ ರಕ್ಷಿಸಿದ. 'ಜೀವದ ಹಂಗು ತೊರೆದು ಮಿತ್ರನಿಗೆ ಉಪಕಾರ ಮಾಡುವ ಈ ಪುರೂರವನ ವ್ರತವನ್ನು ಕೈಗೊಂಡವನು ನಾನು ನೋಡು' ಎಂದು ಕರ್ಣ ಹೇಳುತ್ತಿದ್ದಾನೆ.

ನ ತದ್ಭೂತಂ ಪ್ರಪಶ್ಯಾಮಿ ತ್ರಿಷು ಲೋಕೇಷು ಮದ್ರಪ ।
ಯೋ ಮಾಮಸ್ಮಾದಭಿಪ್ರಾಯಾದ್ ವಾರಯೇದಿತಿ ಮೇ ಮತಿಃ ।।೫೪।।

ಮದ್ರರಾಜ, ಈ ಅಭಿಪ್ರಾಯದಿಂದ ಹೊರಟಿರುವ ನನ್ನನ್ನು ತಡೆಯಬಲ್ಲ ವ್ಯಕ್ತಿಯನ್ನು ಮೂರು ಲೋಕದಲ್ಲಿ ನಾ ಕಾಣೆ.

ಏವಂ ವಿದ್ವನ್ ಜೋಷಮಾಸ್ಸ್ವ ತ್ರಾಸಾತ್ ಕಿಂ ಬಹು ಭಾಷಸೇ ।
ನ ತ್ವಾಂ ಹತ್ವಾ ಪ್ರದಾಸ್ಯಾಮಿ ಕ್ರವ್ಯಾದ್ಭ್ಯೋ ಮದ್ರಕಾಧಮ ।।೫೫।।

ಮದ್ರಕರಲ್ಲಿ ಅಧಮನಾಗಿರುವ ಶಲ್ಯನೆ, ಹೀಗೆ ನಾನು ಹೇಳಿದಂತೆ ತಿಳಿದು

ಸುಮ್ಮನೆ ಇರು. ಭಯದಿಂದ ಏಕೆ ಹೆಚ್ಚು ಮಾತಾಡುವೆ? ನಾನು ನಿನ್ನನ್ನು ಕೊಂದು ಹಿಂಸ್ರಮೃಗಗಳಿಗೆ ಊಣಲು ಕೊಡುತ್ತಿಲ್ಲ.

ಮಿತ್ರಪ್ರತೀಕ್ಷಯಾ ಶಲ್ಯ ಧಾರ್ತರಾಷ್ಟ್ರಸ್ಯ ಚೋಭಯೋಃ ।
ಅಪವಾದತಿತಿಕ್ಷಾಭ್ಯಾಂ ತ್ರಿಭಿರೇತೈರ್ಹಿ ಜೀವಸಿ ॥೫೬॥

ದುರ್ಯೋಧನನಿಗೆ ನಮ್ಮಿಬ್ಬರಲ್ಲಿಯೂ ಮಿತ್ರರೆಂಬ ಭಾವನೆ ಇದೆ. ನನಗೂ ಸಾರಥಿಯನ್ನು ಕೊಂದನೆಂಬ ಅಪವಾದ ಬೇಡವಾಗಿದೆ. ಮತ್ತು ನೀನು ನಿನ್ನಿಚ್ಛೆಯಂತೆ ಏನಾದರೂ ಹೇಳಬಹುದೆಂದು ನಾನು ಒಪ್ಪಿಕೊಂಡಿದ್ದರಿಂದ ನಿನ್ನ ಮಾತನ್ನು ಸಹಿಸಿಕೊಳ್ಳಬೇಕಾಗಿದೆ. ಈ ಮೂರು ಕಾರಣಗಳಿಂದ ನೀನು ಬದುಕಿರುತ್ತಿ.

ಪುನಶ್ಚೇದೀದೃಶಂ ವಾಕ್ಯಂ ಮದ್ರರಾಜ ವದಿಷ್ಯಸಿ ।
ಶಿರಸ್ತೇ ಪಾತಯಿಷ್ಯಾಮಿ ಗದಯಾ ವಜ್ರಕಲ್ಪಯಾ ॥೫೭॥

ಇಷ್ಟು ಸಾಕು. ಪುನಃ ಇಂಥ ಮಾತನ್ನು ನೀನು ಆಡಿದರೆ, ಮದ್ರರಾಜ, ವಜ್ರಾಯುಧದಂತಿರುವ ಗದೆಯಿಂದ ನಿನ್ನ ತಲೆಯನ್ನು ಉರುಳಿಸುತ್ತೇನೆ.

ಶ್ರೋತಾರಸ್ತ್ವದಮದ್ಯೇಹ ದ್ರಷ್ಟಾರೋ ವಾ ಕುದೇಶಜ ।
ಕರ್ಣಂ ವಾ ಜಘ್ನತುಃ ಕೃಷ್ಣೌ ಕರ್ಣೋ ವಾ ನಿಜಘಾನ ತೌ ॥೫೮॥

ಈಗ ಈ ಯುದ್ಧದಲ್ಲಿ ಕರ್ಣನನ್ನು ಕೃಷ್ಣಾರ್ಜುನರು ಕೊಂದರೆ? ಅಥವಾ ಕರ್ಣನೆ ಕೃಷ್ಣಾರ್ಜುನರನ್ನು ಕೊಂದನೆ? ಎಂಬುದನ್ನು ಕೇಳುವವರು ಕೇಳುತ್ತಾರೆ ಅಥವಾ ನೋಡುವವರು ನೋಡುತ್ತಾರೆ.

ಏವಮುಕ್ತ್ವಾ ತು ರಾಧೇಯಃ ಪುನರೇವ ವಿಶಾಂಪತೇ ।
ಅಬ್ರವೀನ್ಮದ್ರರಾಜಾನಂ ಯಾಹಿ ಯಾಹೀತ್ಯಸಂಭ್ರಮಮ್ ॥೫೯॥

ರಾಜನೆ, ಹೀಗೆ ಹೇಳಿ ಕರ್ಣನು ಶಲ್ಯನಿಗೆ 'ಹೋಗು, ಮುಂದೆ ಹೋಗು' ಎಂದು ನಿರ್ಭಯವಾಗಿ ನುಡಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಚತ್ವಾರಿಂಶೋಽಧ್ಯಾಯಃ ॥೪೦॥

ಮಹಾಭಾರತತಾತ್ಪರ್ಯನಿರ್ಣಯ

ಕೋ ನಾಮ ತಂ ಜಯೇನ್ಮತ್ಕೋ ದೃಷ್ಟೋ ವೋಽಪಿ ಸ ಗೋಗ್ರಹೇ ।
ಕಾಕಗೋಮಾಯುಧರ್ಮಾ ತ್ವಂ ಹಂಸಸಿಂಹೋಪಮಂ ರಣೇ ॥೩೦॥

ಅರ್ಜುನನನ್ನು ಯಾವ ಮಾನವ ಗೆಲ್ಲಬಲ್ಲ? ಗೋಗ್ರಹಣಕಾಲದಲ್ಲಿ ನೀವೂ ಅವನನ್ನು ನೋಡಿರುವಿರಿ ತಾನೆ? ಕಾಗೆ, ನರಿಗಳಂತಿರುವ ನೀನು ಹಂಸ, ಸಿಂಹಗಳಂತಿರುವ ಅರ್ಜುನನನ್ನು ಯುದ್ಧದಲ್ಲಿ ಇದಿರಿಸಲು ಹೋಗಬೇಡ.

❖

ನಲವತ್ತೊಂದನೆಯ ಅಧ್ಯಾಯ

'ಹೀನ ಕುಲದವನು ನೀನು. ದುರಹಂಕಾರಿ, ಹಂಸದೊಡನೆ ಸ್ಪರ್ಧಿಸಿ ಸೋತ ಕಾಗೆಯಂತೆ, ಅರ್ಜುನನೊಡನೆ ಹೋರಾಡಿದರೆ, ಕರ್ಣ, ನೀನು ಬದುಕಿ ಉಳಿಯಲಾರೆ' ಎನ್ನುತ್ತಾನೆ ಶಲ್ಯ.

ಸಂಜಯಃ

ಮಾರಿಷಾಧಿರಥೇಃ ಶ್ರುತ್ವಾ ವಾಚೋ ಯುದ್ಧಾಭಿನಂದಿನಃ ।
ಶಲ್ಯೋಽಬ್ರವೀತ್ ಪುನಃ ಕರ್ಣಂ ನಿದರ್ಶನಮುದಾಹರನ್ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ. ರಾಜನೆ, ಯುದ್ಧವನ್ನು ಬಯಸುವ ಕರ್ಣನ ಮಾತನ್ನು ಕೇಳಿ ಶಲ್ಯನು ಪುನಃ ಕಾಗೆಯ ದೃಷ್ಟಾಂತ ಕೊಟ್ಟು ಹೇಳಲಾರಂಭಿಸಿದ.

ಶಲ್ಯಃ

ಯಥೈವ ಮತ್ತೋ ಮದ್ಯೇನ ತ್ವಂ ತಥಾ ಲಕ್ಷ್ಯಸೇ ವೃಷ ॥೨॥

ಜಾತೋಽಹಂ ಯಜ್ವನಾಂ ವಂಶೇ ಸಂಗ್ರಾಮೇಷ್ವನಿವರ್ತಿನಾಮ್ ।
ರಾಜ್ಞಾಂ ಮೂರ್ಧಾಭಿಷಿಕ್ತಾನಾಂ ಸ್ವಯಂ ಧರ್ಮಪರಾಯಣಃ ॥೩॥
ತಥಾಽದ್ಯ ತ್ವಾಂ ಪ್ರಮಾದ್ಯಂತಂ ಚಿಕಿತ್ಸೇಯಂ ಸುಹೃತ್ತಯಾ ॥೪॥

ಶಲ್ಯನು ನುಡಿದ— ಕರ್ಣ, ಮದ್ಯದಿಂದ ಮತ್ತನಾಗಿರುವ ವ್ಯಕ್ತಿಯಂತೇ ನನಗೆ

ನೀನು ಕಾಣುತ್ತಿರುವೆ. ನಾನು ಯಜ್ಞಶೀಲರಾದ ಸಂಗ್ರಾಮಗಳಲ್ಲಿ ಹಿಂದೆ ಸರಿಯದವರಾದ ಮೂರ್ಧಾಭಿಷಿಕ್ತರಾದ ರಾಜರ ವಂಶದಲ್ಲಿ ಹುಟ್ಟಿದವನು. ಸ್ವತಃ ಧರ್ಮಪರಾಯಣನೂ ಆಗಿದ್ದೇನೆ. ಇಂದು ತಪ್ಪು ಹೆಜ್ಜೆ ಇಡುತ್ತಿರುವ ನಿನಗೆ ಮಿತ್ರನಾಗಿ ಸರಿಯಾದ ಚಿಕಿತ್ಸೆ ಮಾಡುತ್ತೇನೆ.

ಇಮಾಂ ಕಾಕೋಪಮಾಂ ಕರ್ಣ ಪ್ರೋಚ್ಯಮಾನಾಂ ನಿಬೋಧ ಮೇ ।
ಶ್ರುತ್ವಾ ಯಥೇಷ್ಟಂ ಕುರ್ಯಾಸ್ತ್ವಂ ನಿಹೀನ ಕುಲಪಾಂಸನ ॥೫॥

ಹೀನ ಕುಲದವನೆ, ಕುಲಕಳಂಕನೆ, ಕರ್ಣ, ನಿನಗೆ ಕಾಗೆಯ ದೃಷ್ಟಾಂತವನ್ನು ಹೇಳುತ್ತೇನೆ, ಕೇಳು, ಕೇಳಿದ ಬಳಿಕ ನಿನ್ನಿಚ್ಛೆಯಂತೆ ಮಾಡು.

ನಾಹಮಾತ್ಮನಿ ಕಿಂಚಿದ್ವೈ ಕಿಲ್ಬಿಷಂ ಕರ್ಮ ಸಂಸ್ಮರೇ ।
ಯೇನ ಮಾಂ ತ್ವಂ ಮಹಾಬಾಹೋ ಹಂತುಮಿಚ್ಛಸ್ಯನಾಗಸಮ್ ॥೬॥

ನಾನು ನನ್ನಲ್ಲಿ ಏನೂ ಪಾಪಕರ್ಮವನ್ನು ಕಂಡಿಲ್ಲ. ನಿರಪರಾಧಿಯಾದ ನನ್ನನ್ನು ಕೊಲ್ಲಲು ಏಕೆ ಆಶಿಸುವೆ?

ಅವಶ್ಯಂ ತು ಮಯಾ ವಾಚ್ಯಂ ಬುದ್ಧ್ಯಾ ತವ ಹಿತಾಹಿತಮ್ ।
ವಿಶೇಷತೋ ರಥಸ್ಥೇನ ರಾಜ್ಞಶ್ಚೈವ ಹಿತೈಷಿಣಾ ॥೭॥

ನಿನ್ನ ಹಿತ–ಅಹಿತಗಳನ್ನು ತಿಳಿದು ನಾನು ನಿನಗೆ ಅವಶ್ಯ ಹೇಳಬೇಕು. ವಿಶೇಷವಾಗಿ ಸಾರಥಿಯಾಗಿ ನಾನು ರಾಜನಾದ ನಿನ್ನ ಹಿತೈಷಿಯಾಗಿ ನಿನಗೆ ಅವನ್ನು ಹೇಳಲೇಬೇಕು.

ಸಮಂ ಚ ವಿಷಮಂ ಚೈವ ರಥಿನಶ್ಚ ಬಲಾಬಲಮ್ ।
ಶ್ರಮಃ ಖೇದಶ್ಚ ಸತತಂ ಹಯಾನಾಂ ರಥಿನಾ ಸಹ ॥೮॥

ಸಾರಥಿಯು ರಾಜನಿಗೆ ಅನುಕೂಲ–ಪ್ರತಿಕೂಲ ಪರಿಸ್ಥಿತಿಗಳು ಶಕ್ತಿ–ಅಶಕ್ತಿಗಳು ಯಾವುವೆಂದು ತಿಳಿಯಬೇಕು. ರಾಜನಿಗೂ ಕುದುರೆಗಳಿಗೂ ಆಗುವ ಶ್ರಮ ಖೇದಗಳನ್ನು ಸದಾ ಗಮನಿಸುತ್ತಿರಬೇಕು.

ಆಯುಧಸ್ಯ ಪರಿಜ್ಞಾನಂ ರುತಂ ಚ ಮೃಗಪಕ್ಷಿಣಾಮ್ ।
ಸಾರಂ ಚೈವಾಪ್ಯಸಾರಂ ಚ ಶಲ್ಯಾನಾಂ ಚ ಪ್ರತಿಕ್ರಿಯಾ ॥೯॥

ಆಯುಧಗಳೆಷ್ಟಿವೆ ಎನ್ನುವುದರ ಪರಿಜ್ಞಾನ. ಜಯಾಪಜಯ ಸೂಚಕವಾದ ಮೃಗ–ಪಕ್ಷಿಗಳ ಧ್ವನಿಜ್ಞಾನ, ಪರಿಸ್ಥಿತಿಯ ನಿರ್ವಾಹ ಸಾಧ್ಯವೆ, ಅಸಾಧ್ಯವೆ ಎಂದು ಊಹಿಸುವುದು, ಗಾಯಗಳಿಗೆ ಚಿಕಿತ್ಸೆ ಮಾಡುವುದು– ಇವೆಲ್ಲವನ್ನೂ ಸಾರಥಿ ತಿಳಿದಿರಬೇಕು.

ಅಸ್ತ್ರಯೋಗಂ ಚ ಯುದ್ಧಂ ಚ ನಿಮಿತ್ತಾನಿ ತಥೈವ ಚ ।
ಸರ್ವಮೇತನ್ಮಯಾ ಜ್ಞೇಯಂ ರಥಸ್ಯಾಸ್ಯ ಕುಟುಂಬಿನಾ ॥೧೦॥
ಅತಸ್ತಾ ್ವಂ ಕಥಯೇ ಕರ್ಣ ನಿದರ್ಶನಮಿದಂ ಪುನಃ ॥೧೧॥

ಅಸ್ತ್ರವನ್ನು ಯಾವಾಗ ಯಾರ ಮೇಲೆ ಪ್ರಯೋಗಿಸಬೇಕು? ಯಾವ ಯುದ್ಧ ಮಾಡಬೇಕು? ಶುಭಾಶುಭ ಸೂಚಕ ನಿಮಿತ್ತ ಯಾವುವು? ಎಂದು ಎಲ್ಲವನ್ನೂ ರಥಿಕನಿಗೆ ಬಂಧುವಾಗಿ ತಿಳಿದಿರಬೇಕು. ಅದರಿಂದ ನಿನಗೆ ಒಂದು ನಿದರ್ಶನವನ್ನು ಹೇಳುತ್ತೇನೆ.

ವೈಶ್ಯಃ ಕಿಲ ಸಮುದ್ರಾಂತೇ ಪ್ರಭೂತಧನಧಾನ್ಯವಾನ್ ।
ಯಜ್ವಾ ದಾನಪತಿಃ ಕ್ಷಾಂತಃ ಸ್ವಕರ್ಮಸ್ಥೋಽಭವಚ್ಛುಚಿಃ ॥೧೨॥

ಸಮುದ್ರತೀರದಲ್ಲಿ ಒಬ್ಬ ವೈಶ್ಯ ವಾಸವಾಗಿದ್ದ. ಅವನು ಬಹು ಧನ–ಧಾನ್ಯ ಯುಕ್ತನಾಗಿದ್ದ. ಯಜ್ಞಶೀಲ, ದಾನ ಮಾಡುವವ, ಕ್ಷಮಾಶೀಲ, ವಿಹಿತ ಕರ್ಮ ಮಾಡುತ್ತ ಶುಚಿಯಾಗಿದ್ದ.

ಬಹುಪುತ್ರಃ ಪ್ರಿಯಾಪತ್ಯಃ ಸರ್ವಭೂತಾನುಕಂಪಕಃ ।
ರಾಜ್ಞೋ ಧರ್ಮಪ್ರಧಾನಸ್ಯ ರಾಷ್ಟ್ರೇ ವಸತಿ ನಿರ್ಭಯಃ ॥೧೩॥

ಬಹುಪುತ್ರರುಳ್ಳವ, ಮಕ್ಕಳನ್ನು ಪ್ರೀತಿಸುವವ. ಸರ್ವಪ್ರಾಣಿಗಳಲ್ಲಿ ದಯೆ ಉಳ್ಳವ, ಧಾರ್ಮಿಕನಾದ ರಾಜನ ರಾಜ್ಯದಲ್ಲಿ ನಿರ್ಭಯವಾಗಿ ವಾಸಮಾಡುತ್ತಿದ್ದ.

ಪುತ್ರಾಣಾಂ ತಸ್ಯ ಬಾಲಾನಾಂ ಕುಮಾರಾಣಾಂ ಚ ಧೀಮತಃ ।
ಕಾಕೋ ಬಹೂನಾಮಭವದುಚ್ಛಿಷ್ಟಕೃತಭೋಜನಃ ॥೧೪॥

ಧೀಮಂತನಾದ ಅವನ ಮಕ್ಕಳಲ್ಲಿ ಬಹುಮಂದಿ ಬಾಲಕರು, ಕುಮಾರರು. ಅವರು ತಿಂದು ಉಳಿದುದನ್ನು ಕಾಗೆ ತಿನ್ನುತ್ತಿತ್ತು.

ತಸ್ಮೈ ಸದಾ ಪ್ರಯಚ್ಛಂತಿ ವೈಶ್ಯಪುತ್ರಾಃ ಕುಮಾರಕಾಃ ।
ಮಾಂಸೋದನಂ ದಧಿ ಕ್ಷೀರಂ ಪಾಯಸಂ ಮಧುಸರ್ಪಿಷೀ ॥೧೫॥

ಆ ಕಾಗೆಗೆ ವೈಶ್ಯನ ಮಕ್ಕಳು ಮಾಂಸ ಅನ್ನ ಮೊಸರು ಹಾಲು ಪಾಯಸ ಜೇನು, ತುಪ್ಪ ಎಲ್ಲವನ್ನೂ ಸದಾ ಕೊಡುತ್ತಿದ್ದರು.

ಸ ಚೋಚ್ಛಿಷ್ಟಭೃತಃ ಕಾಕೋ ವೈಶ್ಯಪುತ್ರೈಃ ಕುಮಾರಕೈಃ ।
ಸದೃಶಾನ್ ಪಕ್ಷಿಣೋ ದೃಪ್ತಃ ಶ್ರೇಯಸಶ್ಚಾವಮನ್ಯತೇ ॥೧೬॥

ವೈಶ್ಯಪುತ್ರರು ಉಂಡ ಎಂಜಲು ಅನ್ನದಿಂದ ಪುಷ್ಟವಾದ ಕಾಗೆ ಅಹಂಕಾರದಿಂದ ತನಗೆ ಸಮಾನವಾದ ತನಗಿಂತ ದೊಡ್ಡದಾದ ಎಲ್ಲ ಪಕ್ಷಿಗಳನ್ನೂ ಅವಮಾನಿಸಲು ತೊಡಗಿತು.

ಅಥ ಹಂಸಾಃ ಸಮುದ್ರಾಂತೇ ಪ್ರಜಗ್ಮುರತಿಪಾತಿನಃ ।
ಗರುಡಸ್ಯ ಗತೌ ತುಲ್ಯಾಶ್ಚಕ್ರಾಂಗಾ ಹೃಷ್ಟಚೇತಸಃ ॥೧೭॥

ಒಮ್ಮೆ ಸಮುದ್ರತೀರಕ್ಕೆ ಗರುಡನಿಗೆ ಸಮಾನವಾದ ವೇಗವುಳ್ಳ ಹಂಸಗಳು ಹರ್ಷಚಿತ್ತದಿಂದ ಹಾರಿಬಂದುವು.

ಕುಮಾರಕಾಸ್ತದಾ ಹಂಸಾನ್ ದೃಷ್ಟ್ವಾ ಕಾಕಮಥಾಬ್ರುವನ್ ।
ಭವಾನೇವ ವಿಶಿಷ್ಟೋ ಹಿ ಪತತ್ರಿಭ್ಯೋ ವಿಹಂಗಮ ॥೧೮॥

ವೈಶ್ಯನ ಮಕ್ಕಳು ಹಂಸಗಳನ್ನು ನೋಡಿ ಕಾಗೆಗೆ ಹೇಳಿದರು 'ಹಕ್ಕಿಯೆ, ನೀನೇ ಎಲ್ಲ ಪಕ್ಷಿಗಳಿಗಿಂತ ಮೇಲು' ಎಂದು.

ಏತೇऽತಿಪಾತಿನಃ ಪಶ್ಯ ವಿಹಂಗಾನ್ ವಿಯದಾಶ್ರಿತಾನ್ ।
ಏಹಿ ತ್ವಮಪಿ ಶಕ್ತೋ ಹಿ ಕಸ್ಮಾನ್ನ ಪತಿತಂ ತ್ವಯಾ ॥೧೯॥

ಆಕಾಶದಲ್ಲಿ ಹಾರುವ ಈ ಪಕ್ಷಿಗಳನ್ನು ನೋಡು. ಅತಿಶಯವಾಗಿ ಹಾರುತ್ತವೆ. ಬಾ, ನೀನೂ ಕೂಡ ಶಕ್ತನಾಗಿರುವೆ. ಏಕೆ ನೀನು ಹಾರಲಿಲ್ಲ?

ಪ್ರತಾರ್ಯಮಾಣಸ್ತೈಃ ಸರ್ವೈರಲ್ಪಬುದ್ಧಿಭಿರಂಡಜಃ ।
ತದ್ವಚಃ ಸತ್ಯಮಿತ್ಯೇವ ಮೌಖ್ಯಾದ್ ದರ್ಪಾಚ್ಚ ಜಜ್ಞಿವಾನ್ ॥೨೦॥

ಅಲ್ಪಬುದ್ಧಿಯ ಆ ಮಕ್ಕಳು ಎಲ್ಲರೂ ಹೀಗೆ ವಂಚಿಸುವುದಕ್ಕಾಗಿ ಹೇಳಿದ ಮಾತನ್ನು ಕಾಗೆ ಮೂರ್ಖತನದಿಂದ ಮತ್ತು ಅಹಂಕಾರದಿಂದ ಸತ್ಯವೆಂದೇ ತಿಳಿಯಿತು.

ತಾನ್ ಸೋऽನುಪತ್ಯ ಜಿಜ್ಞಾಸುಃ ಕ ಏಷಾಂ ಶ್ರೇಷ್ಠಭಾಗಿತಿ ।
ಉಚ್ಚಿಷ್ಟದರ್ಪಿತಃ ಕಾಕೋ ಬಹೂನಾಮೇಕಪಾತಿನಾಮ್ ॥೨೧॥

ತೇಷಾಂ ಯಂ ಪ್ರವರಂ ಮೇನೇ ಹಂಸಾನಾಂ ದೂರಪಾತಿನಾಮ್ ।
ಸ ತಮಾಹ್ವತ ದುರ್ಬುದ್ಧಿಃ ಪತಾವ ಇತಿ ಪಕ್ಷಿಣಮ್ ॥೨೨॥

ಈ ಹಕ್ಕಿಗಳಲ್ಲಿ ಯಾವುದು ಮೇಲೆಂದು ತಿಳಿಯುವುದಕ್ಕಾಗಿ ಕಾಗೆ ಹಾರಿತು. ಎಂಜಲು ಉಂಡು ಕೊಬ್ಬಿದ ಕಾಗೆ ಜಿಜ್ಞಾಸೆಯಿಂದ ಹಾರಿ, ದೂರಕ್ಕೆ ಹಾರುವ ಪಕ್ಷಿಗಳಲ್ಲಿ ಯಾವುದು ಶ್ರೇಷ್ಠವೆಂದು ತಿಳಿದುಕೊಂಡು ದುರ್ಬುದ್ಧಿಯಾದ ಆ ಕಾಗೆ ಅದರ ಮುಂದೆ 'ನಾವು ಹಾರೋಣ' ಎಂದು ಆ ಹಂಸವನ್ನು ಸ್ಪರ್ಧೆಗೆ ಆಹ್ವಾನಿಸಿತು.

ತಚ್ಛ್ರುತ್ವಾ ಪ್ರಾಹಸನ್ ಹಂಸಾ ಯೇ ತತ್ರಾಸನ್ ಸಮಾಗತಾಃ ॥೨೩॥

ಭಾಷತೋ ಬಹು ಕಾಕಸ್ಯ ಬಾಲಿಶ್ಯಾತ್ ಪತತಾಂ ವರಾಃ ।
ಇದಮೂಚುಃ ಸ್ಮ ಚಕ್ರಾಂಗಾ ವಚಃ ಕಾಕಂ ವಿಹಂಗಮಾಃ ॥೨೪॥

ಮೂರ್ಖತನದಿಂದ ಬಹುಮಾತುಗಳನ್ನಾಡುತ್ತಿದ್ದ ಆ ಕಾಗೆ ಹೀಗೆ ಹೇಳಿದಾಗ ಅಲ್ಲಿಗೆ ಬಂದಿದ್ದ ಶ್ರೇಷ್ಠವಾದ ಹಂಸಪಕ್ಷಿಗಳು ಕೇಳಿ ನಕ್ಕುವು. ಅವು ಕಾಗೆಗೆ ಹೀಗೆ ಹೇಳಿದುವು.

ಹಂಸಾಃ

ಕಥಂ ಹಂಸಂ ನು ಬಲಿನಂ ಚಕ್ರಾಂಗಂ ದೂರಪಾತಿನಮ್ ।
ಕಾಕೋ ಭೂತ್ವಾ ನಿಪತನೇ ಸಮಾಹ್ವಯಸಿ ದುರ್ಮತೇ ॥೨೫॥

ಕಥಂ ತ್ವಂ ಪತಿತಾ ಕಾಕ ಸಹಾಸ್ಮಾಭಿರ್ಗಮೀಹಿ ತತ್ ॥೨೬॥

ದುರ್ಬುದ್ಧಿಯೆ, ಬಲಿಷ್ಠವಾದ ದೂರಕ್ಕೆ ಹಾರುವ ಹಂಸವನ್ನು ನೀನು ದುರ್ಬಲ ಕಾಗೆಯಾಗಿದ್ದು ದೂರ ಹಾರುವ ಪಂದ್ಯಕ್ಕೆ ಏಕೆ ಆಹ್ವಾನಿಸುವೆ? ಕಾಗೆಯೆ, ನೀನು ನಮ್ಮೊಂದಿಗೆ ಹೇಗೆ ಹಾರುವೆ, ಹೇಳು.

ಅಥ ಹಂಸವಚೋ ಮೂಢಃ ಕುತ್ಸಯಿತ್ವಾ ಪುನಃ ಪುನಃ ।
ಪ್ರಜಗಾದೋತ್ತರಂ ಕಾಕಃ ಕತ್ಥನೋ ಜಾತಿಲಾಘವಾತ್ ॥೨೭॥

ಹಂಸದ ಮಾತನ್ನು ಕೇಳಿ ಬುದ್ಧಿ ಇಲ್ಲದ ಕಾಗೆ ಅದನ್ನು ಪುನಃಪುನಃ ನಿಂದಿಸಿ ಕಾಗೆಯ ಜಾತಿಸ್ವಭಾವವಾದ ಜಂಬದಿಂದ ಹೇಳಿತು.

ಕಾಕಃ

ಶತಮೇಕಂ ಚ ಪಾತಾನಾಂ ಪತಿತಾಽಸ್ಮಿ ನ ಸಂಶಯಃ ।
ಶತಯೋಜನಮೇಕೈಕಂ ವಿಚಿತ್ರಂ ವಿವಿಧಂ ತಥಾ ॥೨೮॥

ಕಾಗೆ ಹೇಳಿತು, ನೂರೊಂದು ಬಗೆಯ ವಿಚಿತ್ರ ವಿವಿಧ ಹಾರಾಟಗಳಲ್ಲಿ ನಾನು ಹಾರಾಡಬಲ್ಲೆ ಸಂಶಯ ಬೇಡ. ಒಂದೊಂದು ಹಾರಾಟವನ್ನು ಕೂಡ ನೂರು ಯೋಜನ ಪರ್ಯಂತ ಹಾರ ಬಲ್ಲೆ.

ಉಡ್ಡೀನಮವಡೀನಂ ಚ ಪ್ರಡೀನಂ ಡೀನಮೇವ ಚ ।
ನಿಡೀನಮಥ ಸಂಡೀನಂ ತಿರ್ಯಗ್ ಡೀನಗತಾನಿ ಚ ॥೨೯॥

ಉಡ್ಡೀನ ಅವಡೀನ ಪ್ರಡೀನ ಡೀನ ನಿಡೀನ ಸಂಡೀನ ತಿರ್ಯಕ್‌ಡೀನ.

ವಿಡೀನಂ ಪರಿಡೀನಂ ಚ ಪರಾಡೀನಂ ಸುಡೀನಕಮ್ ।
ಅತಿಡೀನಂ ಮಹಾಡೀನಂ ಖಡೀನಂ ವರಡೀನಕಮ್ ॥೩೦॥

ವಿಡೀನ ಪರಿಡೀನ ಪರಾಡೀನ ಸುಡೀನ ಅತಿಡೀನ ಮಹಾಡೀನ ಖಡೀನ ವರಡೀನ.

ಅವಡೀನಂ ಪ್ರಡೀನಂ ಚ ಸಂಡೀನಂ ಡೀನಡೀನಕಮ್ ।
ಅವಡೀನಂ ಪ್ರಡೀನಂ ಚ ಪುನರ್ಡೀನವಿಡೀನಕಮ್ ॥೩೧॥

ಅವಡೀನ ಪ್ರಡೀನ ಸಂಡೀನ ಡೀನಡೀನ ಅವಡೀನ ಪ್ರಡೀನ ಡೀನವಿಡೀನ.

ಸಂಪಾತಂ ಸಮಡೀನಂ ಚ ತತೋಽನ್ಯದ್ ವಿತಿರಶ್ಚಕಮ್ ।
ಗತಾಗತಪ್ರತಿಗತಾ ಬಹ್ವೀಶ್ಚ ನಿಕನೀನಕಾಃ ॥೩೨॥

ಸಂಪಾತ ಸಮಡೀನ ವಿತಿರಶ್ಚಕ ಗತ–ಆಗತ–ಪ್ರತಿಗತ ಎಂದು ಬಹುವಿಧವಾದ ಅತಿನಿಕೃಷ್ಟಗತಿ.

'ಉಡ್ಡೀನ' 'ಡೀಙ್ ವಿಹಾಯಸಾಗತೌ' ಧಾತುವಿನಿಂದ ಆಕಾಶದಲ್ಲಿ ಮೇಲೆ ಹಾರುವುದು. 'ಅವಡೀನ' ಅಧೋಗಮನ. 'ಪ್ರಡೀನ' ಶೀಘ್ರಗಮನ. 'ಡೀನ' ಸಮವಾಗಿ ಗಮನ. 'ನಿಡೀನ' ರೆಕ್ಕೆಗಳನ್ನು ಸ್ವಲ್ಪ ಅಡಗಿಸಿಕೊಂಡು ಗಮನ, 'ಸಂಡೀನ' ಚೆನ್ನಾಗಿ ರೆಕ್ಕೆ ಬಡಿಸಿ ಗಮನ. 'ವಿಡೀನ' ವಿರೋಧವಿದ್ದಾಗ ಮುಖಮೇಲೆತ್ತಿ ಗಮನ. ಪರಿಡೀನ ಸುತ್ತಲೂ ಗಮನ. ಪರಾಡೀನ ಹಿಂತಿರುಗಿ ಗಮನ. 'ಸುಡೀನ' ಸುಖವಾಗಿ ಗಮನ. 'ಅತಿಡೀನ' ಒಂದಕ್ಕಿಂತ ಇನ್ನೊಂದು ವೇಗದಿಂದ ಗಮನ. 'ಮಹಾಡೀನ' ಕ್ಷಣಕ್ಷಣ ರೆಕ್ಕೆ ಬಡಿದು ಗಮನ. 'ಖಡೀನ' ಆಕಾಶದ ಕಡೆಗೆ ಗಮನ. 'ವರಡೀನ' ಕೊಳ್ಳೆಯನ್ನೆತ್ತಿಕೊಂಡು ಗಮನ. ಇವಿಷ್ಟೂ ಊರ್ಧ್ವಗಮನ ಪ್ರಭೇದಗಳು.

ಇನ್ನು ಮುಂದೆ ಅಧೋಗಮನ ಪ್ರಭೇದಗಳು–ಅವಡೀನ ಪ್ರಡೀನ ಮುಂತಾದುವು. ಅವುಗಳಲ್ಲಿ 'ಡೀನಡೀನಕ' ನಿಧಾನವಾದ ಗಮನ, 'ಉಡ್ಡೀನ' ಅಧೋಗಮನದಲ್ಲಿಯೆ ಮಿಡತೆ ಮುಂತಾದವುಗಳನ್ನು ತಿನ್ನಲು ಸ್ವಲ್ಪ ಮೇಲಕ್ಕೆ ಗಮನ. 'ಸಂಪಾತ' ಶೀಘ್ರಗಮನ. 'ಸಮಡೀನ' ಸಮವಾಗಿ ಗಮನ. 'ವಿತಿರಶ್ಚಕ' ವಿಶೇಷವಾಗಿ ತಿರ್ಯಕ್ ಗಮನ ಅಂದರೆ ಅಧೋಗಮನದಲ್ಲಿಯೇ ಕೆಲವೊಮ್ಮೆ ತಿರ್ಯಕ್ ಗಮನ.

ಗತ–ಆಗತ–ಪ್ರತಿಗತ–ನಿಕನೀನಕಗಳು ನೆಲದಲ್ಲಿಯೆ ಎರಡು ಕಾಲುಗಳಿಂದ ಹಾರುತ್ತ ಹಾರುತ್ತ ಹೋಗುವುದು. ಬಲ್ಯಾದಿ ಭಕ್ಷಣಕ್ಕಾಗಿ ಹೆಚ್ಚಾಗಿ ಅಧೋಗಮನವನ್ನೆ ಕಾಗೆ ಮಾಡುವುದರಿಂದ ಅದನ್ನೇ ವಿಶೇಷವಾಗಿ ವರ್ಣಿಸಿದೆ.

ಈ ನಾಲ್ಕು ಶ್ಲೋಕಗಳಲ್ಲಿ ಇಪ್ಪತ್ತಾರು ಗತಿಗಳನ್ನು ಹೇಳಿದೆ. ಇವುಗಳಲ್ಲಿ 'ಮಹಾಡೀನ' ಒಂದನ್ನು ಬಿಟ್ಟು ಉಳಿದ ಇಪ್ಪತ್ತೈದು ಗತಿಗಳು ಪ್ರತಿಯೊಂದೂ 'ಗತಿ ಆಗತಿ ಪ್ರತಿಗತಿ' ಹೋಗುವುದು ಬರುವುದು ಹಿಂದಿರುಗಿ ಬರುವುದು ಎಂದು ಮೂರು ಬಗೆ ಇರುವುದರಿಂದ ಒಟ್ಟು ಎಪ್ಪತ್ತಾರು ಗತಿಗಳಾದುವು. ಸಂಪಾತಗಳು ಬೇರೆ ಇಪ್ಪತ್ತೈದು ಇವೆ. ಅವೂ ಸೇರಿದರೆ ಒಟ್ಟು ನೂರೊಂದು ಗತಿಗಳಾಗುತ್ತವೆ.

ಕರ್ತಾऽಸ್ಮಿ ವಿಪತಾಂ ವೋऽದ್ಯ ತತೋ ದ್ರಕ್ಷ್ಯಥ ಮೇ
ಬಲಮ್ ॥೩೩॥

ತೇಷಾಮನ್ಯತಮೇನಾಹಂ ಪತಿಷ್ಯಾಮಿ ವಿಹಾಯಸಮ್ ।
ಪ್ರದಿಶಧ್ವಂ ಯಥಾನ್ಯಾಯಂ ಕೇನ ಹಂಸಾಃ ಪತಾಮ್ಯಹಮ್ ॥೩೪॥

ನೀವು ನೋಡುತ್ತಿರುವಂತೆ ನಾನೀಗ ಹಾರುತ್ತೇನೆ. ನನ್ನ ಬಲವನ್ನು ನೋಡಿರಿ. ಈ ನೂರೊಂದು ಗಮನಗಳಲ್ಲಿ ಒಂದನ್ನು ಆಕಾಶದಲ್ಲಿ ಹಾರಿ ತೋರುತ್ತೇನೆ. ಹಂಸಗಳೆ, ಯಾವ ಹಂಸನೊಂದಿಗೆ ಹಾರಬೇಕು? ಹೇಳಿ. ಈ ನೂರೊಂದು ಗಮನಗಳಲ್ಲಿ ಯಾವ ಗಮನವನ್ನು ನೀವು ಹಾರಿ ತೋರಿಸುವಿರಿ? ಹೇಳಿ.

ತೇ ವೈ ಧ್ರುವಂ ವಿನಿಶ್ಚಿತ್ಯ ಸಂಪತಧ್ವಂ ಮಯಾ ಸಹ ।
ಪಾತೈರೇಭಿಃ ಖಲು ಖಗಾಃ ಪತಿತುಂ ಖೇ ನಿರಾಶ್ರಯೇ ॥೩೫॥

ಪಕ್ಷಿಗಳೆ, ಆಶ್ರಯವಿಲ್ಲದ ಆಕಾಶದಲ್ಲಿ ಯಾವ ಗಮನವನ್ನು ಹಾರಿ ತೋರಿಸುವಿರೆಂದು ನಿಶ್ಚಯಮಾಡಿ ನನ್ನೊಡನೆ ಹಾರಾಟ ನಡೆಸಿರಿ.

ಶಲ್ಯಃ

ಏವಮುಕ್ತೇ ತು ಕಾಕೇನ ಪ್ರಹಸ್ಯೈಕೋ ವಿಹಂಗಮಃ ।
ಉವಾಚ ಕಾಕಂ ರಾಧೇಯ ವಚನಂ ತನ್ನಿಬೋಧ ಮೇ ॥೩೬॥

ಶಲ್ಯ ನುಡಿದ— ಕಾಗೆ ಹೀಗೆ ಹೇಳಿದಾಗ ಒಂದು ಹಂಸ ನಕ್ಕು ಕಾಗೆಗೆ ಹೇಳಿತು, ಕರ್ಣ, ಅದೇನು ಹೇಳಿತೆಂಬುದನ್ನು ಹೇಳುತ್ತೇನೆ, ಕೇಳು.

ಹಂಸಃ

ಶತಮೇಕಂ ಚ ಪಾತಾನಾಂ ತ್ವಂ ಕಾಕ ಪತಿತಾ ಧ್ರುವಮ್ ।
ಏಕಮೇವ ತು ಯಂ ಪಾತಂ ವಿದುಃ ಸರ್ವೇ ವಿಹಂಗಮಾಃ ॥೩೭॥

ತಮಹಂ ಪತಿತಾ ಕಾಕ ನಾನ್ಯಂ ಜಾನಾಮಿ ಕಂಚನ ॥೩೮॥

ಹಂಸ ಹೇಳಿತು— ನೂರೊಂದು ಗತಿಗಳನ್ನು ನೀನು ಹಾರಿ ತೋರಿಸಬಲ್ಲೆ ಕಾಗೆಯೆ, ನಾವೆಲ್ಲರೂ ಪಕ್ಷಿಗಳು ಕೇವಲ ಒಂದೇ ಗತಿಯನ್ನು ಬಲ್ಲೆವು. ನೂರು ಯೋಜನವಿರಬಹುದು. ಸಾವಿರ ಲಕ್ಷ ಯೋಜನಗಳೂ ಇರಬಹುದು. ಅಲ್ಲಿಯವರೆಗೆ ಮಧ್ಯದಲ್ಲಿ ವಿಶ್ರಾಂತಿ ಪಡೆಯದೆ ಒಂದೇ ಗತಿಯನ್ನು ಹಾರಿ ತೋರಿಸುತ್ತೇವೆ. ಬೇರೆ ಗತಿ ಯಾವುದನ್ನೂ ನಾವು ತಿಳಿಯೆವು.

ಕಾಕಃ

ಪತ ತ್ವಮಪಿ ತತ್ರಾಶು ಯೇನ ಪಾತೇನ ಮನ್ಯಸೇ ॥೩೯॥

ಕಾಗೆ ಹೇಳಿತು— ಯಾವ ಗತಿಯಿಂದ ಹಾರಲು ಬಯಸುವಿಯೋ ಆ ಗತಿಯಿಂದ ಬೇಗನೆ ಹಾರು.

ಅಥ ಕಾಕಂ ಪ್ರಜಹಸುರ್ಯೇ ತತ್ರಾಸನ್ ಸಮಾಗತಾಃ ।
ಕಥಮೇಕೇನ ಪಾತೇನ ಹಂಸಃ ಪಾತಶತಂ ಜಯೇತ್ ॥೪೦॥

ಆಗ ಅಲ್ಲಿಗೆ ಬಂದಿದ್ದ ಬೇರೆ ಕಾಗೆಗಳು ನಗುತ್ತ ಹೇಳಿದುವು– ಹಂಸವು ಒಂದೇ ಗತಿಯನ್ನು ತಿಳಿದಿದೆ. ಆ ಒಂದೇ ಗತಿಯಿಂದ ನೂರೊಂದು ಗತಿಗಳನ್ನು ತಿಳಿದಿರುವ ಕಾಗೆಯನ್ನು ಈ ಹಂಸ ಹೇಗೆ ಗೆದ್ದೀತು?

ಏಕೇನೈವ ಸತಾಪ್ಯೇಷ ಪಾತೇನಾಭಿಪತಿಷ್ಯತಿ ।
ಹಂಸಸ್ಯ ಪತಿತಂ ಕಾಕೋ ಬಲವಾನಾಶುವಿಕ್ರಮಃ ॥೪೧॥

ಬಲಿಷ್ಠವಾದ ವೇಗದಿಂದ ಪರಾಕ್ರಮ ತೋರುವ ಕಾಗೆಯೇ ಹಂಸದ ಗತಿಯನ್ನು ಒಂದೇ ಗತಿಯಿಂದಲೂ ಕೂಡ ಪರಾಭವಗೊಳಿಸುತ್ತದೆ.

ಪೂರ್ವಮೇವ ತು ವೈ ಕಾಕಃ ಸ ತಂ ತೂರ್ಣಂ ಪ್ರಚಕ್ರಮೇ ॥೪೨॥
ನಾತ್ಯಹೀಯತ ಕಾಕಶ್ಚ ಮುಹೂರ್ತಮಿವ ಸೂತಜ ॥೪೩॥

ಕಾಗೆ ಮೊದಲಿಗೇ ಬೇಗನೆ ಪಂದ್ಯದ ಹಾರಾಟಕ್ಕೆ ತೊಡಗಿತು. ಆದರೆ ಹಂಸ ಕಾಗೆಯನ್ನು ಹಿಂದೆ ಹಾಕಿ ಹಾರಿದಾಗ, ಕಾಗೆ ಒಂದು ಮುಹೂರ್ತ ಕಾಲ ಹಂಸವನ್ನು ಹಿಂದೆ ಹಾಕಿ ಹಾರಲಿಲ್ಲ.

ಕಾಕೋಽಪಿ ಹಂಸಂ ಚಾಪಲ್ಯಾಚ್ಚೀಘ್ರತಾಂ ಪ್ರತಿದರ್ಶಯನ್ ।
ವೇಗೇನಾತೀತ್ಯ ತರಸಾ ಪುನರೇತಿ ಮುಹುರ್ಮುಹುಃ ॥೪೪॥

ಬಳಿಕ ಚಾಪಲ್ಯದಿಂದ ತನ್ನ ವೇಗವನ್ನು ತೋರುವುದಕ್ಕಾಗಿ ಪುನಃ ಪುನಃ ವೇಗದಿಂದ ಹಂಸವನ್ನು ದಾಟಿ, ವೇಗದಿಂದ ಹಿಂತಿರುಗಿ ಬರತೊಡಗಿತು.

ತುಂಡೇನಾಭ್ಯಹನಚ್ಛ್ವೇನಂ ಕುರ್ವನ್ನಾಮಾಪಸವ್ಯತಃ ।
ರೋರೂಯನ್ನಿತಿ ಚಾಪ್ಯೇನಂ ಸಮಾಹ್ವಯತಿ ವೈ ಮುಹುಃ ॥೪೫॥

ಹಂಸ ಬಲಕ್ಕೆ ಹಾರುತ್ತಿದ್ದರೆ ಎಡಕ್ಕೆ ಮಾಡಿ ಕೊಕ್ಕಿನಿಂದ ಕುಟುಕಿ ಜೋರಾಗಿ ಕೂಗುತ್ತಿತ್ತು. ಹೀಗೆ ಹಂಸವನ್ನು ಮತ್ತೆ ಮತ್ತೆ ಸ್ಪರ್ಧೆಗೆ ಆಹ್ವಾನಿಸುತ್ತಿತ್ತು.

ವಿಶಿಶಿಷ್ಮಯಿಷುಃ ಪಾತ್ಯೈರ್ದರ್ಶಯನ್ನಾತ್ಮನಃ ಕ್ರಿಯಾಮ್ ॥೪೬॥

ಹಂಸವನ್ನು ಮೀರುವುದಕ್ಕಾಗಿ ಕಾಗೆ ಬಹು ಗತಿಗಳಿಂದ ಹಾರಾಟವನ್ನು ಪ್ರದರ್ಶಿಸಿತು.

ಅಥ ತಾನಿ ವಿಚಿತ್ರಾಣಿ ಪತಿತಾನೀತರಾಣಿ ಚ ।
ದೃಷ್ಟ್ವಾ ಪ್ರಮುದಿತಾಃ ಕಾಕಾ ವಿನೇದುರಧಿಕೈಃ ಸ್ವರೈಃ ॥೪೭॥

ಕಾಗೆಯ ವಿಚಿತ್ರ ಹಾರಾಟಗಳನ್ನೂ ಬೇರೆ ಸಾಮಾನ್ಯ ಹಾರಾಟಗಳನ್ನೂ ನೋಡಿ ಕಾಗೆಗಳು ಬಲು ಆನಂದಗೊಂಡು ಉಚ್ಚಸ್ವರಗಳಿಂದ ಕೂಗಿದುವು.

ಹಂಸಾಶ್ಚಾಪಹಸಂತಿ ಸ್ಮ ಪ್ರವದಂತಿ ಪ್ರಿಯಾಣಿ ಚ ।
ಕುರ್ವಾಣಾ ವಿವಿಧಾನ್ ರಾವಾನಿಚ್ಛಂತೋ ಜಯಮಾತ್ಮನಃ ॥೪೮॥

ಹಂಸಗಳೂ ಕೂಡ ಕಾಗೆಗಳನ್ನು ಅಪಹಾಸ ಮಾಡಿದುವು. ಹಂಸಕ್ಕೆ ಪ್ರಿಯವಾಗುವ ಹುರಿದುಂಬಿಸುವ ನಾನಾ ಬಗೆಯ ಧ್ವನಿಗಳನ್ನು ಮಾಡಿ ತಮಗೆ ಜಯವನ್ನು ಆಶಿಸಿದುವು.

ಉತ್ಪತ್ಯೋತ್ಪತ್ಯ ಚ ಪ್ರಾಹುರ್ಮುಹೂರ್ತಮಿತಿ ಚೇತಿ ಚ ।
ವೃಕ್ಷಾಗ್ರೇಭ್ಯಃ ಸ್ಥಳೇಭ್ಯಶ್ಚ ನಿಪತಂತ್ಯುತ್ಪತಂತಿ ಚ ॥೪೯॥

ಹಂಸಗಳು ಪುನಃ ಪುನಃ ಮೇಲೆ ಹಾರಿ 'ಮುಹೂರ್ತ ಕಾಲ ನೋಡಿರಿ, ಹಂಸವೇ ಗೆಲ್ಲುತ್ತದೆ' ಎಂದು ಹೇಳಿದುವು. ಮರದ ತುದಿಯಿಂದ ಕೆಳಗೆ, ಕೆಳಗಿಂದ ಮೇಲೆ ಹಾರಿದುವು.

ಹಂಸಸ್ತ್ವೇಕೇನ ಪಾತೇನ ಕಾಕಃ ಪಾತಶತೇನ ಚ ।
ಸ್ಪರ್ಧಿನೌ ಸಹಿತೌ ತೂರ್ಣಂ ಖಮಾಸ್ಥಾಯ ತರಸ್ವಿನೌ ॥೫೦॥

ಹಂಸವು ಒಂದು ಗತಿಯಿಂದ, ಕಾಗೆ ನೂರು ಗತಿಗಳಿಂದ ವೇಗದಿಂದ ಸ್ಪರ್ಧಿಸುತ್ತ ಬೇಗನೆ ಗಗನಕ್ಕೆ ಏರಿ ಜೊತೆಗೂಡಿದುವು.

ಮೃದುನೈಕೇನ ಹಂಸಸ್ತು ವಿಕ್ರಾಂತಮುಪಚಕ್ರಮೇ ।
ಪ್ರತ್ಯಹೀಯತ ಕಾಕಾಚ್ಚ ಮುಹೂರ್ತಮಿವ ಮಾರಿಷ ॥೫೧॥

ಒಂದು ಮಂದಗತಿಯಿಂದಲೇ ಹಂಸವು ಪರಾಕ್ರಮವನ್ನು ತೋರಲು ತೊಡಗಿತು. ಒಂದು ಮುಹೂರ್ತದವರೆಗೆ ಕಾಗೆಗಿಂತ ಹಿಂದೆಯೇ ಉಳಿಯಿತು.

ಅವಮತ್ಯ ಚ ಹಂಸಂ ತಮಿದಂ ಕಾಕೋಽಬ್ರವೀದ್ವಚಃ ।
ಯೋಽಸಾವುತ್ಪತಿತೋ ಹಂಸಃ ಸೋಽಸಾವೇವ ಪ್ರಹೀಯತೇ ॥೫೨॥

ಕಾಗೆ ಆ ಹಂಸವನ್ನು ಅವಮಾನಿಸುತ್ತ ಹೇಳಿತು: "ಈ ಹಂಸ ಈಗ ನನಗಿಂತ ಮೇಲೆ ಹಾರಿದರೂ ಮುಂದೆ ಹೀಗೇ ಹಿಂದೇ ಉಳಿದುಕೊಳ್ಳುತ್ತದೆ."

ಅಥ ಹಂಸಸ್ತು ತಚ್ಛ್ರುತ್ವಾ ಪ್ರಾಪತತ್ಪಶ್ಚಿಮಾಂ ದಿಶಮ್ ॥೫೩॥

ಹಂಸವು ಈ ಮಾತನ್ನು ಕೇಳಿ ಪಶ್ಚಿಮದಿಕ್ಕಿಗೆ ಹಾರಲು ತೊಡಗಿತು.

ಪಶ್ಚಿಮ ಸಮುದ್ರಮಾರ್ಗವಾಗಿ ಬಲು ದೂರದ ಮಾನಸ ಸರೋವರದ ಕಡೆಗೆ ಹಂಸ ಹಾರಲು ತೊಡಗಿತು.

ಉಪರ್ಯುಪರಿ ವೇಗೇನ ಸಾಗರಂ ಮಕರಾಲಯಮ್ ।
ಬಹುಸತ್ವಸಮಾಕೀರ್ಣಂ ವೀಚೀಭಿರ್ಭೀಮದರ್ಶನಮ್ ॥೫೪॥

ಬಹಳ ಜಲಜಂತುಗಳಿಂದ ತುಂಬಿದ, ತೆರೆಗಳಿಂದ ಭಯಂಕರವಾಗಿ ಕಾಣುವ, ಮೊಸಳೆಗಳ ವಾಸಸ್ಥಾನವಾದ ಸಾಗರದ ಮೇಲೆ ಮುಂದೆ ಮುಂದೆ ಹೆಚ್ಚು ವೇಗದಿಂದ ಹಂಸವು ಹಾರಿತು.

ಅಥಾಚಿರೇಣ ರಾಧೇಯ ಕಾಕೋ ವೇಗಾದಹೀಯತ ।
ತತೋಽತೀವ ಪರಿಶ್ರಾಂತಃ ಕಥಂಚಿದ್ಧಂಸಮನ್ವಗಾತ್ ॥೫೫॥

ಕರ್ಣ, ಅಲ್ಪಕಾಲದಲ್ಲಿಯೆ ಕಾಗೆ ಬಹಳ ಆಯಾಸಗೊಂಡು ವೇಗವನ್ನು ಕಳೆದುಕೊಂಡಿತು. ಕಷ್ಟದಿಂದ ಹಂಸವನ್ನು ಹಿಂಬಾಲಿಸಿತು.

ಭೀಶ್ಚೈನಮಾವಿಶತ್ ತೀವ್ರಂ ಕಾಕಂ ಕರ್ಣ ವಿಚೇತಸಮ್ ।
ದ್ವೀಪಾನ್ ದ್ರುಮಾನಪಶ್ಯಂತಂ ವಿಶ್ರಮಾರ್ಥಂ ಶ್ರಮಾತುರಮ್ ॥೫೬॥
ನಿಪತೇಯಂ ಕ್ವ ನು ಶ್ರಾಂತ ಇತಿ ತಸ್ಮಿನ್ ಮಹಾರ್ಣವೇ ॥೫೭॥

ಕರ್ಣ, ಆ ಸಾಗರದಲ್ಲಿ ಆಯಾಸದಿಂದ ಪೀಡಿತವಾಗಿ ವಿಶ್ರಾಂತಿ ಪಡೆಯಲು

ದ್ವೀಪಗಳನ್ನು ಮರಗಳನ್ನು ಕಾಣದೆ, 'ಆಯಾಸಗೊಂಡಿರುವ ನಾನು ಈ ಮಹಾ ಸಾಗರದಲ್ಲಿ ಎಲ್ಲಿ ಇಳಿಯಲಿ?' ಎಂದು ಗಾಬರಿಗೊಂಡ ಆ ಕಾಗೆಯನ್ನು ಭೀತಿ ಹೊಕ್ಕಿತು.

ಅವಿಷಹ್ಯಃ ಸಮುದ್ರೋಽಪಿ ಬಹುಸತ್ವಗಣಾಲಯಃ ।
ಮಹಾನ್ ಭೂತಶತೋದ್ಭಾಸೀ ನಭಸಸ್ತು ವಿಶಿಷ್ಯತೇ ॥೫೮॥

ಕರ್ಣ, ಸಮುದ್ರವನ್ನು ಪ್ರವೇಶಿಸಲು ಯಾರಿಂದಲೂ ಸಾಧ್ಯವಿಲ್ಲ. ಬಹು ಜಲಜಂತುಗಳಿಂದ ತುಂಬಿದೆ. ಬಹಳ ಭೂತಗಣಗಳಿಂದಲೂ ಶೋಭಿಸುತ್ತದೆ. ವಿಶಾಲವಾಗಿದ್ದು ಆಕಾಶಕ್ಕಿಂತಲೂ ಮಹತ್ತಾಗಿದೆ.

ಗಾಂಭೀರ್ಯಾದ್ಧಿ ಸಮುದ್ರಸ್ಯ ನ ವಿಶೇಷಂ ಹಿ ಸೂತಜ ।
ದಿಗಂಬರಾಂಭಸಾ ಕರ್ಣ ಸಮುದ್ರಸ್ಥಾ ವಿದುರ್ಜನಾಃ ॥೫೯॥
ವಿದೂರಪಾತಾತ್ ತೋಯಸ್ಯ ಕಿಂ ಪುನಃ ಕರ್ಣ ವಾಯಸಃ ॥೬೦॥

ದಿಕ್ಕನ್ನೇ ಬಟ್ಟೆಯಂತೆ ಹೊದ್ದುಕೊಂಡಿರುವ, ದಿಗಂತದವರೆಗೂ ಹರಡಿದ ಅಪಾರ ಜಲರಾಶಿವುಳ್ಳ ಸಮುದ್ರಜಲವು 'ಗಂಭೀರ' ಆಳವಾದ್ದರಿಂದ ಅದರ ವೈಶಿಷ್ಟ್ಯವನ್ನು ಸಮುದ್ರತೀರದ ಜನರೂ ಕೂಡ ತಿಳಿದಿಲ್ಲ. ಎಲ್ಲೋ ದೂರದಲ್ಲಿ ಹಾರಾಡುವ ಕಾಗೆ ಏನು ತಿಳಿದೀತು?

ಅಥ ಹಂಸೋಪ್ಯತಿಕ್ರಾಮನ್ ಮುಹೂರ್ತಮಿತಿ ಚೇತಿ ಚ ।
ಅವೇಕ್ಷಮಾಣಸ್ತಂ ಕಾಕಂ ನಾಶಕ್ನೋದ್ ವ್ಯಪಸರ್ಪಿತುಮ್ ॥೬೧॥
ಅತಿಕ್ರಮ್ಯ ಚ ಚಕ್ರಾಂಗಃ ಕಾಕಂ ತಂ ಸಮುದೈಕ್ಷತ ॥೬೨॥

ಹಂಸವು ಮುಹೂರ್ತಕಾಲ 'ಇದು ಹೀಗೆ, ಇದು ಹೀಗೆ' ಎಂದು ಕಾಗೆಯೊಂದಿಗೆ ಮಾತನಾಡುತ್ತ ಅದನ್ನು ದಾಟಿ ಮುಂದೆ ಹೋಯಿತು. ಬಳಿಕ ಹಿಂದೆ ಬಿದ್ದಿದ್ದ ಕಾಗೆಯನ್ನು ನೋಡಿ, ಅದನ್ನು ಬಿಟ್ಟು ತಾನು ಇನ್ನೂ ಮುಂದೆ ಹೋಗಲಿಲ್ಲ ಕಾದು ನಿಂತಿತು.

ತಂ ತಥಾ ಪರಿಹೀನಂ ತಂ ಪರಿಶ್ರಾಂತಮಚೇತಸಮ್ ।
ಅವೇಕ್ಷಮಾಣಸ್ತಂ ಕಾಕಂ ಪ್ರತ್ಯಾಗತ್ಯ ಹಸನ್ನಿವ ॥೬೩॥

ಬಲು ಆಯಾಸಗೊಂಡು ಗಾಬರಿಯಿಂದ ಉಡುಗಿಹೋಗಿದ್ದ ಆ ಕಾಗೆಯನ್ನು ಹಂಸವು ನೋಡಿ ಹಿಂತಿರುಗಿ ಬಂದು ನಕ್ಕಿತು.

ತಂ ಪ್ರಹಸ್ಯ ಚ ಚಕ್ರಾಂಗಃ ಕಾಕಂ ಮಂದಗತಿಂ ತದಾ ।
ಹೀಯಮಾನಮಥೋ ದೃಷ್ಟ್ವಾ ಹಂಸಃ ಪ್ರಾಹ ಯಥಾರ್ಥವತ್ ॥೬೪॥
ಉಜ್ಜಿಹೀರ್ಷುರ್ನಿಮಜ್ಜಂತಂ ಸ್ಮರನ್ ಸತ್ಪುರುಷವ್ರತಮ್ ॥೬೫॥

ಮಂದಗತಿಯಿಂದ ಹಾರುತ್ತಾ ಬಲಗುಂದುತ್ತಿದ್ದ ಕಾಗೆ ನೀರಲ್ಲಿ ಮುಳುಗುತ್ತಿದ್ದುದನ್ನು ಕಂಡು ಹಂಸವು ಜೋರಾಗಿ ನಕ್ಕು ಸಜ್ಜನರ ನಡತೆಯನ್ನು ಮನಸಿಗೆ ತಂದುಕೊಂಡು ಅದನ್ನು ಮೇಲೆತ್ತಲು ಬಯಸಿ ಯಥಾರ್ಥವಾಗಿ ನುಡಿಯಿತು.

ಹಂಸಃ

ಬಹೂನಿ ಪತಿತಾನಿ ತ್ವಮಾಚಕ್ಷಾಣೋ ಮುಹುರ್ಮುಹುಃ ।
ಪತಸ್ಯವ್ಯಾಹರನ್ ಖೇದಂ ತತೋ ಗಹ್ಯಂ ಪ್ರಭಾಷಸೇ ॥೬೬॥

ಬಹಳ ಗತಿಗಳನ್ನು ಬಲ್ಲೆನೆಂದು ಪುನಃಪುನಃ ಹೇಳುತ್ತಲೇ ಈಗ ಉಂಟಾದ ಆಯಾಸವನ್ನು ಹೇಳದೇ ಕೆಳಗೆ ಬೀಳುತ್ತಿರುವೆ. ಬಳಿಕ ಕೆಟ್ಟ ಮಾತುಗಳನ್ನೇ ಆಡುವೆ.

ಕಿಂ ನಾಮ ಪತಿತಂ ಕಾಕ ಯತ್ತ್ವಂ ಪತಸಿ ಸಾಂಪ್ರತಮ್ ।
ಜಲಂ ಸ್ಪೃಶಸಿ ಪಕ್ಷಾಭ್ಯಾಂ ತುಂಡೇನ ಚ ಪುನಃ ಪುನಃ ॥೬೭॥

ಕಾಗೆಯೆ, ಈಗ ನೀನು ಬಿದ್ದ ಗತಿಗೆ ಏನು ಹೆಸರು? ಎರಡು ರೆಕ್ಕೆಗಳಿಂದಲೂ ಕೊಕ್ಕಿನಿಂದಲೂ ಪುನಃ ಪುನಃ ನೀರನ್ನು ಸ್ಪರ್ಶಿಸುವೆ!

ಪ್ರಬ್ರೂಹಿ ಕತಮೋಽಯಂ ತೇ ಪಾತೋ ವರ್ತತಿ ವಾಯಸ ।
ಏಹ್ಯೇಹಿ ಕಾಕ ಶೀಘ್ರಂ ತ್ವಮೇಷ ತ್ವಾಂ ಪರಿಪಾಲಯೇ ॥೬೮॥

ಹೇಳು ಕಾಗೆಯೇ! ನೂರೊಂದು ಪಾತಗಳಲ್ಲಿ ಇದು ಯಾವ ಪಾತವಾಗಿದೆ? ಕಾಗೆಯೆ ಬಾ, ಬೇಗನೆ ಬಾ, ನಾನು ನಿನಗಾಗಿ ಕಾಯುತ್ತಿದ್ದೇನೆ.

ಸ ಪಕ್ಷಾಭ್ಯಾಂ ಸ್ಪೃಶನ್ನಾರ್ತಸ್ತುಂಡೇನ ಚ ಜಲಂ ತದಾ ।
ಕಾಕೋ ದೃಢಂ ಪರಿಶ್ರಾಂತಃ ಸಹಸಾ ನಿಪಪಾತ ಹ ॥೬೯॥

ಕಾಗೆ ಆಯಾಸದಿಂದ ಪೀಡಿತವಾಗಿ ಎರಡು ರೆಕ್ಕೆಗಳಿಂದಲೂ ಕೊಕ್ಕಿನಿಂದಲೂ ನೀರನ್ನು ಬಡಿದು ಒಡನೆ ಧೊಪ್ಪನೆ ನೀರಲ್ಲಿ ಬಿದ್ದಿತು.

ಪಾತವೇಗಪ್ರಮಥಿತೋ ಹಂಸಂ ಕಾಕೋಽಬ್ರವೀದಿದಮ್ ।
ವಯಂ ಕಾಕಾಃ ಕುತೋ ನಾಮ ಚರಾಮಃ ಕಾಕವಾಚಕಾಃ ।
ಹಂಸ ಪ್ರಾಣೈಃ ಪ್ರಪದ್ಯೇ ತ್ವಾಮುದಕಾಂತಂ ನಯಸ್ವ ಮಾಮ್ ॥೭೦॥

ಹಾರಾಟದ ವೇಗದಿಂದ ಬಲಗುಂದಿದ ಕಾಗೆ ಹಂಸಕ್ಕೆ ಹೇಳಿತು— ಹಂಸ, ನಾವು 'ಕಾಕ'ರು ಏಕೆ? ಜೊತೆಗಾರರಾದ ಕಾಗೆಗಳನ್ನೇ 'ಕಾಕಾ' ಎಂದು ಕರೆಯುತ್ತ ಅವರೊಂದಿಗೇ ಹಾರಾಡುವೆವು. ನಿಮ್ಮಂಥ ಸಜ್ಜನರೊಂದಿಗೆ ಅಲ್ಲ ಹಂಸವೆ, ನನ್ನ ಪ್ರಾಣಗಳೊಂದಿಗೆ ನಿನ್ನನ್ನು ಮೊರೆ ಹೋಗುತ್ತೇನೆ. ಆಚೆ ಸಮುದ್ರತೀರಕ್ಕೆ ನನ್ನನ್ನು ಒಯ್ಯು.

ಸಾಗರಾಂಭಸಿ ತಂ ದೃಷ್ಟ್ವಾ ಪತಂತಂ ದೀನಚೇತಸಮ್ ।
ಮ್ರಿಯಮಾಣಮಿದಂ ವಾಕ್ಯಂ ಹಂಸಃ ಕಾಕಮುವಾಚ ಹ ॥೭೧॥

ಸಾಗರಜಲದಲ್ಲಿ ಬಿದ್ದು ಸಾಯುತ್ತಿರುವ, ದೈನ್ಯದಿಂದ ಬೇಡಿಕೊಳ್ಳುವ ಕಾಗೆಯನ್ನು ಕಂಡು ಹಂಸ ಹೇಳಿತು.

ಶತಮೇಕಂ ಚ ಪಾತಾನಾಂ ಪತಾಮ್ಯಹಮನುಸ್ಮರ ।
ಶ್ಲಾಘನ್ನಾತ್ಮಾನಮದ್ಯ ತ್ವಂ ಕಾಕ ಭಾಷಿತವಾನಸಿ ॥೭೨॥

ನೂರೊಂದು ಗತಿಗಳಿಂದ ಹಾರುವೆನೆಂದು ನೀನು ಹೇಳುತ್ತಿದ್ದುದನ್ನು ನೆನಪಿಸಿಕೊಳ್ಳು. ಜಂಬಕೊಚ್ಚಿಕೊಳ್ಳುತ್ತಿದ್ದ ನೀನೀಗ ದೈನ್ಯದ ಮಾತುಗಳನ್ನಾಡುವೆ!

ಸ ತ್ವಮೇಕಶತಂ ಪಾತಂ ಪತನ್ನಭ್ಯಧಿಕೋ ಮಯಾ ।
ಕಥಮೇವಂ ಪರಿಶ್ರಾಂತಃ ಪತಿತೋಽಸಿ ಮಹಾರ್ಣವೇ ॥೭೩॥

ನೀನು ನೂರೊಂದು ಗತಿಗಳಿಂದ ಹಾರಬಲ್ಲವನು, ನನಗಿಂತ ಶ್ರೇಷ್ಠ ಹೀಗೆ ಆಯಾಸಗೊಂಡು ಮಹಾಸಮುದ್ರದಲ್ಲಿ ಹೇಗೆ ಬಿದ್ದೆ?

ಪ್ರತ್ಯುವಾಚ ತತಃ ಕಾಕಃ ಸೀದಮಾನ ಇದಂ ವಚಃ ।
ಉಪರಿಸ್ಥಂ ತದಾ ಹಂಸಂ ಪ್ರಸಮೀಕ್ಷ್ಯ ಪ್ರಸಾದಯನ್ ॥೭೪॥

ಕಾಗೆ ಸಂಕಟಪಡುತ್ತ ಮೇಲೆ ಆಕಾಶದಲ್ಲಿ ನಿಂತಿದ್ದ ಹಂಸವನ್ನು ನೋಡಿ ಅದನ್ನು ಒಲಿಸುತ್ತ ಪ್ರತಿಯಾಗಿ ಹೀಗೆ ಹೇಳಿತು.

ಉಚ್ಛಿಷ್ಟಾನ್ನೇನ ಪುಷ್ಟೋಽಹಂ ದರ್ಪೋತ್ಸಿಕ್ತಃ ಕುಸತ್ವತಃ ।
ಸುಪರ್ಣ ಇವ ಚಾತ್ಮಾನಂ ಜ್ಞಾತವಾನ್ ಪುತ್ರಲಾಘವಾತ್ ॥೭೫॥

ಎಂಜಲುಂಡು ಪುಷ್ಟನಾಗಿ ಅಹಂಕಾರದಿಂದ ಕೊಬ್ಬಿ ದುರ್ಬುದ್ಧಿಯಿಂದ ವೈಶ್ಯಪುತ್ರರ ಹೊಗಳಿಕೆಯಿಂದ ನನ್ನನ್ನು ಗರುಡಸಮಾನನೆಂದು ನಾನು ತಿಳಿದುಕೊಂಡಿದ್ದೆ.

ಶರಣಂ ತ್ವಾಂ ಪ್ರಪನ್ನೋಽಹಮುದಕಾಂತಮವಾಪ್ನುಯಾಮ್ ।
ಹಂಸೇದಾನೀಂ ಪರಿಶ್ರಾಂತಮಾಪದೋ ಮಾಂ ಸಮುದ್ಧರ ॥೭೬॥

ನಾನು ನಿನ್ನನ್ನು ಮೊರೆ ಹೊಕ್ಕಿದ್ದೇನೆ. ಆಚೆ ತೀರಕ್ಕೆ ನನ್ನನ್ನು ಒಯ್ದು ಬಿಡು. ನಾನೀಗ ಬಹಳ ಆಯಾಸಗೊಂಡಿದ್ದೇನೆ. ಈ ಆಪತ್ತಿನಿಂದ ನನ್ನನ್ನು ಮೇಲೆತ್ತು.

ಯದಿ ನಾಮ ಪುನರ್ದೇವನ್ ಗಚ್ಛೇಯಂ ಸ್ವಂ ನಿವೇಶನಮ್ ।
ನೈನಂ ಪುನರ್ಹನಮಪಿ ಕ್ಷೇಪ್ತಾಽಹಂ ಖೇ ವಿಚಾರಿಣಮ್ ॥೭೭॥

ನಾನು ಪುನಃ ಬದುಕಿ ನನ್ನ ಗೂಡಿಗೆ ಹೋಗಿ ಸೇರಿದೆನೆಂದರೆ ಮುಂದೆ ಅಲ್ಪವಾದ ಗಗನನಚಾರಿಯನ್ನು ಕೂಡ ಆಕ್ಷೇಪಿಸಲಾರೆ.

ತಮೇವಂ ಕರುಣಂ ದೀನಂ ವಿಲಪಂತಮಚೇತಸಮ್ ।
ಕಾಕಕಾಕೇತಿ ವಾಶಂತಂ ನಿಮಜ್ಜಂತಂ ಮಹಾರ್ಣವೇ ॥೭೮॥
ಕೃಪಯಾಽಭಿಪರೀತೋ ವೈ ಕೃಪಾಂ ಚಕ್ರೇ ದುರಾತ್ಮನಿ ॥೭೯॥

ಬಹಳ ದೈನ್ಯದಿಂದ ಕರುಣಾಜನಕವಾಗಿ ಗೋಳಿಡುತ್ತಿದ್ದ ಕಾಕಾ ಕಾಕಾ ಎಂದು ಕೂಗುತ್ತ ಮಹಾಸಮುದ್ರದಲ್ಲಿ ಮುಳುಗುತ್ತಿದ್ದ ಬುದ್ಧಿ ಇಲ್ಲದ ಆ ಕಾಗೆಯನ್ನು ನೋಡಿ ಹಂಸವು ದಯಾರ್ದ್ರವಾಗಿ ದುಷ್ಟ ಬುದ್ಧಿಯ ಆ ಹಕ್ಕಿಯಲ್ಲಿ ಕೃಪೆಮಾಡಿತು.

ಅಥ ತಂ ಪತಿತಂ ದೀನಂ ಜಲಕ್ಲಿನ್ನಮಚೇತನಮ್ ।
ಪದ್ಭ್ಯಾಮುತ್ಕ್ಷಿಪ್ಯ ವೇಪಂತಂ ಪೃಷ್ಠಮಾರೋಪಯತ್ ತದಾ ॥೮೦॥

ಬಿದ್ದು ನೀರಲ್ಲಿ ತೋಯ್ದು ಬಲಗುಂದಿ ನಡುಗುತ್ತಿದ್ದ ದೀನವಾದ ಆ ಕಾಗೆಯನ್ನು ಆಗ ಹಂಸವು ಕಾಲುಗಳಿಂದೆತ್ತಿ ಬೆನ್ನಮೇಲೆ ಏರಿಸಿಕೊಂಡಿತು.

ಸ ಹಂಸಃ ಪೃಷ್ಠಮಾರೋಪ್ಯ ಕಾಕಂ ಕರ್ಣ ವಿಚೇತಸಮ್ ।
ಅವಿಸ್ಮಯಂಸ್ತದಾ ಕರ್ಣ ಪುನರೇವ ಸಮಾನಯತ್ ॥೮೧॥

ತಮೇವ ದೇಶಂ ತರಸಾ ಸ್ಪರ್ಧಯಾ ಪೇತತುರ್ಯತಃ ॥೮೨॥

ಕರ್ಣನೆ, ಆ ಹಂಸವು ಬುದ್ಧಿ ಇಲ್ಲದ ಕಾಗೆಯನ್ನು ಬೆನ್ನಮೇಲೆ ಏರಿಸಿಕೊಂಡು, ಅಹಂಕಾರ ಪಡದೆ, ತಾವು ಎಲ್ಲಿಂದ ಸ್ಪರ್ಧೆಯಲ್ಲಿ ವೇಗದಿಂದ ಹೊರಟಿದ್ದುವೋ ಅಲ್ಲಿಗೇ ಮರದ ತುದಿಯಲ್ಲಿ ಪುನಃ ತಂದುಬಿಟ್ಟಿತು.

ಉತ್ಸೃಜ್ಯ ತ್ವಬ್ರವೀನ್ಮೈವಂ ಪುನಃ ಕಾರ್ಯಂ ತ್ವಯೇತಿ ಹ ।
ಸ್ಥಾಪ್ಯ ಚೈನಂ ಪುನರ್ದ್ವೀಪೇ ಸಮಾಶ್ವಸ್ಯ ಚ ವಿಕ್ಲವಮ್ ॥೮೩॥

ಗತೋ ಯಥೇಪ್ಸಿತಂ ದೇಶಂ ಹಂಸೋ ಮನ ಇವಾಶುಗಃ ॥೮೪॥

ಹಂಸವು ಕಾಗೆಯನ್ನು ದ್ವೀಪಕ್ಕೆ ತಂದಿರಿಸಿ, ಅದರ ಕಳವಳವನ್ನು ಸಮಾಧಾನಮಾಡಿ, ಪುನಃ ಇಂಥ ಕಾರ್ಯವನ್ನು ಮಾಡಬೇಡವೆಂದು ಹೇಳಿತು. ಅದನ್ನು ಅಲ್ಲಿ ಬಿಟ್ಟು ತಾನು ತನಗೆ ಇಷ್ಟ ಬಂದ ಮಾನಸ ಸರೋವರದೆಡೆಗೆ ಮನೋವೇಗದಿಂದ ತೆರಳಿತು.

ಏವಮುಚ್ಛಿಷ್ಟಪುಷ್ಟಃ ಸ ಕಾಕೋ ಹಂಸಪರಾಜಿತಃ ।
ಬಲವೀರ್ಯಮದಂ ಕರ್ಣ ತ್ಯಕ್ತ್ವಾ ಕ್ಷಾಂತಿಮುಪಾಗತಃ ॥೮೫॥

ಹೀಗೆ ಎಂಜಲು ತಿಂದು ಪುಷ್ಟವಾದ ಅಹಂಕಾರಿಯಾದ ಕಾಗೆ ನಿರಹಂಕಾರಿಯಾದ ಹಂಸದಿಂದ ಪರಾಜಯ ಹೊಂದಿ ಬಲ ವೀರ್ಯಗಳ ಮದವನ್ನು ತ್ಯಜಿಸಿ ತಾಳ್ಮೆಯನ್ನು ಹೊಂದಿತು.

ಉಚ್ಛಿಷ್ಟಭೋಜನಃ ಕಾಕೋ ಯಥಾ ವೈಶ್ಯಕುಲೇ ಪುರಾ ।
ಏವಂ ತ್ವಮುಚ್ಛಿಷ್ಟಭೃತೋ ಧಾರ್ತರಾಷ್ಟ್ರೈರ್ನ ಸಂಶಯಃ ॥೮೬॥

ಹಿಂದೆ ವೈಶ್ಯನ ಮನೆಯಲ್ಲಿ ಎಂಜಲುಣ್ಣುತ್ತಿದ್ದ ಕಾಗೆಯಂತೆ ನೀನೂ ಕೂಡ ಕೌರವರ ಎಂಜಲಿಂದ ಕೊಬ್ಬಿರುವೆ, ಸಂಶಯವಿಲ್ಲ.

ಸದೃಶಾನ್ ಶ್ರೇಯಸಶ್ಚಾಪಿ ಸರ್ವಾನ್ ಕರ್ಣಾವಮನ್ಯಸೇ ।
ದ್ರೋಣದ್ರೌಣಿಕೃಪೈರ್ಗುಪ್ತೋ ಭೀಷ್ಮೇಣಾನ್ಯೈಶ್ಚ ಕೌರವೈಃ ॥೮೭॥

ದ್ರೋಣ ಅಶ್ವತ್ಥಾಮ ಕೃಪ ಭೀಷ್ಮ ಬೇರೆ ಕೌರವರು ಇವರೆಲ್ಲರ ರಕ್ಷಣೆಯಲ್ಲಿದ್ದು ಕರ್ಣ, ನೀನು ಸಮಾನರನ್ನೂ ಹಿರಿಯರನ್ನೂ ಎಲ್ಲರನ್ನೂ ಅವಮಾನಿಸಿರುವೆ.

ವಿರಾಟನಗರೇ ಪಾರ್ಥಮೇಕಂ ಕಿಂ ನಾವಧೀಸ್ತದಾ ।
ಯತ್ರ ವ್ಯಸ್ತಾಃ ಸಮಸ್ತಾಶ್ಚ ನಿರ್ಜಿತಾಃ ಸ್ಥ ಕಿರೀಟಿನಾ ॥೮೮॥
ಸೃಗಾಲಾ ಇವ ಸಿಂಹೇನ ಕ್ವ ತೇ ವೀರ್ಯಂ ತದಾ ಗತಮ್ ॥೮೯॥

ವಿರಾಟನಗರದಲ್ಲಿ ಅರ್ಜುನನೊಬ್ಬನೆ ಯುದ್ಧಕ್ಕೆ ಬಂದಿದ್ದ. ಅವನನ್ನು ನೀನೇಕೆ ಕೊಲ್ಲಲಿಲ್ಲ? ಅಲ್ಲಿ ಅರ್ಜುನ ಒಬ್ಬನೆ ನಿಮ್ಮನ್ನು ಒಬ್ಬೊಬ್ಬರನ್ನಾಗಿಯೂ ಒಟ್ಟಾಗಿಯೂ ಸಿಂಹ ಒಂದು ಅನೇಕ ನರಿಗಳನ್ನು ಹೇಗೋ ಹಾಗೆ ಪರಾಭವಗೊಳಿಸಿದ. ಆಗ ನಿನ್ನ ಪರಾಕ್ರಮವೆಲ್ಲಿಗೆ ಹೋಗಿತ್ತು?

ಭ್ರಾತರಂ ನಿಹತಂ ದೃಷ್ಟ್ವಾ ಸಮರೇ ಸವ್ಯಸಾಚಿನಾ ।
ಪಶ್ಯತಾಂ ಕುರುವೀರಾಣಾಂ ಪ್ರಥಮಂ ತ್ವಂ ಪಲಾಯಿತಃ ॥೯೦॥

ಯುದ್ಧದಲ್ಲಿ ಅರ್ಜುನನಿಂದ ನಿನ್ನ ತಮ್ಮ ಹತನಾದುದನ್ನು ನೋಡಿ ಕೌರವ ವೀರರು ನೋಡುತ್ತಿದ್ದಂತೆಯೆ ಮೊದಲಿಗೆ ನೀನೇ ಪಲಾಯನ ಮಾಡಿದೆ.

ತಥಾ ದ್ವೈತವನೇ ಕರ್ಣ ಗಂಧರ್ವೈಃ ಸಮಭಿದ್ರುತಾನ್ ।
ಕುರೂನ್ ಸದಾರಾನುತ್ಸೃಜ್ಯ ತ್ವಮೇವಾಗ್ರೇ ಪಲಾಯಿತಃ ॥೯೧॥

ದ್ವೈತವನದಲ್ಲಿ ಗಂಧರ್ವರು ಆಕ್ರಮಣ ಮಾಡಿದಾಗ ಎಲ್ಲ ಕೌರವರನ್ನೂ ಅವರ ಪತ್ನಿಯರೊಂದಿಗೆ ಬಿಟ್ಟು ಎಲ್ಲರಿಗಿಂತ ಮೊದಲಿಗೆ ನೀನೇ ಪಲಾಯನ ಮಾಡಿದೆ.

ಹತ್ವಾ ಜಿತ್ವಾ ಚ ಗಂಧರ್ವಾಂಶ್ಚಿತ್ರಸೇನಮುಖಾನ್ ರಣೇ ।
ಕರ್ಣ ದುರ್ಯೋಧನಂ ಪಾರ್ಥಃ ಸಭಾರ್ಯಂ
ಸಮಮೋಕ್ಷಯತ್ ॥೯೨॥

ಕರ್ಣ, ಆ ಯುದ್ಧದಲ್ಲಿ ಚಿತ್ರಸೇನನ ನಾಯಕತ್ವದಲ್ಲಿ ಬಂದ ಗಂಧರ್ವರನ್ನು ಹೊಡೆದು ಗೆದ್ದು ದುರ್ಯೋಧನನನ್ನು ಅವನ ಹೆಂಡತಿಸಮೇತವಾಗಿ ಅರ್ಜುನನು ಬಂಧನದಿಂದ ಬಿಡುಗಡೆ ಮಾಡಿಸಿದ.

ಪುನಃ ಪ್ರಭಾವಃ ಪಾರ್ಥಸ್ಯ ಪುರಾಣಃ ಕೇಶವಸ್ಯ ಚ ।
ಕಥಿತಃ ಕರ್ಣ ರಾಮೇಣ ಸಭಾಯಾಂ ಕುರುಸಂಸದಿ ॥೯೩॥

ಸಂಧಾನದ ಸಭೆಯಲ್ಲಿ ಕೌರವರ ಮುಂದೆ ಪರಶುರಾಮ ಕೃಷ್ಣಾರ್ಜುನರು ಹಿಂದೆ ತೋರಿದ್ದ ಪರಾಕ್ರಮವನ್ನು ಹೇಳಿದ್ದ.

ಸತತಂ ಚ ತ್ವಮಶ್ರೌಷೀರ್ವಚನಂ ದ್ರೋಣಭೀಷ್ಮಯೋಃ ।
ಅವಧ್ಯೌ ವದತೋಃ ಕೃಷ್ಣೌ ಸನ್ನಿಧೌ ಚ ಮಹೀಕ್ಷಿತಾಮ್ ॥೯೪॥

ದ್ರೋಣ ಭೀಷ್ಮರು ರಾಜರ ಸಂಮುಖದಲ್ಲಿ ಸತತವಾಗಿ ಕೃಷ್ಣಾರ್ಜುನರು ಅವಧ್ಯರೆಂದು ಹೇಳುತ್ತಿದ್ದುದನ್ನು ನೀನು ಕೇಳಿರುವೆ.

ಕಿಯತ್ತವ ಪ್ರವಕ್ಷ್ಯಾಮಿ ಯೇನ ಯೇನ ಧನಂಜಯಃ ।
ತ್ವತ್ತೋತಿರಿಕ್ತಃ ಸರ್ವೇಭ್ಯೋ ಭೂತೇಭ್ಯೋ ಬ್ರಾಹ್ಮಣೋ
ಯಥಾ ॥೯೫॥

ಎಲ್ಲ ಮಾನವರಿಗಿಂತ ಬ್ರಾಹ್ಮಣ ಹೆಚ್ಚಿನವನಂತೆ, ಅರ್ಜುನನು ಯಾವ ಯಾವ ವಿಷಯದಲ್ಲಿ ನಿನಗಿಂತ ಹೆಚ್ಚು ಎನ್ನುವುದನ್ನು ನಿನಗೆ ನಾನು ಎಷ್ಟು ಹೇಳಲಿ?

ಇದಾನೀಮೇವ ದ್ರಷ್ಟಾಸಿ ಪ್ರಧಾನೇ ಸ್ಯಂದನೇ ಸ್ಥಿತೌ ।
ಪುತ್ರಂ ಚ ವಸುದೇವಸ್ಯ ಕುಂತೀಪುತ್ರಂ ಚ ಪಾಂಡವಮ್ ॥೯೬॥

ಈಗಲೇ ಉತ್ತಮವಾದ ರಥದಲ್ಲಿ ನಿಂತಿರುವ ವಸುದೇವಪುತ್ರನನ್ನೂ ಕುಂತೀಪುತ್ರ ಅರ್ಜುನನನ್ನೂ ನೀನೆ ನೋಡುವಿ.

ಯಥಾऽಶ್ರಯತ ಚಕ್ರಾಂಗಂ ವಾಯಸೋ ಬುದ್ಧಿಮಾಸ್ಥಿತಃ ।
ತಥಾಶ್ರಯಸ್ವ ವಾರ್ಷ್ಣೇಯಂ ಪಾಂಡವಂ ಚ ಧನಂಜಯಮ್ ॥೯೭॥

ಬುದ್ಧಿ ತಿಳಿದ ಕಾಗೆ ಅಹಂಕಾರವನ್ನು ತೊರೆದು ಹಂಸವನ್ನು ಆಶ್ರಯಿಸಿದಂತೆ ನೀನೂ ಅಹಂಕಾರ ಬಿಟ್ಟು ಕೃಷ್ಣಾರ್ಜುನರನ್ನು ಆಶ್ರಯಿಸು.

ಯದಾ ತ್ವಂ ಯುಧಿ ವಿಕ್ರಾಂತೌ ವಾಸುದೇವಧನಂಜಯೌ ।
ದ್ರಷ್ಟಾಸ್ಯೇಕರಥೇ ಕರ್ಣ ತದಾ ನೈವಂ ವದಿಷ್ಯಸಿ ॥೯೮॥

ಯುದ್ಧದಲ್ಲಿ ಪರಾಕ್ರಮವನ್ನು ತೋರುವ ಕೃಷ್ಣಾರ್ಜುನರನ್ನು ಒಂದು ರಥದಲ್ಲಿ ನೀನು ಕಂಡೆಯಾದರೆ ಆಗ ನೀನು ಹೀಗೆ ಮಾತನಾಡಲಾರೆ.

ಯದಾ ಶರಶತೈಃ ಪಾರ್ಥೋ ದರ್ಪಂ ತವ ವಧಿಷ್ಯತಿ ।
ತದಾ ತ್ವಮಂತರಂ ದ್ರಷ್ಟಾ ಆತ್ಮನಶ್ಚಾರ್ಜುನಸ್ಯ ಚ ॥೯೯॥

ಅರ್ಜುನನು ನೂರಾರು ಬಾಣಗಳಿಂದ ನಿನ್ನ ದರ್ಪವನ್ನು ನಾಶಮಾಡಿದಾಗ ನಿನ್ನ ಅರ್ಜುನರ ನಡುವಿನ ಅಂತರವನ್ನು ನೀನು ಕಂಡುಕೊಳ್ಳುವಿ.

ದೇವಾಸುರಮನುಷ್ಯೇಷು ಪ್ರಖ್ಯಾತೌ ಯೌ ನರೋತ್ತಮೌ ।
ತೌ ಮಾವಮಂಸ್ಥಾ ಮೌಖ್ಯಾತ್ ತ್ವಂ ಖದ್ಯೋತ ಇವ
ರೋಚನೌ ॥೧೦೦॥

ದೇವ–ಅಸುರ–ಮನುಷ್ಯರಲ್ಲಿ ಪ್ರಖ್ಯಾತರಾದ, ನರೋತ್ತಮರಾದ ಕೃಷ್ಣಾರ್ಜುನರನ್ನು ಮಿಣುಕು ಹುಳುವು ಸೂರ್ಯ–ಚಂದ್ರರನ್ನು ನಿಂದಿಸುವಂತೆ ಮೂರ್ಖತನದಿಂದ ನೀನು ಅವಮಾನಿಸಬೇಡ.

ಸೂರ್ಯಾಚಂದ್ರಮಸೌ ಯದ್ವತ್ ತದ್ವದರ್ಜುನಕೇಶವೌ ।
ಪ್ರಾಕಾಶ್ಯೇನಾಭಿವಿಖ್ಯಾತೌ ತ್ವಂ ತು ಖದ್ಯೋತವನ್ನೃಷು ॥೧೦೧॥

ಸೂರ್ಯ–ಚಂದ್ರರಂತೆ ಅರ್ಜುನ ಕೇಶವರು ಪ್ರಕಾಶದಿಂದ ಖ್ಯಾತರಾದವರು. ನೀನು ಮನುಷ್ಯರಲ್ಲಿ ಮಿಣುಕು ಹುಳದಂತಿರುವವನು.

ಏವಂ ವಿದ್ವನ್ ಮಾವಮಂಸ್ಥಾಃ ಸೂತಪುತ್ರಾಚ್ಯುತಾರ್ಜುನೌ ।
ನರಸಿಂಹೌ ನರಶ್ರೇಷ್ಠ ತ್ವಂ ಜೋಷಮಾಸ್ಸ್ವ ವಿಕತ್ಥನ ॥೧೦೨॥

ಹೀಗೆ ತಿಳಿದ ಸೂತಪುತ್ರನೆ, ನೀನು ಮಾನವರಲ್ಲಿ ನಾಯಿ, ಕೃಷ್ಣಾರ್ಜುನರು ಸಿಂಹಗಳು, ಅವರನ್ನು ಅವಮಾನಿಸಬೇಡ, ಬಡಾಯಿ ಕೊಚ್ಚಿಕೊಳ್ಳುವವನೆ, ಮಾತನಾಡದೆ ಸುಮ್ಮನಿರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಹಂಸಕಾಕೀಯೋಪಾಖ್ಯಾನಂ ನಾಮ
ಏಕಚತ್ವಾರಿಂಶೋಧ್ಯಾಯಃ ॥೪೧॥

❖

ನಲವತ್ತೆರಡನೆ ಅಧ್ಯಾಯ

'ಮೃತ್ಯುಕಾಲದಲ್ಲಿ ಹೊರತು ಬೇರೆ ಕಾಲದಲ್ಲಿ ಅಸ್ತ್ರಗಳು ನಿನಗೆ ಹೊಳೆಯುವುದಿಲ್ಲ' ಎಂದು ಗುರುಶಾಪ, 'ಮೃತ್ಯುಕಾಲದಲ್ಲಿ ಅವು ಮರೆತುಹೋಗುವುವೆಂ'ದು ಬ್ರಾಹ್ಮಣಶಾಪ. ಅರ್ಜುನನೂ ಎಣೆಯಿಲ್ಲದ ಬಿಲ್ಲಾಳು. ಆದರೂ ನನಗೆ ಭಯವಿಲ್ಲ–ಎನ್ನುತ್ತಾನೆ ಕರ್ಣ.

ಸಂಜಯಃ

ಮದ್ರಾಧಿಪಸ್ಯಾಧಿರಥಿರ್ಮಹಾತ್ಮಾ
ವಚೋ ನಿಶಮ್ಯಾಪ್ರಿಯಮಪ್ರತೀತಃ ।
ಉವಾಚ ಶಲ್ಯಂ ವಿದಿತಂ ಮಮೈತದ್
ಯಥಾವಿಧಾವರ್ಜುನವಾಸುದೇವೌ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಶಲ್ಯನಾಡಿದ ಅಪ್ರಿಯವಾದ ಮಾತನ್ನು ಕೇಳಿ ಸಮಾಧಾನಪಡದೆ ಕರ್ಣ ಶಲ್ಯನಿಗೆ ನುಡಿದ– 'ಕೃಷ್ಣಾರ್ಜುನರು ಎಂಥವರೆಂಬುದು ನನಗೆ ಗೊತ್ತು.

ಶೌರೇ ರಥಂ ವಾಹಯತೋಽರ್ಜುನಸ್ಯ
ಬಲಂ ಮಹಾಸ್ತ್ರಾಣಿ ಚ ಪಾಂಡವಸ್ಯ ।
ಅಹಂ ವಿಜಾನಾಮಿ ಯಥಾವದದ್ಯ
ಪರೋಕ್ಷಭೂತಂ ತವ ತತ್ತು ಶಲ್ಯ ॥೨॥

ಅರ್ಜುನನ ಸಾರಥಿಯಾದ ಕೃಷ್ಣನ ಬಲವನ್ನೂ ಅರ್ಜುನನ ಮಹಾಸ್ತ್ರವನ್ನೂ ನಾನು ಯಥಾವತ್ತಾಗಿ ತಿಳಿದಿದ್ದೇನೆ. ನಿನಗೇ ಆದು ಗೊತ್ತಿಲ್ಲ.

ತೌ ಚಾಪ್ಯಹಂ ಶಸ್ತ್ರಭೃತಾಂ ವರಿಷ್ಠೌ
ವ್ಯಪೇತಭೀರ್ಯೋಧಯಿಷ್ಯಾಮಿ ಕೃಷ್ಣೌ ॥೩॥

ಆದರೂ ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಆ ಕೃಷ್ಣಾರ್ಜುನರನ್ನು ನಿರ್ಭಯವಾಗಿ ಇದಿರಿಸಿ ನಾನು ಹೋರಾಡುತ್ತೇನೆ.

ಪುರಾ ಮಹೇಂದ್ರಾದ್ರಿವರೇ ಸಮೃದ್ಧೇ
ತಪಸ್ವಿನಂ ರಾಮಮುಪೇತ್ಯ ಶಲ್ಯ ।
ಶಸ್ತ್ರಾರ್ಥಿನಂ ಮಾऽದ್ಯ ಶಿಷ್ಯಂ ಗೃಹಾಣೇ-
ತ್ಯಥಾಬ್ರುವಂ ಬ್ರಾಹ್ಮಣಚ್ಛದ್ಮನಾ ಚ ॥೪॥

ಹಿಂದೆ ವನಸಿರಿಯಿಂದ ಸಮೃದ್ಧವಾದ ಮಹೇಂದ್ರಪರ್ವತದಲ್ಲಿ ತಪಗೈಯುತ್ತಿದ್ದ ಪರಶುರಾಮನ ಬಳಿಗೆ ಹೋಗಿ 'ನಾನು ಶಸ್ತ್ರಾರ್ಥಿಯಾಗಿ ಬಂದಿರುವೆನು. ನನ್ನನ್ನು ಶಿಷ್ಯನಾಗಿ ಸ್ವೀಕರಿಸೆಂ'ದು ಕೇಳಿಕೊಂಡೆ. ಅಬ್ರಾಹ್ಮಣನಿಗೆ ಉಪದೇಶ ನೀಡಲಾರನೆಂಬ ಭಯದಿಂದ ಬ್ರಾಹ್ಮಣನ ಮಾರುವೇಷ ಹಾಕಿಕೊಂಡಿದ್ದೆ.

ತತ್ರಾವಸಂ ಬ್ರಾಹ್ಮಣ ಇತ್ಯವಿಪ್ರೋ
ಬ್ರಹ್ಮಾಸ್ತ್ರಲೋಭಾದನೃತೇನ ಚಾಹಮ್ ।
ತಜ್ಜಾಮದಗ್ನ್ಯೇನ ಪರಂ ಮಹಾಸ್ತ್ರಂ
ಸುಮಂತ್ರಯುಕ್ತಂ ವಿಹಿತಂ ಮಮಾಸೀತ್ ॥೫॥

ಅಲ್ಲಿ ನಾನು, ಬ್ರಾಹ್ಮಣಲ್ಲದಿದ್ದರೂ ಬ್ರಹ್ಮಾಸ್ತ್ರ ಪಡೆಯುವಾಸೆಯಿಂದ 'ಬ್ರಾಹ್ಮಣನಾಗಿದ್ದೇನೆ' ಎಂದು ಸುಳ್ಳು ಹೇಳಿ ಶಿಷ್ಯನಾಗಿ ವಾಸಮಾಡಿದೆ. ಅದರಿಂದ ಬ್ರಹ್ಮಾಸ್ತ್ರವೆಂಬ ಉತ್ತಮವಾದ ಮಹಾಸ್ತ್ರವು ಉತ್ತಮ ಮಂತ್ರಯುಕ್ತವಾಗಿ ಜಮದಗ್ನಿ ಪುತ್ರನಾದ ಪರಶುರಾಮನಿಂದ ನನಗೆ ದೊರೆಯಿತು.

ಅಸ್ತ್ರಂ ಯದಾ ತದ್ವಿದಿತಂ ಮಮಾಸೀತ್
ತದಾಽಬ್ರವೀದ್ ಬ್ರಾಹ್ಮಣೋ ಮಾಂ ಮಹರ್ಷಿಃ ।
ಆಪದ್ಗತೇನಾಸ್ತ್ರಮಿದಂ ಪ್ರಯೋಜ್ಯಂ
ತ್ವಯಾ ರಣೇ ನಾನ್ಯಥೈವಂ ಕದಾಚಿತ್ ॥೬॥

ನನಗೆ ಆ ಅಸ್ತ್ರಮಂತ್ರ ತಿಳಿದಾಗ ಬ್ರಾಹ್ಮಣನಾದ ಮಹರ್ಷಿ ಪರಶುರಾಮನು ನನಗೆ ಆಜ್ಞೆ ಮಾಡಿದ: 'ಆಪತ್ತಿನಲ್ಲಿ ಮಾತ್ರ ಈ ಅಸ್ತ್ರಮಂತ್ರವನ್ನು ಪ್ರಯೋಗ ಮಾಡು. ಬೇರೆ ಸಮಯದಲ್ಲಿ ಎಂದೂ ನೀನು ರಣದಲ್ಲಿ ಅದನ್ನು ಪ್ರಯೋಗ ಮಾಡಕೂಡದು' ಎಂದು.

ಅವಾತ್ಸಂ ವೈ ಬ್ರಾಹ್ಮಣಚ್ಛದ್ಮನಾಹಂ
ರಾಮೇ ಪುರಾ ದಿವ್ಯಮಸ್ತ್ರಂ ಚಿಕೀರ್ಷುಃ ॥೭॥

ಹೀಗೆ ಹಿಂದೆ ದಿವ್ಯವಾದ ಅಸ್ತ್ರವನ್ನು ಪಡೆಯಲು ಬಯಸಿ ಬ್ರಾಹ್ಮಣವೇಷದಿಂದ ಪರಶುರಾಮನ ಬಳಿ ವಾಸಮಾಡಿದ್ದೆ.

ಸಂತಾಪಯತ್ಯಭ್ಯಧಿಕಂ ಹಿ ರಾಮಾತ್
ಶಾಪೋಽದ್ಯ ಮಾಂ ಬ್ರಾಹ್ಮಣಸತ್ತಮಾಚ್ಚ ॥೮॥

ಬ್ರಾಹ್ಮಣಶ್ರೇಷ್ಠನಾದ ಪರಶುರಾಮನಿಂದ ನನಗೆ ಬಂದ ಶಾಪ ಅಧಿಕವಾಗಿ ನನಗೆ ಈಗ ಸಂತಾಪ ನೀಡಿದೆ.

ತತ್ರಾಪಿ ಮೇ ದೇವರಾಜೇನ ವಿಘ್ನೋ
ಹಿತಾರ್ಥಿನಾ ಫಲ್ಗುನಸ್ಯೈವ ಶಲ್ಯ ।
ಕೃತೋ ವಿಭೇದೇನ ಮಮೋರುಮೇತ್ಯ
ಪ್ರವಿಶ್ಯ ಕೀಟಸ್ಯ ತನುಂ ವಿರೂಪಾಮ್ ॥೯॥

ಶಲ್ಯ, ನಾನು ಪರಶುರಾಮನಲ್ಲಿ ಶಿಷ್ಯನಾಗಿ ವಾಸಿಸುತ್ತಿದ್ದಾಗ ಅರ್ಜುನನಿಗೆ ಹಿತ ಉಂಟು ಮಾಡುವ ಬಯಕೆಯಿಂದ ದೇವರಾಜ ಇಂದ್ರ ಕುರೂಪವಾದ ಕೀಟದ ಶರೀರವನ್ನು ಪ್ರವೇಶಿಸಿ, ನನ್ನ ತೊಡೆಯನ್ನು ಕಡಿದು ಗಾಯ ಉಂಟುಮಾಡುವ ಮೂಲಕ ವಿಘ್ನ ಮಾಡಿದ.

ಮಮೋರುಮೇತ್ಯ ಪ್ರವಿಭೇದ ಕೀಟಃ
ಸುಪ್ತೇ ಗುರೌ ತತ್ರ ಶಿರೋ ನಿಧಾಯ ।
ಊರುಪ್ರಭೇದಾಚ್ಚ ಮಹಾನ್ ಬಭೂವ
ಶರೀರತೋ ಮೇ ಘನಶೋಣಿತೌಘಃ ॥೧೦॥

ಕೀಟವು ನನ್ನ ತೊಡೆಯನ್ನು ಕಡಿದು ಗಾಯಮಾಡಿತು. ಆಗ ತೊಡೆಯ ಮೇಲೆ ತಲೆಯನ್ನಿಟ್ಟು ಗುರು ನಿದ್ರೆಮಾಡುತ್ತಿದ್ದ. ತೊಡೆಯ ಗಾಯದಿಂದ ನನ್ನ ಮೈಯಿಂದ ರಕ್ತದ ಮಹಾಪ್ರವಾಹ ಹರಿಯಿತು.

ಗುರೋರ್ಭಯಾಚ್ಚಾಪಿ ನ ಚೇಲಿವಾನಹಂ
ತತೋ ವಿಬುದ್ಧೋ ದದೃಶೇ ಸ ವಿಪ್ರಃ ।
ಸ ಧೈರ್ಯಯುಕ್ತಂ ಪ್ರಸಮೀಕ್ಷ್ಯ ಮಾಂ ವೈ
ನ ತ್ವಂ ವಿಪ್ರಃ ಕೋಽಸಿ ಸತ್ಯಂ ವದೇತಿ ॥೧೧॥

ಗುರುವಿನ ಭಯದಿಂದ ನಾನು ಚಲಿಸಲಿಲ್ಲ. ಆಗ ಎಚ್ಚೆತ್ತು ಆ ಬ್ರಾಹ್ಮಣ ನೋಡಿದ. ಚಲಿಸದೆ ಧೈರ್ಯದಿಂದ ಸಹನೆ ಮಾಡಿದ ನನ್ನನ್ನು ನೋಡಿ ನೀನು ಬ್ರಾಹ್ಮಣನಲ್ಲ ಯಾರು ನೀನು? ಸತ್ಯವಾಗಿ ಹೇಳು ಎಂದು ಕೇಳಿದನು.

ತಸ್ಮೈ ತದಾತ್ಮಾನಮಹಂ ಯಥಾವದ್
ಆಖ್ಯಾತವಾನ್ ಸೂತ ಇತ್ಯೇವ ಶಲ್ಯ ।
ಸ ಮಾಂ ನಿಶಮ್ಯಾಥ ಮಹಾತಪಸ್ವೀ
ಸಂಶಪ್ತವಾನ್ ರೋಷಪರೀತಚೇತಾಃ ॥೧೨॥

ಶಲ್ಯ, ನಾನು ಆಗ ನನ್ನ ಬಗ್ಗೆ ಯಥಾವತ್ತಾಗಿ ಸೂತನೆಂದೇ ಹೇಳಿಕೊಂಡೆ. ಮಹಾತಪಸ್ವಿಯಾದ ಗುರು ನನ್ನ ಮಾತನ್ನು ಕೇಳಿ ರೋಷಾವಿಷ್ಟಚಿತ್ತನಾಗಿ ಶಾಪವಿತ್ತ.

ಸೂತ ತ್ವಯಾ ಹ್ಯಾಪ್ತಮಿದಂ ತವಾಸ್ತ್ರಂ
ನ ಕರ್ಮಕಾಲೇ ಪ್ರತಿಭಾಸ್ಯತೀತಿ ।
ಅನ್ಯತ್ರ ತಸ್ಮಾತ್ತವ ಮೃತ್ಯುಕಾಲಾದ್
ಅಬ್ರಾಹ್ಮಣೇ ಬ್ರಹ್ಮ ನ ಹಿ ಧ್ರುವಂ ಸ್ಯಾತ್ ॥೧೩॥

ಸೂತನೆ, ನೀನು ನನ್ನಿಂದ ಕಲಿತ ಈ ಬ್ರಹ್ಮಾಸ್ತ್ರವಿದ್ಯೆ ನಿನ್ನ ಮೃತ್ಯುಕಾಲದ ಹೊರತು ಬೇರೆ ಕರ್ಮಕಾಲದಲ್ಲಿ ಮನಸಿಗೆ ಹೊಳೆಯುವುದಿಲ್ಲ. ಅಬ್ರಾಹ್ಮಣನಲ್ಲಿ ಬ್ರಹ್ಮವಿದ್ಯೆ ಸ್ಥಿರವಾಗಿರುವುದಿಲ್ಲ ತಾನೆ?

ತದದ್ಯ ಪರ್ಯಾಪ್ತಮತೀವ ಮೇಽಸ್ತ್ರ-
ಮುಪಸ್ಥಿತೇಽಸ್ಮಿಂಸ್ತುಮುಲೇ ವಿಮರ್ದೇ ॥೧೪॥

ಅದರಿಂದ ಗೊಂದಲಮಯವಾದ ಈ ಯುದ್ಧ ಈಗ ಪ್ರಾಪ್ತವಾಗಿರುವಾಗ ನನ್ನ ಅಸ್ತ್ರವಿದ್ಯೆ ಕರ್ಮಕಾಲದಲ್ಲಿ ಅತ್ಯಂತ ಸಮರ್ಥವೇ ಇರುತ್ತದೆ.

ಕ್ಷತ್ರಿಯನಾದ ಭೀಷ್ಮನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದ್ದ ಪರಶುರಾಮ 'ಅಬ್ರಾಹ್ಮಣನಿಗೆ ತಾನು ಉಪದೇಶಿಸುವುದಿಲ್ಲ. ಬ್ರಹ್ಮವಿದ್ಯೆ ಅವನಲ್ಲಿ ಸ್ಥಿರವಾಗಿ ನಿಲ್ಲುವುದಿಲ್ಲ' ಎಂದು ಹೇಳಿದ್ದು ಹೇಗೆ ಎಂದರೆ ಲಕ್ಷಾಲಂಕಾರ ಹೇಳುತ್ತದೆ: 'ಬ್ರಾಹ್ಮಣ' ಎಂದರೆ ಇಲ್ಲಿ ಬ್ರಹ್ಮವಿದ್ಯೆಗೆ ಅರ್ಹನಾದವನು. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಎಂದು ತ್ರೈವರ್ಣಿಕರಲ್ಲಿ ಸೇರಿದವನೆಂದರ್ಥ. ಸೂತನು ಇವರಲ್ಲಿ ಸೇರದಿರುವುದರಿಂದ ಬ್ರಹ್ಮವಿದ್ಯೆಗೆ ಅರ್ಹನಲ್ಲ ಎಂದು. ಯದ್ಯಪಿ ಕುಂತಿಯ ಗರ್ಭಜಾತನಾದ ಕರ್ಣ ಕ್ಷತ್ರಿಯ. ಆದರೆ ಕ್ಷತ್ರಿಯಸಂಸ್ಕಾರವಿರಲಿಲ್ಲ.

ಯದ್ಯಪಿ ಕರ್ಣನಿಗೆ ಬ್ರಹ್ಮವಿದ್ಯೆ ಗುರುಶಾಪದಿಂದ ಕರ್ಮಕಾಲದಲ್ಲಿ ಹೊಳೆಯದಿದ್ದರೆ ಅದು ಕರ್ಮಕಾಲದಲ್ಲಿ ಸಮರ್ಥವಾಗಿರುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಮತ್ತು ಶಲ್ಯನ ಚುಚ್ಚು ಮಾತುಗಳಿಗೆ ಉತ್ತರವಾಗಿ ಕರ್ಣ ತಾನು ಅರ್ಜುನನಿಗಿಂತ ಕಡಿಮೆಯವನೇನಲ್ಲ ಎನ್ನಲು ಹೊರಟಿದ್ದಾನೆ. ಈ ಸಂದರ್ಭದಲ್ಲಿ ತನಗೆ ಗುರುಶಾಪದಿಂದ ಅಸ್ತ್ರವಿದ್ಯೆ ಕರ್ಮಕಾಲದಲ್ಲಿ ವ್ಯರ್ಥವಾಗುತ್ತದೆ ಎಂದು ಹೇಳುವುದು ಅಸಂಗತವಾಗುತ್ತದೆ. ಆದರೆ ವಸ್ತುತಃ ತಾನು ಅರ್ಜುನನಿಗಿಂತ ಹೆಚ್ಚೇ. ಕಡಿಮೆಯವನೇ ಆದರೂ ಅವನಿಗೆ ನಾನು ಹೆದರುವುದಿಲ್ಲ ಎಂದು ಅಭಿಪ್ರಾಯ. ಇದು ಮುಂದೆ (ಶ್ಲೋ.32) ಸ್ಪಷ್ಟವಿದೆ.

ಅಥವಾ ಬ್ರಹ್ಮಾಸ್ತ್ರ ಮಾತ್ರ ಉಪದೇಶವಿಲ್ಲದ್ದರಿಂದ ವ್ಯರ್ಥವಾಗುತ್ತದೆ ಹೊರತು ಬೇರೆ ದಿವ್ಯಾಸ್ತ್ರಗಳು ನನ್ನಲ್ಲಿ ಇದ್ದೇ ಇವೆ. ಬ್ರಹ್ಮಾಸ್ತ್ರವನ್ನು, ಪರಶುರಾಮ ಹೇಳಿದಂತೆ, ಅರ್ಜುನನೂ ಕೂಡ ಆಪತ್ತಿನಲ್ಲಿ ಹೊರತು ಬೇರೆ ಕರ್ಮಕಾಲದಲ್ಲಿ ಪ್ರಯೋಗಿಸುವುದಿಲ್ಲ. ಇಡೀ ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನು ಬ್ರಹ್ಮಶಿರೋಸ್ತ್ರರೂಪವಾದ ಬ್ರಹ್ಮಾಸ್ತ್ರ ಪ್ರಯೋಗ ಮಾಡಲಿಲ್ಲ. ಹೀಗಾಗಿ ತಾನು ಅರ್ಜುನನಿಗೆ ಸಮಾನನೆ ಎನ್ನುತ್ತಿದ್ದಾನೆ ಕರ್ಣ. ಸಮಾನ ಏಕೆಂದರೆ

ಕರ್ಮಕಾಲದಲ್ಲಿ ಕರ್ಣನಿಗೆ ಬ್ರಹ್ಮಾಸ್ತ್ರ ಒಂದು ಮಾತ್ರ ಹೊಳೆಯುವುದಿಲ್ಲ. ಅರ್ಜುನನಿಗೆ ಹೊಳೆದರೂ ಅದನ್ನು ಪ್ರಯೋಗಿಸುವುದಿಲ್ಲ ಎಂದು. ಹೀಗಾಗಿ ಕರ್ಣ ಆತ್ಮಪ್ರಶಂಸೆ ಮಾಡುವ ಸಂದರ್ಭದಲ್ಲಿ ಈ ಶಾಪವೃತ್ತಾಂತವನ್ನು ಹೇಳುವುದು ಅಪ್ರಸ್ತುತ ಎನ್ನುವಂತಿಲ್ಲ.

ಮೂಲಶ್ಲೋಕದಲ್ಲಿ 'ನ ಕರ್ಮಕಾಲೇ' ಎಂಬಲ್ಲಿ 'ಸ್ವಕರ್ಮಕಾಲೇ' ಎಂದು ಪಾಠಾಂತರವಿದೆ. ಇದರ ಪ್ರಕಾರ 'ಮೃತ್ಯುಕಾಲದಲ್ಲಿ ಅಂದರೆ ಸ್ಪರ್ಧೆಯಿಂದ ಯಾವನಾದರೂ ಒಬ್ಬನನ್ನು ಕೊಲ್ಲಲು ಹೊರಟಿರುವ ಕಾಲದಲ್ಲಿ ಅಸ್ತ್ರಗಳು ಹೊಳೆಯುವುದಿಲ್ಲ' ಎಂದರ್ಥ. ನಿರ್ಣಯದಲ್ಲಿಯೂ ಭೂಮಿ ರಥಚಕ್ರವನ್ನು ಗ್ರಾಸ ಮಾಡುವ ಕಾಲದಲ್ಲಿ ದಿವ್ಯಾಸ್ತ್ರ ಹೊಳೆಯುವುದಿಲ್ಲ ಎಂದಿದ್ದಾರೆ. ಇದರಿಂದ ವಿರೋಧವಿಲ್ಲ. ಚಕ್ರಗ್ರಾಸಕಾಲವು ಮೃತ್ಯುಕಾಲ, ಆಗ ದಿವ್ಯಾಸ್ತ್ರ ಹೊಳೆಯುವುದಿಲ್ಲ ಎಂದಂತಾಯಿತು.

ಲಕ್ಷಾಲಂಕಾರದಲ್ಲಿ ಮಾತ್ರ ಮೃತ್ಯುಕಾಲದಲ್ಲಿ ಹೊಳೆಯುತ್ತದೆ ಎಂದಿದ್ದಾರೆ.

ಈ ವಿರೋಧವನ್ನು ಹೀಗೆ ಪರಿಹರಿಸಬಹುದು– 'ಮೃತ್ಯುಕಾಲ'ವೆಂದರೆ ಲಕ್ಷಾಲಂಕಾರ ಪ್ರಕಾರ ಕರ್ಣಾರ್ಜುನರ ದ್ವೈರಥಯುದ್ಧ ಕಾಲ ಅಪರಾಹ್ಣಕಾಲ ಎಂದಿಟ್ಟುಕೊಳ್ಳಬೇಕು. 'ಅಪರಾಹ್ಣೋऽಪರಾಹ್ಣಸ್ಯ ...ಸೋತ್ಸೇಧಮಪತಚ್ಛರಃ' ಎಂದು 'ಅಪರಾಹ್ಣ'ವನ್ನು ಮೃತ್ಯುಕಾಲವೆಂದು ಭಾರತ ಹೇಳಿದೆ. ಈ ಮೃತ್ಯುಕಾಲದಲ್ಲಿ ಕರ್ಣನಿಗೆ ಅಸ್ತ್ರಗಳೆಲ್ಲ ಹೊಳೆಯುವುದರಿಂದ ತನಗೆ ಭಯವಿಲ್ಲ ಎನ್ನುತ್ತಾನೆ ಕರ್ಣ. ಅಸ್ತ್ರಗಳು ಹೊಳೆಯುತ್ತಿದ್ದುದರಿಂದಲೇ ಅಸ್ತ್ರಗಳಿಂದ ಯುದ್ಧ ಮಾಡಿದ್ದಾನೆ. ಹೀಗಾಗಿ ಈ ಮೃತ್ಯುಕಾಲದಲ್ಲಿ, ಚಕ್ರಗ್ರಾಸದ ಪೂರ್ವದಲ್ಲಿ ಆಗ್ನೇಯಾದಿ ದಿವ್ಯಾಸ್ತ್ರ ಹೊಳೆಯುತ್ತದೆ. ಚಕ್ರಗ್ರಾಸಾನಂತರ ಮೃತ್ಯುಕಾಲದಲ್ಲಿ ಹೊಳೆಯುವುದಿಲ್ಲ. ಬ್ರಾಹ್ಮಣಶಾಪ ಹಾಗೇ ಇದೆ. ನಿರ್ಣಯದಲ್ಲಿ ಹೇಳಿದ್ದು ಕೂಡ 'ರಥಚಕ್ರವನ್ನು ನೆಲ ನುಂಗಿತು, ದಿವ್ಯಾಸ್ತ್ರಗಳು ಮರೆತು ಹೋದವು' ಎಂದು.

ಯೋऽಯಂ ಶಲ್ಯ ಭರತೇಷೂಪಪನ್ನಃ
ಪ್ರಕರ್ಷಪಃ ಸರ್ವಹರೋऽತಿಭೀಮಃ ।
ಸೋऽಯಂ ಮನ್ಯೇ ಕ್ಷತ್ರಿಯಾಣಾಂ ಪ್ರವೀರಾನ್
ಪ್ರತಾಪಿತಾ ಬಲವಾನ್ ವೈ ವಿಮರ್ದಃ ॥೧೫॥

ಗೊಂದಲಮಯವಾದ ಮಹಾಯುದ್ಧ ಕೌರವರಲ್ಲಿ ಈಗ ಪ್ರಾಪ್ತವಾಗಿದೆ. ಅದು ಮಹಾವಿನಾಶಕಾರಿ. ಸರ್ವಕ್ಷತ್ರಿಯರನ್ನೂ ನಾಶ ಮಾಡುತ್ತದೆ. ಭೀಕರವಾಗಿದೆ. ಅದು

ಕ್ಷತ್ರಿಯವೀರರೆಲ್ಲರನ್ನೂ ಕೊಲ್ಲುತ್ತದೆ ಎಂದೂ ನನಗೆ ಅನಿಸಿದೆ. ಅದು ಬಲಿಷ್ಠವಾದ ಯುದ್ಧ

ಶಲ್ಯೋಗ್ರಧನ್ವಾನಮಹಂ ವರಿಷ್ಠಂ
ತರಸ್ವಿನಂ ಭೀಮಮಸಹ್ಯವೀರ್ಯಮ್ ।
ಸತ್ಯಪ್ರತಿಜ್ಞಂ ಯುಧಿ ಪಾಂಡವೇಯಂ
ಧನಂಜಯಂ ಮೃತ್ಯುಮುಖಂ ನಯಿಷ್ಯೇ ॥೧೬॥

ಶಲ್ಯನೆ, ಧನಂಜಯನು ಯದ್ಯಪಿ ಭಯಂಕರ ಧನುರ್ಧಾರಿ. ಧನುರ್ಧಾರಿಗಳಲ್ಲಿ ಶ್ರೇಷ್ಠ ವೇಗ ಉಳ್ಳವನು, ಶತ್ರುಗಳಿಗೆ ಭಯಂಕರ. ಅವನ ಪರಾಕ್ರಮ ಇದಿರಿಸಲಾಗದುದು. ಅವನ ಪ್ರತಿಜ್ಞೆ ಸತ್ಯವೇ ಆಗುವುದು. ಆದರೆ ಅಂಥ ಪಾಂಡವೇಯ ಧನಂಜಯನನ್ನು ನಾನು ಈ ಯುದ್ಧದಲ್ಲಿ ಮೃತ್ಯುವಿನ ಬಾಯಿಗೆ ತಳ್ಳಲಿದ್ದೇನೆ.

ಅಸ್ತ್ರಂ ತತೋಽನ್ಯತ್ ಪ್ರತಿಪನ್ನಮದ್ಯ
ಯೇನ ಕ್ಷೇಪ್ಸ್ಯೇ ಸಮರೇ ಶತ್ರುಪೂಗಾನ್ ।
ಪ್ರತಾಪಿನಂ ಬಲವಂತಂ ಕೃತಾಸ್ತ್ರಂ
ತಮುಗ್ರಧನ್ವಾನಮಮಿತೌಜಸಂ ಚ ॥೧೭॥

ಬ್ರಹ್ಮಾಸ್ತ್ರ ಒಂದು ಹೊರತು ಬೇರೆ ಎಲ್ಲ ಅಸ್ತ್ರ ನನಗೆ ಹೊಳೆಯುತ್ತಿದೆ. ಅದರಿಂದಲೆ ನಾನು ಯುದ್ಧದಲ್ಲಿ ಎಲ್ಲ ಶತ್ರುಸಮೂಹಗಳನ್ನು ದೂರಮಾಡುತ್ತೇನೆ. ಹಾಗೇ ಪ್ರತಾಪಶಾಲಿ ಬಲಿಷ್ಠ ಅಸ್ತ್ರವೇತ್ತ ಉಗ್ರಧನುರ್ಧಾರಿಯಾದ ಅಮಿತ ಪರಾಕ್ರಮಿಯಾದ ಅರ್ಜುನನನ್ನು ಪರಾಭವಗೊಳಿಸುವೆ.

ಕ್ರೂರಂ ಶೂರಂ ರೌದ್ರಮಮಿತ್ರಸಾಹಂ
ಧನಂಜಯಂ ಸಂಯುಗೇಽಹಂ ಹನಿಷ್ಯೇ ॥೧೮॥

ಆತ ಕ್ರೂರ, ಶೂರ, ರೌದ್ರ, ಶತ್ರುನಾಶಕ, ಇಂಥ ಧನಂಜಯನನ್ನು ಸಮರದಲ್ಲಿ ನಾನು ಕೊಲ್ಲುವೆ.

ಅಪಾಂಪತಿರ್ವೇಗವಾನಪ್ರಮೇಯೋ
ನಿಮಜ್ಜಯಿಷ್ಯನ್ ಬಹುಲಾಃ ಪ್ರಜಾ ಇವ ।

ಮಹಾರವಂ ಯಃ ಕುರುತೇ ಸಮುದ್ರೋ
ವೇಲೇವ ತಂ ವಾರಯಾಮ್ಯಪ್ರಮೇಯಮ್ ॥೧೯॥

ಸಮುದ್ರರಾಜ ವೇಗವುಳ್ಳವನು, ಅವನಾಚೆ ದಡವನ್ನು ತಿಳಿಯಲಾಗದು. ಬಹಳ ಜೀವಿಗಳನ್ನು ಮುಳುಗಿಸುತ್ತಾನೆ. ಮಹಾಗರ್ಜನ ಮಾಡುತ್ತಾನೆ. ಅರ್ಜುನ ಅಂಥವನೆ. ಆ ಸಮುದ್ರವನ್ನು ಕೂಡ ಈಚೆ ದಡ ನಿಯಂತ್ರಿಸುತ್ತದೆ. ಹಾಗೇ ಅಪ್ರಮೇಯನಾದ ಅರ್ಜುನನನ್ನು ನಾನು ತಡೆಯುತ್ತೇನೆ.

ಪ್ರಮುಂಚಂತಂ ಬಾಣಸಂಘಾನಮೇಯಾನ್
ಮರ್ಮಚ್ಛಿದೋ ವೀರಹಣಃ ಸಪತ್ನಾನ್ ।
ಕುಂತೀಪುತ್ರಂ ಪ್ರತಿಯೋತ್ಸ್ಯಾಮಿ ಯುದ್ಧೇ
ಜ್ಯಾಂ ಕರ್ಷತಾಮುತ್ತಮಂ ಮರ್ತ್ಯಲೋಕೇ ॥೨೦॥

ಬಿಲ್ಲಿನ ಹೆದೆಯನ್ನು ಸೆಳೆಯುವವರಲ್ಲಿ ಮನುಷ್ಯಲೋಕದಲ್ಲಿ ಅರ್ಜುನನೇ ಉತ್ತಮ. ಮರ್ಮಭೇದಕವಾದ ಪುಕ್ಕಗಳಿಂದ ಯುಕ್ತವಾಗಿದ್ದು ವೀರಯೋಧರನ್ನು ನಾಶಪಡಿಸುವ ಬಾಣಸಮೂಹಗಳನ್ನು ಲೆಕ್ಕವಿಲ್ಲದಷ್ಟು ಎಸೆಯುವವನು ಅರ್ಜುನನೆ. ಅವನನ್ನು ನಾನು ಯುದ್ಧದಲ್ಲಿ ಇಂದು ಇದಿರಿಸುವೆ.

ಏವಂ ಬಲೇನಾತಿಬಲಂ ಮಹಾಸ್ತ್ರಂ
ಸಮುದ್ರಕಲ್ಪಂ ಸುದುರಾಪಮುಗ್ರಮ್ ।
ಶರೌಘಿಣಂ ಪಾರ್ಥಿವಾನ್ ಮಜ್ಜಯಂತಂ
ವೇಲೇವ ಪಾರ್ಥಮಿಷುಭಿರ್ವಾರಯಿಷ್ಯೇ ॥೨೧॥

ಬಲದಿಂದ ಸಮುದ್ರದಂತೆ ಅರ್ಜುನ. ಅತಿ ಬಲಶಾಲಿ. ಮಹಾಅಸ್ತ್ರಗಳುಳ್ಳವನು. ಅವನ ಬಳಿಗೆ ಹೋಗುವುದು ಬಲುಕಷ್ಟ ಭಯಂಕರ ಆತ. ಬಾಣಗಳ ಪ್ರವಾಹದಲ್ಲಿ ಕ್ಷತ್ರಿಯಯೋಧರನ್ನು ಮುಳುಗಿಸಿ ಬಿಡುತ್ತಾನೆ. ಆದರದೇ ಸಮುದ್ರವನ್ನು ತೀರವು ತಡೆದು ನಿಲ್ಲಿಸುವಂತೆ ನಾನೂ ಬಾಣಗಳಿಂದ ಅರ್ಜುನನನ್ನು ತಡೆದುಬಿಡುತ್ತೇನೆ.

ಅದ್ಯಾಹವೇ ಯಸ್ಯ ನ ತುಲ್ಯಮನ್ಯಂ
ಮನ್ಯೇ ಮನುಷ್ಯಂ ಧನುರಾದದಾನಮ್ ।
ಸರ್ವಾಮಿಮಾಂ ಯಃ ಪೃಥಿವೀಂ ಸಹೇತ
ತಥಾಪಿ ತೇನಾದ್ಯ ರಣೇ ಸಮೇಷ್ಯೇ ॥೨೨॥

ಯುದ್ಧದಲ್ಲಿ ಅರ್ಜುನನಿಗೆ ಸಮನಾಗಿ ಧನುಸ್ಸನ್ನು ಎತ್ತುವ ಇನ್ನೊಬ್ಬ ಮನುಷ್ಯನನ್ನು ನಾ ಕಾಣೆ. ಈ ಇಡೀ ಪೃಥಿವಿಯೆ ಇದಿರಿಸಿ ನಿಂತರೂ ಅವನು ಸಹಿಸಿಕೊಳ್ಳಬಲ್ಲ. ಆದರೂ ನಾನು ರಣದಲ್ಲಿ ಅವನನ್ನು ಇದಿರಿಸಬಲ್ಲೆ.

ಕೃತೀ ಕೃತಾಸ್ತ್ರೋ ದೃಢಹಸ್ತಯೋಧೀ
ದಿವ್ಯಾಸ್ತ್ರವಿತ್ ಶ್ವೇತಹಯಃ ಪ್ರಮಾಥೀ ।
ಸುರಾಸುರಾನ್ ಯುಧಿ ವೈ ಯೋ ಜಯೇತ
ತೇನಾದ್ಯ ಮೇ ಪಶ್ಯ ಯುದ್ಧಂ ಸುಘೋರಮ್ ॥೨೩॥

ಅವನು ಯುದ್ಧವಿದ್ಯೆಯಲ್ಲಿ ನುರಿತವ. ಅಸ್ತ್ರಗಳೆಲ್ಲ ಅವನಿಗೆ ಗೊತ್ತು. ಅವನು ದೃಢವಾದ ಹಸ್ತಗಳಿಂದ ಯುದ್ಧ ಮಾಡುವವನು. ದಿವ್ಯಾಸ್ತ್ರಜ್ಞಾನಿ. ಬಿಳಿಕುದುರೆ ಗಳುಳ್ಳವನು. ಶತ್ರುನಾಶ ಮಾಡುತ್ತಾನೆ. ಸುರ–ಅಸುರರನ್ನೂ ಕೂಡ ಯುದ್ಧದಲ್ಲಿ ಗೆಲ್ಲುತ್ತಾನೆ. ಶಲ್ಯ ನೋಡು, ಅವನೊಂದಿಗೆ ನಾನು ಮಾಡುವ ಬಲುಘೋರವಾದ ಯುದ್ಧವನ್ನು.

ಅಭೀರ್ಮಾನೀ ಪಾಂಡವೋ ಯುದ್ಧಕಾಮೋ
ಹ್ಯಮಾನುಷೈರಸ್ಯತಿ ಮಾಂ ಮಹಾಸ್ತ್ರೈಃ ।
ತಸ್ಯಾಸ್ತ್ರಮಸ್ತ್ರೈರಭಿಭೂಯ ಸಂಖೇ
ಬಾಣೋತ್ತಮೈಃ ಪಾತಯಿಷ್ಯಾಮಿ ಪಾರ್ಥಮ್ ॥೨೪॥

ಭಯವಿಲ್ಲದವನು ಪಾರ್ಥ ಅಭಿಮಾನಿ, ಯುದ್ಧವನ್ನು ಮಾಡುವ ಚಟ ಉಳ್ಳವನು. ಅಮಾನುಷವಾದ ದಿವ್ಯ ಅಸ್ತ್ರಗಳಿಂದ ನನ್ನನ್ನು ಹೊಡೆಯುತ್ತಾನೆ. ನಾನು ಯುದ್ಧದಲ್ಲಿ ಅವನ ಅಸ್ತ್ರಗಳನ್ನು ಅಸ್ತ್ರಗಳಿಂದ ಪರಾಭವಗೊಳಿಸಿ ಉತ್ತಮ ಬಾಣಗಳಿಂದ ಅವನನ್ನು ಕೆಡಹುತ್ತೇನೆ.

ಸಹಸ್ರರಶ್ಮಿಪ್ರತಿಮಂ ಜ್ವಲಂತಂ
ದಿಶಶ್ಚ ಸರ್ವಾಃ ಪ್ರತಪಂತಮುಗ್ರಮ್ ।
ತಮೋನುದಂ ಮೇಘ ಇವಾತಿಮಾತ್ರಂ
ಧನಂಜಯಂ ಛಾದಯಿಷ್ಯಾಮಿ ಬಾಣೈಃ ॥೨೫॥

ಧನಂಜಯ ಸೂರ್ಯನಂತೆ ಜ್ವಲಿಸುತ್ತಾನೆ. ಎಲ್ಲ ದಿಕ್ಕುಗಳನ್ನೂ ಭೀಕರವಾಗಿ ಸುಡುತ್ತಾನೆ. ತಮಸ್ಸನ್ನು ಓಡಿಸುತ್ತಾನೆ. ಆದರೂ ಸೂರ್ಯನನ್ನು ಮೋಡವು ಮರೆಮಾಡುವಂತೆ ನಾನು ಧನಂಜಯನನ್ನು ಬಾಣಗಳಿಂದ ಮರೆಮಾಡುತ್ತೇನೆ.

ವೈಶ್ವಾನರಂ ಧೂಮಕೇತುಂ ಜ್ವಲಂತಂ
ತೇಜಸ್ವಿನಂ ನರವೀರಾನ್ ದಹಂತಮ್ ।
ಪರ್ಜನ್ಯಭೂತಃ ಶರವರ್ಷೈರ್ಯಥಾऽಗ್ನಿಂ
ತಥಾ ಪಾರ್ಥಂ ಶಮಯಿಷ್ಯಾಮಿ ಯುದ್ಧೇ ॥೨೬॥

ಪಾರ್ಥ ಹೊಗೆ ಉಗುಳುವ ಬೆಂಕಿಯಂತೆ ಜ್ವಲಿಸುತ್ತಾನೆ. ತೇಜಸ್ವಿ, ಪದಾತಿ ವೀರರನ್ನು ಸುಡುತ್ತಾನೆ. ಆದರೂ ನಾನು ಯುದ್ಧದಲ್ಲಿ ಮೋಡದಂತೆ ಬಾಣಗಳ ಮಳೆಗರೆದು ಅಗ್ನಿಯಂಥ ಪಾರ್ಥನ ಪರಾಕ್ರಮವನ್ನು ಆರಿಸುತ್ತೇನೆ.

ಆಶೀವಿಷಂ ದೃಷ್ಟಿಹರಣಂ ಸುಘೋರಂ
ಸುತೀಕ್ಷ್ಣದಂಷ್ಟ್ರಂ ಜ್ವಲನಪ್ರಭಾವಮ್ ।
ಕ್ರೋಧಾತ್ ಪ್ರದೀಪ್ತಾನಲವದ್ ದಹಂತಂ
ಕುಂತೀಪುತ್ರಂ ಶಮಯಿಷ್ಯಾಮಿ ಭಲ್ಲೈಃ ॥೨೭॥

ದೃಷ್ಟಿಯಿಂದಲೆ ಕೊಲ್ಲುವ ಮಹಾ ವಿಷಸರ್ಪ ಬಲು ಘೋರ. ತೀಕ್ಷ್ಣವಾದ ಕೋರೆದಾಡೆ ಉಳ್ಳದ್ದು. ಬೆಂಕಿಯಂತೆ ಸುಡುವ ಶಕ್ತಿಯುಳ್ಳದ್ದು. ಕ್ರೋಧದಿಂದ ಉರಿವ ಬೆಂಕಿಯಂತೆ ಸುಡುವುದು. ಹಾಗೇ ಇರುವ ಅರ್ಜುನನನ್ನು ಬಾಣಗಳಿಂದ ತಣ್ಣಗಾಗಿಸುತ್ತೇನೆ.

ಪ್ರವಾಹಿಣಂ ಬಲವಂತಂ ಮಹೌಜಸಂ
ಪ್ರಭಂಜನಂ ಮಾತರಿಶ್ವಾನಮುಗ್ರಮ್ ।

ಯುದ್ಧೇ ಸಹಿಷ್ಯೇ ಹಿಮವಾನಿವಾಚಲೋ
ಧನಂಜಯಂ ಕ್ರುದ್ಧಮಮೃಷ್ಯಮಾಣಮ್ ॥೨೮॥

ಬಲವಾಗಿ ಗಾಳಿಯ ಪ್ರವಾಹ ಹರಿಸುವವನು ಮಹಾಪರಾಕ್ರಮಿ. ಎಲ್ಲವನ್ನೂ ಮುರಿಯುವವನು ಭಯಂಕರ ಚಂಡಮಾರುತ. ಹಾಗೇ ಕ್ರುದ್ಧನಾದರೆ ತಡೆಯಲಾಗದವನಾಗಿರುವ ಧನಂಜಯನನ್ನು ನಾನು ಹಿಮಾಲಯ ಬೆಟ್ಟದಂತೆ ಸಹಿಸಿಕೊಳ್ಳಬಲ್ಲೆ.

ವಿಶಾರದಂ ರಥಮಾರ್ಗೇಷು ಶಕ್ತಂ
ಧುರ್ಯಂ ನಿತ್ಯಂ ಸಮರೇಷು ಪ್ರವೀರಮ್ ।
ಲೋಕೇ ವರಂ ಸರ್ವಧನುರ್ಧರಾಣಾಂ
ಧನಂಜಯಂ ಸಂಯುಗೇಽಹಂ ಹನಿಷ್ಯೇ ॥೨೯॥

ರಣರಂಗದಲ್ಲಿ ರಥಮಾರ್ಗಗಳನ್ನು ಬಲ್ಲವನು ಸಮರ್ಥ. ಯುದ್ಧಗಳಲ್ಲಿ ಸದಾ ಮುಂಚೂಣಿಯಲ್ಲಿರುವ ಮಹಾನ್ ವೀರ. ಲೋಕದಲ್ಲಿ ಎಲ್ಲ ಧನುರ್ಧಾರಿಗಳಲ್ಲಿ ಉತ್ತಮನೆನಿಸಿದವನು ಧನಂಜಯ. ಅವನನ್ನು ನಾನು ರಣದಲ್ಲಿ ವಧಿಸುತ್ತೇನೆ.

ಯಃ ಸರ್ವಭೂತಾನಿ ಸದೈವತಾನಿ
ಪ್ರಸ್ಥೇಽಜಯತ್ ಖಾಂಡವೇ ಸವ್ಯಸಾಚೀ ।
ಕೋ ಜೀವಿತಂ ರಕ್ಷಮಾಣೋ ಹಿ ತೇನ
ಯುಯುತ್ಸತೇಽಸ್ತ್ರೈರ್ಮಾನುಷೋ ಮಾಮೃತೇಽನ್ಯಃ ॥೩೦॥

ಎಲ್ಲ ಭೂತ–ರಾಕ್ಷಸರನ್ನೂ ದೇವತೆಗಳನ್ನೂ ಸವ್ಯಸಾಚಿ ಖಾಂಡವಪ್ರಸ್ಥದಲ್ಲಿ ಗೆದ್ದಿದ್ದಾನೆ. ತನ್ನ ಪ್ರಾಣರಕ್ಷಣೆ ಮಾಡಿಕೊಳ್ಳುವ ಮಾನವನು ಯಾವನು ತಾನೆ ನನ್ನ ಹೊರತು ಬೇರೆಯವನು ಅವನೊಂದಿಗೆ ಅಸ್ತ್ರಗಳಿಂದ ಯುದ್ಧ ಮಾಡಲು ಬಯಸುತ್ತಾನೆ?

ಮಾನೀ ಕೃತಾಸ್ತ್ರಃ ಕೃತಹಸ್ತಯೋಧೀ
ದಿವ್ಯಾಸ್ತ್ರವಿಚ್ಛ್ವೇತಹಯಃ ಪ್ರಮಾಥೀ ।

ತಸ್ಯಾಹಮದ್ಯಾತಿರಥಸ್ಯ ಕಾಯಾತ್
ಶಿರೋ ಹರಿಷ್ಯಾಮಿ ಶಿತೈಃ ಪೃಷತ್ಕೈಃ ॥೩೧॥

ಯುದ್ಧವಿದ್ಯೆಯಲ್ಲಿ ನುರಿತವನು. ಅಸ್ತ್ರಗಳನ್ನೆಲ್ಲ ತಿಳಿದವನು. ದೃಢಹಸ್ತಗಳಿಂದ ಯುದ್ಧಮಾಡುವವನು. ದಿವ್ಯಾಸ್ತ್ರಗಳನ್ನು ಬಲ್ಲವನು, ಬಿಳಿ ಕುದುರೆಗಳುಳ್ಳವನು ಶತ್ರುನಾಶಕ ಅರ್ಜುನ. ಅತಿರಥನಾದ ಅವನ ಮೈಯಿಂದ ತೀಕ್ಷ್ಣಬಾಣಗಳಿಂದ ತಲೆಯನ್ನೆ ಹಾರಿಸುತ್ತೇನೆ.

ಯೋತ್ಸ್ಯಮ್ಯೇನಂ ಶಲ್ಯ ಧನಂಜಯಂ ವೈ
ಮೃತ್ಯುಂ ಪುರಸ್ಕೃತ್ಯ ರಣೇ ಜಯಂ ವಾ ।
ಅನ್ಯೋ ಹಿ ನ ಹ್ಯೇಕರಥೇನ ಮರ್ತ್ಯೋ
ಯುದ್ಧ್ಯೇತ ಯಃ ಪಾಂಡವಂ ಮೃತ್ಯುಕಲ್ಪಮ್ ॥೩೨॥

ಮಾಡು ಇಲ್ಲವೆ ಮಡಿ ಎಂಬ ಧ್ಯೇಯವನ್ನು ಮುಂದಿಟ್ಟುಕೊಂಡು ರಣದಲ್ಲಿ ಈ ಧನಂಜಯನೊಡನೆ ಹೋರಾಡುವೆನು. ಶಲ್ಯ, ನನ್ನೊಬ್ಬನ ಹೊರತು ಇನ್ನೊಬ್ಬ ಮನುಷ್ಯ ಯಾವ ಮೃತ್ಯುವಿನಂತೆ ಕಾಣುವ ಅರ್ಜುನನೊಡನೆ ಒಂದೇ ರಥದಿಂದ ಯುದ್ಧ ಮಾಡಬಲ್ಲ?

ತಸ್ಯಾಹವೇ ಪೌರುಷಂ ಪಾಂಡವಸ್ಯ
ಬ್ರೂಯಾಂ ಪೃಷ್ಟಃ ಸಮಿತೌ ಕ್ಷತ್ರಿಯಾಣಾಮ್ ।
ಕಿಂ ತ್ವಂ ಮೂರ್ಖಃ ಪ್ರಭಷನ್ ಮೂಢಚೇತಾ
ಆಖ್ಯಾಸಿ ಮೇ ಪೌರುಷಂ ಫಲ್ಗುನಸ್ಯ ॥೩೩॥

ಆ ಅರ್ಜುನನು ಯುದ್ಧದಲ್ಲಿ ತೋರುವ ಪೌರುಷವನ್ನು ನನ್ನಲ್ಲಿ ಕೇಳಿದರೆ ಕ್ಷತ್ರಿಯರ ಸಮಾವೇಶದ ಮಧ್ಯದಲ್ಲಿ ನಾನು ಹೇಳಬಲ್ಲೆ. ಮೂಢಬುದ್ಧಿಯವನು ಏನೇನೋ ಬೊಗಳುವವನು ಮೂರ್ಖ, ನೀನು ಅರ್ಜುನನ ಪೌರುಷವನ್ನು ನನಗೆ ಏನು ಹೇಳಬಲ್ಲೆ?

ಅತ್ಯಪ್ರಿಯೋ ಯಃ ಪುರುಷೋ ನಿಷ್ಠುರೋ ಹಿ
ಕ್ಷುದ್ರಃ ಕ್ಷೇಪ್ತಾ ಕ್ಷಮಿಣಶ್ಚಾಕ್ಷಮಾವಾನ್ ।

ಹನ್ಯಾಮಹಂ ತಾದೃಶಾನಾಂ ಶತಾನಿ
ಕ್ಷಮಾಮ್ಯಹಂ ಕ್ಷಮಿಣಾಂ ಕಾಲ ಏಷಃ ॥೩೪॥

ಅತಿ ಅಪ್ರಿಯನಾದ ಜನ ನಿಷ್ಠುರ ಕ್ಷುದ್ರನಿರುತ್ತಾನೆ. ಕ್ಷಮಾರಹಿತನಾದ ಅವನು ಕ್ಷಮಾಶೀಲರನ್ನು ಆಕ್ಷೇಪಿಸುತ್ತಾನೆ. ಅಂಥ ನಿನ್ನಂಥ ನೂರು ಜನರನ್ನು ನಾನು ವಧಿಸಬಲ್ಲೆ. ಆದರೂ ನಾನು ಕ್ಷಮಿಸುತ್ತಿದ್ದೇನೆ, ಏಕೆಂದರೆ ಇದು ಕ್ಷಮಾಶೀಲರ ಕಾಲ.

ಅವೋಚಸ್ತ್ವಂ ಪಾಂಡವಾರ್ಥೇऽಪ್ರಿಯಾಣಿ
ಪ್ರಧರ್ಷಯನ್ಮಾಂ ಮೂಢವತ್ಪಾಪಕರ್ಮನ್ ।
ಮಯ್ಯಾರ್ಜವೇ ಜಿಹ್ಮಗತಿರ್ಹ್ಯತಸ್ತ್ವಂ
ಮಿತ್ರದ್ರೋಹೀ ಸಾಪ್ತಪದಂ ಹಿ ಮಿತ್ರಮ್ ॥೩೫॥

ಪಾಪಕರ್ಮ ಮಾಡುವವನೇ, ನೀನು ಪಾಂಡವರಿಗಾಗಿ ಮೂಢನಂತೆ ನನ್ನನ್ನು ಕೆಣಕುತ್ತ ನನಗೆ ಅಪ್ರಿಯವಾದ ಮಾತುಗಳನ್ನಾಡಿರುವೆ. ನನ್ನಲ್ಲಿ ನಿಷ್ಕಪಟ ವರ್ತನೆ ಮಾಡಬೇಕಾಗಿರುವಾಗ ಕಪಟವರ್ತನೆ ತೋರುವುದರಿಂದ ನೀನು ಮಿತ್ರದ್ರೋಹಿ. ಏಳು ಹೆಜ್ಜೆ ಜೊತೆಗೆ ನಡೆದರೆ ಸಾಕು, ಅವನು ಮಿತ್ರನಾಗುತ್ತಾನೆ. ಮೈತ್ರಿ ಬೆಳೆಯುತ್ತದೆ ಎನ್ನುವುದು ಪ್ರಸಿದ್ಧ. ನೀನು ಅದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಿರುವೆ.

ಕಾಲಸ್ತ್ವಯಂ ಪ್ರತ್ಯುಪಯಾತಿ ದಾರುಣೋ
ದುರ್ಯೋಧನೋ ಯುದ್ಧಮುಪಾಗಮದ್ಯತ್ ।
ತಸ್ಯಾರ್ಥಸಿದ್ಧಿಂ ತ್ವಭಿಕಾಂಕ್ಷಮಾಣ-
ಸ್ತ್ವಂ ಮನ್ಯಸೇ ಯತ್ರ ನೈಕಾಂತ್ಯಮಸ್ತಿ ॥೩೬॥

ದಾರುಣವಾದ ಕಾಲ ಬರುತ್ತಿದೆ. ಏಕೆಂದರೆ ದುರ್ಯೋಧನ ಯುದ್ಧವನ್ನು ಕೈಗೊಂಡಿದ್ದಾನೆ. ಅವನ ಮನೋರಥ ಪೂರೈಸುವುದನ್ನು ನಾನು ಬಯಸಿದ್ದೇನೆ. ನೀನೂ ಬಯಸಿರುವಿ. ಆದರೆ ಅದರಲ್ಲಿ ನನಗೆ ದೃಢತೆ ಇಲ್ಲದಂತಾಗಿಸಲು ಹೊರಟು, ನೀನು ಇಂಥ ಮಾತುಗಳನ್ನಾಡುತ್ತಿರುವೆ.

ತಥಾಪ್ಯಹಂ ಪಾಂಡವವಾಸುದೇವೌ
ಯೋತ್ಸ್ಯೇ ರಣೇ ಮದ್ವಿಧಸ್ಯೈಷ ಧರ್ಮಃ ।

ನ ಪ್ರಾಕೃತಂ ಸಚತೇ ವೈ ಕದಾಚಿತ್
ಯಃ ಪ್ರತ್ಯುದೀಯಾತ್ ಕೃಷ್ಣಧನಂಜಯೌ ತೌ ॥೩೭॥

ದಾರ್ಢ್ಯವಿಲ್ಲದಂತೆ ಮಾಡಲು ನೀನು ಯತ್ನಿಸಿದರೂ ನಾನು ಮಾತ್ರ ಕೃಷ್ಣಾರ್ಜುನರೊಡನೆ ಯುದ್ಧವನ್ನೇ ಮಾಡುವೆ. ನನ್ನಂಥವನಿಗೆ ಇದು ಧರ್ಮ. ಯಾವನು ಕೃಷ್ಣಾರ್ಜುನರನ್ನು ಇದಿರಿಸಲು ಹೊರಟಿರುವನೋ ಅವನು ಇಂಥ ಅಲ್ಪತ್ವವನ್ನು ಎಂದೂ ಪುರಸ್ಕರಿಸಬಾರದು.

ಮಿತ್ರಂ ಮಿತ್ರೇ ವೈ ನಂದತೇಃ ಪ್ರೀಯತೇರ್ವಾ
ಸಂಹ್ಲಾದತೇರ್ಮಾನದ ಮೋದತೇರ್ವಾ ।
ದುರ್ಯೋಧನೇ ಸರ್ವಮಿದಂ ಮಮಾಸ್ತಿ
ತಚ್ಚಾಪಿ ಸರ್ವಂ ಮಮ ವೇತ್ತಿ ರಾಜಾ ॥೩೮॥

'ಮಿದಿ ಸ್ನೇಹನೇ' ಧಾತುವಿಗೆ 'ಅಮಿ ಚಿ ಮಿದಿ ಶಸಿಭ್ಯಃ ಕ್ತ್ರಃ' ಎಂದು ಉಣಾದಿ ಕ್ತ್ರಪ್ರತ್ಯಯ ಬಂದು 'ಮಿತ್ರ' ಎಂದಾಗಿದೆ. ಧಾತ್ವರ್ಥವಾದ ಸ್ನೇಹವು ಮಿತ್ರನಲ್ಲಿ ಮಿತ್ರನಿಗೆ ನಾಲ್ಕು ಬಗೆ ಇರಬಹುದು. ಮಿತ್ರನ ಧರ್ಮಸಾಧನೆಯ ಕಾರ್ಯವನ್ನು ಕಂಡಾಗ ಮಿತ್ರನು 'ಆನಂದ'ಪಡುತ್ತಾನೆ. ಅರ್ಥಸಾಧನಕಾರ್ಯವನ್ನು ಕಂಡಾಗ 'ಪ್ರೀತಿ'ಪಡುತ್ತಾನೆ. ಕಾಮಭೋಗಕಾರ್ಯವನ್ನು ಕಂಡಾಗ 'ಆಹ್ಲಾದ' ಪಡುತ್ತಾನೆ. ಮೋಕ್ಷಸಾಧನ ಕರ್ಮವನ್ನು ಕಂಡಾಗ 'ಮುದ'ಪಡುತ್ತಾನೆ. ಇಂಥ ಸ್ನೇಹಿತನನ್ನೇ ನಿಜವಾಗಿ 'ಮಿತ್ರ' ಎನ್ನಬೇಕು. ಮಾನದ, ನನ್ನ ಮಾನ ಕಳೆಯುತ್ತಿರುವ ಶಲ್ಯನೆ, ದುರ್ಯೋಧನನ ವಿಷಯದಲ್ಲಿ ನನಗೆ ನಾಲ್ಕು ಬಗೆಯ ಈ ಮೈತ್ರಿಗಳು ಇವೆ. ನನಗೆ ಅದೆಲ್ಲ ಇರುವುದನ್ನು ರಾಜಾ ದುರ್ಯೋಧನ ತಿಳಿದುಕೊಂಡಿದ್ದಾನೆ.

ಇಲ್ಲಿ 'ಸಂಹ್ಲಾದತೇರ್ಮಾನದ' ಎಂಬಲ್ಲಿ ಮೂಲಶ್ಲೋಕದಲ್ಲಿ 'ಸಂತ್ರಾ-ಯತೇರ್ಮಿನುತೇಃ' ಎಂದು ಪ್ರಚಲಿತ ಪಾಠವಿದೆ. ಈ ಪಾಠ ಸ್ವರಸವಲ್ಲ. ಲಕ್ಷಾಲಂಕಾರದಲ್ಲಿ 'ನಂದ ಪ್ರೀತಿ ಹ್ಲಾದ ಮೋದ ಶಬ್ದೈಃ' ಎಂದು 'ಹ್ಲಾದ' ಶಬ್ದಕ್ಕೆ ವ್ಯಾಖ್ಯಾನ ಮಾಡಿದ್ದಾರೆ. 'ಸಂಹ್ಲಾದತೇಃ' ಎಂದು ಮೂಲದಲ್ಲಿ ಪಾಠವಿದ್ದರೆ ಈ ವ್ಯಾಖ್ಯಾನ ಕೂಡುತ್ತದೆ. 'ಮಿನುತೇಃ' ಎಂಬ ಪಾಠ ಪ್ರಕೃತಕ್ಕೆ ಬೇಕಾಗಿಲ್ಲ. 'ಮಾನದ' ಎಂದು ಪಾಠಾಂತರವಿದೆ. ಅದನ್ನೂ ಸೇರಿಸಿ ಪಾಠಪರಿಷ್ಕಾರ ಮಾಡಿದ್ದೇವೆ.

ಶತ್ರುಃ ಸದಾ ಶಾತತೇ ಶಾಸತೇ ಚ
ಶೃಣಾತಿ ವಾ ಶಂಸತೇ ವಾऽಪಿ ಶಲ್ಯ ।
ಉಪಸರ್ಗಾದ್ ಬಹುಧಾ ಸೀದತೇ ಚ
ಪ್ರಾಯೇಣ ಸರ್ವಂ ತ್ವಯಿ ತಚ್ಚ ಮಹ್ಯಮ್ ॥೩೯॥

'ಶತ್ರು'ಎಂದರೆ ಹೀಗಿರುತ್ತಾನೆ, 'ಶಾತತೇ' ಶಸ್ತ್ರದಿಂದ ಕೊಲ್ಲುತ್ತಾನೆ. 'ಶಾಸತೇ' ನಿರಪರಾಧಿಗೆ ಶಿಕ್ಷೆ ಕೊಡುತ್ತಾನೆ. 'ಶೃಣಾತಿ' ಬೆಂಕಿಯಲ್ಲಿ ಸುಡಿಸುತ್ತಾನೆ, 'ಶಂಸತೇ' ಶತ್ರುಗಳನ್ನು ಸದಾ ಹೊಗಳುತ್ತಾನೆ. 'ಉಪಸರ್ಗ'ದಿಂದ ಅಂದರೆ ಉಪದ್ರವದಿಂದ 'ಶೀದತೇ' ವ್ಯಥೆ ಉಂಟುಮಾಡುತ್ತಾನೆ. ಶಲ್ಯ, ಪ್ರಾಯಃ ಈ ಎಲ್ಲ ರೀತಿಯ ಶತ್ರುತ್ವ ನನ್ನ ವಿಷಯದಲ್ಲಿ ನಿನಗೆ ಇದೆ.

ಸಕಾರ ಶಕಾರಗಳಿಗೆ ಐಕ್ಯವಿಟ್ಟುಕೊಂಡು 'ಸೀದತೇ' ಎಂಬುದನ್ನು 'ಶೀದತೇ' ಎಂದು ಇಟ್ಟುಕೊಳ್ಳಬೇಕು. 'ಶೀದತೇ ಅನೇನ' ಶತ್ರುವಿನಿಂದಾಗಿ ವ್ಯಥೆಪಡುತ್ತಾನೆ ಎಂದರ್ಥ.

ದುರ್ಯೋಧನಾರ್ಥಂ ತವ ಚ ಪ್ರಿಯಾರ್ಥಂ
ಯಶೋರ್ಥಮಾತ್ಮಾರ್ಥಮಪೀಶ್ವರಾರ್ಥಮ್ ।
ತಸ್ಮಾದಹಂ ಪಾಂಡವವಾಸುದೇವೌ
ಯೋತ್ಸ್ಯೇ ಯತ್ತ್ವಾತ್ ಕರ್ಮ ಚ ಪಶ್ಯ ಮೇऽದ್ಯ ॥೪೦॥

ಅದರಿಂದ ನಾನು ದುರ್ಯೋಧನನಿಗಾಗಿ ನಿನ್ನ ಪ್ರೀತಿಗಾಗಿ ಕೀರ್ತಿಗಾಗಿ ಆತ್ಮಪ್ರೀತಿಗಾಗಿ ಈಶ್ವರಪ್ರೀತಿಗಾಗಿ ಕೃಷ್ಣಾರ್ಜುನರೊಡನೆ ಯುದ್ಧಮಾಡುವೆನು. ನನ್ನ ಯುದ್ಧವನ್ನು ಈಗ ನೀನು ನೋಡು.

ಶಲ್ಯಾದ್ಯಾಹಂ ಸಂಗತಃ ಪಾಂಡವೇನ
ಮುಚ್ಯೇಯಂ ಚೇಜ್ಜೀವಮಾನಃ ಕಥಂಚಿತ್ ।
ಶಶ್ವನ್ಮೃತ್ಯೋಃ ಸ್ಯಾಮನಾಧೃಷ್ಯರೂಪೋ
ವ್ಯಕ್ತಂ ತಸ್ಮಾತ್ ಸಂಯುಗಾದ್ ವಿಪ್ರಮುಕ್ತಃ ॥೪೧॥

ಶಲ್ಯ, ಇದಂತೂ ಸ್ಪಷ್ಟವಿದೆ. ಇಂದು ನಾನು ಅರ್ಜುನನೊಡನೆ ಯುದ್ಧಮಾಡಿ

ಹೇಗಾದರೂ ಜೀವಂತವಾಗಿ ಮುಕ್ತನಾದೆನೆಂದರೆ ಯುದ್ಧದಿಂದ ಮುಕ್ತನಾದ್ದರಿಂದ ಎಂದಿಗೂ ಮೃತ್ಯುವಿಗೆ ನಾನು ಮಣಿಯದವನೇ ಆಗುವೆನು.

ಅಸ್ತ್ರಂ ಬ್ರಾಹ್ಮಂ ಮನಸಾ ಸಂಜಪನ್ ವೈ
ಯದಾऽಸ್ಯತೇ ಕ್ರೋಧಿತಃ ಸವ್ಯಸಾಚೀ ।
ತದಾಪಿ ಮೇ ನೈವ ಮುಚ್ಯೇತ ಪಾರ್ಥೋ
ನ ಚೇತ್ಪತೇದ್ ವಿಷಮೇ ಮೇऽದ್ಯ ಚಕ್ರಮ್ ॥೪೨॥

ಕೋಪಗೊಂಡ ಸವ್ಯಸಾಚಿ ಬ್ರಹ್ಮಾಸ್ತ್ರವನ್ನು ಮನಸಿನಿಂದ ಜಪಿಸಿ ನನ್ನ ಮೇಲೆ ಎಸೆದಾಗಲೂ ನನ್ನಿಂದ ಅರ್ಜುನ ಮುಕ್ತನಾಗಲಾರ, ಇದು, ಇಂದು ಈ ವಿಷಮ ಪರಿಸ್ಥಿತಿಯಲ್ಲಿ ನನ್ನ ರಥಚಕ್ರವು ಮುರಿದು ಬೀಳದಿದ್ದ ಪಕ್ಷದಲ್ಲಿ.

ಅಸ್ತ್ರಾಣಿ ವಿದ್ಧ್ವಾ ಸಮರೇ ಗತಾನಿ
ಬ್ರಾಹ್ಮಾಣಿ ದಿವ್ಯಾನ್ಯಥ ಮಾನುಷಾಣಿ ।
ಆಸಾದಯಿಷ್ಯಾಮ್ಯಹಮುಗ್ರವೀರ್ಯಂ
ನಾಗೋತ್ತಮಂ ನಾಗ ಇವ ಪ್ರಭಿನ್ನಃ ॥೪೩॥

ಯುದ್ಧದಲ್ಲಿ ಬ್ರಹ್ಮಾಸ್ತ್ರ ದಿವ್ಯಾಸ್ತ್ರ ಮಾನುಷಾಸ್ತ್ರ ಮುಂತಾದ ಅಸ್ತ್ರಗಳನ್ನು ಉಗ್ರಪರಾಕ್ರಮಿಯಾದ ಅರ್ಜುನನ ಮೇಲೆ ಎಸೆದು, ಮದ್ದಾನೆಯನ್ನು ಮದ ಸುರಿಸುವ ಆನೆ ಪೀಡಿಸುವಂತೆ ಪೀಡಿಸುತ್ತೇನೆ.

ವೈವಸ್ವತಾದ್ ದಂಡಹಸ್ತಾದ್ ವರುಣಾದ್ ವಾಪಿ ಪಾಶಿನಃ ।
ಸಗದಾದ್ ವಾ ಧನಪತೇಃ ಸವಜ್ರಾದ್ ವಾ ಸುರಾಧಿಪಾತ್ ॥೪೪॥

ಅಥಾನ್ಯಸ್ಮಾದಪಿ ಸುರಾದಮಿತ್ರಾದಾತತಾಯಿನಃ ।
ಇತಿ ಶಲ್ಯ ವಿಜಾನೀಹಿ ಯಥಾ ನಾಹಂ ಬಿಭೇಮ್ಯುತ ॥೪೫॥

ದಂಡಪಾಣಿಯಾದ ಯಮನಿಂದ, ಪಾಶಹಸ್ತನಾದ ವರುಣನಿಂದ, ಗದೆ ಹಿಡಿದ ಕುಬೇರನಿಂದ, ವಜ್ರಪಾಣಿಯಾದ ಇಂದ್ರನಿಂದ ಮತ್ತು ಬೇರೆ ದೇವತೆಯಿಂದ ಅವನು ಶತ್ರುವಾಗಿ ಆಯುಧ ಹಿಡಿದುನಿಂತರೆ ನಾನು ಹೆದರುವುದಿಲ್ಲ ಎಂದು, ಶಲ್ಯ, ನೀನು ತಿಳಿದುಕೊ.

ತಸ್ಮಾನ್ನ ಮೇ ಭಯಂ ಪಾರ್ಥಾನ್ನಾಪಿ ಚೈವ ಜನಾರ್ದನಾತ್ ।
ಸಹ ಯುದ್ಧಂ ಹಿ ಮೇ ತಾಭ್ಯಾಂ ಸಾಂಪರಾಯೇ ಭವಿಷ್ಯತಿ ॥೪೬॥

ಅದರಿಂದ ನನಗೆ ಅರ್ಜುನನಿಂದಲೂ ಭಯವಿಲ್ಲ ಕೃಷ್ಣನಿಂದಲೂ ಭಯವಿಲ್ಲ. ಅವರಿಬ್ಬರೊಡನೆ ನನಗೆ ರಣರಂಗದಲ್ಲಿ ಯುದ್ಧ ಅವಶ್ಯ ಉಂಟಾಗುವುದು.

ಕದಾಚಿದ್ ಬ್ರಾಹ್ಮಣಸ್ಯಾಥ ಹೋಮಧೇನೋರಹಂ ನೃಪ ।
ಅಜಾನನ್ನಕ್ಷಿಪಂ ಬಾಣಂ ಘೋರರೂಪಂ ಭಯಾವಹಮ್ ॥೪೭॥

ಒಮ್ಮೆ ನಾನು ಒಬ್ಬ ಬ್ರಾಹ್ಮಣನ ಹೋಮಧೇನುವಿನ ಮೇಲೆ ತಿಳಿಯದೆ ಘೋರವಾದ ಭಯಂಕರವಾದ ಬಾಣವನ್ನು ಎಸೆದೆ.

ಹೋಮಧೇನ್ವಾ ವತ್ಸಮಸ್ಯ ಪ್ರಮತ್ತ ಇಷುಣಾಽಹನಮ್ ।
ಚರನ್ ವೈ ವಿಜನೇ ಶಲ್ಯ ತತೋಽನು ವ್ಯಾಜಹಾರ ಸಃ ॥೪೮॥

ನಿರ್ಜನ ಪ್ರದೇಶದಲ್ಲಿ ಶಸ್ತ್ರಾಭ್ಯಾಸ ಮಾಡುತ್ತ ನಾನು ತಿಳಿಯದೆ ಹೋಮ ಧೇನುವಿನ ಕರುವನ್ನು ಕೊಂದಾಗ ಬ್ರಾಹ್ಮಣ ನುಡಿದ.

ಯಸ್ಮಾದ್ ವತ್ಸಸ್ತ್ವಯಾ ಚಾತ್ರ ಹೋಮಧೇನ್ವಾ ಹತೋ ನೃಪ ।
ತಸ್ಮಾತ್ ತ್ವಮಪಿ ರಾಧೇಯ ವಾಕ್ಶಲ್ಯಂ ಮಹದಾಪ್ನುಹಿ ॥೪೯॥

ರಾಜನೆ, ನೀನು ಹೋಮಧೇನುವಿನ ಕರುವನ್ನು ಬಾಣದಿಂದ ಕೊಂದಿದ್ದರಿಂದ ಶಾಪರೂಪ ವಾಗ್‌ಬಾಣವನ್ನು ನೀನೂ ಹೊಂದು.

ಶ್ವಭ್ರೇ ತೇ ಪತತಾಂ ಚಕ್ರಮಿತಿ ಮಾಂ ಬ್ರಾಹ್ಮಣೋಽಬ್ರವೀತ್ ।
ಯುಧ್ಯಮಾನಸ್ಯ ಸಂಗ್ರಾಮೇ ಪ್ರಾಪ್ತಸ್ಯೈಕಾಯನಂ ಭಯಮ್ ॥೫೦॥

ರಣದಲ್ಲಿ ಯುದ್ಧ ಮಾಡುತ್ತಿರುವಾಗ, ಪರಿಹರಿಸಲಾಗದ ಆಪತ್ತು ಬಂದಿರು ವಾಗ 'ನಿನ್ನ ರಥಚಕ್ರವು ಹಳ್ಳದಲ್ಲಿ ಹೂತುಹೋಗಲಿ' ಎಂದು ಬ್ರಾಹ್ಮಣ ಶಪಿಸಿದ.

ತಸ್ಮಾದ್ ಬಿಭೇಮಿ ಬಲವದ್ ಬ್ರಾಹ್ಮಣವ್ಯಾಹೃತಾದಹಮ್ ।
ಏತೇ ಹಿ ಸೋಮರಾಜಾನ ಈಶ್ವರಾಃ ಸುಖದುಃಖಯೋಃ ॥೫೧॥

ಅದರಿಂದ ಬ್ರಾಹ್ಮಣಶಾಪಕ್ಕೆ ನಾನು ಬಹಳ ಭಯಪಡುತ್ತೇನೆ. ಈ ಬ್ರಾಹ್ಮಣರು

ಸೋಮರಾಜನ ಪ್ರಜೆಗಳು, ಸುಖವನ್ನಾಗಲಿ ದುಃಖವನ್ನಾಗಲಿ ಕೊಡಲು ಶಕ್ತರು, ಶಾಪಾನುಗ್ರಹಶಕ್ತರು.

ಶ್ವಭ್ರೇ ತೇ ಪತಿತಾ ಚಕ್ರಂ ಯುಧ್ಯಮಾನಸ್ಯ ಶತ್ರುಣಾ ।
ಪ್ರಾಪ್ತ ಏಕಾಯನೇ ಕಾಲೇ ಮೃತ್ಯುಸಾಧಾರಣೇ ತ್ವಯಿ ॥೫೨॥

ನೀನು ಶತ್ರುವಿನೊಡನೆ ಯುದ್ಧಮಾಡುವಾಗ ಪರಿಹರಿಸಲಾಗದ ಆಪತ್ತಿನ ಕಾಲದಲ್ಲಿ ಮೃತ್ಯುವೂ ಬರಬಹುದಾದ ಕಾಲದಲ್ಲಿ ನಿನ್ನ ರಥಚಕ್ರ ಹಳ್ಳದಲ್ಲಿ ಬೀಳುತ್ತದೆ.

ಸ್ಪರ್ಧಸೇ ಯೇನ ಸಂಗ್ರಾಮೇ ಯದರ್ಥಂ ಘಟಸೇಽನಿಶಮ್ ।
ತತ ಏವ ಧ್ರುವಂ ಮೃತ್ಯುಂ ಸೂತ ಪ್ರಾಪ್ಸ್ಯಸಿ ಸಂಯುಗೇ ॥೫೩॥

ನೀನು ಯಾವನೊಡನೆ ಯುದ್ಧದಲ್ಲಿ ಸ್ಪರ್ಧಿಸುವೆಯೋ ಯಾವನಿಗೆ ನೀನು ನಿತ್ಯ ನಿಂದೆ ಮಾಡುತ್ತಿರುವಿಯೋ ಅವನಿಂದಲೇ ನೀನು ನಿಶ್ಚಯವಾಗಿ ಮರಣ ಹೊಂದುವೆ' ಎಂದು ಬ್ರಾಹ್ಮಣ ನನಗೆ ಶಪಿಸಿದ.

ಅಹಂ ಪ್ರಸಾದಯಾಂಚಕ್ರೇ ಬ್ರಾಹ್ಮಣಂ ಶಂಸಿತವ್ರತಮ್ ॥೫೪॥

ನಾನು ಒಳ್ಳೆಯ ವ್ರತನಿಷ್ಠನಾದ ಆ ಬ್ರಾಹ್ಮಣನನ್ನು ಒಲಿಸಿಕೊಳ್ಳಲು ಯತ್ನಿಸಿದೆ.

ಗವಾಂ ದಶಶತಂ ವಿತ್ತಂ ಬಲೀವರ್ದಾಂಶ್ಚ ಷಟ್‌ಶತಮ್ ।
ಪ್ರಚ್ಛನ್ನಂ ಕಾಂಚನೈಃ ಕಾಮಂ ಬ್ರಾಹ್ಮಣಾರ್ಥಮಹಂ ತದಾ ॥೫೫॥

ಬಂಗಾರದಿಂದ ಮುಚ್ಚಿದ ಸಾವಿರ ಗೋಧನವನ್ನು ಆರುನೂರು ಎತ್ತುಗಳನ್ನು ಬ್ರಾಹ್ಮಣನಿಗೆ ಕೊಡುವೆನೆಂದೆ.

ದಾಸೀಶತಂ ನಿಷ್ಕಕಂಠಂ ಶತಮಶ್ವತರೀರಥಾನ್ ।
ಕನ್ಯಾನಾಂ ನಿಷ್ಕಕಂಠೀನಾಂ ಸಹಸ್ರಂ ಸಮಲಂಕೃತಮ್ ॥೫೬॥

ಬಂಗಾರದ ಸರವನ್ನೂ ಧರಿಸಿದ ನೂರು ದಾಸಿಯರನ್ನು ನೂರು ಹೇಸರಗತ್ತೆಗಳ ರಥಗಳನ್ನು, ಬಂಗಾರದ ಸರಗಳನ್ನು ಧರಿಸಿದ ಅಲಂಕೃತರಾದ ಸಾವಿರ ಕನ್ಯೆಯರನ್ನು ಕೊಡುವೆನೆಂದೆ.

ಈಷಾದಂತಾನ್ ನಾಗಶತಾನ್ ದಾಸೀದಾಸಶತಾನಿ ಚ ।
ದದ್ಮಿ ತೈರ್ದ್ವಿಜಮುಖ್ಯೋ ಮೇ ಪ್ರಸಾದಂ ನ ಚಕಾರ ಸಃ ॥೫೭॥

ಈಷಾದಂಡದಂಥ ದಾಡೆಗಳುಳ್ಳ ನೂರು ಆನೆಗಳನ್ನು ನೂರು ದಾಸ-ದಾಸಿಯರನ್ನು ಕೊಡುವೆನೆಂದೆ. ಆದರೂ ಬ್ರಾಹ್ಮಣೋತ್ತಮನು ನನಗೆ ಅನುಗ್ರಹ ಮಾಡಲಿಲ್ಲ.

ಕೃಷ್ಣಾನಾಂ ಶ್ವೇತವತ್ಸಾನಾಂ ಗೋಶತಾನಿ ಚತುರ್ದಶ ।
ದದನ್ ಹಿ ನ ಲಭೇ ತಸ್ಮಾತ್ತ್ವಸಾದಂ ದ್ವಿಜಸತ್ತಮಾತ್ ॥೫೮॥

ಬಿಳಿಕರುಗಳುಳ್ಳ ಹದಿನಾಲ್ಕು ನೂರು ಗೋವುಗಳನ್ನು ಕೊಡುವೆನೆಂದರೂ ಬ್ರಾಹ್ಮಣೋತ್ತಮನಿಂದ ಅನುಗ್ರಹ ಪಡೆಯಲಾಗಲಿಲ್ಲ.

ಯತ್ಕಿಂಚಿನ್ಮಾಮಕಂ ವಿತ್ತಂ ತ್ವದಧೀನಂ ಕರೋಮಿ ತತ್ ॥೫೯॥

ಋದ್ಧಂ ಗೇಹಂ ಸರ್ವಕಾಮೈರ್ಯಚ್ಚ ಮೇ ವಸು ಕಿಂಚನ ।
ತತ್ಸರ್ವಮಸ್ಮೈ ಸತ್ಕೃತ್ಯ ಪ್ರಯಚ್ಛಾಮಿ ನ ಚೇಚ್ಛತಿ ॥೬೦॥

ನನ್ನಲ್ಲಿ ನನ್ನದೆಂದು ಏನು ಧನವಿದೆಯೋ ಅದನ್ನು ನಿನ್ನ ವಶಕ್ಕೆ ಕೊಡುವೆ, ಎಲ್ಲ ಭೋಗಪದಾರ್ಥಗಳಿಂದ, ನನ್ನದಾದ ಎಲ್ಲ ಧನದಿಂದ, ಸಮೃದ್ಧವಾದ ಮನೆ ಎಲ್ಲವನ್ನೂ ಬ್ರಾಹ್ಮಣನಿಗೆ ಸತ್ಕಾರಪೂರ್ವಕ ಕೊಡುವೆನೆಂದರೂ ಅವನಿಗೆ ಯಾವುದೂ ಇಷ್ಟವಾಗಲಿಲ್ಲ.

ತತೋಽಬ್ರವೀನ್ಮಾಂ ಯಾಚಂತಮಪರಾದ್ಧಂ ಪ್ರಯತ್ನತಃ ॥೬೧॥

ಇತಿ ಮಾಂ ಯಾಚಮಾನಂ ವೈ ಬ್ರಾಹ್ಮಣಃ ಪ್ರತ್ಯವಾರಯತ್ ।
ಕ್ರೋಧದೀಪ್ತೇಕ್ಷಣಃ ಶಲ್ಯ ನಿರ್ದಹನ್ನಿವ ಚಕ್ಷುಷಾ ॥೬೨॥

ಶಲ್ಯ, ಬ್ರಾಹ್ಮಣನು ಕೋಪದಿಂದ ಜ್ವಲಿಸುವ ಕಣ್ಣುಳ್ಳವನಾಗಿ ಕಣ್ಣಿಂದಲೇ ಸುಡುವಂತೆ ನೋಡುತ್ತ ಅಪರಾಧಮಾಡಿ ಪ್ರಯತ್ನಪೂರ್ವಕ ಕ್ಷಮಾಯಾಚನೆ ಮಾಡುತ್ತಿದ್ದ ನನ್ನನ್ನು ತಡೆದು, ಹೇಳಿದ,

ವ್ಯಾಹೃತಂ ಯನ್ಮಯಾ ಸೂತ ತತ್ತಥಾ ನ ತದನ್ಯಥಾ ।
ಅನೃತೋಕ್ತಂ ಪ್ರಜಾಂ ಹನ್ಯಾತ್ ತತಃ ಪಾಪಮವಾಪ್ನುಯಾಮ್ ॥೬೩॥

ಸೂತನೆ, ನಾನೇನು ಶಾಪವಿತ್ತೆನೋ ಅದು ಹಾಗೇ ಆಗುವುದು. ಅನ್ಯಥಾ ಆಗದು. ಏಕೆಂದರೆ ಸುಳ್ಳು ಹೇಳಿದರೆ ಅದು ಪ್ರಜೆಗಳನ್ನು ಕೊಂದೀತು. ಅದರಿಂದ ನಾನು ಪಾಪವನ್ನು ಹೊಂದುವೆನು.

ತಸ್ಮಾದ್ಧರ್ಮಾಭಿರಕ್ಷಾರ್ಥಂ ನಾನೃತಂ ವಕ್ತುಮುತ್ಸಹೇ ।
ಮಾ ತ್ವಂ ಬ್ರಹ್ಮಗತಿಂ ಹಿಂಸ್ಯಾಃ ಪ್ರಾಯಶ್ಚಿತ್ತಂ ಕೃತಂ ತ್ವಯಾ ॥೬೪॥

ಅದರಿಂದ ಸತ್ಯ–ಧರ್ಮರಕ್ಷಣೆಗಾಗಿ ನಾನು ಶಾಪವನ್ನು ಸುಳ್ಳಾಗಿಸಲಾರೆ. ನೀನು ಗೋದಾನ ಮುಂತಾದ ಪ್ರಾಯಶ್ಚಿತ್ತಮಾಡಿ ಅದರಿಂದ ಬ್ರಾಹ್ಮಣನ ಸತ್ಯವಚನವನ್ನು ಸುಳ್ಳಾಗಿಸಿ ಹಿಂಸಿಸಬೇಡ.

ಮದ್ವಾಕ್ಯಂ ನಾನೃತಂ ಲೋಕೇ ಕಶ್ಚಿತ್ ಕುರ್ಯಾತ್ ಸಮಾಪ್ನುಹಿ ।
ಯನ್ಮಯೋಕ್ತಂ ಸರೋಷೇಣ ಗಚ್ಛ ಸೂತಜ ಮಾಚಿರಮ್ ॥೬೫॥

ನನ್ನ ಮಾತನ್ನು ಲೋಕದಲ್ಲಿ ಯಾರೇ ಆಗಲಿ ಸುಳ್ಳು ಮಾಡಬಾರದು. ಕೋಪದಿಂದ ನಾನು ನೀಡಿದ ಶಾಪವನ್ನು ನೀನು ಸ್ವೀಕರಿಸು. ಸೂತನೆ, ಹೋಗು, ಬೇಗನೆ ಹೊರಟುಹೋಗು.

ಇತಿ ಮಾಮಸಕೃತ್ ಕ್ರುದ್ಧಃ ಸ ಉವಾಚ ದ್ವಿಜೋತ್ತಮಃ ।
ಏತೇ ಹಿ ಸೋಮರಾಜಾನ ಈಶ್ವರಾಃ ಸುಖದುಃಖಯೋಃ ॥೬೬॥

ಹೀಗೆ ಆ ದ್ವಿಜೋತ್ತಮನು ಕ್ರುದ್ಧನಾಗಿ ಪುನಃಪುನಃ ಹೇಳಿದ. ಈ ಬ್ರಾಹ್ಮಣರು ಸೋಮರಾಜನ ಪ್ರಜೆಗಳು, ಶಾಪಾನುಗ್ರಹಗಳಿಂದ ಸುಖ–ದುಃಖ ನೀಡಬಲ್ಲವರು.

ನಾಹಂ ಬಿಭೇಮಿ ಬೀಭತ್ಸೋರ್ನ ಶಲ್ಯ ಮಧುಸೂದನಾತ್ ।
ತಸ್ಮಾದ್ ಬಿಭೇಮ್ಯಹಂ ಶಾಪಾತ್ ತೇನ ಸತ್ಯೇನ ತೇ ಶಪೇ ॥೬೭॥

ನಾನು ಅರ್ಜುನನಿಗೆ ಹೆದರುವುದಿಲ್ಲ. ಕೃಷ್ಣನಿಗೂ ಹೆದರುವುದಿಲ್ಲ. ಆ ಬ್ರಾಹ್ಮಣ ಶಾಪಕ್ಕೆ ಹೆದರುತ್ತೇನೆ. ಶಲ್ಯ, ಇದನ್ನು ಶಪಥ ಮಾಡಿ ಹೇಳುತ್ತೇನೆ.

ಸಹ ಯುದ್ಧಂ ಸಮೇತಾಭ್ಯಾಮದ್ಯೇದಂ ಸಮುಪಸ್ಥಿತಮ್ ।
ಯುದ್ಧೇಽಸ್ಮಿನ್ ಜೀವಿತಂ ಮೇಽದ್ಯ ಶಲ್ಯ ಸಂಶಯಮಾಗತಮ್ ॥೬೮॥

ಶಲ್ಯ, ಕೃಷ್ಣಾರ್ಜುನರೊಂದಿಗೆ ನನಗಿಂದು ಯುದ್ಧದ ಅವಕಾಶ ಲಭಿಸಿದೆ. ಈ ಯುದ್ಧದಲ್ಲಿ ನಾನು ಬದುಕಿ ಉಳಿಯುವುದು ಸಂಶಯಾಸ್ಪದವೆ.

ಶಕ್ರೋಽಪ್ಯಮರರಾಟ್ ತಾಭ್ಯಾಮುಪಗಮ್ಯಾಹವಂ ಸಹ ।
ಸಂಶಯಂ ಪರಮಂ ಗಚ್ಛೇತ್ ಕಥಂ ವಾ ಮನ್ಯತೇ ಭವಾನ್ ॥ ೬೯॥

ದೇವರಾಜ ಇಂದ್ರನಾದರೂ ಅವರನ್ನು ಇದಿರಿಸಿ ಯುದ್ಧ ಮಾಡಿದರೆ ಜಯವು ಅವನಿಗೆ ಸರ್ವಥಾ ಸಂಶಯವೆ. ಇದಕ್ಕೆ ನೀನೇನು ಅಭಿಪ್ರಾಯಪಡುವೆ?

ಇತ್ಯೇವಂ ತೇ ಮಯಾಽಽಖ್ಯಾತಂ ಕ್ಷಿಪ್ತೇನಾಪಿ ಸುಹೃತ್ತಯಾ ।
ಜಾನಾಮಿ ತ್ವಾಽಧಿಕ್ಷಿಪಂತಂ ದೋಷಮಾತ್ಮಗತಂ ಶೃಣು ॥೭೦॥

ನೀನು ನನ್ನನ್ನು ಆಕ್ಷೇಪಿಸಿದರೂ ನಾನು ಸೌಹಾರ್ದದಿಂದಲೆ ನಿನಗೆ ಇಷ್ಟು ಹೇಳಿದ್ದೇನೆ. ಇದಕ್ಕೂ ನೀನು ಹಳಿಯುವಿ ಎಂದು ನನಗೆ ಗೊತ್ತು. ಅದರಿಂದ ನಿನ್ನ ದೋಷವನ್ನು ಹೇಳುತ್ತೇನೆ, ಕೇಳು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಶಾಪಕಥನಂ ನಾಮ ದ್ವಿಚತ್ವಾರಿಂಶೋಧ್ಯಾಯಃ ॥೪೨॥

❖

ಮಹಾಭಾರತತಾತ್ಪರ್ಯನಿರ್ಣಯ

ಶಲ್ಯೋಽಪಿ ಸರ್ವದೇಶೇಷು ನೀಚಮಧ್ಯೋತ್ತಮಾ ನರಾಃ ।
ಸಂತೀತ್ಯುಕ್ತ್ವಾ ಸ್ಯ ಸಾರಥ್ಯಂ ಚಕ್ರೇ ಪಾರ್ಥಹಿತೇಪ್ಸಯಾ ॥ ೩೨ ॥

ಶಲ್ಯ 'ಎಲ್ಲ ದೇಶಗಳಲ್ಲಿಯೂ ನೀಚರು ಮಧ್ಯಮರು ಉತ್ತಮರೆಂದು ಎಲ್ಲ ಬಗೆಯ ಜನರಿರುತ್ತಾರೆ' ಎಂದು ಹೇಳಿ ಪಾಂಡವರ ಹಿತದ ಬಯಕೆಯಿಂದ ಕರ್ಣನಿಗೆ ಸಾರಥ್ಯವನ್ನು ಮಾಡಿದ.

❖

ನಲವತ್ತಮೂರನೆಯ ಅಧ್ಯಾಯ

ಕರ್ಣನು ಪುನಃ ಬಾಹ್ಲೀಕ, ಮದ್ರದೇಶಗಳನ್ನು ನಿಂದಿಸಿದ. ನಿನ್ನ ಅಂಗದೇಶದಲ್ಲಿಯೂ ಅನಾಚಾರಗಳಿವೆ. ಎಲ್ಲ ದೇಶಗಳಲ್ಲಿಯೂ ಅನಾಚಾರಿಗಳಿದ್ದಾರೆ. ಸದಾಚಾರಿಗಳೂ ಇರುತ್ತಾರೆ ಎಂದು ಶಲ್ಯ ಉತ್ತರಿಸಿದ.

ಸಂಜಯಃ

ತತಃ ಪುನರ್ಮಹಾರಾಜ ಮದ್ರರಾಜಮರಿಂದಮಃ ।
ಅಭ್ಯಭಾಷತ ರಾಧೇಯಃ ಸನ್ನಿವಾರ್ಯೋತ್ತರಂ ವಚಃ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಬಳಿಕ ಪುನಃ, ಮಹಾರಾಜ! ಶತ್ರುನಾಶಕನಾದ ಕರ್ಣ ಶಲ್ಯನ ಉತ್ತರವನ್ನು ತಡೆದು ಹೇಳಿದ.

ನಿರ್ಭರ್ತ್ಸನಾರ್ಥಂ ಶಲ್ಯ ತ್ವಂ ಯತ್ತು ಜಲ್ಪಿತವಾನಸಿ ।
ನಾಹಂ ಶಕ್ಯಸ್ತ್ವಯಾ ವಾಚಾ ವಿಭೀಷಯಿತುಮಾಹವೇ ॥೨॥

ಶಲ್ಯ, ನೀನು ನನ್ನನ್ನು ಹಳಿಯುವುದಕ್ಕೇ ಏನು ಹೇಳಿರುವೆಯೋ ಅದರಿಂದ ನಿನಗೆ ಮಾತಿನಿಂದ ನನ್ನಲ್ಲಿ ಯುದ್ಧ ಭಯವನ್ನು ಉಂಟುಮಾಡಲು ಶಕ್ಯವಾಗದು.

ಯದಿ ಮಾಂ ದೇವತಾಃ ಸರ್ವಾ ಯೋಧಯೇಯುಃ ಸವಾಸವಾಃ ।
ತಥಾಪಿ ಮೇ ಭಯಂ ನ ಸ್ಯಾತ್ ಕಿಮು ಪಾರ್ಥಾತ್ ಸಕೇಶವಾತ್ ॥೩॥

ಇಂದ್ರಾದಿ ಸಮಸ್ತ ದೇವತೆಗಳೂ ನನ್ನೊಡನೆ ಹೋರಾಡಲು ಬಂದರೂ ನನಗೆ ಭಯವಾಗದು. ಇನ್ನು ಕೃಷ್ಣಾರ್ಜುನರಿಗೆ ನಾನು ಅಂಜುವೆನೆ?

ನಾಹಂ ಭೀಷಯಿತುಂ ಶಕ್ಯಃ ಶುದ್ಧಕರ್ಮಾ ಮಹಾಹವೇ ।
ಅಭಿಜಾನೀಹಿ ಶಕ್ತಸ್ತ್ವಮನ್ಯಂ ಭೀಷಯಿತುಂ ರಣೇ ॥೪॥

ಮಹಾಯುದ್ಧದಲ್ಲಿ ಶುದ್ಧಕರ್ಮವನ್ನೇ ಮಾಡುವ ನನ್ನನ್ನು ಹೆದರಿಸಲು ನಿನಗೆ ಶಕ್ಯವಾಗದು. ಬೇರೆಯವರನ್ನು ನೀನು ಹೆದರಿಸಬಲ್ಲೆ. ಇದನ್ನು ತಿಳಿದುಕೊಳ್ಳು.

ನೀಚಸ್ಯ ಬಲಮೇತಾವತ್ ಪಾರುಷ್ಯಂ ಯತ್ತ್ವಮಾತ್ಥ ಮಾಮ್ ।
ಅಶಕ್ತೋ ಹಿ ಗುಣಾನ್ ವಕ್ತುಂ ವಲ್ಗಸೇ ಬಹು ದುರ್ಮತೇ ॥೫॥

ನೀಚನ ಬಲವಿದು, ನೀನು ನನಗೆ ಹೇಳುವ ಮಾತಿನಲ್ಲಿರುವ ಈ ಕಠೋರತೆ, ಗುಣವನ್ನು ಹೇಳಲು ಅಶಕ್ತನಾದ ನೀನು ದುರ್ಬುದ್ಧಿಯವನು, ಬಹು ಪ್ರಲಾಪ ಗೈವೆ.

ನ ಹಿ ಕರ್ಣಃ ಸಮುದ್ಭೂತೋ ಭಯಾರ್ಥಮಿಹ ಮಾರಿಷ ।
ವಿಕ್ರಮಾರ್ಥಮಹಂ ಜಾತೋ ಯಶೋರ್ಥಂ ಚ ತಥಾऽऽತ್ಮನಃ ॥೬॥

ರಾಜನೆ, ಕರ್ಣನು ಜನ್ಮತಳೆದುದು ಭಯಹೊಂದಲು ಅಲ್ಲ. ಪರಾಕ್ರಮ ತೋರಲು, ತನಗಾಗಿ ಕೀರ್ತಿಗಳಿಸಲು ನಾನು ಜನಿಸಿದ್ದೇನೆ.

ಸಹಿಷ್ಣುತ್ವೇನ ಸೌಹಾರ್ದಾತ್ ಮಿತ್ರಕಾರ್ಯವ್ಯಪೇಕ್ಷಯಾ ।
ಕಾರಣೈಸ್ತ್ರಿಭಿರೇತೈಸ್ತ್ವಂ ಶಲ್ಯ ಜೀವಸಿ ಸಾಂಪ್ರತಮ್ ॥೭॥

ನಿನ್ನ ಮಾತನ್ನು ಸಹಿಸಿಕೊಂಡಿದ್ದೇನೆ. ನಿನ್ನಲ್ಲಿ ನನಗೆ ಸೌಹಾರ್ದವಿದೆ. ನನಗೆ ನಿನ್ನಿಂದ ಮಿತ್ರನಾದ ದುರ್ಯೋಧನನ ಕಾರ್ಯವಾಗಬೇಕಿದೆ, ಈ ಮೂರು ಕಾರಣಗಳಿಂದ ಶಲ್ಯ, ನೀನು ಬದುಕಿರುವೆ.

ರಾಜ್ಞಶ್ಚ ಧಾರ್ತರಾಷ್ಟ್ರಸ್ಯ ಕಾರ್ಯಂ ಸುಮಹದುದ್ಯತಮ್ ।
ಮಯಿ ತಚ್ಚಾಹಿತಂ ಶಲ್ಯ ತೇನ ಜೀವಸಿ ಮೇ ಕ್ಷಣಮ್ ॥೮॥

ರಾಜಾ ದುರ್ಯೋಧನನ ಮಹತ್ತಾದ ಕಾರ್ಯ ಈಗ ಆಗಬೇಕಾಗಿದೆ. ಅದರ ಭಾರ ನನ್ನ ಮೇಲಿದೆ. ಅದರಿಂದ ನೀನು ಕ್ಷಣಕಾಲ ಬದುಕಿರುತ್ತಿ.

ಕೃತಶ್ಚ ಸಮಯಃ ಪೂರ್ವಂ ಕ್ಷಂತವ್ಯಂ ವಿಪ್ರಿಯಂ ತವ ।
ಸಮಯಃ ಪರಿಪಾಲ್ಯೋ ಮೇ ತೇನ ಜೀವಸಿ ಮದ್ರಕ ॥೯॥

ನಿನ್ನ ಅಪ್ರಿಯವಾದ ಮಾತನ್ನು ಸಹಿಸಿಕೊಳ್ಳುವೆನೆಂದು ಮಾತು ಕೊಟ್ಟಿದ್ದೇನೆ. ಆ ಮಾತನ್ನು ನಾನು ನಡೆಸಬೇಕಿದೆ. ಅದರಿಂದ ಶಲ್ಯ ನೀನು ಬದುಕಿರುವೆ.

ಋತೇ ಶಲ್ಯಸಹಸ್ರೇಣ ವಿಜಯೇಯಮಹಂ ಪರಾನ್ ।
ಮಿತ್ರದ್ರೋಹಸ್ತು ಪಾಪೀಯಾನಿತಿ ಜೀವಸಿ ಸಾಂಪ್ರತಮ್ ॥೧೦॥

ಸಾವಿರ ಶಲ್ಯರನ್ನು ಕೂಡ ಬಿಟ್ಟು ನಾನು ಶತ್ರುಗಳನ್ನು ಗೆಲ್ಲಬಲ್ಲೆ. ಮಿತ್ರನಾದ

ದುರ್ಯೋಧನನಿಗೆ ದ್ರೋಹ ಬಗೆಯುವುದು ಪಾಪಕರವೆಂದು ಸುಮ್ಮನಿದ್ದೇನೆ. ಅದರಿಂದ ನೀನೀಗ ಬದುಕಿರುವೆ.

ಶಲ್ಯಃ

ನನು ಪ್ರಲಾಪಾಃ ಕರ್ಣೈತೇ ಯಾನ್ ಬ್ರವೀಷಿ ಪರಾನ್ ಪ್ರತಿ ।
ಋತೇ ಕರ್ಣಸಹಸ್ರೇಣ ಶಕ್ಯಾ ಜೇತುಂ ಪರಾ ಯುಧಿ ॥೧೧॥

ಶಲ್ಯ ನುಡಿದ— ಕರ್ಣ, ಶತ್ರುಗಳ ಕುರಿತು ಆಡುವ ನಿನ್ನ ಮಾತುಗಳೆಲ್ಲ ಅರ್ಥವಿಲ್ಲದವು. ವಸ್ತುತಃ ಸಾವಿರ ಕರ್ಣರನ್ನೂ ಬಿಟ್ಟು ಶತ್ರುಗಳನ್ನು ನಾವು ಕೂಡ ಗೆಲ್ಲಬಲ್ಲೆವು.

ಸಂಜಯಃ

ತಥಾ ಬ್ರುವಂತಂ ಪರುಷಂ ಕರ್ಣೋ ಮದ್ರಾಧಿಪಂ ತದಾ ।
ಪರುಷಂ ದ್ವಿಗುಣಂ ಭೂಯಃ ಪ್ರೋವಾಚಾಪ್ರಿಯದರ್ಶನಮ್ ॥೧೨॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಹೀಗೆ ಕಠೋರವಾಗಿ ಶಲ್ಯ ನುಡಿದರೆ ಇನ್ನೂ ಎರಡು ಪಟ್ಟು ಕಠೋರವಾಗಿ ಕರ್ಣ ತನಗೆ ಅಪ್ರಿಯನಾಗಿ ಕಾಣುವ ಶಲ್ಯನಿಗೆ ನುಡಿದ.

ಇದಂ ತ್ವಮೇಕಾಗ್ರಮನಾಃ ಶೃಣು ಮದ್ರಜನಾಧಿಪ ।
ಸನ್ನಿಧೌ ಧೃತರಾಷ್ಟ್ರಸ್ಯ ಪ್ರೋಚ್ಯಮಾನಂ ಮಯಾ ಶ್ರುತಮ್ ॥೧೩॥

ಶಲ್ಯ, ಇದನ್ನು ಏಕಾಗ್ರಮನಸಿನಿಂದ ಕೇಳು. ಇದು ಧೃತರಾಷ್ಟ್ರನ ಸನ್ನಿಧಿಯಲ್ಲಿ ಬ್ರಾಹ್ಮಣರು ಹೇಳಿದ್ದನ್ನು ನಾನು ಕೇಳಿದ್ದಾಗಿದೆ.

ದೇಶಾಂಶ್ಚ ವಿವಿಧಾಂಶ್ಚಿತ್ರಾನ್ ಪೂರ್ವವೃತ್ತಾಂಶ್ಚ ಪಾರ್ಥಿವಾನ್ ।
ಬ್ರಾಹ್ಮಣಾಃ ಕಥಯಂತಿ ಸ್ಮ ಧೃತರಾಷ್ಟ್ರನಿವೇಶನೇ ॥೧೪॥

ಆಶ್ಚರ್ಯಕರವಾದ ನಾನಾ ದೇಶಗಳನ್ನೂ ಹಿಂದೆ ಆಗಿಹೋದ ರಾಜರನ್ನೂ ಧೃತರಾಷ್ಟ್ರನ ಅರಮನೆಯಲ್ಲಿ ಬ್ರಾಹ್ಮಣರು ಬಣ್ಣಿಸುತ್ತಿದ್ದರು.

ತತ್ರ ವೃದ್ಧಃ ಪುರಾವೃತ್ತಾಃ ಕಥಾಃ ಕಶ್ಚಿದ್ ದ್ವಿಜೋತ್ತಮಃ ।
ಬಾಹ್ಲೀಕದೇಶಂ ಮದ್ರಾಂಶ್ಚ ಕುತ್ಸಯನ್ ವಾಕ್ಯಮಬ್ರವೀತ್ ॥೧೫॥

ಆಗ ವೃದ್ಧನಾದ ಒಬ್ಬ ಬ್ರಾಹ್ಮಣೋತ್ತಮನು ಹಿಂದೆ ನಡೆದ ಸಂಗತಿಗಳ ಕುರಿತು ಬಾಹ್ಲೀಕದೇಶವನ್ನೂ ಮದ್ರದೇಶವನ್ನೂ ನಿಂದಿಸುತ್ತ ಈ ಮಾತನ್ನಾಡಿದ.

ಬಹಿಷ್ಕೃತಾ ಹಿಮವತಾ ಗಂಗಯಾ ಚ ತಿರಸ್ಕೃತಾಃ ।
ಸರಸ್ವತ್ಯಾ ಯಮುನಯಾ ಕುರುಕ್ಷೇತ್ರೇಣ ಚಾಪಿ ಯೇ ॥೧೬॥

ಪಂಚಾನಾಂ ಸಿಂಧುಷಷ್ಠಾನಾಂ ನದೀನಾಂ ಯೇಽಂತರಾಶ್ರಿತಾಃ ।
ತಾನ್ ಧರ್ಮಬಾಹ್ಯಾನ್ ಅಶುಚೀನ್ ಬಾಹ್ಲೀಕಾನಪಿ
ವರ್ಜಯೇತ್ ॥೧೭॥

ಹಿಮಾಲಯದಿಂದೀಚೆ ಗಂಗಾ ಸರಸ್ವತೀ ಯಮುನಾ ಕುರುಕ್ಷೇತ್ರಗಳಿಂದಾಚೆ, ಐದು ನದಿಗಳು ಮತ್ತು ಆರನೆಯದಾದ ಸಿಂಧೂನದಿ ಇವುಗಳ ನಡುವೆ ಇರುವ, ಧರ್ಮಬಾಹಿರವಾಗಿದ್ದು ಅಶುಚಿಯಾಗಿರುವ ಬಾಹ್ಲೀಕದೇಶವನ್ನು ವರ್ಜಿಸಬೇಕು.

ಗೋವರ್ಧನೋ ನಾಮ ವಟಃ ಸುಭಾಂಡಂ ನಾಮ ಪತ್ತನಮ್ ।
ಏತದ್ ರಾಜನ್ ಕಲಿದ್ವಾರಮಾಕುಮಾರಾತ್ ಸ್ಮರಾಮ್ಯಹಮ್ ॥೧೮॥

ಗೋವರ್ಧನ ಎಂಬ ಗೋಹತ್ಯಸ್ಥಳ ಮತ್ತು ಸುಭಾಂಡವೆಂಬ ಮದ್ಯಪಾತ್ರೆಗಳ ಸ್ಥಳ ಇವು, ರಾಜನೆ, ಕಲಿಗೆ ದ್ವಾರವೆಂದು ನಾನು ಬಾಲ್ಯದಿಂದಲೂ ನೆನಪಿನಲ್ಲಿಟ್ಟುಕೊಂಡಿದ್ದೇನೆ.

ಕಾರ್ಯೇಣಾತ್ಯರ್ಥಗೂಢೇನ ಬಾಹ್ಲೀಕೇಷೂಷಿತಂ ಮಯಾ ।
ತತ ಏಷಾಂ ಸಮಾಚಾರಃ ಸಂವಾಸಾದ್ ವಿದಿತೋ ಮಯಾ ॥೧೯॥

ಬಲುರಹಸ್ಯವಾದ ಕಾರ್ಯಕ್ಕಾಗಿ ಬಾಹ್ಲೀಕದೇಶದಲ್ಲಿ ನಾನು ವಾಸಮಾಡಬೇಕಾಯಿತು. ಅಲ್ಲಿ ವಾಸಮಾಡಿದ್ದರಿಂದ ಇವರ ಸಮಾಚಾರ ನನಗೆ ತಿಳಿಯಿತು.

ಶಾಕಲಂ ನಾಮ ನಗರಮಾಪಗಾ ನಾಮ ನಿಮ್ನಗಾ ।
ಚಂಡಾಲಾ ನಾಮ ಬಾಹ್ಲೀಕಾಸ್ತೇಷಾಂ ವೃತ್ತಂ ಸುನಿಂದಿತಮ್ ॥೨೦॥

ಶಾಕಲವೆಂಬ ನಗರ, ಆಪಗಾ ಎಂಬ ನದಿ. ಇಲ್ಲಿ ಚಂಡಾಲರೆಂಬ ಬಾಹ್ಲೀಕರು ಇರುತ್ತಾರೆ. ಅವರ ಆಚರಣೆ ಬಹಳ ನಿಂದಿತವಾಗಿದೆ.

ಪಾನಂ ಗುಡಾಸವಂ ಪೀತ್ವಾ ಗೋಮಾಂಸಂ ಲಶುನೈಃ ಸಹ ।
ಅಪೂಪಸಕ್ತುವಾಟ್ಯಾನಾಮಾಶಿತಾಃ ಶೀಲವರ್ಜಿತಾಃ ॥೨೧॥

ಬೆಲ್ಲದಿಂದ ಮಾಡಿದ ಮದ್ಯವನ್ನು ಕುಡಿದು ಬೆಳ್ಳುಳ್ಳಿಗಳೊಂದಿಗೆ ಗೋಮಾಂಸವನ್ನೂ ಅಪೂಪ ಸಕ್ತು ಯವಾನ್ನಗಳನ್ನೂ ಉಣ್ಣುವವರು, ಶೀಲವಿಲ್ಲದವರು.

ಗಾಯಂತ್ಯಥ ಚ ನೃತ್ಯಂತಿ ಸ್ತ್ರಿಯೋ ಮತ್ತಾ ವಿವಾಸಸಃ ।
ನಗರಾಪಣವೇಶೇಷು ಬಹಿರ್ಮಾಲ್ಯಾನುಲೇಪನಾಃ ॥೨೨॥

ಸ್ತ್ರೀಯರು ನಗರದ ಅಂಗಡಿ ಸೂಳೆಗೇರಿಗಳಲ್ಲಿ ಹೊರಗೆ ಗಂಧಮಾಲೆಗಳನ್ನು ಧರಿಸಿ ಪಾನಮತ್ತರಾಗಿ ವಿವಸ್ತ್ರರಾಗಿ ಹಾಡುತ್ತಾರೆ, ಕುಣಿಯುತ್ತಾರೆ.

ಮತ್ತಾಃ ಪ್ರಗೀತವಿರುತೈಃ ಖರೋಷ್ಟ್ರನಿನದೋಪಮೈಃ ।
ಅನಾವೃತಾ ಮೈಥುನೇ ತಾಃ ಕಾಮಾಚಾರಾಶ್ಚ ಸರ್ವಶಃ ॥೨೩॥

ಮತ್ತರಾಗಿ ಆ ಸ್ತ್ರೀಯರು ಕತ್ತೆ ಒಂಟೆಗಳ ಧ್ವನಿಯಂತೆ ಹಾಡುಗಳನ್ನು ಕಿರುಚುತ್ತಾರೆ. ಮೈಥುನದಲ್ಲಿ ಅವರು ಮುಚ್ಚುಮರೆ ಇಲ್ಲದೆ ಪೂರ್ತಿ ಸ್ವೇಚ್ಛಾಚಾರಿಗಳಾಗಿರುತ್ತಾರೆ.

ಆಹುರನ್ಯೋನ್ಯಶುಕ್ತಾನಿ ಪ್ರಬ್ರುವಾಣಾ ಮದೋತ್ಕಟಾಃ ।
ಹೇ ಹತೇ ಹೇ ಹತೇತ್ಯೇವಂ ಸ್ವಾಮಿಭರ್ತೃಹತೇತಿ ಚ ॥೨೪॥

ಈ ಸ್ತ್ರೀಯರು ಮತ್ತೇರಿ ಪರಸ್ಪರ ಬೈಗುಳ ಮಾತುಗಳನ್ನು ದೊಡ್ಡಧ್ವನಿಯಿಂದ ಹೇಳುತ್ತಾರೆ. ಒಬ್ಬಳು ಮಿಂಡಿ ಇನ್ನೊಬ್ಬಳು ಮಿಂಡಿಯನ್ನು ನಿನ್ನನ್ನು ಮಿಂಡ ಹೊಡೆದನಲ್ಲೆ? ಎನ್ನುತ್ತಾಳೆ. ನೀನೂ ಕೂಡ ಮಿಂಡನಿಂದ ಹೊಡೆಸಿಕೊಂಡಿಲ್ಲವೆ ಎನ್ನುತ್ತಾಳೆ ಇನ್ನೊಬ್ಬಳು. ಅತ್ತೆಯನ್ನೂ ಗಂಡನನ್ನೂ ಹೊಡೆದವಳು ನೀನೆಂದು ಮತ್ತೊಬ್ಬಳು ಬಯ್ಯುತ್ತಾಳೆ.

ಆಕ್ರೋಶಂತ್ಯಃ ಪ್ರನೃತ್ಯಂತಿ ವ್ರಾತ್ಯಾಃ ಪರ್ವಸ್ವಸಂಯತಾಃ ।
ತಾಸಾಂ ಕಿಲಾವಲಿಪ್ತಾನಾಂ ನಿವಸನ್ ಕುರುಜಾಂಗಲೇ ॥೨೫॥

ಕಶ್ಚಿದ್ ಬಾಹ್ಲೀಕದುಷ್ಟಾನಾಂ ನಾತಿಹೃಷ್ಟಮನಾ ಜಗೌ ।
ಸಾ ನೂನಂ ಬೃಹತೀ ಗೌರೀ ಸೂಕ್ಷ್ಮಕಂಬಲವಾಸಿನೀ ॥೨೬॥

ಮಾಮನುಸ್ಮರತೀ ಶೇತೇ ಬಾಹ್ಲೀಕಂ ಕುರುವಾಸಿನಮ್ ।
ಶತದ್ರುಂ ನು ಕದಾ ತೀರ್ತ್ವಾ ತಾಂ ಚ ರಮ್ಯಾಮಿರಾವತೀಮ್ ॥೨೭॥
ಗತ್ವಾ ಸ್ವದೇಶಂ ದ್ರಕ್ಷ್ಯಾಮಿ ಸ್ಥೂಲಶಂಖಾಃ ಶುಭಾಃ ಸ್ತ್ರಿಯಃ ॥೨೮॥

ಆ ಸ್ತ್ರೀಯರು 'ವ್ರಾತ್ಯ'ರು, ವಿವಾಹಸಂಸ್ಕಾರವನ್ನೆ ಒಲ್ಲದವರು. ಹಬ್ಬಗಳಲ್ಲಿ ಪಾನಮತ್ತರಾಗಿ ಸ್ವಚ್ಛಂದವಾಗಿ ಪರಸ್ಪರ ಕೂಗಾಡುತ್ತ ಕುಣಿಯುತ್ತಾರೆ. ದರ್ಪದಿಂದ ಬೀಗಿರುತ್ತಾರೆ. ಅಂಥ ಬಾಹ್ಲೀಕದೇಶದ ದುಷ್ಟರಲ್ಲಿ ಒಬ್ಬನು ಕುರುಜಾಂಗಲದಲ್ಲಿ ವಾಸಮಾಡುತ್ತ ಮನಸಿನಲ್ಲಿ ಬೇಸರಗೊಂಡು ಹಾಡಿದನಂತೆ– 'ಬೆಳ್ಳಗಿರುವ ಸ್ಥೂಲಕಾಯದ ಆ ನನ್ನ ಪ್ರೇಯಸಿ ಸಣ್ಣಕಂಬಳಿಯುಡುವಳು, ನಿಶ್ಚಿತವಾಗಿ, ಬಾಹ್ಲೀಕ ದೇಶದವನಾಗಿದ್ದೂ ಕುರುದೇಶದಲ್ಲಿ ವಾಸಿಸುತ್ತಿರುವ ನನ್ನನ್ನೇ ನೆನೆಯುತ್ತ ಮಲಗುತ್ತಾಳೆ. ನಾನೆಂದು ರಮ್ಯವಾದ ಶತದ್ರು ನದಿಯನ್ನೂ ಇರಾವತೀನದಿಯನ್ನೂ ದಾಟಿ ನನ್ನ ದೇಶವನ್ನು ಹೋಗಿ ಸೇರಿ, ಕಿವಿಗಳಿಗೆ ಶಂಖದ ದೊಡ್ಡ ಜುಮುಕಿ ಹಾಕಿಕೊಂಡಿರುವ ಆ ನಮ್ಮ ದೇಶದ ಸುಂದರ ಸ್ತ್ರೀಯರನ್ನು ನೋಡುವೆನೊ!' ಎಂದು.

ಮನಃಶಿಲೋಜ್ವಲಾಪಾಂಗ್ಯೋ ಗೌರ್ಯಸ್ತ್ರಿಕಕುದಾಂಜನಾಃ ।
ಕಂಬಲಾಜಿನಸಂವೀತಾಃ ಕ್ರೀಡಂತ್ಯಃ ಪ್ರಿಯದರ್ಶನಾಃ ॥೨೯॥

'ಮಣಿಶಿಲೆಯಿಂದ ಕಡೆಗಣ್ಣಿಗೆ ಬಣ್ಣ ಬಳಿದು, ಮೂರು ಶ್ರೇಷ್ಠದ್ರವ್ಯಗಳಿಂದ ಕಣ್ಣುಗಳಿಗೆ ಕಾಡಿಗೆ ಹಾಕಿಕೊಂಡಿರುವ, ಕಂಬಳಿ ಚರ್ಮಗಳ ಉಡುಗೆ ತೊಟ್ಟು ವಿಲಾಸ ತೋರುವ, ನೋಡುವ ಕಣ್ಣುಗಳಿಗೆ ಹಬ್ಬ ಉಂಟುಮಾಡುವ ಗೌರವರ್ಣದ ಆ ಸ್ತ್ರೀಯರನ್ನು ಎಂದು ನೋಡುವೆನೊ!' ಎಂದು.

ಶಮೀಪೀಲುಕರೀರಾಣಾಂ ವನೇಷು ಸುಖವರ್ತ್ಮಸು ।
ಅಪೂಪಾನ್ ಸಕ್ತುಪಿಂಡಾಂಶ್ಚ ಪ್ರಾಶ್ನಂತೋ ಮದಿರಾನ್ವಿತಾನ್ ॥೩೦॥

ಮೃದಂಗಾನಕಶಂಖಾನಾಂ ಮರ್ದಲಾನಾಂ ಚ ನಿಸ್ವನೈಃ ।
ಖರೋಷ್ಟ್ರಾಶ್ವತರೈಶ್ಚೈವ ಮತ್ತಾ ಯಾಸ್ಯಾಮಹೇ ಸುಖಮ್ ॥೩೦॥

'ಬನ್ನಿ–ಗೋನು–ಬಿದಿರ ಕಾಡುಗಳ ಮಧ್ಯದಲ್ಲಿ ಸುಖಕರವಾದ ಮಾರ್ಗಗಳಲ್ಲಿ ಅಪೂಪ ಸಕ್ತು ಉಂಡೆಗಳನ್ನು ತಿನ್ನುತ್ತ ಮದ್ಯಪಾನ ಮಾಡುತ್ತ 'ಮೃದಂಗ ಆನಕ ಶಂಖ ಮದ್ದಳೆಗಳ ಧ್ವನಿಮಾಡುತ್ತ ಕತ್ತೆ ಒಂಟೆ ಹೇಸರಗತ್ತೆಗಳ ಮೇಲೇರಿ ಪಾನಮತ್ತರಾಗಿ ಸುಖವಾಗಿ ನಾವು ಎಂದು ವಿಹಾರ ಮಾಡುವೆವೋ!' ಎಂದು

ಪಥಿಷು ಪ್ರಬಲಾ ಭೂತ್ವಾ ಮೈಥುನಂ ಕುರ್ವತೇऽಧಿಕಮ್ ।
ಚೇಲಾಪಹಾರಂ ಕುರ್ವಾಣಾಃ ಸಂಭವಿಷ್ಯಾಮ ಭೂರಿಶಃ ॥೩೨॥

ಮಾರ್ಗಮಧ್ಯದಲ್ಲಿ ಯಾರು ಅಬಲೆಯರು ಪ್ರಬಲೆಯರಾಗಿ ಬಟ್ಟೆ ಸೆಳೆದು ಅಧಿಕವಾಗಿ ಮೈಥುನ ಮಾಡುವರೋ ಆ ಸ್ತ್ರೀಯರನ್ನು ನಾವೆಂದು ಬಹಳವಾಗಿ ಕೂಡುವೆವೋ!' ಎಂದು.

ಏವಂಶೀಲೇಷು ವ್ರಾತ್ಯೇಷು ಬಾಹ್ಲೀಕೇಷು ದುರಾತ್ಮಸು ।
ಕಶ್ಚೇತಯಾನೋ ನಿವಸೇನ್ಮುಹೂರ್ತಮಪಿ ಮಾನವಃ ॥೩೩॥

ಇಂಥ ಶೀಲಉಳ್ಳ, ಸಂಸ್ಕಾರಹೀನರಾದ, ದುರ್ಬುದ್ಧಿಉಳ್ಳ ಬಾಹ್ಲೀಕರ ನಡುವೆ ಬುದ್ಧಿ ಇರುವ ಯಾವ ಮಾನವನು ಮುಹೂರ್ತಕಾಲವಾದರೂ ವಾಸಮಾಡಬಲ್ಲ?

ಕರ್ಣಃ

ಈದೃಶಾ ಬ್ರಾಹ್ಮಣೇನೋಕ್ತಾ ಬಾಹ್ಲೀಕಾ ಮೋಘಚಾರಿಣಃ ।
ಯೇಷಾಂ ಷಡ್ಭಾಗಹರ್ತಾ ತ್ವಮುಭಯೋಃ ಪುಣ್ಯಪಾಪಯೋಃ॥೩೪॥

ಕರ್ಣನು ನುಡಿದ— ಬ್ರಾಹ್ಮಣನು ಹೇಳಿದಂತೆ ಈ ರೀತಿಯ ನಿಷ್ಫಲಕರ್ಮ ಮಾಡುವವರು ಬಾಹ್ಲೀಕರು. ಅವರು ಮಾಡುವ ಪುಣ್ಯಪಾಪಗಳೆರಡರಲ್ಲಿಯೂ ಆರನೆ ಒಂದು ಭಾಗವನ್ನು ರಾಜನಾಗಿ ನೀನು ವಸೂಲಿ ಮಾಡುವೆ ತಾನೆ?

ಇತ್ಯುಕ್ತ್ವಾ ಬ್ರಾಹ್ಮಣಃ ಸಾಧುರುತ್ತರಂ ಪುನರುಕ್ತವಾನ್ ।
ಬಾಹ್ಲೀಕೇಷ್ವವಿನೀತೇಷು ಪ್ರೋಚ್ಯಮಾನಂ ನಿಬೋಧ ತತ್ ॥೩೫॥

ಶಲ್ಯ, ಆ ಸಾಧು ಬ್ರಾಹ್ಮಣನು ಇಷ್ಟು ಹೇಳಿ ಪುನಃ ಮುಂದುವರಿದು ಅವಿನೀತರಾದ ಬಾಹ್ಲೀಕರ ವಿಷಯದಲ್ಲಿ ಹೇಳಿದ, ಅದನ್ನೂ ಹೇಳುತ್ತೇನೆ, ಕೇಳು.

ತತ್ರ ಸ್ಮ ರಾಕ್ಷಸಾ ಗಾಂತಿ ಸದಾ ಕೃಷ್ಣಚತುರ್ದಶೀಮ್ ।
ನಗರೇ ಶಾಕಲೇ ಸ್ಫೀತೇ ಆಹತ್ಯ ನಿಶಿ ದುಂದುಭಿಮ್ ॥೩೬॥

'ಬಾಹ್ಲೀಕದೇಶದಲ್ಲಿರುವ ರಾಕ್ಷಸರು ಸಮೃದ್ಧವಾದ ಶಾಕಲನಗರದಲ್ಲಿ ಕೃಷ್ಣಪಕ್ಷ ಚತುರ್ದಶಿಯ ರಾತ್ರಿಯಲ್ಲಿ ದುಂದುಭಿಯನ್ನು ಬಾರಿಸಿ ಸದಾ ಹಾಡುತ್ತಾರೆ.

ಕದಾ ಚ ಹೈಲಿಕಾ ಗಾಥಾ ಪುನರ್ಗಾಸ್ಯಾಮಿ ಶಾಕಲೇ ।
ಗವ್ಯಸ್ಯ ತೃಪ್ತಾ ಮಾಂಸಸ್ಯ ಪೀತ್ವಾ ಗೌಡಂ ಸುರಾಸವಮ್ ॥೩೭॥

ಶಾಕಲನಗರದಲ್ಲಿ ಗೋಮಾಂಸವನ್ನು ತೃಪ್ತಿಯಾಗುವಷ್ಟು ತಿಂದು, ಬೆಲ್ಲದಿಂದ ತಯಾರಾದ ಮದ್ಯವನ್ನು ಕುಡಿದು ಲೀಲೆಯ ಕುಣಿತದ ಹಾಡುಗಳನ್ನು ಪುನಃ ಪುನಃ ಎಂದು ಹಾಡುವೆನೋ!

ಗೌರೀಭಿಃ ಸಹ ನಾರೀಭಿರ್ಬೃಹತೀಭಿಃ ಸ್ವಲಂಕೃತಾಃ ।
ಪಲಾಂಡುಗಂಡೂಷಯುತಾಃ ಖಾದಂತಶ್ಚೈಡಕಾನ್ ಬಹೂನ್ ॥೩೮॥

ಬಾಯಿತುಂಬ ಈರುಳ್ಳಿ ತಿಂದು, ಬಹಳ ಕುರಿಮಾಂಸ ಉಂಡು, ಚೆನ್ನಾಗಿ ಅಲಂಕೃತರಾಗಿ ಗೌರವರ್ಣದ ಸ್ಥೂಲಕಾಯದ ನಾರಿಯರೊಂದಿಗೆ ರಾಕ್ಷಸರು ಹಾಡುತ್ತಾರೆ.

ವಾರಾಹಂ ಕೌಕ್ಕುಟಂ ಮಾಂಸಂ ಗವ್ಯಂ ಗಾರ್ದಭಮೌಷ್ಟ್ರಕಮ್ ।
ಧಾನಾಶ್ಚ ಯೇ ನ ಖಾದಂತಿ ತೇಷಾಂ ಜನ್ಮ ನಿರರ್ಥಕಮ್ ॥೩೯॥

'ಹಂದಿ ಕೋಳಿ ಹಸು ಕತ್ತೆ ಒಂಟೆ ಕುರಿಗಳ ಮಾಂಸವನ್ನು ಯಾರು ತಿನ್ನುವುದಿಲ್ಲವೋ ಅವರ ಜನ್ಮ ನಿರರ್ಥಕ.'

ಏವಂ ಗಾಯಂತಿ ತೇ ಮತ್ತಾಃ ಶೀಧುನಾ ಪೀಲುಕಾವನೇ ।
ಸಬಾಲವೃದ್ಧಾಃ ಕ್ರಂದಂತಿ ತೇಷಾಂ ಧರ್ಮಃ ಕಥಂ ಭವೇತ್ ॥೪೦॥

ಹೀಗೆ ಅಲ್ಲಿ ಆಬಾಲವೃದ್ಧರು ಮದ್ಯದಿಂದ ಅಮಲೇರಿ ಗೋನುಮರದ ಕಾಡುಗಳಲ್ಲಿ ಕೂಗಾಡುತ್ತಾರೆ, ಹಾಡುತ್ತಾರೆ, ಅವರಲ್ಲಿ ಧರ್ಮ ಹೇಗೆ ಇದ್ದೀತು?

ಯತ್ರ ಲೋಕೇಶ್ವರಃ ಕೃಷ್ಣೋ ದೇವದೇವೋ ಜನಾರ್ದನಃ ।
ವಿಸ್ಮೃತಃ ಪುರುಷೈರುಗ್ರೈಸ್ತೇಷಾಂ ಧರ್ಮಃ ಕಥಂ ಭವೇತ್ ॥೪೧॥

ಲೋಕೇಶ್ವರನಾದ ಜನಾರ್ದನ ದೇವದೇವ ಶ್ರೀಕೃಷ್ಣನನ್ನು ನೆನೆಯದ ಉಗ್ರರಾದ ಬಾಹ್ಲೀಕ ಪುರುಷರಲ್ಲಿ ಧರ್ಮ ಹೇಗೆ ಇರಬಲ್ಲುದು?

ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ ।
ಯದನ್ಯೋಽಪ್ಯುಕ್ತವಾನಸ್ಮಾನ್ ಬ್ರಾಹ್ಮಣಃ ಕುರುಸಂಸದಿ ॥೪೨॥

ಶಲ್ಯ, ಇದನ್ನು ತಿಳಿದುಕೊಳ್ಳು. ಅಯ್ಯೋ ಇನ್ನೂ ಹೇಳುತ್ತೇನೆ, ಕೇಳು. ಇನ್ನೊಬ್ಬ ಬ್ರಾಹ್ಮಣನೂ ಕೂಡ ಕೌರವರ ಸಮಾವೇಶದಲ್ಲಿ ನಮಗೆ ಹೇಳಿದ್ದಾನೆ.

ಪಂಚನದ್ಯೋ ವಹನ್ತ್ಯೇತಾ ಯತ್ರ ಪೀಲುವನಾನ್ಯುತ ।
ಶತದ್ರುಶ್ಚ ವಿಪಾಶಾ ಚ ತೃತೀಯೈರಾವತೀ ತಥಾ ॥೪೩॥
ಚಂದ್ರಭಾಗಾ ವಿತಸ್ತಾ ಚ ಸಿಂಧುಷಷ್ಠಾ ಮಹಾನದೀ ॥೪೪॥

ಮದ್ಯತೆಗೆಯುವ ಗೋಣಿಮರಗಳ ಕಾಡುಗಳ ಬಳಿಯಲ್ಲಿ 'ಶತದ್ರು–ವಿಪಾಶಾ–ಐರಾವತೀ–ಚಂದ್ರಭಾಗಾ–ವಿತಸ್ತಾ' (ಸಟ್ಲೆಜ್ ಬೀಯಾಸ್ ರಾವೀ ಚೀನಾಬ್ ಝೀಲಂ) ಎಂದು ಐದು ನದಿಗಳು ಹರಿಯುತ್ತವೆ. ಆರನೆಯದಾಗಿ ಸಿಂಧೂ ಮಹಾನದಿಯೂ ಹರಿಯುತ್ತದೆ.

ಆರಟ್ಟಾ ನಾಮ ಬಾಹ್ಲೀಕಾ ಏತೇಷ್ವಾರ್ಯೋ ಹಿ ನೋ ವಸೇತ್ ॥೪೫॥

ಇಲ್ಲಿ ಆರಟ್ಟ ಎಂಬ ಬಾಹ್ಲೀಕದೇಶಗಳಿವೆ. ಆರ್ಯಪುರುಷನು ಇಲ್ಲಿ ವಾಸ ಮಾಡಬಾರದು.

ವ್ರಾತ್ಯಾನಾಂ ದಾಸಮೀಯಾನಾಂ ವೈದೇಹಾನಾಮಯಜ್ವನಾಮ್ ।
ನ ದೇವಾಃ ಪ್ರತಿಗೃಹ್ಣಂತಿ ಪಿತರೋ ಬ್ರಾಹ್ಮಣಾಸ್ತಥಾ ॥೪೬॥

ತೇಷಾಂ ಪ್ರನಷ್ಟಧರ್ಮಾಣಾಂ ಬಾಹ್ಲೀಕಾನಾಮಿತಿ ಶ್ರುತಿಃ ।
ಬ್ರಾಹ್ಮಣೇನ ಯಥಾ ಪ್ರೋಕ್ತಂ ವಿದುಷಾ ಸಾಧುಸಂಸದಿ ॥೪೭॥

'ದಾಸರಿಂದ ಶೂದ್ರರಿಂದ ಬ್ರಾಹ್ಮಣಿಯಲ್ಲಿ ಹುಟ್ಟಿದ ಸಂತಾನ ದಾಸಮೀಯರು.

ವೈಶ್ಯರಿಂದ ಬ್ರಾಹ್ಮಣಿಯಲ್ಲಿ ಜನಿಸಿದವರು ವೈದೇಹಕರು. ಇಬ್ಬರೂ ಸಂಸ್ಕಾರಹೀನರು ಯಜ್ಞಮಾಡದವರು ಧರ್ಮಬಾಹಿರರು ಬಾಹ್ಲೀಕರು. ಇವರು ಕೊಡುವ ಹವ್ಯ–ಕವ್ಯಗಳನ್ನು ದೇವತೆಗಳೂ ಪಿತೃಗಳೂ ಬ್ರಾಹ್ಮಣರೂ ಸ್ವೀಕರಿಸುವುದಿಲ್ಲ ಎಂದು ನಾವು ಕೇಳಿದ್ದೇವೆ.' ಇದು ಧರ್ಮವೆತ್ತನಾದ ಬ್ರಾಹ್ಮಣನು ಸಜ್ಜನರ ಸಮಾವೇಶದಲ್ಲಿ ಹೇಳಿದ ಮಾತು.

ಕಾಷ್ಠಕುಂಡೇಷು ಬಾಹ್ಲೀಕಾ ಮೃಣ್ಮಯೇಷು ಚ ಭುಂಜತೇ ।
ಸಕ್ತುಮದ್ಯಾವಲಿಪ್ತೇಷು ಶ್ವಾವಲೀಢೇಷು ನಿರ್ಘೃಣಾಃ ॥೪೮॥

ಆವಿಕಂ ಚೌಷ್ಟ್ರಕಂ ಚೈವ ಕ್ಷೀರಂ ಗಾರ್ದಭಮೇವ ಚ ।
ತದ್ವಿಕಾರಾಂಶ್ಚ ಬಾಹ್ಲೀಕಾಃ ಖಾದಂತಿ ಚ ಪಿಬಂತಿ ಚ ॥೪೯॥

ಕರುಣೆ ಇಲ್ಲದ ವಾಹೀಕರು ಸಕ್ತು ಮದ್ಯ ಲೇಪಯುಕ್ತವಾದ, ನಾಯಿ ನೆಕ್ಕಿರುವ ಮರದ ಮರಿಗೆ, ಮಣ್ಣಿನ ಶರಾವೆಗಳಲ್ಲಿ ಕುರಿ ಒಂಟೆ ಕತ್ತೆಗಳ ಮಾಂಸ ತಿನ್ನುತ್ತಾರೆ, ಅವುಗಳ ಹಾಲು ಕುಡಿಯುತ್ತಾರೆ, ಅವುಗಳಿಂದಾಗುವ ಬೆಣ್ಣೆ ತುಪ್ಪ ಉಣ್ಣುತ್ತಾರೆ.

ಪಾತ್ರಸಂಕರಿಣೋ ಜಾಲ್ಮಾಃ ಸರ್ವಾನ್ನಕ್ಷೀರಭೋಜನಾಃ ।
ಆರಟ್ಟಾ ನಾಮ ಬಾಹ್ಲೀಕಾ ವರ್ಜನೀಯಾ ವಿಪಶ್ಚಿತಾ ॥೫೦॥

ಆರಟ್ಟರೆಂಬ ಬಾಹ್ಲೀಕರು ನೀಚರು. ಒಂದೇ ಪಾತ್ರೆಯಲ್ಲಿ ಎಲ್ಲರೂ ಅನ್ನ ಹಾಲು ಉಣ್ಣುತ್ತಾರೆ. ತಿಳಿದವರು ಇವರ ಸಹವಾಸದಿಂದ ದೂರವಿರಬೇಕು.

ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ ।
ಯದನ್ಯೋಽಪ್ಯುಕ್ತವಾನ್ ಮಹ್ಯಂ ಬ್ರಾಹ್ಮಣಃ ಕುರುಸಂಸದಿ ॥೫೧॥

ಶಲ್ಯ, ಇದನ್ನು ನೀನು ತಿಳಿದುಕೊಳ್ಳು, ಅಯ್ಯೋ! ಇನ್ನೂ ಹೇಳುತ್ತೇನೆ, ಕೇಳು. ಇನ್ನೊಬ್ಬ ಬ್ರಾಹ್ಮಣನೂ ಕೌರವರ ಸಮಾವೇಶದಲ್ಲಿ ನನಗೆ ಇದನ್ನು ಹೇಳಿದ್ದಾನೆ.

ಯುಗಂಧರೇ ಪಯಃ ಪೀತ್ವಾ ಪ್ರೋಷ್ಯ ಚಾಪ್ಯಚ್ಯುತಸ್ಥಳೇ ।
ತದ್ವದ್ಭೂತಿಲಯೇ ಸ್ನಾತ್ವಾ ಕಥಂ ಸ್ವರ್ಗಂ ಗಮಿಷ್ಯತಿ ॥೫೨॥

ಪೇಯ ನಿಯಮವಿಲ್ಲದ ಯುಗಂಧರ ನಗರದಲ್ಲಿ ಒಂಟೆಯ ಹಾಲು ಕುಡಿದರೆ,

ಸುರತ ನಿಯಮವಿಲ್ಲದ ಅಚ್ಯುತಸ್ಥಳ ನಗರದಲ್ಲಿ ವಾಸ ಕೈಗೊಂಡರೆ ಹೊಲಗೇರಿ ಮಯವಾದ ಭೂತಿಲಯನಗರದಲ್ಲಿ ಹೊಲೆಯರೊಂದಿಗೆ ಸ್ನಾನಮಾಡಿದರೆ ಸ್ವರ್ಗಕ್ಕೆ ಹೇಗೆ ಹೋಗಲು ಸಾಧ್ಯ?

ಪಂಚನದ್ಯೋ ವಹಂತ್ಯೇತಾ ಯತ್ರ ನಿಃಸೃತ್ಯ ಪರ್ವತಾತ್ ।
ಆರಟ್ಟಾ ನಾಮ ಬಾಹ್ಲೀಕಾ ನ ತೇಷ್ವಾರ್ಯೋ ದ್ವ್ಯಹಂ ವಸೇತ್ ॥೫೩॥

ಪಂಚನದಿಗಳು ಪರ್ವತದಿಂದ ಇಳಿದು ಹರಿವ ಪ್ರದೇಶಗಳು ಆರಟ್ಟವೆನಿಸುವ ಬಾಹ್ಲೀಕ ದೇಶಗಳು. ಅಲ್ಲಿ ಆರ್ಯನು ಎರಡು ದಿನವೂ ವಾಸಮಾಡಬಾರದು.

ಬಹ್ಲೀ ನಾಮ ಬಲೀ ಕಶ್ಚ ವಿಪಾಶಾಯಾಂ ಪಿಶಾಚಕೌ ।
ತಯೋರಪತ್ಯಂ ಬಾಹ್ಲೀಕಾ ನೈಷಾ ಸೃಷ್ಟಿಃ ಪ್ರಜಾಪತೇಃ ॥೫೪॥

'ಬಹ್ಲೀ' ಎಂದು ಒಬ್ಬಳು ಪಿಶಾಚಿ ಮತ್ತು 'ಕ' ಎಂದು ಒಬ್ಬ ಬಲಿಷ್ಠನಾದ ಪಿಶಾಚ. ಇವರಿಬ್ಬರ ಸಂತಾನವೇ ಬಾಹ್ಲೀಕರು. ಇದು ಬ್ರಹ್ಮನ ಸೃಷ್ಟಿಯಲ್ಲ.

ತೇ ಕಥಂ ವಿವಿಧಾನ್ ಧರ್ಮಾನ್ ಜ್ಞಾಸ್ಯಂತೇ ಹೀನಯೋನಯಃ ॥೫೫॥

ಈ ಬಾಹ್ಲೀಕರು ಹೀನಯೋನಿ ಜಾತರು. ನಾನಾವಿಧವಾದ ಧರ್ಮವನ್ನು ಹೇಗೆ ತಿಳಿಯಬಲ್ಲರು?

ಕಾರಸ್ಕರಾನ್ ಮಾಹಿಷಕಾನ್ ಕರಂಭಾನ್ ಕಟಕಾಲಿಕಾನ್ ।
ಕರ್ಕೋಟವೀರಕಾಂಬಷ್ಠಾನ್ ಉನ್ಮಾರ್ಗಾಂಶ್ಚ ವಿವರ್ಜಯೇತ್ ॥೫೬॥

ಕಾರಸ್ಕರ–ಮಾಹಿಷಕ–ಕರಂಭ–ಕಟಕಾಲಿಕ–ಕರ್ಕೋಟ–ವೀರಕ–ಅಂಬಷ್ಠರು ಎಲ್ಲರೂ ದಾರಿತಪ್ಪಿದವರು. ಇವರ ಸಹವಾಸವನ್ನು ಬಿಟ್ಟುಬಿಡಬೇಕು.

ಇತಿ ತೀರ್ಥಾನುಸರ್ತಾರಂ ರಾಕ್ಷಸೀ ಕಾಚಿದಬ್ರವೀತ್ ।
ಏಕರಾತ್ರಮುಷಿತ್ವೇಹ ಮಹೋಲೂಖಲಮೇಖಿಲಾ ॥೫೭॥

ಹೀಗೆ ತೀರ್ಥಾಟನದಲ್ಲಿದ್ದ ಸಜ್ಜನನಿಗೆ ಅವನ ಬಳಿ ಒಂದು ರಾತ್ರಿ ಉಳಿದುಕೊಂಡಿದ್ದ ದೊಡ್ಡ ಪೀಪಾಯನ್ನೆ ನಡುಕಟ್ಟಾಗಿ ಮಾಡಿಕೊಂಡಿದ್ದ ಒಬ್ಬಳು ರಾಕ್ಷಸಿ ಕೂಡ ಹೇಳಿದಳಂತೆ.

ಆರಟ್ಟಾ ನಾಮ ತೇ ದೇಶಾ ಬಾಹ್ಲೀಕಂ ನಾಮ ತದ್ವನಮ್ ॥೫೮॥

ಬ್ರಾಹ್ಮಣಾಪಸದಾ ಯತ್ರ ಜಾಯಂತೇ ಚಾಧಮಾತ್ ಕುಲಾತ್ ।
ವೇದಾ ನ ತೇಷಾಂ ವೇದ್ಯಂ ಚ ಯಜ್ಞಾ ಯಾಜನಮೇವ ಚ ॥೫೯॥

ಆರಟ್ಟ ಎಂಬ ದೇಶಗಳಲ್ಲಿ ಬಾಹ್ಲೀಕವೆಂಬ ಕಾಡು. ಅಲ್ಲಿ ಹೆಸರಿಗೆ ಮಾತ್ರ ಬ್ರಾಹ್ಮಣರೆನಿಸಿದವರು ಅಧರ್ಮಕುಲದಿಂದ ಜನಿಸಿ ಬರುತ್ತಾರೆ. ಅವರಲ್ಲಿ ವೇದಗಳಿಲ್ಲ, ವೇದಗಳಿಂದ ವೇದ್ಯವಾದ ಧರ್ಮವಿಲ್ಲ. ಯಜ್ಞಗಳಿಲ್ಲ, ಯಜ್ಞ ಮಾಡಿಸುವವರಿಲ್ಲ.

ವ್ರಾತ್ಯಾನ್ನಂ ದಾಸಮೀಯಾನಾಮನ್ನಂ ದೇವಾ ನ ಭುಂಜತೇ ।
ಪ್ರಸ್ಥಲಾ ಮದ್ರಗಾಂಧಾರಾ ಆರಟ್ಟಾ ನಾಮತಃ ಶಕಾಃ ॥೬೦॥
ವಸಾತಿಸಿಂಧುಸೌವೀರಾ ಇತಿ ಪ್ರಾಯೋಽತಿಕುತ್ಸಿತಾಃ ॥೬೧॥

ನೀಚರ ಅನ್ನವನ್ನೂ ದಾಸಮೀಯರ ಅನ್ನವನ್ನೂ ದೇವತೆಗಳು ಸ್ವೀಕರಿಸುವುದಿಲ್ಲ. ಅವರ ದೇಶಗಳು ಪ್ರಸ್ಥಲ ಮದ್ರ ಗಾಂಧಾರ ಆರಟ್ಟ ಶಕ ವಸಾತಿ ಸಿಂಧು ಸೌವೀರಗಳು ಹೆಚ್ಚಿನಮಟ್ಟಿಗೆ ಅತ್ಯಂತ ನಿಂದಿತವಾಗಿವೆ.'

ಕರ್ಣಃ

ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ ।
ಉಚ್ಯಮಾನಂ ಮಯಾ ಸಮ್ಯಕ್ತ್ವಮೇಕಾಗ್ರಮನಾಃ ಶೃಣು ॥೬೨॥

ಕರ್ಣ ನುಡಿದ— ಶಲ್ಯ, ಇದನ್ನು ನೀನು ತಿಳಿದುಕೊಳ್ಳು, ಅಯ್ಯೋ ಇನ್ನೂ ಹೇಳುತ್ತೇನೆ, ಕೇಳು. ನಾನು ಹೇಳುವುದನ್ನು ಚೆನ್ನಾಗಿ ಏಕಾಗ್ರಚಿತ್ತದಿಂದ ಕೇಳು.

ಬ್ರಾಹ್ಮಣಃ ಕಿಲ ನೋ ಗೇಹಮಧ್ಯಗಚ್ಛತ್ಪುರಾಽತಿಥಿಃ ।
ಆಚಾರಂ ತತ್ರ ಸಂಪ್ರೇಕ್ಷ್ಯ ಪ್ರೀತೋ ವಚನಮಬ್ರವೀತ್ ॥೬೩॥

ನಮ್ಮ ಮನೆಗೆ ಹಿಂದೆ ಬ್ರಾಹ್ಮಣನೊಬ್ಬ ಅತಿಥಿಯಾಗಿ ಬಂದ. ಮನೆಯಲ್ಲಿ ಆಚಾರವಿರುವುದನ್ನು ಕಂಡು ಸಂತುಷ್ಟನಾಗಿ ಹೇಳಿದ

ಮಯಾ ಹಿಮವತಃ ಶೃಂಗಮೇಕೇನಾಧ್ಯುಷಿತಂ ಚಿರಮ್ ।
ದೃಷ್ಟಾಶ್ಚ ಬಹವೋ ದೇಶಾ ನಾನಾಧರ್ಮಸಮಾವೃತಾಃ ॥೬೪॥

ಸುರತ ನಿಯಮವಿಲ್ಲದ ಅಚ್ಯುತಸ್ಥಳ ನಗರದಲ್ಲಿ ವಾಸ ಕೈಗೊಂಡರೆ ಹೊಲಗೇರಿ ಮಯವಾದ ಭೂತಿಲಯನಗರದಲ್ಲಿ ಹೊಲೆಯರೊಂದಿಗೆ ಸ್ನಾನಮಾಡಿದರೆ ಸ್ವರ್ಗಕ್ಕೆ ಹೇಗೆ ಹೋಗಲು ಸಾಧ್ಯ?

ಪಂಚನದ್ಯೋ ವಹಂತ್ಯೇತಾ ಯತ್ರ ನಿಃಸೃತ್ಯ ಪರ್ವತಾತ್ ।
ಆರಟ್ಟಾ ನಾಮ ಬಾಹ್ಲೀಕಾ ನ ತೇಷ್ವಾರ್ಯೋ ದ್ವ್ಯಹಂ ವಸೇತ್ ॥೫೩॥

ಪಂಚನದಿಗಳು ಪರ್ವತದಿಂದ ಇಳಿದು ಹರಿವ ಪ್ರದೇಶಗಳು ಆರಟ್ಟವೆನಿಸುವ ಬಾಹ್ಲೀಕ ದೇಶಗಳು. ಅಲ್ಲಿ ಆರ್ಯನು ಎರಡು ದಿನವೂ ವಾಸಮಾಡಬಾರದು.

ಬಹ್ಲೀ ನಾಮ ಬಲೀ ಕಶ್ಚ ವಿಪಾಶಾಯಾಂ ಪಿಶಾಚಕೌ ।
ತಯೋರಪತ್ಯಂ ಬಾಹ್ಲೀಕಾ ನೈಷಾ ಸೃಷ್ಟಿಃ ಪ್ರಜಾಪತೇಃ ॥೫೪॥

'ಬಹ್ಲೀ' ಎಂದು ಒಬ್ಬಳು ಪಿಶಾಚಿ ಮತ್ತು 'ಕ' ಎಂದು ಒಬ್ಬ ಬಲಿಷ್ಠನಾದ ಪಿಶಾಚ. ಇವರಿಬ್ಬರ ಸಂತಾನವೇ ಬಾಹ್ಲೀಕರು. ಇದು ಬ್ರಹ್ಮನ ಸೃಷ್ಟಿಯಲ್ಲ.

ತೇ ಕಥಂ ವಿವಿಧಾನ್ ಧರ್ಮಾನ್ ಜ್ಞಾಸ್ಯಂತೇ ಹೀನಯೋನಯಃ ॥೫೫॥

ಈ ಬಾಹ್ಲೀಕರು ಹೀನಯೋನಿ ಜಾತರು. ನಾನಾವಿಧವಾದ ಧರ್ಮವನ್ನು ಹೇಗೆ ತಿಳಿಯಬಲ್ಲರು?

ಕಾರಸ್ಕರಾನ್ ಮಾಹಿಷಕಾನ್ ಕರಂಭಾನ್ ಕಟಕಾಲಿಕಾನ್ ।
ಕರ್ಕೋಟವೀರಕಾಂಬಷ್ಠಾನ್ ಉನ್ಮಾರ್ಗಾಂಶ್ಚ ವಿವರ್ಜಯೇತ್ ॥೫೬॥

ಕಾರಸ್ಕರ–ಮಾಹಿಷಕ–ಕರಂಭ–ಕಟಕಾಲಿಕ–ಕರ್ಕೋಟ–ವೀರಕ–ಅಂಬಷ್ಠರು ಎಲ್ಲರೂ ದಾರಿತಪ್ಪಿದವರು. ಇವರ ಸಹವಾಸವನ್ನು ಬಿಟ್ಟುಬಿಡಬೇಕು.

ಇತಿ ತೀರ್ಥಾನುಸರ್ತಾರಂ ರಾಕ್ಷಸೀ ಕಾಚಿದಬ್ರವೀತ್ ।
ಏಕರಾತ್ರಮುಷಿತ್ವೇಹ ಮಹೋಲೂಖಲಮೇಖಲಾ ॥೫೭॥

ಹೀಗೆ ತೀರ್ಥಾಟನದಲ್ಲಿದ್ದ ಸಜ್ಜನನಿಗೆ ಅವನ ಬಳಿ ಒಂದು ರಾತ್ರಿ ಉಳಿದುಕೊಂಡಿದ್ದ ದೊಡ್ಡ ಪೀಪಾಯನ್ನೆ ನಡುಕಟ್ಟಾಗಿ ಮಾಡಿಕೊಂಡಿದ್ದ ಒಬ್ಬಳು ರಾಕ್ಷಸಿ ಕೂಡ ಹೇಳಿದಳಂತೆ.

ಆರಟ್ಟಾ ನಾಮ ತೇ ದೇಶಾ ಬಾಹ್ಲೀಕಂ ನಾಮ ತದ್ವನಮ್ ॥೫೮॥

ಬ್ರಾಹ್ಮಣಾಪಸದಾ ಯತ್ರ ಜಾಯಂತೇ ಚಾಧಮಾತ್ ಕುಲಾತ್ ।
ವೇದಾ ನ ತೇಷಾಂ ವೇದ್ಯಂ ಚ ಯಜ್ಞಾ ಯಾಜನಮೇವ ಚ ॥೫೯॥

ಆರಟ್ಟ ಎಂಬ ದೇಶಗಳಲ್ಲಿ ಬಾಹ್ಲೀಕವೆಂಬ ಕಾಡು. ಅಲ್ಲಿ ಹೆಸರಿಗೆ ಮಾತ್ರ ಬ್ರಾಹ್ಮಣರೆನಿಸಿದವರು ಅಧರ್ಮಕುಲದಿಂದ ಜನಿಸಿ ಬರುತ್ತಾರೆ. ಅವರಲ್ಲಿ ವೇದಗಳಿಲ್ಲ, ವೇದಗಳಿಂದ ವೇದ್ಯವಾದ ಧರ್ಮವಿಲ್ಲ. ಯಜ್ಞಗಳಿಲ್ಲ, ಯಜ್ಞ ಮಾಡಿಸುವವರಿಲ್ಲ.

ವ್ರಾತ್ಯಾನ್ನಂ ದಾಸಮೀಯಾನಾಮನ್ನಂ ದೇವಾ ನ ಭುಂಜತೇ ।
ಪ್ರಸ್ಥಲಾ ಮದ್ರಗಾಂಧಾರಾ ಆರಟ್ಟಾ ನಾಮತಃ ಶಕಾಃ ॥೬೦॥
ವಸಾತಿಸಿಂಧುಸೌವೀರಾ ಇತಿ ಪ್ರಾಯೋಽತಿಕುತ್ಸಿತಾಃ ॥೬೧॥

ನೀಚರ ಅನ್ನವನ್ನೂ ದಾಸಮೀಯರ ಅನ್ನವನ್ನೂ ದೇವತೆಗಳು ಸ್ವೀಕರಿಸುವುದಿಲ್ಲ. ಅವರ ದೇಶಗಳು ಪ್ರಸ್ಥಲ ಮದ್ರ ಗಾಂಧಾರ ಆರಟ್ಟ ಶಕ ವಸಾತಿ ಸಿಂಧು ಸೌವೀರಗಳು ಹೆಚ್ಚಿನಮಟ್ಟಿಗೆ ಅತ್ಯಂತ ನಿಂದಿತವಾಗಿವೆ.'

ಕರ್ಣಃ

ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ ।
ಉಚ್ಯಮಾನಂ ಮಯಾ ಸಮ್ಯಕ್ತ್ವಮೇಕಾಗ್ರಮನಾಃ ಶೃಣು ॥೬೨॥

ಕರ್ಣ ನುಡಿದ— ಶಲ್ಯ, ಇದನ್ನು ನೀನು ತಿಳಿದುಕೊಳ್ಳು, ಅಯ್ಯೋ ಇನ್ನೂ ಹೇಳುತ್ತೇನೆ, ಕೇಳು. ನಾನು ಹೇಳುವುದನ್ನು ಚೆನ್ನಾಗಿ ಏಕಾಗ್ರಚಿತ್ತದಿಂದ ಕೇಳು.

ಬ್ರಾಹ್ಮಣಃ ಕಿಲ ನೋ ಗೇಹಮಧ್ಯಗಚ್ಛತ್ಪುರಾಽತಿಥಿಃ ।
ಆಚಾರಂ ತತ್ರ ಸಂಪ್ರೇಕ್ಷ್ಯ ಪ್ರೀತೋ ವಚನಮಬ್ರವೀತ್ ॥೬೩॥

ನಮ್ಮ ಮನೆಗೆ ಹಿಂದೆ ಬ್ರಾಹ್ಮಣನೊಬ್ಬ ಅತಿಥಿಯಾಗಿ ಬಂದ. ಮನೆಯಲ್ಲಿ ಆಚಾರವಿರುವುದನ್ನು ಕಂಡು ಸಂತುಷ್ಟನಾಗಿ ಹೇಳಿದ

ಮಯಾ ಹಿಮವತಃ ಶೃಂಗಮೇಕೇನಾಧ್ಯುಷಿತಂ ಚಿರಮ್ ।
ದೃಷ್ಟಾಶ್ಚ ಬಹವೋ ದೇಶಾ ನಾನಾಧರ್ಮಸಮಾವೃತಾಃ ॥೬೪॥

ನಾನು ಹಿಮಾಲಯದ ತುದಿಯಲ್ಲಿ ಏಕಾಕಿಯಾಗಿ ಚಿರಕಾಲ ವಾಸ ಮಾಡಿದೆ. ಮತ್ತು ನಾನಾ ಧರ್ಮಗಳನ್ನು ಅನುಸರಿಸುವ ಬಹಳ ದೇಶಗಳನ್ನು ಕಂಡೆ.

ನ ಚ ಕೇನ ಚ ಧರ್ಮೇಣ ವಿರುದ್ಧ್ಯಂತೇ ಪ್ರಜಾ ಇಮಾಃ ।
ಸರ್ವಾಶ್ಚಾಪ್ಯಾಚರನ್ ಧರ್ಮಂ ಯದುಕ್ತಂ ವೇದಪಾರಗೈಃ ॥೬೫॥

ಅಲ್ಲಿರುವ ಪ್ರಜೆಗಳು ಯಾವ ಕಾರಣಕ್ಕೂ ಧರ್ಮವಿರುದ್ಧವಾಗಿ ನಡೆಯುತ್ತಿರಲಿಲ್ಲ. ಎಲ್ಲರೂ ಕೂಡ ವೇದಪಾರಂಗತರು ಹೇಳಿದ ಧರ್ಮವನ್ನೇ ಆಚರಿಸುತ್ತಿದ್ದರು.

ಅಟತಾ ತು ಮಯಾ ದೇಶಾನ್ನಾನಾಧರ್ಮಸಮಾಕುಲಾನ್ ।
ಆಗಚ್ಛತಾ ಮಹಾರಾಜ ಬಾಹ್ಲೀಕೇಷು ನಿಶಾಮಿತಮ್ ॥೬೬॥

ನಾನಾಧರ್ಮಗಳನ್ನಾಚರಿಸುತ್ತಿದ್ದ ದೇಶಗಳನ್ನು ಸುತ್ತಿ ಬರುವಾಗ, ಮಹಾರಾಜ, ನಾನು ಬಾಹ್ಲೀಕದೇಶದಲ್ಲಿ ಧರ್ಮಾಚರಣೆಯ ವಿಚಿತ್ರ ವೈಖರಿಯನ್ನು ಕಂಡೆ.

ತತ್ರ ವೈ ಬ್ರಾಹ್ಮಣೋ ಭೂತ್ವಾ ಪುನರ್ಭವತಿ ಕ್ಷತ್ರಿಯಃ ।
ವೈಶ್ಯಃ ಶೂದ್ರಶ್ಚ ಬಾಹ್ಲೀಕಸ್ತತೋ ಭವತಿ ನಾಪಿತಃ ॥೬೭॥

ಅಲ್ಲಿ ಬಾಹ್ಲೀಕನು ಬ್ರಾಹ್ಮಣನಾಗಿ ಹುಟ್ಟಿ ಕ್ಷತ್ರಿಯನಾಗುತ್ತಾನೆ. ವೈಶ್ಯನಾಗುತ್ತಾನೆ, ಶೂದ್ರನೂ ಆಗುತ್ತಾನೆ. ಕೊನೆಗೆ ಕ್ಷೌರಿಕನೂ ಆಗುತ್ತಾನೆ. ಯಾರಿಗೆ ಯಾವುದು ಧರ್ಮ ಎಂದು ನಿಯಮವೇ ಇಲ್ಲ.

ನಾಪಿತಶ್ಚ ತತೋ ಭೂತ್ವಾ ಪುನರ್ಭವತಿ ಬ್ರಾಹ್ಮಣಃ ।
ದ್ವಿಜೋ ಭೂತ್ವಾ ಚ ತತ್ರೈವ ಪುನರ್ದಾಸೋಽಭಿಜಾಯತೇ ॥೬೮॥

ಕ್ಷೌರಿಕನಾಗಿ ಬಳಿಕ ಪುನಃ ಬ್ರಾಹ್ಮಣನಾಗುತ್ತಾನೆ. ಬ್ರಾಹ್ಮಣನಾಗಿ ಅಲ್ಲಿಯೇ ಪುನಃ ಶೂದ್ರನೂ ಆಗುತ್ತಾನೆ.

ಭವಂತ್ಯೇಕಕುಲೇ ವಿಪ್ರಾಃ ಶಿಷ್ಟಾ ಯೇ ಕಾಮಚಾರಿಣಃ ।
ಗಾಂಧಾರಾ ಮದ್ರಕಾಶ್ಚೈವ ಬಾಹ್ಲೀಕಾಃ ಕೇಪ್ಯಚೇತನಾಃ ॥೬೯॥

ಒಂದೇ ಮನೆಯಲ್ಲಿ ಕೆಲಕಾಲ ಶಿಷ್ಟರಾದ ಬ್ರಾಹ್ಮಣರು, ಕೆಲಕಾಲ ಅವರೇ

ಸ್ವೇಚ್ಛಾಚಾರಿಗಳು, ಬುದ್ಧಿ ಇಲ್ಲದವರು. ಗಾಂಧಾರ ಮದ್ರಕ ಬಾಹ್ಲೀಕರೆಲ್ಲರೂ ಹೀಗೇ.

ಏತನ್ಮಯಾ ಶ್ರುತಂ ತತ್ರ ಧರ್ಮಸಂಕರಕಾರಕಮ್ ।
ಕೃತ್ವಾ ಸ್ನಮಟಿತ್ವಾ ಪೃಥಿವೀಂ ಬಾಹ್ಲೀಕೇಷು ವಿಪರ್ಯಯಃ ॥೭೦॥

ಬಾಹ್ಲೀಕರಲ್ಲಿ ಧರ್ಮಸಂಕರ ಕಾರಕವಾದ ಈ ನಡತೆ ಇರುವುದನ್ನು ಮೊದಲೇ ಕೇಳಿದ್ದೆ. ಇಡೀ ಭೂಮಿಯನ್ನು ಸುತ್ತಿ ಬಂದಾಗ ಬಾಹ್ಲೀಕರಲ್ಲಿ ಈ ವಿಪರ್ಯಾಸ ಕಂಡುಬಂದಿತು.'

ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ ।
ಯದಪ್ಯನ್ಯೋಽಬ್ರವೀದ್ ವಾಕ್ಯಂ ಬಾಹ್ಲೀಕಾನಾಂ ವಿಕುತ್ಸಿತಮ್ ॥೭೧॥

ಹೀಗೆ ಶಲ್ಯ, ಬ್ರಾಹ್ಮಣನು ಹೇಳಿದ್ದನ್ನು ಅರಿತುಕೊಳ್ಳು. ಅಯ್ಯೋ ಇನ್ನೂ ಹೇಳುತ್ತೇನೆ, ಕೇಳು. ಇನ್ನೊಬ್ಬ ಬ್ರಾಹ್ಮಣನೂ ಕೂಡ ಬಾಹ್ಲೀಕರ ದುರಾಚಾರದ ಬಗ್ಗೆ ನನಗೆ ಹೇಳಿದ.

ಆನೀಯೇಹಾಕ್ಷತಾ ಕಾಚಿದಾರಟ್ಟೈಃ ಕಿಲ ದಸ್ಯುಭಿಃ ।
ಅಧರ್ಮತಶ್ಚೋಪಯಾತಾ ಸಾ ತಾನಭ್ಯಶಪತ್ ತತಃ ॥೭೨॥

ಇನ್ನೂ ಮೈನರೆಯದಿದ್ದ ಬಾಲಕಿಯೊಬ್ಬಳನ್ನು ಬಾಹ್ಲೀಕರ ದರೋಡೆಕೋರರು ಅಪಹರಿಸಿ ಈ ದೇಶಕ್ಕೆ ತಂದು ಅವಳನ್ನು ಕೂಡಿದರು. ಅವಳು ಅವರನ್ನು ಶಪಿಸಿದಳು.

ಬಾಲಾಂ ಬಂಧುಮತೀಂ ಯನ್ಮಾಮಧರ್ಮೇಣೋಪಗಚ್ಛಥ ।
ತಸ್ಮಾನ್ನಾಯೋ೯ ಭವಿಷ್ಯಂತಿ ಬಂಧಕ್ಯೋ ವೈ ಕುಲೇಷು ವಃ ॥೭೩॥

ನಾನಿನ್ನೂ ಬಾಲಕಿಯಾಗಿರುವಾಗಲೇ, ಬಂಧುಬಾಂಧವರಿಂದ ಕೂಡಿದ್ದ ನನ್ನನ್ನು ಅಧರ್ಮದಿಂದ ಕೂಡಿರುವಿರಿ. ಅದರಿಂದ ನಿಮ್ಮ ಮನೆಗಳಲ್ಲಿ ನಾರಿಯರು ವ್ಯಭಿಚಾರಿಣಿಯರಾಗುವರು.

ನ ಚೈವಾಸ್ಮಾತ್ ಪ್ರಮೋಕ್ಷ್ಯಧ್ವಂ ಘೋರಾಚ್ಚಾಪಾನ್ನರಾಧಮಾಃ ।
ತಸ್ಮಾತ್ ತೇಷಾಂ ಭಾಗಹರಃ ಕಥಂ ಧರ್ಮಾನ್ ವದಿಷ್ಯಸಿ ॥೭೪॥

'ನರಾಧಮರೆ, ನನ್ನ ಈ ಘೋರವಾದ ಶಾಪದಿಂದ ನಿಮಗೆ ಮುಕ್ತಿ ಇಲ್ಲ' ಎಂದು. ಅದರಿಂದ, ಶಲ್ಯ, ಆ ಬಾಹ್ಲೀಕರ ಸಂಪತ್ತಿನಲ್ಲಿಯೇ ಆರನೆ ಒಂದು ಭಾಗವನ್ನು ಕರವಾಗಿ ವಸೂಲಿ ಮಾಡುವ ನೀನು ಧರ್ಮವನ್ನು ಹೇಗೆ ಹೇಳುವೆ?

ಕುರವಃ ಸಹಪಾಂಚಾಲಾಃ ಸಾಲ್ವಾ ಮಾತ್ಸ್ಯಾಃ ಸನೈಮಿಶಾಃ ।
ಕೋಸಲಾಃ ಕಾಶಿಪೌಂಡ್ರಾಶ್ಚ ಕಾಲಿಂಗಾ ಮಾಗಧಾಸ್ತಥಾ ॥೭೫॥

ಚೇದಯಶ್ಚ ಮಹಾಭಾಗಾ ಧರ್ಮಂ ಜಾನಂತಿ ಶಾಶ್ವತಮ್ ।
ನಾನಾದೇಶೇಷು ಸಂತಶ್ಚ ಪ್ರಾಯೋ ಬಾಹ್ಯಾಲಯಾದೃತೇ ॥೭೬॥

ಕುರು ಪಾಂಚಾಲ ಸಾಲ್ವ ಮತ್ಸ್ಯ ನೈಮಿಶ ಕೋಸಲ ಕಾಶಿ ಪೌಂಡ್ರ ಕಲಿಂಗ ಮಾಗಧ ಚೇದಿಗಳೆಂದು ನಾನಾ ದೇಶವಾಸಿಗಳಾದ ಮಹಾತ್ಮರು, ಬಾಹ್ಲೀಕ ದೇಶದವರು ಹೊರತಾಗಿ ಪ್ರಾಯಃ ಎಲ್ಲರೂ, ಸನಾತನ ವೇದಧರ್ಮವನ್ನು ತಿಳಿದಿದ್ದಾರೆ.

ಆಮತ್ಸ್ಯೇಭ್ಯಃ ಕುರುಪಾಂಚಾಲಸಾಲ್ವಾ
ಆನೈಮಿಶಾಚ್ಚೇದಯೋ ಯೇ ವಿಶಿಷ್ಟಾಃ ।
ಧರ್ಮಂ ಪುರಾಣಮುಪಜೀವಂತಿ ಸಂತೋ
ಮದ್ರಾನೃತೇ ಪಾಂಚನದಾಂಶ್ಚ ಜಿಹ್ಮಾನ್ ॥೭೭॥

ಮತ್ಸ್ಯರಿಂದ ತೊಡಗಿ ನೈಮಿಶರಿಂದಲೂ ತೊಡಗಿ ಕುರುಪಾಂಚಾಲ ಸಾಲ್ವ ಚೇದಿಗಳೆಂದು ಉತ್ತಮರಾದ ಎಲ್ಲ ಸಜ್ಜನರೂ ಕೂಡ, ಕಪಟಿಗಳಾದ ಮದ್ರ ಮತ್ತು ಪಂಚನದೀ ತೀರವಾಸಿಗಳು ಮಾತ್ರ ಹೊರತಾಗಿ, ಸನಾತನ ಧರ್ಮವನ್ನು ಆಶ್ರಯಿಸಿಯೇ ಇರುತ್ತಾರೆ.

ಏವಂ ವಿದ್ವಾನ್ ಧರ್ಮಕಥಾಸು ರಾಜನ್
ತೂಷ್ಣೀಮ್ಭೂತೋ ಜಡವಚ್ಚಲ್ಯ ಭೂಯಾಃ ।
ತ್ವಂ ತಸ್ಯ ಗೋಪ್ತಾ ಚ ಜನಸ್ಯ ರಾಜಾ
ಷಡ್ಭಾಗಹರ್ತಾ ಶುಭದುಷ್ಕೃತಸ್ಯ ॥೭೮॥

ಶಲ್ಯರಾಜನೆ, ಹೀಗೆ ತಿಳಿದು ನೀನು, ಧರ್ಮವಿಷಯದಲ್ಲಿ ಮಾತುಕತೆ ಬಂದಾಗ

ಜಡಪದಾರ್ಥದಂತೆ ಸುಮ್ಮನೇ ಇರಬೇಕು. ಏಕೆಂದರೆ ನೀನು ಆ ಬಾಹ್ಲೀಕ ಜನರಿಗೆ ರಾಜ. ಅವರ ಪುಣ್ಯ–ಪಾಪಗಳೆರಡರಲ್ಲಿಯೂ ಆರನೆ ಒಂದು ಭಾಗವನ್ನು ನೀನು ತೆಗೆದುಕೊಳ್ಳುವವನು.

ಅಥವಾ ದುಷ್ಕೃತಸ್ಯ ತ್ವಂ ಹರ್ತಾ ತೇಷಾಮರಕ್ಷಿತಾ ।
ರಕ್ಷಿತಾ ಪುಣ್ಯಭಾಗ್ ರಾಜಾ ಪ್ರಜಾನಾಂ ತ್ವಂ ಹ್ಯಪುಣ್ಯಭಾಕ್ ॥೭೯॥

ಅಥವಾ ನೀನು ಅವರ ಧರ್ಮರಕ್ಷಣೆ ಮಾಡದಿರುವುದರಿಂದ ಅವರ ಪಾಪಕ್ಕೇ ನೀನು ಭಾಗಿ. ಧರ್ಮರಕ್ಷಣೆಮಾಡುವ ರಾಜನೇ ಪ್ರಜೆಗಳ ಪುಣ್ಯಕ್ಕೆ ಭಾಗಿಯಾಗುತ್ತಾನೆ. ಅದರಿಂದ ನೀನು ಪುಣ್ಯಭಾಗಿಯಾಗುವುದಿಲ್ಲ.

ಪೂಜ್ಯಮಾನೇ ಪುರಾ ಧರ್ಮೇ ಸರ್ವದೇಶೇಷು ಶಾಶ್ವತೇ ।
ವ್ರಾತ್ಯಾನಾಂ ದಾಶಮೀಯಾನಾಂ ಕೃತೇಽಪ್ಯಶುಭಕಾರಿಣಾಮ್ ॥೮೦॥

ಧರ್ಮಂ ಪಾಂಚನದಂ ದೃಷ್ಟ್ವಾ ಧಿಗಿತ್ಯಾಹ ಪಿತಾಮಹಃ ।
ಬ್ರಹ್ಮಣಾ ನಿಂದಿತೇ ಧರ್ಮೇ ಸ ತಂ ಲೋಕೇ ಕಿಮಬ್ರವೀಃ ॥೮೧॥

ಹಿಂದೆ ಎಲ್ಲ ದೇಶಗಳಲ್ಲಿ ಧರ್ಮವು ಆದರಿಸಲ್ಪಡುತ್ತಿದ್ದಾಗ ಪಂಚನದೀ ರಾಜ್ಯಗಳ ಧರ್ಮವನ್ನು ನೋಡಿ ಪಿತಾಮಹನು ಅದನ್ನು ಧಿಕ್ಕರಿಸಿದ. ಕೃತಯುಗದಲ್ಲಿ ಕೂಡ ಅಶುಭಕರ್ಮಕಾರಿಗಳಾದ ಈ ಬಾಹ್ಲೀಕರು ವ್ಯಭಿಚಾರಿಗಳ ಸಂತಾನವಾಗಿದ್ದು ಸಂಸ್ಕಾರರಹಿತರಾಗಿರುವುದರಿಂದ ಬ್ರಹ್ಮನೇ ಅವರ ಧರ್ಮವನ್ನು ನಿಂದಿಸಿರುವನೆಂದ ಮೇಲೆ, ಶಲ್ಯ, ಆ ಧರ್ಮವನ್ನು ನೀನೇಕೆ ಹೇಳಿದೆ?

ಇಮಂ ಪಾಂಚನದಂ ಧರ್ಮಮವಮೇನೇ ಪಿತಾಮಹಃ ।
ಸ್ವಧರ್ಮಸ್ಥೇಷು ವರ್ಣೇಷು ಸೋಽಪ್ಯೇತಾನ್ನಾಭ್ಯಪೂಜಯತ್ ॥೮೨॥

ಈ ಪಂಚನದೀ ದೇಶದವರ ಆಚಾರವನ್ನು ಕಂಡು ಧರ್ಮಪುರುಷನನ್ನು ಪಿತಾಮಹನು ಧಿಕ್ಕರಿಸಿದ. 'ಇಲ್ಲಿ ನಿನ್ನ ಪ್ರಚಾರಶಕ್ತಿ ಕುಂಠಿತವಾಯಿತು!' ಎಂದು ಧರ್ಮಪುರುಷನನ್ನು ನಿಂದಿಸಿದ. ಬೇರೆ ಎಲ್ಲ ಕಡೆ ಎಲ್ಲ ವರ್ಣಗಳೂ ಸ್ವಧರ್ಮ ನಿಷ್ಠವಾಗಿರುವಾಗ ಇಲ್ಲಿ ಅವು ಹಾಗೆ ಇಲ್ಲ ಎಂದು ಅತೃಪ್ತಿಯಿಂದ ಆತ ಧರ್ಮವನ್ನು ಅಭಿನಂದಿಸಲಿಲ್ಲ.

ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ ।
ಕಲ್ಮಾಷಪಾದಃ ಸರಸಿ ನಿಮಜ್ಜನ್ ರಾಕ್ಷಸೋಽಬ್ರವೀತ್ ॥೮೩॥

ಹೀಗೆ, ಶಲ್ಯ, ತಿಳಿದುಕೊಳ್ಳು, ಅಯ್ಯೋ! ಇನ್ನೂ ಹೇಳುತ್ತೇನೆ, ಕೇಳು. ಕಲ್ಮಾಷಪಾದ ರಾಕ್ಷಸನು ಕೊಳದಲ್ಲಿ ಮುಳುಗುವಾಗ ಹೀಗೆ ಹೇಳಿದ—

ಕ್ಷತ್ರಿಯಸ್ಯ ಮಲಂ ಭೈಕ್ಷ್ಯಂ ಬ್ರಾಹ್ಮಣಸ್ಯಾಶ್ರುತಂ ಮಲಮ್ ।
ಮಲಂ ಪೃಥಿವ್ಯಾ ಬಾಹ್ಲೀಕಾಃ ಸ್ತ್ರೀಣಾಂ ಮದ್ರಸ್ತ್ರಿಯೋ ಮಲಮ್ ॥೮೪॥

‘ಕ್ಷತ್ರಿಯನಲ್ಲಿ ಕಶ್ಮಲವೆಂದರೆ ಭಿಕ್ಷಾವೃತ್ತಿ. ಬ್ರಾಹ್ಮಣನಲ್ಲಿ ಕಶ್ಮಲವೆಂದರೆ ವೇದ ಓದದಿರುವುದು. ಭೂಮಿಯ ಮೇಲೆ ಕಶ್ಮಲವೆಂದರೆ ಬಾಹ್ಲೀಕ ದೇಶ. ಸ್ತ್ರೀಯರ ಮಧ್ಯದಲ್ಲಿ ಮದ್ರಸ್ತ್ರೀಯರೆ ಕಶ್ಮಲ.’

ನಿಮಜ್ಯಮಾನಮುದ್ಧೃತ್ಯ ಕಶ್ಚಿದ್ ರಾಜಾ ನಿಶಾಚರಮ್ ।
ಅಪೃಚ್ಛತ್ ತೇನ ಚಾಖ್ಯಾತಂ ತಚ್ಛೃಣುಷ್ವ ನರಾಧಿಪ ॥೮೫॥

ಒಬ್ಬ ರಾಜನು ಕಲ್ಮಾಷಪಾದ ರಾಕ್ಷಸನನ್ನು ಅವನು ರಾಕ್ಷಸನೆಂದು ಕೊಲ್ಲಲು ಕೊಳದಲ್ಲಿ ಮುಳುಗಿಸುತ್ತಿದ್ದ. ರಾಕ್ಷಸ ಮುಳುಗುತ್ತಿದ್ದಾಗ ಆತ ಹೇಳಿದ ಈ ಸುಂದರ ಶ್ಲೋಕವನ್ನು ಕೇಳಿ ಆತನನ್ನು ನೀರಿನಿಂದ ಮೇಲೆತ್ತಿ ‘ಇನ್ನೂ ಎಲ್ಲೆಲ್ಲಿ ಯಾವುದು ಮಲ, ಕಶ್ಮಲ?’ ಎಂದು ಕೇಳಿದ. ಅದನ್ನು ರಾಕ್ಷಸ ಹೇಳಿದ. ಶಲ್ಯರಾಜನೆ, ಆ ರಾಜನಂತೆ ನೀನೂ ಅದನ್ನು ಕೇಳು ಎನ್ನುತ್ತಾನೆ ಕರ್ಣ.

ಮಾನುಷಾಣಾಂ ಮಲಂ ಮ್ಲೇಚ್ಛಾ ಮ್ಲೇಚ್ಛಾನಾಮೌಷ್ಟ್ರಿಕಾ ಮಲಮ್ ।
ಮುಷ್ಟ್ರಿಕಾನಾಂ ಮಲಂ ಷಂಢಾಃ ಷಂಢಾನಾಂ ರಾಜಯಾಜಕಾಃ ॥೮೬॥

ರಾಕ್ಷಸ ಹೇಳಿದ, ‘ಮನುಷ್ಯರ ಮಧ್ಯದಲ್ಲಿ ಮ್ಲೇಚ್ಛರೆ ಕಶ್ಮಲ. ಮ್ಲೇಚ್ಛರಲ್ಲಿ ‘ಉಷ್ಟ್ರ’ ಒಂಟೆಯ ಮಾಂಸ ತಿನ್ನುವವರು ಕಶ್ಮಲ. ಉಷ್ಟ್ರ ಮಾಂಸವನ್ನು ತಿನ್ನುವವರಲ್ಲಿ ನಪುಂಸಕರು ಕಶ್ಮಲ. ನಪುಂಸಕರಲ್ಲಿ ಪೌರೋಹಿತ್ಯವೃತ್ತಿಯನ್ನು ಮಾಡುವ ರಾಜರು ಕಶ್ಮಲ. ಅಂದರೆ, ಕ್ಷಾತ್ರವೃತ್ತಿ ಬಿಟ್ಟು ಪೌರೋಹಿತ್ಯವೃತ್ತಿ ಮಾಡುವ ರಾಜನು ನಪುಂಸಕರಿಗಿಂತ ಕಡೆ.

‘ಔಷ್ಟ್ರಿಕಾಃ’ ‘ಮೌಷ್ಟಿಕಾಃ’ ಎಂದು ಎರಡು ಪಾಠಗಳಿವೆ, ಎರಡೂ ಸರಿ ಎಂದು

ಲಕ್ಷಾಲಂಕಾರದಲ್ಲಿ ಹೇಳಿದೆ. ಔಷ್ಟಿಕರೆಂದರೆ ಉಷ್ಟ್ರಮಾಂಸ ತಿನ್ನುವವರು. ಮೌಷ್ಟಿಕರೆಂದರೆ ಮುಷ್ಟಿಕ ಎಂಬ ಕುಲದಲ್ಲಿ ಹುಟ್ಟಿದವರು ಎಂದರ್ಥ. ನೀಚರಾದ ಮ್ಲೇಚ್ಛರ ಮಧ್ಯದಲ್ಲಿ ಔಷ್ಟಿಕರು ಮತ್ತು ಮುಷ್ಟಿಕರು ಇಬ್ಬರೂ ಕಶ್ಮಲರು, ಹೆಚ್ಚು ನೀಚರು.

ಸೂರ್ಯವಂಶದ ಋತುಪರ್ಣಮಹಾರಾಜನ ಮಗನಾದ ಸುದಾಸರಾಜನ ಮಗನು ರಾಜಾ ಮಿತ್ರಸಹ. ಇವನು ಬೇಟೆಯಲ್ಲಿ ಇಬ್ಬರು ರಾಕ್ಷಸರನ್ನು ಹೊಡೆದು ಒಬ್ಬನನ್ನು ಕೊಂದ. ಇನ್ನೊಬ್ಬ ರಾಕ್ಷಸ ತಪ್ಪಿಸಿಕೊಂಡು ಹೋಗಿ ಸೇಡು ತೀರಿಸಬೇಕೆಂದು, ರಾಜ ಯಜ್ಞದೀಕ್ಷಿತನಾಗಿದ್ದಾಗ ಅವನ ಬಳಿ ಅಡಿಗೆಯವನ ವೇಷದಿಂದ ಸೇರಿಕೊಂಡು ನರಮಾಂಸದಡುಗೆ ಮಾಡಿಕೊಟ್ಟ. ರಾಜ ತಿಳಿಯದೆ ಅದನ್ನು ವಸಿಷ್ಠರಿಗೆ ಉಣಬಡಿಸಿದಾಗ ಅವರು ಕುಪಿತರಾಗಿ ನೀನು ನರಭಕ್ಷಕ ರಾಕ್ಷಸನಾಗೆಂದು ಶಪಿಸಿದರು. ನಿರಪರಾಧಿಯಾದ ತನಗೆ ಮುನಿಯು ಶಾಪಕೊಡುತ್ತಿದ್ದಾರೆಂದು ರಾಜನೂ ಕೋಪಗೊಂಡು ಅವರಿಗೆ ಪ್ರತಿಶಾಪ ಕೊಡಲು ಉದ್ಯುಕ್ತನಾದ. ಪತ್ನಿ ಮದಯಂತಿ ತಡೆದುದರಿಂದ ಕೈಗೆತ್ತಿಕೊಂಡಿದ್ದ ಶಾಪೋದಕವನ್ನು ತನ್ನ ಪಾದಗಳ ಮೇಲೆಯೆ ಬಿಟ್ಟುಕೊಂಡ. ಪಾದಗಳು ಕಪ್ಪಾದುವು. ರಾಜ ಕಲ್ಮಾಷಪಾದನೆನಿಸಿದ. ಈ ಕಲ್ಮಾಷಪಾದ ರಾಕ್ಷಸ ನರಭಕ್ಷಕನಾಗಿ ತಿರುಗುತ್ತಿದ್ದಾಗ ಪ್ರಕೃತ ಇಲ್ಲಿ ಹೇಳಿದ ಒಬ್ಬ ರಾಜ ಅವನನ್ನು ಹಿಡಿದು ಕೊಳದ ನೀರಲ್ಲಿ ಮುಳುಗಿಸುತ್ತಿದ್ದಾಗ 'ರಾಜನೆ, ನಾನೂ ನಿಜವಾಗಿ ಒಬ್ಬ ರಾಜನೆ, ಶಾಪದಿಂದ ರಾಕ್ಷಸನಂತಾಗಿದ್ದೇನೆ. ನನ್ನನ್ನು ಕೊಲ್ಲಬೇಡ. ಆದರೂ ನಾನು ನಿನ್ನಲ್ಲಿ ಪ್ರಾಣಭಿಕ್ಷೆ ಬೇಡಲಾರೆ. ಬೇಡಿದರೆ, ಕ್ಷತ್ರಿಯನಲ್ಲಿ ಭಿಕ್ಷಾಟನವು ಕಲ್ಮಶವೆನಿಸುತ್ತದೆ. ಇದಕ್ಕೆ ಉದಾಹರಣೆ ವೇದ ಓದದಿರುವುದು ಬ್ರಾಹ್ಮಣನಲ್ಲಿ ಕಶ್ಮಲ. ಭೂಮಿಯಲ್ಲಿ ಬಾಹ್ಲೀಕದೇಶವು ಕಶ್ಮಲ. ಸ್ತ್ರೀಯರ ಮಧ್ಯದಲ್ಲಿ ಮದ್ರ ಸ್ತ್ರೀಯರು ಕಶ್ಮಲ' ಎಂದು ಹೇಳಿದ. ರಾಜ ಅಚ್ಚರಿಗೊಂಡು, ಮುಳುಗಿಹೋಗುತ್ತಿದ್ದ ಕಲ್ಮಾಷಪಾದನನ್ನು ಮೇಲೆತ್ತಿದ. ಅವನಿಂದ ಇನ್ನೂ ಉಪದೇಶವನ್ನು ಕೇಳಿದ.

ರಾಜಯಾಜಕಯಾಜ್ಯಾನಾಂ ಮದ್ರಕಾಣಾಂ ಚ ಯನ್ಮಲಮ್ ।
ತದ್ಭವೇದ್ ವೈ ತವ ಮಲಂ ಯದ್ಯಸ್ಮಾನ್ನ ವಿಮುಂಚಸಿ ॥೮೭॥

'ರಾಜನೆ, ನೀನು ನನ್ನನ್ನು ರಾಕ್ಷಸನೆಂದು ಬಗೆದು ನನ್ನನ್ನು ಕೊಲ್ಲದೆ ಬಿಡುತ್ತಿಲ್ಲ. ಹಾಗೆ ಮಾಡಬೇಡ, ಬಿಟ್ಟುಬಿಡು. ಇಲ್ಲದಿದ್ದರೆ, ಯುದ್ಧವಲ್ಲದ ಬೇರೆ ಪ್ರಸಂಗದಲ್ಲಿ

ಒಬ್ಬ ಮೂರ್ಧಾಭಿಷಿಕ್ತನಾದ ನನ್ನಂಥ ರಾಜನನ್ನು ಕೊಲ್ಲುವುದು ನಿನಗೆ ಬ್ರಹ್ಮಹತ್ಯೆಗಿಂತಲೂ ಹೆಚ್ಚಿನ ಪಾಪವಾಗುವುದು. ಅದರಿಂದ ಪೌರೋಹಿತ್ಯ ಮಾಡುವ ರಾಜರ ಮತ್ತು ಮದ್ರಕ ದೇಶದ ಪ್ರಜೆಗಳ ಮಹಾಪಾಪಕ್ಕೆ ನೀನೂ ಭಾಗಿಯಾಗುವೆ' ಎಂದ, ರಾಕ್ಷಸ.

ಇತಿ ರಕ್ಷೋವಿಸೃಷ್ಟೇಷು ವಿಷವೀರ್ಯಹತೇಷು ಚ ।
ರಕ್ಷಸಾ ಭೈಷಜಂ ಪ್ರೋಕ್ತಂ ಸಂಸಿದ್ಧಂ ಚ ನ ಚೋತ್ತರಮ್ ॥೮೮॥

'ರಕ್ಷೋ ವಿಸೃಷ್ಟೇಷು' ಅಂದರೆ ರಾಕ್ಷಸರು ಲೋಕಕ್ಕೆ ನಾನಾವಿಧವಾಗಿ ದುರ್ಗುಣಗಳನ್ನು ಸೃಷ್ಟಿ ಮಾಡಿಕೊಟ್ಟಿರುವಾಗ ದುರ್ಗುಣಗಳಲ್ಲಿಯೂ ಹೆಚ್ಚು ವಿಷ ದಂತಿರುವ ದ್ವೇಷಾಸೂಯೆಗಳಿಂದ ನಮ್ಮಂಥವರನ್ನು ಹತರನ್ನಾಗಿ ಮಾಡುವವರು ನಿಮ್ಮಂಥವರು 'ವಿಷವೀರ್ಯಹತ'ರು. ಅವರಲ್ಲಿ ಮಾಡಬಹುದಾದ ಚಿಕಿತ್ಸೆ ಎಂದರೆ ರಾಕ್ಷಸನು ಬೋಧಿಸಿದ ನೀತಿಯೆ. 'ರಕ್ಷಸಾ ಪ್ರೋಕ್ತ'ವಾದ ಭೇಷಜ. ಇಷ್ಟು ಹೇಳಿದ ಮೇಲೆ, ಶಲ್ಯನೇ! ಇದಕ್ಕೆ ನಿನ್ನಲ್ಲಿ ಉತ್ತರ ಸಿದ್ಧವಿರುವುದಿಲ್ಲ– 'ಸಂಸಿದ್ಧಂ ಚ ನ ಚೋತ್ತರಂ'

ಬ್ರಾಹ್ಮಂ ಪಾಂಚಾಲಾಃ ಕೌರವೇಯಾಸ್ತು ಧರ್ಮ್ಯಂ
ಸತ್ಯಂ ಮತ್ಸ್ಯಾಃ ಶೂರಸೇನಾಶ್ಚ ಯಜ್ಞಂ ।
ಪ್ರಾಚ್ಯಾ ದಾಸಾ ವೃಷಲಾ ದಾಕ್ಷಿಣಾತ್ಯಾಃ
ಸ್ತೇನಾ ಬಾಹ್ಲೀಕಾಃ ಸಂಕರಾ ವೈ ಸುರಾಷ್ಟ್ರಾಃ ॥೮೯॥

ಬ್ರಾಹ್ಮಣರ ಪೂಜನವನ್ನು ಪಾಂಚಾಲರೂ, ಧರ್ಮಕಾರ್ಯವನ್ನು ಕೌರವ ವಂಶದವರೂ, ಸತ್ಯವ್ರತವನ್ನು ಮತ್ಸ್ಯದೇಶದವರೂ, ಯಜ್ಞಾನುಷ್ಠಾನವನ್ನು ಶೂರ ಸೇನ ದೇಶದವರೂ ಮಾಡುತ್ತಾರೆ. ಪೂರ್ವದೇಶದವರು ದಾಸರು, ದಾಕ್ಷಿಣಾತ್ಯರು ವೃಷಲರು, ಬಾಹ್ಲೀಕರು ದರೋಡೆಕೋರರು, ಸೌರಾಷ್ಟ್ರರು ಸಾಂಕರ್ಯ ಮಾಡು ವವರು.

ಕೃತಘ್ನತಾ ಪರವಿತ್ತಾಪಹಾರೋ
ಮದ್ಯಪಾನಂ ಗುರುದಾರಾವಮರ್ದಃ ।
ವಾಕ್ಪಾರುಷ್ಯಂ ಗೋವಧೋ ರಾತ್ರಿಚರ್ಯಾ
ಬಹಿರ್ಗೇಹಂ ಪರವಸ್ತ್ರೋಪಭೋಗಃ ॥೯೦॥

ಯೇಷಾಂ ಧರ್ಮಸ್ತಾನ್ ಪ್ರತಿ ನಾಸ್ಯಧರ್ಮ
ಆರದೇಜಾನ್ ಪಾಂಚನದಾನ್ ಧಿಗಸ್ತು ।
ಅಪಾಂಚಾಲಾಃ ಕುರವೋ ನೈಮಿಶಾಶ್ಚ
ಶಿಷ್ಟಾನ್ ಧರ್ಮಾನುಪಜೀವಂತಿ ವೃದ್ಧಾಃ ॥೯೧॥

ಕೃತಘ್ನತೆ, ಪರರ ಸೊತ್ತನ್ನು ಅಪಹರಿಸುವುದು. ಮದ್ಯಪಾನ, ಗುರುಪತ್ನಿಯನ್ನು ಬಲಾತ್ಕರಿಸುವುದು, ಕಟುನುಡಿ, ಗೋವಧೆ, ಮನೆಯಿಂದ ಹೊರಗೆ ರಾತ್ರಿಯಲ್ಲಿ ಸಂಚರಿಸುವುದು, ಇತರರ ಬಟ್ಟೆಗಳನ್ನು ಉಟ್ಟುಕೊಳ್ಳುವುದು ಇಂಥ ಮಹಾ ಅಧರ್ಮ ಯಾರಿಗೆ ಧರ್ಮವೆನಿಸುವುವೋ ಅಂಥ ಆರದೇಯರಿಗೆ ಪಂಚನದೀ ಪ್ರದೇಶವಾಸಿಗಳಿಗೆ ಅಧರ್ಮವೆಂಬುದು ಏನೂ ಇಲ್ಲ. ಅಂಥವರಿಗೆ ಧಿಕ್ಕಾರ. ಪಾಂಚಾಲರಿಂದ ತೊಡಗಿ ಕುರುಗಳು ನೈಮಿಶರು ಮುಂತಾದವರು ವೃದ್ಧರು ಶಾಸ್ತ್ರೋಕ್ತವಾದ ಧರ್ಮಗಳನ್ನೇ ಆಶ್ರಯಿಸುತ್ತಾರೆ.

ಪ್ರಾಚೀಂ ದಿಶಂ ಸ್ಥಿತಾ ದೇವಾ ಜಾತವೇದಃಪುರೋಗಮಾಃ ।
ದಕ್ಷಿಣಾ ಪಿತೃಭಿರ್ಗುಪ್ತಾ ಯಮೇನ ಶುಭಕರ್ಮಣಾ ॥೯೨॥

ಪೂರ್ವದಿಕ್ಕಿನ ಜನರನ್ನು ಅಗ್ನಿ ಮುಂತಾದ ದೇವತೆಗಳು ಕಾಪಾಡುತ್ತಾರೆ. ದಕ್ಷಿಣ ದಿಕ್ಕಿನವರನ್ನು ಶುಭಕರ್ಮಕಾರಿಯಾದ ಯಮನೂ ಪಿತೃದೇವತೆಗಳೂ ಕಾಪಾಡುತ್ತಾರೆ.

ಪ್ರತೀಚೀಂ ವರುಣಃ ಪಾತಿ ಪಾಲಯನ್ನಸುರಾನ್ ಬಹೂನ್ ।
ಉದೀಚೀಂ ಭಗವಾನ್ ಸೋಮೋ ಬ್ರಹ್ಮಾ ಚ ಬ್ರಾಹ್ಮಣೈಃ ಸಹ ॥೯೩॥

ಪಶ್ಚಿಮದಿಕ್ಕಿನವರನ್ನು ಬಹುಮಂದಿ ಅಸುರ ಪರಿವಾರವನ್ನು ನೋಡಿಕೊಳ್ಳುವ ವರುಣನು ಪಾಲಿಸುತ್ತಾನೆ. ಉತ್ತರದಿಕ್ಕಿನವರನ್ನು ಬ್ರಾಹ್ಮಣರೊಂದಿಗೆ ರಾಜಾ ಸೋಮನೂ ಬ್ರಹ್ಮನೂ ರಕ್ಷಿಸುತ್ತಾರೆ.

ರಕ್ಷಃಪಿಶಾಚಾನ್ ಹಿಮವಾನ್ ಗುಹ್ಯಕಾನ್ ಗಂಧಮಾದನಃ ।
ಧ್ರುವಂ ಸರ್ವಾಣಿ ಭೂತಾನಿ ವಿಷ್ಣುಃ ಪಾತಿ ಸುರೋತ್ತಮಃ ॥೯೪॥

ರಾಕ್ಷಸ–ಪಿಶಾಚರನ್ನು ಹಿಮಾಲಯ ಪರ್ವತರಾಜ ಕಾಪಾಡುತ್ತಾನೆ. ಗುಹ್ಯಕರನ್ನು

ಗಂಧಮಾದನ ಗಿರಿರಾಜ ಕಾಪಾಡುತ್ತಾನೆ. ಎಲ್ಲ ಜೀವಿಗಳನ್ನು ನಿಶ್ಚಯವಾಗಿ ದೇವೋತ್ತಮ ವಿಷ್ಣು ಕಾಪಾಡುತ್ತಾನೆ. ಹೀಗಾಗಿ ಬಾಹ್ಲೀಕರ ಅಧರ್ಮದ ಪ್ರಭಾವವು ಪಾಂಚಾಲ ಕುರು ಮುಂತಾದ ದೇಶದ ಜನರ ಮೇಲೆ ದುಷ್ಪರಿಣಾಮ ಬೀರಲು ಶಕ್ತವಾಗುತ್ತಿಲ್ಲ. ಬಾಹ್ಲೀಕರನ್ನು ಯಾರೂ ಕಾಪಾಡುವುದಿಲ್ಲ.

ಇಂಗಿತಜ್ಞಾಶ್ಚ ಮಗಧಾಃ ಪ್ರೇಕ್ಷಿತಜ್ಞಾಶ್ಚ ಕೋಸಲಾಃ ।
ಅರ್ಧೋಕ್ತಾಃ ಕುರುಪಾಂಚಾಲಾಃ ಸರ್ವೋಕ್ತಾ ದಾಕ್ಷಿಣಾಪಥಾಃ ॥೯೫॥

ಧಾರ್ಮಿಕರಲ್ಲಿ ಅಧರ್ಮಪ್ರಭಾವ ಏಕಾಗುವುದಿಲ್ಲ ಎಂದರೆ ಅಗ್ನಿಮುಂತಾದ ದೇವತೆಗಳ ಅನುಗ್ರಹದಿಂದ ಮಗಧದೇಶದ ಪ್ರಜೆಗಳು ಮುಖಭಾವದಿಂದಲೆ ಧರ್ಮವನ್ನು ತಿಳಿಯುತ್ತಾರೆ. ಕೋಸಲದೇಶದವರು ನೋಡಿ ಕಲಿಯುತ್ತಾರೆ. ಕುರು ಪಾಂಚಾಲರು ಸ್ವಲ್ಪ ಹೇಳಿದರೂ ಎಲ್ಲ ತಿಳಿಯುತ್ತಾರೆ. ದಕ್ಷಿಣಾಪಥದವರು ಎಲ್ಲ ಹೇಳಿದಾಗ ತಿಳಿದುಕೊಳ್ಳುತ್ತಾರೆ.

ಪಾರ್ವತೀಯಾಶ್ಚ ವಿಷಮಾಸ್ತಥೈವ ಶಿಬಯಸ್ತಥಾ ।
ಸರ್ವಜ್ಞಾ ಯವನಾ ರಾಜನ್ ಶೂರಾಶ್ಚೈವ ವಿಶೇಷತಃ ॥೯೬॥

ಪರ್ವತಪ್ರದೇಶದ ಜನರೂ ಶಿಬಿಗಳೂ ಹೇಳಿದ್ದನ್ನು ವಿಪರೀತವಾಗಿ ತಿಳಿಯುವವರು. ರಾಜನೆ, ಯವನರು ಎಲ್ಲ ತಿಳಿಯುವವರು. ವಿಶೇಷವಾಗಿ ಶೂರರು.

ಮ್ಲೇಚ್ಛಾಃ ಸ್ವಸಂಜ್ಞಾನಿಯತಾ ನಾನುಕ್ತಮಿತರೇ ಜನಾಃ ॥೯೭॥

ಮ್ಲೇಚ್ಛರು ತಮ್ಮ ಭಾಷೆಯಿಂದ ಹೇಳಿದರೆ ಮಾತ್ರ ತಿಳಿಯುತ್ತಾರೆ. ಇತರ ಪಾಮರ ಜನರು, ಹೇಳದಿರುವುದನ್ನು ತಿಳಿಯುವುದಿಲ್ಲ.

ಪ್ರತಿರಬ್ಧಾಸ್ತು ಬಾಹ್ಲೀಕಾ ನ ಚ ಕೇಚನ ಮದ್ರಕಾಃ ।
ಸ ತ್ವಮೇತಾದೃಶಃ ಶಲ್ಯ ನೋತ್ತರಂ ವಕ್ತುಮರ್ಹಸಿ ॥೯೮॥

ಬಾಹ್ಲೀಕರು ಮಾತ್ರ ಹೇಳಿದರೆ ಕೋಪಿಸಿಕೊಳ್ಳುವವರು. ಮದ್ರಕರಲ್ಲಿ ಕೆಲವರು ಮಾತ್ರ ಕೋಪಿಸಿಕೊಳ್ಳುವುದಲ್ಲ ಹೆಚ್ಚಾಗಿ ಎಲ್ಲರೂ ಕೋಪಿಸಿ ಕೊಳ್ಳುವವರೆ. ಶಲ್ಯ, ನೀನೂ ಇಂಥವನೆ. ಇದಕ್ಕೆ ನೀನು ಉತ್ತರ ಕೊಡಲಾರೆ.

ಏವಂ ಜ್ಞಾತ್ವಾ ಜೋಷಮಾಸ್ಸ್ವ ಪ್ರತೀಪಂ
ಮಾ ಸ್ಮ ಕ್ರುಧ್ಯಃ ಪಾಪಭೃತಾಂ ವರಿಷ್ಠ ।
ಪೂರ್ವಂ ಹತ್ವಾ ತ್ವಾಂ ಸಪುತ್ರಂ ಬಲೈಶ್ಚ
ಪಶ್ಚಾದ್ಧಂಸ್ಯೇ ವಾಸುದೇವಾರ್ಜುನೌ ಚ ॥೯೯॥

ಹೀಗೆ ತಿಳಿದು ಸುಮ್ಮನೇ ಇರು. ಪಾಪಿಗಳಲ್ಲಿ ಶ್ರೇಷ್ಠನಾದ ನೀನು ಕೋಪಿಸಿಕೊಳ್ಳಬೇಡ. ಕೋಪಿಸಿಕೊಂಡರೆ ನಿನ್ನನ್ನೂ ನಿನ್ನ ಪುತ್ರರನ್ನೂ ಸೈನ್ಯಗಳನ್ನೂ ಮೊದಲಿಗೇ ಕೊಂದು ಬಳಿಕ ಕೃಷ್ಣಾರ್ಜುನರನ್ನು ಸಂಹರಿಸುತ್ತೇನೆ.

ಶಲ್ಯಃ

ಆತುರಾಣಾಂ ಪರಿತ್ಯಾಗಃ ಸ್ವದಾರಸುತವಿಕ್ರಯಃ ।
ಅಂಗೇ ಪ್ರವರ್ತತೇ ಕರ್ಣ ಯೇಷಾಮಧಿಪತಿರ್ಭವಾನ್ ॥೧೦೦॥

ಶಲ್ಯ ನುಡಿದ— ಕರ್ಣ, ನಿನ್ನ ಅಂಗದೇಶದಲ್ಲಿಯೂ ಅಧಮರಿರುತ್ತಾರೆ. ರೋಗದಿಂದ ಬಳಲುವವರನ್ನು ಚಿಕಿತ್ಸೆ ಮಾಡಿಸದೆ ಬಿಟ್ಟುಬಿಡುತ್ತಾರೆ. ತಮ್ಮ ಪತ್ನೀ–ಪುತ್ರರನ್ನು ಮಾರಿಬಿಡುತ್ತಾರೆ.

ರಥಾತಿರಥಸಂಖ್ಯಾಯಾಂ ಯತ್ತ್ವಾಂ ಭೀಷ್ಮಸ್ತದಾಬ್ರವೀತ್ ।
ತಾನ್ ವಿದಿತ್ವಾऽऽತ್ಮನೋ ದೋಷಾನ್ನಿರ್ಮನ್ಯುರ್ಭವ ಮಾ ಕ್ರುಧಃ ೧೦೧

ರಥ ಅತಿರಥರ ಗಣನೆ ಮಾಡುವ ಕಾಲದಲ್ಲಿ ಭೀಷ್ಮನೇನು ನಿನ್ನ ದೋಷಗಳನ್ನು ಹೇಳಿದನೋ ಅವುಗಳನ್ನು ತಿಳಿದು ಶಾಂತನಾಗು. ಕೋಪ ಮಾಡಬೇಡ.

ಸರ್ವತ್ರ ಬ್ರಾಹ್ಮಣಾಃ ಸಂತಿ ಸಂತಿ ಸರ್ವತ್ರ ಕ್ಷತ್ರಿಯಾಃ ।
ವೈಶ್ಯಾಃ ಶೂದ್ರಾಸ್ತಥಾ ಕರ್ಣ ಸ್ತ್ರಿಯಃ ಸಾಧ್ವ್ಯಶ್ಚ ಸುವ್ರತಾಃ ॥೧೦೨॥

ಎಲ್ಲ ದೇಶಗಳಲ್ಲಿಯೂ ಉತ್ತಮರಾದ ಬ್ರಾಹ್ಮಣರಿದ್ದಾರೆ. ಎಲ್ಲ ದೇಶ ಗಳಲ್ಲಿಯೂ ಉತ್ತಮ ಕ್ಷತ್ರಿಯರು ವೈಶ್ಯರು ಶೂದ್ರರು ಇರುತ್ತಾರೆ. ಸ್ತ್ರೀಯರೂ ಒಳ್ಳೆಯ ವ್ರತನಿಷ್ಠರಾದ ಪತಿವ್ರತೆಯರಿರುತ್ತಾರೆ.

ರಮಂತೇ ಚೋಪಹಾಸೇನ ಪುರುಷಾಃ ಪುರುಷೈಃ ಸಹ ।
ಅನ್ಯೋನ್ಯೇನ ರತಾಃ ಕ್ಷೀಬಾ ದೇಶೇ ದೇಶೇ ಸಮೈಥುನಾಃ ॥೧೦೩॥

ಎಲ್ಲ ದೇಶಗಳಲ್ಲಿ ಮಧ್ಯಮಸ್ವಭಾವದ ಪುರುಷರು ಪುರುಷರೊಂದಿಗೆ ಉಪಹಾಸದಿಂದ ಸಂತೋಷ ಪಡುತ್ತಾರೆ. ಸ್ತ್ರೀ–ಪುರುಷರು ಪರಸ್ಪರ ಅನುರಾಗ ಹೊಂದಿ ಪಾನಮತ್ತರಾಗಿ ಮೈಥುನ ಮಾಡುತ್ತಾರೆ.

ಪರವಾಚ್ಯೇಷು ನಿಪುಣಃ ಸರ್ವೋ ಭವತಿ ಸರ್ವದಾ ।
ಆತ್ಮವಾಚ್ಯಂ ನ ಜಾನೀತೇ ಜಾನನ್ನಪಿ ಚ ಮುಹ್ಯತಿ ॥೧೦೪॥

ಇನ್ನೊಬ್ಬರ ದೋಷಗಳನ್ನು ಕಂಡು ಹೇಳುವಲ್ಲಿ ಎಲ್ಲರೂ ಸದಾ ನಿಪುಣರೇ ಇರುತ್ತಾರೆ. ತಮ್ಮ ದೋಷಗಳನ್ನು ತಿಳಿಯುವುದಿಲ್ಲ. ತಿಳಿದರೂ ತಿಳಿಯದವರಂತೆ ಇರುತ್ತಾರೆ.

ಸಂಜಯಃ

ಕರ್ಣೋಽಪಿ ನೋತ್ತರಂ ಪ್ರಾಹ ಶಲ್ಯೋಽಪ್ಯಭಿಮುಖಃ ಪರಾನ್ ॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಕರ್ಣನು ಇದಕ್ಕೆ ಉತ್ತರವನ್ನು ಹೇಳಲಿಲ್ಲ. ಶಲ್ಯನೂ ಶತ್ರುಗಳ ಕಡೆಗೆ ತಿರುಗಿದ.

ಸರ್ವತ್ರ ಸಂತಿ ರಾಜಾನಃ ಸ್ವಂ ಸ್ವಂ ಧರ್ಮಮನುವ್ರತಾಃ ।
ದುರ್ಮನುಷ್ಯಾನ್ನಿಗೃಹ್ಣಂತಿ ಸಂತಿ ಸರ್ವತ್ರ ಧಾರ್ಮಿಕಾಃ ॥೧೦೬॥

ಎಲ್ಲೆಡೆ ತಮ್ಮ ತಮ್ಮ ಧರ್ಮದಲ್ಲಿ ನಿರತರಾದ ರಾಜರಿರುತ್ತಾರೆ. ದುಷ್ಟಮಾನವರನ್ನು ನಿಗ್ರಹಿಸುತ್ತಾರೆ. ಸರ್ವತ್ರ ಧಾರ್ಮಿಕರು ಇರುತ್ತಾರೆ.

ನ ಕರ್ಣ ದೇಶಸಾಮಾನ್ಯಾತ್ ಸರ್ವಃ ಪಾಪಂ ನಿಷೇವತೇ ।
ಯಾದೃಶಾಃ ಸ್ವಸ್ವಭಾವೇನ ದೇಶಾ ಅಪಿ ನ ತಾದೃಶಾಃ ॥೧೦೭॥

ದೇಶ ಒಂದೇ ಆದ ಮಾತ್ರಕ್ಕೆ ಅಲ್ಲಿಯ ಎಲ್ಲ ಜನರೂ ಪಾಪ ಮಾಡುವುದಿಲ್ಲ. ಜನರು ತಮ್ಮ ತಮ್ಮ ಸ್ವಭಾವದಿಂದ ಎಂಥವರೋ ದೇಶಗಳೂ ಅಂಥವೇ ಆಗಿರುತ್ತವೆ ಎಂದೂ ಇಲ್ಲ.

ಸಂಜಯಃ

ತತೋ ದುರ್ಯೋಧನೋ ರಾಜಾ ಕರ್ಣಶಲ್ಯಾವವಾರಯತ್ ।
ಸಖಿಭಾವೇನ ರಾಧೇಯಂ ಶಲ್ಯಂ ಸೌಜನ್ಯಕೇನ ಚ ॥೧೦೮॥

ಸಂಜಯ ನುಡಿದ— ಆಗ ರಾಜಾ ದುರ್ಯೋಧನನು ಮೈತ್ರಿಯಿಂದ ಕರ್ಣನನ್ನು, ಸೌಜನ್ಯದಿಂದ ಶಲ್ಯನನ್ನು ಹೀಗೆ ಕರ್ಣ–ಶಲ್ಯರಿಬ್ಬರನ್ನೂ ತಡೆದ.

ತತೋ ನಿವಾರಿತಃ ಕರ್ಣೋ ಧಾರ್ತರಾಷ್ಟ್ರೇಣ ಮಾರಿಷ ।
ಪುನಃ ಪ್ರಹಸ್ಯ ರಾಧೇಯಃ ಪುನರ್ಯಾಹೀತ್ಯಚೋದಯತ್ ॥೧೦೯॥

ರಾಜನೆ, ದುರ್ಯೋಧನನು ಕಲಹವನ್ನು ತಡೆದುದರಿಂದ ಕರ್ಣನು ನಕ್ಕು ಶಲ್ಯನಿಗೆ ಪುನಃಪುನಃ 'ಮುಂದೆ ನಡೆ' ಎಂದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಶಲ್ಯಸಂವಾದೇ ತ್ರಿಚತ್ವಾರಿಂಶೋಧ್ಯಾಯಃ ॥೪೩॥

❖

ನಲವತ್ತನಾಲ್ಕನೆ ಅಧ್ಯಾಯ

ಎರಡು ಸೈನ್ಯಗಳ ವ್ಯೂಹರಚನೆ. ಆಗ ತಲೆದೋರಿದ ಉತ್ಪಾತಗಳನ್ನು ಶಲ್ಯ ಕರ್ಣನಿಗೆ ತೋರಿಸುತ್ತಾನೆ. ಅರ್ಜುನನ ರಥ, ಶಲ್ಯ–ಕರ್ಣರು ನೋಡುತ್ತಿದ್ದಂತೆಯೆ, ಸಂಶಪ್ತಕರ ಸೈನ್ಯದೊಳಗೆ ನುಗ್ಗಿತು.

ಸಂಜಯಃ

ತತಃ ಪರಾನೀಕಮಿದಂ ವ್ಯೂಢಮಪ್ರತಿಮಂ ಸಹ ।
ಸಮೀಕ್ಷ್ಯ ಕರ್ಣಃ ಪಾರ್ಥಾನಾಂ ಧೃಷ್ಟದ್ಯುಮ್ನಾಭಿರಕ್ಷಿತಮ್ ॥೧॥

ಪ್ರಯಯೌ ರಥಘೋಷೇಣ ಸಿಂಹನಾದರವೇಣ ಚ ।
ವಾದಿತ್ರಾಣಾಂ ಚ ನಿನದೈಃ ಕಂಪಯನ್ನಿವ ಮೇದಿನೀಮ್ ॥೨॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಆಗ ಕರ್ಣನು ಧೃಷ್ಟದ್ಯುಮ್ನನಿಂದ ರಕ್ಷಿತವಾದ ಶತ್ರುಸೈನ್ಯವು ಅಪ್ರತಿಮವಾಗಿ ವ್ಯೂಹಮಾಡಿ ನಿಂತಿದ್ದುದನ್ನು ಕಂಡು ರಥಘೋಷ ಸಿಂಹನಾದ ಧ್ವನಿ ವಾದ್ಯಘೋಷಗಳಿಂದ ಭೂಮಿಯನ್ನು ನಡುಗುವಂತೆ ಮಾಡುತ್ತ ಮುಂದೆ ನಡೆದ.

ವೇಪಮಾನ ಇವ ಕ್ರೋಧಾದ್ ಯುದ್ಧಶೌಂಡಃ ಪರಂತಪಃ ।
ಪ್ರತಿವ್ಯೂಹ್ಯ ಮಹಾತೇಜಾ ಯಥಾವದ್ ಭರತರ್ಷಭ ॥೩॥

ವ್ಯಧಮತ್ ಪಾಂಡವೀಂ ಸೇನಾಮಾಸುರೀಂ ಮಘವಾನಿವ ।
ಯುಧಿಷ್ಠಿರಂ ಚಾಭಿಭವನ್ನಪಸವ್ಯಂ ಚಕಾರ ಹ ॥೪॥

ಶತ್ರುನಾಶಕನಾದ ಯುದ್ಧನಿಪುಣನಾದ ಮಹಾಪರಾಕ್ರಮಿ ಕರ್ಣ ಕೋಪದಿಂದ ನಡುಗುತ್ತ ಶತ್ರುಸೈನ್ಯವ್ಯೂಹಕ್ಕೆ ಪ್ರತಿಯಾಗಿ ತನ್ನ ಸೈನ್ಯವನ್ನು ಯಥಾವತ್ ವ್ಯೂಹಮಾಡಿ, ಅಸುರಸೈನ್ಯವನ್ನು ಇಂದ್ರನಂತೆ, ಪಾಂಡವಸೈನ್ಯವನ್ನು ನಾಶಮಾಡಲು ತೊಡಗಿದ. ಯುಧಿಷ್ಠಿರನನ್ನು ಪರಾಭವಗೊಳಿಸುತ್ತ ಪ್ರದಕ್ಷಿಣವಾಗಿ ಸುತ್ತಿದ.

ಧೃತರಾಷ್ಟ್ರಃ

ಕಥಂ ಸಂಜಯ ರಾಧೇಯಃ ಪ್ರತ್ಯವ್ಯೂಹತ ಪಾಂಡವಾನ್ ।
ಧೃಷ್ಟದ್ಯುಮ್ನಮುಖಾನ್ ವೀರಾನ್ ಭೀಮಸೇನಾಭಿರಕ್ಷಿತಾನ್ ॥೫॥
ಸರ್ವಾನೇವ ಮಹೇಷ್ವಾಸಾನಜಯ್ಯಾನಮರೈರಪಿ ॥೬॥

ಧೃತರಾಷ್ಟ್ರ ನುಡಿದ— ಸಂಜಯ, ದೇವತೆಗಳಿಂದಲೂ ಗೆಲ್ಲಲಾಗದ, ಭೀಮಸೇನನಿಂದ ರಕ್ಷಿತರಾದ, ಮಹಾಬಿಲ್ಲಾರನಾದ ಧೃಷ್ಟದ್ಯುಮ್ನನನ್ನು ಮುಂದೆ ಮಾಡಿಕೊಂಡ, ವೀರರಾದ ಪಾಂಡವರೆಲ್ಲರಿಗೂ ಪ್ರತಿಯಾಗಿ ಸೈನ್ಯವನ್ನು ಕರ್ಣ ಹೇಗೆ ವ್ಯೂಹಮಾಡಿ ನಿಲ್ಲಿಸಿದ?

ಕೇ ಚ ಪ್ರಪಕ್ಷೌ ಪಕ್ಷೌ ವಾ ಮಮ ಸೈನ್ಯಸ್ಯ ಸಂಜಯ ।
ಪ್ರವಿಭಜ್ಯ ಯಥಾನ್ಯಾಯಂ ಕಥಂ ವಾ ಸಮವಸ್ಥಿತಾಃ ॥೭॥

ನನ್ನ ಸೈನ್ಯದಲ್ಲಿ ಬಲ ಎಡ ಭಾಗಗಳಲ್ಲಿ ಯಾರಿದ್ದರು? ನಿಯಮಾನುಸಾರ ವಿಭಾಗ ಮಾಡಿಕೊಂಡು ಹೇಗೆ ನಿಂತರು?

ಕಥಂ ಪಾಂಡುಸುತಾಶ್ಚಾಪಿ ಪ್ರತ್ಯವ್ಯೂಹಂತ ಮಾಮಕಾನ್ ।
ಕಥಂ ಚೈತನ್ಮಹಾಯುದ್ಧಂ ಪ್ರಾವರ್ತತ ಸುದಾರುಣಮ್ ॥೮॥

ಪಾಂಡವರು ನನ್ನ ಸೈನ್ಯಕ್ಕೆ ಪ್ರತಿಯಾಗಿ ಹೇಗೆ ವ್ಯೂಹ ಮಾಡಿಕೊಂಡರು? ಬಲು ಭೀಕರವಾದ ಈ ಮಹಾಯುದ್ಧ ಹೇಗೆ ನಡೆಯಿತು?

ಕ್ವ ಚ ಬೀಭತ್ಸುರಭವದ್ ಯತ್ಕರ್ಣೋ೯ಽಯಾದ್ ಯುಧಿಷ್ಠಿರಮ್ ।
ಕೋ ಹ್ಯರ್ಜುನಸ್ಯ ಸಾನ್ನಿಧ್ಯೇ ಶಕ್ತೋಽಭ್ಯೇತುಂ ಯುಧಿಷ್ಠಿರಮ್ ॥೯॥

ಕರ್ಣನು ಯುಧಿಷ್ಠಿರನನ್ನು ಆಕ್ರಮಿಸಿದಾಗ ಅರ್ಜುನನೆಲ್ಲಿದ್ದ? ಅರ್ಜುನ ಜೊತೆಗಿರುವಾಗ ಯುಧಿಷ್ಠಿರನನ್ನು ಯಾವನು ತಾನೆ ಆಕ್ರಮಿಸಲು ಶಕ್ತ?

ಸರ್ವಭೂತಾನಿ ಯೋ ಹ್ಯೇಕಃ ಖಾಂಡವೇ ಜಿತವಾನ್ ಪುರಾ ।
ಕಸ್ತಮನ್ಯತ್ರ ರಾಧೇಯಾತ್ ಪ್ರತಿಯುದ್ಧ್ಯೇಜ್ಜಿಜೀವಿಷುಃ ॥೧೦॥

ಅರ್ಜುನ ಹಿಂದೆ ಖಾಂಡವದಲ್ಲಿ ಒಬ್ಬನೆ ಎಲ್ಲ ಯೋಧರನ್ನೂ ಗೆದ್ದವನು. ಬದುಕುವಾಸೆ ಉಳ್ಳವನು ಕರ್ಣನ ಹೊರತು ಇನ್ನಾವನು ಅರ್ಜುನನೊಡನೆ ಯುದ್ಧ ಮಾಡಿಯಾನು?

ಸಂಜಯಃ

ಶೃಣು ವ್ಯೂಹಸ್ಯ ರಚನಾಮರ್ಜುನಶ್ಚ ಯಥಾ ಗತಃ ।
ಪರಿವಾರ್ಯ ನೃಪಂ ಸ್ವಂ ಸ್ವಂ ಸಂಗ್ರಾಮಶ್ಚಾಭವದ್ ಯಥಾ ॥೧೧॥

ಸಂಜಯ ನುಡಿದ— ರಾಜನೆ, ನಮ್ಮ ವ್ಯೂಹರಚನೆ ಹೇಗಿತ್ತು? ಅರ್ಜುನ ಎಲ್ಲಿದ್ದ? ಯೋಧರು ತಮ್ಮ ತಮ್ಮ ರಾಜರನ್ನು ಸುತ್ತುವರಿದು ನಿಂತುಕೊಂಡಾಗ ಯುದ್ಧ ಹೇಗೆ ನಡೆಯಿತು? ಇವೆಲ್ಲವನ್ನೂ ಹೇಳುತ್ತೇನೆ, ಕೇಳು.

ಕೃಪಃ ಶಾರದ್ವತೋ ರಾಜನ್ ಮಾಗಧಾಶ್ಚ ತರಸ್ವಿನಃ ।
ಸಾತ್ವತಃ ಕೃತವರ್ಮಾ ಚ ದಕ್ಷಿಣಂ ಪಕ್ಷಮಾಶ್ರಿತಾಃ ॥೧೨॥

ಸೈನ್ಯದ ಬಲಭಾಗದಲ್ಲಿ ಶಾರದ್ವತಕೃಪನೂ ವೇಗಶಾಲಿಗಳಾದ ಮಾಗಧರೂ, ಸಾತ್ವತನಾದ ಕೃತವರ್ಮನೂ ನಿಂತರು.

ತೇಷಾಂ ಪ್ರಪಕ್ಷೇ ಶಕುನಿರುಲೂಕಶ್ಚ ಮಹಾರಥಃ ।
ಸಾದಿಭಿರ್ವಿಮಲಪ್ರಾಸೈಸ್ತವಾನೀಕಮರಕ್ಷತಾಮ್ ॥೧೩॥

ಅವರಿಗೆ ಎಡಭಾಗದಲ್ಲಿ ಮಹಾರಥನಾದ ಶಕುನಿ ಮತ್ತು ಉಲೂಕರು, ನಿರ್ಮಲ ಪ್ರಾಸಾಯುಧ ಹಿಡಿದ ಅಶ್ವಾರೋಹಿಗಳೊಂದಿಗೆ ನಿಂತರು.

ಗಾಂಧಾರಿಭಿರಸಂಭ್ರಾಂತೈಃ ಪಾರ್ವತೀಯೈಶ್ಚ ದುರ್ಜಯೈಃ ।
ಶಲಭಾನಾಮಿವ ವ್ರಾತೈಃ ಪಿಶಾಚೈರಿವ ದುರ್ದೃಶೈಃ ॥೧೪॥

ಚತುರ್ವಿಂಶತ್ಸಹಸ್ರಾಣಿ ರಥಾನಾಮನಿವರ್ತಿನಾಮ್ ।
ಸಂಶಪ್ತಕಾ ಯುದ್ಧಶೌಂಡಾ ವಾಮಂ ಪಾರ್ಶ್ವಮಪಾಲಯನ್ ॥೧೫॥

ಎಡಭಾಗವನ್ನು ಯುದ್ಧನಿಪುಣರಾದ ಸಂಶಪ್ತಕರು ರಕ್ಷಣೆ ಮಾಡಿದರು. ಮಿಡತೆಗಳಂತೆ ಗುಂಪಾಗಿ ಬರುವ, ಪಿಶಾಚಗಳಂತೆ ಕಾಣಲು ಭೀಕರರಾದ, ಭಯವಿಲ್ಲದ, ಗಾಂಧಾರರಿಂದಲೂ ಗೆಲ್ಲಲಾಗದ ಪರ್ವತವಾಸಿಯೋಧರಿಂದಲೂ ಕೂಡಿರುವವರು, ಸೋತು ಹಿಮ್ಮೆಟ್ಟದಂಥ ಇಪ್ಪತ್ತನಾಲ್ಕು ಸಾವಿರ ರಥಿಕರು, ಸಂಶಪ್ತಕರು.

ಸಮುಚ್ಛ್ರಿತಾಸ್ತವ ಸುತೈಃ ಕೃಷ್ಣಾರ್ಜುನಜಿಘಾಂಸವಃ ।
ತೇಷಾಂ ಪ್ರಪಕ್ಷಃ ಕಾಂಬೋಜಾಃ ಶಕಾಶ್ಚ ಯವನೈಃ ಸಹ ॥೧೬॥

ಕಾಂಬೋಜ ಶಕ ಯವನರು ನಿನ್ನ ಮಕ್ಕಳೊಂದಿಗೆ ಕೂಡಿ ಕೃಷ್ಣಾರ್ಜುನರನ್ನು ಕೊಲ್ಲಲು ಬಯಸಿ ಸಂಶಪ್ತಕರಿಗೆ ಎಡಭಾಗದಲ್ಲಿ ನಿಂತರು.

ನಿದೇಶಾತ್ ಸೂತಪುತ್ರಸ್ಯ ಸರಥಾಃ ಸಾಶ್ವಪತ್ತಯಃ ।
ಆಹ್ವಯಂತೋರ್ಜುನಂ ತಸ್ಥುಃ ಕೇಶವಂ ಚ ಮಹಾಬಲಮ್ ॥೧೭॥

ಕರ್ಣನ ಆದೇಶದಂತೆ ರಥ ಅಶ್ವ ಪದಾತಿಗಳೊಂದಿಗೆ ಅವರು ಮಹಾಬಲಶಾಲಿಯಾದ ಕೃಷ್ಣನನ್ನೂ ಅರ್ಜುನನನ್ನೂ ಆಹ್ವಾನಿಸುತ್ತ ನಿಂತರು.

ಮಧ್ಯೇಸೇನಾಮುಖಂ ಕರ್ಣೋ ವ್ಯವಾತಿಷ್ಠತ ದಂಸಿತಃ ।
ಚಿತ್ರವರ್ಮಾಂಗದಸ್ರಗ್ವೀ ಪಾಲಯನ್ ವಾಹಿನೀಮುಖಮ್ ॥೧೮॥

ಸೇನಾಮುಖದ ಮಧ್ಯದಲ್ಲಿ ಚಿತ್ರವರ್ಣದ ಕವಚ ಅಂಗದ ಹಾರಗಳನ್ನು ಧರಿಸಿ ಸನ್ನದ್ಧನಾಗಿ ಕರ್ಣನು ವ್ಯೂಹದ ಮುಖಭಾಗವನ್ನು ರಕ್ಷಿಸುತ್ತ ನಿಂತ.

ರಕ್ಷ್ಯಮಾಣಃ ಸುಸಂರಬ್ಧೈಃ ಪುತ್ರೈಃ ಶಸ್ತ್ರಭೃತಾಂ ವರಃ ।
ವಾಹಿನೀಪ್ರಮುಖಂ ವೀರಃ ಸಂಪ್ರಕರ್ಷನ್ನಶೋಭತ ॥೧೯॥

ಕುಪಿತರಾದ ಪುತ್ರರಿಂದ ರಕ್ಷಿತನಾಗಿ ಸೈನ್ಯವನ್ನು ನಡೆಸುತ್ತ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ವೀರಕರ್ಣ ಶೋಭಿಸಿದ.

ಅಯೋರತ್ನಿರ್ಮಹಾಸತ್ತ್ವೋ ವೈಶ್ವಾನರಸಮದ್ಯುತಿಃ ।
ಮಹಾದ್ವಿಪಸ್ಕಂಧಗತಃ ಪಿಂಗಾಕ್ಷಃ ಪ್ರಿಯದರ್ಶನಃ ॥೨೦॥
ದುಃಶಾಸನೋ ವೃತಃ ಸೈನ್ಯೈಃ ಸ್ಥಿತೋ ವ್ಯೂಹಸ್ಯ ಪೃಷ್ಠತಃ ॥೨೧॥

ಉಕ್ಕಿನಂಥ ತೋಳು, ಮಹಾಶಕ್ತಿ ಬೆಂಕಿಯಂಥ ವರ್ಚಸ್ಸುಳ್ಳವನು, ಕಂದು ಹಳದಿ ಕಣ್ಣುಳ್ಳವನು, ನೋಡಲು ಆಕರ್ಷಕ. ಮಹಾಗಜಸ್ಕಂಧದಲ್ಲಿ ಕುಳಿತಿದ್ದಾನೆ, ಇಂಥ ದುಃಶಾಸನ, ಸೈನ್ಯದಿಂದ ಸುತ್ತುವರಿದವನು, ವ್ಯೂಹದ ಹಿಂಭಾಗದಲ್ಲಿದ್ದ

ತಮನ್ವಯಾನ್ಮಹಾರಾಜ ಸ್ವಯಂ ದುರ್ಯೋಧನೋ ನೃಪಃ ।
ಚಿತ್ರಾಶ್ವೈಶ್ಚಿತ್ರಸನ್ನಾಹೈಃ ಸೋದರ್ಯೈರಭಿರಕ್ಷಿತಃ ॥೨೨॥

ದುಃಶಾಸನನನ್ನು ಹಿಂಬಾಲಿಸಿ,ಮಹಾರಾಜ, ಸ್ವಯಂ ರಾಜಾ ದುರ್ಯೋಧನನು ಚಿತ್ರವರ್ಣದ ಅಶ್ವಗಳಿಂದ ಚಿತ್ರಸನ್ನಾಹಗಳಿಂದ ಯುಕ್ತರಾದ ಸೋದರರಿಂದ ರಕ್ಷಿತನಾಗಿ ಶೋಭಿಸಿದ.

ರಕ್ಷ್ಯಮಾಣೋ ಮಹಾವೀರ್ಯೈಃ ಸಹಿತೈರ್ಮದ್ರಕೇಕಯೈಃ ।
ಅಶೋಭತ ಮಹಾರಾಜ ದೇವೈರಿವ ಶತಕ್ರತುಃ ॥೨೩॥

ಜೊತೆಗೂಡಿದ ಮಹಾವೀರ್ಯರಾದ ಮದ್ರ-ಕೇಕಯರಿಂದ ದುರ್ಯೋಧನನು ರಕ್ಷಿತನಾಗಿ ದೇವತೆಗಳಿಂದ ರಕ್ಷಿತನಾದ ಇಂದ್ರನಂತೆ ಶೋಭಿಸಿದ.

ಅಶ್ವತ್ಥಾಮಾ ಕುರೂಣಾಂ ಚ ಯೇ ಪ್ರವೀರಾ ಮಹಾರಥಾಃ ।
ನಿತ್ಯಮತ್ತಾಶ್ಚ ಮಾತಂಗಾಃ ಶೂರೈರ್ಮ್ಲೇಚ್ಛೈರಧಿಷ್ಠಿತಾಃ ॥೨೪॥
ಅನ್ವಯುಸ್ತದ್ ರಥಾನೀಕಂ ಕ್ಷರಂತ ಇವ ತೋಯದಾಃ ॥೨೫॥

ಅಶ್ವತ್ಥಾಮನೂ ಮಹಾರಥರಾದ ಕೌರವರ ವೀರರೂ ದುರ್ಯೋಧನನನ್ನು ಹಿಂಬಾಲಿಸಿದರು. ಶೂರರಾದ ಮ್ಲೇಚ್ಛ ಯೋಧರೊಂದಿಗೆ, ಮಳೆಗರೆವ ಮೋಡ ಗಳಂತೆ ಸದಾ ಮದಜಲ ಸುರಿಸುವ ಆನೆಗಳೂ ರಥಸೈನ್ಯವನ್ನು ಹಿಂಬಾಲಿಸಿದುವು.

ತೇ ಧ್ವಜೈರ್ವೈಜಯಂತೀಭಿರ್ಜ್ವಲದ್ಭಿಃ ಪರಮಾಯುಧೈಃ ।
ಸಾದಿಭಿಶ್ಚಾಸ್ಥಿತಾ ರೇಜುರ್ದ್ರುಮವಂತ ಇವಾಚಲಾಃ ॥೨೬॥

ಆ ಗಜಸೈನ್ಯಗಳು ಧ್ವಜಗಳಿಂದಲೂ, ಪತಾಕೆಗಳಿಂದಲೂ, ಜ್ವಲಿಸುವ ಶ್ರೇಷ್ಠ ಆಯುಧಗಳಿಂದಲೂ, ಗಜಾರೋಹಿಗಳಿಂದಲೂ ಯುಕ್ತವಾಗಿ, ಮರ–ಗಿಡಗಳಿಂದ ಕೂಡಿದ ಬೆಟ್ಟಗಳಂತೆ ಶೋಭಿಸಿದುವು.

ತೇಷಾಂ ಪದಾತಿನಾಗಾನಾಂ ಪಾದರಕ್ಷಾಃ ಸಹಸ್ರಶಃ ।
ಪಟ್ಟಿಶಾಸಿಧರಾಃ ಶೂರಾ ಬಭೂವುರನಿವರ್ತಿನಃ ॥೨೭॥

ಯುದ್ಧದಲ್ಲಿ ಹಿಮ್ಮೆಟ್ಟದ, ಪಟ್ಟಿಶ ಖಡ್ಗಧಾರಿಗಳಾದ ಶೂರರು ಸಾವಿರಾರು ಮಂದಿ, ಆ ಪದಾತಿ ಗಜಸೈನ್ಯಗಳಿಗೆ ಪಾದರಕ್ಷಕರಾದರು.

ಸಾದಿಭಿಃ ಸ್ಯಂದನೈರ್ನಾಗೈರಧಿಕಂ ಸಮಲಂಕೃತೈಃ ।
ಸ ವ್ಯೂಹರಾಜೋ ವಿಬಭೌ ದೇವಾಸುರಚಮೂಪಮಃ ॥೨೮॥

ಚೆನ್ನಾಗಿ ಅಲಂಕೃತವಾದ ಅಶ್ವರಥಗಜಗಳಿಂದ ಆ ಶ್ರೇಷ್ಠವಾದ ವ್ಯೂಹವು ದೇವಾಸುರ ಸೇನಾವ್ಯೂಹದಂತೆ ಶೋಭಿಸಿತು.

ಬಾರ್ಹಸ್ಪತ್ಯಃ ಸುವಿಹಿತೋ ನಾಯಕೇನ ವಿಪಶ್ಚಿತಾ ।
ನೃತ್ಯತೀವ ಮಹಾವ್ಯೂಹಃ ಪರೇಷಾಮಾದಧದ್ಭಯಮ್ ॥೨೯॥

ತಜ್ಞನಾದ ನಾಯಕನಿಂದ ಚೆನ್ನಾಗಿ ರಚಿತವಾದ ಆ ಬಾರ್ಹಸ್ಪತ್ಯವೆಂಬ ಮಹಾವ್ಯೂಹವು ನೃತ್ಯಮಾಡುವಂತಿದ್ದು ಶತ್ರುಗಳಿಗೆ ಭಯ ಉಂಟುಮಾಡಿತು.

ತಸ್ಯ ಪಕ್ಷಪ್ರಪಕ್ಷೇಭ್ಯೋ ನಿಷ್ಪತಂತಿ ಯುಯುತ್ಸವಃ ।
ಪತ್ತ್ಯಶ್ವರಥಮಾತಂಗಾಃ ಪ್ರಾವೃಷೀವ ಬಲಾಹಕಾಃ ॥೩೦॥

ಆ ವ್ಯೂಹದ ಬಲ–ಎಡಪಾರ್ಶ್ವಗಳಿಂದ ಯುದ್ಧೇಚ್ಛುಗಳಾಗಿ ಪದಾತಿ ಅಶ್ವರಥಗಜಗಳು ಮಳೆಗಾಲದಲ್ಲಿ ಮೋಡಗಳಂತೆ ಹೊರಟು ಬರುತ್ತಿದ್ದುವು.

ತತಃ ಸೇನಾಮುಖೇ ಕರ್ಣಂ ದೃಷ್ಟ್ವಾ ರಾಜಾ ಯುಧಿಷ್ಠಿರಃ ।
ಧನಂಜಯಮಮಿತ್ರಘ್ನಮೇಕವೀರಮುವಾಚ ಹ ॥೩೧॥

ಸೇನಾಮುಖದಲ್ಲಿ ಕರ್ಣನನ್ನು ನೋಡಿ ರಾಜಾ ಯುಧಿಷ್ಠಿರನು ಶತ್ರುನಾಶಕನಾದ ಮಹಾವೀರನಾದ ಅರ್ಜುನನಿಗೆ ಹೇಳಿದ.

ಪಶ್ಯಾರ್ಜುನ ಮಹಾವ್ಯೂಹಂ ಕರ್ಣೇನ ವಿಹಿತಂ ರಣೇ ।
ಯುಕ್ತಂ ಪಕ್ಷೈಃ ಪ್ರಪಕ್ಷೈಶ್ಚ ಪರಾನೀಕಂ ಪ್ರಕಾಶತೇ ॥೩೨॥

ರಣದಲ್ಲಿ ಕರ್ಣನು ರಚಿಸಿದ ಮಹಾವ್ಯೂಹವನ್ನು ಅರ್ಜುನ, ನೋಡು. ಬಲ–ಎಡಪಾರ್ಶ್ವಗಳಿಂದ ಕೂಡಿದ ಶತ್ರುಸೈನ್ಯವು ವ್ಯೂಹದಿಂದ ಶೋಭಿಸುತ್ತಿದೆ.

ತದೇತದ್ಧೃ ಸಮಾಲೋಕ್ಯ ಪ್ರತ್ಯನೀಕಂ ಮಹಾಬಲಮ್ ।
ಯಥಾ ನಾಭಿಭವತ್ಯಸ್ಮಾಂಸ್ತಥಾ ನೀತಿರ್ವಿಧೀಯತಾಮ್ ॥೩೩॥

ಮಹಾಬಲಶಾಲಿಯಾದ ಈ ಶತ್ರುಸೈನ್ಯವನ್ನು ಚೆನ್ನಾಗಿ ಪರಿಶೀಲಿಸಿ ಅದು ನಮ್ಮನ್ನು ಪರಾಭವಗೊಳಿಸದಂಥ ಯುದ್ಧನೀತಿಯನ್ನು ಕಾರ್ಯಗತಗೊಳಿಸು.

ಏವಮುಕ್ತೋಽರ್ಜುನೋ ರಾಜ್ಞಾ ಪ್ರಾಂಜಲಿರ್ನೃಪಮಬ್ರವೀತ್ ।
ಯಥಾ ಭವಾನಾಹ ತಥಾ ತತ್ಸರ್ವಂ ನ ತದನ್ಯಥಾ ॥೩೪॥

ರಾಜಾಯುಧಿಷ್ಠಿರ ಹೀಗೆ ಹೇಳಿದಾಗ ಅರ್ಜುನನು ಕೈಮುಗಿದು ರಾಜನಿಗೆ ಹೇಳಿದ— 'ಅದೆಲ್ಲವೂ ನೀನು ಹೇಳಿದಂತೆಯೆ ಆಗುವುದು. ಅನ್ಯಥಾ ಆಗಲಾರದು.'

ಯಸ್ತ ್ವಸ್ಯ ವಿಹಿತೋ ಘಾತಸ್ತಂ ಕರಿಷ್ಯಾಮಿ ಭಾರತ ।
ಪ್ರಧಾನವಧ ಏವಾಸ್ಯ ವಿನಾಶಸ್ತಂ ಕರೋಮ್ಯಹಮ್ ॥೩೫॥

ರಾಜನೇ, ಈ ಶತ್ರುಸೇನಾವ್ಯೂಹಕ್ಕೆ ಯಾವ ವಿನಾಶವು ಶಾಸ್ತ್ರದಲ್ಲಿ ವಿಹಿತವಾಗಿದೆಯೋ ಅದನ್ನು ಮಾಡುತ್ತೇನೆ. ಪ್ರಧಾನ ಯೋಧರ ವಧವೇ ಇದಕ್ಕೆ ವಿಹಿತವಾದ ವಿನಾಶ. ಅದನ್ನು ನಾನು ಮಾಡುತ್ತೇನೆ.

ಯುಧಿಷ್ಠಿರಃ

ತಸ್ಮಾತ್ತ ್ವಮೇವ ರಾಧೇಯಂ ಭೀಮಸೇನಃ ಸುಯೋಧನಮ್ ।
ವೃಷಸೇನಂ ಚ ನಕುಲಃ ಸಹದೇವೋಽಪಿ ಸೌಬಲಮ್ ॥೩೬॥

ದುಃಶಾಸನಂ ಶತಾನೀಕೋ ಹಾರ್ದಿಕ್ಯಂ ಶಿನಿಪುಂಗವಃ ।
ಧೃಷ್ಟದ್ಯುಮ್ನಸ್ತಥಾ ದ್ರೌಣಿಂ ಸ್ವಯಂ ಯಾಸ್ಯಾಮ್ಯಹಂ ಕೃಪಮ್ ॥೩೭॥

ದ್ರೌಪದೇಯಾ ಧಾರ್ತರಾಷ್ಟ್ರಾನ್ ಶಿಷ್ಟಾನ್ ಸಹ ಶಿಖಂಡಿನಾ ।
ತೇ ತೇ ಚ ತಾಸ್ತಾನಹಿತಾನಸ್ಮಾಕಂ ಘ್ನಂತು ಸೋಮಕಾಃ ॥೩೮॥

ಯುಧಿಷ್ಠಿರ ನುಡಿದ— ಪ್ರಧಾನರ ವಧ ಆವಶ್ಯಕವಾದ್ದರಿಂದ ನೀನು ಕರ್ಣನನ್ನು ಇದಿರಿಸು. ಭೀಮನು ದುರ್ಯೋಧನನನ್ನು ಇದಿರಿಸಲಿ. ವೃಷಸೇನನನ್ನು ನಕುಲ, ಶಕುನಿಯನ್ನು ಸಹದೇವ, ದುಃಶಾಸನನನ್ನು ಶತಾನೀಕ, ಕೃತವರ್ಮನನ್ನು ಸಾತ್ಯಕಿ, ಅಶ್ವತ್ಥಾಮನನ್ನು ಧೃಷ್ಟದ್ಯುಮ್ನ ಇದಿರಿಸಲಿ. ನಾನು ಸ್ವಯಂ ಕೃಪಾಚಾರ್ಯರನ್ನು ಇದಿರಿಸುತ್ತೇನೆ. ದ್ರೌಪದೀಪುತ್ರರು ಶಿಖಂಡಿಯೊಡಗೂಡಿ ಉಳಿದಿರುವ ಧೃತರಾಷ್ಟ್ರ ಪುತ್ರರನ್ನು ಇದಿರಿಸಲಿ. ಹೀಗೇ ಸೋಮಕರು ಅವರವರು ಆಯಾ ಪ್ರಧಾನ ಶತ್ರುಗಳೊಡನೆ ಹೋರಾಡಲಿ.

ಸಂಜಯಃ

ಇತ್ಯುಕ್ತೋ ಧರ್ಮರಾಜೇನ ತಥೇತ್ಯುಕ್ತ್ವಾ ಧನಂಜಯಃ ।
ವ್ಯಾದಿದೇಶ ಸ್ವಸೈನ್ಯಾನಿ ಸ್ವಯಂ ಚಾಗಾಚ್ಚಮೂಮುಖಮ್ ॥೩೯॥

ಧರ್ಮರಾಜ ಹೀಗೆ ಹೇಳಿದಾಗ ಅರ್ಜುನ ಹಾಗೇ ಆಗಲೆಂದು ಹೇಳಿ ತನ್ನ ಸೈನಿಕರನ್ನು ಆಯಾ ಸೈನಿಕರೊಡನೆ ಹೋರಾಡಲು ಆದೇಶ ನೀಡಿದ. ತಾನು ಸೇನಾಮುಖದ ಕಡೆಗೆ ಹೊರಟ. (ಅದರ ವಿವರಣೆ ಮುಂದೆ ಬರುತ್ತದೆ.)

ಅಗ್ನಿರ್ವೈಶ್ವಾನರಃ ಪೂರ್ವಂ ಬ್ರಹ್ಮೇಂದುಃ ಸಪ್ತಿತಾಂ ಗತಃ ।
ತಸ್ಮಾದ್ಯಃ ಪ್ರಥಮೋ ಜಾತಸ್ತಂ ದೇವಾ ಬ್ರಾಹ್ಮಣಾ ವಿದುಃ ॥೪೦॥

ಮೊದಲಿಗೆ ವೈಶ್ವಾನರನೆಂಬ ಅಗ್ನಿಯೂ ಬ್ರಹ್ಮನೂ ಚಂದ್ರನೂ ಅರ್ಜುನನ ರಥದ ಕುದುರೆಗಳಾದರು. ಅಂದರೆ ನಾಲ್ಕೂ ಕುದುರೆಗಳಲ್ಲಿ ಅವರ ಸನ್ನಿಧಾನ ಉಂಟಾಯಿತು. ಆಕಾರಣದಿಂದ ಅರ್ಜುನನ ರಥ 'ಪ್ರಥಮ' ಶ್ರೇಷ್ಠವೆನಿಸಿತು. ಇದನ್ನು ದೇವತೆಗಳು ಋಷಿಗಳು ಮಾತ್ರ ಅರಿತುಕೊಂಡರು.

ಅಥ ತಂ ರಥಮಾಯಾಂತಂ ದೃಷ್ಟ್ವಾತ್ಯದ್ಭುತದರ್ಶನಮ್ ।
ಉವಾಚಾಧಿರಥಿಂ ಶಲ್ಯಃ ಪುನಸ್ತಂ ಯುದ್ಧದುರ್ಮದಮ್ ॥೪೧॥

ಬಳಿಕ ಅಂಥ ಅತಿಅದ್ಭುತವಾಗಿ ಕಾಣುವ ಅರ್ಜುನನ ರಥ ಬರುತ್ತಿರುವುದನ್ನು ಕಂಡು ಶಲ್ಯನು ಯುದ್ಧದ ಚಟಉಳ್ಳ ಕರ್ಣನಿಗೆ ಪುನಃ ನುಡಿದ.

ಅಯಂ ಸ ರಥ ಆಯಾತಿ ಶ್ವೇತಾಶ್ವಃ ಕೃಷ್ಣಸಾರಥಿಃ ।
ನಿಘ್ನನ್ನಮಿತ್ರಾನ್ ಕೌಂತೇಯೋ ಯಂ ಕರ್ಣ ಪರಿಪೃಚ್ಛಸಿ ॥೪೨॥

ಕರ್ಣ, ನೀನು 'ರಥವೆಲ್ಲಿ ಅರ್ಜುನನೆಲ್ಲಿ' ಎಂದು ಕೇಳುತ್ತಿರುವೆ ತಾನೆ? ಆ ರಥವು ಇದೇ. ಶ್ವೇತಾಶ್ವಯುಕ್ತವಾಗಿ ಕೃಷ್ಣನ ಸಾರಥ್ಯದಲ್ಲಿ ಬರುತ್ತಿದೆ. ಆ ಅರ್ಜುನನೆ ಈತ, ಶತ್ರುಗಳನ್ನು ಕೊಲ್ಲುತ್ತ ಬರುತ್ತಿದ್ದಾನೆ.

ಶ್ರೂಯತೇ ತುಮುಲಃ ಶಬ್ದೋ ರಥನೇಮಿಸ್ವನೋ ಮಹಾನ್ ।
ಧ್ರುವಮೇತೌ ಮಹಾತ್ಮಾನೌ ವಾಸುದೇವಧನಂಜಯೌ ॥೪೩॥

ದೊಂಬಿ ಶಬ್ದವೂ ಕೇಳಿಬರುತ್ತಿದೆ. ರಥಚಕ್ರದ ದೊಡ್ಡ ಧ್ವನಿ ಕೇಳಿ ಬರುತ್ತಿದೆ. ನಿಶ್ಚಯವಾಗಿಯೂ ಮಹಾತ್ಮರಾದ ಕೃಷ್ಣಾರ್ಜುನರು ಇವರೇ.

ಏಷ ರೇಣುಃ ಸಮುದ್ಭೂತೋ ದಿವಮಾವೃತ್ಯ ತಿಷ್ಠತಿ ॥೪೪॥

ಚಕ್ರನೇಮಿಪ್ರಣುನ್ನಾ ಚ ಕಂಪತೇ ಕರ್ಣ ಮೇದಿನೀ ।
ಪ್ರವಾತ್ಯೇಷ ಮಹಾವಾಯುರಭಿತಸ್ತವ ವಾಹಿನೀಮ್ ॥೪೫॥

ಈ ಧೂಳು ಎದ್ದು ಅಂತರಿಕ್ಷವನ್ನು ಆವರಿಸಿ ನಿಲ್ಲುತ್ತಿದೆ, ಕರ್ಣ, ಚಕ್ರ ಘರ್ಷಣೆಯಿಂದ ಭೂಮಿ ಕಂಪಿಸುತ್ತಿದೆ. ಚಂಡಮಾರುತ ನಿನ್ನ ಸೈನ್ಯದ ಮೇಲೆ ಬೀಸುತ್ತಿದೆ.

ಕ್ರವ್ಯಾದಾ ವ್ಯಾಹರಂತ್ಯೇತೇ ವೇದಯನ್ತೋ ಮಹದ್ ಭಯಮ್॥೪೬॥

ಮಾಂಸಾಶಿ ಮೃಗಗಳು ಮಹತ್ತಾದ ಭಯ ಬರಲಿದೆ ಎಂದು ಹೇಳುತ್ತಿವೆ.

ಪಶ್ಯ ಕರ್ಣ ಮಹಾಘೋರಂ ಭಯದಂ ಲೋಮಹರ್ಷಣಮ್ ।
ಕಬಂಧಂ ಮೇಘಸಂಕಾಶಂ ಭಾನುಮಾವೃತ್ಯ ತಿಷ್ಠತಿ ॥೪೭॥

ಕರ್ಣ, ನೋಡು, ಮಹಾ ಘೋರ ಭಯದಾಯಕ ರೋಮಾಂಚಕರವಾದ 'ಕಬಂಧ' ಧೂಮಕೇತು ಸೂರ್ಯನನ್ನು ಆವರಿಸಿ ನಿಂತಿದೆ.

ಪಶ್ಯ ಯೂಥೈರ್ಬಹುವಿಧೈರ್ಮೃಗಾಣಾಂ ಸರ್ವತೋದಿಶಮ್ ।
ಬಲಿಭಿರ್ದೃಪ್ತಶಾರ್ದೂಲೈರಾದಿತ್ಯೋಽಭಿನಿರೀಕ್ಷ್ಯತೇ ॥೪೮॥

ನಾನಾ ವಿಧವಾದ ಮೃಗಗಳ ಗುಂಪುಗಳೂ ಬಲಿಷ್ಠವಾದ ದೃಪ್ತವಾದ ಹುಲಿಗಳೂ ಎಲ್ಲ ದಿಕ್ಕುಗಳಲ್ಲಿಯೂ ಸೂರ್ಯನನ್ನು ದಿಟ್ಟಿಸಿ ನೋಡುತ್ತಿವೆ.

ಪಶ್ಯ ಕಂಕಾಂಶ್ಚ ಗೃಧ್ರಾಂಶ್ಚ ಸಮವೇತಾನ್ ಸಹಸ್ರಶಃ ।
ಸ್ಥಿತಾನಭಿಮುಖಾನ್ ಘೋರಾನನ್ಯೋನ್ಯಮಭಿಭಾಷತಃ ॥೪೯॥

ನೋಡು ಕರ್ಣ, ಸಹಸ್ರಾರು ಸಂಖ್ಯೆಯಲ್ಲಿ ಭಯಂಕರವಾದ ಹದ್ದು ರಣಹದ್ದುಗಳು ಗುಂಪಾಗಿ ಸೇರಿ ಪರಸ್ಪರ ಇದಿರಾಗಿ ನಿಂತು ಮಾತನಾಡಿಕೊಳ್ಳುತ್ತಿವೆ.

ರಂಜಿತಾಶ್ಚಾಮರಾ ಯುಕ್ತಾ ಸ್ತವ ಕರ್ಣ ಮಹಾರಥೇ ।
ಪ್ರವರಾಃ ಪ್ರಸ್ಖಲಂತ್ಯೇತೇ ಧ್ವಜಶ್ಚೈವ ಪ್ರಕಂಪತೇ ॥೫೦॥

ಕರ್ಣ, ನಿನ್ನ ರಥದಲ್ಲಿ ಸಂಯೋಜಿತವಾದ ಈ ಚಾಮರಗಳು ಚಕ್ರಸಂಘರ್ಷ ದಿಂದೆದ್ದ ಕಿಡಿಗಳಿಂದ ಹೊತ್ತಿ ಉರಿಯುತ್ತಿವೆ. ಧ್ವಜವು ಕಂಪಿಸುತ್ತಿದೆ.

ಸವೇಪಥೂನ್ ಹಯಾನ್ ಪಶ್ಯ ಮಹಾಕಾಯಾನ್ ಮಹಾಜವಾನ್ ।
ಪ್ಲವಮಾನಾನ್ ದರ್ಶನೀಯಾನಾಕಾಶೇ ಗರುಡಾನಿವ ॥೫೧॥

ಆಕಾಶದಲ್ಲಿ ಗರುಡಪಕ್ಷಿಗಳಂತೆ, ಮಹಾವೇಗದಿಂದ ಓಡುವ ಮಹಾಕಾಯದ ಸುಂದರ ಅಶ್ವಗಳು ನಡುಗುತ್ತಿರುವುದನ್ನು ನೋಡು.

ಧ್ರುವಮೇಷು ನಿಮಿತ್ತೇಷು ಭೂಮಿಮಾವೃತ್ಯ ಪಾರ್ಥಿವಾಃ ।
ಸ್ವಪ್ಸ್ಯಂತಿ ನಿಹತಾಃ ಕರ್ಣ ಶತಶೋಽಥ ಸಹಸ್ರಶಃ ॥೫೨॥

ಕರ್ಣ, ಈ ಶಕುನಗಳು ಕಾಣಿಸಿಕೊಳ್ಳುವಾಗ ನಿಶ್ಚಿತವಾಗಿ ನೂರಾರು ಸಾವಿರಾರು ರಾಜರು ಹತರಾಗಿ ನೆಲವನ್ನು ಆವರಿಸಿ ಒರಗುತ್ತಾರೆ.

ಶಂಖಾನಾಂ ತುಮುಲಃ ಶಬ್ದಃ ಶ್ರೂಯತೇ ಲೋಮಹರ್ಷಣಃ ।
ಆನಕಾನಾಂ ಚ ರಾಧೇಯ ಮೃದಂಗಾನಾಂ ಚ ಸರ್ವಶಃ ॥೫೩॥

ಕರ್ಣ, ಶಂಖ ಆನಕ ಮೃದಂಗಗಳ ದೊಂಬಿ ಶಬ್ದ ರೋಮಾಂಚಕರವಾಗಿ ಕೇಳಿಬರುತ್ತಿದೆ.

ಬಾಣಶಬ್ದಾನ್ ಬಹುವಿಧಾನ್ ನರಾಶ್ವರಥನಿಸ್ವನಾನ್ ।
ಜ್ಯಾತಳತ್ರೇಷುಶಬ್ದಾಂಶ್ಚ ಶೃಣು ಕರ್ಮ ಮಹಾತ್ಮನಾಮ್ ॥೫೪॥

ಬಾಣಶಬ್ದಗಳನ್ನು ನಾನಾವಿಧ ಪದಾತಿ ಅಶ್ವ ರಥಧ್ವನಿಗಳನ್ನು ಮಹಾತ್ಮರು ಮಾಡುವ ಹೆದೆಕೈಚೀಲ ಬಾಣಶಬ್ದಗಳನ್ನೂ ಕೇಳು.

ಹೇಮರೂಪ್ಯಪ್ರಮೃಷ್ಟಾನಾಂ ವಾಸಸಾಂ ಶಿಲ್ಪಿನಿರ್ಮಿತಾಃ ।
ನಾನಾವರ್ಣಾ ರಥೇ ಭಾಂತಿ ಶ್ವಸನೇನ ಪ್ರಕಂಪಿತಾಃ ॥೫೫॥

ಚಿನ್ನ ಬೆಳ್ಳಿಗಳಿಂದ ಅಲಂಕೃತವಾದ ಕರಕುಶಲಗಾರರು ನಿರ್ಮಿಸಿದ ನಾನಾವರ್ಣಗಳ ಪತಾಕೆಗಳು ಗಾಳಿಗೆ ಜೋರಾಗಿ ಚಲಿಸುತ್ತ ಪಾಂಡವರ ರಥದಲ್ಲಿ ಕಂಗೊಳಿಸುತ್ತಿವೆ.

ಸಹೇಮಚಂದ್ರತಾರಾರ್ಕಾಃ ಪತಾಕಾಃ ಕಿಂಕಿಣೀಯುತಾಃ ।
ಪಶ್ಯ ಕರ್ಣಾರ್ಜುನಸ್ಯೈತಾಃ ಸೌದಾಮಿನ್ಯ ಇವಾಂಬರೇ ।
ವಿಭ್ರಾಜಂತಿ ರಣೇ ಕರ್ಣ ವಿಮಾನೇ ದೇವತಾ ಯಥಾ ॥೫೬॥

ಅರ್ಜುನನ ರಥ ಪತಾಕೆಗಳಲ್ಲಿ ಬಂಗಾರದ ಚಂದ್ರ ನಕ್ಷತ್ರ ಸೂರ್ಯಚಿಹ್ನೆಗಳು ಕಿರುಗಂಟೆಗಳು ಇದ್ದು ವಿಮಾನದಲ್ಲಿ ದೇವತೆಗಳಂತೆ ಆಕಾಶದಲ್ಲಿ ಮಿಂಚುಗಳಂತೆ ಈ ಪತಾಕೆಗಳು ಅರ್ಜುನ ರಥದಲ್ಲಿ ಕಂಗೊಳಿಸುತ್ತಿವೆ.

ಧ್ವಜಾಃ ಕಣಕಣಾಯಂತೇ ವಾತೇನಾಭಿಸಮೀರಿತಾಃ ।
ಸಪತಾಕಾ ರಥಾಶ್ಚಾಪಿ ಪಾಂಚಾಲಾನಾಂ ಮಹಾತ್ಮನಾಮ್ ॥೫೭॥

ಮಹಾತ್ಮರಾದ ಪಾಂಚಾಲರ ರಥಗಳೂ ಧ್ವಜಗಳೂ ಪತಾಕೆಗಳಿಂದ ಕೂಡಿ ಗಾಳಿಯ ಹೊಡೆತದಿಂದ ಕಣಕಣ ಧ್ವನಿಗಳನ್ನುಂಟು ಮಾಡುತ್ತಿವೆ.

ಏಷ ಧ್ವಜಾಗ್ರೇ ಪಾರ್ಥಸ್ಯ ಪ್ರೇಕ್ಷಮಾಣಃ ಸಮಂತತಃ ।
ದೃಶ್ಯತೇ ವಾನರೋ ಭೀಮೋ ದ್ವಿಷತಾಮಭಯವರ್ಧನಃ ॥೫೮॥

ಅರ್ಜುನನ ರಥಧ್ವಜದ ಮೇಲೆ ಕುಳಿತು ಎಲ್ಲ ಕಡೆ ನೋಡುತ್ತ ಶತ್ರುಗಳ ದುಃಖವನ್ನು ಹೆಚ್ಚಿಸುತ್ತ ಭಯಂಕರನಾಗಿ ಇದೊ, ವಾನರ ಕಾಣಿಸುತ್ತಾನೆ.

ಏತಚ್ಚಕ್ರಂ ಗದಾ ಶಾರ್ಙ್ಗಂ ಶಂಖಃ ಕೃಷ್ಣಸ್ಯ ಧೀಮತಃ ।
ಅತ್ಯರ್ಥಂ ಭ್ರಾಜತೇ ಕೃಷ್ಣೇ ಕೌಸ್ತುಭಸ್ತು ಮಣಿಸ್ತತಃ ॥೫೯॥

ಧೀಮಂತನಾದ ಕೃಷ್ಣನ ಚಕ್ರ ಗದೆ ಶಾರ್ಙ್ಗ ಶಂಖ ಮತ್ತು ಕೌಸ್ತುಭರತ್ನ ಎಲ್ಲವೂ ಕೃಷ್ಣನಲ್ಲಿ ಬಹಳ ಕಂಗೊಳಿಸುತ್ತದೆ.

ರಣದಲ್ಲಿ ಕೃಷ್ಣನು ತನ್ನ ಪ್ರತಿಜ್ಞೆಯಂತೆ ಚಕ್ರ ಹಿಡಿಯದಿದ್ದರೂ ಕೂಡ ತಾನು ಪರಮಪುರುಷನೆಂದು ತಿಳಿಸುವುದಕ್ಕಾಗಿ ರಣಭೂಮಿಗೆ ಬರುವ ಸಮಯದಲ್ಲಿ ಮಾತ್ರ ಚಕ್ರಶಂಖಾದಿ ಆಯುಧ ಕೌಸ್ತುಭಮಣಿಗಳನ್ನು ಧರಿಸಿ ಮೈದೋರುತ್ತಾನೆ.

ಏಷ ಶಾರ್ಙ್ಗಗದಾಪಾಣಿರ್ವಾಸುದೇವೋऽತಿವೀರ್ಯವಾನ್ ।
ವಾಹಯನ್ನೇತಿ ತುರಗಾನ್ ಪಾಂಡುರಾನ್ ವಾತರಂಹಸಃ ॥೬೦॥

ಶಾರ್ಙ್ಗ ಗದಾಪಾಣಿಯಾದ ಅತಿವೀರ್ಯಶಾಲಿಯಾದ ಈತ ಕೃಷ್ಣ ವಾಯುವೇಗದ ಬಿಳಿಕುದುರೆಗಳನ್ನು ನಡೆಸುತ್ತ ಬರುತ್ತಿದ್ದಾನೆ.

ಏತತ್ ಕೂಜತಿ ಗಾಂಡೀವಂ ವಿಕೃಷ್ಟಂ ಸವ್ಯಸಾಚಿನಾ ।
ಏತೇ ಹಸ್ತವತಾ ಮುಕ್ತಾ ಘ್ನಂತ್ಯಮಿತ್ರಾನ್ ಶಿತಾಃ ಶರಾಃ ॥೬೧॥

ಇದು ಗಾಂಡೀವಧನುಸ್ಸು ಸವ್ಯಸಾಚಿ ಅದನ್ನು ಎಳೆದರೆ ಶಬ್ದ ಮಾಡುತ್ತದೆ. ಇವು ಸಿದ್ಧಹಸ್ತನಾದ ಸವ್ಯಸಾಚಿ ಬಿಟ್ಟ ತೀಕ್ಷ್ಣವಾದ ಬಾಣಗಳು. ಶತ್ರುಗಳನ್ನು ಸಂಹರಿಸುತ್ತಿವೆ.

ವಿಶಾಲಾಯತತಾಮ್ರಾಕ್ಷೈಃ ಪೂರ್ಣಚಂದ್ರನಿಭಾನನೈಃ ।
ಏಷಾ ಭೂಃ ಕೀರ್ಯತೇ ರಾಜ್ಞಾಂ ಶಿರೋಭಿರಪಲಾಯಿನಾಮ್ ॥೬೨॥

ಇದು ರಣಭೂಮಿ. ವಿಶಾಲ ಉದ್ದ ಕೆಂಪುಕಣ್ಣುಗಳುಳ್ಳ, ಪೂರ್ಣಚಂದ್ರನಂಥ ಮುಖಉಳ್ಳ ಯುದ್ಧದಲ್ಲಿ ಪಲಾಯನಮಾಡದ ರಾಜರ ರುಂಡಗಳಿಂದ ತುಂಬಿದೆ.

ಏತೇ ಸುಪರಿಘಾಕಾರಾಃ ಪುಣ್ಯಗಂಧಾನುಲೇಪನಾಃ ।
ಉದ್ಯತಾಯುಧಶೌಂಡನಾಂ ಪಾತ್ಯಂತೇ ಸಾಯುಧಾ ಭುಜಾಃ ॥೬೩॥

ಇವು ಆಯುಧ ಎತ್ತುವಲ್ಲಿ ನಿಪುಣರಾದ ಯೋಧರ ಆಯುಧ ಹಿಡಿದುಕೊಂಡಿರುವ ತೋಳುಗಳು. ಒಳ್ಳೆಯ ಪರಿಘಾಯುಧದ ಆಕಾರದವುಗಳು ಸುಗಂಧಲೇಪದಿಂದ ಒಪ್ಪುವವುಗಳು ಆಯುಧ ಹಿಡಿದಿದ್ದಂತೆಯೇ ಅರ್ಜುನನಿಂದ ಕಡಿದುಬೀಳುತ್ತಿವೆ.

ನಿರಸ್ತನೇತ್ರಜಿಹ್ವಾಂತಾ ವಾಜಿನಃ ಸಹ ಸಾದಿಭಿಃ ।
ಪತಿತಾಃ ಪಾತ್ಯಮಾನಾಶ್ಚ ಕ್ಷಿತೌ ಕ್ಷೀಣಾಶ್ಚ ಶೇರತೇ ॥೬೪॥

ಅರ್ಜುನನ ಬಾಣಗಳಿಗೆ ತುತ್ತಾಗಿ ಬಿದ್ದ ಬೀಳುತ್ತಿರುವ, ಬಲಗುಂದಿದ ಅಶ್ವಗಳು ಕಣ್ಣು ನಾಲಿಗೆ ಕರುಳುಗಳನ್ನು ಹೊರ ಚಾಚಿಕೊಂಡು ಅಶ್ವಾರೋಹಿಗಳೊಂದಿಗೇ ನೆಲದಲ್ಲಿ ಒರಗುತ್ತಿವೆ.

ಏತೇ ಪರ್ವತಶೃಂಗಾಣಾಂ ತುಲ್ಯರೂಪಾ ಹತಾ ದ್ವಿಪಾಃ ।
ಸಂಭಿನ್ನಭಿನ್ನಾಃ ಪಾರ್ಥೇನ ಪ್ರಪತಂತ್ಯದ್ರಯೋ ಯಥಾ ॥೬೫॥

ಗಿರಿಶಿಖರ ಸಮಾನಾಕಾರದ ಆನೆಗಳೂ ಅರ್ಜುನನಿಂದ ಛಿನ್ನಭಿನ್ನವಾಗಿ ಬೆಟ್ಟಗಳಂತೆ ಬೀಳುತ್ತಿವೆ.

ಗಂಧರ್ವನಗರಾಕಾರಾ ರಥಾ ಹತನರೇಶ್ವರಾಃ ।
ವಿಮಾನಾನೀವ ಪುಣ್ಯಾನಿ ಸ್ವರ್ಗಿಣಾಂ ನಿಪತಂತ್ಯಮೀ ॥೬೬॥

ಗಂಧರ್ವನಗರಾಕಾರದ ಶತ್ರುರಥಗಳಲ್ಲಿ ರಥಿಕರಾದ ರಾಜರು ಪಾರ್ಥನ ಬಾಣಗಳಿಂದ ಹತರಾಗುವುದರಿಂದ, ಕ್ಷೀಣಪುಣ್ಯರಾದ ಸ್ವರ್ಗವಾಸಿಗಳೊಂದಿಗೇ ಪುಣ್ಯಮಯವಾದ ಅವರ ವಿಮಾನಗಳು ಕೆಳಗೆ ಬೀಳುವಂತೆ, ಈ ಶತ್ರುರಥಗಳು ನೆಲದಲ್ಲಿ ಮುರಿದು ಬೀಳುತ್ತಿವೆ.

ವ್ಯಾಕುಲೀಕೃತಮತ್ಯರ್ಥಂ ಪಶ್ಯ ಸೈನ್ಯಂ ಕಿರೀಟಿನಾ ।
ನಾನಾಮೃಗಸಹಸ್ರಾಣಾಂ ಯೂಥಂ ಕೇಸರಿಣಾ ಯಥಾ ॥೬೭॥

ಹೀಗೆ ಪಾರ್ಥನಿಂದ ಶತ್ರುಸೈನ್ಯ ಬಹಳ ವ್ಯಾಕುಲಗೊಂಡಿರುವುದನ್ನು ನೋಡು. ಸಿಂಹದಿಂದ ವ್ಯಾಕುಲಗೊಂಡ ಸಾವಿರಾರು ನಾನಾಮೃಗ ಸಮೂಹಗಳಂತೆ.

ಘ್ನಂತ್ಯೇತೇ ಪಾರ್ಥಿವಾನ್ ವೀರಾಃ ಪಾಂಡವಾಃ
ಸಮಭಿದ್ರುತಾನ್ ॥೬೮॥

ಈ ವೀರ ಪಾಂಡವರು ಇದಿರಿಗೆ ಆಕ್ರಮಿಸಿ ಬರುವ ರಾಜರನ್ನು ವಧಿಸುತ್ತಿದ್ದಾರೆ.

ಪಶ್ಯ ಕುಂತೀಸುತಂ ವೀರಂ ಬೀಭತ್ಸುಮಪರಾಜಿತಮ್ ।
ಪ್ರಧರ್ಷಯಿತುಮಾಯಾಂತಂ ಕಪಿಪ್ರವರಕೇತನಮ್ ॥೬೯॥

ನೋಡು, ಸೋಲಿಲ್ಲದ ಕುಂತೀಸುತ ವೀರ ಅರ್ಜುನನನ್ನು, ವಾನರೋತ್ತಮ ಧ್ವಜಯುಕ್ತನಾಗಿ ನಿನ್ನವರನ್ನು ನಾಶಪಡಿಸಲು ಬರುತ್ತಿದ್ದಾನೆ.

ನಾಗಾಶ್ವರಥಪತ್ತ್ಯೌಘಾನ್ ತಾವಕಾನ್ ಸಮಭಿಘ್ನತಃ ।
ಧ್ವಜಾಗ್ರಂ ದೃಶ್ಯತೇ ತ್ವಸ್ಯ ಜ್ಯಾಶಬ್ದಶ್ಚಾಪಿ ಶ್ರೂಯತೇ ॥೭೦॥

ನಿನ್ನವರಾದ ಗಜ ಅಶ್ವ ರಥ ಪದಾತಿ ಸಮೂಹಗಳನ್ನು ವಧಿಸುತ್ತಿರುವ ಅರ್ಜುನನ ಧ್ವಜದ ತುದಿ ಕಾಣುತ್ತಿದೆ. ಅವನ ಬಿಲ್ಲಿನ ಹೆದೆಯ ಧ್ವನಿಯೂ ಕೇಳಿಬರುತ್ತಿದೆ.

ಅದ್ಯ ದ್ರಷ್ಟಾಸಿ ತಂ ವೀರಂ ಶ್ವೇತಾಶ್ವಂ ಕೃಷ್ಣಸಾರಥಿಮ್ ।
ನಿಘ್ನಂತಂ ಶಾತ್ರವಾನ್ ಸಂಖ್ಯೇ ಯಂ ಕರ್ಣ ಪರಿಪೃಚ್ಛಸಿ ॥೭೧॥

ಕರ್ಣ, ಎಲ್ಲಿ ಎಲ್ಲಿ ಎಂದು ನೀನು ಕೇಳುತ್ತಿರುವ ಬಿಳಿಕುದುರೆಯವನಾದ ಆ ವೀರ ಅರ್ಜುನನೇ ರಣದಲ್ಲಿ ಕೃಷ್ಣನ ಸಾರಥ್ಯದಲ್ಲಿ ಶತ್ರುನಾಶಗೈಯುತ್ತಿರುವುದನ್ನು ನೀನು ನೋಡುವೆ.

ಅದ್ಯ ತೌ ಪುರುಷವ್ಯಾಘ್ರೌ ಲೋಹಿತಾಕ್ಷೌ ಪರಂತಪೌ ।
ವಾಸುದೇವಾರ್ಜುನೌ ಕರ್ಣ ದ್ರಷ್ಟಾಸ್ಯೇಕರಥಸ್ಥಿತೌ ॥೭೨॥

ಕರ್ಣ, ನೀನಿಂದು ಕೆಂಪುಕಣ್ಣಿನ ಶತ್ರುನಾಶಕ ಪುರುಷೋತ್ತಮರಾದ ಕೃಷ್ಣಾರ್ಜುನರು ಒಂದು ರಥದಲ್ಲಿ ನಿಂತಿರುವುದನ್ನು ನೋಡುವೆ.

ಸಾರಥಿರ್ಯಸ್ಯ ವಾರ್ಷ್ಣೇಯೋ ಗಾಂಡೀವಂ ಯಸ್ಯ ಕಾರ್ಮುಕಮ್ ।
ತಂ ಚೇದ್ಧಂತಾಸಿ ರಾಧೇಯ ತ್ವಂ ನೋ ರಾಜಾ ಭವಿಷ್ಯಸಿ ॥೭೩॥

ಯಾವನ ಸಾರಥಿ ಕೃಷ್ಣನೋ, ಯಾವನ ಧನುಸ್ಸು ಗಾಂಡೀವವೋ, ಆ ಅರ್ಜುನನನ್ನು ಕರ್ಣ, ನೀನು ಕೊಲ್ಲುವಿಯಾದರೆ ನೀನು ನಮಗೆ ರಾಜನಾಗುವಿ.

ಏಷ ಸಂಶಪ್ತಕಾಹೂತಸ್ತಾನೇವಾಭಿಮುಖೋ ಗತಃ ।
ಕರೋತಿ ಕದನಂ ಚೈಷಾಂ ಸಂಗ್ರಾಮೇ ದ್ವಿಷತಾಂ ಬಲೀ ॥೭೪॥

ಬಲಿಷ್ಠನಾದ ಅರ್ಜುನ ಸಂಶಪ್ತಕರ ಆಹ್ವಾನವನ್ನು ಸ್ವೀಕರಿಸಿ ಅವರಿಗೆ ಇದಿರಾಗಿ ಹೋಗಿ ಶತ್ರುಗಳಾದ ಅವರೊಡನೆ ರಣದಲ್ಲಿ ಹೋರಾಟ ಮಾಡುತ್ತಿದ್ದಾನೆ.

ಇತಿ ಬ್ರುವಾಣಂ ಮದ್ರೇಶಂ ಕರ್ಣಃ ಪ್ರಾಹಾತಿಮನ್ಯುಮಾನ್ ॥೭೫॥

ಪಶ್ಯ ಸಂಶಪ್ತಕೈಃ ಕ್ರುದ್ಧೈಃ ಸರ್ವತಃ ಸಮಭಿದ್ರುತಃ ।
ಏಷ ಸೂರ್ಯ ಇವಾಂಭೋದೈಶ್ಛನ್ನಃ ಪಾರ್ಥೋ ನ ದೃಶ್ಯತೇ ॥೭೬॥

ಹೀಗೆ ಶಲ್ಯ ಹೇಳುತ್ತಿದ್ದಂತೆ ಕರ್ಣ ಬಲು ಕುಪಿತನಾಗಿ ಹೇಳಿದ: 'ನೋಡು, ಕುಪಿತರಾದ ಸಂಶಪ್ತಕರಿಂದ ಎಲ್ಲೆಡೆ ಆಕ್ರಮಣಕ್ಕೊಳಗಾಗಿ, ಮೋಡ ಮುಸುಕಿದ ಸೂರ್ಯನಂತೆ, ಮುಚ್ಚಿಹೋಗಿ ಅರ್ಜುನ ಕಾಣದಾಗಿದ್ದಾನೆ.

ಏತದಂತೋಽರ್ಜುನಃ ಶಲ್ಯ ನಿಮಗ್ನಃ ಶೋಕಸಾಗರಮ್ ॥೭೭॥

ಶಲ್ಯ, ಇದೀಗ ಅರ್ಜುನನ ಅಂತ್ಯ. ಸೈನ್ಯಸಾಗರದಲ್ಲಿ ಮುಳುಗಿಹೋಗಿದ್ದಾನೆ.

ಶಲ್ಯಃ

ವರುಣಂ ಕೋಽಂಭಸಾ ಹನ್ಯಾದಿಂಧನೇನ ಚ ಪಾವಕಮ್ ।
ಕೋ ವಾನಿಲಂ ನಿಗೃಹ್ಣೀಯಾತ್ ಪಿಬೇದ್ವಾ ಕೋ
ಮಹಾರ್ಣವಮ್ ॥೭೮॥

ಶಲ್ಯ ನುಡಿದ— ವರುಣನನ್ನು ನೀರಿನಿಂದ, ಬೆಂಕಿಯನ್ನು ಕಟ್ಟಿಗೆಯಿಂದ

ಯಾವನು ನಾಶಮಾಡುತ್ತಾನೆ? ಗಾಳಿಯನ್ನು ಯಾವನು ಹಿಡಿದಿಟ್ಟುಕೊಳ್ಳುತ್ತಾನೆ? ಮಹಾಸಾಗರವನ್ನು ಯಾವನು ಕುಡಿಯುತ್ತಾನೆ?

ಈದೃಗ್ರೂಪಮಹಂ ಮನ್ಯೇ ಪಾರ್ಥಸ್ಯ ಯುಧಿ ನಿಗ್ರಹಮ್ ।
ನ ಹಿ ಶಕ್ಯೋಽರ್ಜುನೋ ಜೇತುಂ ಸೇಂದ್ರೈಃ ಸರ್ವೈಃ
ಸುರಾಸುರೈಃ ॥೭೯॥

ಪಾರ್ಥನನ್ನು ಯುದ್ಧದಲ್ಲಿ ನಿಗ್ರಹಿಸುವುದೆಂದರೂ ಹೀಗೇ ಎಂದು ನನಗೆ ಗೊತ್ತು. ಇಂದ್ರಾದಿ ಸಮಸ್ತ ದೇವತೆಗಳಿಂದಲೂ ಅಸುರರಿಂದಲೂ ಅರ್ಜುನನನ್ನು ಪರಾಭವಗೊಳಿಸುವುದು ಶಕ್ಯವಲ್ಲ.

ಅಥೈವಂ ಪರಿತೋಷಸ್ತೇ ವಾಚೋಕ್ತಾ ತ್ವಂ ಸುಮನಾ ಭವ ।
ನ ಸ ಶಕ್ಯೋ ಯುಧಾ ಜೇತುಮನ್ಯಂ ಕುರು ಮನೋರಥಮ್ ॥೮೦॥

ಶಕ್ಯವೆಂದು ಹೇಳುವುದರಿಂದಲೇ ನಿನಗೆ ಸಂತೋಷವೆನ್ನುವುದಾದರೆ ಹಾಗೇ ಹೇಳಿ ಸಂತುಷ್ಟಚಿತ್ತನಾಗು. ಯುದ್ಧದಿಂದ ಅವನನ್ನು ಗೆಲ್ಲಲಾಗದು. ಬೇರೇನನ್ನಾದರೂ ಆಸೆ ಪಡು.

ಬಾಹುಭ್ಯಾಮುದ್ಧರೇದ್ಭೂಮಿಂ ದಹೇತ್ ಕ್ರುದ್ಧ ಇಮಾಃ ಪ್ರಜಾಃ ।
ಪಾತಯೇತ್ ತ್ರಿದಿವಾದ್ ದೇವಾನ್ ಯೋಽರ್ಜುನಂ ಸಮರೇ
ಜಯೇತ್ ॥೮೧॥

ಅರ್ಜುನನನ್ನು ಯುದ್ಧದಲ್ಲಿ ಯಾವನು ಗೆಲ್ಲುವನೋ ಅವನು ತೋಳುಗಳಿಂದ ಭೂಮಿಯನ್ನೂ ಎತ್ತಬಲ್ಲ. ಕ್ರುದ್ಧನಾಗಿ ಎಲ್ಲ ಜೀವಿಗಳನ್ನು ಸುಡಬಲ್ಲ. ಸ್ವರ್ಗದಿಂದ ದೇವತೆಗಳನ್ನು ಬೀಳಿಸಬಲ್ಲ.

ಪಶ್ಯ ಕುಂತೀಸುತಂ ವೀರಂ ಭೀಮಮಕ್ಲಿಷ್ಟಕಾರಿಣಮ್ ।
ಪ್ರಭಾಸಂತಂ ಮಹಾಬಾಹುಮೇನಂ ಮೇರುಮಿವಾಚಲಮ್ ॥೮೨॥

ವೀರನಾದ, ಎಂಥ ಕಾರ್ಯವನ್ನೂ ಕ್ಲೇಶವಿಲ್ಲದೆ ಮಾಡಬಲ್ಲ ಭೀಮನನ್ನು ನೋಡು, ಮಹಾಬಾಹುವಾದ ಇವನು ಮೇರುಪರ್ವತದಂತೆ ಅಚಲನಾಗಿ ಶೋಭಿಸುತ್ತಾನೆ.

ಅಮರ್ಷೀ ನಿತ್ಯಸಂರಬ್ಧಶ್ಚಿರಂ ವೈರಮನುಸ್ಮರನ್ ।
ಏಷ ಭೀಮೋ ಜಯಪ್ರೇಪ್ಸುರ್ಯುಧಿ ತಿಷ್ಠತಿ ವೀರ್ಯವಾನ್ ॥೮೩॥

ಈ ಭೀಮನು ಸಹನೆ ಮಾಡದವನು, ಸದಾ ವೈರವನ್ನು ನೆನಪಿಸಿಕೊಂಡು ಕ್ರುದ್ಧನಾಗುವವನು, ವೀರ್ಯಶಾಲಿ, ಯುದ್ಧದಲ್ಲಿ ಜಯಪಡೆಯಲು ಉತ್ಸುಕನಾಗಿ ನಿಂತಿದ್ದಾನೆ.

ಏಷ ಧರ್ಮಭೃತಾಂ ಶ್ರೇಷ್ಠೋ ಧರ್ಮರಾಜೋ ಯುಧಿಷ್ಠಿರಃ ।
ತಿಷ್ಠತ್ಯಸುಕರಃ ಸಂಖೇ ಪರೈಃ ಪರಪುರಂಜಯಃ ॥೮೪॥

ಈತ ಧರ್ಮಪೋಷಕರಲ್ಲಿ ಶ್ರೇಷ್ಠನಾದ ಧರ್ಮರಾಜ ಯುಧಿಷ್ಠಿರ. ಶತ್ರುಪಟ್ಟಣವನ್ನು ಗೆಲ್ಲುವ ಈತ ರಣದಲ್ಲಿ ಶತ್ರುಗಳಿಂದ ಗೆಲ್ಲಲಾಗದವನು. ಯುದ್ಧದಲ್ಲಿ ನಿಂತಿದ್ದಾನೆ.

ಏತೌ ಚ ಪುರುಷವ್ಯಾಘ್ರಾವಶ್ವಿನಾವಿವ ಸೋದರೌ ।
ನಕುಲಃ ಸಹದೇವಶ್ಚ ತಿಷ್ಠತೋ ಯುಧಿ ದುರ್ಜಯೌ ॥೮೫॥

ಇವರು ನಕುಲ–ಸಹದೇವರು ಸೋದರರು, ಅಶ್ವಿನಿದೇವತೆಗಳಂತೆ, ಪುರುಷೋತ್ತಮರು, ಯುದ್ಧದಲ್ಲಿ ಗೆಲ್ಲಲಾಗದವರು ನಿಂತಿದ್ದಾರೆ.

ದೃಶ್ಯಂತ ಏತೇ ಕಾರ್ಷ್ಣೇಯಾಃ ಪಂಚ ಪಂಚಾಚಲಾ ಇವ ।
ವ್ಯವಸ್ಥಿತಾ ಯೋತ್ಸ್ಯಮಾನಾಃ ಸರ್ವೇಽರ್ಜುನಸಮಾ ಯುಧಿ ॥೮೬॥

ಐದುಮಂದಿ ದ್ರೌಪದೀಪುತ್ರರು ಐದು ಬೆಟ್ಟಗಳಂತೆ ಅಚಲರಾಗಿ ನಿಂತಿದ್ದಾರೆ. ಯುದ್ಧಮಾಡುತ್ತಿದ್ದರೆ ರಣದಲ್ಲಿ ಎಲ್ಲರೂ ಅರ್ಜುನನಿಗೆ ಸಮಾನರು.

ಏತೇ ದ್ರುಪದಪುತ್ರಾಶ್ಚ ಧೃಷ್ಟದ್ಯುಮ್ನಪುರೋಗಮಾಃ ।
ದೀಪ್ತಾಃ ಸತ್ಯಜಿತಾ ವೀರಾಸ್ತಿಷ್ಠಂತಿ ಪರಮೌಜಸಃ ॥೮೭॥

ಇವರು ದ್ರುಪದಪುತ್ರರಾದ ಧೃಷ್ಟದ್ಯುಮ್ನ ಮುಂತಾದವರು, ಪರಮ ಪರಾಕ್ರಮಿಗಳು. ಸತ್ಯದಿಂದ ಗೆಲ್ಲುವ, ಜ್ವಲಿಸುವ ವೀರರು.

ಅಸಾವಿಂದ್ರ ಇವಾಸಹ್ಯಃ ಸಾತ್ಯಕಿಃ ಸಾತ್ವತಾಂ ವರಃ ।
ಯುಯುತ್ಸುರುಪಯಾತ್ಯಸ್ಮಾನ್ ಕಾಲಾಂತಕಯಮೋಪಮಃ ॥೮೮॥

ಈತನು ಸಾತ್ಯಕಿ, ಯಾದವಶ್ರೇಷ್ಠ ಇಂದ್ರನಂತೆ ಶತ್ರುಗಳಿಂದ ಇದಿರಿಸಲಾಗ ದವನು. ಪ್ರಲಯಕಾಲದ ಅಂತಕಯಮನಂತಿರುವವನು. ನಮ್ಮೊಡನೆ ಯುದ್ಧ ಮಾಡಲು ಬಯಸಿ ಬರುತ್ತಿದ್ದಾನೆ.

ಇತಿ ಸಂವದತೋರೇವ ತಯೋಃ ಪುರುಷಸಿಂಹಯೋಃ ।
ತೇ ಸೇನೇ ಸಮಸಜ್ಜೇತಾಂ ಗಂಗಾಯಮುನವದ್ ಭೃಶಮ್ ॥೮೯॥

ಹೀಗೆ ಪುರುಷಶ್ರೇಷ್ಠರಾದ ಕರ್ಣ–ಶಲ್ಯರು ಇಬ್ಬರು ಮಾತನಾಡಿಕೊಳ್ಳು ತ್ತಿದ್ದಂತೆಯೆ ಗಂಗೆ–ಯಮುನೆಯರಂತೆ ಎರಡು ಸೇನೆಗಳು ವೇಗದಿಂದ ಪರಸ್ಪರ ಸಂಧಿಸಿದುವು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣ ಶಲ್ಯಸಂವಾದೇ ಚತುಶ್ಚತ್ವಾರಿಂಶೋಧ್ಯಾಯಃ ॥೪೪॥

❖

ಮಹಾಭಾರತತಾತ್ಪರ್ಯನಿರ್ಣಯ

ನಿವಾರ್ಯ ಕರ್ಣಂ ಚ ಶರೈರಮುಷ್ಯ
ಸೂನೋಃ ಸುಷೇಣಸ್ಯ ಶಿರಶ್ಚಕರ್ತ ।
ಪಪಾತ ಭೂಮೌ ಸ ಪಿತುಃ ಸಮೀಪೇ
ಯಥಾ ಹತಃ ಸತ್ಯಸೇನೋಮುನೈವ ।
ಯಥೈವ ಕರ್ಣಾವರಜೌ ಪುರೈವ
ನಿಶಾಯುದ್ಧೇ ಕರ್ಣಪುರಃ ಪ್ರಪಾತಿತೌ ॥ ೮೦ ॥

ಭೀಮ ಕರ್ಣನನ್ನು ಬಾಣಗಳಿಂದ ತಡೆದು ಅವನ ಮಗನಾದ ಸುಷೇಣನ ಶಿರವನ್ನು ಕತ್ತರಿಸಿದ. ಹಿಂದೆ ಭೀಮನಿಂದಲೆ ಹತನಾದ ಸತ್ಯಸೇನ ಹೇಗೆ ಕರ್ಣನ ಬಳಿಯಲ್ಲಿಯೆ ಬಿದ್ದನೋ, ಹಿಂದೆ ರಾತ್ರಿಯುದ್ಧದಲ್ಲಿ ಭೀಮನಿಂದಲೆ ಕರ್ಣನ ಇಬ್ಬರು ತಮ್ಮಂದಿರು ಕರ್ಣನ ಎದುರಿಗೇ ನೆಲದಲ್ಲಿ ಹೇಗೆ ಬೀಳಿಸಲ್ಪಟ್ಟರೋ ಹಾಗೇ ಈ ಸುಷೇಣನೂ ತಂದೆಯ ಬಳಿಯಲ್ಲಿಯೆ ನೆಲದಲ್ಲಿ ಬಿದ್ದ.

❖

ನಲವತ್ತೈದನೆಯ ಅಧ್ಯಾಯ

ಕರ್ಣನು ಪಾಂಚಾಲಸೈನ್ಯವನ್ನು ಆಕ್ರಮಿಸಿದ. ಭೀಮ ಕರ್ಣಪುತ್ರ ಸತ್ಯಸೇನನನ್ನು ವಧಿಸಿದ. ಕರ್ಣ ತನಗೆ ಇದಿರಾದವರನ್ನೆಲ್ಲ ನಿಗ್ರಹಿಸಿ ಯುಧಿಷ್ಠಿರನ ಕಡೆಗೆ ನುಗ್ಗಿದ.

ಧೃತರಾಷ್ಟ್ರಃ

ತಥಾ ವ್ಯೂಢೇಷ್ವನೀಕೇಷು ಸಂಸಕ್ತೇಷು ಚ ಸಂಜಯ ।
ಸಂಶಪ್ತಕಾನ್ ಕಥಂ ಪಾರ್ಥೋ ಗತಃ ಕರ್ಣಶ್ಚ ಪಾಂಡವಾನ್ ॥೧॥

ಧೃತರಾಷ್ಟ್ರ ನುಡಿದ— ಸಂಜಯ, ಸೈನ್ಯಗಳು ವ್ಯೂಹ ರಚಿಸಿ ಯುದ್ಧಕ್ಕೆ ತೊಡಗಿದಾಗ ಅರ್ಜುನನು ಸಂಶಪ್ತಕರನ್ನು ಕರ್ಣನು ಪಾಂಡವರನ್ನು ಹೇಗೆ ಇದಿರಿಸಿದರು?

ಏತದ್ ವಿಸ್ತರತೋ ಯುದ್ಧಂ ಪ್ರಬ್ರೂಹಿ ಕುಶಲೋ ಹ್ಯಸಿ ।
ನ ಹಿ ತೃಪ್ಯಾಮಿ ವೀರಾಣಾಂ ಶೃಣ್ವಾನೋ ವಿಕ್ರಮಾನ್ ರಣೇ ॥೨॥

ಈ ಯುದ್ಧವನ್ನು ವಿಸ್ತಾರವಾಗಿ ಹೇಳು. ನೀನು ಕುಶಲನಾಗಿರುವೆ. ರಣದಲ್ಲಿ ವೀರರು ತೋರಿದ ಪರಾಕ್ರಮವನ್ನು ಎಷ್ಟು ಕೇಳಿದರೂ ನನಗೆ ತೃಪ್ತಿ ಇಲ್ಲ.

ಸಂಜಯಃ

ತದಾಸ್ಥಿತಮವಜ್ಞಾಯ ಪ್ರತ್ಯಮಿತ್ರಬಲಂ ಮಹತ್ ।
ಅವ್ಯೂಹತಾರ್ಜುನೋ ವ್ಯೂಹಂ ಪುತ್ರಸ್ಯ ತವ ದುರ್ನಯೇ ॥೩॥

ಸಂಜಯ ನುಡಿದ— ಮಹತ್ತಾದ ಶತ್ರುಸೈನ್ಯ ಆಗ ನಿನ್ನ ಮಗನ ದುರ್ನೀತಿಯಿಂದ ಯುದ್ಧಕ್ಕೆ ನಿಂತಾಗ ಅದನ್ನು ಕಂಡು ಅರ್ಜುನ ತನ್ನ ಸೈನ್ಯವನ್ನೂ ವ್ಯೂಹವಾಗಿ ನಿಲ್ಲಿಸಿದ.

ತತ್ಸಾದಿನಾಗಕಲಿಲಂ ಪದಾತಿರಥಸಂಕುಲಮ್ ।
ಧೃಷ್ಟದ್ಯುಮ್ನಮುಖೈರ್ವ್ಯೂಢಮಶೋಭತ ಮಹದ್ ಬಲಮ್ ॥೪॥

ಅರ್ಜುನನ ಮಹತ್ತಾದ ಸೈನ್ಯವು ಅಶ್ವಗಜಸೈನ್ಯಗಳಿಂದಲೂ ಪದಾತಿ

ರಥಸೈನ್ಯಗಳಿಂದಲೂ ತುಂಬಿದ್ದು ಧೃಷ್ಟದ್ಯುಮ್ನ ಮುಂತಾದವರಿಂದ ವ್ಯೂಹಗೊಂಡು ಶೋಭಿಸಿತು.

ಪಾರಾವತಸವರ್ಣಾಶ್ವಶ್ಚಂದ್ರಾದಿತ್ಯಸಮದ್ಯುತಿಃ ।
ಪಾರ್ಷತಃ ಪ್ರಬಭೌ ಧನ್ವೀ ಕಾಲೋ ವಿಗ್ರಹವಾನಿವ ॥೫॥

ಪಾರಿವಾಳವರ್ಣದ ಕುದುರೆಗಳುಳ್ಳವನು, ಚಂದ್ರ–ಸೂರ್ಯಸಮಾನ ಪ್ರಕಾಶ ಉಳ್ಳವನಾದ ಧೃಷ್ಟದ್ಯುಮ್ನ ಬಿಲ್ಲುಹಿಡಿದು ಯಮನೇ ಮೈತಳೆದು ಬಂದಂತೆ ಶೋಭಿಸಿದ.

ಪಾರ್ಷತಂ ತ್ವಭಿ ಸಂತಸ್ಥುರ್ದ್ರೌಪದೇಯಾ ಯುಯುತ್ಸವಃ ।
ದಿವ್ಯವರ್ಮಾಯುಧಭೃತಃ ಶಾರ್ದೂಲಸಮವಿಕ್ರಮಾಃ ॥೬॥
ಸಾನುಗಾ ಭೀಮವಪುಷಶ್ಚಂದ್ರಂ ತಾರಾಗಣಾ ಇವ ॥೭॥

ದಿವ್ಯ ಕವಚ, ಆಯುಧಗಳನ್ನು ಧರಿಸಿದ, ಹುಲಿಯಂತೆ ಪರಾಕ್ರಮತೋರುವ, ಶತ್ರುಭೀಕರ ಶರೀರವುಳ್ಳ ದ್ರೌಪದೀಪುತ್ರರು ಯುದ್ಧೋತ್ಸುಕರಾಗಿ ತಮಗೆ ವಿಧೇಯರಾದ ಸೈನಿಕರೊಂದಿಗೆ ನಕ್ಷತ್ರಸಮೂಹಗಳು ಚಂದ್ರನನ್ನು ಸುತ್ತುವರಿಯುವಂತೆ, ಧೃಷ್ಟದ್ಯುಮ್ನನನ್ನು ಸುತ್ತುವರಿದು ನಿಂತರು.

ಅಥ ವ್ಯೂಢೇಷ್ವನೀಕೇಷು ಪ್ರೇಕ್ಷ್ಯ ಸಂಶಪ್ತಕಾನ್ ರಣೇ ।
ಕ್ರುದ್ಧೋಽರ್ಜುನೋಽಭಿದುದ್ರಾವ ವ್ಯಾಕ್ಷಿಪನ್ ಗಾಂಡಿವಂ ಧನುಃ ॥೮॥

ಸೈನ್ಯಗಳು ರಣರಂಗದಲ್ಲಿ ವ್ಯೂಹಗೊಂಡು ನಿಂತಾಗ ಅರ್ಜುನ ಕರ್ಣನ ಕಡೆಗೇ ಹೊರಟಿದ್ದ. ಆದರೂ ಸಂಶಪ್ತಕರನ್ನು ಕಂಡು ಕ್ರುದ್ಧನಾದ. ಅವರ ಆಹ್ವಾನವನ್ನು ಸ್ವೀಕರಿಸಿ ಗಾಂಡಿವ ಧನುಸ್ಸನ್ನು ಸೆಳೆಯುತ್ತ ಅವರ ಕಡೆಗೆ ಧಾವಿಸಿದ.

ಅಥ ಸಂಶಪ್ತಕಾಃ ಪಾರ್ಥಮಭ್ಯಧಾವನ್ ವಧೈಷಿಣಃ ।
ವಿಜಯೇ ಕೃತಸಂಕಲ್ಪಾ ಮೃತ್ಯುಂ ಕೃತ್ವಾ ನಿವರ್ತನಮ್ ॥೯॥

ಸಂಶಪ್ತಕರು ಅರ್ಜುನನ ವಧವನ್ನು ಬಯಸಿದವರು. ವಿಜಯವನ್ನು ಗಳಿಸುವ ಸಂಕಲ್ಪವನ್ನು ಮಾಡಿ, ಮರಣ ಬಂದರೆ ಮಾತ್ರ ಯುದ್ಧದಿಂದ ನಿವೃತ್ತರಾಗುವೆವು ಎಂದುಕೊಂಡು, ಅರ್ಜುನನನ್ನು ಆಕ್ರಮಿಸಿದರು.

ತದಶ್ವಸಂಘಬಹುಲಂ ಮತ್ತನಾಗರಥಾಕುಲಮ್ ।
ಪತ್ತಿಮಚ್ಛೂರವೀರೌಘೈರ್ಯುತಮರ್ಜುನಮಾದ್ರವತ್ ॥೧೦॥

ಅಶ್ವಸೈನ್ಯದ ಸಮೂಹಗಳಿಂದಲೂ ಮದಿಸಿದ ಗಜಸೈನ್ಯಗಳಿಂದಲೂ ಪದಾತಿಯುಕ್ತ ಶೂರ–ವೀರರ ಸಮೂಹಗಳಿಂದಲೂ ತುಂಬಿದ ಸಂಶಪ್ತಕ ಸೈನ್ಯ ಬೇಗನೆ ಅರ್ಜುನನ ಕಡೆಗೆ ಧಾವಿಸಿತು.

ಸ ಸಂಪ್ರಹಾರಸ್ತುಮುಲಸ್ತೇಷಾಮಾಸೀತ್ ಕಿರೀಟಿನಾ ।
ತಸ್ಯೈವ ನಃ ಶ್ರುತೋ ಯಾದೃಙ್ನಿವಾತಕವಚೈಃ ಸಹ ॥೧೧॥

ಅರ್ಜುನನೊಡನೆ ಸಂಶಪ್ತಕರ ತುಮುಲ ಯುದ್ಧವು, ಹಿಂದೆ ನಾವು ಕೇಳಿದಂತೆ ಅರ್ಜುನನಿಗೇ, ನಿವಾತಕವಚರೊಡನೆ ಯಾವ ರೀತಿಯ ತುಮುಲ ಯುದ್ಧ ನಡೆಯಿತೋ ಅದೇ ರೀತಿಯದಾಯಿತು.

ರಥಾನಶ್ವಾನ್ ಧ್ವಜಾನ್ ನಾಗಾನ್ ಪತ್ತೀನ್ ರಥಪತೀನಪಿ ।
ಇಷೂನ್ ಧನೂಂಷಿ ಖಡ್ಗಾಂಶ್ಚ ಚಕ್ರಾಣಿ ಚ ಪರಶ್ವಧಾನ್ ॥೧೨॥

ಸಾಯುಧಾನುದ್ಯತಾನ್ ಬಾಹೂನುದ್ಯತಾನ್ಯಾಯುಧಾನಿ ಚ ।
ಚಿಚ್ಛೇದ ದ್ವಿಷತಾಂ ಪಾರ್ಥಃ ಶಿರಾಂಸಿ ಚ ಸಹಸ್ರಶಃ ॥೧೩॥

ಶತ್ರುಗಳ ಸಾವಿರಾರು ರಥಗಳನ್ನು ಕುದುರೆಗಳನ್ನು ಧ್ವಜಗಳನ್ನು ಗಜಗಳನ್ನು ಪದಾತಿಗಳನ್ನು ರಥಿಕರನ್ನು ಬಾಣಗಳನ್ನು ಧನುಸ್ಸುಗಳನ್ನು ಖಡ್ಗಗಳನ್ನು ಚಕ್ರಗಳನ್ನು ಪರಶುಗಳನ್ನು ಆಯುಧ ಹಿಡಿದು ಎತ್ತಿದ ಬಾಹುಗಳನ್ನು, ಎತ್ತಿದ ಆಯುಧಗಳನ್ನು ಮತ್ತು ಶಿರಸ್ಸುಗಳನ್ನು ಅರ್ಜುನ ಕತ್ತರಿಸಿದ.

ತಸ್ಮಿನ್ ಸೈನ್ಯೇ ಮಹಾವರ್ತೇ ಪಾತಾಲಾವರ್ತಸನ್ನಿಭೇ ।
ನಿಮಗ್ನಂ ತಂ ರಥಂ ಮತ್ವಾ ನೇದುಃ ಸಂಶಪ್ತಕಾ ಮುದಾ ॥೧೪॥

ಸಂಶಪ್ತಕ ಸೈನ್ಯವು ಪಾತಾಳದಷ್ಟು ಆಳದ ಸುಳಿಯಿಂದ ಕೂಡಿದ ಮಡುವಿನಂತಿತ್ತು. ಆ ಸುಳಿಯಲ್ಲಿ ಅರ್ಜುನ ರಥ ಮುಳುಗಿಯೇ ಹೋಯಿತೆಂದು ತಿಳಿದು ಸಂಶಪ್ತಕರು ಹರ್ಷದಿಂದ ಗರ್ಜಿಸಿದರು.

ಸ ಪುರಸ್ತಾದರೀನ್ ಹತ್ವಾ ಪುನರುತ್ತರತೋವಧೀತ್ ।
ಪಶ್ಚಾದ್ ದಕ್ಷಿಣತಶ್ಚೈವ ಕ್ರುದ್ಧೋ ರುದ್ರಃ ಪಶೂನಿವ ॥೧೫॥

ಅರ್ಜುನನು ಪೂರ್ವದಿಕ್ಕಿನಲ್ಲಿ ಶತ್ರುಗಳನ್ನು ಕೊಂದು, ಪುನಃ ಉತ್ತರ ದಲ್ಲಿಯೂ ಪಶ್ಚಿಮದಲ್ಲಿಯೂ ದಕ್ಷಿಣದಲ್ಲಿಯೂ ಕೊಂದ, ಕ್ರುದ್ಧನಾದ ರುದ್ರನು ಪಶುಗಳನ್ನು ಸಂಹರಿಸುವಂತೆ.

ಅಥ ಪಾಂಚಾಲಚೇದೀನಾಂ ಸೃಂಜಯಾನಾಂ ಚ ಮಾರಿಷ ।
ತ್ವದೀಯೈಃ ಸಹ ಸಂಗ್ರಾಮ ಆಸೀತ್ಪರಮದಾರುಣಃ ॥೧೬॥

ರಾಜನೆ, ಪಾಂಚಾಲ ಚೇದಿ ಸೃಂಜಯರಿಗೆ ನಿನ್ನವರೊಡನೆ ಪರಮ ದಾರುಣವಾದ ಯುದ್ಧ ನಡೆಯಿತು.

ಕೃಪಶ್ಚ ಕೃತವರ್ಮಾ ಚ ಶಕುನಿಶ್ಚಾಪಿ ಸೌಬಲಃ ।
ಹೃಷ್ಟಸೇನಾಃ ಸುಸಂರಬ್ಧಾ ರಥಾನೀಕ ಪ್ರಹಾರಿಣಃ ॥೧೭॥

ಕೋಸಲೈಃ ಕಾಶಿಮತ್ಸ್ಯೈಶ್ಚ ಕಾರೂಷೈಃ ಕೇಕಯೈರಪಿ ।
ಶೂರಸೇನೈಃ ಶೂರವೀರೈರ್ಯುಯುಧುರ್ಯುದ್ಧದುರ್ಮದಾಃ ॥೧೮॥

ರಥಸೈನ್ಯವನ್ನು ನಾಶಪಡಿಸುವ, ಯುದ್ಧದಲ್ಲಿ ಸುಖ ಕಾಣುವ ಕೃಪ–ಕೃತವರ್ಮ–ಸೌಬಲರು ಯುದ್ಧೋತ್ಸಾಹಯುಕ್ತರಾದ ಸೈನಿಕರಿಂದ ಕೂಡಿ, ಕ್ರುದ್ಧರಾಗಿ, ಕೋಸಲ ಕಾಶಿ ಮತ್ಸ್ಯ ಕರೂಷ ಕೇಕಯ ಶೂರಸೇನ ದೇಶಗಳ ಶೂರ–ವೀರರಾದ ಯೋಧರೊಡನೆ ಯುದ್ಧ ಮಾಡಿದರು.

ತೇಷಾಂ ತದಭವದ್ ಯುದ್ಧಂ ದೇಹಪಾಪ್ಮಾಸುನಾಶನಮ್ ।
ಶೂದ್ರವಿಟ್ಕ್ಷತ್ರವಿಪ್ರಾಣಾಂ ಧರ್ಮ್ಯಂ ಸ್ವರ್ಗ್ಯಂ ಯಶಸ್ಕರಮ್ ॥೧೯॥

ಶೂದ್ರ ವೈಶ್ಯ ಕ್ಷತ್ರಿಯ ವಿಪ್ರರಿಗೆಲ್ಲರಿಗೂ ಶರೀರ, ಪ್ರಾಣಗಳನ್ನು ಕಳೆವಂಥ ಧರ್ಮಸಮ್ಮತವಾದ ಸ್ವರ್ಗಕರವಾದ ಯಶಸ್ಕರವಾದ ಯುದ್ಧ ನಡೆಯಿತು.

ಹಿಂದೆ ಸೈನ್ಯಕ್ಕೆ ಕ್ಷತ್ರಿಯರಂತೆ ವಿಪ್ರರೂ ವೈಶ್ಯ ಶೂದ್ರರೂ ಸೇರುತ್ತಿದ್ದರು. ಯುದ್ಧವಿದ್ಯೆಯನ್ನು ನಾಲ್ಕೂ ವರ್ಣದವರು ಕಲಿಯುತ್ತಿದ್ದರು. ಬೇಡರ ಜಾತಿಯ

ಏಕಲವ್ಯನಿಗೂ ದ್ರೋಣ ಅಸ್ತ್ರವಿದ್ಯೆ ಹೇಳಿಕೊಟ್ಟ. ವೇದಮಂತ್ರಗಳನ್ನು ಮಾತ್ರ ಶೂದ್ರರಿಗೆ ಹೇಳಿಕೊಡುತ್ತಿರಲಿಲ್ಲ. ಮತ್ತು ಯುದ್ಧವೃತ್ತಿಯು ಕ್ಷತ್ರಿಯರಿಗೆ ಮಾತ್ರ ಸೀಮಿತವಾಗಿದ್ದರೂ ವಿಶೇಷ ಸಂದರ್ಭಗಳಲ್ಲಿ ನಾಲ್ಕೂ ವರ್ಣದವರೂ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಅದರಿಂದ ಬ್ರಾಹ್ಮಣರಾದ ದ್ರೋಣ, ಅಶ್ವತ್ಥಾಮರು ಯುದ್ಧಮಾಡಿ ಜಾತಿಭ್ರಷ್ಟರಾದರೆಂದು ತಿಳಿಯಲು ಕಾರಣವಿಲ್ಲ. ಗೀತಾತಾತ್ಪರ್ಯ ನಿರ್ಣಯದಲ್ಲಿ ಹೀಗೆ ಹೇಳಿದ್ದಾರೆ— 'ನಾರಾಯಣನ ದ್ವೇಷಿಗಳನ್ನೂ ಅವರ ಕಡೆಯವರನ್ನೂ ನಿಗ್ರಹಿಸುವುದು ಸಕಲ ಭಾಗವತರಿಗೂ ಪರಮಧರ್ಮವಾಗಿದೆ. ಕ್ಷತ್ರಿಯರಿಗೆ ಇದು ವಿಶೇಷವಾಗಿಯೂ ಪರಮಧರ್ಮವಾಗಿದೆ' ಎಂದು. ಹೀಗಾಗಿ ನಾರಾಯಣದ್ವೇಷಿಯಾದ ದುರ್ಯೋಧನನನ್ನು ನಿಗ್ರಹಿಸಲೆಂದೇ ಅವನ ಕಡೆಗೇ ನಿಂತು, ಯುದ್ಧ ನಡೆಯುವಂತೆ ಮಾಡಿ, ಭೀಷ್ಮ ದ್ರೋಣಾದಿಗಳು ಅವನ ವಿನಾಶಕ್ಕೆ ಕಾರಣರಾದರು. ತಾವು ಸ್ವಾಮಿದ್ರೋಹಿಗಳೆಂಬ ಭಾವನೆ ಲೋಕಕ್ಕೆ ಬರುವಂತೆ ನಡೆದುಕೊಂಡರು.

ಅಶ್ವತ್ಥಾಮನು ಅರ್ಜುನನಿಗೆ ಸೋತು ವಿಷಾದದಿಂದ ಶಸ್ತ್ರತ್ಯಾಗ ಮಾಡಿದಾಗ ವ್ಯಾಸರೇ ಬಂದು ಬುದ್ಧಿಹೇಳಿ ಶಸ್ತ್ರಗ್ರಹಣ ಮಾಡಿಸಿದುದು ಭಾರತದಲ್ಲಿ ಪ್ರಸಿದ್ಧವೇ ಇದೆ. ಅದರಿಂದ ದ್ರೋಣ, ಅಶ್ವತ್ಥಾಮರನ್ನು ಭೀಮ 'ಬ್ರಹ್ಮಬಂಧು' ಎನ್ನುವುದು ಅವರು ವೈಷ್ಣವರನ್ನು ಕೂಡ ವಧಿಸುತ್ತಾರೆ ಎಂಬ ಅಭಿಪ್ರಾಯದಿಂದ ಎನ್ನಬೇಕಾಗುತ್ತದೆ.

ದುರ್ಯೋಧನೋಽಪಿ ಸಹಿತೋ ಭ್ರಾತೃಭಿರ್ಭರತರ್ಷಭ ।
ಗುಪ್ತಃ ಕುರುಪ್ರವೀರೈಶ್ಚ ಮದ್ರಾಣಾಂ ಚ ಮಹಾರಥೈಃ ॥೨೦॥

ಪಾಂಡವೈಃ ಸಹಪಾಂಚಾಲೈಶ್ಚೇದಿಭಿಃ ಸಾತ್ಯಕೇನ ಚ ।
ಯುಧ್ಯಮಾನಂ ರಣೇ ಕರ್ಣಂ ಕುರುವೀರೋಽಭ್ಯಪಾಲಯತ್ ॥೨೧॥

ರಾಜನೆ, ಕುರುವೀರನಾದ ದುರ್ಯೋಧನನು ತಮ್ಮಂದಿರೊಡನೆ ಕೂಡಿ ಕುರುಪ್ರವೀರರಿಂದಲೂ ಮದ್ರಮಹಾರಥರಿಂದಲೂ ರಕ್ಷಿತನಾಗಿದ್ದು ಪಾಂಡವ–ಪಾಂಚಾಲ–ಚೇದಿವೀರರೊಡನೆ ಮತ್ತು ಸಾತ್ಯಕಿಯೊಡನೆ ಯುದ್ಧಮಾಡುತ್ತಿದ್ದ ಕರ್ಣನನ್ನು ರಣದಲ್ಲಿ ರಕ್ಷಿಸಿದ.

ಕರ್ಣೋಽಪಿ ನಿಶಿತೈರ್ಬಾಣೈರ್ವಿನಿಹತ್ಯ ಮಹಾಚಮೂಮ್ ।
ಪ್ರಮೃದ್ಯ ಚ ರಥಶ್ರೇಷ್ಠಾನ್ ಯುಧಿಷ್ಠಿರಮಪೀಡಯತ್ ॥೨೨॥

ಕರ್ಣನು ತೀಕ್ಷ್ಣವಾದ ಬಾಣಗಳಿಂದ ಪಾಂಡವರ ಮಹಾಸೈನ್ಯವನ್ನು ವಧಿಸಿ ಶ್ರೇಷ್ಠ ರಥಿಕರನ್ನೂ ನಾಶಮಾಡಿ ಯುಧಿಷ್ಠಿರನನ್ನು ಪೀಡಿಸಿದ.

ವಿಪತ್ರಾಯುಧದೇಹಾಸೂನ್ ಕೃತ್ವಾ ಶತ್ರೂನ್ ಸಹಸ್ರಶಃ ।
ಯುಕ್ತ್ವಾ ಸ್ವರ್ಗಯಶೋಭ್ಯಾಂ ಚ ಸ್ವೇಭ್ಯೋ
ಮುದಮುದಾವಹತ್ ॥೨೩॥

ಸಾವಿರಾರು ಶತ್ರುಗಳನ್ನು ರಥ ಆಯುಧ ಶರೀರ ಪ್ರಾಣರಹಿತರನ್ನಾಗಿ ಮಾಡಿ ಅವರಿಗೆ ಸ್ವರ್ಗ ಹಾಗೂ ಕೀರ್ತಿ ದೊರಕುವಂತೆ ಮಾಡಿ ತನ್ನವರಿಗೆ ಮುದ ನೀಡಿದ ಕರ್ಣ.

ಏವಂ ಮಾರಿಷ ಸಂಗ್ರಾಮೋ ನರವಾಜಿಗಜಕ್ಷಯಃ ।
ಕುರೂಣಾಂ ಸೃಂಜಯಾನಾಂ ಚ ದೇವಾಸುರಸಮೋऽಭವತ್ ॥೨೪॥

ರಾಜನೆ, ಹೀಗೆ ಕುರು–ಸೃಂಜಯರ ಸಂಗ್ರಾಮ ಪದಾತಿ ಅಶ್ವ ಗಜ ಕ್ಷಯಕಾರಿಯಾಗಿ ದೇವಾಸುರರ ಸಂಗ್ರಾಮಕ್ಕೆ ಸಮವೆನಿಸಿತು.

ಧೃತರಾಷ್ಟ್ರಃ

ಯತ್ತತ್ಪ್ರವಿಶ್ಯ ಪಾರ್ಥಾನಾಂ ಸೇನಾಂ ಕುರ್ವನ್ ಜನಕ್ಷಯಮ್ ।
ಕರ್ಣೋ ರಾಜಾನಮಭ್ಯರ್ಚ್ಛತ್ತನ್ಮಮಾಚಕ್ಷ್ವ ಸಂಜಯ ॥೨೫॥

ಧೃತರಾಷ್ಟ್ರ ನುಡಿದ— ಸಂಜಯ, ಕರ್ಣನು ಪಾಂಡವಸೇನೆಯನ್ನು ಪ್ರವೇಶಿಸಿ ಜನಕ್ಷಯ ಮಾಡುತ್ತ ರಾಜಾಯುಧಿಷ್ಠಿರನನ್ನು ಪೀಡಿಸಿದನೆಂಬುದನ್ನು ನನಗೆ ಹೇಳು.

ಕೇ ಚ ಪ್ರವೀರಾಃ ಪಾರ್ಥಾನಾಂ ಯುಧಿ ಕರ್ಣಮವಾರಯನ್ ।
ಕಾಂಶ್ಚ ಪ್ರಮಥ್ಯಾಧಿರಥಿರ್ಯುಧಿಷ್ಠಿರಮಪೀಡಯತ್ ॥೨೬॥

ಪಾಂಡವರ ಕಡೆಯ ಯಾವ ಪ್ರಧಾನವೀರರು ರಣರಂಗದಲ್ಲಿ ಕರ್ಣನನ್ನು ಇದಿರಿಸಿದರು? ಯಾರನ್ನು ನಾಶಮಾಡಿ ಯುಧಿಷ್ಠಿರನನ್ನು ಕರ್ಣನು ಪೀಡಿಸಿದ?

ಸಂಜಯಃ

ಧೃಷ್ಟದ್ಯುಮ್ನಮುಖಾನ್ ಪಾರ್ಥಾನ್ ದೃಷ್ಟ್ವಾ ಕರ್ಣೋ ವ್ಯವಸ್ಥಿತಾನ್ ।
ಸಮಭ್ಯಧಾವತ್ ತ್ವರಿತಃ ಪಾಂಚಾಲಾನ್ ಶತ್ರುಕರ್ಶನಃ ॥೨೭॥

ಸಂಜಯ ನುಡಿದ— ಧೃಷ್ಟದ್ಯುಮ್ನ ಮುಂತಾದ ಪಾಂಡವರ ವೀರರು ಯುದ್ಧ ಸನ್ನದ್ಧರಾಗಿ ನಿಂತಿದ್ದನ್ನು ಕಂಡು ಶತ್ರುನಾಶಕನಾದ ಕರ್ಣನು ಬೇಗನೆ ಪಾಂಚಾಲ ಯೋಧರ ಕಡೆಗೆ ಧಾವಿಸಿದ.

ತಂ ತೂರ್ಣಮಭಿಧಾವಂತಂ ಪಾಂಚಾಲಾ ಜಿತಕಾಶಿನಃ ।
ಪ್ರತ್ಯುದ್ಯಯುರ್ಮಹಾರಾಜ ಹಂಸಾ ಇವ ಮಹಾರ್ಣವಮ್ ॥೨೮॥

ವೇಗವಾಗಿ ತಮ್ಮೆಡೆಗೆ ಬರುತ್ತಿದ್ದ ಕರ್ಣನನ್ನು ಮಹಾರಾಜ, ಜಯಶಾಲಿಗಳಾದ ಪಾಂಚಾಲರು ಮಹಾಸಮುದ್ರವನ್ನು ಹಂಸಗಳು ಹೇಗೋ ಹಾಗೆ ಇದಿರು ಬಂದು ಸ್ವಾಗತಿಸಿದರು.

ತತಃ ಶಂಖಿಸಹಸ್ರಾಣಾಂ ನಿಸ್ವನೋ ಹೃದಯಂಗಮಃ ।
ಪ್ರಾದುರಾಸೀದುಭಯತೋ ಭೇರೀಶಬ್ದಶ್ಚ ದಾರುಣಃ ॥೨೯॥

ಆಗ ಸಾವಿರಾರು ಶಂಖಿಗಳ ಹೃದಯಂಗಮವಾದ ಧ್ವನಿಯೂ ದಾರುಣವಾದ ಭೇರಿ ಶಬ್ದವೂ ಎರಡೂ ಸೈನ್ಯಗಳಲ್ಲಿ ಉಂಟಾದುವು.

ನಾನಾವಾದಿತ್ರನಾದಶ್ಚ ದ್ವಿಪಾಶ್ವರಥನಿಸ್ವನಃ ।
ಸಿಂಹನಾದಶ್ಚ ವೀರಾಣಾಮಭವದ್ ದಾರುಣಸ್ತದಾ ॥೩೦॥

ನಾನಾ ವಾದ್ಯಘೋಷ, ಆನೆ ಕುದುರೆ ರಥಗಳ ಧ್ವನಿ ಮತ್ತು ವೀರರ ಸಿಂಹನಾದಗಳು ದಾರುಣವಾಗಿ ಉಂಟಾದುವು.

ಸಾದ್ರಿದ್ರುಮಾರ್ಣವಾ ಭೂಮಿಃ ಸವಾತಾಂಬುದಮಂಬರಮ್ ।
ಸಾರ್ಕೇಂದುಗ್ರಹನಕ್ಷತ್ರಾ ದ್ಯೌಶ್ಚ ವ್ಯಕ್ತಂ ವ್ಯಘೂರ್ಣತ ॥೩೧॥

ಪರ್ವತ ವೃಕ್ಷ ಸಮುದ್ರಸಹಿತವಾದ ಭೂಮಿ ಗಾಳಿ ಮೋಡಗಳಿಂದ ಕೂಡಿದ

ಆಕಾಶ, ಸೂರ್ಯ ಚಂದ್ರ ಗ್ರಹ ನಕ್ಷತ್ರ ಸಹಿತವಾದ ಅಂತರಿಕ್ಷವೆಲ್ಲವೂ ಸ್ಪಷ್ಟವಾಗಿ ಕಂಪಿಸುವಂತೆ ಕಂಡುಬಂದುವು.

ಅತಿ ಭೂತಾನಿ ತಂ ಶಬ್ದಂ ಮೇನಿರೇಽತಿ ಚ ವಿವ್ಯಥುಃ ।
ಯಾನಿ ಚಾಪ್ಯಲ್ಪಸತ್ತ್ವಾನಿ ಪ್ರಾಯಸ್ತಾನಿ ಮೃತಾನಿ ಚ ॥೩೨॥

ಜೀವಿಗಳು ಆ ಶಬ್ದವನ್ನು ಅತಿಯಾಯಿತೆಂದುಕೊಂಡುವು ಮತ್ತು ಅತಿಯಾಗಿ ವ್ಯಥೆಗೊಂಡುವು. ಅಲ್ಪಬಲ ಉಳ್ಳ ಪ್ರಾಣಿಗಳು ಪ್ರಾಯಃ ಸತ್ತೇಹೋದುವು.

ಅಥ ಕರ್ಣೋ ಭೃಶಂ ಕ್ರುದ್ಧಃ ಶೀಘ್ರಮಸ್ತ್ರಮುದೀರಯನ್ ।
ಜಘಾನ ಪಾಂಡವೀಂ ಸೇನಾಮಾಸುರೀಂ ಮಘವಾನಿವ ॥೩೩॥

ಕರ್ಣನು ಬಹಳ ಕ್ರುದ್ಧನಾಗಿ ವೇಗದಿಂದ ಅಸ್ತ್ರಗಳನ್ನು ಪ್ರಯೋಗಿಸಿ, ಇಂದ್ರನು ಅಸುರ ಸೇನೆಯನ್ನು ವಧಿಸಿದಂತೆ, ಪಾಂಡವಸೇನೆಯನ್ನು ವಧಿಸಿದ.

ಸ ಪಾಂಡವಚಮೂಂ ಕರ್ಣಃ ಪ್ರವಿಶ್ಯ ವಿಸೃಜನ್ ಶರಾನ್ ।
ಪ್ರಭದ್ರಕಾಣಾಂ ಪ್ರವರಾನಹನತ್ ಸಪ್ತವಿಂಶತಿಮ್ ॥೩೪॥

ಕರ್ಣನು ಪಾಂಡವ ಸೇನೆಯನ್ನು ಪ್ರವೇಶಿಸಿ ಬಾಣಗಳನ್ನು ಎಸೆದು ಪ್ರಭದ್ರಕರ ಇಪ್ಪತ್ತೇಳು ಪ್ರಧಾನವೀರರನ್ನು ಸಂಹರಿಸಿದ.

ತತಃ ಸುಪುಂಖೈರ್ನಿಶಿತೈ ರಥಶ್ರೇಷ್ಠೋಽಪ್ಯಥೇಷುಭಿಃ ।
ಅವಧೀತ್ ಪಂಚವಿಂಶತ್ಯಾ ಪಾಂಚಾಲಾನ್ ಪಂಚವಿಂಶತಿಮ್ ॥೩೫॥

ಮಹಾರಥನಾದ ಕರ್ಣನು ಒಳ್ಳೆಯ ಪುಕ್ಕಉಳ್ಳ ಹರಿತವಾದ ಇಪ್ಪತ್ತೈದು ಬಾಣಗಳಿಂದ ಇಪ್ಪತ್ತೈದು ಪಾಂಚಾಲರನ್ನು ಸಂಹರಿಸಿದ.

ಸುವರ್ಣಪುಂಖೈರ್ನಾರಾಚೈಃ ಪರಕಾಯವಿದಾರಣೈಃ ।
ಚೇದಿಕಾನವಧೀದ್ ವೀರಃ ಶತಶೋಽಥ ಸಹಸ್ರಶಃ ॥೩೬॥

ಪರಕಾಯ ಭೇದನ ಮಾಡುವ ಬಂಗಾರದ ಪುಕ್ಕಉಳ್ಳ ಬಾಣಗಳಿಂದ ವೀರಕರ್ಣನು ನೂರಾರು ಸಾವಿರಾರು ಚೇದಿಗಳನ್ನು ಸಂಹರಿಸಿದ.

ತಂ ತಥಾ ಸಮರೇ ಕರ್ಮ ಕುರ್ವಾಣಮತಿಮಾನುಷಮ್ ।
ಪರಿವವ್ರುರ್ಮಹಾರಾಜ ಪಾಂಚಾಲಾನಾಂ ರಥವ್ರಜಾಃ ॥೩೭॥

ಮಹಾರಾಜ, ಕರ್ಣನು ರಣದಲ್ಲಿ ಹಾಗೆ ಅತಿಮಾನುಷ ಕರ್ಮ ಮಾಡುವಾಗ ಪಾಂಚಾಲರ ರಥಸಮೂಹಗಳು ಅವನನ್ನು ಸುತ್ತುವರಿದುವು.

ತತಃ ಸಂಧಾಯ ವಿಶಿಖಾನ್ ಪಂಚ ಭಾರತ ದುಃಸಹಾನ್ ।
ಪಾಂಚಾಲಾನವಧೀತ್ ಪಂಚ ಕರ್ಣೋ ವೈಕರ್ತನೋ ವೃಷಾ ॥೩೮॥

ಆಗ, ರಾಜನೆ, ಕರ್ಣನು ಸಹಿಸಲಾಗದ ಐದು ಬಾಣಗಳನ್ನು ಹೂಡಿ ಐದು ಪಾಂಚಾಲವೀರರನ್ನು ಸಂಹರಿಸಿದ.

ಭಾನುದೇವಂ ಚಿತ್ರಸೇನಂ ಸೇನಾಬಿಂದುಂ ಚ ಭಾರತ ।
ತಪನಂ ಶೂರಸೇನಂ ಚ ಪಾಂಚಾಲಾನಹನತ್ ರಣೇ ॥೩೯॥

ರಾಜನೆ, ಕರ್ಣನು ಭಾನುದೇವ ಚಿತ್ರಸೇನ ಸೇನಾಬಿಂದು ತಪನ ಶೂರಸೇನರೆಂಬ ಪಾಂಚಾಲರನ್ನು ರಣದಲ್ಲಿ ಸಂಹರಿಸಿದ.

ಪಾಂಚಾಲೇಷು ಚ ಶೂರೇಷು ವಧ್ಯಮಾನೇಷು ಸಾಯಕೈಃ ।
ಹಾಹಾಕಾರೋ ಮಹಾನಾಸೀತ್ ಪಾಂಚಾಲಾನಾಂ ಮಹಾಹವೇ ॥೪೦॥

ಪಾಂಚಾಲರ ಮಹಾರಣದಲ್ಲಿ ಕರ್ಣನ ಬಾಣಗಳಿಂದ ಪಾಂಚಾಲ ವೀರರು ಹತರಾಗುವಾಗ ಮಹಾ ಹಾಹಾಕಾರ ಉಂಟಾಯಿತು.

ತೇಷಾಂ ಸಂಕೀರ್ಯಮಾಣಾನಾಂ ಪರಿವವ್ರೂ ರಥಾ ದಶ ।
ಪುನರೇವ ಚ ತಾನ್ ಕರ್ಣೋ ಜಘಾನಾಶು ಪತತ್ರಿಭಿಃ ॥೪೧॥

ಪಾಂಚಾಲರು ಮುತ್ತಿಗೆ ಹಾಕುವಾಗ ಹತ್ತು ರಥಗಳು ಕರ್ಣನನ್ನು ಸುತ್ತುವರಿದುವು. ಪುನಃ ಆ ಹತ್ತು ರಥಗಳನ್ನೂ ಕರ್ಣನು ಬಾಣಗಳಿಂದ ನಾಶಮಾಡಿದ.

ಚಕ್ರರಕ್ಷೌ ತು ಕರ್ಣಸ್ಯ ಪುತ್ರೌ ಮಾರಿಷ ದುರ್ಜಯೌ ।
ಸುಷೇಣಃ ಸತ್ಯಸೇನಶ್ಚ ತ್ಯಕ್ತ್ವಾ ಪ್ರಾಣಾನಯುಧ್ಯತಾಮ್ ॥೪೨॥

ಸುಷೇಣ ಮತ್ತು ಸತ್ಯಸೇನರು ಕರ್ಣನ ಪುತ್ರರು, ಕರ್ಣನ ಚಕ್ರರಕ್ಷಕರು. ದುರ್ಜಯರಾಗಿದ್ದು ಪ್ರಾಣಗಳನ್ನೆ ಒತ್ತೆಇಟ್ಟು ಯುದ್ಧಮಾಡಿದರು.

ಪೃಷ್ಠಗೋಪಸ್ತು ಕರ್ಣಸ್ಯ ಜ್ಯೇಷ್ಠಃ ಪುತ್ರೋ ಮಹಾರಥಃ ।
ವೃಷಸೇನಃ ಸ್ವಯಂ ಕರ್ಣಂ ಪೃಷ್ಠತಃ ಪರ್ಯಪಾಲಯತ್ ॥೪೩॥

ಕರ್ಣನ ಜ್ಯೇಷ್ಠಪುತ್ರ ವೃಷಸೇನ ಮಹಾರಥ, ಪೃಷ್ಠಗೋಪ, ಕರ್ಣನನ್ನು ಹಿಂಭಾಗದಲ್ಲಿದ್ದು ರಕ್ಷಿಸಿದ.

ಧೃಷ್ಟದ್ಯುಮ್ನಃ ಸಾತ್ಯಕಿಶ್ಚ ದ್ರೌಪದೇಯಾ ವೃಕೋದರಃ ।
ಜನಮೇಜಯಃ ಶಿಖಂಡೀ ಚ ಪ್ರವೀರಾಶ್ಚ ಪ್ರಭದ್ರಕಾಃ ॥೪೪॥

ಚೇದಿಕೇಕಯಪಾಂಚಾಲಾ ಯಮೌ ಮತ್ಸ್ಯಾಶ್ಚ ದಂಸಿತಾಃ ।
ಸಮಭ್ಯಧಾವನ್ ರಾಧೇಯಂ ಜಿಘಾಂಸಂತಃ ಪ್ರಹಾರಿಣಃ ॥೪೫॥

ಧೃಷ್ಟದ್ಯುಮ್ನ ಸಾತ್ಯಕಿ ದ್ರೌಪದೀಪುತ್ರರು ಭೀಮಸೇನ ಜನಮೇಜಯ ಶಿಖಂಡಿ ಪ್ರಭದ್ರಕರ ವೀರರು, ಚೇದಿ ಕೇಕಯ ಪಾಂಚಾಲರು ನಕುಲ–ಸಹದೇವರು ಮತ್ಸ್ಯರು ಇವರೆಲ್ಲರೂ ಸನ್ನದ್ಧರಾಗಿ ಕರ್ಣನನ್ನು ಕೊಲ್ಲಲು ಬಯಸಿ ಹೊಡೆಯುತ್ತ ದಾಳಿಮಾಡಿದರು.

ತ ಏನಂ ವಿವಿಧೈಃ ಶಸ್ತ್ರೈಃ ಶರಧಾರಾಭಿರೇವ ಚ ।
ಅಭ್ಯವರ್ಷನ್ ವಿಮೃದ್ನಂತಃ ಪ್ರಾವೃಷೀವಾಂಬುದಾ ಗಿರಿಮ್ ॥೪೬॥

ಮಳೆಗಾಲದಲ್ಲಿ ಮೋಡಗಳು ಬೆಟ್ಟದ ಮೇಲೆ ಮಳೆ ಸುರಿಸುವಂತೆ ಅವರು ಕರ್ಣನ ಮೇಲೆ ನಾನಾಬಗೆಯ ಶಸ್ತ್ರಗಳಿಂದಲೂ ಬಾಣಪ್ರವಾಹಗಳಿಂದಲೂ ಮಳೆಗರೆದರು.

ಪಿತರಂ ತು ಪರೀಪ್ಸಂತಃ ಕರ್ಣಪುತ್ರಾಃ ಪ್ರಹಾರಿಣಃ ।
ತ್ವದೀಯಾಶ್ಚಾಪರೇ ರಾಜನ್ ವೀರಾ ವೀರಾನವಾರಯನ್ ॥೪೭॥

ರಾಜನೆ, ತಂದೆಯನ್ನು ರಕ್ಷಿಸುವ ಇಚ್ಛೆಯಿಂದ ಪ್ರಹಾರಸಮರ್ಥರಾದ ಕರ್ಣಪುತ್ರರು ಮತ್ತು ನಿನ್ನವರಾದ ಬೇರೆ ವೀರರು ವೀರರನ್ನು ತಡೆದರು.

ಸುಷೇಣೋ ಭೀಮಸೇನಸ್ಯ ಛಿತ್ತ್ವಾ ಭಲ್ಲೇನ ಕಾರ್ಮುಕಮ್ ।
ನಾರಾಚೈಃ ಸಪ್ತಭಿರ್ವಿದ್ಧ್ವಾ ಹೃದಿ ಭೀಮಂ ನನಾದ ಹ ॥೪೮॥

ಕರ್ಣಪುತ್ರ ಸುಷೇಣನು ಭೀಮಸೇನನ ಧನುಸ್ಸನ್ನು ಬಾಣದಿಂದ ಕತ್ತರಿಸಿ ಏಳು ಬಾಣಗಳಿಂದ ಭೀಮನೆದೆಗೆ ಹೊಡೆದು ಗರ್ಜಿಸಿದ.

ಅಥಾನ್ಯದ್ಧನುರಾದಾಯ ಸುದೃಢಂ ಭೀಮವಿಕ್ರಮಃ ।
ಸಜ್ಯಂ ವೃಕೋದರಃ ಕೃತ್ವಾ ಸುಷೇಣಸ್ಯಾಚ್ಛಿನದ್ಧನುಃ ॥೪೯॥

ಬಳಿಕ ಪರಾಕ್ರಮಿ ಭೀಮನು ಬಲು ದೃಢವಾದ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಹೆದೆ ಏರಿಸಿ ಸುಷೇಣನ ಧನುಸ್ಸನ್ನು ಕತ್ತರಿಸಿದ.

ವಿವ್ಯಾಧ ಚೈನಂ ನವಭಿಃ ಕ್ರುದ್ಧೋ ನೃತ್ಯನ್ನಿವೇಷುಭಿಃ ।
ಕರ್ಣಂ ಚ ತೂರ್ಣಂ ವಿವ್ಯಾಧ ತ್ರಿಸಪ್ತತ್ಯಾ ಶಿತೈಃ ಶರೈಃ ॥೫೦॥

ಭೀಮನು ಕ್ರುದ್ಧನಾಗಿ ಕುಣಿವಂತೆ ತೋರಿಕೊಂಡು ಒಂಬತ್ತು ಬಾಣಗಳಿಂದ ಸುಷೇಣನನ್ನು ಹೊಡೆದ. ಕರ್ಣನನ್ನೂ ಬೇಗನೆ ಎಪ್ಪತ್ತಮೂರು ಹರಿತವಾದ ಬಾಣಗಳಿಂದ ಹೊಡೆದ.

ಸತ್ಯಸೇನಂ ಚ ದಶಭಿಃ ಸಾಶ್ವಸೂತಾಯುಧಧ್ವಜಮ್ ।
ಪಶ್ಯತಾಂ ಸುಹೃದಾಂ ಮಧ್ಯೇ ಕರ್ಣಪುತ್ರಮಪಾತಯತ್ ॥೫೧॥

ಕರ್ಣಪುತ್ರನಾದ ಸತ್ಯಸೇನನನ್ನು ಭೀಮಸೇನ ಹತ್ತು ಬಾಣಗಳಿಂದ, ಅವನ ಬಂಧುಗಳು ನೋಡುತ್ತಿದ್ದಂತೆಯೆ ಅವರ ಮಧ್ಯದಲ್ಲಿ ಅಶ್ವ ಸೂತ ಆಯುಧ ಧ್ವಜ ಸಮೇತವಾಗಿ ಸಂಹರಿಸಿದ.

ಕ್ಷುರಪ್ರಣುನ್ನಂ ತತ್ತಸ್ಯ ಶಿರಶ್ಚಂದ್ರನಿಭಾನನಮ್ ।
ಶುಭದರ್ಶನಮೇವಾಸೀನ್ನಾಲಭ್ರಷ್ಟಮಿವಾಂಬುಜಮ್ ॥೫೨॥

ಸತ್ಯಸೇನನ ಶಿರಸ್ಸು ಬಾಣದಿಂದ ಕತ್ತರಿಸಿ ಬಿದ್ದಾಗ, ಚಂದ್ರನಂಥ ಮುಖಯುಕ್ತವಾಗಿ ನಾಳ ಕಡಿದ ಕಮಲದಂತೆ ನೋಡಲು ಸುಂದರವಾಗಿತ್ತು.

ಹತ್ವಾ ಕರ್ಣಸುತಂ ಭೀಮಸ್ತಾವಕಾನ್ ಪುನರಾರ್ದಯತ್ ।
ಕೃಪಹಾರ್ದಿಕ್ಯಯೋಶ್ಚಿತ್ತ್ವಾ ಚಾಪೇ ತಾವಪ್ಯಥಾರ್ದಯತ್ ॥೫೩॥

ಭೀಮನು ಕರ್ಣಪುತ್ರನನ್ನು ಸಂಹರಿಸಿ ನಿನ್ನ ಸೈನಿಕರನ್ನೂ ನಾಶಪಡಿಸಿದ. ಕೃಪ ಕೃತವರ್ಮರ ಧನುಸ್ಸುಗಳನ್ನೂ ಕಡಿದು ಅವರನ್ನೂ ಪೀಡಿಸಿದ.

ದುಃಶಾಸನಂ ತ್ರಿಭಿರ್ವಿದ್ಧ್ವಾ ಶಕುನಿಂ ಷಡ್ಭಿರಾಯಸೈಃ ।
ಉಲೂಕಂ ಚ ಪತತ್ರಿಂ ಚ ಚಕಾರ ವಿರಥಾವುಭೌ ॥೫೪॥

ಭೀಮಸೇನ ದುಃಶಾಸನನನ್ನು ಮೂರುಬಾಣಗಳಿಂದ, ಶಕುನಿಯನ್ನು ಆರು ಬಾಣಗಳಿಂದ ಹೊಡೆದು ಉಲೂಕ ಮತ್ತು ಪತತ್ರಿ ಇವರಿಬ್ಬರನ್ನೂ ವಿರಥರನ್ನಾಗಿ ಮಾಡಿದ.

ಹೇ ಸುಷೇಣ ಹತೋऽಸೀತಿ ಬ್ರುವನ್ನಾದತ್ತ ಸಾಯಕಮ್ ।
ತಮಸ್ಯ ಕರ್ಣಶ್ಚಿಚ್ಛೇದ ತ್ರಿಭಿಶ್ಚೈನಮತಾಡಯತ್ ॥೫೫॥

'ಸುಷೇಣ, ನೀನೀಗ ಹತನಾದೆ!' ಎನ್ನುತ್ತ ಭೀಮಸೇನ ಬಾಣವನ್ನು ಹೂಡಿ ಎಸೆದ. ಆದರೆ ಆ ಬಾಣವನ್ನು ಕರ್ಣನು ಕಡಿದು ಮೂರು ಬಾಣಗಳಿಂದ ಭೀಮನಿಗೆ ಹೊಡೆದ.

ಅಥಾನ್ಯಮಪಿ ಜಗ್ರಾಹ ಸುಪರ್ವಾಣಂ ಸುತೇಜನಮ್ ।
ಸುಷೇಣಾಯಾಸೃಜದ್ಭೀಮಸ್ತಮಪ್ಯಸ್ಯಾಚ್ಛಿನದ್ ವೃಷಃ ॥೫೬॥

ಒಳ್ಳೆಯ ಗಿಣ್ಣಿನ ಒಳ್ಳೆಯ ಹರಿತವಾದ ಇನ್ನೊಂದು ಬಾಣವನ್ನು ಭೀಮ ಸುಷೇಣನಿಗೆಸೆದ. ಅದನ್ನೂ ಕರ್ಣ ಕತ್ತರಿಸಿದ.

ಪುನಃ ಕರ್ಣಸ್ತ್ರಿಸಪ್ತತ್ಯಾ ಭೀಮಸೇನಂ ರಥೇಷುಭಿಃ ।
ಪುತ್ರಂ ಪರೀಪ್ಸನ್ ವಿವ್ಯಾಧ ಕ್ರೂರಂ ಕ್ರೂರೈರ್ದಿಘಾಂಸಯಾ ॥೫೭॥

ಕರ್ಣನು ಮಗನನ್ನು ರಕ್ಷಿಸುವುದಕ್ಕಾಗಿ ಕ್ರೂರನಾದ ಭೀಮನ ವಧೆಗೆ ಕ್ರೂರವಾದ ಎಪ್ಪತ್ತಮೂರು ರಥೇಷು ಎಂಬ ಬಾಣಗಳನ್ನು ಎಸೆದ.

ಸುಷೇಣಸ್ತು ಧನುರ್ಗೃಹ್ಯ ಭಾರಸಾಧನಮುತ್ತಮಮ್ ।
ನಕುಲಂ ಪಂಚಭಿರ್ಬಾಣೈರ್ಬಾಹ್ವೋರುರಸಿ ಚಾರ್ದಯತ್ ॥೫೮॥

ಸುಷೇಣನು ಸಮರ್ಥವಾದ ಉತ್ತಮವಾದ ಬಿಲ್ಲನ್ನೆತ್ತಿಕೊಂಡು ಐದು ಬಾಣಗಳಿಂದ ನಕುಲನನ್ನು ಬಾಹುಗಳಲ್ಲಿಯೂ ಎದೆಯಲ್ಲಿಯೂ ಪ್ರಹರಿಸಿದ.

ನಕುಲಸ್ತಂ ತು ವಿಂಶತ್ಯಾ ವಿದ್ಧ್ವಾ ಭಾರಸಹೈರ್ದೃಢೈಃ ।
ನನಾದ ಬಲವನ್ನಾದಂ ಕರ್ಣಸ್ಯ ಭಯಮಾದಧತ್ ॥೫೯॥

ನಕುಲನು ಸುಷೇಣನನ್ನು ಸಮರ್ಥವಾದ ದೃಢವಾದ ಇಪ್ಪತ್ತು ಬಾಣಗಳಿಂದ ಹೊಡೆದು ಕರ್ಣನಿಗೆ ಭಯ ಉಂಟಾಗುವಂತೆ ಬಲವಾಗಿ ಗರ್ಜಿಸಿದ.

ತಂ ಸುಷೇಣೋ ಮಹಾರಾಜ ವಿದ್ಧ್ವಾ ದಶಭಿರಾಶುಗೈಃ ।
ಚಿಚ್ಛೇದ ಚ ಧನುಃ ಶೀಘ್ರಂ ಕ್ಷುರಪ್ರೇಣ ಮಹಾರಥಃ ॥೬೦॥

ಮಹಾರಾಜ, ಮಹಾರಥನಾದ ಸುಷೇಣನು ನಕುಲನನ್ನು ಹತ್ತು ಬಾಣಗಳಿಂದ ಹೊಡೆದು ಬೇಗನೆ ಅವನ ಧನುಸ್ಸನ್ನೂ ಬಾಣದಿಂದ ಕತ್ತರಿಸಿದ.

ಅಥಾನ್ಯದ್ಧನುರಾದಾಯ ನಕುಲಃ ಕ್ರೋಧಮೂರ್ಚ್ಛಿತಃ ।
ಸುಷೇಣಂ ಬಹುಭಿರ್ಬಾಣೈರ್ವಾರಯಾಮಾಸ ಸಂಯುಗೇ ॥೬೧॥

ನಕುಲನು ಕ್ರೋಧದಿಂದ ಮೈಮರೆತು ಇನ್ನೊಂದು ಬಿಲ್ಲನ್ನೆತ್ತಿಕೊಂಡು ಸುಷೇಣನನ್ನು ರಣದಲ್ಲಿ ಬಹುಬಾಣಗಳಿಂದ ಆವರಿಸಿದ.

ಸ ತು ಬಾಣೈರ್ದಿಶೋ ರಾಜನ್ನಾಚ್ಛಾದ್ಯ ಪರವೀರಹಾ ।
ಆಜಘ್ನೇ ಸಾರಥಿಂ ಚಾಸ್ಯ ಸುಷೇಣಂ ಚ ತತಸ್ತ್ರಿಭಿಃ ॥೬೨॥
ಚಿಚ್ಛೇದ ಚಾಸ್ಯ ಸುದೃಢಂ ಧನುರ್ಭಲ್ಲೈಸ್ತ್ರಿಭಿಸ್ತ್ರಿಧಾ ॥೬೩॥

ರಾಜನೆ, ಪರವೀರನಾಶಕನಾದ ನಕುಲನು ಬಾಣಗಳಿಂದ ದಿಕ್ಕುಗಳನ್ನು ಆವರಿಸಿ ಸುಷೇಣನನ್ನೂ ಅವನ ಸಾರಥಿಯನ್ನೂ ಮೂರು ಬಾಣಗಳಿಂದ ಹೊಡೆದ. ದೃಢವಾಗಿರುವ ಅವನ ಧನುಸ್ಸನ್ನು ಮೂರು ಬಾಣಗಳಿಂದ ಮೂರಾಗಿ ಕತ್ತರಿಸಿದ.

ಅಥಾನ್ಯದ್ಧನುರಾದಾಯ ಸುಷೇಣಃ ಕ್ರೋಧಮೂರ್ಚ್ಛಿತಃ ।
ಅವಿಧ್ಯನ್ನಕುಲಂ ಷಷ್ಟ್ಯಾ ಸಹದೇವಂ ಚ ಸಪ್ತಭಿಃ ॥೬೪॥

ಸುಷೇಣನು ಕ್ರೋಧದಿಂದ ಮೈಮರೆತು ಇನ್ನೊಂದು ಬಿಲ್ಲನ್ನೆತ್ತಿಕೊಂಡು ಅರವತ್ತು ಬಾಣಗಳಿಂದ ನಕುಲನನ್ನು ಏಳು ಬಾಣಗಳಿಂದ ಸಹದೇವನನ್ನೂ ಹೊಡೆದ.

ತದ್ಯುದ್ಧಂ ಸುಮಹದ್ ಘೋರಮಾಸೀದ್ ದೇವಾಸುರೋಪಮಮ್ ।
ನಿಘ್ನತಾಂ ಸಾಯಕೈಸ್ತೂರ್ಣಮನ್ಯೋನ್ಯಸ್ಯ ವಧಂ ಪ್ರತಿ ॥೬೫॥

ಪರಸ್ಪರ ವಧೆಗೆ ಬಾಣಗಳಿಂದ ವೇಗವಾಗಿ ಹೊಡೆಯುತ್ತಿದ್ದ ಅವರ ಆ ಯುದ್ಧ ಘೋರವಾಗಿತ್ತು. ದೇವಾಸುರ ಯುದ್ಧದಂತೆ ಮಹಾಯುದ್ಧವಾಗಿತ್ತು.

ಸಾತ್ಯಕಿರ್ವೃಷಸೇನಸ್ಯ ಹತ್ವಾ ಸೂತಂ ತ್ರಿಭಿಃ ಶರೈಃ ।
ಧನುಶ್ಚಿಚ್ಛೇದ ಭಲ್ಲೇನ ಜಘಾನಾಶ್ವಾಂಶ್ಚ ಸಪ್ತಭಿಃ ॥೬೬॥
ಧ್ವಜಮೇಕೇಷುಣೋನ್ಮಥ್ಯ ತ್ರಿಭಿಸ್ತಂ ಹೃದ್ಯತಾಡಯತ್ ॥೬೭॥

ಸಾತ್ಯಕಿಯೂ ವೃಷಸೇನನೆಂಬ ಕರ್ಣಪುತ್ರನ ಸಾರಥಿಯನ್ನು ಮೂರು ಬಾಣಗಳಿಂದ ಕೊಂದು ಒಂದು ಬಾಣದಿಂದ ಧನುಸ್ಸನ್ನು ಕಡಿದ, ಏಳು ಬಾಣಗಳಿಂದ ಕುದುರೆಗಳನ್ನು ಕೊಂದ. ಒಂದು ಬಾಣದಿಂದ ಧ್ವಜವನ್ನು ಕಡಿದು ಮೂರು ಬಾಣಗಳಿಂದ ಅವನ ಎದೆಗೂ ಹೊಡೆದ.

ಅಥಾವಸನ್ನಃ ಸ್ವರಥೇ ಮುಹೂರ್ತಾತ್ಪುನರುತ್ಥಿತಃ ।
ಸ ರಣೇ ಯುಯುಧಾನೇನ ವಿಸೂತಾಶ್ವರಥಧ್ವಜಃ ॥೬೮॥
ಅಥೋ ಜಿಘಾಂಸುಃ ಶೈನೇಯಂ ಖಡ್ಗಚರ್ಮಭೃದಭ್ಯಯಾತ್ ॥೬೯॥

ಸಾತ್ಯಕಿಯಿಂದ ಸಾರಥಿ ಕುದುರೆ ರಥಧ್ವಜವೆಲ್ಲವನ್ನೂ ಕಳೆದುಕೊಂಡು ತನ್ನ ರಥದಲ್ಲಿ ಕುಸಿದುಬಿದ್ದ ವೃಷಸೇನ ಒಂದು ಮುಹೂರ್ತದ ಬಳಿಕ ಎದ್ದು ಖಡ್ಗ ಗುರಾಣಿಗಳನ್ನು ಹಿಡಿದು ಸಾತ್ಯಕಿಯನ್ನು ಕೊಲ್ಲಲೆಂದು ಆಕ್ರಮಿಸಿ ಬಂದ.

ತಸ್ಯ ಚಾಪ್ಲವತಃ ಶೀಘ್ರಂ ವೃಷಸೇನಸ್ಯ ಸಾತ್ಯಕಿಃ ।
ವರಾಹಕರ್ಣೈರ್ದಶಭಿರವಿಧ್ಯದಸಿಚರ್ಮಣೇ ॥೭೦॥

ವೃಷಸೇನ ವೇಗದಿಂದ ತನ್ನ ಬಳಿಗೆ ಧಾವಿಸಿ ಬರುತ್ತಿದ್ದಂತೆ ಸಾತ್ಯಕಿಯು ವರಾಹಕರ್ಣ ಎಂಬ ಹತ್ತು ಬಾಣಗಳಿಂದ ಅವನ ಕತ್ತಿ ಗುರಾಣಿಗಳನ್ನು ಕತ್ತರಿಸಿದ.

ದುಃಶಾಸನಸ್ತು ತಂ ದೃಷ್ಟ್ವಾ ವಿರಥಂ ವ್ಯಾಯುಧಂ ಕೃತಮ್ ।
ಆರೋಪ್ಯ ಸ್ವರಥೇ ತೂರ್ಣಮಪೋವಾಹ ರಣಾತುರಮ್ ॥೭೧॥

ದುಃಶಾಸನನು, ಸಾತ್ಯಕಿಯಿಂದ ರಣದಲ್ಲಿ ಗಾಯಗೊಂಡು ರಥ ಆಯುಧ

ರಹಿತನೂ ಆಗಿದ್ದ ವೃಷಸೇನನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು ಬೇಗನೆ ದೂರಕ್ಕೊಯ್ದ.

ಅಥಾನ್ಯಂ ರಥಮಾಸ್ಥಾಯ ವೃಷಸೇನೋ ಮಹಾರಥಃ ॥೭೨॥

ದ್ರೌಪದೇಯಾಂಸ್ತ್ರಿಸಪ್ತತ್ಯಾ ಯುಯುಧಾನಂ ಚ ಪಂಚಭಿಃ ।
ಭೀಮಸೇನಂ ಚತುಃಷಷ್ಟ್ಯಾ ಸಹದೇವಂ ಚ ಪಂಚಭಿಃ ॥೭೩॥

ನಕುಲಂ ತ್ರಿಂಶತಾ ಬಾಣೈಃ ಶತಾನೀಕಂ ಚ ಸಪ್ತಭಿಃ ।
ಶಿಖಂಡಿನಂ ಚ ದಶಭಿರ್ಧರ್ಮರಾಜಂ ಶತೇನ ಚ ॥೭೪॥

ಮಹಾರಥನಾದ ವೃಷಸೇನ ಇನ್ನೊಂದು ರಥವನ್ನೇರಿ ರಣಭೂಮಿಗೆ ಬಂದು ದ್ರೌಪದೀಪುತ್ರರನ್ನು ಎಪ್ಪತ್ತಮೂರು ಬಾಣಗಳಿಂದ, ಸಾತ್ಯಕಿಯನ್ನು ಐದು ಬಾಣಗಳಿಂದ, ಭೀಮಸೇನನನ್ನು ಅರವತ್ತನಾಲ್ಕು ಬಾಣಗಳಿಂದ, ಸಹದೇವನನ್ನು ಐದು ಬಾಣಗಳಿಂದ, ನಕುಲನನ್ನು ಮೂವತ್ತು ಬಾಣಗಳಿಂದ, ಶತಾನೀಕನನ್ನು ಏಳು ಬಾಣಗಳಿಂದ, ಶಿಖಂಡಿಯನ್ನು ಹತ್ತು ಬಾಣಗಳಿಂದ, ಧರ್ಮರಾಜನನ್ನು ನೂರು ಬಾಣಗಳಿಂದ ಹೊಡೆದನು.

ಏತಾಂಶ್ಚಾನ್ಯಾಂಶ್ಚ ರಾಜೇಂದ್ರ ಪ್ರವೀರಾನ್ ಜಯಗೃದ್ಧಿನಃ ।
ಅಭ್ಯರ್ದಯನ್ ಮಹೇಷ್ವಾಸಃ ಕರ್ಣಪುತ್ರೋ ವಿಶಾಂಪತೇ ॥೭೫॥
ಕರ್ಣಸ್ಯ ಯುಧಿ ದುರ್ಧರ್ಷಃ ಪುನಃ ಪೃಷ್ಠಮಪಾಲಯತ್ ॥೭೬॥

ಮಹಾರಾಜ, ಮಹಾಬಿಲ್ಲಾರನಾದ ದುರ್ಧರ್ಷನಾದ ಕರ್ಣಪುತ್ರ ವೃಷಸೇನನು ಜಯಾಕಾಂಕ್ಷಿಗಳಾದ ಈ ವೀರರನ್ನೂ ಬೇರೆ ವೀರರನ್ನೂ ಪೀಡಿಸಿದ ಮತ್ತು ಪುನಃ ಕರ್ಣನಿಗೆ ಹಿಂಭಾಗದಲ್ಲಿ ರಕ್ಷಕನಾಗಿಯೂ ನಿಂತ.

ದುಃಶಾಸನಂ ತು ಶೈನೇಯೋ ನವೈರ್ನವಭಿರಾಯಸೈಃ ।
ವಿಸೂತಾಶ್ವರಥಂ ಕೃತ್ವಾ ಲಲಾಟೇ ತ್ರಿಭಿರಾರ್ಪಯತ್ ॥೭೭॥

ಸಾತ್ಯಕಿಯು ದುಃಶಾಸನನನ್ನು ಹೊಸದಾದ ಕಬ್ಬಿಣದ ಒಂಬತ್ತು ಬಾಣಗಳಿಂದ ಸಾರಥಿ ಅಶ್ವ ರಥರಹಿತನನ್ನಾಗಿ ಮಾಡಿ, ಹಣೆಯಲ್ಲಿ ಮೂರು ಬಾಣಗಳಿಂದ ಪ್ರಹರಿಸಿದ.

ಸ ತ್ವನ್ಯಂ ರಥಮಾಸ್ಥಾಯ ವಿಧಿವತ್ಕಲ್ಪಿತಂ ಪುನಃ ।
ಯುಯುಧೇ ಪಾಂಡುಭಿಃ ಸಾರ್ಧಂ ಕರ್ಣಸ್ಯಾಪ್ಯಾಯಯನ್
ಬಲಮ್ ॥೭೮॥

ದುಃಶಾಸನನು ವಿಧ್ಯುಕ್ತವಾಗಿ ಸಜ್ಜುಗೊಳಿಸಲ್ಪಟ್ಟ ಇನ್ನೊಂದು ರಥವನ್ನು ಏರಿ, ಕರ್ಣನ ಸೈನ್ಯಕ್ಕೆ ಬಲನೀಡುತ್ತ ಪಾಂಡವರೊಡನೆ ಪುನಃ ಯುದ್ಧ ನಡೆಸಿದ.

ಧೃಷ್ಟದ್ಯುಮ್ನಸ್ತತಃ ಕರ್ಣಮವಿಧ್ಯದ್ ದಶಭಿಃ ಶರೈಃ ।
ದ್ರೌಪದೇಯಾಸ್ತ್ರಿಸಪ್ತತ್ಯಾ ಯುಯುಧಾನಸ್ತು ಪಂಚಭಿಃ ॥೭೯॥

ಭೀಮಸೇನಶ್ಚತುಃಷಷ್ಟ್ಯಾ ಸಹದೇವಶ್ಚ ಪಂಚಭಿಃ ।
ನಕುಲಸ್ತ್ರಿಂಶತಾ ಬಾಣೈಃ ಶತಾನೀಕಶ್ಚ ಸಪ್ತಭಿಃ ॥೮೦॥

ಶಿಖಂಡೀ ದಶಭಿರ್ವೀರೋ ಧರ್ಮರಾಜಃ ಶತೇನ ತು ॥೮೧॥

ಧೃಷ್ಟದ್ಯುಮ್ನನು ಹತ್ತು ಬಾಣಗಳಿಂದಲೂ ದ್ರೌಪದೀಪುತ್ರರು ಎಪ್ಪತ್ತಮೂರು ಬಾಣಗಳಿಂದಲೂ, ಸಾತ್ಯಕಿಯು ಐದು ಬಾಣಗಳಿಂದಲೂ, ಭೀಮಸೇನನು ಅರವತ್ತನಾಲ್ಕು ಬಾಣಗಳಿಂದಲೂ, ಸಹದೇವನು ಐದು ಬಾಣಗಳಿಂದಲೂ ನಕುಲನು ಮೂವತ್ತು ಬಾಣಗಳಿಂದಲೂ ಶತಾನೀಕನು ಏಳು ಬಾಣಗಳಿಂದಲೂ, ಶಿಖಂಡಿಯು ಹತ್ತು ಬಾಣಗಳಿಂದಲೂ ಧರ್ಮರಾಜನು ನೂರು ಬಾಣಗಳಿಂದಲೂ ಕರ್ಣನನ್ನು ಹೊಡೆದರು.

ಏತೇ ಚಾನ್ಯೇ ಚ ರಾಜೇಂದ್ರ ಪ್ರವೀರಾ ಜಯಗೃದ್ಧಿನಃ ।
ಅಭ್ಯರ್ದಯನ್ ಮಹೇಷ್ವಾಸಂ ಸೂತಪುತ್ರಂ ಮಹಾಮೃಧೇ ॥೮೨॥

ಮಹಾರಾಜ, ಯುದ್ಧ ಜಯಾಕಾಂಕ್ಷಿಗಳಾದ ಈ ರಾಜರೂ ಬೇರೆ ವೀರರೂ ಮಹಾರಣದಲ್ಲಿ ಮಹಾಬಿಲ್ಲಾರನಾದ ಸೂತಪುತ್ರನನ್ನು ಹೊಡೆದರು.

ತಾನ್ ಸೂತಪುತ್ರೋ ವಿಶಿಖೈರ್ದಶಭಿರ್ದಶಭಿಃ ಶಿತೈಃ ।
ರಥೇ ಚಾರು ಚರನ್ ವೀರಃ ಪ್ರತ್ಯವಿಧ್ಯದರಿಂದಮಃ ॥೮೩॥

ವೀರ ಶತ್ರುನಾಶಕನಾದ ಕರ್ಣನು ಸುಂದರವಾಗಿ ರಥ ನಡೆಸುತ್ತ ಅವರನ್ನು ಹರಿತವಾದ ಹತ್ತು ಹತ್ತು ಬಾಣಗಳಿಂದ ಪ್ರತಿಯಾಗಿ ಹೊಡೆದ.

ತತ್ರಾಸ್ತ್ರವೀರ್ಯಂ ಕರ್ಣಸ್ಯ ಲಾಘವಂ ಚ ಮಹಾತ್ಮನಃ ।
ಅಪಶ್ಯಾಮ ಮಹಾರಾಜ ತದದ್ಭುತಮಿವಾಭವತ್ ॥೮೪॥

ಮಹಾರಾಜ, ಆಗ ಮಹಾತ್ಮನಾದ ಕರ್ಣನ ಅಸ್ತ್ರಬಲವನ್ನೂ ವೇಗವನ್ನೂ ನಾವು ನೋಡಿದೆವು. ಅದು ಅದ್ಭುತವಾಗಿತ್ತು.

ನ ಹ್ಯಾದದಾನಂ ದದೃಶುಃ ಸಂದಧಾನಂ ಚ ಸಾಯಕಾನ್ ।
ವಿಮುಂಚಂತಂ ಚ ಸಂರಂಭಾದ್ ದದೃಶುಸ್ತೇ ಮಹಾರಥಮ್ ॥೮೫॥

ಮಹಾರಥನಾದ ಕರ್ಣ ಬಾಣಗಳನ್ನು ಎತ್ತಿಕೊಳ್ಳುವುದನ್ನಾಗಲಿ ಬಿಲ್ಲಿಗೆ ಹೂಡುವುದನ್ನಾಗಲಿ ಬಾಣಗಳನ್ನು ಎಸೆಯುವುದನ್ನಾಗಲಿ ಯಾರೂ ನೋಡಲಿಲ್ಲ. ಶತ್ರುಗಳು ಹತರಾದುದನ್ನು ಮಾತ್ರ ಕಂಡರು.

ದ್ಯೌರ್ವಿಯದ್ಭೂರ್ದಿಶಶ್ಚಾಶು ಪ್ರಪೂರ್ಣಾ ನಿಶಿತೈಃ ಶರೈಃ ।
ಅರುಣಾಭ್ರಾವೃತಾಕಾರಂ ತಸ್ಮಿನ್ ದೇಶೇಽಭವದ್ದಿಯತ್ ॥೮೬॥

ಅಂತರಿಕ್ಷ ಆಕಾಶ ಭೂಮಿ ದಿಕ್ಕುಗಳು ಬೇಗನೆ ತೀಕ್ಷ್ಣವಾದ ಬಾಣಗಳಿಂದ ತುಂಬಿದುವು. ಆ ಪ್ರದೇಶದಲ್ಲಿ ಆಕಾಶ ಕೆಂಪುಮೋಡಗಳಿಂದ ಆವೃತವಾದಂತೆ ಕಂಗೊಳಿಸಿತು.

ನೃತ್ಯನ್ನಿವ ಹಿ ರಾಧೇಯಶ್ಚಾಪಹಸ್ತಃ ಪ್ರತಾಪವಾನ್ ।
ಯೈರ್ವಿದ್ಧಃ ಪ್ರತ್ಯವಿಧ್ಯತ್ ತಾನೇಕೈಕಂ ತ್ರಿಗುಣೈಃ ಶರೈಃ ॥೮೭॥

ಬಿಲ್ಲು ಹಿಡಿದು ನಾಟ್ಯವಾಡುವವನಂತೆ ಪ್ರತಾಪಶಾಲಿ ಕರ್ಣ ಕಂಡು ಬಂದ. ಶತ್ರುಗಳ ಯಾವ ಬಾಣಗಳಿಂದ ಅವನು ಹೊಡೆಸಿಕೊಂಡನೋ ಅವುಗಳಿಗೆ ಒಂದೊಂದಕ್ಕೂ ಮೂರು ಪಟ್ಟು ಹೆಚ್ಚು ಬಾಣಗಳಿಂದ ಅವರನ್ನು ಪ್ರತಿಯಾಗಿ ಹೊಡೆದ.

ದಶಭಿರ್ದಶಭಿಶ್ಚೈನಾನ್ ಪುನರ್ವಿದ್ಧ್ವಾ ನನಾದ ಹ ।
ಸಾಶ್ವಸೂತಧ್ವಜಚ್ಛತ್ರಾಂಸ್ತತಸ್ತೇ ವಿವರಂ ದದುಃ ॥೮೮॥

ಅವರನ್ನು ಅಶ್ವಸಾರಥಿ ಧ್ವಜಛತ್ರಗಳ ಸಮೇತವಾಗಿ ಹತ್ತು ಹತ್ತು ಬಾಣಗಳಿಂದ

ಹೊಡೆದು ಗರ್ಜಿಸಿದ. ಆಗಲೆ ಅವರು ಅವನಿಗೆ ಮುಂದೆ ಹೋಗಲು ಅವಕಾಶ ಕೊಟ್ಟರು.

ತಾನ್ ಪ್ರಮೃದ್ನನ್ ಮಹೇಷ್ವಾಸಾನ್ ರಾಧೇಯಃ ಶರವೃಷ್ಟಿಭಿಃ ।
ರಾಜಾನೀಕಮಸಂಬಾಧಂ ಪ್ರಾವಿಶಚ್ಛತ್ರುಕರ್ಶನಃ ॥೮೯॥

ಮಹಾಬಿಲ್ಲಾರರಾದ ಪಾಂಡವವೀರರನ್ನು ಬಾಣಗಳ ಮಳೆಗಳಿಂದ ಧ್ವಂಸ ಮಾಡುತ್ತ ಶತ್ರುನಾಶಕನಾದ ಕರ್ಣ ಹೆಚ್ಚು ನಿಬಿಡವಲ್ಲದಿದ್ದ ರಾಜಾ ಯುಧಿಷ್ಠಿರನ ಸೈನ್ಯವನ್ನು ಪ್ರವೇಶಿಸಿದ.

ಸ ರಥಾನ್ ತ್ರಿಶತಾನ್ ಹತ್ವಾ ಚೇದೀನಾಮನಿವರ್ತಿನಾಮ್ ।
ರಾಧೇಯೋ ನಿಶಿತೈರ್ಬಾಣೈಸ್ತತೋಽಭ್ಯಾರ್ಚ್ಛದ್
ಯುಧಿಷ್ಠಿರಮ್ ॥೯೦॥

ಯುದ್ಧದಿಂದ ಹಿಮ್ಮೆಟ್ಟದ ಚೇದಿಗಳ ಮೂರುನೂರು ರಥಿಕರನ್ನು ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿ ಬಳಿಕ ಯುಧಿಷ್ಠಿರನನ್ನು ಆಕ್ರಮಿಸಿದ.

ತತಸ್ತೇ ಪಾಂಡವಾ ರಾಜನ್ ಶಿಖಂಡೀ ಚ ಸಸಾತ್ಯಕಿಃ ।
ರಾಧೇಯಾತ್ ಪರಿರಕ್ಷಂತೋ ರಾಜಾನಂ ಪರ್ಯವಾರಯನ್ ॥೯೧॥

ಆಗ, ರಾಜನೆ, ಪಾಂಡವರೂ ಶಿಖಂಡಿಯೂ ಸಾತ್ಯಕಿಯೂ ಯುಧಿಷ್ಠಿರನನ್ನು ಕರ್ಣನಿಂದ ರಕ್ಷಿಸಲು ಸುತ್ತುವರಿದರು.

ತಥೈವ ತಾವಕಾಃ ಸರ್ವೇ ಕರ್ಣಂ ದುರ್ವಾರಣಂ ರಣೇ ।
ಯತ್ತಾಃ ಶೂರಾ ಮಹೇಷ್ವಾಸಾಃ ಪರ್ಯರಕ್ಷಂತ ಸರ್ವಶಃ ॥೯೨॥

ಹಾಗೆ ರಣದಲ್ಲಿ ತಡೆಯಲಾಗದ ಕರ್ಣನನ್ನು ನಿನ್ನ ಕಡೆಯ ಶೂರರಾದ ಎಲ್ಲ ಬಿಲ್ಲಾರರೂ ಎಲ್ಲ ಕಡೆಯಿಂದ ಯತ್ನಪೂರ್ವಕವಾಗಿ ರಕ್ಷಿಸತೊಡಗಿದರು.

ನಾನಾವಾದಿತ್ರಘೋಷಾಶ್ಚ ಪ್ರಾದುರಾಸನ್ವಿಶಾಂಪತೇ ।
ಸಿಂಹನಾದಶ್ಚ ಸಂಜಜ್ಞೇ ಶೂರಾಣಾಮನಿವರ್ತಿನಾಮ್ ॥೯೩॥

ರಾಜನೆ, ಆಗ ನಾನಾವಾದ್ಯಘೋಷಗಳು ಕೇಳಿಸಿದುವು. ಯುದ್ಧದಿಂದ ಹಿಮ್ಮೆಟ್ಟದ ಶೂರರ ಸಿಂಹನಾದವೂ ಉಂಟಾಯಿತು.

ತತಃ ಪುನಃ ಸಮಾಜಗ್ಮುರಭೀತಾಃ ಕುರುಪಾಂಡವಾಃ ।
ಯುಧಿಷ್ಠಿರಮುಖಾಃ ಪಾರ್ಥಾಃ ಸೂತಪುತ್ರಮುಖಾ ವಯಮ್ ॥೯೪॥

ಯುಧಿಷ್ಠಿರನನ್ನು ಮುಂದೆ ಮಾಡಿಕೊಂಡು ಪಾಂಡವರು, ಕರ್ಣನನ್ನು ಮುಂದೆ ಮಾಡಿಕೊಂಡು ನಾವು, ಹೀಗೆ ಕೌರವ–ಪಾಂಡವರು ನಿರ್ಭೀತಿಯಿಂದ ಪುನಃ ಕಲೆತೆವು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಪಂಚಚತ್ವಾರಿಂಶೋಧ್ಯಾಯಃ ॥೪೫॥

❖

ಮಹಾಭಾರತತಾತ್ಪರ್ಯನಿರ್ಣಯ

ಕರ್ಣೋಽಥ ಶಲ್ಯನಿಯತೇನ ರಥೇನ ಪಾರ್ಥ
ಸೇನಾಮವಾಪ್ಯ ವಿದುಧಾವ ಶರೈಃ ಸಮಂತಾತ್ ।
ಸಂರಕ್ಷಿತೋ ಯುಧಿ ಸುಯೋಧನಗೌತಮಾದ್ಯೈ-
ರಾಚಾರ್ಯಜೇನ ಚ ಮಹಾಸ್ತ್ರವಿದಾಂ ವರೇಣ ॥೩೩॥

ದುರ್ಯೋಧನ ಕೃಪ ಮುಂತಾದವರಿಂದಲೂ ಮಹಾ ಅಸ್ತ್ರವೇತ್ತರಲ್ಲಿಯೆ ಅಗ್ರಗಣ್ಯನಾದ ಅಶ್ವತ್ಥಾಮನಿಂದಲೂ ಯುದ್ಧದಲ್ಲಿ ರಕ್ಷಿತನಾದ ಕರ್ಣನು ಶಲ್ಯ ನಡೆಸುತ್ತಿದ್ದ ರಥದಿಂದ ಪಾಂಡವರ ಸೈನ್ಯವನ್ನು ಹೊಕ್ಕು ಎಲ್ಲೆಡೆ ಬಾಣಗಳಿಂದ ಮರ್ದಿಸಿದ.

ತಂ ಭೀಮಪಾರ್ಷತಶಿನಿಪ್ರವರಾಭಿಗುಪ್ತಾ
ಸಾ ಪಾಂಡವೇಯಪೃತನಾಭಿವವರ್ಷ ಬಾಣೈಃ ।
ತಾಂ ಸೂರ್ಯಸೂನುರಥ ಬಾಣವರೈರ್ವಿದಾರ್ಯ
ಸಂಪ್ರಾರ್ದಯಚ್ಛಿತಶರೈರಪಿ ಧರ್ಮಸೂನುಮ್ ॥೩೪॥

ಭೀಮ ಧೃಷ್ಟದ್ಯುಮ್ನ ಸಾತ್ಯಕಿಯರಿಂದ ರಕ್ಷಿತವಾದ ಪಾಂಡವರ ಸೈನ್ಯ ಕರ್ಣನ ಮೇಲೆ ಬಾಣಗಳ ಮಳೆಗರೆಯಿತು. ಆ ಸೈನ್ಯವನ್ನು ಕರ್ಣ ಉತ್ತಮ ಬಾಣಗಳಿಂದ ಕಂಗೆಡಿಸಿ ಧರ್ಮರಾಜನನ್ನು ಹರಿತವಾದ ಬಾಣಗಳಿಂದ ಚೆನ್ನಾಗಿ ಪೀಡಿಸಿದ.

ಕೃತ್ವಾ ತಮಾಶು ವಿರಥಂ ಧನುರಸ್ಯ ಕಂಠೇ
ಸಜ್ಯಂ ನಿಧಾಯ ಪರುಷಾ ಗಿರ ಆಹ ಚೋಚ್ಚೈಃ ।
ದೃಷ್ಟ್ವೈವ ಮಾರುತಿರಮುಂ ಭೃಶಮಾತುತೋದ
ದುರ್ಯೋಧನಂ ವಿರಥಕಾರ್ಮುಕಮತ್ರ ಕೃತ್ವಾ ॥೩೫॥

ಕರ್ಣ ಧರ್ಮರಾಜನನ್ನು ಬೇಗನೆ ವಿರಥನನ್ನಾಗಿ ಮಾಡಿ ಹೆದೆಯೇರಿಸಿದ ಬಿಲ್ಲನ್ನು ಅವನ ಕುತ್ತಿಗೆಗೆ ಹಾಕಿ ಗಟ್ಟಿಯಾಗಿ ಕಟುವಾದ ಮಾತುಗಳನ್ನಾಡಿದ. ಅವನನ್ನು ಕಂಡು ಭೀಮ ಬೇಗನೆ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಅವನ ಬಿಲ್ಲನ್ನು ಮುರಿದು ಬಹಳವಾಗಿ ಪೀಡಿಸಿದ.

ತಂ ಪ್ರಾಣಸಂಶಯಗತಂ ನೃಪತಿಂ ನಿರೀಕ್ಷ್ಯ
ಕರ್ಣಂ ಜಗಾದ ಯುಧಿ ಮದ್ರಪತಿಃ ಪ್ರದರ್ಶ್ಯ ।
ಯಸ್ಯಾರ್ಥ ಏವ ಸಮರಸ್ತ್ವಮಿಯಂ ಚ ಸೇನಾ
ತಂ ತ್ವಂ ಯಮಸ್ಯ ಸದನಂ ಪ್ರಯಿಯಾಸುಮದ್ಯ ॥೩೬॥

ಭೀಮೇನ ಪೀಡಿತಮಮುಂ ಪರಿಪಾಹಿ ಶೀಘ್ರಂ
ಕಿಂ ತೇ ಯುಧಿಷ್ಠಿರಮಿಮಂ ಹಿ ಮುಧಾऽಭಿಪೀಡ್ಯ ।
ಶ್ರುತ್ವಾऽಸ್ಯ ವಾಕ್ಯಮತಿಹಾಯ ಯುಧಿಷ್ಠಿರಂ ತಂ
ಕರ್ಣೋ ಯಯೌ ನೃಪತಿರಕ್ಷಣತತ್ಪರೋಲಮ್ ॥೩೭॥

ಯುದ್ಧದಲ್ಲಿ ದುರ್ಯೋಧನ ಪ್ರಾಣಸಂಕಟದಲ್ಲಿ ಬಿದ್ದುದನ್ನು ಕಂಡು ಶಲ್ಯ ಕರ್ಣನಿಗೆ ಅವನನ್ನು ತೋರಿಸಿ ಹೇಳಿದ– 'ಈ ಯುದ್ಧವನ್ನು ನೀನು ಯಾರಿಗಾಗಿ ಮಾಡುತ್ತಿರುವೆಯೋ, ನೀನೂ ಈ ಸೇನೆಯೂ ಯಾರಿಗಾಗಿ ಇವೆಯೊ ಆ ದುರ್ಯೋಧನ ಭೀಮನಿಂದ ಪೀಡಿತನಾಗಿ ಈಗ ಯಮಲೋಕಕ್ಕೆ ಹೋಗಲು ಸಿದ್ಧನಾಗಿದ್ದಾನೆ. ಅವನನ್ನು ಬೇಗನೆ ಕಾಪಾಡು. ಈ ಧರ್ಮರಾಜನನ್ನು ವ್ಯರ್ಥವಾಗಿ ಪೀಡಿಸಿ ನಿನಗೇನು ಲಾಭ?' ಎಂದು. ಶಲ್ಯನ ಮಾತನ್ನು ಕೇಳಿ ಕರ್ಣ ಧರ್ಮರಾಜನನ್ನು ಬಿಟ್ಟು ದುರ್ಯೋಧನನ ರಕ್ಷಣೆಯಲ್ಲಿ ತತ್ಪರನಾಗಿ ಧಾವಿಸಿದ.

❖❖❖

ನಲವತ್ತಾರನೆಯ ಅಧ್ಯಾಯ

ಯುಧಿಷ್ಠಿರನ ಒಂದು ಬಾಣದಿಂದ ಕರ್ಣ ಮೂರ್ಛಿತನಾಗಿ ಶವದಂತೆ ಬಿದ್ದ. ಬಳಿಕ ಎಚ್ಚೆತ್ತು ಯುಧಿಷ್ಠಿರನ ಕವಚ, ರಥ ಮುಂತಾದುವನ್ನೆಲ್ಲ ಪುಡಿ ಮಾಡಿದ. ಹೆಗಲಮೇಲೆ ಕೈಹಾಕಿ ಕ್ಷಾತ್ರಧರ್ಮಕ್ಕೆ ನೀನು ಯೋಗ್ಯನಲ್ಲವೆಂದು ಅಪಹಾಸ ಮಾಡಿದ.

ಸಂಜಯಃ

ವಿದಾರ್ಯ ಕರ್ಣಸ್ತಾಂ ಸೇನಾಂ ಯುಧಿಷ್ಠಿರಮುಪಾದ್ರವತ್ ।
ರಥಹಸ್ತ್ಯಶ್ವಪತ್ತೀನಾಂ ಸಹಸ್ರೈಃ ಪರಿವಾರಿತಃ ॥೧॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ಸಾವಿರಾರು ರಥ ಗಜ ಅಶ್ವ ಪದಾತಿಗಳಿಂದ ಕೂಡಿದ ಕರ್ಣನು ಪಾಂಡವಸೇನೆಯನ್ನು ಭೇದಿಸಿ ಯುಧಿಷ್ಠಿರನ ಕಡೆಗೆ ಧಾವಿಸಿದ.

ನಾನಾಯುಧಸಹಸ್ರಾಣಿ ಪ್ರೇಷಿತಾನ್ಯರಿಭಿರ್ಯುಷಃ ।
ಛಿತ್ತ್ವಾ ಬಾಣಶತೈರುಗ್ರೈಸ್ತಾನವಿದ್ಧ್ಯದಸಂಭ್ರಮಃ ॥೨॥

ಶತ್ರುಗಳು ಎಸೆದ ನಾನಾಬಗೆಯ ಸಾವಿರಾರು ಆಯುಧಗಳನ್ನು ಕತ್ತರಿಸಿ, ಕರ್ಣನು ನಿರ್ಭಯವಾಗಿ ಅವರನ್ನು ಉಗ್ರವಾದ ನೂರು ಬಾಣಗಳಿಂದ ಹೊಡೆದ.

ನಿಚಕರ್ತ ಶಿರಾಂಸ್ಯೇಷಾಂ ಬಾಹೂನೂರೂಂಶ್ಚ ಸೂತಜಃ ।
ತೇ ಹತಾ ವಸುಧಾಂ ಪೇತುರ್ಭಗ್ನಾಶ್ಚಾನ್ಯೇ ವಿದುದ್ರುವುಃ ॥೩॥

ಶತ್ರುಗಳ ತಲೆ ತೋಳು ತೊಡೆಗಳನ್ನು ಕರ್ಣ ಕತ್ತರಿಸಿದ. ಆಗ ಕೆಲವರು ಹತರಾಗಿ ನೆಲದ ಮೇಲೆ ಬಿದ್ದರು. ಕೆಲವರು ಗಾಯಗೊಂಡು ಪಲಾಯನಗೈದರು.

ದ್ರವಿಡಾಂಧ್ರನಿಷಾದಾಸ್ತು ಪುನಃ ಸಾತ್ಯಕಿಚೋದಿತಾಃ ।
ಅಭ್ಯರ್ದಯನ್ ಜಿಘಾಂಸಂತಃ ಪತ್ತಯಃ ಕರ್ಣಮಾಹವೇ ॥೪॥

ದ್ರವಿಡ ಆಂಧ್ರ ನಿಷಾದ ದೇಶದ ಪದಾತಿಗಳು ಪುನಃ ಸಾತ್ಯಕಿಯ ಆದೇಶದಿಂದ ಕರ್ಣನನ್ನು ರಣದಲ್ಲಿ ಕೊಲ್ಲುವ ಇಚ್ಛೆಯಿಂದ ಆಕ್ರಮಿಸಿದರು.

ತೇ ಏಬಾಹುವಿಶಸ್ತ್ರಾಶ್ಚ ಪ್ರಹತಾಃ ಕರ್ಣಸಾಯಕೈಃ ।
ಪೇತುಃ ಪೃಥಿವ್ಯಾಂ ಯುಗಪಚ್ಛಿನ್ನಂ ಶಾಲವನಂ ಯಥಾ ॥೫॥

ಕಡಿದ ಮತ್ತಿಮರಗಳ ಕಾಡಿನಂತೆ ಅವರೆಲ್ಲರೂ ಒಮ್ಮೆಲೆ ಕರ್ಣನ ಬಾಣಗಳಿಂದ ತೋಳು ಶಸ್ತ್ರಗಳಿಲ್ಲದವರಾಗಿ ಹೊಡೆಸಿಕೊಂಡು ನೆಲದ ಮೇಲೊರಗಿದರು.

ಏವಂ ಯೋಧಶತಾನ್ಯಾಜೌ ಸಹಸ್ರಾಣ್ಯಯುತಾನಿ ಚ ।
ಹತಾನೀಯುರ್ಮಹೀಂ ದೇಹೈರ್ಯಶಸಾಪೂರಯನ್ ದಿಶಃ ॥೬॥

ಯೋಧರು ಹೀಗೆ ನೂರಾರು ಸಾವಿರಾರು ಹತ್ತುಸಾವಿರ ಸಂಖ್ಯೆಯಲ್ಲಿ ಸತ್ತು, ಶರೀರದಿಂದ ನೆಲವನ್ನೂ ಕೀರ್ತಿಯಿಂದ ದಿಕ್ಕುಗಳನ್ನೂ ತುಂಬಿಸಿದರು.

ಅಥ ವೈಕರ್ತನಂ ಕರ್ಣಂ ರಣೇ ಕ್ರುದ್ಧಮಿವಾಂತಕಮ್ ।
ರುರುಧುಃ ಪಾಂಡುಪಾಂಚಾಲಾ ವ್ಯಾಧಿಂ ಮಂತ್ರೌಷಧೈರಿವ ॥೭॥

ವ್ಯಾಧಿಯನ್ನು ಮಂತ್ರ ಔಷಧಿಗಳಿಂದ ತಡೆಯುವಂತೆ ಪಾಂಡವ ಪಾಂಚಾಲ ಸೈನಿಕರು ರಣದಲ್ಲಿ ಅಂತಕನಂತೆ ಕುಪಿತನಾದ ಕರ್ಣನನ್ನು ತಡೆದರು.

ಸ ತಾನ್ ಪ್ರಮೃದ್ಯಾಭ್ಯಪತತ್ ಪುನರೇವ ಯುಧಿಷ್ಠಿರಮ್ ।
ಮಂತ್ರೌಷಧಕ್ರಿಯಾತೀತೋ ವ್ಯಾಧಿರತ್ಯುಲ್ಬಣೋ ಯಥಾ ॥೮॥

ಅತಿಉಲ್ಬಣವಾದ ವ್ಯಾಧಿಯು ಮಂತ್ರ ಔಷಧಿ ಚಿಕಿತ್ಸೆಗೆ ಶಮನವಾಗದಿರುವಂತೆ ಕರ್ಣನು ಆ ಪಾಂಡು–ಪಾಂಚಾಲಯೋಧರನ್ನು ಸಂಹರಿಸಿ ಪುನಃ ಯುಧಿಷ್ಠಿರನ ಬಳಿಗೆ ಧಾವಿಸಿದ.

ಸ ರಾಜಗೃದ್ಧಿಭೀ ರುದ್ಧಃ ಪಾಂಡುಪಾಂಚಾಲಕೇಕಯೈಃ ।
ನಾಶಕತ್ ತಾನತಿಕ್ರಾಂತುಂ ಮೃತ್ಯುರ್ಬ್ರಹ್ಮವಿದೋ ಯಥಾ ॥೯॥

ಮೃತ್ಯುವು ಬ್ರಹ್ಮಜ್ಞಾನಿಗಳನ್ನು ಅತಿಕ್ರಮಿಸಲು ಶಕ್ತವಾಗದಿರುವಂತೆ ಕರ್ಣನೂ ರಾಜನ ರಕ್ಷಣಾಕಾಂಕ್ಷಿಗಳಾದ ಪಾಂಡು ಪಾಂಚಾಲ ಕೇಕಯ ಯೋಧರಿಂದ ತಡೆಯಲ್ಪಟ್ಟು ಅವರನ್ನು ಅತಿಕ್ರಮಿಸಿ ರಾಜನ ಬಳಿಗೆ ಹೋಗಲು ಶಕ್ತನಾಗಲಿಲ್ಲ.

ತತೋ ಯುಧಿಷ್ಠಿರಃ ಕರ್ಣಮದೂರಸ್ಥಂ ನಿವಾರಿತಮ್ ।
ಅಬ್ರವೀತ್ ಪರವೀರಘ್ನಃ ಕ್ರೋಧಸಂರಕ್ತಲೋಚನಃ ॥೧೦॥

ಹೀಗೆ ಪಾಂಡವಯೋಧರಿಂದ ತಡೆಯಲ್ಪಟ್ಟು ಸಮೀಪದಲ್ಲಿ ಸಿಕ್ಕಿದ ಕರ್ಣನಿಗೆ ಶತ್ರುವೀರ ನಾಶಕನಾದ ಯುಧಿಷ್ಠಿರನು ಕೋಪದಿಂದ ಕಣ್ಣು ಕೆಂಪು ಮಾಡಿಕೊಂಡು ನುಡಿದ.

ಕರ್ಣ ಕರ್ಣ ವೃಥಾ ದುಷ್ಪ ಸೂತಪುತ್ರ ವಚಃ ಶೃಣು ।
ಸದಾ ಸ್ಪರ್ಧಸಿ ಸಂಗ್ರಾಮೇ ಫಲ್ಗುನೇನ ತರಸ್ವಿನಾ ॥೧೧॥
ತಥಾಸ್ಮಾನ್ ಬಾಧಸೇ ನಿತ್ಯಂ ಧಾರ್ತರಾಷ್ಟ್ರಮತೇ ಸ್ಥಿತಃ ॥೧೨॥

ಕರ್ಣ ಕರ್ಣ ದುಷ್ಟ ಸೂತಪುತ್ರ, ನನ್ನ ಮಾತನ್ನು ಕೇಳು, ನೀನು ವ್ಯರ್ಥವಾಗಿ ರಣದಲ್ಲಿ ವೇಗಶಾಲಿಯಾದ ಅರ್ಜುನನೊಡನೆ ಸದಾ ಸ್ಪರ್ಧಿಸುತ್ತಿರುವೆ. ಮತ್ತು ದುರ್ಯೋಧನನ ಇಚ್ಛೆಯಂತೆ ನಡೆಯುತ್ತ ನಮ್ಮನ್ನು ನಿತ್ಯವೂ ಪೀಡಿಸುತ್ತಿರುವೆ.

ಯದ್ಬಲಂ ಯಚ್ಚ ತೇ ವೀರ್ಯಂ ಪ್ರದ್ವೇಷೋ ಯಶ್ಚ ಪಾಂಡುಷು ।
ತತ್ಸರ್ವಂ ದರ್ಶಯಸ್ವಾದ್ಯ ಪೌರುಷಂ ಮಹದಾಸ್ಥಿತಃ ॥೧೩॥
ಯುದ್ಧಶ್ರದ್ಧಾಂ ಸ ತೇಽದ್ಯಾಹಂ ವಿನೇಷ್ಯಾಮಿ ಮಹಾಹವೇ ॥೧೪॥

ನಿನ್ನಲ್ಲಿ ಏನು ಬಲವಿದೆಯೋ ಏನು ಪರಾಕ್ರಮವಿದೆಯೋ ಪಾಂಡವರಲ್ಲಿ ನಿನಗೇನು ಗಾಢವಾದ ದ್ವೇಷವಿದೆಯೋ ಅದೆಲ್ಲವನ್ನು ಈಗ ನೀನು ತೋರು. ನಿನ್ನ ಮಹಾಪೌರುಷವನ್ನು ಉಪಯೋಗಿಸಿಕೊಳ್ಳು.

ಏವಮುಕ್ತ್ವಾ ಮಹಾರಾಜ ಕರ್ಣಂ ಪಾಂಡುಸುತಸ್ತದಾ ।
ಸುವರ್ಣಪುಂಖೈರ್ದಶಭಿರ್ವಿವ್ಯಾಧಾಯಸ್ಮಯೈಃ ಶರೈಃ ॥೧೫॥

ಮಹಾರಾಜ, ಯುಧಿಷ್ಠಿರನು ಹೀಗೆ ಹೇಳಿ ಬಂಗಾರದ ಪುಕ್ಕಉಳ್ಳ ಕಬ್ಬಿಣದ ಹತ್ತು ಬಾಣಗಳಿಂದ ಕರ್ಣನನ್ನು ಹೊಡೆದ.

ತಂ ಸೂತಪುತ್ರೋ ನವಭಿಃ ಪ್ರತ್ಯವಿಧ್ಯದರಿಂದಮಃ ।
ವತ್ಸದಂತೈರ್ಮಹೇಷ್ವಾಸಃ ಪ್ರಹಸನ್ನಿವ ಭಾರತ ॥೧೬॥

ರಾಜನೆ, ಶತ್ರುನಾಶಕನಾದ ಮಹಾಬಿಲ್ಲಾರ ಕರ್ಣನು ನಗುತ್ತ ಒಂಬತ್ತು ವತ್ಸದಂತ ಎಂಬ ಬಾಣಗಳಿಂದ ಯುಧಿಷ್ಠಿರನಿಗೆ ಪ್ರತಿಯಾಗಿ ಹೊಡೆದ.

ಸೋಽವಜ್ಞಾಯ ತು ನಿರ್ವಿದ್ಧಃ ಸೂತಪುತ್ರೇಣ ಮಾರಿಷ ।
ಪ್ರಜಜ್ವಾಲ ತತಃ ಕ್ರೋಧಾದ್ಧವಿಷೇವ ಹುತಾಶನಃ ॥೧೭॥

ರಾಜನೆ, ಯುಧಿಷ್ಠಿರನು ಚೆನ್ನಾಗಿ ಹೊಡೆಸಿಕೊಂಡರೂ ಅದನ್ನು ನಿರ್ಲಕ್ಷಿಸಿ ಹವಿಸ್ಸಿನಿಂದ ಯಾಗಾಗ್ನಿ ಜ್ವಲಿಸುವಂತೆ ಕೋಪದಿಂದ ಉರಿದ.

ತತೋ ವಿಸ್ಫಾರ್ಯ ಸುಮಹಚ್ಚಾಪಂ ಹೇಮಪರಿಷ್ಕೃತಮ್ ।
ಸಮಾಧತ್ತ ಶಿತಂ ಬಾಣಂ ಗಿರೀಣಾಮಪಿ ದಾರಣಮ್ ॥೧೮॥

ಬಂಗಾರದಿಂದ ಅಲಂಕೃತವಾದ ದೊಡ್ಡಬಿಲ್ಲನ್ನು ಸೆಳೆದು ಬೆಟ್ಟಗಳನ್ನೂ ಸೀಳಬಲ್ಲ ತೀಕ್ಷ್ಣವಾದ ಬಾಣವನ್ನು ಹೂಡಿದ, ಯುಧಿಷ್ಠಿರ.

ತತಃ ಪೂರ್ಣಾಯತಂ ತೀಕ್ಷ್ಣಂ ಯಮದಂಡನಿಭಂ ಶರಮ್ ।
ಮುಮೋಚ ತ್ವರಿತೋ ರಾಜಾ ಸೂತಪುತ್ರಜಿಘಾಂಸಯಾ ॥೧೯॥

ರಾಜಾ ಯುಧಿಷ್ಠಿರನು ಕರ್ಣನನ್ನು ಹಿಂಸಿಸುವ ಇಚ್ಛೆಯಿಂದ ಬೇಗನೆ ಯಮದಂಡದಂಥ ತೀಕ್ಷ್ಣವಾದ ಆ ಬಾಣವನ್ನು ಪೂರ್ಣವಾಗಿ ಸೆಳೆದು ಕರ್ಣನ ಮೇಲೆ ಎಸೆದ.

ಸ ತು ವೇಗವತಾ ಮುಕ್ತೋ ಬಾಣೋ ವಜ್ರಾಶನಿಸ್ವನಃ ।
ವಿವೇಶ ಸಹಸಾ ಕರ್ಣಂ ಸವ್ಯೇ ಪಾರ್ಶ್ವೇ ಮಹಾರಥಮ್ ॥೨೦॥

ವೇಗವುಳ್ಳ ಯುಧಿಷ್ಠಿರನು ಎಸೆದ ವಜ್ರಾಯುಧಸಮಾನವಾದ ಆ ಬಾಣವು ಒಡನೆ ಮಹಾರಥನಾದ ಕರ್ಣನ ಎಡಪಾರ್ಶ್ವದಲ್ಲಿ ನೆಟ್ಟಿತು.

ಸ ತು ತೇನ ಪ್ರಹಾರೇಣ ಪೀಡಿತಃ ಪ್ರಮುಮೋಹ ವೈ ।
ಸ್ರಸ್ತಗಾತ್ರೋ ಮಹಾಬಾಹುರ್ಧನುರುತ್ಸೃಜ್ಯ ತತ್‌ಕ್ಷಣಾತ್ ॥೨೧॥

ಮಹಾಬಾಹುವಾದ ಕರ್ಣನು ತಕ್ಷಣ ಆ ಆಘಾತದಿಂದ ಪೀಡಿತನಾಗಿ ಮೈಯೆಲ್ಲ ಜರ್ಝರಿತನಾಗಿ ಬಿಲ್ಲನ್ನು ಕೆಳಗೆ ಬಿಟ್ಟು ಮೈಮರೆತ

ಗತಾಸುರಿವ ನಿಶ್ಚೇತಾಃ ಶಲ್ಯಸ್ಯಾಭಿಮುಖೋಽಪತತ್ ।
ಫಲ್ಗುನಸ್ಯಾದಧತ್ ಕೀರ್ತಿಂ ಕರ್ಣೇ ನಾಸ್ತ್ರಮಮುಂಚತ ॥೨೨॥
ರಾಜಾಪಿ ಭೂಯೋ ನಾಜಘ್ನೇ ಕರ್ಣಂ ಪಾರ್ಥಹಿತೇಪ್ಸಯಾ ॥೨೩॥

ಅಸುನೀಗಿದವನಂತೆ ಪ್ರಜ್ಞೆ ಕಳೆದುಕೊಂಡು ಕರ್ಣನು ಶಲ್ಯನ ಮುಂದೆ ಬಿದ್ದುಬಿಟ್ಟ. ಸಾಯಲಿಲ್ಲ. ಏಕೆಂದರೆ ಯುಧಿಷ್ಠಿರ ಆಗ ಅಸ್ತ್ರಪ್ರಯೋಗ ಮಾಡಿರಲಿಲ್ಲ, ವಧಿಸಿರಲಿಲ್ಲ. ಯುಧಿಷ್ಠಿರನಿಗೆ ಅವನನ್ನು ಕೊಲ್ಲುವ ಇಚ್ಛೆ ಇರಲಿಲ್ಲ. ಇದು ಅರ್ಜುನನಿಗೆ ಹಿತಕರವಾದ ಕರ್ಣವಧಪ್ರತಿಜ್ಞಾಪೂರ್ತಿಯ ಸಿದ್ಧಿಗಾಗಿ.

ಪ್ರತಿಜ್ಞಾಪೂರ್ತಿ ಮಾಡಿದನೆಂಬ ಕೀರ್ತಿಗೆ ಅರ್ಜುನನನ್ನು ಭಾಗಿಯಾಗಿ ಮಾಡುವ ಉದ್ದೇಶವಿದ್ದಿದ್ದರಿಂದ, ಕರ್ಣನ ಮೇಲೆ ಹೆಚ್ಚು ಶಕ್ತಿಯ ಅಸ್ತ್ರವನ್ನು ಯುಧಿಷ್ಠಿರ ಪ್ರಯೋಗಿಸಿರಲಿಲ್ಲ ಎಂದರ್ಥ. ಅದರಿಂದ 'ಮೂರ್ಛಿತನಾಗಿ ಬಿದ್ದವನ ಮೇಲೆ ತಿರುಗಿ ಬಾಣ ಎಸೆಯುವುದು ಅನುಚಿತವಾಗಿರುವಾಗ 'ತಿರುಗಿ ಬಾಣ ಎಸೆಯಲಿಲ್ಲ' ಎಂದು ಯುಧಿಷ್ಠಿರನನ್ನು ಪ್ರಶಂಸೆ ಮಾಡಲಾಗದೆ'ಂಬ ಆಕ್ಷೇಪಕ್ಕೆ ಇಲ್ಲಿ ಎಡೆ ಇಲ್ಲ.

ತತೋ ಹಾಹಾಕೃತಂ ಸರ್ವಂ ಧಾರ್ತರಾಷ್ಟ್ರಬಲಂ ಮಹತ್ ।
ವಿವರ್ಣಮುಖಭೂಯಿಷ್ಠಂ ಕರ್ಣಂ ದೃಷ್ಟ್ವಾ ತಥಾಗತಮ್ ॥೨೪॥

ಆಗ ಕೌರವಸೈನ್ಯವೆಲ್ಲವೂ ಮೂರ್ಛಿತನಾದ ಕರ್ಣನ ಮುಖ ಬಹಳ ವಿವರ್ಣವಾದುದನ್ನು ಕಂಡು ಬಹಳ ಹಾಹಾಕಾರ ಮಾಡಿತು.

ಸಿಂಹನಾದಶ್ಚ ಸಂಜಜ್ಞೇ ಕ್ಷ್ವೇಡಾಃ ಕಿಲಕಿಲಾಸ್ತಥಾ ।
ಪಾಂಡವಾನಾಂ ಮಹಾರಾಜ ದೃಷ್ಟ್ವಾ ರಾಜ್ಞಃ ಪರಾಕ್ರಮಮ್ ॥೨೫॥

ಮಹಾರಾಜ, ಪಾಂಡವಸೈನ್ಯದಲ್ಲಿ ರಾಜಾ ಯುಧಿಷ್ಠಿರನ ಪರಾಕ್ರಮವನ್ನು ಕಂಡು ಸಿಂಹನಾದ, ಕುಣಿತ, ಕಿಲಕಿಲ ನಗೆಗಳುಂಟಾದುವು.

ಪ್ರತಿಲಭ್ಯ ತು ರಾಧೇಯಃ ಸಂಜ್ಞಾಂ ನಾತಿಚಿರಾದಿವ ।
ದಧ್ಯೌ ರಾಜವಿನಾಶಾಯ ಮನಃ ಕ್ರೂರಪರಾಕ್ರಮಃ ॥೨೬॥

ಕ್ರೂರ ಪರಾಕ್ರಮಉಳ್ಳ ಕರ್ಣನು ಬೇಗನೆ ಎಚ್ಚೆತ್ತು ರಾಜಾಯುಧಿಷ್ಠಿರನ ವಿನಾಶಕ್ಕೆ ಸಂಕಲ್ಪಿಸಿದ.

ಸ ಹೇಮವಿಕೃತಂ ಚಾಪಂ ವಿಸ್ಫಾರ್ಯ ವಿಜಯಂ ಮಹತ್ ।
ಅವಾಕಿರದಮೇಯಾತ್ಮಾ ಪಾಂಡವಂ ನಿಶಿತೈಃ ಶರೈಃ ॥೨೭॥

ಬಂಗಾರದಿಂದಾದ ವಿಜಯ ಎಂಬ ಮಹತ್ತಾದ ಬಿಲ್ಲನ್ನು ಸೆಳೆದು ಅಮೇಯಾತ್ಮ ಕರ್ಣ ತೀಕ್ಷ್ಣವಾದ ಬಾಣಗಳಿಂದ ಯುಧಿಷ್ಠಿರನ ಮೇಲೆ ಮಳೆಗರೆದ.

ತತಃ ಕ್ಷುರಾಭ್ಯಾಂ ಪಾಂಚಾಲ್ಯೌ ಚಕ್ರರಕ್ಷೌ ಮಹಾತ್ಮನಃ ।
ಜಘಾನ ಚಂದ್ರದೇವಂ ಚ ದಂಡಧಾರಂ ಚ ಸಂಯುಗೇ ॥೨೮॥

ತಾವುಭೌ ಧರ್ಮರಾಜಸ್ಯ ಪ್ರವೀರೌ ಪರಿಪಾರ್ಶ್ವತಃ ।
ರಥಾಭ್ಯಾಶೇ ಚಕಾಶೇತೇ ಚಂದ್ರಸ್ಯೇವ ಪುನರ್ವಸೂ ॥೨೯॥

ಮಹಾತ್ಮ ಯುಧಿಷ್ಠಿರನ ಚಕ್ರರಕ್ಷಕರಾದ ಚಂದ್ರದೇವ, ದಂಡಧಾರರೆಂಬ ಪಾಂಚಾಲಯೋಧರನ್ನು ಯುದ್ಧದಲ್ಲಿ ಕರ್ಣನು ವಧಿಸಿದ. ಅವರಿಬ್ಬರೂ ಮಹಾವೀರರು, ಧರ್ಮರಾಜನ ರಥದ ಸಮೀಪದಲ್ಲಿ ಚಂದ್ರನಿಗೆ ಎರಡು ಪುನರ್ವಸು ನಕ್ಷತ್ರಗಳಂತೆ ಎರಡು ಪಾರ್ಶ್ವಗಳಲ್ಲಿ ಶೋಭಿಸುತ್ತಿದ್ದರು.

ಯುಧಿಷ್ಠಿರಃ ಪುನಃ ಕರ್ಣಮವಿಧ್ಯತ್ ತ್ರಿಂಶತಾ ಶರೈಃ ।
ಸುಷೇಣಂ ಸತ್ಯಸೇನಂ ಚ ತ್ರಿಭಿಸ್ತ್ರಿಭಿರತಾಡಯತ್ ॥೩೦॥

ಶಲ್ಯಂ ನವತ್ಯಾ ವಿವ್ಯಾಧ ತ್ರಿಸಪ್ತತ್ಯಾ ಚ ಸೂತಜಮ್ ।
ತಾಂಶ್ಚಾಸ್ಯ ಗೋಪ್ತೄನ್ ವಿವ್ಯಾಧ ತ್ರಿಭಿಸ್ತ್ರಿಭಿರಜಿಹ್ಮಗೈಃ ॥೩೧॥

ಯುಧಿಷ್ಠಿರನು ಕರ್ಣನನ್ನು ಪುನಃ ಮೂವತ್ತು ಬಾಣಗಳಿಂದ ಹೊಡೆದನು. ಸುಷೇಣ ಸತ್ಯಸೇನರನ್ನೂ ಮೂರುಮೂರು ಬಾಣಗಳಿಂದ ಹೊಡೆದನು. ಶಲ್ಯನನ್ನು ತೊಂಬತ್ತು ಬಾಣಗಳಿಂದ ಕರ್ಣನನ್ನು ಎಪ್ಪತ್ತಮೂರು ಬಾಣಗಳಿಂದ, ಅವನ ರಕ್ಷಕರನ್ನೂ ಕೂಡ ಮೂರು ಮೂರು ಸರಳವಾಗಿ ಹಾರುವ ಬಾಣಗಳಿಂದ ಹೊಡೆದನು.

ತತಃ ಪ್ರಹಸ್ಯಾಧಿರಥಿರ್ವಿಧುನ್ವಾನಃ ಸ ಕಾರ್ಮುಕಮ್ ।
ಛಿತ್ತ್ವಾ ಭಲ್ಲೇನ ರಾಜಾನಂ ವಿದ್ವಾ ಷಷ್ಟ್ಯಾನದನ್ ಮುದಾ ॥೩೨॥

ಆಗ ಕರ್ಣನು ನಕ್ಕು ಬಿಲ್ಲನ್ನು ಆಡಿಸುತ್ತ ಯುಧಿಷ್ಠಿರನ ಬಿಲ್ಲನ್ನು ಕತ್ತರಿಸಿ ಅವನನ್ನೂ ಐರವತ್ತು ಬಾಣಗಳಿಂದ ಹೊಡೆದ.

ತತಃ ಪ್ರವೀರಾಃ ಪಾಂಡೂನಾಮಭ್ಯಧಾವನ್ಯುಧಿಷ್ಠಿರಮ್ ।
ಸೂತಪುತ್ರಾತ್ ಪರೀಪ್ಸಂತಃ ಕರ್ಣಮಭ್ಯರ್ದಯನ್ ಶರೈಃ ॥೩೩॥

ಆಗ ಪಾಂಡವವೀರರು ಯುಧಿಷ್ಠಿರನನ್ನು ಕರ್ಣನಿಂದ ರಕ್ಷಿಸುವುದಕ್ಕೆ ಧಾವಿಸಿದರು. ಕರ್ಣನನ್ನು ಬಾಣಗಳಿಂದ ಹೊಡೆದರು.

ಸಾತ್ಯಕಿಶ್ಚೇಕಿತಾನಶ್ಚ ಯುಯುತ್ಸುಃ ಪಾಂಡ್ಯ ಏವ ಚ ।
ಧೃಷ್ಟದ್ಯುಮ್ನಃ ಶಿಖಂಡೀ ಚ ದ್ರೌಪದೇಯಾಃ ಪ್ರಭದ್ರಕಾಃ ॥೩೪॥

ಯಮೌ ಚ ಭೀಮಸೇನಶ್ಚ ಶಿಶುಪಾಲಸ್ಯ ಚಾತ್ಮಜಃ ।
ಕಾರೂಷಾ ಮತ್ಸ್ಯಶೂರಾಶ್ಚ ಕೇಕಯಾಃ ಕಾಶಿಕೋಸಲಾಃ ॥೩೫॥

ಏತೇ ಚ ತ್ವರಿತಾ ವೀರಾ ವಸುಷೇಣಮತಾಡಯನ್ ॥೩೬॥

ಸಾತ್ಯಕಿ ಚೇಕಿತಾನ ಯುಯುತ್ಸು ಪಾಂಡ್ಯ ಧೃಷ್ಟದ್ಯುಮ್ನ ಶಿಖಂಡಿ ದ್ರೌಪದೀ ಪುತ್ರರು ಪ್ರಭದ್ರಕರು ನಕುಲ–ಸಹದೇವರು ಭೀಮಸೇನ ಶಿಶುಪಾಲಪುತ್ರ, ಕಾರೂಷರು ಮತ್ಸ್ಯವೀರರು ಕೇಕಯರು ಕಾಶಿ–ಕೋಸಲರು ಇವರೆಲ್ಲರೂ ಬೇಗನೆ ಬಾಣಗಳಿಂದ ಕರ್ಣನನ್ನು ಹೊಡೆದರು.

ಜನಮೇಜಯಶ್ಚ ಪಾಂಚಾಲ್ಯಃ ಕರ್ಣಂ ವಿವ್ಯಾಧ ಸಾಯಕೈಃ ।
ವರಾಹಕರ್ಣೈರ್ನಾರಾಚೈರ್ನಾಲೀಕೈರ್ನಿಶಿತೈಃ ಶರೈಃ ॥೩೭॥
ವತ್ಸದಂತೈರ್ವಿಪಾಠೈಶ್ಚ ಕ್ಷುರಪ್ರೈಶ್ಚಟಕಾಮುಖೈಃ ॥೩೮॥

ಪಾಂಚಾಲ್ಯವೀರನಾದ ಜನಮೇಜಯನು ವರಾಹಕರ್ಣ ನಾರಾಚ ನಾಲೀಕ ವತ್ಸದಂತ ವಿಪಾಠ ಕ್ಷುರಪ್ರ ಚಟಕಾಮುಖ ಮುಂತಾದ ತೀಕ್ಷ್ಣಬಾಣಗಳಿಂದ ಕರ್ಣನನ್ನು ಹೊಡೆದನು.

ನಾನಾಪ್ರಹರಣೈಶ್ಚೋಗ್ರೈ ರಥಹಸ್ತ್ಯಶ್ವಸಾದಿನಃ ।
ಸರ್ವತೋಽಭ್ಯದ್ರವನ್ ಕರ್ಣಂ ಪರಿವಾರ್ಯ ಜಿಘಾಂಸಯಾ ॥೩೯॥

ರಥ ಗಜ ಅಶ್ವ ಪದಾತಿಗಳೂ ಉಗ್ರವಾದ ನಾನಾ ಆಯುಧಗಳಿಂದ ಕರ್ಣನನ್ನು ಕೊಲ್ಲುವ ಇಚ್ಛೆಯಿಂದ ಸುತ್ತುವರಿದು ಆಕ್ರಮಿಸಿದರು.

ಸ ಪಾಂಡವಾನಾಂ ಪ್ರವರೈಃ ಸರ್ವತಃ ಸಮಭಿದ್ರುತಃ ।
ಉದ್ಯೈರಯದ್ ಬ್ರಾಹ್ಮಮಸ್ತ್ರಂ ಶರೈರಾಪೂರಯನ್ ದಿಶಃ ॥೪೦॥

ಎಲ್ಲ ಕಡೆಗಳಿಂದ ಪಾಂಡವವೀರರು ಕರ್ಣನನ್ನು ಮುತ್ತಿದಾಗ ಕರ್ಣನು ದಿಕ್ಕುಗಳನ್ನು ಬಾಣಗಳಿಂದ ತುಂಬುವುದಕ್ಕಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ.

ಅಪರಾಹ್ಣೇऽಪರಾಹ್ಣಸ್ಯ ಸೂತಪುತ್ರಸ್ಯ ಮಾರಿಷ ।
ಛಿನ್ನಮಂಜಲಿಕೇನಾಜೌ ಸೋತ್ಸೇಧಮಪತಚ್ಛಿರಃ ॥

ಎಂದು ಮುಂದೆ ಹೇಳುವಂತೆ ಕರ್ಣಸೇನಾಧಿಪತ್ಯದ ಎರಡನೆ ದಿನ ತತ್ರಾಪಿ, ಪ್ರಾತಃ, ಸಂಗವ, ಮಧ್ಯಾಹ್ನ, ಅಪರಾಹ್ಣ, ಸಾಯಾಹ್ನ ಎಂದು ಹಗಲಿನ ಐದು ಭಾಗಗಳಲ್ಲಿ ನಾಲ್ಕನೆಯದಾದ ಅಪರಾಹ್ಣವು ಕರ್ಣನಿಗೆ ಮೃತ್ಯುಕಾಲ.

ಹಿಂದೆ (42.13) 'ಅನ್ಯತ್ರ ತಸ್ಮಾತ್ ತವ ಮೃತ್ಯುಕಾಲಾತ್' 'ಮರಣ ಕಾಲದಲ್ಲಿ ಹೊರತು ಬೇರೆಕಾಲದಲ್ಲಿ ಬ್ರಹ್ಮಾಸ್ತ್ರವು ನಿನಗೆ ಹೊಳೆಯುವುದಿಲ್ಲ' ಎಂದು ಹೇಳಿದಂತೆ ಗುರು ಪರಶುರಾಮ ಶಾಪ ಕೊಟ್ಟಿರುವುದರಿಂದ, ಇದೀಗ ಕರ್ಣನಿಗೆ ಮರಣಕಾಲವಾದ್ದರಿಂದ, ಬ್ರಹ್ಮಾಸ್ತ್ರ ಹೊಳೆಯಿತೆಂದು ತಿಳಿಯಬೇಕು. ಮತ್ತು ಇದು ಪ್ರಸಿದ್ಧವಾದ ಬ್ರಹ್ಮಶಿರೋಸ್ತ್ರರೂಪವಾದ ಬ್ರಹ್ಮಾಸ್ತ್ರವಲ್ಲ. ಬ್ರಹ್ಮಶಿರೋಸ್ತ್ರ ಕರ್ಣನಿಗೆ ಉಪದೇಶವಿಲ್ಲ ಎಂದೂ ತಿಳಿಯಬೇಕು.

ತತಃ ಶರಮಹಾಜ್ವಾಲೋ ವೀರ್ಯೋಷ್ಮಾ ಕರ್ಣಪಾವಕಃ ।
ನಿರ್ದಹನ್ ಪಾಂಡವವನಂ ಚಾರು ಪರ್ಯಚರದ್ ರಣೇ ॥೪೧॥

ಆಗ ಬಾಣಸಮೂಹಮಯವಾದ ಆ ಬ್ರಹ್ಮಾಸ್ತ್ರದಿಂದ ಕರ್ಣನೆಂಬ ಕಾಳ್ಗಿಚ್ಚು ಬಾಣಗಳೆಂಬ ಜ್ವಾಲೆಗಳಿಂದ ಪರಾಕ್ರಮವೆಂಬ ತಾಪದಿಂದ ಪಾಂಡವಸೈನ್ಯವೆಂಬ ಕಾಡನ್ನು ಚೆನ್ನಾಗಿ ಸುಡುತ್ತ ರಣದಲ್ಲಿ ಸಂಚರಿಸಿತು.

ಸ ಸಂವಾರ್ಯ ಮಹಾಸ್ತ್ರಾಣಿ ಮಹೇಷ್ವಾಸೋ ಮಹಾತ್ಮನಾಮ್ ।
ಪ್ರಹಸ್ಯ ಪುರುಷೇಂದ್ರಸ್ಯ ಶರೈಶ್ಚಿಚ್ಛೇದ ಕಾರ್ಮುಕಮ್ ॥೪೨॥

ಮಹಾಬಿಲ್ಲಾರ ಕರ್ಣ ಮಹಾತ್ಮರಾದ ಪಾಂಡವವೀರರ ಮಹಾ ಅಸ್ತ್ರಗಳನ್ನು ತಡೆದು ಯುಧಿಷ್ಠಿರನ ಬಿಲ್ಲನ್ನು ಬಾಣಗಳಿಂದ ಕತ್ತರಿಸಿದ.

ತತಃ ಸಂಧಾಯ ನವತಿಂ ನಿಮೇಷಾನ್ನತಪರ್ವಣಾಮ್ ।
ಬಿಭೇದ ಕವಚಂ ರಾಜ್ಞೋ ರಣೇ ಕರ್ಣಃ ಶಿತೈಃ ಶರೈಃ ॥೪೩॥

ಡೊಂಕುಗಿಣ್ಣಿನ ತೊಂಬತ್ತು ಬಾಣಗಳನ್ನು ಹೂಡಿ ತೀಕ್ಷ್ಣವಾದ ಆ ಬಾಣಗಳಿಂದ ರಣದಲ್ಲಿ ಕರ್ಣನು ಯುಧಿಷ್ಠಿರನ ಕವಚವನ್ನು ಸೀಳಿದ.

ತದ್ವರ್ಮ ಹೇಮವಿಕೃತಂ ರತ್ನಚಿತ್ರಂ ಬಭೌ ಪತತ್ ।
ಸವಿದ್ಯುದಭ್ರಂ ಸವಿತುಃ ಶ್ಲಿಷ್ಟಂ ವಾತಹತಂ ಯಥಾ ॥೪೪॥

ಸ್ವರ್ಣಮಯವಾದ ಯುಧಿಷ್ಠಿರನ ಕವಚವು ಬೀಳುವಾಗ ಸೂರ್ಯನನ್ನು ಆವರಿಸಿದ್ದ ಮಿಂಚಿನಿಂದ ಕೂಡಿದ ಮೋಡವು ಚಂಡಮಾರುತದ ಆಘಾತದಿಂದ ಬೀಳುವಂತೆ ಶೋಭಿಸಿತು.

ತದಂಗಂ ಪುರುಷೇಂದ್ರಸ್ಯ ಭ್ರಷ್ಟವರ್ಮ ವ್ಯರೋಚತ ।
ರತ್ನೈರಲಂಕೃತಂ ದಿವ್ಯೈರ್ವ್ಯಭ್ರಂ ನಿಶಿ ಯಥಾಂಬರಮ್ ॥೪೫॥

ದಿವ್ಯರತ್ನಾಲಂಕೃತವಾದ ಯುಧಿಷ್ಠಿರನ ಶರೀರವು, ಕವಚವು ಕಳಚಿಬಿದ್ದಾಗ, ಮೋಡವಿಲ್ಲದ ರಾತ್ರಿಯ ಆಕಾಶದಂತೆ ಶೋಭಿಸಿತು.

ಛಿನ್ನವರ್ಮಾ ಶರೈಃ ಪಾರ್ಥೋ ರುಧಿರೇಣ ಸಮುಕ್ಷಿತಃ ।
ಕ್ರುದ್ಧಃ ಸರ್ವಾಯಸೀಂ ಶಕ್ತಿಂ ಚಿಕ್ಷೇಪಾಧಿರಥಿಂ ಪ್ರತಿ ॥೪೬॥

ಬಾಣಗಳಿಂದ ಕವಚ ಸೀಳಿ ಬಿದ್ದಾಗ ಯುಧಿಷ್ಠಿರ ನೆತ್ತರಿಂದ ತೊಯ್ದು ಕ್ರುದ್ಧನಾಗಿ ಕರ್ಣನ ಮೇಲೆ ಶಕ್ತ್ಯಾಯುಧವನ್ನು ಎಸೆದ.

ತಾಂ ಜ್ವಲಂತೀಮಿವಾಕಾಶೇ ಶರೈಶ್ಚಿಚ್ಛೇದ ಸಪ್ತಭಿಃ ।
ಸಾ ಛಿನ್ನಾ ಭೂಮಿಮಪತನ್ಮಹೇಷ್ವಾಸಸ್ಯ ಸಾಯಕೈಃ ॥೪೭॥

ಆಕಾಶದಲ್ಲಿ ಹೊಳೆಯುತ್ತ ಬರುತ್ತಿದ್ದ ಆ ಶಕ್ತ್ಯಾಯುಧವನ್ನು ಕರ್ಣನು ಏಳು ಬಾಣಗಳಿಂದ ಕತ್ತರಿಸಿದ. ಮಹಾಬಿಲ್ಲಾರನ ಬಾಣಗಳಿಂದ ಅದು ಮುರಿದು ನೆಲದಲ್ಲಿ ಬಿದ್ದಿತು.

ತತೋ ಬಾಹ್ವೋರ್ಲಲಾಟೇ ಚ ಹೃದಿ ಚೈವ ಯುಧಿಷ್ಠಿರಃ ।
ಚತುರ್ಭಿಸ್ತೋಮರೈಃ ಕರ್ಣಂ ತಾಡಯಿತ್ವಾನದನ್ಮುದಾ ॥೪೮॥

ಆಗ ಯುಧಿಷ್ಠಿರ ಕರ್ಣನನ್ನು ನಾಲ್ಕು ತೋಮರಗಳಿಂದ ಎರಡು ತೋಳು ಗಳಲ್ಲಿ ಹಣೆಯಲ್ಲಿ ಎದೆಯಲ್ಲಿ ಹೊಡೆದು ಆನಂದದಿಂದ ಗರ್ಜಿಸಿದ.

ಉದ್ಭಿನ್ನರುಧಿರಃ ಕರ್ಣಃ ಕ್ರುದ್ಧಃ ಸರ್ಪ ಇವ ಶ್ವಸನ್ ।
ಧ್ವಜಂ ಚಿಚ್ಛೇದ ಭಲ್ಲೇನ ತ್ರಿಭಿರ್ವಿವ್ಯಾಧ ತಂ ಶರೈಃ ॥೪೯॥

ಪುಟಿದೆದ್ದ ರಕ್ತದಿಂದ ತೋಯ್ದ ಕರ್ಣನು ಕುಪಿತವಾದ ಸರ್ಪದಂತೆ ಬುಸುಗುಟ್ಟುತ್ತ ಭುಲ್ಲೆಯಿಂದ ಧ್ವಜವನ್ನು ಕತ್ತರಿಸಿದ. ಮೂರು ಬಾಣಗಳಿಂದ ಯುಧಿಷ್ಠಿರನನ್ನು ಹೊಡೆದ.

ಹತ್ವಾ ಸೂತಂ ಚ ಪಾರ್ಥಸ್ಯ ಪೃಷ್ಠಗೋಪಂ ಚ ಸಾಯಕೈಃ ॥೫೦॥
ಇಷುಧೀ ಚಾಸ್ಯ ಚಿಚ್ಛೇದ ರಥಂ ಚ ತಿಲಶೋಽಚ್ಛಿನತ್ ॥೫೧॥

ಯುಧಿಷ್ಠಿರನ ಸಾರಥಿಯನ್ನೂ ಹಿಂಭಾಗದ ರಕ್ಷಕನನ್ನೂ ಬಾಣಗಳಿಂದ ಕೊಂದು ಬತ್ತಳಿಕೆಗಳನ್ನೂ ಕತ್ತರಿಸಿದ, ರಥವನ್ನೂ ಎಳ್ಳುಕಾಳಿನಂತೆ ಚೂರು ಮಾಡಿದ.

ಕಾಲವಾಲಾಸ್ತು ಯೇ ಪಾರ್ಥಂ ದಂತವರ್ಣಾವಹನ್ಹಯಾಃ ।
ತೈರ್ಯುಕ್ತಂ ರಥಮಾಸ್ಥಾಯ ಪ್ರಾಯಾದ್ ರಾಜಾ ಪರಾಙ್ಮುಖಃ ॥೫೨॥

ದಂತದಂತೆ ಬಿಳಿಯಾದ ಕಪ್ಪುಬಾಲದ ಕುದುರೆಗಳು ಪಾರ್ಥನ ರಥವನ್ನು ಎಳೆಯುತ್ತಿದ್ದವು. ಅವುಗಳಂತೇ ಇರುವ ಬಿಳಿ ಮೈ, ಕಪ್ಪು ಬಾಲದ ಕುದುರೆಗಳಿಂದ ಯುಕ್ತವಾದ ರಥವನ್ನೇರಿ ಯುಧಿಷ್ಠಿರ ಯುದ್ಧದಿಂದ ಪರಾಙ್ಮುಖನಾಗಿ ತೆರಳಿದ.

ಇಲ್ಲಿ ಪ್ರಶ್ನೆ ಬರುತ್ತದೆ— ರಥವು ಚೂರ್ಣೀಕೃತವಾದ ನಂತರ 'ಅವೇ ಕುದುರೆಗಳಿಂದ' ಯುಕ್ತವಾಗಿದ್ದ ಬೇರೊಂದು ರಥದಲ್ಲಿ ಕುಳಿತು ಯುಧಿಷ್ಠಿರ ಶಿಬಿರಕ್ಕೆ ಹೊರಟುಹೋದನೆಂದು ಈ ಶ್ಲೋಕ ಹೇಳುತ್ತಿದೆ. ಇದು ಹೇಗೆ ಸಾಧ್ಯ? ಕರ್ಣನು ರಥವನ್ನು ಧ್ವಂಸಮಾಡಿದ ನಂತರ ಕುದುರೆಗಳು ಉಳಿದುಕೊಳ್ಳುವ ಸಾಧ್ಯತೆ ಇಲ್ಲ. ಕುದುರೆಗಳಿಲ್ಲದ ರಥವನ್ನು ತಂದು ನಿಲ್ಲಿಸಿರುವ ಪ್ರಕರಣವು ಇದುವರೆಗೂ ಬಂದಿರುವುದಿಲ್ಲ. ಈ ಪ್ರಶ್ನೆಗೆ ಸಮಾಧಾನ ಹೀಗೆ— 'ರಥವು ಚೂರ್ಣೀಕೃತವಾದ ನಂತರ 'ಅವೇ ಕುದುರೆ'ಗಳಿಂದ ಯುಕ್ತವಾದ ಬೇರೊಂದು

ರಥದಲ್ಲಿ ಯುಧಿಷ್ಠಿರ ಕುಳಿತನು' ಎಂದು ಶ್ಲೋಕವು ಹೇಳುತ್ತಿಲ್ಲ. 'ತೈರ್ಯುಕ್ತಂ' ಎಂದರೆ 'ಅವೇ ಕುದುರೆ'ಗಳಿಂದ ಯುಕ್ತವಾದ, ಇನ್ನೊಂದು ರಥ' ಎಂದು ಅರ್ಥವಲ್ಲ. 'ಅಂಥವೇ ಕುದುರೆಗಳಿಂದ ಯುಕ್ತವಾದ ಬೇರೊಂದು ರಥ' ಎಂದರ್ಥ. 'ಕುದುರೆಗಳಿಲ್ಲದ ರಥವನ್ನು ತಂದು ನಿಲ್ಲಿಸುವ' ಪ್ರಕರಣವೇ ಅಪ್ರಸಕ್ತ. 'ಅಂಥವೇ ಕುದುರೆಗಳಿಂದ ಯುಕ್ತವಾದ ಇನ್ನೊಂದು ರಥ' ಎಂದರೆ ಸಹದೇವನ ರಥ. ಇದು ಮುಂದೆ 'ಅಪಾಯಾಜ್ಜವನೈರಶ್ವೈಃ ಸಹದೇವಸ್ಯ ಮಾರಿಷ'(60.33) ಎಂಬ ಶ್ಲೋಕದಲ್ಲಿ ಸ್ಪಷ್ಟವಿದೆ. ಇದು ಈ ಯುಧಿಷ್ಠಿರ ಪರಾಜಯ ಪ್ರಕರಣದಲ್ಲಿ ಕೊನೆಗೆ ನಡೆಯುವ ಸಂಗತಿ, ಮೊದಲೇ ಭಾರತ ಹೇಳುತ್ತಿದೆ.

ಏವಂ ಪಾರ್ಥೋ ವ್ಯಪಾಯಾತ್ ಸ ನಿಹತಪ್ರಾಷ್ಟಿಸಾರಥಿಃ ।
ಅಶಕ್ನುವನ್ ಪ್ರಮುಖಿತಃ ಸ್ಥಾತುಂ ಕರ್ಣಸ್ಯ ದುರ್ಮನಾಃ ॥೫೩॥

ಹಿಂದೆಯೇ ಯುಧಿಷ್ಠಿರನ ಚಂದ್ರದೇವ, ದಂಡಧಾರರೆಂಬ ಇಬ್ಬರು ಪಾರ್ಶ್ವರಕ್ಷಕರನ್ನು ಕರ್ಣ ಸಂಹರಿಸಿದ್ದ. ಅದರಿಂದ ಕರ್ಣನ ಮುಂದೆ ನಿಲ್ಲಲಾಗದೆ ಖಿನ್ನನಾಗಿ ಯುಧಿಷ್ಠಿರ ರಣರಂಗದಿಂದ ಹೊರಟುಹೋದ.

ತಮಭಿದ್ರುತ್ಯ ರಾಧೇಯಃ ಸ್ಕಂಧಂ ಸಂಸ್ಪೃಶ್ಯ ಪಾಣಿನಾ ।
ಗ್ರಹೀತುಮಿಚ್ಛನ್ ಸ ಬಲಾತ್ ಕುಂತೀವಾಕ್ಯಂ ಚ ಸೋಽಸ್ಮರತ್ ॥೫೪॥

ತಂ ಶಲ್ಯಃ ಪ್ರಾಹ ಮಾ ಕರ್ಣಃ ಗೃಹ್ಣೀಥಾಃ ಪಾರ್ಥಿವೋತ್ತಮಂ ।
ಅಬ್ರವೀತ್ಪ್ರಹಸನ್ ಕರ್ಣ ಕುತ್ಸಯನ್ನಿವ ಪಾಂಡವಮ್ ॥೫೫॥

ಕರ್ಣನು ಯುಧಿಷ್ಠಿರನನ್ನು ಅಪಹಾಸ್ಯ ಮಾಡುತ್ತ ನುಡಿದ. ಧರ್ಮಜನನ್ನು ಹಿಂಬಾಲಿಸಿ ಬಲಾತ್ಕಾರವಾಗಿ ಸೆರೆಹಿಡಿಯಲು ಬಯಸಿದಾಗ ತಾನು ಕುಂತಿಗೆ ಕೊಟ್ಟ ಮಾತನ್ನು ಕರ್ಣ ನೆನೆದ. ಮತ್ತು ಶಲ್ಯನೂ ಹೇಳಿದ, 'ಸೆರೆ ಹಿಡಿಯಬೇಡ. ಸೆರೆಹಿಡಿದೊಡನೆ ಈತ ನಿನ್ನನ್ನು ಕೊಂದು ಭಸ್ಮ ಮಾಡಬಲ್ಲ. ಹಾಗೆ ಮಾಡದಿರಲಿ' ಎಂದು.

ಕಥಂ ನಾಮ ಕುಲೇ ಜಾತಃ ಕ್ಷತ್ರಧರ್ಮೇ ವ್ಯವಸ್ಥಿತಃ ।
ಪ್ರಜಹ್ಯಾತ್ ಸಮರೇ ಶತ್ರೂನ್ ಪ್ರಾಣಾನ್ ರಕ್ಷನ್ ಮಹಾಹವೇ ॥೫೬॥

ಕ್ಷತ್ರಿಯ ಕುಲದಲ್ಲಿ ಹುಟ್ಟಿ ಕ್ಷತ್ರಿಯ ಧರ್ಮದಲ್ಲಿರುವ ನೀನು ಮಹಾಯುದ್ಧದಲ್ಲಿ ಪ್ರಾಣರಕ್ಷಣೆಗಾಗಿ ಶತ್ರುಗಳನ್ನು ಹೇಗೆ ಬಿಟ್ಟುಬಿಡುವೆ?

ನ ಭವಾನ್ ಕ್ಷತ್ರಧರ್ಮೇಷು ಕುಶಲೋಽಸೀತಿ ಮೇ ಮತಿಃ ।
ಬ್ರಾಹ್ಮೇ ಬಲೇ ಭವಾನ್ ಯುಕ್ತಃ ಸ್ವಾಧ್ಯಾಯೇ ಯಜ್ಞಕರ್ಮಣಿ ॥೫೭॥

ಮಾ ಸ್ಮ ಯುಧ್ಯಸ್ವ ಕೌಂತೇಯ ಮಾ ಚ ವೀರಾನ್ ಸಮಾಸದಃ ।
ಮಾ ಚೈನಾನಪ್ರಿಯಂ ಬ್ರೂಹಿ ಮಾ ಚ ವ್ರಜ ಮಹಾರಣಮ್ ॥೫೮॥

ನೀನು ಕ್ಷಾತ್ರಬಲದಿಂದ ಕ್ಷತ್ರಧರ್ಮದ ಅನುಷ್ಠಾನದಲ್ಲಿ ಸಮರ್ಥನಲ್ಲ ಎಂದು ನನಗೆ ತಿಳಿಯಿತು. ಬ್ರಾಹ್ಮಬಲಕ್ಕಾಗಿ ವೇದಾಧ್ಯಯನ ಯಜ್ಞಕರ್ಮಗಳನ್ನು ನಡೆಸುವ ಬ್ರಾಹ್ಮಣಧರ್ಮಕ್ಕೇ ನೀನು ಯೋಗ್ಯ. ಯುಧಿಷ್ಠಿರ! ನೀನು ಯುದ್ಧ ಮಾಡಬೇಡ. ವೀರರೊಂದಿಗೆ ಸೆಣೆಸಬೇಡ. ನನ್ನಂಥ ವೀರರಿಗೆ ಅಪ್ರಿಯವಾಗಿ ನುಡಿಯಲೂ ಬೇಡ. ಮಹಾರಣರಂಗಕ್ಕೆ ಹೋಗಲೇಬೇಡ.

ಇಲ್ಲಿ ಪುನಃ ಪ್ರಶ್ನೆಗಳು ಬರುತ್ತವೆ— 'ಸ್ವಲ್ಪ ಹಿಂದೆ ಈ ಕರ್ಣನೇ ಯುಧಿಷ್ಠಿರನ ಬಾಣಗಳಿಂದ ಮೂರ್ಛಿತನಾಗಿ ಬಿದ್ದಿದ್ದ. ಬಲವಾಗಿ ಪೆಟ್ಟು ತಿಂದ ಅನುಭವಿರುವವನು ಅಷ್ಟು ಕುತ್ಸಿತವಾಗಿ ಮಾತನಾಡಲು ಶಕ್ಯವೆ? ಅದರಲ್ಲಿಯೂ ಕರ್ಣನು ಹಾಗೆ ಮಾತನಾಡುವನೆ? ಅದರಿಂದ ಈ ಪ್ರಕರಣ 'ಪ್ರಕ್ಷಿಪ್ತ' ಈ ಪ್ರಶ್ನೆಗೆ ಸಮಾಧಾನ ಮ.ಭಾ.ತಾ.ನಿರ್ಣಯ (27.35)ದಲ್ಲಿ ಸೂಚಿತವಾಗಿದೆ. ವಾದಿರಾಜರು ಅದನ್ನು ಸ್ಪಷ್ಟಪಡಿಸಿದ್ದಾರೆ— 'ಕರ್ಣನು ಈ ಕಟುನುಡಿಗಳನ್ನು ಹತ್ತಿರದಲ್ಲಿಯೇ ಹೋರಾಡುತ್ತಿದ್ದ ಭೀಮ ದುರ್ಯೋಧನರು ಕೇಳಲಿ ಎಂದೇ ಗಟ್ಟಿಯಾಗಿ ಹೇಳಿದ್ದ. ಆಗ, ತಕ್ಕಡಿಯಲ್ಲಿ ಒಂದು ಪಾರ್ಶ್ವ ಮೇಲೆ ಹೋದರೆ ಇನ್ನೊಂದು ಕೆಳಗೆ ಬರಲೇಬೇಕು. ದುರ್ಯೋಧನನಿಗೆ ಪ್ರಾಣಸಂಕಟ ಮಾಡುತ್ತೇನೆ. ಆಗ ಕರ್ಣ ತಾನಾಗಿಯೇ ಧರ್ಮರಾಜನನ್ನು ಹೆಚ್ಚು ಪೀಡಿಸದೆ ಬಿಟ್ಟುಬಿಡುತ್ತಾನೆ' ಎನ್ನುವ ಅಭಿಪ್ರಾಯದಿಂದ ದುರ್ಯೋಧನನಿಗೆ ಪ್ರಾಣಸಂಕಟ ಉಂಟು ಮಾಡಿದ ಭೀಮ'ಎಂದು. ಇದರಿಂದ ಕರ್ಣ ಯುಧಿಷ್ಠಿರನನ್ನು ಅನ್ಯಾಯವಾಗಿ ಪೀಡಿಸುವುದು, ಹೆಗಲಿಗೆ ಕೈಹಾಕಿ, ಕಟುನುಡಿಗಳಾಡಿ ಅಪಮಾನಿಸುವುದೆಲ್ಲವೂ ದುರ್ಯೋಧನನನ್ನು ಮೆಚ್ಚಿಸುವುದಕ್ಕಾಗಿ. ಅದಕ್ಕಾಗಿ ಅವನಿಗೆ ಕೇಳಿಸುವಂತೆ ಗಟ್ಟಿಯಾಗಿ ನುಡಿದ.

ಕರ್ಣ ಸ್ವತಃ ಇಂಥ ನೀಚಕಾರ್ಯಕ್ಕೆ ಇಳಿಯಲಾರ. ಆದರೆ ದುರ್ಯೋಧನನಿ

ಗಾಗಿ ಎಂಥ ನೀಚಕಾರ್ಯಕ್ಕೂ ಸಿದ್ಧನಿರುತ್ತಾನೆ. ದ್ಯೂತ ಸಭೆಯಲ್ಲಿ ದ್ರೌಪದಿಯ ಮಾನಕಳೆಯಲು ತಾನು ಕೌರವರಿಗೆ ಪ್ರೋತ್ಸಾಹ ಕೊಟ್ಟು, ಕೊಟ್ಟಿದ್ದಕ್ಕೆ ಪಶ್ಚಾತ್ತಾಪ ಪಡುತ್ತಿದ್ದೇನೆ ಎಂದು ಮುಂದೆ ಶ್ರೀಕೃಷ್ಣನ ಬಳಿ ತಾನೇ ಹೇಳಿಕೊಂಡಿದ್ದಾನೆ.

ಇಲ್ಲಿ ಇನ್ನೊಂದು ಪ್ರಶ್ನೆ– ಕರ್ಣನು ಯುಧಿಷ್ಠಿರನನ್ನು ಹಿಂಬಾಲಿಸಿ ಕೈಯಿಂದ ಹೆಗಲು ಮುಟ್ಟಿ ಅಪಹಾಸ್ಯ ಮಾಡುತ್ತಾನೆ. (ಶ್ಲೋ.54) ಆದರೆ ನಡೆದು ಹೋಗುತ್ತಿರುವ ಯುಧಿಷ್ಠಿರನನ್ನು ಕರ್ಣನು ರಥದ ಮೇಲೆ ಹಿಂಬಾಲಿಸಿ ಹೋಗಿ ಮುಟ್ಟಲು ಹೇಗೆ ಸಾಧ್ಯ? ಎಂದು. ಈ ಪ್ರಶ್ನೆಗೆ ಅವಕಾಶವೇ ಇಲ್ಲ. ಕರ್ಣ ರಥದಿಂದ ಇಳಿದು ಯುಧಿಷ್ಠಿರನನ್ನು ಮುಟ್ಟುತ್ತಿದ್ದಾನೆ. ಇದು ಅವನನ್ನು ಜೀವಂತ ಸೆರೆ ಹಿಡಿದು ತನ್ನ ರಥದಲ್ಲಿರಿಸಿಕೊಂಡು ಹೋಗುವುದಕ್ಕಾಗಿ ಹೊರತು ಅಪಹಾಸ್ಯ ಮಾಡುವುದಕ್ಕಾಗಿ ಅಲ್ಲ. ಅಪಹಾಸ್ಯದ ಉದ್ದೇಶವೇ ಇರುತ್ತಿದ್ದರೆ ರಥದಲ್ಲಿದ್ದೇ ಅಪಹಾಸ್ಯ ಮಾಡಬಹುದಿತ್ತು. ಸೆರೆಹಿಡಿಯಲು ಹೆಗಲ ಮೇಲೆ ಕೈಇಟ್ಟಾಗ ಶಲ್ಯ ಎಚ್ಚರಿಸುತ್ತಾನೆ: 'ಯುಧಿಷ್ಠಿರನಲ್ಲಿ ಬ್ರಾಹ್ಮಬಲವಿದೆ. ಅವನು ನಿನ್ನನ್ನು ಸುಟ್ಟುಬೂದಿ ಮಾಡುತ್ತಾನೆ' ಎಂದು.

ಯದ್ಯಪಿ ಕರ್ಣನಿಗೆ ಜೀವದ ಹಂಗು ಇಲ್ಲ. ಸಾಯಲು ಸಿದ್ಧನಾಗಿಯೇ ಬಂದಿದ್ದ. ಇದು ಉದ್ಯೋಗಪರ್ವದಲ್ಲಿ ಕೃಷ್ಣನ ಮುಂದೆ ಕರ್ಣ ಹೇಳುವ ಮಾತುಗಳಲ್ಲಿಯೇ ಸ್ಪಷ್ಟವಿದೆ. 'ರಣಯಜ್ಞದಲ್ಲಿ ಪಶುವಾಗಿ ಸತ್ತು ಸ್ವರ್ಗ ಸೇರುತ್ತೇನೆ' ಎಂದೇ ಕರ್ಣ ಆಗ ಹೇಳಿದ್ದ. ಆದರೆ ರಣಯಜ್ಞದಲ್ಲಿ ಶಸ್ತ್ರದಿಂದ ಸತ್ತರೇ ಸ್ವರ್ಗ ಲಭ್ಯ. ಯುಧಿಷ್ಠಿರನ ಬ್ರಾಹ್ಮಬಲದಿಂದ ಸುಟ್ಟುಹೋದರೆ ಸ್ವರ್ಗ ಸಿಗಲಾರದು. ಅದರಿಂದ ಯುಧಿಷ್ಠಿರನನ್ನು ಸೆರೆಹಿಡಿಯುವ ಯತ್ನವನ್ನು ಕೈಬಿಟ್ಟು ಅಪಹಾಸ್ಯ ಮಾಡುವುದಕ್ಕೆ ತೊಡಗುತ್ತಾನೆ.

ಸೆರೆಹಿಡಿಯುವುದೇ ದುರ್ಯೋಧನನಿಗೆ ಇಷ್ಟವಾಗಿತ್ತು. ಸೆರೆಹಿಡಿದು ಇನ್ನೊಮ್ಮೆ ಜೂಜಿನಲ್ಲಿ ಸೋಲಿಸಿ ಕಾಡಿಗೆ ಅಟ್ಟುವ ಸಂಕಲ್ಪ ಅವನದಾಗಿತ್ತು. ಕರ್ಣ ಯುಧಿಷ್ಠಿರನನ್ನು ಸೆರೆಹಿಡಿಯದೇ ಸುಮ್ಮನೆ ಬಿಡುವುದನ್ನು ದುರ್ಯೋಧನ ಸರ್ವಥಾ ಒಪ್ಪಲಾರ. ಕೋಪಿಸಿಕೊಳ್ಳುತ್ತಾನೆ. ಅದಕ್ಕೆ ಅವನನ್ನು ಸಮಾಧಾನ ಪಡಿಸಲು ಅಪಹಾಸ್ಯ ಮಾಡುತ್ತಾನೆ.

ಮಹಾತ್ಮರಿಗೆ ಅಪಹಾಸ್ಯ ಮರಣಕ್ಕಿಂತ ಹೆಚ್ಚು. ಅದರಿಂದ ಯುಧಿಷ್ಠಿರ ಕರ್ಣನನ್ನು ಆಗಲೇ ದೃಷ್ಟಿಯಿಂದ ಸುಟ್ಟುಬಿಡಬಹುದಿತ್ತು. ಅಥವಾ ಕ್ಷತ್ರಿಯ ರಾಜನಾಗಿದ್ದರಿಂದ ತನ್ನ ಕಡೆಯವರಿಂದ ಆಗಲೆ ಕೊಲ್ಲಿಸಬಹುದಿತ್ತು. ಭೀಮ ತಾನೆ ಅದಕ್ಕೆ ಸಿದ್ಧನಿದ್ದ. ಆದರೂ ಅರ್ಜುನ ಕರ್ಣನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದ್ದರಿಂದ ಅದಕ್ಕಾಗಿ ಯುಧಿಷ್ಠಿರ ರಣರಂಗದಿಂದ ಹೊರಗೆ ಹೊರಟ.

ಆಗ ಇದು ಯುದ್ಧವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಅಭಿಪ್ರಾಯ ವೆಂದು ಬಗೆದು ಪಾಂಡವಸೈನ್ಯ ಯುಧಿಷ್ಠಿರನನ್ನು ಹಿಂಬಾಲಿಸಿತು. 'ಇದು ಪಲಾಯನ' ಎಂದು ದುರ್ಯೋಧನನಿಗೆ ಸಂತೋಷವಾಗಲಿ ಎನ್ನುವ ಉದ್ದೇಶ ದಿಂದ ಕರ್ಣ ಬೆನ್ನಟ್ಟುತ್ತಿದ್ದಾನೆ. ಆಗ ಯುಧಿಷ್ಠಿರ ಬೇಗನೆ ಶ್ರುತಕೀರ್ತಿಯೆಂಬ ದ್ರೌಪದೀಪುತ್ರನ ರಥವೇರಿ ಹಿಂತಿರುಗಿ ಕರ್ಣನನ್ನು, ಅವನ ಸೈನ್ಯವನ್ನು ದಿಟ್ಟಿಸಿ ನೋಡುತ್ತಾನೆ.

ಯತ್ರ ಯತ್ರ ಸ ಧರ್ಮಾತ್ಮಾ ದೃಷ್ಟ್ವಾ ದೃಷ್ಟಿಂ ವ್ಯಸರ್ಜಯತ್
ತತ್ರ ತತ್ರ ವ್ಯಶೀರ್ಯಂತ ತಾವಕಾ ಭರತರ್ಷಭ ॥ (59.27)

ದೃಷ್ಟಿಯಿಂದ ಸುಡಬಹುದಿತ್ತು. ಆದರೆ ಸುಡುವ ಅಭಿಪ್ರಾಯವಿರಲಿಲ್ಲ. ಸುಟ್ಟರೆ ಅವರಿಗೆ ಸ್ವರ್ಗ ಸಿಗದಂತಾಗುತ್ತಿತ್ತು ಎಂದು ಯುಧಿಷ್ಠಿರನಿಗೇ ಆತಂಕ ವಿದೆ. ಆದರೂ ದೃಷ್ಟಿಯ ಪ್ರಭಾವದಿಂದ ಸೈನ್ಯದ ಅದಮ್ಯಶಕ್ತಿ ಬಹುತೇಕ ಉಡುಗಿತಷ್ಟೆ.

ಮುಂದೆ ಭೀಮ ನಕುಲ ಸಹದೇವರು ಕೌರವಸೈನ್ಯವನ್ನು ನಾಶ ಮಾಡಲು ತೊಡಗುತ್ತಾರೆ. ಆಗಲೂ ಕರ್ಣ ಯುಧಿಷ್ಠಿರನನ್ನು ಎರಥನನ್ನಾಗಿ ಮಾಡಿದಾಗ ಯುಧಿಷ್ಠಿರ ಸಹದೇವನ ರಥವೇರಿ ಶಿಬಿರಕ್ಕೆ ಹೋಗುತ್ತಾನೆ.

ಸ್ವಗೃಹಂ ಗಚ್ಛ ಕೌಂತೇಯ ಯತ್ರ ತೌ ಕೇಶವಾರ್ಜುನೌ ।
ನಹಿ ತ್ವಾಂ ಸಮರೇ ರಾಜನ್ ಹನ್ಯಾತ್ ಕರ್ಣಃ ಕಥಂಚನ ॥೫೯॥

ನೀನು ನಿನ್ನ ಮನೆಗೇ ಹೋಗು, ಕೃಷ್ಣಾರ್ಜುನರ ಬಳಿಗಾದರೂ ಹೋಗು. ನಿನ್ನನ್ನು ಕರ್ಣ ರಣದಲ್ಲಿ ಸರ್ವಥಾ ಕೊಲ್ಲುವುದಿಲ್ಲ.

ಏವಮುಕ್ತ್ವಾ ತತಃ ಪಾರ್ಥಂ ವಿಸೃಜ್ಯ ಚ ಮಹಾಬಲಃ ।
ನ್ಯಹನತ್ ಪಾಂಡವೀಂ ಸೇನಾಂ ವಜ್ರಹಸ್ತ ಇವಾಸುರೀಮ್ ॥೬೦॥

ಹೀಗೆ ಹೇಳಿ ಮಹಾಬಲಿ ಕರ್ಣನು ಯುಧಿಷ್ಠಿರನನ್ನು ಸೆರೆಹಿಡಿಯದೆ ಹಾಗೇ ಬಿಟ್ಟು ಇಂದ್ರನು ಅಸುರಸೇನೆಯನ್ನು ಹೊಡೆಯುವಂತೆ, ಪಾಂಡವ ಸೇನೆಯನ್ನು ಹೊಡೆಯಲು ತೊಡಗಿದ.

ಮುಂದೆ 67ನೇ ಶ್ಲೋಕದಲ್ಲಿ 'ಭೀಮಸೇನ ಮುಂತಾದವರು ದುರ್ಯೋಧನಾದಿ ಗಳನ್ನು ಆಕ್ರಮಿಸಿದರು' ಎಂದಿರುವುದರಿಂದ, 'ದುರ್ಯೋಧನನನ್ನು ಭೀಮ ಪೀಡಿಸಿದ. ಅದನ್ನು ತೋರಿಸಿ ಶಲ್ಯ ಕರ್ಣನನ್ನು ಅತ್ತ ಒಯ್ದನೆಂ'ದಿಟ್ಟು ಕೊಳ್ಳಬೇಕು.

ತತಃ ಪ್ರಾಯಾದ್ ದ್ರುತಂ ರಾಜನ್ ವ್ರೀಡನ್ನಿವ ಜನೇಶ್ವರಃ ।
ಅಥ ಪ್ರಯಾಂತಂ ರಾಜಾನಮನ್ವಯುಸ್ತೇ ತದಾಚ್ಯುತಮ್ ॥೬೧॥

ಚೇದಿಪಾಂಡವಪಾಂಚಾಲಾಃ ಸಾತ್ಯಕಿಶ್ಚ ಮಹಾರಥಃ ।
ದ್ರೌಪದೇಯಾಸ್ತಥಾ ಶೂರಾ ಮಾದ್ರೀಪುತ್ರೌ ಚ ಪಾಂಡವೌ ॥೬೨॥

ರಾಜನೆ, ಆಗ ಯುಧಿಷ್ಠಿರ ನಾಚಿದವನಂತೆ ಮುಂದೆ ನಡೆದ. 'ಅಚ್ಯುತ'ನಾದ ಯುಧಿಷ್ಠಿರ ರಣಾಂಗಣವನ್ನು ಬಿಟ್ಟುಹೋಗುವುದನ್ನು ಕಂಡು ಚೇದಿ–ಪಾಂಡವ–ಪಾಂಚಾಲರೂ ಮಹಾರಥನಾದ ಸಾತ್ಯಕಿ, ಶೂರರಾದ ದ್ರೌಪದೀಪುತ್ರರು, ನಕುಲ–ಸಹದೇವರು ಹಿಂಬಾಲಿಸಿದರು.

'ಅಚ್ಯುತ' ಎಂದರೆ ಚ್ಯುತಿ ಇಲ್ಲದವನು ಯುಧಿಷ್ಠಿರ. ಕರ್ಣನು ಮಾಡಿದ ಅಪಹಾಸ ಅಪಹಾಸವಾಗಿರಲಿಲ್ಲ. ಅಪಹಾಸದ ಪ್ರದರ್ಶನ, ಕೇವಲ ದುರ್ಯೋಧನನನ್ನು ಮೆಚ್ಚಿಸುವುದಕ್ಕಾಗಿ ಎಂದು ಯುಧಿಷ್ಠಿರ ತಿಳಿದುದರಿಂದ ಅವನಿಗೆ ಅದರಿಂದೇನೂ ಚ್ಯುತಿ ಇರಲಿಲ್ಲ. 'ವ್ರೀಡನ್ನಿವ' ನಾಚಿದವನಂತೆ ಹೊರತು ನಾಚುವ ಪ್ರಸಂಗವೂ ಇದಾಗಿರಲಿಲ್ಲ. ಕ್ಷಾತ್ರ ಧರ್ಮಕ್ಕೆ ಚ್ಯುತಿಯನ್ನೂ ತಂದುಕೊಳ್ಳಲಿಲ್ಲ.

ತತೋ ಯುಧಿಷ್ಠಿರಾನೀಕಂ ದೃಷ್ಟ್ವಾ ಕರ್ಣಃ ಪರಾಙ್ಮುಖಮ್ ।
ಕುರುಭಿಃ ಸಹಿತೋ ವೀರೈಃ ಪ್ರಹೃಷ್ಟಃ ಪೃಷ್ಠತೋಽನ್ವಗಾತ್ ॥೬೩॥

ಯುಧಿಷ್ಠಿರನ ಸೈನ್ಯವು ಸಮರಕ್ಕೆ ವಿಮುಖವಾಗಿ ಹೋಗುತ್ತಿದ್ದುದನ್ನು ಕಂಡು ಕರ್ಣನು ಪ್ರಹೃಷ್ಟನಾಗಿ ಕುರುಗಳೊಂದಿಗೆ ಪಾಂಡವರನ್ನು ಹಿಂಬಾಲಿಸಿ ನಡೆದ.

ಶಂಖಭೇರೀನಿನಾದೈಶ್ಚ ಕಾರ್ಮುಕಾಣಾಂ ಚ ನಿಸ್ವನೈಃ ।
ಬಭೂವ ಧಾರ್ತರಾಷ್ಟ್ರಾಣಾಂ ಸಿಂಹನಾದರವಸ್ತದಾ ॥೬೪॥

ಕೌರವಸೈನ್ಯದಲ್ಲಿ ಭೇರೀ ಶಂಖ ಮೃದಂಗ ಧನುಸ್ಸುಗಳ ಮಹಾಧ್ವನಿಯು ಉಂಟಾಯಿತು. ಅದರೊಂದಿಗೆ ಸಿಂಹನಾದವೂ ಉಂಟಾಯಿತು.

ಯುಧಿಷ್ಠಿರಸ್ತು ಕೌರವ್ಯ ರಥಮಾರುಹ್ಯ ಸತ್ವರಃ ।
ಶ್ರುತಕೀರ್ತೇರ್ಮಹಾರಾಜ ದೃಷ್ಟವಾನ್ ಕರ್ಣವಿಕ್ರಮಮ್ ॥೬೫॥

ರಾಜನೆ, ಯುಧಿಷ್ಠಿರನು ಬೇಗನೆ ಶ್ರುತಕೀರ್ತಿಯ ರಥವನ್ನೇ ಏರಿ ಕರ್ಣನ ಪರಾಕ್ರಮವನ್ನು ದಿಟ್ಟಿಸಿ ನೋಡಿದ.

ಕಾಲ್ಯಮಾನಂ ಬಲಂ ದೃಷ್ಟ್ವಾ ಧರ್ಮರಾಜೋ ಯುಧಿಷ್ಠಿರಃ ।
ತಾನ್ಯೋಧಾನಬ್ರವೀತ್ ಕ್ರುದ್ಧೋ ನಿಘ್ನತೈತಾನ್ ಕಿಯಾನಸೌ ॥೬೬॥

ಯುಧಿಷ್ಠಿರನು ತನ್ನ ಸೈನ್ಯವನ್ನು ಕರ್ಣನು ಇನ್ನೂ ಪೀಡಿಸುವುದನ್ನು ಕಂಡು ಕ್ರುದ್ಧನಾಗಿ 'ಈ ಸೈನಿಕರನ್ನು ಹೊಡೆಯಿರಿ. ಈ ಕರ್ಣನು ಎಷ್ಟರವನು?' ಎಂದು ತನ್ನ ಯೋಧರಿಗೆ ಆಜ್ಞೆ ಮಾಡಿದ.

ತತೋ ರಾಜ್ಞಾಭ್ಯನುಜ್ಞಾತಾಃ ಪಾಂಡವಾನಾಂ ಮಹಾರಥಾಃ ।
ಭೀಮಸೇನಮುಖಾಃ ಸರ್ವೇ ಪುತ್ರಾಂಸ್ತೇ ಪ್ರತ್ಯುಪಾದ್ರವನ್ ॥೬೭॥

ರಾಜಾಜ್ಞೆ ಪಡೆದ ಪಾಂಡವಮಹಾರಥರು ಭೀಮಸೇನ ಮುಂತಾದವರು ಎಲ್ಲರೂ ನಿನ್ನ ಮಕ್ಕಳನ್ನು ಆಕ್ರಮಿಸಿದರು.

ಅಭವತ್ತುಮುಲಃ ಶಬ್ದೋ ಯೋಧಾನಾಂ ತತ್ರ ಭಾರತ ।
ಹಸ್ತ್ಯಶ್ವರಥಪತ್ತೀನಾಂ ಶಸ್ತ್ರಾಣಾಂ ಚ ತತಸ್ತತಃ ॥೬೮॥

ಆಗ, ರಾಜನೆ, ಗಜ ಅಶ್ವ ರಥ ಪದಾತಿ ಯೋಧರ ಮತ್ತು ಆಯುಧಗಳ ದೊಡ್ಡ ಶಬ್ದ ಅಲ್ಲಲ್ಲಿ ಕೇಳಿಬಂದಿತು.

ಉತ್ತಿಷ್ಠತ ಪ್ರಹರತ ಪ್ರೈತಾಭಿಪತತೇತಿ ಚ ।
ಇತಿ ಬ್ರುವಾಣಾ ಅನ್ಯೋನ್ಯಂ ಜಘ್ನುರ್ಯೋಧಾ ರಣಾಜಿರೇ ॥೬೯॥

'ಎದ್ದೇಳಿ, ಹೊಡೆಯಿರಿ, ಚೆನ್ನಾಗಿ ದಾಳಿ ಮಾಡಿರಿ, ಶತ್ರುಗಳ ಮೇಲೆ ಎರಗಿರಿ' ಹೀಗೆ ಪರಸ್ಪರ ಹೇಳುತ್ತ ರಣಾಂಗಣದಲ್ಲಿ ಪ್ರಹರಿಸಿದರು.

ಅಭ್ರಚ್ಛಾಯೇವ ತತ್ರಾಸೀಚ್ಛರವೃಷ್ಟಿಭಿರಂಬರೇ ।
ಸಮಾವೃತೈರ್ನರವರೈರ್ನಿಘ್ನದ್ಭಿರಿತರೇತರಮ್ ॥೭೦॥

ಯೋಧಶ್ರೇಷ್ಠರು ಪರಸ್ಪರ ಇದಿರಿಸಿ ಪ್ರಹರಿಸುವಾಗ ಬಾಣಗಳ ಮಳೆಗಳಿಂದ ಆಗಸದಲ್ಲಿ ಮೋಡ ಕವಿದಂತಾಯಿತು.

ವಿಪತಾಕಾಧ್ವಜಚ್ಛತ್ರಾ ವ್ಯಶ್ವಸೂತಾಯುಧಾ ರಣೇ ।
ವಿಶೀರ್ಣಾವಯವಾಃ ಪೇತುಃ ಕ್ಷಿತೌ ಕ್ಷೀಣಾ ಹತೇಶ್ವರಾಃ ॥೭೧॥

ಹತರಾದ ರಾಜರು ಪತಾಕೆ ಧ್ವಜ ಛತ್ರರಹಿತರಾಗಿ ಕುದುರೆ ಸಾರಥಿ ಆಯುಧ ಗಳಿಲ್ಲದವರಾಗಿ ಮೈಯೆಲ್ಲ ಗಾಯಗೊಂಡು ಬಲಗುಂದಿ ನೆಲದಲ್ಲಿ ಬಿದ್ದರು.

ಪ್ರವಣಾದಿವ ಶೈಲಾನಾಂ ಶಿಖರಾಣಿ ದ್ವಿಪೋತ್ತಮಾಃ ।
ಸಾರೋಹಾ ನಿಹತಾಃ ಪೇತುರ್ವಜ್ರಭಿನ್ನಾ ಇವಾದ್ರಯಃ ॥೭೨॥

ಪರ್ವತಶಿಖರಗಳು ಇಳಿಜಾರಾದ ಸ್ಥಳದಿಂದ ಜಾರಿ ಕೆಳಗೆ ಬಂದು ಬೀಳುವಂತೆ ದೊಡ್ಡ ಆನೆಗಳು ಗಜಾರೋಹಿಗಳೊಂದಿಗೇ ವಜ್ರದಿಂದ ಸೀಳಿಹೋದ ಬೆಟ್ಟದಂತೆ ಹತವಾಗಿ ಬಿದ್ದುವು.

ಛಿನ್ನಭಿನ್ನವಿಪರ್ಯಸ್ತೈರ್ವರ್ಮಾಲಂಕಾರವಿಗ್ರಹೈಃ ।
ಸಾರೋಹಾಸ್ತುರಗಾಃ ಪೇತುರ್ಹತವೀರಾಃ ಸಹಸ್ರಶಃ ॥೭೩॥

ಛಿನ್ನಭಿನ್ನವಾಗಿ ಆಸ್ತವ್ಯಸ್ತಗೊಂಡ ಕವಚ ಆಭರಣಯುಕ್ತವಾದ ಶರೀರ ಉಳ್ಳವರಾಗಿ ಹತರಾದ ವೀರರ ಅಶ್ವಗಳು ಅಶ್ವಾರೋಹಿಗಳೊಂದಿಗೇ ಸಾವಿರಾರು ಸಂಖ್ಯೆಯಲ್ಲಿ ಬಿದ್ದುವು.

ವಿಪ್ರವಿದ್ಧಾಯುಧಾಂಗಾಶ್ಚ ದ್ವಿರದಾಶ್ವರಥೈರ್ಹತಾಃ ।
ಪ್ರತಿವೀರೈಶ್ಚ ಸಮ್ಮರ್ದೇ ಪತ್ತಿಸಂಘಾಃ ಸಹಸ್ರಶಃ ॥೭೪॥

ಪದಾತಿಸಮೂಹಗಳು ಗಜ ಅಶ್ವ ರಥಗಳಿಂದಲೂ ಪ್ರತಿವೀರರಿಂದಲೂ ಆಯುಧ, ಶರೀರಗಳನ್ನು ನಾಶಪಡಿಸಿಕೊಂಡು ಸಾವಿರಾರು ಸಂಖ್ಯೆಯಲ್ಲಿ ಹತರಾಗಿ ಬಿದ್ದವು.

ವಿಶಾಲಾಯತತಾಮ್ರಾಕ್ಷೈಃ ಪದ್ಮೇಂದುಸದೃಶಾನನೈಃ ।
ಶಿರೋಭಿರ್ಯುದ್ಧಶೌಂಡಾನಾಂ ಸರ್ವತಃ ಸಂವೃತಾ ಮಹೀ ॥೭೫॥

ವಿಶಾಲವಾದ ಉದ್ದವಾದ ಕೆಂಪುಕಣ್ಣುಗಳಿಂದಲೂ ಕಮಲದಂಥ ಚಂದ್ರನಂಥ ಮುಖಗಳಿಂದಲೂ ಕೂಡಿದ ಯುದ್ಧಕುಶಲರಾದ ಯೋಧರ ಶಿರಸ್ಸುಗಳಿಂದ ಯುದ್ಧಭೂಮಿ ಎಲ್ಲೆಡೆ ತುಂಬಿಹೋಯಿತು.

ಯಥಾ ಭುವಿ ತಥಾ ವ್ಯೋಮ್ನಿ ನಿಸ್ವನಂ ಶುಶ್ರುವುರ್ಜನಾಃ ।
ವಿಮಾನೈರಪ್ಸರಃಸಂಘೈರ್ಗೀತವಾದಿತ್ರನಿಸ್ವನೈಃ ॥೭೬॥

ಭೂಮಿಯಲ್ಲಿ ಹೇಗೋ ಹಾಗೇ ಅಂತರಿಕ್ಷದಲ್ಲಿಯೂ ವಿಮಾನಗಳಿಂದ, ಅಪ್ಸರೆಯರ ಸಮೂಹಗಳಿಂದ, ಅವರ ಗೀತವಾದ್ಯಧ್ವನಿಗಳಿಂದ ಉಂಟಾದ ಪ್ರತಿಧ್ವನಿಯನ್ನು ಜನರು ಕೇಳಿದರು.

ಹತಾನ್ ಅಭಿಮುಖಾನ್ ವೀರಾನ್ ವೀರೈಃ ಶತಸಹಸ್ರಶಃ ।
ಆರೋಪ್ಯಾರೋಪ್ಯ ಗಚ್ಛಂತಿ ವಿಮಾನೇಷ್ವಪ್ಸರೋಗಣಾಃ ॥೭೭॥

ಅಪ್ಸರೆಯರ ಸಮೂಹಗಳು, ರಣದಲ್ಲಿ ಇದಿರಿಸಿ ಹೋರಾಡುತ್ತ ವೀರರಿಂದ ಹತರಾದ ವೀರರನ್ನು ನೂರಾರು ಸಾವಿರಾರು ಸಂಖ್ಯೆಯಲ್ಲಿ ವಿಮಾನಗಳಲ್ಲಿ ಮತ್ತೆಮತ್ತೆ ಏರಿಸಿಕೊಂಡು ಮೇಲೆ ಹೋದರು.

ತದ್ ದೃಷ್ಟ್ವಾ ಮಹದಾಶ್ಚರ್ಯಂ ಪ್ರತ್ಯಕ್ಷಂ ಸ್ವರ್ಗಲಿಪ್ಸಯಾ ।
ಪ್ರಹೃಷ್ಟಮನಸಃ ಶೂರಾಃ ಕ್ಷಿಪ್ರಂ ಜಗ್ಮುಃ ಪರಸ್ಪರಮ್ ॥೭೮॥

ಆ ಮಹಾ ಆಶ್ಚರ್ಯವನ್ನು ಪ್ರತ್ಯಕ್ಷ ಕಂಡು ಸ್ವರ್ಗಪಡೆಯುವ ಉತ್ಸುಕತೆಯಿಂದ ಶೂರರು ಪ್ರಹೃಷ್ಟಚಿತ್ತರಾಗಿ ಬೇಗನೆ ಪರಸ್ಪರ ಕಾದಿದರು.

ರಥಿನೋ ರಥಿಭಿಃ ಸಾರ್ಧಂ ಚಿತ್ರಂ ಯುಯುಧುರಾಹವೇ ।
ಪತ್ತಯಃ ಪತ್ತಿಭಿರ್ನಾಗಾ ನಾಗೈಃ ಸಹ ಹಯೈರ್ಹಯಾಃ ॥೭೯॥

ರಥಿಕರು ರಥಿಗಳೊಂದಿಗೆ ಪದಾತಿಗಳು ಪದಾತಿಗಳೊಂದಿಗೆ ಗಜಗಳು ಗಜಗಳೊಂದಿಗೆ ಅಶ್ವಗಳು ಅಶ್ವಗಳೊಂದಿಗೆ ರಣರಂಗದಲ್ಲಿ ಆಶ್ಚರ್ಯಕರವಾಗಿ ಹೋರಾಡಿದರು.

ಏವಂ ಪ್ರವೃತ್ತೇ ಸಂಗ್ರಾಮೇ ಗಜವಾಜಿಜನಕ್ಷಯೇ ।
ಸೈನ್ಯೇ ಚ ರಜಸಾ ವ್ಯಾಪ್ತೇ ಸ್ವೇ ಸ್ವಾನ್ ಜಘ್ನುಃ ಪರೇ ಪರಾನ್ ॥೮೦॥

ಗಜ ಅಶ್ವ ಜನನಾಶಕವಾದ ಸಂಗ್ರಾಮ ಹೀಗೆ ನಡೆದಾಗ ಎದ್ದ ಧೂಳಿನಿಂದ ಸೈನ್ಯವು ವ್ಯಾಪ್ತವಾದ್ದರಿಂದ ತಮ್ಮನ್ನು ತಾವೇ, ಶತ್ರುಗಳನ್ನು ಶತ್ರುಗಳೇ ಹೊಡೆದು ಕೊಂದರು.

ಕಚಾಕಚಿ ಬಭೌ ಯುದ್ಧಂ ದಂತಾದಂತಿ ನಖಾನಖಿ ।
ಮುಷ್ಟಿಯುದ್ಧಂ ನಿಯುದ್ಧಂ ಚ ದೇಹಪಾಪ್ಮವಿನಾಶನಮ್ ॥೮೧॥

ಕೂದಲು-ಕೂದಲುಗಳ, ದಂತ-ದಂತಗಳ, ನಖ-ನಖಗಳ ಯುದ್ಧಗಳೂ, ಮುಷ್ಟಿಯುದ್ಧಗಳೂ ಬಾಹುಯುದ್ಧಗಳೂ ದೇಹನಾಶ-ಪಾಪನಾಶ-ಪ್ರಾಣಗಳ ನಾಶಕವಾಗುವಂತೆ ನಡೆದುವು.

ತಥಾ ವರ್ತತಿ ಸಂಗ್ರಾಮೇ ಗಜವಾಜಿಜನಕ್ಷಯೇ ।
ನರಾಶ್ವಗಜದೇಹೇಭ್ಯಃ ಪ್ರಸೃತಾ ಲೋಹಿತಾಪಗಾ ॥೮೨॥
ಗಜಾಶ್ವನರದೇಹಾನ್ ಸಾ ವ್ಯವಾಹ ಪತಿತಾನ್ ಬಹೂನ್ ॥೮೩॥

ಗಜ ಅಶ್ವ ಜನ ಕ್ಷಯಕಾರಕವಾದ ಸಂಗ್ರಾಮ ಹಾಗೆ ನಡೆಯುವಾಗ ಜನರ ಅಶ್ವ ಗಜಗಳ ದೇಹಗಳಿಂದ ನೆತ್ತರಿನ ಹೊಳೆ ಹರಿದು, ಆಗಲೆ ಪತಿತರಾದ ಗಜ ಅಶ್ವ ನರರ ದೇಹಗಳನ್ನು ಪ್ರವಾಹದಲ್ಲಿ ತೇಲಿಸಿದುವು.

ನರಾಶ್ವಗಜಸಂಬಾಧೇ ನರಾಶ್ವಗಜಸಾದಿನಾಮ್ ।
ಲೋಹಿತೋದಾ ಮಹಾಘೋರಾ ನದೀ ಲೋಹಿತಕರ್ದಮಾ ॥೮೪॥
ನರಾಶ್ವಗಜದೇಹಾನ್ ಸಾ ವಹಂತೀ ಭೀರುಭೀಷಣೇ ॥೮೫॥

ತಸ್ಯಾಃ ಪರಮಪಾರಂ ಚ ವ್ರಜಂತಿ ವಿಜಯೈಷಿಣಃ ।
ಗಾಢೇನ ಚ ಪ್ಲವಂತಶ್ಚ ನಿಮಜ್ಜ್ಯೋನ್ಮಜ್ಜ್ಯ ಚಾಪರೇ ॥೮೬॥

ಸ್ವರ್ಗವನ್ನು ಗೆದ್ದುಕೊಳ್ಳಲು ಬಯಸಿದ ಯೋಧರು ರಕ್ತದ ಪ್ರವಾಹದಲ್ಲಿ ಕೆಲವರು ಆಳವಿಲ್ಲದ ಕಡೆ ಈಜುತ್ತ ಇನ್ನು ಕೆಲವರು ಆಳವಿರುವ ಕಡೆ ಮುಳುಗೇಳುತ್ತ ಆಚೆದಡಕ್ಕೆ ಹೋಗುತ್ತಿದ್ದರು.

ತೇ ತು ಲೋಹಿತದಿಗ್ಧಾಂಗಾ ರಕ್ತವರ್ಮಾಯುಧಾಂಬರಾಃ ।
ಸಸ್ನುಸ್ತಸ್ಯಾಂ ಪಪುಶ್ಚಾಸೃಜ್ ಮಮ್ಲುಶ್ಚ ಭರತರ್ಷಭ ॥೮೭॥

ಆ ಯೋಧರು ಮೈಯೆಲ್ಲ ನೆತ್ತರಿನಿಂದ ತೋಯ್ದುಕೊಂಡು, ರಕ್ತಮಯವಾದ ಕವಚ ಆಯುಧ ವಸ್ತ್ರಧಾರಿಗಳಾಗಿ ಆ ರಕ್ತಪ್ರವಾಹದಲ್ಲಿ ಮಿಂದರು, ನೆತ್ತರನ್ನು ಪಾನ ಮಾಡಿದರು, ರಕ್ತಸೋರಿಕೆಯಿಂದ ತಮ್ಮನ್ನು ಒಣಗಿಸಿಕೊಂಡರು.

ರಥಾನಶ್ವಾನ್ನರಾನ್ನಾಗಾನಾಯುಧಾಭರಣಾನಿ ಚ ।
ವಸನಾನ್ಯಥ ವರ್ಮಾಣಿ ವಧ್ಯಮಾನಾನ್ ಹತಾನಪಿ ॥೮೮॥
ಭೂಮಿಂ ಖಂ ದ್ಯಾ ದಿಶಶ್ಚೈವ ಪ್ರಾಯಃ ಪಶ್ಯಾಮ ಲೋಹಿತಮ್ ॥೮೯॥

ರಥ ಅಶ್ವ ಪದಾತಿ ಗಜ ಆಯುಧ ಆಭರಣ ವಸ್ತ್ರಕವಚಗಳು, ಹತರಾಗುತ್ತಿದ್ದ ಯೋಧರು, ಹತರಾದ ಯೋಧರು, ಎಲ್ಲೆಡೆ ತುಂಬಿ ಭೂಮಿ ಅಂತರಿಕ್ಷ ದಿಕ್ಕುಗಳು ಎಲ್ಲವೂ ಪ್ರಾಯಃ ಕೆಂಪಾಗಿಯೇ ಕಂಡುಬಂದುವು.

ಲೋಹಿತಸ್ಯ ತು ಗಂಧೇನ ಸ್ಪರ್ಶೇನ ಚ ರಸೇನ ಚ ।
ರೂಪೇಣ ಚಾತಿರಿಕ್ತೇನ ಶಬ್ದೇನ ಚ ವಿಸರ್ಪತಾ ॥೯೦॥
ವಿಷಾದಃ ಸುಮಹಾನಾಸೀತ್ಪ್ರಾಯಃ ಸೈನ್ಯಸ್ಯ ಭಾರತ ॥೯೧॥

ನೆತ್ತರಿನ ಗಂಧ ಸ್ಪರ್ಶ ರಸ ರೂಪ ಶಬ್ದಗಳೆಲ್ಲ ವಿಲಕ್ಷಣವೇ ಆಗಿದ್ದುವು. ಎಲ್ಲೆಡೆ ಅವು ಹರಡಿದ್ದರಿಂದ ಸೈನ್ಯಕ್ಕೆ ಬಲು ಮಹಾವಿಷಾದ ಉಂಟಾಯಿತು.

ತತ್ತು ವಿಪ್ರಹತಂ ಸೈನ್ಯಂ ಭೀಮಸೇನಮುಖಾಸ್ತವ ।
ಭೂಯಃ ಸಮಾದ್ರವನ್ವೀರಾಃ ಸಾತ್ಯಕಿಪ್ರಮುಖಾ ರಥಾಃ ॥೯೨॥

ಆಗಲೆ ಬಹಳ ನಾಶವಾಗಿದ್ದ ಕುರುಸೈನ್ಯವನ್ನು ಭೀಮಸೇನ ಮುಂತಾದವರೂ ಸಾತ್ಯಕಿ ಮುಂತಾದವರೂ ವೀರ ರಥಿಕರು ಪುನಃ ನಾಶಪಡಿಸಿದರು.

ತೇಷಾಮಾಪತತಾಂ ವೇಗಮವಿಷಹ್ಯ ಮಹಾತ್ಮನಾಮ್ ।
ಪುತ್ರಾಣಾಂ ತೇ ಮಹತ್‌ಸೈನ್ಯಮಾಸೀದ್ ರಾಜನ್
ಪರಾಙ್ಮುಖಮ್ ॥೯೩॥

ರಾಜನೆ, ಮಹಾತ್ಮರಾದ ಅವರು ಆಕ್ರಮಣ ಮಾಡಿದಾಗ ಅವರ ವೇಗವನ್ನು ತಡೆಯಲಾರದೆ ನಿನ್ನ ಪುತ್ರರ ಸೈನ್ಯ ಹಿಮ್ಮೆಟ್ಟಿತು.

ತತ್ಪಕೀರ್ಣರಥಾಶ್ವೇಭಂ ನರವಾಜಿಸಮಾಕುಲಮ್ ।
ವಿಧ್ವಸ್ತಚರ್ಮಕವಚಂ ಪ್ರವಿದ್ಧಾಯುಧಕಾರ್ಮುಕಮ್ ॥೯೪॥

ವ್ಯದ್ರವತ್ ತಾವಕಂ ಸೈನ್ಯಂ ಲೋಡ್ಯಮಾನಂ ಸಮಂತತಃ ।
ಸಿಂಹಾರ್ದಿತಂ ಮಹಾರಣ್ಯೇ ಯಥಾ ಗಜಕುಲಂ ತಥಾ ॥೯೫॥

ಚದುರಿದ ರಥ ಅಶ್ವ ಗಜ ಪದಾತಿಗಳಿಂದ ಯುಕ್ತವಾಗಿ ಚರ್ಮ ಕವಚ ಆಯುಧ ಧನುಸ್ಸುಗಳನ್ನು ಕಳೆದುಕೊಂಡ ನಿನ್ನ ಸೈನ್ಯ ಎಲ್ಲೆಡೆ ಮಹಾರಣ್ಯದಲ್ಲಿ ಸಿಂಹದಿಂದ ಹತವಾಗುವ ಆನೆಗಳ ಹಿಂಡಿನಂತೆ ಶತ್ರುಗಳಿಂದ ಹೊಡೆಸಿಕೊಂಡು ಪಲಾಯನ ಮಾಡಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷಟ್‌ಚತ್ವಾರಿಂಶೋऽಧ್ಯಾಯಃ ॥೪೬॥

❖

ಮಹಾಭಾರತತಾತ್ಪರ್ಯನಿರ್ಣಯ

ದೃಷ್ಟ್ವೈವ ತಂ ಪವನಸೂನುರಭಿ ತ್ವಿಯಾಯ
ಕ್ರೋಧಾದ್ ದಿಧಕ್ಷುರಿವ ಕರ್ಣಮಮೇಯಧಾಮಾ ।
ರಾಜಾವನಾಯ ಶಿನಿಪುಂಗವಪಾರ್ಷತೌ ಚ
ಸಂದಿಶ್ಯ ಕರ್ಣಮಭಿಗಚ್ಛತ ಆಸ ರೂಪಮ್ ॥೩೮॥

ಅಂತೇ ಕೃತಾಂತನರಸಿಂಹತನೋರ್ಯಥೈವ
ವಿಷ್ಣೋರ್ಹರಂ ಗ್ರಸತ ಆತ್ತಸಮಸ್ತವಿಶ್ವಮ್ ।
ತದ್ವೇಗತಃ ಪ್ರತಿಚಚಾಲ ಧರಾ ಸಮಸ್ತಾ
ವಿದ್ರಾವಿತಾ ಚ ಸಕಲಾ ಪ್ರತಿವೀರಸೇನಾ ॥೩೯॥

ಅಪರಿಮಿತ ಪರಾಕ್ರಮಿಯಾದ ಭೀಮ ಕರ್ಣನನ್ನು ನೋಡಿದೊಡನೆ ಕೋಪದಿಂದ ಸುಡಲು ಬಯಸಿದಂತೆ ಮೇಲೇರಿ ಹೋದ. ಧರ್ಮರಾಜನ ರಕ್ಷಣೆಗೆ ಸಾತ್ಯಕಿ ಧೃಷ್ಟದ್ಯುಮ್ನರನ್ನು ಕಳಿಸಿ ಕರ್ಣನ ಮೇಲೆರಗಿದ ಆ ಭೀಮನ ರೂಪ ಪ್ರಲಯಕಾಲದಲ್ಲಿ ಸಮಸ್ತಪ್ರಪಂಚಲಯಗೈದ ಹರನನ್ನು ನುಂಗಲು ಬರುವ ಲಯಮೂರ್ತಿ ನರಸಿಂಹರೂಪನಾದ ಹರಿಯ ರೂಪದಂತಿತ್ತು. ಅವನ ವೇಗದಿಂದ ಇಡಿ ಭೂಮಿಯೆ ಕಂಪಿಸಿತು. ಶತ್ರುಸೇನೆ ಎಲ್ಲವೂ ಪಲಾಯನ ಗೈದಿತು.

ವೈಕರ್ತನೇನ ಶರಸಂಚಯತಾಡಿತಃ ಸ
ಬಾಣಂ ಚ ವಜ್ರಸದೃಶಂ ಪ್ರಮುಮೋಚ ತಸ್ಮಿನ್ ।
ತೇನಾಹತೋ ಮೃತಕವತ್ ಸ ಪಪಾತ ಕರ್ಣೋ
ಭೀಮಃ ಕ್ಷುರಂ ಚ ಜಗೃಹೇಭಿಯಯೌ ಚ ಪದ್ಭ್ಯಾಮ್ ॥೪೦॥

ಕರ್ಣ ಭೀಮನನ್ನು ಬಾಣಸಮೂಹಗಳಿಂದ ಹೊಡೆದಾಗ ಭೀಮ ಅವನ ಮೇಲೆ ವಜ್ರಸಮಾನವಾದ ಬಾಣವನ್ನು ಎಸೆದ. ಅದರ ಆಘಾತದಿಂದ ಕರ್ಣ ಶವದಂತೆ ಬಿದ್ದ. ಭೀಮ ಕತ್ತಿಯನ್ನು ಎತ್ತಿಕೊಂಡ. ಕಾಲುನಡಿಗೆಯಿಂದ ಕರ್ಣನ ಬಳಿಗೆ ನಡೆದ.

ನಿಂದಾಂ ಹರೇಸ್ತು ವಿದಧಾತಿ ಪರೋಕ್ಷಗೋऽಪಿ
ಯಸ್ತಂ ಪ್ರಗೃಹ್ಯ ಕರವಾಣಿ ವಿಜಿಹ್ವಮೇವ ।
ಏವಂ ಹಿ ವಾಯುತನಯಸ್ಯ ಸದಾಪ್ರತಿಜ್ಞಾ
ಛೇತ್ತುಂ ಸ ತೇನ ರವಿಜಸ್ಯ ಸಸಾರ ಜಿಹ್ವಾಮ್ ॥೪೧॥

ಹಿಂದಿನಿಂದಾಗಲಿ ಹರಿಯ ಬಗ್ಗೆ ಹೀನಾಯವಾಗಿ ಆಡಿಕೊಳ್ಳುವವನನ್ನು ಹಿಡಿದು ಅವನ ನಾಲಿಗೆ ಕೊಯ್ಯುತ್ತೇನೆ ಎಂಬುದು ಭೀಮನ ಸಾರ್ವಕಾಲಿಕ ಪ್ರತಿಜ್ಞೆ ಯಾಗಿತ್ತು. ಅದರಿಂದ ಕರ್ಣನ ನಾಲಿಗೆ ಕೊಯ್ಯಲು ಭೀಮ ಅವನ ಬಳಿಗೆ ನಡೆದ.

ಆಯಾಂತಮಂತಿಕಮಮುಂ ಪ್ರಸಮೀಕ್ಷ್ಯ ಶಲ್ಯೋ
ನೇತ್ಯಾಹ ಹೇತುಭಿರಹೋ ನ ಮೃಷಾ ಪ್ರತಿಜ್ಞಾ ।
ಕಾರ್ಯಾ ತ್ವಯೈವ ಪುರೂಹೂತಸುತಸ್ಯ ಜಿಹ್ವಾಂ
ಮಾ ತೇನ ಪಾತಯ ಮರುತ್ಸುತ ಸೂತಸೂನೋಃ ॥೪೨॥

ಭೀಮಸೇನ ಸಮೀಪಕ್ಕೆ ಬರುತ್ತಿದ್ದುದನ್ನು ಕಂಡು ಶಲ್ಯ ಯುಕ್ತಿಯುಕ್ತವಾಗಿ ನುಡಿದ: 'ಬೇಡ ಭೀಮ, ನೀನೆ ಅರ್ಜುನನ ಪ್ರತಿಜ್ಞೆಯನ್ನು ಸುಳ್ಳು ಮಾಡುವುದು ಯುಕ್ತವಲ್ಲ. ಅದರಿಂದ ಕರ್ಣನ ನಾಲಿಗೆಯನ್ನು ಕತ್ತರಿಸಬೇಡ.'

ಇತ್ಯುಕ್ತ್ವಾ ಪ್ರಮುಖಾತ್ ತಸ್ಯ ರಥೇನೈವ ತು ಮದ್ರರಾಟ್ ।
ವೈಕರ್ತನಮಪೋವಾಹ ಸರ್ವಲೋಕಸ್ಯ ಪಶ್ಯತಃ ॥೪೩॥

ಹೀಗೆ ಹೇಳಿ ಶಲ್ಯ ಎಲ್ಲ ಜನರು ನೋಡುತ್ತಿದ್ದಂತೆಯೆ ಕರ್ಣನನ್ನು ರಥದಿಂದ ಭೀಮನ ಇದಿರಿನಿಂದ ಆಚೆಗೆ ಒಯ್ದ.

❖

ನಲವತ್ತೇಳನೆಯ ಅಧ್ಯಾಯ

ಭೀಮನ ಬಾಣದಿಂದಲೂ ಕರ್ಣ ಪ್ರಜ್ಞೆ ತಪ್ಪಿ ಬೀಳುತ್ತಾನೆ. ಯುಧಿಷ್ಠಿರನಿಗೆ ಅಪಹಾಸಗೈದ ಕರ್ಣನ ನಾಲಿಗೆಯನ್ನು ಕೊಯ್ಯಲು ಭೀಮ ಹೊರಟಾಗ ಶಲ್ಯ ತಡೆದು ಬುದ್ಧಿವಾದ ಹೇಳಿ ಕರ್ಣನನ್ನು ದೂರಕ್ಕೊಯ್ಯುತ್ತಾನೆ.

ಸಂಜಯಃ

ತಾನಭಿದ್ರವತೋ ದೃಷ್ಟ್ವಾ ಪಾಂಡವಾಂಸ್ತಾವಕಂ ಬಲಮ್ ॥೧॥
ದುರ್ಯೋಧನೋ ಮಹಾರಾಜ ವಾರಯಾಮಾಸ ಸರ್ವಶಃ ।
ಯೋಧಾಂಶ್ಚ ಸ್ವಬಲಂ ಚೈವ ಸಮಂತಾದ್ ಭರತರ್ಷಭ ॥೨॥
ಕ್ರೋಶತಸ್ತವ ಪುತ್ರಸ್ಯ ನ ಸ್ಮ ರಾಜನ್ನ್ಯವರ್ತತ ॥೩॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಮಹಾರಾಜನೆ, ನಿನ್ನ ಸೈನ್ಯದ ಮೇಲೆ ಪಾಂಡವರು ಆಕ್ರಮಣ ಮಾಡುವುದನ್ನು ಕಂಡು ದುರ್ಯೋಧನ ತನ್ನ ಸೈನ್ಯವನ್ನೂ ಯೋಧರನ್ನೂ ಪಲಾಯನ ಮಾಡದಂತೆ ಎಲ್ಲ ಕಡೆಗಳಲ್ಲಿಯೂ ತಡೆದ. ಆದರೆ ಅವನ ಕೂಗಿಗೆ ಸೈನ್ಯ ಹಿಂತಿರುಗಲಿಲ್ಲ.

ತತಃ ಪಕ್ಷಾತ್ ಪ್ರಪಕ್ಷಾಚ್ಚ ಶಕುನಿಶ್ಚಾಪಿ ಸೌಬಲಃ ।
ತದಾತ್ತಶಸ್ತ್ರಾಃ ಕುರವೋ ಭೀಮಮಭ್ಯದ್ರವನ್ ರುಷಾ ॥೪॥

ಬಳಿಕ ದುರ್ಯೋಧನನ ಎಡ ಬಲ ಪಾರ್ಶ್ವಗಳ ಕುರುಯೋಧರೂ ಶಕುನಿಯೂ ಆಯುಧಗಳೆತ್ತಿಕೊಂಡು ಭೀಮನನ್ನು ಕೋಪದಿಂದ ಆಕ್ರಮಿಸಿದರು.

ಕರ್ಣೋಽಪಿ ದೃಷ್ಟ್ವಾ ದ್ರವತೋ ಧಾರ್ತರಾಷ್ಟ್ರಾನ್
ಪರಾಙ್ಮುಖಾನ್ ॥೫॥

ಮದ್ರರಾಜಮುವಾಚೇದಂ ಯಾಹಿ ಭೀಮರಥಂ ಪ್ರತಿ ।
ಏವಮುಕ್ತಶ್ಚ ಕರ್ಣೇನ ಶಲ್ಯೋ ಮದ್ರಾಧಿಪಸ್ತದಾ ॥೬॥

ಹಂಸವರ್ಣಾನ್ ಹಯಾಗ್ರ್ಯಾಂಸ್ತಾನ್ ಪ್ರೈಷೀದ್ ಯತ್ರ
ವೃಕೋದರಃ ॥೭॥

ಕರ್ಣನೂ ಕೌರವ ಸೈನಿಕರು ಪಲಾಯನ ಮಾಡುವುದನ್ನು ಕಂಡು ಶಲ್ಯನಿಗೆ ಹೇಳಿದ, 'ಭೀಮನ ರಥದ ಕಡೆಗೆ ನಡೆ' ಎಂದು. ಕರ್ಣ ಹೀಗೆ ಹೇಳಿದಾಗ ಶಲ್ಯನು ಹಂಸವರ್ಣದ ಶ್ರೇಷ್ಠ ಕುದುರೆಗಳನ್ನು ಭೀಮನಿರುವ ಕಡೆಗೆ ನಡೆಸಿದ.

ತೇ ಪ್ರೇಷಿತಾ ಮಹಾರಾಜ ಶಲ್ಯೇನಾಹವಶೋಭಿನಾ ।
ಭೀಮಸೇನರಥಂ ಪ್ರಾಪ್ಯ ಸಮಸಜ್ಜಂತ ವಾಜಿನಃ ॥೮॥

ಮಹಾರಾಜ, ಯುದ್ಧದಲ್ಲಿ ಶೋಭಿಸುವ ಶಲ್ಯನು ಕುದುರೆಗಳನ್ನು ನಡೆಸಿದಾಗ ಅವುಗಳು ಭೀಮಸೇನನ ರಥವನ್ನು ಇದಿರಿಸಿ ನಿಂತುವು.

ದೃಷ್ಟ್ವಾ ಕರ್ಣಂ ಸಮಾಯಾಂತಂ ಭೀಮಃ ಕ್ರೋಧಸಮನ್ವಿತಃ ।
ಮತಿಂ ದಧ್ರೇ ವಿನಾಶಾಯ ಕರ್ಣಸ್ಯ ಭರತರ್ಷಭ ॥೯॥

ಕರ್ಣ ಬಂದುದನ್ನು ನೋಡಿ ಭೀಮ ಕುಪಿತನಾಗಿ ಅವನ ವಧ ಮಾಡಲು ಸಂಕಲ್ಪಿಸಿದ.

ಸೋಽಬ್ರವೀತ್ ಸಾತ್ಯಕಿಂ ವೀರಂ ಧೃಷ್ಟದ್ಯುಮ್ನಂ ಚ ಪಾರ್ಷತಮ್ ।
ಏನಂ ರಕ್ಷತ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ॥೧೦॥
ಸಂಶಯಾನ್ಮಹತೋ ಮುಕ್ತಂ ಕಥಂಚಿತ್ ಪ್ರೇಕ್ಷತೋ ಮಮ ॥೧೧॥

ಭೀಮಸೇನನು ವೀರನಾದ ಸಾತ್ಯಕಿಯನ್ನೂ ಧೃಷ್ಟದ್ಯುಮ್ನನನ್ನೂ ಕುರಿತು ಹೇಳಿದ– 'ಧರ್ಮಾತ್ಮನಾದ ರಾಜಾ ಯುಧಿಷ್ಠಿರನನ್ನು ನೀವು ರಕ್ಷಿಸಿರಿ. ನನ್ನ ಕಣ್ಣೆದುರಿನಲ್ಲಿ ಕಥಂಚಿತ್ ಮಹಾಸಂಕಟದಿಂದ ಈತ ಪಾರಾಗಿದ್ದಾನೆ'.

ಅಗ್ರತೋ ಮೇ ಕೃತೋ ರಾಜಾ ಛಿನ್ನಸರ್ವಪರಿಚ್ಛದಃ ।
ದುರ್ಯೋಧನಸ್ಯ ಪ್ರೀತ್ಯರ್ಥಂ ರಾಧೇಯೇನ ದುರಾತ್ಮನಾ ॥೧೨॥

ದುರಾತ್ಮನಾದ ಕರ್ಣನು ದುರ್ಯೋಧನನನ್ನು ಮೆಚ್ಚಿಸುವುದಕ್ಕಾಗಿ ನನ್ನೆದುರಿನಲ್ಲಿ ಯುಧಿಷ್ಠಿರನ ಎಲ್ಲ ಯುದ್ಧ ಸಾಮಗ್ರಿಗಳನ್ನೂ ನಾಶಗೊಳಿಸಿದ್ದಾನೆ.

ಅಂತಮದ್ಯ ಕರಿಷ್ಯಾಮಿ ತಸ್ಯ ದುಃಖಸ್ಯ ಪಾರ್ಷತ ।
ಹಂತಾ ವಾಸ್ಮಿ ರಣೇ ಕರ್ಣಂ ಸ ವಾ ಮಾಂ ನಿಹನಿಷ್ಯತಿ ॥೧೩॥
ಸಂಗ್ರಾಮೇಣ ಸುಘೋರೇಣ ಸತ್ಯಮೇತದ್ ಬ್ರವೀಮಿ ವಃ ॥೧೪॥

ಈಗ ಈ ದುಃಖಕ್ಕೆ ಪ್ರತೀಕಾರ ಮಾಡುತ್ತೇನೆ. ರಣದಲ್ಲಿ ಭೀಕರವಾದ ಹೋರಾಟದಿಂದ ನಾನು ಕರ್ಣನನ್ನು ಕೊಲ್ಲುತ್ತೇನೆ. ಅಥವಾ ಅವನು ನನ್ನನ್ನು ಕೊಲ್ಲುತ್ತಾನೆ. ನಾನು ನಿಮಗೆ ಸತ್ಯವನ್ನೇ ಹೇಳುತ್ತಿದ್ದೇನೆ.

ಭೀಮನು ಕರ್ಣನನ್ನು ಕೊಲ್ಲುವ ಸಂಕಲ್ಪ ಮಾಡುವುದಿಲ್ಲ, ಕೊಲ್ಲುವುದೂ ಇಲ್ಲ. ಅರ್ಜುನನಿಂದ ಕೊಲ್ಲಿಸುತ್ತಾನೆ. ಅರ್ಜುನನಿಂದ ಕೊಲ್ಲಿಸಿದರೆ ತಾನೇ ಕೊಂದಂತೆ. ಅದರಿಂದ 'ಕೊಲ್ಲುತ್ತೇನೆ' ಎನ್ನುತ್ತಾನೆ. ಮತ್ತು 'ಕೊಲ್ಲುತ್ತೇನೆ' ಎಂದರೆ, ತಾನು ಕರ್ಣನನ್ನು ಕೊಂದಂತೆ ಮಾಡುತ್ತೇನೆ, ಶವದಂತೆ ಬೀಳಿಸುತ್ತೇನೆ ಎಂದರ್ಥ. ಮುಂದೆ ಹಾಗೇ ಕರ್ಣನು ಪ್ರಜ್ಞೆತಪ್ಪಿ ಶವದಂತೇ ಬೀಳುತ್ತಾನೆ. ಅದರಿಂದ ಭೀಮ 'ಸತ್ಯವನ್ನೇ ಹೇಳುತ್ತೇನೆ' ಎಂದುದು ಸುಳ್ಳಾಗುವುದಿಲ್ಲ. 'ಅಥವಾ ಅವನು ನನ್ನನ್ನು ಕೊಲ್ಲುತ್ತಾನೆ' ಎಂಬಲ್ಲಿ 'ಅಥವಾ' ಶಬ್ದವೂ ಅನಾಸ್ಥೆಯ ದ್ಯೋತಕವೆ ಹೊರತು ಸಂದೇಹದ್ಯೋತಕವಲ್ಲ. ಭೀಮನಿಗೆ ಸಂದೇಹ ಭ್ರಾಂತಿಗಳಿಲ್ಲ.

ರಾಜಾನಮದ್ಯ ಭವತಾಂ ನ್ಯಾಸಭೂತಂ ದದಾಮಿ ವೈ ।
ಅಸ್ಯ ಸಂರಕ್ಷಣೇ ಸರ್ವೇ ಯತಧ್ವಂ ವಿಗತಜ್ವರಾಃ ॥೧೫॥

ರಾಜಾ ಯುಧಿಷ್ಠಿರನನ್ನು ನಿಮ್ಮಲ್ಲಿ ನ್ಯಾಸವಾಗಿ ಒಪ್ಪಿಸುತ್ತೇನೆ. ಭಯವಿಲ್ಲದೆ ಈತನ ಸಂರಕ್ಷಣೆಯಲ್ಲಿ ನೀವು ಯತ್ನಿಸಿರಿ'.

ಏವಮುಕ್ತ್ವಾ ಮಹಾಬಾಹುಃ ಪ್ರಾಯಾದಾಧಿರಥಿಂ ಪ್ರತಿ ।
ಸಿಂಹನಾದೇನ ಮಹತಾ ಸರ್ವಾಃ ಸನ್ನಾದಯನ್ ದಿಶಃ ॥೧೬॥

ಹೀಗೆ ಹೇಳಿ ಮಹಾಬಾಹು ಭೀಮನು ಮಹಾ ಸಿಂಹನಾದದಿಂದ ಎಲ್ಲ ದಿಕ್ಕುಗಳನ್ನೂ ಪ್ರತಿಧ್ವನಿಸುವಂತೆ ಮಾಡಿ ಕರ್ಣನನ್ನು ಆಕ್ರಮಿಸಿದ.

ದೃಷ್ಟ್ವಾ ತ್ವರಿತಮಾಯಾಂತಂ ಭೀಮಂ ಯುದ್ಧಾಭಿನಂದಿನಮ್ ।
ಸೂತಪುತ್ರಮಥೋವಾಚ ಮದ್ರಾಣಾಮೀಶ್ವರೋ ವಿಭುಃ ॥೧೭॥

ಯುದ್ಧವನ್ನು ಸ್ವಾಗತಿಸುತ್ತ ಭೀಮ ವೇಗವಾಗಿ ಬರುತ್ತಿದ್ದುದನ್ನು ಕಂಡು ವಿಭು ಮದ್ರರಾಜ ಕರ್ಣನಿಗೆ ಹೇಳಿದ.

ಶಲ್ಯಃ

ಪಶ್ಯ ಕರ್ಣ ಮಹಾಬಾಹುಂ ಕ್ರುದ್ಧಂ ಪಾಂಡವನಂದನಮ್ ।
ದೀರ್ಘಕಾಲಾರ್ಜಿತಂ ಕ್ರೋಧಂ ಮೋಕ್ತುಕಾಮಂ ತ್ವಯಿ
ಧ್ರುವಮ್ ॥೧೮॥

ಶಲ್ಯ ನುಡಿದ— ನೋಡು, ಕರ್ಣ! ಮಹಾಬಾಹುವಾದ ಕ್ರುದ್ಧನಾದ ಭೀಮಸೇನನನ್ನು ದೀರ್ಘಕಾಲದಿಂದ ತನ್ನೊಳಗೇ ಹುದುಗಿಸಿಕೊಂಡಿದ್ದ ಕೋಪವನ್ನೆಲ್ಲ ನಿನ್ನ ಮೇಲೆ ಪ್ರಯೋಗಿಸಲು ಅವನು ಬಯಸುತ್ತಿರುವುದು ನಿಶ್ಚಿತ.

ಈದೃಶಂ ನಾಸ್ಯ ರೂಪಂ ಮೇ ದೃಷ್ಟಪೂರ್ವಂ ಕದಾಚನ ।
ಅಭಿಮನ್ಯೌ ಹತೇ ಕರ್ಣ ರಾಕ್ಷಸೇ ವಾ ಘಟೋತ್ಕಚೇ ॥೧೯॥

ಇವನ ಇಂಥ ರೂಪವನ್ನು ಹಿಂದೆ ಅಭಿಮನ್ಯು ಹತನಾದಾಗ ಆಗಲಿ, ಘಟೋತ್ಕಚ ರಾಕ್ಷಸ ಹತನಾಗುವಾಗ ಆಗಲಿ, ನಾನೆಂದೂ ಕಂಡೇ ಇಲ್ಲ.

ತ್ರೈಲೋಕ್ಯಸ್ಯ ಸಮಸ್ತಸ್ಯ ಶಕ್ತಃ ಕ್ರುದ್ಧೋ ನಿವಾರಣೇ ।
ಬಿಭರ್ತಿ ತಾದೃಶಂ ರೂಪಂ ಕಾಲಾಗ್ನಿಸದೃಶಂ ಶುಭಮ್ ॥೨೦॥

ಮೂರುಲೋಕವೆಲ್ಲವನ್ನೂ ಕೂಡ, ಕ್ರುದ್ಧನಾದರೆ, ತಡೆಯಲು ಈತ ಶಕ್ತ. ಅಂಥ ಕಾಲಾಗ್ನಿಸದೃಶವಾದ ಮಂಗಳಕರ ರೂಪವನ್ನು ಧರಿಸಿದ್ದಾನೆ.

ಸಂಜಯಃ

ಇತಿ ಬ್ರುವತಿ ರಾಧೇಯಂ ಮದ್ರಾಣಾಮೀಶ್ವರೇ ನೃಪ ।
ಅಭ್ಯವರ್ತತ ವೈ ಕರ್ಣಂ ಕ್ರೋಧದೀಪ್ತೋ ವೃಕೋದರಃ ॥೨೧॥

ಸಂಜಯ ನುಡಿದ— ರಾಜನೆ, ಹೀಗೆ ಶಲ್ಯನು ಕರ್ಣನಿಗೆ ಹೇಳುತ್ತಿದ್ದಾಗ ಕ್ರೋಧದಿಂದ ಉರಿಯುತ್ತಿದ್ದ ಭೀಮ ಕರ್ಣನೆದುರಿಗೆ ಬಂದ.

ತಥಾಗತಂ ತು ಸಂಪ್ರೇಕ್ಷ್ಯ ಭೀಮಂ ಯುದ್ಧಾಭಿನಂದಿನಮ್ ।
ಅಬ್ರವೀದ್ ವಚನಂ ಶಲ್ಯಂ ರಾಧೇಯಃ ಪ್ರಹಸನ್ನಿವ ॥೨೨॥

ಯುದ್ಧಲೋಲನಾದ ಭೀಮ ಹಾಗೆ ಬಂದುದನ್ನು ಕಂಡು ಕರ್ಣನು ನಗುತ್ತ ಶಲ್ಯನಿಗೆ ಈ ಮಾತನ್ನು ನುಡಿದ.

ಯದುಕ್ತಂ ವಚನಂ ಮೇಽದ್ಯ ತ್ವಯಾ ಮದ್ರಜನೇಶ್ವರ ।
ಭೀಮಸೇನಂ ಪ್ರತಿ ವಿಭೋ ತತ್ಸತ್ಯಂ ನಾತ್ರ ಸಂಶಯಃ ॥೨೩॥

ಶಲ್ಯ, ಭೀಮಸೇನನ ಕುರಿತು ನೀನೇನು ಮಾತನ್ನಾಡಿದೆಯೋ ಅದು ನಿಜ. ಅದರಲ್ಲಿ ಸಂಶಯವಿಲ್ಲ.

ಏಷ ಶೂರಶ್ಚ ವೀರಶ್ಚ ಕ್ರೋಧನಶ್ಚ ವೃಕೋದರಃ ।
ನಿರಪೇಕ್ಷಃ ಶರೀರೇ ಚ ಪ್ರಾಣತಶ್ಚ ಬಲಾಧಿಕಃ ॥೨೪॥

ಇವನು ಶೂರ, ವೀರ, ಕ್ರೋಧ ಮಾಡುವವ. ಶರೀರದ ರಕ್ಷಣೆಗೆ ಯಾರ ಅಪೇಕ್ಷೆಯೂ ಇಲ್ಲದವನು. ಪ್ರಾಣಶಕ್ತಿಯಲ್ಲಿ ಬಲಿಷ್ಠ.

ಅಜ್ಞಾತವಾಸಂ ವಸತಾ ವಿರಾಟನಗರೇ ತದಾ ।
ದ್ರೌಪದ್ಯಾಃ ಪ್ರಿಯಕಾಮೇನ ಕೇವಲಂ ಬಾಹುಸಂಶ್ರಯಾತ್ ॥೨೫॥
ಗೂಢಭಾವಂ ಸಮಾಶ್ರಿತ್ಯ ಕೀಚಕಃ ಸಗಣೋ ಹತಃ ॥೨೬॥

ವಿರಾಟನಗರದಲ್ಲಿ ವಾಸಮಾಡುವಾಗ ದ್ರೌಪದಿಗೆ ಪ್ರಿಯವನ್ನುಂಟು ಮಾಡಲು ಬಯಸಿ ಮಾರುವೇಷ ಧರಿಸಿ ಕೇವಲ ಬಾಹುಬಲದಿಂದ ಕೀಚಕನನ್ನು ಪರಿವಾರ ಸಮೇತವಾಗಿ ಸಂಹರಿಸಿದ.

ಸೋಽದ್ಯ ಸಂಗ್ರಾಮಶಿರಸಿ ಸನ್ನದ್ಧಃ ಕ್ರೋಧಮೂರ್ಚ್ಛಿತಃ ।
ಕಿಂ ನ ನೋದ್ಯತದಂಡೇನ ಮೃತ್ಯುನಾಪಿ ವ್ರಜೇದ್ ರಣಮ್ ॥೨೭॥

ಅವನು ಈಗ ರಣರಂಗದ ಮುಂಭಾಗದಲ್ಲಿ ಸನ್ನದ್ಧನಾಗಿ ಕ್ರೋಧದಿಂದ ಮೈಮರೆತರೆ ದಂಡವನ್ನೆತ್ತಿಕೊಂಡಿರುವ ಯಮನೊಡನೆಯೂ ಯುದ್ಧ ಮಾಡದಿರುವನೆ?

ಚಿರಕಾಲಾಭಿಲಷಿತೋ ಮಮಾಯಂ ತು ಮನೋರಥಃ ।
ಅರ್ಜುನಂ ಸಮರೇ ಹನ್ಯಾಂ ಮಾಂ ವಾ ಹನ್ಯಾದ್ ಧನಂಜಯಃ॥೨೮॥

ಬಹುಕಾಲದಿಂದ ನನಗೆ ಇದೊಂದು ಆಸೆ ಇದೆ. ಅರ್ಜುನನನ್ನು ಯುದ್ಧದಲ್ಲಿ ನಾನು ಕೊಲ್ಲಬೇಕು ಅಥವಾ ಅರ್ಜುನನು ನನ್ನನ್ನು ಕೊಲ್ಲಬೇಕು' ಎಂದು.

ಕರ್ಣನ ಈ ಮಾತಿನಲ್ಲಿಯೂ 'ಅಥವಾ' ಎಂದು ಅರ್ಜುನನನ್ನು ಯುದ್ಧದಲ್ಲಿ ತಾನು ಕೊಲ್ಲುವುದರಲ್ಲಿಯೆ ಅನಾಸ್ಥೆ ಕಾಣುತ್ತದೆ. ಉದ್ಯೋಗ ಪರ್ವದಲ್ಲಿ ತಾನು ರಣಯಜ್ಞದಲ್ಲಿ ಪಶುವಾಗಬೇಕೆಂಬ ಇಚ್ಛೆಯನ್ನೇ ಕೃಷ್ಣನ ಮುಂದೆ ಹೇಳಿದ್ದಾನೆ.

ಸ ಮೇ ಕದಾಚಿದದ್ಯೈವ ಭವೇದ್ ಭೀಮಸಮಾಗಮಾತ್ ॥೨೯॥
ನಿಹತೇ ಭೀಮಸೇನೇ ತು ಯದಿ ವಾ ವಿರಥೀಕೃತೇ ।
ಅಭಿಯಾಸ್ಯತಿ ಮಾಂ ಪಾರ್ಥಸ್ತನ್ಮೇ ಸಾಧು ಭವಿಷ್ಯತಿ ॥೩೦॥
ಅತ್ರ ಯನ್ಮನ್ಯಸೇ ಪ್ರಾಪ್ತಂ ತಚ್ಚೀಘ್ರಂ ಸಂಪ್ರಧಾರಯ ॥೩೧॥

ನನ್ನ ಈ ಆಸೆ, ಒಂದುವೇಳೆ ಇಂದೇ ಭೀಮನೊಡನೆ ಮಾಡುವ ಯುದ್ಧದ ಮೂಲಕ ಈಡೇರಬಹುದು. ಏಕೆಂದರೆ ಭೀಮನನ್ನು ನಾನು ಕೊಂದರೆ ಅಥವಾ ವಿರಥನನ್ನಾಗಿ ಮಾಡಿದರೆ ಅರ್ಜುನ ನನ್ನ ಕಡೆಗೆ ಮುನ್ನುಗ್ಗಿ ಬರುತ್ತಾನೆ. ಅದು ನನಗೆ ಒಳ್ಳೆಯದೇ ಆಗುತ್ತದೆ. ನಿನ್ನ ಅಭಿಪ್ರಾಯದಲ್ಲಿ ಈಗ ನಾನೇನು ಮಾಡುವುದು ಯೋಗ್ಯವೆಂಬುದನ್ನು ಬೇಗನೆ ಹೇಳು.

ಏತಚ್ಛ್ರುತ್ವಾ ತು ವಚನಂ ರಾಧೇಯಸ್ಯ ಮಹಾತ್ಮನಃ ।
ಉವಾಚ ವಚನಂ ಶಲ್ಯಃ ಸೂತಪುತ್ರಂ ತಥಾಗತಮ್ ॥೩೨॥

ಮಹಾತ್ಮಕರ್ಣನ ಈ ಮಾತನ್ನು ಕೇಳಿ ಶಲ್ಯನು, ಹಾಗೆ ಇದ್ದುದನ್ನೆ, ಅಂದರೆ ತನ್ನ ಅಭಿಪ್ರಾಯದಲ್ಲಿದ್ದುದನ್ನೇ ಹೇಳಿದ.

ಅಭಿಯಾಸಿ ಮಹಾಬಾಹೋ ಭೀಮಸೇನಂ ಮಹಾಬಲಮ್ ।
ನಿರಸ್ಯ ಭೀಮಸೇನಂ ತು ತತಃ ಪ್ರಾಪ್ಸ್ಯಸಿ ಫಲ್ಗುನಮ್ ॥೩೩॥

ಮಹಾಬಾಹುವೆ, ನೀನು ಮಹಾಬಲಿಯಾದ ಭೀಮಸೇನನನ್ನು ಆಕ್ರಮಿಸು. ಅವನನ್ನು ಒರೆಸಿ ಬಳಿಕ ಅರ್ಜುನನನ್ನು ಹೊಂದುವೆ.

ಯಸ್ತೇ ಕಾಮೋಽಭಿಲಷಿತಶ್ಚಿರಾತ್ ಪ್ರಭೃತಿ ಹೃದ್ಗತಃ ।
ಸ ವೈ ಸಂಪತ್ಸ್ಯತೇ ಕರ್ಣ ಸತ್ಯಮೇತದ್ ಬ್ರವೀಮಿ ತೇ ॥೩೪॥

ಬಹು ಹಿಂದಿನಿಂದಲೂ ನಿನ್ನ ಎದೆಯಲ್ಲಿದ್ದ ಅಭೀಷ್ಟಕಾಮನೆ ನಿಶ್ಚಯವಾಗಿ ಪೂರೈಸುತ್ತದೆ. ಕರ್ಣ, ಇದು ಸತ್ಯ, ನಿನಗೆ ಹೇಳುತ್ತಿದ್ದೇನೆ.

ಏವಮುಕ್ತೇ ತತಃ ಕರ್ಣಃ ಶಲ್ಯಂ ಪುನರಭಾಷತ ।
ಹಂತಾಹಮರ್ಜುನಂ ಸಂಖೇ ಮಾಂ ವಾ ಹಂತಾ ಧನಂಜಯಃ ॥೩೫॥
ಯುದ್ಧೇ ಮನಃ ಸಮಾಧಾಯ ಯಾಹಿ ಯತ್ರ ವೃಕೋದರಃ ॥೩೬॥

ಶಲ್ಯ ಹೀಗೆ ಹೇಳಿದಾಗ ಕರ್ಣ ಪುನಃ ಹೇಳಿದ: ಯುದ್ಧದಲ್ಲಿ ನಾನಾದರೂ ಅರ್ಜುನನನ್ನು ಕೊಲ್ಲುವೆ ಅಥವಾ ಅವನಾದರೂ ನನ್ನನ್ನು ಕೊಲ್ಲವನು, ಯುದ್ಧದಲ್ಲಿ ಮನಸಿಟ್ಟು ಭೀಮನಿದ್ದಲ್ಲಿಗೆ ನಡೆ, ಹೋಗೋಣ.

ಸಂಜಯಃ

ತತಃ ಪ್ರಾಯಾದ್ ರಥೇನಾಶು ಶಲ್ಯಸ್ತತ್ರ ವಿಶಾಂಪತೇ ।
ಯತ್ರ ಭೀಮೋ ಮಹೇಷ್ವಾಸೋ ವ್ಯದ್ರಾವಯತ ವಾಹಿನೀಮ್ ॥೩೭॥

ಸಂಜಯ ನುಡಿದ— ರಾಜನೆ, ಆಗ ಶಲ್ಯನು ರಥದಿಂದ ಮಹಾಬಿಲ್ಲಾರ ಭೀಮನು ಎಲ್ಲಿ ಕುರುಸೇನೆಯನ್ನು ಓಡಿಸುತ್ತಿದ್ದನೋ ಅಲ್ಲಿಗೇ ಬೇಗನೆ ನಡೆದ.

ತತಸ್ತೂರ್ಯನಿನಾದಶ್ಚ ಭೇರೀಣಾಂ ಚ ಮಹಾಸ್ವನಃ ।
ಉದತಿಷ್ಠತ ರಾಜೇಂದ್ರ ಕರ್ಣಭೀಮಸಮಾಗಮೇ ॥೩೮॥

ಮಹಾರಾಜ, ಬಳಿಕ ಕರ್ಣ–ಭೀಮಸೇನರು ಯುದ್ಧಕ್ಕೆ ಕಲೆತಾಗ ವಾದ್ಯ ಘೋಷವೂ ಭೇರಿಯ ಮಹಾಧ್ವನಿಯೂ ಎದ್ದಿತು.

ಭೀಮಸೇನೋಽಥ ಸಂಕ್ರುದ್ಧಸ್ತವ ಸೈನ್ಯಂ ದುರಾಸದಮ್ ।
ನಾರಾಚೈರ್ವಿಮಲೈಸ್ತೀಕ್ಷ್ಣೈರ್ದಿಶಃ ಪ್ರಾದ್ರಾವಯದ್ ಬಲೀ ॥೩೯॥

ಬಲಿಷ್ಠನಾದ ಭೀಮಸೇನನು ಕ್ರುದ್ಧನಾಗಿ ನಿನ್ನ ಎದುರಿಸಲಾಗದ ಸೈನ್ಯವನ್ನು ನಿರ್ಮಲವಾದ ತೀಕ್ಷ್ಣವಾದ ಬಾಣಗಳಿಂದ ದಿಕ್ಕುಗಳಿಗೆ ಓಡಿಸಿದ.

ಸ ಸನ್ನಿಪಾತಸ್ತುಮುಲೋ ಭೀಮರೂಪೋ ವಿಶಾಂಪತೇ ।
ಆಸೀದ್ ರೌದ್ರೋ ಮಹಾರಾಜ ಕರ್ಣಪಾಂಡವಯೋರ್ಮೃಧೇ ॥೪೦॥

ರಾಜನೆ, ಕರ್ಣ–ಭೀಮರ ಆ ಮಹಾಯುದ್ಧದಲ್ಲಿ ಭೀಕರ ಸ್ವರೂಪದ ಘೋರ ಮಹಾಸಮರ ನಡೆಯಿತು.

ತತೋ ಮುಹೂರ್ತಾದ್ ರಾಜೇಂದ್ರ ಪಾಂಡವಃ ಕರ್ಣಮಾದ್ರವತ್ ।
ತಮಾಪತಂತಂ ಸಂಪ್ರೇಕ್ಷ್ಯ ಕರ್ಣೋ ವೈಕರ್ತನೋ ವೃಷಃ ॥೪೧॥

ಆಜಘಾನೋರಸಿ ಕ್ರುದ್ಧೋ ನಾರಾಚೇನ ಸ್ತನಾಂತರೇ ।
ಪುನಶ್ಚೈನಮಮೇಯಾತ್ಮಾ ಶರವರ್ಷೈರವಾಕಿರತ್ ॥೪೨॥

ಮುಹೂರ್ತ ಕಾಲ ಕಳೆದಾಗ, ರಾಜನೆ, ಭೀಮನು ಕರ್ಣನ ಎದುರಿಗೆ ನುಗ್ಗಿಬಂದ. ಅವನು ಬರುವುದನ್ನು ಕಂಡು ಕರ್ಣನು ಕ್ರುದ್ಧನಾಗಿ ಬಾಣದಿಂದ ಎದೆಯಲ್ಲಿ ಪ್ರಹಾರ ಮಾಡಿದ. ಪುನಃ ಬಾಣಗಳ ಮಳೆಯಿಂದ ಅವನನ್ನು ಅಮೇಯನಾದ ಕರ್ಣ ಮುಚ್ಚಿದ.

ಸ ವಿದ್ಧಃ ಸೂತಪುತ್ರೇಣ ಛಾದಯಾಮಾಸ ಪತ್ರಿಭಿಃ ।
ವಿವ್ಯಾಧ ನಿಶಿತೈಃ ಕರ್ಣಂ ನವಭಿರ್ನತಪರ್ವಭಿಃ ॥೪೩॥

ಕರ್ಣ ತನ್ನನ್ನು ಹೀಗೆ ಹೊಡೆದಾಗ ಭೀಮ ಅವನನ್ನು ಬಾಣಗಳಿಂದ ಮುಚ್ಚಿ ಡೊಂಕುಗಿಣ್ಣಿನ ಒಂಬತ್ತು ತೀಕ್ಷ್ಣ ಬಾಣಗಳಿಂದ ಹೊಡೆದ.

ತಸ್ಯ ಕರ್ಣೋ ಧನುರ್ಮಧ್ಯೇ ದ್ವಿಧಾ ಚಿಚ್ಛೇದ ಪತ್ರಿಣಾ ।
ಅಥ ತಂ ಛಿನ್ನಧನ್ವಾನಮಭ್ಯವಿಧ್ಯತ್ ಸ್ತನಾಂತರೇ ॥೪೪॥

ನಾರಾಚೇನ ಸುತೀಕ್ಷ್ಣೇನ ಸರ್ವಾವರಣಭೇದಿನಾ ।
ಸೋಽನ್ಯತ್ ಕಾರ್ಮುಕಮಾದಾಯ ಸೂತಪುತ್ರಂ ವೃಕೋದರಃ ।
ರಾಜನ್ ಮರ್ಮಸು ಮರ್ಮಜ್ಞೋ ವಿದ್ಧ್ವಾ ಸುನಿಶಿತೈಃ ಶರೈಃ ॥೪೫॥
ನನಾದ ಬಲವನ್ನಾದಂ ಕಂಪಯನ್ನಿವ ಮೇದಿನೀಮ್ ॥೪೬॥

ಕರ್ಣನು ಭೀಮನ ಧನುಸ್ಸನ್ನು ಬಾಣದಿಂದ ಮಧ್ಯದಲ್ಲಿ ಎರಡಾಗಿ ಕತ್ತರಿಸಿದ. ಹೀಗೆ ಬಿಲ್ಲು ಕಡಿದುಕೊಂಡ ಭೀಮನ ಎದೆಗೆ ಬಲು ತೀಕ್ಷ್ಣವಾದ ಎಲ್ಲ

ಆವರಣಗಳನ್ನು ಕಡಿಯಬಲ್ಲ ಬಾಣದಿಂದ ಹೊಡೆದ. ಭೀಮನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಮರ್ಮಜ್ಞನಾದ್ದರಿಂದ ಕರ್ಣನನ್ನು ಮರ್ಮಸ್ಥಳಗಳಲ್ಲಿ ಬಲು ತೀಕ್ಷ್ಣವಾದ ಬಾಣಗಳಿಂದ ಹೊಡೆದು ಭೂಮಿ ನಡುಗುವಂತೆ ಬಲವಾಗಿ ಗರ್ಜನೆ ಮಾಡಿದ.

ತಂ ಕರ್ಣಃ ಪಂಚವಿಂಶತ್ಯಾ ನಾರಾಚಾನಾಂ ಸಮಾರ್ದಯತ್ ।
ಮದೋತ್ಕಟಂ ವನೇ ದೃಪ್ತಮುಲ್ಲಾಭಿರಿವ ಕುಂಜರಮ್ ॥೪೭॥

ಮತ್ತೇರಿದ ದೃಪ್ತವಾದ ಆನೆಯನ್ನು ಕಾಡಿನಲ್ಲಿ ಪಂಜುಗಳಿಂದ ಹೊಡೆಯುವಂತೆ ಇಪ್ಪತ್ತೈದು ಬಾಣಗಳಿಂದ ಭೀಮನನ್ನು ಕರ್ಣ ಪ್ರಹರಿಸಿದ.

ತತಃ ಸಾಯಕಭಿನ್ನಾಂಗಃ ಪಾಂಡವಃ ಕ್ರೋಧಮೂರ್ಚ್ಛಿತಃ ।
ಸಂರಂಭಾಮರ್ಷತಾಮ್ರಾಕ್ಷಃ ಸೂತಪುತ್ರವಧೇಚ್ಛಯಾ ॥೪೮॥

ಸ ಕಾರ್ಮುಕೇ ಮಹಾವೇಗಂ ಭಾರಸಾಧನಮುತ್ತಮಮ್ ।
ಗಿರೀಣಾಮಪಿ ಭೇತ್ತಾರಂ ಸಾಯಕಂ ಸಮಯೋಜಯತ್ ॥೪೯॥

ಬಾಣಗಳಿಂದ ಮೈಗಾಯಗೊಂಡ ಭೀಮ ಕ್ರೋಧದಿಂದ ಮೈಮರೆತು ಕೋಪ ಅಸಹನೆಗಳಿಂದ ಕಣ್ಣುಕೆಂಪು ಮಾಡಿಕೊಂಡು ಕರ್ಣನ ವಧೆ ಮಾಡಲು ಬಯಸಿ ಮಹಾವೇಗವುಳ್ಳ ಮಹಾಸಾಮರ್ಥ್ಯವುಳ್ಳ ಪರ್ವತಗಳನ್ನೂ ಸೀಳಬಲ್ಲ ಉತ್ತಮ ಬಾಣವನ್ನು ಬಿಲ್ಲಿಗೆ ಹೂಡಿದ.

ಏಕೃಷ್ಯ ಬಲವಚ್ಚಾಪಮಾಕರ್ಣಾದತಿ ಮಾರುತಿಃ ।
ತಂ ಮುಮೋಚ ಮಹೇಷ್ವಾಸಃ ಕ್ರುದ್ಧಃ ಕರ್ಣಜಿಘಾಂಸಯಾ ॥೫೦॥

ಮಹಾಬಿಲ್ಲಾರ ಭೀಮನು ಕ್ರುದ್ಧನಾಗಿ ಬಿಲ್ಲನ್ನು ಅತ್ಯಂತ ಬಲವಾಗಿ ಕಿವಿಯವರೆಗೆ ಸೆಳೆದು ಕರ್ಣನ ಹಿಂಸೆಯ ಇಚ್ಛೆಯಿಂದ ಆ ಬಾಣವನ್ನು ಎಸೆದ.

ಸ ವಿಸೃಷ್ಟೋ ಬಲವತಾ ಬಾಣೋ ವಜ್ರಾಶನಿಸ್ವನಃ ।
ಅದಾರಯದ್ ರಣೇ ಕರ್ಣಂ ವಜ್ರವೇಗ ಇವಾಚಲಮ್ ॥೫೧॥

ಬಲಿಷ್ಠನಾದ ಭೀಮನು ಎಸೆದ ಆ ಬಾಣವು ಸಿಡಿಲಿನಂತೆ ಅಬ್ಬರಿಸುತ್ತ ವಜ್ರವೇಗವು ಬೆಟ್ಟವನ್ನು ಸೀಳುವಂತೆ, ರಣದಲ್ಲಿ ಕರ್ಣನನ್ನು ಸೀಳಿತು.

ಸ ಭೀಮಸೇನಾಭಿಹತೋ ಸೂತಪುತ್ರಃ ಕುರೂದ್ವಹ ।
ನಿಷಸಾದ ರಥೋಪಸ್ಥೇ ವಿಸಂಜ್ಞಃ ಪೃತನಾಪತಿಃ ॥೫೨॥

ರಾಜನೆ, ಭೀಮಸೇನನು ಹೊಡೆದಾಗ ಸೇನಾಧಿಪತಿಯಾದ ಕರ್ಣನು ಪ್ರಜ್ಞೆ ತಪ್ಪಿ ರಥದ ಹಿಂಭಾಗದಲ್ಲಿ ಕುಸಿದುಬಿದ್ದ.

ಏತಸ್ಮಿನ್ನಂತರೇ ದೃಷ್ಟ್ವಾ ಮದ್ರರಾಜೋ ವೃಕೋದರಮ್ ।
ಜಿಹ್ವಾಂ ಛೇತ್ತುಂ ಸಮಾಯಾಂತಂ ಸಾಂತ್ವಯನ್ನಿದಮಬ್ರವೀತ್ ॥೫೩॥

ಈ ಸಮಯದಲ್ಲಿ ಭೀಮನು ಕರ್ಣನ ನಾಲಿಗೆ ಕೊಯ್ಯಲು ಬರುತ್ತಿರುವುದನ್ನು ಕಂಡು ಶಲ್ಯನು ಸಮಾಧಾನಪಡಿಸುತ್ತ ನುಡಿದ.

ಭೀಮಸೇನ ಮಹಾಬಾಹೋ ಯತ್ ತ್ವಾ ವಕ್ಷ್ಯಾಮಿ ತಚ್ಛೃಣು ।
ವಚನಂ ಹೇತುಸಂಪನ್ನಂ ಶ್ರುತ್ವಾ ಚೈತತ್ ತಥಾ ಕುರು ॥೫೪॥

ಭೀಮಸೇನ, ಮಹಾಬಾಹು, ನಿನಗೆ ನಾನು ಹೇತುಸಂಪನ್ನವಾದ ಯುಕ್ತಿಯುಕ್ತವಾದ ಮಾತನ್ನು ಹೇಳುತ್ತೇನೆ, ಕೇಳು, ಇದನ್ನು ಕೇಳಿ ಹಾಗೇ ಮಾಡು.

ಅರ್ಜುನೇನ ಪ್ರತಿಜ್ಞಾತೋ ವಧಃ ಕರ್ಣಸ್ಯ ಶುಷ್ಮಿಣಃ
ತಾಂ ತಥಾ ಕುರು ಭದ್ರಂ ತೇ ಪ್ರತಿಜ್ಞಾಂ ಸವ್ಯಸಾಚಿನಃ ॥೫೫॥

ಅರ್ಜುನನು ಬಲಿಷ್ಠನಾದ ಕರ್ಣನ ವಧೆ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾನೆ. ಅವನ ಆ ಪ್ರತಿಜ್ಞೆಯನ್ನು ಸತ್ಯವಾಗುವಂತೆ ಮಾಡು.

ದುರ್ಯೋಧನನನ್ನು ಮೆಚ್ಚಿಸುವುದಕ್ಕಾಗಿ ಪಾಂಡವರನ್ನು, ಕೃಷ್ಣನನ್ನು ಹಳಿಯುತ್ತಿರುವ 'ಕರ್ಣನ ನಾಲಿಗೆಯನ್ನು ನೀನೀಗ ಕತ್ತರಿಸಿದರೆ ಅಭಿಮಾನಿಯಾದ ಕರ್ಣ ಬದುಕಿರಲಾರ. ಬದುಕಿದರೂ ಅಂಗವಿಕಲನಾದ ಆತನನ್ನು ಅರ್ಜುನನು ಕೊಂದರೆ ಅದು ವೀರರಿಗೆ ಶೋಭೆ ತರುವುದಿಲ್ಲ. ತಮ್ಮ ಅರ್ಜುನನ ಪ್ರತಿಜ್ಞೆ ಚೆನ್ನಾಗಿ ಈಡೇರಬೇಕು. ಈಡೇರುವಂತೆ ಮಾಡಬೇಕಾದವನು ಅಣ್ಣನಾದ ನೀನು. ನೀನೆ ಕರ್ಣನ ನಾಲಿಗೆ ಕತ್ತರಿಸಿ ಅರ್ಜುನನ ಪ್ರತಿಜ್ಞೆಯನ್ನು ಹಾಳಾಗುವಂತೆ ಮಾಡಬೇಡ' ಇದು ಶಲ್ಯನ ಯುಕ್ತಿಯುಕ್ತವಾದ ಮಾತು.

ಭೀಮಃ

ದೃಢವ್ರತತ್ವಂ ಪಾರ್ಥಸ್ಯ ಜಾನಾಮಿ ನೃಪಸತ್ತಮ ।
ರಾಜ್ಞಸ್ತು ಧರ್ಷಣಂ ಪಾಪಃ ಕೃತವಾನ್ ಮಮ ಸನ್ನಿಧೌ ॥೫೬॥

ಮಹಾರಾಜ, ಅರ್ಜುನನು ಮಾತಿಗೆ ತಪ್ಪದಿರುವ ವ್ರತವನ್ನು ದೃಢವಾಗಿ ಪಾಲಿಸುವವನು ಎಂದು ನನಗೆ ತಿಳಿದಿದೆ. ಆದರೇನು ಮಾಡಲಿ? ನನ್ನ ಕಣ್ಣೆದುರೇ ಪಾಪಿಕರ್ಣ ರಾಜಾ ಯುಧಿಷ್ಠಿರನಿಗೆ ಅಪಮಾನ ಮಾಡಿದ್ದಾನೆ.

ತತಃ ಕ್ರೋಧಾಭಿಭೂತೇನ ಶೇಷಂ ನ ಗಣಿತಂ ಮಯಾ ।
ಪತಿತೇ ಚಾಪಿ ರಾಧೇಯೇ ನ ಮೇ ಮನ್ಯುಃ ಶಮಂ ಗತಃ ॥೫೭॥

ಅದರಿಂದ ಕೋಪಪರವಶನಾಗಿ ನಾನು ಬೇರೆ ಏನನ್ನು, ಅರ್ಜುನ ಪ್ರತಿಜ್ಞೆಯನ್ನು ಆಲೋಚಿಸಲಿಲ್ಲ. ಕರ್ಣ ಪ್ರಜ್ಞೆತಪ್ಪಿ ಬಿದ್ದರೂ ನನ್ನ ಕೋಪ ಶಾಂತವಾಗಲಿಲ್ಲ.

ಜಿಹ್ವೋದ್ಧರಣಮೇವಾಸ್ಯ ಪ್ರಾಪ್ತಕಾಲಂ ಮತಂ ಮಮ ॥೫೮॥

ಇವನ ನಾಲಿಗೆ ಕೊಯ್ಯುವುದೇ ಕಾಲೋಚಿತವೆಂದು ನನ್ನ ಅಭಿಪ್ರಾಯ ಇದ್ದಿತು.

ಅನೇನ ತು ನೃಶಂಸೇನ ಸಮವೇತೇಷು ರಾಜಸು ।
ಅಸ್ಮಾಕಂ ಶೃಣ್ವತಾಂ ಕೃಷ್ಣಾ ಯಾನಿ ವಾಕ್ಯಾನಿ ಮಾತುಲ ॥೫೯॥

ಅಸಹ್ಯಾನಿ ಚ ನೀಚೇನ ಬಹೂನಿ ಶ್ರಾವಿತಾನಿ ಭೋಃ ।
ನೂನಂ ತೇ ತತ್ ಪರಿಜ್ಞಾತಂ ದೂರಸ್ಥಸ್ಯಾಪಿ ಪಾರ್ಥಿವ ॥೬೦॥

ರಾಜರೆಲ್ಲರೂ ಸೇರಿದಾಗ ಕ್ರೂರನಾದ ನೀಚನಾದ ಈತ ನಾವು ಕೇಳುತ್ತಿದ್ದಂತೆಯೇ ಏನು ಬಹಳ ಅಸಹ್ಯವಾದ ಮಾತುಗಳನ್ನು ಆಡಿದ್ದನೋ ಅದು ನಿನಗೆ, ಮಾವ, ನೀನು ಆಗ ದೂರದಲ್ಲಿ ಇದ್ದರೂ ನಿಶ್ಚಯವಾಗಿ ತಿಳಿದಿರುತ್ತದೆ.

ಛೇದನಂ ಚಾಸ್ಯ ಜಿಹ್ವಾಯಾಸ್ತದೈವಾಕಾಂಕ್ಷಿತಂ ಮಯಾ ।
ರಾಜ್ಞಸ್ತು ಪ್ರಿಯಕಾಮೇನ ಕಾಲೋಽಯಂ ಪರಿಪಾಲಿತಃ ॥೬೧॥

ಇವನ ನಾಲಿಗೆ ಕೊಯ್ಯಲು ನಾನು ಆಗಲೆ ಬಯಸಿದ್ದೆ. ಆದರೆ ರಾಜಾ ಯುಧಿಷ್ಠಿರನ ಪ್ರಿಯವನ್ನು ಬಯಸುವ ನಾನು ಅದಕ್ಕೆ ಈ ಕಾಲವನ್ನು ನಿರೀಕ್ಷಿಸಿದೆ.

ಯುಧಿಷ್ಠಿರಾವಮಾನ ಮಾಡುವಾಗ ಕರ್ಣ ಹೀಗೂ ಹೇಳಿದ್ದಾನೆ—

ಸ್ವಗೃಹಂ ಗಚ್ಛ ಕೌಂತೇಯ ಯತ್ರ ವಾ ಕೇಶವಾರ್ಜುನೌ ।
ನಹಿ ತ್ವಾಂ ಸಮರೇ ರಾಜನ್ ಹನ್ಯಾತ್ ಕರ್ಣಃ ಕಥಂಚನ ॥

'ನೀನು ನಿನ್ನ ಮನೆಗೆ ಹೊರಟುಹೋಗು, ಇಲ್ಲವೆ ಕೇಶವ ಅರ್ಜುನರ ರಕ್ಷಣೆಯಲ್ಲಿರು. ನಾನು ಸಮರದಲ್ಲಿ ನಿನ್ನನ್ನು ಸರ್ವಥಾ ಕೊಲ್ಲುವುದಿಲ್ಲ.' 'ಈಗ ನಿನ್ನ ರಕ್ಷಕರಾದ ಕೃಷ್ಣಾರ್ಜುನರಿಲ್ಲ' ಎಂದು ವಿಷ್ಣು–ವೈಷ್ಣವ ನಿಂದೆಯನ್ನು ಕರ್ಣ ಭೀಮನ ಸಮೀಪದಲ್ಲಿಯೆ ಅವನಿಗೆ ಕೇಳಿಸುವಂತೆ ನುಡಿದಿದ್ದಾನೆ. ಪರಮವೈಷ್ಣವನಾದ ಅಣ್ಣ ಧರ್ಮರಾಜನ ನಿಂದೆ ಮಾಡಿದ್ದೂ ವಿಷ್ಣುನಿಂದೆಯೆ. ಪರೋಕ್ಷವಾಗಿಯೂ ಕೂಡ ಹರಿನಿಂದೆ ಮಾಡುವವನ ನಾಲಿಗೆ ಕೊಯ್ಯುವೆ ನೆಂದು ಭೀಮನ ಸಾರ್ವಕಾಲಿಕ ಪ್ರತಿಜ್ಞೆಯಾಗಿತ್ತು. ಕರ್ಣನ ಪಾಪದ ಕೊಡ ತುಂಬಲಿ ಎಂಬುದು ಧರ್ಮರಾಜನ ಅಭಿಪ್ರಾಯವಾಗಿದ್ದರಿಂದ, ಅಂದು ದ್ಯೂತಸಭೆಯಲ್ಲಿ ಮಾಡಿದ್ದ ದ್ರೌಪದೀನಿಂದೆಯನ್ನೂ ಕೂಡ ತತ್ಕಾಲದಲ್ಲಿ ಸಹಿಸಿಕೊಂಡಿದ್ದ, ಭೀಮ. ಈಗ ಯೋಗ್ಯಕಾಲ ಬಂದಿದ್ದರಿಂದ ಕರ್ಣನ ನಾಲಿಗೆ ಕೊಯ್ಯಲು ಭೀಮ ಹೊರಡುತ್ತಾನೆ. ಶಲ್ಯ ಯುಕ್ತಿಯುಕ್ತವಾದ ಮಾತಿನಿಂದ ತಡೆಯುತ್ತಾನೆ.

ಭವತಾ ತು ಯದುಕ್ತೋಽಸ್ಮಿ ವಾಕ್ಯಂ ಹೇತ್ವರ್ಥಸಂಯುತಮ್ ।
ತದ್ ಗೃಹೀತಂ ಮಹಾರಾಜ ಕಟು ತಿಕ್ತಮಿವೌಷಧಮ್ ॥೬೨॥

ನೀನು ಹೇಳಿದ ಯುಕ್ತಿಯುಕ್ತವಾದ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ, ತೀಕ್ಷ್ಣವಾದ ಕಹಿಯಾದ ಔಷಧವನ್ನು ಸೇವಿಸುವಂತೆ.

ಹೀನಪ್ರತಿಜ್ಞೋ ಬೀಭತ್ಸುರ್ನಹಿ ಜೀವೇತ ಕರ್ಹಿಚಿತ್ ।
ಅಸ್ಮಿನ್ ವಿನಷ್ಟೇ ನಷ್ಟಾಃ ಸ್ಮಃ ಸರ್ವ ಏವ ಸಕೇಶವಾಃ ॥೬೩॥

ಅರ್ಜುನನ ಪ್ರತಿಜ್ಞೆ ಈಡೇರದೆ ಹೋದರೆ ಅವನೆಂದೂ ಬದುಕಿರಲಾರ.

ಅವನು ಇಲ್ಲವಾದರೆ ನಾವೂ ಕೂಡ ಕೃಷ್ಣನೂ ಸೇರಿದಂತೆ ಎಲ್ಲರೂ ಇಲ್ಲವಾಗುತ್ತೇವೆ.

ಅದ್ಯ ಚೈವ ನೃಶಂಸಾತ್ಮಾ ಪಾಪಃ ಪಾಪಕೃತಾಂ ವರಃ ।
ಗಮಿಷ್ಯತಿ ಪರಾಭಾವಂ ದೃಷ್ಟಮಾತ್ರಃ ಕಿರೀಟಿನಾ ॥೬೪॥

ಪಾಪಕಾರಿಗಳಲ್ಲಿ ಮೊದಲಿಗನಾದ ಕ್ರೂರಸ್ವಭಾವದವನಾದ ಪಾಪಿ ಕರ್ಣ, ಇಂದೇ ಅರ್ಜುನನ ದೃಷ್ಟಿ ಅವನ ಮೇಲೆ ಬಿತ್ತೆಂದರೆ ಪರಾಭವ ಹೊಂದುತ್ತಾನೆ.

ಯುಧಿಷ್ಠಿರಸ್ಯ ಕೋಪೇನ ಪೂರ್ವಂ ದಗ್ಧೋ ನೃಶಂಸಕೃತ್ ।
ತ್ವಯಾ ಸಂರಕ್ಷಿತಸ್ತ್ವದ್ಯ ಮತ್ಸಮೀಪಾದುಪಾಯತಃ ॥೬೫॥

ಕ್ರೂರಕರ್ಮ ಮಾಡಿರುವ ಕರ್ಣನು ಈಗ ಮೊದಲೇ ಯುಧಿಷ್ಠಿರನ ಕೋಪದಿಂದ ದಗ್ಧನಾಗಿದ್ದ. ಆದರೆ ಇದೀಗ ನೀನು ನನ್ನ ಕೈಯಿಂದ ಈತನನ್ನು ಉಪಾಯವಾಗಿ ರಕ್ಷಿಸಿರುವೆ.

ತತೋ ಮದ್ರಾಧಿಪೋ ದೃಷ್ಟ್ವಾ ವಿಸಂಜ್ಞಂ ಸೂತನಂದನಮ್ ।
ಅಪೋವಾಹ ರಥೇನಾಜೌ ಕರ್ಣಮಾಹವಶೋಭಿನಮ್ ॥೬೬॥

ಬಳಿಕ ಶಲ್ಯನು, ಯುದ್ಧದಲ್ಲಿ ಮೆರೆಯುವ ಕರ್ಣನು ರಣರಂಗದಲ್ಲಿ ಪ್ರಜ್ಞೆತಪ್ಪಿ ಬಿದ್ದಿರುವುದನ್ನು ಕಂಡು, ರಥದಿಂದ ದೂರಕ್ಕೆ ಒಯ್ದ.

ತತಃ ಪರಾಜಿತೇ ಕರ್ಣೇ ಧಾರ್ತರಾಷ್ಟ್ರೀಂ ಮಹಾಚಮೂಮ್ ।
ವ್ಯದ್ರಾವಯದ್ ಭೀಮಸೇನೋ ಯಥೇಂದ್ರೋ ದಾನವೀಂ
ಚಮೂಮ್ ॥೬೭॥

ಕರ್ಣನು ಹೀಗೆ ಪರಾಜಿತನಾದಾಗ ಇಂದ್ರನು ಅಸುರಸೇನೆಯನ್ನು ಓಡಿಸುವಂತೆ ಭೀಮಸೇನನು ಕೌರವಸೈನ್ಯವನ್ನು ಹೊಡೆದೋಡಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸಪ್ತಚತ್ವಾರಿಂಶೋಧ್ಯಾಯಃ ॥೪೭॥

❖

ನೇಹ ಧ್ರುವಂ ಕಿಂಚಿದಪಿ ಪ್ರಚಿಂತಯನ್
ವದಾಮಿ ಲೋಕೇ ಕರ್ಮಣೋ ದೈವಯೋಗಾತ್ ।
ಸೂರ್ಯೋದಯೇ ಕೋ ಓ ವಿಮುಕ್ತಸಂಶಯೋ
ಭಾವಂ ಕುರ್ವೀತಾದ್ಯ ಗುರೌ ನಿಪಾತಿತೇ ॥

ಪೌರುಷದ ಮೇಲೆ ದೈವದ ನಿಯಂತ್ರಣವಿದ್ದೇ ಇರುವುದರಿಂದ ಲೋಕದಲ್ಲಿ ಪೌರುಷ ಯಾವುದೂ ಸ್ಥಿರವಲ್ಲ. ಇದನ್ನು ಚೆನ್ನಾಗಿ ಆಲೋಚಿಸಿ ಹೇಳುತ್ತಿದ್ದೇನೆ. ಇದೀಗ ಉಷಃಕಾಲ. ಮುಂದೆ ಬರಲಿರುವ ಸೂರ್ಯೋದಯ ಕಾಲದಲ್ಲಿ ನಾನಿರುತ್ತೇನೆ ಎಂದು ನಿಃಸಂದಿಗ್ಧವಾಗಿ ಯಾರು ತಾನೆ ಹೇಳಬಲ್ಲ? ಏಕೆಂದರೆ ಗುರುದ್ರೋಣರು ಹತರಾಗಿ ಬಿದ್ದಿದ್ದಾರೆ!

ISBN : 978-81-939819-8-6